ಆಚಾರ್ಯಮಹಿಮಭಟ್ಟ ಪ್ರಣೀತ

# ವ್ಯಕ್ತಿವಿವೇಕ

ಅನುವಾದ

**ವಿದ್ವಾನ್ ಎಚ್.ವಿ. ನಾಗರಾಜರಾವ್**

KARNATAKA SAMSKRIT UNIVERSITY
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಆಚಾರ್ಯಮಹಿಮಭಟ್ಟ ಪ್ರಣೀತ

# ವ್ಯಕ್ತಿವಿವೇಕ

ಅನುವಾದ

ವಿದ್ವಾನ್ ಎಚ್.ವಿ. ನಾಗರಾಜರಾವ್

ಪ್ರಸಾರಾಂಗ

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಚಾಮರಾಜಪೇಟೆ, ಬೆಂಗಳೂರು–560018

**VYAKTHIVIVEKA** of Mahima Bhatta: Translated into Kannada by **Vidwan H.V. Nagaraja Rao**, # 90, Navilu Road, Kuvempu Nagar, Mysore - 570023. Ph: 0821-2542599. First Impression: 2013; Pages: xxxii + 488 = 520; Paper Used: 70 GSM Maplitho; Price: 350/- ©: Translator

Published By: **PRASARANGA, KARNATAKA SAMSKRIT UNIVERSITY,**
Pampa Mahakavi Road, Chamarajapet, Bengaluru-560018.
Ph: 080-26701303

**ಆಚಾರ್ಯಮಹಿಮಭಟ್ಟಪ್ರಣೀತ**

**ವ್ಯಕ್ತಿವಿವೇಕ**

ಕನ್ನಡ ಅನುವಾದ: **ವಿದ್ವಾನ್ ಎಚ್.ವಿ. ನಾಗರಾಜರಾವ್,** # ೯೦, ನವಿಲು ರಸ್ತೆ, ಕುವೆಂಪುನಗರ,
ಮೈಸೂರು – ೫೭೦೦೨೩. ದೂ: ೦೮೨೧–೨೫೪೨೫೯೯

ಪ್ರಕಾಶಕರು: **ಪ್ರಸಾರಾಂಗ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮. ದೂ: ೦೮೦–೨೬೭೦೧೩೦೩

| | | |
|---|---|---|
| ಮೊದಲ ಮುದ್ರಣ | : | ೨೦೧೩ |
| ಹಕ್ಕುಗಳು | : | ಅನುವಾದಕರದು |
| ಪುಟ | : | xxxii + ೪೮೮ = ೫೨೦ |
| ಬೆಲೆ | : | ೩೫೦/– |
| ಕಾಗದ | : | ೭೦ ಜಿಎಸ್ಎಂ ಮ್ಯಾಪ್ಲಿಥೊ |

**ಅಧಿಕೃತ ಮಾರಾಟಗಾರರು:**

**ಸಂವಹನ**

# ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ,
ಶಿವರಾಂಪೇಟೆ, ಮೈಸೂರು–೫೭೦೦೦೨
ದೂ: ೦೮೨೧ – ೨೪೭೬೦೧೯

# ವಿದ್ವಾನ್ ಎಚ್.ವಿ. ನಾಗರಾಜರಾವ್

ವಿದ್ವಾನ್ ಎಚ್.ವಿ. ನಾಗರಾಜರಾವ್ ಅವರು ಸಮಗ್ರ ಸಂಸ್ಕೃತ ಕ್ಷೇತ್ರದಲ್ಲಿ ತಮ್ಮ ಪಾಂಡಿತ್ಯ ಮತ್ತು ಕವಿತ್ವದ ಸಂಗಮದಿಂದ ಸುವಿಖ್ಯಾತರಾಗಿದ್ದಾರೆ. ಇವರು ಸಂಸ್ಕೃತದಲ್ಲಿ ಪ್ರಕಾಂಡಪಂಡಿತರಾಗಿರುವಂತೆ ಇಂಗ್ಲಿಷ್, ತೆಲುಗು ಮತ್ತು ಹಿಂದಿ ಭಾಷೆಗಳಲ್ಲೂ ಪರಿಣತಿಯನ್ನು ಸಾಧಿಸಿದ್ದಾರೆ. ಇದರಿಂದಾಗಿ ಅಂತಾರಾಷ್ಟ್ರೀಯ ಮನ್ನಣೆ ಪಡೆದ ಖ್ಯಾತಿ ಇವರದಾಗಿದೆ. ವಿಶ್ವದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಇವರು ಅಪಾರವಾದ ಮೇಧಾಶಕ್ತಿಯಿಂದ, ಹಲವು ಶಾಸ್ತ್ರಗಳಲ್ಲಿ ಪಡೆದ ಪರಿಣತಿಯಿಂದ ಚಲಿಸುವ ವಿಶ್ವಕೋಶವೆಂದು ಪ್ರಖ್ಯಾತಿಯನ್ನು ಹೊಂದಿದ್ದಾರೆ.

ವಿದ್ವಾನ್ ಎಚ್.ವಿ. ನಾಗರಾಜರಾವ್ ಅವರು ೧೯೪೨ನೇ ಇಸವಿ ಕೋಲಾರ ಜಿಲ್ಲೆಯ ಸೋಮೇನಹಳ್ಳಿ ಗ್ರಾಮದಲ್ಲಿ ಜನಿಸಿದರು. ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣ, ಅಲಂಕಾರ ಶಾಸ್ತ್ರಗಳಲ್ಲಿ ವಿದ್ವತ್ ಪದವಿಯುನ್ನು ಪಡೆದುದಲ್ಲದೆ, ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಸ್ನಾತಕೋತ್ತರ ಪದವಿಯನ್ನೂ ಗಳಿಸಿದ್ದಾರೆ. ಅನಂತರ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧಕರಾಗಿ ನಿಯುಕ್ತಿಗೊಂಡು ಹಲವಾರು ಅಪೂರ್ವ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಸ್ವತಂತ್ರ ಗ್ರಂಥರಚನೆ ಅಲ್ಲದೆ, ಅನೇಕ ಗ್ರಂಥಗಳನ್ನು ಅನುವಾದಿಸಿದ್ದಾರೆ. ಅವುಗಳಲ್ಲಿ ರುಯ್ಯಕನ ಅಲಂಕಾರಸರ್ವಸ್ವವೂ ಒಂದು. ಸಂಸ್ಕೃತದಲ್ಲಿ 'ವಿದುಲಾಪುತ್ರೀಯಮ್', 'ಸಮುದ್ಯತಾ', 'ದಾಂಪತ್ಯಕಲಹ' ಎಂಬ ಮೂರು ನಾಟಕಗಳು ಪ್ರಕಟವಾಗಿವೆ. 'ವರಾನ್ವೇಷಣ' ಮತ್ತು 'ಮಾಲವಿಕಾ' ಎಂಬ ಎರಡು ಲಘು ಕಥಾಸಂಕಲನವನ್ನು ಪ್ರಕಟಿಸಿದ್ದಾರೆ. ಎಸ್.ಎಲ್. ಭೈರಪ್ಪ ಅವರ 'ಸಾರ್ಥ' ಕಾದಂಬರಿಯನ್ನು ಇವರು ಸಂಸ್ಕೃತಕ್ಕೆ ಅನುವಾದಿಸಿದ್ದಾರೆ.

ಇವರು ಹಲವಾರು ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ವೇದವ್ಯಾಸ ಪ್ರಶಸ್ತಿ, ೨೦೦೬ರಲ್ಲಿ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ, ೨೦೧೨ರಲ್ಲಿ ರಾಷ್ಟ್ರಪತಿ ಪುರಸ್ಕಾರ –ಇವುಗಳು ಇವರನ್ನು ಅರಸಿಕೊಂಡು ಬಂದಿವೆ.

# ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
**ಕುಲಪತಿ**

ಭಾರತೀಯ ಸಂಸ್ಕೃತಿ ಮಹತ್ವದ್ದು. ಇದರ ಮಹತ್ವವನ್ನು ತಿಳಿಯಲು ನಾವು ಲೋಕವಿದ್ಯೆಗೆ ಹೋಗಬೇಕು. ಲೋಕವಿದ್ಯೆಯು ವಿಶ್ವವಿದ್ಯಾಲಯದ ಗುರಿಯಾಗಿರಬೇಕು. ಹೀಗಾಗಿ, ಈ ಲೋಕವಿದ್ಯೆಯು ಎಲ್ಲರನ್ನು ಒಗ್ಗೂಡಿಸುವ ಶಕ್ತಿಯನ್ನು ಪಡೆದಿದೆ. ಭಾಷೆಯು ಹೀಗೆ ಲೋಕವಿದ್ಯೆಯ ಸಕಲತತ್ತ್ವವನ್ನು ಅನಾವರಣಗೊಳಿಸುತ್ತದೆ. ನಮಗೆ ಭಾಷೆಯು ಜ್ಞಾನವಾಹಕವೂ ಹೌದು ವ್ಯಾವಹಾರಿಕವೂ ಹೌದು! ಭಾರತದ ಪ್ರಾಚೀನ ಭಾಷೆಗಳಲ್ಲಿ ಅತಿಪ್ರಾಚೀನವಾದ ಸಂಸ್ಕೃತವು ಲೋಕವಿದ್ಯೆಗೆ ಸಮರ್ಥ ಮಾಧ್ಯಮವೆಂದು ಕಳೆದ ಎರಡು ಶತಮಾನಗಳ ಉನ್ನತಾಧ್ಯಯನಗಳು ನಮಗೆ ತಿಳಿಸಿವೆ. ನಾವು ಭಾಷಾ ಸಂಗೋಪನ, ಭಾಷಾ ಬಳಕೆ ಮತ್ತು ಭಾಷಾ ಸಂವಹನ ಎಂಬ ಮೂರು ಪರಿಕ್ರಮಗಳಿಂದ ಸಾಗಬೇಕಾದರೆ ಸಂಸ್ಕೃತ ಭಾಷೆಯೊಂದೇ ನಮಗಿರುವ ಮುಖ್ಯ ಮಾಧ್ಯಮ. ಈ ಗುರಿಯು ಸಾಧಿತವಾಗಬೇಕಾದರೆ ಸಂಸ್ಕೃತದ ಉನ್ನತ ಅಧ್ಯಯನಗಳು ಹೆಚ್ಚಾಗಬೇಕು. ಉನ್ನತ ಅಧ್ಯಯನಗಳು ಹಿಂದೆಯೂ ನಡೆದಿವೆ, ಈಗಲೂ ನಡೆಯುತ್ತಿವೆ, ಮುಂದೆ ನಡೆಯಬೇಕಾಗಿದೆ.

ಸಂಸ್ಕೃತ ಭಾಷೆ, ಸಾಹಿತ್ಯ ಮತ್ತು ಶಾಸ್ತ್ರಸಂಪತ್ತು ನಾವು ಅಗೆದಷ್ಟೂ ತವನಿಧಿಯೇ ಆಗಿದೆ. ಆದರೆ, ಅದನ್ನು ಸರಿಯಾಗಿ ತಿಳಿಯುವುದು ಎಷ್ಟು ಮುಖ್ಯವೋ ಅದನ್ನು ಸರಿಯಾಗಿ ಬಳಸುವುದೂ ಅಷ್ಟೇ ಮುಖ್ಯವೆಂದು ನಾನು ತಿಳಿದಿದ್ದೇನೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಆಡಳಿತಾಂಗ, ಶೈಕ್ಷಣಿಕಾಂಗ ಮತ್ತು ಪ್ರಸಾರಾಂಗ ಎಂಬ ಮೂರು ಅಂಗಗಳನ್ನು ಪಡೆದಿದೆ. ಆಡಳಿತಾಂಗದಲ್ಲಿ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಮೂರೂ ಭಾಷೆಯ ಪರಿಕ್ರಮಗಳು ಚಾಲ್ತಿಯಲ್ಲಿರುತ್ತವೆ. ಶೈಕ್ಷಣಿಕಾಂಗದಲ್ಲಿ ಕನ್ನಡ ಕ್ವಚಿತ್ತಾಗಿ ಸಂಸ್ಕೃತ ಮುಖ್ಯವಾಗಿ ಬಳಕೆಯಾಗಬೇಕಾಗಿದೆ. ಇನ್ನು ಪ್ರಸಾರಾಂಗದಲ್ಲಿಯಾದರೆ, ಕನ್ನಡ ಸಂಸ್ಕೃತಿಯ ಶಾಸ್ತ್ರ ಸಂಪನ್ನತೆಗಾಗಿ ಸಂಸ್ಕೃತದ ಮುಖ್ಯ ಶಾಸ್ತ್ರಗ್ರಂಥಗಳನ್ನು ಕನ್ನಡಕ್ಕೆ ತರುವುದೂ ಅಗತ್ಯವಿದೆ. ಅದೇ ರೀತಿಯಾಗಿ ಇಂಗ್ಲಿಷ್ ಭಾಷೆಯಲ್ಲೂ ಅಪೂರ್ವ ಗ್ರಂಥಗಳನ್ನು ಹೊರತರುವುದು, ಸಂಸ್ಕೃತದಲ್ಲೇ ಸ್ವತಂತ್ರ ಗ್ರಂಥಗಳನ್ನು ಹೊರತರುವುದು ನಮ್ಮ ಮುಂದಿನ ಗುರಿಯಾಗಬೇಕಾಗಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಾಚೀನ ಮತ್ತು ಆಧುನಿಕ ತಿಳಿವಳಿಕೆಗಳನ್ನು ಯುಕ್ತ ರೀತಿಯಿಂದ ಸಂಯೋಜಿಸುವುದರ ಕಡೆ ಗಮನಹರಿಸುತ್ತಿದೆ. ಅದು 'ಶೈಕ್ಷಣಿಕಾಂಗ'ದಲ್ಲಿ ಪ್ರಧಾನವಾಗಿ ಆಗಬೇಕಾಗಿದೆ. ಕೇವಲ ಪರೀಕ್ಷೆ ನಡೆಸುವುದೇ ಶೈಕ್ಷಣಿಕಾಂಗದ ಗುರಿಯಲ್ಲ. ಅದಕ್ಕೆ

ತಕ್ಕ ರೀತಿಯಲ್ಲಿ ಪಠ್ಯ, ಪೂರಕಪಠ್ಯ ಮತ್ತು ಪರಾಮರ್ಶನ ಗ್ರಂಥಗಳನ್ನು ಸಜ್ಜುಗೊಳಿಸುವುದೂ ಮುಖ್ಯ. ಆ ದಿಕ್ಕಿನಲ್ಲಿ ಈಗ ಪ್ರಸಾರಾಂಗವನ್ನು ಆರಂಭಿಸಲಾಗಿದೆ. ಇಲ್ಲಿ ಸಂಸ್ಕೃತವು 'ಲೋಕವಿದ್ಯೆ'ಯಾಗಿ ಪರಿವರ್ತನೆಗೊಳ್ಳುತ್ತಿದೆ. ಪ್ರಾಚೀನ ಹಾಗೂ ಆಧುನಿಕ ಜ್ಞಾನಸಂಪತ್ತನ್ನು ತುಷ್ಟಿ–ಪುಷ್ಟಿಯಿಂದ ಅದು ಹೀರಿ ಬೆಳೆಯುವುದಲ್ಲದೆ ತನ್ನ ಅಪರಿಮಿತ ಜ್ಞಾನವನ್ನು ಇತರೆ ಭಾಷೆಗಳಿಗೂ ಹರಡುವ ಯುಕ್ತಕ್ರಮವನ್ನು ವಹಿಸುತ್ತಿದೆ!

ಕರ್ನಾಟಕವು ಪ್ರಾಚೀನ ಕಾಲದಲ್ಲಿ ಅಗಣಿತವಾದ ಸಂಸ್ಕೃತ ಗ್ರಂಥವನ್ನು ಸೃಜಿಸಿದೆ. ಅದು ಮಧ್ಯಕಾಲೀನ ಸಂದರ್ಭದಲ್ಲೂ ಬೆಳೆದಿದೆ. ಆಧುನಿಕ ಕಾಲದಲ್ಲಿ ಅದನ್ನು ಹೊಸ ರೀತಿಯಿಂದ ಬೆಳೆಸುವ ಅಗತ್ಯವಿದೆ. ಕರ್ನಾಟಕವು ಅಭಿಲಷಿತಾರ್ಥ ಚಿಂತಾಮಣಿ ಮತ್ತು ಶಿವತತ್ತ್ವರತ್ನಾಕರ ಎಂಬೆರಡು ಬೃಹತ್ ವಿಶ್ವಕೋಶಗಳನ್ನು ನೀಡಿದೆ. ಈ ನೆಲವು ನೂರಾರು ಶಾಸ್ತ್ರಕಾರರನ್ನೂ ಶಾಸ್ತ್ರವ್ಯಾಖ್ಯಾನಕಾರರನ್ನೂ ಕೊಟ್ಟಿದೆ. ಹತ್ತಾರು ಶಾಸ್ತ್ರಗ್ರಂಥಗಳು ಇಲ್ಲಿ ಸೃಷ್ಟಿಗೊಂಡಿವೆ. ನೂರಾರು ವ್ಯಾಖ್ಯಾನಕಾರರು ಸಂಸ್ಕೃತದಲ್ಲಿ ಅಸದೃಶ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಇದರ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ನೂರಾರು ವಿದ್ಯಾಪೀಠಗಳು, ಗುರುಪೀಠಗಳು ಸಂಸ್ಕೃತವನ್ನು ನೂರಾರು ವರ್ಷಗಳಿಂದ ಪೊರೆದಿವೆ. ನೂರಾರು ಜನಾಶ್ರಯಕ್ಕೆ ಸಂಸ್ಕೃತವು ಈಡಾಗಿದೆ. ಈಗ ಜನಪ್ರತಿನಿಧಿ ಸರ್ಕಾರ ಸಂಸ್ಕೃತವನ್ನು ರಕ್ಷಿಸುತ್ತಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈಗ ಪ್ರಕಟಿಸುತ್ತಿರುವ ಅಲಂಕಾರಶಾಸ್ತ್ರ ತತ್ತ್ವಜ್ಞನಾದ ಮಹಿಮಭಟ್ಟನ ವ್ಯಕ್ತಿವಿವೇಕವು ಒಂದು ವಿಲಕ್ಷಣ ಗಣ್ಯಕೃತಿ ಎನಿಸಿದೆ. ಇದು ಸಂಸ್ಕೃತ ಅಲಂಕಾರಶಾಸ್ತ್ರದಲ್ಲಿ ಧ್ವನಿವಿರೋಧಿ ನೆಲೆಯಲ್ಲಿ ತನ್ನದೇ ಆದ ವಿಶೇಷತೆಯನ್ನು ಪಡೆದಿದೆ. ಇಂಥ ಕಠಿಣವಾದ ಶಾಸ್ತ್ರ ಕೃತಿಯ ಕನ್ನಡಾನುವಾದವನ್ನು ನಮ್ಮ ನಡುವಿನ ಗಣ್ಯವಿದ್ವಾಂಸರೂ ರಾಷ್ಟ್ರಪ್ರಶಸ್ತಿ ಪುರಸ್ಕೃತರೂ ಆದ ವಿದ್ವಾನ್ ಎಚ್.ವಿ. ನಾಗರಾಜರಾವ್ ಮಾಡಿಕೊಟ್ಟಿದ್ದಾರೆ. ಈ ಗ್ರಂಥವು ಕನ್ನಡ–ಸಂಸ್ಕೃತ ಅಲಂಕಾರಶಾಸ್ತ್ರದ ಬೆಳವಣಿಗೆಯಲ್ಲಿ ತನ್ನದೇ ಆದ ನೆಲೆಯನ್ನು ಪಡೆದಿದೆ. ಇದು ಕನ್ನಡಕ್ಕೆ ಉತ್ತಮ ಶಾಸ್ತ್ರಮರ್ಯಾದೆಯನ್ನು ತಂದುಕೊಡುತ್ತದೆಂಬ ನಂಬುಗೆ ನನ್ನದು. ಈ ಗ್ರಂಥದ ಪ್ರಕಟಣೆಯಿಂದ ಅತ್ತ ಕನ್ನಡವೂ ಇತ್ತ ಸಂಸ್ಕೃತವೂ ಕೃತಕೃತ್ಯತೆಯನ್ನು ಪಡೆಯುತ್ತದೆ. ಶಾಸ್ತ್ರಕುತೂಹಲಿಗಳೂ ಜಿಜ್ಞಾಸುಗಳೂ ಈ ಗ್ರಂಥದ ಅಧ್ಯಯನ ಮಾಡಲೆಂದು ನಾನು ಆಶಿಸುತ್ತೇನೆ. ವಿದ್ವಾನ್ ಎಚ್.ವಿ. ನಾಗರಾಜರಾವ್ ಅವರನ್ನೂ ಪ್ರಕಟಣೆಯ ಸಂದರ್ಭದಲ್ಲಿ ನೆರವಾದ ನಮ್ಮ ಅಧಿಕಾರಿ ವರ್ಗದವರನ್ನೂ ಈ ಗ್ರಂಥದ ಅಧಿಕೃತ ಮಾರಾಟಗಾರರಾದ ಮೆ॥ ಸಂವಹನ ಪ್ರಕಾಶನ, ಮೈಸೂರು –ಇದರ ವ್ಯವಸ್ಥಾಪಕರಾದ ಶ್ರೀ ಡಿ.ಎನ್. ಲೋಕಪ್ಪ ಅವರನ್ನೂ ಕೃತಜ್ಞತಾಪೂರ್ವಕವಾಗಿ ನಾನು ಅಭಿನಂದಿಸುತ್ತೇನೆ.

❑

# ನಿವೇದನೆ

**ಯಾ ದುಗ್ಧಾಪಿ ನ ದುಗ್ಧೇವ ಕವಿದೋಗ್ಧೃಭಿರನ್ವಹಮ್।**
**ಹೃದಿ ನಃ ಸಂನಿಧತ್ತಾಂ ಸಾ ಸೂಕ್ತಿಧೇನುಃ ಸರಸ್ವತೀ ॥**

ಸರಸ್ವತಿ ಸೂಕ್ತಿಕ್ಷೀರವನ್ನು ಕರೆಯುವ ಧೇನು. ಅದನ್ನು ಕವಿಗಳು ಪ್ರತಿದಿನವೂ ಸತತವಾಗಿ ಕರೆದುಕೊಳ್ಳುತ್ತಿದ್ದಾರೆ. ಆದರೂ ಇನ್ನೂ ಹಾಲನ್ನು ಕರೆದೇ ಇಲ್ಲವೇನೋ ಎಂಬಂತೆ ವಾಗ್ಧೇನು ಹೊಸ ಹೊಸ ಕ್ಷೀರಧಾರೆಯನ್ನು ಹರಿಸುತ್ತಿದೆ. ಆ ಧೇನುಸ್ವರೂಪಳಾದ ಸರಸ್ವತಿ ನಮ್ಮ ಹೃದಯದಲ್ಲಿ ನೆಲೆಗೊಳ್ಳಲಿ. ಸರಸ್ವತಿ ವೇದ ಕಾಲದಲ್ಲಿ ದೊಡ್ಡ ಸ್ರೋತಸ್ವಿನಿ. ಎಲ್ಲ ಭಾಷೆಗಳೂ ಸರಸ್ವತಿಯ ಹೊಳೆಗಳು. ಸರಸ್ವತಿಯು ವೈಭವ ಅವುಗಳಲ್ಲೆಲ್ಲ ಕಾವ್ಯರೂಪದಲ್ಲಿ ಶೋಭಿಸಿದೆ, ಚಿರಯೌವನಶಾಲಿನಿಯಾದ ಸರಸ್ವತಿಯ ಅಭಿವ್ಯಕ್ತಿಗಳಾದ ಕಾವ್ಯಗಳು ಹುಟ್ಟಿದಾಗ ಅವುಗಳ ವಿಮರ್ಶೆಯೂ ಹುಟ್ಟಿತು. ಇದನ್ನು ಕಾವ್ಯಾಲಂಕಾರ, ಕಾವ್ಯಮೀಮಾಂಸೆ ಮುಂತಾದ ಶಬ್ದಗಳಿಂದ ಗುರುತಿಸಿದ ದೇವಭಾಷೆ, ಸುರವಾಣಿ ಇತ್ಯಾದಿಯಾಗಿ ಕರೆಸಿಕೊಳ್ಳುವ ಸಂಸ್ಕೃತದಲ್ಲಿ ಕಾವ್ಯಮೀಮಾಂಸೆ ವಿಪುಲವಾಗಿ ಬೆಳೆದಿದೆ. ಭರತನ ನಾಟ್ಯಶಾಸ್ತ್ರದಲ್ಲಿ ಅಂಕುರಿಸಿ, ಭಾಮಹ–ದಂಡಿ–ಉದ್ಭಟ ಮುಂತಾದವರಲ್ಲಿ ಪಲ್ಲವಿಸಿ, ರುದ್ರಟ–ವಾಮನ ಇತ್ಯಾದಿಗಳಲ್ಲಿ ಪುಷ್ಪಿತವಾಗಿ, ಧ್ವನಿಕಾರ ಆನಂದವರ್ಧನನಲ್ಲಿ ಫಲಿತವಾಯಿತು. ಮಹಾಮಾಹೇಶ್ವರ ಅಭಿನವಗುಪ್ತಪಾದರಿಂದ ಸಹೃದಯಚಕ್ರವರ್ತಿ ಎಂದು ಕರೆಸಿಕೊಂಡ ಮಹಾನುಭಾವ ಆನಂದವರ್ಧನ. ಹಿಂದಿನ ಆಲಂಕಾರಿಕರ ಸಿದ್ಧಾಂತಗಳನ್ನೆಲ್ಲ ಮಥಿಸಿ ಅವನು ಧ್ವನ್ಯಾಲೋಕವನ್ನು ರಚಿಸಿದನು. ಪ್ರಾಚೀನ ಚಿಂತನೆಗಳನ್ನು ತಿರಸ್ಕರಿಸದೆ ಅವುಗಳನ್ನು ಅಚ್ಚುಕಟ್ಟಾಗಿ ಅಳವಡಿಸಿಕೊಂಡು ಧ್ವನಿಸಿದ್ಧಾಂತವನ್ನು ಸ್ಥಾಪಿಸಿದವನು ಆನಂದವರ್ಧನ. ಧ್ವನ್ಯಾಲೋಕದ ಕೊನೆಯಲ್ಲಿ ಕಂಡುಬರುವ ಪದ್ಯ ಇದನ್ನು ಸ್ಪಷ್ಟಪಡಿಸುತ್ತದೆ –

**ಇತ್ಯಕ್ಲಿಷ್ಟರಸಾಶ್ರಯೋಚಿತಗುಣಾಲಂಕಾರಶೋಭಾಭೃತೋ**
**ಯಸ್ಮಾದ್ವಸ್ತು ಸಮೀಹಿತಂ ಸುಕೃತಿಭಿಃಸರ್ವಂ ಸಮಾಸಾದ್ಯತೇ ।**

**ಕಾವ್ಯಾಖ್ಯೇಽಖಿಲಸೌಖ್ಯಧಾಮ್ನಿ ವಿಬುಧೋದ್ಯಾನೇ ಧ್ವನಿರ್ದರ್ಶಿತಃ**
**ಸೋಽಯಂ ಕಲ್ಪತರೂಪಮಾನಮಹಿಮಾ ಭೋಗ್ಯೋಽಸ್ತು ಭವ್ಯಾತ್ಮನಾಮ್ ॥**

ಕಲ್ಪತರುವಿನಂತೆ ಸಕಲವನ್ನೂ ನೀಡುವ ಧ್ವನಿಸಿದ್ಧಾಂತದಲ್ಲಿ ರಸ, ಔಚಿತ್ಯ, ಗುಣ, ಅಲಂಕಾರ ಇವೆಲ್ಲವುಗಳ ಸಮ್ಮಿಲನವಿದೆಯೆಂದು ಇಲ್ಲಿ ಸೂಚಿಸಲಾಗಿದೆ. ಆನಂದವರ್ಧನನ ಈ ಕೊಡುಗೆ ಅಮೂಲ್ಯ. ಅವನ ಕಾಲದ ಅನಂತರ ಎಲ್ಲ ಮೂಲ ಆಲಂಕಾರಿಕರೂ ಧ್ವನಿಯನ್ನೇ ಪರಮಸಿದ್ಧಾಂತವೆಂದು ಒಪ್ಪಿದರು. ಅಭಿನವಗುಪ್ತ, ಮಮ್ಮಟ, ರುಯ್ಯಕ, ವಿಶ್ವನಾಥ, ಅಪ್ಪಯ್ಯದೀಕ್ಷಿತ, ಜಗನ್ನಾಥ ಇವರೆಲ್ಲರೂ ಧ್ವನಿಕಾರಾನುಯಾಯಿಗಳೇ.

ಆದರೆ, ಎಲ್ಲರೂ ಧ್ವನಿಕಾರನ ಮಾತನ್ನು ಅನುಮೋದಿಸಿ ತಲೆದೂಗಿದರೆಂದು ಅಭಿಪ್ರಾಯವಲ್ಲ. ಧ್ವನ್ಯಾಲೋಕದ ರಚನೆಯಾಗುವುದಕ್ಕೆ ಮೊದಲೇ ಧ್ವನಿಸಿದ್ಧಾಂತವನ್ನು ಮೂದಲಿಸಿ ಮನೋರಥನೆಂಬ ಕವಿ ಪದ್ಯವನ್ನು ರಚಿಸಿದ್ದನೆಂದು ಧ್ವನ್ಯಾಲೋಕದಿಂದಲೇ ತಿಳಿದುಬರುತ್ತದೆ.

**ಯಸ್ಮಿನ್ನಸ್ತಿ ನ ವಸ್ತು ಕಿಂಚನ ಮನಃಪ್ರಹ್ಲಾದಿ ಸಾಲಂಕೃತಿ**
**ವ್ಯುತ್ಪನ್ನೈ ರಚಿತಂ ಚ ನೈವ ವಚನೈರ್ವಕ್ರೋಕ್ತಿಶೂನ್ಯಂ ಚ ಯತ್ ।**
**ಕಾವ್ಯಂ ತದ್ ಧ್ವನಿನಾ ಸಮನ್ವಿತಮಿತಿ ಪ್ರೀತ್ಯಾ ಪ್ರಶಂಸನ್ ಜಡೋ**
**ನೋ ವಿದ್ಮೋಽಭಿದಧಾತಿ ಕಿಂ ಸುಮತಿನಾ ಪೃಷ್ಟಃ ಸ್ವರೂಪಂ ಧ್ವನೇಃ ॥**

ಮನಸ್ಸಿಗೆ ಆನಂದವನ್ನು ಕೊಡುವ, ಅಲಂಕಾರಸಹಿತವಾದ ವಸ್ತು ಇಲ್ಲ, ಆಕರ್ಷಕ ಶಬ್ದವೈಭವವಿಲ್ಲ, ವಕ್ರೋಕ್ತಿಯಂತೂ ಶೂನ್ಯ. ಇಂಥ ಕಾವ್ಯದಲ್ಲಿ ಧ್ವನಿ ಇದೆಯೆಂದು ಹೇಳಿಕೊಳ್ಳುವ ಮೂರ್ಖರು ಅದರ ಸ್ವರೂಪವೇನೆಂದು ಯಾರಾದರೂ ಪ್ರಶ್ನೆ ಮಾಡಿದಾಗ ಏನು ಉತ್ತರಿಸುವರು?

ತನ್ನ ಮುಂದೆ ಇದ್ದ ಎಲ್ಲ ವಿರೋಧಿಗಳನ್ನು ಎದುರಿಸಿ ಸಮರ್ಥವಾದಗಳನ್ನು ಮಂಡಿಸಿ ಆನಂದವರ್ಧನನು ಧ್ವನಿಸಿದ್ಧಾಂತವನ್ನು ದೃಢನೆಲದಲ್ಲಿ ಸ್ಥಾಪಿಸಿದನು. ಆದರೆ ಕೆಲವರು ವಿರೋಧವನ್ನು ಮುಂದುವರಿಸಿದರು. ಭಟ್ಟನಾಯಕನೆಂಬ ವಿದ್ವಾಂಸನು 'ಹೃದಯದರ್ಪಣ' ಎಂಬ ಗ್ರಂಥವನ್ನು ಬರೆದು ಧ್ವನಿಸಿದ್ಧಾಂತದ ಪ್ರಾಣವಾದ ವ್ಯಂಜನಾವೃತ್ತಿಯನ್ನೇ ಅಲ್ಲಗಳೆದನು. ಅವನ ತರ್ಕವನ್ನು ಅಭಿನವಗುಪ್ತಪಾದಾಚಾರ್ಯರು ಧ್ವನ್ಯಾಲೋಕವ್ಯಾಖ್ಯಾನ 'ಲೋಚನ'ದಲ್ಲಿ ಖಂಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮತ್ತೆ ವ್ಯಂಜನಾವೃತ್ತಿಯ ಅಸ್ತಿತ್ವವನ್ನೇ ಪ್ರಶ್ನಿಸಿ ನೈಯಾಯಿಕ ಸಮ್ಮತವಾದ ಅನುಮಾನ ಎಂಬ ಪ್ರಮಾಣದಿಂದಲೇ ಕಾವ್ಯದಿಂದ ಹೊಮ್ಮುವ

ಎಲ್ಲ ಅರ್ಥಗಳ ಅರಿವನ್ನು ಸಾಧಿಸಿಕೊಡಬಹುದು ಎಂಬ ನಿರ್ಣಯವನ್ನು ಮಂಡಿಸಲು ಹುಟ್ಟಿದ ಗ್ರಂಥವೇ **ವ್ಯಕ್ತಿವಿವೇಕ.** ಕಾವ್ಯವಿಮರ್ಶೆಯ ಇತಿಹಾಸದಲ್ಲಿ ಇದಕ್ಕೂ ಮಹತ್ತ್ವವಿದೆ. ೧೯೫೧ರಲ್ಲಿ ಪ್ರಾತಃಸ್ಮರಣೀಯ ಎ.ಆರ್. ಕೃಷ್ಣಶಾಸ್ತ್ರಿಗಳು ಹೀಗೆ ಬರೆದಿದ್ದರು– "ಧ್ವನಿ ಎಂಬುದನ್ನು ಲಾಕ್ಷಣಿಕರು ಮೊದಲಿಂದ ಅರಿತಿದ್ದರೂ ಅದನ್ನು ಪ್ರಧಾನವಾಗಿ ಪ್ರತಿಪಾದಿಸಿದವನು ಆನಂದವರ್ಧನ. ಅವನಿಂದ ಮುಂದಕ್ಕೆ ಅದನ್ನು ಪ್ರಾಯಶಃ ಎಲ್ಲರೂ ಅಂಗೀಕರಿಸಿದರು. ಮಹಿಮಭಟ್ಟನು ಅದನ್ನು ಖಂಡಿಸಿ 'ವ್ಯಕ್ತಿವಿವೇಕ'ವೆಂಬ ಗ್ರಂಥವನ್ನು ಬರೆದು ಪ್ರಸಿದ್ಧಿಗೆ ಬಂದನು. ಮಹಿಮಭಟ್ಟನು ತಾರ್ಕಿಕ. ಅವನ ಗ್ರಂಥ ತುಂಬ ಜಟಿಲ. ಧ್ವನ್ಯಾಲೋಕದ ಅನೇಕ ಅಭಿಪ್ರಾಯಗಳನ್ನೂ ಉದಾಹರಣೆಗಳನ್ನೂ ಅವನು ಅನುವಾದ ಮಾಡಿ ಚರ್ಚಿಸಿದ್ದಾನೆ. ಅವನು ಆಗ್ರಹಗ್ರಸ್ತನಾದರೂ ಆ ಗ್ರಂಥವು ಧ್ವನ್ಯಾಲೋಕಕ್ಕೆ ಪೂರಕದಂತಿದೆ. ಅದೂ ಕನ್ನಡಕ್ಕೆ ಬಂದರೆ ಪ್ರೌಢವೂ ಪಾರಿಭಾಷಿಕವೂ ಆದ ಅಲಂಕಾರ ಶಾಸ್ತ್ರಭಾಗ ಕನ್ನಡಿಗರಿಗೆ ದೊರೆತಂತಾಗುತ್ತದೆ. ಧ್ವನ್ಯಾಲೋಕದಲ್ಲಿ ಕಂಡುಬರುವ ಶಾಸ್ತ್ರವಾದದ ಸರಣಿ ಅಲ್ಲಿ ಇನ್ನೂ ಚೆನ್ನಾಗಿ ಪರಿಚಯವಾಗಿ ಬುದ್ಧಿಗೆ ಹೆಚ್ಚಿನ ಪರಿಶ್ರಮ ಉಂಟಾಗುತ್ತದೆ." (ಕನ್ನಡ ಧ್ವನ್ಯಾಲೋಕದ ಮುನ್ನುಡಿ).

ಪೂಜ್ಯರಾದ ಡಾ. ಕೆ. ಕೃಷ್ಣಮೂರ್ತಿಗಳು ಧ್ವನ್ಯಾಲೋಕದ ಜೊತೆಗೆ ಹಲವು ಅಲಂಕಾರ ಶಾಸ್ತ್ರಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಇದರಿಂದ ಉಭಯಭಾಷೆಗಳ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಮಹೋಪಕಾರವಾಗಿದೆ. ಆದರೆ, ಅವರು ಏಕೋ ವ್ಯಕ್ತಿವಿವೇಕವನ್ನು ಅನುವಾದಿಸಲಿಲ್ಲ. ಎ.ಆರ್. ಕೃಷ್ಣಶಾಸ್ತ್ರಿಗಳ ಆಶೆಯನ್ನು ಈಡೇರಿಸುವ ಅವಕಾಶ ನನಗೆ ಈಗ ದೊರೆತಿದೆ. ೬೦ ವರ್ಷಗಳ ಅನಂತರ ಈ ಕಾರ್ಯದಲ್ಲಿ ತೊಡಗಿದ್ದೇನೆ. ಆ ಇಬ್ಬರು ಮಹಾನುಭಾವರ ಆಶೀರ್ವಾದ ನನಗೆ ಇದೆಯೆಂದು ನಂಬಿದ್ದೇನೆ.

## ಮಹಿಮಭಟ್ಟ

ರಾಜಾನಕ ಮಹಿಮಭಟ್ಟ ಎಂಬ ಹೆಸರು ಗ್ರಂಥದಲ್ಲಿ ಮತ್ತು ಅದರ ಪುಷ್ಟಿಕೆಗಳಲ್ಲಿರುವುದರಿಂದ ವ್ಯಕ್ತಿವಿವೇಕದ ಕರ್ತೃ ಅವನೇ ಎಂಬುದು ಸಂಶಯಾತೀತ. ಅವನ ಹೆಸರಿನ ಜೊತೆಗಿರುವ 'ರಾಜಾನಕ' ಎಂಬ ಬಿರುದು ಅವನ ಕಾಶ್ಮೀರದೇಶದವನೆಂಬುದನ್ನು ನಿಸ್ಸಂದೇಹವಾಗಿ ತಿಳಿಸುತ್ತದೆ. ವ್ಯಕ್ತಿವಿವೇಕದಲ್ಲೇ ಅವನು ತನ್ನ ಬಗೆಗೆ ಹಲವು ವಿಷಯಗಳನ್ನು ತಿಳಿಸಿದ್ದಾನೆ.

**ಶ್ರೀಧೈರ್ಯಸ್ಯಾಂಗಭುವಾ ಮಹಾಕವೇಃ ಶ್ಯಾಮಲಸ್ಯ ಶಿಷ್ಯೇಣ ।**
**ವ್ಯಕ್ತಿವಿವೇಕೋ ವಿದಧೇ ರಾಜಾನಕಮಹಿಮಕೇನಾಯಮ್ ॥**

ಎಂಬ ಪದ್ಯದಿಂದ ಮಹಿಮಭಟ್ಟನ ತಂದೆಯ ಹೆಸರು ಧೈರ್ಯ (ಅಥವಾ ಶ್ರೀಧೈರ್ಯ), ಅವನ ಗುರು ಮಹಾಕವಿ ಶ್ಯಾಮಲ ಎಂಬುದು ವಿದಿತವಾಗುತ್ತದೆ. ಇವರಿಬ್ಬರ ಬಗೆಗೆ ನಮಗೆ ಬೇರೆ ಏನೂ ತಿಳಿಯದು. ಅವರ ಯಾವ ಕೃತಿಯೂ ಬೆಳಕಿಗೆ ಬಂದಿಲ್ಲ. ಅಲ್ಲದೆ, ವ್ಯಕ್ತಿವಿವೇಕವನ್ನು ಯಾವ ಉದ್ದೇಶಕ್ಕಾಗಿ ಬರೆದನೆಂಬುದನ್ನೂ ಮಹಿಮಭಟ್ಟನೇ ಇನ್ನೊಂದು ಪದ್ಯದಲ್ಲಿ ಹೇಳಿದ್ದಾನೆ –

**ಆಧಾತುಂ ವ್ಯುತ್ಪತ್ತಿಂ ನಪ್ತೄಣಾಂ ಕ್ಷೇಮಯೋಗಭೋಜಾನಾಮ್ ।**
**ಸತ್ಸು ಪ್ರಥಿತನಯಾನಾಂ ಭೀಮಸ್ಯಾಮಿತಗುಣಸ್ಯ ತನಯಾನಾಮ್ ॥**

ಇದರಿಂದ ಮಹಿಮಭಟ್ಟನ ಮಗನ ಹೆಸರು ಭೀಮ, ಅವನ ಮೂವರು ಮಕ್ಕಳು ಕ್ಷೇಮ, ಯೋಗ, ಭೋಜ (ಭಾಜ ಎಂಬುದು ಹಸ್ತಪ್ರತಿಗಳಲ್ಲಿರುವ ಪದ) ಎಂಬುವರು. ಅವರಿಗೆ ಕಾವ್ಯಶಾಸ್ತ್ರದ ನಿಷ್ಕೃಷ್ಟ ಜ್ಞಾನವನ್ನು ನೀಡುವುದಕ್ಕಾಗಿ ಮಹಿಮಭಟ್ಟನು ವ್ಯಕ್ತಿವಿವೇಕವನ್ನು ರಚಿಸಿದನು ಎಂದು ಗೊತ್ತಾಗುತ್ತದೆ.

## ಕಾಲ

ಮಹಿಮಭಟ್ಟನು ಕ್ರಿ.ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ವ್ಯಕ್ತಿವಿವೇಕವನ್ನು ರಚಿಸಿರಬೇಕೆಂದು ಊಹಿಸಬಹುದು. ಇದು ಧ್ವನ್ಯಾಲೋಕದ ಖಂಡನಗ್ರಂಥವಾಗಿರುವುದರಿಂದ ಆನಂದವರ್ಧನೋತ್ತರ ಕಾಲದಲ್ಲಿ ರಚಿತವಾಯಿತೆಂಬುದು ಸ್ಪಷ್ಟ. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿದ್ದ ಅಭಿನವಗುಪ್ತಪಾದರು ಧ್ವನ್ಯಾಲೋಕದ ಲೋಚನವನ್ನು ರಚಿಸಿದರು. ವ್ಯಕ್ತಿವಿವೇಕದಲ್ಲಿ ಮಹಿಮಭಟ್ಟನು ಲೋಚನದ ಕೆಲವು ಪಂಕ್ತಿಗಳನ್ನು ಯಥಾವತ್ ಉದ್ಧರಿಸಿದ್ದಾನೆ. ಇದರಿಂದ ಮಹಿಮಭಟ್ಟನು ಅಭಿನವಗುಪ್ತಪಾದರಿಗಿಂತಲೂ ಈಚಿನವನು ಎಂದು ನಿಸ್ಸಂಶಯವಾಗಿ ಹೇಳಬಹುದು. ಜೊತೆಗೆ, ವಕ್ರೋಕ್ತಿಜೀವಿತವನ್ನು ಬರೆದ ಕುಂತಕನನ್ನು ಮಹಿಮಭಟ್ಟನು–

**ಕಾವ್ಯಕಾಂಚನಕಷಾಶ್ಮಮಾನಿನಾ ಕುಂತಕೇನ ನಿಜಕಾವ್ಯಲಕ್ಷ್ಮಣಿ ।**
**ಯಸ್ಯ ಸರ್ವನಿರವದ್ಯತೋದಿತಾ ಶ್ಲೋಕ ಏಷ ಸ ನಿದರ್ಶಿತೋ ಮಯಾ ॥**

ಎಂದು ನಾಮೋಲ್ಲೇಖಪೂರ್ವಕವಾಗಿ ನಿರ್ದೇಶಿಸಿದ್ದಾನೆ. ಈ ಎಲ್ಲ ಪ್ರಮಾಣಗಳಿಂದ ಮಹಿಮಭಟ್ಟನು ಹನ್ನೊಂದನೆಯ ಶತಮಾನದ ಪೂರ್ವಾರ್ಧಕ್ಕಿಂತ ಈಚಿನವನೆಂದು ತೀರ್ಮಾನಿಸಬಹುದು.

ಹನ್ನೆರಡನೆಯ ಶತಮಾನದಲ್ಲಿ ಜಯಸಿಂಹನೆಂಬ ರಾಜನು ಕಾಶ್ಮೀರವನ್ನಾಳಿದನು. ಇವನ ಕಾಲ ಕ್ರಿ.ಶ. ೧೧೨೭-೪೯ ಎಂದು **ರಾಜತರಂಗಿಣಿ**ಯಿಂದ ನಮಗೆ ತಿಳಿದುಬರುತ್ತದೆ. ಈ ಜಯಸಿಂಹನ ಆಸ್ಥಾನದಲ್ಲಿ ಮಂಖಕನು ಸಾಂಧಿವಿಗ್ರಹಿಕನಾಗಿದ್ದನೆಂದೂ ಕಲ್ಹಣನು ಹೇಳುತ್ತಾನೆ.

**ಸಾಂಧಿವಿಗ್ರಹಿಕೋ ಮಂಖಕಾಖ್ಯೋಽಲಂಕಾರಸೋದರಃ ।**
**ಸ ಮಠಸ್ಯಾಭವತ್ ಪ್ರಷ್ಠಃ ಶ್ರೀಕಂಠಸ್ಯ ಪ್ರತಿಷ್ಠಯಾ ॥**

(ಅಲಂಕಾರನ ಸೋದರ ಮಂಖಕನು ಸಾಂಧಿವಿಗ್ರಹಿಕನಾಗಿದ್ದು ಶ್ರೀಕಂಠನನ್ನು ಪ್ರತಿಷ್ಠಾಪಿಸಿ ಮಠದ ಮುಖಂಡನಾದನು) ಎಂಬ ಪದ್ಯವು ಅಲ್ಲಿದೆ. ಮಂಖಕನು **ಶ್ರೀಕಂಠಚರಿತ** ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ. ಅದರಲ್ಲಿ ತನ್ನ ಗುರು ರುಯ್ಯಕನನ್ನು ಸ್ಮರಿಸಿದ್ದಾನೆ.

**ತಂ ಶ್ರೀರುಯ್ಯಕಮಾಲೋಕ್ಯ ಸ ಪ್ರಿಯಂ ಗುರುಮಗ್ರಹೀತ್ ।**
**ಸೌಹಾರ್ದಪ್ರಶ್ರಯರಸಸ್ರೋತಃಸಂಭೇದಮಜ್ಜನಮ್ ॥**

ರುಯ್ಯಕನು ಅಲಂಕಾರ ಸರ್ವಸ್ವದ ಕರ್ತೃ. ವ್ಯಕ್ತಿವಿವೇಕದ ಅಪೂರ್ಣ ವ್ಯಾಖ್ಯಾನವನ್ನು ಅವನೇ ರಚಿಸಿದನೆಂದೂ ನಂಬಲಾಗಿದೆ. ಇದರಿಂದ ಮಹಿಮಭಟ್ಟನ ಕಾಲ ಹನ್ನೆರಡನೆಯ ಶತಮಾನದ ಪ್ರಾರಂಭಕ್ಕಿಂತಲೂ ಮುಂಚಿನದೆಂದು ಸಿದ್ಧವಾಗುತ್ತದೆ. ಈ ಬಗೆಗೆ ಇನ್ನೊಂದು ಪ್ರಮಾಣವೂ ಇದೆ. ರುಯ್ಯಕನಿಗಿಂತಲೂ ಹಿಂದೆ ಇದ್ದ ಮಮ್ಮಟನು ಕಾವ್ಯಪ್ರಕಾಶದಲ್ಲಿ (ಐದನೆಯ ಉಲ್ಲಾಸದ ಉತ್ತರಾರ್ಧದಲ್ಲಿ) ಧ್ವನಿಯ ಅನುಮಾನಾಂತರ್ಭಾವವನ್ನು ಖಂಡಿಸಿದ್ದಾನೆ. ಅಲ್ಲಿ ಮಹಿಮಭಟ್ಟನ ಅಥವಾ ವ್ಯಕ್ತಿವಿವೇಕದ ಹೆಸರು ಉಲ್ಲೇಖಿತವಾಗಿಲ್ಲದಿದ್ದರೂ ವಾದಸರಣಿಯಿಂದ ಮಹಿಮಭಟ್ಟನ ಸಿದ್ಧಾಂತವನ್ನೇ ಖಂಡನೆಗೆ ಗುರಿ ಮಾಡಿರುವುದು ಸ್ಪಷ್ಟವಾಗುತ್ತದೆ.

ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ವ್ಯಕ್ತಿವಿವೇಕವು ಪ್ರಸಿದ್ಧಿಯನ್ನು ಗಳಿಸಿತ್ತೆಂದು ಹೇಳಬಹುದು. ಕಾನ್ಯಕುಬ್ಜ (ಕನೌಜ್) ರಾಜನಾಗಿದ್ದ ಜಯಚಂದ್ರನು ಕ್ರಿ.ಶ. ೧೧೬೯ ರಿಂದ ೧೧೯೫ರ ವರೆಗೆ ಆಳುತ್ತಿದ್ದನು. ಅವನ ಆಸ್ಥಾನಕವಿಯಾಗಿದ್ದ ಶ್ರೀಹರ್ಷನು ತನ್ನ **ಖಂಡನಖಂಡಖಾದ್ಯ** ಎಂಬ ಗ್ರಂಥದಲ್ಲಿ ವ್ಯಕ್ತಿವಿವೇಕವನ್ನು ಹೊಗಳಿರುವುದು ಇದಕ್ಕೆ ಸಾಕ್ಷಿಯಾಗಿದೆ–

**ದೋಷಂ ವ್ಯಕ್ತಿವಿವೇಕೇಽಮುಂ ಕವಿಲೋಕವಿಲೋಚನೇ ।**
**ಕಾವ್ಯಮೀಮಾಂಸಿಷು ಪ್ರಾಪ್ತಮಹಿಮಾ ಮಹಿಮಾದೃತ ॥**

ಈ ಎಲ್ಲ ಪ್ರಮಾಣಗಳಿಂದ ಮಹಿಮಭಟ್ಟನ ಕಾಲ ಕ್ರಿ.ಶ. ಹನ್ನೊಂದನೆಯ ಶತಮಾನದ ಮಧ್ಯಭಾಗ ಅಥವಾ ಉತ್ತರಾರ್ಧ ಇರಬೇಕೆಂದು ನಿರ್ಣಯಿಸಲಾಗುತ್ತದೆ.

## ಕೃತಿಗಳು

ಮಹಿಮಭಟ್ಟನ ಕೃತಿಗಳಲ್ಲಿ ಉಪಲಬ್ಧವಾಗಿರುವ ಏಕೈಕ ಗ್ರಂಥ ವ್ಯಕ್ತಿವಿವೇಕ. **ತತ್ತ್ವೋಕ್ತಿಕೋಶ** ಎಂಬ ಇನ್ನೊಂದು ಗ್ರಂಥವನ್ನೂ ಅವನು ರಚಿಸಿದ್ದನು. ಅದರಲ್ಲಿ 'ಪ್ರತಿಭಾ' ಎಂಬ ಬಗೆಗೆ ವಿವೇಚನೆಯನ್ನು ಮಾಡಿದ್ದನು ಎಂದು ತಿಳಿದುಬರುತ್ತದೆ. ವ್ಯಕ್ತಿವಿವೇಕದ ಎರಡನೆಯ ವಿಮರ್ಶದಲ್ಲಿ ಈ ಬಗೆಗೆ ಮಹಿಮಭಟ್ಟನೇ ಹೇಳಿದ್ದಾನೆ–

**ರಸಾನುಗುಣಶಬ್ದಾರ್ಥಚಿಂತಾಸ್ತಿಮಿತಚೇತಸಃ ।**
**ಕ್ಷಣಂ ಸ್ವರೂಪಸ್ಪರ್ಶೋತ್ಥಾ ಪ್ರಜ್ಞೈವ ಪ್ರತಿಭಾ ಕವೇಃ ॥**
**ಸಾಹಿ ಚಕ್ಷುರ್ಭಗವತಸ್ತೃತೀಯಮಿತಿ ಗೀಯತೇ ।**
**ಯೇನ ಸಾಕ್ಷಾತ್ಕರೋತ್ಯೇಷ ಭಾವಾಂಸ್ತ್ರೈ ಲೋಕ್ಯವರ್ತಿನಃ ॥**
**ಇತ್ಯಾದಿ ಪ್ರತಿಭಾತತ್ತ್ವಮಸ್ಮಾಭಿರುಪಪಾದಿತಮ್ ।**
**ಶಾಸ್ತ್ರೇ ತತ್ತ್ವೋಕ್ತಿಕೋಶಾಖ್ಯ ಇತಿ ನೇಹ ಪ್ರಪಂಚಿತಮ್ ॥**

(ರಸಾಭಿವ್ಯಕ್ತಿಗೆ ಬೇಕಾದ ಶಬ್ದಗಳ ಮತ್ತು ಅರ್ಥಗಳ ಅನ್ವೇಷಣೆಯಲ್ಲಿ ಏಕಾಗ್ರತೆಯಿಂದ ತೊಡಗುವ ಕವಿಗೆ ಯಾವುದೋ ಕ್ಷಣದಲ್ಲಿ ತನ್ನ ಸ್ವರೂಪಸ್ಪರ್ಶದಿಂದ ಉಂಟಾಗುವ ಪ್ರಜ್ಞೆಯೇ ಪ್ರತಿಭೆ. ಅದನ್ನು ಭಗವಂತನ ಮೂರನೆಯ ಕಣ್ಣು ಎಂದು ಕರೆಯುತ್ತಾರೆ. ಅದರಿಂದಲೇ ಕವಿಯು ಮೂರು ಲೋಕಗಳಲ್ಲಿರುವ ಎಲ್ಲ ವಸ್ತುಗಳನ್ನೂ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಇವೇ ಮೊದಲಾದ ಪ್ರತಿಭಾತತ್ತ್ವಗಳನ್ನು ತತ್ತ್ವೋಕ್ತಿಕೋಶ ಎಂಬ ಶಾಸ್ತ್ರಗ್ರಂಥದಲ್ಲಿ ನಾವು ಪ್ರತಿಪಾದಿಸಿರುವುದರಿಂದ ಅದನ್ನು ಇಲ್ಲಿ ವಿಸ್ತರಿಸಿಲ್ಲ.)

ಇವೆರಡಲ್ಲದೆ ಬೇರೆ ಯಾವ ಗ್ರಂಥವನ್ನು ಮಹಿಮಭಟ್ಟನು ರಚಿಸಿದ್ದನೋ ನಮಗೆ ತಿಳಿಯದು. ತತ್ತ್ವೋಕ್ತಿಕೋಶವು ಕಾಲಗರ್ಭದಲ್ಲಿ ಕರಗಿಹೋಗಿ ನಮಗೆ ದೊರಕದಿರುವುದು ದುರ್ದೈವ. ಅದು ಉಪಲಬ್ಧವಾಗಿದ್ದಿದ್ದರೆ ಮಹಿಮಭಟ್ಟನ ಮಹಿಮೆಯ ಪೂರ್ಣ ಪರಿಚಯ ವಿದ್ವತ್ಪ್ರಪಂಚಕ್ಕಾಗುತ್ತಿತ್ತು.

## ವ್ಯಕ್ತಿವಿವೇಕದ ವೈಶಿಷ್ಟ್ಯ

ಅಲಂಕಾರಶಾಸ್ತ್ರದ ಹಲವು ಗ್ರಂಥಗಳಲ್ಲಿ ಪ್ರಾಚೀನ ಗ್ರಂಥಗಳಲ್ಲಿ ಹೇಳಿದ ವಿಷಯಗಳ ವಿಮರ್ಶೆಯೂ ಖಂಡನೆಯೂ ಅಲ್ಲಲ್ಲಿ ಕಂಡುಬರುತ್ತದೆ. ಆದರೆ ಒಂದು ಗ್ರಂಥದ ಖಂಡನೆಯನ್ನೇ ಮುಖ್ಯೋದ್ದೇಶವನ್ನಾಗಿಟ್ಟುಕೊಂಡು ರಚಿತವಾದುವು ವಿರಳ. ಭಟ್ಟನಾಯಕನ ಹೃದಯದರ್ಪಣ ಇಂಥ ಗ್ರಂಥವಾಗಿತ್ತೇನೋ. ಅದು ಅನುಪಲಬ್ಧ. ಜಗನ್ನಾಥ ಪಂಡಿತರಾಜನ ಚಿತ್ರಮೀಮಾಂಸಾಖಂಡನ ಉಪಲಬ್ಧ. ವ್ಯಕ್ತಿವಿವೇಕವು ಧ್ವನ್ಯಾಲೋಕದ ಮುಖ್ಯಾಂಶವಾದ ವ್ಯಂಜನಾವ್ಯಾಪಾರವನ್ನೇ ಖಂಡಿಸಲು ರಚಿತವಾಗಿದೆ.

ಧ್ವನಿ ಎಂಬುದು ಉತ್ತಮಕಾವ್ಯಕ್ಕೆ ಆನಂದವರ್ಧನ ನೀಡಿರುವ ಹೆಸರು. ಅದರ ಲಕ್ಷಣವನ್ನು ಅವನು ಹೇಳಿದ್ದಾನೆ. ಶಬ್ದವು ತನ್ನ ಅರ್ಥವನ್ನು, ಅರ್ಥವು ತನ್ನನ್ನು ಉಪಸರ್ಜನವನ್ನಾಗಿ ಮಾಡಿಕೊಂಡು ಹೆಚ್ಚು ಸುಂದರವಾದ ಇನ್ನೊಂದು ಅರ್ಥವನ್ನು ಎಲ್ಲಿ ವ್ಯಂಜನಾವ್ಯಾಪಾರದಿಂದ ತಿಳಿಸುವುವೋ ಅದು ಧ್ವನಿ.

**ಯತ್ರಾರ್ಥಃ ಶಬ್ದೋ ವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ ।**
**ವ್ಯಂಕ್ತಃ ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ ॥**

ಈ ಲಕ್ಷಣದಲ್ಲಿ ಮಹಿಮಭಟ್ಟನು ಒಂದಲ್ಲ, ಎರಡಲ್ಲ, ಹತ್ತು ದೋಷಗಳನ್ನು ತೋರಿಸಿದ್ದಾನೆ. ದೋಷೈಕದೃಷ್ಟಿಗಳಿಗೆ ದೋಷವೇ ಎದ್ದುಕಾಣಿಸುತ್ತದೆ. ಇದನ್ನೇ ಸಂಸ್ಕೃತದಲ್ಲಿ 'ಪೌರೋಭಾಗ್ಯ' ಎನ್ನುತ್ತಾರೆ. ದೋಷವನ್ನೇ ಎತ್ತಿ ತೋರಿಸುವವರು ಅಭಾಗ್ಯರು. ಅಂಥ ಕಾರ್ಯವನ್ನು ನಾನು ಮಾಡಲು ಹೊರಟಿದ್ದೇನೆ ಎಂದು ಮಹಿಮಭಟ್ಟನೇ ಹೇಳುತ್ತಾನೆ–

**"ಪೌರೋಭಾಗ್ಯಮಭಾಗ್ಯಭಾಜನಜನಾಸೇವ್ಯಂ ಮಯಾಂಗೀಕೃತಮ್"**

ದೋಷಗಳನ್ನು ಹುಡುಕುವುದರಲ್ಲಿ ಮಹಿಮಭಟ್ಟನ ಜಾಣ್ಮೆಯನ್ನೂ ಸೂಕ್ಷ್ಮದೃಷ್ಟಿಯನ್ನೂ ಯಾರಾದರೂ ಪ್ರಶಂಸಿಸಲೇಬೇಕು. ಈ ವಿಷಯದಲ್ಲಿ ಅವನು ನಿರ್ದಾಕ್ಷಿಣ್ಯ. ಕಾಳಿದಾಸ, ಭಾರವಿ, ಮಾಘ ಮುಂತಾದ ಅತಿರಥ – ಮಹಾರಥರೆನಿಸಿದವರ ಕಾವ್ಯಗಳ ಪದ್ಯಗಳಲ್ಲೇ ದೋಷಗಳಿರುವುದನ್ನು ಅವನು ತೋರಿಸಿದ್ದಾನೆ. ಯಾವ ರೀತಿಯಾಗಿ ಅವರು ಆ ದೋಷಗಳಿಲ್ಲದಂತೆ ಆ ಪದ್ಯಗಳನ್ನು ರಚಿಸಬಹುದಾಗಿತ್ತು ಎಂಬುವುದನ್ನೂ ಅವನು ತಿಳಿಸಿಕೊಡುತ್ತಾನೆ. ವಕ್ರೋಕ್ತಿಜೀವಿತದಲ್ಲಿ ಕುಂತಕನು ಉತ್ತಮವೆಂದು ಉದಾಹರಿಸಿರುವ ಒಂದು ಪದ್ಯವನ್ನು ತೆಗೆದುಕೊಂಡು ಅದರ ಒಂದೊಂದು ಪದವನ್ನೂ ವಿಶ್ಲೇಷಿಸಿ ಅದು ದೋಷಭೂಯಿಷ್ಠ ಎಂದು ಸಾಧಿಸುತ್ತಾನೆ ಮಹಿಮಭಟ್ಟ.

ದೋಷಗಳನ್ನೇ ಹುಡುಕುವ ಪ್ರವೃತ್ತಿ ಸರಿಯಲ್ಲವೆಂದು ಎಲ್ಲರಿಗೂ ತಿಳಿದಿದೆ. ಆದರೂ ತಮ್ಮ ಕೃತಿಗಳಲ್ಲಿ ಆ ದೋಷಗಳನ್ನು ನಿವಾರಿಸಿಕೊಳ್ಳುವ ದೃಷ್ಟಿಯಿಂದ ಅವುಗಳ ಪರಿಜ್ಞಾನ ಎಲ್ಲರಿಗೂ ಆವಶ್ಯಕ. ಅಲಂಕಾರಶಾಸ್ತ್ರದ ವಿಷಯಗಳನ್ನು ಹೇಳುವ ಮೊದಲನೆಯ ಗ್ರಂಥವಾದ ಭರತನ ನಾಟ್ಯಶಾಸ್ತ್ರದಲ್ಲಿಯೇ ದೋಷಗಳ ವಿವೇಚನೆಯನ್ನು ಕಾಣುತ್ತೇವೆ. ಅಲ್ಲಿ ಹತ್ತು ಕಾವ್ಯದೋಷಗಳನ್ನು ನಮೂದಿಸಲಾಗಿದೆ–

**ಗೂಢಾರ್ಥಮರ್ಥಾಂತರಮರ್ಥಹೀನಂ**
**ಭಿನ್ನಾರ್ಥಮೇಕಾರ್ಥಮಭಿಪ್ಲುತಾರ್ಥಮ್ ।**
**ನ್ಯಾಯಾದಪೇತಂ ವಿಷಮಂ ವಿಸಂಧಿ**
**ಶಬ್ದಚ್ಯುತಂ ವೈ ದಶ ಕಾವ್ಯದೋಷಾಃ ॥**

ಇವುಗಳ ಲಕ್ಷಣಗಳು ಇಂತಿವೆ–

**ಪರ್ಯಾಯ ಶಬ್ದಾಭಿಹಿತಂ ಗೂಢಾರ್ಥಮಿತಿ ಸಂಜ್ಞಿತಮ್ ।**
**ಅವರ್ಣ್ಯಂ ವರ್ಣ್ಯತೇ ಯತ್ರ ತದರ್ಥಾಂತರಮಿಷ್ಯತೇ ।**
**ಅರ್ಥಹೀನಂ ತ್ವಸಂಬದ್ಧಂ ಸಾವಶೇಷಾರ್ಥಮೇವ ಚ ।**
**ಭಿನ್ನಾರ್ಥಮಭಿವಿಜ್ಞೇಯಮಸಭ್ಯಂ ಗ್ರಾಮ್ಯಮೇವ ಚ ।**
**ಅವಿಶೇಷಾಭಿಧಾನಂ ಯತ್ ತದೇಕಾರ್ಥಮಿತಿ ಸ್ಮೃತಮ್ ।**
**ಅಭಿಪ್ಲುತಾರ್ಥಂ ವಿಜ್ಞೇಯಂ ಯತ್ಪಾದೇನ ಸಮಸ್ಯತೇ ।**
**ನ್ಯಾಯಾದಪೇತಂ ವಿಜ್ಞೇಯಂ ಪ್ರಮಾಣಪರಿವರ್ಜಿತಮ್ ।**
**ವೃತ್ತಭೇದೋ ಭವೇದ್ ಯತ್ರ ವಿಷಮಂ ನಾಮ ತದ್ಭವೇತ್ ।**
**ಅನುಪಶ್ಲಿಷ್ಟ ಶಬ್ದಂ ಯತ್ ತದ್ ವಿಸಂಧೀತಿ ಕೀರ್ತಿತಮ್ ।**
**ಶಬ್ದಚ್ಯುತಂ ಚ ವಿಜ್ಞೇಯಮವರ್ಣಸ್ವರಯೋಜನಾತ್ ।**

ಮುಂದಿನ ಗ್ರಂಥಕಾರರಿಗೆಲ್ಲ ದೋಷಪ್ರಕರಣದ ರಚನೆಗೆ ಇದೇ ಮೂಲಸ್ರೋತಸ್ಸು. ಭಾಮಹನು ಈ ದೋಷಗಳನ್ನೇ ವಿಸ್ತರಿಸಿ ಕಾವ್ಯಾಲಂಕಾರದ ನಾಲ್ಕನೆಯ ಅಧ್ಯಾಯದಲ್ಲಿ ಹೇಳಿದ್ದಾನೆ.

**ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಮ್ ।**
**ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿ ಚ ॥**
**ದೇಶಕಾಲಕಲಾಲೋಕನ್ಯಾಯಾಗಮವಿರೋಧಿ ಚ ।**
**ಪ್ರತಿಜ್ಞಾಹೇತುದೃಷ್ಟಾಂತಹೀನಂ ದುಷ್ಟಂ ಚ ನೇಷ್ಯತೇ ॥** (೪. ೧–೨)

ಇಲ್ಲಿ ಹದಿನೆಂಟು ದೋಷಗಳನ್ನು ಎಣಿಸಬಹುದಾದರೂ ಅವು ಭರತನು ಹೇಳಿದ ಹತ್ತರಲ್ಲೇ ಸೇರಿಹೋಗುತ್ತವೆ. ನ್ಯಾಯಾಪೇತಂ (=ನ್ಯಾಯಾದಪೇತಂ) ಎಂಬುದನ್ನು ಭಾಮಹನು ದೇಶವಿರೋಧಿ, ಕಾಲವಿರೋಧಿ, ಕಲಾವಿರೋಧಿ, ಲೋಕವಿರೋಧಿ, ನ್ಯಾಯವಿರೋಧಿ, ಆಗಮವಿರೋಧಿ ಎಂದು ವಿಭಜಿಸಿದ್ದಾನೆಂದುಕೊಳ್ಳಬಹುದು.

ವಾಮನನ ಕಾವ್ಯಾಲಂಕಾರಸೂತ್ರದಲ್ಲಿ ಎರಡನೆಯ ಅಧಿಕರಣಕ್ಕೆ 'ದೋಷದರ್ಶನ' ಎಂದೇ ಹೆಸರು. ಅದರ ಒಂದನೆಯ ಅಧ್ಯಾಯದಲ್ಲಿ ಪದ–ಪದಾರ್ಥ ದೋಷಗಳನ್ನೂ, ಎರಡನೆಯ ಅಧ್ಯಾಯದಲ್ಲಿ ವಾಕ್ಯ–ವಾಕ್ಯಾರ್ಥ ದೋಷಗಳನ್ನೂ ವಾಮನನು ನಿರೂಪಿಸಿದ್ದಾನೆ.

**"ದುಷ್ಟಂ ಪದಮ್ – ಅಸಾಧು, ಕಷ್ಟಂ, ಗ್ರಾಮ್ಯಮ್,**
**ಅಪ್ರತೀತಮ್, ಅನರ್ಥಕಂ ಚ ।"**

ಎಂಬ ಸೂತ್ರದಿಂದ ಐದು ಪದದೋಷಗಳನ್ನೂ,

“ಅನ್ಯನೇಯಗೂಢಾರ್ಥಾಶ್ಲೀಲಾಕ್ಲಿಷ್ಟಾನಿ ಚ”

ಎಂಬ ಸೂತ್ರದಿಂದ ಅನ್ಯಾರ್ಥ, ನೇಯಾರ್ಥ, ಗೂಢಾರ್ಥ, ಅಶ್ಲೀಲ, ಕ್ಲಿಷ್ಟ ಎಂಬ ಐದು ದೋಷಗಳನ್ನೂ ಅವನು ತಿಳಿಸಿದ್ದಾನೆ. ವೃತ್ತಿಯಲ್ಲಿ ಇವುಗಳ ಲಕ್ಷಣ ಮತ್ತು ಉದಾಹರಣೆಗಳನ್ನು ಕೊಟ್ಟಿದ್ದಾನೆ.

“ಭಿನ್ನವೃತ್ತಯತಿಭ್ರಷ್ಟವಿಸಂಧೀನಿ ವಾಕ್ಯಾನಿ”

ಎಂಬ ಸೂತ್ರದಿಂದ ಭಿನ್ನಾವೃತ್ತ, ವಿಸಂಧಿ ಎಂಬ ಮೂರು ವಾಕ್ಯದೋಷಗಳನ್ನೂ,

“ವ್ಯರ್ಥೈಕಾರ್ಥಸಂದಿಗ್ಧಾಯುಕ್ತಾಪಕ್ರಮಲೋಕವಿದ್ಯಾ ವಿರುದ್ಧಾನಿ ಚ”

ಎಂಬ ಸೂತ್ರದಿಂದ ವ್ಯರ್ಥ, ಏಕಾರ್ಥ, ಸಂದಿಗ್ಧ, ಅಯುಕ್ತ, ಅಪಕ್ರಮ, ಲೋಕ ವಿರುದ್ಧ, ವಿದ್ಯಾವಿರುದ್ಧ ಎಂಬ ಏಳು ವಾಕ್ಯಾರ್ಥದೋಷಗಳನ್ನೂ ವಾಮನನು ನಿರೂಪಿಸಿದ್ದಾನೆ.

ಅಷ್ಟೇ ಅಲ್ಲದೆ ಉಪಮಾಲಂಕಾರವನ್ನು ಹೇಳುವಾಗ ಅದರಲ್ಲಿ ಸಂಭವಿಸುವ ಆರು ದೋಷಗಳನ್ನು–

“ಹೀನತ್ವಾಧಿಕತ್ವ ಲಿಂಗವಚನಭೇದಾಸಾದೃಶ್ಯಾಸಂಭವಾಃ ತದ್ದೋಷಾಃ”

ಎಂಬ ಸೂತ್ರದಿಂದ ನಿರೂಪಿಸಿ ಸೋದಾಹರಣವಾಗಿ ವಾಮನನು ವಿವರಿಸಿದ್ದಾನೆ.

ಈ ಪ್ರಾಚೀನ ಗ್ರಂಥಗಳನ್ನೆಲ್ಲ ಮಹಿಮಭಟ್ಟನು ಓದಿ ಅರಗಿಸಿಕೊಂಡಿದ್ದನು. ಅವುಗಳಲ್ಲಿರುವ ಕೆಲವು ಉದಾಹರಣಪದ್ಯಗಳು ವ್ಯಕ್ತಿವಿವೇಕದಲ್ಲೂ ಬಂದಿವೆ. ಆದರೆ, ಅವನು ಮಾಡುವ ದೋಷವಿವೇಚನೆ ಸೂಕ್ಷ್ಮದೃಷ್ಟಿಯಿಂದ ಉಂಟಾಗಿದೆ. ಅರ್ಥವಿಷಯ, ಶಬ್ದವಿಷಯ ಎಂದು ದೋಷವು ಎರಡು ವಿಧ. ಮೊದಲನೆಯದು (ಅರ್ಥವಿಷಯದ ದೋಷ) ಅಂತರಂಗ, ಎರಡನೆಯದು ಬಹಿರಂಗ. ಅಂತರಂಗ ದೋಷವು ರಸಸಂಬಂಧಿ, ವಿಭಾವಾನುಭಾವಗಳನ್ನು ರಸಕ್ಕೆ ವಿರುದ್ಧವಾಗಿ ಬಳಸುವುದರಿಂದ ಉಂಟಾಗುತ್ತದೆ. ಇದನ್ನು ಆನಂದವರ್ಧನಾದಿಗಳೇ ಸವಿಸ್ತರವಾಗಿ ವರ್ಣಿಸಿದ್ದಾರೆ. ಮತ್ತೆ ಹೇಳುವ ಆವಶ್ಯಕತೆಯಿಲ್ಲ. ಆದ್ದರಿಂದ ಬಹಿರಂಗವಾದ ಶಬ್ದವಿಷಯ ದೋಷಗಳನ್ನೇ ನಾನು ಹೇಳುತ್ತೇನೆ ಎಂದು ಮಹಿಮಭಟ್ಟನು ವಿಧೇಯಾವಿಮರ್ಶ, ಪ್ರಕ್ರಮಭೇದ, ಕ್ರಮಭೇದ, ಪೌನರುಕ್ತ್ಯ, ವಾಚ್ಯಾವಚನ ಎಂಬ ಐದು ದೋಷಗಳನ್ನು ಉದಾಹರಣ – ಪ್ರತ್ಯುದಾಹರಣೆಗಳಿಂದ ಪ್ರತಿಪಾದಿಸಿದ್ದಾನೆ. ಈ ದೋಷಪ್ರತಿಪಾದನೆಯು ಮಮ್ಮಟ, ವಿಶ್ವನಾಥ ಮುಂತಾದ ಗ್ರಂಥಕಾರರಿಗೆ ಮಾರ್ಗದರ್ಶಕವಾಯಿತು.

ಅನುಮಾನದಲ್ಲಿ ಎಲ್ಲ ಧ್ವನಿಪ್ರಕಾರಗಳ ಅಂತರ್ಭಾವ ಎಂದು ಸಿದ್ಧಾಂತಿಸಲು ಹೊರಟ ಮಹಿಮಭಟ್ಟನನ್ನು ಮಮ್ಮಟಾದಿಗಳು ಖಂಡಿಸಿರುವುದು ವಿದ್ವದ್ವಿದಿತ. ಆದರೆ ದೋಷಗಳ ಪ್ರತಿಪಾದನೆಯಲ್ಲಿ ಅವನಿಗೆ ಅವರೆಲ್ಲ ಋಣಿಗಳು ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಮಹಿಮಭಟ್ಟನು ತಾರ್ಕಿಕ. ಆದರೆ ಶುಷ್ಕ ತಾರ್ಕಿಕನಲ್ಲ. ಮೂರನೆಯ ವಿಮರ್ಶದಲ್ಲಿ ಧ್ವನ್ಯಾಲೋಕದ ಉದಾಹರಣೆಗಳನ್ನು ತೆಗೆದುಕೊಂಡು ಅವುಗಳನ್ನು ವಿವರಿಸುವಾಗ ಅವನು ಬಳಸಿರುವ ಲಲಿತ ಭಾಷೆ ಆನಂದವರ್ಧನನನ್ನೂ ಮೀರಿಸುವಂತಿದೆ. ಬೇರೆ ಯಾವ ಆಲಂಕಾರಿಕನೂ ಇಷ್ಟು ಸುಂದರವಾಗಿ ಶ್ಲೋಕಾರ್ಥಗಳನ್ನು ವರ್ಣಿಸಿಲ್ಲ ಎಂದು ನಮಗೆ ಅನಿಸಿದೆ. ರಸದ ಪಾರಮ್ಯದಲ್ಲಿ ಮಹಿಮಭಟ್ಟನ ತಕರಾರಿಲ್ಲ. ಅದರಿಂದಲೇ ಸಹೃದಯರಿಗೆ ಪರ ನಿರ್ವೃತಿ, ಸಹೃದಯನಿಗೆ ರಸಾನುಭವವನ್ನುಂಟು ಮಾಡುವುದೇ ಕವಿಯ ಮುಖ್ಯ ಉದ್ದೇಶ ಎಂಬುದರಲ್ಲೂ ಅವನ ಸಮ್ಮತಿಯಿದೆ. ಆದರೆ, ರಸಪ್ರತೀತಿಯು ವ್ಯಂಜನಾ ಎಂಬ ಶಬ್ದವೃತ್ತಿಯಿಂದಾಗುತ್ತದೆ ಎಂಬುದನ್ನು ಅವನು ಒಪ್ಪುವುದಿಲ್ಲ. ಅದೆಲ್ಲ ಮಾನಸಪ್ರಕ್ರಿಯೆ, ಸೂಕ್ಷ್ಮವಾಗಿ ನೋಡಿದರೆ ಅಲ್ಲಿ ಅನುಮಾನವೆಂಬ ಪ್ರಮಾಣವೇ ಗೋಚರಿಸುತ್ತದೆ ಎಂದು ಅವನು ವಿಶ್ಲೇಷಿಸಿದ್ದಾನೆ. ಶಬ್ದಕ್ಕೆ ಅಭಿಧಾ ಎಂಬ ಒಂದೇ ವ್ಯಾಪಾರ ಅಥವಾ ವೃತ್ತಿ ಎಂಬುದು ಅವನ ದೃಢ ನಿರ್ಧಾರ.

ಅಲಂಕಾರಗಳ ವಿವೇಚನೆ ಮಹಿಮಭಟ್ಟನ ಉದ್ದೇಶ್ಯದಲ್ಲಿ ಸೇರಿಲ್ಲ. ಅಲ್ಲಲ್ಲಿ ಸಂದರ್ಭೋಚಿತವಾದ ಒಂದೆರಡು ಮಾತುಗಳನ್ನು ಅವನು ಆಡಿದ್ದಾನೆ. ರಸಪ್ರಧಾನವಾದ ಕಾವ್ಯದಲ್ಲಿ ಅಲಂಕಾರಗಳ ಸ್ಥಾನ ಯಾವುದು? ಅವುಗಳನ್ನೆಷ್ಟು ಬಳಸಬೇಕು ಎಂಬ ಬಗೆಗೆ ಆನಂದವರ್ಧನನು ಹೇಳಿರುವುದಷ್ಟೆ ಸಾಕು ಎಂಬುದು ಅವನ ಅಭಿಪ್ರಾಯ.

ಸ್ವಭಾವೋಕ್ತಿಯ ಬಗೆಗೆ ಮಹಿಮಭಟ್ಟನ ಅಭಿಪ್ರಾಯವು ಗ್ರಾಹ್ಯವಾಗಿದೆ ಎನಿಸುತ್ತದೆ. ಪ್ರಾಯಶಃ ಆರಂಭಕಾಲದಿಂದಲೂ ಈ ವಿಷಯದಲ್ಲಿ ಆಲಂಕಾರಿಕರಿಗೆ ಸಂಶಯವಿತ್ತೇನೋ! ಭಾಮಹನಿಗಿಂತ ಹಿಂದಿನವರಾಗಿದ್ದ ಮೇಧಾವಿ ಮತ್ತು ರಾಮಶರ್ಮ ಸ್ವಭಾವೋಕ್ತಿ ಎಂಬ ಅಲಂಕಾರವನ್ನು ಒಪ್ಪಿದ್ದರೋ ಇಲ್ಲವೋ ತಿಳಿಯದು. ಭಾಮಹನು ಇದನ್ನು ಅಲಂಕಾರವೆಂದು ಒಪ್ಪಿಕೊಂಡಿದ್ದನೋ ಇಲ್ಲವೋ ಎಂಬುದೂ ಸಂದಿಗ್ಧವಾಗಿದೆ. ಅವನು ಒಪ್ಪಿದ್ದನೆಂದು ರಾಘವನ್ ಅವರು ಹೇಳಿದರೆ, ಕಾಣೆಯವರು ಅದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಕಾವ್ಯಾಲಂಕಾರದಲ್ಲಿ ಭಾಮಹನು ಹೇಳುವುದಿಷ್ಟು –

**ಸ್ವಭಾವೋಕ್ತಿರಲಂಕಾರ ಇತಿ ಕೇಚಿತ್ ಪ್ರಚಕ್ಷತೇ ।**
**ಅರ್ಥಸ್ಯ ತದವಸ್ಥತ್ವಂ ಸ್ವಭಾವೋಽಭಿಹಿತೋ ಯಥಾ ॥** (೨.೯೩)

(ಸ್ವಭಾವೋಕ್ತಿ ಒಂದು ಅಲಂಕಾರವೆಂದು ಕೆಲವರು ಹೇಳುತ್ತಾರೆ. ಅರ್ಥವು (ವಸ್ತುವು) ಹೇಗಿದೆಯೋ ಹಾಗೆಯೆ ಹೇಳುವುದು ಸ್ವಭಾವೋಕ್ತಿ.)

ಅದಕ್ಕೆ ಭಾಮಹನು ಕೊಟ್ಟಿರುವ ಉದಾಹರಣೆ–

**ಆಕ್ರೋಶನ್ನಾಹ್ವಯನ್ನನ್ಯಾನ್ ಆಧಾವನ್ ಮಂಡಲೈರ್ನುದನ್ ।**
**ಗಾ ವಾರಯತಿ ದಂಡೇನ ಬಾಲಃ ಸಸ್ಯಾವತಾರಿಣೀಃ ॥**

(ಬೆಳೆಯೊಳಗೆ ನುಗ್ಗಿದ ಹಸುಗಳನ್ನು ಹುಡುಗನು ಕೋಲಿನಿಂದ ಅಟ್ಟುತ್ತಿದ್ದಾನೆ. ಜೋರಾಗಿ ಕಿರುಚುತ್ತಾ ಬೇರೆ ಹುಡುಗರನ್ನು ಕರೆಯುತ್ತಾ ಸುತ್ತಿ ಓಡುತ್ತಾ ಹಸುಗಳನ್ನು ಹೊರಗೆ ದಬ್ಬುತ್ತಿದ್ದಾನೆ.)

ಇಲ್ಲಿ ಬೇರೆ ಯಾವ ಚರ್ಚೆಯನ್ನೂ ಭಾಮಹನು ಮಾಡಿಲ್ಲ. ದಂಡಿಯು ಸ್ವಭಾವೋಕ್ತಿಯ ಬಗೆಗೆ ಮಾತನಾಡುವಾಗ ಒಂದು ಮೂಲಭೂತ ವಿಚಾರವನ್ನು ಪ್ರಸ್ತುತಪಡಿಸಿದ್ದಾನೆ–

**ಭಿನ್ನಂ ದ್ವಿಧಾ ಸ್ವಭಾವೋಕ್ತಿರ್ವಕ್ರೋಕ್ತಿಶ್ಚೇತಿ ವಾಙ್ಮಯಮ್ ।**

ಇದ್ದುದನ್ನು ಇದ್ದಂತೆಯೇ ಹೇಳುವುದು, ಬೇರೊಂದು ರೀತಿಯಲ್ಲಿ ಸುಂದರವಾಗಿ ಹೇಳುವುದು ಎಂಬ ಎರಡು ಪ್ರಕಾರಗಳು ವಾಙ್ಮಯದಲ್ಲಿವೆ. ಇವೆರಡೂ ಆಕರ್ಷಕವಾಗಿರುತ್ತವೆ. ಹೀಗಿರಲು ಏಕೆ ಸ್ವಭಾವೋಕ್ತಿಯನ್ನು ಅಲಂಕಾರಗಳ ಪಟ್ಟಿಯಿಂದ ಹೊರಗಿಡಬೇಕು? ವಕ್ರೋಕ್ತಿಯ ಅಂಶವಿಲ್ಲದ ಅಲಂಕಾರವೇ ಇಲ್ಲ (ಕೋಽಲಂಕಾರೋಽನಯಾ ವಿನಾ!) ಎಂಬ ಭಾಮಹನ ಮಾತನ್ನು ಒಪ್ಪಬೇಕೆ?

ಆನಂದವರ್ಧನನೂ ಸ್ವಭಾವೋಕ್ತಿ ಒಂದು ಅಲಂಕಾರ ಎಂದು ಹೇಳಿದ್ದಾನೆ. ಅಭಿಜ್ಞಾನಶಾಕುಂತಲದ –

**ಚಲಾಪಾಂಗಾಂ ದೃಷ್ಟಿಂ ಸ್ಪೃಶಸಿ ಬಹುಶೋ ವೇಪಥುಮತೀಂ**
**ರಹಸ್ಯಾಖ್ಯಾಯೀವ ಸ್ವನಸಿ ಮೃದು ಕರ್ಣಾಂತಿಕಚರಃ ।**
**ಕರೌ ವ್ಯಾಧುನ್ವತ್ಯಾಃ ಪಿಬಸಿ ರತಿಸರ್ವಸ್ವಮಧರಂ**
**ವಯಂ ತತ್ತ್ವಾನ್ವೇಷಾನ್ಮಧುಕರ ಹತಾಸ್ತ್ವಂ ಖಲು ಕೃತೀ ॥**

ಎಂಬಲ್ಲಿ ಭ್ರಮರಸ್ವಭಾವೋಕ್ತಿಯು ಶೃಂಗಾರರಸಕ್ಕೆ ಅಂಗ ಎಂದವನು ಹೇಳಿದ್ದಾನೆ.

ಸ್ವಭಾವೋಕ್ತಿಯು ಅಲಂಕಾರವೇ ಅಲ್ಲ. ಅದು ಅಲಂಕಾರ್ಯ ಎಂಬ ವಾದವನ್ನು ಮಂಡಿಸಿದವನು ಕುಂತಕ. ಶಬ್ದಾರ್ಥಗಳಿಗೆ ವಕ್ರೋಕ್ತಿಯು ಅಲಂಕಾರ.

ಅರ್ಥವೆಂಬುದು ಸ್ವಭಾವ. ಅದರ ಉಕ್ತಿಯೇ ಅಲಂಕಾರವಾದರೆ ಅಲಂಕಾರ್ಯ ಯಾವುದು? ಎಂದು ಅವನು ಕೇಳುತ್ತಾನೆ–

**ಅಲಂಕಾರಕೃತಾಂ ಯೇಷಾಂ ಸ್ವಭಾವೋಕ್ತಿರಲಂಕೃತಿಃ ।**
**ಅಲಂಕಾರ್ಯತಯಾ ತೇಷಾಂ ಕಿಮನ್ಯದವಶಿಷ್ಯತೇ ॥**
**(ವಕ್ರೋಕ್ತಿಜೀವಿತ ೧.೧೧)**

ಸ್ವಭಾವವನ್ನು ಬಿಟ್ಟರೆ ಬೇರೆ ಏನನ್ನು ಹೇಳಲು ಸಾಧ್ಯ? ಸ್ವಭಾವವಿಲ್ಲದ ವಸ್ತು ನಿರುಪಾಖ್ಯವಾಗಿ ಎಂದರೆ ಅನಿರ್ವಚನೀಯವಾಗಿ ಬಿಡುತ್ತದೆ.

**ಸ್ವಭಾವವ್ಯತಿರೇಕೇಣ ವಕ್ತುಮೇವ ನ ಯುಜ್ಯತೇ ।**
**ವಸ್ತು ತದ್ರಹಿತಂ ಯಸ್ಮಾನ್ನಿರುಪಾಖ್ಯಂ ಪ್ರಸಜ್ಯತೇ ॥ (ಅದೇ ೧.೧೨)**

ವಸ್ತುವಿನ ಸ್ವಭಾವವು ಕಾವ್ಯದ ಶರೀರ. ಆ ಶರೀರವೇ ಅಲಂಕಾರ ಎನ್ನುವುದಾದರೆ ಅದು ಯಾವುದನ್ನು ಅಲಂಕರಿಸಬೇಕು? ಯಾವುದೂ ತನಗೆ ತಾನೇ ಅಲಂಕಾರವಲ್ಲ. ಯಾವನೂ ತನ್ನ ಹೆಗಲಿನ ಮೇಲೆ ತಾನೇ ಏರಿ ಕುಳಿತುಕೊಳ್ಳಲಾರನು.

**ಶರೀರಂ ಚೇದಲಂಕಾರಃ ಕಿಮಲಂಕುರುತೇಽಪರಮ್ ।**
**ಆತ್ಮೈವನಾತ್ಮನಃ ಸ್ಕಂಧಂ ಕ್ವಚಿದಪ್ಯಧಿರೋಹತಿ ॥ (ಅದೇ ೧.೧೩)**

ಸ್ವಭಾವವೇ ಅಲಂಕಾರವಾದರೆ ಬೇರೆ ಯಾವುದೇ ಅಲಂಕಾರ ಕಾವ್ಯದಲ್ಲಿ ಬಂದರೆ ಅವೆರಡರ ಭೇದ ಸ್ಪಷ್ಟವೋ ಅಸ್ಪಷ್ಟವೋ ಆಗಿರುತ್ತದೆ. ಸ್ಪಷ್ಟ ಎಂದಾದರೆ ಎಲ್ಲ ಉದಾಹರಣೆ ಗಳಲ್ಲಿ ಸಂಸೃಷ್ಟಿ ಅಲಂಕಾರ. ಅಸ್ಪಷ್ಟ ಎಂದಾದರೆ ಎಲ್ಲೆಲ್ಲೂ ಸಂಕರಾಲಂಕಾರ. ಇವೆರಡನ್ನು ಬಿಟ್ಟು ಬೇರೆ ಯಾವ ಅಲಂಕಾರಕ್ಕೂ ಸ್ವತಂತ್ರೋದಾಹರಣೆಯೇ ಇಲ್ಲವೆಂದಾದೀತು.

**ಭೂಷಣತ್ವೇ ಸ್ವಭಾವಸ್ಯ ವಿಹಿತೇ ಭೂಷಣಾಂತರೇ ।**
**ಭೇದಾವಬೋಧಃ ಪ್ರಕಟಃ ತಯೋರಪ್ರಕಟೋಽಥವಾ ॥**
**ಸ್ಪಷ್ಟೇ ಸರ್ವತ್ರ ಸಂಸೃಷ್ಟಿರಸ್ಪಷ್ಟೇ ಸಂಕರಸ್ತತಃ ।**
**ಅಲಂಕಾರಾಂತರಾಣಾಂ ಚ ವಿಷಯೋ ನಾವಶಿಷ್ಯತೇ ॥ (ಅದೇ ೧.೧೪, ೧೫)**

ಕವಿಯು ವರ್ಣನೆಗೆ ಆರಿಸಿಕೊಂಡ ವಸ್ತುಸ್ವಭಾವವು ಸಹೃದಯಾಹ್ಲಾದಕಾರಿಯಾಗಿ ಕಾವ್ಯಶರೀರವಾಗುತ್ತದೆ. ಅದಕ್ಕೆ ಶೋಭಾತಿಶಯವನ್ನುಂಟು ಮಾಡುವ ಉಪಮಾರೂಪಕಾದಿ ಅಲಂಕಾರಗಳನ್ನು ತೊಡಿಸಬೇಕು. ಹೀಗೆ ಸಹೃದಯಾಹ್ಲಾದಕಾರಿಯೂ ಸ್ವಸ್ಪಂದ ಸುಂದರವೂ ಆದ ಸ್ವಭಾವವು ಅಲಂಕಾರ್ಯ, ಅಲಂಕಾರವಲ್ಲ ಎಂದು ಬಲವತ್ತಾದ ವಾದವನ್ನು ಕುಂತಕನು ಪ್ರಸ್ತುತಪಡಿಸಿದ್ದಾನೆ.

ಮಹಿಮಭಟ್ಟನು ಸ್ವಭಾವೋಕ್ತಿಯೂ ಒಂದು ಅಲಂಕಾರವೆಂದು ಒಪ್ಪಿಕೊಂಡಿದ್ದಾನೆ. ಕುಂತಕನ ವಾದದ ಅರಿವು ಅವನಿಗಿತ್ತು. ಅದಕ್ಕೆ ಉತ್ತರವಾಗಿ ಅವನು ಹೇಳುವುದಿಷ್ಟು–

**ಉಚ್ಯತೇ ವಸ್ತುನಸ್ತಾವದ್ ದ್ವೈರೂಪ್ಯಮಿಹ ವಿದ್ಯತೇ ।**
**ತತ್ರೈಕಮತ್ರ ಸಾಮಾನ್ಯಂ ಯದ್ವಿಕಲ್ಪೈಕ ಗೋಚರಃ ॥**
**ಸ ಏವ ಸರ್ವಶಬ್ದಾನಾಂ ವಿಷಯಃ ಪರಿಕೀರ್ತಿತಃ ।**
**ಅತ ಏವಾಭಿಧೇಯಂ ತೇ ಸಾಮಾನ್ಯಂ ಬೋಧಯಂತ್ಯಲಮ್ ॥**
**ವಿಶಿಷ್ಟಮಸ್ಯ ಯದ್ರೂಪಂ ತತ್ಪ್ರತ್ಯಕ್ಷಸ್ಯ ಗೋಚರಃ ।**
**ಸ ಏವ ಸತ್ಕವಿಗಿರಾಂ ಗೋಚರಃ ಪ್ರತಿಭಾಭುವಾಮ್ ॥**
**ಅರ್ಥಸ್ವಭಾವಸ್ಯೋಕ್ತಿರ್ಯಾ ಸಾಲಂಕಾರತಯಾ ಮತಾ ।**
**ಯತಃ ಸಾಕ್ಷಾದಿವಾಭಾಂತಿ ತತ್ರಾರ್ಥಾಃ ಪ್ರತಿಭಾರ್ಪಿತಾಃ ॥**

(ವಸ್ತುವಿಗೆ ಎರಡು ರೂಪಗಳಿರುತ್ತವೆ. ಒಂದು ರೂಪ ಸಾಮಾನ್ಯ ಸ್ವರೂಪದ್ದು. ಅದು ವಿಕಲ್ಪಗೋಚರ, ಆ ಸಾಮಾನ್ಯಾಕಾರವೇ ಎಲ್ಲ ಶಬ್ದಗಳಿಗೂ ವಿಷಯ. (ಶಬ್ದವು ಸಾಮಾನ್ಯವನ್ನು ಮಾತ್ರ ಹೇಳಬಲ್ಲುದು, ವಿಶೇಷವನ್ನು ಅದು ಹೇಳಲಾರದು.) ಆದ್ದರಿಂದ ಶಬ್ದಗಳು ಸಾಮಾನ್ಯರೂಪವನ್ನೇ ಹೇಳುತ್ತವೆ. ವಸ್ತುವಿನ ವಿಶಿಷ್ಟ ರೂಪವು ಪ್ರತ್ಯಕ್ಷ ಪ್ರಮಾಣಕ್ಕೆ ಮಾತ್ರ ಗೋಚರ. ಪ್ರತಿಭಾಶಾಲಿಗಳಾದ ಕವಿಗಳ ಮಾತುಗಳಿಗೆ ಆ ವಿಶಿಷ್ಟರೂಪವೂ ವಿಷಯವಾಗುತ್ತದೆ. ಅಂಥ ಅರ್ಥದ ವಿಶಿಷ್ಟ ಸ್ವಭಾವವನ್ನು ಹೇಳುವ ಸ್ವಭಾವೋಕ್ತಿ ಅಲಂಕಾರವೆಂದು ನನ್ನ ಅಭಿಪ್ರಾಯ. ಏಕೆಂದರೆ, ಹಾಗೆ ಹೇಳಿದಾಗ ಆ ಪ್ರತಿಭೆಯಿಂದ ಸಮರ್ಪಿತವಾದ ಪದಾರ್ಥಗಳು ಸಾಕ್ಷಾತ್ ಎದುರಿಗೆ ಇವೆ ಎಂದು ಸಹೃದಯರಿಗೆ ಭಾಸವಾಗುತ್ತದೆ.)

ಆದ್ದರಿಂದ, ಮಹಿಮಭಟ್ಟನ ದೃಷ್ಟಿಯಲ್ಲಿ ವಸ್ತುಗಳ (ಎಲ್ಲ ವರ್ಣನೀಯ ಪದಾರ್ಥ ಗಳ) ಸಾಮಾನ್ಯ ಸ್ವಭಾವವು ಕಾವ್ಯದ ಶರೀರ, ಅದು ಅಲಂಕಾರ್ಯ. ಆದರೆ ಪ್ರತಿಭಾಮಾತ್ರಗೋಚರವಾದ ವಿಶಿಷ್ಟ ಸ್ವಭಾವವು ಶೋಭಾಜನಕವಾಗಿ ಅಲಂಕಾರ ಎನಿಸಿಕೊಳ್ಳುತ್ತದೆ. ಆ ಸ್ವಭಾವೋಕ್ತ್ಯಲಂಕಾರವನ್ನುಳ್ಳ ಸಾಹಿತ್ಯವನ್ನು ಓದಿದಾಗ ವರ್ಣನೀಯ ವಸ್ತುಗಳು ಸಾಕ್ಷಾತ್ತಾಗಿ ನಮ್ಮ ಎದುರಿಗೆ ಇದ್ದಂತೆ ಭಾಸವಾಗುತ್ತವೆ. ಹೀಗೆ ಸ್ವಭಾವೋಕ್ತಿಯ ಇತಿಹಾಸದಲ್ಲಿ ಹೊಸ ಮಜಲನ್ನು ಸೇರಿಸಿದ ಕೀರ್ತಿ ಮಹಿಮಭಟ್ಟನದು.

ಆದರೆ, ಕುಂತಕನನ್ನು ಮೂದಲಿಸಿ ಅವನು ಮಾಡುವ ಟೀಕೆ ಅನುಕ್ತೋಪಾಲಂಭ ಎಂದು ನಮಗೆ ತೋರುತ್ತದೆ. ಸಂರಂಭಃ ಕರಿಕೀಟ...... ಎಂಬ ಶ್ಲೋಕದಲ್ಲಿರುವ ದೋಷಗಳನ್ನೆಲ್ಲ ತೋರಿಸಿ ಮಹಿಮಭಟ್ಟನಿಂತೆದಿದ್ದಾನೆ–

**ಕಾವ್ಯಕಾಂಚನಕಷಾಶ್ಮಮಾನಿನಾ ಕುಂತಕೇನ ನಿಜಕಾವ್ಯಲಕ್ಷ್ಮಣಿ ।**
**ಯಸ್ಯ ಸರ್ವನಿರವದ್ಯತೋದಿತಾ ಶ್ಲೋಕ ಏಷ ಸ ನಿದರ್ಶಿತೋ ಮಯಾ ॥**

"ಕಾವ್ಯವೆಂಬ ಚಿನ್ನಕ್ಕೆ ನಾನೇ ಒರೆಗಲ್ಲು ಎಂದು ತಿಳಿದುಕೊಂಡಿದ್ದ ಕುಂತಕನಿಂದ ಯಾವ ಪದ್ಯದ ಪೂರ್ಣ ನಿರ್ದೋಷತೆಯು ಹೇಳಲ್ಪಟ್ಟಿದೆಯೋ ಆ ಶ್ಲೋಕವನ್ನು ನಾನು ಪರೀಕ್ಷಿಸಿ (ಅದರ ಹುಳುಕನ್ನು) ತೋರಿಸಿದ್ದೇನೆ." ಆದರೆ, ಕುಂತಕನು ಈ ಶ್ಲೋಕವು ಸರ್ವಥಾ ನಿರ್ದೋಷ ಎಂದು ಎಲ್ಲಿ ಹೇಳಿದ್ದಾನೆ? ವಕ್ರೋಕ್ತಿಜೀವಿತದಲ್ಲಿ ಸಂರಂಭಃ ಕರಿಕೀಟ..... ಎಂಬ ಶ್ಲೋಕವನ್ನು ಉದಾಹರಿಸಿ ಕುಂತಕನು ಬರೆದಿರುವುದು ಇಷ್ಟೇ –

**"ಅತ್ರ ಕರಿಣಾಂ ಕೀಟವ್ಯಪದೇಶೇನ ತಿರಸ್ಕಾರಃ, ತೋಯದಾನಾಂ ಚ ಶಕಲಶಬ್ದಾಭಿಧಾನೇನ ಅನಾದರಃ, ಸರ್ವಸ್ಯ ಇತಿ ಯಸ್ಯ ಕಸ್ಯಚಿತ್ತುಚ್ಛತರಪ್ರಾಯಸ್ಯ ಇತ್ಯವಹೇಲಾ, ಜಾತೇಶ್ಚ ಮಾತ್ರಶಬ್ದವಿಶಿಷ್ಟತ್ವೇನ ಅವಲೇಪಃ, ಹೇವಾಕಸ್ಯ ಲೇಶಶಬ್ದಾಭಿಧಾನೇನ ಅಲ್ಪತಾಪ್ರತಿಪತ್ತಿರಿತ್ಯೇತೇ ವಿವಕ್ಷಿತಾರ್ಥೈಕವಾಚಕತ್ವಂ ದ್ಯೋತಯಂತಿ । ಘಟಾಬಂಧಶಬ್ದಶ್ಚ ಪ್ರಸ್ತುತ ಮಹತ್ವ ಪ್ರತಿಪಾದನಪರತ್ವೇನೋಪಾತ್ತಸ್ತನ್ನಿಬಂಧನತಾಂ ಪ್ರತಿ–ಪದ್ಯತೇ । ವಿಶೇಷಾಭಿಧಾನಾಕಾಂಕ್ಷಿಣಃ ಪುನಃ ಪದಾರ್ಥ ಸ್ವರೂಪಸ್ಯ ತತ್ಪ್ರತಿಪಾದನಪರವಿಶೇಷಣಶೂನ್ಯತಯಾ ಶೋಭಾಪರಿಹಾಣಿರುತ್ಪದ್ಯತೇ ।"**

(ಇಲ್ಲಿ ಆನೆಗಳನ್ನು ಕೀಟಗಳೆಂದು ಕರೆದಿರುವುದರಿಂದ ತಿರಸ್ಕಾರ, ಮೋಡಗಳಿಗೆ ಶಕಲ (ಚೂರು, ಮುರುಕು) ಎಂದಿರುವುದರಿಂದ ಅನಾದರ, ಸರ್ವಸ್ಯ ಎಂಬ ಪದದಿಂದ ಯಾವುದೋ ಒಂದು ಅತಿತುಚ್ಛವಾದ ಪ್ರಾಣಿಯ ಎಂದು ಕಡೆಗಣನೆ, ಜಾತಿ ಎಂಬುದಕ್ಕೆ ಮಾತ್ರ ಎಂಬ ಪದವನ್ನು ಜೋಡಿಸಿರುವುದರಿಂದ ಉಪೇಕ್ಷೆ, ಹೇವಾಕ ಎಂಬುದಕ್ಕೆ ಲೇಶ ಎಂದು ಸೇರಿಸಿರುವುದರಿಂದ ಅದು ಅಲ್ಪ ಎಂಬ ಅರಿವು – ಇವೆಲ್ಲವೂ ಕವಿಗೆ ವಿವಕ್ಷಿತವಾದ ಅರ್ಥವನ್ನು ತಿಳಿಸುವ ಸಾಮರ್ಥವನ್ನು ವ್ಯಂಜಿಸುತ್ತವೆ. ಘಟಾಬಂಧ ಶಬ್ದವು ಪ್ರಸ್ತುತಾರ್ಥದ ಮಹತ್ವವನ್ನು ಪ್ರತಿಪಾದಿಸುವುದಕ್ಕಾಗಿ ಉಪಾತ್ತವಾಗಿ ಅದರ ಜ್ಞಾನಕ್ಕೆ ಕಾರಣವಾಗುತ್ತದೆ. ಯಾವ ಪದಾರ್ಥದ ವಿಶೇಷವನ್ನು ಹೇಳಬೇಕೆಂದು ಕವಿ ಇಷ್ಟಪಟ್ಟಿರುವನೋ ಅದನ್ನು ಪ್ರತಿಪಾದಿಸುವ ವಿಶೇಷಣವು ಇಲ್ಲದಿದ್ದರೆ, ಆಗ ಕಾವ್ಯದ ಸೊಬಗಿಗೆ ಕುಂದು ಉಂಟಾಗುತ್ತದೆ.)

ಈ ಪದ್ಯವನ್ನು ವಿವರಿಸುವಾಗ ಕುಂತಕನು ದೋಷಗಳ ಬಗೆಗೆ ಹೇಳಿಲ್ಲ. ಈ ಪದ್ಯ ನಿರ್ದೋಷ ಎಂಬ ಮಾತು ಕುಂತಕನ ಬಾಯಿಂದ ಬಂದಿಲ್ಲ. ಹೀಗಿರುವಾಗ ಮಹಿಮಭಟ್ಟನು "ಯಸ್ಯ ಸರ್ವನಿರವದ್ಯತೋದಿತಾ" ಎಂದು ಹೇಗೆ ಹೇಳಿದನೋ ನಮಗೆ ತಿಳಿಯದು. ತಾನು 'ಕಾವ್ಯಕಾಂಚನನಿಕಷ' ಎಂದು ಕುಂತಕನು ಎಲ್ಲಿ ಬಡಾಯಿ ಕೊಚ್ಚಿಕೊಂಡಿದ್ದನೋ ನಮಗೆ ತಿಳಿಯದು. ಪೂರ್ವಸೂರಿಗಳ ಬಗೆಗೆ ಮಹಿಮಭಟ್ಟನು ಹಗುರವಾಗಿ ನುಡಿದಿರುವುದು ಸರಿಯಲ್ಲವೆನಿಸುತ್ತದೆ. ಅಭಿನವಗುಪ್ತಪಾದರನ್ನು ಅವನು 'ವಿದ್ವನ್ಮಾನಿನಃ' ಎಂದು ತೆಗಳಿರುವುದು ಅನುಚಿತ.

ಧ್ವನಿತತ್ತ್ವವನ್ನು ಒಪ್ಪದೆ ಖಂಡಿಸಿದವರಲ್ಲಿ ಮತ್ತು ಅನುಮಿತಿವಾದವನ್ನು ಪುರಸ್ಕರಿಸಿದವರಲ್ಲಿ ಮಹಿಮಭಟ್ಟ ಮೊದಲನೆಯವನೇನಲ್ಲ. ಧ್ವನ್ಯಾಲೋಕದ ರಚನೆಗಿಂತಲೂ ಮುಂಚೆ ಧ್ವನಿವಾದಿಗಳೂ ಅದರ ಖಂಡನಕಾರರೂ ಇದ್ದರೆಂಬುದು ಆನಂದವರ್ಧನನ ಮಾತಿನಿಂದಲೇ ಸ್ಪಷ್ಟವಾಗುತ್ತದೆ. ಮನೋರಥನೆಂಬ ವಿದ್ವಾಂಸ ಧ್ವನಿತತ್ತ್ವವನ್ನು ಲೇವಡಿ ಮಾಡಲು ಪದ್ಯವೊಂದನ್ನು ರಚಿಸಿದ್ದನೆಂದು ಧ್ವನ್ಯಾಲೋಕದಿಂದಲೂ ಲೋಚನವಾಖ್ಯಾನದಿಂದಲೂ ತಿಳಿದುಬರುತ್ತದೆ. ತನ್ನ ವಿರೋಧಿಗಳ ಅನುಮಿತಿವಾದವನ್ನು ಆನಂದವರ್ಧನನೇ ಸಂಕ್ಷಿಪ್ತವಾಗಿ ಹೇಳಿ ಅದು ದೃಢವಾಗಿ ನಿಲ್ಲುವ ವಾದವಲ್ಲ ಎಂದಿದ್ದಾನೆ.

> **"ವ್ಯಂಜಕತ್ವಂ ಶಬ್ದಾನಾಂ ಗಮಕತ್ವಂ, ತಚ್ಚ ಲಿಂಗತ್ವಮ್,**
> **ಅತಶ್ಚ ವ್ಯಂಗ್ಯ ಪ್ರತೀತಿರ್ಲಿಂಗಿಪ್ರತೀತಿರೇವೇತಿ ಲಿಂಗಲಿಂಗಿ–**
> **ಭಾವ ಏವ ತೇಷಾಂ, ವ್ಯಂಗ್ಯವ್ಯಂಜಕಭಾವೋ ನಾಪರಃ**
> **ಕಶ್ಚಿತ್ । ..........ನ ಪುನರಯಂ ಪರಮಾರ್ಥೋ**
> **ಯದ್ ವ್ಯಂಜಕತ್ವಂ ಲಿಂಗತ್ವಮೇವ, ಸರ್ವತ್ರ ವ್ಯಂಗ್ಯ–**
> **ಪ್ರತೀತಿರೇವ ಲಿಂಗಿಪ್ರತೀತಿರಿತಿ"**

(ಶಬ್ದಗಳಿಗೆ ಇರುವ ವ್ಯಂಜಕತ್ವವು ಗಮಕತ್ವವೇ, ಗಮಕತ್ವವೆಂದರೆ ಲಿಂಗತ್ವ. ಆದುದರಿಂದ ವ್ಯಂಗ್ಯದ ಪ್ರತೀತಿಯೆಂದರೆ ಲಿಂಗಿಯ (ಎಂದರೆ ಸಾಧ್ಯದ) ಪ್ರತೀತಿಯೇ ಆಗಿರುತ್ತದೆ. ಆದ್ದರಿಂದ ವ್ಯಂಗ್ಯ–ವ್ಯಂಜಕಗಳಿಗೆ ಇರುವುದು ಲಿಂಗಲಿಂಗಿಭಾವವೇ. ಬೇರೆ ಯಾವುದೂ ಅಲ್ಲ...... ಆದರೆ, ವ್ಯಂಜಕತ್ವವು ಲಿಂಗತ್ವವೇ, ಎಲ್ಲೆಲ್ಲೂ ವ್ಯಂಗ್ಯ ಪ್ರತೀತಿಯೆಲ್ಲ ಲಿಂಗಿಪ್ರತೀತಿ ಎಂಬುದು ಪರಮಾರ್ಥಸತ್ಯವಲ್ಲ.)

(ಧ್ವನ್ಯಾಲೋಕ, ೩ನೆಯ ಉದ್ಯೋತ)

ನಾಟ್ಯಶಾಸ್ತ್ರದ ವ್ಯಾಖ್ಯಾತೃಗಳಲ್ಲಿ ಒಬ್ಬನಾಗಿದ್ದ ಶ್ರೀಶಂಕುಕನೂ ಹೃದಯದರ್ಪಣದ ಕರ್ತೃ ಭಟ್ಟನಾಯಕನೂ ವ್ಯಂಜನಾ ಎಂಬ ವ್ಯಾಪಾರವನ್ನು

ಒಪ್ಪಿಕೊಂಡಿರಲಿಲ್ಲವೆಂದು ತೋರುತ್ತದೆ. ಮಹಿಮಭಟ್ಟೋತ್ತರಕಾಲದ ಆಲಂಕಾರಿಕರೆಲ್ಲ ಅನುಮಿತಿವಾದವನ್ನು ಖಂಡಿಸಿದ್ದಾರೆ. ಅಲಂಕಾರಸರ್ವಸ್ವದಲ್ಲಿ ರುಯ್ಯಕನು

**"ಯತ್ತು ವ್ಯಕ್ತಿವಿವೇಕಕಾರೋ ವಾಚ್ಯಸ್ಯ**
**ಪ್ರತೀಯಮಾನಂ ಪ್ರತಿ ಲಿಂಗಯಾ ವ್ಯಂಜನಸ್ಯಾನುಮಾನಾಂ–**
**ತರ್ಭಾವಮಾಖ್ಯತ್, ತದ್ವಾಚ್ಯಸ್ಯ ಪ್ರತೀಯಮಾನೇನ ಸಹ**
**ತಾದಾತ್ಮ್ಯ ತದುತ್ಪತ್ತ್ಯಭಾವಾದವಿಚಾರಿತಾಭಿಧಾನಮ್ ।**
**ತದೇತತ್ ಕುಶಾಗ್ರಧಿಷಣೈಃ ಕ್ಷೋದನೀಯಮ್**
**ಅತಿಗಹನಗಹನಮ್ ಇತಿ ನೇಹ ಪ್ರತನ್ಯತೇ ॥"**

(ವ್ಯಕ್ತಿವಿವೇಕಕಾರನು ವ್ಯಂಗ್ಯಾರ್ಥಕ್ಕೆ ವಾಚ್ಯವು ಲಿಂಗವಾಗುವುದರಿಂದ ವ್ಯಂಜನಾ ವ್ಯಾಪಾರವು ಅನುಮಾನದಲ್ಲಿ ಅಂತರ್ಭಾವವನ್ನು ಹೊಂದುತ್ತದೆ ಎಂದು ಹೇಳಿದ್ದಾನೆ. ಆದರೆ ವಾಚ್ಯಾರ್ಥಕ್ಕೆ ವ್ಯಂಗ್ಯಾರ್ಥದೊಡನೆ ತಾದಾತ್ಮ್ಯವೂ ಇಲ್ಲ, ತದುತ್ಪತ್ತಿಯೂ (ಕಾರ್ಯಕಾರಣಭಾವವೂ) ಇಲ್ಲ. ಆದ್ದರಿಂದ ವ್ಯಕ್ತಿವಿವೇಕಕಾರನ ಮಾತು ವಿಚಾರವನ್ನೇ ಮಾಡದೆ ಆಡಿದ ನುಡಿ. ಈ ವಿಷಯವನ್ನು ಕುಶಾಗ್ರಬುದ್ಧಿಗಳು ವಿಮರ್ಶಿಸಬೇಕು. ಅತ್ಯಂತ ಗಹನ ಎಂಬ ಕಾರಣದಿಂದ ಅದನ್ನಿಲ್ಲಿ ವಿಸ್ತರಿಸುತ್ತಿಲ್ಲ.)

ಏಕಾವಳೀಕಾರ ವಿದ್ಯಾಧರನೂ ಹೇಳಿದ್ದಾನೆ–

**"ಯತ್ ಪುನರನುಮಾನತೋ ನಾತಿರಿಚ್ಯತೇ ಧ್ವನಿಃ**
**ಇತ್ಯಾಚಷ್ಟ ಮಹಿಮಭಟ್ಟಸ್ತದಪಿ ಪಲಾಲಾಯಮಾನಮ್"**

(ಧ್ವನಿಯು ಅನುಮಾನಕ್ಕಿಂತ ಭಿನ್ನವಾದುದಲ್ಲ ಎಂದು ಮಹಿಮಭಟ್ಟನು ಹೇಳಿರು ವುದು ಹೊಟ್ಟಿನಂತೆ ನಿಸ್ಸಾರ.)

ಆದರೆ ಮುಂದಿನ ಆಲಂಕಾರಿಕರಿಂದ ಆದರವನ್ನು ಮಹಿಮಭಟ್ಟನು ಪಡೆಯಲಿಲ್ಲ ಎಂದಮಾತ್ರಕ್ಕೆ ಅವನು ದಡ್ಡ ಎಂದು ಭಾವಿಸಬಾರದು. ಅವನು ತರ್ಕಪ್ರಿಯನಾಗಿದ್ದ ಕಾವ್ಯರಸಿಕ. ವ್ಯಕ್ತಿವಿವೇಕವನ್ನು ಆಮೂಲಾಗ್ರವಾಗಿ ಓದಿದ ಯಾರಿಗಾದರೂ ಮಹಿಮನ ಮಹಿಮೆಯು ಗೋಚರಿಸದಿರದು.

ಕೆಲವರು ವಿದ್ವಾಂಸರು ಅವನ ಬಗೆಗೆ ಹೇಳಿರುವ ಮಾತುಗಳು ಇಂತಿವೆ.

**ಭಾರತರತ್ನ ಡಾ. ಪಿ.ವಿ. ಕಾಣೆ**

"His work is one of the masterpieces of the Alankara Literature and deserves to be saved from the unmerited

oblivion in which it has fallen. His work contains brilliant arguments and exhibits great erudition, logical acumen, fastidious criticism and deep insight. Among later Alankara writers he found no follower and being pitted against the famous Anandavardhana, he does not receive his due" (History of Sanskrit Poeties)

(ಮಹಿಮಭಟ್ಟನ ಕೃತಿ ಅಲಂಕಾರಶಾಸ್ತ್ರದ ಮೇರುಕೃತಿಗಳಲ್ಲೊಂದು. ನಿಷ್ಕಾರಣವಾಗಿ ಅಜ್ಞಾತತಾಂಧಕಾರದಲ್ಲಿ ಮುಳುಗಿಹೋಗಿರುವ ಆ ಕೃತಿಯನ್ನು ಮೇಲೆತ್ತಿ ಉಳಿಸಬೇಕು. ಅವನ ಗ್ರಂಥದಲ್ಲಿ ಪ್ರತಿಭಾಪೂರ್ಣ ವಿಚಾರಗಳಿವೆ. ಅದು ಮಹಿಮಭಟ್ಟನ ಮಹಾಪಾಂಡಿತ್ಯವನ್ನೂ, ತಾರ್ಕಿಕ ಕೌಶಲ್ಯವನ್ನೂ, ತೀಕ್ಷ್ಣ ವಿಮರ್ಶನಶಕ್ತಿಯನ್ನೂ ಗಂಭೀರ ಒಳನೋಟವನ್ನೂ ಪ್ರದರ್ಶಿಸುತ್ತದೆ. ಅನಂತರ ಕಾಲದ ಆಲಂಕಾರಿಕರಲ್ಲಿ ಯಾರೂ ಅವನ ಅನುಯಾಯಿಗಳಾಗಲಿಲ್ಲ. ಪ್ರಸಿದ್ಧವಾದ ಆನಂದವರ್ಧನನಿಗೆ ಎದುರಾಗಿ ನಿಂತುದುದರಿಂದ ಮಹಿಮಭಟ್ಟನಿಗೆ ಸಿಗಬೇಕಾಗಿದ್ದ ಮನ್ನಣೆ ಸಿಕ್ಕಲೇ ಇಲ್ಲ.)

**ಡಾ. ಕೆ. ಕೃಷ್ಣಮೂರ್ತಿ**

"All the criticisms of the Dhvanyaloka considered in the previous chapter pale into insignificance when compared to the redoubtable Vyaktiviveka of Mahima Bhatta. After Kuntaka Mahima Bhatta may be said to be the only original writer in the history of Sanskrit Poetics till the time of Jagannatha. An astute logician, a brilliant connoisseur and a master at polemics, Mahima Bhatta stands out foremost in the rank of Anandavardhara's critics. The oblivion into which his work Vyaktiviveka has unfortunately fallen is totally unmerited. Whatever be the soundness of his arguments, it is more than certain that in him we find a bold thinker coming forward with his original investigations in the matter. Amid the one hundred and one books on Sanskrit Alankarasastra

which directly trudge along the trodden track omitting an insignificant detail here or adding a superficial one there, it is most refreshing to come across a work like the Vyaktiviveka........"

(Dhvanyaloka and its Critics, p-268)

(ಹಿಂದಿನ ಅಧ್ಯಾಯದಲ್ಲಿ ನಾವು ಪರಾಮರ್ಶಿಸಿದ ಎಲ್ಲ ಧ್ವನ್ಯಾಲೋಕಖಂಡನೆಗಳೂ ಮಹಿಮಭಟ್ಟನ ವಿಶಿಷ್ಟ ಕೃತಿಯಾದ ವ್ಯಕ್ತಿವಿವೇಕದೊಡನೆ ಹೋಲಿಸಿದಾಗ ಲೆಕ್ಕಕ್ಕಿಲ್ಲದವುಗಳಾಗಿ ಮರೆಯಾಗುತ್ತವೆ. ಕುಂತಕನಾದ ಮೇಲೆ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಜಗನ್ನಾಥನವರೆಗೆ ಮೂಡಿಬಂದ ಒಬ್ಬನೇ ಒಬ್ಬ ಮೌಲಿಕ ಗ್ರಂಥಕಾರ ಮಹಿಮಭಟ್ಟನೇ ಎಂದು ಹೇಳಬಹುದು. ನಿಶಿತಮತಿ ತಾರ್ಕಿಕನಾಗಿ, ಪ್ರತಿಭಾಶಾಲಿ ರಸಜ್ಞನಾಗಿ ಮತ್ತು ವಾದಭೂಮಿಯ ಶೂರನಾಗಿ ಮಹಿಮಭಟ್ಟನು ಆನಂದವರ್ಧನನ ವಿಮರ್ಶಕರಲ್ಲಿ ಮುಂಚೂಣಿಯ ಮುಂದಾಳಾಗಿ ಮೆರೆಯುತ್ತಾನೆ. ದುರ್ದೈವದಿಂದ ಅವನ ಕೃತಿ ವ್ಯಕ್ತಿವಿವೇಕವು ಅಜ್ಞಾತಪಾತಾಳಕ್ಕೆ ಬಿದ್ದು ಮರೆಯಾಗಿರುವುದಕ್ಕೆ ಯಾವುದೇ ಸರಿಯಾದ ಕಾರಣವಿಲ್ಲ. ಅವನ ವಾದಗಳ ಸಮೀಚೀನತೆ ಏನೇ ಆಗಿರಲಿ, ಅವನಲ್ಲಿ ನಾವು (ಕಾವ್ಯಮೀಮಾಂಸೆಯ) ವಿಷಯದಲ್ಲಿ ತನ್ನದೇ ಆದ ಅನ್ವೇಷಣೆಗಳಿಂದ ಎದ್ದು ಕಾಣಿಸುವ ಧೀರ ಧೀಮಂತ ಚಿಂತಕನನ್ನು ನೋಡಬಹುದು ಅಲಂಕಾರಶಾಸ್ತ್ರದ ನೂರೊಂದು ಪುಸ್ತಕಗಳು ಹಲವರು ಸವೆಸಿದ ಹಾದಿಯಲ್ಲೇ ನಡೆಯುತ್ತಾ ಇಲ್ಲೊಂದು ಅಪ್ರಧಾನ ವಿವರಣೆಯನ್ನು ಬಿಟ್ಟು, ಅಲ್ಲೊಂದು ಮೇಲುನೋಟಕ್ಕೆ ಕಾಣುವ ಅಮುಖ್ಯ ವಿಷಯವನ್ನು ಸೇರಿಸುತ್ತವೆ ಅಷ್ಟೆ. ಅಂಥವುಗಳ ಮಧ್ಯದಲ್ಲಿ ವ್ಯಕ್ತಿವಿವೇಕದಂಥ ಗ್ರಂಥವನ್ನು ಕಂಡಾಗ ಮನಸ್ಸಿನಲ್ಲಿ ಮುದವು ಮೂಡುತ್ತದೆ.

**ತೀ.ನಂ.ಶ್ರೀ**

"ಮಹಿಮಭಟ್ಟನ ಖಂಡನೆಯೆಲ್ಲವೂ ವ್ಯಂಜನಾವ್ಯಾಪಾರತತ್ತ್ವವನ್ನು ಕುರಿತು ಮಾತ್ರ. ಅದೊಂದನ್ನು ಬಿಟ್ಟರೆ 'ಧ್ವನ್ಯಾಲೋಕ'ದ ಅಭಿಪ್ರಾಯಗಳ ವಿಷಯದಲ್ಲಿ ಹೆಚ್ಚಿನ ಆಕ್ಷೇಪಣೆ ಅವನಿಗಿಲ್ಲ. ರಸದ ವಿಚಾರದಲ್ಲಂತೂ ಆನಂದವರ್ಧನನಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ. ರಸಪ್ರಾಧಾನ್ಯಕ್ಕೆ ಅವಕಾಶವಿಲ್ಲದಂತೆ ತೋರುವ ಗುಣೀಭೂತ ವ್ಯಂಗ್ಯಾದಿಗಳನ್ನು ಒಪ್ಪಿಕೊಂಡದ್ದಕ್ಕಾಗಿ ಧ್ವನಿಪಕ್ಷದವರನ್ನು ಆಕ್ಷೇಪಿಸುತ್ತಾನೆ. ಮಹಿಮಭಟ್ಟನಿಗೆ ರಸವೇ ಕಾವ್ಯದ ಆತ್ಮ; ರಸವಿಲ್ಲದಿದ್ದರೆ ಕಾವ್ಯತ್ವವೇ

ಸಿದ್ಧಿಸುವುದಿಲ್ಲ. ರಸಪ್ರತಿಪಾದಕವಾದ ವಿಭಾವಾದಿಗಳನ್ನು ಅಣಿಗೊಳಿಸುವುದೇ ಕವಿಕಾರ್ಯ. ಇಷ್ಟನ್ನೂ ಸ್ಪಷ್ಟವಾಗಿ ಹೇಳುವುದಲ್ಲದೆ, ಸಾರರೂಪವಾದ ಈ ಕೆಳಗಿನ ಉಕ್ತಿಯನ್ನು ಪ್ರಾಚೀನ ಕೃತಿಯೊಂದರಿಂದ ಉದ್ಧರಿಸಿ ಕೊಡುತ್ತಾನೆ:

**ಅನುಭಾವವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ ।**
**ತೇಷಾಮೇವ ಪ್ರಯೋಗಸ್ತು ನಾಟ್ಯಂ ಗೀತಾದಿರಂಜಿತಮ್ ॥**

'ಅನುಭಾವ ವಿಭಾವಗಳ ವರ್ಣನೆಗೆ ಕಾವ್ಯವೆಂದು ಹೆಸರು. ಇವುಗಳನ್ನೇ ಗಾನಾದಿಗಳಿಂದ ರಂಜನೆಗೊಳಿಸಿ ಆಡಿ ತೋರಿಸಿದರೆ ನಾಟ್ಯವಾಗುತ್ತದೆ.'– ಕಲಾಮೀಮಾಂಸೆ ಇದಕ್ಕಿಂತ ಹೆಚ್ಚು ದೂರ ಹೋಗಲಾರದು.

'ವ್ಯಕ್ತಿವಿವೇಕ'ದಲ್ಲಿ ಕಾವ್ಯವನ್ನು ಕುರಿತು ಉಪಾದೇಯವೂ ವಿಚಾರಕ್ರಮವೂ ಆದ ಅನೇಕ ವಿಷಯಗಳು ಅಲ್ಲಲ್ಲೇ ಬಂದಿವೆ; ಇದು ಕ್ಲಿಷ್ಟವಾದರೂ ಓದಬೇಕಾದ ಗ್ರಂಥ."

(ಭಾರತೀಯ ಕಾವ್ಯಮೀಮಾಂಸೆ, ಪು–೯೩)

ಮೇಲೆ ಹೇಳಿರುವ ಎಲ್ಲ ಕಾರಣಗಳಿಂದ ವ್ಯಕ್ತಿವಿವೇಕವನ್ನು ಕನ್ನಡಿಸಲು ಪಟ್ಟಿರುವ ಪರಿಶ್ರಮ ಉಚಿತವೆಂದು ಅನುವಾದಕನ ಭಾವನೆಯಾಗಿದೆ.

## ವ್ಯಕ್ತಿವಿವೇಕ ವ್ಯಾಖ್ಯಾನ

ಧ್ವನ್ಯಾಲೋಕಕ್ಕೆ ಮೂರೋ ನಾಲ್ಕೋ ವ್ಯಾಖ್ಯಾನಗಳನ್ನು ಪ್ರಾಚೀನರು ರಚಿಸಿದ್ದರು. ಕಾವ್ಯಪ್ರಕಾಶಕ್ಕೆ ನೂರಾರು ಸಂಸ್ಕೃತವ್ಯಾಖ್ಯಾನಗಳಿವೆ (ಕಾವ್ಯಪ್ರಕಾಶಸ್ಯ ಕೃತಾ ಗೃಹೇಗೃಹೇ ವ್ಯಾಖ್ಯಾ ತಥಾಪ್ಯೇಷ ತಥೈವ ದುರ್ಗಮಃ). ಆದರೆ ವ್ಯಕ್ತಿವಿವೇಕಕ್ಕೆ ಅಂಥ ವೈಭವವೂ ಸೌಭಾಗ್ಯವೂ ಇಲ್ಲ. ಇರುವುದೊಂದೇ ವ್ಯಾಖ್ಯಾನ, ಅದೂ ಅಪೂರ್ಣ. ವ್ಯಾಖ್ಯಾನದಲ್ಲಿ ಅದರ ಕರ್ತೃವಿನ ನಾಮೋಲ್ಲೇಖವಿಲ್ಲ. ಬಾಹ್ಯಪ್ರಮಾಣಗಳಿಂದ ರುಯ್ಯಕನಿಂದ ಅದು ರಚಿತವಾಯಿತೆಂದು ವಿದ್ವಾಂಸರು ಹೇಳುತ್ತಾರೆ. ಈ ವ್ಯಾಖ್ಯಾನಕಾರನು **ಸಾಹಿತ್ಯಮೀಮಾಂಸಾ** ಎಂಬ ಗ್ರಂಥವನ್ನು **ಹರ್ಷಚರಿತ ವಾರ್ತಿಕ** ಎಂಬ ವ್ಯಾಖ್ಯಾನವನ್ನು ರಚಿಸಿದ್ದನೆಂದು ಅವನ ಮಾತಿನಿಂದಲೇ ತಿಳಿದುಬರುತ್ತದೆ. (ಅಸ್ಮಾಭಿಃ ಸಾಹಿತ್ಯಮೀಮಾಂಸಾಯಾಂ ಪ್ರಪಂಚಃ ಪ್ರದರ್ಶಿತಃ –ಪು ೨೮೬; ಏತಚ್ಚಾಸ್ಮಾಭಿಃ ಹರ್ಷಚರಿತವಾರ್ತ್ತಿಕೇ ನಿರ್ಣೀತಮ್–ಪು–೩೯೩. ಚೌಖಂಬಾ ಎಡಿಶನ್, ೧೯೬೪) ಇವೆಲ್ಲವೂ ಮಂಖಕನ ಕೃತಿಗಳೆಂಬುದು ಪಂ. ರೇವಾ ಪ್ರಸಾದ ದ್ವಿವೇದಿಯವರ ಅಭಿಪ್ರಾಯ.

ಏನೇ ಆದರೂ ವ್ಯಕ್ತಿವಿವೇಕಕ್ಕೆ ವ್ಯಾಖ್ಯಾನವನ್ನು ಬರೆದವನು (ರುಯ್ಯಕ, ಅಥವಾ ಅವನ ಶಿಷ್ಯ ಮಂಖಕ) ಆನಂದವರ್ಧನನ ಅಭಿಮಾನಿ ಮತ್ತು ಅನುಯಾಯಿ. ವ್ಯಾಖ್ಯಾನದಲ್ಲೇ ಅವನು ಮಹಿಮಭಟ್ಟನನ್ನು ಖಂಡಿಸುತ್ತಾನೆ. ಅವನನ್ನು ಸಾಹಿತ್ಯವಿಚಾರದುರ್ನಿರೂಪಕ ಎಂದು ಹೀಯಾಳಿಸಿದ್ದಾನೆ (ಪು–೪). ಧ್ವನಿಸಿದ್ಧಾಂತವನ್ನೇ ಅವನು ಅನುಮೋದಿಸಿದ್ದಾನೆ. ಅನುಮಾನವಾದವನ್ನು ಮನಸಾರೆ ಒಪ್ಪಿದ ವ್ಯಾಖ್ಯಾನಕಾರನು ಹುಟ್ಟದೆ ಇದ್ದುದು ಮಹಿಮಭಟ್ಟನ ದುರ್ದೈವ.

ಪ್ರಸ್ತುತ ಅನುವಾದಕನಿಗೆ ಈ ವ್ಯಾಖ್ಯಾನದಿಂದ ಆಗಿರುವ ಅನುಕೂಲತೆ ಸ್ವಲ್ಪಮಟ್ಟಿಗೆ ಅಷ್ಟೆ. ಆದರೆ, ರೇವಾಪ್ರಸಾದ ದ್ವಿವೇದಿಯವರ ಹಿಂದಿ ಅನುವಾದ ಪೂರ್ಣವಾಗಿರುವುದರಿಂದ ಮತ್ತು ಅವರು ದೀರ್ಘ ವಿಮರ್ಶೆಗಳನ್ನೂ ಕೊಟ್ಟಿರುವುದರಿಂದ ಹೆಚ್ಚು ಪ್ರಯೋಜನ ಅದರಿಂದ ಲಭಿಸಿದೆ. ಅವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ಆ ಗ್ರಂಥವನ್ನು ಒದಗಿಸಿ ಸಹಕರಿಸಿದ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಗ್ರಂಥಪಾಲಕರಿಗೂ ಮತ್ತು ಸಂಶೋಧಕರಿಗೂ ನಾನು ಋಣಿ.

ವ್ಯಕ್ತಿವಿವೇಕದಂಥ ಬೃಹದ್‌ಗ್ರಂಥವನ್ನು ಅನುವಾದಿಸಲು ಹೊರಡುವುದು ಸಾಹಸವೇ. ಇದಕ್ಕೆ ಸ್ಫೂರ್ತಿಯನ್ನೂ ಬೆಂಬಲವನ್ನೂ ಸತತವಾಗಿ ನೀಡಿದವರು ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು. ಅವರನ್ನು ತಲೆಬಾಗಿ ವಂದಿಸುತ್ತೇನೆ.

ವ್ಯಕ್ತಿವಿವೇಕದ ವಾಕ್ಯಗಳನ್ನು ನನ್ನ ವಿದ್ಯಾರ್ಥಿದೆಸೆಯಲ್ಲಿ ವಿವರಿಸಿ ತಿಳಿಸಿಕೊಟ್ಟಿದ್ದ ಗುರುವರ್ಯರಾದ ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟರು ಮತ್ತು ವಿದ್ವಾನ್ ಸೋ. ರಾಮಸ್ವಾಮಿ ಅಯ್ಯಂಗಾರ್ಯರು ಸ್ಮರಣಾರ್ಹರು. ಅವರ ಅಡಿದಾವರೆಗೆ ನಮಿಸಿ ಈ ಕಾರ್ಯಕ್ಕೆ ಕೈಹಾಕಿದ್ದೇನೆ.

ಆನಂದವರ್ಧನ, ಕುಂತಕ, ಅಭಿನವಗುಪ್ತ ಮುಂತಾದ ಮಹಾವಿದ್ವಾಂಸರನ್ನು ಎದುರಿಸಿ ಅಳುಕಿಲ್ಲದೆ ತನ್ನ ಸಿದ್ಧಾಂತವನ್ನು ಮಂಡಿಸಿದ ಧೀರ ಮಹಿಮಭಟ್ಟ. ಅವನ ಮಹಿಮೆ ಜಿಜ್ಞಾಸುಗಳಾದ ಕನ್ನಡಿಗರಿಗೆ ತಿಳಿದರೆ ನಾನು ಧನ್ಯ. ನನ್ನ ಕಾರ್ಯದಲ್ಲಿ ಉಂಟಾಗಿರಬಹುದಾದ ತಪ್ಪುಗಳನ್ನು ತಾಳ್ಮೆಯಿಂದ ತಿಳಿಸುವ ವಿದ್ವಾಂಸರ ಪಾದಧೂಳಿಯನ್ನು ಮುಡಿಯಲ್ಲಿ ಧರಿಸಿ ತಿದ್ದಿಕೊಳ್ಳುತ್ತೇನೆ.

ಇಂತು ವಿದ್ವಜ್ಜನವಿಧೇಯ

**ಎಚ್.ವಿ. ನಾಗರಾಜರಾವ್**

# ವಿಷಯಸೂಚಿ

# ಆಚಾರ್ಯಮಹಿಮಭಟ್ಟ ಪ್ರಣೀತ

# ವ್ಯಕ್ತಿವಿವೇಕ

## ಪ್ರಥಮೋ ವಿಮರ್ಶಃ

*ಅನುಮಾನೇಽನ್ತರ್ಭಾವಂ ಸರ್ವಸ್ಯೈವ ಧ್ವನೇಃ ಪ್ರಕಾಶಯಿತುಮ್।*
*ವ್ಯಕ್ತಿವಿವೇಕಂ ಕುರುತೇ ಪ್ರಣಮ್ಯ ಮಹಿಮಾ ಪರಾಂ ವಾಚಮ್॥ ॥೧॥*

**ಅನುವಾದ:**

ಅನುಮಾನದಲ್ಲಿ ಎಲ್ಲ ಧ್ವನಿಯ ಅಂತರ್ಭಾವವನ್ನು ತೋರಿಸುವುದಕ್ಕಾಗಿ ಮಹಿಮಭಟ್ಟನು ಪರಾವಾಕ್ಕಿಗೆ ನಮಸ್ಕರಿಸಿ 'ವ್ಯಕ್ತಿವಿವೇಕ' ವನ್ನು ರಚಿಸುತ್ತಿದ್ದಾನೆ.

**ವಿವರಣೆ:**

ಇದು ನಮಸ್ಕಾರಪೂರ್ವಕ ಪ್ರತಿಜ್ಞಾರೂಪವಾದ ಮಂಗಳವಾಕ್ಯ. ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂದು ವಾಕ್ ನಾಲ್ಕು ಸ್ವರೂಪಗಳನ್ನು ಹೊಂದಿದೆ. ನಾವು ಕಿವಿಯಿಂದ ಕೇಳುವ ಶಬ್ದ ವೈಖರೀ. ಈ ವೈಖರೀ ರೂಪದ ಮಾತು ವಕ್ತೃವಿನಿಂದ ಹೊಮ್ಮಬೇಕಾದರೆ ಆಧಾರವಾಗಿರುವ ಮೂಲ ರೂಪ ಪರಾ. ಇದು ಎಲ್ಲ ಮಾನವರಲ್ಲೂ ಗೂಢವಾಗಿರುವ ವಾಕ್‌ಶಕ್ತಿ. ಇದರ ಮುಂದಿನ ರೂಪಗಳು ಪಶ್ಯಂತೀ ಮತ್ತು ಮಧ್ಯಮಾ. ಮಹಿಮಭಟ್ಟನು ಕಾಶ್ಮೀರದ ವಿದ್ವಾಂಸ. ಆ ಕಾಲದಲ್ಲಿ (ಕ್ರಿ.ಶ. ಒಂಬತ್ತನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ಕೊನೆಯವರೆಗೆ) ಕಾಶ್ಮೀರ ಪ್ರತ್ಯಭಿಜ್ಞಾದರ್ಶನದ ತವರೂರು ಆಗಿತ್ತು. ಅದರ ಪ್ರಭಾವವನ್ನಿಲ್ಲಿ ಕಾಣಬಹುದು. ಶಿವನ ವಿಮರ್ಶಶಕ್ತಿ ಪರಾವಾಕ್ಕಿನ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ ಎಂದು ಕಾಶ್ಮೀರದರ್ಶನದ ತತ್ತ್ವ.

**ಯೇಯಂ ವಿಮರ್ಶರೂಪೈವ ಪರಮಾರ್ಥಚಮತ್ಕೃತಿಃ ।**
**ಸೈವ ಸಾರಂ ಪದಾರ್ಥಾನಾಂ ಪರಾ ವಾಗಭಿಧೀಯತೇ ॥**

ಎಂದು ಜಯರಥನು ಅಲಂಕಾರಸರ್ವಸ್ವದ ವ್ಯಾಖ್ಯಾನದಲ್ಲಿ ಹೇಳುತ್ತಾನೆ. ಮಹಿಮಭಟ್ಟನು ಅಧ್ಯಾಯಗಳಿಗೆ ವಿಮರ್ಶ ಎಂಬ ಹೆಸರನ್ನು ಇಟ್ಟಿರುವುದು ಗಮನಾರ್ಹ. ಇದು ಧ್ವನಿತತ್ತ್ವದ ವಿಮರ್ಶೆ. ಶಿವನ ವಿಮರ್ಶಶಕ್ತಿಯ ಒಂದು ಹೊಳಹು ಕೂಡ. ಅನಂತರ ಪಶ್ಯಂತೀ–

**ಅವಿಭಾಗಾ ತು ಪಶ್ಯಂತೀ ಸರ್ವತಃ ಸಂಹೃತಕ್ರಮಾ ।**
**ಸ್ವರೂಪಜ್ಯೋತಿರೇವಾಂತಃ ಸೂಕ್ಷ್ಮಾ ವಾಗನಪಾಯಿನೀ ॥**

ಜಗತ್ತಿನ ಸ್ವಭಾವವನ್ನೂ ವೈಚಿತ್ರ್ಯವನ್ನೂ ಗ್ರಹಿಸುವ ಸೂಕ್ಷ್ಮವಾದ ವಾಕ್ಕು ಪಶ್ಯಂತೀ. ನೋಡುತ್ತಿರುವುದರಿಂದ ಇದರ ಹೆಸರು ಅನ್ವರ್ಥ. ಅನಂತರ ಮಧ್ಯಮಾ–

**ಅಂತಃಸಂಕಲ್ಪರೂಪಾ ಯಾ ಕ್ರಮರೂಪಾನುಪಾತಿನೀ ।**
**ಪ್ರಾಣವೃತ್ತಿಮತಿಕ್ರಮ್ಯ ಮಧ್ಯಮಾ ವಾಕ್ ಪ್ರವರ್ತತೇ ॥**

ಇಲ್ಲಿ ವಿವಕ್ಷಿತವಾದ ಅರ್ಥವನ್ನು ಮಾತಿನಿಂದ ಅಭಿವ್ಯಕ್ತಿಗೊಳಿಸುವ ಸಂಕಲ್ಪ ಇದರ ಮುಖ್ಯ ಲಕ್ಷಣ. ಪ್ರಾಣಶಕ್ತಿ ಇದಕ್ಕೆ ಪ್ರೇರಣೆಯನ್ನೊದಗಿಸುತ್ತದೆ. ಇದರಲ್ಲಿ ಯಾವುದಾದರೂ ಒಂದು ಭಾಷೆಯ ಸ್ಪರ್ಶವಿರುತ್ತದೆ. ಇದಾದ ಮೇಲೆ ನಾವು ಬಾಯಿಂದ ಹೊರಡಿಸುವ, ಕಿವಿಯಿಂದ ಕೇಳುವ ವೈಖರೀ–

**ಸ್ಥಾನೇಷು ವಿವೃತೇ ವಾಯೌ ಕೃತವರ್ಣಪರಿಗ್ರಹಾ ।**
**ವೈಖರೀ ವಾಕ್ ಪ್ರಯೋಕ್ತೄಣಾಂ ಪ್ರಾಣವೃತ್ತಿನಿಬಂಧನಾ ॥**

ಕಂಠತಾಲ್ವಾದಿ ಸ್ಥಾನಗಳಲ್ಲಿ ವಾಯುವು ನಿರ್ದಿಷ್ಟ ರೀತಿಯಲ್ಲಿ ಆಹತಿಯನ್ನು ಮಾಡಿದಾಗ ವರ್ಣಗಳ ಉತ್ಪತ್ತಿ. ಇದು ಸ್ಥೂಲಶಬ್ದ. ಸ್ಥೂಲಶಬ್ದ ಶ್ರವಣೇಂದ್ರಿಯಗ್ರಾಹ್ಯ. ಉಳಿದ ಮೂರು ವಾಕ್‌ಸ್ವರೂಪಗಳು ಬುದ್ಧಿಗ್ರಾಹ್ಯ. ಪರಾವಾಕ್ ಮನೋವಾಚಾಮಗೋಚರ. ಆದರೂ ಅದೇ ಎಲ್ಲಕ್ಕೂ ಮೂಲ. ಅದು ಸರಸ್ವತಿಯ ಬೀಜಾಕ್ಷರರೂಪ. ಅದನ್ನು ಗ್ರಂಥಕಾರನಿಲ್ಲಿ ವಂದಿಸಿದ್ದಾನೆ. ಬೇರೆಯವರು ಸ್ಥೂಲದ ದರ್ಶನದಿಂದಲೇ ತೃಪ್ತರು. ನಾನು ಸೂಕ್ಷ್ಮಾತಿಸೂಕ್ಷ್ಮದ ನೋಟವನ್ನು ಶ್ರೋತ್ರಸ್ಯ ಶ್ರೋತ್ರಂ (ಕಿವಿಯ ಕಿವಿ) ಎಂಬ ಅಂತರಿಂದ್ರಿಯದಿಂದ ಸಾಕ್ಷಾತ್ಕರಿಸಿಕೊಳ್ಳಲು ಬಯಸುವವನೆಂದು ಗ್ರಂಥಕಾರನ ಸೂಚನೆ. ಗ್ರಂಥದ ವಿಷಯ  ಕವಿಯ ಮಾತಿನ ಮರ್ಮವೇ ಆದುದರಿಂದ ವಾಕ್ಕಿಗೆ ನಮನವನ್ನು ಸಲ್ಲಿಸಿರುವುದು ಉಚಿತವಾಗಿದೆ. 'ಮಹಿಮಾ' ಎಂಬ ಗ್ರಂಥಕಾರನ ಹೆಸರೇ ಗ್ರಂಥದ ಮಹಿಮೆಯನ್ನು ಉದ್ಘೋಷಿಸುತ್ತಿದೆ. ಗ್ರಂಥದ ಉದ್ದೇಶ ಏನು? ಒಂಬತ್ತನೆಯ ಶತಮಾನದಲ್ಲಿ ಧ್ವನ್ಯಾಲೋಕವನ್ನು ರಚಿಸಿದ ಆನಂದವರ್ಧನನು ಅಭಿಧಾ, ಲಕ್ಷಣಾ, ತಾತ್ಪರ್ಯ ಎಂಬ ಮೂರು ವೃತ್ತಿಗಳಿಗೆ ಅತಿರಿಕ್ತವಾದ ವ್ಯಂಜನಾ ಎಂಬ ವೃತ್ತಿಯನ್ನು ಅಂಗೀಕರಿಸಿ ಅದರಿಂದ ಗೋಚರವಾಗುವ ವ್ಯಂಗ್ಯಾರ್ಥವೇ ಕಾವ್ಯದಲ್ಲಿ ಪರಮಪ್ರಧಾನ, ಆ ಅರ್ಥ ಧ್ವನಿ, ಅಂಥ ಅರ್ಥವನ್ನು ಕೊಡಬಲ್ಲ ಕಾವ್ಯ ಧ್ವನಿ ಎಂದು ಸಿದ್ಧಾಂತಿಸಿದನು. ಅದನ್ನು ಖಂಡಿಸುವುದು, ಅನುಮಾನವೆಂಬ ಮನೋವ್ಯಾಪಾರ ಅಥವಾ ಬುದ್ಧಿಕ್ರಿಯೆಯಲ್ಲಿ ವ್ಯಂಜನಾವೃತ್ತಿಯ ಅಂತರ್ಭಾವವನ್ನು ತೋರಿಸುವುದು ಈ ಗ್ರಂಥದ ಪರಮೋದ್ದೇಶ. ವಸ್ತುಧ್ವನಿ, ಅಲಂಕಾರಧ್ವನಿ, ರಸಧ್ವನಿ ಎಂದು ಧ್ವನಿ ಮೂರು ವಿಧ. ಅದರ ಅವಾಂತರ ಭೇದಗಳು ಅನೇಕ, ಅಸಂಖ್ಯ ಎಂದು ಆನಂದವರ್ಧನನ ಅಂಬೋಣ. ಆ ಎಲ್ಲ ಧ್ವನಿಪ್ರಕಾರಗಳೂ ಅನುಮಾನದಲ್ಲಿ ಅಂತರ್ಭಾವವನ್ನು ಹೊಂದುತ್ತವೆ ಎಂದು ಮಹಿಮಭಟ್ಟನ ಪ್ರತಿಜ್ಞೆ. ಅದಕ್ಕಾಗಿಯೇ 'ಸರ್ವಸ್ಯೈವ ಧ್ವನೇ:' ಎಂದು ಇಲ್ಲಿ ಹೇಳಿದ್ದಾನೆ.

ಅನುಮಾನ ಎಂಬ ಶಬ್ದ ಕನ್ನಡದಲ್ಲಿ ಅರ್ಥಾಂತರಗೊಂಡು 'ಸಂಶಯ' ಎಂಬ ಅರ್ಥದಲ್ಲಿ ಪ್ರಯುಕ್ತವಾಗುತ್ತಿದೆ. ಆದರೆ ಅನುಮಾನಶಬ್ದದ ಮೂಲಾರ್ಥ ಲಿಂಗದಿಂದ ಲಿಂಗಿಯ ಜ್ಞಾನವನ್ನು ಪಡೆದುಕೊಳ್ಳಲು ಸಹಕರಿಸುವ ಒಂದು ಪ್ರಮಾಣ. ಇದನ್ನು ಇಂಗ್ಲಿಷಿನಲ್ಲಿ Inference ಎಂದು ಕರೆಯುತ್ತಾರೆ. ನ್ಯಾಯಶಾಸ್ತ್ರದ ಬಹುಭಾಗ ಅನುಮಾನಪ್ರಮಾಣದ ಅಸ್ತಿತ್ವವನ್ನು ಸಾಧಿಸಲು, ಅದರ ವೈವಿಧ್ಯವನ್ನು ವಿವರಿಸಲು ಮತ್ತು ಅದರ ಲಕ್ಷಣವನ್ನು ನಿರ್ದೋಷವಾಗಿ ಪ್ರತಿಪಾದಿಸಲು ಮೀಸಲಾಗಿದೆ. ಮಹಿಮಭಟ್ಟನು ನೈಯಾಯಿಕ. ಆದರೂ ಕಾವ್ಯರಸಿಕ. ಶುಷ್ಕತರ್ಕಕ್ಕಾಗಿ ಜೀವನವನ್ನು ಸವೆಸಲು ಅವನು ಸಿದ್ಧನಾಗಿರಲಿಲ್ಲ. ಶಬ್ದಕ್ಕಿರುವುದು ಒಂದು ಶಕ್ತಿ. ಸಾಂಕೇತಿಕವಾದ ಅರ್ಥವನ್ನು ತಿಳಿಸಿದರೆ ಅದರ ಕಾರ್ಯ ಮುಗಿಯಿತು. ಆ ಅರ್ಥವನ್ನು ಗ್ರಹಿಸಿದ ಬುದ್ಧಿ ಅದರ ಉಪಪತ್ತಿ – ಅನುಪಪತ್ತಿಗಳನ್ನು ಆಲೋಚಿಸಿ ತತ್ಸಂಬಂಧಿಯಾದ ಅನೇಕ ಅರ್ಥಗಳನ್ನು ನೆನಪಿನ ಕಣಜದಿಂದ ತೆಗೆದು, ಒಂದಕ್ಕೊಂದನ್ನು ಜೋಡಿಸಿ ನಾನಾ ವರ್ಣಮಯವಾದ ಅರ್ಥಸೌಂದರ್ಯವನ್ನು ಸಾಕ್ಷಾತ್ಕರಿಸಿಕೊಳ್ಳುತ್ತದೆ. ಆ ಅರ್ಥಗಳು ರಮಣೀಯ, ಅಲೌಕಿಕವೆಂದು ಕರಸಿಕೊಳ್ಳುವ ವಿಶಿಷ್ಟ ಸುಖವನ್ನು ಅನುಭವಗೋಚರವಾಗಿ ಮಾಡುತ್ತವೆ ಎಂಬುದರಲ್ಲಿ ಮಹಿಮಭಟ್ಟನ ತಕರಾರು ಇಲ್ಲ. ಆದರೆ ಶಬ್ದಕ್ಕೇಕೆ ನಾನಾ ವೃತ್ತಿಗಳನ್ನು ಅನಾವಶ್ಯಕವಾಗಿ ಕಲ್ಪಿಸುತ್ತೀರಿ? ಎಂಬುದು ಅವನ ಪ್ರಶ್ನೆ. ಸರ್ವಸಮ್ಮತವಾದ ಅನುಮಾನ ಎಂಬ ಪ್ರಮಾಣದಿಂದ ಈ ಎಲ್ಲ ಅರ್ಥಗಳೂ ಚಮತ್ಕಾರಗಳೂ ಹೇಗೆ ಉಂಟಾಗುತ್ತವೆ ಎಂಬುದನ್ನು ವಿವರಿಸಲು ಸಾಧ್ಯವಾಗುವಾಗ ವ್ಯಂಜನಾ ಎಂಬ ವೃತ್ತಿಯ ಅಂಗೀಕಾರ ವಿದ್ವದಭಿಮತ ಆಗಲಾರದು ಎಂದು ಅವನು ವ್ಯಕ್ತಿವಿವೇಕದಲ್ಲಿ ತೋರಿಸಿಕೊಟ್ಟಿದ್ದಾನೆ.

*ಯುಕ್ತೋಽಯಮಾತ್ಮಸದೃಶಾನ್ ಪ್ರತಿ ಮೇ ಪ್ರಯತ್ನೋ*
*ನಾಸ್ತ್ಯೇವ ತಜ್ಜಗತಿ ಸರ್ವಮನೋಹರಂ ಯತ್ ।*
*ಕೇಚಿಜ್ಜ್ವಲಂತಿ ವಿಕಸಂತ್ಯಪರೇ ನಿಮೀಲಂ –*
*ತ್ಯನ್ಯೇ ಯದಭ್ಯುದಯಭಾಜಿ ಜಗತ್ಪ್ರದೀಪೇ ॥೨॥*

**ಅನುವಾದ:**

ನನ್ನಂಥವರಿಗಾಗಿ ನನ್ನ ಈ ಪ್ರಯತ್ನ ಉಚಿತವಾಗಿದೆ. ಜಗತ್ತಿನಲ್ಲಿ ಎಲ್ಲರಿಗೂ ಇಷ್ಟವಾಗುವಂಥ ವಸ್ತು ಇಲ್ಲವೇ ಇಲ್ಲ. ಏಕೆಂದರೆ ಲೋಕದ ದೀಪ (ಸೂರ್ಯ)ನು ಹುಟ್ಟಿ ಮೇಲೇರಿದಾಗ ಕೆಲವು ಉರಿಯುತ್ತವೆ, ಮತ್ತೆ ಕೆಲವು ಅರಳುತ್ತವೆ, ಇನ್ನೂ ಕೆಲವು ಮುಚ್ಚಿಕೊಳ್ಳುತ್ತವೆ.

**ವಿವರಣೆ:**

ಹನ್ನೊಂದನೆಯ ಶತಮಾನದಲ್ಲಿ ಕಾಶ್ಮೀರದ ಸಾಹಿತ್ಯಪ್ರಪಂಚ ಉಚ್ಛ್ರಾಯಸ್ಥಿತಿಯಲ್ಲಿತ್ತು. ಉದ್ಭಟ, ರುದ್ರಟ, ವಾಮನ, ಆನಂದವರ್ಧನರ ಪರಂಪರೆಯಲ್ಲಿ ಅಭಿನವಗುಪ್ತಾಚಾರ್ಯ ಎಂಬ ಅಭೂತಪೂರ್ವ ಮನೀಷಿ ಉದ್ಭವಿಸಿದ್ದರು. ಅವರು ನಾಟ್ಯಶಾಸ್ತ್ರಕ್ಕೆ ರಚಿಸಿದ ಅಭಿನವಭಾರತೀ ಎಂಬ ಮತ್ತು ಧ್ವನ್ಯಾಲೋಕಕ್ಕೆ ಬರೆದ ಲೋಚನ ಎಂಬ ವ್ಯಾಖ್ಯಾನಗಳು ಮೂಲಗ್ರಂಥಗಳ ಹಿರಿಮೆಯನ್ನು ದ್ವಿಗುಣಗೊಳಿಸಿದ್ದುವು. ಧ್ವನಿ ಎಂಬ ಹೊಸ ತತ್ತ್ವ ಬಹುಜನರಿಗೆ ಅಚ್ಚುಮೆಚ್ಚಾಗಿತ್ತು. ಕವಿಗಳಿಗೆ ಅದು ಹೊಸ ಪ್ರಕಾರದ ಪ್ರಾಕಾರವನ್ನು ರಚಿಸಿಕೊಟ್ಟಿತು. ಅಭಿನವಗುಪ್ತರ ಸಾಗರಗಂಭೀರ ಪಾಂಡಿತ್ಯ, ಅದ್ಭುತ ಆಧ್ಯಾತ್ಮಿಕ ಔನ್ನತ್ಯಗಳು ಕಾವ್ಯಮೀಮಾಂಸೆಗೆ ಶಾಸ್ತ್ರ ಎಂಬ ಅಭಿಧಾನಾರ್ಹತೆಯನ್ನು ದೊರಕಿಸಿಕೊಟ್ಟಿದ್ದುವು. ಧ್ವನಿತತ್ತ್ವವನ್ನು ತಿಳಿಯದವನು ಕಾವ್ಯವನ್ನೇನು ಓದುತ್ತಾನೆ, ಅದನ್ನು ಒಪ್ಪದವನು ಶಾಸ್ತ್ರಾನಭಿಜ್ಞ ಎಂದು ಜನರು ಭಾವಿಸುತ್ತಿದ್ದ ಕಾಲ ಅದು.

ಆದರೂ ಕೆಲವರು 'ನಮ್ಮ ಮನಸ್ಸಿಗೆ ಒಪ್ಪದ ಸಿದ್ಧಾಂತವನ್ನು ದೊಡ್ಡವರು ಹೇಳಿದರೆಂಬ ಒಂದೇ ಕಾರಣದಿಂದ ಏಕೆ ಅಂಗೀಕರಿಸಬೇಕು? ನಮಗೆ ಸರಿಯೆಂದು ತೋಚಿದ ವಿಚಾರವನ್ನು ಹೇಳುವ ಸ್ವಾತಂತ್ರ್ಯ ನಮಗಿದೆಯಲ್ಲವೆ?' ಎಂದು ಕೇಳುತ್ತಿದ್ದರು. ಅಂಥವರ ಪ್ರತಿನಿಧಿಯಾಗಿ ಈ ಗ್ರಂಥವನ್ನು ರಚಿಸುತ್ತಿದ್ದೇನೆ ಎಂಬುದು ಮಹಿಮಭಟ್ಟನ ಈ ಪದ್ಯದ ತಾತ್ಪರ್ಯ. ಒಂದು ವಸ್ತು ಅಥವಾ ತತ್ತ್ವ ಎಲ್ಲರ ಮನಸ್ಸಿಗೂ ಹಿಡಿಸಬೇಕೆಂಬ ನಿಯಮವಿಲ್ಲ.

ನೇಸರು ಬಾನಿನಲ್ಲಿ ಹೊಳೆಯುವಾಗ ಸೂರ್ಯಕಾಂತ ಶಿಲೆಗಳು ಹೊತ್ತಿಕೊಂಡು ಉರಿಯುತ್ತವಂತೆ (ಇದೊಂದು ಕವಿಸಮಯ), ತಾವರೆ ಹೂವುಗಳು ಅರಳುತ್ತವೆ, ನೈದಿಲೆಗಳು ಮುಚ್ಚಿಕೊಳ್ಳುತ್ತವೆ. ಹೀಗೆ ಪ್ರತಿಕ್ರಿಯೆ ಭಿನ್ನವಾಗಿರುವುದು ನೈಸರ್ಗಿಕ. ಹಾಗೆಯೇ ಹೊಸ ಸಿದ್ಧಾಂತ ಬಂದಾಗ ಎಲ್ಲರೂ 'ಜಯ ಜಯ' ಎಂದು ಕೂಗಿ ಒಪ್ಪಿಕೊಳ್ಳಬೇಕಾಗಿಲ್ಲ. ಕೆಲವರಿಗೆ ಅದು ಹಿಡಿಸಬಹುದು. ಅವರು ಹೊಗಳಲಿ. ಮತ್ತೆ ಕೆಲವರಿಗೆ ಅದು ಸಾಮಾನ್ಯ, ಸಾಧಾರಣ ಎನಿಸಬಹುದು. ಅವರು ಉದಾಸೀನರಾಗಿ ಇರಬಹುದು. ಮತ್ತೆ ಕೆಲವರಿಗೆ ಆ ಸಿದ್ಧಾಂತದಲ್ಲಿ ದೋಷಗಳು, ದೌರ್ಬಲ್ಯಗಳು, ಅತಾರ್ಕಿಕ ವಿಚಾರಗಳು ಗೋಚರಿಸಬಹುದು. ಅವರು ಆ ಸಿದ್ಧಾಂತವನ್ನು ತೆಗಳಬಹುದು. ಧ್ವನಿಸಿದ್ಧಾಂತ ತರ್ಕಾನುಗುಣವಾಗಿಲ್ಲ, ಅದರಲ್ಲಿ ಹಲವು ದೋಷಗಳಿವೆ ಎಂದು ಭಾವಿಸುವ ವಿದ್ವಾಂಸರ ಪರವಾಗಿ ಜಿಜ್ಞಾಸುಗಳ ಪ್ರಯೋಜನಕ್ಕಾಗಿ ಈ ಗ್ರಂಥವನ್ನು ರಚಿಸುತ್ತಿದ್ದೇನೆ.

ವಿಚಾರಮಂಥನದಿಂದ ಮಾತ್ರ ಸತ್ಯ ಹೊರಗೆ ಬರುತ್ತದೆ, ನನ್ನ ಪ್ರಯತ್ನ ಉಚಿತವೇ ಆಗಿದೆ ಎಂದು ಮಹಿಮಭಟ್ಟ ಇಲ್ಲಿ ಹೇಳಿದ್ದಾನೆ.

***ಇಹ ಸಂಪ್ರತಿಪತ್ತಿತೋಽನ್ಯಥಾ ವಾ ಧ್ವನಿಕಾರಸ್ಯ ವಚೋವಿವೇಚನಂ ನಃ ।***
***ನಿಯತಂ ಯಶಸೇ ಪ್ರಪತ್ಸ್ಯತೇ ಯನ್ಮಹತಾಂ ಸಂಸ್ತವ ಏವ ಗೌರವಾಯ ॥೩॥***

**ಅನುವಾದ:**

ಧ್ವನಿಕಾರನ ನುಡಿಗಳನ್ನು ನಾವು ಒಪ್ಪಿಕೊಂಡು ವಿಶ್ಲೇಷಣೆ ಮಾಡಿದರೂ, ಒಪ್ಪಿಕೊಳ್ಳದೆ ಟೀಕಿಸಿದರೂ ಅದು ನಿಶ್ಚಿತವಾಗಿ ನಮ್ಮ ಯಶಸ್ಸಿಗೇ ಕಾರಣವಾಗುತ್ತದೆ. ಏಕೆಂದರೆ ಮಹತ್ತ್ವವುಳ್ಳವರ ಪರಿಚಯವೇ ಗೌರವಕ್ಕೆ ಕಾರಣವಾಗುವುದಲ್ಲವೆ?

**ವಿವರಣೆ:**

ಅನೇಕರು ಧ್ವನಿಕಾರನ, ಎಂದರೆ ಆನಂದವರ್ಧನನ ಮಾತುಗಳನ್ನು ಒಪ್ಪಿ ವ್ಯಾಖ್ಯಾನಗಳನ್ನು ಬರೆದು ಪ್ರಸಿದ್ಧರಾದರು. ನಾವು (ಎಂದರೆ ಮಹಿಮಭಟ್ಟಾದಿಗಳು) ಹಾಗೆ ಅಂಗೀಕಾರವನ್ನು ಮಾಡದೆ ಖಂಡನಾತ್ಮಕವಾದ ವಾದಗಳನ್ನು ಮಾಡುತ್ತಿದ್ದೇವೆ. ಅದೂ ಕೀರ್ತಿಗೆ ಕಾರಣ. ಆನಂದವರ್ಧನನಂಥ ಮಹಾಮೇಧಾವಿಯ ಗ್ರಂಥವನ್ನು ಖಂಡಿಸಿದವನು ಎಂದು ಜನರು ನನ್ನನ್ನೂ ಮೆಚ್ಚಿಕೊಳ್ಳುತ್ತಾರೆ. ದೊಡ್ಡವರ ಪರಿಚಯ ಯಾವ ರೂಪದಲ್ಲಿದ್ದರೂ ಯಶಸ್ಸಿಗೆ ಕಾರಣವಾಗುತ್ತದೆ ಎನ್ನುತ್ತಾನೆ ಮಹಿಮಭಟ್ಟ.

ಆನಂದವರ್ಧನನ ಮಹತ್ತ್ವವನ್ನು ಮಹಿಮಭಟ್ಟ ಒಪ್ಪಿಕೊಂಡಿದ್ದಾನೆ. ಧ್ವನ್ಯಾಲೋಕದ ಖಂಡನಕಾರ ಎಂಬ ಯಶಸ್ಸು ಅವನ ಪಾಲಿಗೆ ಇದ್ದೇ ಇದೆ.

***ಸಹಸಾ ಯಶೋಽಭಿಸರ್ತುಂ ಸಮುದ್ಯತಾದೃಷ್ಟದರ್ಪಣಾ ಮಮ ಧೀಃ ।***
***ಸ್ವಾಲಂಕಾರವಿಕಲ್ಪ ಪ್ರಕಲ್ಪನೇವೇತ್ತಿ ಕಥಮಿವಾವದ್ಯಮ್ ॥೪॥***

**ಅನುವಾದ:**

ಇದ್ದಕ್ಕಿದ್ದಂತೆ ಯಶಸ್ಸನ್ನು ಪಡೆದುಕೊಳ್ಳಲು ಹೊರಟಿದೆ ನನ್ನ ಬುದ್ಧಿ. ಕನ್ನಡಿಯನ್ನೂ ನೋಡದೆ ಹೊರಟಿರುವ ಅದು ತನ್ನ ಅಲಂಕಾರಗಳನ್ನು ತಿದ್ದಿಕೊಳ್ಳಲು ಅವುಗಳಲ್ಲಿರಬಹುದಾದ ದೋಷಗಳನ್ನು ಹೇಗೆ ತಾನೆ ತಿಳಿದುಕೊಳ್ಳುತ್ತದೆ?

**ವಿವರಣೆ:**

ಇಲ್ಲಿ ದರ್ಪಣ ಎಂಬ ಶಬ್ದವನ್ನು ಎರಡು ಅರ್ಥಗಳಲ್ಲಿ ಮಹಿಮಭಟ್ಟ ಬಳಸಿದ್ದಾನೆ. ದರ್ಪಣ ಎಂದರೆ ಕನ್ನಡಿ. ಹೆಣ್ಣು ತನ್ನ ಅಲಂಕಾರಗಳು ಸರಿಯಾಗಿವೆಯೋ ಇಲ್ಲವೋ ಎಂದು ಖಚಿತ ಪಡಿಸಿಕೊಳ್ಳಲು ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಾಳೆ. ಇಲ್ಲಿ ಮಹಿಮಭಟ್ಟನ ಧೀ (= ಬುದ್ಧಿ, ಸ್ತ್ರೀಲಿಂಗದ ಶಬ್ದ) ದರ್ಪಣವನ್ನು ನೋಡಿಲ್ಲ. ಇಲ್ಲಿ ದರ್ಪಣ ಎಂದರೆ ಭಟ್ಟನಾಯಕನೆಂಬ ಆಲಂಕಾರಿಕನು ರಚಿಸಿದ್ದ ಹೃದಯದರ್ಪಣ ಎಂಬ ಗ್ರಂಥ. ಈ ಗ್ರಂಥ ಅಭಿನವಗುಪ್ತಾಚಾರ್ಯರಿಗೆ ಲಭ್ಯವಾಗಿತ್ತು. ಅನೇಕ ಬಾರಿ ಅವರು ಅದನ್ನು ಅನುವಾದಿಸಿ ಖಂಡಿಸಿದ್ದಾರೆ. ಆದರೆ ಅದು ಮಹಿಮಭಟ್ಟನಿಗೆ ದೊರಕಿರಲಿಲ್ಲ. ಹೃದಯದರ್ಪಣದಲ್ಲಿ ಭಟ್ಟನಾಯಕನು ಧ್ವನ್ಯಾಲೋಕವನ್ನು ಖಂಡಿಸಿದನಂತೆ. ಅದನ್ನು ನೋಡಿದ್ದರೆ ಮಹಿಮಭಟ್ಟನು ತನ್ನ ವಾದವನ್ನು ಇನ್ನೂ

ಪರಿಷ್ಕರಿಸಿಕೊಳ್ಳಬಹುದಾಗಿತ್ತು. ಹಾಗಾಗದಿದ್ದುದಕ್ಕೆ ಮಹಿಮಭಟ್ಟನು ಇಲ್ಲಿ ವಿಷಾದವನ್ನು ವ್ಯಕ್ತಪಡಿಸಿದ್ದಾನೆ. ಅಭಿನವಗುಪ್ತರು ತಿಳಿಸಿರುವಂತೆ ಭಟ್ಟನಾಯಕನು ವ್ಯಂಜನಾವ್ಯಾಪಾರವನ್ನು ಖಂಡಿಸಿದ್ದನು.

ಅಭಿಧಾ ಭಾವನಾ ಚೈವ ತದ್‌ಭೋಗೀಕೃತಿರೇವ ಚ। ಎಂದು ಅವನು ಕಾವ್ಯದಲ್ಲಿ ಒಪ್ಪಿಕೊಂಡಿದ್ದ ಮೂರು ವ್ಯಾಪಾರಗಳು ಅಭಿಧಾ, ಭಾವನಾ ಮತ್ತು ಭೋಗೀಕೃತಿ (ಅಥವಾ ಭೋಗ). ವ್ಯಂಜನೆಯ ಖಂಡನೆಗೆ ಭಟ್ಟನಾಯಕನು ಯಾವ ಯುಕ್ತಿಗಳನ್ನು ಬಳಸಿದ್ದನೆಂದು ನಮಗೆ ತಿಳಿಯದು. ಮಹಿಮಭಟ್ಟನ ಕಾಲಕ್ಕೆ (ಹನ್ನೊಂದನೆಯ ಶತಮಾನದ ಉತ್ತರಾರ್ಧಕ್ಕೆ) ಅದು ದುರ್ಲಭವಾಗಿತ್ತು. ಅನಂತರ ಕಣ್ಮರೆಯಾಯಿತು ಎಂಬುದು ವಿಷಾದದ ಸಂಗತಿ.

ಮಹಿಮಭಟ್ಟನ ಈ ಪದ್ಯದಲ್ಲಿ **ಅಭಿಸರ್ತುಮ್** ಎಂಬ ಪದ ಅರ್ಥವತ್ತಾಗಿದೆ. ಧೀ ಎಂಬ ಸ್ತ್ರೀ ಇಲ್ಲಿ ಅಭಿಸರಣ ಮಾಡುತ್ತಿದ್ದಾಳೆ. ಅಂದರೆ ಅವಳು ಅಭಿಸಾರಿಕೆ. ಕಾಂತಾರ್ಥಿನೀ ತು ಯಾ ಯಾತಿ ಸಂಕೇತಂ ಸಾಭಿಸಾರಿಕಾ। ಕಾಂತನನ್ನು ನೋಡಬೇಕೆಂಬ ತ್ವರೆಯಲ್ಲಿ ಅವಳು ಕನ್ನಡಿಯನ್ನೂ ನೋಡಿಕೊಳ್ಳದೆ ಹೊರಟುಬಿಟ್ಟಿದ್ದಾಳೆ! ಆದ್ದರಿಂದ ಅಲಂಕಾರವಿಕಲ್ಪಗಳ ಪ್ರಕಲ್ಪನೆಯಲ್ಲಿ ದೋಷಗಳು ಅವಳಿಗೆ ತಿಳಿಯಲೇ ಇಲ್ಲ. ಇದರಿಂದ ಮಹಿಮಭಟ್ಟನಿಗೆ ತನ್ನ ಮಿತಿಯ ಅರಿವು ಇತ್ತೆಂಬುದು ಸ್ಪಷ್ಟ.

*ಧ್ವನಿವರ್ತ್ಮನ್ಯತಿಗಹನೇ ಸ್ಖಲಿತಂ ವಾಣ್ಯಾಃ ಪದೇಪದೇ ಸುಲಭಮ್ ।*
*ರಭಸೇನ ಯತ್ ಪ್ರವೃತ್ತಾ ಪ್ರಕಾಶಕಂ ಚಂದ್ರಿಕಾದ್ಯದೃಷ್ಟ್ವೈವ ॥೫॥*

**ಅನುವಾದ:**

ಅತಿಗಹನವಾದ ಧ್ವನಿಮಾರ್ಗದಲ್ಲಿ (ನನ್ನ) ವಾಣಿ ಹೆಜ್ಜೆಹೆಜ್ಜೆಗೂ ಎಡವುವುದು ಸುಲಭವೇ. ಏಕೆಂದರೆ ಅವಳು ಬೆಳಕನ್ನು ಬೀರುವ ಚಂದ್ರಿಕೆ ಮುಂತಾದುವನ್ನು ನೋಡದೆ ರಭಸದಿಂದ ಹೊರಟುಬಿಟ್ಟಿದ್ದಾಳೆ.

**ವಿವರಣೆ:**

ಧ್ವನಿಸಿದ್ಧಾಂತ ಗಹನವಾದುದು. ಅದರಲ್ಲಿ ವಿಚಾರ ಮಾಡುವಾಗ ಒಂದೊಂದು ಪದದಲ್ಲೂ ಮಾತು ತೊಡರುತ್ತದೆ, ಎಡವಿ ಬೀಳುತ್ತದೆ. ವಾಣಿ ಏಕೆ ಎಡವುತ್ತದೆ (ಅಥವಾ ಎಡವುತ್ತಾಳೆ) ಎಂದರೆ ರಭಸದಿಂದ ಚಂದ್ರಿಕಾ (ಬೆಳದಿಂಗಳು) ಮುಂತಾದ ಪ್ರಕಾಶಕಗಳನ್ನು ನೋಡದೆ ಹೊರಟಿದ್ದಾಳೆ.

'ಚಂದ್ರಿಕಾ' ಎಂದರೆ ಆ ಹೆಸರಿನ ಧ್ವನ್ಯಾಲೋಕವ್ಯಾಖ್ಯಾನ. ಅದನ್ನು ಅಭಿನವಗುಪ್ತರು ಲೋಚನದಲ್ಲಿ ಉದಾಹರಿಸುತ್ತಾರೆ. ಆದರೆ ಮಹಿಮಭಟ್ಟನು ಚಂದ್ರಿಕಾ ಎಂಬ ವ್ಯಾಖ್ಯಾನವನ್ನೂ ನೋಡಿರಲಿಲ್ಲ. ಅದರ ಹೆಸರನ್ನು ಮಾತ್ರ ಅವನು ಕೇಳಿದ್ದನೆಂದು ತೋರುತ್ತದೆ. ಈ ಕೊರತೆಯ ಅರಿವು ಅವನಿಗಿದ್ದುದು ಈ ಪದ್ಯದಿಂದ ಸ್ಪಷ್ಟವಾಗುತ್ತದೆ. ತನ್ನ ಮಾತು ಮತ್ತೆಮತ್ತೆ ತಪ್ಪಿ ಜಾರಬಹುದು ಎಂದೂ ಅವನು ಹೇಳಿದ್ದಾನೆ.

**ಕಿಂತು ತದವಧೀರ್ಯಾರ್ಯೈಃ ಗುಣಲೇಶೇ ಸತತಮವಹಿತೈರ್ಭಾವ್ಯಮ್ ।**
**ಪರಿಪವನವದಥವಾ ತೇ ಜಾತ್ಯೈವ ನ ಶಿಕ್ಷಿತಾಸ್ತುಷಗ್ರಹಣಮ್ ॥೬॥**

**ಅನುವಾದ:**

ಆದರೂ ಆರ್ಯರು ಆ ಸ್ಖಲಿತವನ್ನು (ತಪ್ಪನ್ನು, ಎಡವುವದನ್ನು) ಪರಿಗಣಿಸದೆ (ನನ್ನ ಮಾತಿನಲ್ಲಿರಬಹುದಾದ) ಸ್ವಲ್ಪ ಗುಣದಲ್ಲೇ ಗಮನವನ್ನು

ಹರಿಸುವವರಾಗಬೇಕು. ಅಥವಾ ಅವರು ಹುಟ್ಟಿನಿಂದಲೇ ಜರಡಿಯಂತೆ ಹೊಟ್ಟು ಸಿಪ್ಪೆಗಳನ್ನು ಹಿಡಿದುಕೊಳ್ಳುವುದನ್ನು ಕಲಿತಿಲ್ಲವಷ್ಟೆ!

**ವಿವರಣೆ:**

ಜರಡಿಯಲ್ಲಿ ಕಾಳನ್ನು ಕೇರಿದಾಗ ಹೊಟ್ಟು, ಸಿಪ್ಪೆ, ತವಡು ಇತ್ಯಾದಿಗಳನ್ನು ಹೊರಗೆ ಹಾಕಿ ಕಾಳನ್ನು ಮಾತ್ರ ಉಳಿಸಿಕೊಳ್ಳುತ್ತದೆ. ಹಾಗೆ ಸಜ್ಜನರೂ ಸಿಪ್ಪೆಯನ್ನು ಎಂದರೆ ದೋಷವನ್ನು ತ್ಯಜಿಸಿ ಗುಣವನ್ನು ಉಳಿಸಿಕೊಳ್ಳುತ್ತಾರೆ. ಇದು ಅವರಿಗೆ ಹುಟ್ಟಿನಿಂದಲೇ ಬಂದ ಗುಣ. ಹೀಗೆ ಅರ್ಥಮಾಡಿಕೊಂಡರೆ ಇದು ಸಾಧರ್ಮ್ಯದೃಷ್ಟಾಂತ ಆಗುತ್ತದೆ. ಜರಡಿಯಲ್ಲಿ ಹಾಕಿದಾಗ ಅಪೇಕ್ಷಿತವಾದ ಕಾಳುಗಳು ಕೆಳಗೆ ಬಿದ್ದು ಹೊಟ್ಟು ಸಿಪ್ಪೆಗಳು ಮೇಲೆ ಉಳಿದುಕೊಳ್ಳುತ್ತವೆ ಎಂದಾದರೆ ಇದು ವೈಧರ್ಮ್ಯ ದೃಷ್ಟಾಂತ. ನನ್ನ ಗ್ರಂಥದಲ್ಲಿರಬಹುದಾದ ದೋಷಗಳನ್ನು ತ್ಯಜಿಸಿ ಗುಣಗಳನ್ನೇ ಆರ್ಯರು, ಎಂದರೆ ಪೂಜ್ಯ ಸಜ್ಜನರು ಗ್ರಹಿಸುತ್ತಾರೆ, ಇದು ಅವರ ಸ್ವಭಾವ. ಅದಕ್ಕಾಗಿ ಅವರನ್ನು ವಿಶೇಷವಾಗಿ ಕೇಳಿಕೊಳ್ಳಬೇಕಾಗಿಲ್ಲ ಎಂಬುದು ಗ್ರಂಥಕಾರನ ಆಶಯ.

**ತತ್ರ ಧ್ವನೇರೇವ ತಾವಲ್ಲಕ್ಷಣಂ ವಕ್ತವ್ಯಮ್ ।**
**ಕೋಽಯಂ ಧ್ವನಿರ್ನಾಮೇತಿ । ತಚ್ಚ ಧ್ವನಿಕಾರೇಣೈವೋಕ್ತಮ್ ।**
**ತದ್ಯಥಾ –**

**ಅನುವಾದ:**

ಅದರಲ್ಲಿ ಮೊದಲು ಧ್ವನಿಯ ಲಕ್ಷಣವನ್ನೇ ಹೇಳಬೇಕು. ಈ ಧ್ವನಿ ಎಂಬುದು ಯಾವುದು? ಅದನ್ನು ಧ್ವನಿಕಾರನೇ ಹೇಳಿದ್ದಾನೆ. ಅದೇನೆಂದರೆ –

**ವಿವರಣೆ:**

ಯಾವುದನ್ನು ಖಂಡಿಸಬೇಕೋ ಅದರ ಲಕ್ಷಣವನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳಬೇಕು. ರೋಗವನ್ನು ನಿವಾರಿಸಬೇಕಾದರೆ ಅದರ ಲಕ್ಷಣಗಳನ್ನೂ ಸ್ವರೂಪವನ್ನೂ ಮೊದಲು ತಿಳಿದುಕೊಳ್ಳಬೇಕು. ಇಲ್ಲಿ ಧ್ವನಿ ಎಂಬುದನ್ನು ಖಂಡಿಸಬೇಕಾಗಿದೆ. ಖಂಡಿಸುವುದು ಎಂದರೆ – ಅದು ಅನುಮಾನದಲ್ಲೇ ಅಂತರ್ಗತವಾಗುತ್ತದೆ, ಅದಕ್ಕೆ ಬೇರೆಯಾಗಿ ಸ್ವತಂತ್ರ ಅಸ್ತಿತ್ವವಿಲ್ಲ ಎಂದು ತೋರಿಸುವುದು ಮಾತ್ರ. ಧ್ವನಿ ಎಂಬುದು ಉತ್ತಮಕಾವ್ಯಕ್ಕೆ ಆನಂದವರ್ಧನನಿತ್ತಿರುವ ಹೆಸರು. ಆ ಧ್ವನಿಯ ಲಕ್ಷಣವನ್ನು ಧ್ವನ್ಯಾಲೋಕದಲ್ಲಿ ಆನಂದವರ್ಧನನೇ ಹೇಳಿದ್ದಾನೆ. ಧ್ವನಿಕಾರ ಎಂದರೆ ಆನಂದವರ್ಧನ. ಅವನು ಹೇಳಿರುವ ಲಕ್ಷಣದಲ್ಲೇ ನಾನಾವಿಧವಾದ ದೋಷಗಳನ್ನು ತೋರಿಸಿ ಧ್ವನಿಸಿದ್ಧಾಂತವನ್ನು ಶಿಥಿಲಗೊಳಿಸುವುದು ಮಹಿಮಭಟ್ಟನ ಉದ್ದೇಶ.

(ಧ್ವನಿಕಾರನು ಹೇಳಿದ ಲಕ್ಷಣ)

***ಯತ್ರಾರ್ಥಃ ಶಬ್ದೋ ವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ ।***
***ವ್ಯಂಕ್ತಃ ಕಾವ್ಯ ವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ ॥ ಇತಿ***

**ಅನುವಾದ:**

ಎಲ್ಲಿ ಅರ್ಥವು ತನ್ನನ್ನೂ ಅಥವಾ ಶಬ್ದವು ತನ್ನ ಅರ್ಥವನ್ನೂ ಅಮುಖ್ಯವನ್ನಾಗಿ ಮಾಡಿ ಆ (ಪೂರ್ವೋಕ್ತ ಸುಂದರ) ಅರ್ಥವನ್ನು ವ್ಯಂಜಿಸುವುವೋ ಆ ಕಾವ್ಯವಿಶೇಷವನ್ನು ವಿದ್ವಾಂಸರು ಧ್ವನಿ ಎಂದು ಕರೆಯುತ್ತಾರೆ.

**ವಿವರಣೆ:**

ಉತ್ತಮ ಕಾವ್ಯದಲ್ಲಿ ವಾಚ್ಯಾರ್ಥಕ್ಕೆ ಪ್ರಾಧಾನ್ಯವಿರುವುದಿಲ್ಲ. ವಾಚ್ಯಾರ್ಥವು ತನ್ನನ್ನೇ ಉಪಸರ್ಜನ (ಅಪ್ರಧಾನ, ಅಮುಖ್ಯ)ವನ್ನಾಗಿ ಮಾಡಿಕೊಂಡು ಸುಂದರವಾದ, ಎಂದರೆ ಚಮತ್ಕಾರಜನಕವಾದ ವ್ಯಂಗ್ಯಾರ್ಥವನ್ನು ವ್ಯಂಜಿಸುತ್ತದೆ. ಶಬ್ದಗಳೂ ಅಷ್ಟೆ, ತಮ್ಮ ವಾಚ್ಯಾರ್ಥವನ್ನು ತಿಳಿಸಿ ಅದು ಮುಖ್ಯವಲ್ಲ ಎಂದು ಸೂಚಿಸಿ ಅದಕ್ಕಿಂತಲೂ ಸೊಗಸಾದ ವ್ಯಂಗ್ಯಾರ್ಥವನ್ನು ವ್ಯಂಜನಾಮರ್ಯಾದೆಯಿಂದ ತಿಳಿಸಿಕೊಡುತ್ತವೆ. ಯಾವ ಕಾವ್ಯದಲ್ಲಿ ವಾಚ್ಯಾರ್ಥದಲ್ಲೇ ವಿಶ್ರಾಂತಿಯೋ ಅದು ಅಧಮಕಾವ್ಯ. ವ್ಯಂಗ್ಯಾರ್ಥವನ್ನು ಸೂಚಿಸಿದರೂ ಆ ವ್ಯಂಗ್ಯಾರ್ಥ ವಾಚ್ಯಾರ್ಥಕ್ಕಿಂತ ಅತಿಶಯಿತವಾಗಿಲ್ಲದಿದ್ದರೆ ಅದು ಮಧ್ಯಮಕಾವ್ಯ ಎಂದು ಆನಂದವರ್ಧನಾನುಯಾಯಿಗಳ ಸಿದ್ಧಾಂತ. ಉತ್ತಮಕಾವ್ಯವನ್ನು 'ಧ್ವನಿ' ಎಂದೂ, ಮಧ್ಯಮಕಾವ್ಯವನ್ನು 'ಗುಣೀಭೂತವ್ಯಂಗ್ಯ' ಎಂದೂ ಅಧಮಕಾವ್ಯವನ್ನು 'ಚಿತ್ರ' ಎಂದೂ ಆನಂದವರ್ಧನನು ಹೆಸರಿಸಿದ್ದಾನೆ.

(ಇದು ಅನುಮಾನದ ಲಕ್ಷಣ)

**ಏತಚ್ಚ ವಿವಿಚ್ಯಮಾನಮನುಮಾನಸ್ಯೈವ ಸಂಗಚ್ಛತೇ, ನಾನ್ಯಸ್ಯ । ತಥಾಹಿ । ಅರ್ಥಸ್ಯ ತಾವದುಪಸರ್ಜನೀಕೃತಾತ್ಮತ್ವಮನುಪಾದೇಯಮೇವ ತಸ್ಯಾರ್ಥಾಂತರಪ್ರತೀತ್ಯರ್ಥಮುಪಾತ್ತಸ್ಯ ತದ್ವ್ಯಭಿಚಾರಾಭಾವಾತ್ । ನ ಹ್ಯಗ್ನ್ಯಾದಿಸಿದ್ಧೌ ಧೂಮಾದಿರುಪಾದೀಯಮಾನೋ ಗುಣತಾಮತಿವರ್ತತೇ । ತಸ್ಯ ತನ್ಮಾತ್ರಲಕ್ಷಣತ್ವಾತ್।**

**ಅನುವಾದ:**

ಈ ಲಕ್ಷಣವು ಸರಿಯಾಗಿ ವಿವೇಚಿಸಿ ನೋಡಿದಾಗ ಅನುಮಾನಕ್ಕೇ ಹೊಂದುತ್ತದೆ, ಬೇರೆ ಯಾವುದಕ್ಕೂ ಅಲ್ಲ. ಇದನ್ನು ವಿವರಿಸೋಣ. ಮೊದಲನೆಯದಾಗಿ (ಈ ಲಕ್ಷಣದಲ್ಲಿ) ಅರ್ಥವು ತನ್ನನ್ನು ಉಪಸರ್ಜನವನ್ನಾಗಿ ಮಾಡಿಕೊಂಡು ಎಂದು ಹೇಳಲೇಬಾರದು. ಇನ್ನೊಂದು ಅರ್ಥದ ಪ್ರತೀತಿಗಾಗಿ ಅದನ್ನು ಬಳಸಿರುವುದರಿಂದ ಅದು ತನ್ನನ್ನು ಉಪಸರ್ಜನ ಮಾಡಿಕೊಳ್ಳುವುದು ತಪ್ಪುವಂತೆ ಆಗುವುದು ಅಸಂಭವವೇ ಸರಿ. ಬೆಂಕಿ ಇದೆ ಇತ್ಯಾದಿ ಸಾಧಿಸಲು ಸಾಧನವಾಗಿ ಹೇಳಲ್ಪಡುವ ಧೂಮ ಮುಂತಾದುವು ಉಪಸರ್ಜನತ್ವವನ್ನು ಮೀರಲಾರವಷ್ಟೆ. (ಏಕೆಂದರೆ ಅವುಗಳನ್ನು ಹೇಳುವುದೇ ಅದಕ್ಕಾಗಿ.) ಉಪಸರ್ಜನದ ಲಕ್ಷಣವೇ ಅಷ್ಟು ಮಾತ್ರವಾಗಿದೆ.

**ವಿವರಣೆ:**

ಧ್ವನಿಯ ಲಕ್ಷಣ ಎಂದು ಆನಂದವರ್ಧನನು ಏನು ಹೇಳಿದ್ದಾನೋ ಅದು ಅನುಮಾನಕ್ಕೇ ಲಕ್ಷಣವಾಗಿ ಅನ್ವಯಿಸುತ್ತದೆ ಎಂದು ಮಹಿಮಭಟ್ಟ ಹೇಳಿದ್ದಾನೆ. ಅರಿವಿಗೆ ಬಂದ ಒಂದು ವಸ್ತು ಗಮಕವಾಗಿ ಇನ್ನೊಂದು ಗಮ್ಯವಾದರೆ ಅದು ಅನುಮಾನಪ್ರಮಾಣವೇ ಆಯಿತು. ಲಕ್ಷಣದಲ್ಲಿರುವ ದೋಷಗಳನ್ನು ಒಂದೊಂದಾಗಿ ಇಲ್ಲಿ ಗ್ರಂಥಕಾರನು ಎತ್ತಿ ತೋರಿಸಿದ್ದಾನೆ. ಅರ್ಥವು ತನ್ನನ್ನು ಉಪಸರ್ಜನವನ್ನಾಗಿ ಮಾಡಿಕೊಂಡು ಎಂದು ಹೇಳಿದ್ದು ಮೊದಲನೆಯ ತಪ್ಪು. ಇನ್ನೊಂದು ಅರ್ಥವನ್ನು ಮುಖ್ಯವಾಗಿ ಪ್ರತಿಪಾದಿಸಲು ಇದನ್ನು ಬಳಸಿದಾಗ ಇದು ಉಪಸರ್ಜನವಾಗುವುದು

ಅನಿವಾರ್ಯ. ಆದ್ದರಿಂದ ಇಲ್ಲಿ ವ್ಯಭಿಚಾರವೇ ಇಲ್ಲ. (ವ್ಯಭಿಚಾರ ಎಂದರೆ ನಿಯಮಭಂಗ. ಮರಗಳಲ್ಲೆಲ್ಲ ಹಣ್ಣು ಇರುತ್ತದೆ ಎಂದು ಯಾರಾದರೂ ಹೇಳಿದರೆ ಸಂಪಿಗೆಮರದಲ್ಲಿ ಹಣ್ಣು ಇಲ್ಲದಿರುವುದರಿಂದ ನಿಯಮ ಭಂಗವಾಯಿತು, ಎಂದರೆ ಅಲ್ಲಿ ವ್ಯಭಿಚಾರವಿದೆ). ಎಲ್ಲಿ ವ್ಯಭಿಚಾರವುಂಟೋ ಅಲ್ಲಿ ಮಾತ್ರ ಅದನ್ನು ನಿವಾರಿಸಲು ವಿಶೇಷಣವನ್ನು ಕೊಡಬೇಕು. ಹಸು ಬಿಳಿಯಾಗಿದೆ, ಆದರೆ ಹಸು ಕಪ್ಪಾಗಿರುವುದೂ ಉಂಟು. ಅಂಥ ಸಂದರ್ಭದಲ್ಲಿ "ಬಿಳಿ ಹಸುವನ್ನು ಎಳೆದುಕೊಂಡು ಬಾ" ಎಂಬ ವಾಕ್ಯದಲ್ಲಿ ಬಿಳಿ ಎಂಬ ವಿಶೇಷಣವನ್ನು ಕೊಟ್ಟದ್ದು ಸರಿ. ಆದರೆ "ಬಿಳಿ ಹಾಲನ್ನು ತೆಗೆದುಕೊಂಡು ಬಾ" ಎಂಬ ವಾಕ್ಯದಲ್ಲಿ ಬಿಳಿ ಎಂಬ ವಿಶೇಷಣ ಸರಿಯಲ್ಲ. ಏಕೆಂದರೆ ಬಿಳಿಯದಲ್ಲದ (ಬೇರೆ ಬಣ್ಣದ) ಹಾಲು ಇರುವುದೇ ಇಲ್ಲ. ಹಾಗೆ ಪ್ರಕೃತದಲ್ಲಿ ಅನ್ಯಾರ್ಥವಾಗಿ ಉಪಾತ್ತವಾದ ಅರ್ಥವು ಉಪಸರ್ಜನೀಕೃತಾತ್ಮವಾಗುವುದು ಅವ್ಯಭಿಚರಿತವಾದುದರಿಂದ ಧ್ವನಿಲಕ್ಷಣದಲ್ಲಿ ಅದನ್ನು ಹೇಳಿರುವುದು ದೋಷ ಎಂದು ಮಹಿಮಭಟ್ಟನ ವಾದ.

**ಯತ್ ಪುನರಸ್ಯ ಕ್ವಚಿತ್ ಸಮಾಸೋಕ್ತ್ಯಾದೌ ಪ್ರಾಧಾನ್ಯಮುಚ್ಯತೇ ತತ್**
**ಪ್ರಾಕರಣಿಕತ್ವಾಪೇಕ್ಷಯೈವ । ನ ಪ್ರತೀಯಮಾನಾಪೇಕ್ಷಯಾ ।**

**ಅನುವಾದ:**

ಮತ್ತೆ ಕೆಲವು ಸ್ಥಳಗಳಲ್ಲಿ, ಎಂದರೆ ಸಮಾಸೋಕ್ತಿ ಮುಂತಾದವುಗಳಲ್ಲಿ ಈ ವಾಚ್ಯಾರ್ಥಕ್ಕೆ ಪ್ರಾಧಾನ್ಯವನ್ನು ಏನು ಹೇಳುತ್ತಾರೆ, ಅದು ಪ್ರಾಕರಣಿಕತ್ವವನ್ನು ಆಶ್ರಯಿಸಿ ಹೇಳುವುದಷ್ಟೇ, ಪ್ರತೀಯಮಾನಾರ್ಥದ ದೃಷ್ಟಿಯಿಂದ ಅಲ್ಲ.

**ವಿವರಣೆ:**

ಸಮಾಸೋಕ್ತಿ ಮುಂತಾದ ಅಲಂಕಾರಗಳಲ್ಲಿ ವ್ಯಂಗ್ಯಾರ್ಥ ಇರುತ್ತದೆ. ಆದರೂ ಅವು ಧ್ವನಿಯ ಉದಾಹರಣೆ ಅಲ್ಲ. ಏಕೆಂದರೆ ಅವುಗಳಲ್ಲಿ ವಾಚ್ಯಾರ್ಥಕ್ಕೆ ಪ್ರಾಧಾನ್ಯ. ಆದ್ದರಿಂದಲೇ ಅವುಗಳನ್ನು ಅಲಂಕಾರಗಳ ಗುಂಪಿನಲ್ಲಿ ಸೇರಿಸಿರುವುದು. ಅವು ಚಮತ್ಕಾರಕ, ರಸೋತ್ತೇಜಕ ಎಂಬುದರಲ್ಲಿ ಸಂಶಯವಿಲ್ಲ. ವಾಲ್ಮೀಕಿಯಿಂದ ಆರಂಭಿಸಿ ಎಲ್ಲ ಕವಿಗಳೂ ಸಮಾಸೋಕ್ತಿ ಮುಂತಾದ ಅಲಂಕಾರಗಳನ್ನು ಯೋಗ್ಯವಾಗಿ ಬಳಸಿಕೊಂಡಿದ್ದಾರೆ. ಆದರೆ ಇಲ್ಲಿ ಎತ್ತಿರುವುದು ಪಾರಿಭಾಷಿಕ ಪ್ರಶ್ನೆಯನ್ನು. ವಾಚ್ಯಾರ್ಥವು ಉಪಸರ್ಜನವಾಗುವುದು ಎಂದರೆ ಅಪ್ರಧಾನವಾಗುವುದು ಅನಿವಾರ್ಯ ಎಂದು ಮೇಲೆ ಹೇಳಲಾಯಿತು. ಆದರೆ ಸಮಾಸೋಕ್ತಿ ಮುಂತಾದ ಅಲಂಕಾರಗಳಲ್ಲಿ ವಾಚ್ಯಾರ್ಥಕ್ಕೆ ಪ್ರಾಧಾನ್ಯ ಎಂದು ಹೇಳುತ್ತಾರೆ. ಇದು ಹೇಗೆ ಸರಿ? ಎಂಬ ಪ್ರಶ್ನೆಗೆ ಉತ್ತರ ಹೇಳುತ್ತಾನೆ. ಇಲ್ಲಿ ವ್ಯಂಗ್ಯಾರ್ಥಕ್ಕಿಂತ ಹೆಚ್ಚು ಮುಖ್ಯ ಎಂಬ ಅಭಿಪ್ರಾಯದಿಂದ ವಾಚ್ಯಾರ್ಥವನ್ನು ಪ್ರಧಾನ ಎಂದು ಹೇಳಿಲ್ಲ. ವಾಚ್ಯಾರ್ಥವು ಪ್ರಾಕರಣಿಕ ಎಂಬ ದೃಷ್ಟಿಯಿಂದ ಅದಕ್ಕೆ ಪ್ರಾಧಾನ್ಯವಿದೆಯೆಂದು ಹೇಳಿದ್ದೇವೆ ಅಷ್ಟೆ.

ಆನಂದವರ್ಧನನ ದೃಷ್ಟಿಯಲ್ಲಿ ಸಮಾಸೋಕ್ತಿ ಗುಣೀಭೂತವ್ಯಂಗ್ಯದ ಒಂದು ಪ್ರಕಾರ. ಅದರಲ್ಲಿ ವ್ಯಂಗ್ಯಾರ್ಥ ಗುಣೀಭೂತವಾಗಬೇಕು. ಅದು ಪ್ರಧಾನ ಆಗುವಂತಿಲ್ಲ. ವಾಚ್ಯಾರ್ಥವೇ ಪ್ರಧಾನವಾಗಬೇಕು. ಆದರೆ ಮಹಿಮಭಟ್ಟನು ಸಮಾಸೋಕ್ತಿಯಲ್ಲಿ ವಾಚ್ಯಕ್ಕೆ ಪ್ರಾಧಾನ್ಯವಿರುವುದು ಕೇವಲ ಪ್ರಾಕರಣಿಕತ್ವದಿಂದ ಎನ್ನುತ್ತಾನೆ. ಅಂಥ ಪ್ರಾಧಾನ್ಯ ಅಪ್ರಯೋಜಕ. ಧ್ವನಿಯ ಉದಾಹರಣೆಗಳಲ್ಲೂ ವಾಚ್ಯಾರ್ಥ ಪ್ರಾಕರಣಿಕವಾಗಿದ್ದು ಅಂಥ ಪ್ರಾಧಾನ್ಯವನ್ನು ಪಡೆದುಕೊಂಡಿರುತ್ತದೆ. ಶಬ್ದಶಕ್ತಿಮೂಲಧ್ವನಿಯಲ್ಲಿ ಅಂಥ ಉದಾಹರಣೆಗಳು ಲಭ್ಯ. ಸಮಾಸೋಕ್ತಿಯಲ್ಲಿ ಪ್ರತೀಯಮಾನಾಪೇಕ್ಷಯಾ ವಾಚ್ಯಾರ್ಥಕ್ಕೆ ಪ್ರಾಧಾನ್ಯ

ಇಲ್ಲ ಎಂಬ ಮಹಿಮಭಟ್ಟನ ಮಾತು ಅಷ್ಟು ವಿಶ್ವಾಸಾರ್ಹವಲ್ಲ ಎನಿಸುತ್ತದೆ. ಸಹೃದಯರು ಇದನ್ನು ಗಂಭೀರವಾಗಿ ಆಲೋಚಿಸಬೇಕು.

ಯಥಾ–

**ಉಪೋಢರಾಗೇಣ ವಿಲೋಲತಾರಕಂ ತಥಾ ಗೃಹೀತಂ ಶಶಿನಾ ನಿಶಾಮುಖಮ್ ।**
**ಯಥಾ ಸಮಸ್ತಂ ತಿಮಿರಾಂಶುಕಂ ತಯಾ ಪುರೋಽಪಿ ರಾಗಾದ್ ಗಲಿತಂ ನ ಲಕ್ಷಿತಮ್॥**

**ಅತ್ರ ಹಿ ಪ್ರತೀಯಮಾನೇನಾನುಗತಂ ವಾಚ್ಯಮೇವ ಪ್ರಾಧಾನ್ಯೇನ ಪ್ರತೀಯತೇ । ಸಮಾರೋಪಿತ ನಾಯಿಕಾನಾಯಕವ್ಯವಹಾರಯೋರ್ನಿಶಾಶಶಿನೋರೇವ ವಾಕ್ಯಾರ್ಥತ್ವಾದ್ ಇತಿ। ತದಪೇಕ್ಷಯಾ ಚ ತಸ್ಯ ಲಿಂಗತ್ವಾದ್ ಉಪಸರ್ಜನೀಭಾವಾವ್ಯಭಿಚಾರ ಏವ ॥**

**ಅನುವಾದ:**

ಉದಾಹರಣೆ –

"ರಾಗ ಉಕ್ಕುತ್ತಿದ್ದ ಚಂದ್ರನು ಚಂಚಲತಾರಕೆಗಳಿದ್ದ ನಿಶೆಯ ಮುಖವನ್ನು ಹೇಗೆ ಹಿಡಿದುಕೊಂಡನೆಂದರೆ ಪೂರ್ಣವಾದ ಕತ್ತಲುಡುಗೆಯು ಜಾರಿ ಬಿದ್ದುಹೋದುದು ರಾಗದ ಕಾರಣದಿಂದ ಅವಳಿಗೆ ತಿಳಿಯಲೇ ಇಲ್ಲ."

ಈ ಉದಾಹರಣೆಯಲ್ಲಿ ವ್ಯಂಗ್ಯಾರ್ಥದಿಂದ ಅನುಸರಿಸಲ್ಪಡುವ ವಾಚ್ಯವೇ ಪ್ರಧಾನವಾಗಿ ತೋರುತ್ತದೆ, ಏಕೆಂದರೆ ನಾಯಿಕೆ ಮತ್ತು ನಾಯಕರ ವ್ಯವಹಾರವನ್ನು ಆರೋಪಿಸಿಕೊಳ್ಳಲಾಗುವ ನಿಶಾ (ಇರುಳು) ಮತ್ತು ಚಂದ್ರರೇ ಇಲ್ಲಿ ವಾಕ್ಯಾರ್ಥ. ಅದರ ದೃಷ್ಟಿಯಿಂದ ವಾಚ್ಯಾರ್ಥ ಲಿಂಗವಾದುದರಿಂದ ಅದರ ಉಪಸರ್ಜನತ್ವ ಅವ್ಯಭಿಚರಿತವಾಗಿದೆ.

**ವಿವರಣೆ:**

ಉಪೋಢರಾಗೇಣ – ಇತ್ಯಾದಿ ಪದ್ಯವು ವಿಶಿಷ್ಟ ಸೊಬಗನ್ನು ಹೊಂದಿದೆ. ಇದರಲ್ಲಿ ಹಲವು ಪದಗಳಿಗೆ ಶ್ಲೇಷವಿದೆ. ರಾಗ = ಕೆಂಪು ಬಣ್ಣ ಮತ್ತು ಪ್ರೇಮ. ತಾರಕಾ = ನಕ್ಷತ್ರ ಮತ್ತು ಕಣ್ಣಿನ ಪಾಪೆ. ಮುಖ = ವದನ ಮತ್ತು ಆರಂಭ. ಇದು ಚಂದ್ರೋದಯದ ವರ್ಣನೆ. ಪೂರ್ಣಚಂದ್ರನು ಉದಯಿಸುವಾಗ ಸ್ವಲ್ಪ ಕೆಂಪುಬಣ್ಣವನ್ನು ಹೊಂದಿರುತ್ತಾನೆ. ಅವನು ನಿಶೆಯ (ಎಂದರೆ ರಾತ್ರಿಯ) ಮುಖವನ್ನು ಎಂದರೆ ಆರಂಭಕಾಲವನ್ನು ಹೇಗೆ ಗ್ರಹಿಸಿದನೆಂದರೆ, ತಟ್ಟನೆ ಕತ್ತಲೆ ಮಾಯವಾಯಿತು. ಕವಿ ಕತ್ತಲೆಯನ್ನು ನಿಶಾ ಎಂಬ ನಾಯಿಕೆ ಉಟ್ಟಿದ್ದ ಕಪ್ಪು ಬಟ್ಟೆ ಎಂದು ರೂಪಕಾಲಂಕಾರದಿಂದ ತಿಳಿಸಿ ಚಂದ್ರನೆಂಬ ನಾಯಕ ಅವಳ ಮುಖವನ್ನು ಮುಟ್ಟಿದ ಮಾತ್ರಕ್ಕೆ ಅವಳ ಸಂಭ್ರಮೋಲ್ಲಾಸದಿಂದ ಕತ್ತಲೆಯೆಂಬ ಅವಳ ಸೀರೆಯೇ ಜಾರಿಹೋಯಿತಾದರೂ ಅವಳಿಗೆ ತಿಳಿಯಲೇ ಇಲ್ಲ ಎಂಬ ರಮ್ಯ ಸನ್ನಿವೇಶವನ್ನು ಸೃಷ್ಟಿಸಿದ್ದಾನೆ. ಪ್ರಕೃತಿಯ ಸಾಧಾರಣ ಘಟನೆಯಲ್ಲಿ ಚೇತನಗಳ ವ್ಯವಹಾರದ ಸಮಾರೋಪವನ್ನು ಸಾಧಿಸಿ ರಸಾನುಭವದ ಪರಾಕಾಷ್ಠೆಯನ್ನು ರಸಿಕವಾಚಕರಿಗೆ ಒದಗಿಸಿದ್ದಾನೆ.

ಇದು ಸಮಾಸೋಕ್ತಿ ಎಂಬ ಅಲಂಕಾರದ ಶ್ರೇಷ್ಠ ಉದಾಹರಣೆ. ಆನಂದವರ್ಧನನೂ ಧ್ವನ್ಯಾಲೋಕದಲ್ಲಿ ಈ ಪದ್ಯವನ್ನು ಉದಾಹರಿಸಿದ್ದಾನೆ. ಸಮಾಸೋಕ್ತಿಯಲ್ಲಿ ವಿಶೇಷಣಗಳು

ಶ್ಲಿಷ್ಟವಾಗಿರಬಹುದು, ಆದರೆ ವಿಶೇಷ್ಯ ಶ್ಲಿಷ್ಟವಾಗಿರಕೂಡದು. ಇಲ್ಲಿ ವಿಶೇಷ್ಯಗಳಾದ ಚಂದ್ರ ಮತ್ತು ನಿಶಾ ಎಂಬ ಪದಗಳಲ್ಲಿ ಶ್ಲೇಷವಿಲ್ಲ.

ವ್ಯವಹಾರಸಮಾರೋಪ ಸಮಾಸೋಕ್ತಿಯ ಜೀವ. ಅದೇ ಅದರ ವೈಶಿಷ್ಟ್ಯ. ಪ್ರಾಕರಣಿಕವಾದ ಚಂದ್ರ ಮತ್ತು ನಿಶಾ ಎಂಬ ವಸ್ತುಗಳಲ್ಲಿ ನಾಯಿಕಾ – ನಾಯಕ ವ್ಯವಹಾರದ ಸಮಾರೋಪದಿಂದಲೇ ಇಲ್ಲಿ ಚಮತ್ಕಾರ. ವಾಚ್ಯವಾದ ಚಂದ್ರ –ನಿಶಾ ವ್ಯವಹಾರವೇ ಇಲ್ಲಿ ಪ್ರಧಾನ, ಏಕೆಂದರೆ ಕವಿಯ ಉದ್ದೇಶ ಚಂದ್ರೋದಯದ ವರ್ಣನೆ. ಈ ಅಂಶವನ್ನು ಆನಂದವರ್ಧನನು "ಇತ್ಯಾದೌ ವ್ಯಂಗ್ಯೇನಾನುಗತಂ ವಾಚ್ಯಮೇವ ಪ್ರಾಧಾನ್ಯೇನ ಪ್ರತೀಯತೇ, ಸಮಾರೋಪಿತ ನಾಯಿಕಾನಾಯಕ ವ್ಯವಹಾರಯೋರ್ನಿಶಾಶಶಿನೋರೇವ ವಾಕ್ಯಾರ್ಥತ್ವಾತ್" ಎಂದು ವಿವರಿಸಿದ್ದಾನೆ.

ಮಹಿಮಭಟ್ಟನಿಗೆ ಈ ರೀತಿಯಾಗಿ ಪ್ರಾಧಾನ್ಯವನ್ನು ಹೇಳುವುದು ಇಷ್ಟವಾಗದು. ಅವನ ದೃಷ್ಟಿಯಲ್ಲಿ ಯಾವಾಗಲೂ ಸಾಧ್ಯ ಪ್ರಧಾನ, ಸಾಧನ ಅಪ್ರಧಾನ. ಅನ್ನವನ್ನು ಬೇಯಿಸುವುದಕ್ಕಾಗಿ ಅಗ್ನಿಯನ್ನು ನಾವು ಉತ್ಪಾದಿಸುತ್ತೇವೆ. ಅನ್ನ ಸಾಧ್ಯ, ಅದೇ ನಮಗೆ ಬೇಕಾದದ್ದು. ಅದು ಪ್ರಧಾನ. ಅದನ್ನು ಮಾಡಲು ಉಪಯೋಗಿಸುವ ಅಗ್ನಿ ಸಾಧನ, ಅದು ಅಪ್ರಧಾನ. ಅದೇ ರೀತಿಯಾಗಿ ಪ್ರತೀಯಮಾನಾರ್ಥ ಸಾಧ್ಯ, ಅದು ಯಾವಾಗಲೂ ಪ್ರಧಾನ. ವಾಚ್ಯಾರ್ಥ ಸಾಧನ, ಅದು ಅಪ್ರಧಾನ. ಆದ್ದರಿಂದ "ವಾಚ್ಯಾರ್ಥವು ತನ್ನನ್ನು ಅಪ್ರಧಾನವನ್ನಾಗಿ ಮಾಡಿಕೊಂಡು" ಎಂದು ಹೇಳಬೇಕಾಗಿಲ್ಲ. ಯಾವಾಗಲೂ ಅದು ಅಪ್ರಧಾನವೇ ತಾನೆ?

ಈ ಸಂದರ್ಭದಲ್ಲಿ ವ್ಯಾಕರಣಸಂಬಂಧಿ ಪ್ರಶ್ನೆ ಒಂದಿದೆ. "ಸಮಾರೋಪಿತನಾಯಿಕಾನಾಯಕ ವ್ಯವಹಾರಯೋಃ" ಎಂದು ಆನಂದವರ್ಧನನು ಪ್ರಯೋಗಿಸಿದ್ದಾನೆ. ಅದೇ ಸಮಸ್ತಪದವನ್ನು ಮಹಿಮಭಟ್ಟನು ಅನುವಾದಿಸಿದ್ದಾನೆ. ಆದರೆ "ನಾಯಿಕಾ ಚ ನಾಯಕಶ್ಚ" ಎಂದು ದ್ವಂದ್ವಸಮಾಸವನ್ನು ಮಾಡಿದಾಗ "ಪುಮಾನ್ ಸ್ತ್ರಿಯಾ" ಎಂಬ ಪಾಣಿನಿಸೂತ್ರದಿಂದ ಏಕಶೇಷ ಬಂದು ನಾಯಕೌ ಎಂಬ ಸಮಸ್ತಪದವಾಗುತ್ತದೆ. ಸಮಾರೋಪಿತನಾಯಕವ್ಯವಹಾರಯೋಃ ಎಂಬುದು ಸಾಧುರೂಪ. ಆನಂದವರ್ಧನನ ಪ್ರಯೋಗ ತಪ್ಪಲ್ಲವೆ?

ಇದಕ್ಕೆ ಲೋಚನವ್ಯಾಖ್ಯಾನದಲ್ಲಿ ಅಭಿನವಗುಪ್ತರು ಒಂದು ಸಮಾಧಾನವನ್ನು ಸೂಚಿಸಿದ್ದಾರೆ. ಅವರು ಹೇಳುವ ಪ್ರಕಾರ ಇಲ್ಲಿ ದ್ವಂದ್ವಸಮಾಸವೇ ಇಲ್ಲ. "ನಾಯಿಕಾಯಾಃ ನಾಯಕೇ ಯೋ ವ್ಯವಹಾರಃ ಸ ನಿಶಾಯಾಂ ಸಮಾರೋಪಿತಃ ನಾಯಿಕಾಯಾಂ ನಾಯಕಸ್ಯ ಯೋ ವ್ಯವಹಾರಃ ಸ ಶಶಿನಿ ಸಮಾರೋಪಿತಃ ಇತಿ ವ್ಯಾಖ್ಯಾನೇ ನೈಕಶೇಷಪ್ರಸಂಗಃ" ಎಂದು ಅವರು ವಿವರಿಸಿದ್ದಾರೆ.

ರುಯ್ಯಕನು ರಚಿಸಿರುವ ವ್ಯಕ್ತಿವಿವೇಕವ್ಯಾಖ್ಯಾನದಲ್ಲಿ ಧ್ವನಿಕಾರನನ್ನು ಹಾಸ್ಯಕ್ಕೆ ಈಡುಮಾಡಲು ಮಹಿಮಭಟ್ಟನು ಅವನ ವಾಕ್ಯವನ್ನು ಯಥಾವತ್ ಅನುವಾದಿಸಿದ್ದಾನೆ (ಸಮಾರೋಪಿತನಾಯಿಕಾನಾಯಕ ವ್ಯವಹಾರಯೋರಿತಿ ಧ್ವನಿಕಾರಂ ಪ್ರತಿ ಸೋತ್ಪ್ರಾಸಂ ಕಥಿತಮ್) ಎನ್ನಲಾಗಿದೆ.

**ವ್ಯಭಿಚಾರೇಽಪಿ ವೈಫಲ್ಯಾದನುಪಾದೇಯಮೇವ ಏತದ್,**
**ಗುಣೀಭೂತವ್ಯಂಗ್ಯೇಽಪಿ ಕಾವ್ಯೇ ಚಾರುತ್ವಪ್ರಕರ್ಷದರ್ಶನಾದಿತಿ ವಕ್ಷ್ಯತೇ ।**
**ಉಕ್ತಂ ಗುಣೀಕೃತಾತ್ಮತ್ವಂ ಯದರ್ಥಸ್ಯ ವಿಶೇಷಣಮ್।**
**ಗಮಕತ್ವಾನ್ನ ತತ್ ತಸ್ಯ ಯುಕ್ತಮವ್ಯಭಿಚಾರತಃ ॥ ಇತಿ ಸಂಗ್ರಹಶ್ಲೋಕಃ**

**ಅನುವಾದ:**

ಒಂದು ವೇಳೆ ವ್ಯಭಿಚಾರವಿದ್ದರೂ ನಿಷ್ಫಲವೆಂಬ ಕಾರಣದಿಂದ ಈ (ಉಪಸರ್ಜನತ್ವವು) ಶಬ್ದತಃ ಹೇಳಲ್ಪಡಲು ಅರ್ಹವಲ್ಲ. ಏಕೆಂದರೆ ಗುಣೀಭೂತವ್ಯಂಗ್ಯ

ಎಂಬ (ವರ್ಗಕ್ಕೆ ಸೇರುವ) ಕಾವ್ಯದಲ್ಲೂ ಸೌಂದರ್ಯಾತಿಶಯವು ಕಾಣಿಸುತ್ತದೆ– ಎಂದು ಮುಂದೆ ಹೇಳಲಾಗುವುದು.

"ಅರ್ಥಕ್ಕೆ ವಿಶೇಷಣವಾಗಿ (ಧ್ವನಿಲಕ್ಷಣದಲ್ಲಿ) 'ಉಪಸರ್ಜನೀಕೃತಾತ್ಮಾ' ಎಂದು ಏನು ಹೇಳಿರುವಿರಿ, ಅದು ಗಮಕತ್ವದ ಕಾರಣದಿಂದ ಹೇಳುವುದಕ್ಕೆ ಅರ್ಹವಲ್ಲ, ಏಕೆಂದರೆ ಅದು ಅವ್ಯಭಿಚರಿತವಾಗಿದೆ" ಎಂದು ಸಂಗ್ರಹಶ್ಲೋಕ.

**ವಿವರಣೆ:**

"ಸಂಭವವ್ಯಭಿಚಾರಾಭ್ಯಾಂ ಸ್ಯಾದ್ ವಿಶೇಷಣಮರ್ಥವತ್" ಎಂಬ ನಿಯಮಕ್ಕೆ ಅನುಸಾರವಾಗಿ ಸಂಭವ ಮತ್ತು ವ್ಯಭಿಚಾರಗಳಿದ್ದಾಗ ಮಾತ್ರ ವಿಶೇಷಣಕ್ಕೆ ಪ್ರಯೋಜನ. "ಹಸಿರು ಆನೆ ಓಡುತ್ತಿದೆ" ಎಂಬ ವಾಕ್ಯದಲ್ಲಿ ಹಸಿರು ಎಂಬ ವಿಶೇಷಣ ತಪ್ಪು, ಏಕೆಂದರೆ ಆನೆ ಹಸಿರಾಗಿರುವುದು ಅಸಂಭವ. ತಣ್ಣಗಿದ್ದ ಮಂಜನ್ನು ಮುಟ್ಟಿದೆ ಎಂಬಲ್ಲಿ ತಣ್ಣಗೆ ಎಂಬ ವಿಶೇಷಣ ತಪ್ಪು, ಏಕೆಂದರೆ ಮಂಜು ಯಾವಾಗಲೂ ತಣ್ಣಗೇ ಇರುತ್ತದೆ. ಆ ನಿಯಮಕ್ಕೆ ವ್ಯಭಿಚಾರವೇ ಇಲ್ಲದುದರಿಂದ ಆ ವಿಶೇಷಣ ವ್ಯರ್ಥ, ಆದ್ದರಿಂದ ಯಾವಾಗಲೂ ಉಪಸರ್ಜನವೇ ಆಗಿರುವ ವಾಚ್ಯಾರ್ಥಕ್ಕೆ ಉಪಸರ್ಜನೀಕೃತಸ್ವಃ ಎಂಬ ವಿಶೇಷಣ ವ್ಯರ್ಥ ಎಂದು ಹಿಂದೆ ಹೇಳಲಾಯಿತು.

ಸಮಾಸೋಕ್ತಿಯಲ್ಲಿ ಪ್ರತೀಯಮಾನಾರ್ಥವು ವಾಚ್ಯಾರ್ಥಕ್ಕೆ ಉಪಸ್ಕಾರಕವಾಗುತ್ತದೆ, ವಾಚ್ಯಾರ್ಥವನ್ನೇ ಸುಂದರವಾಗಿ ಮಾಡುವುದಕ್ಕೆ ವ್ಯಂಗ್ಯಾರ್ಥವು ಸಾಧನ, ಆದ್ದರಿಂದ ವಾಚ್ಯಾರ್ಥ ಯಾವಾಗಲೂ ಉಪಸರ್ಜನ ಎಂಬ ನಿಯಮಕ್ಕೆ ವ್ಯಭಿಚಾರವುಂಟು ಎಂಬುದಕ್ಕೆ ಮಹಿಮಭಟ್ಟನ ಉತ್ತರ ಏನೆಂದರೆ, ಇದೂ ವ್ಯರ್ಥ, ಏಕೆಂದರೆ ಗುಣೀಭೂತವ್ಯಂಗ್ಯ ಎಂಬ ಕಾವ್ಯಪ್ರಕಾರದಲ್ಲೂ ಚಾರುತ್ವಾತಿಶಯ, ಎಂದರೆ ಚಮತ್ಕಾರಕವಾದ ಸೊಬಗು ಇದ್ದೇ ಇದೆ. ಅದು ಧ್ವನಿಯ ವೈಶಿಷ್ಟ್ಯವೇನಲ್ಲ ಎಂದು ಮುಂದೆ ಅವನು ಹೇಳಲಿದ್ದಾನೆ.

ಇದರಿಂದ ತಿಳಿದುಬರುವುದೇನೆಂದರೆ ಪ್ರಾಧಾನ್ಯ ಮೂರು ವಿಧದಲ್ಲಿ ಸಂಭವಿಸಬಹುದು. ೧. ಪ್ರಾಕರಣಿಕತ್ವದಿಂದ ೨. ಸಾಧ್ಯಸಾಧನಭಾವದಿಂದ ೩. ಚಾರುತ್ವಾತಿಶಯದಿಂದ. ಕಾವ್ಯಪ್ರಪಂಚದಲ್ಲಿ ಚಾರುತ್ವಾತಿಶಯವನ್ನೇ ನಿರ್ಣಾಯಕವಾಗಿ ಪರಿಗಣಿಸುವುದು ಸೂಕ್ತ. ಏಕೆಂದರೆ ಕಾವ್ಯದ ಮುಖ್ಯ ಪ್ರಯೋಜನ ಸದ್ಯಃ ಪರನಿರ್ವೃತಿ. ಸಹೃದಯರಿಗೆ ಆ ಪ್ರಯೋಜನವನ್ನು ತಂದುಕೊಡುವ ಅಂಶವೇ ಚಾರುತ್ವಾತಿಶಯ. ಅದು ಯಾವ ಅರ್ಥದಲ್ಲಿದೆಯೋ ಅದೇ ಪ್ರಧಾನ.

(ಧ್ವನಿಲಕ್ಷಣದಲ್ಲಿ ಶಬ್ದವನ್ನು ಹೇಳಬಾರದಾಗಿತ್ತು.)

**ಶಬ್ದಃ ಪುನರನುಪಾದೇಯ ಏವ । ತಸ್ಯ ಸ್ವಾರ್ಥಾಭಿಧೇಯಮಂತರೇಣ ವ್ಯಾಪಾರಾಂತರಾನುಪಪತ್ತೇರುಪಪಾದಯಿಷ್ಯಮಾಣತ್ವಾತ್ ।**

**ಅನುವಾದ:**

ಶಬ್ದವನ್ನಂತೂ (ಧ್ವನಿಲಕ್ಷಣದಲ್ಲಿ) ಸೇರಿಸಲೇಬೇಕಾಗಿರಲಿಲ್ಲ. ಏಕೆಂದರೆ ಶಬ್ದಕ್ಕೆ ತನ್ನ ಅರ್ಥವನ್ನು ತಿಳಿಸುವುದನ್ನು ಬಿಟ್ಟು ಬೇರೆ ಯಾವ ವ್ಯಾಪಾರವೂ ಸಂಭವಿಸುವುದೇ ಇಲ್ಲ ಎಂದು ನಾವು ಮುಂದೆ ತೋರಿಸಿಕೊಡುತ್ತೇವೆ.

**ವಿವರಣೆ:**

ಕಾವ್ಯದಲ್ಲಿ ಶಬ್ದಕ್ಕೆ ಅಭಿಧಾ, ಲಕ್ಷಣಾ, ವ್ಯಂಜನಾ ಎಂಬ ಮೂರು ವ್ಯಾಪಾರಗಳಿವೆ ಎಂಬುದು ಆನಂದವರ್ಧನನ ಮತ. ಎಲ್ಲಿ ಶಬ್ದವು ತನ್ನ ಸಂಕೇತಿತಾರ್ಥವನ್ನು ಅಪ್ರಧಾನವನ್ನಾಗಿ ಮಾಡಿ ಸುಂದರವಾದ ವ್ಯಂಗ್ಯಾರ್ಥವನ್ನು ವ್ಯಂಜನಾವ್ಯಾಪಾರದಿಂದ ತಿಳಿಸುವುದೋ ಅದು ಧ್ವನಿ ಎಂದು ಆನಂದವರ್ಧನನ ಮತವನ್ನು ಅನುಸರಿಸಿ ಹೇಳಬಹುದು. ಆದರೆ ಮಹಿಮಭಟ್ಟನ ಮತದಲ್ಲಿ ಶಬ್ದಕ್ಕೆ ಅಭಿಧಾ ಎಂಬ ಒಂದೇ ವ್ಯಾಪಾರ. ಅದು ವ್ಯಂಜನೆಯಿಂದ ವ್ಯಂಗ್ಯಾರ್ಥವನ್ನು ತಿಳಿಸುತ್ತದೆ ಎಂಬ ಮಾತಿಗೆ ಅವಕಾಶವೇ ಇಲ್ಲ. ಆದ್ದರಿಂದ ಧ್ವನಿಲಕ್ಷಣದಲ್ಲಿ ಶಬ್ದ ಎಂಬ ಶಬ್ದವನ್ನು ಹಾಕಿದ್ದೇ ತಪ್ಪು.

**ನ ಚ ತಸ್ಯ ಅನುಕರಣವ್ಯತಿರೇಕೇಣ ಉಪಸರ್ಜನೀಕೃತಾರ್ಥತ್ವಂ ಸಂಭವತಿ ।**
**ಯಥಾ – ತಂ ಕರ್ಣಮೂಲಮಾಗತ್ಯ ಪಲಿತಚ್ಛದ್ಮನಾ ಜರಾ ।**
**ಕೈಕೇಯೀಶಂಕಯೇವಾಹ ರಾಮೇ ಶ್ರೀರ್ನ್ಯಸ್ಯತಾಮಿತಿ ॥**

**ಅನುವಾದ:**

ಶಬ್ದಕ್ಕೆ ಅನುಕರಣವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಅರ್ಥವನ್ನು ಉಪಸರ್ಜನವಮಾಡುವ ಧರ್ಮವೇ ಸಂಭವಿಸುವುದಿಲ್ಲ. (ಅನುಕರಣದ) ಉದಾಹರಣೆ – ಮುಪ್ಪು ಆ ದಶರಥನಿಗೆ ಕಿವಿಯ ಬಳಿಗೆ ನೆರೆಗೂದಲಿನ ನೆವದಿಂದ ಬಂದು ಕೈಕೇಯಿಯ ಬಗೆಗೆ ಸಂಶಯಪಟ್ಟೋ ಎಂಬಂತೆ "ರಾಜ್ಯಲಕ್ಷ್ಮಿಯನ್ನು ರಾಮನಿಗೆ ಒಪ್ಪಿಸು" ಎಂದು ಹೇಳಿತು.

**ವಿವರಣೆ:**

ರಾಮೇ ಶ್ರೀರ್ನ್ಯಸ್ಯತಾಮ್ ಎಂಬುದರ ಮುಂದೆ ಇತಿ ಎಂಬ ಶಬ್ದವನ್ನು ಉಚ್ಚರಿಸಿದುದರಿಂದ ಅದು ಅನುಕರಣ. ಅನುಕರಣ ಎಂದರೆ Quotation, Direct Speech. ಭಾಷೆಯಲ್ಲಿ ಶಬ್ದದ ಅರ್ಥ ಪ್ರಧಾನ, ಶಬ್ದ ಗೌಣ (ಅಪ್ರಧಾನ) – ಆದರೆ ಅನುಕರಣದಲ್ಲಿ ಶಬ್ದವೇ ಪ್ರಧಾನ. ಅನುಕರಣದಲ್ಲಿ ಮಾತ್ರ ಶಬ್ದಕ್ಕೆ ಉಪಸರ್ಜನೀಕೃತಾರ್ಥತ್ವವು ಸಂಭವಿಸುತ್ತದೆ. ಬೇರೆ ಎಲ್ಲ ಸ್ಥಳದಲ್ಲಿ ಅರ್ಥವೇ ಪ್ರಧಾನ. ಅರ್ಥವನ್ನು ತಿಳಿಸುವುದಕ್ಕೆ ಶಬ್ದ ಒಂದು ಸಾಧನ ಮಾತ್ರ.

**ಕುತಸ್ತರ್ಹಿ ತದರ್ಥಾವಗತಿಃ? ಅನುಕಾರ್ಯಾದಿತಿ ಬ್ರೂಮಃ।**
**ತಸ್ಯ ಸಾರ್ಥಕನಿರರ್ಥಕತ್ವಭೇದೇನ ದ್ವೈವಿಧ್ಯತಃ ।**
**ನ ತ್ವನುಕರಣಾತ್, ತಸ್ಯೇತಿನಾ ವ್ಯವಚ್ಛಿನ್ನಸ್ಯ ಸ್ವರೂಪಮಾತ್ರೇಽವಸ್ಥಾನಾತ್।**

**ಅನುವಾದ:**

ಹಾಗಾದರೆ ಅದರ ಅರ್ಥದ ಅರಿವು (ಶ್ರೋತೃವಿಗೆ) ಎಲ್ಲಿಂದ ಉಂಟಾಗುತ್ತದೆ? ಅನುಕಾರ್ಯದಿಂದ (ಉಂಟಾಗುತ್ತದೆ) ಎಂದು ಹೇಳುತ್ತೇವೆ. ಆ ಅನುಕಾರ್ಯ ಸಾರ್ಥಕ, ನಿರರ್ಥಕ ಎಂದು ಎರಡು ವಿಧವಾಗಿರುತ್ತದೆ. ಅನುಕರಣದಿಂದಂತೂ ಅರ್ಥಜ್ಞಾನ ಉಂಟಾಗುವುದಿಲ್ಲ. ಇತಿ ಎಂಬ ಶಬ್ದದಿಂದ ವ್ಯವಚ್ಛಿನ್ನವಾದ ಅನುಕರಣವು (ಶಬ್ದದ) ಸ್ವರೂಪವನ್ನು ಮಾತ್ರ ತಿಳಿಸುವುದರಲ್ಲಿ ನಿಂತು ಬಿಡುತ್ತದೆ.

**ವಿವರಣೆ:**

ಅನುಕರಣವು ಶಬ್ದಮಾತ್ರವನ್ನು ತಿಳಿಸುವುದರಿಂದ ರಾಮನಲ್ಲಿ ರಾಜ್ಯಲಕ್ಷ್ಮಿಯನ್ನು ನೆಲೆಗೊಳಿಸು ಎಂಬ ಅರ್ಥ ಶ್ರೋತೃಗಳಿಗೆ ಅಥವಾ ಕಾವ್ಯವಾಚಕರಿಗೆ ತಿಳಿಯುವುದು ಹೇಗೆ? ಅನುಕಾರ್ಯಶಬ್ದದಿಂದ ಎಂದು ಹೇಳುತ್ತೇವೆ. ಮೇಲೆ ಕೊಟ್ಟಿರುವ ಉದಾಹರಣೆಯಲ್ಲಿ ಕವಿಯ ಮಾತು ಅನುಕರಣ. ಮುಪ್ಪು ಏನು ಹೇಳಿತೆಂಬುದನ್ನು ಅವನು ಹಾಗೆಯೇ ಹೇಳಿದ್ದಾನೆ. ಅದಕ್ಕೆ ಆ ಶಬ್ದಗಳು ಮಾತ್ರ ಅರ್ಥ. ಮುಪ್ಪಿನ ಮಾತು ಅನುಕಾರ್ಯ. ಅದರ ಅರ್ಥವನ್ನು ಕಾವ್ಯದ ಶ್ರೋತೃ ಅಥವಾ ವಾಚಕನು ಅರ್ಥ ಮಾಡಿಕೊಳ್ಳುತ್ತಾನೆ. ಇದಕ್ಕೆ ವಾಕ್ಯದ ಪುನರನುಸಂಧಾನ ಆವಶ್ಯಕವಾಗಬಹುದು.

**ಅನ್ಯಸ್ಯ ತು ಉಪಸರ್ಜನೀಭಾವಾವ್ಯಭಿಚಾರ ಏವ, ತಸ್ಯ ತದರ್ಥಮುಪಾದಾನತಃ । ಯೋ ಹಿ ಯದರ್ಥಮ್ ಉಪಾದೀಯತೇ ನಾಸೌ ತಮೇವೋಪಸರ್ಜನೀಕರೋತಿ ಇತಿ ಯುಕ್ತಂ ವಕ್ತುಮ್ । ಯಥಾ ಉದಕಾದ್ಯುಪಾದಾನಾರ್ಥಮುಪಾತ್ತೋ ಘಟಾದಿಸ್ತದೇವೋದಕಾದಿ । ಅನ್ಯಥಾ ಪ್ರಧಾನೇತರವ್ಯವಸ್ಥಾ ನಿರ್ನಿಬಂಧನೈವ ಸ್ಯಾತ್ । ಅತ ಏವ ಘಟಾದಿರೇವ ಪ್ರತಿನಿಧೀಯತೇ ನೋದಕಾದಿ ಇತ್ಯಸಂಭವೋ ಲಕ್ಷಣದೋಷಃ ।**

**ಅನುವಾದ:**

(ಅನುಕರಣವನ್ನು ಬಿಟ್ಟು) ಬೇರೆ ಶಬ್ದಕ್ಕೆ ಉಪಸರ್ಜನವಾಗುವಿಕೆಯಲ್ಲಿ ವ್ಯಭಿಚಾರವೇ ಇಲ್ಲ, ಏಕೆಂದರೆ ಆ ಅರ್ಥವನ್ನು ತಿಳಿಸುವುದಕ್ಕಾಗಿಯೇ ಆ ಶಬ್ದವನ್ನು (ವಕ್ತೃಗಳು) ಬಳಸುತ್ತಾರೆ. ಯಾವುದಕ್ಕಾಗಿ ಯಾವುದನ್ನು ತೆಗೆದುಕೊಳ್ಳುತ್ತಾರೋ ಅದೇ ಆ ವಸ್ತುವನ್ನು ಅಪ್ರಧಾನವನ್ನಾಗಿ ಮಾಡಿಬಿಡುತ್ತದೆ ಎಂದು ಹೇಳುವುದು ಉಚಿತವಲ್ಲ. ಉದಾಹರಣೆಗೆ ನೀರನ್ನು ತರುವುದಕ್ಕಾಗಿ ತೆಗೆದುಕೊಳ್ಳಲ್ಪಟ್ಟ ಗಡಿಗೆ ಆ ನೀರನ್ನೇ (ಅಪ್ರಧಾನವನ್ನಾಗಿ ಮಾಡುವುದುಂಟೆ?). ಹೀಗೆ ಒಪ್ಪಿಕೊಳ್ಳದಿದ್ದರೆ ಇದು ಪ್ರಧಾನ, ಅದು ಅಪ್ರಧಾನ ಎಂಬ ವ್ಯವಸ್ಥೆ ನಿಷ್ಕಾರಣ (ನಿರಾಧಾರ) ಎಂದಾದೀತು. ಆದ್ದರಿಂದಲೇ ಗಡಿಗೆ ಮುಂತಾದುವಕ್ಕೆ ಪ್ರತಿನಿಧಿಯನ್ನು ಕಲ್ಪಿಸಬಹುದು, ನೀರು ಮುಂತಾದುವಕ್ಕೆ ಅಲ್ಲ ಎಂದು (ಹೇಳುತ್ತಾರೆ). ಆದ್ದರಿಂದ (ನೀವು ಹೇಳಿದ) ಲಕ್ಷಣದಲ್ಲಿ ಅಸಂಭವ ಎಂಬ ದೋಷ ಉಂಟಾಗುತ್ತದೆ.

**ವಿವರಣೆ:**

ಹುಡುಗಿಗಾಗಿ ಸೀರೆಯನ್ನು ತರುತ್ತಾರೆ. ಆ ಸೀರೆ ತಾನೇ ಮುಖ್ಯವಾಗಿ ಹುಡುಗಿಯನ್ನು ಅಮುಖ್ಯಳನ್ನಾಗಿ ಮಾಡುತ್ತದೆ ಎಂದರೆ ಸರಿಯೆ? ಅರ್ಥದ ಸಂವಹನಕ್ಕಾಗಿ ಶಬ್ದವನ್ನು (ಮನುಷ್ಯರು) ಬಳಸುತ್ತಾರೆ. ಆ ಶಬ್ದ ಅರ್ಥವನ್ನೇ ಉಪಸರ್ಜನ (=ಅಮುಖ್ಯ, ಅಪ್ರಧಾನ)ವನ್ನಾಗಿಸುತ್ತದೆ ಎಂದರೆ ಸರಿಯೆ? ಆದ್ದರಿಂದ ಧ್ವನಿಯ ಲಕ್ಷಣದಲ್ಲಿ 'ಶಬ್ದವು ತನ್ನ ಅರ್ಥವನ್ನು ಅಪ್ರಧಾನವನ್ನಾಗಿ ಮಾಡಿ'– ಎಂದು ಹೇಳಿದುದು ಸರಿಯಲ್ಲ ಎನ್ನುತ್ತಾನೆ ಮಹಿಮಭಟ್ಟ.

ಬಾಯಾರಿಕೆಯನ್ನು ತಣಿಸಲು ನೀರು ಬೇಕು. ನೀರನ್ನು ಗಡಿಗೆಯಲ್ಲಿ ತರಬಹುದು, ಮಡಕೆಯಲ್ಲಿ ತರಬಹುದು, ಬೇರೆ ಪಾತ್ರೆಯಲ್ಲಾದರೂ ತರಬಹುದು. ಹೀಗೆ ಅಪ್ರಧಾನವನ್ನು

ಬದಲಾಯಿಸಬಹುದು. ಪ್ರಧಾನವಾದ ನೀರನ್ನು ಬದಲಾಯಿಸುವುದು ಸರಿಯಲ್ಲ. ಏಕೆಂದರೆ ಉದ್ದೇಶ ಬಾಯಾರಿಕೆಯನ್ನು ನೀಗಿಸುವುದು.

ಲಕ್ಷಣದಲ್ಲಿ ಮೂರುದೋಷಗಳು ಇರಬಾರದು ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವ ಎಂಬವು ಮೂರು ದೋಷಗಳು. ಎರಡು ದಂತಗಳಿರುವ ಪ್ರಾಣಿ ಆನೆ ಎಂದು ಲಕ್ಷಣವನ್ನು ಹೇಳಿದರೆ ಅದು ಅವ್ಯಾಪ್ತಿ ಎಂಬ ದೋಷವುಳ್ಳ ಲಕ್ಷಣ. ಏಕೆಂದರೆ ಅನೇಕ ಹೆಣ್ಣಾನೆಗಳಿಗೆ ದಂತಗಳಿರುವುದಿಲ್ಲ. ಬಾಲವುಳ್ಳ ಪ್ರಾಣಿ ಆನೆ ಎಂದರೆ ಲಕ್ಷಣದಲ್ಲಿ ಅತಿವ್ಯಾಪ್ತಿ. ಏಕೆಂದರೆ ಹಸು, ನರಿ, ಸಿಂಹ ಇತ್ಯಾದಿ ಎಲ್ಲ ಪ್ರಾಣಿಗಳಿಗೂ ಬಾಲವಿದೆ. ಹತ್ತು ಕಾಲುಗಳಿರುವ ಪ್ರಾಣಿ ಆನೆ ಎಂದು ಲಕ್ಷಣವನ್ನು ಹೇಳಿದರೆ ಅಸಂಭವ ಎಂಬ ದೋಷ. ಏಕೆಂದರೆ ಯಾವ ಆನೆಗೂ ಹತ್ತು ಕಾಲುಗಳಿರುವುದಿಲ್ಲ. ಧ್ವನಿಯ ಲಕ್ಷಣದಲ್ಲಿ ಅಸಂಭವ ಎಂಬ ದೋಷವಿದೆ ಎಂದು ಮಹಿಮಭಟ್ಟನು ಹೇಳುತ್ತಾನೆ. ತಾನು ಪ್ರತಿಪಾದಿಸುವ ಅರ್ಥವನ್ನು ಶಬ್ದವು ಅಪ್ರಧಾನವನ್ನಾಗಿ ಮಾಡುವ ಸಂಭವವೇ ಇಲ್ಲದುದರಿಂದ ಅಸಂಭವ ಎಂಬ ದೋಷ ಎಂದು ಅವನ ವಾದ.

ಆನಂದವರ್ಧನನ ಅಭಿಪ್ರಾಯವನ್ನು ಗ್ರಹಿಸದೆ ಮಹಿಮಭಟ್ಟನು ಹೀಗೆ ಹೇಳಿರಬಹುದು. ಶಬ್ದವು ವಾಚ್ಯಾರ್ಥವನ್ನು ಅಪ್ರಧಾನವನ್ನಾಗಿ ಮಾಡಿ ತಾನು ಪ್ರಧಾನವಾಗುತ್ತದೆ ಎಂದು ಆನಂದವರ್ಧನನು ಹೇಳಿಲ್ಲ. ವಾಚ್ಯಾರ್ಥವನ್ನು ಅಪ್ರಧಾನವನ್ನಾಗಿ ಮಾಡಿ ವ್ಯಂಗ್ಯಾರ್ಥವನ್ನು ಧ್ವನಿಸುತ್ತದೆ ಎಂದು ಅವನ ಸಿದ್ಧಾಂತ. ಪ್ರಧಾನ – ಉಪಸರ್ಜನಭಾವ ಶಬ್ದ ಮತ್ತು ಅರ್ಥಗಳಿಗಲ್ಲ, ಪ್ರತೀಯಮಾನಾರ್ಥ ಮತ್ತು ವಾಚ್ಯಾರ್ಥಗಳಿಗೆ. ಆದ್ದರಿಂದ ಲಕ್ಷಣದಲ್ಲಿ ಅಸಂಭವ ಎಂಬ ದೋಷವಿದೆ ಎಂದು ಮಹಿಮಭಟ್ಟನು ಹೇಳಿರುವುದರಲ್ಲಿ ಹುರುಳಿಲ್ಲ.

**ವ್ಯಭಿಚಾರಸಂಭವಯೋರಪಿ ವಾ ಯತ್ ಸ್ವಾರ್ಥಯೋರುಪಸರ್ಜನೀಕೃತತ್ವವಚನಂ ತತ್ ಪುನರುಕ್ತಂ ತಯೋರರ್ಥಾಂತರಾಭಿವ್ಯಕ್ತ್ಯರ್ಥಮುಪಾತ್ತಯೋಃ ಸಾಮರ್ಥ್ಯಾದೇವ ತದವಗತೇರಿತ್ಯುಕ್ತಮ್ । ನ ಚ ಸ್ವರೂಪಮಾತ್ರಾನುವಾದಫಲಮೇತದಿತಿ ಶಕ್ಯಂ ವಕ್ತುಂ, ತಸ್ಯ ಪುನರುಕ್ತಿಪ್ರಕಾರತ್ವೋಪಪಾದನತಃ ।**

**ಅನುವಾದ:**

ವ್ಯಭಿಚಾರ ಮತ್ತು ಸಂಭವಗಳಿದ್ದರೂ, ಸ್ವ ಮತ್ತು ಅರ್ಥಗಳಿಗೆ ಉಪಸರ್ಜನೀಕೃತತ್ವವನ್ನು ಹೇಳಿರುವುದು ಪುನರುಕ್ತವೇ ಸರಿ. ಇನ್ನೊಂದು ಅರ್ಥವನ್ನು ಅಭಿವ್ಯಂಜಿಸಲು ಅವುಗಳನ್ನು ಪ್ರಯೋಗಿಸಲಾಗಿದೆ ಎಂದಾಗ ಸಾಮರ್ಥ್ಯದಿಂದಲೇ (ಉಪಸರ್ಜನೀಕೃತವಾಗುವುದು) ತಿಳಿದು ಬರುತ್ತದೆ ಎಂದಾಗಲೇ ಹೇಳಿದ್ದೇವೆ. ಇದನ್ನು ಸ್ವರೂಪದ ಅನುವಾದವನ್ನು ಮಾತ್ರ ಫಲವನ್ನಾಗಿ ಇಟ್ಟುಕೊಂಡು ಹೇಳಿದ್ದೇವೆ ಎಂದೂ ಹೇಳಲು ಸಾಧ್ಯವಿಲ್ಲ, ಏಕೆಂದರೆ ಸ್ವರೂಪಾನುವಾದವೂ ಪುನರುಕ್ತಿಯ ಪ್ರಕಾರವೇ ಎಂದು ನಾವು ಉಪಪಾದಿಸಿದ್ದೇವೆ.

**ವಿವರಣೆ:**

ವ್ಯಭಿಚಾರಾಭಾವದಿಂದ ಮತ್ತು ಅಸಂಭವದಿಂದ ಲಕ್ಷಣ ದುಷ್ಟ ಎಂದು ಹೇಳಿದುದು ಸರಿಯಲ್ಲ ಎಂದಿಟ್ಟುಕೊಂಡರೂ ಶಬ್ದಕ್ಕೂ ಅರ್ಥಕ್ಕೂ ಉಪಸರ್ಜನೀಕೃತತ್ವವನ್ನು ಹೇಳುವುದು ಪುನರುಕ್ತ ಎಂಬ

ದೋಷಕ್ಕೆ ಈಡಾಗುತ್ತದೆ. ಇನ್ನೊಂದು ಅರ್ಥವನ್ನು ಅಭಿವ್ಯಂಜಿಸಲು ಬಳಸಲಾದ ಶಬ್ದಾರ್ಥಗಳು ಉಪಸರ್ಜನೀಕೃತವಾಗುವುದು ಅನಿವಾರ್ಯವಾದುದರಿಂದ ವಾಚಕರಿಗೆ ಅದು ಸ್ವಯಂವೇದ್ಯವಾಗುತ್ತದೆ. ಹೇಳದೇ ಇದ್ದರೂ ಯಾವುದು ವೇದ್ಯವಾಗುವುದೋ ಅದನ್ನು ಹೇಳಿದರೆ ಅದು ಪುನರುಕ್ತವೇ ಸರಿ. ಇರುವ ಸ್ವರೂಪವನ್ನೇ ತಿಳಿಸಲು ಮಾಡಿದ ಅನುವಾದ ಮಾತ್ರ ಇದು ಎಂದರೂ, ಅಂಥ ಅನುವಾದವೂ ಪುನರುಕ್ತದ ಒಂದು ಪ್ರಕಾರವೇ ಅಲ್ಲವೆ?

ವಿಶಾಲವಾದ ಗಗನದಲ್ಲಿ ಹಕ್ಕಿ ಎರಡು ರೆಕ್ಕೆಗಳನ್ನು ಬಡಿಯುತ್ತಾ ಹಾರುತ್ತಿದೆ ಎಂಬ ವಾಕ್ಯ ಪುನರುಕ್ತಿಯುಳ್ಳದ್ದು. ಗಗನ ವಿಶಾಲವಾಗಿದೆ ಎಂಬುದು ಎಲ್ಲರಿಗೂ ಗೊತ್ತು. ಅದನ್ನು ಹೇಳಬೇಕಾಗಿಲ್ಲ. ಅದನ್ನು ಹೇಳಿದರೆ ಪುನರುಕ್ತ ಎಂಬ ದೋಷ. ಹಕ್ಕಿ ಹಾರಬೇಕಾದರೆ ಅದು ಎರಡು ರೆಕ್ಕೆಗಳನ್ನೂ ಬಳಸಿ ಹಾರಬೇಕು. ಅರ್ಥಾತ್ ಸಿದ್ಧವಾದುದನ್ನು ಶಬ್ದದಿಂದ ಹೇಳಿದರೆ ಪುನರುಕ್ತ ಎಂಬ ದೋಷ. ಹಾಗೆ ಧ್ವನಿಲಕ್ಷಣದಲ್ಲಿ "ಉಪಸರ್ಜನೀಕೃತಸ್ವಾರ್ಥೌ" ಎಂಬುದು ಪುನರುಕ್ತ.

**ಏವಂ ಚ ಯತ್ 'ಸುವರ್ಣಪುಷ್ಪಾಂ ಪೃಥಿವೀಮ್'**
**ಇತ್ಯಾದ್ಯುದಾಹರಣಮುಪದರ್ಶಿತಮ್, ತದಸಿದ್ಧ-**
**ಸಾಧ್ಯಸಾಧನಧರ್ಮಾನುಗತಮ್ ಇತ್ಯವಗಂತವ್ಯಮ್ ।**

**ಅನುವಾದ:**

ಆದ್ದರಿಂದ 'ಸುವರ್ಣಪುಷ್ಪಾಂ ಪೃಥಿವೀಮ್' ಇತ್ಯಾದಿ ಉದಾಹರಣೆಗಳನ್ನು (ಧ್ವನ್ಯಾಲೋಕದಲ್ಲಿ) ಕೊಟ್ಟಿರುವುದು ಸಾಧ್ಯಸಾಧನಧರ್ಮವೇ ಸಿದ್ಧವಿಲ್ಲದ ಉದಾಹರಣೆಗಳಂತೆ ಎಂದು ತಿಳಿದುಕೊಳ್ಳಬೇಕು.

**ವಿವರಣೆ:**

ಆನಂದವರ್ಧನನು ಧ್ವನಿಯನ್ನು ಅವಿವಕ್ಷಿತವಾಚ್ಯ, ವಿವಕ್ಷಿತಾನ್ಯಪರವಾಚ್ಯ ಎಂದು ವಿಭಾಗಿಸಿ ಅವಿವಕ್ಷಿತವಾಚ್ಯಕ್ಕೆ ಉದಾಹರಣೆಯೆಂದು –

**ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ ।**
**ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್ ॥**

ಎಂಬ ಶ್ಲೋಕವನ್ನು ಉದಾಹರಿಸಿದ್ದಾನೆ. "ಚಿನ್ನದ ಹೂವುಗಳನ್ನು ಬಿಡುವ ಭೂಮಿಯಲ್ಲಿ ಶೂರ, ವಿದ್ಯಾವಂತ ಮತ್ತು ಸೇವಾತತ್ತ್ವವನ್ನು ತಿಳಿದವನು ಎಂಬ ಮೂವರು ಆ ಪುಷ್ಪಗಳನ್ನು ಆಯ್ದುಕೊಳ್ಳುತ್ತಾರೆ" ಎಂದು ಶ್ಲೋಕದ ಅರ್ಥ. ಭೂಮಿಯಲ್ಲಿ ಪುಷ್ಪಗಳು ಹುಟ್ಟುವುದಿಲ್ಲ, ಮರಗಿಡಗಳಲ್ಲಿ ಪುಷ್ಪಗಳು ಹುಟ್ಟಿದರೂ ಅವು ಸುವರ್ಣಪುಷ್ಪಗಳಲ್ಲ. ಆದ್ದರಿಂದ ಇಲ್ಲಿ ವಾಚ್ಯಾರ್ಥ ವಿವಕ್ಷಿತವಲ್ಲ. ಇದು ಅವಿವಕ್ಷಿತವಾಚ್ಯಧ್ವನಿ. ಶೂರಾದಿಗಳು ಹೂವನ್ನು ಬಿಡಿಸಿಕೊಳ್ಳುವಂತೆ ಸುಲಭವಾಗಿ ಚಿನ್ನವನ್ನು ಗಳಿಸಿಕೊಳ್ಳುತ್ತಾರೆ ಎಂದು ಇದರ ಅಭಿಪ್ರಾಯ.

ಇಂಥ ಉದಾಹರಣೆಗಳಲ್ಲಿ ಸಾಧ್ಯಸಾಧನಭಾವವೇ ಸಿದ್ಧವಾಗದು. ಏಕೆಂದರೆ ಶಬ್ದವು ಅಭಿಧೆಯಿಂದ ಒಂದು ಅರ್ಥವನ್ನು ಹೇಳಿ ವಿರತವಾಗುತ್ತದೆ. ಅನಂತರ ತೋರುವ ಅರ್ಥಗಳಿಗೂ ಶಬ್ದಕ್ಕೂ ಸಂಬಂಧವೇ ಇಲ್ಲ ಎಂದು ಮಹಿಮಭಟ್ಟ ಹೇಳುತ್ತಾನೆ. ವ್ಯಂಗ್ಯವ್ಯಂಜಕಭಾವ ಎಂದರೆ ಅವನ ದೃಷ್ಟಿಯಲ್ಲಿ ಗಮ್ಯಗಮಕಭಾವ. ಒಂದು ಅರ್ಥವು ಇನ್ನೊಂದು ಅರ್ಥಕ್ಕೆ ಗಮಕವಾಗಬಹುದು. ಶಬ್ದ ಗಮಕವಲ್ಲ ಎಂದು ಅವನ ಅಭಿಪ್ರಾಯ.

ಆದರೆ ಆನಂದವರ್ಧನನ ಮತದಲ್ಲಿ ಶಬ್ದಕ್ಕೆ ಮೂರು ವೃತ್ತಿಗಳು. ಅಭಿಧೆಯಿಂದ ಮತ್ತು ಲಕ್ಷಣೆಯಿಂದ ಹೇಳಲಾಗದ ಸುಂದರವಾದ ಅರ್ಥವನ್ನು ವ್ಯಂಜನಾ ತಿಳಿಸುತ್ತದೆ. ಶೂರರೂ ವಿದ್ವಾವಂತರೂ ಸೇವಾಭಿಜ್ಞರೂ ಸುಲಭವಾಗಿ ಬಂಗಾರವನ್ನು ಗಳಿಸುತ್ತಾರೆ ಎಂಬ ವಾಕ್ಯದಲ್ಲಿ ಯಾವ ಚಮತ್ಕಾರವೂ ಇಲ್ಲ. ಸುವರ್ಣಪುಷ್ಪಾಂ... ಎಂಬ ಪದ್ಯದಲ್ಲಿ ಸಹೃದಯಹೃದಯಗಳಿಗೆ ಆನಂದವನ್ನು ತಂದುಕೊಡುವ ಚಮತ್ಕಾರವಿದೆ. ಇದಕ್ಕೆ ಕಾರಣ ಅದರಲ್ಲಿರುವ ದೀಪಕಾಲಂಕಾರ. ವರ್ಣ್ಯ (ಪ್ರಸ್ತುತ)ಕ್ಕೂ ಅವರ್ಣ್ಯಕ್ಕೂ ಒಂದು ಧರ್ಮವನ್ನು ಅನ್ವಯಿಸುವಂತೆ ಹೇಳಿದರೆ ದೀಪಕಾಲಂಕಾರ. ವರ್ಣ್ಯನಾದ ಶೂರನಿಗೂ ವರ್ಣ್ಯೇತರರಾದ ಕೃತವಿದ್ಯಸೇವಾಭಿಜ್ಞರಿಗೂ ಸುವರ್ಣಪುಷ್ಪಚಯನವೆಂಬ ಸಮಾನಧರ್ಮದ ಅನ್ವಯ. ವಾಚ್ಯಾರ್ಥ ಬಾಧಿತ, ಲಕ್ಷಣಾವ್ಯಾಪಾರದಿಂದ ಬಾಧೆಯ ನಿವೃತ್ತಿ, ಅರ್ಥದ ಸಾಂಗತ್ಯ. ಅನಂತರ ವ್ಯಂಜನೆಯಿಂದ ಚಮತ್ಕಾರಕ ವ್ಯಂಗ್ಯಾರ್ಥದ ಪ್ರತಿಪಾದನೆ.

**ಕಿಂಚ ಯಥಾಭಿಧೇಯೋಽರ್ಥಸ್ತದ್ವಿಶೇಷಣಂ**
**ಚೋಪಾತ್ತಂ ತದ್ವದ್ ಅಭಿಧಾಪ್ಯುಪಾದಾನಮ್ ಅರ್ಹತ್ಯೇವ ।**
**ಅನ್ಯಥಾ ಯತ್ರ ದೀಪಕಾದೇರಲಂಕಾರಾದ್ ಅಲಂಕಾರಂತರಸ್ಯೋಪಮಾದೇಃ**
**ಪ್ರತೀತಿಸ್ತತ್ರ ಧ್ವನಿತ್ವಮಿಷ್ಟಂ ನ ಸ್ಯಾತ್ ತಲ್ಲಕ್ಷಣೇನಾವ್ಯಾಪ್ತೇಃ ।**
**ಅಲಂಕಾರಾಣಾಂ ಚಾಭಿಧಾತ್ವಮುಪಗತಂ ತೇಷಾಂ**
**ಭಂಗೀಭಣಿತಿಭೇದರೂಪತ್ವಾತ್ ।**

**ಅನುವಾದ:**

ಅಲ್ಲದೆ, ಅಭಿಧೇಯವಾದ ಅರ್ಥವನ್ನೂ ಅದರ ವಿಶೇಷಣವನ್ನೂ (ಧ್ವನಿಲಕ್ಷಣದಲ್ಲಿ) ಹೇಳಿರುವಂತೆ ಅಭಿಧೆಯನ್ನೂ ಹೇಳಬೇಕಾಗಿತ್ತು. ಹಾಗೆ ಹೇಳದೆ ಇದ್ದರೆ, ದೀಪಕ ಮುಂತಾದ ಅಲಂಕಾರಗಳಲ್ಲಿ ಉಪಮಾ ಇತ್ಯಾದಿ ಬೇರೆ ಅಲಂಕಾರಗಳ ಪ್ರತೀತಿ ಉಂಟಾಗುವ ಸಂದರ್ಭದಲ್ಲಿ ಧ್ವನಿ ನಮಗೆ ಇಷ್ಟವಲ್ಲ ಎಂದು ಹೇಳಬೇಕಾಗುತ್ತದೆ, ಏಕೆಂದರೆ ಧ್ವನಿಲಕ್ಷಣ ಅದಕ್ಕೆ ಅನ್ವಯಿಸುವುದಿಲ್ಲ. ಅಲಂಕಾರಗಳೆಲ್ಲ ಭಂಗೀಭಣಿತಿವಿಶೇಷಗಳೇ ಆಗಿರುವುದರಿಂದ ಅವುಗಳೆಲ್ಲ ಅಭಿಧಾಸ್ವರೂಪಗಳೇ ಎಂದು ಒಪ್ಪಿಕೊಳ್ಳಲಾಗಿದೆ.

**ವಿವರಣೆ:**

ಶಬ್ದವು ವಾಚ್ಯಾರ್ಥವಲ್ಲದ ಇನ್ನೊಂದು ಅರ್ಥವನ್ನು ವ್ಯಂಜಿಸಿದಾಗ, ಅಥವಾ ವಾಚ್ಯಾರ್ಥವು ತನಗಿಂತಲೂ ಬೇರೆಯಾದ ಸುಂದರತರವಾದ ಅರ್ಥವನ್ನು ವ್ಯಂಜಿಸಿದಾಗ ಧ್ವನಿ ಎಂದು ಆನಂದವರ್ಧನನು ಹೇಳಿದ್ದಾನೆ. ಇವುಗಳ ಜೊತೆಗೆ ಅಭಿಧಾವ್ಯಾಪಾರವನ್ನೂ ಸೇರಿಸಬೇಕಾಗಿತ್ತು ಎಂದು ಮಹಿಮಭಟ್ಟನ ವಾದ. ದೀಪಕಾಲಂಕಾರದಲ್ಲಿ ಪ್ರಸ್ತುತ–ಅಪ್ರಸ್ತುತಗಳಿಗೆ ಏಕಧರ್ಮಾನ್ವಯವು ಇರುತ್ತದೆ. ಇದರಿಂದ ಪ್ರಸ್ತುತ ಮತ್ತು ಅಪ್ರಸ್ತುತಗಳಿಗೆ ಸಾದೃಶ್ಯವು ವ್ಯಂಜನಾಮರ್ಯಾದೆಯಿಂದ ತಿಳಿದುಬರುತ್ತದೆ. ಹೀಗೆ ಅಲ್ಲಿ ಉಪಮಾಲಂಕಾರದ ಪ್ರತೀತಿ ಉಂಟಾಗುತ್ತದೆ. ಇದು ಅಭಿಧೆಯ ಮಹಿಮೆಯಿಂದ, ಎಲ್ಲ ಅಲಂಕಾರಗಳು ಭಂಗೀಭಣಿತಿಗಳು – ಎಂಬುದು ಮಹಿಮಭಟ್ಟನ ವಾದ.

ಅಲಂಕಾರಶಾಸ್ತ್ರದ ಹಿನ್ನೆಲೆಯಿಂದ ಇದನ್ನು ನೋಡಿದಾಗ ಈ ಮಾತಿಗೆ ಕುಂತಕನು ಬೆಂಬಲವಾಗಿ ನಿಂತಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಕುಂತಕನ ಮಾತುಗಳನ್ನು ಕೇಳೋಣ:

ಉಭಾವೇತಾವಲಂಕಾರ್ಯೌ ತಯೋಃ ಪುನರಲಂಕೃತಿಃ ।
ವಕ್ರೋಕ್ತಿರೇವ ವೈದಗ್ಧ್ಯಭಂಗೀಭಣಿತಿರಿಷ್ಯತೇ ॥
ಭಂಗೀ ವಿಚ್ಛಿತ್ತಿಃ ತಯಾ ಭಣಿತಿಃ ವಿಚಿತ್ರೈವಾಭಿಧಾ ವಕ್ರೋಕ್ತಿಃ ।
ವಕ್ರತಾವೈಚಿತ್ರ್ಯಯೋಗಿತಯಾ ಅಭಿಧಾನಮೇವ ಏತಯೋರಲಂಕಾರಃ ।

ಶಬ್ದ ಮತ್ತು ಅರ್ಥಗಳು ಅಲಂಕಾರ್ಯಗಳು. ಅವುಗಳಿಗೆ ಅಲಂಕಾರವಾಗುವುದು ಭಂಗಿಭಣಿತಿ, ಎಂದರೆ ವಿಶಿಷ್ಟವಾದ ಅಭಿಧೆ ಎಂಬುದು ಕುಂತಕನ ಮಾತಿನ ಸಾರ. ಅವನು ವ್ಯಾಪಾರಪ್ರಧಾನ್ಯವಾದಿ.

ಆನಂದವರ್ಧನನಾದರೋ ವ್ಯಂಗ್ಯಾರ್ಥಪ್ರಾಧಾನ್ಯವಾದಿ. ಕುಂತಕನ ಮತವನ್ನು ಅವಲಂಬನವನ್ನಾಗಿ ಮಾಡಿಕೊಂಡು ಮಹಿಮಭಟ್ಟನು ಇಲ್ಲಿ ದೋಷವನ್ನು ಹೇಳುತ್ತಿದ್ದಾನೆ. ಅಲಂಕಾರಗಳು ಶಬ್ದಗಳ ಮತ್ತು ಅರ್ಥಗಳ ಧರ್ಮಗಳು, ಅಭಿಧಾಧರ್ಮಗಳಲ್ಲ ಎಂಬ ಮತದಲ್ಲಿ ಈ ದೋಷಕ್ಕೆ ಅವಕಾಶವೇ ಇಲ್ಲ.

**ಅಲಂಕಾರಾಂತರಸ್ಯಾಪಿ ಪ್ರತೀತೌ ಯತ್ರ ಭಾಸತೇ ।**
**ತತ್ಪರತ್ವಂ ನ ವಾಚ್ಯಸ್ಯ ನಾಸೌ ಮಾರ್ಗೋ ಧ್ವನೇರ್ಮತಃ ॥**
**ಇತ್ಯಾದಿನಾ ತತ್ ಪ್ರತಿಷಿದ್ಧಮಿತಿ ಚೇದ್, ಉಚ್ಯತೇ । ತತ್ಪ್ರತಿಷೇಧಹೇತೋಃ**
**ಕಾವ್ಯಾತತ್ಪರತಾಲಕ್ಷಣಸ್ಯಾಸಿದ್ಧತ್ವಾತ್ ।**
**ಉಪಮಾನೋಪಮೇಯಭಾವಾದ್ಯಭಿಧಾನಪರತಯೈವ**
**ದೀಪಕಾದ್ಯಲಂಕಾರಭಂಗೀಭಣಿತಿಸಮಾಶ್ರಯಣತಃ,**
**ಪ್ರತೀಯಮಾನಸ್ಯೈವ ಚಾಲಂಕಾರಾದೇಶ್ಚಾರುತ್ವಾತಿಶಯಯೋಗಾತ್**
**ತಾವನ್ಮಾತ್ರನಿಬಂಧನತ್ವಾಚ್ಚ ತದ್‌ಧ್ವನಿವ್ಯವಹಾರಸ್ಯೇತಿ**
**ಕಥಂ ತತ್ಪ್ರತಿಷೇಧ ಸಿದ್ಧಿಃ ?**

**ಅನುವಾದ:**

"ಯಾವ ಕಾವ್ಯದಲ್ಲಿ (ಒಂದು ಅಲಂಕಾರದಿಂದ) ಇನ್ನೊಂದು ಅಲಂಕಾರದ ಪ್ರತೀತಿ ಉಂಟಾದರೂ ವಾಚ್ಯಾರ್ಥವು ಅದನ್ನೇ ತನ್ನ ಉದ್ದೇಶವನ್ನಾಗಿ ಇಟ್ಟು ಕೊಳ್ಳದಿದ್ದರೆ ಅದು ಧ್ವನಿಯ ಮಾರ್ಗವಲ್ಲ."

ಇತ್ಯಾದಿಯಿಂದ ಅಂಥ ಪ್ರಸಂಗವನ್ನು ನಿಷೇಧಿಸಿದ್ದೇವೆ ಎಂದರೆ ಅದಕ್ಕೆ (ಉತ್ತರವನ್ನು) ಹೇಳುತ್ತೇನೆ. ಕಾವ್ಯವು ಆ ಉದ್ದೇಶವನ್ನು ಇಟ್ಟುಕೊಂಡಿಲ್ಲ ಎಂಬ ನಿಷೇಧದ ಕಾರಣವೇ ಮೊದಲು ಸಿದ್ಧವಾಗುವುದಿಲ್ಲ. ಉಪಮಾನೋಪಮೇಯಭಾವ ಮುಂತಾದುವನ್ನು ಹೇಳುವುದಕ್ಕಾಗಿಯೇ (ಕವಿಗಳು) ದೀಪಕ ಮುಂತಾದ ಭಂಗೀಭಣಿತಿಯನ್ನು ಆಶ್ರಯಿಸುವರು. ಅಲಂಕಾರಾದಿಗಳು ಪ್ರತೀಯಮಾನವಾದಾಗಲೇ ಹೆಚ್ಚಾದ ಸೊಬಗನ್ನು ಪಡೆಯುತ್ತವೆ. ಅವುಗಳಿಗೆ ಧ್ವನಿ ಎಂಬ ಹೆಸರು ಬಂದಿರುವುದಕ್ಕೂ ಆ ಪ್ರತೀಯಮಾನತ್ವವಷ್ಟೇ ಕಾರಣ. ಹೀಗಿರುವಾಗ ಪ್ರತಿಷೇಧವು ಸಿದ್ಧಿಸುವುದಾದರೂ ಹೇಗೆ?

**ವಿವರಣೆ:**

ದೀಪಕಾಲಂಕಾರದಲ್ಲಿ ಪ್ರಸ್ತುತ–ಅಪ್ರಸ್ತುತಗಳಿಗೆ ಉಪಮಾ (ಸಾದೃಶ್ಯ) ತೋರುತ್ತದೆ ಎಂಬುದರಲ್ಲಿ ಯಾರ ವಿವಾದವೂ ಇಲ್ಲ. ಆದರೆ ದೀಪಕಾಲಂಕಾರದಲ್ಲಿ ಉಪಮಾಲಂಕಾರಧ್ವನಿ ಇದೆ ಎಂದು ಆನಂದವರ್ಧನನು ಒಪ್ಪಿಲ್ಲ. ಅಲಂಕಾರಾಂತರಸ್ಯಾಪಿ – ಇತ್ಯಾದಿ ಶ್ಲೋಕದಿಂದ ಅಲ್ಲಿ ಧ್ವನಿತ್ವವನ್ನು ಅವನೇ ನಿಷೇಧಿಸಿದ್ದಾನೆ. ಏಕೆಂದರೆ ಕವಿಗೆ ಆ ಉಪಮಾಲಂಕಾರದಲ್ಲಿ ತಾತ್ಪರ್ಯವಿಲ್ಲ, ಪ್ರಸ್ತುತಾಪ್ರಸ್ತುತಗಳಿಗೆ ಏಕಧರ್ಮಾನ್ವಯವನ್ನು ಹೇಳುವುದರಲ್ಲೇ ತಾತ್ಪರ್ಯ, ಅದೇ ಅವನ ಉದ್ದೇಶ ಎಂದು ಆನಂದವರ್ಧನನ ಸಿದ್ಧಾಂತ. ಆದರೆ ಮಹಿಮಭಟ್ಟನು ಅಂಥ ದೀಪಕಾಲಂಕಾರದ ಉದಾಹರಣೆಗಳಲ್ಲಿ ಉಪಮೆಯನ್ನು ಧ್ವನಿಸುವುದೇ ಕವಿಯ ಉದ್ದೇಶ ಎನ್ನುತ್ತಾನೆ. ಯಾವುದೇ ವಸ್ತುವಾಗಲಿ ಅಲಂಕಾರವಾಗಲಿ ರಸವಾಗಲಿ, ವಾಚ್ಯವಾಗಿದ್ದಾಗ ಅಷ್ಟು ಸುಂದರವಾಗಿರುವುದಿಲ್ಲ. ಪ್ರತೀಯಮಾನವಾಗಿದ್ದಾಗ ಅದರಲ್ಲಿ ಸೌಂದರ್ಯಾತಿಶಯ ಉಂಟಾಗುತ್ತದೆ. ಯಾವುದು ಪ್ರತೀಯಮಾನವೋ ಅದು ಧ್ವನಿ. ಹೀಗಿರುವಾಗ ಕವಿಗೆ (ಅಥವಾ ವಾಚ್ಯಾರ್ಥಕ್ಕೆ) ತತ್ಪರತ್ವ ಇಲ್ಲವೆನ್ನುವ ಕಾರಣವೇ ಸಿದ್ಧವಾಗದು. ಆ ಕಾರಣದಿಂದ ಅದು ಧ್ವನಿಯಲ್ಲ ಎಂದು ಹೇಳುವುದಂತೂ ದೂರಾಪಾಸ್ತ ಎಂದು ಮಹಿಮಭಟ್ಟನ ಅಂಬೋಣ.

**ಅಥ ಅರ್ಥಪ್ರತೀತ್ಯನ್ಯಥಾನುಪಪತ್ತ್ಯೈವ ತತ್ಸದ್ಭಾವಾವಗಮಃ,**
**ಅರ್ಥಶಬ್ದಯೋರುಪಸರ್ಜನೀಕೃತಸ್ವಾರ್ಥತ್ವಾಭಿಧಾನಸಾಮರ್ಥ್ಯಾಚ್ಚ**
**ತದುಪಸರ್ಜನೀಭಾವಾವಗತಿಃ, ತಸ್ಯಾಃ ಪ್ರಾಧಾನ್ಯೇ ನ ತಯೋರುಪಸರ್ಜನೀಭಾವ**
**ಇತಿ ವ್ಯರ್ಥಸ್ತದುಪಾದಾನಪ್ರಸಂಗ ಇತಿ ।**

**ಅನುವಾದ:**

ಅರ್ಥಪ್ರತೀತಿಯನ್ನು (ಅಭಿಧೆಯನ್ನು) ಒಪ್ಪಿಕೊಳ್ಳದಿದ್ದರೆ ಸಿದ್ಧಿಸುವುದಿಲ್ಲ ಎಂಬುದರಿಂದಲೇ ಅಭಿಧೆಯನ್ನು ತಿಳಿದುಕೊಳ್ಳಲು ಆಗುತ್ತದೆ, ಅರ್ಥಕ್ಕೂ ಶಬ್ದಕ್ಕೂ ಉಪಸರ್ಜನೀಕೃತಸ್ವಾರ್ಥತ್ವವನ್ನು ಹೇಳಿರುವುದರಿಂದ ಅದರ ಸಾಮರ್ಥ್ಯದಿಂದಲೇ ಅಭಿಧೆಯ ಉಪಸರ್ಜನತ್ವವನ್ನು ತಿಳಿದುಕೊಳ್ಳಬಹುದು, ಏಕೆಂದರೆ ಅಭಿಧೆಗೆ ಪ್ರಾಧಾನ್ಯವಿರುವುದಾದರೆ ಶಬ್ದಾರ್ಥಗಳಿಗೆ ಉಪಸರ್ಜನತ್ವವೇ ಇರುವುದಿಲ್ಲ. ಈ ಕಾರಣದಿಂದ (ಧ್ವನಿಲಕ್ಷಣದಲ್ಲಿ) ಅಭಿಧೆಯನ್ನೂ ನಮೂದಿಸುವುದು ವ್ಯರ್ಥ ಎಂದು (ನೀವು ಹೇಳಿದರೆ, ಉತ್ತರವನ್ನು ಕೊಡುತ್ತೇವೆ).

**ವಿವರಣೆ:**

ಶಬ್ದವನ್ನು ಕೇಳಿದಾಗ ಶ್ರೋತೃವಿಗೆ ಅರ್ಥಾವಗತಿ (=ಅರ್ಥಜ್ಞಾನ) ಉಂಟಾಗುವುದಕ್ಕೆ ಕಾರಣ ಅಭಿಧೆ. ಅದಿಲ್ಲದಿದ್ದರೆ ಲೋಕದಲ್ಲಿ ಯಾರಿಗೂ ಯಾವ ಶಬ್ದದಿಂದಲೂ ಅರ್ಥಪ್ರತೀತಿ ಆಗುತ್ತಿರಲಿಲ. ಆದ್ದರಿಂದ ಧ್ವನಿಲಕ್ಷಣದಲ್ಲಿ ಶಬ್ದ ಮತ್ತು ಅರ್ಥಗಳನ್ನು ಹೇಳಿರುವುದರಿಂದ ಅಭಿಧೆಯನ್ನೂ ಹೇಳಿದ ಹಾಗಾಯಿತು. ಅವುಗಳಿಗೆ ಉಪಸರ್ಜನೀಭಾವವನ್ನು ಹೇಳಿರುವುದರಿಂದ ಅಭಿಧೆಗೂ ಅದನ್ನು ಹೇಳಿದಂತಾಯಿತು. ಆದ್ದರಿಂದ ಪೃಥಕ್ಕಾಗಿ ಅಭಿಧೆಯನ್ನು ಧ್ವನಿಲಕ್ಷಣದಲ್ಲಿ ಹೇಳಬೇಕಾಗಿಲ್ಲ ಎಂದು ಧ್ವನಿವಾದಿಗಳು ಹೇಳಿದರೆ ಅದಕ್ಕೆ ಉತ್ತರವನ್ನು ಕೊಡುತ್ತಾನೆ:

**ಏವಂ ತರ್ಹಿ ಅರ್ಥಸ್ಯೈವ ಉಪಸರ್ಜನೀಭಾವೋಽಭಿಧೇಯೋ ನ ಶಬ್ದಸ್ಯ । ತಸ್ಯಾಭಿಧಾಯಾ ಇವ ತದುಪಸರ್ಜನೀಭಾವಾಭಿಧಾನಸಾಮರ್ಥ್ಯಾದೇವ ತದವಗತಿಸಿದ್ಧೇರಿತಿ ಲಕ್ಷಣವಾಕ್ಯೇ ವ್ಯರ್ಥಂ ಶಬ್ದಗ್ರಹಣಮ್ । ಅನ್ಯಥಾ ಅಭಿಧಾಗ್ರಹಣಮಪಿ ಕರ್ತವ್ಯಂ ಪ್ರಸಜ್ಯೇತ, ವಿಶೇಷಾಭಾವಾತ್ । ನ ಚಾಸ್ಯ ಸ್ವಾರ್ಥಾಭಿಧಾನಮಾತ್ರಪರ್ಯವಸಿತಸಾಮರ್ಥ್ಯಸ್ಯ ವ್ಯಾಪಾರಾಂತರಮುಪಪದ್ಯತೇ, ಯೇನಾಯಮರ್ಥಾಂತರಮ್ ಅವಗಮಯೇತ್, ತದಪೇಕ್ಷಂ ಚೋಪಸರ್ಜನೀಕೃತತ್ವಮಿಯಾತ್ । ಅರ್ಥಸ್ಯೈವ ತದುಪಪತ್ತಿಸಮರ್ಥನಾತ್ ।**

**ಅನುವಾದ:**

ಹಾಗಿದ್ದ ಪಕ್ಷದಲ್ಲಿ ಅರ್ಥಕ್ಕೆ ಉಪಸರ್ಜನತ್ವವನ್ನು ಹೇಳಬೇಕು, ಶಬ್ದಕ್ಕೆ ಹೇಳಬಾರದು. ಅಭಿಧೆಗೆ ಹೇಗೋ ಹಾಗೆ ಶಬ್ದಕ್ಕೂ, ಅರ್ಥದ ಉಪಸರ್ಜನತ್ವ–ಕಥನದಿಂದಲೇ ಸಾಮರ್ಥ್ಯದಿಂದ ಉಪಸರ್ಜನತ್ವವು ಸಿದ್ಧವಾಗುತ್ತದೆ. ಆದ್ದರಿಂದ (ಧ್ವನಿಯ) ಲಕ್ಷಣವಾಕ್ಯದಲ್ಲಿ 'ಶಬ್ದ'ವನ್ನು ಸೇರಿಸಿರುವುದು ವ್ಯರ್ಥ. ಅದನ್ನು ಸೇರಿಸಿದರೆ, ಅಭಿಧೆಯನ್ನು ಸೇರಿಸಬೇಕಾಗುತ್ತದೆ, ಏಕೆಂದರೆ ಅವೆರಡರಲ್ಲಿ ವಿಶೇಷ ಏನೂ ಇಲ್ಲ (ಎರಡೂ ಸಮಾನ). ಶಬ್ದದ ಸಾಮರ್ಥ್ಯ ತನ್ನ ವಾಚ್ಯಾರ್ಥವನ್ನು ಹೇಳುವಷ್ಟರಲ್ಲಿ ಮುಗಿದುಹೋಗುವುದರಿಂದ ಅದಕ್ಕೆ ಬೇರೆ ಯಾವ ವ್ಯಾಪಾರವೂ ಹೊಂದುವುದಿಲ್ಲ. (ಹಾಗಿದ್ದಿದ್ದರೆ) ಆ ಇನ್ನೊಂದು ವ್ಯಾಪಾರದಿಂದ ಬೇರೊಂದು ಅರ್ಥವನ್ನು ಶಬ್ದವು ತಿಳಿಸಬಹುದಾಗಿತ್ತೇನೋ. ಆ ಅರ್ಥಾಂತರದ ದೃಷ್ಟಿಯಿಂದ ತನ್ನ ವಾಚ್ಯಾರ್ಥವನ್ನು ಉಪಸರ್ಜನವನ್ನಾಗಿ ಮಾಡಬಹುದಾಗಿತ್ತೇನೋ. (ವಸ್ತುತಃ) ಆ ಕಾರ್ಯವೆಲ್ಲ ಅರ್ಥಕ್ಕೆ ಮಾತ್ರ ಹೊಂದುವುದು ಎಂದು ಸಮರ್ಥಿಸುತ್ತೇವೆ.

**ವಿವರಣೆ:**

ಶಬ್ದಾರ್ಥಗಳನ್ನು ಹೇಳಿದರೆ ಅನ್ಯಥಾನುಪಪತ್ತಿಯಿಂದಲೇ ಅಭಿಧೆಯನ್ನೂ ಹೇಳಿದಂತಾಯಿತು ಎನ್ನುವುದಾದರೆ, ಅದೇ ನ್ಯಾಯದಿಂದ ಅರ್ಥವನ್ನು ಹೇಳಿದರೆ ಸಾಕು, ಅರ್ಥವು ತಿಳಿಯಲ್ಪಡಬೇಕಾದರೆ ಶಬ್ದ ಇದ್ದೇ ಇರಬೇಕಲ್ಲವೆ? ಧ್ವನಿಯ ಲಕ್ಷಣದಲ್ಲಿ ಅರ್ಥವು ತನ್ನನ್ನು ಉಪಸರ್ಜನವನ್ನಾಗಿ ಮಾಡಿಕೊಂಡು ಹೃದಯಂಗಮವಾದ ಇನ್ನೊಂದು ಅರ್ಥವನ್ನು ಎಲ್ಲಿ ವ್ಯಂಜಿಸುವುದೋ ಆ ಕಾವ್ಯ ಧ್ವನಿ ಎಂದು ಹೇಳಿದರೆ ಸಾಕಲ್ಲವೆ?

ಯತ್ರೋಭಯೋಃ ಸಮೋ ದೋಷಃ ಪರಿಹಾರೋಽಪಿ ವಾ ಸಮಃ ।
ನೈಕಃ ಪರ್ಯನುಯೋಕ್ತವ್ಯಃ ಏಕಸ್ಮಿನ್ ಕಾರ್ಯಸಾಧನೇ ॥

ಎಂಬ ನಿಯಮಕ್ಕೆ ಅನುಸಾರವಾಗಿ ಶಬ್ದ, ಅರ್ಥ, ಅಭಿಧಾ ಎಂಬ ಮೂರನ್ನೂ ಹೇಳಬೇಕು, ಅಥವಾ ಕೇವಲ ಅರ್ಥವನ್ನು ಹೇಳಬೇಕು ಎಂದು ಮಹಿಮಭಟ್ಟ ಹೇಳುತ್ತಾನೆ. ಶಬ್ದಕ್ಕೆ ಅಭಿಧಾ ಎಂಬುದು ಒಂದೇ ವ್ಯಾಪಾರ ಎಂದು ಅವನು ಮತ್ತೆ ಮತ್ತೆ ಹೇಳುತ್ತಾನೆ. ಲಕ್ಷಣಾ ಎಂಬುದು ಅರ್ಥದ ವ್ಯಾಪಾರ. ವ್ಯಂಜನಾ ಎಂಬುದು ಅನುಮಾನ, ಅದು ಮನೋಬುದ್ಧಿಗಳ ವ್ಯಾಪಾರ. ಇದನ್ನೆಲ್ಲ ಶಬ್ದದ ವ್ಯಾಪಾರ, ವೃತ್ತಿ ಎಂದು ಹೇಳುವುದು ಬೇಡ ಎಂದು ಮಹಿಮಭಟ್ಟನ ವಿಚಾರಮಾರ್ಗ.

ಸರ್ವ ಏವ ಹಿ ಶಾಬ್ದೋ ವ್ಯವಹಾರಃ ಸಾಧ್ಯಸಾಧನಭಾವಗರ್ಭತಯಾ
ಪ್ರಾಯೇಣಾನುಮಾನರೂಪೋऽಭ್ಯುಪಗಂತವ್ಯಃ, ತಸ್ಯ ಪರಪ್ರವೃತ್ತಿನಿವೃತ್ತಿ–
ನಿಬಂಧನತ್ವಾತ್, ತಯೋಶ್ಚ ಸಂಪ್ರತ್ಯಯಾಸಂಪ್ರತ್ಯಯಾತ್ಮನೋಃ
ಅನ್ಯಥಾ ಕರ್ತುಮಶಕ್ಯತ್ವತಃ । ನ ಹಿ ಯುಕ್ತಿಮನವಗಚ್ಛನ್
ಕಶ್ಚಿದ್ ವಿಪಶ್ಚಿದ್ ವಚನಮಾತ್ರಾತ್ ಸಂಪ್ರತ್ಯಯಭಾಗ್‌ಭವತಿ ।
ದ್ವಿವಿಧೋ ಹಿ ಶಬ್ದಃ ಪದವಾಕ್ಯಭೇದಾತ್ ತತ್ರ ಪದಮನೇಕಪ್ರಕಾರಂ
ನಾಮಾಖ್ಯಾತೋಪಸರ್ಗನಿಪಾತಕರ್ಮಪ್ರವಚನೀಯಭೇದಾತ್ ।

**ಅನುವಾದ:**

ಎಲ್ಲ ಶಾಬ್ದವ್ಯವಹಾರವೂ ಸಾಧ್ಯ–ಸಾಧನಭಾವವನ್ನು ಒಳಗೊಂಡೇ ಇರುವುದರಿಂದ ಪ್ರಾಯಶಃ (ಬಹುಮಟ್ಟಿಗೆ) ಅನುಮಾನರೂಪವಾಗಿಯೇ ಇರುತ್ತದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ, ಏಕೆಂದರೆ ಶಾಬ್ದವ್ಯವಹಾರವನ್ನು ಮಾಡುವುದು ಇತರರ ಪ್ರವೃತ್ತಿ–ನಿವೃತ್ತಿಗಳನ್ನು ಉಂಟುಮಾಡುವುದಕ್ಕಾಗಿ. ಆ ಪ್ರವೃತ್ತಿನಿವೃತ್ತಿಗಳು ಸಂಪ್ರತ್ಯಯ–ಅಸಂಪ್ರತ್ಯಯಗಳ ರೂಪದಲ್ಲಿದ್ದು ಅವುಗಳನ್ನು ಶಾಬ್ದವ್ಯವಹಾರವಿಲ್ಲದೆ ಹುಟ್ಟಿಸುವುದು ಅಶಕ್ಯವಾಗಿದೆ. ಯಾವ ಜಾಣನೂ ಯುಕ್ತಿಯನ್ನು ತಿಳಿಯದೆ ಕೇವಲ ಮಾತಿನಿಂದ (ಅದರ ಸತ್ಯತ್ವದಲ್ಲಿ) ನಂಬಿಕೆಯುಳ್ಳವನಾಗುವುದಿಲ್ಲ.

ಶಬ್ದವು ಪದ, ವಾಕ್ಯ ಎಂದು ಎರಡುವಿಧ. ಅವುಗಳಲ್ಲಿ ಪದವು ನಾಮ, ಆಖ್ಯಾತ, ಉಪಸರ್ಗ, ನಿಪಾತ, ಕರ್ಮಪ್ರವಚನೀಯ ಎಂಬ ಭೇದದಿಂದ ಅನೇಕ ಪ್ರಕಾರವಾಗಿದೆ.

**ವಿವರಣೆ:**

ಮನುಷ್ಯನಲ್ಲಿ ಪ್ರವೃತ್ತಿ–ನಿವೃತ್ತಿಗಳು ಇಷ್ಟಾನಿಷ್ಟಗಳಿಗೆ ಅನುಸಾರವಾಗಿ ನಡೆಯುತ್ತವೆ. ಇತರರಲ್ಲಿ ಪ್ರವೃತ್ತಿಯನ್ನೋ ನಿವೃತ್ತಿಯನ್ನೋ ಉಂಟುಮಾಡಲು ಶಬ್ದವನ್ನು ಪ್ರಯೋಗಿಸಬೇಕಾಗುವುದು. ಶಾಬ್ದವ್ಯವಹಾರ ಅನುಮಾನರೂಪವಾಗಿರುತ್ತದೆ. ಕೇವಲ ಶಬ್ದವನ್ನು ಕೇಳಿದ ಶ್ರೋತೃವಿನಲ್ಲಿ ಪ್ರವೃತ್ತಿ ಉಂಟಾಗದು. ಅವನಲ್ಲಿ ಸಂಪ್ರತ್ಯಯ ಹುಟ್ಟಿದರೆ ಮಾತ್ರ ಪ್ರವೃತ್ತಿ. ಅದಕ್ಕೆ ಕಾರಣ ಯುಕ್ತಿ (Reason). ಅದರ ಮೂಲ ಅನುಮಾನ ಎಂಬ ಬೌದ್ಧಿಕ ಪ್ರಕ್ರಿಯೆ.

ಶಬ್ದ ಅಥವಾ ಮಾತು ಪದ ಮತ್ತು ವಾಕ್ಯ ಎಂದು ವಿಂಗಡಿಸಲ್ಪಟ್ಟಿದೆ. ಪದವು (ಸಂಸ್ಕೃತಭಾಷೆಯಲ್ಲಿ) ನಾಮ, ಆಖ್ಯಾತ (ಕ್ರಿಯಾಪದ), ಉಪಸರ್ಗ, ನಿಪಾತ, ಕರ್ಮಪ್ರವಚನೀಯ ಇತ್ಯಾದಿ ಭೇದಗಳನ್ನು ಹೊಂದಿದೆ. ಎಲ್ಲ ಭಾಷೆಗಳಲ್ಲಿ ಈ ಭೇದಗಳೇ ಇರಬೇಕಾಗಿಲ್ಲ. ಪಾಣಿನಿವ್ಯಾಕರಣದಲ್ಲಿ ಸಂಸ್ಕೃತಭಾಷೆಯ ವಿಶ್ಲೇಷಣೆಯಲ್ಲಿ ಈ ಪಾರಿಭಾಷಿಕಪದಗಳನ್ನು ಬಳಸಲಾಗಿದೆ. ನಾಮಪದಗಳೂ ಕ್ರಿಯಾಪದಗಳೂ ಎಲ್ಲ ಭಾಷೆಗಳಲ್ಲಿರುತ್ತವೆ.

ಸಂಪ್ರತ್ಯಯ–ಅಸಂಪ್ರತ್ಯಯ ಎಂಬ ಪದಗಳನ್ನು ಗ್ರಂಥಕಾರನು ಉಪಯೋಗಿಸಿದ್ದಾನೆ. ಅವುಗಳ ನಿಷ್ಕೃಷ್ಟ ಅರ್ಥವೇನೆಂಬುದು ಸ್ಪಷ್ಟವಾಗಿಲ್ಲ. ಸಂಪ್ರತ್ಯಯ ಎಂದರೆ ಇಷ್ಟಸಾಧನತ್ವನಿಶ್ಚಯ ಇರಬಹುದು.

ಅದು ಇದ್ದಾಗ ಪ್ರವೃತ್ತಿ ಉಂಟಾಗುತ್ತದೆ. ಅನಿಷ್ಟಸಾಧನತ್ವನಿಶ್ಚಯ ಇದ್ದರೆ ನಿವೃತ್ತಿ ಉಂಟಾಗುವುದರಿಂದ ಅಸಂಪ್ರತ್ಯಯ ಎಂಬ ಪದಕ್ಕೆ ಆ ಅರ್ಥ ಇದ್ದೀತು. ಪ್ರತ್ಯಯ ಎಂದರೆ ನಂಬಿಕೆ ಎಂಬ ಅರ್ಥವೂ ಇದೆ.

(ನಾಮಪದಗಳು ಬಹುವಿಧ)

**ತತ್ರ ಸತ್ತ್ವಪ್ರಧಾನಾನಿ ನಾಮಾನಿ । ತಾನ್ಯಪಿ ಬಹುಪ್ರಕಾರಾಣಿ ಸಂಭವಂತಿ ।**
**ಜಾತಿಗುಣಕ್ರಿಯಾದ್ರವ್ಯಾಣಾಂ ತತ್‌ಪ್ರವೃತ್ತಿನಿಮಿತ್ತಾನಾಂ ಬಹುತ್ವಾತ್ ।**
**ತದ್ಯಥಾ ಘಟಃ ಪಟಃ ಇತಿ ಜಾತಿ ಶಬ್ದಃ । ಶುಕ್ಲೋ ನೀಲ ಇತಿ ಗುಣಶಬ್ದಃ ।**
**ಪಾಚಕಃ ಪಾಠಕ ಇತಿ ಕ್ರಿಯಾಶಬ್ದಃ । ದಂಡೀ ವಿಷಾಣೀತಿ ದ್ರವ್ಯಶಬ್ದಃ ।**

**ಅನುವಾದ:**

ಅವುಗಳಲ್ಲಿ ಸತ್ತ್ವಪ್ರಧಾನವಾದ ಪದಗಳು ನಾಮಗಳು. ಅವು ನಾನಾ ಪ್ರಕಾರವಾಗಿರುತ್ತವೆ. ಏಕೆಂದರೆ ಅವುಗಳ ಪ್ರವೃತ್ತಿನಿಮಿತ್ತಗಳು ಜಾತಿ, ಗುಣ, ಕ್ರಿಯಾ, ದ್ರವ್ಯ ಎಂದು ನಾನಾ ವಿಧವಾಗಿರುತ್ತವೆ. ಉದಾಹರಣೆಗೆ– ಘಟ (ಮಡಕೆ), ಪಟ (ಬಟ್ಟೆ) ಇತ್ಯಾದಿಗಳು ಜಾತಿಶಬ್ದಗಳು. ಬಿಳಿಯದು, ಕರಿಯದು ಇತ್ಯಾದಿಗಳು ಗುಣಶಬ್ದಗಳು. ಪಾಚಕ (ಅಡುಗೆಯವನು), ಪಾಠಕ (ಬೋಧಿಸುವವನು ಅಥವಾ ಓದುವವನು) ಇತ್ಯಾದಿಗಳು ಕ್ರಿಯಾಶಬ್ದಗಳು. ದಂಡಿ (ಕೋಲು ಹಿಡಿದುಕೊಂಡಿರುವವನು), ವಿಷಾಣಿ (ಕೊಂಬು ಇರುವ ಪ್ರಾಣಿ) ಇತ್ಯಾದಿಗಳು ದ್ರವ್ಯಶಬ್ದಗಳು.

**ವಿವರಣೆ:**

ನಾಮಪದಗಳ ವರ್ಗೀಕರಣದಲ್ಲಿ ಪ್ರವೃತ್ತಿನಿಮಿತ್ತವು ಮುಖ್ಯಪಾತ್ರವನ್ನು ವಹಿಸುತ್ತದೆ. ಶಬ್ದಕ್ಕೆ ಪ್ರವೃತ್ತಿನಿಮಿತ್ತ ಮತ್ತು ವ್ಯುತ್ಪತ್ತಿನಿಮಿತ್ತಗಳು ಇರುತ್ತವೆ. ಗೌ: ಎಂಬ ಪದಕ್ಕೆ ಗಚ್ಛತೀತಿ ಗೌ: ಎಂದು ವ್ಯುತ್ಪತ್ತಿಯನ್ನು ಹೇಳುತ್ತೇವೆ. 'ಗಮೇರ್ಡೋಸ್' ಎಂಬ ಸೂತ್ರದಿಂದ ಗೋಶಬ್ದವು ಗಮ್ ಧಾತುವಿಗೆ ಡೋಸ್ ಪ್ರತ್ಯಯವು ಸೇರುವುದರಿಂದ ಹುಟ್ಟಿದೆ. ಆದರೆ ಇದು ವ್ಯುತ್ಪತ್ತಿನಿಮಿತ್ತ ಮಾತ್ರ. ಪ್ರವೃತ್ತಿನಿಮಿತ್ತವು ಗೋತ್ವ ಎಂಬ ಜಾತಿ. ಆದ್ದರಿಂದ ಹೋಗುತ್ತಿರುವ ಎಲ್ಲ ಪ್ರಾಣಿಗಳೂ ಗೋವುಗಳಲ್ಲ. ಹೋಗದೆ (ಚಲಿಸದೆ) ಮಲಗಿದ್ದಾಗಲೂ ಗೋವು ಗೋವೇ.

ಪ್ರವೃತ್ತಿನಿಮಿತ್ತವು ಜಾತಿ–ಗುಣ–ಕ್ರಿಯಾ–ದ್ರವ್ಯ ಎಂದು ನಾಲ್ಕು ವಿಧಗಳೆಂದು ಮಹಿಮಭಟ್ಟನು ಹೇಳಿದ್ದಾನೆ. ಇಂಗ್ಲಿಷಿನಲ್ಲಿ common noun ಎಂದು ಹೇಳಲ್ಪಡುವ ಪದಗಳ ಪ್ರವೃತ್ತಿನಿಮಿತ್ತ ಜಾತಿ, ಬಣ್ಣ, ಆಕಾರ, ತೂಕ ಇತ್ಯಾದಿ ಗುಣಗಳನ್ನು ಹೇಳುವ ಶಬ್ದಗಳಿಗೆ (ಗುಣವಾಚಕಗಳಿಗೆ) ಪ್ರವೃತ್ತಿನಿಮಿತ್ತ ಗುಣ, ನೀಲಃ, ಪೀತಃ, ಶುಕ್ಲಃ, ಸ್ಥೂಲಃ, ಸೂಕ್ಷ್ಮಃ ಇತ್ಯಾದಿಗಳೆಲ್ಲ ಗುಣವನ್ನೇ ಪ್ರವೃತ್ತಿನಿಮಿತ್ತವನ್ನು ಮಾಡಿಕೊಂಡಿರುವ ಶಬ್ದಗಳು. ಕ್ರಿಯೆಯ ಆಧಾರದಿಂದ ಬಳಸಲಾಗುವ ಪಾಚಕ, ಪಾಠಕ, ವಾಚಕ, ಗಾಯಕ ಇತ್ಯಾದಿಗಳ ಪ್ರವೃತ್ತಿನಿಮಿತ್ತ ಕ್ರಿಯೆ. ಒಂದು ದ್ರವ್ಯ ಅಥವಾ ವಸ್ತು ಶಬ್ದಪ್ರಯೋಗಕ್ಕೆ ನಿಮಿತ್ತವಾದರೆ, ಆ ಶಬ್ದದ ಪ್ರವೃತ್ತಿನಿಮಿತ್ತ ದ್ರವ್ಯ. ದಂಡಃ ಅಸ್ಯಾಸ್ತೀತಿ ದಂಡೀ, ವಿಷಾಣೌ ಅಸ್ಯ ಸ್ತಃ ಇತಿ ವಿಷಾಣೀ, ಧನಮಸ್ಯಾಸ್ತೀತಿ ಧನಿಕಃ ಇತ್ಯಾದಿಗಳಲ್ಲಿ ದಂಡ ಮುಂತಾದ ದ್ರವ್ಯಗಳೇ ಪ್ರವೃತ್ತಿನಿಮಿತ್ತಗಳು. ದಂಡವನ್ನು ಹಿಡಿದಿದ್ದರೆ ಅವನು ದಂಡೀ. ಅದನ್ನು ಬಿಟ್ಟರೆ ದಂಡೀ ಎಂದು ಅವನನ್ನು ಕರೆಯಲಾಗದು.

ಮಹಾಭಾಷ್ಯಕಾರರು ಗೌಃ ಶುಕ್ಲಶ್ಚಲೋ ಡಿತ್ಥ ಇತಿ ಚತುಷ್ಟಯೀ ಶಬ್ದಾನಾಂ ಪ್ರವೃತ್ತಿಃ ಎಂದು ಹೇಳಿದ್ದಾರೆ. ತನ್ಮತಾನುಸಾರವಾಗಿ ಜಾತಿ, ಗುಣ, ಕ್ರಿಯಾ ಮತ್ತು ಯದೃಚ್ಛಾ ಎಂಬವು ಪ್ರವೃತ್ತಿನಿಮಿತ್ತಗಳು. ಅಂಕಿತನಾಮಗಳಿಗೆ (proper noun) ಯದೃಚ್ಛಾ ಪ್ರವೃತ್ತಿನಿಮಿತ್ತ.

(ಎಲ್ಲ ಶಬ್ದಗಳಿಗೆ ಕ್ರಿಯೆಯೇ ಪ್ರವೃತ್ತಿನಿಮಿತ್ತ)

**ಕೇಚಿತ್ ಪುನರೇಷಾಂ ಕ್ರಿಯೈವೈಕಾ ಪ್ರವೃತ್ತಿನಿಮಿತ್ತಮ್**
**ಇತಿ ಕ್ರಿಯಾಶಬ್ದತ್ವಮೇವ ಸರ್ವೇಷಾಂ ನಾಮಪದಾನಾಮುಪಗಚ್ಛಂತಿ ।**
**ತಥಾ ಹಿ । ಘಟಾದಿಶಬ್ದಾಃ ಸ್ವಾರ್ಥೇ**
**ಪ್ರವರ್ತಮಾನಾ ಘಟನಾದಿಕ್ರಿಯಾಮೇವ ಅನ್ವಯವ್ಯತಿರೇಕಾಭ್ಯಾಂ**
**ಪ್ರವೃತ್ತಿನಿಮಿತ್ತಭಾವೇನ ಅವಲಂಬಮಾನಾ ದೃಶ್ಯಂತೇ ।**
**ನ ಘಟತ್ವಾದಿಸಾಮಾನ್ಯಮ್ । ಸಾ ಚೈಷಾ ಘಟನಾದಿಕ್ರಿಯಾ ಘಟತ್ವ –**
**ಸಾಮಾನ್ಯಯೋಗಾದ್ ಅನ್ಯಥಾ ವಾಸ್ತು ।**
**ನೈತಾವತಾ ತಸ್ಯಾಃ ಪ್ರವೃತ್ತಿನಿಮಿತ್ತತ್ವವ್ಯಾಘಾತಃ ।**

**ಅನುವಾದ:**

ಆದರೆ ಕೆಲವರು ಎಲ್ಲ ಪದಗಳಿಗೂ ಕ್ರಿಯಾ ಎಂಬುದು ಒಂದೇ ಪ್ರವೃತ್ತಿನಿಮಿತ್ತವೆಂದು ಹೇಳಿ ಎಲ್ಲ ನಾಮಪದಗಳೂ ಕ್ರಿಯಾಶಬ್ದಗಳೇ ಎಂದು ಅಭಿಪ್ರಾಯಪಡುತ್ತಾರೆ. ಅದು ಹೇಗೆಂದರೆ – ಘಟ ಮುಂತಾದ ಶಬ್ದಗಳು ತಮ್ಮ ಅರ್ಥಗಳಲ್ಲಿ ಪ್ರವರ್ತಿಸುವಾಗ ಅನ್ವಯ–ವ್ಯತಿರೇಕಗಳಿಂದ ಘಟನ ಮುಂತಾದ ಕ್ರಿಯೆಯನ್ನೇ ತಮ್ಮ ಪ್ರವೃತ್ತಿನಿಮಿತ್ತವನ್ನಾಗಿ ಅವಲಂಬಿಸುತ್ತವೆ. ಘಟತ್ವ ಮುಂತಾದ ಜಾತಿಯನ್ನು ಅವು ಅವಲಂಬಿಸುವುದಿಲ್ಲ. ಆ ರೀತಿಯಾಗಿ (ಪ್ರವೃತ್ತಿನಿಮಿತ್ತವಾಗುವ) ಘಟನಾ ಮುಂತಾದ ಕ್ರಿಯೆಯು ಘಟತ್ವ ಮುಂತಾದ ಜಾತಿಯ ಸಂಬಂಧದಿಂದ, ಅಥವಾ ಬೇರೆಯ ಪ್ರಕಾರದಲ್ಲಿರಲಿ. ಇಷ್ಟು ಮಾತ್ರದಿಂದ ಆ ಕ್ರಿಯೆಗೆ ಪ್ರವೃತ್ತಿನಿಮಿತ್ತತ್ವವೇನೂ ಹಾಳಾಗದು.

**ವಿವರಣೆ:**

ಪ್ರವೃತ್ತಿನಿಮಿತ್ತವು ಒಂದೋ ನಾಲ್ಕೋ ಎಂಬ ಬಗೆಗೆ ವಿವಾದವಿದೆ. ಮಮ್ಮಟನು ಕಾವ್ಯಪ್ರಕಾಶದಲ್ಲಿ "ಜಾತ್ಯಾದಿರ್ಜಾತಿರೇವ ವಾ" ಎನ್ನುತ್ತಾನೆ. ಜಾತಿ–ಗುಣ–ಕ್ರಿಯಾ–ಯದೃಚ್ಛಾ ಎಂಬ ನಾಲ್ಕೂ ಪ್ರವೃತ್ತಿನಿಮಿತ್ತವಾಗಬಹುದು, ಅಥವಾ ಜಾತಿಯೊಂದೇ ಪ್ರವೃತ್ತಿನಿಮಿತ್ತ ಎಂದು ಅವನ ಮತ. ಮಹಿಮಭಟ್ಟನು ಎಲ್ಲ ಶಬ್ದಗಳ ಪ್ರವೃತ್ತಿನಿಮಿತ್ತ ಕ್ರಿಯೆ ಎಂಬ ಪಕ್ಷವನ್ನು ಸವಿಸ್ತರವಾಗಿ ಹೇಳಿದ್ದಾನೆ. ಕ್ರಿಯೆ (ಅಥವಾ ಧಾತ್ವರ್ಥ) ಎಲ್ಲ ಶಬ್ದಗಳ ವ್ಯುತ್ಪತ್ತಿನಿಮಿತ್ತ ಎಂಬುದು ಶಾಕಟಾಯನನ ಮತ–"ಸರ್ವಂ ಶಬ್ದಂ ಧಾತುಜಮಾಹ ಶಾಕಟಾಯನಃ ।" ಪ್ರವೃತ್ತಿನಿಮಿತ್ತವೂ ಕ್ರಿಯೆಯೇ ಎಂಬ ಮತವನ್ನು ಮಹಿಮಭಟ್ಟ ಇಲ್ಲಿ ಪ್ರತಿಪಾದಿಸಿದ್ದಾನೆ. ಒಂದು ವಸ್ತು ಇದ್ದಾಗ ಇನ್ನೊಂದೂ ಇರುತ್ತದೆ ಎಂಬುದು ಅನ್ವಯ. ಹೊಗೆ ಇದ್ದಲ್ಲಿ ಬೆಂಕಿಯೂ ಇರುತ್ತದೆ ಎಂಬುದು ಅನ್ವಯವ್ಯಾಪ್ತಿ. ಬೆಂಕಿ ಇಲ್ಲದಿದ್ದರೆ ಹೊಗೆ ಇರುವುದೇ ಇಲ್ಲ ಎಂಬ ಅಭಾವಗಳ ವ್ಯಾಪ್ತಿ ವ್ಯತಿರೇಕವ್ಯಾಪ್ತಿ. ಅನ್ವಯವ್ಯತಿರೇಕಗಳೆರಡರಿಂದಲೂ

ಕ್ರಿಯೆಯೇ ಎಲ್ಲ ಶಬ್ದಗಳ ಪ್ರವೃತ್ತಿನಿಮಿತ್ತ ಎಂದು ಸಿದ್ಧವಾಗುತ್ತದೆ ಎಂಬುದು ಇಲ್ಲಿನ ಮಾತುಗಳ ತಿರುಳು. ಘಟತ್ವ ಮುಂತಾದ ಸಾಮಾನ್ಯವನ್ನು ಆಶ್ರಯಿಸಿ ಘಟ ಮುಂತಾದ ಶಬ್ದಗಳನ್ನು ಜನರು ಪ್ರಯೋಗಿಸುತ್ತಿಲ್ಲ ಎನ್ನುತ್ತಾರೆ ಈ ಪಕ್ಷದವರು. ಸಾಮಾನ್ಯ=ಜಾತಿ. ಅನೇಕ ದಾರ್ಶನಿಕರು ಸಾಮಾನ್ಯ ಅಥವಾ ಜಾತಿ ಎಂಬ ಪದಾರ್ಥವೇ ಇಲ್ಲ ಎಂದು ಅದರ ಅಸ್ತಿತ್ವವನ್ನೇ ನಿರಾಕರಿಸಿದ್ದಾರೆ ಎಂಬುದನ್ನು ಮರೆಯಬಾರದು. ಸಾಮಾನ್ಯ ಎಂಬ ಪದಾರ್ಥ ಇದ್ದರೂ ಅದು ಕ್ರಿಯೆಯೇ ಎಲ್ಲ ಶಬ್ದಗಳ ಪ್ರವೃತ್ತಿನಿಮಿತ್ತ ಎಂಬುದಕ್ಕೆ ಬಾಧಕವಲ್ಲ ಎಂದು ಈ ಪಕ್ಷದವರ ಅನಿಸಿಕೆ.

**ನ ಚ ಸತ್ಯಪಿ ಘಟತ್ವಸಾಮಾನ್ಯೇ**
**ಸ್ವಯಮ್ ಅಘಟನ್ ಘಟಾತ್ಮತಾಮ್ ಅನಾಪದ್ಯಮಾನಃ**
**ಏವಾಸೌ ಘಟವ್ಯಪದೇಶವಿಷಯೋ ಭವಿತುಮರ್ಹತಿ । ಏವಂ ಹಿ ಪಟೋಽಪಿ**
**ಘಟವ್ಯಪದೇಶವಿಷಯಃ ಸ್ಯಾತ್ ಘಟನಕ್ರಿಯಾಕರ್ತೃತ್ವಾಭಾವಾವಿಶೇಷಾತ್ ।**
**ನ ಹಿ ಶುಕ್ಲತ್ವಮನಾಪದ್ಯಮಾನ ಏವಾರ್ಥಃ ಶುಕ್ಲ ಇತಿ ವ್ಯಪದೇಷ್ಟುಂ ಶಕ್ಯತೇ,**
**ಅಪಚನ್ನೇವ ಪಾಚಕ ಇತಿ । ತಸ್ಮಾದ್ ಘಟನಕ್ರಿಯಾಕರ್ತೃತ್ವಲಕ್ಷಣಮೇವ ಘಟತ್ವಂ**
**ಘಟಶಬ್ದಸ್ಯ ಪ್ರವೃತೌ ನಿಮಿತ್ತಮವಸೇಯಮ್, ನ ಘಟತ್ವಮಾತ್ರಮ್**
**ತದೇವ ಚೇಹ ಘಟನಮಿತ್ಯುಕ್ತಮ್ ।**

**ಅನುವಾದ:**

ಘಟತ್ವ ಎಂಬ ಜಾತಿಯಿದ್ದರೂ ಸ್ವಯಂ ಘಟಿಸದೆ ಘಟಸ್ವರೂಪವನ್ನು ಪಡೆಯದೆ ಇರುವ ವಸ್ತು 'ಘಟ' ಎಂಬ ವ್ಯವಹಾರಕ್ಕೆ ವಿಷಯವಾಗಲು ಅರ್ಹವಾಗದು. ಆಗಿಬಿಟ್ಟರೆ ಪಟವೂ ಘಟ ಎಂಬ ವ್ಯವಹಾರದ ವಿಷಯವಾದೀತು, ಏಕೆಂದರೆ ಘಟನವೆಂಬ ಕ್ರಿಯೆಯ ಅಭಾವವು ಎರಡಕ್ಕೂ ಸಮಾನ. ಶುಕ್ಲತ್ವವನ್ನು ಪಡೆಯದ ವಸ್ತು ಬಿಳಿಯದು ಎಂದು ವ್ಯವಹರಿಸಲ್ಪಡಲಾರದಷ್ಟೆ. ಅಡುಗೆ ಮಾಡದವನನ್ನು ಪಾಚಕ ಎಂದು (ಕರೆಯಲಾಗದು ತಾನೇ). ಆದ್ದರಿಂದ ಘಟನ ಎಂಬ ಕ್ರಿಯೆಗೆ ಕರ್ತೃವಾಗುವುದು ಎಂಬ ಲಕ್ಷಣವನ್ನು ಹೊಂದಿರುವುದೇ ಘಟತ್ವ, ಅದೇ ಘಟಶಬ್ದದ ಪ್ರವೃತ್ತಿನಿಮಿತ್ತ ಎಂದು ತಿಳಿದುಕೊಳ್ಳಬೇಕು, ಕೇವಲ ಘಟತ್ವ ಪ್ರವೃತ್ತಿನಿಮಿತ್ತವಲ್ಲ. (ಆ ಕ್ರಿಯೆಯನ್ನೇ) ಇಲ್ಲಿ ಘಟನ ಎಂದು ಹೇಳಲಾಗಿದೆ.

**ವಿವರಣೆ:**

ಘಟತ್ವ ಮುಂತಾದ ಜಾತಿಗಳನ್ನು ಒಪ್ಪುವವರು ಅವು ನಿತ್ಯ ಎಂದು ಹೇಳುತ್ತಾರೆ. ಘಟದಲ್ಲಿ ಘಟತ್ವ ಎಂಬ ಜಾತಿ ಇದೆ, ಅದು ನಿತ್ಯ. ಘಟವನ್ನು ಒಡೆದುಹಾಕಿದರೂ ಘಟತ್ವ ಎಂಬ ಜಾತಿಗೆ ಯಾವ ಹಾನಿಯೂ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ. ಪ್ರಳಯವಾಗಿ ಜಗತ್ತಿನ ಎಲ್ಲ ಘಟಗಳೂ ನಾಶವನ್ನು ಹೊಂದಿದರೂ ಘಟತ್ವ ಮಾತ್ರ ಇದ್ದೇ ಇರುತ್ತದೆ ಎಂದು ಅವರ (ನೈಯಾಯಿಕರ) ಸಿದ್ಧಾಂತ. ಜಗತ್ತಿನಲ್ಲಿ ಯಾವ ಘಟವೂ ಹುಟ್ಟದೆ ಇದ್ದಾಗಲೂ ಘಟತ್ವ ಇತ್ತು ಎಂದು ಅವರ ನಂಬಿಕೆ. ಘಟತ್ವವೂ ಇದೆ, ಘಟವಾಗುವ ಜೇಡಿಮಣ್ಣೂ ಇದೆ. ಆಗ ಘಟ ಎಂಬ ವ್ಯವಹಾರ ಏಕೆ ಇಲ್ಲ?

ಮಹಿಮಭಟ್ಟನು ಇದಕ್ಕೆ ಹೇಳುವ ಉತ್ತರ ಏನೆಂದರೆ ಶಬ್ದದ ಪ್ರವೃತ್ತಿನಿಮಿತ್ತ ಘಟತ್ವ ಎಂಬ ಜಾತಿಯಲ್ಲ. ಘಟನಾ ಎಂಬ ಕ್ರಿಯೆಯೇ ಪ್ರವೃತ್ತಿನಿಮಿತ್ತ. ಘಟನಾ ಎಂಬ ಕ್ರಿಯೆ ನಡೆದ ಮೇಲೆ,

ಎಂದರೆ ಕ್ರಿಯೆಯಿಂದ ಘಟವು ರೂಪಗೊಂಡಾಗ "ಅಯಂ ಘಟಃ" (ಇದು ಮಡಕೆ) ಎಂಬ ಶಾಬ್ದವ್ಯವಹಾರ ಆಗುತ್ತದೆ. ಅದೇ ಪ್ರವೃತ್ತಿನಿಮಿತ್ತ. ಇದೇ ರೀತಿಯಾಗಿ ಗುಣಪ್ರವೃತ್ತಿನಿಮಿತ್ತವನ್ನುಳ್ಳ ಶಬ್ದಗಳೆಂದು ಶುಕ್ಲಾದಿಗಳನ್ನು ಬೇರೆಯವರು ಕರೆಯುತ್ತಾರೆ. ಕ್ರಿಯಾಮಾತ್ರ ಪ್ರವೃತ್ತಿನಿಮಿತ್ತತಾವಾದಿಗಳು ಅಲ್ಲೂ ಕ್ರಿಯೆಯೇ ಪ್ರವೃತ್ತಿನಿಮಿತ್ತವೆಂದು ವಾದಿಸುತ್ತಾರೆ.

**ನನು ಚೇಷ್ಟಾದ್ಯರ್ಥಾದ್ ಘಟತ್ಯಾದೇರ್ಧಾತೋಃ**
**ಅಜಾದೌ ಘಟತ ಇತ್ಯಾದ್ಯರ್ಥೇ ಘಟನಾದಿಕ್ರಿಯೈವ ಸರ್ವೇಷಾಂ**
**ಘಟಾದಿಶಬ್ದಾನಾಂ ಪ್ರವೃತ್ತಿನಿಮಿತ್ತಭಾವೇನ ಅಸ್ಮಾಭಿರಪಿ**
**ಇಷ್ಯತ ಏವೇತಿ ವ್ಯರ್ಥಃ ಪಕ್ಷಾಂತರೋಪನ್ಯಾಸಃ ।**

**ಅನುವಾದ:**

ಚೇಷ್ಟಾ ಮುಂತಾದ ಅರ್ಥಗಳನ್ನುಳ್ಳ ಘಟ್‌ಧಾತುವಿಗೆ ಅಚ್ ಪ್ರತ್ಯಯವನ್ನು ಸೇರಿಸಿದಾಗ ಘಟತೇ ಮುಂತಾದ ಅರ್ಥದಲ್ಲಿ ಘಟನಾ ಇತ್ಯಾದಿ ಕ್ರಿಯೆಯೇ ಘಟಾದಿಶಬ್ದಗಳಿಗೆ ಪ್ರವೃತ್ತಿನಿಮಿತ್ತ ಎಂದು ನಮಗೂ ಇಷ್ಟವೇ, ಆದ್ದರಿಂದ ನೀವು ಬೇರೊಂದು ಪಕ್ಷವನ್ನು ನಿರೂಪಿಸುವುದು ವ್ಯರ್ಥ.

**ವಿವರಣೆ:**

ಘಟ ಚೇಷ್ಟಾಯಾಮ್ ಎಂಬ ಧಾತುವಿಗೆ ಕರ್ತ್ರರ್ಥದಲ್ಲಿ ಅಚ್ ಎಂಬ ಪ್ರತ್ಯಯವನ್ನು ಸೇರಿಸಿದರೆ ಘಟ ಎಂಬ ಶಬ್ದವು ನಿಷ್ಪನ್ನವಾಗುತ್ತದೆ ಎಂದು ಎಲ್ಲರೂ ಒಪ್ಪಿದ್ದಾರೆ. ಘಟತೇ ಇತಿ ಘಟಃ ಎಂದು ಹೇಳಿರುವುದರಿಂದ ಘಟನಾ ಎಂಬ ಕ್ರಿಯೆ ಪ್ರವೃತ್ತಿನಿಮಿತ್ತವೆಂದು ನಾವೂ ಒಪ್ಪಿದ್ದೇವೆ. ಹೀಗಿರುವಾಗ ಯಾವುದೋ ಹೊಸ ಸಿದ್ಧಾಂತವೆಂಬಂತೆ ನೀವು ಪ್ರತಿಪಾದನೆ ಮಾಡುತ್ತಿರುವುದು ವ್ಯರ್ಥ–ಎಂಬುದು ಪೂರ್ವಪಕ್ಷ.

(ಪೂರ್ವಪಕ್ಷ ಎಂದರೆ ಮೇಲುನೋಟಕ್ಕೆ ಮಾತ್ರ ಸರಿಯೆಂದು ತೋರುವ ಅಭಿಪ್ರಾಯ. ಅದು ತಪ್ಪೆಂದು ತೋರಿಸಿ ಶಾಸ್ತ್ರಕಾರರು ಸಿದ್ಧಾಂತವನ್ನು ಮಂಡಿಸುತ್ತಾರೆ. ಮಹಿಮಭಟ್ಟನೂ ಈ ಪೂರ್ವಪಕ್ಷವನ್ನು ಖಂಡಿಸಿ ಸಿದ್ಧಾಂತವನ್ನು ಹೇಳುತ್ತಾನೆ.)

(ಪ್ರವೃತ್ತಿನಿಮಿತ್ತ ಬೇರೆ, ವ್ಯುತ್ಪತ್ತಿನಿಮಿತ್ತ ಬೇರೆ)

**ಸತ್ಯಮಿಷ್ಯತ ಏವ ಭವದ್ಭಿಃ । ಕಿಂ ತು ಸಾ**
**ಶಬ್ದಸ್ಯ ವ್ಯುತ್ಪತ್ತಿನಿಮಿತ್ತಂ, ನ ಪ್ರವೃತ್ತಿನಿಮಿತ್ತಮ್ ।**
**ಅನ್ಯದ್ಧಿ ವ್ಯುತ್ಪತ್ತಿನಿಮಿತ್ತಮ್ ಅನ್ಯಚ್ಚ ಪ್ರವೃತ್ತಿನಿಮಿತ್ತಮ್ ।**
**ಯಥೈಕೇಷಾಂ ಮತೇ ಗಮನಾದಿಕ್ರಿಯಾ ಗವಾದಿಶಬ್ದಾನಾಂ**
**ವ್ಯುತ್ಪತ್ತಿನಿಮಿತ್ತಮ್ ಏಕಾರ್ಥಸಮವಾಯಾದ್ ಗೋತ್ವಾದಿ**
**ಪ್ರವೃತ್ತಿನಿಮಿತ್ತೀಕರೋತಿ । ಅತ ಏವ ಗಚ್ಛತ್ಯಗಚ್ಛತಿ ಚ ಗವಿ**
**ಗೋಶಬ್ದಃ ಸಿದ್ಧೋ ಭವತಿ । ಏವಮಿಹಾಪಿ ಚೇಷ್ಟಾದಿಕ್ರಿಯಾ**
**ಘಟಾದಿಶಬ್ದಾನಾಂ ವ್ಯುತ್ಪತ್ತಿನಿಮಿತ್ತಮಿತಿ ಸಿದ್ಧಂ ಭವತಿ ।**

**ಅನುವಾದ:**

ನಿಮಗೂ ಅದು ಇಷ್ಟವೆಂಬುದು ಸತ್ಯವೇ, ಆದರೆ ಅದು ಶಬ್ದದ ವ್ಯುತ್ಪತ್ತಿನಿಮಿತ್ತ, ಪ್ರವೃತ್ತಿನಿಮಿತ್ತ ಅಲ್ಲ. ವ್ಯುತ್ಪತ್ತಿನಿಮಿತ್ತವೇ ಬೇರೆ, ಪ್ರವೃತ್ತಿನಿಮಿತ್ತವೇ ಬೇರೆ. ಹೇಗೆಂದರೆ ಕೆಲವರ ಅಭಿಪ್ರಾಯದಲ್ಲಿ ಗೌಃ ಮುಂತಾದ ಶಬ್ದಗಳಿಗೆ ಗಮನ ಮುಂತಾದ ಕ್ರಿಯೆಯೇ ವ್ಯುತ್ಪತ್ತಿನಿಮಿತ್ತ. ಒಂದೇ ಅರ್ಥದಲ್ಲಿ ಸಮವಾಯ ಸಂಬಂಧದಿಂದ ಇರುವ ಗೋತ್ವ ಮುಂತಾದ ಸಾಮಾನ್ಯವನ್ನು (ಜಾತಿಯನ್ನು) ಅದು ಪ್ರವೃತ್ತಿನಿಮಿತ್ತವನ್ನಾಗಿ ಮಾಡುತ್ತದೆ. ಆದ್ದರಿಂದಲೇ ಗೋವು ನಡೆಯುತ್ತಿದ್ದರೂ ನಡೆಯದಿದ್ದರೂ ಅದರ ಬಗೆಗೆ ಗೋಶಬ್ದದ ಪ್ರಯೋಗ ಆಗುತ್ತದೆಯೆಂದು ಸಿದ್ಧವಾಗುತ್ತದೆ. ಹಾಗೆ ಇಲ್ಲಿಯೂ ಚೇಷ್ಟಾ ಮುಂತಾದ ಕ್ರಿಯಾದಿಯು ಘಟ ಮುಂತಾದ ಶಬ್ದಗಳಿಗೆ ವ್ಯುತ್ಪತ್ತಿನಿಮಿತ್ತವೆಂದು ಸಿದ್ಧವಾಯಿತು.

**ವಿವರಣೆ:**

ವ್ಯುತ್ಪತ್ತಿನಿಮಿತ್ತವೇ ಪ್ರವೃತ್ತಿನಿಮಿತ್ತ ಎಂಬ ಭಾವನೆಯಿಂದ ಪೂರ್ವಪಕ್ಷವನ್ನು ಮಾಡಿದ್ದಾರೆ. ಅವೆರಡೂ ಭಿನ್ನ, ನೈಯಾಯಿಕಾದಿಗಳ ಮತದಲ್ಲಿ ಕ್ರಿಯೆಯೂ ಜಾತಿಯೂ ಒಂದೇ ಪದಾರ್ಥದಲ್ಲಿ ಸಮವಾಯ ಸಂಬಂಧದಿಂದ ಇರುತ್ತವೆ. ಸಮವಾಯ ಎಂಬುದು ಸಂಯೋಗಕ್ಕಿಂತ ಭಿನ್ನವಾದ ಸಂಬಂಧ. ದ್ರವ್ಯದಲ್ಲಿ ಗುಣವೂ, ಕ್ರಿಯೆಯೂ ಜಾತಿಯೂ ಸಮವಾಯ ಸಂಬಂಧದಿಂದ ಇರುತ್ತವೆ. ವ್ಯುತ್ಪತ್ತಿನಿಮಿತ್ತವು ಶಬ್ದದ ನಿಷ್ಪತ್ತಿಯನ್ನು ಮಾತ್ರ ತಿಳಿಸುತ್ತದೆ. ಪ್ರವೃತ್ತಿನಿಮಿತ್ತವು ಶಬ್ದದ ಪ್ರಯೋಗ ಆ ವಸ್ತುವಿನ ಬಗೆಗೆ ಆಗುವುದಕ್ಕೆ ಇರುವ ಮುಖ್ಯ ಆಧಾರವನ್ನು ತಿಳಿಸುತ್ತದೆ. ಒಂದೇ ವಸ್ತುವಿಗೆ ಅನೇಕ ಹೆಸರುಗಳಿರಬಹುದು. ಸಿಂಹ, ಮೃಗೇಂದ್ರ, ಪಂಚಾಸ್ಯ, ಹರ್ಯಕ್ಷ, ಕೇಸರೀ, ಹರಿ ಎಂಬ ಆರು ಶಬ್ದಗಳೂ ಒಂದೇ ಪ್ರಾಣಿಯನ್ನು ಹೇಳುತ್ತವೆ. ಒಂದೊಂದು ಶಬ್ದಕ್ಕೂ ವ್ಯುತ್ಪತ್ತಿನಿಮಿತ್ತ ಬೇರೆ ಬೇರೆ. ಹಿಂಸತೀತಿ ಸಿಂಹಃ, ಮೃಗಾಣಾಮ್ ಇಂದ್ರಃ, ಪಂಚ ಆಸ್ಯಾನಿ ಯಸ್ಯ, ಹರಿವರ್ಣೇ ಅಕ್ಷಣೀ ಯಸ್ಯ, ಕೇಸರಾಃ ಸಂತಿ ಅಸ್ಯ, ಹರತಿ ಇತಿ ಎಂಬ ವಿಭಿನ್ನ ವ್ಯುತ್ಪತ್ತಿಗಳು ಈ ಶಬ್ದಗಳಿಗಿರುವುದರಿಂದ ವ್ಯುತ್ಪತ್ತಿನಿಮಿತ್ತಗಳು ಬೇರೆ ಬೇರೆ. ಆದರೆ ಎಲ್ಲಕ್ಕೂ ಪ್ರವೃತ್ತಿನಿಮಿತ್ತ ಒಂದೇ–ಸಿಂಹತ್ವ ಎಂಬ ಜಾತಿ. ಇದರಿಂದ ಪ್ರವೃತ್ತಿನಿಮಿತ್ತವೂ ವ್ಯುತ್ಪತ್ತಿನಿಮಿತ್ತವೂ ಭಿನ್ನ ಎಂಬುದು ಸ್ಪಷ್ಟವಾಗುತ್ತದೆ.

> **ತದಪೇಕ್ಷಮೇವ ಚ "ವಿಪಚ್ಯ ಘಟೋ ಭವತಿ" ಇತ್ಯಾದೌವಿಪಾಕಾದಿಕ್ರಿಯಾಯಾಃ ಪೌರ್ವಕಾಲ್ಯಂ ಕ್ತ್ವಾಪ್ರತ್ಯಯಸ್ಯ ವಿಷಯೋ ವೇದಿತವ್ಯಃ । ಯಥಾ ಅಧಿಶ್ರಿತ್ಯ ಪಾಚಕೋ ಭವತಿ ಇತ್ಯಾದೌ ಪಾಕಾದ್ಯಪೇಕ್ಷಮ್ ಅಧಿಶ್ರಯಣಾದೇಃ, ನ ಭವನಕ್ರಿಯಾಪೇಕ್ಷಮ್ । ಸಾ ಹಿ ನಾವಶ್ಯಂ ಪ್ರಯುಜ್ಯತೇ । ಪ್ರತೀಯತೇ ತು ಪದಾರ್ಥಾನಾಂ ಸತ್ತಾವ್ಯಭಿಚಾರಾತ್ । ನ ತು ತಾವತಾ ತದಪೇಕ್ಷಂ ತದಿತಿ ಮಂತವ್ಯಮ್, ತಸ್ಯಾ ಬಹಿರಂಗತ್ವಾತ್, ಅರ್ಥಸ್ಯ ಅಸಂಗತಿಪ್ರಸಂಗಾಚ್ಚ।**

**ಅನುವಾದ:**

(ಪ್ರವೃತ್ತಿ ನಿಮಿತ್ತವಾದ ಘಟನಾ ಎಂಬ ಕ್ರಿಯೆಗೆ) ಆಪೇಕ್ಷಿಕವಾಗಿಯೇ 'ವಿಪಚ್ಯ ಘಟೋ ಭವತಿ' (ಬೆಂದು ಮಡಕೆಯಾಗುತ್ತದೆ) ಇತ್ಯಾದಿ (ವಾಕ್ಯ)ಗಳಲ್ಲಿ

ಬೇಯುವುದು (ವಿಪಾಕ) ಮುಂತಾದ ಕ್ರಿಯೆಯ ಪೂರ್ವಕಾಲತ್ವವು ಕ್ತ್ವಾ (=ಲ್ಯಪ್) ಪ್ರತ್ಯಯಕ್ಕೆ ವಿಷಯ ಎಂದು ತಿಳಿದುಕೊಳ್ಳಬೇಕು. ಹೇಗೆಂದರೆ, ಅಧಿಶ್ರಿತ್ಯ ಪಾಚಕೋ ಭವತಿ (ಪಾತ್ರೆಯನ್ನು ಒಲೆಯ ಮೇಲಿಟ್ಟು ಪಾಚಕನಾಗುತ್ತಾನೆ) ಇತ್ಯಾದಿಗಳಲ್ಲಿ ಅಧಿಶ್ರಯಣಕ್ರಿಯೆಗೆ ಪಾಕಕ್ರಿಯಾಪೇಕ್ಷವಾಗಿ ಪೂರ್ವಕಾಲತ್ವ ಇರುವಿಕೆ ಎಂಬ ಭವನಕ್ರಿಯಾಪೇಕ್ಷವಾಗಿ ಹೇಗೆ ಅಲ್ಲವೋ ಹಾಗೆ. ಭವನ (ಇರುವಿಕೆ) ಎಂಬ ಕ್ರಿಯೆಯನ್ನು ಅವಶ್ಯವಾಗಿ ಪ್ರಯೋಗಿಸಲೇಬೇಕು ಎಂದೇನೂ ಇಲ್ಲವಲ್ಲ. (ಪ್ರಯೋಗಿಸದಿದ್ದರೂ) ಅದು ಪ್ರತೀತವಾಗುತ್ತದೆ, ಏಕೆಂದರೆ ಪದಾರ್ಥಗಳಿಗೆ ಸತ್ತಾ (ಇರುವಿಕೆ) ಅವ್ಯಭಿಚರಿತವಾಗಿ ಇದ್ದೇ ಇರುತ್ತದೆ. ಇಷ್ಟು ಮಾತ್ರದಿಂದ ಭವನ ಕ್ರಿಯಾಪೇಕ್ಷವಾಗಿ ಇತರ ಕ್ರಿಯೆಗಳಿಗೆ ಪೌರ್ವಕಾಲ್ಯವೆಂದು ತಿಳಿಯಬಾರದು, ಏಕೆಂದರೆ ಭವನಕ್ರಿಯೆ ಬಹಿರಂಗ. ಅಷ್ಟೇ ಅಲ್ಲದೆ (ಭವನಕ್ರಿಯಾಪೇಕ್ಷವಾಗಿ ಇತರ ಕ್ರಿಯೆಗಳಿಗೆ ಪೌರ್ವಕಾಲ್ಯವನ್ನು ಒಪ್ಪಿಕೊಂಡರೆ) ಅರ್ಥವು ಅಸಂಗತವಾಗುವ ಪ್ರಸಂಗವೂ ಉಂಟಾಗುತ್ತದೆ.

**ವಿವರಣೆ:**

'ಸಮಾನಕರ್ತೃಕಯೋಃ ಪೂರ್ವಕಾಲೇ' ಎಂಬ ಸೂತ್ರದಿಂದ ಎರಡು ಕ್ರಿಯೆಗಳು ಸಮಾನಕರ್ತೃವಿನಿಂದ ಆಗಿವೆ ಎಂದು ವಿವಕ್ಷಿತವಾದಾಗ ಅವುಗಳಲ್ಲಿ ಪೂರ್ವಕಾಲದಲ್ಲಿ ನಡೆದ ಕ್ರಿಯೆಯನ್ನು ಹೇಳುವ ಧಾತುವಿಗೆ ಕ್ತ್ವಾಪ್ರತ್ಯಯವನ್ನು ಸೇರಿಸಬೇಕು ಎಂದು ಸಿದ್ಧವಾಗುತ್ತದೆ. 'ಸಮಾಸೇಽನಞ್‌ಪೂರ್ವೇ ಕ್ತ್ವೋ ಲ್ಯಪ್' ಎಂಬ ಸೂತ್ರದಿಂದ ಕ್ತ್ವಾಪ್ರತ್ಯಯಕ್ಕೆ ಲ್ಯಬಾದೇಶವು ಬರುತ್ತದೆ. 'ವಿಪಚ್ಯ ಘಟೋ ಭವತಿ' ಎಂಬ ಉದಾಹರಣೆಯಲ್ಲಿ ಪಚ್‌ಧಾತುವಿಗೆ ಕ್ತ್ವಾ ಪ್ರತ್ಯಯ ಬಂದು ಅನಂತರ ಅದಕ್ಕೆ ಲ್ಯಬಾದೇಶವಾಗಿದೆ. ಇಲ್ಲಿ ಪಚ್‌ಧಾತುನಿರೂಪಿತವಾದ ಕ್ರಿಯೆ ಮತ್ತೆ ಯಾವ ಕ್ರಿಯೆಯ ದೃಷ್ಟಿಯಿಂದ ಪೂರ್ವಕಾಲದ್ದಾಯಿತು ಎಂಬುದು ಪ್ರಶ್ನೆ. ಘಟ ಎಂಬ ಪದದೊಳಗೆ ಅಂತರ್ಭೂತವಾದ ಘಟನಾ ಎಂಬ ಕ್ರಿಯೆಯ ದೃಷ್ಟಿಯಿಂದ ಅದಕ್ಕೆ ಪೂರ್ವಕಾಲತ್ವ. ಹೀಗೆಯೇ 'ಅಧಿಶ್ರಿತ್ಯ ಪಾಚಕೋ ಭವತಿ' ಎಂಬ ಪ್ರಯೋಗದಲ್ಲಿ ಪಚ್‌ಧಾತ್ವರ್ಥದ ದೃಷ್ಟಿಯಿಂದ ಅಧಿಶ್ರಯಣಕ್ಕೆ ಪೂರ್ವಕಾಲತ್ವವಿದೆ ಎಂದು ತಿಳಿಯಬೇಕು. ಈ ಎರಡು ವಾಕ್ಯಗಳಲ್ಲೂ ಭವತಿ ಎಂಬ ಕ್ರಿಯಾಪದದ ಪ್ರಯೋಗವಿದ್ದರೂ ತದಪೇಕ್ಷವಾಗಿ **ವಿಪಚ್** ಮತ್ತು **ಅಧಿಶ್ರಿ** ಎಂಬ ಧಾತ್ವರ್ಥಕ್ರಿಯೆಯ ಪೂರ್ವಕಾಲತ್ವವನ್ನು ಹೇಳಬಾರದು ಎಂದು ಮಹಿಮಭಟ್ಟನ ಮತ. ಭೂಧಾತುವನ್ನು ಅಥವಾ ತತ್ಸಮಾನಾರ್ಥಕವಾದ ಅಸ್‌ಧಾತುವನ್ನು ಪ್ರಯೋಗಿಸದಿದ್ದರೂ ಅದು ಅರ್ಥಾತ್ ಸಿದ್ಧವಾಗುತ್ತದೆ. 'ಅಸ್ತಿರ್ಭವಂತೀಪರಃ ಅಪ್ರಯುಜ್ಯಮಾನೋಽಪ್ಯಸ್ತಿ' ಎಂಬ ಪತಂಜಲಿವಾಕ್ಯವು ಇಲ್ಲಿ ಪ್ರಮಾಣ. ಅವ್ಯಭಿಚರಿತವಾಗಿ ಇದ್ದೇ ಇರುವ ಭವನಕ್ರಿಯೆ ಅಪ್ರಯೋಜಕ. ಮೇಲೆ ಕೊಟ್ಟ ಉದಾಹರಣೆಗಳಲ್ಲಿ ಘಟ, ಪಾಚಕ ಇತ್ಯಾದಿ ಪದಗಳು ನಾಮಪದಗಳಾದರೂ ಅವುಗಳಿಗೆ ಕ್ರಿಯೆಯೇ ಪ್ರವೃತ್ತಿ ನಿಮಿತ್ತವಾಗಿರುವುದರಿಂದ ಆ ಕ್ರಿಯಾಪೇಕ್ಷವಾಗಿ ವಿಪಚ್ಯ, ಅಧಿಶ್ರಿತ್ಯ ಎಂಬಲ್ಲಿ ಪೂರ್ವಕಾಲತ್ವವು ಸಿದ್ಧವಾಗಿ ಕ್ತ್ವಾ (ಲ್ಯಪ್) ಪ್ರತ್ಯಯವು ಬಂದಿದೆ ಎಂಬುದನ್ನು ಅರಿತುಕೊಳ್ಳಬೇಕು.

ಈ ಪ್ರಕರಣದಲ್ಲಿ ಮಹಿಮಭಟ್ಟನು ಮಾಡಿರುವ ವಿಶ್ಲೇಷಣೆ ಅವನ ವ್ಯಾಕರಣಜ್ಞಾನ ಗಾಂಭೀರ್ಯವನ್ನೂ ಸೂಕ್ಷ್ಮಮತಿಯನ್ನೂ ದ್ಯೋತಿಸುತ್ತದೆ. ಅವನ ಹಲವು ವಿಚಾರಗಳನ್ನು ಒಪ್ಪದಿರುವ

ವಿದ್ವಾಂಸರೂ ಅವನ ಚಾತುರ್ಯವನ್ನು ಮತ್ತು ವಿಮರ್ಶನವಿಚಕ್ಷಣತೆಯನ್ನು ಮೆಚ್ಚುತ್ತಾರೆ ಎಂದು ಹೇಳಬಹುದು.

**ಪ್ರಯುಜ್ಯಮಾನಕ್ರಿಯಾಪೇಕ್ಷಮೇವ ಚ ಪ್ರಾಯೇಣ**
**ಪೌರ್ವಕಾಲ್ಯಂ ಕ್ತ್ವೋ ವಿಷಯೋ, ನ ಪ್ರತೀಯಮಾನಾಪೇಕ್ಷಮ್ ।**
**ಇತರಥಾ –**
**ಶ್ರುತ್ವಾಪಿ ನಾಮ ಬಧಿರೋ ದೃಷ್ಟ್ವಾಪ್ಯಂಧೋ ಜಡೋ ವಿದಿತ್ವಾಪಿ ।**
**ಯೋ ದೇಶಕಾಲಕಾರ್ಯವ್ಯಪೇಕ್ಷಯಾ ಪಂಡಿತಃ ಸ ಪುಮಾನ್ ॥**
**ಇತ್ಯಾದಿ ಪ್ರಯೋಗಜಾತಮನುಪಪನ್ನಮೇವ ಸ್ಯಾತ್ ।**
**ಶ್ರವಣಾದೀನಾಂ ತತ್ಪೂರ್ವಕಾಲತ್ವಾಭಾವಾತ್ । ಅತ್ರ ತು**
**ಶ್ರುತ್ಯಾದಿಶಕ್ತಿವಿರಹಲಕ್ಷಣಬಾಧಿರ್ಯಾದಿಕ್ರಿಯಾಪೇಕ್ಷಮೇವ**
**ಶ್ರವಣಾದೀನಾಂ ಪೌರ್ವಕಾಲ್ಯಮಿತಿ ನ ಕಾಚಿದನುಪಪತ್ತಿಃ ।**

**ಅನುವಾದ:**

ಯಾವ ಕ್ರಿಯೆಯು (ವಾಕ್ಯದಲ್ಲಿ ಶಬ್ದತಃ) ಪ್ರಯುಜ್ಯಮಾನವಾಗಿರುವುದೋ ಅದರ ದೃಷ್ಟಿಯಿಂದ ಇರುವ ಪೂರ್ವಕಾಲತ್ವವೇ ಕ್ತ್ವಾಪ್ರತ್ಯಯಕ್ಕೆ ವಿಷಯ, ಪ್ರತೀಯಮಾನಾರ್ಥಾಪೇಕ್ಷಯಾ ಉಂಟಾಗುವ ಪೂರ್ವಕಾಲತ್ವವಲ್ಲ. ಹಾಗಲ್ಲದಿದ್ದರೆ–

ದೇಶ, ಕಾಲ, ಕಾರ್ಯಗಳಿಗೆ ಅನುಗುಣವಾಗಿ ಯಾವನು ಕೇಳಿಯೂ ಕಿವುಡನೂ, ನೋಡಿಯೂ ಕುರುಡನೂ, ತಿಳಿದೂ ಮೂಢನೂ ಆಗಿರುವನೋ ಆ ಮನುಷ್ಯನೇ ಪಂಡಿತನು –ಇತ್ಯಾದಿ ಪ್ರಯೋಗರಾಶಿಯೆಲ್ಲ ಅನುಪಪನ್ನವೇ ಆಗಿಬಿಟ್ಟೀತು, ಏಕೆಂದರೆ ಶ್ರವಣಾದಿಗಳಿಗೆ ಪ್ರತೀಯಮಾನಾರ್ಥದ ಪೂರ್ವಕಾಲತ್ವವು ಇಲ್ಲ.

ಇಲ್ಲಿ (ನಮ್ಮ ಅಭಿಪ್ರಾಯಾನುಸಾರವಾಗಿ) ಶ್ರವಣ ಶಕ್ತಿಯ ಅಭಾವರೂಪವಾದ ಕಿವುಡುತನ ಎಂಬ ಕ್ರಿಯೆಯ ಅಪೇಕ್ಷೆಯಿಂದಲೇ ಶ್ರವಣಾದಿಗಳಿಗೆ ಪೂರ್ವಕಾಲತ್ವವಿದೆ, ಆದ್ದರಿಂದ ಯಾವ ಅನುಪಪತ್ತಿಯೂ ಇಲ್ಲ.

**ವಿವರಣೆ:**

'ಶ್ರುತ್ವಾಪಿ ನಾಮ ಬಧಿರಃ' ಇತ್ಯಾದಿಯಲ್ಲಿ ಅವ್ಯಭಿಚರಿತವಾಗಿ ಪ್ರತೀಯಮಾನವಾಗುವುದು 'ಭವತಿ' ಎಂಬ ಕ್ರಿಯಾಪದ. ಅದನ್ನಿಟ್ಟುಕೊಂಡು ಶ್ರುಧಾತ್ವರ್ಥವಾದ ಶ್ರವಣಕ್ಕೆ ಪೂರ್ವಕಾಲತ್ವವನ್ನು ಹೇಳಲಾಗದು. ಬಧಿರ=ಕಿವುಡ. ಅದರಿಂದ ವ್ಯಕ್ತವಾಗುವುದು ಶ್ರವಣಶಕ್ತ್ಯಭಾವರೂಪವಾದ ಕ್ರಿಯೆ. ಇದೇ ರೀತಿಯಾಗಿ ಅಂಧ=ಕುರುಡ. ಅದರ ಅರ್ಥ ದರ್ಶನಾಭಾವರೂಪವಾದ ಕ್ರಿಯೆ. ಜಡ=ದಡ್ಡ. ಅದರ ಅರ್ಥ ಅರಿವಿನ ಅಭಾವರೂಪವಾದ ಕ್ರಿಯೆ. ಆ ಕ್ರಿಯೆಗಳ ದೃಷ್ಟಿಯಿಂದ ಶ್ರವಣಾದಿಗಳಿಗೆ ಪೂರ್ವಕಾಲತ್ವ ಇದೆ ಎಂದು ಹೇಳಬೇಕು. ಇಲ್ಲದಿದ್ದರೆ, ಈ ಪ್ರಯೋಗ ತಪ್ಪು ಎಂದು ನಿರ್ಧರಿಸಬೇಕಾದೀತು. ಅದು ಸರಿಯಲ್ಲ.

ಬಹ್ವೀಷು ಚ ತಾಸು ಉತ್ತರೋತ್ತರಕ್ರಿಯಾಪೇಕ್ಷಂ ಪೂರ್ವಪೂರ್ವಕ್ರಿಯಾಪೌರ್ವಕಾಲ್ಯಮ್ । ಯಥಾ ಸ್ನಾತ್ವಾ ಭುಕ್ತ್ವಾ ಪೀತ್ವಾ ವ್ರಜತೀತ್ಯಾದೌ । ಅತ್ರ ಚ ವಿಪಚನಘಟನಭವನರೂಪಾಃ ಬಹ್ವ್ಯಃ ಕ್ರಿಯಾಃ ಇತ್ಯತ್ರಾಪಿ ಘಟನಾಪೇಕ್ಷಂ ವಿಪಚನಸ್ಯ ತದ್ ಭವಿತುಮರ್ಹತ್ಯೇವ, ಉಭಯತ್ರಾಪಿ ಕರ್ತೃ-ಪ್ರತ್ಯಯನಿರ್ದೇಶಾವಿಶೇಷಾತ್ । ಕೇವಲಂ ಕೃದ್ವಾಚ್ಯತಯಾ ಕರ್ತುರುಪಾಧಿಭಾವಂ ಗಮಿತೇತಿ ಭಿನ್ನಕರ್ತೃಕತ್ವಭ್ರಮಃ । ಯಥಾ

ಶಿಶಿರಕಾಲಮಪಾಸ್ಯ ಗುಣೋಽಸ್ಯ ನಃ
ಕ ಇವ ಶೀತಹರಸ್ಯ ಕುಚೋಷ್ಮಣಃ ।
ಇತಿ ಧಿಯಾಸ್ತರುಷಃ ಪರಿರೇಭಿರೇ
ಘನಮತೋ ನಮತೋಽನುಮತಾನ್ ಪ್ರಿಯಾಃ ॥

ಇತ್ಯತ್ರ ಕುಚೋಷ್ಮಣಃ ಕರ್ತುರ್ಹರಣಕ್ರಿಯಾ । ಅತ ಏವ ಕೇಚಿದಪಾಸ್ಯೇತ್ಯಯಂ ಲ್ಯಬಂತಪ್ರತಿರೂಪಕೋ ನಿಪಾತ ಇತಿ ವ್ಯಾಖ್ಯಾತವಂತಃ ।

**ಅನುವಾದ:**

ಆ ಕ್ರಿಯೆಗಳು ಅನೇಕ (ಕ್ತ್ವಾಂತಗಳಿಂದ ನಿರೂಪಿತವೇ) ಆಗಿದ್ದಾಗ ಮುಂದುಮುಂದಿನ ಕ್ರಿಯೆಗೆ ಹಿಂದುಹಿಂದಿನ ಕ್ರಿಯೆಯ ಪೂರ್ವಕಾಲತ್ವ. ಉದಾಹರಣೆ –

'ಸ್ನಾತ್ವ ಭುಕ್ತ್ವಾ ಪೀತ್ವಾ ವ್ರಜತಿ' ಇತ್ಯಾದಿ. ಪ್ರಸ್ತುತವಾದ (ವಿಪಚ್ಯ ಘಟೋ ಭವತಿ) ಎಂಬ ಉದಾಹರಣೆಯಲ್ಲಿ ವಿಪಚನ-ಘಟನ-ಭವನ ಎಂಬ ಅನೇಕ ಕ್ರಿಯೆಗಳಿವೆ. ಇಲ್ಲೂ ಘಟನೆಯ ದೃಷ್ಟಿಯಿಂದ ವಿಪಚನಕ್ಕೆ ಪೂರ್ವಕಾಲತ್ವವು ಇರುವುದು ನ್ಯಾಯವಾಗೇ ಇದೆ. ಏಕೆಂದರೆ ಎರಡು ಸ್ಥಳಗಳಲ್ಲೂ ಕರ್ತೃಪ್ರತ್ಯಯ ನಿರ್ದೇಶ ಸಮಾನವೇ ಆಗಿದೆ. ಆ ಕ್ರಿಯೆ ಕೃದ್ವಾಚ್ಯವಾಗಿ ಕರ್ತೃವಿನ ಉಪಾಧಿಯಾಗಿ ಮಾಡಲ್ಪಟ್ಟಿದೆ ಎಂಬ ಕಾರಣದಿಂದ ಇವು ಭಿನ್ನಕರ್ತೃಕವೇನೋ ಎಂಬ ಭ್ರಾಂತಿ ಹುಟ್ಟುತ್ತದೆ. ಅದಕ್ಕೊಂದು ಉದಾಹರಣೆ (ಶಿಶಿರಕಾಲಮ್)-

"ಶಿಶಿರಋತುವನ್ನು ಬಿಟ್ಟರೆ ಚಳಿಯನ್ನು ಕಳೆಯುವ ನಮ್ಮ ಮೊಲೆಗಳ ಬಿಸುಪಿನಿಂದ ಏನು ಪ್ರಯೋಜನ ಎಂಬ ಭಾವನೆಯಿಂದ ಪ್ರಿಯಸ್ತ್ರೀಯರು ರೋಷವು ಅಸ್ತವಾಗಿರಲು ನಮಸ್ಕರಿಸುತ್ತಿದ್ದ ನಲ್ಲರನ್ನು ಬಿಗಿಯಾಗಿ ಅಪ್ಪಿಕೊಂಡರು"

ಇಲ್ಲಿ ಕುಚೋಷ್ಣತೆಯ ಹರಣಕ್ರಿಯೆ (ಕರ್ತೃವಿನ ಉಪಾಧಿಯಾಗಿರುವುದರಿಂದ ಭಿನ್ನಕರ್ತೃಕತ್ವಭ್ರಮೆಯನ್ನು ಹುಟ್ಟಿಸುತ್ತದೆ. ಆದ್ದರಿಂದಲೇ ಕೆಲವರು 'ಅಪಾಸ್ಯ' ಎಂಬುದು ಲ್ಯಂಬಂತ ಪ್ರತಿರೂಪಕ ನಿಪಾತ ಎಂದು ವ್ಯಾಖ್ಯಾನ ಮಾಡಿದ್ದಾರೆ.

**ವಿವರಣೆ:**

'ಸಮಾನಕರ್ತೃಕಯೋಃ ಪೂರ್ವಕಾಲೇ' ಎಂಬ ಸೂತ್ರದಲ್ಲಿ ದ್ವಿವಚನ ಅವಿವಕ್ಷಿತ. ಆದ್ದರಿಂದ ಒಂದೇ ವಾಕ್ಯದಲ್ಲಿ ಸಮಾನಕರ್ತೃಕವಾದ ಹಲವು ಕ್ರಿಯೆಗಳನ್ನು ಹೇಳಿದಾಗ ಆ ಧಾತುಗಳಿಗೆಲ್ಲ ಕ್ತ್ವಾಪ್ರತ್ಯಯ ಬರುತ್ತದೆ. 'ಸ್ನಾತ್ವಾ ಭುಕ್ತ್ವಾ ಪೀತ್ವಾ ವ್ರಜತಿ' (ಮಿಂದು, ತಿಂದು, ಕುಡಿದು ತೆರಳುತ್ತಾನೆ) ಎಂಬ ವಾಕ್ಯದಲ್ಲಿ ಕೊನೆಯ ವ್ರಜತಿ ಎಂಬುದನ್ನು ಬಿಟ್ಟು ಉಳಿದ ಮೂರು ಕಡೆ ಧಾತುಗಳಿಗೆ ಕ್ತ್ವಾಪ್ರತ್ಯಯ ಬಂದಿರುವುದು ಸ್ಪಷ್ಟ. ಇಲ್ಲಿ ಸ್ನಾನವು ಭೋಜನಕ್ಕಿಂತ ಮುಂಚೆ, ಭೋಜನ ಪಾನಕ್ಕಿಂತ ಮುಂಚೆ, ಪಾನ ವ್ರಜನಕ್ಕಿಂತ ಮುಂಚೆ ಆಯಿತು ಎಂದು ಅರ್ಥ. 'ವಿಪಚ್ಯ ಘಟೋ ಭವತಿ' ಎಂದು ಮೊದಲು ಕೊಟ್ಟ ಉದಾಹರಣೆಯಲ್ಲಿ ಘಟ ಶಬ್ದದಲ್ಲಿ ಅಂತರ್ಗತವಾದ ಘಟನಕ್ರಿಯೆಯ ದೃಷ್ಟಿಯಿಂದ ಪೂರ್ವಕಾಲತ್ವವು ವಿಪಚ್ ಎಂಬ ಧಾತುವಿನಿಂದ ಉಕ್ತವಾದ ಪಾಕದಲ್ಲಿ ಇದೆ ಎಂಬುದನ್ನು ಸೂಕ್ಷ್ಮಮತಿಗಳು ಅರಿತುಕೊಳ್ಳುತ್ತಾರೆ. ಅದು ಇತರ ಉದಾಹರಣೆಗಳಲ್ಲಿರುವಷ್ಟು ಸ್ಪಷ್ಟವಾಗದಿರುವುದಕ್ಕೆ ಕಾರಣ ಕ್ರಿಯೆ ಕರ್ತೃವಿನ ಉಪಾಧಿಯಾಗಿರುವುದು. ಇದಕ್ಕೆ 'ಶಿಶಿರಕಾಲಮಪಾಸ್ಯ' ಎಂಬ ಇನ್ನೊಂದು ಉದಾಹರಣೆಯನ್ನು ಗ್ರಂಥಕಾರನು ನೀಡಿದ್ದಾನೆ.

ಇಲ್ಲಿ 'ಶೀತಹರಸ್ಯ' (=ಚಳಿಯನ್ನು ಹೋಗಲಾಡಿಸುವ) ಎಂಬ ಪದದಲ್ಲಿ ಉಪಾಧಿಯಾಗಿ (ಎಂದರೆ ಕರ್ತೃವಿನ ವಿಶೇಷಣವಾಗಿ) ಕ್ರಿಯೆ ಸೇರಿಕೊಂಡು ಬಿಟ್ಟಿರುವುದರಿಂದ ಅಪಾಸ್ಯ ಎಂಬ ಪದದಲ್ಲಿರುವ ಕ್ತ್ವಾಪ್ರತ್ಯಯ (ಲ್ಯಪ್)ಕ್ಕೆ ಪೂರ್ವಕಾಲತ್ವ ಯಾವ ಕ್ರಿಯಾಪೇಕ್ಷಿತವಾಗಿ ಬಂದಿದೆ ಎಂಬ ಸಂಶಯ ಮೂಡುತ್ತದೆ. ಸಮಾನಕರ್ತೃಕಗಳಾದ ಎರಡು ಕ್ರಿಯೆಗಳು ಕಾಣಿಸುವುದಿಲ್ಲ, ಆದ್ದರಿಂದ ಇಲ್ಲಿ ಕ್ತ್ವಾ (ಲ್ಯಪ್) ಪ್ರತ್ಯಯದ ಪ್ರಯೋಗ ತಪ್ಪು ಎಂಬ ಭ್ರಾಂತಿಯೂ ಕೆಲವರಿಗೆ ಉಂಟಾಗಬಹುದು.

ಶಿಶಿರಕಾಲಮಪಾಸ್ಯ ಇತ್ಯಾದಿ ಪದ್ಯವು ಮಾಘನ ಶಿಶುಪಾಲವಧದಲ್ಲಿ ಬಂದಿದೆ. ಅದರ ಪ್ರಾಚೀನ ವ್ಯಾಖ್ಯಾನಕಾರರು ಈ ಭ್ರಾಂತಿಗೆ ಒಳಗಾಗಿ ಅಪಾಸ್ಯ ಎಂಬುದು ಲ್ಯಬಂತವೇ ಅಲ್ಲ, ಲ್ಯಬಂತ ರೂಪವನ್ನೇ ಪಡೆದಿರುವ ಒಂದು ನಿಪಾತ, ಎಂದರೆ ಅವ್ಯಯ ಎಂದು ವ್ಯಾಖ್ಯಾನಿಸಿದ್ದಾರೆ ಎಂಬ ಅಂಶವನ್ನೂ ಮಹಿಮಭಟ್ಟನು ನಮ್ಮ ಗಮನಕ್ಕೆ ತಂದಿದ್ದಾನೆ.

**ಯಥಾ ವಾ –**
**ನಿರೀಕ್ಷ್ಯ ಸಂರಂಭನಿರಸ್ತಧೈರ್ಯಂ ರಾಧೇಯಮಾರಾಧಿತಜಾಮದಗ್ನ್ಯಮ್ ।**
**ಅಸಂಸ್ತುತೇಷು ಪ್ರಸಭಂ ಭಯೇಷು ಜಾಯೇತ ಮೃತ್ಯೋರಪಿ ಪಕ್ಷಪಾತಃ ॥**
**ಇತ್ಯತ್ರ ನಿರೀಕ್ಷಣಕ್ರಿಯಾಕರ್ತುರ್ಮೃತ್ಯೋರ್ಭಯಪಕ್ಷಪತನಕ್ರಿಯೇ**
**ವಿಷಯವಿಷಯಿಭಾವಭಂಗ್ಯಾ ಉಪಾತ್ತೇ ।**

**ಅನುವಾದ:**

ಇನ್ನೊಂದು ಉದಾಹರಣೆ –

"ತನ್ನ ಪ್ರತಾಪದಿಂದ (ಶತ್ರುಗಳ) ಧೈರ್ಯವನ್ನು ಕಂಗೆಡಿಸುವ, ಪರಶುರಾಮನನ್ನು ಆರಾಧಿಸಿರುವ ಕರ್ಣನನ್ನು ನೋಡಿ ಮೃತ್ಯುವಿಗೂ ಅಪರಿಚಿತವಾದ ಭಯದಲ್ಲಿ ತಡೆಯಲಾಗದ ಪಕ್ಷಪಾತ ಉಂಟಾದೀತು." ಎಂಬ ಶ್ಲೋಕದಲ್ಲಿ ನಿರೀಕ್ಷಣಕ್ರಿಯೆಯ ಕರ್ತೃವಾದ ಮೃತ್ಯುವಿನ ಭಯಪಡುವಿಕೆ ಮತ್ತು

ಪಕ್ಷಪಾತ ಮಾಡುವಿಕೆ ಎಂಬ ಕ್ರಿಯೆಗಳು ವಿಷಯ–ವಿಷಯಿಭಾವದ ರೀತಿಯಲ್ಲಿ ಹೇಳಲ್ಪಟ್ಟಿವೆ.

**ವಿವರಣೆ:**

'ನಿರೀಕ್ಷ್ಯ' ಎಂಬ ಪದದಲ್ಲಿ ಕ್ತ್ವಾ (=ಲ್ಯಪ್) ಪ್ರತ್ಯಯವಿದೆ. ನಿರ್+ಈಕ್ಷ್+ಲ್ಯಪ್. ಇದರ ಕರ್ತೃ ಮೃತ್ಯು. ಕರ್ಣನನ್ನು ನೋಡಿ ಮೃತ್ಯುವೂ ಭಯಪಡುತ್ತದೆ ಎಂಬುದು ಮುಖ್ಯ ತಾತ್ಪರ್ಯ.

'ರಾಧೇಯಂ ನಿರೀಕ್ಷ್ಯ ಮೃತ್ಯುರ್ಬಿಭೇತಿ' ಎಂಬ ವಾಕ್ಯದಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲ. ಆದರೆ ಭಯಪಡುತ್ತಾನೆ ಎಂಬ ಅರ್ಥದಲ್ಲಿ 'ಮೃತ್ಯೋಃ ಭಯೇಷು ಪಕ್ಷಪಾತೋ ಜಾಯೇತ' ಎಂದು ಪ್ರಯೋಗಿಸಿರುವುದರಿಂದ ಎರಡು ಕ್ರಿಯೆಗಳೇ ವಾಕ್ಯದಲ್ಲಿ ಉಪಾತ್ತವಾಗಿಲ್ಲ, ಪೂರ್ವಕ್ರಿಯೆಯನ್ನು ಹೇಳುವ ಧಾತುವಿಗೆ ಲ್ಯಪ್ ಪ್ರತ್ಯಯ ಬರುತ್ತದೆ ಎಂಬ ನಿಯಮ ಇಲ್ಲಿ ಹೇಗೆ ಹೊಂದುತ್ತದೆ ಎಂಬ ಪ್ರಶ್ನೆ ಹುಟ್ಟುತ್ತದೆ. ಅದಕ್ಕೆ ಗ್ರಂಥಕಾರನ ಉತ್ತರ ಭಯ ಎಂಬ ಪದದಿಂದ ಅಲ್ಲಿ ಬಿಭೇತಿ ಎಂಬ ಕ್ರಿಯೆಯನ್ನು ಸೂಚಿಸಲಾಗಿದೆ. ಅದೇ ರೀತಿಯಾಗಿ ಪಕ್ಷಪಾತಃ ಜಾಯತೇ ಎಂಬುದರಲ್ಲಿ ಪಕ್ಷೇ ಪತತಿ. ಎಂಬ ಕ್ರಿಯೆಯನ್ನು ಸೂಚಿಸಲಾಗಿದೆ. ಈ ಮೂರು ಕ್ರಿಯೆಗಳಿಗೂ ಸಮಾನಕರ್ತಾ ಮೃತ್ಯು. ಅವುಗಳಲ್ಲಿ ಪೂರ್ವಕ್ರಿಯೆ ನಿರೀಕ್ಷಣ. ಅದಕ್ಕೆ (ಈಕ್ಷಧಾತುವಿಗೆ) ಕ್ತ್ವಾ, ಅದರ ಆದೇಶ ಲ್ಯಪ್.

ಇಲ್ಲಿ ಪಕ್ಷಪತನ ಎಂಬ ಕ್ರಿಯೆಗೆ ಭಯ ಎಂಬುದು ವಿಷಯ. ಭಯದಲ್ಲಿ ತಾನೆ ಮೃತ್ಯುವಿಗೆ ಪಕ್ಷಪಾತ ಉಂಟಾಗುವುದು? ಆದ್ದರಿಂದ ಪಕ್ಷಪತನ ವಿಷಯಿ.

ಕೇವಲ ಶುದ್ಧ ಕ್ರಿಯಾಪದಗಳನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ ನಿರೀಕ್ಷಣದ ಕರ್ತೃ ಮೃತ್ಯು, ಜಾಯೇತ ಎಂಬ ಕ್ರಿಯೆಯ ಕರ್ತೃ ಪಕ್ಷಪಾತ. ಆದ್ದರಿಂದ ನಿರೀಕ್ಷ್ಯ ಎಂದು ಪ್ರಯೋಗಿಸಿದ್ದೇ ತಪ್ಪು ಎಂದು ಹೇಳಬೇಕಾಗುತ್ತದೆ. ಅದಕ್ಕೆ ಸಾಧುತ್ವವನ್ನು ಸಾಧಿಸಿರುವುದು ಮಹಿಮಭಟ್ಟನ ಅಗ್ಗಳಿಕೆ.

**ಯಥಾ ವಾ –**

**'ಯಾಂ ದೃಷ್ಟ್ವಾಪಿ ಸಮುತ್ಸುಕೇ ಮನಸಿ ಮೇ ನಾನ್ಯಾ ಕರೋತ್ಯಾಸ್ಪದಮ್'**

**ಇತ್ಯತ್ರ ದರ್ಶನಕ್ರಿಯಾಕರ್ತುರ್ಮನಸೋಽನ್ಯಕರ್ತೃಕಾಸ್ಪದಕ್ರಿಯಾನಧಿಕರಣಭಾವೇನ ಉಪಾತ್ತಸ್ಯ ಔತ್ಸುಕ್ಯಕ್ರಿಯಾ ವಿಶೇಷಣಭಾವೇನೋಪಾತ್ತಾ ।**

**ಅನುವಾದ:**

ಇನ್ನೊಂದು ಉದಾಹರಣೆ –

'ಯಾವಳನ್ನು ನೋಡಿ ಉತ್ಸುಕವಾದ ನನ್ನ ಮನಸ್ಸಿನಲ್ಲಿ ಬೇರೆ ಯಾವಳೋ ಆಸ್ಪದವನ್ನು ಪಡೆಯಲಾರಳು' ಎಂಬ ಪದ್ಯದಲ್ಲಿ ದರ್ಶನ ಎಂಬ ಕ್ರಿಯೆಗೆ ಕರ್ತೃ ಮನಸ್ಸು. ಅನ್ಯಸ್ತ್ರೀಯು ಮಾಡುವ ಆಸ್ಪದಕ್ರಿಯೆಗೆ (ಆ ಮನಸ್ಸು) ಅಧಿಕರಣವಾಗುವುದಿಲ್ಲ ಎಂಬ ರೂಪದಲ್ಲಿ ಮನಸ್ಸು ವಾಕ್ಯದಲ್ಲಿ ಉಪಾತ್ತವಾಗಿದ್ದು ಅದಕ್ಕೆ ವಿಶೇಷಣವಾಗಿ ಔತ್ಸುಕ್ಯಕ್ರಿಯೆಯನ್ನು ಹೇಳಲಾಗಿದೆ.

**ವಿವರಣೆ:**

'ಯಾಂ ದೃಷ್ಟ್ವಾ ಮಮ ಮನಃ ಸಮುತ್ಸುಕಂ ಭವತಿ, ತಸ್ಮಿನ್ ಮನಸಿ ಅನ್ಯಾ ಆಸ್ಪದಂ ನ ಕರೋತಿ' ಎಂದು ಹೇಳಿದಾಗ ಭ್ರಮೆ ಉಂಟಾಗುವುದಿಲ್ಲ. ಆದರೆ ಆ ಸಮುತ್ಸುಕೀಭವನವನ್ನು ಕರ್ತೃವಿನ ವಿಶೇಷಣವಾಗಿ 'ಸಮುತ್ಸುಕೇ ಮನಸಿ' ಎಂದು ಕವಿ ಹೇಳಿರುವುದರಿಂದ ಅನ್ಯಕರ್ತೃಕತ್ವಭ್ರಮೆ. ಸಮುತ್ಸುಕವಾಗುವಿಕೆ ಎಂಬ ಕ್ರಿಯೆಯ ದೃಷ್ಟಿಯಿಂದ ದರ್ಶನ ಕ್ರಿಯೆ ಪೂರ್ವ ಎಂದು ಅರ್ಥಮಾಡಿಕೊಂಡಾಗ ವಾಕ್ಯದಲ್ಲಿ ಅಸಂಗತಿ ದೂರವಾಗುತ್ತದೆ.

**ಕ್ವಚಿತ್ ಕರ್ತುಃ ಸಂಬಂಧಿತಾಮುಪಗತಾಸೌ ಭ್ರಮಹೇತುಃ ।**
**ಯಥಾ 'ಸ್ಮರ ಸಂಸ್ಮೃತ್ಯ ನ ಶಾಂತಿರಸ್ತಿ ಮೇ' ಇತಿ।**

**ಅನುವಾದ:**

ಕೆಲವು ಕಡೆ ಇದು (ಕ್ರಿಯೆಯು) ಕರ್ತೃವಿನ ಸಂಬಂಧಿಯಾಗಿ ಉಪಾತ್ತವಾಗುವುದು (ಭಿನ್ನಕರ್ತೃಕತ್ವ) ಭ್ರಮೆಗೆ ಕಾರಣವಾಗುತ್ತದೆ. ಉದಾಹರಣೆ– ಮನ್ಮಥನೆ, (ಅದನ್ನೆಲ್ಲ) ನೆನಪಿಸಿಕೊಂಡು ನನಗೆ ಶಾಂತಿಯಿಲ್ಲದಾಗಿದೆ – ಎಂದು.

**ವಿವರಣೆ:**

ಕ್ತ್ವಾಂತ ಅಥವಾ ಲ್ಯಂಬಂತರೂಪದ ಕ್ರಿಯೆಯನ್ನು ಹೇಳಿದ ಮೇಲೆ ದ್ವಿತೀಯ ಕ್ರಿಯೆಯನ್ನು ಕ್ರಿಯಾಪದವಾಗಿ ಹೇಳದೆ ಕರ್ತೃವಿನ ಸಂಬಂಧಿಯಾದ ಇನ್ನೊಂದು ನಾಮಪದದಿಂದ ಹೇಳಿದಾಗಲೂ ಭಿನ್ನಕರ್ತೃಕತ್ವಭ್ರಮೆ ಉಂಟಾಗುತ್ತದೆ. ಉದಾಹರಣೆ – ಕಾಳಿದಾಸನ ಕುಮಾರಸಂಭವದ ನಾಲ್ಕನೆಯ ಸರ್ಗದ ಒಂದು ಪದ್ಯ, "ಸಂಸ್ಮೃತ್ಯ ನ ಶಾಮ್ಯಾಮಿ" ಎಂದು ವಾಕ್ಯವನ್ನು ಪ್ರಯೋಗಿಸಿದರೆ ವಿವಾದಕ್ಕೆ ಆಸ್ಪದ ಇಲ್ಲ. ಆದರೆ ಅದೇ ಧಾತುವಿನಿಂದ ಶಾಂತಿಃ ಎಂಬ ನಾಮಪದವನ್ನು ಮಾಡಿ ಅದನ್ನು ಕರ್ತೃವಿನ ಸಂಬಂಧಿಯಾಗಿ ಹೇಳಿದಾಗ ಭಿನ್ನ ಕರ್ತೃಕತ್ವ ಭ್ರಮೆ ಉಂಟಾಗುತ್ತದೆ. "ಮೇ ಶಾಂತಿಃ" ಎಂದು ಷಷ್ಠೀ ವಿಭಕ್ತಿಯನ್ನು ಹೇಳಿರುವುದರಿಂದ ಅದು ಸಂಬಂಧಿ.

**ಕೇಚಿತ್ ಪುನಃ ಕರ್ತೃಕ್ರಿಯಯೋರನುಪಾದಾನಮಪಿ ಹೇತುಮಿಚ್ಛಂತಿ ।**
**ತತ್ರ ಕರ್ತುರ್ಯಥಾ–ನನು ಸರ್ವ ಏವ ಸಮವೇಕ್ಷ್ಯ**
**ಕಮಪಿ ಗುಣಮೇತಿ ಪೂಜ್ಯತಾಮ್ ।**
**ಸರ್ವಗುಣವಿರಹಿತಸ್ಯ ಹರೇಃ ಪರಿಪೂಜಯಾ ಕುರುನರೇಂದ್ರ ಕೋ ಗುಣಃ ॥**
**ಅತ್ರ ಹಿ ಸಮವೇಕ್ಷಾಪೂಜಯೋರೇಕೋ ಲೋಕಃ ಕರ್ತಾ ।**
**ಸ ಚ ಸಾಮರ್ಥ್ಯಸಿದ್ಧ ಇತಿ ನೋಪಾತ್ತಃ । ಪೂಜಾ ಚೋಪಾತ್ತಾಪಿ ಕೃದ್ವಾಚ್ಯತಯಾ**
**ಕರ್ಮೋಪಸರ್ಜನೀಭೂತೇತ್ಯುಭಯಂ ಭ್ರಮಹೇತುಃ ।**

**ಅನುವಾದ:**

ಕರ್ತೃ–ಕ್ರಿಯೆಗಳ ಅನುಪಾದಾನವೂ ಭಿನ್ನಕರ್ತೃಕತ್ವದ ಭ್ರಾಂತಿಗೆ ಕಾರಣ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಕರ್ತೃವಿನ ಅನುಪಾದಾನದ ಉದಾಹರಣೆ–

"ಕುರುರಾಜನೆ, ಯಾವುದಾದರೊಂದು ಗುಣವನ್ನು ಕಂಡು ಎಲ್ಲರೂ ಪೂಜ್ಯತೆಯನ್ನು ಪಡೆಯುತ್ತಾರೆ. ಎಲ್ಲ ಗುಣಗಳಿಂದಲೂ ರಹಿತನಾದ ಹರಿಯ

ಪೂಜೆಯಿಂದ ಏನು ಪ್ರಯೋಜನ?" ಇಲ್ಲಿ ಸಮವೇಕ್ಷೆ ಮತ್ತು ಪೂಜೆಗಳಿಗೆ ಜನ ಎಂಬ ಒಂದೇ ಕರ್ತೃ. ಅದು ಅರ್ಥಾತ್ ಸಿದ್ಧವಾಗುತ್ತದೆ ಎಂಬ ಕಾರಣದಿಂದ (ಶಬ್ದತಃ) ಉಪಾತ್ತವಾಗಿಲ್ಲ. ಪೂಜೆ ಎಂಬ ಕ್ರಿಯೆಯೋ ಉಪಾತ್ತವಾಗಿದ್ದರೂ ಕೃತ್‌ಪ್ರತ್ಯಯವಾಚ್ಯವಾಗಿ ಕರ್ಮಪದದ ಅರ್ಥಕ್ಕೆ ಉಪಸರ್ಜನವಾಗಿಬಿಟ್ಟಿದೆ ಎಂದು ಇವೆರಡೂ ಭಿನ್ನಕರ್ತೃಕತ್ವ ಭ್ರಾಂತಿಗೆ (ಈ ಪದ್ಯದಲ್ಲಿ) ಕಾರಣ.

**ವಿವರಣೆ:**

ಅರ್ಥಾತ್ (ಅರ್ಥಸಾಮರ್ಥ್ಯದಿಂದ) ಗೊತ್ತಾಗುವ ಕರ್ತೃವನ್ನೂ ಕ್ರಿಯೆಯನ್ನೂ ವಾಕ್ಯದಲ್ಲಿ ಶಬ್ದತಃ ಹೇಳಿಲ್ಲದ ಸಂದರ್ಭದಲ್ಲಿ ಭಿನ್ನಕರ್ತೃಕತ್ವಭ್ರಮೆ ಬರುತ್ತದೆ. "ಲೋಕೋ ಗುಣಂ ಕಮಪಿ ಸಮವೇಕ್ಷ್ಯ ಪೂಜಯತಿ" ಎಂದು ವಿವಕ್ಷಿತ. ಲೋಕ ಎಂಬ ಕರ್ತೃವನ್ನು ಕವಿ ಹೇಳಿಲ್ಲ. 'ಪೂಜಯತಿ' ಎಂಬುದನ್ನು ಕೃದ್ವಾಚ್ಯವಾಗಿ ಮತ್ತು ಉಪಸರ್ಜನವಾಗಿ ಪರಿವರ್ತಿಸಿ 'ಪೂಜ್ಯತಾಮೇತಿ' ಎಂದು ಹೇಳಿರುವುದರಿಂದ ಅದು ಭಿನ್ನಕರ್ತೃಕತ್ವ ಭ್ರಮೆಗೆ ಕಾರಣವಾಗುತ್ತದೆ. ಹೀಗೆ ಎರಡು ಕಾರಣಗಳು ಈ ಪದ್ಯದಲ್ಲಿ ಭ್ರಾಂತಿಗೆ ಕಾರಣವಾಗಿವೆ. ಇದರಿಂದ ವಾಚಕರಿಗೆ ತಾತ್ಪರ್ಯದಲ್ಲಿ ಗೊಂದಲ ಉಂಟಾಗಬಹುದು.

ಈ ಪ್ರಯೋಗ ತಪ್ಪು ಎಂದು ಕವಿ ಹೇಳಿಲ್ಲ. ಆದರೂ ಇಂಥ ಭ್ರಾಮಕ ಪ್ರಯೋಗಗಳನ್ನು ಮಾಡದಿರುವುದೇ ಲೇಸು. ಕಾವ್ಯದಲ್ಲಿ ಅರ್ಥವು ಅಪ್ರಯತ್ನವಾಗಿ ವಾಚಕರಿಗೆ ಗೋಚರವಾಗಬೇಕು. ಸಂಶಯಕ್ಕೆ ಅಥವಾ ಭ್ರಾಂತಿಗೆ ಕಾರಣವಾಗಬಾರದು.

**ಕ್ರಿಯಾಯಾ ಯಥಾ –**
**ಅಕೃತ್ವಾ ಪರಸಂತಾಪಮಗತ್ವಾ ಖಲನಮ್ರತಾಮ್ ।**
**ಅನುತ್ಸೃಜ್ಯ ಸತಾಂ ಮಾರ್ಗಂ ಯತ್‌ಸ್ವಲ್ಪಮಪಿ ತದ್ಬಹು ॥**
**ಅತ್ರ ಹಿ ಪ್ರಕರಣಗಮ್ಯಾಯಾ ಲಾಭಕ್ರಿಯಾಯಾ**
**ಅನುಪಾದಾನಂ ಕರಣಾದೀನಾಂ ಭಿನ್ನಕರ್ತೃಕತ್ವಭ್ರಮಹೇತುಃ । ತದುಕ್ತಮ್ –**
**ಕರ್ತುರುಪಾಧಿತಯೋಕ್ತಾ ಕೃದ್ವಾಚ್ಯತಯಾ**
**ಗತಾನ್ಯಗುಣತಾಂ ವಾ ।**
**ಕ್ತ್ವೋ ಭಿನ್ನಕರ್ತೃಕತ್ವಭ್ರಮಾಯ**
**ಭವತಿ ಕ್ರಿಯಾವಚಶ್ಚ ತಯೋಃ ।**
**ಪೌರ್ವಾಪರ್ಯಂ ಕ್ರಿಯಾಣಾಂ ಯದ್ ವಾಸ್ತವಂ ತದಪೇಕ್ಷಿಣಿ ।**
**ಕ್ತ್ವಃ ಪೌರ್ವಕಾಲ್ಯೇ ಕಿಂ ತಾಸಾಂ ಪ್ರಾಧಾನ್ಯೇತರಚಿಂತಯಾ ॥**
**ಇತ್ಯಲಮನೇನ ।**

**ಅನುವಾದ:**

ಕ್ರಿಯೆಯ (ಅನುಪಾದಾನದಿಂದ ಭಿನ್ನಕರ್ತೃಕತ್ವಭ್ರಮೆ ಉಂಟಾಗುವುದಕ್ಕೆ ) ಉದಾಹರಣೆ –

"ಪರರಿಗೆ ಸಂತಾಪವನ್ನು ಹುಟ್ಟಿಸದೆ, ದುರುಳರಿಗೆ ತಲೆ ಬಾಗದೆ, ಸಜ್ಜನರ ದಾರಿಯನ್ನು ಬಿಡದೆ ಸ್ವಲ್ಪವನ್ನಾದರೂ (ಸಂಪಾದಿಸಿದರೆ) ಅದು ಹೆಚ್ಚೇ." ಈ

ಪದ್ಯದಲ್ಲಿ ಲಾಭಕ್ರಿಯೆ (ಸಂಪಾದಿಸುವಿಕೆ ಅಥವಾ ಗಳಿಸುವಿಕೆ) ಪ್ರಕರಣದಿಂದಲೇ ತಿಳಿದುಬರುತ್ತದೆ ಎಂಬ ಕಾರಣದಿಂದ (ಶಬ್ದತಃ) ಉಪಾದಾನ ಮಾಡಿಲ್ಲ. ಅದು ಕರಣ (ಹುಟ್ಟಿಸುವಿಕೆ) ಮುಂತಾದ ಕ್ರಿಯೆಗಳ ಭಿನ್ನಕರ್ತೃಕತ್ವಭ್ರಾಂತಿಗೆ ಕಾರಣ.

(ಕ್ತ್ವಾಪ್ರತ್ಯಯಸ್ಥಳದಲ್ಲಿ ಭಿನ್ನಕರ್ತೃಕತ್ವಭ್ರಾಂತಿಯ ಕಾರಣಗಳು)

ಹಿಂದಿನವರೂ ಹೇಳಿದ್ದಾರೆ–

"ಕರ್ತೃವಿನ ವಿಶೇಷಣವಾಗಿ ಹೇಳಲ್ಪಟ್ಟ ಕ್ರಿಯೆ, ಅಥವಾ ಕೃತ್‌ಪ್ರತ್ಯಯಕ್ಕೆ ವಾಚ್ಯವಾಗಿರುವುದರಿಂದ ಮತ್ತೊಂದು ಅರ್ಥಕ್ಕೆ ಉಪಸರ್ಜನವಾದ ಕ್ರಿಯೆ ಕ್ತ್ವಾಪ್ರತ್ಯಯಾಂತವಾದ ಪದಕ್ಕೆ ಅರ್ಥವಾದ ಕ್ರಿಯೆಯ ಭಿನ್ನಕರ್ತೃಕತ್ವಭ್ರಾಂತಿಗೆ ಕಾರಣವಾಗುತ್ತದೆ. ಕರ್ತೃವಿನ ಮತ್ತು ಕ್ರಿಯೆಯ ಅನುಪಾದಾನವೂ (ಭಿನ್ನಕರ್ತೃಕತ್ವ ಭ್ರಾಂತಿಗೆ ಕಾರಣವಾಗುತ್ತದೆ)."

ಕ್ತ್ವಾಪ್ರತ್ಯಯವು ಅಪೇಕ್ಷಿಸುವ ಕ್ರಿಯಾಪೌರ್ವಾಪರ್ಯ ವಾಸ್ತವ, ಆದ್ದರಿಂದ ಆ ಕ್ರಿಯೆಗಳ ಪ್ರಾಧಾನ್ಯ ಮತ್ತು ಉಪಸರ್ಜನತ್ವಗಳ ಚಿಂತೆಯಿಂದ ಏನು ಪ್ರಯೋಜನ?

**ವಿವರಣೆ:**

ಅರ್ಥಸಾಮರ್ಥ್ಯದಿಂದ ಅಥವಾ ಪ್ರಕರಣದಿಂದ ತಾನಾಗಿ ಗೊತ್ತಾಗುವ ಕ್ರಿಯೆಯನ್ನು ಕವಿಗಳು ಶಬ್ದತಃ ಹೇಳಿರುವುದಿಲ್ಲ. ಅಂಥ ಸಂದರ್ಭದಲ್ಲಿ ಕ್ತ್ವಾಪ್ರತ್ಯಯಾಂತಧಾತುವಿನಿಂದ ಹೇಳಲ್ಪಟ್ಟ ಕ್ರಿಯೆಯ ಪೂರ್ವಕಾಲತ್ವ ಬೇರೆ ಯಾವ ಕ್ರಿಯೆಯ ದೃಷ್ಟಿಯಿಂದ? ಆ ಎರಡು ಕ್ರಿಯೆಗಳು ಭಿನ್ನಕರ್ತೃಕಗಳಿರಬಹುದೆ? ಎಂಬ ಭ್ರಾಂತಿ ಉಂಟಾಗುತ್ತದೆ. ಅದಕ್ಕೆ ಉದಾಹರಣೆ ಅಕೃತ್ವಾ ಇತ್ಯಾದಿ ಪದ್ಯ. ಇದರಲ್ಲಿ "ಯತ್ ಸ್ವಲ್ಪಮಪಿ ಲಭತೇ ತದ್ ಬಹು" ಎಂಬುದು ಕವಿಯ ತಾತ್ಪರ್ಯ. ಲಭತೇ ಎಂಬ ಕ್ರಿಯಾಪದವು ಪ್ರಕರಣಗಮ್ಯ ಎಂದು ಅದನ್ನು ಹೇಳದೆ ಬಿಟ್ಟಿದ್ದಾನೆ. ಆ ಪದವನ್ನು ಊಹಿಸಿಕೊಳ್ಳದೆ ಇದ್ದರೆ ಪರಸಂತಾಪವನ್ನು ಮಾಡದಿರುವ ಕ್ರಿಯೆಯ ಕರ್ತೃ ಮತ್ತು "ತದ್ ಬಹು ಭವತಿ" ಎನ್ನುವ ಕ್ರಿಯೆಗೂ ಭಿನ್ನಕರ್ತೃತ್ವ ಬಂತೆಂದು ಸಮಾನಕರ್ತೃಕತ್ವ ನಿಯಮದ ಭಂಗವಾಯಿತೆಂಬ ಭ್ರಾಂತಿ ಉಂಟಾಗಬಹುದು. ಈ ಎಲ್ಲ ವಿಚಾರಗಳನ್ನು ಹೇಳುವ ಪ್ರಾಚೀನಕಾರಿಕೆಯೊಂದನ್ನು (ಕರ್ತುರುಪಾಧಿತಯಾ ಇತ್ಯಾದಿ) ಮಹಿಮಭಟ್ಟನು ಉದಾಹರಿಸಿದ್ದಾನೆ.

ಕ್ತ್ವಾಪ್ರತ್ಯಯವು ಅಪೇಕ್ಷಿಸುವ ಪೂರ್ವಕಾಲತ್ವ ವಾಸ್ತವವಾದದ್ದು. ಅದು ಶಬ್ದತಃ ಪ್ರಾಧಾನ್ಯವನ್ನು ಹೊಂದಿರಲಿ ಅಥವಾ ಕೃದ್ವಾಚ್ಯತ್ವದಿಂದ ಉಪಸರ್ಜನವಾಗಿರಲಿ, ಅದರಿಂದೇನು? ಎಂದು ಈ ಪ್ರಕರಣವನ್ನು ಗ್ರಂಥಕಾರನು ಮುಗಿಸಿದ್ದಾನೆ.

ವಾಸ್ತವ, ಶಾಬ್ದ ಎಂದು ಪೌರ್ವಾಪರ್ಯವು ಎರಡು ವಿಧ. ವಸ್ತುತಃ ಕ್ರಿಯೆಗಳು ಯಾವ ಕ್ರಮದಲ್ಲಿ ನಡೆಯುವುವೋ ಅದನ್ನು ಅನುಸರಿಸುವುದು ವಾಸ್ತವ ಪೌರ್ವಾಪರ್ಯ. ಶಾಬ್ದವು ಶಬ್ದಪ್ರಯೋಗವನ್ನು ಅವಲಂಬಿಸಿರುವುದು. ಅದರಲ್ಲಿ ಕ್ರಿಯಾಪದದಿಂದ ವಾಚ್ಯವಾದುದು ಪ್ರಧಾನ. ಅದರ ದೃಷ್ಟಿಯಿಂದ ಕ್ತ್ವಾಪ್ರತ್ಯಯಾಂತ ಶಬ್ದದಿಂದ ಹೇಳಲ್ಪಟ್ಟ ಕ್ರಿಯೆ ಪೂರ್ವಕಾಲದ್ದಾಗಿರುತ್ತದೆ. ಕ್ರಿಯೆಯು ಕೃತ್‌ಪ್ರತ್ಯಯವುಳ್ಳ ಶಬ್ದದೊಳಗೆ ಅಂತರ್ಭೂತವಾಗಿದ್ದಾಗ ಪೌರ್ವಾಪರ್ಯದ ಬಗೆಗೆ

ಸಂಶಯ ಬಂದು ಪ್ರಯೋಗ ತಪ್ಪು ಎಂಬ ಭ್ರಾಂತಿಯು ವಾಚಕರಿಗೆ ಬರಬಹುದು. ಈ ವಿವೇಚನೆಯನ್ನು ಮಾಡಿಕೊಟ್ಟಿರುವುದಕ್ಕಾಗಿ ವಿದ್ವಾಂಸರು ಮಹಿಮಭಟ್ಟನಿಗೆ ಋಣಿಗಳು.

(ಕ್ರಿಯೆಯೊಂದೇ ಪ್ರವೃತ್ತಿನಿಮಿತ್ತ)

**ಘಟತೀತಿ ಘಟೋ ಜ್ಞೇಯೋ ನಾಘಟನ್ ಘಟತಾಮಿಯಾತ್ ।**
**ಅಘಟತ್ವಾವಿಶೇಷಣ ಪಟೋಽಪಿ ಸ್ಯಾದ್ ಘಟೋಽನ್ಯಥಾ ॥**
**ಘಟನಂ ಚ ತದಾತ್ಮತ್ವಾಪತ್ತಿರೂಪಾ ಕ್ರಿಯಾ ಮತಾ ।**
**ಮೂಲಂ ಚ ತಸ್ಯಾಶ್ಚಿತ್ರಾರ್ಥಾಭಾಸಾವಿಷ್ಕೃತಿರೀಶಿತುಃ ॥**
**ಯಃ ಕಶ್ಚಿದರ್ಥಃ ಶಬ್ದಾನಾಂ ವ್ಯುತ್ಪತ್ತೌ ಸ್ಯಾನ್ನಿಬಂಧನಮ್ ।**
**ಪ್ರವೃತ್ತೌ ತು ಕ್ರಿಯೈವೈಕಾ ಸತ್ತಾಸಾದನಲಕ್ಷಣಾ ॥**
**ತಸ್ಯಾಮೇವ ಕ್ವಿಬಾದ್ಯಾಶ್ಚ ವಿಧೇಯಾಃ ಕರ್ತೃಮಾತ್ರತಃ ।**
**ನ ತೂಪಮಾನಾದಾಚಾರೇ ತಯೋರರ್ಥಾತ್ ಪ್ರತೀತಿತಃ ॥**
**ಯಥಾ ಹ್ಯಶ್ವತಿ ಬಾಲೇಯ ಇತ್ಯತೋಽರ್ಥಃ ಪ್ರತೀಯತೇ ।**
**ಅಶ್ವತ್ವಮಾಸಾದಯತಿ ಖರ ಇತ್ಯರ್ಥತಃ ಪುನಃ ॥**
**ಅಶ್ವತುಲ್ಯಸಮಾಚಾರಃ ಖರ ಇತ್ಯವಸೀಯತೇ ।**
**ನ ತತ್ತ್ವಾಸಾದನಂ ಯುಕ್ತಂ ತದತುಲ್ಯಕ್ರಿಯಸ್ಯ ಹಿ ॥**

**ಅನುವಾದ:**

ಘಟದ ರೂಪವನ್ನು ಪಡೆಯುವುದೆಂಬ ಕಾರಣದಿಂದ ವಸ್ತುವನ್ನು ಘಟವೆಂದು ತಿಳಿದುಕೊಳ್ಳಬೇಕು. ಯಾವುದು ಘಟದಂತೆ ಆಚರಿಸುವುದಿಲ್ಲವೋ ಅದು ಘಟತ್ವವನ್ನು ಪಡೆಯಲಾರದಷ್ಟೆ? ಹಾಗಿಲ್ಲದಿದ್ದರೆ, ಅಘಟತ್ವ (ಘಟವಾಗದಿರುವಿಕೆ) ಎಂಬ ಸಾಮಾನ್ಯಧರ್ಮದಿಂದ ಪಟವೂ ಘಟವಾಗಬೇಕಾದೀತು. ಘಟನ ಎಂದರೆ ಘಟದ ಸ್ವರೂಪವನ್ನು ಪಡೆದುಕೊಳ್ಳುವ ಕ್ರಿಯೆ ಎಂದು ಅಭಿಪ್ರಾಯ. ಅಂಥ ಕ್ರಿಯೆಗೆ ಕಾರಣವಾಗುವುದು ಈಶ್ವರನು (ಭಗವಂತನು) ವಿಚಿತ್ರಾರ್ಥಗಳನ್ನು ತೋರಿಸಲು ಮಾಡುವ ಆವಿಷ್ಕರಣ. ಪದಗಳಿಗೆ ವ್ಯುತ್ಪತ್ತಿನಿಮಿತ್ತ ಯಾವ ಅರ್ಥ ಬೇಕಾದರೂ ಆಗಬಹುದು. ಆದರೆ ಪ್ರವೃತ್ತಿನಿಮಿತ್ತ ಮಾತ್ರ ಸತ್ತಾಸಾದನರೂಪವಾದ ಕ್ರಿಯೆಯೇ ಆಗಿರುತ್ತದೆ. ಅಂಥ ಕ್ರಿಯೆಯನ್ನು ಆಶ್ರಯಿಸಿಕೊಂಡೇ ಎಲ್ಲ ಕರ್ತೃ (ವಾಚಕ ಪದಗಳಿಗೆ) ಕ್ವಿಪ್ ಮುಂತಾದ ಪ್ರತ್ಯಯಗಳನ್ನು ಹಚ್ಚಬೇಕು. ಉಪಮಾನವಾಚಕಶಬ್ದದ ಮೇಲೆ ಆಚಾರಾರ್ಥದಲ್ಲಿ ಆ ಪ್ರತ್ಯಯಗಳು ಬರುತ್ತವೆ ಎಂದು ಹೇಳಬಾರದು. ಏಕೆಂದರೆ ಅವು (ಉಪಮಾನ ಮತ್ತು ಆಚಾರ ಎಂಬವು) ಅರ್ಥಾತ್ ಪ್ರತೀತವಾಗುತ್ತವೆಯಷ್ಟೆ. ಉದಾಹರಣೆಗೆ 'ಅಶ್ವತಿ ಬಾಲೇಯಃ' ಎಂಬ ಪ್ರಯೋಗದಲ್ಲಿ ಅಂಥ ಅರ್ಥವು ತೋರುತ್ತದೆ. ಕತ್ತೆಯು ಕುದುರೆತನವನ್ನು ಪಡೆಯುತ್ತದೆ ಎಂಬ ಅರ್ಥವು ತೋರಿದ ಮೇಲೆ ಕತ್ತೆಯು

ಕುದುರೆಗೆ ಸಮಾನವಾದ ಕೆಲಸವನ್ನು ಮಾಡುತ್ತಿದೆ ಎಂದು ವಾಚಕರು ತಾತ್ಪರ್ಯವನ್ನು ಅರಿತುಕೊಳ್ಳುತ್ತಾರೆ.

**ವಿವರಣೆ:**

ಇಲ್ಲಿ ಶಬ್ದಶಾಸ್ತ್ರದ ಮೂಲಪ್ರಶ್ನೆಗಳನ್ನೆತ್ತಿಕೊಂಡು ಗ್ರಂಥಕಾರನು ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದಾನೆ. ಪಾಣಿನಿಯು "ಉಪಮಾನಾದಾಚಾರೇ" ಎಂಬ ಸೂತ್ರದಿಂದ ಕ್ಯಚ್‌ಪ್ರತ್ಯಯವನ್ನೂ "ಕರ್ತುಃ ಕ್ಯಙ್ ಸಲೋಪಶ್ಚ" ಎಂಬ ಸೂತ್ರದಿಂದ ಕ್ಯಙ್ ಪ್ರತ್ಯಯವನ್ನೂ ಹೇಳಿದ್ದಾನೆ. ಪುತ್ರೀಯತಿ ಚ್ಛಾತ್ರಮ್, ಹಂಸಾಯತೇ ಕಾಕಃ ಇತ್ಯಾದಿ ಉದಾಹರಣೆಗಳು. ಪುತ್ರ, ಹಂಸ ಎಂಬವು ಇಲ್ಲಿ ಉಪಮಾನಗಳು. ಅವುಗಳಿಗೆ ಕ್ಯಚ್, ಕ್ಯಙ್ ಪ್ರತ್ಯಯಗಳನ್ನು ವಿಧಿಸಲಾಗಿದೆ. ಈ ಕ್ರಮವನ್ನು ಆಶ್ರಯಿಸಬೇಕಾಗಿಲ್ಲ ಎಂಬುದು ಮಹಿಮಭಟ್ಟನ ಮತ. ಸತ್ತಾಸಾದನರೂಪವಾದ ಕ್ರಿಯೆ ಎಂಬ ಅರ್ಥದಲ್ಲೇ ಈ ಪ್ರತ್ಯಯಗಳನ್ನು ವಿಧಿಸಬೇಕು, ಹಂಸಾಯತೇ ಎಂದರೆ ಹಂಸತ್ವವನ್ನು ಪಡೆಯುತ್ತದೆ ಎಂದು ಅರ್ಥ, ಅನಂತರ ಶ್ರೋತೃವಿಗೆ ಕಾಗೆಯು ಹಂಸತ್ವವನ್ನು ಪಡೆಯುತ್ತದೆ ಎಂದರೆ ಹಂಸದಂತೆ ಆಚರಿಸುತ್ತದೆ ಎಂಬುದು ಅರ್ಥಾತ್ ಪ್ರತೀತವಾಗುತ್ತದೆ.

ಈ ಬಗೆಗೆ ವ್ಯಾಖ್ಯಾನಕಾರ ರುಯ್ಯಕನು ಹೀಗೆ ಹೇಳುತ್ತಾನೆ – "ಪ್ರಸಿದ್ಧಲಕ್ಷ್ಯಸಿದ್ಧ್ಯರ್ಥಂ ಲಕ್ಷಣಂ ತಚ್ಚ ಭಿದ್ಯತೇ । ಅಭಿಯೋಗಸ್ಯ ವೈಶಿಷ್ಟ್ಯಾತ್ ತತ್ಕೃತಂ ತಚ್ಚ ಗೃಹ್ಯತೇ ॥" –ಎಂದು. ಲಕ್ಷಣವನ್ನು ಕಲ್ಪಿಸುವುದು ಲಕ್ಷ್ಯದ ಸಿದ್ಧಿಗಾಗಿ, ಲಕ್ಷ್ಯ ಒಂದೇ, ಲಕ್ಷಣಗಳು ಭಿನ್ನವಾಗಿರಬಹುದು. ಭವತಿ ಎಂಬುದು ಲಕ್ಷ್ಯ. ಭೂಧಾತುವಿಗೆ ತಿಪ್ ಎಂಬ ಪ್ರತ್ಯಯ, ಮಧ್ಯದಲ್ಲಿ ಶಪ್ ಎಂಬ ವಿಕರಣ, ಗುಣ ಅವಾದೇಶ ಎಂಬುದು ಒಂದು ಪ್ರಕಾರದ ಲಕ್ಷಣ. ತಿ ಎಂಬ ಪ್ರತ್ಯಯ, ಅ ಎಂದು ವಿಕರಣ ಎಂಬುದು ಇನ್ನೊಂದು ಲಕ್ಷಣ. ಅತಿ ಎಂಬುದೇ ಪ್ರತ್ಯಯ ಎಂದು ಮತ್ತೊಂದು. ಭವತಿ ಎಂಬ ರೂಪವು ಲೋಕಸಿದ್ಧವಾದುದರಿಂದ ಅದರ ಬಗೆಗೆ ಭಿನ್ನಾಭಿಪ್ರಾಯವಿಲ್ಲ. ಅದರ ಸಿದ್ಧಿಗೆ ಅನುಸರಿಸುವ ಮಾರ್ಗ ಯಾವುದೆಂಬುದರಲ್ಲಿ ಒಬ್ಬೊಬ್ಬ ಶಾಸ್ತ್ರಕಾರನೂ ತನ್ನ ಮಾರ್ಗವನ್ನು ತಾನೇ ನಿರ್ಧರಿಸುತ್ತಾನೆ–ಎಂದಿಲ್ಲಿ ಅರಿತುಕೊಳ್ಳಬೇಕು.

**ಸತ್ತಾಯಾಂ ವ್ಯಾಪೃತಿಶ್ಚೈಷಾ ಚಿತ್ರತ್ವಪರಿನಿಷ್ಠಿತೇಃ ।**
**ಸಂಗಚ್ಛತೇ ಜಡಸ್ಯಾಪಿ ಘಟಾದೇರ್ಘಟನಾದಿವತ್ ॥೧೪॥**

**ನಾಮ್ನಃ ಸತ್ತ್ವಪ್ರಧಾನಸ್ಯ ಧಾತುಕಾರೋಽತ ಏವ ಹಿ ।**
**ಶಬ್ದವಕ್ತ್ರೈಕದೇಶಾದೇರ್ಥಾತ್ವರ್ಥತ್ವಮವೋಚತ ॥೧೫॥**

**ಏವಂ ಚ ವಿಪಚ್ಯ ಘಟೋ**
**ಭವತೀತಿ ಕ್ತ್ವೋಽಸ್ಯ ಪೂರ್ವಕಾಲತ್ವಮ್ ।**
**ಘಟನಾಪೇಕ್ಷಂ ಜ್ಞೇಯಂ**
**ಭವನಾಪೇಕ್ಷಂ ತು ನಾಸಮನ್ವಯತಃ ॥**
**ಬಹಿರಂಗತ್ವಾಚ್ಚ ಯಥಾ**
**ಭವತ್ಯಧಿಶ್ರಿತ್ಯ ಪಾಚಕೋಽಯಮಿತಿ ।**
**ಅತ್ರ ಹಿ ಪಾಕಾಪೇಕ್ಷಾ –**
**ಧಿಶ್ರಯತೇಃ ಪೂರ್ವಕಾಲತಾವಗತಿಃ ॥**

ತಸ್ಮಾನ್ನಾಮಪದೇಭ್ಯೋ ಯಃ ಕಶ್ಚಿದರ್ಥಃ ಪ್ರತೀಯತೇ ।
ನ ಸ ಸತ್ತಾಮನಾಸಾದ್ಯ ಶಬ್ದವಾಚ್ಯತ್ವಮರ್ಹತಿ ॥
ಇತ್ಥಂ ಚಾಸ್ತಿಭವತ್ಯಾದಿ ಕ್ರಿಯಾಸಾಮಾನ್ಯಮುಚ್ಯತೇ ।
ನಾಂತರಂಗತಯಾವಶ್ಯಂ ವಕ್ತಾರಸ್ತತ್ ಪ್ರಯುಂಜತೇ ॥
ಕ್ರಿಯಾವಿಶೇಷೋ ಯಸ್ತ್ವನ್ಯಃ ಪಾಕಾದಿರ್ವ್ಯಭಿಚಾರಭಾಕ್ ।
ಬಹಿರಂಗತಯಾ ತಸ್ಯ ಪ್ರಯೋಗೋಽವಶ್ಯಮಿಷ್ಯತೇ ॥

ಇತಿ ಸಂಗ್ರಹಶ್ಲೋಕಾಃ ।

**ಅನುವಾದ:**

ಸತ್ತಾ ಎಂಬ ಕ್ರಿಯೆಯಲ್ಲಿ ಜಡವಸ್ತುವಿಗೂ ವ್ಯಾಪಾರವು ಪದಾರ್ಥಧರ್ಮಗಳ ವಿಚಿತ್ರತ್ವದ ಕಾರಣದಿಂದ ಹೊಂದಿಕೊಳ್ಳುತ್ತದೆ, ಘಟಾದಿಗಳಲ್ಲಿ ಘಟನಾ ಎಂಬ ಕ್ರಿಯೆ ಅನ್ವಯಿಸುವಂತೆ (ಎಂದು ತಿಳಿದುಕೊಳ್ಳಬೇಕು.) ಈ ಕಾರಣದಿಂದಲೇ ಧಾತುಕಾರನು ಸತ್ತ್ವಪ್ರಧಾನವಾದ ಶಬ್ದ, ವಕ್ತ್ರೈಕದೇಶ ಮುಂತಾದುವುಗಳನ್ನು ಧಾತುವಿನ ಅರ್ಥವೆಂದು ಅವು ನಾಮಪದಗಳೇ ಆಗಿದ್ದರೂ ಹೇಳಿದ್ದಾನೆ.

ಆದ್ದರಿಂದ 'ವಿಪಚ್ಯ ಘಟೋ ಭವತಿ' ಇತ್ಯಾದಿಗಳಲ್ಲಿ ಕ್ತ್ವಾಪ್ರತ್ಯಯವು ಅಪೇಕ್ಷಿಸುವ ಪೂರ್ವಕಾಲತ್ವವು ಘಟನಾಪೇಕ್ಷವಾಗಿದೆ, ಭವನಕ್ರಿಯಾಪೇಕ್ಷವಾಗಿ ಇಲ್ಲ, ಏಕೆಂದರೆ ಹಾಗೆ ಅರ್ಥಸಮನ್ವಯವೇ ಆಗುವುದಿಲ್ಲ ಎಂಬುದನ್ನು ಅರಿತುಕೊಳ್ಳಬೇಕು.

ಅಲ್ಲದೆ ಆ ಭವನಕ್ರಿಯೆಯು ಅಂತರಂಗ. ಅದಕ್ಕೆ ಉದಾಹರಣೆ "ಅಧಿಶ್ರಿತ್ಯ ಪಾಚಕೋ ಭವತಿ" ಎಂದು. ಅದರಲ್ಲಿ ಪಾಕಕ್ರಿಯಾಪೇಕ್ಷವಾಗಿ ಅಧಿಶ್ರಯಣದ ಪೂರ್ವಕಾಲತ್ವ ಎಂಬುದು ತಿಳಿದುಬರುತ್ತದೆ.

ಆದ್ದರಿಂದ ನಾಮಪದಗಳಿಂದ ತಿಳಿದುಬರುವ ಅರ್ಥವು ಸತ್ತಾಸಾದನವಿಲ್ಲದೆ ಶಬ್ದವಾಚ್ಯತ್ವವನ್ನೇ ಪಡೆದುಕೊಳ್ಳುವುದಿಲ್ಲ. ಹೀಗೆ 'ಅಸ್ತಿ' 'ಭವತಿ' ಇತ್ಯಾದಿ ಪದಗಳು ಹೇಳುವುದು ಕ್ರಿಯಾಸಾಮಾನ್ಯವನ್ನು ಮಾತ್ರ. ಅದು ಅಂತರಂಗ. ಆದ್ದರಿಂದಲೇ ವಕ್ತೃಗಳು ವಾಕ್ಯದಲ್ಲಿ ಅವಶ್ಯವಾಗಿ ಆ ಕ್ರಿಯಾಪದಗಳನ್ನು ಬಳಸುವುದಿಲ್ಲ. ಆದರೆ ವ್ಯಭಿಚರಿತವಾಗುವ ಪಾಕ ಮುಂತಾದ ಕ್ರಿಯೆಗಳು ಬಹಿರಂಗವಾದುದರಿಂದ (ಅವುಗಳನ್ನು ಹೇಳುವ ಪಚತಿ, ಗಚ್ಛತಿ ಇತ್ಯಾದಿಗಳ) ಪ್ರಯೋಗವನ್ನು ಅವಶ್ಯವಾಗಿ ಮಾಡಲೇಬೇಕಾಗುತ್ತದೆ.

**ವಿವರಣೆ:**

ಘಟ (ಮಡಕೆ) ಎಂಬುದು ಜಡವಸ್ತು. ಘಟತ್ವವನ್ನು ಪಡೆಯುವುದು ಎಂಬ ಸತ್ತಾಸಾದನಕ್ರಿಯೆ ಅದಕ್ಕೆ ಹೇಗೆ ಹೊಂದುತ್ತದೆ? ಎಂಬುದು ಪ್ರಶ್ನೆ. ಅದಕ್ಕೆ ಮಹಿಮಭಟ್ಟನು ಕೊಡುವ ಉತ್ತರ "ಚಿತ್ರತ್ವಪರಿನಿಷ್ಠಿತೇಃ" ಲೋಕದಲ್ಲಿ ಸ್ವಭಾವ ವಿಚಿತ್ರವಾಗಿ ಇರುತ್ತದೆ. ಭಗವಂತನ ಇಚ್ಛಾವಿಶೇಷದಿಂದ

ಜಡಪದಾರ್ಥಕ್ಕೂ ಕರ್ತೃತ್ವವನ್ನು ಒಪ್ಪಬೇಕಾಗುತ್ತದೆ. ಧಾತುಪಾಠವನ್ನು ಹೇಳಿದ ಆಚಾರ್ಯನೂ ಅನೇಕ ಧಾತುಗಳಿಗೆ ಶಬ್ದ, ವದನೈಕದೇಶ ಎಂಬ ಅರ್ಥವನ್ನು ಹೇಳಿದ್ದಾನೆ. ಕೈ ಗೈ ಶಬ್ದೇ, ಗಡಿ ವದನೈಕದೇಶೇ ಇತ್ಯಾದಿ ಧಾತುಪಾಠದಲ್ಲಿದೆ. ವದನೈಕದೇಶ ಎಂದರೆ ಮುಖದ ಒಂದು ಭಾಗ. ಅದು ನಾಮಪದ, ಸತ್ತ್ವಪ್ರಧಾನ. ಕ್ರಿಯೆ ಅಲ್ಲ. ಆದರೂ ಅದು ಧಾತುವಿನ ಅರ್ಥವೆಂದು ಹೇಳಲಾಗಿದೆ. ಧಾತು ಎಂದರೆ ಸದಾ ಕ್ರಿಯಾವಾಚಕ. ಹಾಗಿದ್ದರೂ ಧಾತುಪಾಠಕಾರನು ವದನೈಕದೇಶವನ್ನು ಧಾತುವಿನ ಅರ್ಥವೆಂದು ಹೇಗೆ ಹೇಳಿದನು? ಏಕೆಂದರೆ ಎಲ್ಲ ನಾಮಪದಗಳಿಗೂ ಕ್ರಿಯೆಯೇ ಪ್ರವೃತ್ತಿನಿಮಿತ್ತ.

ಆದ್ದರಿಂದ "ವಿಪಚ್ಯ ಘಟೋ ಭವತಿ" ಎಂಬ ಉದಾಹರಣೆಯಲ್ಲಿ ಘಟ ಎಂಬ ನಾಮಪದದ ಅರ್ಥದಲ್ಲಿ ಸೇರಿಕೊಂಡಿರುವ ಘಟನಾ ಎಂಬ ಕ್ರಿಯೆಯ ದೃಷ್ಟಿಯಿಂದ ಪೂರ್ವಕಾಲತ್ವವನ್ನು ಗಣನೆಗೆ ತೆಗೆದುಕೊಂಡು ಪಚ್‌ಧಾತುವಿನ ಮೇಲೆ ಲ್ಯಪ್‌ಪ್ರತ್ಯಯವು ಬಂದಿದೆ. ಭವತಿ ಎಂಬುದರ ದೃಷ್ಟಿಯಿಂದಲ್ಲ. ಇದೇ ರೀತಿಯಾಗಿ "ಅಧಿಶ್ರಿತ್ಯ ಪಾಚಕೋ ಭವತಿ" ಎಂಬ ಉದಾಹರಣೆಯಲ್ಲಿ ಪಚನಕ್ರಿಯಾಪೇಕ್ಷವಾಗಿ ಅಧಿಶ್ರಯಣಕ್ರಿಯೆಗೆ ಪೂರ್ವಕಾಲತ್ವ. ಆದ್ದರಿಂದ ನಾಮಪದಗಳಿಂದ ಯಾವ ಅರ್ಥವು ಬಂದರೂ ಅದು ಸತ್ತಾಸಾದನ ಎಂಬ ಕ್ರಿಯೆ ಇಲ್ಲದೆ ಹೋದರೆ ಆ ಶಬ್ದಕ್ಕೆ ವಾಚ್ಯವೇ ಆಗುವುದಿಲ್ಲ. ಹೀಗೆ ಅಸ್ತಿ, ಭವತಿ ಮುಂತಾದ ಪದಗಳು ಹೇಳುವ ಕ್ರಿಯೆ ಅಂತರಂಗ, ಅದು ಪ್ರಕೃತಿ ಸಿದ್ಧವಾದುದರಿಂದ ವಾಕ್ಯದಲ್ಲಿ ಅದನ್ನು ಅವಶ್ಯವಾಗಿ ಹೇಳಬೇಕೆಂಬ ನಿಯಮವಿಲ್ಲ. "ರಾಮಃ ಸುಂದರಃ" ಎಂದಷ್ಟೇ ಹೇಳಿದರೂ 'ಭವತಿ' ಎಂಬುದು ಅರ್ಥಾತ್ ಸಿದ್ಧವಾಗುತ್ತದೆ. ಆದರೆ ಪಚತಿ, ಗಚ್ಛತಿ, ಏಧತೇ, ಭಾಷತೇ ಇತ್ಯಾದಿ ಪದಗಳ ಅರ್ಥಗಳಾದ ಪಚನಾದಿ ಕ್ರಿಯೆಗಳು ಬಹಿರಂಗ. ಅವು ಪ್ರಕೃತಿಸಿದ್ಧವಲ್ಲ. ಆ ಪದವನ್ನು ಪ್ರಯೋಗಿಸದೆ ಇದ್ದರೆ ಆ ಅರ್ಥ ತೋರುವುದಿಲ್ಲ. ಆದ್ದರಿಂದ ವಿವಕ್ಷಾನುಸಾರವಾಗಿ ಅವುಗಳನ್ನು ಪ್ರಯೋಗಿಸಲೇ ಬೇಕು.

ಮೊದಲೇ ಸವಿಸ್ತರವಾಗಿ ಹೇಳಿದ್ದ ವಿಷಯವನ್ನು ಇಲ್ಲಿ ಮಹಿಮಭಟ್ಟ ಸಂಗ್ರಹಶ್ಲೋಕರೂಪವಾಗಿ ಮತ್ತೆ ಹೇಳಿದ್ದಾನೆ. ಕ್ತ್ವಾಪ್ರತ್ಯಯಪ್ರಯೋಗವಿರುವ ಉದಾಹರಣೆಗಳನ್ನು ಇಷ್ಟು ಚೆನ್ನಾಗಿ ಬೇರೆ ಯಾರೂ ನಿರೂಪಿಸಿಲ್ಲ.

ಈ ವಿಷಯದಲ್ಲಿ ವ್ಯಾಖ್ಯಾನಕಾರ ರುಯ್ಯಕನೂ ಮಹಿಮಭಟ್ಟನನ್ನು ಹೊಗಳಿ ಹೀಗೆಂದಿದ್ದಾನೆ–

ಕರ್ತೃಭೇದವಿಷಯಾಂ ವಿರುದ್ಧತಾಂ ಕ್ತ್ವೋ ನಿವಾರ್ಯ ಘಟಿತಕ್ರಿಯಾಭಿಧಃ ।
ಪ್ರೌಢವಾದರಚನಾವಿಚಕ್ಷಣೋ ಲಕ್ಷ್ಯಸಿದ್ಧಿಮುದಿತಾನ್ ಕವೀನ್ ವ್ಯಧಾತ್ ॥

ಅಪಾತತಃ ಕಾಣುವ ಕರ್ತೃಭೇದ ಪ್ರಯುಕ್ತವಾದ ವ್ಯಾಕರಣವಿರುದ್ಧತ್ವವನ್ನು ನಾಮಪದಾಂತರ್ಗತವಾದ ಕ್ರಿಯೆಯ ಆಶ್ರಯಣದಿಂದ ನಿವಾರಿಸಿ ಸಮಾನ ಕರ್ತೃಕವಾದ ಎರಡು ಕ್ರಿಯೆಗಳನ್ನು ತೋರಿಸಿ ಪ್ರೌಢಿವಾದನಿಪುಣನಾದ ಮಹಿಮಭಟ್ಟನು ಕವಿಗಳು ಸಂತುಷ್ಟರಾಗುವಂತೆ ಮಾಡಿದನು – ಎಂದು ಈ ಪದ್ಯದ ತಾತ್ಪರ್ಯ. ಮಹಾಕವಿಗಳ ಅನೇಕ ಪ್ರಯೋಗಗಳಿರುವಾಗ ಅದು ತಪ್ಪು ಎಂದು ಹೇಳುವುದಕ್ಕಿಂತಲೂ ಅವುಗಳಿಗೆ ಉಪಪತ್ತಿಯನ್ನು ಹೇಳುವುದು ಲೇಸು. ಅದನ್ನು ಈ ಗ್ರಂಥಕಾರನು ಇಲ್ಲಿ ಮಾಡಿರುವುದು ಶ್ಲಾಘನೀಯ.

(ಉಪಸರ್ಗ, ನಿಪಾತ, ಕರ್ಮಪ್ರವಚನೀಯ)

**ಭಾವಪ್ರಧಾನಮಾಖ್ಯಾತಮ್ । ಅಸತ್ತ್ವಭೂತಾರ್ಥಾ ಉಪಸರ್ಗಾದಯಃ ।**
**ತೇಷಾಮ್ ಅಸತ್ತ್ವಭೂತಾರ್ಥತ್ವಾವಿಶೇಷೇಽಪಿ ವ್ಯಾಪಾರನಿಯಮಾತ್**
**ಪ್ರಯೋಗನಿಯಮಾಚ್ಚ ತ್ರೈರಾಶ್ಯೋಪಗಮಃ । ತಥಾಹಿ ।**

**ಕ್ರಿಯಾರೂಪಾತಿಶಯಪ್ರತಿಪತ್ತಿನಿಬಂಧನಮ್ ಉಪಸರ್ಗಾಃ ಪ್ರಾದಯಃ ।**
**ಭಾವಸತ್ತ್ವಯೋರಾತ್ಮಭೇದಪ್ರತ್ಯಾಯನನಿಮಿತ್ತಮ್**
**ಅವಧೃತರೂಪಾರ್ಥವಿಶೇಷಾಃ ಸ್ವರಾದಯೋ ನಿಪಾತಾಃ ।**
**ಕ್ರಿಯಾವಿಶೇಷೋಪಜನಿತಸಂಬಂಧಾವಚ್ಛೇದಹೇತವಃ ಕರ್ಮಪ್ರವಚನೀಯಾಃ ।**

**ಅನುವಾದ:**

ಭಾವಪ್ರಧಾನವಾದುದು ಆಖ್ಯಾತ (ಕ್ರಿಯಾಪದ). ಅಸತ್ತ್ವರೂಪವಾದ ಅರ್ಥವನ್ನುಳ್ಳವು ಉಪಸರ್ಗಾದಿಗಳು. ಅವುಗಳಿಗೆಲ್ಲ ಅಸತ್ತ್ವಭೂತಾರ್ಥತ್ವ ಎಂಬ ವಿಷಯದಲ್ಲಿ (ಪರಸ್ಪರ) ಭೇದವಿಲ್ಲದಿದ್ದರೂ ವ್ಯಾಪಾರನಿಯಮದಿಂದ ಮತ್ತು ಪ್ರಯೋಗನಿಯಮದಿಂದ ಅವುಗಳು ಮೂರು ಗುಂಪುಗಳಲ್ಲಿವೆ ಎಂದು ಒಪ್ಪಿಕೊಳ್ಳಲಾಗಿದೆ. ಅದು ಹೇಗೆಂದರೆ, ಕ್ರಿಯಾರೂಪದ ಅತಿಶಯವು ತಿಳಿದುಬರುವುದಕ್ಕೆ ಕಾರಣವಾಗಿರುವ 'ಪ್ರ' ಮುಂತಾದುವು ಉಪಸರ್ಗಗಳು. ಭಾವ ಮತ್ತು ಸತ್ತ್ವ ಎಂಬವುಗಳ ಭೇದವನ್ನು ತಿಳಿಸುವುದಕ್ಕಾಗಿ ನಿಶ್ಚಿತವಾದ ರೂಪವುಳ್ಳ ಅರ್ಥವಿಶೇಷವನ್ನು ಹೊಂದಿರುವ 'ಸ್ವರ್' ಮುಂತಾದುವು ನಿಪಾತಗಳು. ಕ್ರಿಯಾವಿಶೇಷದಿಂದ ಹುಟ್ಟಿದ ಸಂಬಂಧವನ್ನು ಪ್ರತ್ಯೇಕಿಸಿ ಹೇಳುವುದಕ್ಕೆ ಕಾರಣವಾದವು ಕರ್ಮಪ್ರವಚನೀಯಗಳು.

**ವಿವರಣೆ:**

ಭಾವಪ್ರಧಾನಮಾಖ್ಯಾತಮ್ ಎಂಬುದು ಯಾಸ್ಕನ ನಿರುಕ್ತದಲ್ಲಿರುವ ವಚನ. ಇಲ್ಲಿ 'ಭಾವ' ಎಂದರೆ ಶುದ್ಧವಾದ ಕ್ರಿಯೆ, ಅದೇ ಧಾತುವಿನ ಮೂಲಾರ್ಥ. "ಧಾತ್ವರ್ಥಃ ಕೇವಲಃ ಶುದ್ಧೋ ಭಾವ ಇತ್ಯಭಿಧೀಯತೇ" ಗಚ್ಛತಿ, ವದತಿ ಇತ್ಯಾದಿ ಸಮಸ್ತ ಕ್ರಿಯಾಪದಗಳಲ್ಲಿ ಕ್ರಿಯೆಗೇ ಪ್ರಾಧಾನ್ಯ. ಘಟ ಮುಂತಾದ ನಾಮಪದಗಳಿಗೂ ಪ್ರವೃತ್ತಿನಿಮಿತ್ತ ಕ್ರಿಯೆಯೇ ಎಂಬ ಪಕ್ಷದಲ್ಲೂ ನಾಮಪದಗಳಲ್ಲಿ ಕ್ರಿಯೆ ಅಪ್ರಧಾನವಾಗಿ ಅದನ್ನು ಹೊಂದಿರುವ ಸತ್ತ್ವರೂಪವಾದ ಪದಾರ್ಥವು ಪ್ರಧಾನವಾಗುತ್ತದೆ. ಆದ್ದರಿಂದ ನಾಮ–ಆಖ್ಯಾತಗಳಿಗೆ ಪರಸ್ಪರಭೇದವು ಸ್ಪಷ್ಟ. ಇನ್ನು ಉಳಿದ ಮೂರು ಉಪಸರ್ಗ–ನಿಪಾತ–ಕರ್ಮಪ್ರವಚನೀಯಗಳು. ಇವೆಲ್ಲವುಗಳಿಗೂ ಅಸತ್ತ್ವಭೂತಾರ್ಥತ್ವ ಎಂಬುದು ಸಾಮಾನ್ಯಲಕ್ಷಣ. ಸತ್ತ್ವ ಎಂದರೆ ಸಿದ್ಧರೂಪದಲ್ಲಿ ತೋರುವ ವಸ್ತು. ನಾಮಪದವಾಚ್ಯವಾದ ಘಟ, ಪಟ ಇತ್ಯಾದಿಗಳು ಸಿದ್ಧರೂಪದಲ್ಲಿ ಗೋಚರಿಸಲ್ಪಡುತ್ತವೆ. ಆದರೆ ಗಚ್ಛತಿ (ಹೋಗುತ್ತಿದ್ದಾನೆ), ಕರೋತಿ (ಮಾಡುತ್ತಿದ್ದಾನೆ) ಇತ್ಯಾದಿ ಕ್ರಿಯೆಗಳು ಸದಾ ಸಾಧ್ಯರೂಪದಲ್ಲೇ ಗೋಚರಿಸುತ್ತವೆ. ಉಪಸರ್ಗ, ನಿಪಾತ, ಕರ್ಮಪ್ರವಚನೀಯ ಎಂಬುವೂ ಕೇವಲ ಅಸತ್ತ್ವಭೂತವಾದ ಅರ್ಥಗಳನ್ನೇ ಸೂಚಿಸುತ್ತವೆ. ಆದರೂ ಅವುಗಳಲ್ಲಿ ಸೂಕ್ಷ್ಮವಾದ ಅರ್ಥಭೇದವನ್ನು ಕಂಡು ಮೂರು ಗುಂಪುಗಳನ್ನಾಗಿ ವಿಭಾಗಿಸಿದ್ದಾರೆ. ಪ್ರ, ಪರಾ, ಸಮ್ ಇತ್ಯಾದಿಗಳು ಉಪಸರ್ಗಗಳು. ಇವುಗಳನ್ನು ಧಾತುಗಳ ಹಿಂದೆ ಪ್ರಯೋಗಿಸುತ್ತಾರೆ. ಧಾತ್ವರ್ಥದ ಯಾವುದಾದರೂ ವಿಶೇಷವನ್ನು ಇವು ದ್ಯೋತಿಸಬಹುದು. 'ಸ್ವರ್' ಇತ್ಯಾದಿಗಳು ಅವ್ಯಯಗಳಾಗಿದ್ದು ಎಲ್ಲ ಲಿಂಗ, ವಚನ, ವಿಭಕ್ತಿಗಳಲ್ಲಿ ಸಮಾನರೂಪವನ್ನು ಪಡೆದಿರುತ್ತವೆ. ಸ್ವರ್ಗಚ್ಛತಿ=ಸ್ವರ್ಗಕ್ಕೆ ಹೋಗುತ್ತಾನೆ, ಸ್ವರ್ವಸತಿ=ಸ್ವರ್ಗದಲ್ಲಿ ವಾಸಿಸುತ್ತಾನೆ, ಸ್ವರ್ನಮಃ=ಸ್ವರ್ಗಕ್ಕೆ ನಮಸ್ಕಾರ,

ಸ್ವರ್ಧಃ ಪತಿತಃ= ಸ್ವರ್ಗದಿಂದ ಕೆಳಗೆ ಬಿದ್ದ ಇತ್ಯಾದಿ. ವಿಶೇಷಕ್ರಿಯೆಗಳ ಸಂಬಂಧವನ್ನು ಸೂಚಿಸುವುವು ಕರ್ಮಪ್ರವಚನೀಯಗಳೆಂದು ಕರೆಸಿಕೊಳ್ಳುತ್ತವೆ. ಇವುಗಳನ್ನು ಪಾಣಿನಿಯ ವ್ಯಾಕರಣದಲ್ಲಿ ವಿಶೇಷವಾಗಿ ಹೇಳಲಾಗಿದೆ. ಈ ರೀತಿಯ ವಿಭಾಗ ಭಾಷೆಯಲ್ಲಿರುವ ಪ್ರಯೋಗಗಳನ್ನು ವಿವರಿಸುವುದಕ್ಕೆ ಒಂದು ಉಪಾಯ.

ಪ್ರಯೋಗನಿಯಮದಿಂದಲೂ ಇವುಗಳ ಪರಸ್ಪರ ಭೇದವನ್ನು ಹೇಳಬಹುದು. ಉಪಸರ್ಗಗಳು ಸದಾ ಧಾತುವಿನ ಹಿಂದೆ ಪ್ರಯುಕ್ತವಾಗುತ್ತವೆ. 'ಚ' ಎಂಬ ನಿಪಾತವನ್ನು ಕ್ರಿಯಾಪದದ ಅಥವಾ ನಾಮಪದದ ಮುಂದೆ ಪ್ರಯೋಗಿಸಲಾಗುತ್ತದೆ. "ದೇವದತ್ತೋ ಗಚ್ಛತಿ ಪಶ್ಯತಿ ಚ", "ರಾಮಃ ಕೃಷ್ಣಶ್ಚ ಗಚ್ಛತಃ" ಇತ್ಯಾದಿ. ಕರ್ಮಪ್ರವಚನೀಯಗಳು ವಿಭಕ್ತಿವಿಶೇಷಕ್ಕೆ ಕಾರಣವಾಗಿರುತ್ತವೆ. "ವೃಕ್ಷಮನು ವಿದ್ಯೋತತೇ ವಿದ್ಯುತ್" ಇತ್ಯಾದಿ.

**ತದುಕ್ತಮ್ –**
**ದ್ವಿಧಾ ಕೈಶ್ಚಿತ್ ಪದಂ ಭಿನ್ನಂ ಚತುರ್ಧಾ ಪಂಚಧಾಪಿ ವಾ ।**
**ಅಪೋದ್ಧೃತ್ಯೈವ ವಾಕ್ಯೇಭ್ಯಃ ಪ್ರಕೃತಿಪ್ರತ್ಯಾದಿವತ್ ॥ ಇತಿ**
**ಏತಚ್ಚ ವಕ್ಷ್ಯತೇ ।**

**ಅನುವಾದ:**

ಕೆಲವರು ಪದವನ್ನು ಎರಡು ವಿಧವೆಂದು ವಿಭಾಗಿಸಿದ್ದಾರೆ. ಮತ್ತೆ ಕೆಲವರು ನಾಲ್ಕು ವಿಧವೆಂದು, ಇನ್ನೂ ಕೆಲವರು ಐದು ವಿಧವೆಂದು ಹೇಳಿದ್ದಾರೆ. ವಾಕ್ಯದಿಂದ 'ಅಪೋದ್ಧಾರ' ಮಾಡಿ ಇವುಗಳನ್ನು (ಪದದಲ್ಲಿ) ಪ್ರಕೃತಿಪ್ರತ್ಯಯಗಳನ್ನು ಹೇಳಿರುವಂತೆ ಹೇಳಿದ್ದಾರೆ. ಇದನ್ನು ಮುಂದೆ ವಿವರಿಸಲಾಗುವುದು.

**ವಿವರಣೆ:**

ಅರ್ಥವನ್ನು ತಿಳಿಸುವುದಕ್ಕಾಗಿ ವಾಕ್ಯದ ಪ್ರಯೋಗ. ಒಟ್ಟು ವಾಕ್ಯವು ಶ್ರೋತೃವಿಗೆ ಒಂದು ಅರ್ಥವನ್ನು ತಿಳಿಸುತ್ತದೆ. ಅದರೊಳಗೆ ಅಂಶಗಳನ್ನು ಕಲ್ಪಿಸಿ ಒಂದು ನಾಮಪದ, ಇನ್ನೊಂದು ಕ್ರಿಯಾಪದ, ಇದು ಉಪಸರ್ಗ, ಇದು ನಿಪಾತ, ಇದು ಕರ್ಮಪ್ರವಚನೀಯ ಎಂದು ವರ್ಣಿಸುವುದು ಅಪೋದ್ಧಾರ. ಇದು ವಿಶ್ಲೇಷಣೆಯ ಮತ್ತು ವ್ಯುತ್ಪತ್ತಿಯ ಸೌಕರ್ಯಕ್ಕಾಗಿ ಮಾಡಿಕೊಂಡಿರುವ ಕಾಲ್ಪನಿಕವ್ಯವಸ್ಥೆ. ಪದ ಒಂದೇ ಆಗಿದ್ದರೂ ಅದರಲ್ಲಿ ಪ್ರಕೃತಿ, ಪ್ರತ್ಯಯ ಎಂದು ವಿಭಾಗ ಮಾಡಿಕೊಂಡಿರುವುದೂ ಅಂಥ ಕಾಲ್ಪನಿಕವ್ಯವಸ್ಥೆಯೇ.

ಕೆಲವರು ವೈಯಾಕರಣರು ಪದ ಎರಡು ವಿಧ, ಸುಬಂತ, ತಿಙಂತ ಎಂದು ಹೇಳಿದ್ದಾರೆ. ಇನ್ನು ಕೆಲವರು ಪದಗಳನ್ನು ನಾಲ್ಕು ವಿಧವಾಗಿ ವಿಂಗಡಿಸಿ ನಾಮ, ಆಖ್ಯಾತ, ಉಪಸರ್ಗ, ನಿಪಾತ ಎಂದು ಹೇಳಿದ್ದಾರೆ. ಮತ್ತೆ ಕೆಲವರು ಅವುಗಳ ಜೊತೆಗೆ 'ಕರ್ಮಪ್ರವಚನೀಯ' ಎಂಬುದನ್ನು ಸೇರಿಸಿ ಪದ ಐದು ವಿಧ ಎಂದು ಹೇಳಿದ್ದಾರೆ. ಚಿಂತನೆಯ ಅನುಕೂಲಕ್ಕಾಗಿ ಇವುಗಳನ್ನು ಕಲ್ಪಿಸಲಾಗಿದೆ ಎಂಬುದನ್ನು ನಾವು ಮರೆಯಬಾರದು.

ಸಂಸ್ಕೃತಭಾಷೆಯ ದೃಷ್ಟಿಯಿಂದ ಈ ವಿಭಾಗಗಳನ್ನು ವೈಯಾಕರಣರು ಮಾಡಿದ್ದಾರೆ. ಎಲ್ಲ ಭಾಷೆಗಳಲ್ಲಿ ಇದೇ ವಿಭಾಗವನ್ನು ಅನುಸರಿಸಬೇಕಾಗಿಲ್ಲ. ಪ್ರತಿಯೊಂದು ಭಾಷೆಗೂ ತನ್ನದೇ ಆದ ವೈಶಿಷ್ಟ್ಯವಿರುವುದರಿಂದ ಅದಕ್ಕೆ ಅನುಗುಣವಾಗಿ ಪದವಿಭಾಗವನ್ನು ಮಾಡಿಕೊಳ್ಳಬಹುದು.

ಪಾಣಿನಿಯು 'ಸ್ವರ್' ಇತ್ಯಾದಿಗಳನ್ನು ಅವ್ಯಯಗಳೆಂದು ಹೇಳಿದ್ದಾನೆ. ಅವು ನಿಪಾತಗಳೆಂದು ಹೇಳಿಲ್ಲ. ಸ್ವರಾದಿ ನಿಪಾತಮವ್ಯಯಮ್ ಎಂಬುದು ಸೂತ್ರ. ಸ್ವರಾದಿಗಣದಲ್ಲಿ ಪಠಿತವಾದ ಶಬ್ದಗಳು ಮತ್ತು ನಿಪಾತಗಳು ಅವ್ಯಯಗಳು ಎಂದು ಅದರ ಅರ್ಥ. (ಸ್ವರಾದೀನಿ ಶಬ್ದರೂಪಾಣಿ ನಿಪಾತಾಶ್ಚ ಅವ್ಯಯಸಂಜ್ಞಾನಿ ಭವಂತಿ). ಚ ಇತ್ಯಾದಿಗಳು ಮತ್ತು ಪ್ರ ಇತ್ಯಾದಿಗಳು ನಿಪಾತಗಳು. ಪ್ರಾದಿಗಳಿಗೆ ಕ್ರಿಯಾಯೋಗದಲ್ಲಿ ಉಪಸರ್ಗಸಂಜ್ಞೆ. ಮಹಿಮಭಟ್ಟನಾದರೋ ಸ್ವರಾದಿಗಳೂ ನಿಪಾತಗಳು ಎಂದು ಹೇಳಿಬಿಟ್ಟಿದ್ದಾನೆ.

## ವಾಕ್ಯ ನಿರೂಪಣೆ

**ವಾಕ್ಯಮೇಕಪ್ರಕಾರಮ್ । ಕ್ರಿಯಾಪ್ರಾಧಾನ್ಯಾತ್,**
**ತಸ್ಯಾಶ್ಚೈಕತ್ವಾತ್ । ಯದಾಹುः –**
**ಸಾಕಾಂಕ್ಷಾವಯವಂ ಭೇದೇ ಪರಾನಾಕಾಂಕ್ಷಶಬ್ದಕಮ್ ।**
**ಕ್ರಿಯಾಪ್ರಧಾನಂ ಗುಣವದ್ ಏಕಾರ್ಥಂ ವಾಕ್ಯಮಿಷ್ಯತೇ ॥**

**ಅನುವಾದ:**

ವಾಕ್ಯವು ಒಂದೇ ಪ್ರಕಾರವನ್ನು ಹೊಂದಿರುತ್ತದೆ, ಏಕೆಂದರೆ ವಾಕ್ಯದಲ್ಲಿ ಕ್ರಿಯೆಗೇ ಪ್ರಾಧಾನ್ಯ. ಕ್ರಿಯೆ ಒಂದೇ ಆಗಿರುತ್ತದೆ. ಹಿಂದಿನವರೂ ಹೇಳಿದ್ದಾರೆ –

ಯಾವ (ಶಬ್ದ ಸಮೂಹದಲ್ಲಿ) ಭಿನ್ನವೂ ಪರಸ್ಪರಾಕಾಂಕ್ಷೆಯುಳ್ಳವೂ ಆದ (ಪದಗಳೆಂಬ) ಅವಯವಗಳಿರುವುವೋ, ಯಾವುದರಲ್ಲಿರುವ ಶಬ್ದಗಳು ಬೇರೆ ಪದಗಳ ಆಕಾಂಕ್ಷೆಯನ್ನು ಹೊಂದಿರುವುದಿಲ್ಲವೋ, ಕ್ರಿಯಾಪ್ರಧಾನವೂ ಗುಣವುಳ್ಳದ್ದೂ ಒಂದು ಅರ್ಥವನ್ನು ಕೊಡುವುದೂ ಆದ ಅಂಥ ಶಬ್ದ ಸಮೂಹವು ವಾಕ್ಯವೆನಿಸುತ್ತದೆ.

**ವಿವರಣೆ:**

ವಾಕ್ಯದ ಲಕ್ಷಣವನ್ನು ಪಾಣಿನಿಯು ಹೇಳಿಲ್ಲ. ನಿಷ್ಕೃಷ್ಟವಾಗಿ, ನಿರ್ದೋಷವಾಗಿ ಅದನ್ನು ಹೇಳುವುದು ಕಷ್ಟ. ವಾಕ್ಯವೆಂದರೆ ಪದಸಮೂಹ. ಅದರಲ್ಲಿರುವ ಪದಗಳಿಗೆ ಪರಸ್ಪರ ಆಕಾಂಕ್ಷೆ (expectancy) ಇರಬೇಕು. ಆ ಆಕಾಂಕ್ಷೆ ಅಲ್ಲೇ ಪೂರ್ಣವಾಗಬೇಕು. ಹೊರಗಿನ ಶಬ್ದಗಳ ಆಕಾಂಕ್ಷೆ ಇರಬಾರದು. ಕ್ರಿಯೆಯೇ ಅದರಲ್ಲಿ ಪ್ರಧಾನವಾಗಿರಬೇಕು. ಕ್ರಿಯೆಯ ಮತ್ತು ನಾಮಪದಾರ್ಥಗಳ ವಿಶೇಷಣಗಳೂ ಇರಬಹುದು. ಒಟ್ಟಿನಲ್ಲಿ ಅದು ಒಂದೇ ಅರ್ಥವನ್ನು ಪ್ರತಿಪಾದಿಸಬೇಕು.

"ಏಕತಿಙ್ ವಾಕ್ಯಮ್" ಎಂಬ ವಾರ್ತಿಕವು ಹೇಳುವಂತೆ ಒಂದು ವಾಕ್ಯದಲ್ಲಿ ಒಂದೇ ಕ್ರಿಯಾಪದ ಇರಬೇಕು. ಹಲವು ಕ್ರಿಯಾಪದಗಳಿದ್ದರೆ ಅದು ಹಲವು ವಾಕ್ಯಗಳ ಸಮೂಹ ಅಥವಾ ಮಹಾವಾಕ್ಯ ಆಗಬಹುದು. ರಾಮಃ ಸುಂದರಃ (ರಾಮನು ಚೆಲುವ) ಇತ್ಯಾದಿಗಳಲ್ಲಿ ಕ್ರಿಯಾಪದವನ್ನು ಪ್ರಯೋಗಿಸಿಲ್ಲ. ಅದು ಅಧ್ಯಾಹಾರದಿಂದ ಲಭ್ಯವಾಗುತ್ತದೆ.

## ಅರ್ಥನಿರೂಪಣಮ್

**ಅರ್ಥೋऽಪಿ ದ್ವಿವಿಧೋ ವಾಚ್ಯೋऽನುಮೇಯಶ್ಚ । ತತ್ರ ಶಬ್ದವ್ಯಾಪಾರವಿಷಯೋ ವಾಚ್ಯಃ।**
**ಸ ಏವ ಮುಖ್ಯ ಉಚ್ಯತೇ । ಯದಾಹು :–**

**ಶ್ರುತಿಮಾತ್ರೇಣ ಯತ್ರಾಸ್ಯ ತಾದರ್ಥ್ಯಮವಸೀಯತೇ ।**
**ತಂ ಮುಖ್ಯಮರ್ಥಂ ಮನ್ಯಂತೇ ಗೌಣಂ ಯತ್ನೋಪಪಾದಿತಮ್ ॥ ಇತಿ।**

**ಅನುವಾದ:**

ಅರ್ಥವೂ ವಾಚ್ಯ ಮತ್ತು ಅನುಮೇಯ ಎಂದು ಎರಡು ವಿಧ. ಅವುಗಳಲ್ಲಿ ಶಬ್ದವ್ಯಾಪಾರಕ್ಕೆ ವಿಷಯವಾದುದು ವಾಚ್ಯ. ಅದನ್ನೇ ಮುಖ್ಯಾರ್ಥ ಎಂದು ಕರೆಯುತ್ತಾರೆ. ಹಿಂದಿನವರೂ ಹೀಗೆಂದಿದ್ದಾರೆ –

ಶಬ್ದವನ್ನು ಕೇಳಿದ ಕೂಡಲೇ ಯಾವ ಅರ್ಥವನ್ನು ಅದು ತಿಳಿಸುವುದೋ ಅದನ್ನು ಮುಖ್ಯಾರ್ಥ ಎಂದು ಹೇಳುತ್ತಾರೆ. ಪ್ರಯತ್ನಪಟ್ಟು ಉಪಪಾದಿಸಲ್ಪಡುವ ಅರ್ಥವನ್ನು ಗೌಣಾರ್ಥ ಎಂದು ಕರೆಯುತ್ತಾರೆ.

**ವಿವರಣೆ:**

ಭಾಷೆಯಲ್ಲಿ ಶಬ್ದಕ್ಕೆ ಸಂಕೇತಿತವಾದ ಅರ್ಥವು ಆ ಶಬ್ದದ ಶ್ರವಣೋತ್ತರಕ್ಷಣದಲ್ಲಿ ತೋರುತ್ತದೆ. ಅದಕ್ಕೆ ಬೇರೆ ಪ್ರಯತ್ನ ಬೇಕಿಲ್ಲ. ಅದೇ ಮುಖ್ಯಾರ್ಥ. ಆಮೇಲೆ ಪ್ರಯತ್ನಪೂರ್ವಕವಾಗಿ ತಿಳಿದುಕೊಳ್ಳಬೇಕಾದ ಅರ್ಥ ಗೌಣಾರ್ಥ. ಗುಣದ ಆಧಾರದಿಂದ ಬಂದುದು ಗೌಣ.

## ಅನುಮೇಯಾರ್ಥ

**ತತ ಏವ ತದನುಮಿತದ್ವಾ ಲಿಂಗಭೂತಾದ್**
**ಯದರ್ಥಾಂತರಮನುಮೀಯತೇ ಸೋऽನುಮೇಯಃ ।**
**ಸ ಚ ತ್ರಿವಿಧಃ । ವಸ್ತುಮಾತ್ರಮ್, ಅಲಂಕಾರಾ, ರಸಾದಯಶ್ಚೇತಿ ।**
**ತತ್ರಾದ್ಯೌ ವಾಚ್ಯಾವಪಿ ಸಂಭವತಃ । ಅಂತ್ಯಸ್ತ್ವನುಮೇಯ ಏವೇತಿ ।**

**ಅನುವಾದ:**

ವಾಚ್ಯಾರ್ಥದಿಂದ, ಅಥವಾ ಅದರಿಂದ ಅನುಮಿತವಾದ ಅರ್ಥದಿಂದ ಯಾವ ಇನ್ನೊಂದು ಅರ್ಥವು ಅನುಮಿತವಾಗುವುದೋ ಅದು ಅನುಮೇಯ. ವಸ್ತುಮಾತ್ರ, ಅಲಂಕಾರಗಳು, ರಸಾದಿಗಳು ಎಂದು ಅದು ಮೂರು ವಿಧ. ಆ ಮೂರರಲ್ಲಿ ಮೊದಲನೆಯ ಎರಡು ವಾಚ್ಯವಾಗಿರುವುದೂ ಸಾಧ್ಯ. ಆದರೆ ಮೂರನೆಯದು ಸದಾ ಅನುಮಿತವಾಗಿ ಇರಬೇಕು.

**ವಿವರಣೆ:**

ಆನಂದವರ್ಧನನು ಧ್ವನ್ಯಾಲೋಕದಲ್ಲಿ ವ್ಯಂಗ್ಯಾರ್ಥವೆಂದು ಯಾವುದನ್ನು ಕರೆದಿರುವನೋ ಅದನ್ನೇ ಮಹಿಮಭಟ್ಟನು ಅನುಮಿತ ಅಥವಾ ಅನುಮೇಯ ಎಂದು ಕರೆದಿದ್ದಾನೆ. ವಸ್ತುಧ್ವನಿ, ಅಲಂಕಾರಧ್ವನಿ, ರಸಧ್ವನಿ ಎಂಬ ಮೂರು ಪ್ರಕಾರಗಳನ್ನೂ ಇಲ್ಲಿ ಅನುಮೇಯ ಎಂದು ಕರೆಯಲಾಗಿದೆ. ವಸ್ತು ಮತ್ತು ಅಲಂಕಾರಗಳು ವಾಚ್ಯವೂ ಆಗಬಹುದು, ರಸಭಾವಗಳು ಸದಾ ವ್ಯಂಗ್ಯ ಎಂದು ಆನಂದವರ್ಧನನು ಹೇಳಿರುವುದನ್ನೇ ಮಹಿಮಭಟ್ಟನು ಪ್ರತಿಧ್ವನಿಸಿದ್ದಾನೆ. ರಸಾದಿಗಳು ಸದಾ

ಅನುಮೇಯ ಎಂದು ಅವನ ಮಾತು. ವ್ಯಂಜನಾ ಎಂಬ ವ್ಯಾಪಾರದಿಂದ ಅವು ತಿಳಿದು ಬರುತ್ತವೆ ಎಂದು ಧ್ವನಿವಾದಿಗಳು ಹೇಳುತ್ತಾರೆ. ಆ ವ್ಯಾಪಾರವನ್ನು ನಿರಾಕರಿಸುವ ಮಹಿಮನು ರಸಾದಿಗಳು ಅನುಮಿತವಾಗುತ್ತವೆ ಎಂದು ಹೇಳುತ್ತಾನೆ.

**ತತ್ರ ಪದಸ್ಯಾರ್ಥೋ ವಾಚ್ಯ ಏವ, ನಾನುಮೇಯಃ ।**
**ತಸ್ಯ ನಿರಂಶತ್ವಾತ್ ಸಾಧ್ಯಸಾಧನಭಾವಾಭಾವತಃ ।**

**ಅನುವಾದ:**

ಅವುಗಳಲ್ಲಿ ಪದದ ಅರ್ಥ ವಾಚ್ಯವೇ ಆಗಿರುತ್ತದೆ, ಅದು ಅನುಮೇಯವಲ್ಲ. ಏಕೆಂದರೆ ಪದಾರ್ಥದಲ್ಲಿ ಅಂಶಗಳಿಲ್ಲ, ಅಲ್ಲಿ ಸಾಧ್ಯಸಾಧನಭಾವವೇ ಇರುವುದಿಲ್ಲವಾದುದರಿಂದ (ಅನುಮಾನ ಅಸಂಭವ).

**ವಿವರಣೆ:**

ಅನುಮೇಯ ಎಂದರೆ ಅನುಮಾನದಿಂದ ಗಮ್ಯವಾದುದು. ಲಿಂಗಜ್ಞಾನ ಉಂಟಾದ ಮೇಲೆ ವ್ಯಾಪ್ತಿಪಕ್ಷಧರ್ಮತಾದಿಗಳ ಮೂಲಕ ಲಿಂಗಿಯನ್ನು ಅರಿತುಕೊಳ್ಳುವುದು ಅನುಮಾನ. ಲಿಂಗವು ಸಾಧನ, ಲಿಂಗಿ ಸಾಧ್ಯ. ಇವೆರಡೂ ಪರಸ್ಪರ ಭಿನ್ನ. ಆದ್ದರಿಂದ ಎಲ್ಲಿ ಬೇರೆ ಬೇರೆ ಅಂಶಗಳಿರುವುವೋ ಅಲ್ಲಿ ಅನುಮಾನ ಸಾಧ್ಯ. ಧೂಮವನ್ನು ಕಂಡು ಪರ್ವತದಲ್ಲಿ ಅಗ್ನಿಯನ್ನು ತಿಳಿದುಕೊಳ್ಳುವುದು ಅನುಮಾನ. ಧೂಮ ಸಾಧನ, ಅಗ್ನಿ ಸಾಧ್ಯ, ಪರ್ವತ ಪಕ್ಷ. ಈ ಮೂರು ಅಂಶಗಳಿಲ್ಲದಿದ್ದಾಗ ಅನುಮಾನ ಸಂಭವಿಸದು. ಪದದ ಅರ್ಥ ಒಂದೇ ಆದುದರಿಂದ ಅದರಲ್ಲಿ ಬೇರೆ ಬೇರೆ ಅಂಶಗಳಿಲ್ಲ. ಪದದಿಂದ ಅರ್ಥದ ಬೋಧೆ ಉಂಟಾದಾಗ ಆ ಅರ್ಥ ವಾಚ್ಯ. ಅನುಮೇಯವಲ್ಲ. ವಾಕ್ಯಾರ್ಥದಲ್ಲಿ ಹಲವು ಅಂಶಗಳಿರುವುದರಿಂದ ಅಲ್ಲಿ ಸಾಧ್ಯಸಾಧನಭಾವವು ಸಂಭವಿಸುತ್ತದೆ. ವಾಕ್ಯಾರ್ಥ ವಾಚ್ಯವೂ ಅನುಮೇಯವೂ ಆಗಿರಬಹುದು.

**ವಾಕ್ಯಾರ್ಥಸ್ತು ವಾಚ್ಯಸ್ಯಾರ್ಥಸ್ಯಾಂಶಾನಾಂ ವಿಧ್ಯನುವಾದಭಾವೇನ**
**ಅವಸ್ಥಿತೇರ್ವಿಧೇಯಾಂಶಸ್ಯ ಸಿದ್ಧಾಸಿದ್ಧತಯಾ ಉಪಪಾದನಾನಪೇಕ್ಷ–**
**ಸಾಪೇಕ್ಷತ್ವೇನ ದ್ವಿವಿಧೋ ಬೋದ್ಧವ್ಯಃ ।**

**ಅನುವಾದ:**

ವಾಚ್ಯಾರ್ಥದ ಅಂಶಗಳು ವಿಧ್ಯನುವಾದಭಾವದಿಂದ ನಿಂತಿರುವುದರಿಂದ, ವಿಧೇಯಾಂಶವು ಸಿದ್ಧವೋ ಅಸಿದ್ಧವೋ, ಉಪಪಾದನಾನಪೇಕ್ಷವೋ ಉಪಪಾದನಸಾಪೇಕ್ಷವೋ ಆಗಿರಬಹುದಾದುದರಿಂದ ವಾಚ್ಯಾರ್ಥವು ಎರಡು ವಿಧ ಎಂದು ತಿಳಿದುಕೊಳ್ಳಬೇಕು.

**ವಿವರಣೆ:**

ವಾಕ್ಯದಲ್ಲಿ ಒಂದು ಅಂಶ ಅನುವಾದ (subject) ರೂಪದಲ್ಲಿದ್ದು ಇನ್ನೊಂದು ವಿಧೇಯ (predicate)ವಾಗಿರುತ್ತದೆ. "ರಾಮನು ಸುಂದರ" ಎಂಬ ವಾಕ್ಯದಲ್ಲಿ ರಾಮ ಎಂಬುದನ್ನು ಅನುವಾದಿಸಿ ಸುಂದರ ಎಂಬ ಅರ್ಥವನ್ನು ವಿಧಿಸಲಾಗುತ್ತದೆ. ಆ ವಿಧೇಯಾಂಶವು

ಸಿದ್ಧರೂಪದಲ್ಲಿರಬಹುದು ಅಥವಾ ಅಸಿದ್ಧರೂಪದಲ್ಲಿ ಇರಬಹುದು. ಕೆಲವೆಡೆಗಳಲ್ಲಿ ವಿಧೇಯಾರ್ಥವನ್ನು ಉಪಪಾದಿಸುವ ಆವಶ್ಯಕತೆ ಇರಬಹುದು, ಕೆಲವೆಡೆ ಉಪಪಾದನೆ ಬೇಕಾಗಿಲ್ಲದೆ ಇರಬಹುದು. ಲೋಕ ಪ್ರಸಿದ್ಧವಾಗಿರುವುದಕ್ಕೆ ಮತ್ತೆ ಉಪಪಾದನೆ (ಅಥವಾ ಸಮರ್ಥನೆ) ಬೇಕಿಲ್ಲ.

**ತತ್ರ ಸಿದ್ಧೌ ವಿಧ್ಯನುವಾದಭಾವಃ ಸ್ವರೂಪಮಾತ್ರಾನುವಾದಾದ್ ಯಥಾ –**
**ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ । ಇತ್ಯತ್ರ ।**

**ಅನುವಾದ:**

ಅವುಗಳಲ್ಲಿ, ಸ್ವರೂಪಮಾತ್ರದ ಅನುವಾದದಿಂದ ವಿಧ್ಯನುಭಾವವು ಸಿದ್ಧವಾಗಿರುವುದಕ್ಕೆ ಉದಾಹರಣೆ –

"ಉತ್ತರದಿಕ್ಕಿನಲ್ಲಿ ದೇವತಾಸ್ವರೂಪನಾದ ಹಿಮಾಲಯನೆಂಬ ಬೆಟ್ಟಗಳೊಡೆಯನಿದ್ದಾನೆ" ಎಂಬಲ್ಲಿದೆ.

**ವಿವರಣೆ:**

ಇಲ್ಲಿ ವಿಧೇಯಾಂಶ (predicate) ಅಸ್ತಿ (ಇದ್ದಾನೆ) ಎಂಬುದು ಲೋಕಪ್ರಸಿದ್ಧವಾಗಿರುವುದರಿಂದ ಉಪಪಾದನೆ ಇಲ್ಲದೆಯೇ ಸಿದ್ಧವಾಗಿದೆ.

**ಅಸಿದ್ಧೌ ಸಾಧ್ಯಸಾಧನಭಾವರೂಪೋಽನೂದ್ಯಮಾನಸ್ಯಾಂಶಸ್ಯ ಸಾಧನಧುರಾಧಿರೋಹಾತ್।**
**ಸಾಧ್ಯಸಾಧನಭಾವಶ್ಚಾನಯೋರವಿನಾಭಾವಾವಸಾಯಕೃತೋಽವಗಂತವ್ಯಃ ।**

**ಅನುವಾದ:**

ಅಸಿದ್ಧಿಯಲ್ಲಿ (ಎಂದರೆ ಉಪಪಾದನೆ ಅಪೇಕ್ಷಿತವಾಗಿರುವ ಸಂದರ್ಭದಲ್ಲಿ) ವಾಕ್ಯಾರ್ಥವು ಸಾಧ್ಯಸಾಧನಭಾವರೂಪವಾಗಿರುತ್ತದೆ. ಅದರಲ್ಲಿ ಅನುವಾದ ಮಾಡಲ್ಪಡುವ ಅಂಶ ಸಾಧನವಾಗುತ್ತದೆ. ಅವುಗಳಿಗೆ ಸಾಧ್ಯಸಾಧನಭಾವವು ಅವಿನಾಭಾವದ ನಿಶ್ಚಯದಿಂದ ಉಂಟಾಗಿದೆ ಎಂದು ತಿಳಿದುಕೊಳ್ಳಬೇಕು.

**ವಿವರಣೆ:**

ಅವಿನಾಭಾವ ಎಂದರೆ ಒಂದಿಲ್ಲದೆ ಇನ್ನೊಂದು ಇರಲಾರದು ಎಂಬ ಅಭೇದ್ಯನಿಯಮ. ಬೆಂಕಿ ಇಲ್ಲದೆ ಹೊಗೆ ಇರುವುದು ಸಾಧ್ಯವಲ್ಲ. ಆದ್ದರಿಂದ ಧೂಮಾಗ್ನಿಗಳಿಗೆ ಅವಿನಾಭಾವವಿದೆ. ಹಾಗಿದ್ದಾಗಲೇ ಸಾಧ್ಯಸಾಧನಭಾವಜ್ಞಾನಕ್ಕೆ ಮೂಲ. ಅನುವಾದಾಂಶವು ಸಾಧನ, ವಿಧೇಯಾಂಶವು ಸಾಧ್ಯ. ಅದೂ ಅನೇಕ ಪ್ರಕಾರವಾಗಿ ಪ್ರತಿಪಾದಿಸಲ್ಪಡುತ್ತದೆ. ಶಾಬ್ದ, ಆರ್ಥ ಎಂಬ ಪ್ರಕಾರಗಳಿವೆ. ಅವುಗಳನ್ನು ಮುಂದೆ ವಿವರಿಸಲಾಗುವುದು.

(ಮೂರು ಪ್ರಮಾಣಗಳು)

**ಸ ಚ ಪ್ರಮಾಣಮೂಲಃ । ತಚ್ಚ ತ್ರಿವಿಧಮ್ ।**
**ಯದಾಹು:– ಲೋಕೋ ವೇದಸ್ತಥಾಧ್ಯಾತ್ಮಂ**
**ಪ್ರಮಾಣಂ ತ್ರಿವಿಧಂ ಸ್ಮೃತಮ್ । ಇತಿ ।**

**ತತ್ರ ಲೋಕಪ್ರಸಿದ್ಧಾರ್ಥವಿಷಯೋ ಲೋಕಃ । ಯಥಾ –**
**ಕಯಾಸಿ ಕಾಮಿನ್ ಸರಸಾಪರಾಧಃ ಪಾದಾನತಃ ಕೋಪನಯಾವಧೂತಃ ।**
**ಯಸ್ಯಾಃ ಕರಿಷ್ಯಾಮಿ ದೃಢಾನುತಾಪಂ ಪ್ರವಾಲಶಯ್ಯಾಶರಣಂ ಶರೀರಮ್ ॥**
**ಅತ್ರ ಹಿ ಪಾದಾನತಿತದವಧೂತ್ಯೋಃ ಸರಸಾಪರಾಧಕೋಪನತ್ವಯೋಶ್ಚ ಲೋಕಪ್ರಮಾಣಸಿದ್ಧಃ ಕಾರ್ಯ– ಕಾರಣಭಾವಃ, ತನ್ಮೂಲಶ್ಚ ಸಾಧ್ಯಸಾಧನಭಾವಃ ।**

**ಅನುವಾದ:**

ಆ (ಅವಿನಾಭಾವದ ನಿಶ್ಚಯವು) ಪ್ರಮಾಣಾಧೀನ. ಆ ಪ್ರಮಾಣವು ಮೂರು ವಿಧ. ಹಿಂದಿನವರೂ ಹೇಳಿದ್ದಾರೆ – "ಲೋಕ, ವೇದ, ಅಧ್ಯಾತ್ಮ ಎಂದು ಪ್ರಮಾಣ ಮೂರುವಿಧವಾಗಿ ಹೇಳಲ್ಪಟ್ಟಿದೆ."

ಲೋಕಪ್ರಸಿದ್ಧವಾದ ಅರ್ಥವನ್ನು ವಿಷಯವಾಗಿ ಉಳ್ಳದ್ದು ಲೋಕಪ್ರಮಾಣ. ಉದಾಹರಣೆ– "ಕಾಮಿ ಇಂದ್ರನೆ, ಸರಸವಾದ ಅಪರಾಧವನ್ನು ಮಾಡಿ (ಕ್ಷಮೆಯನ್ನು ಯಾಚಿಸಲು) ಕಾಲಿಗೆ ಬಿದ್ದು ನೀನು ಬೇಡಿಕೊಂಡರೂ ಯಾವ ಸ್ತ್ರೀ ನಿನ್ನನ್ನು ತಿರಸ್ಕರಿಸಿದಳು? ಅವಳ ಶರೀರವು ಅತಿಯಾದ ಸಂತಾಪವನ್ನು ಹೊಂದಿ ಚಿಗುರುಹಾಸಿಗೆಯ ಮೇಲೆ ಉರುಳಾಡುವಂತೆ ನಾನು ಮಾಡಲೆ?"

ಇಲ್ಲಿ ಕಾಲುಗಳ ಮೇಲೆ ಬೀಳುವುದು ಮತ್ತು ತಿರಸ್ಕರಿಸಲ್ಪಡುವುದು, ಸರಸಾಪರಾಧವನ್ನು ಮಾಡುವುದು ಮತ್ತು ಕೋಪಿಸಿಕೊಳ್ಳುವುದು ಎಂಬವುಗಳಿಗೆ ಕಾರ್ಯಕಾರಣಭಾವವೂ ತನ್ಮೂಲಕವಾಗಿ ಸಾಧ್ಯಸಾಧನಭಾವವೂ ಲೋಕಪ್ರಮಾಣದಿಂದ ಸಿದ್ಧವಾಗಿದೆ.

**ಯಥಾ ವಾ –**
**ಚಂದ್ರಂ ಗತಾ ಪದ್ಮಗುಣಾನ್ನ ಭುಂಕ್ತೇ ಪದ್ಮಾಶ್ರಿತಾ ಚಾಂದ್ರಮಸೀಮಭಿಖ್ಯಾಮ್ ।**
**ಉಮಾಮುಖಂ ತು ಪ್ರತಿಪದ್ಯ ಲೋಲಾ ದ್ವಿಸಂಶ್ರಯಾಂ ಪ್ರೀತಿಮವಾಪ ಲಕ್ಷ್ಮೀಃ ॥**
**ಅತ್ರ ಹಿ ಪದ್ಮಗುಣಾನಾಂ ಚಾಂದ್ರಮಸ್ಯಾ ಅಭಿಖ್ಯಾಯಾಶ್ಚ ಯುಗಪದಭೋಗೇ ಲಕ್ಷ್ಮ್ಯಾಯತ್ ಕಾರಣದ್ವಯಂ ರಾತ್ರಿಸಂಕೋಚದಿವಾನುದಯಲಕ್ಷಣಂ ತಲ್ಲೋಕಪ್ರಸಿದ್ಧಮೇವೇತಿ ನೋಪಾದೇಯತಾಮರ್ಹತಿ ।**

**ಅನುವಾದ:**

ಇನ್ನೊಂದು ಉದಾಹರಣೆ –

ಲಕ್ಷ್ಮಿಯು (ಸೌಂದರ್ಯಕಾಂತಿಯು) ಚಂದ್ರನಲ್ಲಿದ್ದಾಗ ಪದ್ಮದ ಗುಣವಿಶೇಷಗಳನ್ನು ಪಡೆದಿರುವುದಿಲ್ಲ. ಪದ್ಮವನ್ನು ಆಶ್ರಯಿಸಿದಾಗ ಚಂದ್ರನ ಸೊಬಗನ್ನು ಹೊಂದಿರುವುದಿಲ್ಲ. ಆ ಲಕ್ಷ್ಮಿ ಚಂಚಲೆಯಾಗಿದ್ದರೂ ಉಮೆಯ ಮುಖವನ್ನು ಆಶ್ರಯಿಸಿದಾಗ ಆ ಎರಡರಲ್ಲೂ ಒಟ್ಟಿಗೆ ವಾಸವಾಡುವ ಸಂತೋಷವನ್ನು ಪಡೆದುಕೊಂಡಳು.

ಈ ಪದ್ಯದಲ್ಲಿ ಲಕ್ಷ್ಮಿಯು ಪದ್ಮದ ಗುಣಗಳನ್ನೂ ಚಂದ್ರನ ಸೊಬಗನ್ನೂ ಒಟ್ಟಿಗೆ ಪಡೆಯಲು ಆಗುತ್ತಿರಲಿಲ್ಲ ಎಂಬುದಕ್ಕೆ ಎರಡು ಕಾರಣಗಳಿವೆ. (ಪದ್ಮವು) ರಾತ್ರಿಯಲ್ಲಿ ಮುಚ್ಚಿಕೊಂಡಿರುತ್ತದೆ (ಎಂಬುದು ಒಂದು ಕಾರಣ) ಮತ್ತು (ಚಂದ್ರನು) ಹಗಲಿನಲ್ಲಿ ಕಾಣಿಸುವುದಿಲ್ಲ (ಎಂಬುದು ಎರಡನೆಯ ಕಾರಣ). ಆ ಕಾರಣಗಳು ಲೋಕಪ್ರಸಿದ್ಧವೇ ಆದುದರಿಂದ ಅವುಗಳನ್ನು ಮಾತಿನಿಂದ ಹೇಳಬೇಕಾಗಿಲ್ಲ.

**ಶಾಸ್ತ್ರಮಾತ್ರಪ್ರಸಿದ್ಧಾರ್ಥವಿಷಯೋ ವೇದಃ ।**
**ವೇದಗ್ರಹಣಮ್ ಇತಿಹಾಸಪುರಾಣಧರ್ಮಶಾಸ್ತ್ರಾದ್ಯುಪಲಕ್ಷಣಂ,**
**ತೇಷಾಂ ತನ್ಮೂಲತ್ವೋಪಗಮಾತ್ । ಯಥಾ**
**ಅಯಾಚಿತಾರಂ ನಹಿ ದೇವಮದ್ರಿಃ ಸುತಾಂ ಪ್ರತಿಗ್ರಾಹಯಿತುಂ ಶಶಾಕ ।**
**ಅಭ್ಯರ್ಥನಾಭಂಗಭಯೇನ ಸಾಧುರ್ಮಾಧ್ಯಸ್ಥಮಿಷ್ಟೇಽಪ್ಯವಲಂಬತೇಽರ್ಥೇ ॥**
**ಅತ್ರ ಹಿ ಕಾರಣಭೂತಸ್ಯ ಭಗವದ್ಗತಸ್ಯ ಸಂಪ್ರದಾನತ್ವನಿಬಂಧನಸ್ಯ**
**ಯಾಚನಸ್ಯಾಭಾವೇ ಭೂಧರೇಂದ್ರಗತಸ್ಯ ಕಾರ್ಯಸ್ಯ**
**ಕನ್ಯಾಗ್ರಾಹಣಶಕ್ತತ್ವಸ್ಯಾಭಾವೋಪನಿಬಂಧಃ ಶಾಸ್ತ್ರಮೂಲಃ,**
**ತಯೋಃ ಕಾರ್ಯಕಾರಣಭಾವಸ್ಯ ತನ್ಮೂಲತ್ವೇನ ಪ್ರಸಿದ್ಧೇಃ ।**

**ಅನುವಾದ:**

ಶಾಸ್ತ್ರದಲ್ಲಿ ಮಾತ್ರ ಪ್ರಸಿದ್ಧವಾದ ಅರ್ಥವನ್ನು ವಿಷಯುವಾಗಿ ಮಾಡಿಕೊಂಡಿರುವ ಪ್ರಮಾಣ ವೇದ. ವೇದ ಎಂಬ ಶಬ್ದವು ಇತಿಹಾಸ, ಪುರಾಣ, ಧರ್ಮಶಾಸ್ತ್ರ ಮುಂತಾದುವುಗಳಿಗೂ ಉಪಲಕ್ಷಣ. ಏಕೆಂದರೆ ಅವೆಲ್ಲ ವೇದಮೂಲದಿಂದಲೇ ಹುಟ್ಟಿದುವೆಂದು ಒಪ್ಪಿಕೊಳ್ಳಲಾಗಿದೆ. ಅಂಥ ವೇದಪ್ರಮಾಣಕ್ಕೆ ಉದಾಹರಣೆ – "ಹಿಮಾಲಯನು ತನ್ನ ಮಗಳನ್ನು, ತಾನಾಗಿ ಕೇಳದ ಭಗವಾನ್ ಶಿವನಿಗೆ ಕೊಟ್ಟು ಮದುವೆ ಮಾಡಲು ಶಕ್ತನಾಗಲಿಲ್ಲ. ತನಗೆ ಅತ್ಯಂತ ಇಷ್ಟವಾದ ವಿಷಯದಲ್ಲೂ ಸತ್ಪುರುಷನು, ಬೇಡಿಕೆಯು ಎಲ್ಲಿ ತಿರಸ್ಕೃತವಾಗಿ ಬಿಡುವುದೋ ಎಂಬ ಹೆದರಿಕೆಯಿಂದ ತಾಟಸ್ಥ್ಯವನ್ನು ವಹಿಸುತ್ತಾನೆ."

ಇಲ್ಲಿ ಕಾರಣವಾದುದು ಎಂದರೆ ಭಗವಾನ್ ಶಿವನಲ್ಲಿ ಸಂಪ್ರದಾನತ್ವಕ್ಕೆ ನಿಬಂಧನವಾಗುವ ಯಾಚನೆ. ಅದು ಇಲ್ಲದುದರಿಂದ ಕಾರ್ಯವಾದ ಕನ್ಯೆಯ ಅರ್ಪಣಾಶಕ್ತತ್ವವೂ ಇಲ್ಲವಾಯಿತು ಎಂಬ ಅಂಶವು ಶಾಸ್ತ್ರಮೂಲವಾಗಿ ಪ್ರಸಿದ್ಧವಾಗಿದೆ.

**ವಿವರಣೆ:**

ವೇದ ಎಂಬ ಪ್ರಮಾಣದಲ್ಲಿ ಇತಿಹಾಸ, ಪುರಾಣ, ಧರ್ಮಶಾಸ್ತ್ರ ಇತ್ಯಾದಿಗಳೂ ಸೇರಿಕೊಂಡಿವೆ. ವೇದಶಬ್ದವು ಉಪಲಕ್ಷಣ. ಲಕ್ಷಣಕ್ಕೂ ಉಪಲಕ್ಷಣಕ್ಕೂ ಇರುವ ಭೇದವನ್ನಿಲ್ಲಿ ತಿಳಿದುಕೊಳ್ಳಬೇಕು. ಲಕ್ಷಣವು ತನ್ಮಾತ್ರಗ್ರಾಹಿ. ಅದರಲ್ಲಿ ಶಬ್ದದ ಮುಖ್ಯಾರ್ಥವನ್ನು ಮಾತ್ರ ತಿಳಿದುಕೊಳ್ಳಬೇಕು. ಉಪಲಕ್ಷಣದಲ್ಲಿ ಮುಖ್ಯಾರ್ಥವನ್ನೂ ವಿವಕ್ಷಿತಲಕ್ಷ್ಯಾರ್ಥವನ್ನೂ ಸೇರಿಸಿಕೊಂಡು

ಅರ್ಥಮಾಡಿಕೊಳ್ಳಬೇಕು. ವೇದ ಎಂದರೆ ನಾಲ್ಕುವೇದಗಳು. ಋಗ್-ಯಜುಸ್-ಸಾಮ-ಅಥರ್ವ ಎಂಬವು. ಅದು ಉಪಲಕ್ಷಣವಾದುದರಿಂದ ಅವುಗಳ ಜೊತೆಗೆ ತನ್ಮೂಲವಾದ ಇತಿಹಾಸಾದಿಗಳನ್ನೂ ಸೇರಿಸಿಕೊಳ್ಳಬೇಕು.

ಸಂಪ್ರದಾನ ಎಂದರೆ ದಾನವನ್ನು ಸ್ವೀಕರಿಸುವ ವ್ಯಕ್ತಿ. ವಿವಾಹ (ಮದುವೆ) ಎಂದರೆ ಕನ್ಯಾದಾನ. ಹಿಮಾಲಯನು ತನ್ನ ಮಗಳಾದ ಉಮೆಯನ್ನು ಶಿವನಿಗೆ ದಾನ ಮಾಡಬೇಕೆಂದುಕೊಂಡಿದ್ದರೂ, ಆ ಶಿವನ ಕಡೆಯಿಂದ ಬೇಡಿಕೆ ಬರದ ಕಾರಣ ಆ ಕನ್ಯಾದಾನವನ್ನು ಮಾಡಲು (ತಂದೆ ಹಿಮಾಲಯನು) ಶಕ್ತನಾಗಲಿಲ್ಲ ಎಂದು ಕಾಳಿದಾಸನು ಹೇಳುತ್ತಿದ್ದಾನೆ. ಬೇಡಿಕೆ ಎಂಬುದು ಕಾರಣ, ದಾನಶಕ್ತತ್ವ ಎಂಬುದು ಕಾರ್ಯ. ಕಾರಣಾಭಾವದಿಂದ ಕಾರ್ಯದ ಅಭಾವ. ಈ ಕಾರ್ಯಕಾರಣಭಾವವು ಶಾಸ್ತ್ರಮೂಲವಾದುದು, ಲೋಕಪ್ರಸಿದ್ಧವಲ್ಲ. ಆದ್ದರಿಂದ ಇಲ್ಲಿ ಪ್ರಮಾಣ ವೇದ. ಈ ಕಾರ್ಯಕಾರಣಭಾವವು ಹೇಗೆ ಶಾಸ್ತ್ರದಿಂದ ಒದಗಿಬಂದಿತೆಂಬುದು ಮುಂದಿನ ವಾಕ್ಯದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

**ಯದಾಹು:-**
**ಅಯಾಚಿತಾನಿ ದೇಯಾನಿ ಸರ್ವದ್ರವ್ಯಾಣಿ ಭಾರತ ।**
**ಅನ್ನಂ ವಿದ್ಯಾ ತಥಾ ಕನ್ಯಾ ಅನರ್ಥಿಭ್ಯೋ ನ ದೀಯತೇ ॥**
**ಅರ್ಥೀ ಚ ಸಂಪ್ರದಾನಮ್ । ಯದುಕ್ತಮ್ –**
**ಅನಿರಾಕರಣಾತ್ ಕರ್ತುಸ್ತ್ಯಾಗಾಂಗಂ ಕರ್ಮಣೇಪ್ಸಿತಮ್ ।**
**ಪ್ರೇರಣಾನುಮತಿಭ್ಯಾಂ ವಾ ಲಭತೇ ಸಂಪ್ರದಾನತಾಮ್ ॥**
**ಏವಂ ಚ ಕಾರಣಾನುಪಲಬ್ಧಿಪ್ರಯೋಗೋಽಯಮಾರ್ಥ**
**ಇತಿ ಮಂತವ್ಯಂ ಯಥಾ ನಾತ್ರ ಧೂಮೋಽಗ್ನೇರಭಾವಾದಿತಿ ।**

**ಅನುವಾದ:**

ಏಕೆಂದರೆ (ಶಾಸ್ತ್ರಕಾರರು) ಹೇಳಿದ್ದಾರೆ –

"ಎಲೈ ಭರತವಂಶಸಂಜಾತನೆ, ಎಲ್ಲ ಪದಾರ್ಥಗಳನ್ನೂ ಕೇಳಲ್ಪಡದಿದ್ದರೂ ಕೊಡಬೇಕು. ಆದರೆ, ಅನ್ನ, ವಿದ್ಯೆ ಮತ್ತು ಕನ್ಯೆ –ಇವನ್ನು ಕೇಳದಿದ್ದವರಿಗೆ ಕೊಡಬಾರದು."

ಅರ್ಥಿ ಎಂದರೆ ಸಂಪ್ರದಾನ. ಅದನ್ನೂ (ಹಿಂದಿನವರು) ಹೇಳಿದ್ದಾರೆ –

ತ್ಯಾಗದ ಅಂಗವಾಗಿದ್ದ ದಾನದ ಕರ್ಮಕ್ಕೆ ಉದ್ದೇಶವಾಗಿರುವವನು ನಿರಾಕರಣೆ ಮಾಡದಿರುವುದರಿಂದ, ಪ್ರೇರಣೆ ಮಾಡುವುದರಿಂದ, ಅಥವಾ ಅನುಮತಿಸುವುದರಿಂದ ಸಂಪ್ರದಾನತ್ವವನ್ನು ಪಡೆಯುತ್ತಾನೆ. ಆದ್ದರಿಂದ (ಅಯಾಚಿತಾರಮ್ ಇತ್ಯಾದಿ ಪದ್ಯದಲ್ಲಿ) ಈ ಕಾರಣಾನುಪಲಬ್ಧಿಪ್ರಯೋಗವು ಅರ್ಥಸಿದ್ಧ, (ಶಬ್ದದಿಂದ ಉಕ್ತವಾದುದಲ್ಲ) ಎಂದು ತಿಳಿದುಕೊಳ್ಳಬೇಕು–"ಇಲ್ಲಿ ಬೆಂಕಿ ಇಲ್ಲದ ಕಾರಣ ಹೊಗೆಯೂ ಇಲ್ಲ"–ಎಂಬ ಉದಾಹರಣೆಯಲ್ಲಿರುವಂತೆ.

**ವಿವರಣೆ:**

ಸಂಪ್ರದಾನವು ಮೂರು ವಿಧ. ಸೂರ್ಯಾಯ ಅರ್ಘ್ಯಂ ದದಾತಿ (ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಾನೆ) ಇತ್ಯಾದಿಗಳಲ್ಲಿ ಸೂರ್ಯನು 'ನನಗೆ ಅರ್ಘ್ಯ ಬೇಡ' ಎಂದು ಹೇಳಿ

ನಿರಾಕರಿಸುವುದಿಲ್ಲ. ಅಷ್ಟರಿಂದಲೇ ಅವನಿಗೆ ಸಂಪ್ರದಾನತ್ವ ಸಿದ್ಧವಾಗುತ್ತದೆ. "ಗೋದಾನಂ ಪುಣ್ಯದಂ, ಮಹ್ಯಂ ಗಾಂ ದೇಹಿ" (ಗೋದಾನ ಪುಣ್ಯಕರ, ನನಗೆ ಗೋವನ್ನು ಕೊಡು) ಎಂದು ರಾಜನಿಗೆ ಹೇಳಿ ಬ್ರಾಹ್ಮಣನು ದಾನವನ್ನು ಪಡೆದರೆ ಅದು ಪ್ರೇರಣಾಪೂರ್ವಕ ಸಂಪ್ರದಾನತ್ವ. ರಾಜನು ತಾನಾಗಿ ಯಾವುದಾದರೂ ದಾನವನ್ನು ಕೊಡಲು ಬಂದಾಗ 'ಆಗಬಹುದು' ಎಂದು ಸ್ವೀಕರಿಸಿದರೆ ಅದು ಅನುಮತಿ ಸಂಪ್ರದಾನತ್ವ.

ಅರ್ಥಿಗಳಲ್ಲದವರಿಗೆ ಕನ್ಯೆಯನ್ನು ಕೊಡಬಾರದು ಎಂದು ಶಾಸ್ತ್ರವು ಹೇಳಿರುವುದರಿಂದ ಆ ವಿಷಯ ವೇದಪ್ರಮಾಣಕ್ಕೆ ಸೇರಿದೆ. ಲೋಕದಿಂದ ಅದನ್ನು ತಿಳಿಯಲಾಗದು. ಕಾರ್ಯವನ್ನು ಕಂಡು ಕಾರಣವನ್ನು ಅನುಮಾನದಿಂದ ತಿಳಿದುಕೊಳ್ಳುವುದು ಒಂದು ರೀತಿ. ಕಾರಣದ ಅಭಾವವನ್ನು ಖಚಿತವಾಗಿ ತಿಳಿದು ತನ್ಮೂಲಕವಾಗಿ ಕಾರ್ಯಾಭಾವವನ್ನು ತಿಳಿದುಕೊಳ್ಳುವುದು ಇನ್ನೊಂದು ಪ್ರಕಾರ. ಶಿವನ ಕಡೆಯಿಂದ ಕನ್ಯೆಗಾಗಿ ಬೇಡಿಕೆ ಬರಲಿಲ್ಲ. ಆದ್ದರಿಂದ ಹಿಮಾಲಯನು ಮಗಳ ಮದುವೆಯನ್ನು ಮಾಡಲಾಗಲಿಲ್ಲ ಎಂದು ಇಲ್ಲಿ ವಾಕ್ಯಾರ್ಥ.

**ಆಧ್ಯಾತ್ಮಿಕಾರ್ಥವಿಷಯಮಧ್ಯಾತ್ಮಮ್ । ಯಥಾ –**

**ಪಶುಪತಿರಪಿ ತಾನ್ಯಹಾನಿ ಕೃಚ್ಛ್ರಾದ್ ಅಗಮಯದದ್ರಿಸುತಾಸಮಾಗಮೋತ್ಕಃ ।**
**ಕಮಪರಮವಶಂ ನ ವಿಪ್ರಕುರ್ಯುರ್ವಿಭುಮಪಿ ತಂ ಯದಮೀ ಸ್ಪೃಶಂತಿ ಭಾವಾಃ ॥**

**ಅತ್ರ ಹಿ ಭಗವತ್ಪಶುಪತಿಗತಸ್ಯ ಕೃಚ್ಛ್ರಾದ್ ದಿವಸಾತಿವಾಹನಸ್ಯ ಅದ್ರಿಸುತಾಸಮಾಗಮೋತ್ಕತ್ವಸ್ಯ ಚ ಅಧ್ಯಾತ್ಮಸಿದ್ಧಃ ಕಾರ್ಯಕಾರಣಭಾವಃ ಯನ್ಮೂಲೋಽಯಮನಯೋಸ್ಸಾಧ್ಯಸಾಧನಭಾವಃ ।**

**ಅನುವಾದ:**

ಆಧ್ಯಾತ್ಮಿಕ ಅರ್ಥವನ್ನು ವಿಷಯವನ್ನಾಗಿ ಉಳ್ಳದ್ದು ಅಧ್ಯಾತ್ಮ ಎಂಬ ಪ್ರಮಾಣ. ಉದಾಹರಣೆ – "ಬೆಟ್ಟದ ಮಗಳಾದ ಪಾರ್ವತಿಯ ಸಮಾಗಮಕ್ಕಾಗಿ ಉತ್ಕಂಠಿತನಾಗಿದ್ದ ಶಿವನು ಆ ದಿನಗಳನ್ನು ಹೇಗೋ ಕಷ್ಟದಿಂದ ಕಳೆದನು. ಜಗದ್ವ್ಯಾಪಿಯಾದ ಆ ಶಿವನನ್ನೂ ಈ ಭಾವನೆಗಳು ಮುಟ್ಟಿ ಪ್ರಭಾವ ಬೀರುತ್ತವೆ ಎಂದ ಮೇಲೆ ಬೇರೆ ಯಾರನ್ನು ಅವು ಕಂಗೆಡಿಸದಿರುತ್ತವೆ?"

ಈ ಪದ್ಯದಲ್ಲಿ ಭಗವಂತನಾದ ಶಿವನು ಕಷ್ಟದಿಂದ ದಿನಗಳನ್ನು ಕಳೆದುದು ಮತ್ತು ಪಾರ್ವತಿಯ ಸಮಾಗಮಕ್ಕಾಗಿ ಹಾತೊರೆಯುತ್ತಿದ್ದುದು ಎಂಬುವುಗಳಿಗೆ ಕಾರ್ಯಕಾರಣಭಾವವು ಅಧ್ಯಾತ್ಮಪ್ರಮಾಣದಿಂದ ಸಿದ್ಧವಾಗಿದೆ. ತನ್ಮೂಲಕವಾಗಿ ಅವುಗಳಿಗೆ (ಅನುಮಾನಪ್ರಮಾಣದಲ್ಲಿ) ಸಾಧ್ಯಸಾಧನಭಾವವೂ ಸಿದ್ಧವಾಗುತ್ತದೆ.

(ಸಾಧ್ಯಸಾಧನಭಾವ)

**ಸ ಹಿ ದ್ವಿವಿಧಃ ಶಾಬ್ದಶ್ಚಾರ್ಥಶ್ಚೇತಿ । ಸೋಽಪಿ ಚ ಸಾಧ್ಯಸಾಧನಯೋಃ ಪ್ರತ್ಯೇಕಂ ಪದಾರ್ಥವಾಕ್ಯಾರ್ಥರೂಪತ್ವಾತ್, ಪದಾರ್ಥಸ್ಯ ಚ ಜಾತಿಗುಣಕ್ರಿಯಾ–ದ್ರವ್ಯಭೇದೇನ ಭೇದಾತ್, ಧರ್ಮಧರ್ಮಿತಯಾ ಚ, ಧರ್ಮಸ್ಯಾಪಿ**

**ಸಾಮಾನಾಧಿಕರಣ್ಯ – ವೈಯಧಿಕರಣ್ಯಭೇದಾತ್ ವಾಕ್ಯಾರ್ಥಸ್ಯ ಚ ಕ್ರಿಯಾತ್ಮನಃ ಕಾರಕವೈಚಿತ್ರ್ಯೇಣ ವೈಚಿತ್ರ್ಯಾತ್, ಯಥಾಯೋಗ್ಯಮ್ ಅನ್ಯೋನ್ಯಸಾಂಕರ್ಯಾದ್ ಬಹುವಿಧ ಇತಿ ತಸ್ಯ ದಿಙ್ಮಾತ್ರಮಿದಮುಪದರ್ಶ್ಯತೇ ।**

**ಅನುವಾದ:**

ಸಾಧ್ಯಸಾಧನಭಾವವು ಶಾಬ್ದ, ಆರ್ಥ ಎಂದು ಎರಡು ವಿಧ. ಸಾಧ್ಯಸಾಧನಗಳೆರಡೂ ಪದಾರ್ಥರೂಪವಾಗಿ ಅಥವಾ ವಾಕ್ಯಾರ್ಥರೂಪವಾಗಿ ಇರಬಹುದು. ಪದಾರ್ಥವೂ ಜಾತಿ, ಗುಣ, ಕ್ರಿಯಾ ಮತ್ತು ದ್ರವ್ಯ ಎಂದು ಅನೇಕ ವಿಧವಾಗಿರಬಹುದು. ಧರ್ಮ–ಧರ್ಮಿ ಎಂಬ ಭೇದವೂ ಅದರಲ್ಲಿರಬಹುದು. ಧರ್ಮವು ಮತ್ತೆ ಸಾಮಾನಾಧಿಕರಣ್ಯ ಮತ್ತು ವೈಯಧಿಕರಣ್ಯ ಎಂಬ ಭೇದದಿಂದ ಬೇರೆಬೇರೆ ಪ್ರಕಾರವಾಗಿರಬಹುದು. ಕ್ರಿಯಾಪ್ರಧಾನವಾದ ವಾಕ್ಯಾರ್ಥದಲ್ಲೂ ಕಾರಕವೈಚಿತ್ರ್ಯದಿಂದ ವೈಚಿತ್ರ್ಯ ಉಂಟಾಗಬಹುದು. ಈ ಎಲ್ಲ ಪ್ರಕಾರಗಳಲ್ಲಿ ಪರಸ್ಪರ ಸಂಕರ ಉಂಟಾಗುವುದರಿಂದಲೂ ಸಾಧ್ಯಸಾಧನಭಾವವು ಬಹುವಿಧವಾಗುವುದು. ಆದ್ದರಿಂದ ಇಲ್ಲಿ ಅದರ ದಿಕ್ಪ್ರದರ್ಶನವನ್ನು ಮಾತ್ರ ಮಾಡಲಾಗುವುದು.

**ತತ್ರ ಧರ್ಮಮಾತ್ರಸ್ಯ ಸಾಧನಭಾವೇ ಶಾಬ್ದೋ ಯಥಾ –**
**ಪ್ರಜಾನಾಂ ವಿನಯಾಧಾನಾದ್ ರಕ್ಷಣಾದ್ ಭರಣಾದಪಿ ।**
**ಸ ಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವಃ ॥ ಇತಿ ॥**

**ತಸ್ಯೈವ ಧರ್ಮಸ್ಯ ಸಾಮಾನಾಧಿಕರಣಸ್ಯೋಪಾದಾನೇ ಸತಿ ಆರ್ಥೋ ಯಥಾ –**
**ದ್ವಿಷತಾಮುದಯಃ ಸುಮೇಧಸಾ ಗುರುರಸ್ವಂತತರಸ್ತು ಮೃಷ್ಯತೇ ।**
**ನ ಮಹಾನಪಿ ಭೂತಿಮಿಚ್ಛತಾ ಫಲಸಂಪತ್ಪ್ರವಣಃ ಪರಿಕ್ಷಯಃ ॥ ಇತಿ ॥**

**ಅತ್ರ ಹಿ ದ್ವಿಷದುದಯಗತಸ್ಯಾಸ್ವಂತತ್ವಸ್ಯ ಸುಮರ್ಷಣತ್ವಸ್ಯ ಚ ತತ್ಪರಿಕ್ಷಯಗತಸ್ಯ ಫಲಸಂಪತ್ಪ್ರವಣತ್ವಸ್ಯ ದುರ್ಮರ್ಷಣತ್ವಸ್ಯ ಚಾರ್ಥಃ ಸಾಧ್ಯಸಾಧನಭಾವೋ ನಿಬದ್ಧಃ ।**

**ಅನುವಾದ:**

ಅವುಗಳಲ್ಲಿ ಕೇವಲ ಧರ್ಮವು ಸಾಧನವಾಗಿರುವಾಗ ಶಾಬ್ದ (ಸಾಧ್ಯಸಾಧನಭಾವ) ಇರುವುದಕ್ಕೆ ಉದಾಹರಣೆ – "ಪ್ರಜೆಗಳಿಗೆ ವಿದ್ಯೆಯನ್ನು ಕಲಿಸುವುದರಿಂದ, ಅವರನ್ನು ರಕ್ಷಿಸುವುದರಿಂದ ಮತ್ತು ಪೋಷಿಸುವುದರಿಂದ ಆ ದಿಲೀಪನೇ ಅವರಿಗೆಲ್ಲ ತಂದೆಯಾಗಿದ್ದನು. ಅವರ ತಂದೆಗಳಾದರೋ ಕೇವಲ ಹುಟ್ಟಿಗೆ ಕಾರಣರಾಗಿದ್ದರು."

ಧರ್ಮವನ್ನು ಸಮಾನಾಧಿಕರಣವಾಗಿ ನಮೂದಿಸಿದ್ದಾಗ ಆರ್ಥವಾದ ಸಾಧ್ಯಸಾಧನಭಾವಕ್ಕೆ ಉದಾಹರಣೆ –

"ದುರಂತವಾಗಿ ಪರಿಣಮಿಸುವ ಶತ್ರುವಿನ ಅಭ್ಯುದಯವನ್ನು (ಜಾಣನು) ಸಹಿಸಿಕೊಳ್ಳುತ್ತಾನೆ. ಆದರೆ ಮುಂದೆ ಫಲಸಂಪತ್ತನ್ನು ತಂದುಕೊಡುವ

ಮಹಾಹಾನಿಯನ್ನೂ, ತನ್ನ ಉತ್ಕರ್ಷವನ್ನು ಅಪೇಕ್ಷಿಸುವ (ಜಾಣನು) ಸಹಿಸುವುದಿಲ್ಲ." ಈ ಪದ್ಯದಲ್ಲಿ ಶತ್ರುಗಳ ಅಭ್ಯುದಯದಲ್ಲಿರುವ ದುರಂತತ್ವಕ್ಕೂ ಸಮರ್ಷಣತ್ವಕ್ಕೂ, ಶತ್ರುಗಳ ಹಾನಿಯು ತಂದುಕೊಡುವ ಫಲಸಂಪತ್ಪ್ರವಣತ್ವಕ್ಕೂ ದುರ್ಮರ್ಷಣತ್ವಕ್ಕೂ ಸಾಧ್ಯಸಾಧನಭಾವವು ಆರ್ಥವಾಗಿ ಹೇಳಲ್ಪಟ್ಟಿದೆ.

**ವಿವರಣೆ:**

ಪ್ರಜಾನಾಂ ವಿನಯಾಧಾನಾತ್ ಇತ್ಯಾದಿ ಪದ್ಯದಲ್ಲಿ ಸಾಧ್ಯಸಾಧನಭಾವವನ್ನು ಪಂಚಮೀವಿಭಕ್ತಿಯು ಸ್ಪಷ್ಟವಾಗಿ ಹೇಳುವುದರಿಂದ ಅದು ಶಾಬ್ದ. ದ್ವಿಷತಾಮುದಯಃ ಇತ್ಯಾದಿ ಪದ್ಯದಲ್ಲಾದರೋ ಶತ್ರುಗಳ ಅಭ್ಯುದಯವನ್ನು ಜಾಣನು ಚಿಂತಿಸದೆ ಸಹಿಸಿಕೊಳ್ಳುವುದಕ್ಕೆ ಮುಂದೆ ಆ ಅಭ್ಯುದಯವೇ ಆ ಶತ್ರುವಿನ ನಾಶಕ್ಕೆ ಕಾರಣವಾಗುತ್ತದೆ ಎಂಬ ಆಲೋಚನೆ. ಇಲ್ಲಿ ಪಂಚಮೀವಿಭಕ್ತಿ ಇಲ್ಲದಿದ್ದರೂ ಕಾರ್ಯಕಾರಣಭಾವ ಮತ್ತು ತನ್ಮೂಲಕವಾದ ಸಾಧ್ಯಸಾಧನಭಾವವು ಅರ್ಥಾತ್ ತಿಳಿದುಬರುವುದರಿಂದ ಅದು ಆರ್ಥ.

ಈ ಪದ್ಯದಲ್ಲಿ ಎರಡನೆಯ ಪಾದದಲ್ಲಿ "ಗುರುರಸ್ವಂತತರಃ ಸುಮರ್ಷಣಃ" ಎಂಬ ಪಾಠವೇ ಉಚಿತವೆಂದು ತೋರುತ್ತದೆ. ಎರಡು ಪದಗಳು ಸಮಾನಾಧಿಕರಣವಾಗಿವೆ ಎಂದರೆ ಎರಡನ್ನೂ ಒಂದೇ ವಿಭಕ್ತಿಯಲ್ಲಿ ಹೇಳಿದ್ದಾರೆ ಎಂದು ಅಭಿಪ್ರಾಯ.

**ಧರ್ಮಧರ್ಮಿಭಾವಾಭಾವೇ ತು ಪದಾರ್ಥಮಾತ್ರಸ್ಯ ಸಾಧನತ್ವಾಚ್ಛಾಬ್ದ ಏವ । ಯಥಾ –**
**ದುರ್ಮಂತ್ರಾನ್ನೃಪತಿರ್ವಿನಶ್ಯತಿ ಯತಿಸ್ಸಂಗಾತ್ ಸುತೋ ಲಾಲನಾತ್**
**ವಿಪ್ರೋಽನಧ್ಯಯನಾತ್ ಕುಲಂ ಕುತನಯಾಚ್ಛೀಲಂ ಖಲೋಪಾಸನಾತ್ ।**
**ಹ್ರೀರ್ಮದ್ಯಾದನವೇಕ್ಷಣಾದಪಿ ಕೃಷಿಃ ಸ್ನೇಹಃ ಪ್ರವಾಸಾಶ್ರಯಾನ್**
**ಮೈತ್ರೀ ಚಾಪ್ರಣಯಾತ್ ಸಮೃದ್ಧಿರನಯಾತ್ ತ್ಯಾಗಾತ್ ಪ್ರಮಾದಾದ್ಧನಮ್ ॥ ಇತಿ ॥**

**ಅನುವಾದ:**

ಧರ್ಮಧರ್ಮಿಭಾವ ಇಲ್ಲದಿದ್ದಾಗ ಕೇವಲ ಪದಾರ್ಥವೇ ಸಾಧನವಾಗುವುದರಿಂದ ಸಾಧ್ಯಸಾಧನಭಾವವು ಶಾಬ್ದವೇ ಆಗಿರಬೇಕಾಗುತ್ತದೆ. ಉದಾಹರಣೆ– "ಕೆಟ್ಟ ಮಂತ್ರಾಲೋಚನೆಯಿಂದ ದೊರೆ ಹಾಳಾಗುತ್ತಾನೆ. ಯತಿಯು (ದುಷ್ಟರ) ಸಹವಾಸದಿಂದಲೂ, ಮಗನು (ಅತಿಯಾದ) ಲಾಲನೆಯಿಂದಲೂ, ಬ್ರಾಹ್ಮಣನು ವೇದಗಳನ್ನು ಕಲಿಯದಿರುವುದರಿಂದಲೂ, ವಂಶವು ಕೆಟ್ಟ ಮಗನಿಂದಲೂ, ಶೀಲವು ದುಷ್ಟರ ಸಂಗದಿಂದಲೂ, ನಾಚಿಕೆಯು ಹೆಂಡದ ಸೇವನೆಯಿಂದಲೂ, ನೋಡಿಕೊಳ್ಳದಿರುವುದರಿಂದ ಕೃಷಿಯೂ, ದೂರಪ್ರವಾಸದಿಂದ ಸ್ನೇಹವೂ, ಪ್ರೀತಿಯನ್ನು ತೋರಿಸದಿರುವುದರಿಂದ ಮೈತ್ರಿಯೂ, ಅವಿವೇಕದಿಂದ ಸಂಪತ್ತೂ, ಎಚ್ಚರಿಕೆಯಿಲ್ಲದೆ ಬಳಸುವುದರಿಂದ ಹಣವೂ ಹಾಳಾಗುತ್ತವೆ."

**ವಿವರಣೆ:**

ಇಲ್ಲಿ 'ದುರ್ಮಂತ್ರಾತ್' ಇತ್ಯಾದಿಗಳಲ್ಲಿ ಸಾಧ್ಯಸಾಧನಭಾವವು ಪಂಚಮೀವಿಭಕ್ತಿಯಿಂದ ಉಕ್ತವಾಗಿದೆ. ಆದ್ದರಿಂದ ಅದು ಶಾಬ್ದ. ವಿಶೇಷಣದಿಂದ ಉಕ್ತವಾಗುವ ಗುಣಾದಿಗಳು ಧರ್ಮಗಳು.

ಅವುಗಳನ್ನುಳ್ಳದ್ದು ಧರ್ಮಿ. ಗುರುರಸ್ವಂತತರಸ್ಸುಮರ್ಷಣಃ ಎಂಬ ವಿಶೇಷಣಗಳು (ಹಿಂದೆ ಉದಾಹರಿಸಿದ ಪದ್ಯದಲ್ಲಿ) ದ್ವಿಷತಾಮುದಯಃ ಎಂಬುದಕ್ಕೆ ಸೇರಿವೆ. ಉದಯಃ ಎಂಬುದು ಅಲ್ಲಿ ಧರ್ಮಿ. ಪ್ರಕೃತಪದ್ಯದಲ್ಲಿ (ದುರ್ಮಂತ್ರಾತ್ ಎಂಬುದರಲ್ಲಿ) ಅಂಥ ಧರ್ಮಿಧರ್ಮಭಾವ ಇಲ್ಲ. ಸಾಧ್ಯಸಾಧನಭಾವವು ಶಾಬ್ದ (ಶಬ್ದದಿಂದ ಪ್ರತಿಪಾದಿತ)ವಾಗಿದೆ.

**ಏವಂ ವಾಕ್ಯಾರ್ಥವಿಷಯೋಽಪಿ ಸಾಧ್ಯಸಾಧನಭಾವೋ ದ್ವಿವಿಧೋ ಬೋದ್ಧವ್ಯಃ ।**

**ತತ್ರ ಶಾಬ್ದೋ ಯಥಾ –**

**ಸರಸ್ಯಾಮೇತಸ್ಯಾಮುದರವಲಿವೀಚೀವಿಲುಲಿತಂ**
**ಯಥಾ ಲಾವಣ್ಯಾಂಭೋ ಜಘನಪುಲಿನೋಲ್ಲಂಘನಪರಮ್ ।**
**ಯಥಾ ಲಕ್ಷ್ಯಶ್ಚಾಯಂ ಚಲನಯನಮೀನವ್ಯತಿಕರಃ**
**ತಥಾ ಮನ್ಯೇ ಮಗ್ನಃ ಪ್ರಕಟಕುಚಕುಂಭಃ ಸ್ಮರಗಜಃ ॥**

**ಅನುವಾದ:**

ಹೀಗೆ ವಾಕ್ಯಾರ್ಥದಲ್ಲೂ ಸಾಧ್ಯಸಾಧನಭಾವವು (ಶಾಬ್ದ ಮತ್ತು ಆರ್ಥ ಎಂದು) ಎರಡು ವಿಧ. ಅವುಗಳಲ್ಲಿ ಶಾಬ್ದದ ಉದಾಹರಣೆ –

"ಈ ಸರೋವರದಲ್ಲಿ (ನಾರಿಯರ) ಹೊಟ್ಟೆಗಳ ಮೇಲಿನ ಮಡಿಕೆಗಳೆಂಬ ಅಲೆಗಳಿಂದ ನೂಕಲ್ಪಡುತ್ತಿರುವ ಲಾವಣ್ಯಜಲವು ಜಘನಸ್ಥಳವೆಂಬ ಮರಳಿನ ದಂಡೆಯನ್ನು ದಾಟಿ ಹೋಗಲು ಬಯಸುತ್ತಿರುವುದರಿಂದ ಮತ್ತು ಚಂಚಲವಾದ ನಯನಗಳೆಂಬ ಮೀನುಗಳ ಉಪಸ್ಥಿತಿಯೂ ಕಾಣಿಸುತ್ತಿರುವುದರಿಂದ ಕುಚಗಳೆಂಬ ಕುಂಭಸ್ಥಳವು ವ್ಯಕ್ತವಾಗುತ್ತಿರುವ ಮನ್ಮಥನೆಂಬ ಆನೆ (ಸರೋವರದ ನೀರಿನಲ್ಲಿ) ಮುಳುಗಿದೆ ಎಂದು ಊಹಿಸುತ್ತೇನೆ."

**ಆರ್ಥೋ ಯಥಾ –**

**ನಿವಾರ್ಯತಾಮಾಲಿ ಕಿಮಪ್ಯಸೌ ವಟುಃ ಪುನರ್ವಿವಕ್ಷುಃ ಸ್ಫುರಿತೋತ್ತರಾಧರಃ**
**ನ ಕೇವಲಂ ಯೋ ಮಹತೋಽಪಭಾಷತೇ ಶೃಣೋತಿ ತಸ್ಮಾದಪಿ ಯಃ ಸ ಪಾಪಭಾಕ್॥**

**ಯಥಾ ಚ –**

**ದಿವಂ ಯದಿ ಪ್ರಾರ್ಥಯಸೇ ವೃಥಾ ಶ್ರಮಃ ಪಿತುಃ ಪ್ರದೇಶಾಸ್ತವ ದೇವಭೂಮಯಃ ।**
**ಅಥೋಪಯಂತಾರಮಲಂ ಸಮಾಧಿನಾ ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್ ॥**

**ಅನುವಾದ:**

ಆರ್ಥವಾದ ಸಾಧ್ಯಸಾಧನಭಾವದ ಉದಾಹರಣೆ –

"ಸಖಿ, ಈ ವಟು ಏನನ್ನೋ ಮತ್ತೆ ಹೇಳಲು ಬಯಸಿ ತುಟಿಗಳನ್ನು ಕಂಪಿಸುತ್ತಿರುವಂತಿದೆ. ಅವನನ್ನು ದೂರ ಕಳುಹಿಸು. ದೊಡ್ಡವರನ್ನು ನಿಂದಿಸಿದವನು ಮಾತ್ರವಲ್ಲ, ಅವನ ಮಾತನ್ನು ಕೇಳಿದವನೂ ಪಾಪಕ್ಕೆ ಪಾತ್ರನಾಗುತ್ತಾನೆ."

ಇನ್ನೊಂದು ಉದಾಹರಣೆ –

"ತಪಸ್ಸಿನಿಂದ ಸ್ವರ್ಗ ಸಿಗಲಿ ಎಂದು ನೀನು ಅಪೇಕ್ಷೆ ಪಡುತ್ತಿದ್ದರೆ ತಪಸ್ಸಿನ ಶ್ರಮ ವ್ಯರ್ಥ. ಏಕೆಂದರೆ ನಿನ್ನ ತಂದೆಯ ಮನೆಯೇ ದೇವಭೂಮಿ. ಮತ್ತೆ ವರನನ್ನೇನಾದರೂ ನೀನು ಅಪೇಕ್ಷಿಸುತ್ತಿದ್ದರೆ ಈ ತಪಸ್ಸು ಬೇಡವೇ ಬೇಡ. ರತ್ನವು ಯಾರನ್ನೂ ಹುಡುಕಿಕೊಂಡು ಹೋಗುವುದಿಲ್ಲ. ಅದನ್ನೇ ಬೇರೆಯವರು ಹುಡುಕಿಕೊಂಡು ಬರುತ್ತಾರೆ."

**ವಿವರಣೆ:**

ಇಲ್ಲಿಯೂ ಸಾಧ್ಯಸಾಧನಭಾವ ವಾಚ್ಯ. ಅದು ವಾಕ್ಯರೂಪದಲ್ಲಿದೆ. ವಟುವನ್ನು ಏಕೆ ನಿವಾರಿಸಬೇಕು ಎಂಬುದನ್ನು (ಮೊದಲನೆಯ ಶ್ಲೋಕದಲ್ಲಿ) ಉತ್ತರಾರ್ಧವು ಹೇಳುತ್ತದೆ. ಆದರೆ ಕಾರ್ಯಕಾರಣಭಾವವು ಪಂಚಮೀವಿಭಕ್ತಿಯಿಂದ ಉಕ್ತವಾಗಿಲ್ಲ. ಅರ್ಥಾತ್ ಅದು ಸಿದ್ಧವಾಗಿದೆ. ಶಿವನು ಮಹಾವ್ಯಕ್ತಿ, ಭಗವಂತ. ಅವನ ಬಗೆಗೆ ಈ ವಟು ನಿಂದಾವಾಕ್ಯಗಳನ್ನಾಡಿಯಾನು. ಅದನ್ನು ಕೇಳಿಸಿಕೊಂಡರೆ ನಮಗೂ ಪಾಪ ತಟ್ಟುವುದು. ಆದ್ದರಿಂದ ವಟುವನ್ನು ಕೂಡಲೇ ದೂರಕಳುಹಿಸು ಎಂಬುದು ಅರ್ಥಾತ್ ಇಲ್ಲಿ ಸಿದ್ಧವಾಗುತ್ತದೆ.

ದಿವಂ ಯದಿ ಪ್ರಾರ್ಥಯಸೇ ಎಂಬ ಪದ್ಯದಲ್ಲಿ ಸಾಧನದ (ಕಾರಣದ) ಅಭಾವವನ್ನು ಪ್ರತಿಪಾದಿಸಿ ಅದರಿಂದ ಕಾರ್ಯದ ಅಭಾವವನ್ನು ಸಾಧಿಸಲಾಗಿದೆ. ಪ್ರಾರ್ಥನೀಯವಾದ ವಸ್ತು ದೂರದಲ್ಲಿದ್ದು ಪರಾಯತ್ತವೂ ಆಗಿರುತ್ತದೆ. ಅದಕ್ಕೆ ವಿರುದ್ಧವಾದ ನಿಕಟತ್ವ (ಹತ್ತಿರದಲ್ಲಿ ಇರುವಿಕೆ) ಮತ್ತು ಸ್ವಾಧೀನತ್ವ ಎಂಬ ಧರ್ಮಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಆದ್ದರಿಂದ ಸ್ವರ್ಗವು ನಿನಗೆ ಪ್ರಾರ್ಥನೀಯವೇ ಅಲ್ಲ ಎಂದು ವಟು ಪಾರ್ವತಿಗೆ ಹೇಳಿದ ಮಾತಿನ ತಾತ್ಪರ್ಯ. ಪಂಚಮೀವಿಭಕ್ತಿ ಮುಂತಾದುವುಗಳಿಂದ ಸಾಧ್ಯಸಾಧನಭಾವವನ್ನು ಹೇಳಿಲ್ಲದುದರಿಂದ ಇದು ಶಾಬ್ದವಲ್ಲ, ಆರ್ಥ.

**ಅನುಮೇಯಾರ್ಥವಿಷಯೋ ಯಥಾ –**
**ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ ।**
**ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್ ॥**
**ಅತ್ರ ಹಿ ಸುಲಭಾ ವಿಭೂತಯಃ ಶೂರಾದೀನಾಮ್ ಇತ್ಯಯಮರ್ಥೋಽನು ಮೀಯತ ಇತ್ಯೇತದ್ ವಿತನಿಷ್ಯತೇ । ಅನುಮಿತಾನುಮೇಯಾರ್ಥವಿಷಯೋ ಯಥಾ –**
**ಪತ್ಯುಃ ಶಿರಶ್ಚಂದ್ರಕಲಾಮನೇನ ಸ್ಪೃಶೇತಿ ಸಖ್ಯಾ ಪರಿಹಾಸಪೂರ್ವಮ್ ।**
**ಸಾ ರಂಜಯಿತ್ವಾ ಚರಣೌ ಕೃತಾಶೀರ್ಮಾಲ್ಯೇನ ತಾಂ ನಿರ್ವಚನಂ ಜಘಾನ ॥ ಇತಿ ॥**
**ಅತ್ರ ಹಿ ನಖರಂಜನಾನಂತರಂ ಪರಿಹಾಸಪೂರ್ವಂ ಸಖ್ಯಾ ಕೃತಾಶಿಷೋ ದೇವ್ಯಾ ಯದೇತದವಚನಂ ಮಾಲ್ಯೇನ ಹನನಂ ತತ್ ತದನುಭಾವಭೂತಂ ತಸ್ಯಾಃ ಕೌತುಕೌತ್ಸುಕ್ಯಪ್ರಹರ್ಷಲಜ್ಜಾದಿವ್ಯಭಿಚಾರಿಸಂಪದಮನುಮಾಪಯತಿ ।**
**ಸಾ ಚಾನುಮೀಯಮಾನಾ ಸತೀ ಭಗವತಿ ಭವೇ ಭರ್ತರಿ ರತಿಮನುಮಾಪಯತಿ ।**
**ಯಥಾ ಚ –**
**ಏವಂವಾದಿನಿ ದೇವರ್ಷೌ ಪಾರ್ಶ್ವೇ ಪಿತುರಧೋಮುಖೀ ।**
**ಲೀಲಾಕಮಲಪತ್ರಾಣಿ ಗಣಯಾಮಾಸ ಪಾರ್ವತೀ ॥**

**ಯಥಾ ವಾ –**
**ಪ್ರಯಚ್ಛತೋಚ್ಚೈಃ ಕುಸುಮಾನಿ ಮಾನಿನೀ ವಿಪಕ್ಷಗೋತ್ರಂ ದಯಿತೇನ ಲಂಭಿತಾ ।**
**ನ ಕಿಂಚಿದೂಚೇ ಚರಣೇನ ಕೇವಲಂ ಲಿಲೇಖ ಬಾಷ್ಪಾಕುಲಲೋಚನಾ ಭುವಮ್ ॥**

**ಅನುವಾದ:**

ಅನುಮೇಯಾರ್ಥವಿಷಯವಾದ (ಸಾಧ್ಯಸಾಧನಭಾವದ) ಉದಾಹರಣೆ– "ಶೂರ, ವಿದ್ಯಾನಿಷ್ಣಾತ, ಸೇವೆಯ ಪರಮಾರ್ಥವನ್ನು ತಿಳಿದವನು ಎಂಬ ಮೂವರು ಭೂಮಿಯಲ್ಲಿ ಚಿನ್ನದ ಹೂಗಳನ್ನು ಆಯ್ದುಕೊಳ್ಳುತ್ತಾರೆ"

ಇಲ್ಲಿ ಶೂರ ಮುಂತಾದವರಿಗೆ ಸಂಪತ್ತುಗಳು ಸುಲಭವಾಗಿ ಸಿಕ್ಕುತ್ತವೆ ಎಂಬ ವಿಷಯ ಅನುಮಾನಪ್ರಮಾಣದಿಂದ ಗಮ್ಯವಾಗುತ್ತದೆ. ಇದನ್ನು ಮುಂದೆ ವಿಸ್ತರಿಸಿ ವಿವರಿಸುತ್ತೇವೆ.

ಅನುಮಿತಾನುಮೇಯದ ಉದಾಹರಣೆ– "ಸಖಿಯು ಪಾರ್ವತಿಯ ಅಂಗಾಲುಗಳಿಗೆ ಮತ್ತು ಉಗುರುಗಳಿಗೆ ಬಣ್ಣವನ್ನು ಹಚ್ಚಿ 'ಈ ಪಾದದಿಂದ ನಿನ್ನ ಗಂಡನ ತಲೆಯ ಮೇಲಿರುವ ಚಂದ್ರಕಲೆಯನ್ನು ಮುಟ್ಟು' ಎಂದು ಆಶೀರ್ವದಿಸಿದಾಗ ಪಾರ್ವತಿಯು ಯಾವ ಮಾತನ್ನೂ ಆಡದೆ ತನ್ನ ಹಾರದಿಂದ ಆ ಸಖಿಗೆ ಹುಸಿಪೆಟ್ಟನ್ನು ಹಾಕಿದಳು."

ಈ ಪದ್ಯದಲ್ಲಿ ಉಗುರುಗಳಿಗೆ ಬಣ್ಣವನ್ನು ಹಚ್ಚಿದ ಮೇಲೆ ಪರಿಹಾಸಪೂರ್ವಕವಾಗಿ ಸಖಿಯು ಆಶೀರ್ವಾದ ಮಾಡಿದಾಗ ದೇವಿ ಪಾರ್ವತಿಯು ಮಾತನಾಡದೆ ಹಾರದಿಂದ ಪೆಟ್ಟನ್ನು ಹಾಕಿದಳು ಎಂಬುದರಿಂದ ಪಾರ್ವತಿಯಲ್ಲಿದ್ದ ಕೌತುಕ, ಉತ್ಸುಕತೆ, ಹರ್ಷ, ನಾಚಿಕೆ ಇತ್ಯಾದಿ ಸಂಚಾರಿಭಾವಗಳ ಸಮೃದ್ಧಿಯು ಅನುಮಿತವಾಗುತ್ತದೆ. ಹಾಗೆ ಅನುಮಿತವಾದ ಅನುಭಾವಗಳು ಪಾರ್ವತಿಗೆ ತನ್ನ ಪತಿ ಭಗವಾನ್ ಶಿವನಲ್ಲಿದ್ದ ಅನುರಾಗವನ್ನು ಅನುಮಾನ ಪ್ರಮಾಣದಿಂದ ತಿಳಿಸುತ್ತವೆ. ಇನ್ನೊಂದು ಉದಾಹರಣೆ –

"ದೇವರ್ಷಿ ನಾರದನು ಹೀಗೆ ಹೇಳುತ್ತಿದ್ದಾಗ ತಂದೆಯ ಪಕ್ಕದಲ್ಲಿ ನಿಂತಿದ್ದ ಪಾರ್ವತಿಯು ತಲೆಯನ್ನು ತಗ್ಗಿಸಿ ಆಟದ ತಾವರೆಯ ದಳಗಳನ್ನು ಎಣಿಸುತ್ತಿದ್ದಳು." ಅಥವಾ ಇನ್ನೂ ಒಂದು ಉದಾಹರಣೆ – "ಹೂಗಳನ್ನಿತ್ತ ಇನಿಯನು ಮಾನಿನಿಗೆ ಅವಳ ಸವತಿಯ ಹೆಸರನ್ನಿಟ್ಟು ಕರೆದನು. ಅವಳೇನೂ ಹೇಳಲಿಲ್ಲ. ಕಣ್ಣುಗಳಲ್ಲಿ ಕಂಬನಿಗಳು ತುಂಬುತ್ತಿರಲು ಸುಮ್ಮನೆ ನೆಲವನ್ನು (ಕಾಲ್ಬೆರಳುಗಳಿಂದ) ಗೀಚಿದಳಷ್ಟೆ."

**ವಿವರಣೆ:**

ಏವಂವಾದಿನಿ ಇತ್ಯಾದಿ ಪದ್ಯದಲ್ಲಿ ಪಾರ್ವತಿಯಲ್ಲಿ ಉಂಟಾದ ಲಜ್ಜೆ ಎಂಬ ಸಂಚಾರಿಭಾವವು ಅನುಮೇಯ. ಪ್ರಯಚ್ಛತೋಚ್ಚೈಃ ಇತ್ಯಾದಿ ಪದ್ಯದಲ್ಲಿ ಮಾನಿನಿಯಲ್ಲಿ ಹುಟ್ಟಿದ ಈರ್ಷ್ಯೆ

ಎಂಬ ಸಂಚಾರಿಭಾವವೂ ತನ್ಮೂಲಕವಾಗಿ ವಿಪ್ರಲಂಭಶೃಂಗಾರವೂ ಅನುಮೇಯ ಎಂದು ಮಹಿಮಭಟ್ಟನ ಅಭಿಪ್ರಾಯ. ಅದೇ ಸಂಚಾರಿಭಾವ, ಅದೇ ವಿಪ್ರಲಂಭ ವ್ಯಂಜನಾವ್ಯಾಪಾರದಿಂದ ಜ್ಞಾನಗೋಚರವಾಗುತ್ತದೆ ಎಂದು ಆನಂದವರ್ಧನನ ಸಿದ್ಧಾಂತ.

(ಅಸಂಲಕ್ಷ್ಯಕ್ರಮ ಗಮ್ಯಗಮಕಭಾವ)

**ಯಥಾ ಚ ವಾಕ್ಯಾರ್ಥವಿಷಯೇ ಸಾಧ್ಯಸಾಧನಭಾವೇ ಸಾಧ್ಯಸಾಧನಪ್ರತೀತ್ಯೋಃ ಸುಲಕ್ಷಃ ಕ್ರಮಭಾವಃ, ತಥಾ ವಸ್ತುಮಾತ್ರಾದೌ ಅನುಮೇಯವಿಷಯೇಽಪಿ ಅವಗಂತವ್ಯಃ। ಕೇವಲಂ ರಸಾದಿಷು ಅನುಮೇಯೇಷು ಅಯಮ್ ಅಸಂಲಕ್ಷ್ಯಕ್ರಮೋ ಗಮ್ಯಗಮಕಭಾವ ಇತಿ ಸಹಭಾವಭ್ರಾಂತಿಮಾತ್ರಕೃತಸ್ತತ್ರಾನ್ಯೇಷಾಂ ವ್ಯಂಗ್ಯವ್ಯಂಜಕಭಾವಾಭ್ಯುಪಗಮಃ । ತನ್ನಿಬಂಧನಶ್ಚ ಧ್ವನಿವ್ಯಪದೇಶಃ । ಸ ತು ತತ್ರೌಪಚಾರಿಕ ಏವ ಪ್ರಯುಕ್ತೋ, ನ ಮುಖ್ಯಃ, ತಸ್ಯ ವಕ್ಷ್ಯಮಾಣನಯೇನ ಬಾಧಿತತ್ವಾತ್ । ಉಪಚಾರಸ್ಯ ಚ ಪ್ರಯೋಜನಂ ಸಚೇತನಚಮತ್ಕಾರಕಾರಿತ್ವಂ ನಾಮ । ತದ್ಧಿ ಮುಖ್ಯೇ ಚಿತ್ರಪುಸ್ತಕಾದೌ ವ್ಯಕ್ತಿವಿಷಯೇ ಪರಿದೃಷ್ಟಮೇವ ।**

**ಅನುವಾದ:**

ವಾಕ್ಯದ ಅರ್ಥಕ್ಕೆ ವಿಷಯವಾದ ಸಾಧ್ಯಸಾಧನಭಾವದಲ್ಲಿ ಸಾಧ್ಯದ ಮತ್ತು ಸಾಧನದ ಎರಡು ಪ್ರತೀತಿಗಳ ಕ್ರಮಭಾವವು ಹೇಗೆ ಸ್ಪಷ್ಟವಾಗಿ ಗೋಚರವಾಗುವುದೋ ಹಾಗೆ ವಸ್ತು ಮತ್ತು ಅಲಂಕಾರದ ಅನುಮೇಯತೆಯಲ್ಲಿಯೂ ಕ್ರಮವು ಇದೆಯೆಂದು ತಿಳಿದುಕೊಳ್ಳಬಹುದು. ಆದರೆ ರಸಾದಿಗಳು ಅನುಮೇಯಗಳಾದಾಗ ಮಾತ್ರ ಗಮ್ಯಗಮಕಭಾವವು ಅಸಂಲಕ್ಷ್ಯಕ್ರಮವಾಗಿರುತ್ತದೆ. ಇಂಥ ಉದಾಹರಣೆಗಳಲ್ಲಿ ವ್ಯಂಗ್ಯವ್ಯಂಜಕಭಾವವನ್ನು ಒಪ್ಪಿಕೊಳ್ಳುವುದು ಆ ಗಮ್ಯಗಮಕಗಳು ಒಟ್ಟಿಗೆ ತೋರುತ್ತವೆ ಎಂಬ ಭ್ರಾಂತಿಯಿಂದ ಮಾತ್ರ. ಅದನ್ನೇ ನಿಬಂಧನವನ್ನಾಗಿ ಮಾಡಿಕೊಂಡು ಅದನ್ನು ಧ್ವನಿ ಎಂದು ಅವರು ವ್ಯವಹರಿಸುತ್ತಾರೆ. ಆ ವ್ಯಂಗ್ಯವ್ಯಂಜಕಭಾವ ಅಲ್ಲಿ ಕೇವಲ ಔಪಚಾರಿಕವಾಗಿ ಪ್ರಯುಕ್ತವಾಗಿದೆ, ಮುಖ್ಯವಂತೂ ಅಲ್ಲ, ಏಕೆಂದರೆ ಮುಂದೆ ನಾವು ತೋರಿಸುವ ರೀತಿಯಲ್ಲಿ ಅದು ಬಾಧಿತ. ಇಂಥ ಔಪಚಾರಿಕವ್ಯವಹಾರಕ್ಕೆ ಪ್ರಯೋಜನವೇನೆಂದರೆ ಸಚೇತನರಿಗೆ ಉಂಟಾಗುವ ಚಮತ್ಕಾರವೇ ಆಗಿದೆ. ವಾಸ್ತವವಾದ ಚಿತ್ರ, ಲಿಪಿಕ್ರಮಪುಸ್ತಕ ಇತ್ಯಾದಿಗಳಲ್ಲಿ ಅಭಿವ್ಯಕ್ತಿ ಉಂಟಾದಾಗ (ಸಚೇತನರಿಗೆ ಚಮತ್ಕಾರ ಉಂಟಾಗುವುದು ಲೋಕದಲ್ಲಿ) ಗೋಚರವಾಗಿದೆಯಷ್ಟೆ.

(ಅನುಮೇಯಾರ್ಥವೇ ಚಮತ್ಕಾರಿ)

**ವಾಚ್ಯೋ ಹ್ಯರ್ಥೋ ನ ತಥಾ ಚಮತ್ಕಾರಮಾತನೋತಿ ಯಥಾ ಸ ಏವ ವಿಧಿನಿಷೇಧಾದಿಃ ಕಾಕ್ವಭಿಧೇಯತಾಮ್ ಅನುಮೇಯತಾಂ ವಾವತೀರ್ಣ ಇತಿ ಸ್ವಭಾವ ಏವ ಅಯಮರ್ಥಾನಾಮ್ । ತಥಾ ಹಿ –**

**ಮಥ್ನಾಮಿ ಕೌರವಶತಂ ಸಮರೇ ನ ಕೋಪಾದ್**
**ದುಃಶಾಸನಸ್ಯ ರುಧಿರಂ ನ ಪಿಬಾಮ್ಯುರಸ್ತಃ ।**

ಸಂಚೂರ್ಣಯಾಮಿ ಗದಯಾ ನ ಸುಯೋಧನೋರೂ
ಸಂಧಿಂ ಕರೋತು ಭವತಾಂ ನೃಪತಿಃ ಪಣೇನ ॥
ಇತ್ಯತಃ –
ಲಾಕ್ಷಾಗೃಹಾನಲವಿಷಾನ್ನಸಭಾಪ್ರವೇಶೈಃ
ಪ್ರಾಣೇಷು ವಿತ್ತನಿಚಯೇಷು ಚ ನಃ ಪ್ರಹೃತ್ಯ ।
ಆಕೃಷ್ಟಪಾಂಡವವಧೂಪರಿಧಾನಕೇಶಾಃ
ಸ್ವಸ್ಥಾ ಭವಂತು ಮಯಿ ಜೀವತಿ ಧಾರ್ತರಾಷ್ಟ್ರಾಃ ॥

ಇತ್ಯತಶ್ಚ ಯಥಾ ವಿಧಿನಿಷೇಧಯೋಶ್ಚಾರುತಾವಗತಿರ್ನ ತಥಾ ಶಬ್ದಾಭಿಧೇಯಯೋರಿತಿ। ಯಥಾ ಚ ಪ್ರತಿಷೇಧದ್ವಯಾನುಮಿತಸ್ಯ ಪ್ರಕೃತಸ್ಯೈವಾರ್ಥಸ್ಯ ವಿಧೇಶ್ಚಾರುತಾವಗತಿಃ, ನ ತಥಾ ಸ್ವಶಬ್ದವಾಚ್ಯಸ್ಯ। ದ್ವಿವಿಧಶ್ಚ ಪ್ರತಿಷೇಧ ಉಕ್ತಃ ಸುಪ್ತಿಙಂತವಿಷಯತ್ವಾತ್ । ತದ್ಯಥಾ –

ಅಥಾಂಗರಾಜಾದವತಾರ್ಯ ಚಕ್ಷುಃ
ಯಾಹೀತಿ ಜನ್ಯಾಮವದತ್ ಕುಮಾರೀ ।
ನಾಸೌ ನ ಕಾಮ್ಯೋ ನ ಚ ವೇದ ಸಮ್ಯಗ್
ದ್ರಷ್ಟುಂ ನ ಸಾ, ಭಿನ್ನರುಚಿರ್ಹಿ ಲೋಕಃ ॥ ಇತಿ ॥
ಸಂಭಾವ್ಯನಿಷೇಧನಿವರ್ತನಂ ಹಿ ಪ್ರತಿಷೇಧದ್ವಯಸ್ಯ ವಿಷಯಃ ಇತಿ ।

**ಅನುವಾದ:**

ವಾಚ್ಯಾರ್ಥವಾದ ವಿಧಿ, ನಿಷೇಧ ಇತ್ಯಾದಿಗಳು ಕಾಕು (ಧ್ವನಿವಿಕಾರ)ದಿಂದ ಸೂಚಿತವಾದಾಗ ಅಥವಾ ಅನುಮೇಯವಾದಾಗ ಹೇಗೆ ಚಮತ್ಕಾರವನ್ನುಂಟು ಮಾಡುವುವೋ ಹಾಗೆ ಕೇವಲ ವಾಚ್ಯವಾದಾಗ ಮಾಡುವುದಿಲ್ಲ ಎಂಬುದು ಅರ್ಥಗಳ ಸ್ವಭಾವವೇ ಆಗಿದೆ. ಉದಾಹರಣೆ– "ಆ ನೂರು ಕೌರವರನ್ನು ಕೋಪದಿಂದ ಕಾಳಗದಲ್ಲಿ ನಾನು ಪುಡಿಗುಟ್ಟುವುದಿಲ್ಲ; ದುಃಶಾಸನನ ಎದೆಯನ್ನು ಬಗೆದು ರಕ್ತವನ್ನು ನಾನು ಕುಡಿಯುವುದಿಲ್ಲ; ದುರ್ಯೋಧನನ ತೊಡೆಯನ್ನು ಗದೆಯಿಂದ ನಾನು ಮುರಿಯುವುದಿಲ್ಲ; ನಿಮ್ಮ ದೊರೆ ಪಣವನ್ನಿಟ್ಟು ಸಂಧಿಯನ್ನು ಮಾಡಿಕೊಳ್ಳಲಿ" ಎಂಬ ಮಾತಿನಿಂದ, "ಅರಗಿನ ಮನೆ, ವಿಷದ ಅನ್ನ, ಸಭೆಯಲ್ಲಿ ಅವಮಾನ ಇವನ್ನೆಲ್ಲ ಮಾಡಿ ನಮ್ಮ ಆಸ್ತಿಗಳನ್ನೂ ಪ್ರಾಣಗಳನ್ನೂ ಹಿಂಸಿಸಿ ಪಾಂಡವವಧು ದ್ರೌಪದಿಯ ಬಟ್ಟೆಯನ್ನೂ ಕೂದಲನ್ನೂ ಸೆಳೆದ ಆ ಧೃತರಾಷ್ಟ್ರ ಪುತ್ರರು ನಾನು ಬದುಕಿರುವಾಗಲೇ ಸ್ವಸ್ಥರಾಗಿ ಇರಲಿ" ಎಂಬ ಮಾತಿನಿಂದಲೂ ವಿಧಿನಿಷೇಧಗಳು ಚಾರುತ್ವವನ್ನು ಹೇಗೆ ಪಡೆಯುವುವೋ ಹಾಗೆ ಶಬ್ದದಿಂದ ನೇರವಾಗಿ ಹೇಳಲ್ಪಟ್ಟಾಗ ಪಡೆಯಲಾರವು. ಪ್ರತಿಷೇಧವೂ ಎರಡು ವಿಧ – ಸುಬ್ವಿಷಯ (ನಾಮಪದಸಂಬಂಧಿ) ಮತ್ತು ತಿಙ್ವಿಷಯ (ಕ್ರಿಯಾಪದ ಸಂಬಂಧಿ)

ಎಂದು. ಅದರ ಉದಾಹರಣೆ – "ಅನಂತರ ಆ ರಾಜಕುಮಾರಿ (ಇಂದುಮತಿ) ಅಂಗರಾಜನಿಂದ ತನ್ನ ದೃಷ್ಟಿಯನ್ನು ಕೆಳಗಿಳಿಸಿ ಸಖಿ (ಸುನಂದೆ)ಗೆ 'ಮುಂದೆ ನಡೆ' ಎಂದು ಹೇಳಿದಳು. ಆ ಅಂಗರಾಜನು ಪ್ರೀತಿಗೆ ಅನರ್ಹನೆಂದೇನಲ್ಲ. ಇಂದುಮತಿ (ಸೌಂದರ್ಯವನ್ನು) ಚೆನ್ನಾಗಿ ನೋಡಲು ತಿಳಿಯದವಳು ಎಂದೂ ಅಲ್ಲ. ಪ್ರಪಂಚದಲ್ಲಿ ಜನರ ರುಚಿ ಮಾತ್ರ ಬೇರೆಬೇರೆ ಅಷ್ಟೆ."

ಎರಡು ಪ್ರತಿಷೇಧಗಳನ್ನು ಮಾಡುವುದು ಮುಂದೆ ಸಂಭವಿಸಬಹುದಾದ ನಿಷೇಧವನ್ನೂ ತಪ್ಪಿಸಲು ತಾನೆ?

**ವಿವರಣೆ**

ವಸ್ತುವನ್ನು, ಅದು ನಿಷೇಧವಾಗಿರಲಿ ಅಥವಾ ವಿಧಿಯಾಗಿರಲಿ, ನೇರವಾಗಿ ಹೇಳಿದಾಗ ಚಮತ್ಕಾರ ಇಲ್ಲ. ಧ್ವನಿವಿಕಾರದಿಂದ ವಾಚ್ಯಾರ್ಥಕ್ಕೆ ಭಿನ್ನವಾದ ವಿಧಿಯನ್ನೋ ನಿಷೇಧವನ್ನೋ ಸೂಚಿಸಿದರೆ ಆಗ ಚಮತ್ಕಾರ. ಮಥ್ನಾಮಿ ಕೌರವಶತಂ ಇತ್ಯಾದಿ ವೇಣೀಸಂಹಾರದಲ್ಲಿ ಬರುವ ಭೀಮನ ಮಾತು. ಇಲ್ಲಿ ನ ಮಥ್ನಾಮಿ ಎಂದು ಹೇಳಿದ್ದರೂ ಕಾಕು (ಧ್ವನಿವಿಕಾರ)ದಿಂದ ಮಥ್ನಾಮ್ಯೇವ (ಕೊಂದೇ ಕೊಲ್ಲುತ್ತೇನೆ) ಎಂಬ ವಿಧಿಯು ಪ್ರತೀತವಾಗುತ್ತದೆ.

ಲಾಕ್ಷಾಗೃಹ ಇತ್ಯಾದಿ ಪದ್ಯದಲ್ಲಿ ಸ್ವಸ್ಥಾ ಭವಂತು ಎಂಬ ಮಾತಿನಿಂದ ಕೌರವರು ಸುಖವಾಗಿರಲಿ ಎಂಬ ವಿಧಿ ವಾಕ್ಯಾರ್ಥರೂಪವಾಗಿದ್ದರೂ, ಕಾಕುವಿನಿಂದ ಅವರು ಮರಣಹೊಂದುತ್ತಾರೆ ಎಂಬ ಅರ್ಥವು ತೋರುತ್ತದೆ. ಅದೇ ಚಮತ್ಕಾರಕಾರಣ.

ನಾಸೌ ನ ಕಾಮ್ಯಃ ಎಂಬಲ್ಲಿ ಸುಬಂತಸಂಬಂಧಿ ಪ್ರತಿಷೇಧದ್ವಯ. ಅಂಗರಾಜನು ಸುಂದರ ಎಂಬ ಅರ್ಥ ತೋರುತ್ತದೆ. ಸಾ ಸಮ್ಯಗ್ ದ್ರಷ್ಟುಂ ನ ವೇದ ಇತಿ ನ ಎಂಬುದು ತಿಙಂತಸಂಬಂಧಿ ಪ್ರತಿಷೇಧದ್ವಯ. ಇಂದುಮತಿ ಸೌಂದರ್ಯವನ್ನು ಕಾಣಲು ಸಮರ್ಥೆ ಎಂಬುದು ತೋರುವ ಅರ್ಥ. ಇದು ಚಮತ್ಕಾರಕಾರಣ.

**ತಥಾ ಚಾಹ ಧ್ವನಿಕಾರಃ – ಸಾರರೂಪೋ ಹ್ಯರ್ಥಃ ಸ್ವಶಬ್ದಾನಭಿಧೇಯತ್ವೇನ ಪ್ರಕಾಶಿತಃ ಸುತರಾಂ ಶೋಭಾಮಾವಹತಿ । ಪ್ರಸಿದ್ಧಿಶ್ಚೇಯಮಸ್ತ್ಯೇವ ವಿದಗ್ಧ–ಪರಿಷತ್ಸು ಯದಭಿಮತತರಂ ವಸ್ತು ವ್ಯಂಗ್ಯತ್ವೇನ ಪ್ರಕಾಶ್ಯತೇ ನ ವಾಚ್ಯತ್ವೇನ ಇತಿ ।**

**ಅನುವಾದ:**

ಇದನ್ನು ಧ್ವನಿಕಾರ (ಆನಂದವರ್ಧನ)ನೂ ಹೇಳಿದ್ದಾನೆ. "ಸಾರರೂಪವಾದ ಅರ್ಥವು ಸ್ವಶಬ್ದದಿಂದ ಹೇಳಲ್ಪಡದೆ ಪ್ರಕಾಶಿತವಾದರೆ ಹೆಚ್ಚು ಸೊಬಗನ್ನು ತರುತ್ತದೆ. ರಸಿಕರ ಸಭೆಗಳಲ್ಲಿ ಹೆಚ್ಚು ಸಂಮತವಾದ ವಸ್ತುವನ್ನು ವ್ಯಂಗ್ಯರೂಪದಲ್ಲೇ ಸೂಚಿಸಬೇಕು, ವಾಚ್ಯರೂಪದಲ್ಲಿ ಅಲ್ಲ ಎಂಬ ಪ್ರಸಿದ್ಧಿಯೂ ಇದೆ."

**ವಿವರಣೆ:**

ಚಮತ್ಕಾರವನ್ನುಂಟುಮಾಡುವ ಸಾರಭೂತವಾದ ಅರ್ಥವನ್ನು ವ್ಯಂಜನೆಯಿಂದ ತಿಳಿಸಬೇಕು, ನೇರ ಅಭಿಧಾರೂಪದಿಂದಲ್ಲ ಎಂದು ಆನಂದವರ್ಧನನ ಮತ. ನೇರವಾಗಿ (ವಾಚ್ಯರೂಪದಿಂದ)

ಹೇಳಬಾರದು ಎಂಬುದು ಮಹಿಮಭಟ್ಟನಿಗೂ ಸಂಮತ. ವ್ಯಂಗ್ಯರೂಪದಿಂದ ಅಥವಾ ವ್ಯಂಜನಾವ್ಯಾಪಾರದಿಂದ ಎಂಬ ಅಂಶವನ್ನು ಮಾತ್ರ ಅವನು ಒಪ್ಪುವುದಿಲ್ಲ. ನೇರವಾಗಿ ಹೇಳದೆ ಅನುಮೇಯವಾಗಿ ಹೇಳಬೇಕು ಎಂದು ಅವನ ಮಾತು. ಯಾವ ಕಾವ್ಯ ಸುಂದರ, ಯಾವುದು ಸುಂದರವಲ್ಲ ಎಂಬ ಬಗೆಗೆ ಅವರಲ್ಲಿ ಮತಭೇದವಿಲ್ಲ. ಸೌಂದರ್ಯದ ಕಾರಣ ವ್ಯಂಜನಾ ಎಂದು ಆನಂದವರ್ಧನ ಹೇಳಿದರೆ ಅನುಮಿತಿ ಎಂದು ಮಹಿಮಭಟ್ಟನು ಹೇಳುತ್ತಾನೆ ಅಷ್ಟೆ.

> **ಆದ್ಯಯೋಸ್ತು ಕ್ರಮಸ್ಯ ಸುಲಕ್ಷತ್ವಾದ್ ಭ್ರಾಂತಿರಪಿ ನಾಸ್ತೀತಿ ನಿರ್ನಿಬಂಧನ ಏವ ತತ್ರ ವ್ಯಂಗ್ಯವ್ಯಪದೇಶಗ್ರಹಃ । ಅತ ಏವ ಶ್ರೂಯಮಾಣಾನಾಂ ಶಬ್ದಾನಾಂ ಧ್ವನಿವ್ಯಪದೇಶ್ಯಾನಾಮ್ ಅಂತಃ ಸಂನಿವೇಶಿನಶ್ಚ ಸ್ಫೋಟಾಭಿಮತಸ್ಯಾರ್ಥಸ್ಯ ವ್ಯಂಗ್ಯವ್ಯಂಜಕಭಾವೋ ನ ಸಂಭವತೀತಿ ವ್ಯಂಜಕತ್ವಸಾಮ್ಯಾದ್ ಯಃ ಶಬ್ದಾರ್ಥಾತ್ಮನಿ ಕಾವ್ಯೇ ಧ್ವನಿವ್ಯಪದೇಶಃ, ಸೋಽಪಿ ಅನುಪಪನ್ನಃ, ತತ್ರಾಪಿ ಕಾರ್ಯಕಾರಣಮೂಲಸ್ಯ ಗಮ್ಯಗಮಕಭಾವಸ್ಯೋಪಗಮಾತ್ ।**

**ಅನುವಾದ:**

ಮೊದಲಿನ ಎರಡು ಭೇದಗಳಲ್ಲಂತೂ ಕ್ರಮವೂ ಸ್ಪಷ್ಟವಾಗಿ ಕಾಣುತ್ತದೆಯಾದ್ದರಿಂದ ಅಲ್ಲಿ ಭ್ರಾಂತಿ ಕೂಡ ಇಲ್ಲ, ಆದ್ದರಿಂದ ಅವುಗಳಲ್ಲಿ ವ್ಯಂಗ್ಯ ಎಂಬ ಹೆಸರನ್ನಿಡುವುದು ನಿಷ್ಕಾರಣ. ಆದ್ದರಿಂದಲೇ ಧ್ವನಿಶಬ್ದದಿಂದ ಕರೆಯಲ್ಪಡುವ, ಕಿವಿಗೆ ಕೇಳಿಸುವ ಶಬ್ದಗಳಿಗೂ, ಅವುಗಳ ಒಳಗಿರುವ ಸ್ಫೋಟವೆಂದು ನಿಮಗೆ ಅಭಿಮತವಾದ ಅರ್ಥಕ್ಕೂ ವ್ಯಂಗ್ಯವ್ಯಂಜಕಭಾವವೇ ಸಂಭವಿಸುವುದಿಲ್ಲವಾದ ಕಾರಣ ವ್ಯಂಜಕತ್ವದ ಸಾಮ್ಯದಿಂದ ಶಬ್ದಾರ್ಥಸ್ವರೂಪದ ಕಾವ್ಯದಲ್ಲಿ 'ಧ್ವನಿ' ಎಂಬ ವ್ಯವಹಾರವೇನುಂಟು, ಅದೂ ಅನುಚಿತವೇ. ಏಕೆಂದರೆ (ಶ್ರೂಯಮಾಣ ಶಬ್ದಗಳ) ಆ ವಿಷಯದಲ್ಲಿಯೂ ಕಾರ್ಯಕಾರಣಭಾವಮೂಲಕವಾದ ಗಮ್ಯಗಮಕಭಾವವನ್ನೇ ನಾವು ಒಪ್ಪಿಕೊಳ್ಳುತ್ತೇವೆ.

**ವಿವರಣೆ:**

ಆನಂದವರ್ಧನನು ಉತ್ತಮಕಾವ್ಯವನ್ನು ಧ್ವನಿ ಎಂದೂ ತನ್ನ ಗ್ರಂಥವನ್ನು ಧ್ವನ್ಯಾಲೋಕವೆಂದೂ ಕರೆದಿದ್ದಾನೆ. ಹಾಗೆ ಹೆಸರನ್ನಿಡಲು ಕಾರಣವೇನು? ಅವನಿಗೆ ವೈಯಾಕರಣರಲ್ಲಿ ಅಪಾರ ಗೌರವ. ಅವರು ಶಬ್ದದಿಂದ ಅರ್ಥ ತೋರುವ ಪ್ರಕ್ರಿಯೆಯಲ್ಲಿ ಸ್ಫೋಟ ಎಂಬ ಪರಿಕಲ್ಪನೆಯನ್ನು ಮಾಡಿದ್ದಾರೆ. ಕಿವಿಗೆ ಕೇಳಿಸುವ ಶಬ್ದಗಳು ಧ್ವನಿ. ಅವುಗಳನ್ನು ಕೇಳಿದಾಗ ಸ್ಫೋಟ ಉಂಟಾಗುತ್ತದೆ. ಅದರಿಂದ ಅರ್ಥವು ಗೋಚರಿಸುತ್ತದೆ. ಶಬ್ದಗಳು ವ್ಯಂಜಕ, ಸ್ಫೋಟವು ವ್ಯಂಗ್ಯ. ಹೀಗೆ ವೈಯಾಕರಣರು ವ್ಯಂಗ್ಯವ್ಯಂಜಕಭಾವವನ್ನು ಒಪ್ಪಿಕೊಂಡಿದ್ದಾರೆ. ಅವರ ಮತವನ್ನು ಪುರಸ್ಕರಿಸಿದ ಆಲಂಕಾರಿಕರು ಶಬ್ದಾರ್ಥಶರೀರವಾದ ಕಾವ್ಯವನ್ನೂ ವ್ಯಂಜಕತ್ವದ ಸಮಾನತೆಯನ್ನು ಆಶ್ರಯಿಸಿ ಧ್ವನಿ ಎಂದು ಕರೆದರು.

ಮಹಿಮಭಟ್ಟನಾದರೋ ವೈಯಾಕರಣರು ಹೇಳುವ ವ್ಯಂಗ್ಯವ್ಯಂಜಕಭಾವವನ್ನೇ ತಿರಸ್ಕರಿಸುತ್ತಾನೆ. ಶಬ್ದವು ಕಾರಣ, ಅರ್ಥಪ್ರತೀತಿ ಕಾರ್ಯ. ಆದ್ದರಿಂದ ಅವುಗಳಿಗೆ ಗಮ್ಯಗಮಕಭಾವ, ವ್ಯಂಗ್ಯವ್ಯಂಜಕಭಾವ ಅಲ್ಲ ಎಂಬುದು ಮಹಿಮಭಟ್ಟನ ದೃಢನಿಲವು. ವೈಯಾಕರಣರು ಹೇಳಿದ್ದೇ ತಪ್ಪು

ಎಂದಾದ ಮೇಲೆ ಅವರನ್ನು ಅನುಸರಿಸಿ ಆನಂದವರ್ಧನನು ಹೇಳಿದ್ದೂ ತಪ್ಪು ಎಂದು ನಿರ್ವಿವಾದ ಎಂದು ಮಹಿಮಭಟ್ಟ ಪ್ರತಿಪಾದಿಸಿದ್ದಾನೆ. ವಸ್ತುಧ್ವನಿ, ಅಲಂಕಾರಧ್ವನಿ, ರಸಧ್ವನಿ ಎಂಬ ಮೂರರಲ್ಲಿ ಮೊದಲನೆಯ ಎರಡನ್ನು "ಆದ್ಯಯೋಃ" ಎಂಬ ಪದದಿಂದ ಇಲ್ಲಿ ಮಹಿಮನು ಉಲ್ಲೇಖಿಸಿದ್ದಾನೆ.

> **ನನು ವಿಭಾವಾದಿವಾಕ್ಯಾರ್ಥಸಮಕಾಲಮೇವ ರತ್ಯಾದೀನಾಂ ಭಾವಾನಾಂ ಪ್ರತೀತಿರುಪಜಾಯಮಾನಾ ಸರ್ವೈರೇವಾವಧಾರ್ಯತೇ । ನ ತು ತತ್ರಾಂತರಾ ಸಂಬಂಧ–ಸ್ಮರಣಾದಿ ವಿಘ್ನವ್ಯವಧಾನಸಂವಿತ್ತಿಃ ಕಾಚಿತ್ ।**

**ಅನುವಾದ:**

ವಿಭಾವ (ಅನುಭಾವ, ಸಂಚಾರಿಭಾವ)ಗಳ ವಾಕ್ಯಾರ್ಥವು ಗೋಚರಿಸುವ ಕಾಲದಲ್ಲೇ ರತಿ ಮುಂತಾದ (ಸ್ಥಾಯಿ)ಭಾವಗಳ ಪ್ರತೀತಿಯು ಉಂಟಾಗುವುದೆಂದು ಎಲ್ಲರಿಗೂ ದೃಢವಾಗಿ ತಿಳಿದಿದೆ. ಆ ಪ್ರತೀತಿಯಲ್ಲಿ (ಕಾರ್ಯಕಾರಣಗಳ) ಸಂಬಂಧದ ನೆನಪು ಮುಂತಾದ ವಿಘ್ನಗಳಿಂದ ಉಂಟಾಗುವ ವಿಳಂಬದ ಯಾವ ಅರಿವೂ ಇರುವುದಿಲ್ಲವಲ್ಲ?

**ವಿವರಣೆ:**

ಗಮ್ಯಗಮಕಭಾವವಿದ್ದರೆ ಮೊದಲು ಗಮಕದ ಜ್ಞಾನ, ಅನಂತರ ಗಮ್ಯಗಮಕಗಳ ಸಂಬಂಧದ ಸ್ಮರಣೆ, ಆಮೇಲೆ ಗಮ್ಯದ ಅಸ್ತಿತ್ವದ ಅರಿವು. ರಸಾನುಭವದಲ್ಲಾದರೋ ವಿಭಾವಾದಿಗಳ ಜ್ಞಾನ ಯಾವ ಕ್ಷಣದಲ್ಲಾಗುವುದೋ ಆಗಲೇ ರತ್ಯಾದಿಗಳ ಜ್ಞಾನವೂ ಉಂಟಾಗುತ್ತದೆ. ಆದ್ದರಿಂದ ಇದು ವ್ಯಂಗ್ಯವ್ಯಂಜಕಭಾವವೇ ಆಗಿರಬೇಕು ಎಂದು ಇಲ್ಲಿ ಪೂರ್ವಪಕ್ಷವನ್ನು ಮಹಿಮಭಟ್ಟನು ವಾದಕ್ಕಾಗಿ ಮಂಡಿಸಿದ್ದಾನೆ.

> **ರತ್ಯಾದಿಪ್ರತೀತಿರೇವ ರಸಾದಿಪ್ರತೀತಿರಿತಿ ಮುಖ್ಯವೃತ್ತ್ಯೈವ ವ್ಯಂಗ್ಯವ್ಯಂಜಕ–ಭಾವಾಭ್ಯುಪಗಮಃ । ತತ್ರ ಪ್ರದೀಪಘಟಾದಿವದ್ ಉಪಪನ್ನೋ ಗಮ್ಯಗಮಕಭಾವಃ । ಯತ್ ಸ ಏವಾಹ – "ವ್ಯಂಜಕತ್ವಮಾರ್ಗೇ ತು ಯದಾ ಅರ್ಥೋಽರ್ಥಾಂತರಂ ದ್ಯೋತಯತಿ ತದಾ ಸ್ವರೂಪಂ ಪ್ರಕಾಶಯನ್ನೇವ ಅಸೌ ಅನ್ಯಸ್ಯ ಪ್ರಕಾಶಕಃ ಪ್ರತೀಯತೇ ಪ್ರದೀಪವತ್ । ಯಥಾ ಲೀಲಾಕಮಲಪತ್ರಾಣಿ ಗಣಯಾಮಾಸ ಪಾರ್ವತೀ । ಇತ್ಯಾದೌ ಇತಿ ।**

**ಅನುವಾದ:**

ರತ್ಯಾದಿಗಳ ಪ್ರತೀತಿ ಅಥವಾ ಅರಿವೇ ರಸಾದಿಗಳ ಪ್ರತೀತಿ, ಆದ್ದರಿಂದ ಮುಖ್ಯವೃತ್ತಿ (ಅಭಿಧೆ)ಯಿಂದಲೇ ವ್ಯಂಗ್ಯವ್ಯಂಜಕಭಾವವನ್ನು ಒಪ್ಪಿಕೊಳ್ಳಬಹುದು.

ಅಲ್ಲಿ ಪ್ರದೀಪ–ಘಟಗಳಿಗಿರುವಂತೆ ಗಮ್ಯಗಮಕಭಾವವೇ ಉಚಿತ. ಏಕೆಂದರೆ ಆನಂದವರ್ಧನನೇ ಹೇಳಿದ್ದಾನೆ "ವ್ಯಂಜಕತ್ವಮಾರ್ಗದಲ್ಲಿ ಯಾವಾಗ ಒಂದು ಅರ್ಥವು ಇನ್ನೊಂದು ಅರ್ಥವನ್ನು ಸೂಚಿಸುವುದೋ ಆಗ ಅದು ತನ್ನ ಸ್ವರೂಪವನ್ನು ಬೆಳಗಿಸುತ್ತಲೇ ಇನ್ನೊಂದು ಅರ್ಥವನ್ನು ದೀಪದಂತೆ ಬೆಳಗಿಸುತ್ತದೆ.

'ಪಾರ್ವತಿಯು ಆಟದ ತಾವರೆಯ ದಳಗಳನ್ನು ಎಣಿಸುತ್ತಿದ್ದಳು' ಇತ್ಯಾದಿಗಳಲ್ಲಿರುವಂತೆ.

**ವಿವರಣೆ:**

ದೀಪವನ್ನು ತಂದಾಗ ಕತ್ತಲಿನಲ್ಲಿದ್ದ ಘಟವು ಕಾಣಿಸುತ್ತದೆ. ವ್ಯಂಜಕ ದೀಪ. ವ್ಯಂಗ್ಯ ಘಟ. ಘಟ ಮೊದಲೇ ಅಲ್ಲಿತ್ತು. ದೀಪದ ಬೆಳಕು ಬಿದ್ದ ಕ್ಷಣದಲ್ಲೇ ಘಟದ ಜ್ಞಾನ ಉಂಟಾಗುತ್ತದೆ. ಇಲ್ಲಿ ವ್ಯಂಗ್ಯವ್ಯಂಜಕಭಾವ ಎಂಬುದು ಆನಂದವರ್ಧನನ ಮತ.

(ಘಟಪ್ರದೀಪನ್ಯಾಯ)

**ಪುನಃ ಸ ಏವಾಹ – ನ ಹಿ ವ್ಯಂಗ್ಯೇ ಪ್ರತೀಯಮಾನೇ ವಾಚ್ಯವೃತ್ತಿರ್ದೂರೀಭವತಿ। ವಾಚ್ಯಾವಿನಾಭಾವೇನ ತಸ್ಯ ಪ್ರಕಾಶನಾತ್ । ತಸ್ಮಾದ್ ಘಟಪ್ರದೀಪನ್ಯಾಯಸ್ತಯೋಃ। ಯಥೈವ ಹಿ ಪ್ರದೀಪದ್ವಾರೇಣ ಘಟಪ್ರತೀತಾವುತ್ಪನ್ನಾಯಾಂ ನ ಪ್ರದೀಪಪ್ರಕಾಶೋ ನಿವರ್ತತೇ ತದ್ವದ್ ವ್ಯಂಗ್ಯಪ್ರತೀತೌ ವಾಚ್ಯಾವಭಾಸಃ ಇತಿ ।**

**ಅನುವಾದ:**

ಮತ್ತೊಮ್ಮೆ ಅವನೇ (ಆನಂದವರ್ಧನನೇ) ಹೇಳುತ್ತಾನೆ – ವ್ಯಂಗ್ಯಾರ್ಥವು ತೋರುವಾಗ ವಾಚ್ಯಾರ್ಥವು ದೂರ (ಓಡಿ) ಹೋಗುವುದಿಲ್ಲ, ಏಕೆಂದರೆ ವಾಚ್ಯದೊಡನೆ ಅವಿನಾಭಾವದಿಂದಲೇ ವ್ಯಂಗ್ಯಾರ್ಥದ ಪ್ರಕಾಶನ. ಆದ್ದರಿಂದ ಅವುಗಳಿಗೆ ಘಟ–ಪ್ರದೀಪಗಳು ದೃಷ್ಟಾಂತ. ಹೇಗೆ ಪ್ರದೀಪದಿಂದ ಘಟದ ಜ್ಞಾನವು ಉಂಟಾದಾಗ ಪ್ರದೀಪದ ಬೆಳಕು ಮಾಯವಾಗುವುದಿಲ್ಲವೋ ಹಾಗೆ ವ್ಯಂಗ್ಯಾರ್ಥದ ಪ್ರತೀತಿ ಉಂಟಾದ ಮೇಲೂ ವಾಚ್ಯಾರ್ಥವು ತೋರುತ್ತಲೇ ಇರುತ್ತದೆ.

**ವಿವರಣೆ:**

ವಾಚ್ಯಾರ್ಥಜ್ಞಾನವಿಲ್ಲದೆ ವ್ಯಂಗ್ಯಾರ್ಥ ತೋರುವುದು ಅಸಂಭವ. ವ್ಯಂಗ್ಯಾರ್ಥದ ಪ್ರತಿಭಾನ ಇರುವಾಗಲೇ ವಾಚ್ಯಾರ್ಥದ ಪ್ರತಿಭಾನವೂ ಅನುವೃತ್ತವಾಗುತ್ತದೆ. ಘಟಜ್ಞಾನದ ಕ್ಷಣದಲ್ಲಿ ಪ್ರದೀಪಪ್ರಕಾಶವು ನಿವೃತ್ತವಾಗುವುದಿಲ್ಲ ಎಂಬುದು ದೃಷ್ಟಾಂತ.

(ವಾಚ್ಯವ್ಯಂಗ್ಯಗಳ ಭಾನ ಒಟ್ಟಿಗೆ ಆಗದು)

**ಉಚ್ಯತೇ ।**

**ವಾಚ್ಯಪ್ರತೀಯಮಾನಯೋರರ್ಥಯೋರ್ಯಥಾ ಕ್ರಮೇಣೈವ ಪ್ರತೀತಿರ್ನ ಸಮಕಾಲಂ, ಯಥಾ ಚ ಅನಯೋರ್ಗಮ್ಯಗಮಕಭಾವಃ ತಥಾ ತೇನೈವ ವ್ಯಕ್ತಿವಾದಿನಾ ತಯೋಃ ಸ್ವರೂಪಂ ನಿರೂಪಯಿತುಕಾಮೇನಾಪ್ಯುಕ್ತಂ, ತದೇವಾಸ್ಮಾಭಿಃ ಸಮಾಧಿತ್ಸುಭಿರಿಹ ಲಿಖ್ಯತೇ ಪರಮ್ ।**

**ಅನುವಾದ:**

ಅದಕ್ಕೆ ಉತ್ತರವನ್ನು ಕೊಡುತ್ತೇವೆ.

ವಾಚ್ಯ ಮತ್ತು ವ್ಯಂಗ್ಯ ಎಂಬ ಅರ್ಥಗಳ ಪ್ರತೀತಿಯು (ಅಥವಾ ಅರಿವು) ಕ್ರಮವಾಗಿ (ಒಂದಾದ ಮೇಲೆ ಒಂದು ಎಂಬಂತೆ) ಉಂಟಾಗುತ್ತದೆ. ಏಕಕಾಲದಲ್ಲಿ

ಅಲ್ಲ ಮತ್ತು ವಾಚ್ಯವ್ಯಂಗ್ಯಗಳಿಗೆ ಗಮ್ಯಗಮಕಭಾವವೇ ಇದೆ ಎಂದು ವ್ಯಂಜನಾವಾದಿಯಾದ ಆ ಆನಂದವರ್ಧನನೇ ಅವೆರಡರ ಸ್ವರೂಪವನ್ನು ನಿರೂಪಿಸುವಾಗ ಹೇಳಿದ್ದಾನೆ. ಅವನ ಶಂಕೆಗೆ ಸಮಾಧಾನವನ್ನು ಹೇಳಲು ಬಯಸುವ ನಾವು ಅವನು ಹೇಳಿದ ಮಾತುಗಳನ್ನೇ ಇಲ್ಲಿ ಬರೆಯುತ್ತೇವೆ.

**ವಿವರಣೆ:**

ಆನಂದವರ್ಧನನು ಧ್ವನ್ಯಾಲೋಕದಲ್ಲಿ ಹೇಳಿರುವ ಮಾತುಗಳನ್ನೇ ಉದಾಹರಿಸಿದರೆ ಸಾಕು, ಅವನ ವ್ಯಂಜನಾವಾದದ ಪೊಳ್ಳುತನ ಸ್ಪಷ್ಟವಾಗುತ್ತದೆ ಎಂಬುದು ಮಹಿಮಭಟ್ಟನ ಅಂಬೋಣ.

**ತದ್ಯಥಾ–**

**"ನಹಿ ವಿಭಾವಾನುಭಾವವ್ಯಭಿಚಾರಿಣ ಏವ ರಸಾ ಇತಿ ಕಸ್ಯಚಿದವಗಮಃ । ಅತ ಏವ ವಿಭಾವಾದಿಪ್ರತೀತ್ಯವಿನಾಭಾವಿನೀ ರಸಾದೀನಾಂ ಪ್ರತೀತಿರಿತಿ ತತ್ಪ್ರತೀತ್ಯೋಃ ಕಾರ್ಯಕಾರಣಭಾವೇನಾವಸ್ಥಾನಾತ್ ಕ್ರಮೋಽವಶ್ಯಂಭಾವೀ। ಸ ತು ಲಾಘವಾನ್ನ ಲಕ್ಷ್ಯತ ಇತ್ಯಲಕ್ಷ್ಯಕ್ರಮಾ ಏವ ಸಂತೋ ವ್ಯಂಗ್ಯಾರಸಾದಯ ಇತ್ಯುಕ್ತಮ್" ಇತಿ ।**

**ಅನುವಾದ:**

(ಆನಂದವರ್ಧನನ) ಆ ಮಾತು –

"ವಿಭಾವ, ಅನುಭಾವ ಮತ್ತು ವ್ಯಭಿಚಾರಿಭಾವಗಳೇ ರಸಗಳು ಎಂದು ಯಾರಿಗೂ ಅನಿಸುವುದಿಲ್ಲ. ಆದ್ದರಿಂದಲೇ ವಿಭಾವಾದಿಗಳ ಜ್ಞಾನದಿಂದ ರಸಪ್ರತೀತಿ ಅವಿನಾಭಾವದಿಂದ ಉಂಟಾಗುವುದು ಎಂಬ ಕಾರಣದಿಂದ ಅವೆರಡರ ಪ್ರತೀತಿಗಳಿಗೆ ಕಾರ್ಯಕಾರಣಭಾವವಿದೆ. ಆದ್ದರಿಂದ ಅವುಗಳಿಗೆ ಕ್ರಮವು (ಪೌರ್ವಾಪರ್ಯವು) ಅವಶ್ಯವಾಗಿ ಇರಲೇಬೇಕು. ಆದರೆ ಆ ಕ್ರಮ ಅತ್ಯಂತ ವೇಗದ ಕಾರಣದಿಂದ ಗೋಚರವಾಗುವುದಿಲ್ಲವೆಂದು ರಸಾದಿಗಳು ಅಸಂಲಕ್ಷ್ಯಕ್ರಮವ್ಯಂಗ್ಯಗಳು ಎಂದು ಹೇಳಿದ್ದೇವೆ."

**ವಿವರಣೆ:**

ಕಾರ್ಯಕ್ಕಿಂತಲೂ ಮೊದಲು ಇರುವುದೇ ಕಾರಣ. "ಕಾರ್ಯನಿಯತಪೂರ್ವವೃತ್ತಿ ಕಾರಣಮ್" ಆದ್ದರಿಂದ ವಾಚ್ಯಾರ್ಥ ಮೊದಲು, ವ್ಯಂಗ್ಯಾರ್ಥ ಅನಂತರ.

**ಪುನಶ್ಚ "ತಸ್ಮಾದಭಿಧಾನಾಭಿಧೇಯ ಪ್ರತೀತ್ಯೋರಿವ ವಾಚ್ಯವ್ಯಂಗ್ಯ ಪ್ರತೀತ್ಯೋರ್ನಿಮಿತ್ತ–ನಿಮಿತ್ತಿಭಾವಾದ್ ನಿಯಮಭಾವೀ ಕ್ರಮಃ । ಸ ತೂಕ್ತಯುಕ್ತೇಃ ಕ್ವಚಿಲ್ಲಕ್ಷ್ಯತೇ ಕ್ವಚಿತ್ತು ನ ಲಕ್ಷ್ಯತೇ" ಇತಿ ।**

**ಅನುವಾದ:**

ಮತ್ತೆ (ಅವನದೇ ಇನ್ನೊಂದು) ಮಾತು –

"ಆದ್ದರಿಂದ ಶಬ್ದ ಮತ್ತು ಅರ್ಥಗಳ ಜ್ಞಾನಗಳಿಗೆ ಇರುವಂತೆ ವಾಚ್ಯಪ್ರತೀತಿ ಮತ್ತು ವ್ಯಂಗ್ಯಪ್ರತೀತಿಗಳಿಗೂ ನಿಮಿತ್ತಿನಿಮಿತ್ತಭಾವ (ಕಾರ್ಯಕಾರಣಭಾವ)

ಇರುವುದರಿಂದ ಅವುಗಳಲ್ಲಿ ಪೌರ್ವಾಪರ್ಯನಿಯಮವು ಇದ್ದೇ ಇರುತ್ತದೆ. ಆ ಕ್ರಮವು (ಹಿಂದೆ ನಾವು) ಹೇಳಿದ ಯುಕ್ತಿಗೆ ಅನುಸಾರವಾಗಿ ಕೆಲವು ಸ್ಥಳಗಳಲ್ಲಿ ಕಂಡುಬರುತ್ತದೆ, ಮತ್ತೆ ಕೆಲವು ಸ್ಥಳಗಳಲ್ಲಿ ಕಾಣಿಸುವುದಿಲ್ಲ.

**ವಿವರಣೆ:**

ಆನಂದವರ್ಧನನೇ ಸ್ಪಷ್ಟವಾಗಿ ವಾಚ್ಯ-ವ್ಯಂಗ್ಯಗಳೆಂಬ ಅರ್ಥಗಳಿಗೆ ಕಾರ್ಯಕಾರಣಭಾವವನ್ನು ಒಪ್ಪಿಕೊಂಡಿದ್ದಾನೆಂಬುದು ಉದಾಹರಿಸಿದ ಅವನ ವಾಕ್ಯಗಳಿಂದಲೇ ತಿಳಿದುಬಂದಿದೆ. ಕಾರ್ಯಕಾರಣಭಾವ ಇರುವ ಎರಡು ಅಂಶಗಳು ಗಮ್ಯಗಮಕಗಳೇ ಆಗಿರುತ್ತವೆ, ವ್ಯಂಗ್ಯವ್ಯಂಜಕಗಳಲ್ಲ ಎಂಬುದು ಮಹಿಮಭಟ್ಟನ ವಾದ.

(ಅನುಮಾನ ಮಹಾವಿಷಯ)

**ತದೇವಂ ವಾಚ್ಯಪ್ರತೀಯಮಾನಯೋಃ ವಕ್ಷ್ಯಮಾಣಕ್ರಮೇಣ ಲಿಂಗಲಿಂಗಿಭಾವಸ್ಯ ಸಮರ್ಥನಾತ್ ಸರ್ವಸ್ಯೈವ ಧ್ವನೇರನುಮಾನಾಂತರ್ಭಾವಃ ಸಮನ್ವಿತೋ ಭವತಿ । ತಸ್ಯ ಚ ತದಪೇಕ್ಷಯಾ ಮಹಾವಿಷಯತ್ವಾತ್ । ಮಹಾವಿಷಯತ್ವಂ ಚಾಸ್ಯ ಧ್ವನಿವ್ಯತಿರಿಕ್ತೇಽಪಿ ವಿಷಯೇ ಪರ್ಯಾಯೋಕ್ತಾದೌ ಗುಣೀಭೂತವ್ಯಂಗ್ಯಾದೌ ಚ ಸರ್ವತ್ರ ಸಂಭವಾತ್ । ತಚ್ಚ ವಚನವ್ಯಾಪಾರಪೂರ್ವಕತ್ವಾತ್ ಪರಾರ್ಥಮ್ ಇತ್ಯವಗಂತವ್ಯಮ್ । ತ್ರಿರೂಪಲಿಂಗಾಖ್ಯಾನಂ ಪರಾರ್ಥಾನುಮಾನಮಿತಿ ಕೇವಲಮ್ ಉಕ್ತನಯಾನಭಿಜ್ಞತಯಾ ತನ್ನ ಲಕ್ಷಯತಿ ಅವಿಚಕ್ಷಣೋ ಲೋಕಃ ।**

**ಅನುವಾದ:**

ಹೀಗೆ ಮುಂದೆ ನಾವು ನಿರೂಪಿಸುವ ಕ್ರಮದಿಂದ ವಾಚ್ಯ-ಪ್ರತೀಯಮಾನಗಳಿಗೆ (ವಾಚ್ಯಾರ್ಥ-ವ್ಯಂಗ್ಯಾರ್ಥಗಳಿಗೆ) ಲಿಂಗ-ಲಿಂಗಿಭಾವವು ಸಮರ್ಥಿಸಲ್ಪಡುವುದರಿಂದ ಎಲ್ಲ ಪ್ರಕಾರದ ಧ್ವನಿಯೂ ಅನುಮಾನಪ್ರಮಾಣದಲ್ಲಿ ಅಂತರ್ಭಾವವನ್ನು ಹೊಂದುವುದೆಂಬುದು ಸಮನ್ವಯವನ್ನು ಹೊಂದುತ್ತದೆ. ಏಕೆಂದರೆ ಅನುಮಾನಪ್ರಮಾಣದ ಕ್ಷೇತ್ರ ಧ್ವನಿಯ ಕ್ಷೇತ್ರಕ್ಕಿಂತಲೂ ವಿಶಾಲತರ. ಅದರ ಕ್ಷೇತ್ರ ಏಕೆ ವಿಶಾಲತರವೆಂದರೆ ಅದು ಧ್ವನಿ ಅಲ್ಲದ ಪರ್ಯಾಯೋಕ್ತ ಮುಂತಾದುವುಗಳಲ್ಲೂ ಗುಣೀಭೂತವ್ಯಂಗ್ಯಾದಿಗಳಲ್ಲೂ ಸಂಭವಿಸುತ್ತದೆ. ಆ ಅನುಮಾನವು ಮಾತಿನ ಪ್ರಯೋಗದಿಂದ ಉಂಟಾಗುವುದೆಂಬ ಕಾರಣದಿಂದ ಪರಾರ್ಥಾನುಮಾನ ಎಂದು ಅರಿತುಕೊಳ್ಳಬೇಕು. ಮೂರು ವಿಧವಾದ ಲಿಂಗದ (ಶಬ್ದತಃ) ಪ್ರತಿಪಾದನೆಯೇ ಪರಾರ್ಥಾನುಮಾನ. ಈ ಶಾಸ್ತ್ರಪ್ರಕ್ರಿಯೆಯನ್ನು ಅರಿಯದಿರುವುದರಿಂದ ಸಾಮಾನ್ಯ ಜನರು ಇದನ್ನು ಕಂಡುಕೊಳ್ಳುವುದಿಲ್ಲ.

**ವಿವರಣೆ:**

ಪರ್ಯಾಯೋಕ್ತ, ಸಮಾಸೋಕ್ತಿ ಮುಂತಾದ ಅಲಂಕಾರಗಳಲ್ಲಿ ವ್ಯಂಗ್ಯಾರ್ಥವಿದ್ದರೂ ಅವು ಧ್ವನಿಶಬ್ದವಾಚ್ಯವಲ್ಲ ಎಂದು ಆನಂದವರ್ಧನನ ಸಿದ್ಧಾಂತ. ಹಾಗೆಯೇ ಗುಣೀಭೂತವ್ಯಂಗ್ಯ ಎಂಬ

ಪ್ರಕಾರದ ಕಾವ್ಯದಲ್ಲೂ ವ್ಯಂಗ್ಯಾರ್ಥವಿರುತ್ತದೆ. ಆದರೆ ಅದೂ ಧ್ವನಿಯೊಳಗೆ ಸೇರುವುದಿಲ್ಲ. ಮಹಿಮಭಟ್ಟನ ಚಿಂತನೆಗೆ ಅನುಗುಣವಾಗಿ ಈ ಮೂರು ಪ್ರಕಾರಗಳಲ್ಲೂ ಅನುಮೇಯಾರ್ಥವು ಇರುವುದರಿಂದ ಎಲ್ಲವೂ ಅನುಮಾನದೊಳಗೆ ಸೇರುತ್ತವೆ. ಹೀಗೆ ಧ್ವನಿಗಿಂತಲೂ ಅನುಮಾನ ಮಹಾವಿಷಯ. ಅನುಮಾನವು ಸ್ವಾರ್ಥಾನುಮಾನ, ಪರಾರ್ಥಾನುಮಾನ ಎಂದು ಎರಡುವಿಧ. ವ್ಯಾಪ್ತಿಯನ್ನು ಅರಿತ ವ್ಯಕ್ತಿಯು ವ್ಯಾಪ್ಯವನ್ನು (ಉದಾಹರಣೆಗೆ ಧೂಮವನ್ನು) ನೋಡಿ ವ್ಯಾಪಕವನ್ನು (ಅಗ್ನಿಯನ್ನು) ತಾನೇ ಅರಿತುಕೊಳ್ಳುವುದು ಸ್ವಾರ್ಥಾನುಮಾನ. ತನಗೆ ತಿಳಿದ ಅಂಥ ಅಂಶವನ್ನು ಇನ್ನೊಬ್ಬರಿಗೆ ತಿಳಿಸಲು ಪರ್ವತೋ ವಹ್ನಿಮಾನ್, ಧೂಮಾತ್, ಯತ್ರ ಯತ್ರ ಧೂಮಸ್ತತ್ರತತ್ರ ವಹ್ನಿಃ ಯಥಾ ಮಹಾನಸಃ, ವಹ್ನಿವ್ಯಾಪ್ಯಧೂಮವಾನ್ ಅಯಂ ಪರ್ವತಃ, ತಸ್ಮಾದ್ ವಹ್ನಿಮಾನ್ ಪರ್ವತಃ ಎಂಬ ವಚನಪ್ರಯೋಗ ಮಾಡಿದರೆ ಅದು ಪರಾರ್ಥಾನುಮಾನ. ಕಾವ್ಯವು ವಚನರೂಪವಾದುದರಿಂದ ಅದೂ ಪರಾರ್ಥಾನುಮಾನ.

**ಅಥ ಯದಿ ಸರ್ವ ಏವ ವಾಕ್ಯಾರ್ಥಃ ಸಾಧ್ಯಸಾಧನಭಾವಗರ್ಭ ಇತ್ಯುಚ್ಯತೇ ತದ್ ಯಥಾ ಸಾಧ್ಯಸಾಧನಯೋಸ್ತತ್ರ ನಿಯಮೇನ ಉಪಾದಾನಂ ತಥಾ ದೃಷ್ಟಾಂತಸ್ಯಾಪಿ ಸ್ಯಾತ್, ತಸ್ಯಾಪಿ ವ್ಯಾಪ್ತಿಸಾಧನ ಪ್ರಮಾಣವಿಷಯತಯಾ ಅವಶ್ಯಾಪೇಕ್ಷಣೀಯತ್ವಾತ್ । ನ । ಪ್ರಸಿದ್ಧಸಾಮರ್ಥ್ಯಸ್ಯ ಸಾಧನಸ್ಯೋಪಾದಾನಾದೇವ ತದಪೇಕ್ಷಾಯಾಃ ಪ್ರತಿಕ್ಷೇಪಾತ್ । ತದುಕ್ತಮ್ –**

**ತದ್ಭಾವಹೇತುಭಾವೌ ಹಿ ದೃಷ್ಟಾಂತೇ ತದವೇದಿನಃ ।**
**ಖ್ಯಾಪ್ಯೇತೇ ವಿದುಷಾಂ ವಾಚ್ಯೋ ಹೇತುರೇವ ಚ ಕೇವಲಃ ॥**

**ಅನುವಾದ:**

ಎಲ್ಲ ವಾಕ್ಯಾರ್ಥವೂ ಸಾಧ್ಯಸಾಧನಗರ್ಭ ಎಂದು ನೀವು ಹೇಳುವುದಾದರೆ, ಅದರಲ್ಲಿ ಸಾಧ್ಯದ ಮತ್ತು ಸಾಧನದ ಉಪಾದಾನವು ಹೇಗೆ ಅನಿವಾರ್ಯವೋ ಹಾಗೆ ದೃಷ್ಟಾಂತದ ಉಪಾದಾನವನ್ನು ಮಾಡಲೇ ಬೇಕಾದೀತು, ಏಕೆಂದರೆ ಸಾಧನಪ್ರಮಾಣದ (ಅನುಮಾನದ) ಒಂದು ಅಂಶವಾಗಿ ದೃಷ್ಟಾಂತವೂ ಅವಶ್ಯವಾಗಿ ಅಪೇಕ್ಷಿತವಲ್ಲವೆ? ಅಲ್ಲ. ಪ್ರಸಿದ್ಧವಾದ ಸಾಮರ್ಥ್ಯವುಳ್ಳ ಸಾಧನದ (ಹೇತುವಿನ) ಉಪಾದಾನದಿಂದಲೇ (ಸಾಧ್ಯಸಿದ್ಧಿಯಾಗುವುದರಿಂದ) ದೃಷ್ಟಾಂತದ ಅಪೇಕ್ಷೆ ತೊಲಗುತ್ತದೆ. ಇದನ್ನು (ಪ್ರಾಚೀನರೂ) ಹೇಳಿದ್ದಾರೆ– "ತದ್ಭಾವ (ತಾದಾತ್ಮ್ಯ) ಮತ್ತು ಹೇತುಭಾವ (ತದುತ್ಪತ್ತಿ)ಗಳು ಅವುಗಳನ್ನು ಸರಿಯಾಗಿ ತಿಳಿಯದವರಿಗೆ ದೃಷ್ಟಾಂತದಲ್ಲಿ ಗೋಚರವಾಗುತ್ತವೆ. ಆದರೆ ವಿದ್ವಾಂಸರಿಗೆ ಕೇವಲ ಹೇತುವನ್ನು ಹೇಳಿದರೆ ಸಾಕು."

**ವಿವರಣೆ:**

ಅನುಮಾನಪ್ರಮಾಣದಲ್ಲಿ ದೃಷ್ಟಾಂತವೂ ಮುಖ್ಯವಾದ ಒಂದು ಅಂಶ. ಕಾವ್ಯವಾಕ್ಯಗಳನ್ನೆಲ್ಲ ಅನುಮಾನದೊಳಗೆ ಅಂತರ್ಭಾವಗೊಳಿಸುತ್ತೇವೆ ಎಂದರೆ ಅವುಗಳಲ್ಲೆಲ್ಲ ಸಾಧ್ಯಸಾಧನಗಳ ಜೊತೆಗೆ ದೃಷ್ಟಾಂತವನ್ನೂ ಹೇಳಬೇಕಾಗಿತ್ತು. ಹಾಗಿಲ್ಲವಲ್ಲ? ಎಂಬ ಪ್ರಶ್ನೆಗೆ ಮಹಿಮನು ಇಲ್ಲಿ ಉತ್ತರವನ್ನು ಕೊಟ್ಟಿದ್ದಾನೆ. ಪ್ರಸಿದ್ಧವಾದ ಸಾಧ್ಯಸಾಧನಭಾವವನ್ನು ಹೇಳಿದಾಗ ದೃಷ್ಟಾಂತದ ಅಪೇಕ್ಷೆ ಇಲ್ಲ.

ವಿದ್ವಾಂಸರಿಗೆ ವಿಷಯವನ್ನು ತಿಳಿಸಲು ಹೇತುವೊಂದೇ ಸಾಕು, ಅವಿದ್ವಾಂಸರಿಗೆ ಮಾತ್ರ ದೃಷ್ಟಾಂತದ ಅಪೇಕ್ಷೆ. ಕಾವ್ಯವನ್ನು ಓದಿ ರಸಾಸ್ವಾದನೆ ಮಾಡುವ ಸಹೃದಯರು ವಿದ್ವಾಂಸರೇ ಆದುದರಿಂದ ಕಾವ್ಯದಲ್ಲಿ ಪ್ರತಿಯೊಂದಕ್ಕೂ ದೃಷ್ಟಾಂತವನ್ನು ನೀಡುವ ಆವಶ್ಯಕತೆ ಇಲ್ಲ.

ಬೌದ್ಧತಾರ್ಕಿಕರು ಹೇಳುವಂತೆ ವ್ಯಾಪ್ತಿಗ್ರಹಕ್ಕೆ ಆಧಾರ ತದ್ಭಾವ (ತಾದಾತ್ಮ್ಯ) ಮತ್ತು ಹೇತುಭಾವ (ತದುತ್ಪತ್ತಿ). ಅಯಂ ವೃಕ್ಷಃ, ಶಿಂಶಪಾತ್ವಾತ್ ಎಂಬ ಉದಾಹರಣೆಯಲ್ಲಿ ತಾದಾತ್ಮ್ಯದಿಂದ ವ್ಯಾಪ್ತಿಗ್ರಹ. ಪರ್ವತೋ ವಹ್ನಿಮಾನ್ ಧೂಮಾತ್ ಎಂಬ ಉದಾಹರಣೆಯಲ್ಲಿ ತದುತ್ಪತ್ತಿ (ಕಾರ್ಯಕಾರಣಭಾವ)ಯೇ ವ್ಯಾಪ್ತಿಗ್ರಹಕ್ಕೆ ಮೂಲ. ಅವುಗಳನ್ನರಿಯದ ಸಾಮಾನ್ಯರಿಗೆ ದೃಷ್ಟಾಂತವನ್ನು ಹೇಳಿ ತೆದ್ಭಾವ–ಹೇತುಭಾವಗಳನ್ನು ತಿಳಿಸಬೇಕಾಗುತ್ತದೆ. ವಿದ್ವಾಂಸರಿಗೆ ಹೇತುವನ್ನು ಹೇಳಿದರೆ ಸಾಕು. ದೃಷ್ಟಾಂತದ ಅಪೇಕ್ಷೆ ಇಲ್ಲ.

(ರಸಾನುಭವದಲ್ಲಿ ಸುಖಾಸ್ವಾದ ಏಕೆ?)

**ನನು ಕುತೋऽಯಂ ರತ್ಯಾದೀನಾಂ ಸುಖಾದ್ಯವಸ್ಥಾವಿಶೇಷಾಣಾಂ ಕಾವ್ಯಾದೌ ಸಚೇತನಚಮತ್ಕಾರೀ ಸುಖಾಸ್ವಾದಸಂಭವಃ ಯೋ ರಸಾದೀನಾಮನುಮೇಯಾನಾಂ ವ್ಯಂಗ್ಯತ್ವೋಪಚಾರಸ್ಯ ಪ್ರಯೋಜನಾಂಶತಯಾ. ಕಲ್ಪ್ಯತೇ । ನ ಹಿ ಲೋಕೇ ಲಿಂಗತಃ ಶೋಕಾದಿಷು ಅನುಮೀಯಮಾನೇಷು ಅನುಮಾತುಃ ಸುಖಾಸ್ವಾದಲವೋऽಪಿ ಲಕ್ಷ್ಯತೇ । ಪ್ರತ್ಯುತ ಸಾಧೂನಾಮ್ ಉದಾಸೀನಾನಾಮಪಿ ವಾ ಭಯಶೋಕದೌರ್ಮನಸ್ಯಾದಿದುಃಖಮ್ ಅಸಮಮ್ ಉಪಜಾಯಮಾನಮ್ ಅವಧಾರ್ಯತೇ । ನ ಚ ಲೋಕತಃ ಕಾವ್ಯಾದೌ ಕಶ್ಚಿದತಿಶಯಃ, ಯೇನಾಸೌ ತತ್ರೈವೋಪಗಮ್ಯೇತ, ನ ಲೋಕೇ । ತ ಏವ ಹಿ ಲೌಕಿಕಾ ವಿಭಾವಾದಯೋ ಹೇತುಕಾರ್ಯ– ಸಹಕಾರಿರೂಪಾ ಗಮಕಾಃ । ತ ಏವ ಚ ರತ್ಯಾದಯೋ ಅವಸ್ಥಾವಿಶೇಷರೂಪಾ ಭಾವಾ ಗಮ್ಯಾಃ । ತತ್ ಕೋऽತಿಶಯಃ ಕಾವ್ಯಾದೌ ಯತ್ ತತ್ರೈವ ರಸಾಸ್ವಾದೋ, ನ ಲೋಕೇ ಇತಿ ಪ್ರಯೋಜನಾಂಶಾಸಂಭವಾದ್ ರತ್ಯಾದಿಷು ವ್ಯಂಗ್ಯತ್ವೋಪಚಾರೋऽನುಪಪನ್ನ ಏವ ।**

**ಅನುವಾದ:**

(ಪೂರ್ವಪಕ್ಷ) ಸುಖ ಮುಂತಾದ ಅವಸ್ಥಾವಿಶೇಷಗಳಾದ ರತ್ಯಾದಿಗಳಿಗೆ ಕಾವ್ಯ ಇತ್ಯಾದಿಗಳಲ್ಲಿ ಸಹೃದಯರಿಗೆ ಸುಖಾಸ್ವಾದವನ್ನು ಉಂಟುಮಾಡುವ ಶಕ್ತಿಯುಂಟು. ಅನುಮೇಯಗಳಾದ ರಸಾದಿಗಳಿಗೆ ವ್ಯಂಗ್ಯತ್ವವನ್ನು ಲಾಕ್ಷಣಿಕವಾಗಿ ಹೇಳಿರುವುದಕ್ಕೆ ಅದೇ ಪ್ರಯೋಜನ ಎಂದು ಹೇಳುತ್ತೀರಲ್ಲ, ಅದು ಹೇಗೆ? ಲೋಕದಲ್ಲಿ ಲಿಂಗದಿಂದ (ಹೇತುವಿನಿಂದ) ಶೋಕಾದಿಗಳನ್ನು ಅನುಮಿತಿಯಿಂದ ತಿಳಿದುಕೊಂಡಾಗ ಹಾಗೆ ಅನುಮಾನ ಮಾಡಿದ ವ್ಯಕ್ತಿಗೆ ಸ್ವಲ್ಪವೂ ಸುಖ ಆಗುವುದಿಲ್ಲವಲ್ಲ? ಅದಕ್ಕೆ ವಿರುದ್ಧವಾಗಿ (ಅಂಥ ಅನುಮಾನದಿಂದ) ಸಾಧುಜನರಿಗೂ ಉದಾಸೀನರಾದ (ತಟಸ್ಥ) ಜನರಿಗೂ ಭಯ, ಶೋಕ, ಮನಸ್ಸಿಗೆ ನೋವು ಅಧಿಕವಾಗಿ ಉಂಟಾಗುವುದು ಕಂಡುಬರುತ್ತದೆ. ಲೋಕಕ್ಕಿಂತ ಕಾವ್ಯದಲ್ಲಿ ಯಾವ ಅತಿಶಯವೂ ಇಲ್ಲ. ಅದು ಇದ್ದಿದ್ದರೆ, ಕಾವ್ಯದಲ್ಲೇ ಆ ಸುಖಾಸ್ವಾದ,

ಲೋಕದಲ್ಲಿ ಅದು ಇಲ್ಲ ಎಂದು ಹೇಳಬಹುದಾಗಿತ್ತು. ಲೋಕದಲ್ಲಿರುವ ಕಾರಣ, ಕಾರ್ಯ, ಸಹಕಾರಿ ಎಂಬವುಗಳೇ (ಕಾವ್ಯದಲ್ಲಿ) ವಿಭಾವ (ಅನುಭಾವ, ಸಂಚಾರಿಭಾವ)ಗಳಾಗಿ (ರತ್ಯಾದಿಗಳಿಗೆ) ಗಮಕಗಳಾಗುತ್ತವೆ. ಲೋಕದಲ್ಲಿರುವ ರತ್ಯಾದಿ ಅವಸ್ಥಾವಿಶೇಷರೂಪವಾದ ಭಾವಗಳು (ಕಾವ್ಯದಲ್ಲಿ) ಗಮ್ಯ (ಅಥವಾ ಅನುಮೇಯ)ಗಳು. ಹೀಗಿರುವಾಗ ಕಾವ್ಯ (ನಾಟಕ) ಮುಂತಾದುವುಗಳಲ್ಲಿ ಮಾತ್ರ ರಸಾಸ್ವಾದ, ಲೋಕದಲ್ಲಿ ಅದು ಇಲ್ಲ ಎಂದು ಹೇಳುವುದಕ್ಕೆ ಕಾವ್ಯದಲ್ಲಿರುವ ಅತಿಶಯ (ವಿಶೇಷಾಂಶ) ಏನು? (ಯಾವುದೂ ಅಂಥ ಅತಿಶಯ ಕಾಣದೆ ಇರುವುದರಿಂದ) ಅಲ್ಲಿ ಪ್ರಯೋಜನಾಂಶವಾದ ಚಮತ್ಕಾರವೂ ಅಸಂಭವ, ಆದ್ದರಿಂದ ರತ್ಯಾದಿಗಳಲ್ಲಿ (ಶೃಂಗಾರಾದಿ ರಸಗಳಲ್ಲಿ) ವ್ಯಂಗ್ಯತ್ವದ ಉಪಚಾರ (ಲಾಕ್ಷಣಿಕಪ್ರಯೋಗ)ವೂ ಅನುಚಿತವೇ.

**ವಿವರಣೆ:**

ಇಲ್ಲಿ ಮೂಲಭೂತವಾದ ವಿಷಯವನ್ನು ಮಹಿಮನು ಚರ್ಚಿಸುತ್ತಿದ್ದಾನೆ. ಕಾವ್ಯ, ನಾಟಕ, ಕಲೆ ಇತ್ಯಾದಿಗಳಲ್ಲಿ ಅಲೌಕಿಕವಾದ ವಿಶೇಷವಿದೆ. ಅದರಿಂದ ಅಲ್ಲಿ ರಸಾಸ್ವಾದವುಂಟು, ಲೋಕದಲ್ಲಿ ಎಂದರೆ ಸಾಮಾನ್ಯ ಪ್ರಪಂಚದಲ್ಲಿ ಆ ರಸಾಸ್ವಾದ ಅಸಂಭವ ಎಂಬುದು ಅಲಂಕಾರಶಾಸ್ತ್ರದ ಮತ್ತು ಸೌಂದರ್ಯಶಾಸ್ತ್ರದ ಸಿದ್ಧಾಂತ. ಅದರ ಬುಡವನ್ನೇ ಅಲುಗಾಡಿಸುವ ಪ್ರಶ್ನೆ ಇಲ್ಲಿದೆ. ಕಾವ್ಯದಲ್ಲಿ (ಅಥವಾ ಎಲ್ಲ ಕಲೆಗಳಲ್ಲಿ) ವಿಷಯವಾಗಿ ಇರುವುದು ಲೋಕದಲ್ಲಿರುವ ವಸ್ತುಗಳೇ. ಪಾರಿಭಾಷಿಕವಾಗಿ ಬೇರೆ ಹೆಸರುಗಳನ್ನು ಅವುಗಳಿಗೆ ಕೊಟ್ಟಿರಬಹುದು. ರತ್ಯಾದಿಗಳ ಕಾರಣಗಳನ್ನು ಶಾಸ್ತ್ರವು ವಿಭಾವಗಳೆಂದೂ, ಕಾರ್ಯಗಳನ್ನು ಅನುಭಾವಗಳೆಂದೂ, ಸಹಕಾರಿಗಳನ್ನು ಸಂಚಾರಿಭಾವಗಳೆಂದೂ ಕರೆದಿದೆ. ಹೆಸರಿನ ಬದಲಾವಣೆಯಿಂದ ವಸ್ತು ಬದಲಾಗದು. ಲೋಕದಲ್ಲಿ ಶೋಕ, ಜುಗುಪ್ಸೆ, ಭಯ ಇತ್ಯಾದಿಗಳನ್ನು ಅನುಮಾನಿಸಿದಾಗ ಯಾವ ಸುಖಾಸ್ವಾದವೂ ಇಲ್ಲ. ಬದಲಾಗಿ ಅಲ್ಲಿ ನೋವು ಉಂಟಾಗಬಹುದು. ಈ ಸುಖಾಸ್ವಾದವೇ ಇಲ್ಲದ ಪರಿಸ್ಥಿತಿ ಕಾವ್ಯಾದಿಕಲೆಗಳಿಗೂ ಸಮಾನ. ಅಂಥ ಸುಖಾಸ್ವಾದಕ್ಕಾಗಿ ವ್ಯಂಗ್ಯತ್ವದ ಉಪಚಾರ ಅಥವಾ ಲಾಕ್ಷಣಿಕ ಪ್ರಯೋಗ ಎಂಬ ಹೇಳಿಕೆ ನಿರಾಧಾರವಾಯಿತು. ಈ ಸಮಸ್ಯೆಗೆ ಉತ್ತರವೇನು? ಎಂಬುದು ಇಲ್ಲಿ ಪೂರ್ವಪಕ್ಷದ ಪ್ರಶ್ನೆ.

> **ಉಚ್ಯತೇ । ಯತ್ರ ವಿಭಾವಾದಿಮುಖೇನ ಭಾವಾನಾಮವಗಮಃ, ತತ್ರೈವ ಸಹೃದಯೈಕಸಂವೇದ್ಯೋ ರಸಾಸ್ವಾದೋದಯ ಇತಿ ವಸ್ತು ಸ್ವಭಾವ ಏವಾಯಂ ನ ಪರ್ಯನುಯೋಗಪದವೀಮ್ ಅವತರತಿ ಪ್ರಾಮಾಣಿಕಾನಾಮ್ । ಯದಾಹ ಭರತಃ "ವಿಭಾವಾನುಭಾವವ್ಯಭಿಚಾರಿಸಂಯೋಗಾದ್ ರಸನಿಷ್ಪತ್ತಿಃ" ಇತಿ । ಯಥೋಕ್ತಮ್– ಭಾವಸಂಯೋಜನಾವ್ಯಂಗ್ಯಪರಸಂವಿತ್ತಿಗೋಚರಃ । ಆಸ್ವಾದನಾತ್ಮಾನುಭವೋ ರಸಃ ಕಾವ್ಯಾರ್ಥ ಉಚ್ಯತೇ ॥ ಇತಿ ।**

**ಅನುವಾದ:**

(ಅದಕ್ಕೆ ಉತ್ತರವನ್ನು) ಹೇಳುತ್ತೇವೆ: ಎಲ್ಲಿ ವಿಭಾವಾದಿಗಳ ಮೂಲಕ (ರತ್ಯಾದಿ)ಭಾವಗಳ ಅರಿವು ಉಂಟಾಗುವುದೋ, ಅಲ್ಲಿ ಮಾತ್ರ ಸಹೃದಯರಿಗೆ

ಮಾತ್ರ ತಿಳಿಯುವ ರಸಾಸ್ವಾದದ ಉದಯ. ಇದು ವಸ್ತುಸ್ವಭಾವ, ಅದನ್ನು ಪ್ರಾಮಾಣಿಕರು ಪ್ರಶ್ನಿಸುವಂತಿಲ್ಲ. ಭರತನೂ ಹೇಳಿದ್ದಾನೆ– "ವಿಭಾವ, ಅನುಭಾವ ಮತ್ತು ಸಂಚಾರಿಭಾವಗಳ ಸಂಯೋಗದಿಂದ ರಸನಿಷ್ಪತ್ತಿ ಆಗುತ್ತದೆ." (ಬೇರೆಯವರೂ) ಹೇಳಿ ವಿವರಿಸಿದ್ದಾರೆ – "ಭಾವಗಳ ಸಂಯೋಜನೆಯಿಂದ ವ್ಯಂಜಿತವಾಗಿ ಪರಸಂವಿತ್ತಿಗೆ ಗೋಚರವಾಗಿ ಆಸ್ವಾದನಾಸ್ವರೂಪದ ಯಾವ ಅನುಭವ ಉಂಟಾಗುವುದೋ ಅದೇ ಕಾವ್ಯದ ಪರಮಪ್ರಯೋಜನವಾದ ರಸ ಎಂದು ಕರೆಸಿಕೊಳ್ಳುತ್ತದೆ."

(ವಿಭಾವಗಳೂ ಕಾರಣಗಳೂ ಬೇರೆ ಬೇರೆ)

**ನ ಚ ಲೋಕೇ ವಿಭಾವಾದಯೋ ಭಾವಾ ವಾ ಸಂಭವಂತಿ । ಹೇತ್ವಾದೀನಾಮೇವ ತತ್ರ ಸಂಭವಾತ್ । ನ ಚ ವಿಭಾವಾದಯೋ ಹೇತ್ವಾದಯಶ್ಚೇತ್ಯೇಕ ಏವಾರ್ಥ ಇತಿ ಮಂತವ್ಯಮ್। ಅನ್ಯೇ ಹೇತ್ವಾದಯೋ ಅನ್ಯ ಏವ ವಿಭಾವಾದಯಃ । ತೇಷಾಂ ಭಿನ್ನಲಕ್ಷಣತ್ವಾತ್ । ತಥಾ ಹಿ । ಯೇ ಲೋಕೇ ರತ್ಯಾದಯೋ ರಾಮಾದಿಗತಾಃ ಸ್ಥೇಮಭಾಜೋಽವಸ್ಥಾವಿಶೇಷಾಃ ಕೇಚಿತ್, ತ ಏವ ಕಾವ್ಯಾದೌ ಕವಿಪ್ರಭೃತಿಭಿಃ ವರ್ಣನಾದ್ಯರ್ಥಮ್ ಆತ್ಮನಿ ಅನುಸಂಹಿತಾಸ್ಸಂತೋ ಭಾವಯಂತಿ ತಾಂಸ್ತಾನ್ ರಸಾನ್ ಇತಿ ಭಾವಾ ಇತ್ಯುಚ್ಯಂತೇ । ಯದಾಹ ಭರತಃ – ನಾನಾಭಿನಯಸಂಬಂಧಾದ್ ಭಾವಯಂತಿ ರಸಾನಿಮಾನ್ । ಯಸ್ಮಾತ್ ತಸ್ಮಾದಮೀ ಭಾವಾ ವಿಜ್ಞೇಯಾ ನಾಟ್ಯಯೋಕ್ತೃಭಿಃ ॥**

**ಅನುವಾದ:**

ಲೋಕದಲ್ಲಿ ವಿಭಾವಾದಿಗಳು ಮತ್ತು ಭಾವಗಳು ಸಂಭವಿಸುವುದೇ ಇಲ್ಲ. ಅಲ್ಲಿ ಇರುವುದು ಕಾರಣಾದಿಗಳು ಮಾತ್ರ. ವಿಭಾವಾದಿಗಳು ಮತ್ತು ಕಾರಣಾದಿಗಳು ಒಂದೇ ಎಂದು ಭಾವಿಸಬಾರದು. ಕಾರಣಾದಿಗಳೇ ಬೇರೆ, ವಿಭಾವಾದಿಗಳೇ ಬೇರೆ. ಏಕೆಂದರೆ ಅವುಗಳ ಲಕ್ಷಣಗಳೇ ಬೇರೆ. ಲೋಕದಲ್ಲಿ ರಾಮ ಮುಂತಾದವರಲ್ಲಿರುವ ಸ್ಥಿರವಾದ ರತಿ(ಅನುರಾಗ) ಇತ್ಯಾದಿ ವಿಶೇಷಾವಸ್ಥೆಗಳೇ ಕಾವ್ಯ ಇತ್ಯಾದಿಗಳಲ್ಲಿ ಕವಿಗಳಿಂದ (ಮತ್ತು ಕಲಾವಿದರಿಂದ) ವರ್ಣನಾದಿಗಳಿಗೋಸ್ಕರ ಆತ್ಮದಲ್ಲಿ ಅನುಸಂಧಾನ ಮಾಡಲ್ಪಟ್ಟು ಆಯಾ ರಸಗಳನ್ನು ಅಸ್ತಿತ್ವಕ್ಕೆ ತರುತ್ತವೆ, ಆದ್ದರಿಂದಲೇ ಭಾವಗಳೆಂದು ಕರೆಯಲ್ಪಡುತ್ತವೆ. ಈ ಬಗೆಗೆ ಭರತನ ಮಾತು – "ನಾನಾ ಅಭಿನಯಗಳಿಗೆ ಸಂಬಂಧವನ್ನು ಹೊಂದುವುದರಿಂದ ಈ ರಸಗಳನ್ನು ಉಂಟುಮಾಡುತ್ತವೆಯಾದ ಕಾರಣದಿಂದ ಅವುಗಳನ್ನು ನಾಟ್ಯಸಂಯೋಜಕರು ಭಾವಗಳೆಂದು ಕರೆಯುತ್ತಾರೆ."

**ಯೇ ಚ ತೇಷಾಂ ಹೇತವಃ ಸೀತಾದ್ಯಾಃ ಕೇಚಿತ್ ತ ಏವ ಕಾವ್ಯಾದಿಸಮರ್ಪಿತಾಃ ಸಂತೋ ವಿಭಾವ್ಯಂತೇ ಭಾವಾ ಏಭಿರಿತಿ ವಿಭಾವಾ ಇತ್ಯುಚ್ಯಂತೇ । ಯದಾಹ ಭರತಃ – ಬಹವೋಽರ್ಥಾ ವಿಭಾವ್ಯಂತೇ ವಾಗಂಗಾಭಿನಯಾಶ್ರಯಾಃ । ಅನೇನ ಯಸ್ಮಾತ್ತೇನಾಯಂ ವಿಭಾವ ಇತಿ ಸಂಜ್ಞಿತಃ॥ ಯೇ ಚ ತೇಷಾಂ ಕೇಚಿತ್ ಕಾರ್ಯರೂಪಾಃ ಮುಖ–**

**ಪ್ರಸಾದಾದಯೋಽರ್ಥಾಸ್ತ ಏವ ಕಾವ್ಯಾದ್ಯುಪದರ್ಶ್ಯಮಾನಾಃ ಸಂತೋಽನುಭಾವಯಂತಿ ತಾಂಸ್ತಾನ್ ಭಾವಾನ್ ಇತಿ ಅನುಭಾವಾ ಇತ್ಯುಚ್ಯಂತೇ । ಯದಾಹ ಭರತಃ**
**ವಾಗಂಗಸತ್ತ್ವಾಭಿನಯೈರ್ಯಸ್ಮಾದರ್ಥೋಽನುಭಾವ್ಯತೇ ।**
**ವಾಗಂಗೋಪಾಂಗಸಂಯುಕ್ತಃ ಸೋಽನುಭಾವ ಇತಿ ಸ್ಮೃತಃ ॥**

**ಅನುವಾದ:**

ಆ ರತ್ಯಾದಿಭಾವಗಳಿಗೆ ಕಾರಣವಾಗಿರುವ ಸೀತಾ ಮುಂತಾದ ವಸ್ತುಗಳು ಕಾವ್ಯಾದಿ (ಕಲೆ)ಗಳಲ್ಲಿ ಸಮರ್ಪಿತವಾಗಿದ್ದು 'ಇವುಗಳಿಂದ ಭಾವಗಳು ವಿಶೇಷಾಸ್ತಿತ್ವವನ್ನು ಪಡೆಯುತ್ತವೆ' ಎಂಬ ಕಾರಣದಿಂದ ವಿಭಾವಗಳೆಂದು ಹೇಳಲ್ಪಟ್ಟಿವೆ. ಭರತನು ಹೇಳಿದ್ದಾನೆ – ವಾಚಿಕ ಮತ್ತು ಆಂಗಿಕ ಅಭಿನಯಕ್ಕೆ ಆಶ್ರಯವಾಗುವ ಅನೇಕ ಅರ್ಥಗಳು ಇದರಿಂದ ವಿಶೇಷಾಸ್ತಿತ್ವವನ್ನು ಪಡೆಯುವುದರಿಂದ ಇದಕ್ಕೆ ವಿಭಾವ ಎಂಬ ಸಂಜ್ಞೆಯನ್ನು ಇಡಲಾಯಿತು.

ಆ ಭಾವಗಳ ಕಾರ್ಯರೂಪವಾದ ಮುಖಪ್ರಸನ್ನತೆ ಇತ್ಯಾದಿಗಳು ಕಾವ್ಯದಲ್ಲಿ ತೋರಿಸಲ್ಪಟ್ಟಾಗ ಆಯಾ ಭಾವಗಳನ್ನು ಅನುಭವಗೋಚರವನ್ನಾಗಿ ಮಾಡುತ್ತವೆ ಎಂಬ ಕಾರಣದಿಂದ ಅವುಗಳನ್ನು ಅನುಭಾವಗಳು ಎಂದಿದ್ದಾರೆ. ಭರತನು ಹೇಳಿದ್ದಾನೆ – "ವಾಗಭಿನಯ, ಆಂಗಿಕಾಭಿನಯ ಮತ್ತು ಸಾತ್ತ್ವಿಕಾಭಿನಯಗಳಿಂದ ಅರ್ಥವು ಅನುಸ್ಯೂತವಾದ ಅಸ್ತಿತ್ವವನ್ನು ಪಡೆಯುವುದರಿಂದ ವಾಕ್, ಅಂಗ, ಉಪಾಂಗಗಳಿಂದ ಸಂಯುಕ್ತವಾದ ಅವುಗಳನ್ನು ಅನುಭಾವಗಳೆಂದು ಕರೆಯುತ್ತಾರೆ.

**ಯೇ ಚ ತೇಷಾವ್ ಅಂತರಾಂತರಾ ಅನವಸ್ಥಾಯಿನಃ ಅವಸ್ಥಾವಿಶೇಷಾಃ, ತದವಾಂತರಹೇತುಜನಿತಾ ಉತ್ಕಲಿಕಾಕಾರಾಃ ಕೇಚಿದುತ್ಪದ್ಯಂತೇ ತ ಏವ ನಿಜನಿಜ–ವಿಭಾವಾನುಭಾವವರ್ಗಮುಖೇನ ಉಪದರ್ಶ್ಯಮಾನಾಃ ಸಂತೋ ವಿಶೇಷೇಣಾಭಿಮುಖ್ಯೇನ ಚರಂತಿ ತೇಷು ತೇಷು ಭಾವೇಷ್ವಿತಿ ವ್ಯಭಿಚಾರಿಣಃ ಇತ್ಯುಚ್ಯಂತೇ । ಯದಾಹ ಭರತಃ– ವಿವಿಧಮ್ ಆಭಿಮುಖ್ಯೇನ ರಸೇಷು ಚರಂತಿ ಇತಿ ವ್ಯಭಿಚಾರಿಣಃ ಇತಿ ।**

**ಅನುವಾದ:**

ಆ ಭಾವಗಳ ಮಧ್ಯದಲ್ಲಿ ಸ್ಥಿರವಲ್ಲದ ಕೆಲವು ವಿಶೇಷಾವಸ್ಥೆಗಳು ಒಳಗಡೆ ಇರುವ ಕಾರಣಗಳಿಂದ ಅಲೆಗಳಂತೆ (ತಾತ್ಕಾಲಿಕವಾಗಿ) ಹುಟ್ಟುತ್ತವೆ. ಅವುಗಳು ತಮ್ಮ ತಮ್ಮ ವಿಭಾವ–ಅನುಭಾವಗಳ ಗುಂಪಿನ ಮೂಲಕ ತೋರಿಸಲ್ಪಡುತ್ತವೆ. (ಮುಖ್ಯ ಭಾವಕ್ಕೆ) ಅಭಿಮುಖವಾಗಿ ಆಯಾ ಭಾವಗಳ ಮಧ್ಯದಲ್ಲಿ ಸಂಚರಿಸುತ್ತವೆ ಎಂಬ ಕಾರಣದಿಂದ ಆ (ಅಸ್ಥಿರ) ಭಾವಗಳನ್ನು ವ್ಯಭಿಚಾರಿಭಾವಗಳೆಂದು ಕರೆಯುತ್ತಾರೆ. ಭರತನೂ ಹೇಳಿದ್ದಾನೆ – ''ವಿವಿಧವಾಗಿ ರಸಗಳಲ್ಲಿ ಅಭಿಮುಖಗತಿಯಲ್ಲಿ ಸಂಚರಿಸುತ್ತವೆ ಎಂದು ಅವುಗಳು ವ್ಯಭಿಚಾರಿಗಳು."

**ಯೇ ಚೈತೇ ಸ್ಥಾಯಿವ್ಯಭಿಚಾರಿಸಾತ್ತ್ವಿಕಭೇದಾದ್ ಏಕೋನಪಂಚಾಶದ್ ಭಾವಾ ಉಕ್ತಾಸ್ತೇ ಸರ್ವೇ ವ್ಯಭಿಚಾರಿಣ ಏವ । ಕೇವಲಮೇಷಾಂ ಪ್ರತಿನಿಯತರೂಪಾಪೇಕ್ಷೋ ವ್ಯಪದೇಶಭೇದಃ। ತಥಾ ಹಿ । ಸ್ಥಾಯಿತ್ವಂ ಸ್ಥಾಯಿಷ್ವೇವ ಪ್ರತಿನಿಯತಂ, ನ ವ್ಯಭಿಚಾರಿಸಾತ್ತ್ವಿಕೇಷು । ವ್ಯಭಿಚಾರಿತ್ವಂ ವ್ಯಭಿಚಾರಿಷ್ವೇವ, ನೇತರಯೋಃ । ಸಾತ್ತ್ವಿಕತ್ವಮಪಿ ಸಾತ್ತ್ವಿಕೇಷ್ವೇವ, ನೇತರಯೋರಿತಿ । ತತ್ರ ಸ್ಥಾಯಿಭಾವಾನಾಮ್ ಉಭಯೀ ಗತಿಃ । ನ ವ್ಯಭಿಚಾರಿ– ಸಾತ್ತ್ವಿಕಾನಾಮ್ । ತೇ ಹಿ ನಿತ್ಯಂ ವ್ಯಭಿಚಾರಿಣ ಏವ, ನ ಜಾತುಚಿತ್ ಸ್ಥಾಯಿನಃ ಪ್ರಕಲ್ಪಂತೇ ।**

**ಅನುವಾದ:**

ಸ್ಥಾಯಿಭಾವಗಳು (೮), ವ್ಯಭಿಚಾರಿಭಾವಗಳು (೩೩), ಸಾತ್ತ್ವಿಕಭಾವಗಳು (೮) ಎಂಬ ಭೇದದಿಂದ ನಲವತ್ತೊಂಬತ್ತು ಭಾವಗಳನ್ನು ಹೇಳಿದ್ದಾರೆ. ಅವೆಲ್ಲವೂ ವ್ಯಭಿಚಾರಿಗಳೇ. ಆದರೆ ಅವುಗಳಿಗೆ ನಿರ್ದಿಷ್ಟವಾದ ರೂಪಗಳಿರುವುದರಿಂದ ಬೇರೆ ಬೇರೆ ಹೆಸರುಗಳು. ಹೇಗೆಂದರೆ, ಸ್ಥಾಯಿತ್ವವು ಸ್ಥಾಯಿಭಾವಗಳಲ್ಲಿ ಮಾತ್ರ ಇದೆ, ಅದು ವ್ಯಭಿಚಾರಿಭಾವಗಳಲ್ಲಿ ಮತ್ತು ಸಾತ್ತ್ವಿಕಭಾವಗಳಲ್ಲಿ ಇಲ್ಲ. ವ್ಯಭಿಚಾರಿತ್ವವು ಕೇವಲ ವ್ಯಭಿಚಾರಿಗಳಲ್ಲಿದೆ, ಉಳಿದ ಎರಡರಲ್ಲಿಲ್ಲ. ಸಾತ್ತ್ವಿಕತ್ವವು ಸಾತ್ತ್ವಿಕಗಳಲ್ಲಿ ಮಾತ್ರ ಇದೆ, ಉಳಿದ ಎರಡರಲ್ಲಿಲ್ಲ. ಅವುಗಳಲ್ಲಿ ಸ್ಥಾಯಿಭಾವಗಳಿಗೆ ಉಭಯಸ್ವರೂಪ. ಅದು ವ್ಯಭಿಚಾರಿಗಳಿಗೂ ಸಾತ್ತ್ವಿಕಗಳಿಗೂ ಇಲ್ಲ. ಏಕೆಂದರೆ ಅವು ಯಾವಾಗಲೂ ವ್ಯಭಿಚಾರಿಗಳೇ, ಎಂದೂ ಅವು ಸ್ಥಾಯಿಭಾವಗಳಾಗಲಾರವು.

**ಯತ್ತು ಭಾವಾಧ್ಯಾಯೇ ಸ್ಥಾಯಿನಾಂ ಲಕ್ಷಣಮುಕ್ತಂ ತದ್ ವ್ಯಭಿಚಾರಿದಶಾಪನ್ನಾನಾಮೇವ ತೇಷಾಮವಗಂತವ್ಯಮ್ । ನಾನ್ಯೇಷಾಮ್ । ಲಕ್ಷಣವಚನಸ್ಯ ವೈಯರ್ಥ್ಯಪ್ರಸಂಗಾತ್ । ಸ್ಥಾಯ್ಯನುಕರಣಾತ್ಮಾನೋ ಹಿ ರಸಾ ಇಷ್ಯಂತೇ, ತೇ ಚ ಪ್ರಧಾನಮಿತಿ ತಲ್ಲಕ್ಷಣಮುಖೇನೈವ ತೇಷಾಂ ಸ್ವರೂಪಾವಗಮಸಿದ್ಧೇಃ । ತೇಷಾಂ ಬಿಂಬಪ್ರತಿಬಿಂಬನ್ಯಾಯೇನಾವಸ್ಥಾನಾತ್ । ಸ್ಥಾಯಿಭಾವೇಷು ಚ ನಿರ್ವೇದಾದಿಷ್ವಿವ ವ್ಯಭಿಚಾರಿಣಾಮ್ ಅನುಪಾದಾನಾತ್ । ತದುಪಾದಾನೇ ಹಿ ತೇಷಾಂ ಸ್ಥಾಯಿತ್ವಮೇವ ಸ್ಯಾತ್, ನ ವ್ಯಭಿಚಾರಿತ್ವಂ ನಿರ್ವೇದಾದಿವತ್। ತಸ್ಮಾದ್ ಯೋಗ್ಯತಾಮಾತ್ರಪ್ರವರ್ತಿತೋಽಯಂ ವರ್ಗತ್ರಯವಿಭಾಗೋಪದರ್ಶನಾಯ ವ್ಯಭಿಚಾರಿಷ್ವಪಿ ಸ್ಥಾಯಿವ್ಯಪದೇಶಃ । ತನ್ಮಾತ್ರವಿಪ್ರಲಂಭಕೃತೋಽನ್ಯೇಷಾಂ ಸ್ಥಾಯಿಭಾವಲಕ್ಷಣಭ್ರಮಃ ಇತಿ ಅಲಮಪ್ರಸ್ತುತವಸ್ತುವಿಸ್ತರೇಣ ।**

**ಅನುವಾದ:**

ಭಾವಾಧ್ಯಾಯದಲ್ಲಿ (ನಾಟ್ಯಶಾಸ್ತ್ರದ ಏಳನೆಯ ಅಧ್ಯಾಯದಲ್ಲಿ) ಸ್ಥಾಯಿಗಳ ಲಕ್ಷಣವನ್ನು ಹೇಳಿದ್ದಾರೆ. ಆ ಲಕ್ಷಣವು ವ್ಯಭಿಚಾರಿಭಾವಗಳಾಗುವ (ರತ್ಯಾದಿಸ್ಥಾಯಿಭಾವಗಳ) ಲಕ್ಷಣಗಳೆಂದು ತಿಳಿದುಕೊಳ್ಳಬೇಕು. ಬೇರೆಯವುಗಳ (ಸ್ಥಾಯಿಭಾವರೂಪವನ್ನು ಪಡೆದುವುಗಳ ಲಕ್ಷಣವೆಂದು) ತಿಳಿಯಬಾರದು. (ಹಾಗೆ ತಿಳಿದುಕೊಂಡರೆ) ಲಕ್ಷಣವನ್ನು ಹೇಳಿದ್ದೇ ವ್ಯರ್ಥವಾದೀತು. ಸ್ಥಾಯಿಗಳ

ಅನುಕರಣಸ್ವರೂಪವಾದುವೇ ರಸಗಳು, ಆ ರಸಗಳು ಪ್ರಧಾನವಾದುವು, ಅವುಗಳ ಲಕ್ಷಣವನ್ನು ಹೇಳಿದಾಗಲೇ ಸ್ಥಾಯಿಭಾವಗಳ ಲಕ್ಷಣಗಳನ್ನೂ ಹೇಳಿದಂತಾಯಿತು. ಏಕೆಂದರೆ ಸ್ಥಾಯಿ ಮತ್ತು ರಸಗಳು ಬಿಂಬ–ಪ್ರತಿಬಿಂಬರೂಪದಲ್ಲಿ ಇರುತ್ತವೆ. ನಿರ್ವೇದಾದಿಗಳಲ್ಲಿರುವಂತೆ ಸ್ಥಾಯಿಭಾವಗಳಲ್ಲಿ ವ್ಯಭಿಚಾರಿಗಳನ್ನು ಹೇಳಿಲ್ಲ. ಹಾಗೆ ಹೇಳಿದ್ದರೆ ಅವುಗಳೂ ಸ್ಥಾಯಿಗಳು ಎಂದು ನಿರ್ಣಯ ಆಗುತ್ತಿತ್ತು, ನಿರ್ವೇದಾದಿಗಳಂತೆ ಅವುಗಳಿಗೆ ವ್ಯಭಿಚಾರಿತ್ವ ಸಿದ್ಧವಾಗುತ್ತಿರಲಿಲ್ಲ. (ಸ್ಥಾಯಿ, ಸಾತ್ತ್ವಿಕ, ವ್ಯಭಿಚಾರಿ ಎಂಬ) ಮೂರು ವರ್ಗಗಳನ್ನು ತೋರಿಸುವುದಕ್ಕಾಗಿ ಅರ್ಹತೆಯುಂಟು ಎಂಬುದನ್ನು ಮಾತ್ರ ಆಶ್ರಯಿಸಿ ವ್ಯಭಿಚಾರಿಗಳಲ್ಲೂ ಸ್ಥಾಯಿತ್ವ ವ್ಯವಹಾರವನ್ನು ಮಾಡಲಾಗಿದೆ. ಅಷ್ಟು ಮಾತ್ರದಿಂದ ಮೋಸಹೋದ ಇತರರಿಗೆ 'ಇವು ಸ್ಥಾಯಿಭಾವಗಳ ಲಕ್ಷಣಗಳು' ಎಂಬ ಭ್ರಾಂತಿಯುಂಟಾಗಿದೆ. ಈ ಅಪ್ರಸ್ತುತವಸ್ತುವನ್ನು ವಿಸ್ತರಿಸಿದುದು ಸಾಕು.

**ವಿವರಣೆ:**

ನಾಟ್ಯಶಾಸ್ತ್ರದ ಏಳನೆಯ ಅಧ್ಯಾಯದಲ್ಲಿ ಸ್ಥಾಯಿಭಾವಗಳ ಲಕ್ಷಣಗಳನ್ನು ಭರತನು ಹೇಳಿದ್ದಾನೆ. ಸ್ಥಾಯಿಭಾವಗಳೆಂದು ಪರಿಗಣಿತವಾದ ರತ್ಯಾದಿಗಳು ವ್ಯಭಿಚಾರಿಗಳೂ ಆಗಬಹುದು. ಅಂಥ ವ್ಯಭಿಚಾರಿಭಾವಗಳ ಲಕ್ಷಣವನ್ನು ಭರತನು ಹೇಳಿದ್ದಾನೆ. ಸ್ಥಾಯಿಭಾವಗಳು ರಸಗಳೇ ಆದುದರಿಂದ ರಸಲಕ್ಷಣವನ್ನು ಹೇಳಿದಾಗಲೇ ಸ್ಥಾಯಿಭಾವಗಳ ಲಕ್ಷಣವನ್ನೂ ಹೇಳಿದಂತಾಯಿತು ಎಂಬುದು ಮಹಿಮಭಟ್ಟನ ವಿಮರ್ಶೆ.

**ತದೇವಂ ವಿಭಾವಾದೀನಾಂ ಹೇತ್ವಾದೀನಾಂ ಚ ಕೃತ್ರಿಮಾಕೃತ್ರಿಮತಯಾ ಕಾವ್ಯ–ಲೋಕವಿಷಯತಯಾ ಚ ಸ್ವರೂಪಭೇದೇ ವಿಷಯಭೇದೇ ಚಾವಸ್ಥಿತೇ ಸತಿ ಏಕತ್ವಾಸಿದ್ಧೇಃ ಯದಾ ವಿಭಾವಾದಿಭಿರ್ಭಾವೇಷು ರತ್ಯಾದಿಷು ಅಸತ್ಯೇಷ್ವೇವ ಪ್ರತೀತಿರುಪಜನ್ಯತೇ ತದಾ ತೇಷಾಂ ತನ್ಮಾತ್ರಸಾರತ್ವಾತ್ ಪ್ರತೀಯಮಾನಾ ಇತಿ, ಗಮ್ಯಾ ಇತಿ ಚ ವ್ಯಪದೇಶಾ ಮುಖ್ಯವೃತ್ತ್ಯಾ ಉಪಪದ್ಯಂತ ಏವ । ತತ್ಪ್ರತೀತಿಪರಾಮರ್ಶ ಏವ ಚ ರಸಾಸ್ವಾದಃ ಸ್ವಾಭಾವಿಕ ಇತ್ಯುಕ್ತಮ್ ।**

**ಅನುವಾದ:**

ವಿಭಾವಾದಿಗಳಿಗೂ ಕಾರಣಾದಿಗಳಿಗೂ ಸ್ವರೂಪಭೇದವು ಕೃತ್ರಿಮತ್ವ–ವಾಸ್ತವತ್ವದಿಂದ ಉಂಟು, ವಿಷಯಭೇದವು ಕಾವ್ಯ–ಲೋಕ ಕ್ಷೇತ್ರಗಳಿಂದ ಉಂಟು ಎಂಬುದು ಸಿದ್ಧವಾಗಿರುವುದರಿಂದ ಅವೆರಡೂ ಒಂದೇ ಎಂಬುದು ಸಿದ್ಧವಾಗದು. ವಿಭಾವಾದಿಗಳಿಂದ ಅಸತ್ಯವೇ ಆದ ರತ್ಯಾದಿಗಳಲ್ಲಿ ಪ್ರತೀತಿಯು ಯಾವಾಗ ಸೃಷ್ಟಿಸಲ್ಪಡುವುದೋ ಆಗ ಅವುಗಳಿಗೆ ಪ್ರತೀಯಮಾನ ಎಂದು, ಗಮ್ಯ ಎಂದು ಶಾಸ್ತ್ರವ್ಯವಹಾರವು ಮುಖ್ಯವೃತ್ತಿ (ಅಭಿಧೆ)ಯಿಂದಲೂ ಸರಿಯಾಗುತ್ತದೆ. ಏಕೆಂದರೆ ಆ ಪ್ರತೀತಿಯೇ ಸಾರ. ಆ ಪ್ರತೀತಿಯ ಪರಾಮರ್ಶವೇ ಸ್ವಾಭಾವಿಕ ರಸಾಸ್ವಾದ ಎಂದು ಹೇಳಲ್ಪಟ್ಟಿದೆ.

(ಕವಿನಿರೂಪಿತ ವಸ್ತುಗಳೇ ಸುಂದರ)

**ಆಸ್ತಾಂ ವಾ ರತ್ಯಾದಿರ್ನಿತ್ಯಪರೋಕ್ಷಃ । ಪ್ರತ್ಯಕ್ಷೋऽಪಿ ಹ್ಯರ್ಥಃ ಸಾಕ್ಷಾತ್ ಸಂವೇದ್ಯಮಾನಃ ಸಚೇತಸಾಂ ನ ತಥಾ ಚಮತ್ಕಾರಮಾತನೋತಿ ಯಥಾ ಸ ಏವ ಸತ್ಕವಿನಾ ವಚನಗೋಚರತಾಂ ಗಮಿತಃ । ಯದುಕ್ತಮ್ – ಕವಿಶಕ್ತ್ಯರ್ಪಿತಾ ಭಾವಾಸ್ತನ್ಮಯೀಭಾವಯುಕ್ತಿತಃ । ಯಥಾ ಸ್ಫುರಂತ್ಯಮೀ ಕಾವ್ಯಾನ್ನ ತಥಾಧ್ಯಕ್ಷತಃ ಕಿಲ ॥**

**ಅನುವಾದ:**

ನಿತ್ಯಪರೋಕ್ಷವಾದ ರತ್ಯಾದಿಗಳು ಹಾಗಿರಲಿ. ಪ್ರತ್ಯಕ್ಷವೇ ಆದ ಪದಾರ್ಥವೂ ಸಾಕ್ಷತ್ತಾಗಿ ಅರಿವಿಗೆ ಬಂದಾಗ, ಕವಿಯ ಮಾತಿಗೆ ಗೋಚರವಾದಾಗ ಎಷ್ಟು ಚಮತ್ಕಾರವನ್ನುಂಟುಮಾಡುವುದೋ ಸಹೃದಯರಿಗೆ ಅಷ್ಟು ಚಮತ್ಕಾರವನ್ನುಂಟು ಮಾಡದು. ಹಿಂದಿನವರೂ ಹೇಳಿದ್ದಾರೆ –

"ತನ್ಮಯೀಭಾವತಂತ್ರದಿಂದ ಕವಿಪ್ರತಿಭಾಗೋಚರವಾದ ವಸ್ತುಗಳು ಎಷ್ಟು ಸುಂದರವಾಗಿ ಕಾವ್ಯದಲ್ಲಿ ಸ್ಫುರಿಸುವುವೋ ಪ್ರತ್ಯಕ್ಷವಾದಾಗಲೂ ಅವು ಅಷ್ಟು ಸುಂದರವಾಗಿರುವುದಿಲ್ಲ."

**ವಿವರಣೆ:**

ರತಿ, ಹಾಸ, ಶೋಕ ಇತ್ಯಾದಿಗಳು ನಿತ್ಯಪರೋಕ್ಷ, ಎಂದೂ ಅವು ಪ್ರತ್ಯಕ್ಷವಲ್ಲ. ಅಳುತ್ತಿರುವ ವ್ಯಕ್ತಿ ಪ್ರತ್ಯಕ್ಷ, ಆದರೆ ಅವನ ಶೋಕ ಅನುಮೇಯ. ಅವು ಕವಿಯಿಂದ ವರ್ಣಿಸಲ್ಪಟ್ಟಾಗ ಚಮತ್ಕಾರವನ್ನು ಉಂಟುಮಾಡುತ್ತವೆ ಎಂಬುದಂತೂ ನಿರ್ವಿವಾದ. ಸಾಮಾನ್ಯವಸ್ತುಗಳೂ ಕವಿಪ್ರತಿಭಾಗೋಚರವಾಗಿ ವರ್ಣಿಸಲ್ಪಟ್ಟಾಗ ಎಂಥ ಚಮತ್ಕಾರವನ್ನು, ಎಂದರೆ ಲೋಕೋತ್ತರವಾದ ಆನಂದವನ್ನು ತರುವುವೋ ಅಂಥ ಆನಂದವನ್ನು ಅವುಗಳ ಪ್ರತ್ಯಕ್ಷದರ್ಶನವೂ ತಂದುಕೊಡದು ಎಂಬುದು ಸತ್ಯ. ಅದಕ್ಕೆ ಕಾರಣ ತನ್ಮಯೀಭಾವ. ಸಾಮಾನ್ಯರಾದ ನಾವು ವಸ್ತುವಿನಲ್ಲಿರುವ ಸೌಂದರ್ಯತತ್ತ್ವವನ್ನು ಕಾಣೆವು. ಕವಿ ತನ್ನ ಪ್ರತಿಭಾನೇತ್ರದಿಂದ ಅದನ್ನು ಸಾಕ್ಷಾತ್ಕರಿಸಿಕೊಂಡು ನಮಗೆ 'ದರ್ಶನ'ವನ್ನು ಒದಗಿಸಿ ವಸ್ತುಗಳ ಸೌಂದರ್ಯವನ್ನು ಪರಿಚಯಿಸುತ್ತಾನೆ.

**ಸೋऽಪಿ ಚ ತೇಷಾಂ ನ ತಥಾ ಸ್ವದತೇ ಯಥಾ**
**ತೈರೇವ ಅನುಮೇಯತಾಂ ನೀತ ಇತಿ ಸ್ವಭಾವ**
**ಏವಾಯಂ ನ ಪರ್ಯನುಯೋಗಮರ್ಹತಿ । ತದುಕ್ತಮ್ –**

**ನಾನುಮಿತೋ ಹೇತ್ವಾದ್ಯೈಃ**
**ಸ್ವದತೇऽನುಮಿತೋ ಯಥಾ ವಿಭಾವಾದ್ಯೈಃ ।**
**ನ ಚ ಸುಖಯತಿ ವಾಚ್ಯೋऽರ್ಥಃ**
**ಪ್ರತೀಯಮಾನಃ ಸ ಏವ ಯಥಾ ॥ ಇತಿ ॥**

**ಧ್ವನಿಕೃತಾಪ್ಯುಕ್ತಮ್ – "ಸಾರರೂಪೋ ಹ್ಯರ್ಥಃಸ್ವಶಬ್ದಾನಭಿಧೇಯತ್ವೇನ ಪ್ರಕಾಶಿತಃ ಸುತರಾಂ ಶೋಭಾಮ್ ಆವಹತಿ" ಇತಿ।**

**ಅನುವಾದ:**

ಆ ಅರ್ಥವೂ ಸಹೃದಯರಿಗೆ ಅನುಮೇಯವಾಗಿದ್ದಾಗ ರುಚಿಸುವಂತೆ (ಕೇವಲ ವಾಚ್ಯವಾಗಿದ್ದಾಗ) ರುಚಿಸದು. ಇದು ವಸ್ತುಸ್ವಭಾವವೇ ಆದುದರಿಂದ ಇದರ ಬಗೆಗೆ ಪ್ರಶ್ನೆ ಸಲ್ಲದು. (ಪ್ರಾಚೀನರೂ) ಹೇಳಿದ್ದಾರೆ–

"ವಿಭಾವಾದಿಗಳಿಂದ ಅನುಮಿತವಾದುದು ಎಷ್ಟು ರುಚಿಸುವುದೋ ಅಷ್ಟು ಲೌಕಿಕವಾದ ಕಾರಣಗಳಿಂದ ಅನುಮಿತವಾದಾಗ ರುಚಿಸುವುದಿಲ್ಲ. ಪ್ರತೀಯಮಾನವಾದಾಗ ಅರ್ಥವು ಸುಖವನ್ನು ಕೊಡುವಂತೆ ವಾಚ್ಯವಾದಾಗ ಕೊಡದು."

ಧ್ವನಿಕಾರ (ಆನಂದವರ್ಧನ)ನೂ ಹೇಳಿದ್ದಾನೆ –

"ಸಾರಭೂತವಾದ ಅರ್ಥವು ಸ್ವಶಬ್ದದಿಂದ ಹೇಳಲ್ಪಡದೆ ಸೂಚಿತವಾದರೆ ಅತ್ಯಂತ ಸೌಂದರ್ಯವನ್ನು ಪಡೆಯುತ್ತದೆ."

**ವಿವರಣೆ:**

Heard melodies are sweet, but those unheard are sweeter ಎಂಬ ಕವಿವಾಕ್ಯವನ್ನಿಲ್ಲಿ ನೆನಪಿಸಿಕೊಳ್ಳಬೇಕು.

**ಪ್ರತೀಯಮಾನಪರಮಾರ್ಥಂ ಚ ಕಾವ್ಯಾದಿ, ತಾವತೈವ**
**ವಿನೇಯೇಷು ವಿಧಿನಿಷೇಧವ್ಯುತ್ಪತ್ತಿಸಿದ್ಧೇಃ । ತದುಕ್ತಮ್–**
**"ಭ್ರಾಂತಿರಪಿ ಸಂಬಂಧತಃ ಪ್ರಮಾ" ಇತಿ ।**
**"ಮಣಿಪ್ರದೀಪಪ್ರಭಯೋರ್ಮಣಿಬುದ್ಧ್ಯಾಭಿಧಾವತೋಃ ।**
**ಮಿಥ್ಯಾಜ್ಞಾನಾವಿಶೇಷೇಽಪಿ ವಿಶೇಷೋಽರ್ಥಕ್ರಿಯಾಂ ಪ್ರತಿ" ॥**

**ಅನುವಾದ:**

ಕಾವ್ಯಾದಿಗಳಲ್ಲಿ ಪರಮಾರ್ಥವಾಗಿರುವುದು ಪ್ರತೀಯಮಾನವೇ. ಅದರಿಂದಲೇ ವಿದ್ಯಾರ್ಥಿಗಳಲ್ಲಿ ವಿಧಿ–ನಿಷೇಧಗಳ ವ್ಯುತ್ಪತ್ತಿಯು ಸಿದ್ಧವಾಗುತ್ತದೆ. ಅದನ್ನೂ ಹೇಳಿದ್ದಾರೆ –

"ಭ್ರಾಂತಿಯೂ ಸಂಬಂಧದ ಕಾರಣದಿಂದ ಪ್ರಮೆಯಾಗುತ್ತದೆ ಮತ್ತು "ಅದು ರತ್ನ ಎಂಬ ಬುದ್ಧಿಯಿಂದ ಮಣಿಪ್ರಭೆಯನ್ನೋ ದೀಪಪ್ರಭೆಯನ್ನೋ ಕಂಡು ಓಡುವವರಿಬ್ಬರಿಗೂ ತಪ್ಪು ತಿಳಿವಳಿಕೆ ಸಮಾನವಾಗಿದ್ದರೂ ಅರ್ಥಕ್ರಿಯೆಯಲ್ಲಿ ವಿಶೇಷವುಂಟು."

**ವಿವರಣೆ:**

ಕಾವ್ಯನಾಟಕಾದಿಗಳಲ್ಲಿ ಪ್ರತೀಯಮಾನಾರ್ಥ (ವ್ಯಂಗ್ಯಾರ್ಥ)ವೇ ಪರಮಾರ್ಥ, ಅದರಿಂದಲೇ ಜಿಜ್ಞಾಸುಗಳಿಗೆ ರಾಮನಂತೆ ನಡೆದುಕೊಳ್ಳಬೇಕು ಎಂದು ವಿಧಿ, ರಾವಣನಂತೆ ನಡೆದುಕೊಳ್ಳಬಾರದು

ಎಂಬ ನಿಷೇಧ ಎಂಬ ಎರಡರ ಜ್ಞಾನವೂ ದೊರಕುತ್ತದೆ. ಇದರಲ್ಲಿ ಕಾವ್ಯಸಮರ್ಪಿತವಾದ ರಾಮಾದಿಗಳು ಸತ್ಯವೇ ಮಿಥ್ಯೆಯೇ ಎಂಬುದು ಅಪ್ರಸ್ತುತ. ಭ್ರಾಂತಿಯೂ ಸಂಬಂಧವಿಶೇಷದಿಂದ ಪ್ರಮಾ ಆಗಬಹುದು. ಈ ಸಂಬಂಧದಲ್ಲಿ ಮಹಿಮಭಟ್ಟನು ಧರ್ಮಕೀರ್ತಿಯ ಪ್ರಮಾಣವಾರ್ತ್ತಿಕ ಎಂಬ ಗ್ರಂಥದ 'ಮಣಿಪ್ರದೀಪ' ಇತ್ಯಾದಿ ಶ್ಲೋಕವನ್ನು ಉದಾಹರಿಸಿದ್ದಾನೆ. ಫಲಸಂವಾದಿ ಭ್ರಾಂತಿ, ಫಲವಿಸಂವಾದಿ ಭ್ರಾಂತಿ ಎಂದು ಭ್ರಾಂತಿಯು ಎರಡು ವಿಧ. ಮಣಿಪ್ರಭೆಯನ್ನು ಮಣಿ ಎಂದು ತಿಳಿದುಕೊಂಡಾಗ ಅದು ಭ್ರಾಂತಿಯಾದರೂ ಫಲವನ್ನು ಕೊಡುವುದರಿಂದ ಫಲಸಂವಾದಿಭ್ರಾಂತಿ. ಪ್ರದೀಪಪ್ರಭೆಯನ್ನು ಮಣಿ ಎಂದು ತಿಳಿದಾಗ ಅದು ಫಲವಿಸಂವಾದಿ ಭ್ರಾಂತಿ.

(ಕಾವ್ಯದಲ್ಲಿ ವಸ್ತುಸತ್ಯಾಸತ್ಯತ್ವಚಿಂತೆ ಬೇಡ)

**ತೇನಾತ್ರ ಗಮ್ಯಗಮಕಯೋಃ ಸಚೇತಸಾಂ ಸತ್ಯಾಸತ್ಯತ್ವವಿಚಾರೋ**
**ನಿರುಪಯೋಗ ಏವ । ಕಾವ್ಯವಿಷಯೇ ಚ ವಾಚ್ಯವ್ಯಂಗ್ಯಪ್ರತೀತೀನಾಂ**
**ಸತ್ಯಾಸತ್ಯತ್ವವಿಚಾರೋ ನಿರುಪಯೋಗ ಏವೇತಿ ತತ್ರ ಪ್ರಮಾಣಾಂತರಪರೀಕ್ಷಾ**
**ಉಪಹಾಸಾಯೈವ ಸಂಪದ್ಯತೇ ಇತಿ ।**

**ಅನುವಾದ:**

ಆದ್ದರಿಂದ ಇಲ್ಲಿ ಗಮ್ಯ ಮತ್ತು ಗಮಕಗಳ ಸತ್ಯತ್ವ ಮತ್ತು ಅಸತ್ಯತ್ವದ ವಿಚಾರ ನಿಷ್ಪ್ರಯೋಜನ. ಕಾವ್ಯವಿಷಯದಲ್ಲೂ ವಾಚ್ಯ ಮತ್ತು ವ್ಯಂಗ್ಯ ಪ್ರತೀತಿಗಳ ಸತ್ಯತ್ವ ಮತ್ತು ಅಸತ್ಯತ್ವದ ವಿಚಾರ ನಿಷ್ಪ್ರಯೋಜನವೇ ಆದ್ದರಿಂದ ಆ ವಿಚಾರದಲ್ಲಿ ಬೇರೆಯ ಪ್ರಮಾಣದ ಪರೀಕ್ಷೆಯು ಹಾಸ್ಯಾಸ್ಪದವೇ ಆಗಿಬಿಡುತ್ತದೆ.

**ವಿವರಣೆ:**

ಬೌದ್ಧ ತಾರ್ಕಿಕರು ಹೇಳುವ ರೀತಿಯಲ್ಲಿ ಗಮ್ಯಗಮಕಗಳ ಸತ್ಯಾಸತ್ಯತ್ವಗಳು ಲೋಕದಲ್ಲೂ ನಿಷ್ಪ್ರಯೋಜನ. ಹಾಗಿರುವಾಗ ಕಲ್ಪನಾಪ್ರಧಾನವಾದ ಕಾವ್ಯಪ್ರಪಂಚದಲ್ಲಿ ವಾಚ್ಯಪ್ರತೀತಿ ಮತ್ತು ವ್ಯಂಗ್ಯಪ್ರತೀತಿಗಳು ಸತ್ಯವೋ ಅಸತ್ಯವೋ ಎಂಬುದು ಸರ್ವಥಾ ನಿಷ್ಪ್ರಯೋಜನ. ಹೀಗಿರುವಾಗ ಬೇರೆ ಶಾಸ್ತ್ರಗಳು ಹೇಳುವ ಪ್ರಮಾಣಗಳಿಗನುಸಾರವಾಗಿ ಇಲ್ಲಿ ನಡೆಸುವ ಪರೀಕ್ಷೆ ನಗೆಪಾಟಲಾಗಬಹುದಷ್ಟೆ. ಅದು ಬೇಕಿಲ್ಲ ಎಂದು ಮಹಿಮಭಟ್ಟನ ಅನಿಸಿಕೆ.

**ತತ್ರ ಹೇತ್ವಾದಿಭಿರಕೃತ್ರಿಮೈರಕೃತ್ರಿಮಾ ಏವ ಪ್ರತ್ಯಾಯ್ಯಂತೇ ।**
**ತತ್ರೈಷಾಮ್ ಅನುಮೇಯತ್ವಮೇವ, ನ ವ್ಯಂಗ್ಯತ್ವಗಂಧೋऽಪಿ**
**ಇತಿ ಕುತಸ್ತತ್ರ ಸುಖಾಸ್ವಾದಲವೋऽಪಿ ಸಂಭವತಿ । ಏಷ ಏವ ಲೋಕತಃ**
**ಕಾವ್ಯಾದೌ ಅತಿಶಯ ಇತ್ಯುಪಪದ್ಯತ ಏವ ರತ್ಯಾದೌ ಗಮ್ಯೇ ಸುಖಾಸ್ವಾದ–**
**ಪ್ರಯೋಜನೋ ವ್ಯಂಗ್ಯತ್ವೋಪಚಾರ ಇತಿ ।**
**ಮುಖ್ಯವೃತ್ತ್ಯಾ ದ್ವಿವಿಧ ಏವಾರ್ಥೋ ವಾಚ್ಯೋ ಗಮ್ಯಶ್ಚೇತಿ ।**
**ಉಪಚಾರತಸ್ತು ವ್ಯಂಗ್ಯಸ್ತೃತೀಯೋऽಪೀತಿ ಸಿದ್ಧಮ್ ।**

**ಅನುವಾದ:**

(ಲೋಕದಲ್ಲಿ) ಅಕೃತ್ರಿಮವಾದ ಕಾರಣಾದಿಗಳಿಂದ ಅಕೃತ್ರಿಮವಾದ (ಕಾರ್ಯಾದಿಗಳು) ತಿಳಿಸಲ್ಪಡುತ್ತವೆ. ಅಲ್ಲಿ ಆ ಕಾರ್ಯಾದಿಗಳು ಅನುಮೇಯಗಳೇ,

ಅವುಗಳಿಗೆ ವ್ಯಂಗ್ಯತ್ವಲೇಶವೂ ಇಲ್ಲ. ಆದ್ದರಿಂದ ಅಲ್ಲಿ ಸುಖಾಸ್ವಾದದ ಚೂರೂ ಇರಲಾರದು. ಇದೇ ಲೋಕಕ್ಕಿಂತ ಕಾವ್ಯಾದಿಗಳಲ್ಲಿ ಇರುವ ಅತಿಶಯ. ಆದ್ದರಿಂದ ಗಮ್ಯವೇ ಆದ ರತ್ಯಾದಿಗಳಲ್ಲಿ ಸುಖಾಸ್ವಾದ ಎಂಬ ಪ್ರಯೋಜನಕ್ಕಾಗಿ ವ್ಯಂಗ್ಯತ್ವವನ್ನು ಉಪಚಾರ (ಲಕ್ಷಣಾವ್ಯಾಪಾರ)ದಿಂದ ಹೇಳಬಹುದು.

ಮುಖ್ಯವೃತ್ತಿಯಿಂದ ಹೇಳಬೇಕೆಂದರೆ ವಾಚ್ಯ, ಗಮ್ಯ ಎಂದು ಅರ್ಥವು ಎರಡು ವಿಧ. ಉಪಚಾರದಿಂದ ಮಾತ್ರ ಮೂರನೆಯದಾದ ವ್ಯಂಗ್ಯವೆಂಬುದೂ ಉಂಟು ಎಂದು ಸಿದ್ಧವಾಗುತ್ತದೆ.

**ವಾಚೋ ಗುಣೀಕೃತಾತ್ಮತ್ವಂ ನ ಸಂಭವತಿ ಜಾತುಚಿತ್ ।**
**ತದರ್ಥಂ ತದುಪಾದಾನಾದುದಕಾರ್ಥಂ ದೃತೇರಿವ ॥**
**ಇತಿ ಸಂಗ್ರಹಶ್ಲೋಕಃ ।**

**ಅನುವಾದ:**

ಶಬ್ದವು ಗುಣೀಕೃತಾತ್ಮವಾಗುವುದು ಎಂದೂ ಸಾಧ್ಯವಲ್ಲ. ಏಕೆಂದರೆ ಆ ಅರ್ಥವನ್ನು ಹೇಳುವುದಕ್ಕಾಗಿಯೇ ಆ ಶಬ್ದವನ್ನು ಉಚ್ಚರಿಸಲಾಗುತ್ತದೆ, ನೀರನ್ನು ತರುವುದಕ್ಕಾಗಿ ಚರ್ಮದ ಚೀಲವನ್ನು ತೆಗೆದುಕೊಂಡಂತೆ.

**ವಿವರಣೆ:**

ಶಬ್ದವು ಉಚ್ಚರಿಸಲ್ಪಡುವುದು ಅರ್ಥವನ್ನು ಶ್ರೋತೃವಿಗೆ ತಿಳಿಸುವುದಕ್ಕಾಗಿ. ಹೀಗಿರುವಾಗ ಆನಂದವರ್ಧನನು ಧ್ವನಿಲಕ್ಷಣದಲ್ಲಿನ 'ಶಬ್ದವು ತನ್ನ ಅರ್ಥವನ್ನು ಅಮುಖ್ಯವನ್ನಾಗಿ ಮಾಡಿಕೊಂಡು' ಎಂದು ಹೇಳಿರುವುದು ತಪ್ಪು. ನೀರನ್ನು ತರಲು ನಾವು ತೆಗೆದುಕೊಳ್ಳುವ ದೃತಿಯು (ಚರ್ಮದ ಚೀಲವು) ಆ ನೀರನ್ನೇ ಅಮುಖ್ಯವನ್ನಾಗಿ ಮಾಡುವುದು ಹೇಗೆ ಸಾಧ್ಯ? ಅರ್ಥದ ಪ್ರತಿಪಾದನೆಗಾಗಿ ತೆಗೆದುಕೊಳ್ಳಲ್ಪಟ್ಟ ಶಬ್ದವು ಆ ಅರ್ಥವನ್ನು ಗುಣೀಕೃತ ಮಾಡುವುದು ಹೇಗೆ ಸಾಧ್ಯ? ಹೇಗೆ ಸಾಧು? ಎಂಬುದು ಮಹಿಮಭಟ್ಟನ ಪ್ರಶ್ನೆ.

ಇದಕ್ಕೆ ಉತ್ತರವನ್ನು ರುಯ್ಯಕನೇ ವ್ಯಾಖ್ಯಾನದಲ್ಲಿ ಕೊಟ್ಟಿದ್ದಾನೆ. ವ್ಯಂಗ್ಯಾರ್ಥದ ಪ್ರತಿಪಾದನೆಗಾಗಿ ಕವಿಯು ಶಬ್ದವನ್ನು ಬಳಸಿದಾಗ ಅದು ವಾಚ್ಯಾರ್ಥವನ್ನು ಪ್ರತಿಪಾದಿಸಿದರೂ ಅದನ್ನು ಅಮುಖ್ಯವನ್ನಾಗಿ ಮಾಡುತ್ತದೆ ಎಂದು ಧ್ವನಿವಾದಿಗಳ ಸಿದ್ಧಾಂತ.

(ಮುಖ್ಯವ್ಯಂಗ್ಯವ್ಯಂಜಕಭಾವ ಇಲ್ಲಿಲ್ಲ)

**ನಾಪಿ ವಾಚ್ಯಪ್ರತೀಯಮಾನಯೋರ್ಮುಖ್ಯವೃತ್ತ್ಯಾ**
**ವ್ಯಂಗ್ಯವ್ಯಂಜಕಭಾವಃ ಸಂಭವತಿ । ವ್ಯಕ್ತಿಲಕ್ಷಣಾನುಪಪತ್ತೇಃ ।**
**ತಥಾ ಹಿ । ಸತೋಽಸತ ಏವ ವಾರ್ಥಸ್ಯ ಪ್ರಕಾಶಮಾನಸ್ಯ**
**ಸಂಬಂಧಸ್ಮರಣಾನಪೇಕ್ಷಿಣಾ ಪ್ರಕಾಶಕೇನ ಸಹೈವ**
**ಪ್ರಕಾಶವಿಷಯತಾಪತ್ತಿರಭಿವ್ಯಕ್ತಿರಿತಿ ತಲ್ಲಕ್ಷಣಮ್**
**ಆಚಕ್ಷತೇ । ತತ್ರ ಸತೋಽಭಿವ್ಯಕ್ತಿಸ್ತ್ರಿವಿಧಾ, ತಸ್ಯ ತ್ರೈವಿಧ್ಯಾತ್ ।**

**ಅನುವಾದ:**

ವಾಚ್ಯಕ್ಕೂ ಪ್ರತೀಯಮಾನಕ್ಕೂ ಮುಖ್ಯವೃತ್ತಿ (ಅಭಿಧೆ)ಯಿಂದ ವ್ಯಂಗ್ಯ ವ್ಯಂಜಕಭಾವವು ಸಂಭವಿಸುವುದೇ ಇಲ್ಲ. ಏಕೆಂದರೆ ಅಲ್ಲಿ ವ್ಯಂಜನೆಯ ಲಕ್ಷಣವೇ ಹೊಂದುವುದಿಲ್ಲ. ಇರುವ ಅಥವಾ ಇಲ್ಲದಿರುವ, ಪ್ರಕಾಶಮಾನವಾಗುವ ವಸ್ತು ಸಂಬಂಧಸ್ಮರಣೆಯನ್ನು ಅಪೇಕ್ಷಿಸದೆ ಪ್ರಕಾಶಕದೊಡನೆಯೇ ಪ್ರಕಾಶವಿಷಯವಾದರೆ ಅದು ಅಭಿವ್ಯಕ್ತಿ ಎಂದು ವ್ಯಕ್ತಿ (ವ್ಯಂಜನೆ)ಯ ಲಕ್ಷಣವನ್ನು ಹೇಳುತ್ತಾರೆ. ಅವುಗಳಲ್ಲಿ ಇರುವ (ಸತ್ ಎಂಬುದರ) ಅಭಿವ್ಯಕ್ತಿಯು ಮೂರು ವಿಧ, ಏಕೆಂದರೆ ಸದ್ವ್ಯಕ್ತಿಯೂ ಮೂರು ಪ್ರಕಾರದ್ದಾಗಿರುತ್ತದೆ.

**ವಿವರಣೆ:**

ಇರುವ ವಸ್ತು ಸತ್, ಇಲ್ಲದಿರುವುದು ಅಸತ್. ಇರುವ ವಸ್ತು ಅಭಿವ್ಯಕ್ತವಾಗುವುದಂತೂ ಸರಿ, ಇಲ್ಲದಿರುವ ವಸ್ತು ಹೇಗೆ ಅಭಿವ್ಯಕ್ತವಾಗುತ್ತದೆ? ವಸ್ತುತಃ ಇಲ್ಲದಿರುವ ಕಾಮನಬಿಲ್ಲು ಗೋಚರವಾಗುವಂತೆ ಎಂಬುದು ಗ್ರಂಥಕಾರನ ಉತ್ತರ. ಕಾಮನಬಿಲ್ಲು ಎಂದರೆ ಸೂರ್ಯಕಿರಣದ ವಿಭಜನೆಯಿಂದ ಉಂಟಾಗುವ ವರ್ಣವೈವಿಧ್ಯ. ಅದು ಸತ್ ಅಥವಾ ಅಸತ್ ಎಂದು ವೈಜ್ಞಾನಿಕರು ಹೇಳಬೇಕು.

(ಅಭಿವ್ಯಕ್ತಿ ಮೂರು ವಿಧವಾಗಿದೆ)

**ತತ್ರ ಕಾರಣಾತ್ಮನಿ ಕಾರ್ಯಸ್ಯ ಶಕ್ತ್ಯಾತ್ಮನಾ ಅವಸ್ಥಾನಾತ್ ತಿರೋಭೂತಸ್ಯ ಇಂದ್ರಿಯಗೋಚರ ತ್ವಾಪತ್ತಿಲಕ್ಷಣ ಆವಿರ್ಭಾವ ಏಕಾ, ಯಥಾ ಕ್ಷೀರಾದ್ಯವಸ್ಥಾಯಾಂ ದಧ್ಯಾದೇಃ । ತಥಾ ಅವಸ್ಥಾ ನಾನುಪಗಮೇ ತು ಸೈವ ಉತ್ಪತ್ತಿರಿತ್ಯುಚ್ಯತೇ ಕೈಶ್ಚಿತ್ ।**

**ಅನುವಾದ:**

(ಆ ಮೂರು ವಿಧದ ಅಭಿವ್ಯಕ್ತಿಗಳಲ್ಲಿ) ಒಂದು ಕಾರಣದಲ್ಲಿ ಕಾರ್ಯವು ಶಕ್ತಿರೂಪದಿಂದ ಇರುವುದರಿಂದ ಅಡಗಿಕೊಂಡಿದ್ದು ಆಮೇಲೆ ಅದು ಇಂದ್ರಿಯಗೋಚರವಾಗುವಿಕೆ ಎಂಬುದನ್ನೇ ಲಕ್ಷಣವಾಗಿ ಉಳ್ಳ ಆವಿರ್ಭಾವ. ಇದಕ್ಕೆ ಉದಾಹರಣೆ ಹಾಲಿನ ಸ್ಥಿತಿಯಲ್ಲಿರುವ ವಸ್ತುವಿನಲ್ಲಿ ಮೊಸರು ಇತ್ಯಾದಿಗಳ ಅಭಿವ್ಯಕ್ತಿಯಂತೆ. ಹಾಗೆ (ಕಾರಣದಲ್ಲಿ ಕಾರ್ಯವು ಇರುತ್ತದೆ ಎಂದು) ಸ್ಥಿತಿಯನ್ನು ಒಪ್ಪಿಕೊಳ್ಳದಿರುವ ಕೆಲವರಿಂದ ಅಂಥ ಅಭಿವ್ಯಕ್ತಿಯೇ ಉತ್ಪತ್ತಿ ಎಂದು ಕರೆಯಲ್ಪಡುತ್ತದೆ.

**ವಿವರಣೆ:**

ಉಪಾದಾನಕಾರಣ (material cause)ದಲ್ಲಿ ಕಾರ್ಯವು ಮೊದಲೇ ಇರುತ್ತದೆ, ಹೆಪ್ಪು ಹಾಕಿದಾಗ ಕಾರ್ಯ (effect)ವಾಗಿರುವ ಮೊಸರು ಕೇವಲ ಅಭಿವ್ಯಕ್ತವಾಗುತ್ತದೆ, ಅಂತೆಯೇ ಹಾಲಿನಲ್ಲಿ ಅಡಗಿರುವ ಬೆಣ್ಣೆಯೂ ಮೊಸರನ್ನು ಕಡೆಯುವ ಕ್ರಿಯೆಯಿಂದ ಅಭಿವ್ಯಕ್ತವಾಗುತ್ತದೆ ಎಂಬುದು ಸತ್ಕಾರ್ಯವಾದ. ಇದನ್ನು ಸಾಂಖ್ಯದರ್ಶನವು ಒಪ್ಪಿಕೊಂಡಿದೆ. ಸಾಂಖ್ಯದರ್ಶನದ ದೃಷ್ಟಿಯಿಂದ ಜಗತ್ತೆಲ್ಲವೂ ಪ್ರಕೃತಿಯ ಅಭಿವ್ಯಕ್ತಿಯೇ. ಕಾರಣದಲ್ಲಿ ಇಲ್ಲದ ಹೊಸ ವಸ್ತು ಹುಟ್ಟಲಾರದು

ಎಂಬುದು ಅವರ ವಾದ. ಕಲ್ಲಿನಲ್ಲಿ ಮೊದಲೇ ಇರುವ ಮೂರ್ತಿ (ವಿಗ್ರಹ) ಶಿಲ್ಪಿಯ ಕ್ರಿಯೆಯಿಂದ ಗೋಚರವಾಗಿ ಅಭಿವ್ಯಕ್ತವಾಗುತ್ತದೆ ಎಂಬಂತೆ ಜಗತ್ತಿನ ವಿಕಾಸವೆಲ್ಲ ಅಭಿವ್ಯಕ್ತಿಯೇ ಎಂದು ಅವರು ಹೇಳುತ್ತಾರೆ.

ನೈಯಾಯಿಕರು (ನ್ಯಾಯಶಾಸ್ತ್ರಾನುಯಾಯಿಗಳು) ಉತ್ಪತ್ತಿವಾದವನ್ನು ಸಮರ್ಥಿಸುತ್ತಾರೆ. ಬೆಣ್ಣೆ ಮೊದಲೇ ಹಾಲಿನಲ್ಲಿದ್ದರೆ ಕಡೆಯುವ ಕೆಲಸ ವ್ಯರ್ಥ ಎಂದಾದಿತು ಎಂದು ಅವರ ಆಕ್ಷೇಪಣೆ. ಜೇಡಿಮಣ್ಣಿನಲ್ಲಿ ಜಾಡಿ ಇದೆ ಎಂದು ಹೇಳಿದರೆ ಅದರಿಂದ ನೀರನ್ನು ತರಲಾದೀತೆ? ಆದ್ದರಿಂದ ಜಾಡಿ ಎಂಬ ಹೊಸವಸ್ತು ಹುಟ್ಟಿದೆ ಎಂದೇ ಹೇಳಬೇಕು. ಇಲ್ಲದಿದ್ದರೆ ಕುಂಬಾರನ ಸಕಲ ವ್ಯಾಪಾರವೂ ವ್ಯರ್ಥ ಎಂದು ಹೇಳಬೇಕಾದೀತು. ಆದ್ದರಿಂದ ಲೋಕದಲ್ಲಿ ಉತ್ಪತ್ತಿ ಎಂಬುದು ಉಂಟು. ವಸ್ತು ಮೊದಲೇ ಸಿದ್ಧವಾಗಿದ್ದಾಗ, ಆ ಹೆಸರಿನಿಂದ ಅದನ್ನು ಜನರು ಕರೆಯುತ್ತಿದ್ದರೆ ಅದರ ಅಸ್ತಿತ್ವ ನಿರ್ವಿವಾದ. ಅದು ಯಾವುದೋ ಪ್ರತಿಬಂಧಧಿಂದ ಅಗೋಚರವಾದರೆ, ಆ ಪ್ರತಿಬಂಧವನ್ನು ನಿವಾರಿಸುವ ವಸ್ತು ಅಭಿವ್ಯಂಜಕವಾಗುತ್ತದೆ. ಅದು ಮಾತ್ರ ಅಭಿವ್ಯಕ್ತಿ ಎಂದು ನೈಯಾಯಿಕರ ವಾದ.

**ತಸ್ಯೈವಾವಿರ್ಭೂತಸ್ಯ ಕುತಶ್ಚಿತ್ ಪ್ರತಿಬಂಧಕಾತ್**
**ಅಪ್ರಕಾಶಮಾನಸ್ಯ ಪ್ರಕಾಶಕೇನೋಪಸರ್ಜನೀ –**
**ಕೃತಾತ್ಮನಾ ಸಹೈವ ಪ್ರಕಾಶೋ ದ್ವಿತೀಯಾ । ಯಥಾ**
**ಪ್ರದೀಪಾದಿನಾ ಘಟಾದೇಃ । ತದುಕ್ತಮ್ –**
**ಸ್ವಜ್ಞಾನೇನಾನ್ಯಧೀಹೇತುಃ ಸಿದ್ಧೇಽರ್ಥೇ ವ್ಯಂಜಕೋಮತಃ ।**
**ಯಥಾ ದೀಪೋಽನ್ಯಥಾಭಾವೇ ಕೋ ವಿಶೇಷೋಽಸ್ಯ ಕಾರಕಾತ್ ॥**
**ಇತಿ । ಧ್ವನಿಕಾರೇಣಾಪ್ಯುಕ್ತಂ – "ಸ್ವರೂಪಂ ಪ್ರಕಾಶಯನ್ನೇವ**
**ಪರಾರ್ಥಾವಭಾಸನೋ ವ್ಯಂಜಕ ಇತ್ಯುಚ್ಯತೇ ಯಥಾ ದೀಪೋ ಘಟಾದೇಃ" ಇತಿ ।**

**ಅನುವಾದ:**

ಆವಿರ್ಭೂತವಾದ ವಸ್ತು ಯಾವುದಾದರೊಂದು ಪ್ರತಿಬಂಧಕದಿಂದ ಅಪ್ರಕಾಶಿತವಾಗಿದ್ದಾಗ ತನ್ನನ್ನು ಅಮುಖ್ಯವಾಗಿ ಮಾಡಿಕೊಂಡ ಪ್ರಕಾಶಕದೊಡನೆ ಆ ವಸ್ತು ಪ್ರಕಾಶಿತವಾಗಿ ಗೋಚರವಾಗುವುದು ಎರಡನೆಯ ಪ್ರಕಾರದ ಅಭಿವ್ಯಕ್ತಿ. ದೀಪ ಮುಂತಾದವುಗಳಿಂದ ಘಟಾದಿಗಳ ಗೋಚರವಾಗುವಿಕೆ ಅದರ ಉದಾಹರಣೆ. ಹಿಂದಿನವರೂ ಹೇಳಿದ್ದಾರೆ – "ಸಿದ್ಧವಾದ ವಸ್ತುವನ್ನು ತನ್ನ ಜ್ಞಾನದ ಮೂಲಕ ಮಾಡಿಸುವುದು ವ್ಯಂಜಕ. ಅದರ ಉದಾಹರಣೆ ದೀಪ. ಹಾಗಿಲ್ಲದಿದ್ದರೆ ಕಾರಣಕ್ಕೂ ವ್ಯಂಜಕಕ್ಕೂ ವ್ಯತ್ಯಾಸವೇನು?"

ಧ್ವನಿಕಾರನೂ ಹೇಳಿದ್ದಾನೆ– "ತನ್ನ ಸ್ವರೂಪವನ್ನು ತೋರಿಸುತ್ತಲೇ ಇನ್ನೊಂದು ವಸ್ತುವನ್ನು ಬೆಳಗುವುದು ವ್ಯಂಜಕ ಎಂದು ಕರೆಸಿಕೊಳ್ಳುತ್ತದೆ. ಉದಾಹರಣೆ ಘಟಾದಿಗಳನ್ನು ಬೆಳಗಿಸುವ ದೀಪ."

**ತಸ್ಯೈವಾನುಭೂತಪೂರ್ವಸ್ಯ ಸಂಸ್ಕಾರಾತ್ಮನಾ**
**ಅಂತರ್ವಿಪರಿವರ್ತಿನಃ ಕುತಶ್ಚಿದ್**

**ಅವ್ಯಭಿಚಾರಿಣೋಽರ್ಥಾಂತರಾತ್ ತತ್ಪ್ರತಿಪಾದಕಾದ್ವಾ
ಸಂಸ್ಕಾರಪ್ರಬೋಧಮಾತ್ರಂ ತೃತೀಯಾ । ಯಥಾ
ಧೂಮಾದಗ್ನೇಃ, ಯಥಾ ಚಾಲೇಖ್ಯಪುಸ್ತಕಪ್ರತಿ–
ಬಿಂಬಾನುಕರಣಾದಿಭ್ಯಃ, ಶಬ್ದಾಚ್ಚ ಗವಾದೇಃ ।
ಅಸತಸ್ತು ಏಕಪ್ರಕಾರೈವ, ತಸ್ಯ ಪ್ರಕಾರಾಂತರಾ–
ಸಂಭವಾದ್ ಯಥಾ ಅರ್ಕಾಲೋಕಾದಿನಾ ಇಂದ್ರಚಾಪಾದೇಃ ಇತಿ ।**

**ಅನುವಾದ:**

ಹಿಂದೆ ಅನುಭವಕ್ಕೆ ವಿಷಯವಾಗಿದ್ದು ಸಂಸ್ಕಾರರೂಪದಲ್ಲಿ ಒಳಗೆ ಹುದುಗಿದ್ದ ವಸ್ತು ಯಾವುದಾದರೂ ಅವ್ಯಭಿಚರಿತವಾದ ಇನ್ನೊಂದು ವಸ್ತುವಿನಿಂದ, ಅಥವಾ ಆ ವಸ್ತುವಿನ ಪ್ರತಿಪಾದಕಶಬ್ದದಿಂದ ಸಂಸ್ಕಾರದ ಪ್ರತಿಬೋಧನೆಯ ರೂಪದಿಂದ ಜ್ಞಾನಗೋಚರವಾಗುವುದು ಮೂರನೆಯ ಪ್ರಕಾರದ ಅಭಿವ್ಯಕ್ತಿ. ಉದಾಹರಣೆ ಹೊಗೆಯ ಜ್ಞಾನದಿಂದ ಉಂಟಾಗುವ ಅಗ್ನಿಜ್ಞಾನ, ಹಾಗೂ ಚಿತ್ರ, ಪ್ರತಿಮೆ, ಪ್ರತಿಬಿಂಬ, ಅನುಕರಣಾದಿಗಳಿಂದ ಉಂಟಾಗುವ ಜ್ಞಾನ ಮತ್ತು ಶಬ್ದದಿಂದ ಹುಟ್ಟುವ ಗೋ ಇತ್ಯಾದಿಗಳ ಜ್ಞಾನ.

ಅಸದ್ವಸ್ತುವಿನ ಅಭಿವ್ಯಕ್ತಿ ಒಂದೇ ಪ್ರಕಾರದ್ದು, ಏಕೆಂದರೆ ಅದಕ್ಕೆ ಬೇರೆ ಪ್ರಕಾರಗಳು ಅಸಂಭವ. ಉದಾಹರಣೆ ಸೂರ್ಯನ ಬೆಳಕಿನಿಂದ ಕಾಮನ ಬಿಲ್ಲು ಇತ್ಯಾದಿ (ವಸ್ತುತಃ ಇಲ್ಲದವುಗಳ) ಅಭಿವ್ಯಕ್ತಿ.

**ನ ಚೈತಲ್ಲಕ್ಷಣಂ ವಾಚ್ಯೇ ಸಂಗಚ್ಛತೇ । ತಥಾ ಹಿ
ಸತೋಽಭಿವ್ಯಕ್ತೇರ್ಯದಾದ್ಯಯೋರರ್ಥಯೋರ್ಲಕ್ಷಣಂ,
ನ ತತ್ ಪ್ರತೀಯಮಾನೇಷು ಏಕಮಪಿ ಸಂಸ್ಪ್ರಷ್ಟುಂ
ಕ್ಷಮತೇ, ತಸ್ಯ ದಧ್ಯಾದೇರಿವೇಂದ್ರಿಯವಿಷಯ–
ಭಾವಾಪತ್ತಿಪ್ರಸಂಗಾದ್ ಘಟಾದೇರಿವ ವಾಚ್ಯಾರ್ಥ–
ಸಹಭಾವೇನ ಇದಂತಾಪ್ರತೀತೇರಸಂಭವಾತ್ । ನ ಚ
ಸ್ವರೂಪಾಸಂಸ್ಪರ್ಶಿ ಲಕ್ಷಣಂ ಭವತಿ ।**

**ಅನುವಾದ:**

ಈ ಲಕ್ಷಣವು ವಾಚ್ಯಕ್ಕೆ ಹೊಂದುವುದಿಲ್ಲ. ಸದ್ವಸ್ತುವಿನ ಅಭಿವ್ಯಕ್ತಿಯ ಮೊದಲನೆಯ ಎರಡು ಅರ್ಥಗಳ ಲಕ್ಷಣವು ಪ್ರತೀಯಮಾನಗಳಲ್ಲಿ ಒಂದನ್ನೂ ಸೋಕಲು ಶಕ್ತವಲ್ಲ. ಏಕೆಂದರೆ ಆಗ ಮೊಸರು ಮುಂತಾದುವುಗಳಂತೆ ಅದೂ ಇಂದ್ರಿಯಗೋಚರವಾಗುವ ಅನಿಷ್ಟಾಪತ್ತಿ ಉಂಟಾದೀತು, ಅಥವಾ ಘಟಾದಿಗಳಿಗೆ ಆಗುವ ಹಾಗೆ ವಾಚ್ಯಾರ್ಥದೊಡನೆ ಇದಂತ್ವಪ್ರತೀತಿಯು ಉಂಟಾಗುವುದಿಲ್ಲವಷ್ಟೆ. ಸ್ವರೂಪವನ್ನೇ ಮುಟ್ಟಲು ಅಶಕ್ತವಾದದ್ದು ಲಕ್ಷಣವಾಗದು ತಾನೆ?

**ವಿವರಣೆ:**

ಅಭಿವ್ಯಕ್ತಿಗೆ ಹೇಳಿದ ಮೂರು ಲಕ್ಷಣಗಳಲ್ಲಿ ಮೊದಲನೆಯ ಎರಡು ಲಕ್ಷಣಗಳು ಪ್ರತೀಯಮಾನಕ್ಕೆ ಹೊಂದುವುದಿಲ್ಲ, ಮೂರನೆಯದು ಹೊಂದುತ್ತದೆ, ಆದರೆ ಅದು ಅನುಮಾನದ ಲಕ್ಷಣವೇ ಆಗಿದೆ ಎಂದು ಮಹಿಮಭಟ್ಟನ ಪ್ರತಿಪಾದನೆ.

> **ತೃತೀಯಸ್ಯಾಸ್ತು ಯಲ್ಲಕ್ಷಣಂ ತದನುಮಾನಸ್ಯೈವ**
> **ಸಂಗಚ್ಛತೇ, ನ ವ್ಯಕ್ತೇಃ । ಯದುಕ್ತಂ – ತ್ರಿರೂಪಾಲ್ಲಿಂಗಾದ್**
> **ಯದನುಮೇಯಜ್ಞಾನಂ ತದನುಮಾನಮ್ – ಇತಿ ।**
> **ತಚ್ಚಾನುಮಾನಮೇವ । ನ ಹ್ಯರ್ಥಾದ್ ಅರ್ಥಾಂತರ–**
> **ಪ್ರತೀತಿರನುಮಾನಮಂತರೇಣ ಅರ್ಥಾಂತರಮುಪಪದ್ಯತೇ ।**
> **ಉಪಮಾನಾದೀನಾಂ ಚ ತತ್ರೈವಾಂತರ್ಭಾವಾತ್ ।**
> **ಯದಾಹು : "ನ ಚಾನ್ಯದರ್ಶನೇಽನ್ಯಕಲ್ಪನಾ ಯುಕ್ತಾ**
> **ಅತಿಪ್ರಸಂಗಾತ್ । ತಸ್ಯ ನಾಂತರೀಯಕತಾಯಾಂ ಸ್ಯಾತ್ ।**
> **ನ ಹಿ ಯಥಾವಿಧಸಿದ್ಧಃ ತಥಾವಿಧಸನ್ನಿಧಾನಂ ಸೂಚಯತಿ ।**
> **ಸಾಮಾನ್ಯೇನ ಚ ಸಂಬಂಧಿನಾ ಅರ್ಥಪ್ರತಿಪತ್ತಿರನುಮಾನಮಿತಿ**
> **ದ್ವೇ ಏವ ಪ್ರಮಾಣೇ" ಇತಿ**

**ಅನುವಾದ:**

ಮೂರನೆಯ ಅಭಿವ್ಯಕ್ತಿಲಕ್ಷಣವು ಅನುಮಾನಕ್ಕೆ ಹೊಂದುತ್ತದೆ, ಅಭಿವ್ಯಕ್ತಿಗಲ್ಲ. ಏಕೆಂದರೆ ಪ್ರಾಚೀನರೇ ಹೇಳಿದ್ದಾರೆ "ಮೂರು ವಿಧವಾದ ಲಿಂಗದಿಂದ ಅನುಮೇಯದಲ್ಲಿ ಉಂಟಾಗುವ ಜ್ಞಾನವು ಅನುಮಾನ" ಎಂದು. ಆದ್ದರಿಂದ ಅದು ಅನುಮಾನವೇ. ಒಂದು ಅರ್ಥದಿಂದ ಇನ್ನೊಂದು ಅರ್ಥದ ಪ್ರತೀತಿ ಉಂಟಾದಾಗ ಅದು ಅನುಮಾನವಲ್ಲದೆ ಬೇರೊಂದಾಗಲಾರದು. ಉಪಮಾನ ಮುಂತಾದುವೂ ಅನುಮಾನದಲ್ಲೇ ಅಂತರ್ಭಾವವನ್ನು ಹೊಂದುತ್ತವೆ. ಪ್ರಾಚೀನರೂ ಹೀಗೆ ಹೇಳುತ್ತಾರೆ "ಯಾವುದೋ ವಸ್ತುವಿನ ಜ್ಞಾನದಿಂದ ಇನ್ನಾವುದೋ ವಸ್ತುವಿನ ಜ್ಞಾನ ಹುಟ್ಟುತ್ತದೆ ಎಂಬ ಕಲ್ಪನೆ ಸರಿಯಲ್ಲ. ಹಾಗಾದರೆ ಅತಿಪ್ರಸಂಗ ಉಂಟಾದೀತು. ಆ ಇನ್ನೊಂದು ವಸ್ತು ದೃಷ್ಟವಾದ ವಸ್ತುವಿನೊಡನೆ ಅವಿನಾಭಾವಸಂಬಂಧವನ್ನು ಹೊಂದಿದ್ದರೆ ಮಾತ್ರ ಕಲ್ಪನೆ ಸರಿಯಾಗುತ್ತದೆ. ಯಾವುದೋ ಒಂದು ಸಂಬಂಧ ಹಾಗೆ ವಸ್ತ್ವಂತರವನ್ನು ಸೂಚಿಸಲಾರದು. ಸಾಮಾನ್ಯ ಸಂಬಂಧಿಯ ಮೂಲಕ ಅರ್ಥದ ಜ್ಞಾನ ಉಂಟಾದರೆ ಅದು ಅನುಮಾನ. ಆದ್ದರಿಂದ (ಪ್ರತ್ಯಕ್ಷ, ಅನುಮಾನ)ವೆಂಬ ಎರಡೇ ಪ್ರಮಾಣಗಳು.

> **ನ ಚ ವಾಚ್ಯಾದ್ ಅರ್ಥಾತ್ ಅರ್ಥಾಂತರ ಪ್ರತೀತಿರವಿನಾಭಾವಸಂಬಂಧಸ್ಮರಣಮಂತರೇಣೈವ ಸಂಭವತಿ, ಸರ್ವಸ್ಯಾಪಿ ತತ್ಪ್ರತೀತಿಪ್ರಸಂಗಾತ್ । ನಾಪಿ ಸಹಭಾವೇನ, ಧೂಮಾಗ್ನಿಪ್ರತೀತ್ಯೋರಿವ ತತ್ಪ್ರತೀತ್ಯೋರಪಿ ಕ್ರಮಭಾವಸ್ಯೈವ ಸಂವೇದನಾತ್, ಇತ್ಯಸಂಭವೋ ಲಕ್ಷಣದೋಷಃ ।**

**ಅನುವಾದ:**

ಅವಿನಾಭಾವಸಂಬಂಧಸ್ಮರಣೆ ಇಲ್ಲದೆ ವಾಚ್ಯಾರ್ಥದಿಂದ ಇನ್ನೊಂದು ಅರ್ಥದ ಪ್ರತೀತಿ ಉಂಟಾಗದು. (ಈ ನಿಯಮವನ್ನು ಒಪ್ಪಿಕೊಳ್ಳದಿದ್ದರೆ) ಎಲ್ಲರಿಗೂ ಆ ಅರ್ಥಾಂತರದ ಪ್ರತೀತಿ ಉಂಟಾಗುವ ಅನಿಷ್ಟ ಪ್ರಸಂಗ ಬಂದೀತು. ವಾಚ್ಯಾರ್ಥ–ವ್ಯಂಗ್ಯಾರ್ಥಗಳು ಒಟ್ಟಿಗೆ ತೋರುತ್ತವೆ ಎಂದೂ ಹೇಳಲಾಗದು. ಏಕೆಂದರೆ ಧೂಮಜ್ಞಾನ ಮತ್ತು ವಹ್ನಿಪ್ರತೀತಿಗಳಿಗೆ ಹೇಗೋ ಹಾಗೆ ವಾಚ್ಯಾರ್ಥಜ್ಞಾನ–ವ್ಯಂಗ್ಯಾರ್ಥಪ್ರತೀತಿಗಳಿಗೂ ಕ್ರಮಭಾವವೇ ಕಾಣಿಸುತ್ತದೆ. ಆದ್ದರಿಂದ ಅಸಂಭವ ಎಂಬ ಲಕ್ಷಣದೋಷ.

**ವಿವರಣೆ:**

ಲಕ್ಷಣವು ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವ ಎಂಬ ಮೂರು ದೋಷಗಳಿಂದ ಮುಕ್ತವಾಗಿರಬೇಕು. ಐದು ಕಾಲುಗಳಿರುವ ಪ್ರಾಣಿ ಹಸು ಎಂಬ ಲಕ್ಷಣವನ್ನು ಹೇಳಿದರೆ ಅದು ಅಸಂಭವ ಎಂಬ ದೋಷಕ್ಕೆ ಪಕ್ಕಾಗಿದೆ. ಸಹಭಾವದಿಂದ ವಾಚ್ಯ ಮತ್ತು ವ್ಯಂಗ್ಯಗಳು ತೋರುವುದು ಸಾಧ್ಯವೇ ಇಲ್ಲದ ಕಾರಣದಿಂದ ಒಟ್ಟಿಗೆ ಅವು ಎಲ್ಲಿ ತೋರುವುವೋ ಅಲ್ಲಿ ವ್ಯಂಜನಾ ಎಂದರೆ ಅಸಂಭವ ಎಂಬ ಲಕ್ಷಣದೋಷ.

> **ಅಥ ರಸಾದ್ಯಪೇಕ್ಷಯಾ ತಯೋಃ ಸಹಭಾವೇನ ಪ್ರಕಾಶೋಽಭಿಮತ ಇತ್ಯುಚ್ಯತೇ, ಅವ್ಯಾಪ್ತಿಸ್ತರ್ಹಿ ಲಕ್ಷಣದೋಷಃ । ವಸ್ತುಮಾತ್ರಾಲಂಕಾರಪ್ರಕಾಶಸ್ಯ ಪ್ರಕಾಶಕಾಸಹಭಾವೇನ ಅವ್ಯಾಪ್ತೇಃ ।**

**ಅನುವಾದ:**

ರಸಾದಿಗಳ ವ್ಯಂಜನೆಯಲ್ಲಿ ಮಾತ್ರ ವಾಚ್ಯವ್ಯಂಗ್ಯಗಳ ಅಭಿವ್ಯಕ್ತಿಯು ಒಟ್ಟಿಗೆ ಆಗುವುದೆಂದು ನಮ್ಮ ಅಭಿಮತ ಎಂದು ಹೇಳಿದರೆ, ಲಕ್ಷಣದಲ್ಲಿ ಅವ್ಯಾಪ್ತಿ ಎಂಬ ದೋಷ ಬರುತ್ತದೆ. ವಸ್ತುಮಾತ್ರ ಮತ್ತು ಅಲಂಕಾರಗಳು ವ್ಯಂಗ್ಯವಾಗುವ ಸ್ಥಳದಲ್ಲಿ ಪ್ರಕಾಶಕದ ಜೊತೆಯಲ್ಲಿ ಪ್ರಕಾಶ್ಯವು ಇರುವುದಿಲ್ಲ ಎಂಬುದರಿಂದ ಅವ್ಯಾಪ್ತಿ ಉಂಟಾಗುತ್ತದೆ.

**ವಿವರಣೆ:**

ರಸಧ್ವನಿ, ಭಾವಧ್ವನಿ ಇತ್ಯಾದಿಗಳಲ್ಲಿ ವ್ಯಂಗ್ಯವು ವಾಚ್ಯದ ಜೊತೆಯಲ್ಲೇ ಒಟ್ಟಿಗೆ ತೋರುತ್ತದೆ. ಅದನ್ನು ಉದ್ದೇಶಿಸಿ ವಾಚ್ಯವ್ಯಂಗ್ಯಗಳ ಸಹಭಾವವನ್ನು ಹೇಳಿದ್ದೇವೆ ಎಂದು ಧ್ವನಿವಾದಿಗಳು ಅಭಿಪ್ರಾಯಪಟ್ಟರೆ, ಆಗ ವ್ಯಂಜನಾಲಕ್ಷಣಕ್ಕೆ ಅವ್ಯಾಪ್ತಿ ಎಂಬ ದೋಷ, ಸೊಂಡಿಲು ಮತ್ತು ಕೊಂಬುಗಳು ಇರುವ ಪ್ರಾಣಿ ಆನೆ ಎಂದು ಲಕ್ಷಣವನ್ನು ಹೇಳಿದರೆ ಅವ್ಯಾಪ್ತಿ ಎಂಬ ದೋಷ. ಏಕೆಂದರೆ ಕೆಲವು ಹೆಣ್ಣಾನೆಗಳಿಗೆ ಕೊಂಬು ಇರುವುದಿಲ್ಲ. ರಸಾದಿಗಳು ಎಲ್ಲಿ ವ್ಯಂಗ್ಯವೋ ಅಲ್ಲಿ ಲಕ್ಷಣಸಮನ್ವಯ ಆದರೂ, ವಸ್ತು ಅಥವಾ ಅಲಂಕಾರ ವ್ಯಂಗ್ಯವಾದಾಗ ಅಲ್ಲಿ ಸಹಭಾವ ಇಲ್ಲದಿರುವುದರಿಂದ ಲಕ್ಷಣಕ್ಕೆ ಅವ್ಯಾಪ್ತಿ ಎಂಬ ದೋಷ ಉಂಟಾಗುತ್ತದೆ.

**ನ ಚ ರಸಾದಿಷ್ವಪಿ ವಿಭಾವಾದಿಪ್ರಕಾಶನಸಹಭಾವೇನ ಪ್ರಕಾಶನಮುಪಪದ್ಯತೇ । ಯತಸ್ತೈರೇವ ಕಾರಣಾದಿಭಿಃ ಕೃತ್ರಿಮೈರ್ವಿಭಾವಾದ್ಯಭಿಧಾನೈರಸಂತ ಏವ ರತ್ಯಾದಯಃ ಪ್ರತಿಬಿಂಬಕಲ್ಪಾಃ ಸ್ಥಾಯಿಭಾವವ್ಯಪದೇಶಭಾಜಃ ಕವಿಭಿಃ ಪ್ರತಿಪತ್ತೃಪ್ರತೀತಿಪಥಮ್ ಉಪನೀಯಮಾನಾ ಹೃದಯಸಂವಾದಾದ್ ಆಸ್ವಾದ್ಯತ್ವಮುಪಯಂತಃ ಸಂತೋ ರಸಾ ಇತ್ಯುಚ್ಯಂತೇ। ನ ಚ ಕಾರಣಾದಿಭಿಃ ಕಾರ್ಯಾದಯಃ ಪ್ರತಿಬಿಂಬಕಲ್ಪಾಃ ಸಹೈವ ಪ್ರಕಾಶಿತುಮ್ ಉತ್ಸಹಂತೇ । ಕಾರ್ಯಕಾರಣಭಾವಾವಸಾಯಸ್ಯೈವಾವಸಾದಪ್ರಸಂಗಾತ್ । ಯತ್ರ ತು ತಲ್ಲಕ್ಷಣಂ ಮುಖ್ಯತಯಾ ಸಂಭವತಿ ತತ್ ಕಾವ್ಯಮೇವ ನ ಭವತೀತಿ ಕುತ ಏವ ತದ್ವಿಶೇಷಧ್ವನಿರೂಪತಾ ಸ್ಯಾತ್? ।**

**ಅನುವಾದ:**

ರಸಾದಿಗಳಲ್ಲೂ ವಿಭಾವಾದಿಗಳ ಪ್ರಕಾಶನದೊಡನೆ (ರಸಾದಿಗಳ) ಪ್ರಕಾಶನವು (ಆಗುವುದೆಂದು ಹೇಳುವುದು) ಸರಿಯಲ್ಲ. ಏಕೆಂದರೆ ಕಾರಣ (ಕಾರ್ಯಸಹಕಾರಿ)ಗಳು ಕೃತ್ರಿಮವಾಗಿದ್ದಾಗ ವಿಭಾವ (ಅನುಭಾವ, ಸಂಚಾರಿಭಾವ) ಎಂಬ ಹೆಸರನ್ನು ಪಡೆದಿದ್ದು ಅವುಗಳಿಂದ ವಾಸ್ತವವಲ್ಲದ ಪ್ರತಿಬಿಂಬಸಮಾನವಾದ ಸ್ಥಾಯಿಭಾವಗಳೆಂಬ ವ್ಯವಹಾರಕ್ಕೆ ವಿಷಯವಾದ ರತ್ಯಾದಿಗಳು ಕವಿಗಳಿಂದ ರಸಿಕರ ಜ್ಞಾನಕ್ಕೆ ಗೋಚರವಾಗಿ ಮಾಡಲ್ಪಟ್ಟು ಹೃದಯಸಂವಾದದಿಂದ ಆಸ್ವಾದನೀಯತ್ವವನ್ನು ಹೊಂದಿ ರಸಗಳೆಂದು ಕರೆಸಿಕೊಳ್ಳುತ್ತವೆ. ಕಾರ್ಯವಾಗಿರುವುವು ಪ್ರತಿಬಿಂಬ ಕಲ್ಪಗಳಾಗಿರುವಾಗ ಕಾರಣಗಳೊಡನೆ ಏಕಕಾಲದಲ್ಲಿ ಪ್ರಕಾಶಿಸಲು ಶಕ್ತವಾಗುವದಿಲ್ಲ. (ಕಾರ್ಯವೂ ಕಾರಣವೂ ಏಕಕಾಲದಲ್ಲಿ ಅಸ್ತಿತ್ವಕ್ಕೆ ಬರುತ್ತದೆ ಎಂದು ಒಪ್ಪಿಕೊಂಡರೆ) ಕಾರ್ಯಕಾರಣಭಾವದ ನಿಶ್ಚಯವೇ ಅವಸಾನವನ್ನು ಹೊಂದೀತು. ಎಲ್ಲಿ ವ್ಯಂಜನೆಯ ಲಕ್ಷಣವು ಮುಖ್ಯವೃತ್ತಿಯಿಂದ ಸಂಭವಿಸುವುದೋ ಅದು ಕಾವ್ಯವೇ ಅಲ್ಲ. ಹೀಗಿರಲು ಅದು ಕಾವ್ಯಪ್ರಕಾರವಿಶೇಷವಾದ ಧ್ವನಿ ಆಗಲು ಹೇಗೆ ಸಾಧ್ಯ?

**ವಿವರಣೆ:**

ವಿಭಾವಾದಿಗಳು ಕಾರಣ, ರಸಾದಿಗಳು ಕಾರ್ಯ. ಕಾರಣ ಮೊದಲು, ಕಾರ್ಯ ಅನಂತರ. ಕಾರ್ಯನಿಯತಪೂರ್ವವೃತ್ತಿ ಕಾರಣಮ್ ಎಂದೇ ಕಾರಣದ ಲಕ್ಷಣ. ಹೀಗಿರುವಾಗ ವಿಭಾವಾದಿಗಳೂ ರಸಗಳೂ ಏಕಕಾಲದಲ್ಲಿ ಜ್ಞಾನಕ್ಕೆ ಗೋಚರವಾಗುತ್ತವೆ ಎಂದು ಹೇಳಿದರೆ ತಪ್ಪಾಗುತ್ತದೆ. ಘಟಪ್ರದೀಪದೃಷ್ಟಾಂತದಲ್ಲಿ ವ್ಯಂಜನೆಯ ಲಕ್ಷಣವು ಹೊಂದಿಕೊಳ್ಳುತ್ತದೆ. ಆದರೆ ಅದು ವಾಸ್ತವಸಂಗತಿ, ಕಾವ್ಯ ಅಲ್ಲ. ಕಾವ್ಯವೇ ಅಲ್ಲದುದು ಕಾವ್ಯವಿಶೇಷವಾದ ಧ್ವನಿ ಹೇಗಾದೀತು?

**ದ್ವಿವಿಧೋ ಹಿ ಪ್ರಕಾಶಕೋಽರ್ಥಃ, ಉಪಾಧಿರೂಪಃ ಸ್ವತಂತ್ರಶ್ಚೇತಿ । ತತ್ರ ಜ್ಞಾನ–ಶಬ್ದ–ಪ್ರದೀಪಾದಿರುಪಾಧಿರೂಪಃ । ತದುಕ್ತಂ "ತ್ರಯಃ ಪ್ರಕಾಶಾಃ ಸ್ವಪರಪ್ರಕಾಶಾಃ" ಇತಿ । ಅನ್ಯಃ ಸ್ವತಂತ್ರೋ ಧೂಮಾದಿಃ ।**

**ತತ್ರಾದ್ಯಸ್ತಾವದ್ ಭವದ್ಭಿರ್ನಾಭ್ಯುಪಗಂತವ್ಯ ಏವ, ಪ್ರತ್ಯಕ್ಷಾಭಿಧೇಯ–**
**ಯೋರೇವಾರ್ಥಯೋಃ ಕಾವ್ಯತಾಪತ್ತಿಪ್ರಸಂಗಾತ್ ।**
**ಅನ್ಯಸ್ಯ ತು ಲಿಂಗತ್ವಮೇವೋಪಪದ್ಯತೇ, ನ ವ್ಯಂಜಕತ್ವಂ,**
**ವ್ಯಕ್ತೇರನುಪಪತ್ತೇಃ ।**

**ಅನುವಾದ:**

ಪ್ರಕಾಶಕವಾದ ಅರ್ಥವೂ ಎರಡುವಿಧವಾಗಿರುತ್ತದೆ – ೧. ಉಪಾಧಿರೂಪ ೨. ಸ್ವತಂತ್ರ. ಜ್ಞಾನ, ಶಬ್ದ, ದೀಪ ಮುಂತಾದುವೆಲ್ಲ ಉಪಾಧಿರೂಪವಾದುವು. ಹಿಂದಿನವರೂ ಹೇಳಿದ್ದಾರೆ "ಮೂರು ಪ್ರಕಾಶಗಳು ತಮ್ಮ ಹಾಗೂ ಇತರ ವಸ್ತುವಿನ ಪ್ರಕಾಶಕಗಳು" ಎಂದು. ಎರಡನೆಯದು ಸ್ವತಂತ್ರ ಪ್ರಕಾಶಕ. ಅದರ ಉದಾಹರಣೆ ಧೂಮ ಇತ್ಯಾದಿಗಳು. ಅವೆರಡು ಪ್ರಕಾರಗಳಲ್ಲಿ (ಉಪಾಧಿರೂಪವಾದ) ಮೊದಲನೆಯದನ್ನು ನೀವು ಒಪ್ಪಿಕೊಳ್ಳಬಾರದು, ಏಕೆಂದರೆ ಆಗ ಪ್ರತ್ಯಕ್ಷವಾದ ಮತ್ತು ಅಭಿಧೇಯವಾದ ಅರ್ಥಗಳೇ ಕಾವ್ಯ ಎಂದು ಹೇಳುವ ಆಪತ್ತಿ ಉಂಟಾಗುತ್ತದೆ. (ಸ್ವತಂತ್ರ ಎಂಬ) ಎರಡನೆಯ ಪ್ರಕಾರದ ಪ್ರಕಾಶಕಕ್ಕೆ ಲಿಂಗತ್ವವೇ ಹೊಂದುತ್ತದೆ, ವ್ಯಂಜಕತ್ವವಲ್ಲ, ಏಕೆಂದರೆ ಅದರಲ್ಲಿ ಅಭಿವ್ಯಕ್ತಿಯ ಲಕ್ಷಣವು ಕೂಡುವುದೇ ಇಲ್ಲ.

**ವಿವರಣೆ:**

ತನ್ನ ಸ್ವರೂಪವನ್ನು ಬೆರೆಸಿ ವಸ್ತುವನ್ನು ತಿಳಿಸಿಕೊಡುವ ವಸ್ತು ಉಪಾಧಿ (ಉಪಾಧಿಃ ಸ್ವರೂಪೋಪರಂಜನೇನ ಅನ್ಯಪ್ರತೀತಿಹೇತುಃ). ಜ್ಞಾನ, ಶಬ್ದ ಮತ್ತು ದೀಪ ಎಂಬ ಮೂರೂ ಉಪಾಧಿಗಳು. ಆಯಂ ಘಟಃ ಎಂಬ ಜ್ಞಾನ ಬಂದಾಗ ಘಟಮಹಂ ಜಾನಾಮಿ ಎಂಬ ಅನುವ್ಯವಸಾಯವೂ ಬರುತ್ತದೆ. ಆದ್ದರಿಂದ ಜ್ಞಾನೋಪರಕ್ತವಾಗಿಯೇ ಘಟಾದಿಗಳ ಪ್ರತೀತಿ. ಇದೇ ರೀತಿಯಾಗಿ ಶಬ್ದದಿಂದ ಅರ್ಥವು ಬೋಧಿತವಾದಾಗ ಶಬ್ದಸ್ವರೂಪಸಹಿತವಾಗಿ ಅರ್ಥದ ಪ್ರತೀತಿ ಉಂಟಾಗುತ್ತದೆ. ತನ್ನ ಸ್ವರೂಪವನ್ನು ಪ್ರಕಾಶಿಸದೆ ಶಬ್ದವು ಅರ್ಥವನ್ನು ತಿಳಿಸಲಾರದು. ದೀಪವು (ಬೆಳಕು) ತನ್ನನ್ನು ತೋರಿಸದೆ ಘಟಾದಿಗಳನ್ನು ಪ್ರಕಾಶಿಸಲಾರದು. ಆದ್ದರಿಂದ ಈ ಮೂರೂ ಉಪಾಧಿಗಳು.

"ತ್ರಯಃ ಪ್ರಕಾಶಾಃ ಸ್ವಪರಪ್ರಕಾಶಾಃ" ಘಟವು ಕಾಣಿಸಬೇಕಾದರೆ ಬೆಳಕು ಬೇಕೇ ಬೇಕು. ಆದರೆ ಬೆಳಕು ಕಾಣಿಸಬೇಕಾದರೆ ಇನ್ನೊಂದು ಬೆಳಕಿನ ಆವಶ್ಯಕತೆ ಇಲ್ಲ. ಅದು ಸ್ವಪ್ರಕಾಶಕ ಮತ್ತು ಪರಪ್ರಕಾಶಕ. ಇದೇ ರೀತಿಯಾಗಿ ಜ್ಞಾನವೂ ಶಬ್ದವೂ ಸ್ವ+ಪರಪ್ರಕಾಶಕಗಳು.

ಪ್ರತ್ಯಕ್ಷಾರ್ಥವನ್ನೋ ವಾಚ್ಯಾರ್ಥವನ್ನೋ ಕಾವ್ಯವೆಂದು ಹೇಳಬಹುದಾದ ಆಪತ್ತಿ ಉಂಟಾಗುವುದರಿಂದ ಉಪಾಧಿರೂಪವಾದ ಪ್ರಕಾಶಕವನ್ನು ವ್ಯಂಜನಾವಾದಿಗಳು ಒಪ್ಪಿಕೊಳ್ಳುವಂತಿಲ್ಲ. ಸ್ವತಂತ್ರರೂಪವಾದ ಪ್ರಕಾಶಕವನ್ನು ಒಪ್ಪಿಕೊಂಡರೆ ಅದು ಅನುಮಾನವೇ ಆಗುತ್ತದೆ, ವ್ಯಂಜನಾ ಅಲ್ಲ ಎಂದು ಮಹಿಮಭಟ್ಟನು ಹೇಳುತ್ತಾನೆ.

**ನ ಚ ತ್ರಿವಿಧಸ್ಯಾಪಿ ವ್ಯಂಗ್ಯಾಭಿಮತಸ್ಯಾರ್ಥಸ್ಯ**
**ಪ್ರಕಾಶಕಸಹಭಾವೇನ ಪ್ರಕಾಶಸ್ತಸ್ಯಾಪಿ ಧ್ವನಿಕಾರಸ್ಯಾಭಿಮತಃ ।**

**ಯದಯಮಾಹ – "ನ ಹಿ ವಿಭಾವಾನುಭಾವವ್ಯಭಿಚಾರಿಣ ಏವ ರಸಾ ಇತಿ ಕಸ್ಯಚಿದವಗಮಃ । ತತ ಏವ ತತ್ಪ್ರತೀತ್ಯವಿನಾಭಾವಿನೀ ರಸಾದೀನಾಂ ಪ್ರತೀತಿರಿತಿ ತತ್ಪ್ರತೀತ್ಯೋಃ ಕಾರ್ಯಕಾರಣಭಾವೇನಾವಸ್ಥಾನಾತ್ ಕ್ರಮೋಽವಶ್ಯಂಭಾವೀ । ಸ ತು ಲಾಘವಾನ್ನ ಪ್ರಕಾಶತ ಇತ್ಯಲಕ್ಷ್ಯಕ್ರಮಾ ಏವ ಸಂತೋ ವ್ಯಂಗ್ಯಾ ರಸಾದಯಃ ।" ಇತಿ ।**

**ಅನುವಾದ:**

ವ್ಯಂಗ್ಯವೆಂದು ಹೇಳಲಾದ ಮೂರು ವಿಧವಾದ ಅರ್ಥವು ಪ್ರಕಾಶಕವಾದ ಅರ್ಥದೊಡನೆಯೇ ಪ್ರಕಾಶನವನ್ನು ಪಡೆಯುವುದು ಎಂಬುದು ಆ ಧ್ವನಿಕಾರನಿಗೂ ಅಭಿಮತವಲ್ಲ. ಏಕೆಂದರೆ ಅವನೇ ಹೇಳುತ್ತಾನೆ–"ವಿಭಾವ, ಅನುಭಾವ, ವ್ಯಭಿಚಾರಿಗಳೇ ರಸ ಎಂದು ಯಾರಿಗೂ ಅನಿಸುವುದಿಲ್ಲ. ಅವುಗಳ ದೆಸೆಯಿಂದ, ಅವುಗಳ ಪ್ರತೀತಿಗೆ ಅವಿನಾಭೂತವಾಗಿ ರಸಾದಿಗಳ ಪ್ರತೀತಿ ಉಂಟಾಗುತ್ತದೆ ಎಂಬುದರಿಂದ (ವಿಭಾವಾದಿಗಳ ಮತ್ತು ರಸಾದಿಗಳ) ಪ್ರತೀತಿಗಳು ಕಾರ್ಯಕಾರಣಭಾವದಿಂದ ನಿಂತಿರುತ್ತವೆ. ಆದ್ದರಿಂದ ಅವೆರಡರಲ್ಲಿ ಕ್ರಮವು ಅವಶ್ಯವಾಗಿ ಇದ್ದೇ ಇರಬೇಕು. ಆದರೆ ಅತ್ಯಂತ ವೇಗದಿಂದ ಆ ಪ್ರತೀತಿಯು ಹುಟ್ಟುವುದರಿಂದ ಕ್ರಮವು ಗೋಚರಿಸುವುದಿಲ್ಲ–ಎಂದು ಅಲಕ್ಷ್ಯಕ್ರಮವಾಗಿರುವುವು ರಸಾದಿಗಳು."

**ವಿವರಣೆ:**

ಇಲ್ಲಿ ಧ್ವನಿಕಾರ (ಆನಂದವರ್ಧನ)ನ ಅಭಿಪ್ರಾಯವೇನೆಂದು ಆಲೋಚಿಸಬೇಕು. ವಿಭಾವಾದಿಗಳ ಪ್ರತೀತಿಯು ಕಾರಣ, ರಸಾದಿಗಳ ಪ್ರತೀತಿ ಕಾರ್ಯ ಎಂಬುದರಲ್ಲಿ ಯಾರ ವಿವಾದವೂ ಇಲ್ಲ. ಆದ್ದರಿಂದ ಒಂದು ಕ್ರಮದಲ್ಲೇ ಅವು ಉಂಟಾಗುತ್ತವೆ ಎಂಬುದಕ್ಕೂ ಎಲ್ಲರ ಸಮ್ಮತಿ ಇದೆ. ಆ ಕ್ರಮವು ಶೀಘ್ರತೆಯ ಕಾರಣದಿಂದ ಕಾಣಿಸುವುದಿಲ್ಲ, ಆದ್ದರಿಂದ ರಸಾದಿಗಳು ಅಸಂಲಕ್ಷ್ಯಕ್ರಮಗಳೆಂದು ಕರೆಯಲ್ಪಟ್ಟಿವೆ. ರಸಾದಿಗಳ ಪ್ರತೀತಿಯ ಕ್ಷಣದಲ್ಲಿ ವಾಚ್ಯಾರ್ಥದ ಪ್ರತೀತಿಯು ನಷ್ಟವಾಗದೆ ಇರುವುದರಿಂದ ಮಾತ್ರ ಅವು ವ್ಯಂಗ್ಯ, ಅವುಗಳಿಗೆ ಸಹಭಾವವಿದೆ ಎಂದು ಧ್ವನಿವಾದಿಗಳು ಹೇಳುವುದು.

ಆರಂಭಾವಸ್ಥೆಯಲ್ಲಿ ಕೇವಲ ವಿಭಾವಾದಿಗಳ ಪ್ರತೀತಿ ಇರುವುದರಿಂದ ಸಹಭಾವವಿಲ್ಲ. ರಸಪ್ರತೀತಿಯ ಅವಸ್ಥೆಯಲ್ಲಿ ಅದು ವಿಗಲಿತವೇದ್ಯಾಂತರವಾದುದರಿಂದ ಆಗ ವಿಭಾವಾದಿಗಳ ಪ್ರತೀತಿ ಇರುವುದಿಲ್ಲ. ಅದರಲ್ಲೂ ಸಹಭಾವ ಇಲ್ಲ. ಆದ್ದರಿಂದ ವ್ಯಂಗ್ಯತ್ವ ಸಿದ್ಧಿಸದು ಎಂದು ಮಹಿಮಭಟ್ಟನ ವಾದ.

**ಅಥೈತದ್ದೋಷಭಯಾತ್ ಸಹಭಾವಾನಪೇಕ್ಷಮ್ ಏತಲ್ಲಕ್ಷಣಮ್ ಉಚ್ಯತೇ । ತಥಾಪಿ ಅನುಮಾನೇ ಅತಿವ್ಯಾಪ್ತಿಃ । ತತ್ರಾಪಿ ಉಪಸರ್ಜನೀಕೃತಾತ್ಮನಾ ಧೂಮಾದಿನಾ ಪ್ರಕಾಶ್ಯಸ್ಯ ಪ್ರಕಾಶೋಽಸ್ತ್ಯೇವ । ಅಥ ಅಸದ್‌ಗ್ರಹಣೇನ ಸಾ ನಿರಸ್ತೇತ್ಯುಚ್ಯತೇ ತರ್ಹಿ ಘಟಪ್ರದೀಪಯೋಸ್ತಸ್ಯಾವ್ಯಾಪ್ತಿಃ, ಘಟಸ್ಯ ಸತ್ತ್ವಾತ್ ।**

**ಅನುವಾದ:**

ಮತ್ತೆ ಈ ದೋಷದ ಭಯದಿಂದ ವ್ಯಂಜನೆಯ ಲಕ್ಷಣವನ್ನು ಸಹಭಾವಾನಪೇಕ್ಷವಾಗಿ ನೀವು ಹೇಳಿದರೂ ಅನುಮಾನದಲ್ಲಿ ಅತಿವ್ಯಾಪ್ತಿ ಉಂಟಾಗುವುದು. ಏಕೆಂದರೆ ಅನುಮಾನದಲ್ಲೂ ತನ್ನನ್ನು ತಾನು ಅಮುಖ್ಯವಾಗಿ ಮಾಡಿಕೊಳ್ಳುವ ಧೂಮ ಮುಂತಾದುವುಗಳಿಂದ ಪ್ರಕಾಶಗೊಳಿಸಬೇಕಾದ ವಸ್ತುವಿನ ಪ್ರಕಾಶನ ಇದ್ದೇ ಇದೆ. 'ಅಸತ್' ಆದ ವಸ್ತುವಿನ ಪ್ರಕಾಶನ ಎಂದು ಲಕ್ಷಣದಲ್ಲಿ ಹೇಳುವುದರಿಂದ ಆ ಅತಿವ್ಯಾಪ್ತಿ ನಿವಾರಿತವಾಗುತ್ತದೆ ಎಂದು ಹೇಳಿದರೆ, ಘಟಪ್ರದೀಪ ಎಂಬಲ್ಲಿ ಅವ್ಯಾಪ್ತಿ ಎಂಬ ದೋಷ ಹುಟ್ಟುತ್ತದೆ, ಏಕೆಂದರೆ ಪ್ರಕಾಶ್ಯವಾದ ಘಟವು ಸತ್, (ಅಸತ್ ಅಲ್ಲ).

**ವಿವರಣೆ:**

ಅಸಂಭವ ಎಂಬ ದೋಷವನ್ನು ಪರಿಹರಿಸಲು ವ್ಯಂಜನೆಯ ಲಕ್ಷಣವನ್ನು ಸಹಭಾವ ಎಂಬ ಅಂಶದ ತ್ಯಾಗದಿಂದ ಪರಿಷ್ಕರಿಸಿದರೆ, ಅತಿವ್ಯಾಪ್ತಿ ಎಂಬ ದೋಷ. ಅಸದ್ವಸ್ತುವಿನ ಪ್ರಕಾಶನ ಎಂದು ಪರಿಷ್ಕರಿಸಿ ಅತಿವ್ಯಾಪ್ತಿಯನ್ನು ನಿವಾರಿಸಿದರೆ, ಅವ್ಯಾಪ್ತಿ ಎಂಬ ದೋಷ. ನಿರ್ದೋಷವಾಗಿ ನೀವು ವ್ಯಂಜನೆಯ ಲಕ್ಷಣವನ್ನು ಹೇಳಲಾಗದು ಎನ್ನುತ್ತಾನೆ ಮಹಿಮಭಟ್ಟ.

**ಅಥ ಅಸದ್‌ಗ್ರಹಣಂ ನ ಕರಿಷ್ಯತ ಇತಿ, ತರ್ಹಿ ಅರ್ಕಾಲೋಕೇಂದ್ರ–**
**ಚಾಪಾದಾವವ್ಯಾಪ್ತಿಃ । ಇಂದ್ರಚಾಪಾದೇರಸತ್ತ್ವಾತ್ ।**
**ಅಥೋಭಯೋರಪಿ ಗ್ರಹಣಂ ನ ಕರಿಷ್ಯತ ಇತಿ,**
**ತರ್ಹಿ ಅನುಮಾನಸ್ಯೈವ ತಲ್ಲಕ್ಷಣಂ ಪರ್ಯವಸ್ಯತಿ ।**
**ನ ವ್ಯಕ್ತೇಃ । ತಚ್ಚೇಷ್ಟಮೇವ ನಃ । ವಾಚ್ಯಪ್ರತೀಯಮಾನಯೋಃ**
**ಸತೋರೇವ ಚ ಕ್ರಮೇಣೈವ ಪ್ರಕಾಶೋಪಗಮಾತ್ ।**
**ತಸ್ಮಾತ್ ತದವಸ್ಥ ಏವ ಅಸಂಭವೋ ಲಕ್ಷಣದೋಷಃ ।**
**ಕಿಂ ಚ ಸದಸದ್ಭಾವೇನ ಪ್ರಕಾಶ್ಯಸ್ಯ ವಿಶೇಷಣಮನುಪಪನ್ನಮ್,**
**ವ್ಯಾವರ್ತ್ಯಾಭಾವಾತ್ ।**

**ಅನುವಾದ:**

'ಅಸತ್' ಎಂಬ ದಳವನ್ನು ಲಕ್ಷಣದಲ್ಲಿ ಸೇರಿಸುವುದಿಲ್ಲ ಎಂದರೆ ಆಗ ಸೂರ್ಯನ ಪ್ರಕಾಶದಿಂದ ಅಭಿವ್ಯಕ್ತವಾಗುವ (ಅಸತ್ ಆದ) ಕಾಮನಬಿಲ್ಲು ಇತ್ಯಾದಿಗಳಲ್ಲಿ ವ್ಯಂಜನಾಲಕ್ಷಣವು ಹೊಂದದಿರುವುದರಿಂದ ಅವ್ಯಾಪ್ತಿ ಉಂಟಾಗುತ್ತದೆ. ಏಕೆಂದರೆ ಕಾಮನಬಿಲ್ಲು ಇತ್ಯಾದಿಗಳು 'ಅಸದ್' ವಸ್ತುಗಳು. ಸತ್, ಅಸತ್ ಎರಡನ್ನೂ ಲಕ್ಷಣದಲ್ಲಿ ಸೇರಿಸುವುದಿಲ್ಲ ಎಂದರೆ ನೀವು ಹೇಳುವ ಲಕ್ಷಣ ಅನುಮಾನದ ಲಕ್ಷಣವೇ ಆಗಿಬಿಡುತ್ತದೆ. ವ್ಯಂಜನೆಯ (ಅಭಿವ್ಯಕ್ತಿಯ) ಲಕ್ಷಣವಾಗುವುದಿಲ್ಲ. ಹಾಗಾಗುವುದು ನಮಗೆ ಇಷ್ಟವೇ. ವಾಚ್ಯ, ಪ್ರತೀಯಮಾನ

ಎಂಬ ಎರಡೂ ಸತ್, ಅವುಗಳ ಪ್ರಕಾಶನ ಕ್ರಮದಿಂದಲೇ ಆಗುತ್ತದೆ ಎಂದು ನೀವು ಒಪ್ಪಿಕೊಂಡಂತಾಯಿತು. ಆದ್ದರಿಂದ ವ್ಯಕ್ತಿಯ (ವ್ಯಂಜನೆಯ) ಲಕ್ಷಣದಲ್ಲಿ ಅಸಂಭವ ಎಂಬ ದೋಷವಿದ್ದೇ ಇದೆ. ಅಲ್ಲದೆ ಪ್ರಕಾಶ್ಯವಸ್ತು ಸತ್ ಅಥವಾ ಅಸತ್ ಆಗಿರಬಹುದು ಎಂದು ನೀವು ಕೊಟ್ಟ ವಿಶೇಷಣವೂ ಸರಿಯಲ್ಲ, ಏಕೆಂದರೆ ಅದಕ್ಕೆ ವ್ಯಾವರ್ತ್ಯವೇ ಉಳಿದಿಲ್ಲ.

**ವಿವರಣೆ:**

ಒಂದು ದೋಷವನ್ನು ತಪ್ಪಿಸಲು ಹೋಗಿ ಇನ್ನೊಂದು ದೋಷವನ್ನು ಆಹ್ವಾನಿಸುತ್ತಿದ್ದೀರಿ ಎಂದು ವ್ಯಂಜನಾವಾದಿಗಳಿಗೆ ಮಹಿಮಭಟ್ಟ ಹೇಳುತ್ತಿದ್ದಾನೆ. ಸರ್ವಥಾ ದೋಷವನ್ನು ಪರಿಹರಿಸಲು ಹೋದರೆ ಅದು ಅನುಮಾನದ ಲಕ್ಷಣವೇ ಆಗಿ ಪರ್ಯವಸಾನವನ್ನು ಹೊಂದುತ್ತದೆ ಎಂದು ಅವನ ತೀರ್ಮಾನ.

ಸತ್ ಅಥವಾ ಅಸತ್ತನ್ನು ಪ್ರಕಾಶಪಡಿಸುವುದು ವ್ಯಂಜಕ ಎಂದು ಹೇಳುವುದು ವ್ಯರ್ಥ. ಏಕೆಂದರೆ ಜಗತ್ತಿನಲ್ಲಿರುವುದೆಲ್ಲ ಸತ್ ಅಥವಾ ಅಸತ್ ಆಗಿರಲೇ ಬೇಕು. ಯಾವುದಾದರೊಂದು 'ಸತ್ ಮತ್ತು ಅಸತ್' ಏಕಕಾಲದಲ್ಲಿ ಆಗಿರುವುದೇ ಇಲ್ಲ. ಸತ್ ಮತ್ತು ಅಸತ್ ಅಲ್ಲದ ಮೂರನೆಯ ಪ್ರಕಾರದ ವಸ್ತು ಇರುವುದು ಅಸಂಭವ. ಆದ್ದರಿಂದ ಲಕ್ಷಣದಲ್ಲಿ "ಪ್ರಕಾಶ್ಯವಾದ ಸತ್ ಅಥವಾ ಅಸತ್ ವಸ್ತುವಿನ ಪ್ರಕಾಶನ" ಎಂದು ಹೇಳಿರುವುದೇ ಸರಿಯಲ್ಲ.

ವಿಶೇಷಣವು ವ್ಯಾವರ್ತಕವಾಗಿರಬೇಕು. ಅವ್ಯಾವರ್ತಕ ವಿಶೇಷಣ ವ್ಯರ್ಥ. ಬೆಳ್ಳಗಿರುವ ಸುಣ್ಣವನ್ನು ತಾ ಎಂದು ಹೇಳಿದರೆ 'ಬೆಳ್ಳಗಿರುವ' ಎಂಬ ವಿಶೇಷಣ ವ್ಯರ್ಥ. ಏಕೆಂದರೆ ಎಲ್ಲ ಸುಣ್ಣ ಬಿಳುಪಾಗಿಯೇ ಇರುತ್ತದೆ. ಹಾಗಿರುವುದು ಮತ್ತು ಹಾಗಿಲ್ಲದಿರುವುದು ಲೋಕದಲ್ಲಿ ಸಂಭವಿಸುವುದಾದರೆ ಮಾತ್ರ ವಿಶೇಷಣ ಸಾರ್ಥಕ. ಬೆಳ್ಳಗಿರುವ ಕುದುರೆಯನ್ನು ತಂದನು ಎಂಬಲ್ಲಿ ವಿಶೇಷಣ ಸಾರ್ಥಕ. ಏಕೆಂದರೆ ಬಿಳುಪಾದ ಮತ್ತು ಬಿಳುಪಾಗಿಲ್ಲದ ಕುದುರೆಗಳು ಲೋಕದಲ್ಲಿವೆ. ಅವ್ಯಾವರ್ತಕವಿಶೇಷಣವನ್ನು ಕೊಟ್ಟರೆ ಅದೂ ಲಕ್ಷಣದ ದೋಷವೇ.

**ಕಿಂಚ ಯತ್ರ ವಾಚ್ಯಸ್ಯಾರ್ಥಸ್ಯ ವ್ಯಂಜಕತ್ವಂ, ಸ ಚೇದ್ ಧ್ವನಿಃ,**
**ತರ್ಹಿ ತದನುಮಿತಸ್ಯ ವ್ಯಂಜಕತ್ವೇ ಧ್ವನಿತ್ವಂ ನ ಸ್ಯಾತ್,**
**ತಸ್ಯ ವಾಚ್ಯತ್ವಾಭಾವಾತ್ । ತತಶ್ಚ 'ಏವಂವಾದಿನಿ ದೇವರ್ಷೌ' ಇತ್ಯಾದೌ**
**ಧ್ವನಿತ್ವಮಿಷ್ಟಂ ನ ಸ್ಯಾದ್ ಇತ್ಯವ್ಯಾಪ್ತಿರ್ಲಕ್ಷಣದೋಷಃ ।**

**ಅನುವಾದ:**

ಎಲ್ಲಿ ವಾಚ್ಯಾರ್ಥವು ವ್ಯಂಜಕವಾಗುವುದೋ ಅದು ಧ್ವನಿ ಎಂದು ನೀವು ಹೇಳುವುದಾದರೆ, ಆ ವಾಚ್ಯದಿಂದ ಅನುಮಿತವಾದ ಅರ್ಥವು ವ್ಯಂಜಕವಾದಾಗ ಕಾವ್ಯವು ಧ್ವನಿಯಲ್ಲ ಎಂದಾಗುತ್ತದೆ, ಏಕೆಂದರೆ ಅನುಮಿತಾರ್ಥವು ವಾಚ್ಯವಲ್ಲ. ಆಗ 'ಏವಂವಾದಿನಿ ದೇವರ್ಷೌ' ಇತ್ಯಾದಿಗಳಲ್ಲಿ ಧ್ವನಿತ್ವವೇ ನಿಮಗೆ ಇಷ್ಟವಿಲ್ಲ ಎಂದಾಗುವುದರಿಂದ ಲಕ್ಷಣಕ್ಕೆ ಅವ್ಯಾಪ್ತಿ ಎಂಬ ದೋಷ ಬರುತ್ತದೆ.

## ವಿವರಣೆ:

ಧ್ವನಿಯ ಲಕ್ಷಣದಲ್ಲಿ 'ಯತ್ರಾರ್ಥಃ' ಎಂಬಲ್ಲಿರುವ ಅರ್ಥ ಎಂಬುದರ ಅಭಿಪ್ರಾಯ 'ವಾಚ್ಯಾರ್ಥ' ಎಂದಾದರೆ, ವಾಚ್ಯಾರ್ಥದಿಂದ ಅನುಮಿತವಾದ ಅರ್ಥ ವ್ಯಂಜಕವಾದಾಗ ಕಾವ್ಯವು ಧ್ವನಿಯಲ್ಲ ಎಂದು ಹೇಳಬೇಕಾಗುತ್ತದೆ. 'ಏವಂವಾದಿನಿ ದೇವರ್ಷೌ' ಎಂಬ ಪದ್ಯದಲ್ಲಿ ವಾಚ್ಯಾರ್ಥದಿಂದ ಲಜ್ಜಾ ಎಂಬ ಭಾವವು ಅನುಮಿತವಾಗುತ್ತದೆ. ಅದರಿಂದ ಪಾರ್ವತಿಗೆ ಶಿವನಲ್ಲಿ ಅನುರಾಗ ಇದೆ ವ್ಯಂಜನೆಯಿಂದ ಗೋಚರವಾಗುತ್ತದೆ. ಅದು ಧ್ವನಿಯ ಉದಾಹರಣೆ. ಆದರೆ ವಾಚ್ಯಾರ್ಥವು ಅಲ್ಲಿ ವ್ಯಂಜಕವಲ್ಲವಾದ್ದರಿಂದ ಧ್ವನಿಲಕ್ಷಣಕ್ಕೆ ಅವ್ಯಾಪ್ತಿ.

**ಅಥ ಅರ್ಥಶಬ್ದೇನ ಉಭಯಮಪಿ ಸಂಗೃಹೀತಂ,**
**ತಸ್ಯ ಉಭಯಾರ್ಥವಿಷಯತ್ವೇನೇಷ್ಟತ್ವಾತ್ । ಯದಾಹ –**
**ಅರ್ಥಃ ಸಹೃದಯಶ್ಲಾಘ್ಯಃ ಕಾವ್ಯಾತ್ಮಾ ಯೋ ವ್ಯವಸ್ಥಿತಃ ।**
**ವಾಚ್ಯಪ್ರತೀಯಮಾನಾಖ್ಯೌ ತಸ್ಯ ಭೇದಾವುಭೌ ಸ್ಮೃತೌ ॥**

**ಇತಿ । ಸತ್ಯಮ್ । ಕಿಂತು ತಮರ್ಥಮಿತಿ ತಚ್ಛಬ್ದೇನಾನಂತರ್ಯಾತ್ಪ್ರತೀಯಮಾನಸ್ಯಾರ್ಥಸ್ಯ ಪರಾಮರ್ಶೇ ಸತಿ ಪಾರಿಶೇಷ್ಯಾತ್ 'ಅರ್ಥೋ ವಾಚ್ಯವಿಶೇಷ' ಇತಿ ಸ್ವಯಂ ವಿವೃತತ್ವಾಚ್ಚ ಅರ್ಥಶಬ್ದೋ ವಾಚ್ಯವಿಷಯ ಏವ ವಿಜ್ಞಾಯತೇ, ನೋಭಯಾರ್ಥವಿಷಯ ಇತಿ ತದವಸ್ಥೋ ದೋಷಃ ।**

## ಅನುವಾದ:

ಅರ್ಥ ಎಂಬ ಶಬ್ದವು (ವಾಚ್ಯ, ತದನುಮಿತ) ಎಂಬ ಎರಡನ್ನೂ ಸಂಗ್ರಹಿಸಿಕೊಂಡು ಹೇಳುತ್ತದೆ, ಅದಕ್ಕೆ ಈ ಎರಡು ಅರ್ಥಗಳೂ ವಿಷಯವೆಂದು ನಮಗೆ ಇಷ್ಟ. ಆನಂದವರ್ಧನನೇ ಹೇಳಿದ್ದಾನೆ –

''ಸಹೃದಯ ಶ್ಲಾಘ್ಯವಾದ ಕಾವ್ಯಾತ್ಮವೆಂಬ ಯಾವ ಅರ್ಥವು ವ್ಯವಸ್ಥಿತವಾಗಿದೆಯೋ ಅದರ ಎರಡು ಭೇದಗಳು–ವಾಚ್ಯ ಮತ್ತು ಪ್ರತೀಯಮಾನ– ಎಂಬವು" ಸತ್ಯ. ಆದರೆ ಧ್ವನಿಲಕ್ಷಣದಲ್ಲಿ (ಯತ್ರಾರ್ಥಃ ಶಬ್ದೋ ವಾ ತಮರ್ಥಮ್ ಎಂಬಲ್ಲಿ) ತಚ್ಛಬ್ದದ ಮುಂದೆ ಇರುವ ಅರ್ಥಶಬ್ದವೇ ಪೂರ್ವಪರಾಮರ್ಶವನ್ನು ಹೊಂದುವುದರಿಂದ, ಮೊದಲು ಬಂದಿರುವ ಅರ್ಥಶಬ್ದವು ವಾಚ್ಯಾರ್ಥವನ್ನೇ ಹೇಳಬೇಕು. ಅಲ್ಲದೆ, ಆನಂದವರ್ಧನನೇ "ಅರ್ಥ ಎಂದರೆ ವಾಚ್ಯವಿಶೇಷ" ಎಂದು (ವೃತ್ತಿಯಲ್ಲಿ) ವಿವರಿಸಿರುವುದರಿಂದ (ಮೊದಲನೆಯ) ಅರ್ಥಶಬ್ದಕ್ಕೆ ವಾಚ್ಯಾರ್ಥ ಎಂಬುದೇ ಅಭಿಪ್ರೇತ, ವಾಚ್ಯ+ಪ್ರತೀಯಮಾನ ಎಂಬ ಉಭಯಾರ್ಥವು ಅಭಿಪ್ರೇತವಲ್ಲ ಎಂದು ತಿಳಿಯಲು ಆಗುವುದರಿಂದ (ನಾವು ಹೇಳಿದ) ದೋಷವು ದೋಷವಾಗಿಯೇ ಉಳಿಯುತ್ತದೆ.

**ಅಸ್ತು ವೋಭಯಾರ್ಥವಿಷಯಃ । ತಥಾಪಿ ಅತಿವ್ಯಾಪ್ತಿರ್ಲಕ್ಷಣದೋಷಃ,**
**ಯತ್ರ ವಾಚ್ಯಾರ್ಥಾದ್ ವಸ್ತುಮಾತ್ರೇಣ ಏಕೇನ ದ್ವಿತ್ರೈರ್ವಾ ಅಂತರಿತಾ**

**ವಸ್ತುಮಾತ್ರಸ್ಯೈವ ಸಾಧ್ಯಸ್ಯ ಪ್ರತೀತಿಸ್ತತ್ರಾಪಿ ಧ್ವನಿತ್ವಾಪತ್ತೇಃ,**
**ತಲ್ಲಕ್ಷಣಾನುಗಮಾವಿಶೇಷಾತ್, ನ ಚ ತತ್ ತತ್ರೇಷ್ಯತೇ,**
**ಚಾರುತಾತಿವೃತ್ತೇಃ । ವ್ಯಭಿಚಾರಿಭಾವಾಲಂಕಾರಾಂತರಿತಾಯಾ ಏವ ತಸ್ಯಾ**
**ಧ್ವನಿವಿಷಯಭಾವಾಭ್ಯುಪಗಮಾತ್, ಅನ್ಯತ್ರ ತು ತದ್ವಿಪರ್ಯಯಾತ್ ।**
**ಚಾರುತ್ವಾಚಾರುತ್ವನಿಶ್ಚಯೇ ಚ ಕಾವ್ಯಾತತ್ತ್ವವಿದಃ ಪ್ರಮಾಣಮ್ ।**

**ಅನುವಾದ:**

ಅರ್ಥಶಬ್ದವು (ವಾಚ್ಯ–ಪ್ರತೀಯಮಾನ) ಎಂಬ ಎರಡು ಅರ್ಥಗಳನ್ನೂ ಒಳಗೊಂಡಿರುವುದೇ ಆಗಿರಲಿ. ಆದರೂ ಲಕ್ಷಣದಲ್ಲಿ ಅತಿವ್ಯಾಪ್ತಿ ಎಂಬ ದೋಷ ಬರುತ್ತದೆ. ಎಲ್ಲಿ ವಾಚ್ಯಾರ್ಥದಿಂದ ಒಂದೋ ಎರಡೋ ಮೂರೋ ವಸ್ತುಗಳ ಅಂತರವನ್ನು ಹೊಂದಿದ ಮತ್ತೊಂದು ವಸ್ತುಮಾತ್ರವೇ ತೋರುವುದೋ ಅಂಥ ಕಾವ್ಯವೂ ಧ್ವನಿ ಆಗಬೇಕಾದೀತು. ಏಕೆಂದರೆ ನೀವು ಹೇಳುವ ಧ್ವನಿಯ ಲಕ್ಷಣ ಅದರಲ್ಲೂ ಅನ್ವಿತವಾಗುತ್ತದೆ. (ಆದರೆ ಅಂಥ ಕಾವ್ಯಕ್ಕೆ ) ಧ್ವನಿತ್ವವನ್ನು ಯಾರೂ ಒಪ್ಪುವುದಿಲ್ಲ. ಏಕೆಂದರೆ (ಅಂಥ ಕಾವ್ಯದಲ್ಲಿ) ಸೌಂದರ್ಯವಿರುವುದಿಲ್ಲ. ವ್ಯಭಿಚಾರಿಭಾವ ಅಥವಾ ಅಲಂಕಾರಗಳಿಂದ ಅಂಥ ಅರ್ಥವು ತೋರಿದಾಗ ಮಾತ್ರ ಧ್ವನಿತ್ವವನ್ನು ಒಪ್ಪಿಕೊಳ್ಳಲಾಗಿದೆ. ಬೇರೆ ಸ್ಥಳಗಳಲ್ಲಿ ಧ್ವನಿಯ ಅಭಾವವನ್ನು ಒಪ್ಪಿಕೊಳ್ಳಲಾಗಿದೆ.

ಯಾವುದು ಸುಂದರ, ಯಾವುದು ಸುಂದರವಲ್ಲ ಎಂಬುದರ ನಿಶ್ಚಯದಲ್ಲಿ ಕಾವ್ಯತತ್ತ್ವವನ್ನು ತಿಳಿದ ರಸಿಕರೇ ಪ್ರಮಾಣ.

**ತತ್ರೈಕೇನ ವಸ್ತುಮಾತ್ರೇಣಾಂತರಿತಾ ಯಥಾ –**
**ಸಿಹಿ ಪಿಂಛಕಣ್ಣ ಊರಾ**
**ಬಹುಆ ವಾಹಸ್ಯ ಗವ್ವರೀ ಭಮಇ ।**
**ಮುತ್ತಾಹಲರಿಅಪಸಾಹಣಾಣ**
**ಮಜ್ಝೇ ಸವತ್ತೀಣಮ್ ॥**
**(ಶಿಖಿಪಿಂಛಕರ್ಣಪೂರಾ ವಧೂರ್ವ್ಯಾಧಸ್ಯ ಗರ್ವಿಣೀ ಭ್ರಮತಿ ।**
**ಮುಕ್ತಾಫಲರಚಿತಪ್ರಸಾಧನಾನಾಂ ಮಧ್ಯೇ ಸಪತ್ನೀನಾಮ್ ॥)**

**ಅತ್ರ ಹಿ ವಕ್ಷ್ಯಮಾಣಪ್ರಕಾರೇಣ ವ್ಯಾಧವಧ್ವಾಃ ಸಪತ್ನೀಭ್ಯಃ ಸೌಭಾಗ್ಯವ್ಯತಿರೇಕೋऽನುಮೇಯಃ। ಸ ಚಾವಿರತಸಂಭೋಗಸುಖಾಸಂಗನಿಸ್ಸಹತಯಾ ಪತ್ಯುರ್ಮಯೂರಮಾತ್ರಮಾರಣಕ್ಷಮತಯಾ ಅನುಮೀಯಮಾನಯಾ ಅಂತರಿತಃ ।**

**ಅನುವಾದ:**

ಅವುಗಳಲ್ಲಿ ಒಂದು ವಸ್ತುವಿನಿಂದ ಅಂತರಿತವಾದ ವಸ್ತುಮಾತ್ರದ ಪ್ರತೀತಿಗೆ ಉದಾಹರಣೆ–

**ನವಿಲಿನ ಗರಿಯನೆ ಕಿವಿಯಲಿ ಧರಿಸಿ**
**ಬೇಡನ ಮಡದಿಯು ನಡೆದಳು ಮುದದಿ ।**
**ಮುತ್ತಿನ ಹಾರವ ಧರಿಸಿಯು ಮೆರೆವ**
**ಸವತಿಯರೆಲ್ಲರ ಮಧ್ಯದಿ ಗರ್ವಿಣಿ ।**

ಇಲ್ಲಿ ಮುಂದೆ ಹೇಳುವ ಪ್ರಕಾರದಿಂದ ಬೇಡನ ಮಡದಿಯ ಸೌಭಾಗ್ಯಾತಿಶಯವು ತನ್ನ ಸವತಿಯರ ಭಾಗ್ಯಕ್ಕಿಂತಲೂ ಹೆಚ್ಚಿನದೆಂದು ಅನುಮಾನದಿಂದ ತಿಳಿದುಬರುತ್ತದೆ. (ವಾಚ್ಯಾರ್ಥಕ್ಕೂ ಅನುಮೀಯಮಾನವಾದ ಅರ್ಥಕ್ಕೂ ಮಧ್ಯದಲ್ಲಿ) ಸತತಸಂಭೋಗಸುಖದಿಂದ ನಿಶ್ಶಕ್ತನಾದ ಗಂಡನು ಈಗ ನವಿಲುಗಳನ್ನು ಮಾತ್ರ ಕೊಲ್ಲಲು ಶಕ್ತನಾಗಿದ್ದಾನೆ ಎಂಬ ಅನುಮಾನಗಮ್ಯವಾದ ಪ್ರತೀತಿಯು ಉಂಟಾಗುತ್ತದೆ. (ಹೀಗೆ ಒಂದು ವಸ್ತುವಿನಿಂದ) ಸಾಧ್ಯವಾದ ಇನ್ನೊಂದು ಅರ್ಥವು ಅಂತರಿತವಾಗಿದೆ.

**ದ್ವಾಭ್ಯಾಮಂತರಿತಾ ಯಥಾ –**
**ವಾಣಿಅಅಹತ್ಥಿದಂತಾ**
**ಕತ್ತೋ ಅಹ್ಮಾಣ ವಗ್ಘಕಿತ್ತೀ ಅ ।**
**ಜಾವ ಲುಲಿಆಲಮುಹೀ**
**ಘರಮ್ಮಿ ಪರಿಸಕ್ಕಏ ಸೋಹ್ಣಾ ॥**
**(ವಾಣಿಜಕ ಹಸ್ತಿದಂತಾ ಕುತೋಽಸ್ಮಾಕಂ ವ್ಯಾಘ್ರಕೃತ್ತಿಶ್ಚ ।**
**ಯಾವಲ್ಲುಲಿತಾಲಕಮುಖೀ ಗೃಹೇ ಪರಿಷ್ವಕ್ಕತೇ ಸ್ನುಷಾ ॥)**
**ಅತ್ರ ಹಿ ವಕ್ಷ್ಯಮಾಣಪ್ರಕಾರೇಣ ವೃದ್ಧವ್ಯಾಧೇನ ವಾಣಿಜಕಂ**
**ಪ್ರತಿ ಹಸ್ತಿದಂತಾದ್ಯಭಾವಪ್ರತಿಪಾದನಾಯ ವ್ಯಾಪಕವಿರುದ್ಧಕಾರ್ಯೋಪಲಬ್ಧಿಃ**
**ಪ್ರಯುಕ್ತಾ । ಯಥಾ ನಾತ್ರ ತುಷಾರಸ್ಪರ್ಶೋ ಧೂಮಾದಿತಿ ।**

**ಅನುವಾದ:**

ಎರಡು ವಸ್ತುಗಳಿಂದ ಅಂತರಿತವಾದ (ವಸ್ತುಮಾತ್ರದ) ಪ್ರತೀತಿಯ ಉದಾಹರಣೆ –

**“ವ್ಯಾಪಾರಿ ನಮಗೆಲ್ಲಿ ಆನೆಗಳ ದಂತಗಳು**
**ಹುಲಿಯ ಚರ್ಮವಾದರೂ (ನಮಗೆಲ್ಲಿ ಬಂತು?)**
**ಮನೆಯಲ್ಲಿ ಸೊಸೆ ಇಹಳು ಕುರುಳಿಂದ ಮುಖವು**
**ಮುಚ್ಚಿರಲು ಮೆಲ್ಲನೇ ನಡೆಯುವಳು ಸತತ”**

ಮುಂದೆ (ನಾವು) ಹೇಳುವ ಕ್ರಮದಿಂದ ಇಲ್ಲಿ ಮುದಿಬೇಡನು ಬಣಜಿಗನನ್ನು ಉದ್ದೇಶಿಸಿ ಆನೆದಂತಗಳ ಮತ್ತು ಹುಲಿಚರ್ಮದ ಅಭಾವವನ್ನು ಸೂಚಿಸಲು ವ್ಯಾಪಕವಿರುದ್ಧವಾದ ಕಾರ್ಯದ ಉಪಲಬ್ಧಿಯು ಪ್ರಯುಕ್ತವಾಗಿದೆ, “ಇಲ್ಲಿ ತಣ್ಣನೆಯ ಸ್ಪರ್ಶವಿಲ್ಲ, ಹೊಗೆ ಹರಡುತ್ತಿರುವುದರಿಂದ” ಎಂಬಲ್ಲಿರುವ ಹಾಗೆ.

**ಹಸ್ತಿದಂತವ್ಯಾಘ್ರಾಜಿನಾದಿಸದ್ಭಾವೋ ಹ್ಯಸ್ಮದ್‌ಗೃಹೇ ಸಮರ್ಥಸ್ಯ ಸತಃ ಸುತಸ್ಯ ತದ್‌ವ್ಯಾಪಾದನವ್ಯಾಪಾರಪರತಯಾ ವ್ಯಾಪ್ತಃ । ತದ್ವಿರುದ್ಧಂ ಚ ಸ್ನುಷಾಸೌಭಾಗ್ಯಾತಿರೇಕ–ಪ್ರಯುಕ್ತಮ್ ಅವಿರತಸಂಭೋಗಸುಖಾಸಂಗಜನಿತಮ್ ಅಸ್ಯ ನಿಸ್ಸಹತ್ವಮ್ । ತತ್ಕಾರ್ಯಂ ಚ ಸ್ನುಷಾಯಾ ವಿಲುಲಿತಾಲಕಮುಖೀತ್ವಮ್ ಇತಿ ।**

**ಅನುವಾದ:**

ಆನೆಗಳ ದಂತ ಮತ್ತು ಹುಲಿಯ ಚರ್ಮ ಇತ್ಯಾದಿಗಳ ಅಸ್ತಿತ್ವವು ನಮ್ಮ ಮನೆಯಲ್ಲಿ ಸಮರ್ಥನಾದ ಮಗ ಆ (ಪ್ರಾಣಿಗಳ) ಬೇಟೆಯ ಕಾರ್ಯದಲ್ಲಿ ತೊಡಗಿರುವುದನ್ನು ಅವಲಂಬಿಸಿದೆ. ಆದರೆ ಅದಕ್ಕೆ ವಿರುದ್ಧವಾಗಿರುವ (ಅಂಶವೇನೆಂದರೆ) ಸೊಸೆಯ ಅತಿಶಯವಾದ ಸೊಬಗಿನ ಕಾರಣದಿಂದ ಸತತವಾಗಿ ಅವನು ಸಂಭೋಗಸುಖದಲ್ಲಿ ನಿರತನಾಗಿ ದುರ್ಬಲನಾಗಿದ್ದಾನೆ. ಅದರ ಪರಿಣಾಮವೇ ಸೊಸೆಯ ಮುಂಗುರುಳುಗಳಿಂದ ಮುಚ್ಚಿದ ಮುಖವನ್ನಿಟ್ಟುಕೊಂಡಿರುವುದು – (ಎಂಬುದಿಲ್ಲಿ ವಾಚ್ಯಾರ್ಥಕ್ಕೂ ಅನುಮೇಯಾರ್ಥಕ್ಕೂ ಮಧ್ಯದಲ್ಲಿರುವ ಅರ್ಥದ್ವಯ).

**ತ್ರಿಭಿರಂತರಿತಾ ಯಥಾ –**
**ವಿವರೀಅಸುರಸಮಏ**
**ಬಹ್ಮಂ ದಟ್ಠೂಣ ಣಾಹಿಕಮಲಮ್ಮಿ ।**
**ಹರಿಣೋ ದಾಹಿಣಅಣಂ**
**ಚುಮ್ಬಇ ಹಿಳಿಆಉಲಾ ಲಚ್ಛೀ ॥**
**(ವಿಪರೀತಸುರತಸಮಯೇ**
**ಬ್ರಹ್ಮಾಣಂ ದೃಷ್ಟ್ವಾ ನಾಭಿಕಮಲೇ ।**
**ಹರೇರ್ದಕ್ಷಿಣನಯನಂ**
**ಚುಂಬತಿ ಹ್ರಿಯಾಕುಲಾ ಲಕ್ಷ್ಮೀಃ )**

**ಅನುವಾದ:**

ವಿಪರೀತಸುರತದ ಸಮಯದಲ್ಲಿ ನಾಭಿಕಮಲದ ಮೇಲಿದ್ದ ಬ್ರಹ್ಮನನ್ನು ನೋಡಿ ನಾಚಿಕೊಂಡ ಲಕ್ಷ್ಮಿಯು ಹರಿಯ ಬಲಗಣ್ಣನ್ನು ಚುಂಬಿಸಿದಳು.

**ವಿವರಣೆ:**

ಹರಿಯ ಎರಡು ಕಣ್ಣುಗಳು ಸೂರ್ಯ–ಚಂದ್ರರು ಎಂಬ ಮಾತಿದೆ. ಹರಿಯ ಬಲಗಣ್ಣು ಸೂರ್ಯ. ಅವನನ್ನು ಚುಂಬನದ ನೆವದಿಂದ ಮುಚ್ಚಿದರೆ ಅದು ಸೂರ್ಯಾಸ್ತವೆಂದಾಯಿತು. ಸೂರ್ಯನು ಅಸ್ತಮಿಸಿದರೆ ಕಮಲವು ಮುಚ್ಚಿಕೊಳ್ಳುತ್ತದೆ ಎಂದು ಹೇಳುತ್ತಾರೆ. ಈ ಕಲ್ಪನೆಗಳ ಆಧಾರದಿಂದ ಕವಿ ಈ ಪದ್ಯವನ್ನು ರಚಿಸಿದ್ದಾನೆ.

**ಅತ್ರ ಹಿ ಲಕ್ಷ್ಮೀಲಜ್ಜಾನಿವೃತ್ತಿಸ್ಸಾಧ್ಯಾ । ತತ್ರ ಚ**
**ಭಗವತೋ ಹರೇರ್ದಕ್ಷಿಣಸ್ಯಾಕ್ಷ್ಣಃ ಸೂರ್ಯಾತ್ಮನೋ**

**ಲಕ್ಷ್ಮೀಪರಿಚುಂಬನಂ ಹೇತುಃ । ತದ್ಧಿ ತಸ್ಯ ತಿರೋಧಾನಲಕ್ಷಣಮ್**
**ಅಸ್ತಮಯಮ್ ಅನುಮಾಪಯತಿ । ಸೋऽಪಿ ಚ**
**ಸಾಹಚರ್ಯಾನ್ನಾಭಿನಲಿನಸ್ಯ ಸಂಕೋಚಮ್ ।**
**ಸೋಽಪಿ ಬ್ರಹ್ಮಣೋ ದರ್ಶನವ್ಯವಧಾನಮ್ ಇತಿ**
**ತ್ರಯಾಂತರಿತಾನುಮೇಯಾರ್ಥಪ್ರತಿಪತ್ತಿಃ ।**
**ತದಿಯಮ್ ಉಪಾಯಪರಂಪರಾರೋಹನಿಸ್ಸಹಾ ನ**
**ರಸಾಸ್ವಾದಾಂತಿಕಮ್ ಉಪಗಂತುಮ್ ಅಲಮ್ ಇತಿ**
**ಪ್ರಹೇಲಿಕಾಪ್ರಾಯಮ್ ಏತತ್ ಕಾವ್ಯಮ್ ಇತಿ ಅತಿವ್ಯಾಪ್ತಿಃ ।**

**ಅನುವಾದ:**

ಈ ಪದ್ಯದಲ್ಲಿ ಲಕ್ಷ್ಮಿಯ ನಾಚಿಕೆಯ ನಿವೃತ್ತಿಯು ಸಾಧ್ಯಾಂಶ. ಅದಕ್ಕೆ ಸಾಧಕವಾಗಿರುವುದು ಭಗವಾನ್ ಹರಿಯ ಸೂರ್ಯರೂಪವಾದ ಬಲಗಣ್ಣನ್ನು ಲಕ್ಷ್ಮಿಯು ಚುಂಬಿಸಿದಳು ಎಂಬುದು. ಏಕೆಂದರೆ ಆ ಚುಂಬನವು ಸೂರ್ಯನು ಕಾಣದೆ ಆಗುವ ಸನ್ನಿವೇಶದ, ಎಂದರೆ ಅಸ್ತಮಯದ ಸ್ಥಿತಿಯನ್ನು ಅನುಮಾನಪ್ರಮಾಣದಿಂದ ತಿಳಿಸುತ್ತದೆ. ಅದು ಸಾಹಚರ್ಯದ ಆಧಾರದಿಂದ ನಾಭಿಕಮಲದ ಮುಚ್ಚಿಕೊಳ್ಳುವಿಕೆಯನ್ನು ತಿಳಿಸುತ್ತದೆ. ಅದು ಮತ್ತೆ ಬ್ರಹ್ಮನು ಏನನ್ನೂ ನೋಡಲಾಗದಂತೆ ನಿಂತ ಸ್ಥಿತಿಯನ್ನು ಸೂಚಿಸುತ್ತದೆ. ಹೀಗೆ ಅನುಮೇಯಾರ್ಥದ ಅರಿವು ಮೂರು ಪ್ರತೀತಿಗಳಿಂದ ಅಂತರಿತವಾಗಿದೆ. ಇದು ಉಪಾಯಪರಂಪರೆಯನ್ನು ಆಶ್ರಯಿಸಿ ಬಳಲುವ ಪ್ರತೀತಿ ಆಗಿದ್ದು ಈ ಕಾವ್ಯವು ಒಗಟಿನಂತಾಗಿರುವುದರಿಂದ (ನೀವು ಹೇಳಿದ ಧ್ವನಿಲಕ್ಷಣಕ್ಕೆ ಇಲ್ಲಿ) ಅತಿವ್ಯಾಪ್ತಿ.

**ವ್ಯಭಿಚಾರಿಭಾವವ್ಯವಹಿತಾ ಯಥಾ –**
**ಪತ್ಯುಃ ಶಿರಶ್ಚಂದ್ರಕಲಾಮನೇನ**
**ಸ್ಪೃಶೇತಿ ಸಖ್ಯಾ ಪರಿಹಾಸಪೂರ್ವಮ್ ।**
**ಸಾ ರಂಜಯಿತ್ವಾ ಚರಣೌ ಕೃತಾಶೀಃ –**
**ಮಾಲ್ಯೇನ ತಾಂ ನಿರ್ವಚನಂ ಜಘಾನ ॥**
**ಅತ್ರ ಹಿ ಉಕ್ತಪ್ರಕಾರೇಣಾನುಮಿತಕೌತುಕೌತ್ಸುಕ್ಯಪ್ರಹರ್ಷ–**
**ಲಜ್ಜಾದಿವ್ಯಭಿಚಾರಿಭಾವಾಂತರಿತಾ ಗೌರ್ಯಾಮ್ ಆಭಿಲಾಷಿಕಶೃಂಗಾರಾವಗತಿಃ ।**

**ಅನುವಾದ:**

ವ್ಯಭಿಚಾರಿಭಾವದಿಂದ ಅಂತರಿತವಾದ (ಅನುಮೇಯಾರ್ಥಪ್ರತೀತಿಗೆ) ಉದಾಹರಣೆ – "ಸಖಿಯು ಗೌರಿಯ ಅಂಗಾಲುಗಳಿಗೆ ಬಣ್ಣವನ್ನು ಬಳಿದು 'ಈ ಕಾಲಿನಿಂದ ನಿನ್ನ ಗಂಡನ (ತಲೆಯ ಮೇಲಿರುವ) ಚಂದ್ರಕಲೆಯನ್ನು ಮುಟ್ಟಿಸು' ಎಂದು ಹೇಳಿ ಆಶೀರ್ವಾದ ಮಾಡಿದಾಗ ಗೌರಿಯು ಯಾವ ಮಾತನ್ನೂ ಆಡದೆ (ತಾನು ಧರಿಸಿದ್ದ) ಮಾಲೆಯಿಂದ ಆ ಸಖಿಗೆ (ಮೆಲ್ಲನೆ) ಹೊಡೆದಳು."

ಇಲ್ಲಿ ಮೇಲೆ ವಿವರಿಸಿದ ಪ್ರಕಾರದಿಂದ ಕೌತುಕ, ಉತ್ಸುಕತೆ, ಹರ್ಷ, ನಾಚಿಕೆ ಇತ್ಯಾದಿ ವ್ಯಭಿಚಾರಿಭಾವಗಳ ಪ್ರತೀತಿಯ ಅನಂತರ ಗೌರಿಯಲ್ಲಿ ಅಭಿಲಾಷಶೃಂಗಾರದ ಪ್ರತೀತಿಯು (ಸಹೃದಯರಿಗೆ ಉಂಟಾಗುವುದು).

**ಅಲಂಕಾರವ್ಯವಹಿತಾ ಯಥಾ –**

**ಲಾವಣ್ಯಕಾಂತಿಪರಿಪೂರಿತದಿಙ್ಮುಖೇಽಸ್ಮಿನ್**
**ಸ್ಮೇರೇಽಧುನಾ ತವ ಮುಖೇ ತರಲಾಯತಾಕ್ಷಿ ।**
**ಕ್ಷೋಭಂ ಯದೇತಿ ನ ಮನಾಗಪಿ ತೇನ ಮನ್ಯೇ**
**ಸುವ್ಯಕ್ತಮೇವ ಜಡರಾಶಿರಯಂ ಪಯೋಧಿಃ ॥**

**ಅತ್ರಾಪಿ ಕಸ್ಯಾಶ್ಚಿದ್ ಉಕ್ತಕ್ರಮೇಣ ವದನಪೂರ್ಣೇಂದು- ಬಿಂಬಯೋಃ ರೂಪ್ಯರೂಪಕಭಾವೋಽನುಮಿತಃ । ತದಂತರಿತಾ ಚಾನುಕಾರ್ಯಾವಗತಿಃ । ಸೈವ ಧ್ವನೇಃ ವಿಷಯಭಾವೇನೋಪಗಂತವ್ಯಾ, ನಾನ್ಯಾ ।**

**ಅನುವಾದ:**

ಅಲಂಕಾರವ್ಯವಧಾನವಿರುವ (ಅನುಮೇಯಾರ್ಥಪ್ರತೀತಿಗೆ) ಉದಾಹರಣೆ– "ಚಂಚಲವೂ ಅಗಲವೂ ಆದ ಕಣ್ಣುಗಳ ಚೆಲುವೆ, ಅರಳುತ್ತಿರುವ ನಿನ್ನ ನಗುಮೊಗವು ಲಾವಣ್ಯಕಾಂತಿಯಿಂದ ಎಲ್ಲ ದಿಕ್ಕುಗಳನ್ನು ತುಂಬಿಸಿದ. ಆದರೂ ಈ ಕಡಲು ಕೊಂಚವೂ ತಳಮಳಗೊಂಡಿಲ್ಲ. ಆದ್ದರಿಂದ ಅದು ಜಡರಾಶಿ (=ಜಲರಾಶಿ) ಎಂಬುದು ಸುಸ್ಪಷ್ಟವಾಗಿದೆ."

ಇಲ್ಲಿ ಒಬ್ಬ ಸುಂದರಿಯ ಮುಖಬಿಂಬಕ್ಕೂ ಪೂರ್ಣಚಂದ್ರಬಿಂಬಕ್ಕೂ ಮೇಲೆ ವಿವರಿಸಿದ ರೀತಿಯಿಂದ ರೂಪ್ಯರೂಪಕಭಾವವು ಅನುಮಿತವಾಗಿದೆ. ಅದರಿಂದ ಅಂತರಿತವಾಗಿ ಅನುಕಾರ್ಯದ ಪ್ರತೀತಿಯು ಉಂಟಾಗುತ್ತದೆ. ಇಂಥ (ವ್ಯಭಿಚಾರಿಭಾವಾಂತರಿತವಾದ ಅಥವಾ ಅಲಂಕಾರಾಂತರಿತವಾದ) ಪ್ರತೀತಿಯನ್ನೇ ಧ್ವನಿಗೆ ವಿಷಯವೆಂದು ಒಪ್ಪಿಕೊಳ್ಳಬೇಕು, ಬೇರೆಯದನ್ನಲ್ಲ.

(ಸಂಚಾರಿವ್ಯವಧಾನ ನಿರ್ದೋಷ)

**ನ ಚ ವ್ಯವಧಾನಾವಿಶೇಷಾದ್ ವ್ಯಭಿಚಾರ್ಯಲಂಕಾರವ್ಯವಧಾನಪಕ್ಷೇಽಪ್ಯೇತತ್ ಸಮಾನಮಿತಿ ಮಂತವ್ಯಂ, ವಸ್ತುಮಾತ್ರಸ್ಯ ವ್ಯಭಿಚಾರ್ಯಲಂಕಾರಾದೀನಾಂ ಚ ಭಿನ್ನಜಾತೀಯತ್ವಾತ್ । ವಸ್ತುಮಾತ್ರಂ ಹಿ ಅನುಮೇಯಾದ್ ಅತ್ಯಂತವಿಲಕ್ಷಣಸ್ವಭಾವಮ್ ಅಗ್ನ್ಯಾದೇರಿವ ಧೂಮಾದಿ। ವ್ಯಭಿಚಾರ್ಯಾದಯಸ್ತು ತಚ್ಛಾಯಾನುವಿಧಾಯಿನಃ ತದುಪರಕ್ತಾ ಇವ ತದಾಲಿಂಗಿತಾ ಇವೋತ್ಪದ್ಯಂತೇ, ನ ತತೋಽತ್ಯಂತವಿಲಕ್ಷಣಾ ಏವೇತಿ ತದ್‌ವ್ಯವಧಾನಮ್ ಅನ್ಯದೇವ ವಸ್ತುವ್ಯವಧಾನಾತ್ ಇತ್ಯಸಿದ್ಧಸ್ತಯೋರವಿಶೇಷಃ । ಅಲಂಕಾರೋಽಪಿ ಅಲಂಕಾರ್ಯಾನ್ನ ಪೃಥಗವಸ್ಥಾತುಮರ್ಹತಿ, ತಯೋರಾಶ್ರಯಾಶ್ರಯಿಭಾವೇನ ಅವಸ್ಥಾನಾತ್ ಇತಿ ತದ್‌ವ್ಯವಧಾನಸ್ಯಾಪ್ಯವಿಶೇಷೋಽಸಿದ್ಧ ಏವೇತಿ ತದವಸ್ಥೈವಾತಿವ್ಯಾಪ್ತಿಃ ।**

**ಅನುವಾದ:**

ವ್ಯವಧಾನದಲ್ಲಿ ಯಾವ ವ್ಯತ್ಯಾಸವೂ ಇಲ್ಲದಿರುವುದರಿಂದ ವ್ಯಭಿಚಾರಿಭಾವದಿಂದ ಅಥವಾ ಅಲಂಕಾರದಿಂದ ವ್ಯವಧಾನವುಂಟಾದಾಗಲೂ ಈ ದೋಷ ಸಮಾನ ಎಂದು ತಿಳಿದುಕೊಳ್ಳಬಾರದು. ಏಕೆಂದರೆ ವಸ್ತುಮಾತ್ರವೂ ವ್ಯಭಿಚಾರಿಭಾವ–ಅಲಂಕಾರಗಳೂ ಪರಸ್ಪರ ಭಿನ್ನಜಾತಿಗೆ ಸೇರಿವೆ. ವಸ್ತುಮಾತ್ರವು ಅನುಮೇಯಕ್ಕಿಂತ ಅತ್ಯಂತವಿಲಕ್ಷಣವಾದ ಸ್ವಭಾವವನ್ನುಳ್ಳದ್ದು. ಬೆಂಕಿ ಮುಂತಾದವು ಧೂಮ ಇತ್ಯಾದಿಗಳಿಂದ ಭಿನ್ನವಾಗಿರುವಂತೆ. ವ್ಯಭಿಚಾರಿಭಾವಾದಿಗಳಾದರೋ ಆ ಅನುಮೇಯ (ರಸಾದಿಗಳ) ಛಾಯೆಯನ್ನು ಅನುಸರಿಸುತ್ತವೆ, ಆ ರಸಾದಿಗಳಿಂದ ಲಿಪ್ತವಾದಂತೆ, ಅವುಗಳಿಂದ ಆಲಿಂಗಿಸಲ್ಪಟ್ಟಂತೆ ಅವೂ ಹುಟ್ಟುತ್ತವೆ. ಆದ್ದರಿಂದ ವ್ಯಭಿಚಾರಿಭಾವಗಳು (ಅನುಮೇಯವಾದ ರಸಾದಿಗಳಿಗೆ) ಅತ್ಯಂತ ವಿಲಕ್ಷಣವಲ್ಲ. ಆದ್ದರಿಂದ ವ್ಯಭಿಚಾರಭಾವಾದಿಗಳಿಂದ ಉಂಟಾಗುವ ವ್ಯವಧಾನವು ವಸ್ತು ವ್ಯವಧಾನಕ್ಕಿಂತಲೂ ಭಿನ್ನ ಎಂಬ ಕಾರಣದಿಂದ (ಎರಡರ ವ್ಯವಧಾನವೂ ಒಂದೇ ಎಂಬ) ಅವಿಶೇಷವು ಅಸಿದ್ಧ. ಅಲಂಕಾರವೂ ಅಲಂಕಾರ್ಯಕ್ಕಿಂತ ಬೇರೆಯಾಗಿ ಇರಲು ಶಕ್ತವಲ್ಲ, ಏಕೆಂದರೆ ಅವು ಆಶ್ರಯ–ಆಶ್ರಯಿಭಾವದಿಂದ ನಿಂತಿರುತ್ತವೆ. ಆದ್ದರಿಂದ ಅಲಂಕಾರಗಳಿಂದ ಉಂಟಾಗುವ ವ್ಯವಧಾನಕ್ಕೂ (ವಸ್ತುಮಾತ್ರದಿಂದ ಉಂಟಾಗುವ ವ್ಯವಧಾನಕ್ಕೂ) ಅವಿಶೇಷ ಎಂಬುದು ಅಸಿದ್ಧ. ಆದ್ದರಿಂದ (ಧ್ವನಿಲಕ್ಷಣದ) ಅತಿವ್ಯಾಪ್ತಿ (ಎಂಬ ದೋಷವು) ಹಾಗೆಯೇ ಉಳಿಯಿತು.

**ವಿವರಣೆ:**

ರಸ ಎಂಬುದೊಂದು ಅನುಭವ. ಅದು ವಿಭಾವ–ಅನುಭಾವ–ವ್ಯಭಿಚಾರಿಭಾವಗಳ ಸಂಯೋಗದಿಂದ ನಿಷ್ಪನ್ನವಾಗುತ್ತದೆ. ಆದ್ದರಿಂದ ವ್ಯಭಿಚಾರಿಭಾವವು ರಸಕ್ಕೆ ಸನ್ನಿಹಿತ. ಅದರಿಂದ ಉಂಟಾಗುವ ವ್ಯವಧಾನವು ವ್ಯವಧಾನವೇ ಅಲ್ಲ. ಆದರೆ ವಸ್ತುಮಾತ್ರವು ವಿಭಿನ್ನ ಜಾತೀಯ, ಅದರಿಂದ ಉಂಟಾಗುವ ವ್ಯವಧಾನ ರಸಾನುಭವವಿರೋಧಿ. ಆದ್ದರಿಂದ ಈ ಎರಡು ವ್ಯವಧಾನಗಳಲ್ಲಿ ವ್ಯತ್ಯಾಸವಿದೆ ಎಂಬುದು ಮಹಿಮಭಟ್ಟನ ವಾದ.

**ಯದ್ಯರ್ಥ ಇತಿ ವಾಚ್ಯೋऽರ್ಥೋऽಭಿಮತೋऽವ್ಯಾಪ್ತಿರೇವ ಸಾ ।**
**ಯೇನೈವಂವಾದಿನೀತ್ಯಾದಾವರ್ಥಸ್ಯಾರ್ಥಾಂತರಾದ್ಗತಿಃ ॥**
**ಅಥೋಭೌ ತರ್ಹ್ಯತಿವ್ಯಾಪ್ತಿರ್ದ್ವಿತ್ರವಸ್ತುವ್ಯವಾಯಿನಿ ।**
**ಪ್ರಹೇಲಿಕಾದಿರೂಪೇऽಪಿ ಕಾವ್ಯೇ ಧ್ವನ್ಯಾತ್ಮತಾ ಯತಃ ॥ ಇತಿ ಸಂಗ್ರಹಶ್ಲೋಕೌ ॥**

**ಅನುವಾದ:**

(ಧ್ವನಿಲಕ್ಷಣ ವಾಕ್ಯದಲ್ಲಿ) ಅರ್ಥ ಎಂಬ ಶಬ್ದಕ್ಕೆ ವಾಚ್ಯಾರ್ಥ ಎಂಬ ಅರ್ಥವೇ ಅಭಿಮತವಾದರೆ ಅವ್ಯಾಪ್ತಿ (ಎಂಬ ದೋಷ ಉಂಟಾಗುತ್ತದೆ). ಏಕೆಂದರೆ "ಏವಂವಾದಿನಿ ದೇವರ್ಷೌ" ಇತ್ಯಾದಿಗಳಲ್ಲಿ (ವಾಚ್ಯವಲ್ಲದ, ಎಂದರೆ

ಅನುಮೇಯವಾದ ಅಥವಾ ವ್ಯಂಗ್ಯವೆಂದು ಕರಸಿಕೊಳ್ಳುವ) ಒಂದು ಅರ್ಥದಿಂದ (ರಸರೂಪವಾದ) ಇನ್ನೊಂದು ಅರ್ಥದ ಪ್ರತೀತಿ ಉಂಟಾಗುತ್ತದೆ.

ಅಥವಾ (ಅರ್ಥ ಎಂಬ ಶಬ್ದಕ್ಕೆ) ಎರಡು ಅರ್ಥಗಳೂ ಅಭಿಮತ ಎನ್ನುವುದಾದರೆ ಎರಡೋ ಮೂರೋ ಅರ್ಥಗಳ ವ್ಯವಧಾನವನ್ನುಂಟುಮಾಡುವ ಪ್ರಹೇಲಿಕಾ (ಒಗಟು) ರೂಪದ ಕಾವ್ಯದಲ್ಲೂ ಧ್ವನಿಕಾವ್ಯತ್ವವನ್ನು ಒಪ್ಪಿಕೊಳ್ಳಬೇಕಾಗುವುದರಿಂದ ಲಕ್ಷಣಕ್ಕೆ ಅತಿವ್ಯಾಪ್ತಿ ಎಂಬ ದೋಷವು ಉಂಟಾಗುತ್ತದೆ.

**ಕೇವಲಮ್ ಅತ್ರೈವ ಅರ್ಥಸ್ಯೋಭಯಾತ್ಮನಃ ಸಾಮಾನ್ಯೇನ ಯಃ ಕಾವ್ಯಾತ್ಮತ್ವೇನ ವ್ಯಪದೇಶಃ ಸೋಽನುಪಪನ್ನಃ । ಸ ಹಿ ಪ್ರತೀಯಮಾನಾರ್ಥೈಕವಿಷಯೋ ಯುಕ್ತಃ, ತಸ್ಯೈವ ಕಾವ್ಯಜೀವಿತಭೂತಸ್ಯ ಪ್ರಧಾನತಯಾ ಧ್ವನಿತ್ವೇನೇಷ್ಟತ್ವಾತ್ । ಯತ್ ಸ ಏವಾಹ 'ಕಾವ್ಯಸ್ಯಾತ್ಮಾ ಧ್ವನಿಃ' ಇತಿ । 'ಕಾವ್ಯಸ್ಯಾತ್ಮಾ ಸ ಏವಾರ್ಥ' ಇತಿ, 'ಪ್ರತೀಯಮಾನಾ ತ್ವನ್ಯೈವ ಭೂಷಾ ಲಜ್ಜೇವ ಯೋಷಿತಃ' ಇತಿ ಚ । ತೇನ 'ಯಃ ಕಾವ್ಯಸ್ಯ ವ್ಯವಸ್ಥಿತಃ' ಇತಿ ತತ್ರೋಚಿತಃ ಪಾಠಃ।**

**ಅನುವಾದ:**

ಇಲ್ಲಿ ಮಾತ್ರ (ವಾಚ್ಯ+ಪ್ರತೀಯಮಾನ ಎಂಬ) ಉಭಯರೂಪವಾದ ಅರ್ಥವನ್ನು ಕಾವ್ಯಾತ್ಮಾ ಎಂದು ಕರೆದಿರುವುದೂ ಅನುಚಿತ. ಹಾಗೆ (ಕಾವ್ಯಾತ್ಮಾ) ಎಂದು ಪ್ರತೀಯಮಾನಾರ್ಥವನ್ನು ಮಾತ್ರ ಕರೆಯುವುದು ಉಚಿತ, ಏಕೆಂದರೆ ಪ್ರಧಾನವಾಗಿ ಕಾವ್ಯದ ಜೀವಿತವೇ ಆಗಿರುವ ಪ್ರತೀಯಮಾನವೇ ಧ್ವನಿ ಎಂದು (ನಿಮ್ಮ) ಅಭಿಮತ. ಆನಂದವರ್ಧನನೇ ಹೇಳಿದ್ದಾನೆ 'ಕಾವ್ಯದ ಆತ್ಮ ಧ್ವನಿ', 'ಕಾವ್ಯದ ಆತ್ಮ ಆ ಅರ್ಥ ಮಾತ್ರ', 'ಪ್ರತೀಯಮಾನವಾದುದು ಹೆಣ್ಣಿಗೆ ನಾಚಿಕೆಯಂತೆ ಕಾವ್ಯಕ್ಕೆ ಬೇರೆಯದೇ ಆದ ಒಡವೆ' ಇತ್ಯಾದಿ. ಆದ್ದರಿಂದ 'ಯಃ ಕಾವ್ಯಸ್ಯ ವ್ಯವಸ್ಥಿತಃ' ಎಂಬ ಪಾಠವೇ ಅಲ್ಲಿ ಉಚಿತ.

**ವಿವರಣೆ:**

ಕಾವ್ಯದ ಆತ್ಮ ಯಾವುದು ಎಂಬ ಬಗೆಗೆ ಆನಂದವರ್ಧನ ಒಂದು ಜಾಗದಲ್ಲಿ ಎಡವಿದ್ದಾನೆ ಎಂದು ಮಹಿಮಭಟ್ಟನು ಇಲ್ಲಿ ತೋರಿಸಿದ್ದಾನೆ. ಅನೇಕ ಸ್ಥಳಗಳಲ್ಲಿ ಕಾವ್ಯದ ಆತ್ಮ ಪ್ರತೀಯಮಾನಾರ್ಥ (=ವ್ಯಂಗ್ಯಾರ್ಥ), ಅದನ್ನೇ ಧ್ವನಿ ಎಂದು ಕರೆದಿದ್ದೇವೆ ಎಂದು ಆನಂದವರ್ಧನನೇ ಹೇಳಿದ್ದಾನೆ. ಆದರೆ ಧ್ವನಿಲಕ್ಷಣವನ್ನು ಹೇಳುವುದಕ್ಕೆ ಪೀಠಿಕೆಯಾಗಿ ಬಂದಿರುವ ಪದ್ಯದಲ್ಲಿ – ಯೋಽರ್ಥಃ ಸಹೃದಯ ಶ್ಲಾಘ್ಯಃ ಕಾವ್ಯಾತ್ಮೇತಿ ವ್ಯವಸ್ಥಿತಃ । ವಾಚ್ಯಪ್ರತೀಯಮಾನಾಖ್ಯೌ ತಸ್ಯ ಭೇದಾವುಭೌ ಸ್ಮೃತೌ ॥ (ಸಹೃದಯ ಶ್ಲಾಘ್ಯವಾಗಿ ಕಾವ್ಯಾತ್ಮಾ ಎಂದು ಯಾವ ಅರ್ಥವು ವ್ಯವಸ್ಥಿತವಾಗಿದೆಯೋ, ಅದರ ಎರಡು ಭೇದಗಳು ವಾಚ್ಯ ಮತ್ತು ಪ್ರತೀಯಮಾನ) ಎಂದು ಹೇಳಿಬಿಟ್ಟಿದ್ದಾನೆ. ವಸ್ತುತಃ ಪ್ರತೀಯಮಾನವು ಮಾತ್ರ ಕಾವ್ಯಾತ್ಮಾ. ಆದ್ದರಿಂದ ಈ ಪದ್ಯವನ್ನು

ಅರ್ಥಃ ಸಹೃದಯಶ್ಲಾಘ್ಯಃ ಯಃ ಕಾವ್ಯಸ್ಯ ವ್ಯವಸ್ಥಿತಃ । ವಾಚ್ಯಪ್ರತೀಯಮಾನಾಖ್ಯೌ ತಸ್ಯ ಭೇದಾವುಭೌ ಸ್ಮೃತೌ ॥ ಎಂದು ಬದಲಾಯಿಸಬೇಕು ಎಂಬುದು ಮಹಿಮಭಟ್ಟನ ಸಲಹೆ. ಹೀಗೆ ಬದಲಾಯಿಸಿದರೆ ವಾಚ್ಯಾರ್ಥವು ಕಾವ್ಯಾತ್ಮಾ ಎಂಬ ತಪ್ಪುಗ್ರಹಿಕೆ ದೂರವಾಗುತ್ತದೆ.

(ಧ್ವನಿಲಕ್ಷಣದಲ್ಲಿ ವಾಶಬ್ದ ಬೇಡ)

**ಕಿಂ ಚಾತ್ರ ವಾ ಶಬ್ದೋ ವಿಕಲ್ಪಾರ್ಥೋ ವಾ**
**ಸ್ಯಾತ್ ಸಮುಚ್ಚಯಾರ್ಥೋ ವಾ? ನ ತಾವದ್ವಿಕಲ್ಪಾರ್ಥಃ,**
**ಪಕ್ಷಾಂತರಾಸಂಭವಸ್ಯ ವ್ಯುತ್ಪಾದಿತತ್ವಾತ್ । ಸಂಭವೇ ವಾ ಅಸ್ಯ**
**ದ್ವಿವಚನಾನುಪಪತ್ತಿಃ, ತಯೋಃ ಸಮುಚ್ಚಯಾಭಾವಾತ್ । ಯಥಾ–**
**'ಶಿರಃ ಶ್ವಾ ಕಾಕೋ ವಾ ದ್ರುಪದತನಯೋ ವಾ ಪರಿಮೃಶೇತ್'**
**ಇತ್ಯತ್ರ ಬಹುವಚನಸ್ಯ । ಸಮುಚ್ಚಯಾರ್ಥತ್ವೇ ಯತ್ರ ಶಬ್ದಾರ್ಥಯೋ–**
**ರೇಕೈಕಸ್ಯ ವ್ಯಂಜಕತ್ವಂ ತತ್ರ ಧ್ವನಿತ್ವಮಿಷ್ಟಂ ನ ಸ್ಯಾತ್ ।**

**ಅನುವಾದ:**

ಮತ್ತೆ ಇಲ್ಲಿ (ಯತ್ರಾರ್ಥಃ ಶಬ್ದೋ ವಾ ಇತ್ಯಾದಿ ಧ್ವನಿಲಕ್ಷಣದಲ್ಲಿ) ವಾ ಎಂಬ ಶಬ್ದಕ್ಕೆ ಅರ್ಥವು ವಿಕಲ್ಪವೋ ಸಮುಚ್ಚಯವೋ? ವಿಕಲ್ಪಾರ್ಥವಂತೂ ಆಗಿರಲಾರದು. ಏಕೆಂದರೆ ಇನ್ನೊಂದು ಪಕ್ಷ ಸಂಭವಿಸುವುದೇ ಇಲ್ಲ ಎಂದು ಮೊದಲೇ ತೋರಿಸಿದ್ದೇವೆ. ಒಂದು ವೇಳೆ ಅದು ಸಂಭವಿಸಿದರೂ, ಆಗ (ನೀವು ಬಳಸಿರುವ) ದ್ವಿವಚನವು ತಪ್ಪಾಗುತ್ತದೆ. ಏಕೆಂದರೆ (ಶಬ್ದಾರ್ಥಗಳಿಗೆ) ಸಮುಚ್ಚಯವೇ ಇಲ್ಲ. ಹೇಗೆಂದರೆ– 'ತಲೆಯನ್ನು ನಾಯಿಯೋ ಕಾಗೆಯೋ ದ್ರುಪದನ ಮಗ (ಧೃಷ್ಟದ್ಯುಮ್ನ)ನೋ ಮುಟ್ಟಿಯಾನು' ಎಂಬ ಪದ್ಯದಲ್ಲಿ (ಕ್ರಿಯಾಪದದ) ಬಹುವಚನಪ್ರಯೋಗವು ಅನುಚಿತವಾಗುವಂತೆ. (ವಾ ಶಬ್ದದ) ಅರ್ಥ ಸಮುಚ್ಚಯವೇ ಎಂದು ಹೇಳಿದರೆ, ಎಲ್ಲಿ ಶಬ್ದಕ್ಕೆ ಅಥವಾ ಅರ್ಥಕ್ಕೆ ಮಾತ್ರ ವ್ಯಂಜಕತ್ವವುಂಟೋ ಅಂಥ ಕಾವ್ಯದಲ್ಲಿ ಧ್ವನಿತ್ವವು ಇಷ್ಟವಲ್ಲ ಎಂದಾದೀತು.

**ವಿವರಣೆ:**

'ವಾ' ಎಂಬ ಅವ್ಯಯಕ್ಕೆ ವಿಕಲ್ಪಾರ್ಥವೇ ಪ್ರಸಿದ್ಧ. "ರಾಮಃ ಕೃಷ್ಣೋ ವಾ ಗಚ್ಛತಿ" ಎಂಬ ವಾಕ್ಯಕ್ಕೆ ರಾಮನೋ ಅಥವಾ ಕೃಷ್ಣನೋ ಹೋಗುತ್ತಾನೆ ಎಂದು ಅರ್ಥ. ಆದ್ದರಿಂದ ಇಂಥ ವಾಕ್ಯದಲ್ಲಿ ಕ್ರಿಯಾಪದವು ಏಕವಚನದಲ್ಲಿರಬೇಕು. "ಯತ್ರಾರ್ಥಃ ಶಬ್ದೋ ವಾ ತಮರ್ಥಂ ವ್ಯನಕ್ತಿ" ಎಂದು ಏಕವಚನದ ಕ್ರಿಯಾಪದವನ್ನು ಉಪಯೋಗಿಸಬೇಕಾಗಿತ್ತು. ಆನಂದವರ್ಧನನು 'ವ್ಯಂಕ್ತಃ' ಎಂದು ದ್ವಿವಚನವನ್ನು ಇಲ್ಲಿ ಬಳಸಿರುವುದು ತಪ್ಪು.

ಅವ್ಯಯಾನಾಮನೇಕಾರ್ಥತ್ವಮ್ (ಅವ್ಯಯಗಳಿಗೆ ಅನೇಕ ಅರ್ಥಗಳುಂಟು) ಎಂಬ ನ್ಯಾಯದಿಂದ ಇಲ್ಲಿ 'ವಾ' ಎಂಬ ಅವ್ಯಯಕ್ಕೆ ಸಮುಚ್ಚಯ ಎಂಬ ಅರ್ಥ ಎಂದು ಹೇಳಿದರೆ ಆಗಲೂ ಒಂದು ದೋಷ ಬರುತ್ತದೆ. ಯಾವ ಕಾವ್ಯ (=ಪದ್ಯ ಅಥವಾ ವಾಕ್ಯ)ದಲ್ಲಿ ಶಬ್ದವೇ ವ್ಯಂಜಕವೋ ಅಥವಾ ಅರ್ಥವೇ ವ್ಯಂಜಕವೋ, ಅಲ್ಲಿ ಶಬ್ದಾರ್ಥಸಮುಚ್ಚಯವು ವ್ಯಂಜಕವಾಗುವುದಿಲ್ಲ ಎಂಬ ಕಾರಣದಿಂದ ಅಂಥ ಕಾವ್ಯ ಧ್ವನಿಯೇ ಅಲ್ಲ ಎಂಬ ಅನಿಷ್ಟಾಪತ್ತಿ ಉಂಟಾಗುತ್ತದೆ.

ಈ ಆಕ್ಷೇಪಕ್ಕೆ ಧ್ವನ್ಯಾಲೋಕದ ವ್ಯಾಖ್ಯಾನವಾದ ಲೋಚನದಲ್ಲಿ ಪರಿಹಾರವನ್ನು ಸೂಚಿಸಿದ್ದಾರೆ. ಎಲ್ಲ ಸ್ಥಳಗಳಲ್ಲೂ ಶಬ್ದಾರ್ಥಗಳು ಒಟ್ಟಿಗೆ ವ್ಯಂಜಕ. ಒಂದಿಲ್ಲದೆ ಇನ್ನೊಂದು ಇಲ್ಲ.

ಪ್ರಾಧಾನ್ಯದ ದೃಷ್ಟಿಯಿಂದ ಶಬ್ದಶಕ್ತಿಮೂಲಧ್ವನಿ, ಅರ್ಥಶಕ್ತಿಮೂಲಧ್ವನಿ ಎಂಬ ವ್ಯವಹಾರ ಎಂಬುದಿಲ್ಲಿ ದೋಷಪರಿಹಾರಕ್ರಮ. ಅದನ್ನೂ ಒಪ್ಪದೆ ಮಹಿಮಭಟ್ಟ ದೋಷವನ್ನು ಹೊರಿಸಿದ್ದಾನೆ.

**ಶಬ್ದಸ್ಯ ಚ ವಿಶೇಷಣಮನುಪಾದೇಯಮೇವ ಸ್ಯಾತ್, ಅರ್ಥಸ್ಯ ವಿಶಿಷ್ಟತ್ವೇನೈವ ತದವಗತಿಸಿದ್ಧೇಃ। ಅತ ಏವ ಚ ಲಕ್ಷಣವಾಕ್ಯೇ ದೀಪಕಾದ್ಯಲಂಕಾರಮುಖೇನ ಉಪಮಾದ್ಯಭಿವ್ಯಕ್ತೌ ಧ್ವನಿತ್ವಮಿಚ್ಛತಾ ಗುಣೀಕೃತಾತ್ಮನೋಽಭಿಧಾಯಾ ಉಪಾದಾನಂ ನ ಕೃತಮ್। ಅನ್ಯಥಾ ತದಪಿ ಕರ್ತವ್ಯಂ ಸ್ಯಾತ್। ತದಾಶ್ರಿತತ್ವಾದರ್ಥಸ್ಯ, ಅರ್ಥಾಶ್ರಿತತ್ವಾಚ್ಚಾಲಂಕಾರಾಣಾಮ್ ಇತಿ ಪಕ್ಷದ್ವಯಮಪ್ಯನುಪಪನ್ನಮ್।**

**ಅನುವಾದ:**

(ಧ್ವನಿಲಕ್ಷಣದಲ್ಲಿ) ಶಬ್ದಕ್ಕೆ (ಉಪಸರ್ಜನೀಕೃತಾರ್ಥವೆಂಬ) ವಿಶೇಷಣವನ್ನೂ ಕೊಡಬಾರದು, ಏಕೆಂದರೆ ಅರ್ಥಕ್ಕೆ ಕೊಟ್ಟಿರುವ ಆ ವಿಶೇಷಣದಿಂದಲೇ (ಶಬ್ದದಲ್ಲೂ ಆ ಅರ್ಥವು) ತಾನಾಗಿ ಸಿದ್ಧವಾಗುತ್ತದೆ. ಆದ್ದರಿಂದಲೇ ದೀಪಕ ಮುಂತಾದ ಅಲಂಕಾರಗಳಲ್ಲಿ ಉಪಮೆಯು ಅಭಿವ್ಯಕ್ತವಾದಾಗ ಅದು ಧ್ವನಿ ಎಂದು ಹೇಳಲು ಇಷ್ಟಪಡುವ ಆನಂದವರ್ಧನನು ಧ್ವನಿಲಕ್ಷಣವಾಕ್ಯದಲ್ಲಿ 'ಅಭಿಧಾ' ಎಂಬುದರ ಉಪಾದಾನವನ್ನು ಮಾಡಿಲ್ಲ. ಅನ್ಯಥಾ ಅದರ ಉಪಾದಾನವನ್ನೂ ಮಾಡಬೇಕಾಗಿತ್ತು, ಏಕೆಂದರೆ ಅರ್ಥವು ಅಭಿಧೆಯನ್ನು ಅವಲಂಬಿಸಿರುತ್ತದೆ ಮತ್ತು ಅಲಂಕಾರಗಳು ಅರ್ಥವನ್ನು ಆಶ್ರಯಿಸಿರುತ್ತವೆ. ಆದ್ದರಿಂದ (ಧ್ವನಿಲಕ್ಷಣದಲ್ಲಿ 'ವಾ' ಎಂಬ ಶಬ್ದದ ಅರ್ಥವು ವಿಕಲ್ಪ ಅಥವಾ ಸಮುಚ್ಚಯ ಎಂಬ) ಎರಡು ಪಕ್ಷಗಳೂ ತಪ್ಪಾಗುತ್ತವೆ.

**ಅತ್ರ ಕೇಚಿದ್ವಿದ್ವನ್ಮಾನಿನೋ ದ್ವಿವಚನಸಮರ್ಥನಾಮನೋರಥಾಕ್ಷಿಪ್ತಚಿತ್ತತಯಾ ವಾಚ್ಯವಾಚಕಯೋಃ ವಿಸ್ಮೃತಸುಪ್ರಸಿದ್ಧಪ್ರತೀತಿಕ್ರಮಭಾವಾಃ ತಯೋರೇಕಕಾಲಿಕತಾಂ ಶಬ್ದಸ್ಯೋಕ್ತನಯನಿರಸ್ತಾಮಪಿ ವ್ಯಂಜಕತಾಂ ಪಶ್ಯಂತಸ್ತನ್ನಿಬಂಧನಾಂ ಧ್ವನಿಭೇದಯೋರವಿವಕ್ಷಿತ–ವಕ್ಷಿತಾನ್ಯಪರವಾಚ್ಯಯೋರ್ಧ್ವನನವ್ಯಾಪಾರಂ ಪ್ರತಿ ಪರ್ಯಾಯೇಣಾನ್ಯೋನ್ಯಸಹಕಾರಿತಾಂ, ತದಪೇಕ್ಷಾಂ ಚಾನಯೋಃ ಪ್ರಧಾನೇತರತಾಮ್ ಉಪಕಲ್ಪ್ಯ ಸಹಕಾರಿತಯಾ ವ್ಯಕ್ತಿಕ್ರಿಯಾಂ ಪ್ರತಿ ಉಭಯೋರಪಿ ಕರ್ತೃತ್ವಾತ್ ತದಪೇಕ್ಷೋ ವ್ಯಂಕ್ತ ಇತಿ ದ್ವಿವಚನನಿರ್ದೇಶಃ, ಪ್ರಾಧಾನ್ಯಾಪೇಕ್ಷಶ್ಚ 'ಯತ್ರಾರ್ಥಃ ಶಬ್ದೋ ವಾ' ಇತಿ ವಿಕಲ್ಪ ಇತಿ ಮನ್ಯಮಾನಾಃ "ವ್ಯಂಕ್ತ" ಇತಿ ದ್ವಿವಚನೇನ ಇದಮಾಹ– ಯದ್ಯಪಿ ಅವಿವಕ್ಷಿತವಾಚ್ಯೇ ಶಬ್ದ ಏವ ವ್ಯಂಜಕಃ; ತಥಾಪಿ ಅರ್ಥಸ್ಯ ಸಹಕಾರಿತಾ ನ ತ್ರುಟ್ಯತಿ। ಅನ್ಯಥಾ, ಅಜ್ಞಾತಾರ್ಥೋಽಪಿ ಶಬ್ದಃ ತದ್ವ್ಯಂಜಕಃ ಸ್ಯಾತ್। ವಿವಕ್ಷಿತಾನ್ಯಪರವಾಚ್ಯೇ ಚ ಶಬ್ದಸ್ಯಾಪಿ ಸಹಕಾರಿತ್ವಂ ಭವತ್ಯೇವ। ವಿಶಿಷ್ಟಶಬ್ದಾಭಿಧೇಯತಯಾ ವಿನಾ ತಸ್ಯಾರ್ಥಸ್ಯಾವ್ಯಂಜಕತ್ವಾತ್ ಇತಿ ಸರ್ವತ್ರ ಶಬ್ದಾರ್ಥಯೋರ್ಧ್ವನನವ್ಯಾಪಾರಃ। ಏವಂ ಚ ಭಟ್ಟನಾಯಕೇನ ದ್ವಿವಚನಂ ಯದ್ದೂಷಿತಂ ತದ್ ಗಜನಿಮೀಲಕಯೈವ। ಅರ್ಥ: ಶಬ್ದೋ ವೇತಿ ತು ವಿಕಲ್ಪಾಭಿಧಾನಂ ಪ್ರಾಧಾನ್ಯಾಭಿಪ್ರಾಯೇಣ" ಇತಿ ಯದಾಹುಸ್ತದ್ ಭ್ರಾಂತಿಮಾತ್ರಮೂಲಂ, ನ ತತ್ತ್ವಮ್ ಇತ್ಯಲಮವಸ್ತುನಿರ್ಬಂಧೇನ।**

**ಅನುವಾದ:**

ಈ ವಿಷಯದಲ್ಲಿ ಕೆಲವರು ಪಂಡಿತಂಮನ್ಯರು ದ್ವಿವಚನವು ಸರಿಯೆಂದು ಸಮರ್ಥಿಸಲೇಬೇಕೆಂಬ ಮನೋರಥದಿಂದ ಆಕ್ರಾಂತಚಿತ್ತರಾಗಿ, ವಾಚ್ಯವಾಚಕಗಳಿಗಿರುವ

ಸುಪ್ರಸಿದ್ಧ ಪ್ರತೀತಿ ಕ್ರಮವನ್ನು ಮರೆತು ಅವೆರಡರ ಏಕಕಾಲಿಕತ್ವವನ್ನೂ, ನಾವು ಈ ಮೊದಲೇ ಹೇಳಿದ ಪ್ರಕಾರದಿಂದ ದೂರಕ್ಕೆ ಎಸೆಯಲ್ಪಟ್ಟ ವ್ಯಂಜಕತ್ವವನ್ನೂ ಶಬ್ದದಲ್ಲಿ ಕಾಣುವವರಾಗಿ, ಧ್ವನಿಯ ಎರಡು ಭೇದಗಳಾದ ಅವಿವಕ್ಷಿತವಾಚ್ಯ ಮತ್ತು ವಿವಕ್ಷಿತಾನ್ಯಪರವಾಚ್ಯಗಳಲ್ಲಿ ಧ್ವನನ ವ್ಯಾಪಾರವನ್ನು ಕುರಿತು ಶಬ್ದಾರ್ಥಗಳಿಗೆ ಪರ್ಯಾಯದಿಂದ ಪರಸ್ಪರ ಸಹಕಾರಿತ್ವವನ್ನೂ, ಅದರ ಕಾರಣದಿಂದ ಪ್ರಾಧಾನ್ಯ–ಅಪ್ರಾಧಾನ್ಯಗಳನ್ನೂ ಕಲ್ಪಿಸಿ, ವ್ಯಂಜನಾ ಎಂಬ ಕ್ರಿಯೆಯಲ್ಲಿ ಶಬ್ದಾರ್ಥಗಳೆರಡಕ್ಕೂ ಕರ್ತೃತ್ವ ಇರುವುದರಿಂದ ವ್ಯಂಕ್ತ: ಎಂದು ದ್ವಿವಚನನಿರ್ದೇಶ, ಪ್ರಾಧಾನ್ಯವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು 'ಯತ್ರಾರ್ಥ: ಶಬ್ದೋ ವಾ' ಎಂಬ ವಿಕಲ್ಪ ಎಂದು ಭಾವಿಸುವವರಾಗಿ ಹೀಗೆನ್ನುತ್ತಾರೆ:

"ವ್ಯಂಕ್ತಃ" ಎಂಬ ದ್ವಿವಚನದಿಂದ (ಆನಂದವರ್ಧನನು) ಹೇಳುವುದೇನೆಂದರೆ –ಅವಿವಕ್ಷಿತವಾಚ್ಯದಲ್ಲಿ ಶಬ್ದವೇ ವ್ಯಂಜಕ, ಆದರೂ (ವ್ಯಂಜನೆಯಲ್ಲಿ) ಅರ್ಥದ ಸಹಕಾರಿತ್ವಕ್ಕೆ ಕುಂದಿಲ್ಲ, ಹಾಗಿಲ್ಲದಿದ್ದರೆ ಯಾವ ಶಬ್ದದ ವಾಚ್ಯಾರ್ಥವೇ ತಿಳಿದಿಲ್ಲವೋ ಅದೂ ವ್ಯಂಜಕವಾಗಬೇಕಾಗಿತ್ತು, ವಿವಕ್ಷಿತಾನ್ಯಪರವಾಚ್ಯದಲ್ಲಿಯೂ ಶಬ್ದಕ್ಕೆ ಸಹಕಾರಿತ್ವ ಇದ್ದೇ ಇದೆ. ಏಕೆಂದರೆ ವಿಶಿಷ್ಟ ಶಬ್ದಗಳಿಂದ ಹೇಳಲ್ಪಡದೆ ಇದ್ದರೆ ಆ ಅರ್ಥಕ್ಕೆ ವ್ಯಂಜಕತ್ವವೇ ಇರುವುದಿಲ್ಲ –ಹೀಗೆ ಎಲ್ಲೆಡೆಯಲ್ಲೂ ಶಬ್ದಾರ್ಥಗಳೆರಡಕ್ಕೂ ಒಟ್ಟಿಗೆ ಧ್ವನನ (ವ್ಯಂಜನಾ) ಎಂಬ ವ್ಯಾಪಾರ. ಆದ್ದರಿಂದ ಭಟ್ಟನಾಯಕನು ದ್ವಿವಚನವನ್ನು ದೂಷಿಸಿರುವುದು ಕೇವಲ ಗಜನಿಮೀಲಿಕೆಯಿಂದ ಮಾತ್ರ. ಅರ್ಥ: ಶಬ್ದೋವಾ ಎಂದು ವಿಕಲ್ಪವನ್ನು ಹೇಳಿರುವುದು ಪ್ರಾಧಾನ್ಯದ ಅಭಿಪ್ರಾಯದಿಂದ.

ಹೀಗೆ ಅವರು ಹೇಳಿರುವುದು ಕೇವಲ ಭ್ರಾಂತಿಯಿಂದ. ಈ ಅವಸ್ತುನಿರ್ಬಂಧ ಸಾಕು.

**ವಿವರಣೆ:**

ವ್ಯಕ್ತಿವಿವೇಕದ ಈ ಪರಿಚ್ಛೇದವನ್ನು ಅರಿತುಕೊಳ್ಳಬೇಕಾದರೆ ಅಲಂಕಾರಶಾಸ್ತ್ರವು ಸಾಗಿಬಂದ ಹಾದಿಯನ್ನು ಸ್ವಲ್ಪ ನೋಡಬೇಕು. ಆನಂದವರ್ಧನನು ಒಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಧ್ವನ್ಯಾಲೋಕವನ್ನು ರಚಿಸಿ ವ್ಯಂಜನಾ ಎಂಬ ವೃತ್ತಿಯನ್ನು ಪ್ರತಿಷ್ಠಾಪಿಸಿದನು. ಆಮೇಲೆ (ಪ್ರಾಯಶಃ ಹತ್ತನೆಯ ಶತಮಾನದಲ್ಲಿ) ಭಟ್ಟನಾಯಕ ಎಂಬ ವಿದ್ವಾಂಸನು ಹೃದಯದರ್ಪಣ ಎಂಬ ಗ್ರಂಥವನ್ನು ರಚಿಸಿ ಧ್ವನ್ಯಾಲೋಕವನ್ನು ಖಂಡಿಸಿದ್ದನಂತೆ. ಆ ಗ್ರಂಥ ಇಂದು ಉಪಲಬ್ಧವಾಗಿಲ್ಲ. ಹನ್ನೊಂದನೆಯ ಶತಮಾನದ ಆದಿಯಲ್ಲಿ ಅಭಿನವಗುಪ್ತನಿಗೆ ಹೃದಯದರ್ಪಣ ಉಪಲಬ್ಧವಾಗಿತ್ತು. ಧ್ವನ್ಯಾಲೋಕಕ್ಕೆ ಲೋಚನವೆಂಬ ವ್ಯಾಖ್ಯಾನವನ್ನು ಬರೆಯುವಾಗ ಅಭಿನವಗುಪ್ತನು ಆನಂದವರ್ಧನನ ಮತವನ್ನು ಸಮರ್ಥಿಸಿ ಭಟ್ಟನಾಯಕನ ಅಭಿಪ್ರಾಯಗಳನ್ನೂ ಖಂಡಿಸಿದ್ದಾನೆ. ಅವನ ಅನಂತರ ಗ್ರಂಥವನ್ನು ರಚಿಸಿದ ಮಹಿಮಭಟ್ಟನು ಮತ್ತೆ ಧ್ವನ್ಯಾಲೋಕವನ್ನು ಖಂಡಿಸಿದ್ದಾನೆ. ಲೋಚನವ್ಯಾಖ್ಯಾನದ ಮಾತುಗಳನ್ನು ಉದ್ಧರಿಸಿ ಅಪಹಾಸ್ಯ ಮಾಡಿದ್ದಾನೆ. ಅವನು ಅಭಿನವಗುಪ್ತಾಚಾರ್ಯರಂಥ ಮಹಾಮೇಧಾವಿಗಳನ್ನು

ವಿದ್ವನ್‌ಮಾನಿ (=ಪಂಡಿತಂಮನ್ಯ) ಎಂದು ಕರೆದು ಲೇವಡಿ ಮಾಡಿರುವುದು ವಿಸ್ಮಯವನ್ನುಂಟು ಮಾಡುತ್ತದೆ. 'ವಿದ್ವನ್‌ಮಾನಿ' ಎಂದರೆ ವಸ್ತುತಃ ವಿದ್ವಾಂಸನಲ್ಲದೆ ಇದ್ದರೂ ತನ್ನನ್ನು ತಾನೇ ವಿದ್ವಾಂಸನೆಂದುಕೊಳ್ಳುವವನು ಎಂದರ್ಥ. ಹೀಗೆ ಆಲಂಕಾರಿಕರನ್ನು ನೈಯಾಯಿಕರು ತೆಗಳುವುದು ಆಗ ಸಂಪ್ರದಾಯವೇ ಆಗಿಬಿಟ್ಟಿತ್ತೆನಿಸುತ್ತದೆ. ನ್ಯಾಯಮಂಜರೀ ಎಂಬ ಗ್ರಂಥದಲ್ಲಿ ಜಯಂತಭಟ್ಟನು ಆನಂದವರ್ಧನನನ್ನು ಪಂಡಿತಂಮನ್ಯ (ತಾನೇ ಪಂಡಿತ ಎಂದು ಭಾವಿಸಿಕೊಳ್ಳುವ ದಡ್ಡ) ಎಂದು ಕರೆದಿದ್ದಾನೆ (ಯಮನ್ಯಃ ಪಂಡಿತಂಮನ್ಯಃ ಪ್ರಪೇದೇ ಕಂಚನ ಧ್ವನಿಮ್).

ಈ ಪರಿಚ್ಛೇದದಲ್ಲಿರುವ ಇನ್ನೊಂದು ವಿಶಿಷ್ಟ ಪದ 'ಗಜನಿಮೀಲಿಕಾ'. ಯಾವುದಾದರೂ ಘಟನೆಯನ್ನು ಕಂಡರೂ ಕಾಣದಂತೆ ಕಣ್ಣು ಮುಚ್ಚಿಕೊಂಡಿರುವುದನ್ನು ಗಜನಿಮೀಲಿಕಾ ಎಂದು ಕರೆಯುತ್ತಾರೆ. ಆನೆಯು ತನ್ನ ಬಳಿಯಲ್ಲೇ ಏನಾದರೂ ನಡೆಯುತ್ತಿದ್ದರೂ ಅದನ್ನು ಉಪೇಕ್ಷಿಸಿ ಕಣ್ಣುಮುಚ್ಚಿಕೊಂಡು ನಿಂತಿರುತ್ತದೆ ಎಂದು ಈ ಮಾತಿನ ಅಭಿಪ್ರಾಯ. ಭಟ್ಟನಾಯಕನೂ ಹಾಗೆ ವಾಸ್ತವವನ್ನು ಪರೀಕ್ಷಿಸದೆ ವ್ಯಂಕ್ತಃ ಎಂಬ ಕ್ರಿಯಾಪದದಲ್ಲಿ ಇರುವ ದ್ವಿವಚನವನ್ನು ದೂಷಿಸಿದ್ದಾನೆ ಎಂಬುದು ಅಭಿನವಗುಪ್ತನ ಮಾತು. ಹಾಗೆ ಹೇಳುವ ಅಭಿನವಗುಪ್ತನೇ ವಿದ್ವನ್ಮಾನಿ ಎಂದು ಮಹಿಮಭಟ್ಟ ಹಾಸ್ಯ ಮಾಡಿದ್ದಾನೆ.

(ತಚ್ಛಬ್ದದ ಪುಂಸ್ತ್ವನಿರ್ದೇಶ ತಪ್ಪು)

**ಕಿಂಚ ತಮಿತಿ ತದಃ ಪುಂಸ್ತ್ವೇನ ನಿರ್ದೇಶೋಽನುಪಪನ್ನಃ। ತಸ್ಯಾನಂತರ–ಪ್ರಕ್ರಾಂತಾರ್ಥಪರಾಮರ್ಶಿನಃ ತಲ್ಲಿಂಗತಾಪತ್ತೇಃ। ನ ಚಾತ್ರ ತಲ್ಲಿಂಗತಾವಿಶಿಷ್ಟಃ ಕಶ್ಚಿದರ್ಥಃ, ವಸ್ತುತೋ ನಪುಂಸಕಲಿಂಗಸ್ಯ ಅನಂತರಂ ಪ್ರಕ್ರಾಂತತ್ವಾತ್। ತೇನ ತತ್ರೈವ–**

**ಪ್ರತೀಯಮಾನಃ ಪುನರನ್ಯ ಏವ**
**ಸೋಽರ್ಥೋಽಸ್ತಿ ವಾಣೀಷು ಮಹಾಕವೀನಾಮ್।**
**ಯೋಽಸೌ ಪ್ರಸಿದ್ಧಾವಯವಾತಿರಿಕ್ತಃ**
**ಚಕಾಸ್ತಿ ಲಾವಣ್ಯಮಿವಾಂಗನಾಸು॥**

**ಇತಿ, "ಸರಸ್ವತೀ ಸ್ವಾದುತಮಂ ತಮರ್ಥಮ್" ಇತಿ ಚ ಪಾಠವಿಪರ್ಯಾಸಃ ಕರ್ತವ್ಯಃ।**

**ಅನುವಾದ:**

ಅಲ್ಲದೆ (ಧ್ವನಿಲಕ್ಷಣವಾಕ್ಯದಲ್ಲಿ) 'ತಮ್' ಎಂದು ತಚ್ಛಬ್ದದ ಪುಂಲಿಂಗನಿರ್ದೇಶವು ಅನುಚಿತ. ಅನಂತರ ಪ್ರಕ್ರಾಂತ (ನಿಕಟಪೂರ್ವ) ಅರ್ಥವನ್ನು ತಚ್ಛಬ್ದವು ಪರಾಮರ್ಶಿಸುವುದರಿಂದ ಅದರ ಲಿಂಗವನ್ನೇ ತಚ್ಛಬ್ದವು ಪಡೆಯಬೇಕು. ಪುಂಲಿಂಗವಿಶಿಷ್ಟವಾದ ಯಾವ ಅರ್ಥವೂ ಇಲ್ಲಿ ನಿಕಟಪೂರ್ವವಾಗಿ ಪ್ರಕ್ರಾಂತವಾಗಿಲ್ಲ. ಹಾಗೆ ಆಗಿರುವುದು (ಪ್ರತೀಯಮಾನಂ ಪುನರನ್ಯದೇವ ವಸ್ತ್ವಸ್ತಿ ಎಂಬಲ್ಲಿ) ನಪುಂಸಕಲಿಂಗ. ಆದ್ದರಿಂದ ಅಲ್ಲೇ "ಪ್ರತೀಯಮಾನಃ....." ಎಂದೂ, (ಸರಸ್ವತೀ ಸ್ವಾದು ತದರ್ಥವಸ್ತು ಎಂಬುದರ ಜಾಗದಲ್ಲಿ) "ಸರಸ್ವತೀಸ್ವಾದುತಮಂ ತಮರ್ಥಂ" ಎಂದೂ ಪಾಠವ್ಯತ್ಯಾಸವನ್ನು ಮಾಡಿಕೊಳ್ಳಬೇಕು.

**ನ ತ್ವತ್ರೈವ 'ವಸ್ತು ತದಿತಿ।' ತತ್ರೈವ ಹಿ ಪಾಠ ವಿಪರ್ಯಾಸೇ ಪರ್ಯಾಯಪ್ರಕ್ರಮಭೇದಃ, ಪುಂಸ್ತ್ವನಿರ್ದೇಶಶ್ಚ ಪರಿಹೃತೌ ಭವತಃ। ಅತ್ರ ತ್ವೇಕ ಏವ ತದಃ ಪುಂಸ್ತ್ವನಿರ್ದೇಶದೋಷಃ। ಏಷೈವ ಚ ಪ್ರಮೇಯಶಯ್ಯಾ ಶ್ರೇಯಸೀ।**

**ಅನುವಾದ:**

ಈ (ಧ್ವನಿಲಕ್ಷಣವಾದ ಯತ್ರಾರ್ಥಃ ಶಬ್ದೋ ವಾ ಎಂಬ ಶ್ಲೋಕದಲ್ಲಿ) 'ವಸ್ತು ತತ್' ಎಂಬ ಪಾಠ ವ್ಯತ್ಯಾಸವನ್ನು ಮಾಡಬಾರದು. ಏಕೆಂದರೆ ಅಲ್ಲಿ (ಪ್ರತೀಯಮಾನಂ ಪುನರನ್ಯದೇವ –ಎಂಬ ಪದ್ಯದಲ್ಲಿ) ಪಾಠವನ್ನು ಬದಲಾಯಿಸಿದರೆ ಪರ್ಯಾಯ ಪ್ರಕ್ರಮ ಭೇದ ಮತ್ತು ಪುಂಸ್ತ್ವನಿರ್ದೇಶ ಎಂಬ ಎರಡು ದೋಷಗಳೂ ಪರಿಹೃತವಾಗುತ್ತವೆ. ಇಲ್ಲಿ (ಪಾಠವನ್ನು ಬದಲಾಯಿಸಿದರೆ) ಪುಂಸ್ತ್ವನಿರ್ದೇಶ ಎಂಬ ಒಂದು ದೋಷ ಮಾತ್ರ (ಪರಿಹೃತವಾಗುತ್ತದೆ). ಆದ್ದರಿಂದ (ನಾವು ಹೇಳಿದ) ಈ ಪ್ರಮೇಯನಿರೂಪಣವೇ ಉತ್ತಮವಾದುದು.

**ವಿವರಣೆ:**

ಧ್ವನ್ಯಾಲೋಕದಲ್ಲಿ ವ್ಯಂಗ್ಯಾರ್ಥವನ್ನು ಕೆಲವು ಕಡೆಗಳಲ್ಲಿ ಪುಂಲಿಂಗದಲ್ಲೂ (ಯೋಽರ್ಥ: ಸಹೃದಯಶ್ಲಾಘ್ಯ:) ಮತ್ತೆ ಕೆಲವು ಕಡೆಗಳಲ್ಲಿ ನಪುಂಸಕಲಿಂಗದಲ್ಲೂ (ಪ್ರತೀಯಮಾನಂ ಪುನರನ್ಯದೇವ) ನಿರ್ದೇಶಿಸಲಾಗಿದೆ. ಇದರಿಂದ ಪ್ರಕ್ರಮಭಂಗ (ಯಾವ ರೀತಿಯಲ್ಲಿ ಆರಂಭಿಸಲಾಗಿದೆಯೋ ಅದೇ ರೀತಿಯಲ್ಲಿ ಮುಂದುವರಿಸದಿರುವ ಅಶಕ್ತಿ) ಎಂಬ ದೋಷ ಉಂಟಾಗಿದೆ. ಪೂರ್ವದಲ್ಲೇ ಪ್ರತೀಯಮಾನಃ ಪುನರನ್ಯ ಏವ ಎಂಬ ಬದಲಾವಣೆಯನ್ನು ಮಾಡಿಕೊಂಡರೆ ಆ ದೋಷದ ಪರಿಹಾರವೂ ಆಗುತ್ತದೆ ಎಂದು ಮಹಿಮಭಟ್ಟನು ಸೂಚಿಸಿದ್ದಾನೆ.

**ಅಪಿ ಚ ಕಾವ್ಯವಿಶೇಷ ಇತ್ಯತ್ರ ಕಾವ್ಯಸ್ಯ ವಿಶಿಷ್ಟತ್ವಮನುಪಪನ್ನಂ, ಕಾವ್ಯಮಾತ್ರಸ್ಯ ಧ್ವನಿವ್ಯಪದೇಶವಿಷಯತ್ವೇನೇಷ್ಟತ್ವಾತ್। ತಸ್ಯ ರಸಾತ್ಮಕತ್ವೋಪಗಮಾತ್। ಯತ್ ಸ ಏವಾಹ–**
**ಕಾವ್ಯಸ್ಯಾತ್ಮಾ ಸ ಏವಾರ್ಥಸ್ತಥಾ ಚಾದಿಕವೇ: ಪುರಾ।**
**ಕ್ರೌಂಚದ್ವಂದ್ವವಿಯೋಗೋತ್ಥ: ಶೋಕ: ಶ್ಲೋಕತ್ವಮಾಗತ: ॥ ಇತಿ ।**

**ಅನುವಾದ:**

ಅಲ್ಲದೆ ಕಾವ್ಯವಿಶೇಷ ಎಂದು ಕಾವ್ಯದ ವೈಶಿಷ್ಟ್ಯವನ್ನು ಹೇಳಿರುವುದೂ ತಪ್ಪು, ಏಕೆಂದರೆ ಎಲ್ಲ ಕಾವ್ಯವನ್ನು ಧ್ವನಿ ಎಂದು ಕರೆಯುವುದು ಅಭಿಮತ. ಕಾವ್ಯ ಎಂದರೆ ರಸಾತ್ಮಕ ಎಂದು ಒಪ್ಪಿಕೊಳ್ಳಲಾಗಿದೆಯಷ್ಟೆ. ಆನಂದವರ್ಧನನೇ ಹೇಳಿದ್ದಾನೆ–

"ಕಾವ್ಯದ ಆತ್ಮ (ರಸಾದಿರೂಪವಾದ) ಆ ಅರ್ಥವೇ ಆಗಿದೆ. ಹಿಂದೆ ಆದಿಕವಿಯ (ಮನಸ್ಸಿನಲ್ಲಿ) ಕ್ರೌಂಚಪಕ್ಷಿಗಳ ವಿಯೋಗದಿಂದ ಉಕ್ಕಿದ ಶೋಕವೇ ಶ್ಲೋಕರೂಪವನ್ನು ಪಡೆಯಿತು."

**ವಿವರಣೆ:**

ಆದಿಕಾವ್ಯ ರಾಮಾಯಣದ ಮುಖ್ಯರಸ ಕರುಣ. ಕಾವ್ಯದ ಆರಂಭದಲ್ಲೇ ಇದನ್ನು ಕ್ರೌಂಚವಧಪ್ರಸಂಗದಿಂದ ಸೂಚಿಸಲಾಗಿದೆ. ಶೋಕ: ಶ್ಲೋಕತ್ವಮಾಗತಃ ಎಂಬ ಮಾತು ಅದನ್ನು

ದೃಢಪಡಿಸಿದೆ. ಅದನ್ನೇ ಕಾಳಿದಾಸನೂ ರಘುವಂಶದಲ್ಲಿ ಶ್ಲೋಕತ್ವಮಾಪದ್ಯತ ಯಸ್ಯ ಶೋಕಃ ಎಂದು ಉಲ್ಲೇಖಿಸಿದ್ದಾನೆ. ರಸಾತ್ಮಕವಾದ ವಾಕ್ಯವೇ ಕಾವ್ಯ ಎಂದು ಒಪ್ಪಿಕೊಂಡಾಗ ನೀರಸವಾದುದು ಕಾವ್ಯವೇ ಅಲ್ಲ ಎಂದು ಸಿದ್ಧವಾಯಿತು. ರಸಾತ್ಮಕವಾದುದು ಧ್ವನಿ ಎಂಬ ಹೆಸರಿಗೆ ಅರ್ಹವಾದುದರಿಂದ ಕಾವ್ಯಸಾಮಾನ್ಯವೇ ಧ್ವನಿ. ಆದ್ದರಿಂದ ಕಾವ್ಯವಿಶೇಷ ಧ್ವನಿ ಎಂದು ಲಕ್ಷಣವಾಕ್ಯದಲ್ಲಿ ವಿಶೇಷಶಬ್ದವನ್ನು ಬಳಸಿರುವುದು ತಪ್ಪು ಎಂಬುದು ಮಹಿಮಭಟ್ಟನ ವಾದ.

ಆನಂದವರ್ಧನನು ಧ್ವನಿ, ಗುಣೀಭೂತವ್ಯಂಗ್ಯ, ಚಿತ್ರ ಎಂಬ ಮೂರು ವಿಧವಾಗಿ ಕಾವ್ಯವನ್ನು ವಿಂಗಡಿಸಿದ್ದಾನೆ. ವ್ಯಂಗ್ಯಾರ್ಥವಿದ್ದರೂ ಅದಕ್ಕೆ ಪ್ರಾಧಾನ್ಯವಿಲ್ಲದಿದ್ದರೆ ಗುಣೀಭೂತವ್ಯಂಗ್ಯ. ವ್ಯಂಗ್ಯಾರ್ಥಶೂನ್ಯವಾದರೆ ಚಿತ್ರ. ಚಿತ್ರದಲ್ಲಿ ಕಾವ್ಯಶಬ್ದದ ಪ್ರಯೋಗ ಔಪಚಾರಿಕ, ವಾಸ್ತವವಲ್ಲ.

**ಪ್ರಧಾನಗುಣಭಾವಾಭ್ಯಾಂ ವ್ಯಂಗ್ಯಸ್ಯೈವಂ ವ್ಯವಸ್ಥಿತೇ।**
**ಕಾವ್ಯೇ ಉಭೇ ತತೋಽನ್ಯದ್‌ಯತ್ ತಚ್ಚಿತ್ರಮಭಿಧೀಯತೇ ॥**

ಎಂಬುದು ಧ್ವನ್ಯಾಲೋಕದ ಸಿದ್ಧಾಂತ. ಲೋಕದಲ್ಲಿ ಈ ಮೂರು ವಿಧವಾದ ರಚನೆಗಳಿಗೂ ಕಾವ್ಯ ಎಂಬ ಶಬ್ದವನ್ನೇ ಬಳಸುವುದರಿಂದ ಧ್ವನಿಯನ್ನು ಪೃಥಕ್ಕರಿಸಲು ಕಾವ್ಯವಿಶೇಷ: ಎಂದು ಆನಂದವರ್ಧನನು ಸ್ಪಷ್ಟಪಡಿಸಿದ್ದಾನೆ.

**ನ ಚ ತಸ್ಯ ವಿಶೇಷಃ ಸಂಭವತಿ, ನಿರತಿಶಯ–**
**ಸುಖಾಸ್ವಾದಲಕ್ಷಣತ್ವಾತ್ ತಸ್ಯ। ಯದಾಹುಃ–**
**ಪಾಠ್ಯಾದಥ ಧ್ರುವಾಗಾನಾತ್ ತತಃ ಸಂಪೂರಿತೇ ರಸೇ।**
**ತದಾಸ್ವಾದಭರೈಕಾಗ್ರ್ಯೋ ಹೃಷ್ಯತ್ಯಂತರ್ಮುಖಃ ಕ್ಷಣಮ್॥**
**ತತೋ ನಿರ್ವಿಷಯಸ್ಯಾಸ್ಯ ಸ್ವರೂಪಾವಸ್ಥಿತೌ ನಿಜಃ।**
**ವ್ಯಜ್ಯತೇ ಹ್ಲಾದನಿಷ್ಯಂದೋ ಯೇನ ತೃಪ್ಯಂತಿ ಯೋಗಿನಃ॥**
**ಇತಿ। ತದಭಾವೇ ಚಾಸ್ಯ ಕಾವ್ಯತೈವ ನ ಸ್ಯಾತ್।**
**ಕಿಮುತ ವಿಶೇಷ ಇತಿ ಅನಾರಂಭಣೀಯಮೇವೈತತ್**
**ಪ್ರೇಕ್ಷಾವತಾಂ ಸ್ಯಾದ್ ವೈಫಲ್ಯಾತ್ ।**

**ಅನುವಾದ:**

ಆ ರಸದ ವಿಶೇಷವು ಅಸಂಭವ, ಏಕೆಂದರೆ ಅದು ನಿರತಿಶಯ ಸುಖಾಸ್ವಾದಲಕ್ಷಣ. (ಪ್ರಾಚೀನರೂ) ಹೇಳುತ್ತಾರೆ: "ಪಾಠ್ಯದಿಂದಲೂ ಧ್ರುವೆಗಳ ಗಾನದಿಂದಲೂ ರಸವು ತುಂಬಿಕೊಂಡಾಗ ಅದರ ಆಸ್ವಾದದಲ್ಲೇ ಏಕಾಗ್ರತೆಯನ್ನು ಹೊಂದಿ (ಪ್ರೇಕ್ಷಕನು ಅಥವಾ ವಾಚಕನು) ಅಂತರ್ಮುಖನಾಗಿ ಒಂದು ಕ್ಷಣ ಆನಂದಿಸುತ್ತಾನೆ. ಆಗ ಅವನು ಸಕಲವಿಷಯದೂರನಾಗಿ ಸ್ವರೂಪಾವ ಸ್ಥಿತಿಯಲ್ಲಿದ್ದಾಗ ಅವನಲ್ಲಿ ಆನಂದನಿಷ್ಯಂದವೇ ಉಂಟಾಗುವುದು. ಯೋಗಿಗಳು (ನಿರ್ವಿಕಲ್ಪ ಸಮಾಧಿಯಲ್ಲಿ) ಯಾವ ಆನಂದವನ್ನು ಅನುಭವಿಸುವರೋ (ಅದೇ ಆನಂದವು ಸಹೃದಯನಿಗೆ ದಕ್ಕುವುದು)". ಆ ರಸವಿಲ್ಲದಿದ್ದರೆ (ರಚನೆಗೆ) ಕಾವ್ಯತ್ವವೇ ಇಲ್ಲ. ಇನ್ನು ವಿಶೇಷವೆಲ್ಲಿಂದ ಬಂದೀತು? ಈ ಕಾರಣದಿಂದ ಅಂಥ ಕಾವ್ಯ ಪ್ರೇಕ್ಷಾವಂತರಿಗೆ ಆರಂಭಯೋಗ್ಯವೇ ಆಗದು, ವಿಫಲತೆಯ ಕಾರಣದಿಂದ.

**ಕವಿವ್ಯಾಪಾರೋ ಹಿ ವಿಭಾವಾದಿ ಸಂಯೋಜನಾತ್ಮಾ ರಸಾಭಿವ್ಯಕ್ತ್ಯವ್ಯಭಿಚಾರೀ ಕಾವ್ಯಮುಚ್ಯತೇ। ತಚ್ಚ ಅಭಿನೇಯ-ಅನಭಿನೇಯಾರ್ಥತ್ವೇನ ದ್ವಿವಿಧಮ್। ಸಾಮಾನ್ಯೇನೋಭಯಮಪಿ ತತ್ ಶಾಸ್ತ್ರವತ್ ವಿಧಿನಿಷೇಧವಿಷಯವ್ಯುತ್ಪತ್ತಿಫಲಮ್। ಕೇವಲಂ ವ್ಯುತ್ಪಾದ್ಯಜನಜಾಡ್ಯಾಜಾಡ್ಯತಾರತಮ್ಯಾಪೇಕ್ಷಯಾ ಕಾವ್ಯನಾಟ್ಯಶಾಸ್ತ್ರರೂಪೋಽಯಮ್ ಉಪಾಯಮಾತ್ರ ಭೇದೋ, ನ ಫಲಭೇದಃ ।**

**ಅನುವಾದ:**

ರಸಾಭಿವ್ಯಕ್ತಿಗೆ ಎಂದೂ ವ್ಯಭಿಚಾರಿಯಲ್ಲದ (ಎಂದರೆ ನಿಯತವಾಗಿ ರಸಾಭಿವ್ಯಕ್ತಿಗೆ ಕಾರಣವಾಗುವ) ವಿಭಾವ (ಅನುಭಾವ ಮತ್ತು ಸಂಚಾರಿಭಾವ)ಗಳ ಸಂಯೋಜನಾಸ್ವರೂಪವಾದ ಕವಿವ್ಯಾಪಾರವೇ ಕಾವ್ಯವೆಂದು ಕರೆಸಿಕೊಳ್ಳುತ್ತದೆ. ಅದು ಅಭಿನೇಯಾರ್ಥ (ದೃಶ್ಯ), ಅನಭಿನೇಯಾರ್ಥ (ಶ್ರವ್ಯ) ಎಂದು ಎರಡು ವಿಧ. ಸಾಮಾನ್ಯವಾಗಿ ಆ ಎರಡು ಪ್ರಕಾರದ ಕಾವ್ಯವೂ ಶಾಸ್ತ್ರದಂತೆ ವಿಧಿ, ನಿಷೇಧ ಎಂಬವುಗಳಲ್ಲಿ ವ್ಯುತ್ಪತ್ತಿಯನ್ನುಂಟುಮಾಡುವುದನ್ನೇ ಫಲವನ್ನಾಗಿ ಉಳ್ಳದ್ದು. ವ್ಯುತ್ಪಾದನೀಯರಾದ ಜನರ ಜಾಡ್ಯ-ಅಜಾಡ್ಯಗಳ ತಾರತಮ್ಯವನ್ನವಲಂಬಿಸಿ ಅದು ಕಾವ್ಯ, ನಾಟ್ಯ, ಶಾಸ್ತ್ರ ಎಂದು (ಭಿನ್ನವಾಗಿದೆ). ಉಪಾಯ ಮಾತ್ರ ಭಿನ್ನ, ಫಲಭೇದ ಇಲ್ಲ.

**ವಿವರಣೆ:**

ಜಡಮತಿಗಳಿಗೆ ಕಾವ್ಯ, ನಾಟ್ಯ, ಸೂಕ್ಷ್ಮಮತಿಗಳಿಗೆ ಶಾಸ್ತ್ರ. ಹೀಗೆ ನಡೆದುಕೊಳ್ಳಬೇಕು ಎಂಬ ವಿಧಿ, ಹಾಗೆ ನಡೆದುಕೊಳ್ಳಬಾರದು ಎಂಬ ನಿಷೇಧ –ಇವುಗಳ ಜ್ಞಾನವೇ ಮೂರು ವಿಧವಾದ ಸಾಹಿತ್ಯಕ್ಕೂ ಫಲ.

**ತತ್ರಾದ್ಯಂ ಪ್ರಖ್ಯಾತರಾಮರಾವಣಾದಿನಾಯಕಪ್ರತಿನಾಯಕ ಸಮಾಶ್ರಯೇಣ ಪ್ರಸಿದ್ಧವಿಧಿನಿಷೇಧಾಸ್ಪದಚರಿತ ವರ್ಣನಮಾತ್ರಾತ್ಮಕಮ್। ಅಪರಂ ಪುನರನುಕಾರಕ್ರಮೇಣ ಸಾಕ್ಷಾತ್ ತತ್ಪ್ರದರ್ಶನಾತ್ಮಕಮ್। ಯದಾಹುಃ ಅನುಭಾವವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ। ತೇಷಾಮೇವ ಪ್ರಯೋಗಸ್ತು ನಾಟ್ಯಂ ಗೀತಾದಿರಂಜಿತಮ್ ॥**

**ಅನುವಾದ:**

ಅವುಗಳಲ್ಲಿ ಮೊದಲನೆಯದಾದ (ಕಾವ್ಯವು) ಪ್ರಖ್ಯಾತರಾದ ರಾಮ-ರಾವಣ ಮುಂತಾದ ನಾಯಕ-ಪ್ರತಿನಾಯಕರನ್ನು ಆಶ್ರಯಿಸಿ ಮಾಡಲಾಗುವ ವಿಧಿ-ನಿಷೇಧಗಳ (ಬೋಧನೆಗೆ) ಆಸ್ಪದವಾಗುವ ಚರಿತದ ವರ್ಣನೆಯನ್ನು ಮಾತ್ರ ಮಾಡುವುದು. ಮತ್ತೊಂದು (ನಾಟ್ಯವು) ಅನುಕರಣ ಕ್ರಮದಿಂದ ಸಾಕ್ಷಾತ್ತಾಗಿ (ಆ ರಾಮ-ರಾವಣಾದಿಚರಿತವನ್ನು ರಂಗದ ಮೇಲೆ) ತೋರಿಸುವಂಥದು. (ಪ್ರಾಚೀನರೂ) ಹೇಳಿದ್ದಾರೆ– "ಅನುಭಾವಗಳ ಮತ್ತು ವಿಭಾವಗಳ ವರ್ಣನೆಯನ್ನು ಕಾವ್ಯವೆಂದು ಕರೆಯುತ್ತಾರೆ. ಅವುಗಳ ಪ್ರಯೋಗ (ಎಂದರೆ ರಂಗದ ಮೇಲೆ

ಪ್ರದರ್ಶನ)ವನ್ನು, ಗೀತ ಇತ್ಯಾದಿಗಳಿಂದ ರಂಜಿತವಾಗಿದ್ದಾಗ ನಾಟ್ಯವೆಂದು ಕರೆಯುತ್ತಾರೆ".

(ಕೋಮಲಮತಿಗಳಿಗಾಗಿ ಕಾವ್ಯ)

**ಏವಂ ಚ ಯೇ ಸುಕುಮಾರಮತಯಃ ಶಾಸ್ತ್ರಶ್ರವಣಾದಿ ವಿಮುಖಾಃ ಸುಖಿನೋ ರಾಜಪುತ್ರಪ್ರಭೃತಯಃ ಪೂರ್ವತ್ರಾಧಿಕೃತಾಃ, ಯೇ ಚಾತ್ಯಂತತೋಽಪಿ ಜಡಮತಯಸ್ತಾವತಾ ವ್ಯುತ್ಪಾದಯಿತುಮಶಕ್ಯಾಃ ಸ್ತ್ರೀನೃತ್ಯಾತೋದ್ಯಾದಿಪ್ರಸಕ್ತಾಃ, ಉಭಯೇಽಪಿ ತೇ ಅಭಿಮತವಸ್ತುಪುರಸ್ಕಾರೇಣ ಗುಡಜಿಹ್ವಿಕಯಾ ರಸಾದ್ವಾದಸುಖಂ ಮುಖೇ ದತ್ವಾ ತತ್ರ ಕಟುಕೌಷಧ ಪಾನಾದಾವಿವ ಪ್ರವರ್ತನೀಯಾಃ। ಅನ್ಯಥಾ ಪ್ರವೃತ್ತಿರೇವೈಷಾಂ ನ ಸ್ಯಾತ್। ಕಿಮುತ ವ್ಯುತ್ಪತ್ತಿಃ?**

**ಅನುವಾದ:**

ಹೀಗೆ ಅತಿಸುಕುಮಾರಮತಿಗಳಾಗಿದ್ದು ಸುಖಾಪೇಕ್ಷಿಗಳೂ ಶಾಸ್ತ್ರಶ್ರವಣಾದಿಗಳಿಗೆ ವಿಮುಖರೂ ಆಗಿರುವ ರಾಜಪುತ್ರ ಮುಂತಾದವರಿಗೆ ಕಾವ್ಯಗಳಲ್ಲಿ ಅಧಿಕಾರ (ಎಂದರೆ ಕಾವ್ಯವನ್ನು ಕೇಳಲು ಅರ್ಹತೆ). ಮತ್ತೆ ಕೆಲವರು ಅತ್ಯಂತ ಜಡಮತಿಗಳಾಗಿದ್ದು ಅದರಿಂದಲೂ ಬೋಧನೆಯನ್ನು ಪಡೆಯಲು ಅಶಕ್ತರಾಗಿದ್ದು ಸ್ತ್ರೀ, ನೃತ್ಯ, ವಾದ್ಯ ಇತ್ಯಾದಿಗಳಲ್ಲೇ ಆಸಕ್ತರಾಗಿರುತ್ತಾರೆ. ಆ ಎರಡು ಗುಂಪಿನವರನ್ನೂ ಅವರಿಗೆ ಅಭಿಮತವಾದ ವಸ್ತುವನ್ನೇ ಮುಂದಿಟ್ಟು ಗುಡಜಿಹ್ವಿಕಾನ್ಯಾಯದಿಂದ (ಎಂದರೆ ಔಷಧವನ್ನು ನುಂಗಲು ಇಚ್ಛಿಸದವರಿಗೆ ಬೆಲ್ಲವನ್ನು ಸವರಿದ ಕಹಿಮಾತ್ರೆಯನ್ನು ನುಂಗಿಸುವಂತೆ) ಮೊದಲು ರಸಾಸ್ವಾದ ಸುಖವನ್ನು ಕೊಟ್ಟು ಆಮೇಲೆ ಕಹಿಯಾದ ಔಷಧವನ್ನು ಕುಡಿಸುವ ಪರಿಯಲ್ಲಿ (ವಿಧಿ–ನಿಷೇಧಗಳ ವ್ಯುತ್ಪತ್ತಿಯಲ್ಲಿ) ಪ್ರೇರಿಸಬೇಕು. ಇಲ್ಲದಿದ್ದರೆ ಅವರಿಗೆ ಪ್ರವೃತ್ತಿಯೇ ಉಂಟಾಗದು. ವ್ಯುತ್ಪತ್ತಿ ಎಲ್ಲಿಂದ ಬಂದೀತು?

**ಕಾವ್ಯಾರಂಭಸ್ಯ ಸಾಫಲ್ಯಮಿಚ್ಛತಾ ತತ್ಪ್ರವೃತ್ತಿನಿಬಂಧನಭಾವೇನ ಅಸ್ಯ ರಸಾತ್ಮಕತ್ವಮ್ ಅವಶ್ಯಮ್ ಉಪಗಂತವ್ಯಮ್। ತನ್ಮಾತ್ರಪ್ರಯುಕ್ತಶ್ಚ ಧ್ವನಿವ್ಯಪದೇಶಃ। ನ ಚ ರಸಾನಾಂ ವೈಶಿಷ್ಟ್ಯೇ ತದಾತ್ಮನಃ ಕಾವ್ಯಸ್ಯ ವಿಶಿಷ್ಟತ್ವಮಿತಿ ಯುಕ್ತಂ ವಕ್ತುಮ್, ಅವ್ಯಾಪ್ತೇಃ। ಏವಂ ಹಿ ಪ್ರತಿನಿಯತರಸಾತ್ಮನ ಏವ ತಸ್ಯ ಧ್ವನಿತ್ವಂ ಸ್ಯಾತ್। ನಾನ್ಯಸ್ಯಾನ್ಯರಸಾತ್ಮನಃ ವೈಶಿಷ್ಟ್ಯಾಭಾವಾತ್। ಇಷ್ಯತೇ ಚ ತತ್ರಾಪೀತ್ಯವ್ಯಾಪ್ತಿರ್ಲಕ್ಷಣದೋಷಃ।**

**ಅನುವಾದ:**

ಕಾವ್ಯದ ರಚನೆ ಸಫಲವಾಗಬೇಕು ಎಂದು ಅಪೇಕ್ಷಿಸುವ ಕವಿಯು ಅಂಥವರ (ಸುಕುಮಾರಮತಿಗಳ) ಪ್ರವೃತ್ತಿಗೆ ಕಾರಣವಾಗಲಿ ಎಂದು ಕಾವ್ಯದ ರಸಾತ್ಮಕತ್ವವನ್ನು ಅವಶ್ಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಆ ರಸವನ್ನು ಅವಲಂಬಿಸಿಯೇ 'ಧ್ವನಿ' ಎಂಬ ವ್ಯವಹಾರ.

ರಸಗಳಲ್ಲಿ (ಕೆಲವಕ್ಕೆ) ವೈಶಿಷ್ಟ್ಯ ಇರುವ ಕಾರಣದಿಂದ, ರಸಾತ್ಮಕವಾದ ಕಾವ್ಯಕ್ಕೆ ವೈಶಿಷ್ಟ್ಯ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಅವ್ಯಾಪ್ತಿ ಎಂಬ ದೋಷ ಬರುತ್ತದೆ. ಹಾಗೆ ಹೇಳಿದಾಗ ನಿರ್ದಿಷ್ಟವಾದ ಯಾವುದೋ ರಸವನ್ನು ಹೊಂದಿರುವ ಕಾವ್ಯ ಮಾತ್ರ 'ಧ್ವನಿ' ಆದೀತು, ಬೇರೆ ರಸವನ್ನುಳ್ಳ ಕಾವ್ಯಕ್ಕೆ ಧ್ವನಿತ್ವ ಇಲ್ಲವಾದೀತು, ಏಕೆಂದರೆ ಅದರಲ್ಲಿ ವೈಶಿಷ್ಟ್ಯವಿಲ್ಲ! ವಸ್ತುತಃ ಧ್ವನಿತ್ವವು ಅಲ್ಲಿಯೂ ಅಭಿಮತ. ಆದ್ದರಿಂದ ಧ್ವನಿಲಕ್ಷಣದಲ್ಲಿ ಅವ್ಯಾಪ್ತಿ ಎಂಬ ದೋಷ.

**ಅತ ಏವ ಚ ನ ಗುಣಾಲಂಕಾರಸಂಸ್ಕೃತಶಬ್ದಾರ್ಥಮಾತ್ರಶರೀರಂ ತಾವತ್ ಕಾವ್ಯಮ್। ತಸ್ಯ ಯಥೋಕ್ತವ್ಯಂಗ್ಯಾರ್ಥೋಪನಿಬಂಧೇ ಸತಿ ವಿಶಿಷ್ಟತ್ವಮಿತಿ ಶಕ್ಯಂ ವಕ್ತುಮ್। ತಸ್ಯ ರಸಾತ್ಮತಾಭಾವೇ ಮುಖ್ಯವೃತ್ತ್ಯಾ ಕಾವ್ಯವ್ಯಪದೇಶ ಏವ ನ ಸ್ಯಾತ್, ಕಿಮುತ ವಿಶಿಷ್ಟತ್ವಮ್?**

**ಅನುವಾದ:**

ಆದ್ದರಿಂದಲೇ "ಗುಣಗಳಿಂದಲೂ ಅಲಂಕಾರಗಳಿಂದಲೂ ಕೂಡಿದ ಶಬ್ದಾರ್ಥಗಳನ್ನು ಶರೀರವನ್ನಾಗಿ ಪಡೆದಿರುವುದೇ ಕಾವ್ಯ, ಅದಕ್ಕೆ ನಾವು (ಆನಂದವರ್ಧನಾದಿಗಳು) ಹೇಳಿರುವ ವ್ಯಂಗ್ಯಾರ್ಥವನ್ನು ತುಂಬಿದರೆ ಅದು ವಿಶಿಷ್ಟಕಾವ್ಯ ಆಗುತ್ತದೆ" ಎಂದು ಹೇಳುವುದೂ ಶಕ್ಯವಲ್ಲ. ಏಕೆಂದರೆ ಅಂಥ ರಚನೆಯು ರಸಾತ್ಮಕವಾಗಿಲ್ಲದಿದ್ದರೆ ಮುಖ್ಯ ವೃತ್ತಿಯಿಂದ ಅದನ್ನು ಕಾವ್ಯ ಎಂದು ವ್ಯವಹರಿಸುವುದೇ ಆಗದು, ಇನ್ನು ಅದರ ವಿಶಿಷ್ಟತ್ವ ಎಲ್ಲಿಂದ ಬಂದೀತು?

**ವಿವರಣೆ:**

ಇಲ್ಲಿ ಮಹಿಮಭಟ್ಟನು ರಸಸಂಪ್ರದಾಯವನ್ನು ಬಲವತ್ತಾಗಿ ಸಮರ್ಥಿಸಿದ್ದಾನೆ. ಸಾಹಿತ್ಯದರ್ಪಣಕಾರ ವಿಶ್ವನಾಥನಿಗೆ ಇದು ಸ್ಫೂರ್ತಿಯನ್ನಿತ್ತಿದೆ. ಆದರೆ ಅಲಂಕಾರ ಪ್ರಾಧಾನ್ಯವಾದಿಗಳಾದ ಪೀಯೂಷವರ್ಷ ಜಯದೇವ ಇತ್ಯಾದಿಗಳು ಈ ಮಾತನ್ನು ಒಪ್ಪಲಾರರು ಎನಿಸುತ್ತದೆ. ರಸಗಂಗಾಧರವನ್ನು ಬರೆದ ಜಗನ್ನಾಥನೂ 'ವಾಕ್ಯಂ ರಸಾತ್ಮಕಂ ಕಾವ್ಯಮ್' ಎಂಬುದನ್ನು ಒಪ್ಪಿಲ್ಲ.

**ನ ಚ ರಸಾತ್ಮನಃ ಕಾವ್ಯಸ್ಯ ವಸ್ತುಮಾತ್ರಾದಿಭಿರ್ವಿಶೇಷಃ ಶಕ್ಯ(ಮ್) ಆಧಾತುಂ, ತೇಷಾಂ ವಿಭಾವಾದಿರೂಪತಯಾ ರಸಾಭಿವ್ಯಕ್ತಿಹೇತುತ್ವೋಪಗಮಾತ್। ನ ಚ ವ್ಯಂಜಕಾನಾಂ ವೈಚಿತ್ರ್ಯೇ ವ್ಯಂಗ್ಯಸ್ಯ ವಿಶೇಷೋಽಭ್ಯುಪಗಂತುಂ ಯುಕ್ತಃ ಶಾಬಲೇಯಾದೀನಾಮಿವ ಗೋತ್ವಸ್ಯ।**

**ಅನುವಾದ:**

ರಸಾತ್ಮಕವಾದ ಕಾವ್ಯಕ್ಕೆ ವಸ್ತು ಮಾತ್ರದಿಂದ ವಿಶೇಷವನ್ನು ಉಂಟುಮಾಡುವುದು ಶಕ್ಯವಲ್ಲ. ಏಕೆಂದರೆ ಆ ವಸ್ತುಮಾತ್ರ ಇತ್ಯಾದಿಗಳು ವಿಭಾವಾದಿ ರೂಪದಲ್ಲಿದ್ದು ರಸದ ಅಭಿವ್ಯಕ್ತಿಗೆ ಅವು ಕಾರಣಗಳು ಎಂದು (ಶಾಸ್ತ್ರದಲ್ಲಿ) ಒಪ್ಪಿಕೊಳ್ಳಲಾಗಿದೆ. ವ್ಯಂಜಕಗಳ ವಿಚಿತ್ರತೆಯ ಆಧಾರದಿಂದ ವ್ಯಂಗ್ಯದಲ್ಲಿ ವಿಶೇಷವು ಉಂಟಾಗುವುದೆಂದು ಒಪ್ಪಿಕೊಳ್ಳಲಾಗದು. ಹಸುಗಳು ನಾನಾವರ್ಣವನ್ನು ಹೊಂದಿರುವುದರಿಂದ ಗೋತ್ವದಲ್ಲಿ ವಿಶೇಷವಿರುವುದಿಲ್ಲವಷ್ಟೆ.

**ವಿವರಣೆ:**

ವಿಭಾವಾದಿಗಳು ರಸದ ವ್ಯಂಜಕಗಳು. ಅವುಗಳಲ್ಲಿ ವಿಚಿತ್ರತೆ ಉಂಟಾದರೂ ಅವುಗಳಿಂದ ವ್ಯಂಗ್ಯವಾಗುವ ರಸದಲ್ಲಿ ಮತ್ತು ತದಾತ್ಮಕವಾದ ಕಾವ್ಯದಲ್ಲಿ ಯಾವ ವಿಶೇಷವೂ ಹುಟ್ಟುವುದಿಲ್ಲ. ಅನೇಕ ಬಣ್ಣಗಳ ಮತ್ತು ಗಾತ್ರಗಳ ಗೋವುಗಳಿದ್ದರೂ ಗೋತ್ವವು ಒಂದೇ. ಒಂದು ಹಸು ಕಪಿಲಾ, ಇನ್ನೊಂದು ಶಬಲಾ (ಹಲವು ಬಣ್ಣಗಳನ್ನು ಹೊಂದಿರುವುದು) ಆದರೂ ಅವುಗಳಲ್ಲಿರುವ ಗೋತ್ವಕ್ಕೆ ಯಾವ ವಿಶೇಷವೂ ಉಂಟಾಗುವುದಿಲ್ಲ. ಅಂತೆಯೇ ವ್ಯಂಜಕಗಳಾದ ವಿಭಾವಾದಿಗಳಲ್ಲಿ ವೈಚಿತ್ರ್ಯವಿದ್ದರೂ, ವ್ಯಂಗ್ಯ ರಸ ಒಂದೇ.

**ತತೋಽಸ್ಯ ವಿಶಿಷ್ಟತೋಪಗಮೇ ವಾ ಯತ್ರ ತಯೋರುಭಯೋರೇಕೈಕಸ್ಯ ವಾ ವ್ಯಂಗ್ಯತಾ ತತ್ರೈವ ಧ್ವನಿವ್ಯಪದೇಶಃ ಸ್ಯಾತ್, ನ ಕೇವಲರಸಾತ್ಮನಿ ಕಾವ್ಯೇ, ವೈಶಿಷ್ಟ್ಯಾಭಾವಾತ್ । ಇಷ್ಯತೇ ಚ ಸ ತತ್ರಾಪಿ । ಪ್ರಹೇಲಿಕಾದೌ ಚ ನೀರಸೇ ಸ್ಯಾತ್ । ತತ್ರಾಪ್ಯುಕ್ತಕ್ರಮೇಣ ವಸ್ತುಮಾತ್ರಾದೇರಭಿವ್ಯಂಗ್ಯತ್ವೇನೇಷ್ಟತ್ವಾತ್ । ಇತ್ಯನ್ವಯವ್ಯತಿರೇಕಾಭ್ಯಾಂ ಕಾವ್ಯತ್ವಮಾತ್ರಪ್ರಯುಕ್ತೋಽಸಾವಿತ್ಯನುಮೀಯತೇ ।**

**ಅನುವಾದ:**

(ವ್ಯಂಜಕಗಳಾದ ವಿಭಾವಾದಿಗಳ) ವೈಚಿತ್ರ್ಯದಿಂದ ರಸಾತ್ಮಕವಾದ ವೈಶಿಷ್ಟ್ಯ ಉಂಟಾಗುವುದೆಂದು ಒಪ್ಪಿಕೊಂಡರೂ, ಎಲ್ಲಿ ಅವೆರಡರ ಅಥವಾ ಒಂದೊಂದರ ವ್ಯಂಗ್ಯತೆಯುಂಟೋ ಅಲ್ಲಿ ಮಾತ್ರ 'ಧ್ವನಿ' ಎಂಬ ವ್ಯವಹಾರವನ್ನು ಮಾಡಬೇಕಾದೀತು, ಕೇವಲ ರಸಾತ್ಮಕವಾದ ಕಾವ್ಯದಲ್ಲಿ 'ಧ್ವನಿ' ಎಂಬ ವ್ಯವಹಾರ ಇಲ್ಲವಾದೀತು. ಅದರಲ್ಲೂ ಅಂಥ ವ್ಯವಹಾರ (ಎಂದರೆ ಆ ಕಾವ್ಯವನ್ನೂ ಧ್ವನಿ ಎಂದು ಕರೆಯುವುದು) ಎಲ್ಲರಿಗೂ ಇಷ್ಟ. ಅಲ್ಲದೆ ನೀರಸವಾದ ಪ್ರಹೇಳಿಕಾ (ಒಗಟಿನ ರೂಪವಾದ ಪದ್ಯ) ಇತ್ಯಾದಿಗಳನ್ನೂ ಧ್ವನಿ ಎಂದು ಹೇಳಬೇಕಾಗುವುದು. ಏಕೆಂದರೆ ಅವುಗಳಲ್ಲೂ ಮೊದಲೇ ವಿವರಿಸಿದ ರೀತಿಯಲ್ಲಿ ವಸ್ತುಮಾತ್ರಾದಿಗಳು ವ್ಯಂಗ್ಯ ಎಂದು ಒಪ್ಪಿಕೊಳ್ಳಲಾಗಿದೆ. ಹೀಗೆ ಅನ್ವಯದಿಂದಲೂ ವ್ಯತಿರೇಕದಿಂದಲೂ ಕಾವ್ಯತ್ವ ಮಾತ್ರದ ಆಧಾರದಿಂದ ಈ ಧ್ವನಿವ್ಯವಹಾರ ಉಂಟಾಗಿದೆಯೆಂದು ಊಹಿಸಲಾಗುತ್ತದೆ.

**ಅತಶ್ಚ ಸಮಾಸೋಕ್ತ್ಯಾದಾವಪಿ ಅಸಾವುಪಗಂತವ್ಯ ಏವ, ನ ಪ್ರತಿಷೇಧ್ಯಃ। ಪ್ರತೀಯಮಾನಸ್ಯ ಚಾರ್ಥಸ್ಯ ದ್ವೈವಿಧ್ಯಮೇವ, ತೃತೀಯಸ್ಯ ರಸಾದೇಃ ಪ್ರಕಾರಸ್ಯ ಉಕ್ತನಯೇನ ಕಾವ್ಯತ್ವಾದೇವ ಸಿದ್ಧತ್ವಾತ್ ಇತಿ। ನ ಚ ತಸ್ಯ ತದಂಗಭಾವೋ ಭಣಿತುಂ ಯುಜ್ಯತೇ, ಅಂಗಿತ್ವೇನೇಷ್ಟತ್ವಾತ್ ಇತಿ ಕಾವ್ಯತ್ವಮೇವ ಧ್ವನಿವ್ಯಪದೇಶವಿಷಯೋಽಭ್ಯುಪಗಂತುಂ ಯುಕ್ತೋ, ನ ತದ್ವಿಶೇಷಃ।**

**ಅನುವಾದ:**

ಆದ್ದರಿಂದ ಸಮಾಸೋಕ್ತಿ ಇತ್ಯಾದಿಗಳಲ್ಲೂ 'ಧ್ವನಿ' ಎಂಬ ವ್ಯವಹಾರವನ್ನು ಒಪ್ಪಿಕೊಳ್ಳಲೇ ಬೇಕು, ಅದನ್ನು ನಿಷೇಧಿಸಬಾರದು. ಪ್ರತೀಯಮಾನವಾದ ಅರ್ಥವು (ವಸ್ತುಮಾತ್ರ, ಅಲಂಕಾರ ಎಂದು) ಎರಡೇ ವಿಧ, ಮೂರನೆಯದೆಂದು

(ಹೇಳಲಾದ) ರಸಾದಿ ಪ್ರಕಾರವು ಮೇಲೆ ವಿವರಿಸಿದ ರೀತಿಯಲ್ಲಿ ಕಾವ್ಯತ್ವದಿಂದಲೇ ಸಿದ್ಧವಾಗುತ್ತದೆ. ರಸಕ್ಕೆ ಅಂಗತ್ವವನ್ನು ಹೇಳುವುದು ಸರಿಯಲ್ಲ, ಏಕೆಂದರೆ ಅದು ಅಂಗಿ ಎನ್ನುವುದು ಸರ್ವಸಮ್ಮತ. ಆದ್ದರಿಂದ ಕಾವ್ಯಸಾಮಾನ್ಯವೇ ಧ್ವನಿ ಎಂದು ಕರೆಸಿಕೊಳ್ಳಬೇಕು ಎಂದು ಹೇಳುವುದು ಯುಕ್ತ, ಕಾವ್ಯವಿಶೇಷ ಧ್ವನಿ ಎನ್ನುವುದು ಯುಕ್ತವಲ್ಲ.

**ವಿವರಣೆ:**

ಸಮಾಸೋಕ್ತಿ ಎಂಬ ಅಲಂಕಾರದಲ್ಲಿ ವ್ಯಂಗ್ಯಾರ್ಥವಿರುವುದು ನಿರ್ವಿವಾದ. ಅಪ್ರಸ್ತುತವ್ಯವಹಾರವು ಪ್ರಸ್ತುತದಲ್ಲಿ ಆರೋಪವನ್ನು ಹೊಂದಿರುವುದು ಅಲ್ಲಿ ಚಮತ್ಕಾರದ ಕಾರಣವಾಗಿರುತ್ತದೆ. ಚಮತ್ಕಾರಕಾರಕವಾದ ವ್ಯಂಗ್ಯಾರ್ಥವಿರುವಲ್ಲೆಲ್ಲ ಧ್ವನಿತ್ವವನ್ನು ಏಕೆ ಒಪ್ಪಬಾರದು? ಎಂದು ಮಹಿಮಭಟ್ಟನು ಕೇಳುತ್ತಾನೆ. ಪ್ರತೀಯಮಾನಾರ್ಥವು ಎರಡು ಪ್ರಕಾರಗಳನ್ನುಳ್ಳದ್ದು, ವಸ್ತುಮಾತ್ರ ಮತ್ತು ಅಲಂಕಾರ ಎಂದು ಆ ಎರಡು ಪ್ರಕಾರಗಳು. ರಸಾದಿ ಎಂಬ ಒಂದು ಪ್ರತೀಯಮಾನಾರ್ಥದ ಪ್ರಕಾರವನ್ನು ಆನಂದವರ್ಧನನು ಹೇಳಿದ್ದಾನೆ. ಅದು ಸರಿಯಲ್ಲ ಏಕೆಂದರೆ ರಸಾತ್ಮಕವಾದುದೇ ಕಾವ್ಯ. ಯಾವುದು ಕಾವ್ಯವೋ ಅದರಲ್ಲಿ ರಸವಿದ್ದೇ ಇರಬೇಕು. ಹೀಗಿರುವಾಗ ರಸಾದಿ ಕಾವ್ಯದ ಒಂದು ಪ್ರಕಾರವಾಗುವುದು ಹೇಗೆ? ರಸವೇ ಅಂಗಿ (ಪ್ರಧಾನ) ಎಂದು ಒಪ್ಪಿಕೊಂಡಿರುವುದರಿಂದ ಅದಕ್ಕೆ ಅಂಗತ್ವವನ್ನು ಹೇಳುವುದು ಸರಿಯಲ್ಲ. ಆದ್ದರಿಂದ ಕಾವ್ಯಸಾಮಾನ್ಯವನ್ನೇ 'ಧ್ವನಿ' ಎಂದು ಕರೆಯಬೇಕು. ಕಾವ್ಯವಿಶೇಷವನ್ನಲ್ಲ. ಆದ್ದರಿಂದ ಧ್ವನಿಲಕ್ಷಣದಲ್ಲಿ "ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ" ಎಂದು ಹೇಳಿರುವುದು ತಪ್ಪು –ಎಂಬುದು ಮಹಿಮಭಟ್ಟನ ಅಭಿಪ್ರಾಯ.

**ಕಿಂಚ ಮುಖ್ಯೇ ರಸಾತ್ಮನಿ ಕಾವ್ಯೇ ಸಂಭವತಿ, ನ ತಸ್ಯ ಗೌಣಸ್ಯಾಶ್ರಯಣಂ ಯುಕ್ತಂ, ಗೌಣಮುಖ್ಯಯೋರ್ಮುಖ್ಯೇ ಸಂಪ್ರತ್ಯಯ ಇತಿ ನಿಯಮಾತ್। ಯಸ್ತು ಮೇಘದೂತಾದೌ ಕಾವ್ಯವಿಶೇಷವ್ಯಪದೇಶಃ, ಸೋಽಭಿಧೇಯಾರ್ಥವಿಶೇಷಸಮಾರೋಪಕೃತೋ, ನ ಮುಖ್ಯಃ। ಇತ್ಥಂ ಚ ಕಾವ್ಯಸ್ಯ ವಿಶಿಷ್ಟತಾನುಪಪತ್ತೌ ಇತರತಲ್ಲಕ್ಷಣವಿಧಾಯಿಮತಾತಿರಿಕ್ತಂ ನ ಕಿಂಚಿದನೇನಾಭಿಹಿತಂ ಸ್ಯಾತ್, ಅನ್ಯತ್ರ ಧ್ವನಿವ್ಯಪದೇಶಮಾತ್ರಾತ್।**

**ಅನುವಾದ:**

ರಸಾತ್ಮಕವಾದುದು ಮುಖ್ಯವೃತ್ತಿಯಿಂದ ಕಾವ್ಯವಾಗುತ್ತದೆ. ಅದು ಇರುವಾಗ ಗೌಣವಾಗಿ ಕಾವ್ಯವಾಗುವ ಯಾವುದನ್ನೋ ಆಶ್ರಯಿಸುವುದು ಸರಿಯಲ್ಲ, ಏಕೆಂದರೆ "ಗೌಣಮುಖ್ಯಗಳು ಇರುವಾಗ ಮುಖ್ಯದಲ್ಲೇ ಪ್ರಥಮ ಜ್ಞಾನ ಉಂಟಾಗುವುದು" ಎಂಬ ನಿಯಮವಿದೆ. ಮೇಘದೂತ ಮುಂತಾದವುಗಳಲ್ಲಿ ಕಾವ್ಯವಿಶೇಷ ಎಂಬ ವ್ಯವಹಾರವು ಅವುಗಳಿಂದ ಪ್ರತಿಪಾದ್ಯವಾದ ಅರ್ಥವಿಶೇಷದ ಸಮಾರೋಪದಿಂದ ಉಂಟಾದುದು, ಅದೂ ಮುಖ್ಯವಲ್ಲ. ಹೀಗೆ ಕಾವ್ಯವಿಶೇಷ ಎನ್ನುವುದರಲ್ಲಿ ಅನುಪಪತ್ತಿ ಇರುವುದರಿಂದ ಕಾವ್ಯದ ಲಕ್ಷಣವನ್ನು ಹೇಳಿದವರ ಅಭಿಪ್ರಾಯಕ್ಕಿಂತ ಹೆಚ್ಚಿನದನ್ನು ಏನನ್ನೂ, ಧ್ವನಿ ಎಂಬ ಹೆಸರನ್ನಿಟ್ಟುದನ್ನು ಬಿಟ್ಟರೆ, ಆನಂದವರ್ಧನನು ಹೇಳಿಲ್ಲ ಎಂದು ಸಿದ್ಧವಾಗುತ್ತದೆ.

**ವಿವರಣೆ:**

ಪದಗಳಿಗೆ ಮುಖ್ಯ, ಗೌಣ ಎಂಬ ಎರಡು ಅರ್ಥಗಳಿರುತ್ತವೆ. ಅಗ್ನಿ ಎಂಬ ಪದಕ್ಕೆ ಬೆಂಕಿ ಎಂಬುದು ಮುಖ್ಯಾರ್ಥ. ಅಗ್ನಿರ್ಮಾಣವಕ: (ಈ ಹುಡುಗ ಬೆಂಕಿ) ಎಂಬ ವಾಕ್ಯದಲ್ಲಿ ಅಗ್ನಿಶಬ್ದವು ಗೌಣಾರ್ಥದಲ್ಲಿ ಪ್ರಯುಕ್ತವಾಗಿದೆ. ಚುರುಕುಬುದ್ಧಿಯವನು, ಅಥವಾ ತೀಕ್ಷ್ಣವಾಗಿ ಮಾತನಾಡುವವನು ಎಂಬುದು ಅಲ್ಲಿ ವಿವಕ್ಷಿತ. ಕಾರ್ಯವನ್ನು ಹೇಳುವ ವಾಕ್ಯಗಳಲ್ಲಿ ಪದದ ಮುಖ್ಯಾರ್ಥವನ್ನು ಗ್ರಹಿಸಬೇಕು, ಗೌಣಾರ್ಥವನ್ನಲ್ಲ. ಅಗ್ನೌ ಜುಹುಯಾತ್ (ಬೆಂಕಿಯಲ್ಲಿ ಹೋಮವನ್ನು ಮಾಡಬೇಕು) ಎಂದು ಶಾಸ್ತ್ರವು ಹೇಳಿದಾಗ ಬೆಂಕಿಗೆ ಘೃತ (ತುಪ್ಪ)ವನ್ನು ಅರ್ಪಿಸಬೇಕು, ಮಾಣವಕನಿಗಲ್ಲ. ಅಂತೆಯೇ ಕಾವ್ಯ ಎಂದರೆ ರಸಾತ್ಮಕವಾದ ವಾಕ್ಯ (ಅಥವಾ ವಾಕ್ಯಸಮೂಹ) ಎಂಬುದು ಮುಖ್ಯಾರ್ಥ. ಮುಖ್ಯಾರ್ಥವು ಸಂಭವಿಸುತ್ತಿರುವಾಗ ಅದನ್ನು ಬಿಟ್ಟು ಗೌಣಾರ್ಥವನ್ನು ಗ್ರಹಿಸಬಾರದು. ಆದ್ದರಿಂದ ನೀರಸವಾದುದನ್ನೂ ಕಾವ್ಯ ಎಂದು ಗ್ರಹಿಸಿ ರಸಾತ್ಮಕವಾದುದು ಕಾವ್ಯವಿಶೇಷ ಎಂದು ಹೇಳಿದುದು ಸರಿಯಲ್ಲ. ಬೇರೆ ಆಲಂಕಾರಿಕರು ಹೇಳಿರುವುದನ್ನೇ ಆನಂದವರ್ಧನನೂ ಹೇಳಿದ್ದಾನೆ, ಧ್ವನಿ ಎಂಬ ಹೊಸ ಹೆಸರನ್ನಿಟ್ಟಿದ್ದಾನೆ ಅಷ್ಟೆ. ಹೊಸ ಕಾವ್ಯತತ್ತ್ವವನ್ನೇ ಅವನು ಬಿಡಿಸಿಕೊಟ್ಟಿದ್ದಾನೆ ಎನ್ನುವುದೆಲ್ಲ ಬೊಗಳೆ ಎಂದು ಮಹಿಮಭಟ್ಟನ ಟೀಕೆ.

> **ನ ಚ ತೇನಾಪಿ ಕಿಂಚಿತ್। ಕಥಂಚಿದ್ವಾ ತದುಪಪತ್ತೌ ತದವಾಚ್ಯಮೇವ ತಸ್ಯ ತತ್ಪರ್ಯವಸಾಯಿನೋ ಲಕ್ಷಣವಿಶೇಷಸಂಬಂಧಾದೇವ ತದವಗತೇಃ। ಯಥಾ ಯೋಽಶ್ವಮಾರೂಢಃ, ಸ ಪುರುಷೋ ರಾಜೇತ್ಯತ್ರ। ಅಥ ಪುರುಷಸ್ಯ ಅಶ್ವವಿಶಿಷ್ಟಸ್ಯೈವ ಸತಸ್ತಲ್ಲಕ್ಷಣಸಂಬಂಧೋ, ನ ತು ತತ ಏವಾಸ್ಯ ವೈಶಿಷ್ಟ್ಯಮಿತಿ, ತಥಾಪಿ ಅವಾಚ್ಯ:, ಕಾವ್ಯತ್ವಾದೇವ ತಸ್ಯಾಪ್ಯವಗತತ್ವಾತ್। ತಚ್ಚೋಕ್ತಮಿತಿ ಅವಾಚ್ಯವಚನಂ ದೋಷಃ।**

**ಅನುವಾದ:**

ಅದರಿಂದಲೂ ಯಾವ ಲಾಭವೂ ಇಲ್ಲ. ಹೇಗೋ ಒಂದು ರೀತಿ ಆ ಧ್ವನಿ ವಾಸ್ತವಿಕವೆಂದು ಸಿದ್ಧವಾದರೂ ಅದನ್ನು (ಶಬ್ದದಿಂದ) ಹೇಳಬಾರದಿತ್ತು. ಕಾವ್ಯವೆಂದು ಹೇಳಲಾಗುವುದು ಆ ಧ್ವನಿಯಲ್ಲೇ ಪರ್ಯವಸಾನವನ್ನು ಹೊಂದುವುದಾದರೂ, ವಿಶೇಷಲಕ್ಷಣಸಂಬಂಧದಿಂದಲೇ ಅದು ಅರಿವಿಗೆ ಬಂದೇ ಬರುತ್ತದೆ. ಯಾವನು ಕುದುರೆಯನ್ನು ಏರಿದ್ದಾನೋ ಆ ಮನುಷ್ಯನು ದೊರೆ ಎಂಬ ವಾಕ್ಯದಲ್ಲಿರುವಂತೆ (ಲಕ್ಷಣದಲ್ಲಿರುವ ವಿಶಿಷ್ಟತೆಯಿಂದಲೇ ಲಕ್ಷ್ಯನಾದ ಪುರುಷನಲ್ಲಿ ವಿಶಿಷ್ಟತೆಯು ತಿಳಿದುಬರುವಂತೆ ಕಾವ್ಯದ ವೈಶಿಷ್ಟ್ಯವು ತಾನಾಗಿ ಅರಿವಿಗೆ ಬರುತ್ತದೆ). ಅಶ್ವವಿಶಿಷ್ಟವಾದ ಪುರುಷನಿಗೇ ಆ ಲಕ್ಷಣದ ಸಂಬಂಧ, ಆ ಲಕ್ಷಣದಿಂದ ಅವನಿಗೆ ವೈಶಿಷ್ಟ್ಯವಲ್ಲ ಎಂದು ಹೇಳಿದರೂ, ಆ ವೈಶಿಷ್ಟ್ಯವನ್ನಿಲ್ಲಿ ಹೇಳಬೇಕಾಗಿಲ್ಲ, ಕಾವ್ಯತ್ವದಿಂದಲೇ ಆ ವೈಶಿಷ್ಟ್ಯವೂ ತಿಳಿದುಬರುತ್ತದೆಯಷ್ಟೆ. ಅದನ್ನು (ಶಬ್ದತ:) ಹೇಳಿರುವುದರಿಂದ ಅವಾಚ್ಯವಚನ ಎಂಬ ದೋಷ.

**ವಿವರಣೆ:**

ರಸಮಯವಾದ, ರಸಪ್ರಧಾನವಾದ ವಾಕ್ಯವೇ ಕಾವ್ಯ, ಉಳಿದುದನ್ನು ಕಾವ್ಯವೆಂದು ಕರೆಯುವುದೇ ತಪ್ಪು ಎಂಬ ದೃಷ್ಟಿಯಿಂದ ಮಹಿಮಭಟ್ಟನು ಇಲ್ಲಿ ಆಕ್ಷೇಪವನ್ನು ಮಾಡಿದ್ದಾನೆ.

ಧ್ವನ್ಯಾಲೋಕಕಾರನಾದರೋ ಲೋಕಸ್ಥಿತಿಯನ್ನು ಅನುಸರಿಸಿ ಧ್ವನಿಲಕ್ಷಣವನ್ನು ಹೇಳಿದ್ದಾನೆ. ಲೋಕದಲ್ಲಿ ರಸಪ್ರಧಾನವಾದುದನ್ನು ಗುಣೀಭೂತರಸವಾದುದನ್ನೂ ಅಸ್ಫುಟರಸವಾದುದನ್ನೂ ಕಾವ್ಯ ಎಂದು ಕರೆಯಲಾಗುತ್ತದೆ. ಆ ಲೋಕವ್ಯವಹಾರವನ್ನನುಸರಿಸಿ ಧ್ವನಿ, ಗುಣೀಭೂತವ್ಯಂಗ್ಯ, ಚಿತ್ರ ಎಂದು ಮೂರು ವಿಧವಾದ ಕಾವ್ಯವನ್ನು ಒಪ್ಪಿಕೊಂಡು ಕಾವ್ಯವಿಶೇಷವು ಧ್ವನಿ ಎಂದು ಹೇಳಿದ್ದಾರೆ. ಸಂದರ್ಭದಿಂದ ಅವಗತವಾಗುವ (ಜ್ಞಾತವಾಗುವ, ತಿಳಿದುಬರುವ) ಯಾವುದನ್ನೂ ಶಬ್ದದಿಂದ ಹೇಳಬಾರದು, ಹಾಗೆ ಹೇಳಿದರೆ ಅವಾಚ್ಯವಚನ ಎಂಬ ದೋಷ ಎಂದು ಮಹಿಮಭಟ್ಟನು ಒತ್ತಿ ಹೇಳುತ್ತಾನೆ. ದ್ವಿತೀಯ ವಿಮರ್ಶದಲ್ಲಿ ಈ ದೋಷವನ್ನು ಸೋದಾಹರಣವಾಗಿ ಸವಿಸ್ತರವಾಗಿ ಪ್ರತಿಪಾದಿಸಲಾಗಿದೆ.

(ಸೂರಿಭಿಃ ಎಂಬ ಕರ್ತೃನಿರ್ದೇಶ ತಪ್ಪು)

**ಕಿಂಚ 'ಸೂರಿಭಿ:ಕಥಿತ:' ಇತಿ ಕಥನಕ್ರಿಯಾ–ಕರ್ತೃನಿರ್ದೇಶ: ಪಕ್ಷದ್ವಯೇಽಪ್ಯವಾಚ್ಯ ಏವ। ಕರ್ತೃಮಾತ್ರ ವಿವಕ್ಷಾಯಾಂ ಕ್ರಿಯಾಯಾ: ಕರ್ತ್ರವ್ಯಭಿಚಾರಾತ್। ಕರ್ತೃವಿಶೇಷವಿವಕ್ಷಾಯಾಮ್ ಅನಂತರೋಕ್ತಕ್ರಮೇಣ ವ್ಯಾಪಾರವಿಶೇಷ ಸಂಬಂಧಾದೇವ ತದ್ವಿಶೇಷಾವಗತಿಸಿದ್ಧೇಃ –ಇತಿ ಅವಾಚ್ಯವಚನಂ ದೋಷ:।**

**ಅನುವಾದ:**

ಮತ್ತು 'ಸೂರಿಭಿಃ ಕಥಿತಃ' (=ವಿದ್ವಾಂಸರಿಂದ ಹೇಳಲ್ಪಟ್ಟಿದೆ) ಎಂದು ಹೇಳುವ ಕ್ರಿಯೆಯ ಕರ್ತೃವನ್ನು (ಶಬ್ದೇನ) ನಿರ್ದೇಶಿಸಿರುವುದು ಎರಡು ಪಕ್ಷಗಳಲ್ಲೂ ಅನುಚಿತವೇ. ಕರ್ತೃಸಾಮಾನ್ಯವನ್ನು ಹೇಳುವುದು ಉದ್ದೇಶವೆಂದಾದರೆ, ಕ್ರಿಯೆಗೆ ಯಾವನಾದರೂ ಕರ್ತೃ ಇರುವುದು ಸ್ವತಃ ಸಿದ್ಧವಾಗಿರುವುದರಿಂದ (ಅದನ್ನು ಹೇಳಬೇಕಾಗಿಲ್ಲ, ಹೇಳದಿದ್ದರೂ ಅದು ಗೊತ್ತಾಗುತ್ತದೆ). ಕರ್ತೃವಿಶೇಷವನ್ನು ಹೇಳುವುದು ಉದ್ದೇಶವಾದರೆ, ಮೇಲೆ (ನಾವು) ಹೇಳಿದ ಪ್ರಕಾರದಿಂದ ವ್ಯಾಪಾರವಿಶೇಷಸಂಬಂಧದಿಂದಲೇ ಕರ್ತೃವಿಶೇಷದ ಜ್ಞಾನವು ಉಂಟಾಗುವುದರಿಂದ (ಆ ಕರ್ತೃವನ್ನು ಶಬ್ದತಃ ಹೇಳಬೇಕಾಗಿಲ್ಲ). (ಅದರೂ 'ಸೂರಿಭಿ:' ಎಂದು ಕರ್ತೃವನ್ನು ಲಕ್ಷಣವಾಕ್ಯದಲ್ಲಿ ಹೇಳಿರುವುದರಿಂದ) ಅವಾಚ್ಯವಚನ ಎಂಬ ದೋಷ.

(ಧ್ವನಿಲಕ್ಷಣದ ದಶದೋಷಗಳು)

**ಅರ್ಥಸ್ಯ ವಿಶಿಷ್ಟತ್ವಂ ಶಬ್ದಃ ಸವಿಶೇಷಣಸ್ತದಃ ಪುಂಸ್ತ್ವಮ್।**
**ದ್ವಿವಚನವಾಶಬ್ದೌ ಚ ವ್ಯಕ್ತಿರ್ಧ್ವನಿನಾಮ ಕಾವ್ಯವೈಶಿಷ್ಟ್ಯಮ್ ॥**
**ವಚನಂ ಚ ಕಥನಕರ್ತುಃ ಕಥಿತಾ ಧ್ವನಿಲಕ್ಷ್ಮಣೀಹ ದಶ ದೋಷಾಃ ।**
**ಯೇ ತ್ವನ್ಯೇ ತದ್ಭೇದಪ್ರಭೇದಲಕ್ಷಣಗತಾ ನ ತೇ ಗಣಿತಾಃ ॥**

**ಅನುವಾದ:**

(೧) ಅರ್ಥದ ವಿಶಿಷ್ಟತ್ವ, (೨) ಶಬ್ದ, (೩) ಶಬ್ದಕ್ಕೆ ವಿಶೇಷಣವನ್ನು ಕೊಟ್ಟಿರುವುದು, (೪) ತಚ್ಛಬ್ದವನ್ನು ಪುಂಲಿಂಗದಲ್ಲಿ ಪ್ರಯೋಗಿಸಿರುವುದು, (೫) ವ್ಯಂಕ್ತಃ ಎಂಬ ಕ್ರಿಯಾಪದದಲ್ಲಿ ದ್ವಿವಚನ, (೬) ವಾ ಎಂಬ ಶಬ್ದವನ್ನು

ಬಳಸಿರುವುದು, (೭) ವ್ಯಂಕ್ತಃ ಎಂದು ವ್ಯಂಜನೆಯ ಪ್ರತಿಪಾದನೆ, (೮) ಧ್ವನಿ ಎಂಬ ಸಂಜ್ಞೆ, (೯) ಕಾವ್ಯ ವೈಶಿಷ್ಟ್ಯವನ್ನು ಹೇಳಿರುವುದು, (೧೦) ಕಥನದ ಕರ್ತೃವನ್ನು ಶಬ್ದದಿಂದ ನಿರ್ದೇಶಿಸಿರುವುದು ಎಂಬ ಹತ್ತು ದೋಷಗಳು (ಆನಂದವರ್ಧನನು ಹೇಳಿರುವ) ಧ್ವನಿಯ ಲಕ್ಷಣದಲ್ಲಿವೆ. ಆ ಧ್ವನಿಯ ಭೇದಗಳ ಮತ್ತು ಪ್ರಭೇದಗಳ ಲಕ್ಷಣಗಳಲ್ಲಿರುವ ದೋಷಗಳನ್ನು ಇಲ್ಲಿ ಎಣಿಕೆಗೆ ತೆಗೆದುಕೊಂಡಿಲ್ಲ.

**ವಿವರಣೆ:**

ಈ ಎರಡು ಕಾರಿಕೆಗಳಲ್ಲಿ ಇದುವರೆಗೆ ಧ್ವನಿಲಕ್ಷಣದಲ್ಲಿ ತೋರಿಸಲಾದ ಎಲ್ಲ ದೋಷಗಳನ್ನು ಪಟ್ಟಿಮಾಡಲಾಗಿದೆ. ಉಪಸರ್ಜನೀಕೃತಸ್ವಃ ಅರ್ಥಃ ಎಂದು ಅರ್ಥಕ್ಕೆ ವಿಶೇಷಣವನ್ನು ಕೊಟ್ಟಿರುವುದು ಒಂದನೆಯ ದೋಷ. ಲಕ್ಷಣದಲ್ಲಿ ಶಬ್ದ ಎಂದು ಹೇಳಬಾರದಾಗಿತ್ತು, ಆದರೂ ಹೇಳಿರುವುದು ಎರಡನೆಯ ದೋಷ, ಉಪಸರ್ಜನೀಕೃತಾರ್ಥಃ ಎಂಬ ಶಬ್ದಕ್ಕೆ ವಿಶೇಷಣವನ್ನು ಕೊಟ್ಟಿರುವುದು ಮೂರನೆಯ ದೋಷ. ತಮರ್ಥಮ್ ಎಂಬಲ್ಲಿ ತಚ್ಛಬ್ದದ ಪುಂಲಿಂಗಪ್ರಯೋಗ ಎಂಬುದು ನಾಲ್ಕನೆಯ ದೋಷ, ವ್ಯಂಕ್ತಃ ಎಂಬ ಕ್ರಿಯಾಪದದಲ್ಲಿ ದ್ವಿವಚನ ಪ್ರಯೋಗ ಐದನೆಯ ದೋಷ, ಯತ್ರಾರ್ಥಃ ಶಬ್ದೋ ವಾ ಎಂಬಲ್ಲಿರುವ ವಾಶಬ್ದಪ್ರಯೋಗ ಆರನೆಯ ದೋಷ, ವ್ಯಂಕ್ತಃ ಎಂಬಲ್ಲಿ ಅಂತರ್ಗತವಾಗಿರುವ ವ್ಯಂಜನಾವ್ಯಾಪಾರ ಎಂಬುದನ್ನು ಹೇಳಿರುವುದು ಏಳನೆಯ ದೋಷ, ಧ್ವನಿ ಎಂಬ ಹೆಸರನ್ನು ಹೇಳಿರುವುದು ಎಂಟನೆಯ ದೋಷ, ಕಾವ್ಯವಿಶೇಷಃ ಎಂದು ಕಾವ್ಯದ ವೈಶಿಷ್ಟ್ಯವನ್ನು ಹೇಳಿರುವುದು ಒಂಬತ್ತನೆಯ ದೋಷ, ಸೂರಿಭಿಃ ಕಥಿತಃ ಎಂದು ಕಥನದ ಕರ್ತೃವನ್ನು ಹೇಳಿರುವುದು ಹತ್ತನೆಯ ದೋಷ ಎಂದು ಧ್ವನಿಲಕ್ಷಣದಲ್ಲಿ ಮಹಿಮಭಟ್ಟನು ಹತ್ತು ದೋಷಗಳನ್ನು ಎತ್ತಿ ತೋರಿಸಿದ್ದಾನೆ.

ಧ್ವನಿಯ ಭೇದಗಳಾದ ಅವಿವಕ್ಷಿತವಾಚ್ಯ, ವಿವಕ್ಷಿತಾನ್ಯಪರವಾಚ್ಯ ಎಂಬವುಗಳಲ್ಲೂ, ಅದರ ಪ್ರಭೇದ (ಅವಾಂತರ ಭೇದ)ಗಳಾದ ಅತ್ಯಂತತಿರಸ್ಕೃತವಾಚ್ಯ, ಅರ್ಥಾಂತರಸಂಕ್ರಮಿತವಾಚ್ಯ ಇತ್ಯಾದಿಗಳಲ್ಲೂ ಇರುವ ದೋಷಗಳನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎನ್ನುತ್ತಾನೆ ಮಹಿಮಭಟ್ಟ. ದೋಷಗಳನ್ನೇ ಹುಡುಕಲು ಹೊರಟರೆ ಮಹಾಮೇಧಾವಿಗಳ ಮಾತಿನಲ್ಲೂ ಅನೇಕ ತಪ್ಪುಗಳನ್ನು ಕಾಣಲು ಸಾಧ್ಯ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ದೋಷಹಾನವು ಅತ್ಯಂತ ಮುಖ್ಯ. ಅದಾದ ಮೇಲೆ ಗುಣಾಧಾನ. ದೋಷಗಳನ್ನು ಕಾಣುವುದರಲ್ಲಿ ಮಹಿಮಭಟ್ಟನು ಮೆರೆಸಿರುವ ಸೂಕ್ಷ್ಮೇಕ್ಷಿಕೆ ಪ್ರಶಂಸನೀಯ. ಮಮ್ಮಟ, ವಿಶ್ವನಾಥ ಮುಂತಾದವರ ಗ್ರಂಥಗಳಲ್ಲಿ ನಾವು ನೋಡುವ ದೋಷಪ್ರಕರಣಗಳ ಸಾರವೆಲ್ಲ ವ್ಯಕ್ತಿವಿವೇಕದಲ್ಲಿವೆ. ಈ ಅಂಶದಲ್ಲಿ ಅನಂತರ ಕಾಲದ ಆಲಂಕಾರಿಕರಿಗೆಲ್ಲ ಮಹಿಮಭಟ್ಟನು ಉತ್ತಮರ್ಣ, ಅವರೆಲ್ಲ ಋಣಿಗಳು ಎಂದು ಹೇಳಬಹುದು.

**ತದೇವಂ ಲಕ್ಷಣದೋಷದುಷ್ಟಪದವ್ಯುದಾಸೇನ**
**ಪರಿಶುದ್ಧೋ ಧ್ವನಿಲಕ್ಷಣವಾಕ್ಯಸ್ಯಾಯಮರ್ಥೋಽವತಿಷ್ಠತೇ ।**
**ವಾಚ್ಯಸ್ತದನುಮಿತೋ ವಾ**
**ಯತ್ರಾರ್ಥೋಽರ್ಥಾಂತರಂ ಪ್ರಕಾಶಯತಿ ।**
**ಸಂಬಂಧತಃ ಕುತಶ್ಚಿತ್**
**ಸಾ ಕಾವ್ಯಾನುಮಿತಿರಿತ್ಯುಕ್ತಾ ॥ ಇತಿ।**

**ಏತಚ್ಚ ಅನುಮಾನಸ್ಯೈವ ಲಕ್ಷಣಂ, ನಾನ್ಯಸ್ಯ।**
**ಯದುಕ್ತಂ ತ್ರಿರೂಪಲಿಂಗಾಖ್ಯಾನಂ**
**ಪರಾರ್ಥಾನುಮಾನಮ್ ಇತಿ। ಕೇವಲಂ ಸಂಜ್ಞಾಭೇದಃ ।**

**ಅನುವಾದ:**

ಹೀಗೆ ಲಕ್ಷಣದಲ್ಲಿರುವ ದೋಷಗಳನ್ನೂ ದುಷ್ಟಪದಗಳನ್ನೂ ತ್ಯಜಿಸಿದಾಗ ಧ್ವನಿಲಕ್ಷಣವಾಕ್ಯದ ಪರಿಶುದ್ಧವಾದ ಅರ್ಥವು ಇಂತು ಉಳಿದುಕೊಳ್ಳುತ್ತದೆ–

"ವಾಚ್ಯವಾದ ಅಥವಾ ಅದರಿಂದ ಅನುಮಿತವಾದ ಅರ್ಥವು ಎಲ್ಲಿ ಇನ್ನೊಂದು ಅರ್ಥವನ್ನು ಯಾವುದಾದರೊಂದು ಸಂಬಂಧದಿಂದ ಬೆಳಗಿಸುವುದೋ (=ಅರಿವಿಗೆ ತರುವುದೋ) ಅದನ್ನು ಕಾವ್ಯಾನುಮಿತಿ ಎಂದು ಹೇಳುತ್ತಾರೆ". ಇದು ಅನುಮಾನದ್ದೇ ಲಕ್ಷಣ, ಬೇರೆ ಯಾವುದರದೂ ಅಲ್ಲ. "ಮೂರು ವಿಧವಾದ ಲಿಂಗವನ್ನು ಹೇಳುವುದು ಪರಾರ್ಥಾನುಮಾನ" ಎಂದು (ಪ್ರಾಚೀನರಿಂದ) ಹೇಳಲ್ಪಟ್ಟಿದೆ. ಕೇವಲ ಹೆಸರಿನಲ್ಲಿ ಭೇದ.

**ಕಾವ್ಯಾಸ್ಯಾತ್ಮನಿ ಸಂಜ್ಞಿನಿ ರಸಾದಿರೂಪೇ ನ ಕಸ್ಯಚಿದ್ ವಿಮತಿಃ ।**
**ಸಂಜ್ಞಾಯಾಂ ಸಾ ಕೇವಲಮ್ ಏಷಾಪಿ ವ್ಯಕ್ತ್ಯಯೋಗತೋಽಸ್ಯ ಕುತಃ ॥**

**ಅನುವಾದ:**

ಕಾವ್ಯದ ಆತ್ಮವೂ ಸಂಜ್ಞಿಯೂ ಆದ ರಸಾದಿಯಲ್ಲಿ ಯಾರಿಗೂ ವಿವಾದವೇ ಇಲ್ಲ. ಕೇವಲ ಸಂಜ್ಞೆಯಲ್ಲಿ ವಿವಾದ. (ಆ ರಸಾದಿಗಳಿಗೆ) ವ್ಯಂಜನೆಯು ಕೂಡುವುದಿಲ್ಲವಾದ ಕಾರಣದಿಂದ (ನೀವು ಇಟ್ಟಿರುವ ಧ್ವನಿ ಎಂಬ ಹೆಸರೂ) ಹೇಗೆ ಹೊಂದುತ್ತದೆ?

**ವಿವರಣೆ:**

ಕಾವ್ಯದಲ್ಲಿ ಪರಮರಮಣೀಯವಾದುದು ರಸ, ಭಾವ ಇತ್ಯಾದಿ, ಅದೇ ಆತ್ಮ ಎಂಬ ಬಗೆಗೆ ನಮ್ಮ ವಿವಾದ ಇಲ್ಲ. ವಿವಾದವಿರುವುದು ವ್ಯಂಜನಾ ಎಂಬ ವ್ಯಾಪಾರದ ವಿಷಯದಲ್ಲಿ, ಧ್ವನಿ ಎಂಬ ಸಂಜ್ಞೆಯಲ್ಲಿ. ಆ ವ್ಯಂಜನಾವ್ಯಾಪಾರವು ಅಸಂಭವ ಎಂಬುದನ್ನು ನಾವಾಗಲೇ ತೋರಿಸಿದ್ದೇವೆ. ಆದ್ದರಿಂದ ಧ್ವನಿ ಎಂಬ ಸಂಜ್ಞೆಯೂ ಸರಿಯಲ್ಲ ಎಂದು ನಮ್ಮ ಅಭಿಪ್ರಾಯ ಎನ್ನುತ್ತಾನೆ ಮಹಿಮಭಟ್ಟ.

**ಶಬ್ದಸ್ಯೈಕಾಭಿಧಾ ಶಕ್ತಿರರ್ಥಸ್ಯೈಕೈವ ಲಿಂಗತಾ ।**
**ನ ವ್ಯಂಜಕತ್ವಮನಯೋಃ ಸಮಸ್ತೀತ್ಯುಪಪಾದಿತಮ್ ॥**
**ಉಕ್ತಂ ವೃಥೈವ ಶಬ್ದಸ್ಯೋಪಾದಾನಂ ಲಕ್ಷಣೇ ಧ್ವನೇಃ ।**
**ನ ಹಿ ತಚ್ಛಕ್ತಿಮೂಲೇಷ್ಟಾ ಕಾಚಿದರ್ಥಾಂತರೇ ಗತಿಃ ॥**
**ನ ಚೋಪಸರ್ಜನತ್ವೇನ ತಯೋರ್ಯುಕ್ತಂ ವಿಶೇಷಣಮ್ ।**
**ಯತಃ ಕಾವ್ಯೇ ಗುಣೀಭೂತವ್ಯಂಗ್ಯೇಽಪೀಷ್ಟೈವ ಚಾರುತಾ ॥**

**ಅನುವಾದ:**

ಶಬ್ದಕ್ಕಿರುವ ಒಂದೇ ಶಕ್ತಿ ಅಭಿದಾ. ಅರ್ಥಕ್ಕಿರುವುದು ಲಿಂಗತ್ವ ಮಾತ್ರ. ಶಬ್ದಾರ್ಥಗಳಿಗೆ ವ್ಯಂಜಕತ್ವವು ಸಂಭವಿಸುವುದಿಲ್ಲ ಎಂದು ಉಪಪಾದಿಸಲ್ಪಟ್ಟಿದೆ.

ಧ್ವನಿಯ ಲಕ್ಷಣದಲ್ಲಿ ಶಬ್ದ (ಎಂಬ ಪದದ) ಉಪಾದಾನವು ವ್ಯರ್ಥ. ಆ ಶಬ್ದಶಕ್ತಿಮೂಲವಾಗಿ ಬೇರೊಂದು ಅರ್ಥದ ಜ್ಞಾನ ಉಂಟಾಗುವುದೆಂಬುದು (ನಮಗೆ) ಇಷ್ಟವಲ್ಲ.

ಆ ಶಬ್ದಾರ್ಥಗಳಿಗೆ ಉಪಸರ್ಜನೀಕೃತ ಎಂಬ ವಿಶೇಷಣವೂ ಸರಿಯಲ್ಲ. ಏಕೆಂದರೆ ವ್ಯಂಗ್ಯಾರ್ಥವು ಗುಣೀಭೂತವಾದ ಕಾವ್ಯದಲ್ಲೂ ಸೌಂದರ್ಯವಿದೆ ಎಂದು ನಮ್ಮ ಅಭಿಪ್ರಾಯ.

**ಅತ ಏವ ವಿಶೇಷಸ್ಯೋಪಾದಾನಮಪಿ ನಾರ್ಥವತ್ ।**
**ಸಂಜ್ಞಾಸಂಬಂಧಮಾತ್ರೈಕಫಲಂ ತದಿತಿ ಗಮ್ಯತೇ ॥**
**ತದಾ ಚಾತಿಪ್ರಸಂಗಃ ಸ್ಯಾತ್ ಸಂಜ್ಞಾಯಾಂ ಯಸ್ಯಕಸ್ಯಚಿತ್ ।**
**ಯದ್ವಾಕ್ಯವರ್ತಿನೋಽನ್ಯಸ್ಯ ವಿಶೇಷಸ್ಯ ತದಾಪ್ತಿತಃ ॥**
**ತಸ್ಮಾತ್ ಸ್ಫುಟತಯಾ ಯತ್ರ ಪ್ರಾಧಾನ್ಯೇನಾನ್ಯಥಾಪಿ ವಾ ।**
**ವಾಚ್ಯಶಕ್ತ್ಯನುಮೇಯೋಽರ್ಥೋ ಭಾತಿ ತತ್ಕಾವ್ಯಮುಚ್ಯತೇ ॥**

**ಅನುವಾದ:**

ಆ ಕಾರಣದಿಂದಲೇ (ಧ್ವನಿಲಕ್ಷಣದಲ್ಲಿ ಕಾವ್ಯ ವಿಶೇಷಃ ಎಂಬಲ್ಲಿ) ವಿಶೇಷ ಶಬ್ದವನ್ನು ಬಳಸಿರುವುದಕ್ಕೂ ಯಾವ ಪ್ರಯೋಜನವೂ ಇಲ್ಲ. ಸಂಜ್ಞಾಸಂಬಂಧವನ್ನು ಹೇಳುವುದು ಮಾತ್ರ ಅದರ ಫಲವೆಂದು ತೋರುತ್ತದೆ.

ಹಾಗೆ ಮಾಡಿರುವುದರಿಂದ ಸಂಜ್ಞೆಯ ಅತಿವ್ಯಾಪ್ತಿಯೂ ಉಂಟಾಗುತ್ತದೆ. ಯಾವುದೋ ವಾಕ್ಯದಲ್ಲಿ ಬೇರೆ ವಿಧವಾದ ವಿಶೇಷವು ಇದೆಯೆಂಬ ಕಾರಣದಿಂದ (ಪ್ರಹೇಲಿಕಾ ಮುಂತಾದವುಗಳಲ್ಲೂ ಧ್ವನಿ ಎಂಬ ಸಂಜ್ಞೆಯ) ಅತಿವ್ಯಾಪ್ತಿ ಉಂಟಾದೀತು.

ಆದ್ದರಿಂದ ಎಲ್ಲಿ ಪ್ರಾಧಾನ್ಯದಿಂದ ಅಥವಾ ಅಪ್ರಾಧಾನ್ಯದಿಂದ ಸ್ಫುಟವಾಗಿ ವಾಚ್ಯಾರ್ಥದ ಶಕ್ತಿಯಿಂದ ಅನುಮೇಯವಾದ ಅರ್ಥವುಂಟೋ ಅದು ಕಾವ್ಯವೆಂದು ಹೇಳಬೇಕು.

**ವಾಚ್ಯಪ್ರತ್ಯೇಯಯೋರ್ನಾಸ್ತಿ ವ್ಯಂಗ್ಯವ್ಯಂಜಕತಾರ್ಥಯೋಃ ।**
**ತಯೋಃ ಪ್ರದೀಪಘಟವತ್ ಸಾಹಿತ್ಯೇನಾಪ್ರಕಾಶನಾತ್ ॥**
**ಪಕ್ಷಧರ್ಮತ್ವಸಂಬಂಧವ್ಯಾಪ್ತಿಸಿದ್ಧಿವ್ಯಪೇಕ್ಷಣಾತ್ ।**
**ವೃಕ್ಷತ್ವಾಮ್ರತ್ವಯೋರ್ಯದ್ವದ್ ಯದ್ವಚ್ಚಾನಲಧೂಮಯೋಃ ॥**
**ಅನುಮಾನತ್ವಮೇವಾತ್ರ ಯುಕ್ತಂ ತಲ್ಲಕ್ಷಣಾನ್ವಯಾತ್ ।**
**ಅಸತಶ್ಚೇಂದ್ರಚಾಪಾದೇಃ ಕಾ ವ್ಯಕ್ತಿಃ ಕೃತಿರೇವ ಸಾ ॥**

**ಅನುವಾದ:**

ವಾಚ್ಯ ಮತ್ತು ಪ್ರತೀಯಮಾನ ಎಂಬ ಅರ್ಥಗಳು ದೀಪ–ಘಟಗಳಂತೆ ಒಟ್ಟಿಗೆ ಗೋಚರವಾಗದಿರುವುದರಿಂದ ಅವುಗಳಿಗೆ ವ್ಯಂಗ್ಯವ್ಯಂಜಕ ಭಾವವು ಇಲ್ಲ. (ವಾಚ್ಯ–ಪ್ರತೀಯುಮಾನಾರ್ಥಗಳಲ್ಲಿಯೂ) ಪಕ್ಷಧರ್ಮತ್ವ, ಸಂಬಂಧ, ವ್ಯಾಪ್ತಿಸಿದ್ಧಿಗಳು ಬೇಕಾಗಿರುವುದರಿಂದ ವೃಕ್ಷತ್ವ–ಆಮ್ರತ್ವಗಳ ನಡುವೆ ಮತ್ತು ಬೆಂಕಿ–ಹೊಗೆಗಳ ನಡುವೆ ಇರುವಂತೆ ಅನುಮಾನವೇ ಇದೆಯೆಂದು ಹೇಳುವುದು ಯುಕ್ತ. ಏಕೆಂದರೆ ಅನುಮಾನದ ಲಕ್ಷಣವು (ವಾಚ್ಯದಿಂದ ಪ್ರತೀಯಮಾನವು ತೋರುವ ಸಂದರ್ಭಕ್ಕೂ) ಅನ್ವಯಿಸುತ್ತದೆ. ಅಸತ್ತಾದ ಕಾಮನಬಿಲ್ಲು ಮುಂತಾದವುಗಳಲ್ಲಿ ಯಾವ ಅಭಿವ್ಯಕ್ತಿ ಇದೆ? ಅದು ಕೃತಿಯೇ ಸರಿ.

**ಕಾರ್ಯತ್ವಂ ಹ್ಯಸತೋಽಪೀಷ್ಟಂ ಹೇತುತ್ವಂ ತು ವಿರುಧ್ಯತೇ ।**
**ಸರ್ವಸಾಮರ್ಥ್ಯವಿಗಮಾದ್ ಗಗನೇಂದೀವರಾದಿವತ್ ॥**
**ಶಬ್ದಪ್ರಯೋಗಃ ಪ್ರಾಯೇಣ ಪರಾರ್ಥಮುಪಯುಜ್ಯತೇ ।**
**ನಹಿ ತೇನ ವಿನಾ ಶಕ್ಯೋ ವ್ಯವಹಾರಯಿತುಂ ಪರಃ ॥**
**ನ ಚ ಯುಕ್ತಿನಿರಾಶಂಸಾತ್ ತತಃ ಕಶ್ಚಿತ್ ಪ್ರವರ್ತತೇ ।**
**ನಿವರ್ತತೇ ವೇತ್ಯಸ್ಯೇಷ್ಟಾ ಸಾಧ್ಯಸಾಧನಗರ್ಭತಾ ॥**

**ಅನುವಾದ:**

ಅಸತ್ತಾದುದಕ್ಕೆ ಕಾರಣತ್ವ ಪ್ರಮಾಣವಿರುದ್ಧ, ಆದರೆ ಕಾರ್ಯತ್ವವು ಅಭಿಮತವೇ. ಗಗನಕಮಲಾದಿಗಳಂತೆ ಎಲ್ಲ ಸಾಮರ್ಥ್ಯಶೂನ್ಯವಾದುದು ಕಾರಣವಾಗಲಾರದು ಅಷ್ಟೆ.

ಶಬ್ದಪ್ರಯೋಗವನ್ನು ಮಾಡುವುದು ಪ್ರಾಯಃ ಬೇರೆಯವರಿಗಾಗಿ. ಶಬ್ದಪ್ರಯೋಗವನ್ನು ಮಾಡದೆ ಇನ್ನೊಬ್ಬರನ್ನು ಕಾರ್ಯದಲ್ಲಿ ತೊಡಗಿಸಲು ಸಾಧ್ಯವಿಲ್ಲ.

ಯುಕ್ತಿರಹಿತವಾದ ಮಾತಿನಿಂದ ಯಾವನೂ ಕಾರ್ಯದಲ್ಲಿ ಪ್ರವೃತ್ತನಾಗುವುದೂ ಇಲ್ಲ, ಕಾರ್ಯದಿಂದ ನಿವೃತ್ತನಾಗುವುದೂ ಇಲ್ಲ. ಆದ್ದರಿಂದ ಮಾತು ಸಾಧ್ಯಸಾಧನಭಾವಗರ್ಭಿತವಾಗಿರುವುದು ಉಚಿತ.

**ತೇ ಪ್ರತ್ಯೇಕಂ ದ್ವಿಧಾ ಜ್ಞೇಯೇ ಶಾಬ್ದತ್ವಾರ್ಥತ್ವಭೇದತಃ ।**
**ಪದಾರ್ಥವಾಕ್ಯಾರ್ಥತಯಾ ತೇ ಅಪಿ ದ್ವಿವಿಧೇ ಮತೇ ॥**
**ತತ್ರ ಸಾಧ್ಯೋ ವಸ್ತುಮಾತ್ರಮಲಂಕಾರಾ ರಸಾದಯಃ ।**
**ಇತಿ ತ್ರಿಧೈವ ತತ್ರಾದ್ಯೌ ಪದಂ ಶಬ್ದಾನುಮಾನಯೋಃ ॥**
**ಅಂತ್ಯೋಽನುಮೇಯೋ ಭಕ್ತ್ಯಾ ತು ತಸ್ಯ ವ್ಯಂಗ್ಯತ್ವಮುಚ್ಯತೇ ।**
**ಭಕ್ತೇಃ ಪ್ರಯೋಜನಾಂಶೋ ಯಶ್ಚಮತ್ಕಾರಿತ್ವಲಕ್ಷಣಃ ॥**

**ಸ ತತ್ರಾಸ್ತೀತಿ ಸೋಽಪ್ಯಸ್ಯ ವಿಭಾವಾದ್ಯೇಕಹೇತುಕಃ ।**
**ಅತ ಏವ ನ ಲೋಕೇಽಪಿ ಚಮತ್ಕಾರಃ ಪ್ರಸಜ್ಯತೇ ॥**

ಆ ಪ್ರವೃತ್ತಿ–ನಿವೃತ್ತಿಗಳೆರಡೂ ಶಾಬ್ದ–ಆರ್ಥ ಎಂದು ಎರಡು ವಿಧವಾಗಿರಬಹುದು. ಅವೆರಡೂ ಮತ್ತೆ ಪದಾರ್ಥ–ವಾಕ್ಯಾರ್ಥ ಎಂದು ಪ್ರತ್ಯೇಕವಾಗಿ ಎರಡು ಪ್ರಕಾರಗಳನ್ನು ಹೊಂದಿರಬಹುದು.

ಅವುಗಳಲ್ಲಿ ಸಾಧ್ಯವು ವಸ್ತುಮಾತ್ರ, ಅಲಂಕಾರ, ರಸಾದಿ ಎಂದು ಮೂರು ವಿಧವಾಗಿರುತ್ತದೆ. ಅವುಗಳಲ್ಲಿ ಮೊದಲನೆಯ ಎರಡು ಶಬ್ದ ಮತ್ತು ಅನುಮಾನಗಳಿಗೆ ಗೋಚರವಾಗುತ್ತವೆ.

ಕೊನೆಯದಾದ ರಸಾದಿಯಾದರೋ ಕೇವಲ ಅನುಮೇಯ. ಅದನ್ನು ವ್ಯಂಗ್ಯವೆಂದು ಕರೆಯುವುದು ಉಪಚಾರದಿಂದ ಮಾತ್ರ. ಉಪಚಾರ (=ಭಕ್ತಿ= ಲಕ್ಷಣಾ) ಎಂಬುದಕ್ಕೆ ಪ್ರಯೋಜನವಾಗಿರುವುದು ಚಮತ್ಕಾರ. ಅದು ಇದೆ ಎಂಬುದೇ (ವ್ಯಂಗ್ಯವೆಂದು ಔಪಚಾರಿಕವಾಗಿ ಕರೆಯುವುದಕ್ಕೆ ಕಾರಣ). ಆ ವ್ಯಂಗ್ಯತ್ವವೂ ರಸಕ್ಕೆ ವಿಭಾವಾದಿಗಳಿಂದ ಮಾತ್ರ ಒದಗುತ್ತದೆ. ಆದ್ದರಿಂದ ಲೋಕದಲ್ಲಿ ಅಂಥ ಚಮತ್ಕಾರದ ಪ್ರಸಂಗವಿಲ್ಲ.

**ತತ್ರ ಹೇತ್ವಾದಯಃ ಸಂತಿ ನ ವಿಭಾವಾದಯೋ ಯತಃ ।**
**ನ ಚೈಕಾರ್ಥತ್ವಮಾಶಂಕ್ಯಮ್ ಏಷಾಂ ಲಕ್ಷಣಭೇದತಃ ॥**
**ಸ್ವಭಾವಶ್ಚಾಯಮರ್ಥಾನಾಂ ಯನ್ನ ಸಾಕ್ಷಾದಮೀ ತಥಾ ।**
**ಸ್ವದಂತೇ ಸತ್ಕವಿಗಿರಾಂ ಗತಾ ಗೋಚರತಾಂ ಯಥಾ ॥**

**ಅನುವಾದ:**

ಅಲ್ಲಿ (ಎಂದರೆ ಲೋಕದಲ್ಲಿ) ಕಾರಣ (ಕಾರ್ಯ, ಸಹಕಾರಿ)ಗಳಿರುತ್ತವೆ. ವಿಭಾವ (ಅನುಭಾವ, ಸಂಚಾರಿ ಭಾವ)ಗಳು ಇರುವುದಿಲ್ಲ. (ಕಾರಣಾದಿಗಳು ವಿಭಾವಾದಿಗಳು) ಎಂಬ ಶಬ್ದಗಳು ಒಂದೇ ಅರ್ಥವನ್ನು ಹೊಂದಿವೆ (ಎಂದರೆ ಕಾರಣಾದಿಗಳೂ ವಿಭಾವಾದಿಗಳೂ ಒಂದೇ) ಎಂದು ಹೇಳಬಾರದು. ಏಕೆಂದರೆ ಕಾರಣಾದಿಗಳ ಲಕ್ಷಣಗಳೇ ಬೇರೆ, ವಿಭಾವಾದಿಗಳ ಲಕ್ಷಣಗಳೇ ಬೇರೆ.

ಪದಾರ್ಥಗಳು ಉತ್ತಮಕವಿಗಳ ಮಾತುಗಳಿಗೆ ಗೋಚರವಾದಾಗ ಹೇಗೆ (ಸಹೃದಯರಿಗೆ) ರುಚಿಸುವುವೋ ಹಾಗೆ ತಮ್ಮ ಸಾಕ್ಷಾತ್ ಸ್ವರೂಪದಿಂದ ಗೋಚರವಾದಾಗ ರುಚಿಸುವುದಿಲ್ಲ ಎಂಬುದು ಎಲ್ಲ ಪದಾರ್ಥಗಳ ಸ್ವಭಾವವೇ ಆಗಿದೆ.

**ಯತ್ ಪುನರಸ್ಯ ಅನೇಕಶಕ್ತಿಸಮಾಶ್ರಯತ್ವಾದ್ ವ್ಯಾಪಾರಾಂತರಪರಿಕಲ್ಪನಂ ತದರ್ಥಸ್ಯೈವೋಪಪದ್ಯತೇ, ನ ಶಬ್ದಸ್ಯ ತಸ್ಯ ಅನೇಕಶಕ್ತಿಸಮಾಶ್ರಯತ್ವಾಸಿದ್ಧೇಃ। ತಥಾ ಹಿ। ಏಕಾಶ್ರಯಾಃ ಶಕ್ತಯೋಽನ್ಯೋನ್ಯಾನಪೇಕ್ಷಪ್ರವೃತ್ತಯಃ ಅಪಾಕೃತಪೌರ್ವಾಪರ್ಯನಿಯಮಾ ಯುಗಪದೇವ ಸ್ವಕಾರ್ಯಕಾರಿಣ್ಯೋ ದೃಷ್ಟಾಃ, ಯಥಾ ದಾಹಕತ್ವಪ್ರಕಾಶಕತ್ವಾದಯೋಽಗ್ನೇಃ।**

**ಅನುವಾದ:**

ಶಬ್ದವು ಅನೇಕ ಶಕ್ತಿಗಳಿಗೆ ಆಶ್ರಯವಾಗಿರುವುದರಿಂದ ಅದರಲ್ಲಿ (ಅಭಿಧೆಯ ಜೊತೆಗೆ) ಬೇರೆ ವ್ಯಾಪಾರಗಳನ್ನೂ ಪರಿಕಲ್ಪಿಸಲಾಗಿದೆ. ಆದರೆ ಹಾಗೆ ವ್ಯಾಪಾರಾಂತರವನ್ನು ಅರ್ಥದಲ್ಲೇ ಪರಿಕಲ್ಪಿಸುವುದು ಯೋಗ್ಯವಾಗುತ್ತದೆ. ಶಬ್ದದಲ್ಲಿ ಪರಿಕಲ್ಪಿಸುವುದು ಸರಿಯಲ್ಲ. ಹೇಗೆಂದರೆ–

ಒಂದೇ ಆಶ್ರಯದಲ್ಲಿ ಹಲವು ಶಕ್ತಿಗಳಿದ್ದಾಗ ಆ ಶಕ್ತಿಗಳು ಪರಸ್ಪರ ನಿರಪೇಕ್ಷವಾಗಿ, ಪೌರ್ವಾಪರ್ಯನಿಯಮವನ್ನು ಮುರಿದು ಏಕಕಾಲದಲ್ಲಿ ಒಟ್ಟಿಗೆ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತವೆ ಎಂದು ಪ್ರತ್ಯಕ್ಷಗೋಚರವಾಗಿದೆ. ಉದಾಹರಣೆಗೆ ಅಗ್ನಿಯ ದಾಹಕತ್ವ ಮತ್ತು ಪ್ರಕಾಶಕತ್ವ ಎಂಬ ಶಕ್ತಿಗಳು.

**ವಿವರಣೆ:**

ಬೆಂಕಿಯಲ್ಲಿ ಸುಡುವ ಮತ್ತು ಬೆಳಕನ್ನು ಕೊಡುವ ಶಕ್ತಿಗಳಿವೆ. ಒಂದು ಶಕ್ತಿ ಇನ್ನೊಂದನ್ನು ಅವಲಂಬಿಸಿಲ್ಲ. ಎರಡೂ ಏಕಕಾಲದಲ್ಲಿ ತಮ್ಮ ಕಾರ್ಯವನ್ನು ಮಾಡುತ್ತವೆ. ಆದ್ದರಿಂದ ಅವುಗಳಲ್ಲಿ ಇದು ಮೊದಲು, ಇನ್ನೊಂದು ಆಮೇಲೆ ಎಂಬ ಪೌರ್ವಾಪರ್ಯದ ನಿಯಮವಿಲ್ಲ.

**ನ ಚ ಶಬ್ದಾಶ್ರಯಾಃ ಶಕ್ತಯಸ್ತಥಾ ದೃಶ್ಯಂತೇ, ಅಭ್ಯುಪಗಮ್ಯಂತೇ ವಾ, ನಿಯೋಗತೋಽಭಿಧಾ ಶಕ್ತಿಪೂರ್ವಕತ್ವೇನೇತರಶಕ್ತಿಪ್ರವೃತ್ತಿದರ್ಶನಾತ್ । ತಸ್ಮಾದ್ ಭಿನ್ನಾಶ್ರಯಾ ಏವ ತಾಃ, ನ ಶಬ್ದೈಕಸಮಾಶ್ರಯಾ ಇತ್ಯವಸೇಯಮ್ ।**

**ಅನುವಾದ:**

ಶಬ್ದವನ್ನು ಆಶ್ರಯಿಸಿರುವ ಶಕ್ತಿಗಳು ಹಾಗೆ ಇರುವಂತೆ ಕಾಣಿಸುವುದಿಲ್ಲ, (ಅವುಗಳಿಗೆ ಅಂಥ ಸ್ವಭಾವ ಇದೆಯೆಂದು ಯಾರೂ) ಒಪ್ಪುವುದೂ ಇಲ್ಲ. ಅಭಿಧಾಶಕ್ತಿಪೂರ್ವಕವಾಗಿಯೇ ಇತರ ಶಕ್ತಿಗಳು ಪ್ರವೃತ್ತವಾಗುತ್ತವೆ ಎಂಬುದು (ಸ್ಪಷ್ಟವಾಗಿ) ಕಂಡುಬರುತ್ತವೆ. ಆದ್ದರಿಂದ ಆ (ಇತರ) ಶಕ್ತಿಗಳು ಬೇರೆ ಆಶ್ರಯದಲ್ಲಿರುತ್ತವೆ, ಶಬ್ದವೆಂಬ ಒಂದೇ ಆಶ್ರಯದಲ್ಲಿಲ್ಲ ಎಂದು ಅರಿತುಕೊಳ್ಳಬೇಕು.

**ವಿವರಣೆ:**

ಅಭಿಧಾ, ಲಕ್ಷಣಾ, ವ್ಯಂಜನಾ ಎಂಬ ಮೂರು ಶಕ್ತಿಗಳು (ಅಥವಾ ವೃತ್ತಿಗಳು) ಶಬ್ದದಲ್ಲಿವೆ ಎಂದು ಆನಂದವರ್ಧನಾನುಯಾಯಿಗಳು ಹೇಳುತ್ತಾರೆ. ಮೊದಲು ಅಭಿಧಾ ಎಂಬುದು ಸರ್ವಸಮ್ಮತ. ಅನಂತರ ಲಕ್ಷಣಾ, ಆಮೇಲೆ ವ್ಯಂಜನಾ. ಅಥವಾ ಕೆಲವು ಉದಾಹರಣೆಗಳಲ್ಲಿ ಮೊದಲು ಅಭಿಧಾ, ಅನಂತರ ವ್ಯಂಜನಾ. ಮೂರೂ ಶಕ್ತಿಗಳು ಒಟ್ಟಿಗೆ ಕಾರ್ಯವನ್ನು ಮಾಡುವುದಿಲ್ಲ. ಆದ್ದರಿಂದ ಅಭಿಧಾ ಒಂದು ಮಾತ್ರ ಶಬ್ದದ ಶಕ್ತಿ ಎಂಬುದು ಮಹಿಮಭಟ್ಟನ ವಾದ.

**ಯಶ್ಚಾಸಾವಾಶ್ರಯೋ ಭಿನ್ನಃ ಸೋಽರ್ಥ ಏವ ಇತಿ ತದ್ವ್ಯಾಪಾರಸ್ಯ ಅನುಮಾನಾಂತರ್ಭಾವೋಽಭ್ಯುಪಗಂತವ್ಯ ಏವ। ತಥಾ ಹಿ। ಗೌರ್ವಾಹೀಕ ಇತ್ಯಾದೌ ತಾವದ್ ಗವಾದಯೋಽರ್ಥಾ ಬಾಧಿತವಾಹೀಕಾದ್ಯರ್ಥಾಂತರೈಕಾತ್ಮ್ಯಾಸ್ತಾದ್ರೂಪ್ಯವಿಧಾನಾ–ನ್ಯಥಾನುಪಪತ್ತ್ಯಾ ಕೇನಚಿದಂಶೇನ ತತ್ರ ತತ್ತ್ವಮ್ ಅನುಮಾಪಯಂತಿ, ನ ಸರ್ವಾತ್ಮನಾ।**

**ಅನುವಾದ:**

ಹಾಗೆ ಭಿನ್ನವಾದ ಆಶ್ರಯವು (ಆ ಶಬ್ದದ) ಅರ್ಥವೇ ಆದ್ದರಿಂದ ಆ ಅರ್ಥದ ವ್ಯಾಪಾರವು (=ಕ್ರಿಯೆಯು) ಅನುಮಾನದಲ್ಲಿ ಅಂತರ್ಗತವಾಗುತ್ತದೆ ಎಂದು ಒಪ್ಪಿಕೊಳ್ಳಲೇಬೇಕು. ಹೇಗೆಂದರೆ– ಗೌರ್ವಾಹೀಕಃ (ವಾಹೀಕನು ಹಸು) ಇತ್ಯಾದಿ ಪ್ರಯೋಗಗಳಲ್ಲಿ ಹಸು ಮುಂತಾದ ಅರ್ಥಗಳಿಗೆ ವಾಹೀಕ ಮುಂತಾದ ಅರ್ಥಗಳೊಡನೆ ತಾದಾತ್ಮ್ಯವು ಬಾಧಿತವಾಗುವುದರಿಂದ, (ವಾಕ್ಯವು ಹೇಳಿದ) ತಾದ್ರೂಪ್ಯವು ಬೇರೆ ರೀತಿಯಲ್ಲಿ ಹೊಂದುವುದಿಲ್ಲವೆಂಬ ಕಾರಣದಿಂದ ಯಾವುದೋ ಒಂದು ಅಂಶದಲ್ಲಿ ವಾಹೀಕನಲ್ಲಿ ಗೋತ್ವವಿದೆ ಎಂಬುದನ್ನು ಅನುಮಿತಿಯಿಂದ ತಿಳಿಸುತ್ತವೆ, ಪೂರ್ಣವಾಗಿ ಗೋತ್ವವಿದೆ ಎಂದಲ್ಲ.

**ವಿವರಣೆ:**

ವಾಹೀಕ ಎಂದರೆ ವಿಪಾಶಾನದಿಯ ದಡದಲ್ಲಿ ವಾಸಿಸುತ್ತಿದ್ದ ಒಂದು ಬುಡಕಟ್ಟಿನ ವ್ಯಕ್ತಿ. ಅವನ ಬುದ್ಧಿ ಕಮ್ಮಿ ಎಂದು ಗೌರ್ವಾಹೀಕಃ (ವಾಹೀಕನೊಂದು ಪಶು) ಎಂಬ ಪ್ರಯೋಗ ಭಾಷೆಯಲ್ಲಿದೆ. ಅಂಶತಃ ವಾಹೀಕನಲ್ಲಿ ಪಶುವಿನ ಗುಣ ಇದೆ ಎಂದು ಆ ವಾಕ್ಯದ ತಾತ್ಪರ್ಯ.

(ಸಾಧರ್ಮ್ಯವಿಲ್ಲದೆ ತತ್ತ್ವಾರೋಪವಿಲ್ಲ)

**ನ ಹ್ಯನುನ್ಮತ್ತಃ ಕಶ್ಚಿತ್ ಕ್ವಚಿತ್ ಕಿಂಚಿತ್ ಕಥಂಚಿತ್ ಸಾಧರ್ಮ್ಯಮನುತ್ಪಶ್ಯನ್ನೇವ ಅಕಸ್ಮಾತ್ ತತ್ತ್ವಮಾರೋಪಯತಿ ಇತಿ ಪರಿಶೀಲಿತವಕ್ತೃಸ್ವರೂಪಃ ಪ್ರತಿಪತ್ತಾ ತತ್ತ್ವಾರೋಪನಿಮಿತ್ತಂ ಸಾದೃಶ್ಯಮಾತ್ರಮೇವ ಪ್ರತಿಪತ್ತುಮರ್ಹತಿ, ನ ತತ್ತ್ವಮ್ । ತದ್ಧಿ ವಾಚ್ಯತಯಾ ಉಪಕ್ರಮ ಏವ ಭಾಸತೇ, ನ ಪ್ರತೀತಿಪರ್ಯವಸಾನಾಸ್ಪದಂ ಭವಿತುಮರ್ಹತಿ, ತಸ್ಯ ಬಾಧೋಪಪತ್ತೇಃ।**

**ಅನುವಾದ:**

ಹುಚ್ಚನಲ್ಲದ ಯಾವನೂ ಎಲ್ಲೋ ಹೇಗೋ ಯಾವುದೋ ಸಮಾನ ಧರ್ಮವನ್ನು ಕಾಣದೆ ನಿಷ್ಕಾರಣವಾಗಿ (ಒಂದು ವಸ್ತುವಿನಲ್ಲಿ) ಇನ್ನೊಂದು ವಸ್ತುವಿನ ಅಭೇದವನ್ನು ಆರೋಪಿಸುವುದಿಲ್ಲ. ಆದ್ದರಿಂದ ವಕ್ತೃವಿನ ಸ್ವರೂಪವನ್ನು ಪರಿಶೀಲಿಸಿದ ವೀಕ್ಷಕನು (ಇನ್ನೊಂದು ವಸ್ತುವಿನ) ಧರ್ಮವನ್ನು ಆರೋಪಿಸುವುದಕ್ಕೆ ನಿಮಿತ್ತವಾಗಿ ಸಾದೃಶ್ಯವನ್ನೇ ಗ್ರಹಿಸಲು ಸಾಧ್ಯ, ಅದರ ಅಭೇದವನ್ನಲ್ಲ. ಆ ಅಭೇದವು (ಅಥವಾ ತಾದಾತ್ಮ್ಯವು) ವಾಚ್ಯವಾಗಿ (ಶಬ್ದಶ್ರವಣಾನಂತರ) ಆರಂಭದಲ್ಲಿಯೇ ತೋರುತ್ತದೆ, ಆದ್ದರಿಂದ ಆ ತಾದಾತ್ಮ್ಯವು ಪ್ರತೀತಿಯ ಪರ್ಯವಸಾನದಲ್ಲಿ ವಿಷಯವಾಗಿರಲಾರದು, ಏಕೆಂದರೆ ಅದು ಬಾಧಿತವಾಗುತ್ತದೆ.

**ವಿವರಣೆ:**

ವಾಹೀಕ ಎಂಬುವವನೊಬ್ಬ ಮನುಷ್ಯ, ಅವನು ಗೋವು ಎಂದರೆ ಅದು ಪ್ರತ್ಯಕ್ಷವಿರುದ್ಧವಾದ್ದರಿಂದ ಬಾಧಿತ. ಹುಚ್ಚನು ಹಾಗೆ ವಾಹೀಕನೇ ಗೋವು ಎಂದು ಹೇಳಿದರೆ ಅದಕ್ಕೆ

ಏನೂ ಅರ್ಥವಿಲ್ಲವೆಂದು ಸುಮ್ಮನಾಗಬಹುದು. ಆದರೆ ಅನುನ್ಮತ್ತನು, ಎಂದರೆ ಸ್ತಿಮಿತಬುದ್ಧಿಯುಳ್ಳವನು ಅಂಥ ಪ್ರಯೋಗವನ್ನು ಮಾಡಿದರೆ ಅದನ್ನು ಕೇಳಿದವನು ಹಾಗೆ ವಾಕ್ಯವನ್ನು ಪ್ರಯೋಗಿಸಲು ಕಾರಣವೇನೆಂದು ಚಿಂತಿಸಿ, ವಾಹೀಕನಲ್ಲಿ ಗೋವಿನಲ್ಲಿರುವ ಕೆಲವು ಗುಣಗಳಿವೆ, ಆ ಸಾದೃಶ್ಯ ಅಂಥ ಪ್ರಯೋಗದ ಕಾರಣ ಎಂದು ಅರಿತುಕೊಳ್ಳುತ್ತಾನೆ. ಗೌರ್ವಾಹೀಕಃ (ವಾಹೀಕನು ಗೋವು) ಎಂಬ ಮಾತಿನ ಮೊದಲ ಅರ್ಥ ಆ ಎರಡು ಪದಗಳ ಅರ್ಥಗಳ ತಾದಾತ್ಮ್ಯ. ಅದು ಬಾಧಿತ. ಅದು ವಾಕ್ಯದ ಅಂತಿಮ ಅರ್ಥವಾಗಲಾರದು. ಇಂಥ ಪ್ರಯೋಗಗಳಲ್ಲಿ ಅಭಿಧೆಯು ತಾದಾತ್ಮ್ಯವನ್ನು ಹೇಳುತ್ತದೆ. ತಾದಾತ್ಮ್ಯ ಬಾಧಿತವಾದುದರಿಂದ ಸಾದೃಶ್ಯದಲ್ಲಿ ಪರ್ಯವಸಾನ. ವಾಹೀಕಃ ಗೋಸದೃಶಃ, ವಾಹೀಕೇ ಗೋಧರ್ಮಾಃ ಕೇಚನ ಸಂತಿ (ವಾಹೀಕನು ಗೋವಿನಂತೆ, ಗೋವಿನಲ್ಲಿರುವ ಕೆಲವು ಧರ್ಮಗಳು ವಾಹೀಕನಲ್ಲಿವೆ) ಎಂಬುದು ತಾತ್ಪರ್ಯ. ಇಂಥ ಪ್ರಯೋಗಗಳಲ್ಲಿ ಲಕ್ಷಣಾವ್ಯಾಪಾರ. ಇದೂ ಶಬ್ದದ ವೃತ್ತಿ ಎಂಬುದು ಆನಂದವರ್ಧನನ ಅಭಿಪ್ರಾಯ. ಅಭಿಧೆ ಮಾತ್ರ ಶಬ್ದದ ವೃತ್ತಿ. ಲಕ್ಷಣಾ ಎಂಬುದು ಅರ್ಥದ ವೃತ್ತಿ ಅಥವಾ ವ್ಯಾಪಾರ ಎಂಬುದು ಮಹಿಮಭಟ್ಟನ ಸಿದ್ಧಾಂತ.

**ತಸ್ಯ ಚೈವಂವಿಧಸ್ಯೋಪಕ್ರಮಸ್ಯ ನಿಮಿತ್ತಂ ಸಾಧರ್ಮ್ಯಮಾತ್ರಪ್ರತಿಪಾದನಮ್। ಪ್ರಯೋಜನಂ ಚ ಲಾಘವೇನ ವಾಹೀಕಾದೌ ಗವಾದಿಗತ ಜಾಡ್ಯಾದಿ-ಧರ್ಮಪ್ರತಿಪಾದನಂ, ಯಸ್ಮಾದತಿದೇಶಪ್ರಕಾರೋಽಯಮರ್ಥಾಂತರೇ ಶಬ್ದವಿನಿವೇಶೋ ನಾಮ। ಯದುಕ್ತಮ್-**

**ಜಾತಿಶಬ್ದೋಽಂತರೇಣಾಪಿ ಜಾತಿಂ ಯತ್ರ ಪ್ರಯುಜ್ಯತೇ।**
**ಸಂಬಂಧಿಸದೃಶಾದ್ಧರ್ಮಾತ್ ತಂ ಗೌಣಮಪರೇ ವಿದುಃ ॥**

**ಅನುವಾದ:**

ಈ ವಿಧವಾದ ಪ್ರವೃತ್ತಿಗೆ ನಿಮಿತ್ತವು ಸಾಧರ್ಮ್ಯದ ಪ್ರತಿಪಾದನೆ. ಅದರ ಪ್ರಯೋಜನವು ಬೇಗನೆ ವಾಹೀಕಾದಿಗಳಲ್ಲಿ ಗೋ-ಇತ್ಯಾದಿಗಳಲ್ಲಿರುವ ಮಾಂದ್ಯ ಮುಂತಾದ ಧರ್ಮಗಳ ಪ್ರತಿಪಾದನೆ. ಏಕೆಂದರೆ (ಶಬ್ದದ ಮುಖ್ಯ ವಾಚ್ಯಾರ್ಥಕ್ಕಿಂತ ಬೇರೆಯಾದ) ಇನ್ನೊಂದು ಅರ್ಥದಲ್ಲಿ ಶಬ್ದದ ಪ್ರಯೋಗವು ಅತಿದೇಶದ ಒಂದು ಪ್ರಕಾರವೇ ಆಗಿದೆ. ಹಿಂದಿನವರೂ ಹೇಳಿದ್ದಾರೆ-

"(ವಾಚ್ಯವಾದ) ಜಾತಿಯು ಇಲ್ಲದಿದ್ದರೂ (ಆ ಅರ್ಥದಲ್ಲಿ) ಜಾತಿಶಬ್ದವನ್ನು ಸಂಬಂಧಿಸದೃಶವಾದ ಧರ್ಮದ ಆಧಾರದಿಂದ ಎಲ್ಲಿ ಪ್ರಯೋಗಿಸುತ್ತಾರೋ, ಅದು ಗೌಣ ಶಬ್ದ ಎಂದು ಬೇರೆಯವರು ತಿಳಿದುಕೊಂಡಿದ್ದಾರೆ".

**ವಿವರಣೆ:**

ಅತಿದೇಶ ಎಂದರೆ ಒಂದು ವಸ್ತುವಿನಲ್ಲಿರುವ ಧರ್ಮಗಳನ್ನು ಇನ್ನೊಂದರಲ್ಲಿ ಆದೇಶಿಸುವುದು. ರಾಮನ ಸಂಪತ್ತನ್ನು ದೀರ್ಘವಾಗಿ ವರ್ಣಿಸಿ "ರಾಮವತ್ ಕೃಷ್ಣಸ್ಯ ಸಂಪತ್" (ರಾಮನಂತೆ ಕೃಷ್ಣನೂ ಸಂಪತ್ತನ್ನು ಪಡೆದಿದ್ದಾನೆ) ಎಂದು ಹೇಳಿದರೆ ಅದು ಅತಿದೇಶ. ವಾಹೀಕೋ ಗೌಃ ಎಂದು ಹೇಳಿದಾಗ ಗೋವಿನಲ್ಲಿರುವ ಜಾಡ್ಯ ಮುಂತಾದ ಧರ್ಮಗಳು ವಾಹೀಕನಲ್ಲಿ ತೋರುವುದರಿಂದ ಅದೂ ಅತಿದೇಶವೇ.

**ಏವಂ "ಕೃಶಾಂಗ್ಯಾಃ ಸಂತಾಪಂ ವದತಿ ಬಿಸಿನೀಪತ್ರಶಯನಮ್" ಇತ್ಯಾದಾವವಗಂತವ್ಯಮ್। ಅವಿನಾಭಾವಾವ ಸಾಯಪೂರ್ವಿಕಾ ಹ್ಯನ್ಯತೋಽನ್ಯಸ್ಯ ಪ್ರತೀತಿಃ ಅನುಮಾನಮ್ ಇತ್ಯನುಮಾನಲಕ್ಷಣಮುಕ್ತಮ್। ತಚ್ಚ ಅತ್ರೋಪಲಭ್ಯತ ಏವ। ತಥಾಹಿ। ವದತೀತ್ಯಾದೌ ವದನಾದೇರರ್ಥಾಂತರಸ್ಯ ಪ್ರಕಾಶಾದೇಃ ಪ್ರತೀತಿಃ। ತಯೋಶ್ಚಾವಿನಾಭಾವಃ ಕಾರ್ಯಕಾರಣಭಾವಕೃತಃ, ಪ್ರಕಾಶನಸ್ಯ ವದನಕಾರ್ಯತ್ವಪ್ರಸಿದ್ಧೇಃ। ನ ಚ ವದತೇಃ ಪ್ರಕಾಶೋ ವಾಚ್ಯ ಇತಿ ಶಕ್ಯಂ ವಕ್ತುಮ್। ತಸ್ಯ ತತ್ರಾಸಮಿತತ್ವಾತ್। ಪ್ರಕಾಶಸ್ಯ ಚಾತತ್ವಾತ್। ನ ಚಾಯಂ ಸ್ವಾರ್ಥಮೇವ ಪ್ರತಿಪಾದಯತಿ, ತಸ್ಯ ಬಾಧೋಪಪತ್ತೇಃ।**

**ಅನುವಾದ:**

ಇದೇ ರೀತಿಯಾಗಿ "ಕೃಶಾಂಗಿಯ ಸಂತಾಪವನ್ನು ತಾವರೆಎಲೆಗಳ ಹಾಸಿಗೆಯು ಹೇಳುತ್ತಿದೆ" ಇತ್ಯಾದಿಗಳಲ್ಲೂ ಅರಿತುಕೊಳ್ಳಬೇಕು. ಅವಿನಾಭಾವ ಸಂಬಂಧದ ನಿರ್ಣಯವನ್ನು ಆಶ್ರಯವನ್ನಾಗಿ ಮಾಡಿಕೊಂಡು, ಒಂದು ವಸ್ತುವಿನ ಜ್ಞಾನದಿಂದ ಹುಟ್ಟುವ ಇನ್ನೊಂದು ವಸ್ತುವಿನ ಪ್ರತೀತಿಯೇ ಅನುಮಾನ ಎಂದು ಅನುಮಾನಲಕ್ಷಣವನ್ನು ಹೇಳಿದ್ದಾರೆ. ಅದು ಈ ಉದಾಹರಣೆಯಲ್ಲೂ ಸಿದ್ಧವಾಗಿಯೇ ಇದೆ. "ವದತಿ" ಎಂಬ ಪದದಿಂದ (ಕೃಶಾಂಗ್ಯಾಃ ಸಂತಾಪಂ ಇತ್ಯಾದಿ ಉದಾಹರಣೆಯಲ್ಲಿ) ಬೇರೆಯದಾದ ಪ್ರಕಾಶನ ಎಂಬ ಅರ್ಥದ ಪ್ರತೀತಿ ಹುಟ್ಟುತ್ತದೆ. ವದನಕ್ಕೂ ಪ್ರಕಾಶನಕ್ಕೂ ಕಾರ್ಯಕಾರಣಭಾವದ ಆಧಾರದಿಂದ ಅವಿನಾಭಾವ ಸಿದ್ಧವಾಗಿದೆ. ಏಕೆಂದರೆ ಪ್ರಕಾಶನವು ವದನದ (ಮಾತಿನ ಬಳಕೆಯ) ಕಾರ್ಯವೆಂದು ಪ್ರಸಿದ್ಧವಾಗಿದೆ. ವದ್ ಧಾತುವಿಗೆ ಪ್ರಕಾಶನವೇ ವಾಚ್ಯಾರ್ಥ ಎಂದು ಹೇಳುವುದು ಶಕ್ಯವಲ್ಲ. ಏಕೆಂದರೆ ಆ ಧಾತುವಿಗೆ ಆ ಅರ್ಥವನ್ನು (ಧಾತು ಪಾಠದಲ್ಲಿ) ನಿರ್ದೇಶಿಸಿಲ್ಲ. ಪ್ರಕಾಶ ಎಂದರೆ ಮಾತು ಅಲ್ಲ. ವದತಿ ಎಂಬ ಪದವು (ಕೃಶಾಂಗ್ಯಾಃ ಸಂತಾಪಂ ಎಂಬ ಉದಾಹರಣೆಯಲ್ಲಿ) ತನ್ನ ಅರ್ಥವನ್ನೇ ಪ್ರತಿಪಾದಿಸುತ್ತದೆ ಎಂಬುದೂ ಇಲ್ಲ, ಏಕೆಂದರೆ ಆ ಅರ್ಥವು ಬಾಧಿತ.

**ಅಥೋಪಚಾರತ ಉಪಾದಾನಾನ್ಯಥಾನುಪಪತ್ತ್ಯಾ ವದನಕ್ರಿಯಾಯಾಃ ಸದೃಶೇ ಪ್ರಕಾಶನಾಖ್ಯೇ ಕ್ರಿಯಾಂತರೇ ವರ್ತತೇಽಯಂ ವದತಿರಿತ್ಯುಚ್ಯತೇ, ತರ್ಹಿ ಅನ್ಯಥಾನುಪಪತ್ತ್ಯಾ ವದನಾದೇಃ ಪ್ರಕಾಶಾದಿಃ ಪ್ರತೀಯಮಾನೋಽನುಮೇಯ ಏವ ಭವಿತುಮರ್ಹತಿ, ಅರ್ಥಾಪತ್ತೇಃ ಅನುಮಾನಾಂತರ್ಭಾವಾಭ್ಯುಪಗಮಾದಿತ್ಯುಕ್ತಮ್।**

**ಅನುವಾದ:**

ಮತ್ತೆ ಪ್ರಯೋಗವು ಅನ್ಯಥಾ ಹೊಂದದಿರುವ ಕಾರಣದಿಂದ ಲಕ್ಷಣಾವ್ಯಾಪಾರದ ಮೂಲಕ ಹೇಳುವ ಕ್ರಿಯೆಗೆ ಸದೃಶವಾದ ಪ್ರಕಾಶನವೆಂಬ ಕ್ರಿಯೆಯಲ್ಲಿ ಈ 'ವದತಿ' ಎಂಬ ಶಬ್ದವು ಪ್ರವೃತ್ತವಾಗಿದೆ ಎಂದು (ಯಾರಾದರೂ) ಹೇಳುವುದಾದರೆ; ಅನ್ಯಥಾ ಹೊಂದದಿರುವ ಕಾರಣದಿಂದ, ವದನ (ಹೇಳುವುದು)

ಇತ್ಯಾದಿಗಳಿಂದ ಪ್ರತೀಯಮಾನವಾಗುವ ಪ್ರಕಾಶಾದಿಗಳು ಅನುಮೇಯವೇ ಆಗಲು ಅರ್ಹವಾಗಿವೆ, ಏಕೆಂದರೆ ಅರ್ಥಾಪತ್ತಿಯು ಅನುಮಾನದಲ್ಲೇ ಅಂತರ್ಭಾವವನ್ನು ಹೊಂದಿದೆ ಎಂದು ನಾವು ಒಪ್ಪಿಕೊಂಡಿದ್ದೇವೆ.

**ವಿವರಣೆ:**

ನೈಯಾಯಿಕರು ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ ಎಂಬ ನಾಲ್ಕು ಪ್ರಮಾಣಗಳನ್ನು ಒಪ್ಪಿಕೊಂಡಿದ್ದಾರೆ. ಮೀಮಾಂಸಕರು ಅವುಗಳ ಜೊತೆಗೆ ಅರ್ಥಾಪತ್ತಿ ಎಂಬ ಐದನೆಯ ಪ್ರಮಾಣವನ್ನು ಒಪ್ಪಿಕೊಂಡಿದ್ದಾರೆ. ಅನ್ಯಥಾ ಅನುಪಪತ್ತಿಯಿಂದ ಅರ್ಥಾಂತರವನ್ನು ಊಹಿಸುವುದು ಅರ್ಥಾಪತ್ತಿ. ಮಹಿಮಭಟ್ಟನು ಅರ್ಥಾಪತ್ತಿಯನ್ನು ಅನುಮಾನದಲ್ಲೇ ಅಂತರ್ಭಾವಗೊಳಿಸುವುದರಿಂದ ಅದರಿಂದ ಲಭ್ಯಮಾನವಾಗುವ ಅರ್ಥವೂ ಅನುಮೇಯವೇ.

**ತಸ್ಮಾದ್ ಯೋಽಯಂ ವಾಹೀಕಾದೌ ಗವಾದಿಸಾಧರ್ಮ್ಯಾವಗಮಃ ಸ ತತ್ತ್ವಾರೋಪಾನ್ಯಥಾನುಪಪತ್ತಿಪರಿಕಲ್ಪಿತೋಽನುಮಾನಸ್ಯೈವ ವಿಷಯಃ। ನ ಶಾಬ್ದವ್ಯಾಪಾರಸ್ಯೇತಿ ಸ್ಥಿತಮ್। ಗೋತ್ವಾರೋಪೇಣ ವಾಹೀಕೇ ತತ್ಸಾಮ್ಯಮನುಮೀಯತೇ। ಕೋಹ್ಯತಸ್ಮಿನ್ನತತ್ತುಲ್ಯೇ ತತ್ತ್ವಂ ವ್ಯಪದಿಶೇದ್ ಬುಧಃ॥ ಇತಿ ಸಂಗ್ರಹಶ್ಲೋಕಃ।**

**ಅನುವಾದ:**

ಆದ್ದರಿಂದ ವಾಹೀಕಾದಿಗಳಲ್ಲಿ ಗೋವು ಇತ್ಯಾದಿಗಳ ಸಾಧರ್ಮ್ಯದ ಅರಿವು ಉಂಟಾಗುವುದು ತತ್ತ್ವಾರೋಪದ ಅನ್ಯಥಾನುಪಪತ್ತಿಯಿಂದ ಕಲ್ಪಿತವಾಗಿ ಮಾತ್ರ. ಆದ್ದರಿಂದ ಅದು ಅನುಮಾನಕ್ಕೇ ಗೋಚರ, ಶಬ್ದದ ವ್ಯಾಪಾರಕ್ಕೆ ಅಲ್ಲ ಎಂಬುದು ಸಿದ್ಧವಾಯಿತು.

ವಾಹೀಕನಲ್ಲಿ ಗೋತ್ವದ ಆರೋಪದಿಂದ ಗೋಸಾಧರ್ಮ್ಯವು ಅನುಮಿತವಾಗುತ್ತದೆ. ವಸ್ತುವಿಗಿಂತ ಭಿನ್ನವಾಗಿದ್ದು ಅದಕ್ಕೆ ಸದೃಶವೂ ಅಲ್ಲದುದರಲ್ಲಿ ಯಾವ ಜಾಣನು ತಾನೆ ಅದರ ಅಭೇದವನ್ನು ಹೇಳಿಯಾನು?

**ವಿವರಣೆ:**

ವಾಹೀಕನು ಗೋವು ಅಲ್ಲ. ಆದರೂ ವಾಹೀಕನು ಗೋವು ಎಂದು ತಿಳಿವಳಿಕೆಯುಳ್ಳ ವ್ಯಕ್ತಿಯು ಹೇಳಿದರೆ ಶ್ರೋತೃವು ವಾಹೀಕನಲ್ಲಿ ಗೋಸಾಮ್ಯವಿದೆ ಎಂದು ಅನುಮಾನಪ್ರಮಾಣದಿಂದ ಅರಿತುಕೊಳ್ಳುತ್ತಾನೆ. ಅಭಿನ್ನವೂ ಅಲ್ಲದ, ಸದೃಶವೂ ಅಲ್ಲದ ವಸ್ತುವಿನಲ್ಲಿ ಯಾವ ಬುದ್ಧಿಶಾಲಿಯೂ ತತ್ತ್ವಾರೋಪವನ್ನು ಮಾಡನು ಎಂದು ಇದರ ತಾತ್ಪರ್ಯ.

**ಗಂಗಾಯಾಂ ಘೋಷಃ ಇತ್ಯಾದಾವಪಿ ಗಂಗಾದಯೋಽರ್ಥಾಃ ಸ್ವಾತ್ಮನಿ ಅನುಪಪತ್ತಿಬಾಧಿತಘೋಷಾದ್ಯಧಿಕರಣಭಾವಾಃ ತದುಪಾದಾನಸಾಮರ್ಥ್ಯಾತ್ ಸಂಬಂಧಮಾತ್ರಪರಿಕಲ್ಪಿತತತ್ತ್ವಾರೋಪಂ ತದಧಿಕರಣಭಾವೋಪಗಮಯೋಗ್ಯಮ್ ಅರ್ಥಾಂತರಮೇವ ತಟಾದಿರೂಪಮ್ ಅನುಮಾಪಯಂತಿ।**

**ನ ಹಿ ತತ್ಸಾದೃಶ್ಯಮೇವೈಕಂ ತತ್ತ್ವಾರೋಪನಿಬಂಧನಮಿಷ್ಯತೇ, ಕಿಂ ತರ್ಹಿ? ತತ್ಸಂಬಂಧಾದಿರಪಿ। ಇತಿ ತತ್ಸಂಬಂಧಮಾತ್ರಸಮಾರೋಪಿತತದ್ಭಾವಃ ತಟಾದಿರೇವ ಘೋಷಾದ್ಯಧಿಕರಣಭಾವೋ-ಪಾದಾನಾನ್ಯಥಾನುಪಪತ್ತ್ಯಾ ಗಂಗಾದೀನಾಮ್ ಅರ್ಥಾನಾಮ್ ಅನುಮೇಯ ಏವ ಭವಿತುಮರ್ಹತಿ।**

**ಅನುವಾದ:**

ಗಂಗಾಯಾಂ ಘೋಷಃ (ಹಳ್ಳಿ ಗಂಗೆಯಲ್ಲಿದೆ) ಇತ್ಯಾದಿಗಳಲ್ಲೂ ಗಂಗಾ (ಪ್ರವಾಹ) ಮುಂತಾದ ಅರ್ಥಗಳು ತಮ್ಮಲ್ಲಿ ಘೋಷಾದಿಗಳ ಅಧಿಕರಣತ್ವವು ಬಾಧಿತ ಎಂದು, ಹಾಗೆ ಹೇಳಲ್ಪಟ್ಟು ಮಾತಿನ ಸಾಮರ್ಥ್ಯದಿಂದ ಉಂಟಾದ ಸಂಬಂಧಮಾತ್ರದಿಂದ ತತ್ತ್ವಾರೋಪವು ಕಲ್ಪಿತವಾಗಿದೆಯೆಂದು, ಆ ಹಳ್ಳಿಯ ಅಧಿಕರಣವಾಗಲು ಯೋಗ್ಯವಾದ 'ದಡ' ಮುಂತಾದ ಇನ್ನೊಂದು ಅರ್ಥವನ್ನು ಅನುಮಿತಿಯಿಂದ ತಿಳಿಸುತ್ತವೆ.

ತತ್ಸಾದೃಶ್ಯ ಒಂದು ಮಾತ್ರ ತತ್ತ್ವಾರೋಪದ ನಿಮಿತ್ತವೆಂದೇನೂ ಇಲ್ಲ. ಮತ್ತೆ ಯಾವುದು? ತತ್ಸಂಬಂಧಾದಿಗಳೂ (ತತ್ತ್ವಾರೋಪದ) ನಿಮಿತ್ತ ಆಗಬಹುದು. ಆದ್ದರಿಂದ ಗಂಗಾಸಂಬಂಧಮಾತ್ರದಿಂದ ಗಂಗಾತ್ವವನ್ನು ಪಡೆದುಕೊಂಡ ದಡ ಇತ್ಯಾದಿಗಳು ಗಂಗಾದ್ಯರ್ಥಗಳಿಂದ ಅನುಮೇಯವಾಗುತ್ತವೆ, ಅನ್ಯಥಾ ಹಳ್ಳಿಗೆ ಅಧಿಕರಣವಾಗುವುದು (ಗಂಗಾ ಶಬ್ದದ ಮುಖ್ಯಾರ್ಥಕ್ಕೆ) ಹೊಂದಿಕೊಳ್ಳುವುದೇ ಇಲ್ಲ.

**ಶಬ್ದಃ ಪುನಃ ಸ್ವಾರ್ಥಾಭಿಧಾನಮಾತ್ರವ್ಯಾಪಾರಪರ್ಯವಸಿತಸಾಮರ್ಥ್ಯೋ ನಾರ್ಥಾಂತರಸ್ಯ ತಟಾದೇರ್ವಾರ್ತಾಮಪಿ ವೇದಿತುಮುತ್ಸಹತೇ, ಕಿಂ ಪುನಃ ಸಂಸ್ಪರ್ಶಮ್? ಇತ್ಯುಕ್ತಮ್। ಪ್ರಯೋಜನಂ ಪುನರಸ್ಯೈವಂವಿಧಸ್ಯ ಉಕ್ತಿವೈಚಿತ್ರ್ಯಪರಿಗ್ರಹಸ್ಯ ತಟಾದಾವಾರೋಪವಿಷಯೇ ವಸ್ತುನಿ ಆರೋಪ್ಯಮಾಣಗಂಗಾದಿಗತಪುಣ್ಯತ್ವಶೀತಲತ್ವಾದಿಧರ್ಮಪ್ರತಿಪತ್ತಿಃ, ನ ಸಾದೃಶ್ಯಮಿತಿ ಪೂರ್ವಸ್ಮಾದಸ್ಯ ವಿಶೇಷಃ।**

**ಅನುವಾದ:**

ಶಬ್ದದ ಸಾಮರ್ಥ್ಯವಾದರೋ ತನ್ನ ಅರ್ಥವನ್ನು ಹೇಳುವುದರಲ್ಲೇ ಪರ್ಯವಸಾನ ಹೊಂದುತ್ತದೆ, ಆದ್ದರಿಂದ (ಮುಖ್ಯಾರ್ಥಕ್ಕಿಂತ ಬೇರೆಯಾದ) ತಟ (ದಡ) ಮುಂತಾದವುಗಳ ವಾರ್ತೆಯನ್ನೂ ಹೇಳಲಾರದು ಆ ಶಬ್ದ, ಇನ್ನು ಸಂಸ್ಪರ್ಶವನ್ನು ಪಡೆಯುವುದೆಲ್ಲಿ ಬಂತು? ಈ ವಿಧವಾದ ಉಕ್ತಿವೈಚಿತ್ರ್ಯವನ್ನು ಆಶ್ರಯಿಸುವುದರ ಪ್ರಯೋಜನವೇನೆಂದರೆ ಆರೋಪವಿಷಯವಾದ ತಟಾದಿಗಳಲ್ಲಿ ಆರೋಪ್ಯಮಾಣವಾದ ಗಂಗಾದಿಗಳಲ್ಲಿರುವ ಪುಣ್ಯತ್ವ, ಶೀತಲತ್ವ ಮುಂತಾದ ಧರ್ಮಗಳ ಜ್ಞಾನವೇ ಹೊರತು ಸಾದೃಶ್ಯವಲ್ಲ ಎಂಬುದು ಹಿಂದಿನ ಉದಾಹರಣೆಗೂ ಇದಕ್ಕೂ ಇರುವ ವಿಶೇಷ.

**ವಿವರಣೆ:**

ಗೌರ್ವಾಹೀಕಃ ಎಂಬ ಉದಾಹರಣೆಯಲ್ಲಿ ಪ್ರಯೋಜನ ವಾಹೀಕನಲ್ಲಿ ಗೋಸಾದೃಶ್ಯದ ಪ್ರತೀತಿ. ಗಂಗಾಯಾಂ ಘೋಷಃ ಎಂಬ ಉದಾಹರಣೆಯಲ್ಲಿ ಗಂಗೆಯಲ್ಲಿರುವ ಶೀತಲತ್ವ–ಪಾವನತ್ವಾದಿಗಳು ತಟದಲ್ಲಿ ಪ್ರತೀತವಾಗುವುದೇ ಪ್ರಯೋಜನ. ಶಬ್ದದ ಶಕ್ತಿ ಮುಖ್ಯಾರ್ಥವನ್ನು ತಿಳಿಸುವುದರಲ್ಲೇ ಮುಗಿದುಹೋಗುತ್ತದೆ. ಇತರ ಅರ್ಥದ ಪ್ರತೀತಿ ಅನುಮಾನದಿಂದಲೇ ಉಂಟಾಗುತ್ತದೆ ಎನ್ನುತ್ತಾನೆ ಮಹಿಮಭಟ್ಟ.

**ಉಭಯತ್ರಾಪಿ ತತ್ತ್ವಾರೋಪ ಏವ ಹೇತುঃ। ಸ ಹಿ ತತ್ಸಾಮ್ಯತತ್ಸಂಬಂಧಾದಿನಿಬಂಧನತ್ವಾತ್ ಬಹುವಿಧ ಇಷ್ಟঃ। ಯದಾಹುঃ– ಅಭಿಧೇಯೇನ ಸಂಬಂಧಾತ್ ಸಾದೃಶ್ಯಾತ್ ಸಮವಾಯತঃ। ವೈಪರೀತ್ಯಾತ್ ಕ್ರಿಯಾಯೋಗಾಲ್ಲಕ್ಷಣಾ ಪಂಚಧಾ ಮತಾ ॥ ಇತಿ ।**

**ಅನುವಾದ:**

ಎರಡು ಉದಾಹರಣೆಗಳಲ್ಲಿಯೂ ತತ್ತ್ವಾರೋಪವೇ ಕಾರಣ. ಅದು ತತ್ಸಾಮ್ಯ, ತತ್ಸಂಬಂಧ ಇತ್ಯಾದಿಗಳನ್ನವಲಂಬಿಸುವುದರಿಂದ ಬಹುವಿಧವಾಗಿರುವುದು ಸಮ್ಮತ. (ಶಾಸ್ತ್ರಜ್ಞರೂ) ಹೇಳುತ್ತಾರೆ–

"ವಾಚ್ಯಾರ್ಥದೊಡನೆ ಇರುವ ಸಂಬಂಧದಿಂದ, ಅಥವಾ ಸಾದೃಶ್ಯದಿಂದ, ಅಥವಾ ಸಮವಾಯದಿಂದ, ಅಥವಾ ವೈಪರೀತ್ಯದಿಂದ ಅಥವಾ ಕ್ರಿಯಾಯೋಗದಿಂದ ಉಂಟಾಗುವುದರಿಂದ ಲಕ್ಷಣಾವ್ಯಾಪಾರವು ಐದು ವಿಧವಾಗಿರುವುದು".

**ವಿವರಣೆ:**

ವಿಶೇಷ ಪ್ರಯೋಜನಕ್ಕಾಗಿ ಅನ್ಯಾರ್ಥದಲ್ಲಿ ಅನ್ಯಶಬ್ದದ ಪ್ರಯೋಗ ಲಕ್ಷಣಾ. ಇದು ಐದು ವಿಧ.

ಸಂಬಂಧ ಪ್ರಯುಕ್ತವಾಗಿ– ಗಂಗಾಯಾಂ ಘೋಷঃ।

ಈ ಉದಾಹರಣೆಯಲ್ಲಿ ಗಂಗಾತೀರ ಎಂಬ ಅರ್ಥದಲ್ಲಿ ಗಂಗಾಪದವನ್ನು ಬಳಸಲಾಗಿದೆ. ಪ್ರಯೋಜನ ಗಂಗೆಯ ಶೀತಲತ್ವ, ಪಾವನತ್ವಾದಿಗಳನ್ನು ತೀರದಲ್ಲಿ ತಿಳಿಸುವುದು. ನಿಮಿತ್ತವು ಗಂಗೆಗೂ ತೀರಕ್ಕೂ ಇರುವ ಸಾಮೀಪ್ಯವೆಂಬ ಸಂಬಂಧ.

ಸಾದೃಶ್ಯಪ್ರಯುಕ್ತವಾಗಿ– ಗೌರ್ವಾಹೀಕঃ।

ಈ ಉದಾಹರಣೆಯಲ್ಲಿ ಗೋವಿನ ಸಾಧರ್ಮ್ಯವುಳ್ಳವನು ಎಂಬ ಅರ್ಥದಲ್ಲಿ ಗೋಶಬ್ದವನ್ನು ಬಳಸಲಾಗಿದೆ. ಗೋವಿನ ಜಡತ್ವವನ್ನು ವಾಹೀಕನಲ್ಲಿ ಹೇಳುವುದು ಪ್ರಯೋಜನ. ನಿಮಿತ್ತ ಗೋವಿಗೂ ವಾಹೀಕನಿಗೂ ಇರುವ ಸಾದೃಶ್ಯ.

ಸಮವಾಯಪ್ರಯುಕ್ತವಾಗಿ–ಅಹಂ ದಗ್ಧঃ।

ಈ ಉದಾಹರಣೆಯಲ್ಲಿ ಕೈಸುಟ್ಟುಕೊಂಡ ವ್ಯಕ್ತಿಯು 'ನಾನು ಸುಟ್ಟುಹೋದೆ' ಎಂದು ಹೇಳಿದಾಗ ಅವಯವಿವಾಚಕವಾದ ಅಹಂ ಎಂಬ ಶಬ್ದವನ್ನು ಅವಯವಾರ್ಥದಲ್ಲಿ ಬಳಸಲಾಗಿದೆ. ಅವಯವ–ಅವಯವಿಗಳ ಸಂಬಂಧ ಸಮವಾಯ. ದಾಹದ ತೀವ್ರತೆಯನ್ನು ತಿಳಿಸುವುದು ಪ್ರಯೋಜನ.

ವೈಪರೀತ್ಯ ಪ್ರಯುಕ್ತವಾಗಿ–ಉಪಕೃತಂ ಬಹು ತ್ವಯಾ। ಶತ್ರುವಿಗೆ ಈ ಮಾತನ್ನು ಹೇಳಿದಾಗ ಉಪಕೃತಂ ಎಂಬುದಕ್ಕೆ ವಿರುದ್ಧವಾದ ಅಪಕೃತಂ ಎಂಬ ಅರ್ಥ ತೋರುತ್ತದೆ. ಅಪಕಾರತೀಕ್ಷ್ಣತೆಯನ್ನು ತಿಳಿಸುವುದು ಪ್ರಯೋಜನ.

ಕ್ರಿಯಾಯೋಗ ಪ್ರಯುಕ್ತವಾಗಿ–ದೇವದತ್ತಃ ತಕ್ಷಾ। ದೇವದತ್ತನು ಬಡಗಿ ಅಲ್ಲ. ಆದರೂ ಆ ಕೆಲಸವನ್ನು ಸ್ವಲ್ಪ ಮಾಡಿದುದರಿಂದ ತಕ್ಷಾ ಎಂಬ ಪ್ರಯೋಗ. ಆ ಕಾರ್ಯದಲ್ಲಿ ದೇವದತ್ತನ ಕೌಶಲವನ್ನು ತಿಳಿಸುವುದು ಪ್ರಯೋಜನ. ಹೀಗೆ ಲಕ್ಷಣಾವ್ಯಾಪಾರ ಐದು ವಿಧ. ಧ್ವನ್ಯಾಲೋಕದ ವ್ಯಾಖ್ಯಾನವಾದ ಲೋಚನದಲ್ಲಿ ಅಭಿನವಗುಪ್ತರು ಈ ಕಾರಿಕೆಯನ್ನು ಪಠಿಸಿರುವುದು ಹೀಗೆ–

ಅಭಿಧೇಯೇನ ಸಂಬಂಧಾತ್ ಸಾಮೀಪ್ಯಾತ್ ಸಮವಾಯತಃ।
ವೈಪರಿತ್ಯಾತ್ ಕ್ರಿಯಾಯೋಗಾತ್ ಲಕ್ಷಣ ಪಂಚಾಧಾ ಮತಾ॥

**ತಸ್ಯ ಚ ತೈರವಿನಾಭಾವನಿಯುವೋ ಲೋಕತ ಏವಾವಸಿತ ಇತಿ ನ ತತ್ರ ಪ್ರಮಾಣಾಂತರಾಪೇಕ್ಷಾಪ್ರಯಾಸಃ। ಲೋಕೋ ಹಿ ತತ್ಸದೃಶಮರ್ಥಂ ತತ್ಸಂಬದ್ಧಂ ಚ ತತ್ತ್ವೇನ ವ್ಯವಹರನ್ ದೃಶ್ಯತೇ। ತದ್ಯಥಾ ದೀರ್ಘಗ್ರೀವಂ ವಿಕಟಕಾಯಂ ಚ ಕಂಚಿತ್ ಪಶ್ಯನ್ ಕರಭ ಇತಿ ವ್ಯಪದಿಶತಿ। ಮಂಚಸಂಬದ್ಧಾಂಶ್ಚ ಕಾಂಶ್ಚಿತ್ ಕ್ರೋಶತೋ ಮಂಚಾಃ ಕ್ರೋಶಂತೀತಿ।**

**ಅನುವಾದ:**

ತತ್ತ್ವಾರೋಪಕ್ಕೆ ಸಾಮ್ಯಾದಿಗಳೊಂದಿಗೆ ಇರುವ ಅವಿನಾಭಾವಸಂಬಂಧವು ಲೋಕವ್ಯವಹಾರದಿಂದಲೇ ನಿಶ್ಚಿತವಾಗಿರುವುದರಿಂದ ಅದಕ್ಕಾಗಿ ಇನ್ನೊಂದು ಪ್ರಮಾಣವನ್ನು ಹುಡುಕುವ ಪ್ರಯಾಸ ಬೇಕಿಲ್ಲ. ಏಕೆಂದರೆ ಪ್ರಪಂಚದ ಜನರು ತತ್ಸದೃಶವಾದ ಅಥವಾ ತತ್ಸಂಬದ್ಧವಾದ ಅರ್ಥವನ್ನು ಅದೇ ಎಂದು ವ್ಯವಹರಿಸುವುದು ಕಂಡುಬರುತ್ತದೆ. ಉದಾಹರಣೆಗೆ ಉದ್ದವಾದ ಕತ್ತೂ ವಿಕಟವಾದ ದೇಹವೂ ಯಾವನಿಗೆ ಇದೆಯೋ ಅವನನ್ನು ನೋಡಿದ ಜನರು 'ಒಂಟೆ' ಎಂದು ಕರೆಯುತ್ತಾರೆ. ಮಂಚದ ಮೇಲೆ ಕುಳಿತು ಕೂಗುತ್ತಿರುವ ಜನರನ್ನು ಕಂಡು 'ಮಂಚಗಳು ಕೂಗುತ್ತಿವೆ' ಎನ್ನುತ್ತಾರೆ.

**ಕಿಂಚ ಉಪಚಾರವೃತ್ತೌ ಶಬ್ದಸ್ಯ ಮಾ ಭೂತ್ ಅತಿಪ್ರಸಂಗ ಇತ್ಯವಶ್ಯಂ ಕಿಮಪಿ ನಿಮಿತ್ತಮನುಸರ್ತವ್ಯಮ್। ಅನ್ಯಥಾ ಅನ್ಯತ್ರ ಪ್ರಸಿದ್ಧಸಂಬಂಧಃ ಕಥಮ್ ಅಸಮಿತಮೇವಾರ್ಥಾಂತರಂ ಪ್ರತ್ಯಾಯಯೇತ್? ಯಚ್ಚ ತನ್ನಿಮಿತ್ತಂ ತದೇವಾಸ್ಮಾಭಿರಿಹ ಲಿಂಗಮಿತ್ಯಾಖ್ಯಾತಂ, ಯುಕ್ತಂ ಚೈತತ್। ಶಬ್ದಸ್ಯ ತತ್ರ ವ್ಯಾಪಾರಾಭಾವಾತ್। ವ್ಯಾಪಾರಾಭಾವಶ್ಚ ಸಂಬಂಧಾಭಾವಾತ್। ಲಿಂಗಾಚ್ಚ ಲಿಂಗಿನಃ ಪ್ರತೀತಿರನುಮಾನಮೇವೇತಿ ನ ಗುಣವೃತ್ತೌ ಅರ್ಥಾಂತರಪ್ರತೀತಿಃ ಶಾಬ್ದೀತಿ ತಸ್ಯಾ ವಾಚಕಾಶ್ರಯತ್ವಮ್ ಅಸಿದ್ಧಮೇವ।**

**ಅನುವಾದ:**

ಮತ್ತು ಉಪಚಾರವೃತ್ತಿಯಲ್ಲಿ ಶಬ್ದದ ಅತಿಪ್ರಸಂಗವು ಉಂಟಾಗಬಾರದೆಂದು (ಅಂಥ ಅತಿಪ್ರಸಂಗವನ್ನು ತಪ್ಪಿಸಲು) ಯಾವುದಾದರೊಂದು ನಿಮಿತ್ತವನ್ನು

ಒಪ್ಪಿಕೊಳ್ಳಲೇಬೇಕು. ಹಾಗೆ ಒಪ್ಪಿಕೊಳ್ಳದಿದ್ದರೆ, ಬೇರೆ ಅರ್ಥದಲ್ಲಿ ಪ್ರಸಿದ್ಧವಾದ ಸಂಬಂಧವನ್ನು ಹೊಂದಿರುವ ಶಬ್ದವು ಅಸಂಕೇತಿತವಾದ ಮತ್ತೊಂದು ಅರ್ಥವನ್ನು ತಿಳಿಸುವುದು ಹೇಗೆ?

ಹಾಗೆ ಒಪ್ಪಿಕೊಳ್ಳುವ ನಿಮಿತ್ತವನ್ನೇ ನಾವು ಲಿಂಗ ಎಂದು ಕರೆದಿದ್ದೇವೆ. ಹಾಗೆ ಕರೆದಿರುವುದು ಸರಿ. ಏಕೆಂದರೆ ಆ ಅರ್ಥಾಂತರದಲ್ಲಿ ಶಬ್ದದ ವ್ಯಾಪಾರವಿಲ್ಲ. ಏಕೆ ವ್ಯಾಪಾರವಿಲ್ಲವೆಂದರೆ (ಅವೆರಡಕ್ಕೂ ಸಂಕೇತವೆಂಬ) ಸಂಬಂಧವಿಲ್ಲ. ಲಿಂಗದಿಂದ ಲಿಂಗಿಯ ಪ್ರತೀತಿಯು ಉಂಟಾದರೆ ಅದು ಅನುಮಾನವೇ. ಗುಣವೃತ್ತಿಯಲ್ಲಿ (ಮುಖ್ಯಾರ್ಥವಲ್ಲದ) ಬೇರೊಂದು ಅರ್ಥದ ಪ್ರತೀತಿಯು ಶಬ್ದಕೃತವಲ್ಲ. ಆದ್ದರಿಂದ ಆ ಗುಣವೃತ್ತಿಯು ವಾಚಕವನ್ನು ಆಶ್ರಯಿಸಿದೆ ಎಂದು ಹೇಳುವುದು ನಿರಾಧಾರ.

**ಯಃ ಸತತ್ತ್ವ ಸಮಾರೋಪಸ್ತತ್ಸಂಬಂಧನಿಬಂಧನಃ।**
**ಮುಖ್ಯಾರ್ಥಬಾಧೇ ಸೋಽಪ್ಯಾರ್ಥಂ ಸಂಬಂಧಮನುಮಾಪಯೇತ್ ॥**
**ತತ್ಸಾಮ್ಯತತ್ಸಂಬಂಧೌ ಹಿ ತತ್ತ್ವಾರೋಪೈಕಕಾರಣಮ್।**
**ಗುಣವೃತ್ತೇರ್ದ್ವಿರೂಪಾಯಾಸ್ತತ್ಪ್ರತೀತಿರತೋಽನುಮಾ॥**
**ಕಿಂಚ–**
**ಮುಖ್ಯವೃತ್ತಿಪರಿತ್ಯಾಗೋ ನ ಶಬ್ದಸ್ಯೋಪಪದ್ಯತೇ।**
**ವಿಹಿತೋಽರ್ಥಾಂತರೇ ಹ್ಯರ್ಥಃ ಸ್ವಸಾಮ್ಯಮನುಮಾಪಯೇತ್॥**

**ಅನುವಾದ:**

ತತ್ಸಂಬಂಧವನ್ನು ನಿಮಿತ್ತವಾಗಿಟ್ಟುಕೊಂಡು ಮುಖ್ಯಾರ್ಥಬಾಧ ಉಂಟಾದಾಗ ತತ್ತ್ವಾರೋಪವು ಅರ್ಥಗತವಾದ ಸಂಬಂಧವನ್ನು ಅನುಮಾನ ಪ್ರಮಾಣದಿಂದ ತಿಳಿಸುತ್ತದೆ.

ಏಕೆಂದರೆ ತತ್ಸಾಮ್ಯ (ಅರೋಪ್ಯಮಾಣವಸ್ತುವಿನೊಡನೆ ಆರೋಪವಿಷಯದ ಸಾದೃಶ್ಯ) ಮತ್ತು ತತ್ಸಂಬಂಧ (ಅವೆರಡರ ಸಂಬಂಧ) ಎಂಬವು ತತ್ತ್ವಾರೋಪಕ್ಕೆ ಕಾರಣ. ಆದ್ದರಿಂದ ಎರಡು ವಿಧವಾದ ಗುಣವೃತ್ತಿಯಿಂದ (ಮುಖ್ಯಾರ್ಥಕ್ಕಿಂತ ಬೇರೆ) ಅರ್ಥದ ಪ್ರತೀತಿಯು ಅನುಮಿತಿಯೇ. ಅಲ್ಲದೆ–

ಶಬ್ದವು ಮುಖ್ಯವೃತ್ತಿಯಾದ (ಅಭಿಧೆಯನ್ನು) ಬಿಡುವುದು ಉಚಿತವಲ್ಲ. ಬೇರೊಂದು ಅರ್ಥದಲ್ಲಿ ಶಬ್ದವನ್ನು ಬಳಸಿದರೆ ಆ ಅರ್ಥವು ಅರ್ಥಾಂತರವನ್ನು ಅನುಮಾನ ಪ್ರಮಾಣದಿಂದ ತಿಳಿಸುವುದು.

**ತುಲ್ಯಾದಿಷು ಹಿ ಲೋಕೋಽರ್ಥೇಷ್ವರ್ಥಂ ತದ್ದರ್ಶನಸ್ಮೃತಮ್।**
**ಆರೋಪಯೇನ್ನ ಶಬ್ದಂ ತು ಸ್ವಾರ್ಥಮಾತ್ರಾನುಯಾಯಿನಮ್ ॥**

**ಇತ್ಥಮರ್ಥಾಂತರೇ ಶಬ್ದವೃತ್ತೇರನುಪಪತ್ತಿತಃ।**
**ಫಲೇ ಲಿಂಗೈಕಗಮ್ಯೇ ಸ್ಯಾತ್ ಕುತಃ ಶಬ್ದಃ ಸ್ಖಲದ್ಗತಿಃ॥**
**ವ್ಯಾಪಾರೋಽರ್ಥೇ ಧ್ವನೇಃ ಸಾಕ್ಷಾನ್ಮುಖ್ಯಾ ವೃತ್ತಿರುದಾಹೃತಾ।**
**ಅರ್ಥಾರೋಪಾನುಗಸ್ತ್ವೇಷ ಗೌಣೀ ತದ್‌ವ್ಯವಧಾನತಃ॥**

**ಅನುವಾದ:**

ಸದೃಶವಾಗಿರುವ ಅರ್ಥಗಳಲ್ಲಿ ಅವುಗಳ ನೋಟದಿಂದ ನೆನಪಿಗೆ ಬರುವ ಇನ್ನೊಂದು ಅರ್ಥವನ್ನು ಜನರು ಆರೋಪಿಸುತ್ತಾರೆ. ಕೇವಲ ತನ್ನ ಮುಖ್ಯಾರ್ಥವನ್ನು ತಿಳಿಸಬಲ್ಲ ಶಬ್ದವನ್ನು ಆರೋಪಿಸುವುದಿಲ್ಲ. ಹೀಗೆ (ತನ್ನ ಮುಖ್ಯಾರ್ಥವನ್ನು ಬಿಟ್ಟು) ಬೇರೆ ಅರ್ಥದಲ್ಲಿ ಶಬ್ದದ ವೃತ್ತಿಯೇ ಅಸಂಭವವಾದುದರಿಂದ ಲಿಂಗದಿಂದ ಮಾತ್ರ ಗಮ್ಯವಾದ ಫಲದಲ್ಲಿ ಶಬ್ದವು ಸ್ಖಲದ್ಗತಿಯಾಗುವುದು ಹೇಗೆ?

ಅರ್ಥದಲ್ಲಿ ಶಬ್ದದ ವ್ಯಾಪಾರವನ್ನು ಮುಖ್ಯವೃತ್ತಿ (ಅಭಿಧಾ) ಎಂದು ಹೇಳಿದ್ದಾರೆ. ಅರ್ಥಾರೋಪದ ಅನಂತರ ಉಂಟಾಗುವ ವ್ಯಾಪಾರವು ಗೌಣೀ, ಏಕೆಂದರೆ ಅದಕ್ಕೆ ವಾಚ್ಯಾರ್ಥದ ವ್ಯವಧಾನವುಂಟಾಯಿತು.

**ಆಶುಭಾವಾದನಾಲಕ್ಷ್ಯಂ ಕಿಂತ್ವರ್ಥಾರೋಪಮಂತರಾ।**
**ಲೋಕೋ ಗೌಶ್ಚೈತ್ರ ಇತ್ಯಾದೌ ಶಬ್ದಾರೋಪಮವಸ್ಯತಿ॥**
**ಪ್ರಧಾನೇತರಭಾವೇನಾವಸ್ಥಾನಾದರ್ಥಶಬ್ದಯೋಃ।**
**ಸಮಶೀರ್ಷಿಕಯಾರೋಪೋ ನ ತಯೋರುಪಪದ್ಯತೇ॥**
**ಆರೋಪವಿಷಯೇ ಯತ್ರ ವಿಶೇಷಃ ಸಂಪ್ರತೀಯತೇ।**
**ಅರ್ಥಾದಾರೋಪಿತಾತ್ತತ್ರ ಗುಣವೃತ್ತಿರುದಾಹೃತಾ॥**
**ಗುಣವೃತ್ತೌ ಗಿರಾಂ ಯಾವತ್ ಸಾಮಗ್ರೀಷ್ಟಾ ನಿಬಂಧನಮ್।**
**ಸೈವ ಲಿಂಗತಯಾಸ್ಮಾಭಿರಿಷ್ಯತೇಽರ್ಥಾಂತರಂ ಪ್ರತಿ॥**

**ಅನುವಾದ:**

ಆದರೆ ಅರ್ಥಾರೋಪವು ಅತ್ಯಂತ ವೇಗದಿಂದ (ಶೀಘ್ರತೆಯಿಂದ) ಆಗುವುದರಿಂದ ಅದು ಕಾಣಿಸಿಕೊಳ್ಳುವುದಿಲ್ಲ. ಆದ್ದರಿಂದ ಸಾಮಾನ್ಯ ಜನರು "ಗೌಶ್ಚೈತ್ರಃ" (ಈ ಚೈತ್ರನೆಂಬುವನು ಹಸು) ಇತ್ಯಾದಿ ಪ್ರಯೋಗಗಳಲ್ಲಿ ಶಬ್ದಾರೋಪವಿದೆ ಎಂದುಕೊಳ್ಳುತ್ತಾರೆ.

ಅರ್ಥ ಮತ್ತು ಶಬ್ದ ಎಂಬವು (ಕ್ರಮವಾಗಿ) ಪ್ರಧಾನ ಮತ್ತು ಅಪ್ರಧಾನವಾಗಿ ಇರುವುದರಿಂದ ಅವುಗಳಿಗೆ ಸಮಶೀರ್ಷಿಕೆಯಿಂದ ಆರೋಪವನ್ನು ಹೇಳುವುದು ಸರಿಯಲ್ಲ.

ಆರೋಪಿತವಾದ ಅರ್ಥದಿಂದ ಆರೋಪವಿಷಯದಲ್ಲಿ ವಿಶೇಷವು ಎಲ್ಲಿ ಕಂಡುಬರುವುದೋ ಅಲ್ಲಿ ಗುಣವೃತ್ತಿ ಎಂದು ಹೇಳಿದ್ದಾರೆ.

ಶಬ್ದಗಳಿಗೆ ಗುಣವೃತ್ತಿಯಲ್ಲಿ ಯಾವ ಕಾರಣಸಾಮಗ್ರಿಯು ನಿಬಂಧಕವೆಂದು ನಿಮಗೆ ಇಷ್ಟವೋ ಆ ಸಾಮಗ್ರಿಯೇ ನಮಗೆ ಇನ್ನೊಂದು ಅರ್ಥದ ಪ್ರತ್ಯಾಯನದಲ್ಲಿ ಲಿಂಗ ಎಂದು ಅಭಿಮತ.

**ನ ಹಿ ತತ್ ಸಮಯಾಭಾವಾದ್ವಾಚ್ಯಂ ಶಬ್ದಸ್ಯ ಕಲ್ಪ್ಯತೇ।**
**ಪ್ರತೀಯಮಾನತಾಯಾಂ ಚ ವ್ಯಕ್ತಮಸ್ಯಾನುಮೇಯತಾ॥**
**ತಸ್ಮಾತ್ ಸ್ವಾರ್ಥಾತಿರೇಕೇಣ ಗತಿರ್ನಾರ್ಥಾಂತರೇ ಗಿರಾಮ್।**
**ವಾಚಕತ್ವಾಶ್ರಯೇಣಾತೋ ಗುಣವೃತ್ತೇರಸಂಭವಃ॥**
**ತತಶ್ಚ–**
**ಭಕ್ತ್ಯಾ ಬಿಭರ್ತಿ ಚೈಕತ್ವಂ ರೂಪಾಭೇದಾದಯಂ ಧ್ವನಿಃ।**
**ನ ಚ ನಾವ್ಯಾಪ್ತ್ಯತಿವ್ಯಾಪ್ತ್ಯೋರಭಾವಾಲ್ಲಕ್ಷ್ಯತೇ ತಯಾ॥**

**ಅನುವಾದ:**

(ಮುಖ್ಯಾರ್ಥಕ್ಕಿಂತ ಭಿನ್ನವಾದ ಅರ್ಥಾಂತರವು) ಶಬ್ದದ ವಾಚ್ಯವೆಂದು ಹೇಳಲಾಗದು. ಏಕೆಂದರೆ, (ಆ ಅರ್ಥದಲ್ಲಿ ಆ ಶಬ್ದಕ್ಕೆ) ಸಂಕೇತವಿಲ್ಲ. ಅದು ಪ್ರತೀಯಮಾನ ಎನ್ನುವುದಾದರೆ ಅದು ಅನುಮೇಯ (ಅನುಮಾನವೆಂಬ ಪ್ರಮಾಣದಿಂದಲೇ ವೇದ್ಯ) ಎಂಬುದು ಸ್ಪಷ್ಟ.

ಆದ್ದರಿಂದ ಶಬ್ದಗಳಿಗೆ ತಮ್ಮ ಸಂಕೇತಿತಾರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಯಾವ ವ್ಯಾಪಾರವೂ ಇಲ್ಲ. ಆದ್ದರಿಂದ ವಾಚಕತ್ವವನ್ನು ಆಶ್ರಯಿಸಿಕೊಂಡು ಗುಣವೃತ್ತಿ ಹುಟ್ಟುತ್ತದೆ ಎಂಬುದು ಅಸಂಭವ. ಆದ್ದರಿಂದ– (ನೀವು ಹೇಳುವ) ಧ್ವನಿಯು, ರೂಪದಲ್ಲಿ ಯಾವ ಭೇದವೂ ಇಲ್ಲದ ಕಾರಣದಿಂದ ಭಕ್ತಿ (ಲಕ್ಷಣಾವೃತ್ತಿ)ಯೊಡನೆ ಏಕತ್ವವನ್ನೇ ಹೊಂದಿದೆ. ಅವ್ಯಾಪ್ತಿ, ಅತಿವ್ಯಾಪ್ತಿ ಯಾವುದೂ ಇಲ್ಲದ ಕಾರಣ ಲಕ್ಷಣಾವೃತ್ತಿಯ ಲಕ್ಷಣ ಅದರಲ್ಲಿಲ್ಲ ಎಂದು ಹೇಳುವುದು ಸರಿಯಲ್ಲ.

**ವಿವರಣೆ:**

ಇಲ್ಲಿ ಮಹಿಮಭಟ್ಟನು ಆನಂದವರ್ಧನನ–

ಭಕ್ತ್ಯಾ ಬಿಭರ್ತಿ ನೈಕತ್ವಂ ರೂಪಭೇದಾದಯಂ ಧ್ವನಿಃ।
ಅತಿವ್ಯಾಪ್ತೇರಥಾವ್ಯಾಪ್ತೇರ್ನ ಚಾಸೌ ಲಕ್ಷ್ಯತೇ ತಯಾ॥

ಎಂಬ ಶ್ಲೋಕವನ್ನೇ ಬದಲಾಯಿಸಿ ಹೇಳಿ ಗೇಲಿ ಮಾಡಿದ್ದಾನೆ.

**ಸುವರ್ಣಪುಷ್ಪಾಮಿತ್ಯಾದೌ ನ ಚಾವ್ಯಾಪ್ತಿಃ ಪ್ರಸಜ್ಯತೇ।**
**ಯತಃ ಪದಾರ್ಥವಾಕ್ಯಾರ್ಥಭೇದಾದ್ ಭಕ್ತಿರ್ದ್ವಿಧೋದಿತಾ॥**
**ಅತಸ್ಮಿಂಸ್ತತ್ಸಮಾರೋಪೋ ಭಕ್ತೇರ್ಲಕ್ಷಣಮಿಷ್ಯತೇ।**
**ಅರ್ಥಾಂತರಪ್ರತೀತ್ಯರ್ಥಃ ಪ್ರಕಾರಃಸೋಽಪಿ ಶಸ್ಯತೇ॥**

**ತತಶ್ಚ–**
**ರೂಢಾ ಯೇ ವಿಷಯೇಽನ್ಯತ್ರ ಶಬ್ದಾಃ ಸ್ವವಿಷಯಾದಪಿ।**
**ಲಾವಣ್ಯಾದ್ಯಾಃ ಪ್ರಸಕ್ತಾಸ್ತೇ ನ ಭವಂತಿ ಪದಂ ಧ್ವನೇಃ?॥**

**ಅನುವಾದ:**

ಸುವರ್ಣಪುಷ್ಪಾಮ್ ಇತ್ಯಾದಿಗಳಲ್ಲೂ ಅವ್ಯಾಪ್ತಿಯ ಪ್ರಸಕ್ತಿ ಇಲ್ಲ. ಏಕೆಂದರೆ ಭಕ್ತಿ (ಲಕ್ಷಣಾವೃತ್ತಿ)ಯು ಪದಾರ್ಥಲಕ್ಷಣಾ, ವಾಕ್ಯಾರ್ಥಲಕ್ಷಣಾ ಎಂದು ಎರಡು ವಿಧವಾಗಿದೆ. ಅದು ಅಲ್ಲದ ಪದಾರ್ಥದಲ್ಲಿ ಅದರ ಸಮಾರೋಪವು ಭಕ್ತಿ (ಲಕ್ಷಣಾ) ಎಂದು ಲಕ್ಷಣ. ಆದ್ದರಿಂದ ಬೇರೊಂದು ಅರ್ಥದ ಪ್ರತೀತಿಯನ್ನುಂಟುಮಾಡಲು ಸ್ವೀಕೃತವಾದ (ವಾಕ್ಯಾರ್ಥಲಕ್ಷಣಾ ಎಂಬ) ಪ್ರಕಾರವೂ ಹೇಳಲ್ಪಟ್ಟಿದೆ. ಆದ್ದರಿಂದ– ತಮ್ಮ ವಿಷಯವಾದ ಅರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ರೂಢವಾಗಿರುವ ಲಾವಣ್ಯ ಮುಂತಾದ ಶಬ್ದಗಳೂ ಧ್ವನಿಯ ಉದಾಹರಣೆಗಳಾಗುವುದಿಲ್ಲವೆ?

**ವಿವರಣೆ:**

ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ। ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್॥ ಎಂಬ ಪದ್ಯದಲ್ಲಿ ಭಕ್ತಿಯ (ಎಂದರೆ ಲಕ್ಷಣಾವೃತ್ತಿಯ) ಲಕ್ಷಣದ ಅವ್ಯಾಪ್ತಿ ಎಂದು ಆನಂದವರ್ಧನನ ಅಭಿಪ್ರಾಯ. ಲಕ್ಷಣಾ ಕೇವಲ ಪದಾರ್ಥಕ್ಕೆ ಸೀಮಿತವಲ್ಲ. ವಾಕ್ಯಾರ್ಥಲಕ್ಷಣಾ ಕೂಡ ಉಂಟು. ಆದ್ದರಿಂದ ಅವ್ಯಾಪ್ತಿ ಇಲ್ಲ ಎಂದು ಮಹಿಮಭಟ್ಟನ ಪ್ರತಿಪಾದನೆ.

**ಮುಖ್ಯಾಂ ವೃತ್ತಿಂ ಪರಿತ್ಯಜ್ಯ ಗುಣವೃತ್ತ್ಯಾರ್ಥದರ್ಶನಮ್।**
**ಯದುದ್ದಿಶ್ಯ ಫಲಂ ತತ್ರ ಶಬ್ದೋ ನೈವ ಸ್ಖಲದ್ಗತಿಃ?॥**
**ವಾಚಕತ್ವಾಶ್ರಯೇಣೈವ ಗುಣವೃತ್ತಿರಸಂಗತಾ।**
**ಗಮಕತ್ವೈಕಮೂಲಸ್ಯ ಧ್ವನೇಃಸ್ಯಾದ್ ವಿಷಯೋ ನ ಕಿಮ್?॥**
**ವ್ಯಂಜಕತ್ವೈಕಮೂಲತ್ವಮಸಿದ್ಧಂ ಚ ಧ್ವನೇರ್ಯತಃ।**
**ಗಮಕತ್ವಾಶ್ರಯಾಪೀಷ್ಟಾ ಗುಣವೃತ್ತಿಸ್ತದಾಶ್ರಯಃ॥**

**ಅನುವಾದ:**

ಯಾವ ಫಲವನ್ನು ಉದ್ದೇಶಿಸಿ, ಮುಖ್ಯವೃತ್ತಿಯನ್ನು ಬಿಟ್ಟು ಗುಣವೃತ್ತಿಯಿಂದ ಅರ್ಥದರ್ಶನವನ್ನು (ಅರ್ಥದ ಜ್ಞಾನವನ್ನು) ಒಪ್ಪಿಕೊಳ್ಳಲಾಗುವುದೋ ಅದರಲ್ಲಿ ಶಬ್ದವು ಸ್ಖಲದ್ಗತಿ (ಕ್ಷೀಣಶಕ್ತಿ) ಆಗುವುದಿಲ್ಲವೆ? ವಾಚಕತ್ವಾಶ್ರಯದಿಂದಲೇ ಗುಣವೃತ್ತಿ ಎಂಬುದು ಅಸಂಗತ. ಗಮಕತ್ವೈಕಾಶ್ರಯವಾದ ಧ್ವನಿಗೆ ಅದೂ ವಿಷಯವಾಗುವುದಿಲ್ಲವೆ?

ಏಕೆಂದರೆ ಧ್ವನಿಯು ವ್ಯಂಜಕತ್ವವನ್ನೇ ಆಶ್ರಯಿಸಿದೆ ಎಂಬುದೇ ಸಿದ್ಧವಾಗಿಲ್ಲ. ಗಮಕತ್ವವನ್ನು ಆಶ್ರಯಿಸಿರುವ ಗುಣವೃತ್ತಿಯೂ ಆ ಧ್ವನಿಯ ಆಶ್ರಯವೆಂಬುದು ಸಮ್ಮತವಾಗಿದೆ.

**ಸಮಿದಿಧ್ಮಾದಯಃ ಶಬ್ದಾಃ ಪ್ರಸಿದ್ಧಾ ಗುಣವೃತ್ತಯಃ।**
**ಧ್ವನೇಃ ಪದಾದಿವ್ಯಂಗ್ಯಸ್ಯ ಯೇನೋದಾಹರಣೀಕೃತಾಃ॥**
**ತಸ್ಮಾದ್ ವ್ಯುತ್ಪತ್ತಿಶಕ್ತಿಭ್ಯಾಂ ನಿಬಂಧೋಯಃಸ್ಖಲದ್ಗತೇಃ।**
**ಶಬ್ದಸ್ಯ ಸೋಽಪಿ ವಿಜ್ಞೇಯೋಽನುಮಾನವಿಷಯೋಽನ್ಯವತ್॥**
**ಇತಿ ಸಂಗ್ರಹಶ್ಲೋಕಾಃ।**

**ಅನುವಾದ:**

ಏಕೆಂದರೆ ಗುಣವೃತ್ತಿಗಳೆಂದು ಪ್ರಸಿದ್ಧವಾದ ಸಮಿತ್, ಇಧ್ಮ ಮುಂತಾದ ಶಬ್ದಗಳೂ ಪದಾದಿವ್ಯಂಗ್ಯವಾದ ಧ್ವನಿಗೆ ಉದಾಹರಣೆಯಾಗಿ ಕೊಡಲ್ಪಟ್ಟಿವೆ.

ಆದ್ದರಿಂದ ವ್ಯುತ್ಪತ್ತಿಯಿಂದಲೂ ಶಕ್ತಿಯಿಂದಲೂ ಸ್ಖಲದ್ಗತಿಯಾದ ಶಬ್ದವನ್ನು ಬಳಸಿದ್ದರೆ ಅದೂ ಬೇರೆಯ ಉದಾಹರಣೆಗಳಂತೆ ಅನುಮಾನಪ್ರಮಾಣದ ವಿಷಯವೇ ಎಂದು ತಿಳಿದುಕೊಳ್ಳಬೇಕು.

ಇವು (ಸಂಕ್ಷಿಪ್ತವಾಗಿ ನಮ್ಮ ಅಭಿಪ್ರಾಯವನ್ನು ತಿಳಿಸುವ) ಸಂಗ್ರಹಶ್ಲೋಕಗಳು.

**ವಿವರಣೆ:**

ಧೃತಿಃ ಪ್ರಮಾ ದಯಾ ಶೌಚಂ ಕಾರುಣ್ಯಂ ವಾಗನಿಷ್ಠುರಾ। ಮಿತ್ರಾಣಾಂ ಚಾನಭಿದ್ರೋಹಃ ಸಪ್ತೈತಾಃಸಮಿಧಃ ಶ್ರಿಯಃ॥ ಎಂಬುದನ್ನು ಆನಂದವರ್ಧನನು ಅತ್ಯಂತತಿರಸ್ಕೃತವಾಚ್ಯಧ್ವನಿಗೆ ಉದಾಹರಣೆಯನ್ನಾಗಿ ಕೊಟ್ಟಿದ್ದಾನೆ. ಧೃತ್ಯಾದಿಗಳು ಸಂಪತ್ತಿಗೆ ಸಮಿತ್ತುಗಳು ಎಂದಾಗ ಸಮಿತ್–ಶಬ್ದದ ಮುಖ್ಯಾರ್ಥ ಎಳ್ಳಷ್ಟೂ ಹೊಂದುವುದಿಲ್ಲ. ಸಂಪತ್ತಿಗೆ ಉದ್ದೀಪಕ ಎಂಬ ಅರ್ಥವನ್ನೇ ಇಲ್ಲಿ ಸ್ವೀಕರಿಸಬೇಕು.

ಮಹಿಮಭಟ್ಟನ ಪ್ರಕಾರ ಸಮಿತ್‌ಶಬ್ದ ಇಲ್ಲಿ ಸ್ಖಲದ್ಗತಿ. ಅದೂ ಅನುಮಾನಪ್ರಮಾಣಕ್ಕೆ ವಿಷಯ.

**"ವಿಷಂ ಭಕ್ಷಯ, ಮಾ ಚಾಸ್ಯ ಗೃಹೇ ಭುಂಕ್ಥಾಃ" ಇತ್ಯಾದಾವಪಿ ಯದೇತದ್ ವಿಷಭಕ್ಷಣಾನುಜ್ಞಾನಂ ತದರ್ಥಪ್ರಕರಣಾದಿಸಹಾಯಮ್ ಏತದ್ಗೃಹೇ ಭೋಜನಸ್ಯ ತತೋಽಪಿ ದಾರುಣತರಪರಿಣಾಮತ್ವಮ್ ಅನುಮಾಪಯತಿ। ನ ಹ್ಯನುನ್ಮತ್ತಃ ಸುಹೃದಾದೌ ಹಿತಕಾಮಃ ಸನ್, ಅಸ್ಯ ಕ್ವಚಿದ್ ಭೋಜನನಿಷೇಧಂ ವಿದಧಾನಃ ಅಕಸ್ಮಾದ್ ವಿಷಭಕ್ಷಣಮ್ ಅನುಜಾನಾತೀತಿ ಅವಗತವಕ್ತೃಪ್ರಕರಣಾದಿಸ್ವರೂಪಃ ಪ್ರತಿಪತ್ತಾ ವಿಷಭಕ್ಷಣಾನುಜ್ಞಾನಾದೇವ ತದ್‌ಗೃಹಭೋಜನಸ್ಯ ಅತ್ಯಂತಮ್ ಅಕರಣೀಯತ್ವಮ್ ಅನುಮಾತುಮ್ ಅರ್ಹತಿ।**

**ಅನುವಾದ:**

"ವಿಷವನ್ನು ಬೇಕಾದರೆ ನುಂಗು, ಆದರೆ ಇವನ ಮನೆಯಲ್ಲಿ ಊಟ ಮಾಡಬೇಡ" ಇತ್ಯಾದಿ ಉದಾಹರಣೆಗಳಲ್ಲೂ ವಿಷಭಕ್ಷಣೆಗೆ ಕೊಟ್ಟಿರುವ ಅನುಮತಿಯು ಪ್ರಕರಣಾದಿಗಳ ಸಹಾಯದಿಂದ ಇವನ ಮನೆಯಲ್ಲಿ ಮಾಡುವ ಊಟ ವಿಷಭಕ್ಷಣಕ್ಕಿಂತಲೂ ಹೆಚ್ಚು ಭಯಂಕರ ಪರಿಣಾಮವನ್ನುಂಟು ಮಾಡುವುದೆಂಬುದನ್ನು ಅನುಮಿತಿಯ ಮೂಲಕ ತಿಳಿಸುತ್ತದೆ. ಸ್ನೇಹಿತರಲ್ಲಿ ಹಿತಾಕಾಂಕ್ಷಿಯಾಗಿದ್ದು, ಹುಚ್ಚನೂ ಅಲ್ಲದ ಮನುಷ್ಯನು ಒಂದು ಮನೆಯಲ್ಲಿ

ಊಟಮಾಡುವುದನ್ನು ನಿಷೇಧಿಸಿ ನಿಷ್ಕಾರಣವಾಗಿ ವಿಷಭಕ್ಷಣೆಗೆ ಅನುಮತಿಯನ್ನು ಕೊಡಲಾರನು ಎಂದು ತಿಳಿದುಕೊಂಡ ವಕ್ತೃವಿನ ಮತ್ತು ಪ್ರಕರಣದ ಸ್ವರೂಪವನ್ನು ಅರಿತ ಶ್ರೋತೃವು ಆ ರೀತಿಯ ವಿಷಭಕ್ಷಣಾನುಮತಿಯಿಂದಲೇ ಅಂಥ ಮನೆಯಲ್ಲಿ ಊಟವನ್ನು ಎಂದೂ ಸರ್ವಥಾ ಮಾಡಬಾರದು ಎಂದು ಅನುಮಿತಿಯನ್ನು ಮಾಡಲು ಶಕ್ತನಾಗುತ್ತಾನೆ.

**ವಿಷಭಕ್ಷಣಾನುಜ್ಞಾನಾದೇರ್ವಾಕ್ಯಾರ್ಥಸ್ಯ ಅಪ್ರಸ್ತುತಸ್ಯೈವ ಉಪನ್ಯಾಸೋ ಹಿ ಪೂರ್ವೋಕ್ತೇನ ನಯೇನ ಪ್ರಸ್ತುತಾತಿರಿಕ್ತಾರ್ಥಾಂತರಪ್ರತಿಪಾದನಪರತ್ವಾತ್ ತತ್ರ ಹೇತುತಯಾ ಅವಗಂತವ್ಯಃ ಇತಿ ನ ಶಬ್ದಸ್ಯ ತತ್ರ ವ್ಯಾಪಾರಃ ಪರಿಕಲ್ಪನೀಯಃ।**

**ವಿಷಭಕ್ಷಣಾದಪಿ ಪರಾಮೇತದ್‌ಗೃಹಭೋಜನಸ್ಯ ದಾರುಣತಾಮ್।**
**ವಾಚ್ಯಾದತೋಽನುಮಿಮತೇ ಪ್ರಕರಣವಕ್ತೃಸ್ವರೂಪಜ್ಞಾಃ॥**
**ವಿಷಭಕ್ಷಣಮನುಮನುತೇ ನ ಹಿ ಕಶ್ಚಿದಕಾಂಡ ಏವ ಸುಹೃದಿ ಸುಧೀಃ।**
**ತೇನಾತ್ರಾರ್ಥಾಂತರಗತಿರಾರ್ಥೀ ತಾತ್ಪರ್ಯಶಕ್ತಿಜಾ ನ ಪುನಃ॥ ಇತಿ ಸಂಗ್ರಹಾರ್ಯೇ।**

**ಅನುವಾದ:**

ವಿಷಭಕ್ಷಣಕ್ಕೆ ಅನುಮತಿಯನ್ನು ಕೊಡುವ ಅಪ್ರಸುತವಾದ ವಾಕ್ಯಾರ್ಥವನ್ನು ಹೇಳುವುದು ಹಿಂದೆ ಹೇಳಿದ ರೀತಿಯಲ್ಲಿ ಪ್ರಸ್ತುತಾತಿರಿಕ್ತವಾದ ಇನ್ನೊಂದು ಅರ್ಥವನ್ನು ತಿಳಿಸುವುದರಿಂದ ಅದಕ್ಕೆ ಕಾರಣವೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಅದರಲ್ಲಿ ಶಬ್ದದ ವೃತ್ತಿಯನ್ನು ಕಲ್ಪಿಸಬಾರದು. ಇವನ ಮನೆಯಲ್ಲಿ ಮಾಡಿದ ಊಟವು ವಿಷವನ್ನು ನುಂಗುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂಬ ಅರ್ಥವನ್ನು ಪ್ರಕರಣವನ್ನು ಮತ್ತು ಆ ಮಾತನ್ನು ಹೇಳಿದವನ ಸ್ವರೂಪವನ್ನು ಅರಿತವರು (ವಿಷಂ ಭಕ್ಷಯ ಎಂಬ ವಾಕ್ಯದ) ವಾಚ್ಯಾರ್ಥದಿಂದಲೇ ಅನುಮಿತಿಯಿಂದ ತಿಳಿದುಕೊಳ್ಳುತ್ತಾರೆ.

ಯಾವ ಬುದ್ಧಿಮಂತನೂ ಮಿತ್ರನಿಗೆ ಅಪ್ರಸ್ತುತವಾಗಿ ವಿಷವನ್ನು ಭಕ್ಷಿಸಲು ಹೇಳುವುದಿಲ್ಲ. ಆದ್ದರಿಂದ ಪ್ರಸ್ತುತವಾದ ಉದಾಹರಣೆಯಲ್ಲಿ (ಇವನ ಮನೆಯಲ್ಲಿ ಮಾಡುವ ಊಟವು ವಿಷಭಕ್ಷಣಕ್ಕಿಂತ ಹೆಚ್ಚು ದಾರುಣ) ಎಂಬ ಅರ್ಥದ ಅರಿವು ವಾಚ್ಯಾರ್ಥದ ಆಧಾರದಿಂದ ಬಂದದ್ದು. ಅದು ತಾತ್ಪರ್ಯಶಕ್ತಿಯಿಂದ ಗೋಚರವಾಗುವುದಲ್ಲ.

(ಶಬ್ದಕ್ಕೆ ದೀರ್ಘವ್ಯಾಪಾರವಿಲ್ಲ)

**ಯದಪ್ಯನ್ಯೇ ಮನ್ಯಂತೇ ವಾಚ್ಯಾವಗಮೋಪಕ್ರಮಃ ಪ್ರತೀಯಮಾನಾರ್ಥಾಂತರಾವಸಾಯ–ಪರ್ಯಂತೋಽಯಮ್ ಏಕ ಏವ ದೀರ್ಘದೀರ್ಘಃ ಶಬ್ದಸ್ಯೇಷೋರಿವ ವ್ಯಾಪಾರಃ, ನ ಪುನರರ್ಥಾಂತರಸ್ಯ ಕಶ್ಚಿತ್ ಸಂವೇದ್ಯತೇ। ಯಥಾ ಹ್ಯೇಕ ಏವೇಷುರ್ಬಲವತಾ ಧನುಷ್ಮತಾ ಮುಕ್ತಃ ಶತ್ರೋರುರಶ್ಛದಮುರಶ್ಚ ಭಿತ್ತ್ವಾ ಜೀವಿತಮ್ ಅಪಹರತಿ, ನ ಚ ತಸ್ಯ ವೃತ್ತಿಭೇದಃ,**

**ತಥಾ ಶಬ್ದೋಽಪಿ ಸತ್ಕವಿನಾ ಸಕೃತ್ ಪ್ರಯುಕ್ತ ಏವ ಕ್ರಮೇಣ ಸ್ವಾರ್ಥಾಭಿಧಾನಮ್ ಅರ್ಥಾಂತರಪ್ರತೀತಿಂ ಚ ಏಕಯೈವ ಪ್ರವೃತ್ತ್ಯಾ ವಿತನೋತಿ। ನ ಚ ತಸ್ಯ ವ್ಯಾಪಾರಭೇದಃ ಕಶ್ಚಿತ್। ಕಿಂಚ ಯತ್ಪರಃ ಶಬ್ದಃ ಸ ಶಬ್ದಾರ್ಥ ಇತಿ ಶಬ್ದಸ್ಯೈವಾಸೌ ವ್ಯಾಪಾರೋ ನ್ಯಾಯ್ಯೋ, ನಾರ್ಥಸ್ಯ–ಇತಿ**

**ಅನುವಾದ:**

ಇನ್ನು ಕೆಲವರು ಹೀಗೆನ್ನುತ್ತಾರೆ: "ವಾಚ್ಯಾರ್ಥಜ್ಞಾನದಿಂದ ಆರಂಭಗೊಳ್ಳುವ ಮತ್ತು ಪ್ರತೀಯಮಾನವೆಂಬ ಇನ್ನೊಂದು ಅರ್ಥದಲ್ಲಿ ಕೊನೆಗೊಳ್ಳುವ ಈ ಶಬ್ದವ್ಯಾಪಾರವೆಂಬುದು ಒಂದೇ ಒಂದು, ಅದು ಬಾಣದ ಕ್ರಿಯೆಯಂತೆ ದೀರ್ಘದೀರ್ಘ (ಅತ್ಯಂತ ಉದ್ದ) ವಾದುದು. ಬೇರೆ ಯಾವುದೋ ಅರ್ಥದ ವ್ಯಾಪಾರವಲ್ಲವೆಂಬುದು ಗೊತ್ತಾಗುತ್ತದೆ. ಬಲಶಾಲಿಯಾದ ಬಿಲ್ಲುಗಾರನು ಎಸೆಯುವ ಒಂದೇ ಬಾಣವು ಶತ್ರುವಿನ ಕವಚವನ್ನೂ ಎದೆಯನ್ನೂ ಸೀಳಿ ಪ್ರಾಣವನ್ನು ಹೇಗೆ ತೆಗೆಯುವುದೋ ಹಾಗೆ ಉತ್ತಮ ಕವಿಯಿಂದ ಒಮ್ಮೆ ಪ್ರಯೋಗಿಸಲ್ಪಟ್ಟ ಶಬ್ದವು ಕ್ರಮವಾಗಿ ತನ್ನ ಮುಖ್ಯಾರ್ಥವನ್ನೂ ವ್ಯಂಗ್ಯಾರ್ಥದ ಪ್ರತೀತಿಯನ್ನೂ ಒಂದೇ ವ್ಯಾಪಾರದಿಂದ (ವೃತ್ತಿಯಿಂದ) ಮಾಡಿಬಿಡುತ್ತದೆ. ಅಲ್ಲಿ ಬೇರೆ ಬೇರೆ ವ್ಯಾಪಾರ ಯಾವುದೂ ಇಲ್ಲ. ಅಲ್ಲದೆ ಶಬ್ದವನ್ನು ಯಾವ ಅರ್ಥವನ್ನು ತಿಳಿಸುವುದಕ್ಕಾಗಿ ಪ್ರಯೋಗಿಸುವರೋ, ಅದೇ ಆ ಶಬ್ದದ ಅರ್ಥ ಎಂಬ ನ್ಯಾಯದಿಂದ ಅದು ಶಬ್ದದ ವ್ಯಾಪಾರ ಎಂದು ಹೇಳುವುದೇ ಸರಿ, ಅರ್ಥದ ವ್ಯಾಪಾರ ಎನ್ನುವುದು ಸರಿಯಲ್ಲ".

**ತದಯುಕ್ತಮ್। ಸಾಕ್ಷಾಚ್ಛಬ್ದಸ್ಯಾರ್ಥಪ್ರತೀತಿಹೇತುತ್ವಾಸಿದ್ಧೇಃ।**
**ಪಾರಂಪರ್ಯೇಣ ತು ತಸ್ಯ ಹೇತುತ್ವೋಪಗಮೇ ವಸ್ತೂನಾಂ**
**ಹೇತುಫಲಭಾವವ್ಯವಹಾರನಿಯಮೋ ನ ವ್ಯವತಿಷ್ಠತೇ।**
**ತತಶ್ಚ ಕುಲಾಲೋಽಪಿ ಸೇಕಸಲಿಲೋಪಕರಣಭೂತಂ**
**ಕುಂಭಂ ಕುರ್ವನ್ ಮಧುಮಾಸ ಇವ ಕುಸುಮವಿಕಾಸಹೇತುರಿತಿ**
**ಮುಖ್ಯತಯಾ ಖ್ಯಾಯೇತ। ಇತಿ ಅರ್ಥಸ್ಯೈವ ವ್ಯಾಪಾರೋ**
**ಅಭ್ಯುಪಗಂತುಂ ಯುಕ್ತೋ, ನ ಶಬ್ದಸ್ಯ। ನ ಹಿ ಯಃ ಪುತ್ರಸ್ಯ**
**ವ್ಯಾಪಾರಃ ಸ ಪಿತುರೇವೇತಿ ಮುಖ್ಯತಯಾ ಶಕ್ಯತೇ ವಕ್ತುಂ,**
**ತಯೋರನ್ಯೋನ್ಯವ್ಯಾಪಾರಸಾಂಕರ್ಯದೋಷಪ್ರಸಂಗಾತ್।**

**ಅನುವಾದ:**

ಅದು ಸರಿಯಲ್ಲ. ಶಬ್ದಕ್ಕೆ ನೇರವಾಗಿ ವ್ಯಂಗ್ಯಾರ್ಥಪ್ರತೀತಿಯ ಕಾರಣತ್ವವೇ ಸಿದ್ಧಿಸುವುದಿಲ್ಲವಷ್ಟೆ. ಪರಂಪರೆಯಿಂದ ಶಬ್ದಕ್ಕೆ ಕಾರಣತ್ವವನ್ನು ಒಪ್ಪಿಕೊಳ್ಳುವುದಾದರೆ, ಎಲ್ಲ ವಸ್ತುಗಳ ಕಾರ್ಯಕಾರಣಭಾವವ್ಯವಹಾರದ ನಿಯಮವೇ ಉಳಿಯಲಾರದು. (ಪರಂಪರೆಯಿಂದ ಕಾರಣತ್ವವನ್ನು ಒಪ್ಪಿಕೊಂಡ ಪಕ್ಷದಲ್ಲಿ) ನೀರನ್ನು ಹನಿಸಲು

ಉಪಯೋಗಿಸುವ ಉಪಕರಣದಿಂದ ಮಡಕೆಯನ್ನು ಮಾಡುವ ಕುಂಬಾರನೂ, ವಸಂತಕಾಲದಂತೆ ಹೂಗಳು ಅರಳುವುದಕ್ಕೆ ಕಾರಣ ಎಂದು ಮುಖ್ಯವೃತ್ತಿಯಿಂದ ಹೇಳಬೇಕಾದೀತು. ಆದ್ದರಿಂದ (ವ್ಯಂಗ್ಯಾರ್ಥಪ್ರತೀತಿಯನ್ನು ಉಂಟುಮಾಡುವುದರಲ್ಲಿ) ವಾಚ್ಯಾರ್ಥದ ವ್ಯಾಪಾರವೇ ಇದೆ ಎಂದು ಒಪ್ಪಿಕೊಳ್ಳುವುದು ಸರಿ, ಶಬ್ದದ ವ್ಯಾಪಾರ ಎಂದು ಹೇಳುವುದು ಸರಿಯಲ್ಲ. ಮಗನ ಕೆಲಸ ತಂದೆಯ ಕೆಲಸವೆಂದು ಮುಖ್ಯವೃತ್ತಿಯಿಂದ ಹೇಳಲು ಶಕ್ಯವಲ್ಲವಷ್ಟೆ. (ಹಾಗೆ ಹೇಳಿದರೆ) ಅವರಿಬ್ಬರ ವ್ಯಾಪಾರಸಾಂಕರ್ಯವೆಂಬ ದೋಷವು ಬರುವ ಅನಿಷ್ಟ ಪ್ರಸಂಗವುಂಟಾದೀತು.

**ಕಿಂಚಾಯಂ ವಿಷಮಃ ಶರದೃಷ್ಟಾಂತೋಪನ್ಯಾಸ। ನ ಹಿ ಯಥಾ ಸಾಯಕಃ ಸ್ವಭಾವತ ಏವ ಛೇದ್ಯಭೇದ್ಯಾದ್ಯರ್ಥವಿಷಯಮ್ ಏಕಯೈವ ವೃತ್ತ್ಯಾ ತತ್ತತ್ಕಾರ್ಯಂ ಕರೋತಿ, ತಥಾ ಶಬ್ದಃ। ಸ ಹಿ ಸಂಕೇತಸಾಪೇಕ್ಷಃ ಸ್ವವ್ಯಾಪಾರಮ್ ಆರಭತೇ। ನ ಸ್ವಭಾವತ ಏವೇತಿ ಯತ್ರೈವಾಸ್ಯ ಸಂಕೇತಃ, ತತ್ರೈವ ವ್ಯಾಪ್ರಿಯತೇ। ತತಶ್ಚ ಅಭಿಧೇಯಾರ್ಥವಿಷಯ ಏವಾಸ್ಯ ವ್ಯಾಪಾರೋ ಯುಕ್ತೋ, ನಾರ್ಥಾಂತರವಿಷಯಃ, ತತ್ರ ಸಂಕೇತಾಭಾವಾತ್।**

**ಅನುವಾದ:**

ಅಲ್ಲದೆ, ಈ ಶರದೃಷ್ಟಾಂತವನ್ನು ಕೊಟ್ಟಿರುವುದೂ ಸರಿಯಲ್ಲ. ಬಾಣವು ಸ್ವಭಾವದಿಂದಲೇ ಛೇದನ, ಭೇದನ ಇತ್ಯಾದಿ ಕಾರ್ಯವನ್ನು ಒಂದೇ ವ್ಯಾಪಾರದಿಂದ ಮಾಡಬಲ್ಲುದು, ಆದರೆ ಶಬ್ದ ಹಾಗಲ್ಲ. ಶಬ್ದವು ಸಂಕೇತಸಾಪೇಕ್ಷವಾಗಿ ಮಾತ್ರ ತನ್ನ ಕಾರ್ಯವನ್ನಾರಂಭಿಸುತ್ತದೆ, ತನ್ನ ಸ್ವಭಾವದಿಂದಲ್ಲ. ತನಗೆ ಎಲ್ಲಿ ಸಂಕೇತವಿದೆಯೋ ಅಲ್ಲಿ ಮಾತ್ರ ಅದು ಕಾರ್ಯಕಾರಿ. ಆದ್ದರಿಂದ ವಾಚ್ಯಾರ್ಥದಲ್ಲಿ ಮಾತ್ರ ಶಬ್ದದ ವ್ಯಾಪಾರವು ಉಚಿತ. ಬೇರೆ ಅರ್ಥದಲ್ಲಿ ಅದಕ್ಕೆ ಸಂಕೇತವಿಲ್ಲದ ಕಾರಣ ಅದರಲ್ಲಿ ಶಬ್ದದ ವ್ಯಾಪಾರವನ್ನೊಪ್ಪಿಕೊಳ್ಳುವುದು ಯುಕ್ತವಲ್ಲ.

**ತದಭಾವೇಽಪಿ ತತ್ರ ತತ್ಪರಿಕಲ್ಪನೇ ಸರ್ವಃ ಕುತಶ್ಚಿದ್ ಅಭಿಧೇಯಾರ್ಥವದ್ ಅರ್ಥಾಂತರಮಪಿ ಪ್ರತೀಯಾತ್। ತಸ್ಮಾದ್ ಯತ್ರ ಸಂಕೇತಾಪೇಕ್ಷಾ, ತತ್ರೈವಾಸ್ಯ ವ್ಯಾಪಾರ ಇತ್ಯವಗಂತುಂ ಯುಕ್ತಮ್। ನಾರ್ಥಾಂತರೇ। ತತ್ರ ವಕ್ಷ್ಯಮಾಣನಯೇನ ಅರ್ಥಸ್ಯೈವ ತದುಪಪತ್ತಿಸಮರ್ಥನಾದಿತಿ।**

**ಅನುವಾದ:**

ಸಂಕೇತವಿಲ್ಲದಿದ್ದರೂ ಅರ್ಥಾಂತರದಲ್ಲಿ ಶಬ್ದವ್ಯಾಪಾರವನ್ನು ಕಲ್ಪಿಸಿದರೆ, ಎಲ್ಲರೂ ಯಾವುದೇ ಶಬ್ದದಿಂದ ಅದರ ವಾಚ್ಯಾರ್ಥದಂತೆ ಬೇರೆ ಅರ್ಥವನ್ನೂ ತಿಳಿದುಕೊಳ್ಳಬೇಕಾದೀತು. ಆದ್ದರಿಂದ ಎಲ್ಲಿ ಶಬ್ದಕ್ಕೆ ಸಂಕೇತವುಂಟೋ ಅಲ್ಲಿಯೇ ಆ ಶಬ್ದದ ವ್ಯಾಪಾರ ಎಂದು ತಿಳಿದುಕೊಳ್ಳುವುದು ಯುಕ್ತ. ಬೇರೆ ಅರ್ಥದಲ್ಲಲ್ಲ. ಅದರಲ್ಲಿ ಮುಂದೆ ವಿವರಿಸಲಾಗುವ ಪ್ರಕಾರದಿಂದ ಅರ್ಥದ ವ್ಯಾಪಾರವೇ ಎಂದು ಉಪಪತ್ತಿಪೂರ್ವಕವಾಗಿ ಸಮರ್ಥಿಸುತ್ತೇವೆ.

(ವಕ್ರೋಕ್ತಿವಾದದ ಖಂಡನೆ)

**ಯತ್ ಪುನಃ ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ। ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣಿ॥ ಇತ್ಯಾದಿನಾ ಶಾಸ್ತ್ರಾದಿಪ್ರಸಿದ್ಧಶಬ್ದಾರ್ಥೋಪನಿಬಂಧವ್ಯತಿರೇಕಿ ಯದ್ ವೈಚಿತ್ರ್ಯಂ ತನ್ಮಾತ್ರಲಕ್ಷಣಂ ವಕ್ರತ್ವಂ ನಾಮ ಕಾವ್ಯಸ್ಯ ಜೀವಿತಮಿತಿ ಸಹೃದಯಮಾನಿನಃ ಕೇಚಿದ್ ಆಚಕ್ಷತೇ, ತದಪ್ಯಸಮೀಚೀನಮ್।**

**ಅನುವಾದ:**

ಮತ್ತೇನೆಂದರೆ– "ವಕ್ರವಾದ (ಎಂದರೆ ಸುಂದರವಾದ) ಕವಿಯ ವ್ಯಾಪಾರದಿಂದ ಶೋಭಿಸುವ ಮತ್ತು ಕಾವ್ಯಜ್ಞರ ಆಹ್ಲಾದಕ್ಕೆ ಕಾರಣವಾಗುವ ಬಂಧದಲ್ಲಿ ವ್ಯವಸ್ಥಿತವಾದ ಶಬ್ದಾರ್ಥಗಳು ಎರಡೂ ಕಾವ್ಯ".

ಇತ್ಯಾದಿಯಾಗಿ ಶಾಸ್ತ್ರಾದಿಗಳಲ್ಲಿ ಪ್ರಸಿದ್ಧವಾದ ಶಬ್ದಾರ್ಥಗಳ ಉಪನಿಬಂಧಕ್ಕೆ ಭಿನ್ನವಾದ ಯಾವ ವೈಚಿತ್ರ್ಯವುಂಟಾಗಿ ಅದನ್ನೇ ಲಕ್ಷಣವನ್ನಾಗಿ ಉಳ್ಳ ವಕ್ರತ್ವವೇ ಕಾವ್ಯದ ಜೀವಿತ ಎಂದು ತಾವೇ ಸಹೃದಯರೆಂದುಕೊಂಡಿರುವ ಕೆಲವರು ಹೇಳುತ್ತಾರೆ. ಅದೂ ಸಮರ್ಪಕವಲ್ಲ.

**ವಿವರಣೆ:**

ಇಲ್ಲಿ ಮಹಿಮಭಟ್ಟನು ವಕ್ರೋಕ್ತಜೀವಿತಕಾರನೆಂದು ಪ್ರಸಿದ್ಧನಾದ ಕುಂತಕನ ಮತವನ್ನು ಪ್ರತಿಪಾದಿಸಿ ಖಂಡಿಸುತ್ತಾನೆ. ಆನಂದವರ್ಧನನು ವ್ಯಂಗ್ಯಾರ್ಥಪ್ರಾಧಾನ್ಯವಾದಿ, ಕುಂತಕನಾದರೋ ಕವಿವ್ಯಾಪಾರಪ್ರಾಧಾನ್ಯವಾದಿ. ಅಭಿನವಗುಪ್ತರನ್ನು 'ವಿದ್ವನ್ಮಾನಿನಃ' ಎಂದು ಲೇವಡಿ ಮಾಡಿರುವ ಮಹಿಮಭಟ್ಟನು ಕುಂತಕನನ್ನು 'ಸಹೃದಯಮಾನಿನಃ' ಎಂದು ಹಾಸ್ಯಪೂರ್ವಕವಾಗಿ ಕರೆದಿರುವುದು ಗಮನಾರ್ಹ.

**ಯತಃ ಪ್ರಸಿದ್ಧೋಪನಿಬಂಧನವ್ಯತಿರೇಕಿತ್ವಮಿದಂ ಶಬ್ದಾರ್ಥಯೋರೌಚಿತ್ಯಮಾತ್ರಪರ್ಯವಸಾಯಿ ಸ್ಯಾತ್, ಪ್ರಸಿದ್ಧಾಭಿಧೇಯಾರ್ಥವ್ಯತಿರೇಕಿ ಪ್ರತೀಯಮಾನಾಭಿವ್ಯಕ್ತಿಪರಂ ವಾ ಸ್ಯಾತ್। ಪ್ರಸಿದ್ಧಪ್ರಸ್ಥಾನಾತಿರೇಕಿಣಃ ಶಬ್ದಾರ್ಥೋಪನಿಬಂಧನವೈಚಿತ್ರ್ಯಸ್ಯ ಪ್ರಕಾರಾಂತರಾಸಂಭವಾತ್। ತತ್ರಾದ್ಯಸ್ತಾವತ್ ಪಕ್ಷೋ ನ ಶಂಕನೀಯ ಏವ, ತಸ್ಯ ಕಾವ್ಯಸ್ವರೂಪನಿರೂಪಣಸಾಮರ್ಥ್ಯ–ಸಿದ್ಧಸ್ಯ ಪೃಥಗುಪಾದಾನವೈಯರ್ಥ್ಯಾತ್। ವಿಭಾವಾದ್ಯುಪನಿಬಂಧ ಏವ ಹಿ ಕವಿವ್ಯಾಪಾರೋ, ನಾಪರಃ। ತೇ ಚ ಯಥಾಶಾಸ್ತ್ರಮ್ ಉಪನಿಬಧ್ಯಮಾನಾಃ ರಸಾಭಿವ್ಯಕ್ತೇರ್ನಿಬಂಧನಭಾವಂ ಭಜಂತೇ, ನಾನ್ಯಥಾ। ರಸಾತ್ಮಕಂ ಚ ಕಾವ್ಯಮಿತಿ ಕುತಸ್ತತ್ರ ಅನೌಚಿತ್ಯಸಂಸ್ಪರ್ಶಃ ಸಂಭಾವ್ಯತೇ, ಯನ್ನಿರಾಸಾರ್ಥಮಿತ್ಥಂ ಕಾವ್ಯಲಕ್ಷಣಮಾಚಕ್ಷೀರನ್ ವಿಚಕ್ಷಣಂಮನ್ಯಾಃ। ದ್ವಿತೀಯಪಕ್ಷಪರಿಗ್ರಹೇ ಪುನರ್ಧ್ವನೇರೇವೇದಂ ಲಕ್ಷಣಮನಯಾ ಭಂಗ್ಯಾಭಿಹಿತಂ ಭವತಿ, ಅಭಿನ್ನತ್ವಾದ್ ವಸ್ತುನಃ। ಅತ ಏವ ಚಾಸ್ಯ ತ ಏವ ಪ್ರಭೇದಾಃ ತಾನ್ಯೇವೋದಾಹರಣಾನಿ ತೈರುಪದರ್ಶಿತಾನಿ। ತಚ್ಚಾಯುಕ್ತಮಿತ್ಯುಕ್ತಂ, ವಕ್ಷ್ಯತೇ ಚ।**

**ಅನುವಾದ:**

ಪ್ರಸಿದ್ಧವಾದ ಉಪನಿಬಂಧನಕ್ಕೆ ವ್ಯತಿರೇಕಿಯಾಗಿರುವುದು ಎಂದರೆ ಅದು ಶಬ್ದಾರ್ಥಗಳ ಔಚಿತ್ಯ ಮಾತ್ರದಲ್ಲಿ ಪರ್ಯವಸಾನವನ್ನು ಹೊಂದುವಿಕೆಯೋ ಅಥವಾ

ಪ್ರಸಿದ್ಧವಾದ ವಾಚ್ಯಾರ್ಥಕ್ಕಿಂತಲೂ ಭಿನ್ನವಾದ ಪ್ರತೀಯಮಾನಾರ್ಥದ ಅಭಿವ್ಯಕ್ತಿಗೆ ಕಾರಣವಾಗಿರುವುದೋ? ಪ್ರಸಿದ್ಧಪ್ರಸ್ಥಾನಕ್ಕೆ ಭಿನ್ನವಾದ ಶಬ್ದಾರ್ಥಗಳ ಉಪನಿಬಂಧನದ ವೈಚಿತ್ರ್ಯವು ಇವೆರಡಕ್ಕಿಂತಲೂ ಬೇರೆಯಾಗಿರುವುದು ಸಾಧ್ಯವಲ್ಲ.

(ನಾವು ಹೇಳಿದ ಎರಡು ಪಕ್ಷಗಳಲ್ಲಿ) ಮೊದಲನೆಯ ಪಕ್ಷವಂತೂ ಶಂಕಿಸುವುದಕ್ಕೂ ಅರ್ಹವಲ್ಲ. ಏಕೆಂದರೆ ಕಾವ್ಯಸ್ವರೂಪದ ನಿರೂಪಣೆಯ ಸಾಮರ್ಥ್ಯದಿಂದಲೇ ಅದು ಸಿದ್ಧವಾಗಿರುತ್ತದೆ. ಅದನ್ನು ಮತ್ತೆ ಬೇರೆಯಾಗಿ ಹೇಳುವುದು ವ್ಯರ್ಥ. ವಿಭಾವಾದಿಗಳ ವರ್ಣನೆಯೇ ಕವಿವ್ಯಾಪಾರ, ಬೇರೆ ಏನೂ ಅಲ್ಲ. ಆ ವಿಭಾವಾದಿಗಳು ಶಾಸ್ತ್ರಾನುಗುಣವಾಗಿ ವರ್ಣಿಸಲ್ಪಟ್ಟರೆ ರಸಾಭಿವ್ಯಕ್ತಿಗೆ ಕಾರಣವಾಗುತ್ತವೆ. ಬೇರೆ ಯಾವ ರೀತಿಯಲ್ಲೂ ಅಲ್ಲ. ರಸಾತ್ಮಕವಾದುದೇ ಕಾವ್ಯ; ಆದ್ದರಿಂದ ಅದರಲ್ಲಿ ಅನೌಚಿತ್ಯದ ಸೋಂಕೂ ಇರುವುದನ್ನು ಒಪ್ಪಲಾಗದು. ಹಾಗಿರುವಾಗ ಆ ಅನೌಚಿತ್ಯದ ನಿರಸನಕ್ಕಾಗಿ ಇಂಥ ಕಾವ್ಯಲಕ್ಷಣವನ್ನು ತಾವೇ ವಿಚಕ್ಷಣರೆಂದು ಹೇಳಿಕೊಳ್ಳುವವರು ಏಕೆ ಹೇಳುವರೋ!

ಎರಡನೆಯ ಪಕ್ಷವನ್ನು ಆಶ್ರಯಿಸಿದರೆ, ಮತ್ತೆ ಧ್ವನಿಯ ಲಕ್ಷಣವನ್ನೇ ಇನ್ನೊಂದು ರೀತಿಯಿಂದ ಹೇಳಿದಂತಾಗುತ್ತದೆ, ಏಕೆಂದರೆ ವಿಚಾರವಸ್ತುವಿನಲ್ಲಿ (ನಿಮಗೂ ಧ್ವನಿವಾದಿಗಳಿಗೂ) ಯಾವ ಭೇದವೂ ಇಲ್ಲ. ಆದ್ದರಿಂದಲೇ ವಕ್ರೋಕ್ತಿಗೂ ಆ ಧ್ವನಿಯವೇ ಪ್ರಭೇದಗಳು, ಅವೇ ಉದಾಹರಣೆಗಳು ಹೇಳಲ್ಪಟ್ಟಿವೆ. ಅದೆಲ್ಲ ಅಯುಕ್ತವೆಂದು ಆಗಲೇ ಹೇಳಿ ಆಗಿದೆ, ಮುಂದೆಯೂ ಹೇಳುತ್ತೇವೆ.

**ಪ್ರಸಿದ್ಧಂ ಮಾರ್ಗಮುತ್ಸೃಜ್ಯ ಯತ್ರ ವೈಚಿತ್ರ್ಯಸಿದ್ಧಯೇ।**
**ಅನ್ಯಥೈವೋಚ್ಯತೇ ಸೋಽರ್ಥಃ ಸಾ ವಕ್ರೋಕ್ತಿರುದಾಹೃತಾ॥**
**ಪದವಾಕ್ಯಾದಿಗಮ್ಯತ್ವಾತ್ ಸ ಚಾರ್ಥೋ ಬಹುಧಾ ಮತಃ।**
**ತೇನ ತದ್ವಕ್ರತಾಪೀಷ್ಟಾ ಬಹುಧೈವೇತಿ ತದ್ವಿದಃ॥**
**ಅತ್ರೋಚ್ಯತೇಽಭಿಧಾಸಂಜ್ಞಃ ಶಬ್ದಸ್ಯಾರ್ಥಪ್ರಕಾಶನೇ।**
**ವ್ಯಾಪಾರ ಏಕ ಏವೇಷ್ಟೋ ಯಸ್ತ್ವನ್ಯೋಽರ್ಥಸ್ಯ ಸೋಽಖಿಲಃ॥**
**ತತಶ್ಚ–**
**ವಾಚ್ಯಾದರ್ಥಾಂತರಂ ಭಿನ್ನಂ ಯದಿ ತಲ್ಲಿಂಗಮಸ್ಯ ಸಃ।**
**ತನ್ನಾಂತರೀಯಕತಯಾ ನಿಬಂಧೋ ಹ್ಯಸ್ಯ ಲಕ್ಷಣಮ್॥**

**ಅನುವಾದ:**

ವೈಚಿತ್ರ್ಯಸಿದ್ಧಿಗಾಗಿ ಪ್ರಸಿದ್ಧವಾದ ಮಾರ್ಗವನ್ನು ಬಿಟ್ಟು ಅರ್ಥವನ್ನು ಬೇರೆ ರೀತಿಯಲ್ಲಿ ಹೇಳುವುದನ್ನು ವಕ್ರೋಕ್ತಿ ಎಂದು ಕರೆಯಲಾಗುತ್ತದೆ.

ಆ ಅರ್ಥವು ಪದದಿಂದ, ವಾಕ್ಯದಿಂದ ಮತ್ತು ಇನ್ನಿತರವುಗಳಿಂದ ಗಮ್ಯವಾಗುವುದರಿಂದ ಅನೇಕ ಪ್ರಕಾರವಾಗಿರುತ್ತದೆ. ಆದ್ದರಿಂದ ಅವುಗಳ ವಕ್ರೋಕ್ತಿಯೂ ಬಹುಪ್ರಕಾರವಾಗಿರುತ್ತದೆ ಎಂದು ತಜ್ಞರು ಹೇಳುತ್ತಾರೆ.

ಈ ಬಗೆಗೆ ನಾವು ಹೇಳುತ್ತೇವೆ, ಶಬ್ದವು ಅರ್ಥವನ್ನು ತಿಳಿಸುವುದಕ್ಕೆ ಅದಕ್ಕಿರುವ ಒಂದೇ ವ್ಯಾಪಾರ ಅಭಿಧಾ ಎಂಬುದು. ಬೇರೆಯ ವ್ಯಾಪಾರವೆಲ್ಲ ಅರ್ಥದ್ದು. ಆದ್ದರಿಂದ–

ವಾಚ್ಯಕ್ಕಿಂತಲೂ ಬೇರೆಯಾದ ಇನ್ನೊಂದು ಅರ್ಥವು ಗೋಚರವಾದರೆ ಅದಕ್ಕೆ ವಾಚ್ಯಾರ್ಥವೇ ಲಿಂಗ. ಅದಕ್ಕೆ ಅವಿನಾಭಾವದಿಂದ (ಅವ್ಯಭಿಚರಿತವಾಗಿ) ನಿಬಂಧನವೇ ಲಿಂಗದ ಲಕ್ಷಣ.

**ಅಭೇದೇ ಬಹುತಾ ನ ಸ್ಯಾದುಕ್ತೇರ್ಮಾರ್ಗಾಂತರಾಗ್ರಹಾತ್।**
**ತೇನ ಧ್ವನಿವದೇಷಾಪಿ ವಕ್ರೋಕ್ತಿರನುಮಾ ನ ಕಿಮ್ ॥**

**ಅನುವಾದ:**

ಉಕ್ತಿಯು ಬೇರೆ ಮಾರ್ಗವನ್ನು ಪಡೆಯದ ಕಾರಣ ವಾಚ್ಯವೂ ಅರ್ಥಾಂತರವೂ ಅಭಿನ್ನವಾದರೆ ಬಹುತ್ವವೇ ಇಲ್ಲವಾದೀತು. ಆದ್ದರಿಂದ ಧ್ವನಿಯಂತೆ ಈ ವಕ್ರೋಕ್ತಿಯೂ ಅನುಮಾನವೇ ಆಗದೇನು? ಇವು ಅಂತರ ಶ್ಲೋಕಗಳು.

**ವಿವರಣೆ:**

ಅಲಂಕಾರಸರ್ವಸ್ವದ ವ್ಯಾಖ್ಯಾಕಾರನಾದ ಸಮುದ್ರಬಂಧನು ಹೇಳುವಂತೆ ಕಾವ್ಯದ ವೈಶಿಷ್ಟ್ಯ ಧರ್ಮಮೂಲಕವಾಗಿ, ವ್ಯಾಪಾರಮುಖವಾಗಿ ಮತ್ತು ವ್ಯಂಗ್ಯಮುಖವಾಗಿ ಸಂಭವಿಸುತ್ತದೆಂದು ಹೇಳಬಹುದು. ಧರ್ಮವು ಅಲಂಕಾರ, ಗುಣ ಎಂದು ಎರಡುವಿಧ. ಅಲಂಕಾರವನ್ನು ಕಾವ್ಯವೈಶಿಷ್ಟ್ಯಕಾರಣವೆಂದು ಭಾಮಹ–ಉದ್ಭಟಾದಿಗಳು ಒಪ್ಪಿಕೊಂಡರು. ಗುಣವೇ ಕಾವ್ಯದ ವೈಶಿಷ್ಟ್ಯಕಾರಣ ಅಥವಾ ಆತ್ಮವೆಂದು ವಾಮನನು ಹೇಳಿದನು. ವ್ಯಾಪಾರಮುಖವಾಗಿ ವೈಶಿಷ್ಟ್ಯವು ಭಣಿತಿವೈಚಿತ್ರ್ಯದಿಂದ ಎಂದು ಕುಂತಕನ ಮತ, ಭೋಗಕೃತ್ತ್ವದಿಂದ ಎಂದು ಭಟ್ಟನಾಯಕನ ಅಭಿಪ್ರಾಯ. ವ್ಯಂಗ್ಯಮುಖದಿಂದಲೇ ವೈಶಿಷ್ಟ್ಯ ಎಂಬುದು ಆನಂದವರ್ಧನನ ಸಿದ್ಧಾಂತ.

ಮಹಿಮಭಟ್ಟನು ವಕ್ರೋಕ್ತಿಸಿದ್ಧಾಂತವನ್ನು ಸಾರಸಗಟಾಗಿ ತಳ್ಳಿಹಾಕಿದ್ದಾನೆ. ಶಬ್ದಾರ್ಥಗಳೆರಡೂ ಅಲಂಕಾರ್ಯ, ವಕ್ರೋಕ್ತಿ ಅಲಂಕಾರ ಎಂದು ಕುಂತಕನು ಹೇಳುತ್ತಾನೆ. ಕವಿವ್ಯಾಪಾರಕ್ಕೆ, ಕವಿಕರ್ಮಕ್ಕೆ ಪ್ರಾಧಾನ್ಯವನ್ನು ಕೊಟ್ಟ ಶ್ರೇಷ್ಠಚಿಂತಕ ಅವನು.

(ಶಬ್ದಕ್ಕೆ ಅಭಿಧೆಯೊಂದೇ ವ್ಯಾಪಾರ)

**ನಾಪಿ ಶಬ್ದಸ್ಯಾಭಿಧಾವ್ಯತಿರೇಕೇಣ ವ್ಯಂಜಕತ್ವಂ ವ್ಯಾಪಾರಾಂತರಮುಪಪದ್ಯತೇ ಯೇನಾರ್ಥಾಂತರಂ ಪ್ರತ್ಯಾಯಯೇತ್, ವ್ಯಕ್ತೇರನುಪಪತ್ತೇಃ, ಸಂಬಂಧಾಂತರಸ್ಯ ಚಾಸಿದ್ಧೇಃ। ತದಭಾವೇಽಪಿ ತದಭ್ಯುಪಗಮೇ ತಸ್ಯಾರ್ಥನಿಯಮೋ ನ ಸ್ಯಾತ್, ನಿಬಂಧನಾಭಾವಾತ್। ನ ಹ್ಯಸ್ಯ ಗೇಯಸ್ಯೇವ ರತ್ಯಾದಿಭಿರ್ಭಾವೈಃ ಸ್ವಾಭಾವಿಕ ಏವ ಸಂಬಂಧಃ, ಸರ್ವಸ್ಯೈವ ತತ್ಪ್ರತೀತಿ–ಪ್ರಸಂಗಾತ್।**

**ಅನುವಾದ:**

ಶಬ್ದಕ್ಕೆ ಅಭಿಧೆಗಿಂತಲೂ ಬೇರೆಯಾದ ವ್ಯಂಜಕತ್ವ ಎಂಬ ಇನ್ನೊಂದು ವ್ಯಾಪಾರವು ಹೊಂದುವುದೇ ಇಲ್ಲ. ಆ ವ್ಯಾಪಾರದಿಂದ (ವಾಚ್ಯಾರ್ಥಕ್ಕಿಂತ ಭಿನ್ನವಾದ) ಇನ್ನೊಂದು ಅರ್ಥವನ್ನು ತಿಳಿಸಲಾಗದು. ಏಕೆಂದರೆ ವ್ಯಕ್ತಿ (ಅಭಿವ್ಯಕ್ತಿ) ಎಂಬುದೇ ಅನುಪಪನ್ನ. ಬೇರೆ ಯಾವ ಸಂಬಂಧವೂ (ಶಬ್ದ ಮತ್ತು ವ್ಯಂಗ್ಯಾರ್ಥಗಳಿಗೆ) ಇಲ್ಲ. ಸಂಬಂಧ ಇಲ್ಲದಿದ್ದರೂ ವ್ಯಂಗ್ಯಾರ್ಥದ ಜ್ಞಾನವು ಶಬ್ದದಿಂದ ಉಂಟಾಗುತ್ತದೆ ಎಂದು ಒಪ್ಪಿಕೊಂಡರೆ, ಈ ಶಬ್ದಕ್ಕೆ ಈ ಅರ್ಥ ಎಂಬ ನಿಯಮ ಇಲ್ಲವಾದೀತು, ಏಕೆಂದರೆ ಆ ನಿಬಂಧನೆಯೇ ಇಲ್ಲ. ಗಾನಕ್ಕೆ (ಹಾಡಿಗೆ) ರತ್ಯಾದಿಭಾವಗಳೊಡನೆ ಸ್ವಾಭಾವಿಕ ಸಂಬಂಧವಿರುವಂತೆ ಶಬ್ದಕ್ಕೆ ಇಲ್ಲ. ಹಾಗಿದ್ದಿದ್ದರೆ ಆ ಶಬ್ದವನ್ನು ಕೇಳಿದ ಎಲ್ಲರಿಗೂ ಆ ವ್ಯಂಗ್ಯಾರ್ಥದ ಪ್ರತೀತಿ ಉಂಟಾಗಬೇಕಾಗಿತ್ತು. (ವಾಸ್ತವದಲ್ಲಿ ಅಂಥ ಪ್ರತೀತಿ ಇಲ್ಲ. ಸಂಕೇತಾನಭಿಜ್ಞರಿಗೆ ಶಬ್ದವು ವಾಚ್ಯಾರ್ಥವನ್ನು ತಿಳಿಸಲಾರದು, ವ್ಯಂಗ್ಯಾರ್ಥದ ಬಗೆಗೆ ಹೇಳುವುದೇನಿದೆ?)

**ನಾಪಿ ಸಮಯಕೃತಃ। ವ್ಯಂಜಕತ್ವಸ್ಯೌಪಾಧಿಕತ್ವಾತ್। ಉಪಾಧೀನಾಂ ಚ ಅರ್ಥಪ್ರಕರಣಾದಿಸಾಮಗ್ರೀರೂಪಾಣಾಮ್ ಆನಂತ್ಯಾದನಿಯತತ್ವಾಚ್ಚ ಪ್ರತಿಪದಮಿವ ಶಬ್ದಾನುಶಾಸನಸ್ಯ ಸಮಯಸ್ಯ ಕರ್ತುಮಶಕ್ಯತ್ವಾತ್।**

**ಅನುವಾದ:**

ಸಂಕೇತದಿಂದ (ಶಬ್ದ ಮತ್ತು ವ್ಯಂಗ್ಯಾರ್ಥಗಳಿಗೆ) ಸಂಬಂಧವನ್ನು ಕಲ್ಪಿಸಲಾಗಿದೆ ಎಂಬುದೂ ಆಗದು. ಏಕೆಂದರೆ ವ್ಯಂಜಕತ್ವವು ಔಪಾಧಿಕ. ಅರ್ಥ (ಪ್ರಯೋಜನ), ಪ್ರಕರಣ ಮುಂತಾದ ಸಾಮಗ್ರಿಯ ರೂಪದ ಉಪಾಧಿಗಳು ಅನಂತ, ಅನಿಯತ. ಒಂದೊಂದು ಪದಕ್ಕೂ ಶಬ್ದಾನುಶಾಸನವನ್ನು ಮಾಡುವುದು ಹೇಗೆ ಶಕ್ಯವಲ್ಲವೋ ಹಾಗೆ (ಶಬ್ದಕ್ಕೂ ವ್ಯಂಗ್ಯಾರ್ಥಕ್ಕೂ) ಸಂಕೇತವನ್ನು ಮಾಡುವುದೂ ಅಸಾಧ್ಯ.

**ವಿವರಣೆ:**

ವ್ಯಾಕರಣವು ಉತ್ಸರ್ಗಾಪವಾದಗಳಿಂದ (ಸಾಮಾನ್ಯ ವಿಶೇಷ ನಿಯಮಗಳಿಂದ) ಶಬ್ದಾನುಶಾಸನವನ್ನು ಮಾಡುತ್ತದೆ. ಒಂದೊಂದು ಶಬ್ದವನ್ನೂ ವ್ಯುತ್ಪಾದಿಸಿ ಭಾಷೆಯನ್ನು ವ್ಯಾಖ್ಯಾನಿಸುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ. ಇಂದ್ರನಿಗೆ ಬೃಹಸ್ಪತಿಯು ಹಾಗೆ ಪ್ರತಿಪದಪಾಠವನ್ನು ಆರಂಭಿಸಿದನಂತೆ. ಸಹಸ್ರ ದಿವ್ಯ ವರ್ಷಗಳಷ್ಟು ಪಾಠ ಮಾಡಿದರೂ ಕೊನೆಯನ್ನು ಮುಟ್ಟಲಾಗಲಿಲ್ಲ. ಇನ್ನು ಮನುಷ್ಯರ ಪಾಡೇನು? ಅದೇ ರೀತಿಯಾಗಿ ಶಬ್ದಕ್ಕೆ ವಾಚ್ಯಾರ್ಥ ನಿಯತವಾಗಿದ್ದರೂ, ವ್ಯಂಗ್ಯಾರ್ಥ ನಿಯತವಲ್ಲ. ಪ್ರಕರಣಾನುಸಾರವಾಗಿ ಅದು ಭಿನ್ನವಾಗುತ್ತದೆ. ಆದ್ದರಿಂದ ಶಬ್ದಕ್ಕೆ ವ್ಯಂಗ್ಯಾರ್ಥದಲ್ಲಿ ಸಂಕೇತವನ್ನು ಮಾಡುವುದು ಅಶಕ್ಯ.

**ಏಕ ಏವ ಹಿ ಶಬ್ದಃ ಸಾಮಗ್ರೀವೈಚಿತ್ರ್ಯಾತ್ ವಿಭಿನ್ನಾನ್ ಅರ್ಥಾನ್ ಅವಗಮಯತಿ। ಯಥಾ "ರಾಮೋಽಸ್ಮಿ ಸರ್ವಂ ಸಹೇ", "ರಾಮೇಣ ಪ್ರಿಯಜೀವಿತೇನ ತು ಕೃತಂ ಪ್ರೇಮ್ಣಃ ಪ್ರಿಯೇ**

**ನೋಚಿತಮ್" ಇತಿ, "ರಾಮಸ್ಯ ಪಾಣಿರಸಿ ನಿರ್ಭರಗರ್ಭಖಿನ್ನಸೀತಾವಿವಾಸನಪಟೋಃ ಕರುಣಾ ಕುತಸ್ತೇ" ಇತಿ, "ರಾಮೇ ತಟಾಂತವಸತೌ ಕುಶತಲ್ಪಶಾಯಿನ್ಯದ್ಯಾಪಿ ನಾಸ್ತಿ ಭಗವನ್ ಭವತೋ ವ್ಯಪೇಕ್ಷಾ" ಇತ್ಯಾದಾವೇಕ ಏವ ರಾಮಶಬ್ದಃ।**

**ಅನುವಾದ:**

ಒಂದೇ ಶಬ್ದವು ಸಾಮಗ್ರಿಯ ವಿಚಿತ್ರತೆಗೆ ಅನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು ತಿಳಿಸಿಕೊಡುತ್ತದೆ. ಉದಾಹರಣೆಗೆ "ನಾನು ರಾಮ, ಎಲ್ಲವನ್ನೂ ಸಹಿಸುತ್ತೇನೆ", "ಪ್ರಿಯೆ, ಜೀವಿತವನ್ನೇ ತನಗೆ ಪ್ರಿಯವೆಂದುಕೊಂಡ ರಾಮನಿಂದ ಪ್ರೇಮಕ್ಕೆ ಉಚಿತವಾದುದು ಮಾಡಲ್ಪಡಲಿಲ್ಲ", "ರಾಮನ ಕೈ ನೀನು. ಪೂರ್ಣಗರ್ಭಿಣಿಯಾಗಿದ್ದ ಸೀತೆಯನ್ನು ಕಾಡಿಗೆ ಅಟ್ಟಿದ ನಿನಗೆ ಕರುಣೆ ಎಲ್ಲಿಂದ ಬರುತ್ತದೆ?", "ಭಗವನ್, ರಾಮನು ಸಮುದ್ರತೀರದಲ್ಲಿ ದರ್ಭೆಯ ಶಯನದಲ್ಲಿ ಮಲಗಿದ್ದಾನೆ. ಇನ್ನೂ ನಿನಗೆ ದಯೆ ಬರಲಿಲ್ಲವೆ" ಇತ್ಯಾದಿಗಳಲ್ಲಿ ಒಂದೇ ರಾಮ ಶಬ್ದವು (ಅನೇಕಾರ್ಥಗಳನ್ನು) ಸೂಚಿಸುತ್ತದೆ.

**ವಿವರಣೆ:**

ಇಲ್ಲಿ ಕೊಟ್ಟಿರುವ ನಾಲ್ಕು ಉದಾಹರಣವಾಕ್ಯಗಳಲ್ಲೂ ರಾಮ ಶಬ್ದವಿದೆ. ಅದಕ್ಕೆ ವಾಚ್ಯಾರ್ಥ ಒಂದೇ ಆದರೂ ವ್ಯಂಗ್ಯಾರ್ಥಗಳು ಬೇರೆ ಬೇರೆ. ಮೊದಲನೆಯ ವಾಕ್ಯ (ಇದು ಸ್ನಿಗ್ಧಶ್ಯಾಮಲಕಾಂತಿ– ಇತ್ಯಾದಿ ಶ್ಲೋಕದ ಭಾಗ)ದಲ್ಲಿ ನಾನಾ ದುಃಖಗಳಿಗೆ ಈಗಾಗಲೇ ಭಾಜನನಾಗಿದ್ದ ವ್ಯಕ್ತಿ ಎಂಬ ಅರ್ಥವು ವಿವಕ್ಷಿತ. ಎರಡನೆಯ ವಾಕ್ಯದಲ್ಲಿ ತನ್ನ ಜೀವವೇ ಹೆಚ್ಚಿನದೆಂದು ನಂಬುವ ಹೇಡಿ ಎಂಬ ಅರ್ಥವೂ, ಮೂರನೆಯ ವಾಕ್ಯದಲ್ಲಿ ದಯೆಯಿಲ್ಲದೆ ಸಂಹಾರಕಾರ್ಯವನ್ನು ನಡೆಸಿದವನು ಎಂಬ ಅರ್ಥವೂ, ನಾಲ್ಕನೆಯ ವಾಕ್ಯದಲ್ಲಿ ಸಕಲಲೋಕ ಸಂರಕ್ಷಣಸಮರ್ಥನಾದ ಮಹಾವ್ಯಕ್ತಿ ಎಂಬ ಅರ್ಥವೂ ರಾಮ ಶಬ್ದಕ್ಕೆ ಪ್ರತೀಯಮಾನಾರ್ಥವಾಗಿರುವುದು ಗೋಚರವಾಗುತ್ತದೆ.

ಒಂದೇ ವಾಕ್ಯವೂ ಭಿನ್ನ ಭಿನ್ನ ಪ್ರತಿಪತ್ತೃಗಳಿಗೆ ಬೇರೆ ಬೇರೆ ಪ್ರತೀಯಮಾನಾರ್ಥಗಳನ್ನು ತಿಳಿಸಬಹುದು. ಗತೋಽಸ್ತಮರ್ಕಃ ಎಂಬ ಒಂದೇ ವಾಕ್ಯ ಒಬ್ಬನಿಗೆ "ಇದು ಸಂಧ್ಯಾವಂದನೆಯ ಸಮಯ" ಎಂಬ ಅರ್ಥವನ್ನೂ, ಮತ್ತೊಬ್ಬನಿಗೆ "ಹಸುಗಳನ್ನು ಮನೆಗೆ ಒಯ್ಯಿ" ಎಂಬ ಅರ್ಥವನ್ನೂ, ಮತ್ತೊಬ್ಬರಿಗೆ "ಅಂಗಡಿಯ ಬಾಗಿಲನ್ನು ಹಾಕೋಣ" ಎಂಬ ಅರ್ಥವನ್ನೂ ಸೂಚಿಸಬಹುದು.

ಆದ್ದರಿಂದ ಯಾವುದೇ ಶಬ್ದಕ್ಕೆ ಅಥವಾ ವಾಕ್ಯಕ್ಕೆ ಇದೇ ಪ್ರತೀಯಮಾನಾರ್ಥ ಎಂದು ಸಂಕೇತಿಸುವುದು ಅಶಕ್ಯ. ಸಂಕೇತವಿಲ್ಲದ ಅರ್ಥವನ್ನು ಶಬ್ದವು ತಿಳಿಸಲಾರದು. ಅದು ಅರ್ಥದ ವ್ಯಾಪಾರವೇ, ಆ ವ್ಯಾಪಾರ ಅನುಮಾನ ಎಂಬುದು ಮಹಿಮಭಟ್ಟನ ಮಾತಿನ ತಿರುಳು.

**ಯಥಾಹ ಧ್ವನಿಕಾರಃ –ಶಬ್ದಾರ್ಥಯೋರ್ಹಿ ಪ್ರಸಿದ್ಧೋ ಯಃ ಸಂಬಂಧೋ ವಾಚ್ಯವಾಚಕಭಾವಾಖ್ಯಸ್ತಮನುರುಂಧಾನ ಏವ ಗಮಕತ್ವಲಕ್ಷಣೋ ವ್ಯಾಪಾರಃ ಸಾಮಗ್ರ್ಯಂತರಸದ್ಭಾವಾದ್ ಔಪಾಧಿಕಃ ಪ್ರವರ್ತತೇ। ಅತ ಏವ ಚ ವಾಚಕತ್ವಾತ್ ತಸ್ಯ ವಿಶೇಷಃ। ವಾಚಕತ್ವಂ ಹಿ ಶಬ್ದವಿಶೇಷಸ್ಯ ನಿಯತ ಆತ್ಮಾ, ಸಂಕೇತವ್ಯುತ್ಪತ್ತಿಕಾಲಾದಾರಭ್ಯ ತದವಿನಾಭಾವೇನ ತಸ್ಯ ಪ್ರಸಿದ್ಧತ್ವಾತ್। ಸ ತು ಅನಿಯತ ಔಪಾಧಿಕತ್ವಾತ್। ಪ್ರಕರಣಾದ್ಯವಚ್ಛೇದೇನ ತಸ್ಯ ಪ್ರತೀತೇರಿತಿ।**

**ಅನುವಾದ:**

ಧ್ವನಿಕಾರ (ಆನಂದವರ್ಧನ)ನೂ ಹೀಗೆಂದಿದ್ದಾನೆ–

"ಶಬ್ದಾರ್ಥಗಳಿಗೆ ವಾಚ್ಯವಾಚಕಭಾವವೆಂಬ ಪ್ರಸಿದ್ಧವಾದ ಸಂಬಂಧವಿದೆ. ಅದನ್ನು ಅನುಸರಿಸಿ ಬರುವ ಗಮಕತ್ವ (ವ್ಯಂಜಕತ್ವ) ಎಂಬ ವ್ಯಾಪಾರವಾದರೋ ಬೇರೆ ಸಾಮಗ್ರಿಯು ಇದ್ದಾಗ ಓಪಾಧಿಕವಾಗಿ ಕೆಲಸ ಮಾಡುತ್ತದೆ. ಆದ್ದರಿಂದಲೇ ವಾಚಕತ್ವಕ್ಕಿಂತಲೂ ಅದಕ್ಕಿರುವ ವಿಶೇಷ. ವಾಚಕತ್ವವು ಶಬ್ದದ ನಿಯತವಾದ ಆತ್ಮಾ, ಸಂಕೇತಗ್ರಹದ ಕಾಲದಿಂದಲೂ ಆರಂಭಿಸಿ ಶಬ್ದಕ್ಕೆ ಅವಿನಾಭಾವಸಂಬಂಧದಿಂದ ವಾಚಕತ್ವವು ಇರುತ್ತದೆ. ಆದರೆ ವ್ಯಂಜಕತ್ವವೆಂಬ ವ್ಯಾಪಾರವು ಔಪಾಧಿಕವಾದುದರಿಂದ ಅನಿಯತ. ಪ್ರಕರಣಾದ್ಯವಚ್ಛಿನ್ನವಾಗಿ ವ್ಯಂಜಕತ್ವವು ಪ್ರತೀತವಾಗುತ್ತದೆ".

> **ನ ಚಾನಯೋರನ್ಯಃ ಸಂಬಂಧಃ ಸಂಭವತೀತಿ ತಸ್ಯಾಃ ಸಾಮಗ್ರ್ಯಾ ಏವ ಸಂಬಂಧಬಲಾತ್ ತದ್ಗಮಕತ್ವಮ್ ಉಪಪನ್ನಂ ನ ಶಬ್ದಸ್ಯೇತಿ, ನಾರ್ಥಪಕ್ಷಾದಸ್ಯ ಕಶ್ಚಿದ್ವಿಶೇಷ ಇತಿ ವ್ಯರ್ಥಸ್ತತ್ಪಕ್ಷೋಪನ್ಯಾಸಃ। ನನು ಯದಿ ಶಬ್ದಸ್ಯಾರ್ಥನಿರಪೇಕ್ಷಸ್ಯ ವ್ಯಂಜಕತ್ವಂ ನೇಷ್ಯತೇ ತತ್ ಕಥಂ ಪ್ರಾಪ್ತಮ್ ಇತ್ಯಾದೌ ಪ್ರಾದೀನಾಂ ದ್ಯೋತಕತ್ವಮುಕ್ತಂ ನ ವಾಚಕತ್ವಮ್? ವಾಚಕತ್ವೇ ಹಿ ಹಲಾದಿತ್ವಾದ್ ಧಾತೋರ್ಯಜಾದಿ ಪ್ರಸಂಗಃ ಸ್ಯಾತ್। ದ್ಯೋತಕತ್ವಂ ಪ್ರಕಾಶಕತ್ವಂ ವ್ಯಂಜಕತ್ವಂ ಚೇತ್ಯೇಕ ಏವಾರ್ಥ ಇತಿ।**

**ಅನುವಾದ:**

ಶಬ್ದಾರ್ಥಗಳಿಗೆ ಬೇರೆ ಯಾವ ಸಂಬಂಧವೂ ಸಂಭವಿಸುವುದೇ ಇಲ್ಲ ಎಂಬ ಕಾರಣದಿಂದ ಆ ಸಾಮಗ್ರಿಗೇ ಸಂಬಂಧ ಬಲದಿಂದ ವ್ಯಂಗ್ಯಾರ್ಥಗಮಕತ್ವವು ಉಚಿತ, ಶಬ್ದಕ್ಕಲ್ಲ. ಆದ್ದರಿಂದ ಅರ್ಥಪಕ್ಷಕ್ಕಿಂತ, ಈ ಸಾಮಗ್ರೀಪಕ್ಷದಲ್ಲಿ ಯಾವ ವಿಶೇಷವೂ ಇಲ್ಲ, ಇದನ್ನು ಹೇಳುವುದೂ ವ್ಯರ್ಥ.

ಅರ್ಥನಿರಪೇಕ್ಷವಾದ ಶಬ್ದಕ್ಕೆ ವ್ಯಂಜಕತ್ವವನ್ನು ಒಪ್ಪಿಕೊಳ್ಳದಿದ್ದರೆ ಪ್ರಾಪ್ತಮ್ ಇತ್ಯಾದಿಗಳಲ್ಲಿ ಪ್ರ– ಮುಂತಾದ ಉಪಸರ್ಗಗಳಿಗೆ (ವ್ಯಾಕರಣಶಾಸ್ತ್ರದಲ್ಲಿ) ದ್ಯೋತಕತ್ವವನ್ನು ಏಕೆ ಹೇಳಿದ್ದಾರೆ? ವಾಚಕತ್ವವನ್ನು ಅವರು ಹೇಳಿಲ್ಲವಲ್ಲ? ವಾಚಕತ್ವವನ್ನು (ಪ್ರ ಇತ್ಯಾದಿಗಳಿಗೆ) ಹೇಳಿದ್ದರೆ (ಧಾತುವೇ ಹಲಾದಿ ಎಂದು) ಧಾತುವಿಗೆ ಯಜ್ ಪ್ರತ್ಯಯಾದಿಗಳೂ ಬರುವ ಸಂಭವ ಬಂದುಬಿಡುತ್ತಿತ್ತು. ದ್ಯೋತಕತ್ವ, ಪ್ರಕಾಶಕತ್ವ, ವ್ಯಂಜಕತ್ವ ಇವೆಲ್ಲಕ್ಕೂ ಒಂದೇ ಅರ್ಥ ತಾನೆ?

**ವಿವರಣೆ:**

ಪ್ರಾಪ್ತಮ್ ಎಂಬ ಪದದಲ್ಲಿ ಆಪ(ೣ) ವ್ಯಾಪ್ತೌ ಎಂಬುದು ಧಾತು. ಇದಕ್ಕೆ ಭೂತಕೃದಂತರೂಪ ಆಪ್ತ ಎಂದು ಆಗುತ್ತದೆ. ಪ್ರ ಎಂಬ ಉಪಸರ್ಗವನ್ನು ಜೊಡಿಸಿದಾಗ ಪ್ರಾಪ್ತಮ್

ಎಂದು ರೂಪ. ಉಪಸರ್ಗಗಳಿಗೆ ವಾಚಕತ್ವವಿಲ್ಲ, ಕೇವಲ ದ್ಯೋತಕತ್ವ ಉಂಟು ಎಂದು ವೈಯಾಕರಣರ ಸಿದ್ಧಾಂತ. ಅವುಗಳಿಗೆ ವಾಚಕತ್ವವನ್ನು ಒಪ್ಪಿಕೊಂಡರೆ ಆಗ ಪ್ರಾಪ್ ಎಂಬುದು ಧಾತು. ಅದು ಹಲಾದಿ (ವ್ಯಂಜನಾದಿ) ಎಂದು ಪರಿಗಣಿಸಬೇಕಾದೀತು. ಆಗ ಕ್ರಿಯಾಸಮಭಿಹಾರಾರ್ಥದಲ್ಲಿ ಯಙ್ ಪ್ರತ್ಯಯದ ಸಂಭವ ಉಂಟು. ಏಕೆಂದರೆ ಪಾಣಿನಿ ಹಲಾದೇಃ ಕ್ರಿಯಾಸಮಭಿಹಾರೇ ಯಙ್ ಎಂದು ಹೇಳಿದ್ದಾನೆ. ಅಜಾದಿಧಾತುಗಳಿಗೆ ಯಙ್ ಇಲ್ಲವಾದುದರಿಂದ ಆಪ್ ಧಾತುವಿಗೆ ಯಙ್ ಇಲ್ಲ. ಅನಿಷ್ಟಾಪತ್ತಿಯನ್ನು ನಿವಾರಿಸಲು ಪ್ರಾದಿ ಉಪಸರ್ಗಗಳಿಗೆ ದ್ಯೋತಕತ್ವವನ್ನೇ ಒಪ್ಪಿಕೊಳ್ಳಲಾಗಿದೆ.

ದ್ಯೋತಕತ್ವ, ಪ್ರಕಾಶಕತ್ವ, ವ್ಯಂಜಕತ್ವ ಇವೆಲ್ಲ ಪರ್ಯಾಯಗಳು. ಪ್ರಾದಿಗಳಿಗೆ ಅರ್ಥಾನಪೇಕ್ಷವಾಗಿ ದ್ಯೋತಕತ್ವವನ್ನು ವೈಯಾಕರಣರು ಹೇಳಿರುವುದರಿಂದ ಶಬ್ದಕ್ಕೆ ವ್ಯಂಜಕತ್ವವು ಸಿದ್ಧವಾಯಿತು ಎಂಬುದು ಪೂರ್ವಪಕ್ಷಿಯ ಅಭಿಪ್ರಾಯ.

**ಸತ್ಯಮ್। ಉಕ್ತಮುಪಚಾರತೋ ನ ಪರಮಾರ್ಥತಃ ಇತಿ ತಸ್ಯ ಪ್ರದೀಪಾದಿನಿಷ್ಠಸ್ಯ ವಾಸ್ತವಸ್ಯ ಶಬ್ದಾರ್ಥವಿಷಯತ್ವಸ್ಯ ಪ್ರತಿಕ್ಷೇಪಾತ್। ಅಥೋಚ್ಯತೇ ಪಚತ್ಯಾದಯಃ ಕ್ರಿಯಾಸಾಮಾನ್ಯವಚನಾಃ। ಸಾಮಾನ್ಯಾನಿ ಚಾಶೇಷವಿಶೇಷಾಂತರ್ಭಾವಭಾಂಜಿ ಭವಂತೀತಿ ತತ್ಪ್ರತೀತಿನಾಂತರೀಯಕತಯೈವ ವಿಶೇಷಸದ್ಭಾವಃ ಸಿದ್ಧ ಏವ ಯದಾಹುಃ –ನಿರ್ವಿಶೇಷಂ ನ ಸಾಮಾನ್ಯಮ್ ಭವೇಚ್ಛಶವಿಷಾಣವತ್– ಇತಿ। ಕೇವಲಮರ್ಥಸಾಮರ್ಥ್ಯಸಿದ್ಧೋಽಪಿ ವಿಶೇಷೋ ದ್ಯೋತನಮಪೇಕ್ಷತೇ ಇತಿ ತನ್ಮಾತ್ರವ್ಯಾಪಾರಾಃ ಪ್ರಾದಯೋ ದ್ಯೋತಕಾ ಏವ ಭವಿತುಮ್ ಅರ್ಹಂತಿ, ನ ವಾಚಕಾಃ ಇತಿ।**

**ಅನುವಾದ:**

ನೀವೆನ್ನುವುದು ಸತ್ಯ. ಆದರೆ (ಹಾಗೆ ಪ್ರಾದಿಗಳಿಗೆ ದ್ಯೋತಕತ್ವವನ್ನು) ಹೇಳಿರುವುದು ಉಪಚಾರದಿಂದ ಮಾತ್ರ, ಪರಮಾರ್ಥದಿಂದ ಅಲ್ಲ. ವಾಸ್ತವವಾದ ದ್ಯೋತಕತ್ವ ಪ್ರದೀಪಾದಿಗಳಲ್ಲಿ ಮಾತ್ರ, ಶಬ್ದಾರ್ಥಗಳ ವಿಷಯದಲ್ಲಿ ಅದನ್ನು ನಿರಾಕರಿಸಲಾಗಿದೆ. ಮತ್ತೆ (ಪೂರ್ವಪಕ್ಷಿಗಳು ಹೀಗೆ) ಹೇಳಬಹುದು: ಪಚ್ ಮುಂತಾದ ಧಾತುಗಳು ಕ್ರಿಯಾಸಾಮಾನ್ಯವನ್ನು ಹೇಳುತ್ತವೆ. ಸಾಮಾನ್ಯಗಳಲ್ಲಿ ಸಮಸ್ತವಿಶೇಷಗಳೂ ಅಂತರ್ಭೂತವಾಗಿರುವುದರಿಂದ ವಿಶೇಷಪ್ರತೀತ್ಯವಿನಾ ಭಾವದಿಂದಲೇ ವಿಶೇಷವೂ ಅಲ್ಲಿದೆ ಎಂಬುದು ಸಿದ್ಧ. ಪ್ರಾಚೀನರೂ ಹೇಳಿದ್ದಾರೆ "ವಿಶೇಷವಿಲ್ಲದ ಸಾಮಾನ್ಯ ಮೊಲದ ಕೊಂಬಿನಂತೆ ಎಲ್ಲಿಯೂ ಇರಲಾರದು". ಅರ್ಥಸಾಮರ್ಥ್ಯಸಿದ್ಧವಾದ ವಿಶೇಷಕ್ಕೆ ದ್ಯೋತನವು ಮಾತ್ರ ಬೇಕು ಅಷ್ಟು ಕೆಲಸವನ್ನು ಮಾತ್ರ ಮಾಡುವ ಪ್ರ ಮುಂತಾದ ಉಪಸರ್ಗಗಳು ದ್ಯೋತಕಗಳೇ ಆಗಲು ಅರ್ಹ, ವಾಚಕಗಳಾಗಲು ಅರ್ಹವಲ್ಲ.

**ಸತ್ಯಮ್। ಕಿಂತು ಯದಪ್ರತೀತೌ ಸಾಮಾನ್ಯಪ್ರತೀತಿರೇವ ನ ಪರ್ಯವಸ್ಯತಿ, ತದ್ವಿಶೇಷಮಾತ್ರಂ ತೇಭ್ಯಃ ಪ್ರತೀಯತಾಂ ನಾಮ। ನ ತು ತಾವತಾ ವ್ಯವಹಾರಸಿದ್ಧಿಃ ಕಾಚಿತ್। ತಸ್ಯಾಃ ಪ್ರತಿನಿಯತವಿಶೇಷಾವಸಾಯನಿಬಂಧನತ್ವಾತ್। ಸ ತ್ವಪೂರ್ವತಯಾ ಪ್ರಾದಿಭ್ಯ ಏವೋದ್ಭವನ್ನವಧಾರ್ಯತೇ। ನ ಪಚತ್ಯಾದಿಭ್ಯಃ। ನಾರ್ಥಾದಪಿ ತದ್ಭಾವಸಿದ್ಧಿಃಕಾಚಿತ್। ಅಸ್ಯಾಃ ಪ್ರತಿನಿಯತವಿಶೇಷಾವಸಾಯನಿಬಂಧನತ್ವಾತ್।**

**ಅನುವಾದ:**

ಅಹುದು. ಆದರೆ ಯಾವುದರ ಪ್ರತೀತಿಯಿಲ್ಲದಾಗ ಸಾಮಾನ್ಯ ಪ್ರತೀತಿಯೇ ಪೂರ್ಣಗೊಳ್ಳುವುದಿಲ್ಲವೋ, ಆ ವಿಶೇಷಮಾತ್ರವು ಪ್ರಾದಿಗಳಿಂದ ತೋರಿಬರಲಿ. ಆದರೆ ಅಷ್ಟು ಮಾತ್ರದಿಂದ ಯಾವ ವ್ಯವಹಾರಸಿದ್ಧಿಯೂ ಆಗದು. ಪ್ರತಿನಿಯತವಾದ ವಿಶೇಷದ ನಿಶ್ಚಯದಿಂದ ಮಾತ್ರ ಆ ವ್ಯವಹಾರಸಿದ್ಧಿಯು ಉಂಟಾಗುವುದು. ಅಂಥ ವಿಶೇಷವು ಪ್ರಾದಿಗಳಿಂದಲೇ ಗೋಚರವಾಗುತ್ತದೆ ಎಂದು ನಿಶ್ಚಿತವಾಗಿದೆ. ಪಚತಿ ಮುಂತಾದ ಕ್ರಿಯಾಪದಗಳಿಂದ (ಅಥವಾ ಪಚ್ ಇತ್ಯಾದಿ ಧಾತುಗಳಿಂದ) ಅಲ್ಲ. ಅರ್ಥಾಪತ್ತಿಯೆಂಬ ಪ್ರಮಾಣದಿಂದಲೂ ತದ್ಭಾವಸಿದ್ಧಿಯು ಉಂಟಾಗದು. ಏಕೆಂದರೆ ವ್ಯವಹಾರಸಿದ್ಧಿಯು ನಿಯತವಾದ ವಿಶೇಷಸಿದ್ಧಿಯನ್ನೇ ಅವಲಂಬಿಸಿಕೊಂಡಿರುತ್ತದೆ.

**ತಸ್ಮಾದ್ ಯತ್ಪ್ರಯೋಗಾನ್ವಯವ್ಯತಿರೇಕಾನುವಿಧಾಯಿನೀ ಯಸ್ಯ ಪ್ರತೀತಿಸ್ತಯೋರ್ವಾಚ್ಯವಾಚಕಭಾವ ವ್ಯವಹಾರ ವಿಷಯತ್ವಮೇವೋಪಗಂತುಂ ಯುಕ್ತಂ, ನಾಭಿವ್ಯಕ್ತಿ ವಿಷಯತ್ವಮ್। ಯಥಾ ಘಟಶಬ್ದತದರ್ಥಯೋಃ। ಪ್ರಾದಿಪ್ರಯೋಗಾನುವಿಧಾಯಿನೀ ತತ್ರ ಪಚತೀತ್ಯಾದೌ ಪ್ರಕರ್ಷಾದಿಪ್ರತೀತಿರಿತಿ ತೇಽಪಿ ತಥಾ ಭವಿತುಮ್ ಅರ್ಹಂತ್ಯೇವ। ಅನ್ಯಥಾ ನೀಲೋತ್ಪಲಾದೌ ಸರ್ವಸ್ಯೈವ ವಿಶೇಷಣಾಭಿಮತಸ್ಯ ನೀಲಾದಿಶಬ್ದಸ್ಯ ವಿಶೇಷ್ಯ-ವಾಚಿನಶ್ಚೋತ್ಪಲಾದೇರ್ವಿಶೇಷಣವಿಶೇಷ್ಯಭಾವವ್ಯವಹಾರೋಽಸ್ತಮುಪಗಚ್ಛೇತ್।**

**ಅನುವಾದ:**

ಆದ್ದರಿಂದ ಯಾವುದರ ಪ್ರಯೋಗದ ಅನ್ವಯ–ವ್ಯತಿರೇಕಗಳನ್ನು ಯಾವ ಪ್ರತೀತಿಯು ಅನುಸರಿಸುವುದೋ, ಅವೆರಡು ವಾಚ್ಯವಾಚಕಭಾವದ ವ್ಯವಹಾರಕ್ಕೆ ಯೋಗ್ಯ. ಅಭಿವ್ಯಕ್ತಿವಿಷಯಕ್ಕಲ್ಲ. ಘಟ ಎಂಬ ಶಬ್ದಕ್ಕೂ ಅದರ ಅರ್ಥಕ್ಕೂ ಇರುವಂತೆ ವಾಚ್ಯವಾಚಕಭಾವ. ಪಚತಿ ಇತ್ಯಾದಿಗಳಲ್ಲಿ ಪ್ರಾದಿಗಳ ಪ್ರಯೋಗವನ್ನು ಅನುಸರಿಸಿಕೊಂಡು ಪ್ರಕರ್ಷಾದಿಗಳ ಪ್ರತೀತಿ ಉಂಟಾಗುತ್ತದೆ, ಆದ್ದರಿಂದ ಅವುಗಳು (ಎಂದರೆ ಪ್ರ ಮತ್ತು ಪ್ರಕರ್ಷ ಇತ್ಯಾದಿಗಳು) ವಾಚ್ಯವಾಚಕಗಳಾಗಲು ಅರ್ಹವಾಗುತ್ತವೆ. ಹಾಗೆ ಹೇಳದಿದ್ದರೆ, ನೀಲೋತ್ಪಲ ಇತ್ಯಾದಿಗಳಲ್ಲಿ ಸರ್ವರಿಗೂ ವಿಶೇಷಣವೆಂದು ಅಭಿಮತವಾದ ನೀಲಾದಿಗಳಿಗೂ, ವಿಶೇಷ್ಯವಾಚಿಯಾದ ಉತ್ಪಲಾದಿಗಳಿಗೂ ವಿಶೇಷಣವಿಶೇಷ್ಯಭಾವವ್ಯವಹಾರವೇ ಅಸ್ತಂಗತವಾದೀತು.

(ವಾಚಕತ್ವ–ದ್ಯೋತಕತ್ವ)

**ತತ್ರಾಪಿ ಹ್ಯೇತಚ್ಛಕ್ಯಂ ವಕ್ತುಮ್। ಉತ್ಪಲಾದಯಃ ಶಬ್ದಾಃ ಸಾಮಾನ್ಯವಚನಾಃ। ಸಾಮಾನ್ಯಾನಿ ಚ ಗರ್ಭೀಕೃತವಿಶೇಷಾಣಿ ಭವಂತೀತಿ ತೇಷಾಂ ತತ್ರ ಸದ್ಭಾವಸಿದ್ಧೌ ಸತ್ಯಾಂ ನೀಲಾದಿಶಬ್ದಾ ಅಪಿ ತತ್ತದ್ದ್ಯೋತನಮಾತ್ರವ್ಯಾಪಾರಾಃ ಪ್ರಾದಿವದ್ ದ್ಯೋತಕಾ ಭವಿತುಮ್ ಅರ್ಹಂತಿ, ನಾಭಿಧಾಯಕಾ ಇತಿ।**

**ಅನುವಾದ:**

ಅಲ್ಲಿಯೂ "ಉತ್ಪಲಾದಿ ಶಬ್ದಗಳು ಸಾಮಾನ್ಯದ (ಜಾತಿಯ) ವಾಚಕಗಳು. ಸಾಮಾನ್ಯಗಳು ವಿಶೇಷವನ್ನು ಗರ್ಭೀಕರಿಸಿಕೊಂಡಿರುತ್ತವೆ. ಆದ್ದರಿಂದ ಅವುಗಳಿಗೆ ಅಲ್ಲಿ ಸದ್ಭಾವವು ಸಿದ್ಧವಾಗಲು ನೀಲಾದಿಶಬ್ದಗಳೂ ಕೇವಲ ದ್ಯೋತನವನ್ನು ಮಾಡುತ್ತವೆ. ಆದ್ದರಿಂದ ಅವೂ ಪ್ರಾದಿಗಳಂತೆ ದ್ಯೋತಕಗಳೇ ಆಗಲು ಅರ್ಹ, ಅವೂ ಅಭಿಧಾಯಕಗಳಲ್ಲ" ಎಂದು ಹೇಳಲು ಸಾಧ್ಯ.

**ಏವಂ ಚಾಂತರ್ಮಾತ್ರವಿಪರಿವರ್ತಿತಯಾ ಸಿದ್ಧಸದ್ಭಾವಾನಾಂ ಘಟಾದೀನಾಂ ಘಟಾದಿಶಬ್ದಾ ಅಪಿ ದ್ಯೋತಕಾ ಏವ ಸ್ಯುಃ, ನ ವಾಚಕಾ ಇತಿ ವಾಚ್ಯವಾಚಕವ್ಯವಹಾರೋಽಸ್ತಮಿಯಾತ್। ತಸ್ಮಾದ್ ಭಾಕ್ತಮೇವ ದ್ಯೋತಕತ್ವಮುಪಗಂತವ್ಯಂ, ನ ಮುಖ್ಯಮ್। ಭಕ್ತೇಶ್ಚ ಪ್ರಯೋಜನಂ ವಾಚ್ಯಸ್ಯಾರ್ಥಸ್ಯ ಸ್ಫುಟತ್ವಪ್ರತಿಪತ್ತಿಃ। ನಿಮಿತ್ತಂ ಚ ವಿಶೇಷಣವಿಶೇಷ್ಯಪ್ರತೀತ್ಯೋರಾಶುಭಾವಿತಯಾ ಕ್ರಮಾನುಪಲಕ್ಷಣಾತ್ ಸಹಭಾವಪ್ರತೀತಿಃ।**

**ಅನುವಾದ:**

ಹೀಗೆ ಅಂತರ್ವಿಪರಿವರ್ತಿಯಾಗಿರುವ ಸದ್ಭಾವವು ಸಿದ್ಧವಾಗಿರುವ ಘಟಾದಿಗಳಿಗೂ ಘಟಾದಿಶಬ್ದಗಳು ದ್ಯೋತಕಗಳೇ ಆಗಿಬಿಟ್ಟಾವು, ವಾಚಕಗಳಲ್ಲ. ಆಗ ವಾಚ್ಯ–ವಾಚಕ ಎಂಬ ವ್ಯವಹಾರವೇ ಅಸ್ತಂಗತವಾದೀತು. ಈ ಕಾರಣದಿಂದ ಪ್ರಾದಿಗಳಲ್ಲೂ ದ್ಯೋತಕತ್ವವು ಭಾಕ್ತ (ಲಾಕ್ಷಣಿಕ) ಎಂದು ಒಪ್ಪಬೇಕು, ಮುಖ್ಯವಾದ ದ್ಯೋತಕತ್ವವು ಹೊಂದುವುದಿಲ್ಲ. ಭಕ್ತಿಯ (ಲಕ್ಷಣಾ ವೃತ್ತಿಯ) ಪ್ರಯೋಜನವೇನೆಂದರೆ ವಾಚ್ಯಾರ್ಥದ ಸ್ಪಷ್ಟಜ್ಞಾನ. ವಿಶೇಷಣ–ವಿಶೇಷ್ಯಪ್ರತೀತಿಗಳು ವೇಗದಿಂದ ಉಂಟಾಗಿ ಕ್ರಮವು ಕಾಣದಿರುವುದರಿಂದ ಸಹಭಾವದ ಪ್ರತೀತಿಯೇ ಲಕ್ಷಣೆಯ ನಿಮಿತ್ತ.

**ವಿವರಣೆ:**

ಘಟಾದಿ ಬಾಹ್ಯವಸ್ತುಗಳೂ ಮನಸ್ಸಿನಲ್ಲಿ ಅಥವಾ ಬುದ್ಧಿಯಲ್ಲಿ ಪ್ರತ್ಯಯರೂಪದಲ್ಲಿ ಸದಾ ಇರುವುವೇ ಆದ್ದರಿಂದ ಘಟಾದಿ ಶಬ್ದಗಳು ಅವುಗಳ ದ್ಯೋತಕ ಎಂದು ಹೇಳಲು ಸಾಧ್ಯ. ಆಗ ವಾಚ್ಯವಾಚಕಭಾವವೇ ಇಲ್ಲ ಎನ್ನಬೇಕಾಗುತ್ತದೆ.

(ಅಂತರಂಗ ಮತ್ತು ಬಹಿರಂಗ ವಿಶೇಷಣ)

**ದ್ವಿವಿಧಂ ಹಿ ವಿಶೇಷಣಮಿಷ್ಟಮ್। ಅಂತರಂಗಂ ಬಹಿರಂಗಂ ಚೇತಿ। ತತ್ರಾದ್ಯಮ್ ಅವ್ಯವಹಿತಮೇವ ಅರ್ಥಕಾರಿ, ಲಾಕ್ಷಾದಿವತ್ ಸ್ಫಟಿಕಾದೇಃ। ದ್ವಿತೀಯಮ್ ಉಭಯರೂಪಮ್ ಅಯಸ್ಕಾಂತಮಿವ ಲೋಹಸ್ಯ। ತದ್ಧಿ ವ್ಯವಹಿತಮಪಿ ಲೋಹೇ ಸ್ವಾಂ ಶಕ್ತಿಮ್ ಉಪದಧಾತ್ಯೇವ। ತದಪಿ ದ್ವಿವಿಧಮ್। ಸಮಾನಾಧಿಕರಣಂ ಭಿನ್ನಾಧಿಕರಣಂ ಚೇತಿ। ವಿಶೇಷ್ಯೋಽಪಿ ದ್ವಿವಿಧೋ ಧಾತ್ವರ್ಥೋ ನಾಮಾರ್ಥಶ್ಚೇತಿ। ತತ್ರೋಪಸರ್ಗಾಣಾಂ ಪ್ರಾಯೋ ಧಾತ್ವರ್ಥೋ ವಿಷಯೋ, ನ ನಾಮಾರ್ಥಃ। ಚಾದೀನಾಂ ತು ನಿಪಾತಾನಾಮ್ ಉಭಯಮಪಿ। ಕೇವಲಂ ತೇಷಾಂ ವಿಶೇಷ್ಯಾತ್ ಪೂರ್ವಂ ಪಶ್ಚಾಚ್ಚ ಕ್ರಮೇಣ ಪ್ರಯೋಗೋ ನಿಯೋಗತೋಽವಗಂತವ್ಯಃ। ನಾನ್ಯೇಷಾಂ ವಿಶೇಷಣಾನಾಮ್।**

**ಅನುವಾದ:**

ವಿಶೇಷಣವು ಅಂತರಂಗ, ಬಹಿರಂಗ ಎಂದು ಎರಡು ವಿಧ. ಮೊದಲನೆಯದು (ಅಂತರಂಗ ವಿಶೇಷಣವು) ವ್ಯವಧಾನವಿಲ್ಲದಾಗ ಮಾತ್ರ ಕಾರ್ಯವನ್ನು ಮಾಡುವುದು. ಉದಾಹರಣೆ ಸ್ಫಟಿಕಾದಿಗಳ ಮುಂದೆ ಇರಿಸಿದ ಅರಗು ಇತ್ಯಾದಿ. ಎರಡನೆಯದು (ಬಹಿರಂಗ ವಿಶೇಷಣವು) ಉಭಯರೂಪ (ವ್ಯವಧಾನ ಇದ್ದರೂ ಇಲ್ಲದಿದ್ದರೂ ಕಾರ್ಯಕಾರಿ). ಉದಾಹರಣೆ– ಕಬ್ಬಿಣವನ್ನು ಸೆಳೆಯುವ ಅಯಸ್ಕಾಂತ. ಅದು ವ್ಯವಧಾನವಿದ್ದರೂ ಕಬ್ಬಿಣದಲ್ಲಿ ತನ್ನ ಶಕ್ತಿಯನ್ನು ತೋರಿಸುವುದು. ಅದೂ ಮತ್ತೆ ಎರಡು ವಿಧ– ಸಮಾನಾಧಿಕರಣ ಮತ್ತು ಭಿನ್ನಾಧಿಕರಣ. ವಿಶೇಷ್ಯವೂ ಧಾತ್ವರ್ಥ ಮತ್ತು ನಾಮಾರ್ಥ ಎಂದು ಎರಡು ವಿಧ. ಉಪಸರ್ಗಗಳಿಗೆ ಪ್ರಾಯಶಃ ಧಾತ್ವರ್ಥವೇ ವಿಷಯವಾಗುತ್ತದೆ, ನಾಮಾರ್ಥವಲ್ಲ. 'ಚ' ಮುಂತಾದ ನಿಪಾತಗಳಿಗೆ ನಾಮಾರ್ಥ–ಧಾತ್ವರ್ಥಗಳೆರಡೂ ವಿಷಯ. ವಿಶೇಷ್ಯಕ್ಕಿಂತ ಮುಂಚೆ ಅಥವಾ ಆಮೇಲೆ ಅವುಗಳ ಪ್ರಯೋಗ ಹೇಗೆನ್ನುವುದನ್ನು ಶಾಸ್ತ್ರದಿಂದ ತಿಳಿದುಕೊಳ್ಳಬೇಕು. ಬೇರೆ ವಿಶೇಷಣಗಳಿಗೆ ಈ ನಿಯಮವಿಲ್ಲ.

> **ತದೇವಂ ವಿಶೇಷಣವಿಶೇಷ್ಯರೂಪೇಽವಸಿತೇ ಯದೇತದಂತರಂಗಂ ವಿಶೇಷಣಮುಕ್ತಂ ತದ್ಗವಾದೌ ಗೋತ್ವಾದಿವತ್ ವಿಶೇಷ್ಯಸ್ವರೂಪಾಂತರ್ಭೂತಮೇವೇತಿ ತತ್ಪ್ರತೀತ್ಯೋರಾಶುಭಾವಿತಯಾ ಕ್ರಮಾನುಪಲಕ್ಷಣಾತ್ ಸಹಭಾವಾವಗಮೋ ದ್ಯೋತ್ಯದ್ಯೋತಕಭಾವಭ್ರಮಹೇತುಃ। ಅತ ಏವ ಕೇಚಿದೇಷಾಂ ಧಾತ್ವಂತರ್ಭಾವಮಿವ ಮನ್ಯಮಾನಾಃ "ಅಡಾದೀನಾಂ ವ್ಯವಸ್ಥಾರ್ಥಂ ಪೃಥಕ್ತ್ವೇನ ಪ್ರಕಲ್ಪನಮ್। ಧಾತೂಪಸರ್ಗಯೋಃ ಶಾಸ್ತ್ರೇ ಧಾತುರೇವ ಚ ತಾದೃಶಃ॥" ಇತ್ಯಾದ್ಯವೋಚನ್।**

**ಅನುವಾದ:**

ಹೀಗೆ ವಿಶೇಷಣ–ವಿಶೇಷ್ಯಭಾವವು ನಿಶ್ಚಿತವಾಗಿರುವುದರಿಂದ ಅಂತರಂಗ ವಿಶೇಷಣವು ಗೋ ಇತ್ಯಾದಿಗಳಲ್ಲಿ ಗೋತ್ವದಂತೆ ವಿಶೇಷ್ಯಸ್ವರೂಪದಲ್ಲೇ ಅಂತರ್ಭೂತವಾಗಿರುತ್ತದೆ. ಅವುಗಳ ಪ್ರತೀತಿಯು ಅತಿಶೀಘ್ರವಾಗಿ ಆಗುವುದರಿಂದ, ಕ್ರಮವು ಕಾಣಿಸುವುದಿಲ್ಲ. ಅದರಿಂದ ಉಂಟಾಗುವ ಏಕಕಾಲಿಕತ್ವದ ಜ್ಞಾನವು ಇಲ್ಲಿ ದ್ಯೋತ್ಯದ್ಯೋತಕಭಾವ ಎಂಬ ಭ್ರಮೆಗೆ (ಭ್ರಾಂತಿಗೆ) ಕಾರಣ. ಆದ್ದರಿಂದಲೇ ಕೆಲವರು ಈ ಉಪಸರ್ಗಗಳು ಧಾತುವಿನಲ್ಲಿ ಅಂತರ್ಭೂತ ಎಂದು ತಿಳಿದುಕೊಂಡು "ಅಡಾಗಮ ಮುಂತಾದವುಗಳ ವ್ಯವಸ್ಥೆಗಾಗಿ ಶಾಸ್ತ್ರದಲ್ಲಿ ಧಾತು ಮತ್ತು ಉಪಸರ್ಗಗಳು ಬೇರೆ ಎಂದು ಕಲ್ಪಿಸಲಾಗಿದೆ. ವಸ್ತುತಃ ಉಪಸರ್ಗಸಹಿತವಾಗಿ ಇರುತ್ತದೆ" ಇತ್ಯಾದಿಗಳನ್ನು ಹೇಳಿದ್ದಾರೆ.

## ವಿವರಣೆ:

ಅಡಾಗಮವು ಧಾತುವಿನ ಹಿಂದೆ ಬರಬೇಕು. ಉಪಸರ್ಗದ ಹಿಂದೆ ಅಲ್ಲ. ಪ್ರಗಚ್ಛತಿ, ಪ್ರಾಗಚ್ಛತ್. ಈ ವ್ಯವಸ್ಥೆಗಾಗಿ ಉಪಸರ್ಗಗಳ ಪೃಥಕ್ಕರಣವನ್ನು ಶಾಸ್ತ್ರದಲ್ಲಿ ಕಲ್ಪಿಸಲಾಗಿದೆ. ವಸ್ತುತಃ ಪ್ರಗಮ್ (ಪ್ರಗಚ್ಛತಿ) ಎಂಬುದೇ ಧಾತು ಎಂದು ಕೆಲವರ ಅನಿಸಿಕೆ.

**ಚಾದೀನಾಂ ಚೋಪಾಧೀನಾಂ ವಿಶೇಷೇಭ್ಯೋ ನಿರ್ಮಲೇಭ್ಯಃ ಸ್ಫಟಿಕೋಪಲೇಭ್ಯ ಇವ ಲಾಕ್ಷಾದೀನಾಮವ್ಯವಧಾನಮೇವ। ತೇನ ತೇ ಯದನಂತರಮುಪಾಧೀಯಂತೇ, ತೇಷ್ವೇವ ವಿಶೇಷಮ್ ಆಧಾತುಮಲಮ್, ನಾನ್ಯತ್ರೇತಿ ಯತ್ತೇಷಾಂ ಭಿನ್ನಕ್ರಮತಯಾ ಕ್ವಚಿದುಪಾದಾನಂ ತದನುಪಪನ್ನಮೇವ। ಅಯಥಾಸ್ಥಾನನಿವೇಶಿನೋ ಹಿ ತೇಽರ್ಥಾಂತರಮ್ ಅನಭಿಮತಮೇವ ಸ್ವೋಪರಾಗೇಣೋಪರಂಜಯೇಯುಃ। ತತಶ್ಚ ಪ್ರಸ್ತುತಾರ್ಥಸ್ಯಾಸಾಮಂಜಸ್ಯಪ್ರಸಂಗಃ। ಕಥಂಚಿದ್ವಾ ಭಿನ್ನಕ್ರಮತಯಾಪ್ಯಭಿಮತಾರ್ಥಸಂಬಂಧೋಪಕಲ್ಪನೇ ರಸಾಸ್ವಾದೋಽಪಿ ವಿಘ್ನಿತಃ ಸ್ಯಾತ್। ಶಬ್ದದೋಷಾಣಾಮ್ ಅನೌಚಿತ್ಯೋಪಗಮಾತ್ ತಸ್ಯ ಚ ರಸಭಂಗಹೇತುತ್ವಾತ್।**

## ಅನುವಾದ:

ನಿರ್ಮಲವಾದ ಸ್ಫಟಿಕಶಿಲೆಯ ಮುಂದೆ ಇಟ್ಟ ಅರಗು ಮುಂತಾದವುಗಳಿಗಿರುವ ಹಾಗೆ 'ಚ' ಮುಂತಾದ ಉಪಾಧಿಗಳಿಗೂ ತಮ್ಮ ವಿಶೇಷಗಳೊಡನೆ ಅವ್ಯವಧಾನವೇ ಇರಬೇಕು. ಆದ್ದರಿಂದ ಅವು ಯಾವ ಶಬ್ದದ ಅನಂತರ ಉಚ್ಚರಿಸಲ್ಪಡುವುವೋ, ಅವುಗಳ ಅರ್ಥಗಳಲ್ಲೇ ವಿಶೇಷವನ್ನು ತೋರಿಸಲು ಶಕ್ತವಾಗುತ್ತವೆ, ಬೇರೆಯವುಗಳಲ್ಲಲ್ಲ. ಆದರೂ ಅವುಗಳನ್ನು ಭಿನ್ನಕ್ರಮದಲ್ಲಿ ಕೆಲವು ಕಡೆಗಳಲ್ಲಿ ಇಡುವುದು ಅನುಚಿತವೇ ಸರಿ. ಯೋಗ್ಯವಲ್ಲದ ಸ್ಥಾನದಲ್ಲಿ ಇಡಲ್ಪಟ್ಟ ಅವು ವಕ್ತೃವಿಗೆ ಅನಭಿಮತವಾದ ಬೇರೊಂದು ಅರ್ಥವನ್ನು ತಮ್ಮ ಬಣ್ಣದಿಂದ ಬಿಂಬಿಸಬಹುದು. ಆಗ ಪ್ರಸ್ತುತಾರ್ಥದ ಅಸಮಂಜಸತೆಯ ಪ್ರಸಂಗ. ಹೇಗೋ ಕ್ರಮವನ್ನು ಬದಲಾಯಿಸಿ ಇಷ್ಟವಾದ ಅರ್ಥದೊಡನೆ ಸಂಬಂಧವನ್ನು ಕಲ್ಪಿಸಿಕೊಂಡರೂ ಪ್ರಸ್ತುತಾರ್ಥದ ಪ್ರತೀತಿಗೆ ವಿಘ್ನ ಉಂಟಾಗಿ ಅದನ್ನು ಅವಲಂಬಿಸಿರುವ ರಸಾಸ್ವಾದವೂ ಸವಿಘ್ನವಾಗುತ್ತದೆ. ಶಬ್ದದೋಷಗಳಲ್ಲಿ ಅನೌಚಿತ್ಯವನ್ನು (ಶಾಸ್ತ್ರಕಾರರು) ಒಪ್ಪಿಕೊಳ್ಳುವುದರಿಂದ, ಅನೌಚಿತ್ಯವು ರಸಭಂಗದ ಕಾರಣವಾಗಿರುವುದರಿಂದ ರಸಾಸ್ವಾದಕ್ಕೆ ಅದು ಅಡ್ಡಿ.

**ಯಥಾಹುಃ**
**ಅನೌಚಿತ್ಯಾದೃತೇನಾನ್ಯದ್ರಸಭಂಗಸ್ಯ ಕಾರಣಮ್।**
**ಪ್ರಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ ಪರಾ ॥ ಇತಿ ॥**
**ಸ್ವಾಭಾವಿಕಂ ಧ್ವನೇರ್ಯುಕ್ತಂ ವ್ಯಂಜಕತ್ವಂ ನ ದೀಪವತ್।**
**ಧೂಮವತ್ ಕಿಂತು ಕೃತಕಂ ಸಂಬಂಧಾದೇರಪೇಕ್ಷಣಾತ್॥**
**ಪ್ರಾದೀನಾಂ ದ್ಯೋತಕತ್ವಂ ಯತ್ ಕೈಶ್ಚಿದಭ್ಯುಪಗಮ್ಯತೇ।**
**ತದ್ ಭಾಕ್ತಮೇವ ತತ್ರೇಷ್ಟಂ ನ ಮುಖ್ಯಂ ತದಸಂಭವಾತ್॥**

**ತಥಾ ಹಿ ಯಸ್ಯ ಶಬ್ದಸ್ಯ ಭಾವಾಭಾವಾನುಸಾರಿಣೀ।**
**ಯದರ್ಥಬುದ್ಧಿಸ್ತಸ್ಯಾಸೌ ವಾಚ್ಯೋಽರ್ಥ ಇತಿ ಕಥ್ಯತೇ॥**
**ಗೋಶಬ್ದಸ್ಯೇವ ಗೌರರ್ಥಃ ಸಾನ್ಯಥಾ ತ್ವವ್ಯವಸ್ಥಿತಾ।**
**ವಾಚ್ಯತ್ವವ್ಯವಹಾರಶ್ಚ ನ ಸ್ಯಾದರ್ಥಸ್ಯ ಕಸ್ಯಚಿತ್॥**

**ಅನುವಾದ:**

(ಆನಂದವರ್ಧನಾಚಾರ್ಯರೂ) ಹೇಳುತ್ತಾರೆ:

"ರಸಭಂಗಕ್ಕೆ ಅನೌಚಿತ್ಯಕ್ಕಿಂತಲೂ ಬೇರೆ ಕಾರಣವಿಲ್ಲ. ಪ್ರಸಿದ್ಧವಾದ ಔಚಿತ್ಯವನ್ನು ಅನುಸರಿಸಿ ರಚನೆಯನ್ನು ಮಾಡುವುದೇ ರಸದ ಪರಮರಹಸ್ಯ".

ಶಬ್ದಕ್ಕೆ ದೀಪಕ್ಕಿರುವಂತೆ ಸ್ವಾಭಾವಿಕವಾದ ವ್ಯಂಜಕತ್ವವಿಲ್ಲ. ಸಂಬಂಧಾದಿಗಳನ್ನು ಅಪೇಕ್ಷಿಸುವುದರಿಂದ ಧೂಮದ ಹಾಗೆ ಅದರ ವ್ಯಂಜಕತ್ವವೂ ಕೃತಕ.

ಕೆಲವರು ಪ್ರಾದಿಗಳಿಗೆ ದ್ಯೋತಕತ್ವವನ್ನು ಒಪ್ಪಿಕೊಂಡರೂ ಅದು ಕೇವಲ ಲಾಕ್ಷಣಿಕವಾಗಿ. ಮುಖ್ಯದ್ಯೋತಕತ್ವವು ಅಸಂಭವವಾದುದರಿಂದ ಭಾಕ್ತದ್ಯೋತಕತ್ವವು ಮಾತ್ರ ಅವುಗಳಲ್ಲಿದೆ.

ಯಾವ ಶಬ್ದದ ಇರುವಿಕೆ ಮತ್ತು ಇಲ್ಲದಿರುವಿಕೆಗಳನ್ನು ಯಾವ ಅರ್ಥಜ್ಞಾನವು ಅನುಸರಿಸುವುದೋ, ಆ ಅರ್ಥವು ಆ ಶಬ್ದದ ವಾಚ್ಯಾರ್ಥವೆಂದು ಹೇಳಲಾಗುತ್ತದೆ. ಗೋಶಬ್ದಕ್ಕೆ ಗೋ ಎಂಬ ಅರ್ಥ ಇರುವ ಹಾಗೆ. ಹಾಗೆ ಒಪ್ಪಿಕೊಳ್ಳದಿದ್ದರೆ ಅವ್ಯವಸ್ಥೆ ಉಂಟಾಗುತ್ತದೆ. ಮತ್ತೆ ಯಾವ ಅರ್ಥಕ್ಕೂ ವಾಚ್ಯತ್ವ ವ್ಯವಹಾರವೂ ಇಲ್ಲವಾದೀತು.

**ಪ್ರಾದಿಪ್ರಯೋಗಾನುಗಮವ್ಯತಿರೇಕಾನುಸಾರಿಣೀ।**
**ಪ್ರಕರ್ಷಾದೌ ಮತಿಸ್ತೇನ ತಸ್ಯ ತದ್ವಾಚ್ಯತಾ ನ ಕಿಮ್? ॥**
**ವಿಶೇಷಾವಗಮಸ್ಯಾಶುಭಾವಾದನುಪಲಕ್ಷಣಾತ್।**
**ಕ್ರಮಸ್ಯ ಸಹಭಾವಿತ್ವಂ ಭ್ರಮೋ ಭಕ್ತೇರ್ನಿಬಂಧನಮ್॥**
**ವಿಶೇಷಣಂ ತು ದ್ವಿವಿಧಮಾಂತರಂ ಬಾಹ್ಯಮೇವ ಚ।**
**ತತ್ರಾವ್ಯವಹಿತಂ ಸದ್ ಯದರ್ಥಕಾರಿ ತದಾಂತರಮ್॥**
**ಸ್ಫಟಿಕಸ್ಯೇವ ಲಾಕ್ಷಾದಿ ದ್ವಿತೀಯಮುಭಯಾತ್ಮಕಮ್।**
**ಆಯಸಸ್ಯೇವ ತತ್ಕಾಂತಂ ತದಪಿ ದ್ವಿವಿಧಂ ಮತಮ್॥**
**ಅಸಮಾನಸಮಾನಾಧಿಕರಣತ್ವವಿಭೇದತಃ।**
**ವಿಶೇಷ್ಯೋಽಪಿ ದ್ವಿಧಾ ಜ್ಞೇಯೋ ಧಾತುನಾಮಾರ್ಥಭೇದತಃ॥**

**ಅನುವಾದ:**

ಪ್ರಕರ್ಷ ಇತ್ಯಾದ್ಯರ್ಥದ ಜ್ಞಾನವು ಪ್ರಾದಿಗಳ ಪ್ರಯೋಗದ ಅನ್ವಯ–ವ್ಯತಿರೇಕಗಳನ್ನನುಸರಿಸುತ್ತದೆ. ಆದ್ದರಿಂದ ಆ ಪ್ರಕರ್ಷಾದಿಗಳು ಪ್ರಾದಿಗಳಿಗೆ ಏಕೆ

ವಾಚ್ಯವಲ್ಲ? ಅತ್ಯಂತ ಶೀಘ್ರವಾಗಿ ವಿಶೇಷಜ್ಞಾನ ಉಂಟಾಗುತ್ತದೆ, ಆದ್ದರಿಂದ ಕ್ರಮವು ಗೋಚರಿಸದೆ ಉಂಟಾಗುವ ಸಹಭಾವದ ಭ್ರಾಂತಿಯು ಲಕ್ಷಣೆಗೆ ಕಾರಣ.

ವಿಶೇಷಣವು ಆಂತರ ಮತ್ತು ಬಾಹ್ಯ ಎಂದು ಎರಡು ವಿಧ. ಯಾವುದು ವ್ಯವಧಾನವಿಲ್ಲದಿದ್ದಾಗ ಮಾತ್ರ ಕಾರ್ಯಕಾರಿಯೋ ಅದು ಆಂತರ (=ಅಂತರಂಗ). ಸ್ಫಟಿಕಕ್ಕೆ ಅರಗು ಇತ್ಯಾದಿ ಇರುವುದು ಆಂತರ ವಿಶೇಷಣ.

ಎರಡನೆಯದಾದ ಬಾಹ್ಯವಿಶೇಷಣವು ವ್ಯವಧಾನವಿದ್ದಾಗಲೂ ವ್ಯವಧಾನವಿಲ್ಲದಾಗಲೂ ಕಾರ್ಯಕಾರಿಯಾಗಿ ಎರಡು ವಿಧ. ಅದರ ಉದಾಹರಣೆ ಕಬ್ಬಿಣವನ್ನು ಸೆಳೆಯುವ ಅಯಸ್ಕಾಂತ. ಸಮಾನಾಧಿಕರಣ, ಅಸಮಾನಾಧಿಕರಣ ಎಂದು ಅದು ಎರಡು ವಿಧ. ವಿಶೇಷ್ಯವು ಧಾತ್ವರ್ಥ, ನಾಮಾರ್ಥ ಎಂದು ಎರಡು ಪ್ರಕಾರವಾಗಿರುತ್ತದೆ.

**ಶಾಬ್ದತ್ವಾರ್ಥತ್ವಭೇದೇನ ನಾಮಾರ್ಥೋಽಪಿ ದ್ವಿಧಾ ಮತಃ।**
**ತತ್ರೋಪಸರ್ಗಾಣಾಂ ಪ್ರಾಯೋ ಧಾತ್ವರ್ಥೋ ವಿಷಯೋ ಮತಃ॥**
**ಚಾದೀನಾಂ ತು ನಿಪಾತಾನಾಮುಭಯಂ ಪರಿಕೀರ್ತಿತಮ್।**
**ಕೇವಲಂ ತು ವಿಶೇಷ್ಯಾತ್ ಸ್ಯುಃ ಪೂರ್ವಂ ಪಶ್ಚಾಚ್ಚ ತೇ ಕ್ರಮಾತ್॥**
**ವಿಶೇಷಣಾನಾಮನ್ಯೇಷಾಂ ಪೌರ್ವಾಪರ್ಯಮಯಂತ್ರಿತಮ್।**
**ಇತ್ಥಂ ಸ್ಥಿತೇ ಸ್ವರೂಪೇಽಸ್ಮಿನ್ ವಿಶೇಷಣವಿಶೇಷ್ಯಯೋಃ।**
**ಯದಂತರಂಗಮುದ್ದಿಷ್ಟಮುಭಯಾತ್ಮಾ ವಿಶೇಷಣಮ್।**
**ವಿಶೇಷ್ಯೇ ಮಗ್ನಮಿವ ತದ್ ಗವಿ ಗೋತ್ವಮಿವ ಸ್ಥಿತಮ್॥**
**ಅತ ಏವಾಶುಭಾವಿತ್ವಾತ್ ತತ್ಪ್ರತೀತ್ಯೋಃ ಕ್ರಮಾಗ್ರಹಃ।**
**ಯನ್ಮೂಲಶ್ಚಾಯಮನಯೋರ್ದ್ಯೋತ್ಯದ್ಯೋತಕತಾಭ್ರಮಃ॥**

**ಅನುವಾದ:**

ಶಾಬ್ದ, ಆರ್ಥ ಎಂದು ನಾಮಾರ್ಥವೂ ಎರಡು ಬಗೆ. ಉಪಸರ್ಗಗಳಿಗೆ ವಿಷಯವಾಗುವುದು ಪ್ರಾಯಃ ಧಾತ್ವರ್ಥವೇ. 'ಚ' ಮುಂತಾದ ನಿಪಾತಗಳಿಗಾದರೋ ಧಾತ್ವರ್ಥ, ನಾಮಾರ್ಥ ಎಂಬ ಎರಡೂ ವಿಷಯ. ಅವುಗಳಲ್ಲಿ ಉಪಸರ್ಗಗಳು ವಿಶೇಷ್ಯಕ್ಕಿಂತಲೂ ಮೊದಲು ಬರುತ್ತವೆ, ಚಾದಿನಿಪಾತಗಳು ವಿಶೇಷ್ಯಗಳ ಅನಂತರ ಬರುತ್ತವೆ. ಬೇರೆ ವಿಶೇಷಣಗಳಿಗೆ ಪೌರ್ವಾಪರ್ಯನಿಯಂತ್ರಣ ಇಲ್ಲ. (ಅವು ಪೂರ್ವದಲ್ಲಿ ಅಥವಾ ಪರದಲ್ಲಿ ಇರಬಹುದು.) ಹೀಗೆ ವಿಶೇಷಣ–ವಿಶೇಷ್ಯಗಳ ಸ್ವರೂಪವಿರುವಾಗ ಉಭಯಾತ್ಮವಾದ ಅಂತರಂಗವಿಶೇಷಣವು ವಿಶೇಷ್ಯದಲ್ಲಿ ಗೋವಿನಲ್ಲಿ ಗೋತ್ವವಿರುವಂತೆ ಮಗ್ನವಾಗಿಬಿಟ್ಟಿರುತ್ತದೆ. ಆದ್ದರಿಂದಲೇ ಆ ವಿಶೇಷಣವಿಶೇಷ್ಯಗಳ ಪ್ರತೀತಿಗಳು ಆಶುಭಾವಿ (ಶೀಘ್ರತಮವಾಗಿ ಹುಟ್ಟುವುವು)ಗಳಾಗಿರುವುದರಿಂದ ಅವುಗಳ ಕ್ರಮವು ಅರಿವಿಗೆ ಬರುವುದಿಲ್ಲ.

ತನ್ಮೂಲಕವಾಗಿ ಅವುಗಳಿಗೆ ದ್ಯೋತ್ಯದ್ಯೋತಕಭಾವವಿದೆ ಎಂಬ ಭ್ರಾಂತಿಯು ಹುಟ್ಟಿದೆಯಷ್ಟೆ.

**ಪ್ರಾದೀನಾಂ ಧಾತುಗರ್ಭತ್ವೋಪಗಮಾಚ್ಚ ಯದುಕ್ತವಾನ್।**
**ಅಡಾದೀನಾಂ ವ್ಯವಸ್ಥಾರ್ಥಮಿತ್ಯಾದಿ ವಿದುಷಾಂ ವರಃ॥**
**ಅತ ಏವ ವ್ಯವಹಿತೈರ್ಬುಧಾ ನೇಚ್ಛಂತಿ ಚಾದಿಭಿಃ।**
**ಸಂಬಂಧಂ ತೇ ಹಿ ಶಕ್ತಿಂ ಸ್ವಾಮುಪದಧ್ಯುರನಂತರೇ॥**
**ಸಾಂತರತ್ವೇ ತು ತಾಂ ಶಕ್ತಿಮನ್ಯತ್ರೈವಾದಧತ್ಯಮೀ।**
**ತತಶ್ಚಾರ್ಥಾಸಾಮಂಜಸ್ಯಾದನೌಚಿತ್ಯಂ ಪ್ರಸಜ್ಯತೇ॥**
**ಬಹಿರಂಗಾಂತರಂಗತ್ವಭೇದಾತ್ ತದ್ ದ್ವಿವಿಧಂ ಮತಮ್।**
**ತತ್ರ ಶಬ್ದೈಕವಿಷಯಂ ಬಹಿರಂಗಂ ಪ್ರಚಕ್ಷತೇ॥**
**ದ್ವಿತೀಯಮರ್ಥವಿಷಯಂ ತತ್ತ್ವಾದ್ಯೈರೇವ ಪ್ರದರ್ಶಿತಮ್।**
**ತತ್ಸ್ವರೂಪಮತೋಽಸ್ಮಾಭಿರಿಹ ನಾತಿಪ್ರತನ್ಯತೇ॥**

**ಅನುವಾದ:**

ಪ್ರಾದಿಗಳ ಧಾತುಗರ್ಭತ್ವವನ್ನು ಒಪ್ಪಿಕೊಂಡು ಪಂಡಿತರಲ್ಲಿ ಶ್ರೇಷ್ಠನಾದ ಭರ್ತೃಹರಿಯು ಅಡಾದಿಗಳ ವ್ಯವಸ್ಥೆಗಾಗಿ (ಉಪಸರ್ಗಗಳ ಪೃಥಕ್ಕರಣ) ಎಂದು ಹೇಳಿದ್ದಾನೆ. ಆದ್ದರಿಂದಲೇ ವಿದ್ವಾಂಸರು 'ಚ' ಇತ್ಯಾದಿಗಳೊಡನೆ ವ್ಯವಧಾನವುಳ್ಳ ಪದಗಳಿಗೆ ಸಂಬಂಧವನ್ನು ಇಷ್ಟಪಡುವುದಿಲ್ಲ. ಆ 'ಚ' ಇತ್ಯಾದಿಗಳು ಅನಂತರವಾದ ಪದಾರ್ಥಗಳಲ್ಲಿ ತಮ್ಮ ಶಕ್ತಿಯನ್ನು ತೊಡಗಿಸುತ್ತವೆ. ವ್ಯವಧಾನವಿದ್ದರೆ ಅವು ಶಕ್ತಿಯುನ್ನು ಬೇರೆ ಪದಗಳ ಅರ್ಥದಲ್ಲಿ ತುಂಬಿಸುತ್ತವೆ. ಆದ್ದರಿಂದ ಅರ್ಥಾಸಮಂಜಸತೆಯುಂಟಾಗಿ ಅನೌಚಿತ್ಯವು ಉಂಟಾಗುತ್ತದೆ.

ಅನೌಚಿತ್ಯವು ಬಹಿರಂಗ, ಅಂತರಂಗ ಎಂದು ಎರಡು ವಿಧ. ಶಬ್ದಮಾತ್ರ ವಿಷಯವಾದುದು ಬಹಿರಂಗಾನೌಚಿತ್ಯ. ಅರ್ಥವಿಷಯವಾದುದು ಅಂತರಂಗಾನೌಚಿತ್ಯ. ಅದನ್ನು (ಆನಂದವರ್ಧನನೇ ಮುಂತಾದ) ಪ್ರಾಚೀನಾಚಾರ್ಯರೇ ವಿವರಿಸಿದ್ದಾರೆ. ಆದ್ದರಿಂದ ಇಲ್ಲಿ ನಾವು ಅದನ್ನು ಅತಿಯಾಗಿ ವಿಸ್ತರಿಸಿ ಹೇಳುವುದಿಲ್ಲ.

**ಪಾರಂಪರ್ಯೇಣ ಸಾಕ್ಷಾಚ್ಚ ತದೇತತ್ಪ್ರತಿಪದ್ಯತೇ।**
**ಕವೇರಜಾಗರೂಕಸ್ಯ ರಸಭಂಗನಿಮಿತ್ತತಾಮ್॥**
**ಯತ್ ತ್ವೇತಚ್ಛಬ್ದವಿಷಯಂ ಬಹುಧಾ ಪರಿದೃಶ್ಯತೇ।**
**ತಸ್ಯ ಪ್ರಕ್ರಮಭೇದಾದ್ಯಾ ದೋಷಾಃ ಪಂಚೈವ ಯೋನಯಃ**
**ತೇಷಾಂ ಸಂಕ್ಷೇಪತೋಽಸ್ಮಾಭಿಃ ಸ್ವರೂಪಮಭಿಧಾಸ್ಯತೇ।**
**ಯಸ್ತು ಪ್ರಪಂಚಃ ಪಂಚಾನಾಂ ಸ್ವಯಂ ತಮವಧಾರಯೇತ್॥**

**ಅನುವಾದ:**

ಕವಿಯು ಅಜಾಗರೂಕನಾಗಿದ್ದರೆ ಈ ಅನೌಚಿತ್ಯವು ರಸಭಂಗಕ್ಕೆ ಸಾಕ್ಷಾತ್ತಾಗಿ ಅಥವಾ ಪರಂಪರೆಯಿಂದ ಕಾರಣವಾಗುತ್ತದೆ.

ಶಬ್ದವಿಷಯವಾದ ಈ ಅನೌಚಿತ್ಯವು ಅನೇಕ ಪ್ರಕಾರಗಳಲ್ಲಿ ಕಂಡುಬರುತ್ತದೆ. ಅದಕ್ಕೆ ಮೂಲವಾಗಿರುವುವು ಪ್ರಕ್ರಮಭೇದವೇ ಮುಂತಾದ ಐದು ದೋಷಗಳು ಮಾತ್ರ.

ಅವುಗಳ ಸ್ವರೂಪವನ್ನು ನಾವು ಸಂಕ್ಷಿಪ್ತವಾಗಿ ಹೇಳುತ್ತೇವೆ. ಆ ಐದು ದೋಷಗಳ ವಿಸ್ತೃತರೂಪವನ್ನು (ವಾಚಕರು) ಸ್ವಯಂ ತಿಳಿದುಕೊಳ್ಳಬೇಕು.

**ವಿವರಣೆ:**

ಶಬ್ದಸಂಬಂಧದಿಂದ ಅನೌಚಿತ್ಯದ ಐದು ಮೂಲದೋಷಗಳು ವಿಧೇಯಾವಿಮರ್ಶ, ಪ್ರಕ್ರಮಭೇದ, ಕ್ರಮಭೇದ, ಪೌನರುಕ್ತ್ಯ ಮತ್ತು ವಾಚ್ಯಾವಚನ. ಇವುಗಳನ್ನು ದ್ವಿತೀಯ ವಿಮರ್ಶದಲ್ಲಿ ಗ್ರಂಥಕಾರನು ಸೋದಾಹರಣವಾಗಿ ವಿವರಿಸಿದ್ದಾನೆ. ಇವುಗಳನ್ನೇ ವಿಸ್ತರಿಸಿ ಮುಂದೆ ಕಾವ್ಯಪ್ರಕಾಶ, ಸಾಹಿತ್ಯದರ್ಪಣ ಮುಂತಾದ ಗ್ರಂಥಗಳಲ್ಲಿ ಹೇಳಲಾಗಿದೆ. ಈ ದೋಷವಿಮರ್ಶೆ ಮಹಿಮಭಟ್ಟನ ಮೌಲಿಕಪ್ರದಾನ. ಮಹಾಕವಿಗಳ ಪದ್ಯಗಳಲ್ಲೂ ಇರುವ ದೋಷಗಳನ್ನು ಅವನು ನಿರ್ದಾಕ್ಷಿಣ್ಯವಾಗಿ ತೋರಿಸಿರುವುದು ಅವನ ಸೂಕ್ಷ್ಮೇಕ್ಷಿಕೆಗೆ ಸಾಕ್ಷಿಯಾಗಿದೆ.

(ಕಾವ್ಯಸಾಮಾನ್ಯಲಕ್ಷಣವನ್ನೇಕೆ ಹೇಳಲಿಲ್ಲ?)

**ಕಿಂಚ ಕಾವ್ಯಸ್ಯ ಸ್ವರೂಪಂ ವ್ಯುತ್ಪಾದಯಿತುಕಾಮೇನ ಮತಿಮತಾ ತಲ್ಲಕ್ಷಣಮೇವ ಸಾಮಾನ್ಯೇನಾಖ್ಯಾತವ್ಯಂ ಯತ್ರ ವಾಚ್ಯಪ್ರತೀಯಮಾನಯೋರ್ಗಮ್ಯಗಮಕಭಾವಸಂಸ್ಪರ್ಶಸ್ತತ್ ಕಾವ್ಯಮಿತಿ, ತಾವತೈವ ವ್ಯುತ್ಪತ್ತಿಸಿದ್ಧೇಃ। ಯತ್ತು ತದನಾಖ್ಯಾಯೈವ ತಯೋಃ ಪ್ರಧಾನೇತರಭಾವಕಲ್ಪನೇನ ಪ್ರಕಾರದ್ವಯಮುಕ್ತಂ ತದಪ್ರಯೋಜಕಮೇವ। ಯೋ ಹಿ ಯದ್ವಿಶೇಷಪ್ರತೀತೌ ನಿಮಿತ್ತಭಾವೇನ ನಿಶ್ಚಿತಃ ಸ ಏವ ತದರ್ಥಿನಃ ಪ್ರತಿಪಾದ್ಯೋ ಭವತಿ, ನಾನ್ಯಃ, ಅತಿಪ್ರಸಂಗಾತ್। ಯಥಾ ದಂಡಿಪ್ರತೀತೌ ದಂಡಃ॥**

**ಅನುವಾದ:**

ಕಾವ್ಯದ ಸ್ವರೂಪವನ್ನು ನಿರ್ಣಯಿಸಲು ಇಚ್ಛಿಸುವ ಬುದ್ಧಿಶಾಲಿಯು ಕಾವ್ಯದ ಸಾಮಾನ್ಯ ಲಕ್ಷಣವನ್ನೇ ಹೇಳಬೇಕು. ಯಾವುದರಲ್ಲಿ ವಾಚ್ಯಾರ್ಥ–ಪ್ರತೀಯಮಾನಾರ್ಥಗಳಿಗೆ ಗಮ್ಯಗಮಕಭಾವಸ್ಪರ್ಶವುಂಟೋ ಅದು ಕಾವ್ಯ ಎಂದರೆ ಸಾಕು, ಅಷ್ಟರಿಂದಲೇ (ಓದುಗರಿಗೆ ಕಾವ್ಯದ ಬಗೆಗೆ) ವ್ಯುತ್ಪತ್ತಿ ಸಿದ್ಧವಾಗುತ್ತದೆ. ಅದನ್ನು ಹೇಳದೆ ಅವೆರಡಕ್ಕೆ (ವಾಚ್ಯ–ಪ್ರತೀಯಮಾನಗಳಿಗೆ) ಪ್ರಾಧಾನ್ಯ–ಅಪ್ರಾಧಾನ್ಯಗಳನ್ನು ಕಲ್ಪಿಸಿ ಎರಡು ಪ್ರಕಾರಗಳನ್ನು (ಆನಂದವರ್ಧನನು ಧ್ವನ್ಯಾಲೋಕದಲ್ಲಿ) ಹೇಳಿರುವುದು ಅಪ್ರಯೋಜಕ (=ವ್ಯರ್ಥ). ಯಾವುದರ ವಿಶೇಷ ಜ್ಞಾನದಲ್ಲಿ ಯಾವುದು ನಿಮಿತ್ತವೆಂದು ನಿಶ್ಚಿತವಾಗಿದೆಯೋ ಅದನ್ನೇ ಅದರ ಜಿಜ್ಞಾಸುಗಳಿಗೆ ಪ್ರತಿಪಾದಿಸಬೇಕು. ಬೇರೆಯದನ್ನಲ್ಲ. (ಯಾವುಯಾವುದನ್ನೋ ಹೇಳಿದರೆ) ಅತಿಪ್ರಸಂಗ ಉಂಟಾದೀತು, ದಂಡಿಯ ಪ್ರತೀತಿಯಲ್ಲಿ ದಂಡದ ಹಾಗೆ.

**ಅನುಮೇಯಾರ್ಥಸಂಸ್ಪರ್ಶಮಾತ್ರಂ ಚಾನ್ವಯವ್ಯತಿರೇಕಾಭ್ಯಾಂ ಕಾವ್ಯಸ್ಯ ಹೇತುರ್ನಿಶ್ಚಿತಮ್। ಅತಸ್ತದೇವ ವಕ್ತವ್ಯಂ ಭವತಿ, ನ ತ್ವಸ್ಯ ಪ್ರಾಧಾನ್ಯಾಪ್ರಾಧಾನ್ಯಕೃತೋ ವಿಶೇಷಃ। ನ ಹಿ ತಯೋಃ**

**ಸಾಮಾನ್ಯವಿಶೇಷಯೋಸ್ತ್ರಿಷ್ವಪಿ ವಸ್ತುಮಾತ್ರಾದಿಷ್ವನುಮೇಯೇಷು ಚೇತನಚಮತ್ಕಾರಕಾರೀ ಕಶ್ಚಿದ್ವಿಶೇಷೋऽವಗಮ್ಯತೇ॥**

**ಅನುವಾದ:**

ಅನುಮೇಯಾರ್ಥದ ಸಂಸ್ಪರ್ಶಮಾತ್ರವೇ ಅನ್ವಯವ್ಯತಿರೇಕಗಳಿಂದ ಕಾವ್ಯಕ್ಕೆ (ಕಾವ್ಯತ್ವವನ್ನು ತಂದುಕೊಡುವ) ಕಾರಣವೆಂಬುದು ನಿಶ್ಚಿತವಾಗಿದೆ. ಆದ್ದರಿಂದ ಅದನ್ನು ಹೇಳುವುದು ಆವಶ್ಯಕ. ಅನುಮೇಯಾರ್ಥದ ಪ್ರಾಧಾನ್ಯಾಪ್ರಾಧಾನ್ಯಗಳಿಂದ ಉಂಟಾಗುವ ವಿಶೇಷವನ್ನು ಹೇಳಬೇಕಾಗಿಲ್ಲ. ಸಾಮಾನ್ಯ-ವಿಶೇಷ ಎಂಬ ಎರಡರಲ್ಲೂ ವಸ್ತುಮಾತ್ರ, (ಅಲಂಕಾರ, ರಸಾದಿ) ಎಂದು ಕರೆಯಲಾಗುವ ಮೂರು ಪ್ರಕಾರದ ಅನುಮೇಯಗಳಲ್ಲೂ ಸಹೃದಯಚೇತನಗಳಿಗೆ ಚಮತ್ಕಾರವನ್ನುಂಟು ಮಾಡುವ ಯಾವ ವಿಶೇಷವೂ ತೋರುವುದಿಲ್ಲ.

**ತತ್ರ ವಸ್ತುಮಾತ್ರಸ್ಯ ಪ್ರಾಧಾನ್ಯೇ ಯಥಾ-**
**ವಚ್ಚ ಮಹ ವ್ವಿಅ ಏಕ್ಕಾ ಏ ಹೋಂತು**
**ಣೀಸಾಸರೋಈಅವ್ವಾಇಮ್।**
**ಮಾ ತುಜ್ಝ ವಿ ತೀಏ ವಿಣ**
**ದಕ್ಖಿಣ್ಣಹಅಸ್ಸ ಜಾ ಅಂದು॥**
**(ವ್ರಜ ಮಮೈವೈಕಸ್ಯಾ ಭವಂತು ನಿಃಶ್ವಾಸರೋದಿತವ್ಯಾನಿ।**
**ಮಾ ತವಾಪಿ ತಯಾ ವಿನಾ ದಾಕ್ಷಿಣ್ಯಹತಸ್ಯ ಜನಿಷತ)**
**ಇತ್ಯತ್ರ।**

**ಅನುವಾದ:**

ವಸ್ತು ಮಾತ್ರಕ್ಕೆ ಪ್ರಾಧಾನ್ಯವಿರುವ ಉದಾಹರಣೆ-
"ನೀ ಹೋಗು, ನಿಟ್ಟುಸಿರು-ಅಳು ಮುಂತಾದುವೆಲ್ಲ
ನನಗೊಬ್ಬಳಿಗೆ ಇರಲಿ.
ದಾಕ್ಷಿಣ್ಯಕ್ಕೆ ಕಟ್ಟುಬಿದ್ದ ನಿನಗೂ
ಅವಳಿಲ್ಲದೆ ಅವೆಲ್ಲ ಏಕೆ ಉಂಟಾಗಬೇಕು?"

**ವಿವರಣೆ:**

ನಾಯಕನು ನಾಯಕಿಯ ಜೊತೆಯಲ್ಲಿದ್ದಾನೆ. ಆದರೆ ಅವನ ಮನಸ್ಸು ತನ್ನ ಇನ್ನೊಬ್ಬ ಪ್ರೇಯಸಿಯಲ್ಲಿದೆ. ಇದು ನಾಯಕಿಗೂ ತಿಳಿದಿದೆ- ಅವನು ತನ್ನ ಜೊತೆಯಲ್ಲಿ ಇರುವುದು ಕೇವಲ ದಾಕ್ಷಿಣ್ಯದಿಂದ, ಪ್ರೀತಿಯಿಂದಲ್ಲ ಎಂದು. ಆಗ ಅವಳು ಅವನಿಗೆ ಹೇಳಿದ ಮಾತು **"ವಚ್ಚ"** ಇತ್ಯಾದಿ. ಪದ್ಯ ಪ್ರಾಕೃತದಲ್ಲಿದೆ. ಅದರ ಸಂಸ್ಕೃತಚ್ಛಾಯೆಯನ್ನು ಆವರಣದಲ್ಲಿ ಕೊಟ್ಟಿದ್ದಾರೆ. ಆ ಪ್ರೇಯಸಿಯಲ್ಲೇ ನಿನಗೆ ಅನುರಾಗಾತಿಶಯ, ನನಗೆ ನೀನು ನೀಡುತ್ತಿರುವುದು ಕೃತ್ರಿಮ ಉಪಚಾರದ ಮಾತುಗಳು ಮಾತ್ರ, ಅವುಗಳಿಂದ ನನಗೂ ಸುಖವಿಲ್ಲ, ಅವಳನ್ನೇ ನೆನೆಸಿಕೊಳ್ಳುತ್ತಾ ನೀನು ಕೊರಗಿ ನನ್ನ ವೇದನೆಯನ್ನು

ಹೆಚ್ಚಿಸಬೇಡ ಎಂಬುದು ವ್ಯಂಗ್ಯಾರ್ಥ (ಮಹಿಮಭಟ್ಟನು ಹೇಳುವಂತೆ ಇದು ಅನುಮೇಯಾರ್ಥ). ಈರ್ಷ್ಯಾವಿಪ್ರಲಂಭಕ್ಕೆ ಉತ್ಕರ್ಷಕವಾದುದರಿಂದ ಈ ವಸ್ತುಮಾತ್ರಕ್ಕೆ ಪ್ರಾಧಾನ್ಯ.

**ತಸ್ಯೈವಾಪ್ರಾಧಾನ್ಯೇ ಯಥಾ–**
**ಲಾವಣ್ಯಸಿಂಧುರಪರೈವ ಹಿ ಕೇಯಮತ್ರ**
**ಯತ್ರೋತ್ಪಲಾನಿ ಶಶಿನಾ ಸಹ ಸಂಪ್ಲವಂತೇ।**
**ಉನ್ಮಜ್ಜತಿ ದ್ವಿರದಕುಂಭತಟೀ ಚ ಯತ್ರ**
**ಯತ್ರಾಪರೇ ಕದಲಿಕಾಂಡಮೃಣಾಲದಂಡಾಃ॥**
**ಯಥಾ ಚ–**
**ಅನುರಾಗವತೀ ಸಂಧ್ಯಾ ದಿವಸಸ್ತತ್ಪುರಸ್ಸರಃ।**
**ಅಹೋ ದೈವಗತಿಶ್ಚಿತ್ರಾ ತಥಾಪಿ ನ ಸಮಾಗಮಃ॥**

**ಅನುವಾದ:**

ವಸ್ತುಮಾತ್ರದ ಅಪ್ರಾಧಾನ್ಯದ ಉದಾಹರಣೆ–

ಈ ಇನ್ನೊಬ್ಬ ಲಾವಣ್ಯಸಿಂಧು ಯಾರು? ಅದರಲ್ಲಿ ಚಂದ್ರನೊಡನೆ ನೈದಿಲೆಗಳು ತೇಲಾಡುತ್ತಿವೆ. ಮತ್ತೆ ಅದರಲ್ಲಿ ಆನೆಯ ಕುಂಭತಟವೂ ಏರುತ್ತಿದೆ. ಅಲ್ಲದೆ ಬಾಳೆಯ ದಿಂಡುಗಳೂ ಮೃಣಾಲದಂಡಗಳೂ ಗೋಚರವಾಗುತ್ತಿವೆ.

ಇನ್ನೊಂದು ಉದಾಹರಣೆ–

**ಅನುರಾಗ ತುಂಬಿದ ಸಂಧ್ಯೆ,**
**ಅವಳನ್ನೇ ಅನುಸರಿಸುತ್ತಿರುವ ದಿವಸ**
**ಅಯ್ಯೋ, ದೈವಗತಿಯು ವಿಚಿತ್ರ,**
**ಆದರೂ ಅವರಿಬ್ಬರ ಸಮಾಗಮವೇ ಇಲ್ಲ.**

**ವಿವರಣೆ:**

ಲಾವಣ್ಯಸಿಂಧು..... ಎಂಬ ಉದಾಹರಣೆಯಲ್ಲಿ ರೂಪಕಾತಿಶಯೋಕ್ತಿ, ವಸ್ತುಮಾತ್ರಕ್ಕೆ ಅಪ್ರಾಧಾನ್ಯ. ಅನುರಾಗವತೀ ಇತ್ಯಾದಿ ಉದಾಹರಣೆಯಲ್ಲಿ ಸಮಾಸೋಕ್ತಿ ಮತ್ತು ವಿಶೇಷೋಕ್ತಿ ಎಂಬ ಅಲಂಕಾರಗಳು. ಅವುಗಳಿಂದಲೇ ಚಮತ್ಕಾರ. ವಸ್ತುಮಾತ್ರದಲ್ಲಿ (ದಿವಸ ಮತ್ತು ಸಂಧ್ಯಾಕಾಲಗಳ ಮಿಲನವಿಲ್ಲ ಎಂಬುದರಲ್ಲಿ) ಚಮತ್ಕಾರವಿಲ್ಲ.

**ಅಲಂಕಾರಸ್ಯ ಪ್ರಾಧಾನ್ಯೇ ಯಥಾ–**
**ವೀರಾಣ ರಮಇ ಘುಸೃಣಾರುಣಮ್ಮಿ**
**ಣ ತಹಾ ಪಿಆಥಣುಚ್ಛಂಗೇ।**
**ದಿಟ್ಠೀ ರಿಉಗಅಕುಂಭತ್ಥಲಮ್ಮಿ**
**ಜಹ ಬಹಲಸಿಂದೂರೇ॥**
**(ವೀರಾಣಾಂ ರಮತೇ ಘುಸೃಣಾರುಣೇ**
**ನ ತಥಾ ಪ್ರಿಯಾಸ್ತನೋತ್ಸಂಗೇ।**
**ದೃಷ್ಟೀ ರಿಪುಗಜಕುಂಭಸ್ಥಲೇ**
**ಯಥಾ ಬಹುಲಸಿಂದೂರೇ॥)**

**ಅನುವಾದ:**

ಅಲಂಕಾರದ ಪ್ರಾಧಾನ್ಯಕ್ಕೆ ಉದಾಹರಣೆ–

ಸಿಂದೂರಲಿಪ್ತವಾದ ಶತ್ರುಗಜಗಳ ಕುಂಭಸ್ಥಳದಲ್ಲಿ ರಮಿಸುವಂತೆ ವೀರರ ದೃಷ್ಟಿಯು ಪ್ರಿಯೆಯ ಸ್ತನಪ್ರದೇಶದಲ್ಲಿ ರಮಿಸದು.

**ವಿವರಣೆ:**

ಗಜಕುಂಭಸ್ಥಳಕ್ಕೂ ಪ್ರಿಯೆಯ ಸ್ತನಗಳಿಗೂ ಹೋಲಿಕೆಯನ್ನು ಹೇಳುವುದು ಸಂಪ್ರದಾಯ ಪ್ರಾಪ್ತ. ವೀರನ ದೃಷ್ಟಿ ಶತ್ರುಗಜಗಳ ಕುಂಭಸ್ಥಳವನ್ನು ಭೇದಿಸುವುದರಲ್ಲೇ ಆಸಕ್ತವಾಗಿರುತ್ತದೆ ಎಂದು ಅದರ ವಿಶೇಷವನ್ನು ಹೇಳಿರುವುದರಿಂದ ಇಲ್ಲಿ ವ್ಯತಿರೇಕಾಲಂಕಾರ ಎಂದು ಅಭಿನವಗುಪ್ತನ ಅಭಿಪ್ರಾಯ. ಅಲಂಕಾರದಿಂದಲೇ ಇಲ್ಲಿ ಚಮತ್ಕಾರ, ಅದಕ್ಕೇ ಪ್ರಾಧಾನ್ಯ ಎಂದು ಮಹಿಮಭಟ್ಟನ ಅಭಿಪ್ರಾಯವೂ ಆಗಿದೆ. ವ್ಯತಿರೇಕೋ ವಿಶೇಷಶ್ಚೇದುಪಮಾನೋಪಮೇಯಯೋಃ ಎಂದು ವ್ಯತಿರೇಕಾಲಂಕಾರದ ಲಕ್ಷಣ.

**ಯಥಾ ಚ–**
**ತಂ ತಾಣ ಸಿರಿಸಹೋಅರರಅಣಹರಣಮ್ಮಿ**
**ಹಿಅಅಮೇಕ್ಕರಸಮ್।**
**ಬಿಂಬಾಹರೇ ಪಿಆಣಂ ಣಿವೇಸಿಅಂ**
**ಕುಸುಮಬಾಣೇನ॥**
**(ತತ್ತೇಷಾಂ ಶ್ರೀಸಹೋದರರತ್ನಾಹರಣೇ ಹೃದಯಮೇಕರಸಮ್।**
**ಬಿಂಬಾಧರೇ ಪ್ರಿಯಾಣಾಂ ನಿವೇಶಿತಂ ಕುಸುಮಬಾಣೇನ॥)**

**ಅನುವಾದ:**

ಲಕ್ಷ್ಮಿಯ ಸೋದರರಾದ (ಕೌಸ್ತುಭಾದಿ) ರತ್ನಗಳ ಅಪಹರಣದಲ್ಲಿ ತೊಡಗಿದ್ದ (ಅಸುರರ) ಹೃದಯವನ್ನು ಪೂಬಾಣ (ಮನ್ಮಥ)ನು ಪ್ರಿಯಕರಿಯರ ಬಿಂಬಾಧರ (ತೊಂಡೆಹಣ್ಣಿನಂತಿದ್ದ ತುಟಿ)ಗಳಲ್ಲಿ ನೆಟ್ಟನು.

**ವಿವರಣೆ:**

ಈ ಪದ್ಯದಲ್ಲಿ ಅತಿಶಯೋಕ್ತಿ ಅಲಂಕಾರವೆಂದು ಅಭಿನವಗುಪ್ತನು ಹೇಳಿದ್ದಾನೆ. ರತ್ನಗಳಿಗಿಂತಲೂ ಅಧರವೇ ಅತಿಶಯವನ್ನು ಹೊಂದಿದೆ ಎಂದು ತೋರಿಸುವುದು ಕವಿಯ ಅಭಿಪ್ರಾಯವಿರಬಹುದು. ಪರ್ಯಾಯಾಲಂಕಾರವನ್ನೂ ಇಲ್ಲಿ ಹೇಳಬಹುದು. ಪರ್ಯಾಯೋ ಯದಿ ಪರ್ಯಾಯೇಣೈಕಸ್ಯಾನೇಕಸಂಸ್ಥಿತಿಃ ಎಂದು ಅದರ ಲಕ್ಷಣ. ಅಲಂಕಾರದಿಂದಲೇ ಚಮತ್ಕಾರ, ಅದಕ್ಕೇ ಇಲ್ಲಿ ಪ್ರಾಧಾನ್ಯ.

**ತಸ್ಯೈವಾಪ್ರಾಧಾನ್ಯೇ ಯಥಾ–**
**ಚಂದಮಊಏಹಿ ಣಿಸಾ**
**ಣಲಿಣೀ ಕಮಲೇಹಿ ಕುಸುಮಗುಚ್ಛೇಹಿ ಲಆ।**
**ಹಂಸೇಹಿ ಸರಅಸೋಹಾ**
**ಕವ್ವಕಹಾ ಸಜ್ಜಣೇಹಿ ಕರಇ ಗುರುಈ॥**

**(ಚಂದ್ರಮಯೂಖೈರ್ನಿಶಾ**
**ನಲಿನೀ ಕಮಲೈಃ ಕುಸುಮಗುಚ್ಛೈರ್ಲತಾ।**
**ಹಂಸೈಃ ಶಾರದಶೋಭಾ**
**ಕಾವ್ಯಕಥಾ ಸಜ್ಜನೈಃ ಕ್ರಿಯತೇ ಗುರ್ವೀ॥)**

**ಅನುವಾದ:**

ಅಲಂಕಾರದ ಅಪ್ರಾಧಾನ್ಯಕ್ಕೆ ಉದಾಹರಣೆ–
ಚಂದ್ರನ ಕಿರಣಗಳಿಂದ ಇರುಳೂ,
ತಾವರೆಗಳಿಂದ ಸರೋವರವೂ,
ಹೂಗೊಂಚಲುಗಳಿಂದ ಬಳ್ಳಿಯೂ,
ಹಂಸಗಳಿಂದ ಶರದೃತುವಿನ ಕಾಂತಿಯೂ
ಸಜ್ಜನರಿಂದ ಕಾವ್ಯಪಠನವೂ
ಗೌರವವನ್ನು ಪಡೆಯುತ್ತವೆ.

**ವಿವರಣೆ:**

ಇಲ್ಲಿ ದೀಪಕಾಲಂಕಾರ. ವದಂತಿ ವರ್ಣ್ಯಾವರ್ಣ್ಯಾನಾಂ ಧರ್ಮೈಕ್ಯಂ ದೀಪಕಂ ಬುಧಾಃ ಎಂದು ಲಕ್ಷಣ. ಕಾವ್ಯಕಥೆ ಇಲ್ಲಿ ವರ್ಣ್ಯ. ಕ್ರಿಯತೇ ಗುರ್ವೀ ಎಂಬ ಧರ್ಮವು ಅದಕ್ಕೂ ಇರುಳು ಇತ್ಯಾದಿಗಳಿಗೂ ಅನ್ವಿತವಾಗಿದೆ. ಆದರೆ ಅಲಂಕಾರದಿಂದ ಚಮತ್ಕಾರ ಉಂಟಾಗುತ್ತಿಲ್ಲ. ವಸ್ತುವೇ ಸಮೃದ್ಧತೆಯಿಂದ ಹೆಚ್ಚು ಆಕರ್ಷಕವಾಗಿದೆ ಎಂದು ಮಹಿಮಭಟ್ಟನ ಅಭಿಪ್ರಾಯ.

**ರಸಾದೀನಾಂ ಪ್ರಾಧಾನ್ಯೇ ಯಥಾ– ಕುಮಾರಸಂಭವೇ ಮಧುಪ್ರಸಂಗೇ ವಸಂತಪುಷ್ಪಾಭರಣಂ ವಹಂತ್ಯಾ ದೇವ್ಯಾ ಆಗಮನಾದಿವರ್ಣನೇ ಮನೋಭವಶರಸಂಧಾನಪರ್ಯಂತೇ, ಶಂಭೋಶ್ಚ ವಿವೃತ್ತಧೈರ್ಯಸ್ಯ ಚೇಷ್ಟಾವಿಶೇಷವರ್ಣನಾದೌ।**

**ಅನುವಾದ:**

ರಸಾದಿಗಳ ಪ್ರಾಧಾನ್ಯದ ಉದಾಹರಣೆ–

ಕುಮಾರಸಂಭವಕಾವ್ಯದಲ್ಲಿ ಮಧುಪ್ರವೇಶದ ಸಂದರ್ಭದಲ್ಲಿ, ವಸಂತಕುಸುಮಗಳನ್ನೇ ಆಭರಣವನ್ನಾಗಿ ಧರಿಸಿ ದೇವಿಪಾರ್ವತಿಯ ಆಗಮನ ಇತ್ಯಾದಿಗಳ ವರ್ಣನೆ. ಹಾಗೆಯೇ ಮನ್ಮಥನು ಪುಷ್ಪಬಾಣಗಳನ್ನು ಹೂಡುವ ಪ್ರಸಂಗದ ಮತ್ತು ಧೈರ್ಯಗುಂದಿದ ಶಂಭುವಿನ ವಿಶೇಷಚೇಷ್ಟೆಗಳ ವರ್ಣನೆ – ಇತ್ಯಾದಿಗಳಲ್ಲಿ (ರಸದ ಪ್ರಾಧಾನ್ಯ).

**ವಿವರಣೆ:**

ಕಾಳಿದಾಸನ ಕುಮಾರಸಂಭವದ ಮೂರನೆಯ ಸರ್ಗದಲ್ಲಿ ಶಿವನನ್ನು ಪೂಜಿಸಲು ಬರುವ ಪಾರ್ವತಿಯ ವರ್ಣನೆಯಿದೆ. ಆ ಸಂದರ್ಭದಲ್ಲಿ ಶಿವನ ಮನಸ್ಸನ್ನು ಪಾರ್ವತಿಯ ಕಡೆಗೆ

ಸೆಳೆಯುವುದಕ್ಕಾಗಿ ಮನ್ಮಥನು ಸಂಮೋಹನ ಎಂಬ ಬಾಣವನ್ನು ಹೂಡುವುದನ್ನೂ, ಅದರಿಂದ ಶಿವನ ಮನಸ್ಸೂ ವಿಚಲಿತವಾಗುವುದನ್ನೂ ಕಾಳಿದಾಸನು ವರ್ಣಿಸಿದ್ದಾನೆ. ಇಲ್ಲಿ ಅಭಿವ್ಯಕ್ತವಾಗುವುದು ಅಭಿಲಾಷಶೃಂಗಾರ. ಅದಕ್ಕೇ ಪ್ರಾಧಾನ್ಯ.

**ತೇಷಾಮ್ ಅಪ್ರಾಧಾನ್ಯಂ ಶುದ್ಧಸಂಕೀರ್ಣತಾದಿ**
**ಭೇದಾದ್ ದ್ವಿವಿಧಮ್। ತತ್ರ ಶುದ್ಧಂ ಯಥಾ–**
**ಕಿಂ ಹಾಸ್ಯೇನ ನ ಮೇ ಪ್ರಯಾಸ್ಯಸಿ ಪುನಃ ಪ್ರಾಪ್ತಶ್ಚಿರಾದ್ದರ್ಶನಮ್।**
**ಕೇಯಂ ನಿಷ್ಕರುಣ ಪ್ರವಾಸರುಚಿತಾ? ಕೇನಾಸಿ ದೂರೀಕೃತಃ?।**
**ಸ್ವಪ್ನಾಂತೇಷ್ವಿತಿ ತೇ ವದನ್ ಪ್ರಿಯತಮ ವ್ಯಾಸಕ್ತಕಂಠಗ್ರಹೋ**
**ಬುದ್ಧ್ವಾ ರೋದಿತಿ ರಿಕ್ತಬಾಹುವಲಯಸ್ತಾರಂ ರಿಪುಸ್ತ್ರೀಜನಃ॥**

**ಅನುವಾದ:**

ಆ ರಸಾದಿಗಳಿಗೆ ಅಪ್ರಾಧಾನ್ಯವು ಶುದ್ಧ, ಸಂಕೀರ್ಣ ಎಂಬ ಭೇದದಿಂದ ಎರಡು ವಿಧವಾಗಿರುತ್ತದೆ. ಶುದ್ಧ ಪ್ರಕಾರದ ಉದಾಹರಣೆ–

"ಬಹುಕಾಲಾನಂತರ ನೋಡಲು ಸಿಕ್ಕಿರುವೆ, ಹಾಸ್ಯ ಬೇಡ, ಮತ್ತೆ ಪ್ರಯಾಣ ಮಾಡಬೇಡ. ನಿರ್ದಯ, ಈ ಪ್ರವಾಸಾಪೇಕ್ಷೆ ನಿನಗೇಕೆ? ಯಾರು ನಿನ್ನನ್ನು ನನ್ನಿಂದ ದೂರ ಮಾಡುತ್ತಿದ್ದಾರೆ? –ಎಂದು ಶತ್ರುಗಳ ಸ್ತ್ರೀಯರು ಕನಸಿನಲ್ಲಿ ತಮ್ಮ ಪ್ರಿಯತಮರ ಕಂಠಾಲಿಂಗನವನ್ನು ಮಾಡಿ ಆಮೇಲೆ ಎಚ್ಚರಗೊಂಡು ತಮ್ಮ ಬಾಹುವಲಯವು ಶೂನ್ಯವಾಗಿರುವುದನ್ನು ಅರಿತು ಜೋರಾಗಿ ಅಳುತ್ತಾರೆ."

**ಸಂಕೀರ್ಣರಸಾದಾವಂಗಭೂತೇ ಯಥಾ–**
**ಕ್ಷಿಪ್ತೋ ಹಸ್ತಾವಲಗ್ನಃ ಪ್ರಸಭಮಭಿಹತೋಽಪ್ಯಾದದಾನೋಽಂಶುಕಾಂತಂ**
**ಗೃಹ್ಣನ್ ಕೇಶೇಷ್ವಪಾಸ್ತಶ್ಚರಣನಿಪತಿತೋ ನೇಕ್ಷಿತಃ ಸಂಭ್ರಮೇಣ।**
**ಆಲಿಂಗನ್ ಯೋಽವಧೂತಸ್ತ್ರಿಪುರಯುವತಿಭಿಃ ಸಾಶ್ರುನೇತ್ರೋತ್ಪಲಾಭಿಃ**
**ಕಾಮೀವಾರ್ದ್ರಾಪರಾಧಃ ಸ ದಹತು ದುರಿತಂ ಶಾಂಭವೋ ವಃ ಶರಾಗ್ನಿಃ॥**

**ಅತ್ರ ಹಿ ತ್ರಿಪುರಾರಿಪ್ರಭಾವಾತಿಶಯಸ್ಯ ವಾಕ್ಯಾರ್ಥತ್ವೇ**
**ಈರ್ಷ್ಯಾವಿಪ್ರಲಂಭಸ್ಯ ಶ್ಲೇಷಸಹಿತಸ್ಯೈವಾಂಗಭಾವಃ।**

**ಅನುವಾದ:**

ಸಂಕೀರ್ಣವಾದ ರಸಾದಿಗಳು ಅಂಗಭಾವವನ್ನು (ಎಂದರೆ ಅಪ್ರಾಧಾನ್ಯವನ್ನು) ಹೊಂದಿರುವುದಕ್ಕೆ ಉದಾಹರಣೆ–

"ಶಿವನು ಎಸೆದ ಬಾಣದ ಬೆಂಕಿಯು ನಿಮ್ಮ ಪಾಪವನ್ನು ಸುಡಲಿ. ಆ ಬೆಂಕಿಯು ಆಗ ತಾನೇ ಅಪರಾಧವನ್ನು ಗೈದ ಕಾಮುಕನಂತೆ ಕೈಯನ್ನು ಹಿಡಿಯಲು ಹೋಗಿ ತಳ್ಳಲ್ಪಡುತ್ತದೆ, ಎಷ್ಟು ಹೊಡೆದರೂ ಬಟ್ಟೆಯ ತುದಿಯನ್ನು ಹಿಡಿದುಕೊಳ್ಳುತ್ತದೆ, ತಲೆಗೂದಲನ್ನು ಮುಟ್ಟಲು ಬಂದಾಗ ದೂರಕ್ಕೆ ದೂಡಲ್ಪಡುತ್ತದೆ,

ಕಾಲಿನ ಬುಡದಲ್ಲಿ ಬಿದ್ದಾಗ ಅದನ್ನು ಸಂಭ್ರಮದಿಂದ ಸ್ತ್ರೀಯರು ನೋಡುವುದೂ ಇಲ್ಲ, ಅಪ್ಪಿಕೊಳ್ಳಲು ಬಂದ ಆ ಬೆಂಕಿ ಕಣ್ಣೀರನ್ನು ಸುರಿಸುವ ತ್ರಿಪುರಸ್ತ್ರೀಯರಿಂದ ನೂಕಲ್ಪಡುತ್ತದೆ. (ಆ ಬೆಂಕಿಯು ನಿಮ್ಮ ಪಾಪವನ್ನು ಸುಡಲಿ)."

ಇಲ್ಲಿ ಮುಖ್ಯವಾಕ್ಯಾರ್ಥವು ತ್ರಿಪುರಾರಿಯಾದ ಶಿವನ ಪ್ರಭಾವಾತಿಶಯದ ವರ್ಣನೆ. ಅದಕ್ಕೆ ಶ್ಲೇಷಾಲಂಕಾರಸಹಿತವಾದ ಈರ್ಷ್ಯಾವಿಪ್ರಲಂಭವು ಅಂಗವಾಗಿದೆ.

**ವಿವರಣೆ:**

ಕಿಂ ಹಾಸ್ಯೇನ ಇತ್ಯಾದಿ ಪದ್ಯದಲ್ಲಿ ವರ್ಣನೀಯ ರಾಜನ ಶತ್ರುಗಳ ಹೆಂಗಸರು ಕನಸಿನಲ್ಲಿ ತಮ್ಮ ಪ್ರಿಯಕರನನ್ನು ಕಂಡು ಮಾತನಾಡಿ ಅನಂತರ ಎಚ್ಚರವಾದಾಗ ಪ್ರಿಯನಿಲ್ಲದಿರುವುದನ್ನು ಕಂಡು ಅಳುತ್ತಾರೆ ಎಂದು ವರ್ಣಿಸಲಾಗಿದೆ. ಇಲ್ಲಿ ಕರುಣರಸ. ಆದರೆ ಅದರಲ್ಲಿ ಕವಿಯ ತಾತ್ಪರ್ಯ ಇಲ್ಲ. ಅವರಿಗೆ ಇಂಥ ದುಃಸ್ಥಿತಿಯನ್ನುಂಟುಮಾಡಿದ ರಾಜನ ಪ್ರತಾಪಾತಿಶಯವನ್ನು ವರ್ಣಿಸುವುದರಲ್ಲೇ ಕವಿಯ ವಿವಕ್ಷೆ. ಆದ್ದರಿಂದ ಇಲ್ಲಿ ಕರುಣರಸವು ವಾಕ್ಯಾರ್ಥವಾದ ರಾಜಶೌರ್ಯಕ್ಕೆ ಅಂಗವಾಗಿದೆ. ಹೀಗೆ ಶುದ್ಧವಾದ ರಸವು ಅಪ್ರಧಾನವಾಯಿತು.

ಕ್ಷಿಪ್ತೋ ಹಸ್ತಾವಲಗ್ನಃ ಎಂಬುದು ಸಂಕೀರ್ಣ ಉದಾಹರಣೆ. ಇಲ್ಲಿ ಕವಿಯ ವಿವಕ್ಷೆ ಇರುವುದು ತ್ರಿಪುರಗಳನ್ನು ಧ್ವಂಸ ಮಾಡಿದ ಶಿವನ ಪ್ರಭಾವಾತಿಶಯವನ್ನು ವರ್ಣಿಸುವುದರಲ್ಲಿ. ತ್ರಿಪುರಾಸುರರು ಆಕಾಶದಲ್ಲಿ ಚಲಿಸುತ್ತಿದ್ದ ಮೂರು ಪುರಗಳಲ್ಲಿದ್ದು ಜನರಿಗೆ ಪೀಡೆಯನ್ನು ಕೊಡುತ್ತಿದ್ದಾಗ ಮೇರುಪರ್ವತವನ್ನೇ ಧನುಸ್ಸನ್ನಾಗಿ ಮಾಡಿಕೊಂಡು ಶಿವನು ನಾರಾಯಣಾಸ್ತ್ರವನ್ನು ಪ್ರಯೋಗಿಸಿ ಆ ತ್ರಿಪುರಗಳನ್ನು ಸುಟ್ಟನು. ಆಗ ಆ ಬೆಂಕಿಯು ಮಾಡಿದ ಕಾರ್ಯಗಳನ್ನು ಈ ಪದ್ಯದಲ್ಲಿ ವರ್ಣಿಸಲಾಗಿದೆ. ಬೆಂಕಿಗೆ "ಕಾಮೀವ" ಎಂಬ ಉಪಮಾನವನ್ನು ಕೊಟ್ಟು ಅವೆರಡಕ್ಕೂ ಸಾಧರ್ಮ್ಯವನ್ನು ಶ್ಲೇಷದಿಂದ ಸಾಧಿಸಲಾಗಿದೆ. ಸ್ತ್ರೀಯರು ಕಾಮಿಯೊಡನೆ ವರ್ತಿಸಿದ ರೀತಿಯಲ್ಲಿ ಈರ್ಷ್ಯಾವಿಪ್ರಲಂಭ ಎಂಬ ಶೃಂಗಾರರಸದ ವರ್ಣನೆಯನ್ನು ಕಾಣುತ್ತೇವೆ. ಶ್ಲೇಷ ಮತ್ತು ಉಪಮೆಗಳಿಂದ ಸಹಿತವಾದ ಈರ್ಷ್ಯಾವಿಪ್ರಲಂಭ ಶೃಂಗಾರರಸವು ಇಲ್ಲಿ ಶಿವಪ್ರಭಾವಾತಿಶಯಕ್ಕೆ ಅಂಗವಾಗಿದೆ. ಈ ಕಾರಣದಿಂದ ಇಲ್ಲಿ ರಸಕ್ಕೆ ಅಪ್ರಾಧಾನ್ಯ.

ವಾಸ್ತವವಾಗಿ ನೋಡಿದರೆ ಇಲ್ಲಿ ಕರುಣರಸ ಗೋಚರವಾಗುತ್ತದೆ. ಬೆಂಕಿಗೆ ಸಿಕ್ಕಿಹಾಕಿಕೊಂಡು ಆ ತ್ರಿಪುರಸ್ತ್ರೀಯರು ಪಟ್ಟ ಪಾಡಿನ ವರ್ಣನೆಯೇ ಇದಲ್ಲವೆ? ಕಾಮೀವ ಎಂಬ ಉಪಮೆಯನ್ನು ಕೊಟ್ಟು ಆ ಘಟನೆಯನ್ನೆಲ್ಲ ಕವಿ ಈರ್ಷ್ಯಾವಿಪ್ರಲಂಭದ ಕಡೆಗೆ ತಿರುಗಿಸಿದ್ದಾನೆ. ಈ ಎರಡು ಶ್ಲೋಕಗಳನ್ನು ಆನಂದವರ್ಧನನು ಧ್ವನ್ಯಾಲೋಕದಲ್ಲಿ ಉದಾಹರಿಸಿದ್ದಾನೆ. "ಕ್ಷಿಪ್ತೋ ಹಸ್ತಾವಲಗ್ನಃ" ಇತ್ಯಾದಿ ಶ್ಲೋಕವನ್ನು ವ್ಯಾಖ್ಯಾನಿಸುವಾಗ ಅಭಿನವಗುಪ್ತನು "ಯದ್ಯಪ್ಯತ್ರ ಕರುಣೋ ರಸೋ ವಾಸ್ತವೋಽಪ್ಯಸ್ತಿ, ತಥಾಪಿ ಸ ತಚ್ಚಾರುತ್ವಪ್ರತೀತೌ ನ ವ್ಯಾಪ್ರಿಯತೇ ಇತ್ಯನೇನಾಭಿಪ್ರಾಯೇಣ ಶ್ಲೇಷಸಹಿತಸ್ಯೇತ್ಯೇತಾವದೇವಾವೋಚತ್, ನತು ಕರುಣಸಹಿತಸ್ಯೇತ್ಯಪಿ" ಎಂದು ಹೇಳಿರುವುದನ್ನು ಗಮನಿಸಬೇಕು. ಇಲ್ಲಿ ವಿಪ್ರಲಂಭಶೃಂಗಾರ ಅಂಗ, ವಾಕ್ಯಾರ್ಥವಲ್ಲ ಎಂಬುದನ್ನು ಅಭಿನವಗುಪ್ತನು ಲೋಚನದಲ್ಲಿ ಸ್ಪಷ್ಟಪಡಿಸಿದ್ದಾನೆ.

(ಅನುಮೇಯಾರ್ಥಸಂಸ್ಪರ್ಶವೇ ಸೌಂದರ್ಯಕಾರಣ)

**ತದೇವಂ ಪ್ರಕಾರತ್ರಯೇಽಪ್ಯನುಮೇಯಾರ್ಥಸಂಸ್ಪರ್ಶ ಏವ ಕಾವ್ಯಸ್ಯ ಚಾರುತ್ವಹೇತುರಿತ್ಯವ–ಗಂತವ್ಯಮ್। ಯದಾಹ ಧ್ವನಿಕಾರಃ "ಸರ್ವಥಾ ನಾಸ್ತ್ಯೇವ ಹೃದಯಹಾರಿಣಃ ಕಾವ್ಯಸ್ಯ ಸ**

**ಪ್ರಕಾರಃ, ಯತ್ರ ಪ್ರತೀಯಮಾನಾರ್ಥಸಂಸ್ಪರ್ಶೇನ ನ ಸೌಭಾಗ್ಯಮ್। ತದಿದಂ ಕಾವ್ಯರಹಸ್ಯಂ ಪರಮಮಿತಿ ಸೂರಿಭಿರ್ವಿಭಾವನೀಯಮ್। ಮುಖ್ಯಾ ಮಹಾಕವಿಗಿರಾಮಲಂಕೃತಿಭೃತಾಮಪಿ। ಪ್ರತೀಯಮಾನಚ್ಛಾಯೈಷಾ ಭೂಷಾ ಲಜ್ಜೇವ ಯೋಷಿತಾಮ್॥" ಇತಿ।**

**ಪುನಃ ಸ ಏವ ಯಥಾ– "ಪ್ರಕಾರೋಽನ್ಯೋ ಗುಣೀಭೂತವ್ಯಂಗ್ಯಃ ಕಾವ್ಯಸ್ಯ ದೃಶ್ಯತೇ। ಯತ್ರ ವ್ಯಂಗ್ಯಾನ್ವಯೇ ವಾಚ್ಯಚಾರುತ್ವಂ ಸ್ಯಾತ್ ಪ್ರಕರ್ಷವತ್॥"**

**ಅನುವಾದ:**

ಹೀಗೆ ಮೂರು ಪ್ರಕಾರಗಳಲ್ಲೂ ಅನುಮೇಯಾರ್ಥದ ಸ್ಪರ್ಶವೇ ಕಾವ್ಯ ಸೌಂದರ್ಯದ ಕಾರಣ ಎಂದು ತಿಳಿದುಕೊಳ್ಳಬೇಕು. ಅದನ್ನು ಧ್ವನಿಕಾರನೂ ಹೇಳಿದ್ದಾನೆ– "ಪ್ರತೀಯಮಾನಾರ್ಥದ ಸ್ಪರ್ಶದಿಂದ ಸೌಭಾಗ್ಯವನ್ನು ಪಡೆದುಕೊಳ್ಳದ ಹೃದಯಂಗಮವಾದ ಕಾವ್ಯಪ್ರಕಾರವೇ ಇಲ್ಲ. ಇದೇ ಕಾವ್ಯದ ಪರಮರಹಸ್ಯ ಎಂದು ವಿದ್ವಾಂಸರು ಅರಿತುಕೊಳ್ಳಬೇಕು."

ಅಲಂಕಾರಗಳಿಂದ ಕೂಡಿದ ಮಹಾಕವಿವಚನಗಳಿಗೂ ಈ ಪ್ರತೀಯಮಾನದ ಕಾಂತಿಯು ಹೆಂಗಸರಿಗೆ ಒಡವೆಯಾಗುವ ಲಜ್ಜೆಯಂತೆ ಮುಖ್ಯವಾದ ಭೂಷಣ. ಮತ್ತೆ ಧ್ವನಿಕಾರನು ಹೇಳಿದ್ದಾನೆ–

"ಗುಣೀಭೂತವ್ಯಂಗ್ಯ ಎಂಬ ಇನ್ನೊಂದು ಕಾವ್ಯಪ್ರಕಾರವಿದೆ; ಅದರಲ್ಲಿ ವ್ಯಂಗ್ಯಾರ್ಥದ ಅನ್ವಯದಿಂದ ವಾಚ್ಯಾರ್ಥದ ಸೌಂದರ್ಯವು ಉತ್ಕರ್ಷವನ್ನು ಗಳಿಸಿಕೊಳ್ಳುತ್ತದೆ".

**ವಿವರಣೆ:**

ಕಾವ್ಯದ ಸೊಬಗಿನ ಗುಟ್ಟು ವ್ಯಂಗ್ಯಾರ್ಥದ ಸ್ಪರ್ಶ ಎಂಬುದು ಎಲ್ಲರಿಗೂ ಸಮ್ಮತ. ಮಹಿಮಭಟ್ಟನು ಆ ವ್ಯಂಗ್ಯಾರ್ಥವನ್ನು 'ಅನುಮೇಯಾರ್ಥ' ಎಂದು ಹೆಸರಿಸಿದ್ದಾನೆ ಅಷ್ಟೆ. ಧ್ವನ್ಯಾಲೋಕದಲ್ಲಿರುವ ಉದಾಹರಣೆಗಳನ್ನೇ ಅವನೂ ಕೊಟ್ಟಿದ್ದಾನೆ. ಮೂರು ಪ್ರಕಾರಗಳು ಎಂದರೆ ವಸ್ತುಮಾತ್ರ, ಅಲಂಕಾರ ಮತ್ತು ರಸಾದಿ. ಎಲ್ಲ ಪ್ರಕಾರಗಳಿಗೂ ಚಾರುತ್ವವನ್ನು, ಎಂದರೆ ಚಮತ್ಕಾರಕಾರಣತ್ವವನ್ನು, ತಂದುಕೊಡುವುದು ವ್ಯಂಗ್ಯಾರ್ಥಸಂಸ್ಪರ್ಶವೇ.

**ಸಂಭವಾಪೇಕ್ಷಯಾ ಚಾಸ್ಯ ಧ್ವನೇಃ ಸ್ವರೂಪಮಾತ್ರಪ್ರತಿಪಾದನಾರ್ಥತ್ವೋಪಗಮೇಽನ್ಯೇಷಾಮಪಿ ತದ್ವಾಕ್ಯಾರ್ಥವರ್ತಿನಾಂ ಪದವರ್ಣಸಂಖ್ಯಾದೀನಾಂ ತದುಪದರ್ಶನಪ್ರಸಂಗೋ ವಿಶೇಷಾಭಾವಾದ್ ಇತಿ ಸಂಜ್ಞಾಸಂಜ್ಞಿಸಂಬಂಧವ್ಯುತ್ಪತ್ತಿಮಾತ್ರಫಲಮೇತತ್ಪರ್ಯವಸ್ಯತೀತಿ ನ ಕಾವ್ಯವಿಶೇಷವ್ಯುತ್ಪತ್ತಿಫಲವ್ । ನ ಚಾಯಂ ಪ್ರಧಾನೇತರಭಾವೇನೋಪನಿಬದ್ಧಃ ತೇಷಾಮನುಮೇಯತಾಂ ಪ್ರತಿಬಧ್ನಾತಿ।**

**ಅನುವಾದ:**

ಹೀಗೂ ಸಂಭವಿಸಬಹುದು ಎಂಬ ದೃಷ್ಟಿಯಿಂದ ಈ ಧ್ವನಿಯ ಸ್ವರೂಪವನ್ನು ಮಾತ್ರ ಪ್ರತಿಪಾದಿಸಲು ಲಕ್ಷಣವನ್ನು ಹೇಳಲಾಗಿದೆ ಎಂದು ಒಪ್ಪಿಕೊಂಡರೂ ಆ ವಾಕ್ಯಾರ್ಥದಲ್ಲಿರುವ ಪದ–ವರ್ಣ–ಸಂಖ್ಯಾ ಇತ್ಯಾದಿಗಳ ಸ್ವರೂಪವನ್ನು

ಹೇಳಬೇಕಾದ ಪ್ರಸಂಗ ಎದುರಾಗುತ್ತದೆ, ಏಕೆಂದರೆ (ಧ್ವನಿಗೂ ಅವುಗಳಿಗೂ ಭೇದವೇನೂ ಇಲ್ಲ. ಆದ್ದರಿಂದ (ಈ ಧ್ವನಿಲಕ್ಷಣವು) ಸಂಜ್ಞಾಸಂಜ್ಞಿಗಳ ಸಂಬಂಧವನ್ನು ಮಾತ್ರ ತಿಳಿಸುವುದನ್ನೇ ತನ್ನ ಫಲವೆಂದು ಹೇಳಿಕೊಳ್ಳುವುದರಲ್ಲಿ ಪರ್ಯವಸಾನವನ್ನು ಹೊಂದುತ್ತದೆ, ಕಾವ್ಯವಿಶೇಷದ ವ್ಯುತ್ಪತ್ತಿ ಅದರ ಫಲವಾಗದು. ಈ ವ್ಯಂಗ್ಯಾರ್ಥವು (ಕೆಲವು ಕಡೆ) ಪ್ರಧಾನ, (ಮತ್ತೆ ಕೆಲವು ಸ್ಥಳಗಳಲ್ಲಿ) ಅಪ್ರಧಾನ ಎಂದು ಪ್ರತಿಪಾದಿಸಿದರೂ, ಅದರ ಅನುಮೇಯತ್ವಕ್ಕೆ ಯಾವ ಪ್ರತಿಬಂಧವನ್ನೂ ಒಡ್ಡಲಾರದು.

**ತದೇವಂ ಚ ನಾರ್ಥಶಬ್ದಯೋರುಪಸರ್ಜನೀಕೃತಸ್ವಾರ್ಥತ್ವಮ್ ಅವ್ಯಭಿಚಾರ – ಅಸಂಭವದೋಷದುಷ್ಟತ್ವಾತ್। ನ ವಾಚ್ಯಪ್ರತೀಯಮಾನಯೋಃ ವ್ಯಂಗ್ಯವ್ಯಂಜಕಭಾವಃ, ತಲ್ಲಕ್ಷಣಾಭಾವಾತ್। ನ ಚ ಕಾವ್ಯವಿಶೇಷಸ್ಯ ಲಕ್ಷಣಕರಣಂ, ಪ್ರಯೋಜನಾಭಾವಾತ್। ನಾಪಿ ಧ್ವನಿವ್ಯಪದೇಶಃ ವ್ಯಂಗ್ಯವ್ಯಂಜಕಭಾವಾಭಾವಾದುಪಪದ್ಯತೇ– ಇತಿ ಸರ್ವಮ್ ಅಸಮಂಜಸಮಿವ ತಲ್ಲಕ್ಷಣಮುಪಲಕ್ಷ್ಯತೇ।**

**ಅನುವಾದ:**

ಹೀಗೆ (ನಾವು ಈಗಾಗಲೇ ತೋರಿಸಿರುವಂತೆ) ಅರ್ಥಕ್ಕೂ ಶಬ್ದಕ್ಕೂ ಉಪಸರ್ಜನೀಕೃತಸ್ವಾರ್ಥತ್ವವು ಇಲ್ಲ, ಏಕೆಂದರೆ ಅದು ಅವ್ಯಭಿಚಾರ ಮತ್ತು ಅಸಂಭವ ಎಂಬ ದೋಷಗಳಿಂದ ದುಷ್ಟವಾಗುತ್ತದೆ. ವಾಚ್ಯ ಮತ್ತು ಪ್ರತೀಯಮಾನಾರ್ಥಗಳಿಗೆ ವ್ಯಂಗ್ಯವ್ಯಂಜಕಭಾವವೂ ಹೊಂದುವುದಿಲ್ಲ, ಏಕೆಂದರೆ ಅವುಗಳಲ್ಲಿ (ವ್ಯಂಜನೆಯ) ಲಕ್ಷಣವೇ ಇಲ್ಲ. ಕಾವ್ಯವಿಶೇಷದ ಲಕ್ಷಣವನ್ನು ಹೇಳಿದ್ದೂ ಸರಿಯಲ್ಲ, ಏಕೆಂದರೆ ಅದು ನಿಷ್ಪ್ರಯೋಜನ. ಧ್ವನಿ ಎಂಬ ಹೆಸರೂ ಕೂಡ ವ್ಯಂಗ್ಯವ್ಯಂಜಕಭಾವವೇ ಇಲ್ಲದಿರುವಾಗ ಹೊಂದುವುದಿಲ್ಲ –ಹೀಗೆ ಧ್ವನಿಯ ಲಕ್ಷಣ ಎಲ್ಲ ಅಸಮಂಜಸ ಆಗಿರುವಂತೆ ಕಾಣುತ್ತದೆ.

**ಯದಿ ಕಾವ್ಯೇ ಗುಣೀಭೂತವ್ಯಂಗ್ಯೇऽಪಿಷ್ಟೈವ ಚಾರುತಾ**
**ಪ್ರಕರ್ಷಶಾಲಿನೀ ತರ್ಹಿ ವ್ಯರ್ಥ ಏವಾದರೋ ಧ್ವನೌ॥**
**ನಹಿ ಕಾವ್ಯಾತ್ಮಭೂತಸ್ಯ ಧ್ವನೇಸ್ತತ್ರಾಸ್ತಿ ಸಂಭವಃ।**
**ತೇನ ನಿರ್ಜೀವಿತೈವಾಸ್ಯ ಸ್ಯಾತ್ ಪ್ರಕರ್ಷೇ ಕಥೈವ ಕಾ॥**
**ಅತೋऽತದಾತ್ಮಭೂತಸ್ಯ ಯೇऽಭಾವಂ ಜಗದುರ್ಧ್ವನೇಃ।**
**ತೇ ಮುಧೈವ ಪ್ರತಿಕ್ಷಿಪ್ತಾಃ ಸ್ವೋಕ್ತಿಭಾವಮಪಶ್ಯತಾ॥**
**ಅಥೇಷ್ಯತೇ ಸ ತತ್ರಾಪಿ ರಸಾದಿವ್ಯಕ್ತ್ಯಪೇಕ್ಷಯಾ।**
**ಕಾವ್ಯಮೇವಾನ್ಯಥಾ ನ ಸ್ಯಾದ್ ರಸಾತ್ಮಕಮಿದಂ ಯತಃ॥**

**ಅನುವಾದ:**

ಗುಣೀಭೂತವ್ಯಂಗ್ಯವೆಂಬ (ಪ್ರಕಾರದ) ಕಾವ್ಯದಲ್ಲೂ ಪ್ರಕರ್ಷಯುಕ್ತವಾದ ಸೌಂದರ್ಯ ಇದೆಯೆಂಬುದು ನಿಮಗೆ ಇಷ್ಟವಾದರೆ, ಧ್ವನಿಕಾವ್ಯದಲ್ಲಿ (ನೀವು ತೋರಿಸುವ) ಆದರ ವ್ಯರ್ಥ.

ಕಾವ್ಯಾತ್ಮ ಎಂದು ಹೇಳಿಸಿಕೊಳ್ಳುವ ಧ್ವನಿಯು (ಗುಣೀಭೂತವ್ಯಂಗ್ಯದಲ್ಲಿ) ಇಲ್ಲವಷ್ಟೆ. ಆದ್ದರಿಂದ ಆ ಗುಣೀಭೂತವ್ಯಂಗ್ಯಕಾವ್ಯ ನಿರ್ಜೀವ ಎಂದಾಯಿತು. ಅದರಲ್ಲಿ ಪ್ರಕರ್ಷದ ಕಥೆ ಏನು ಇರಲು ಸಾಧ್ಯ?

ಆದ್ದರಿಂದ ಯಾರು "ಧ್ವನಿ ಕಾವ್ಯದ ಆತ್ಮವಲ್ಲ, ಧ್ವನಿಯೆಂಬುದು ಇಲ್ಲವೇ ಇಲ್ಲ" ಎಂದು ಹೇಳಿದರೋ ಅವರ ಅಭಿಪ್ರಾಯವನ್ನು ಕಾಣದ (ಧ್ವನಿವಾದಿಯು) ಅವರನ್ನು ವ್ಯರ್ಥವಾಗಿ ಖಂಡಿಸಿದ್ದಾನೆ.

ಆ ಕಾರಣದಿಂದ, ಗುಣೀಭೂತವ್ಯಂಗ್ಯದಲ್ಲೂ ರಸಾದಿಗಳ ಅಭಿವ್ಯಕ್ತಿಯ ದೃಷ್ಟಿಯಿಂದ ಧ್ವನಿಯನ್ನು ಒಪ್ಪಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಅದು ಕಾವ್ಯವೇ ಅಲ್ಲವಾದೀತು. ಏಕೆಂದರೆ ಕಾವ್ಯ ರಸಾತ್ಮಕವೇ ಆಗಿರಬೇಕು.

**ಇತ್ಥಂ ಚ ಗಮ್ಯಮಾನಾರ್ಥಸ್ಪರ್ಶಮಾತ್ರಮಲಂಕೃತಿಃ।**
**ವಾಚ್ಯಸ್ಯೇತ್ಯೇತದುಕ್ತಂ ಸ್ಯಾನ್ಮತಾ ಸೈವಾನುಮಾ ತತಃ॥ ಇತಿ ಸಂಗ್ರಹಶ್ಲೋಕಾಃ॥**

(ಅವಿವಕ್ಷಿತವಾಚ್ಯ ಎಂದರೇನು?)

**ಕಿಂಚ ಯದವಿವಕ್ಷಿತವಾಚ್ಯೋ ವಿವಕ್ಷಿತಾನ್ಯಪರವಾಚ್ಯಶ್ಚೇತಿ ಧ್ವನೇಃ ಪ್ರಕಾರದ್ವಯಮುಕ್ತಂ, ತತ್ರ ಕಿಮಿದಮ್ ಅವಿವಕ್ಷಿತವಾಚ್ಯತ್ವಂ ನಾಮ? ಇತಿ ತಾತ್ಪರ್ಯತೋಽಸ್ಯಾರ್ಥೋ ವಕ್ತವ್ಯಃ। ಕಿಮ್ ಅವಿವಕ್ಷಿತತ್ವಮ್ ಅನುಪಾದೇಯತ್ವಮ್? ಉತ ಅನ್ಯಪರತ್ವಮ್? ಅನುಪಾದೇಯತ್ವಂ ಚ ಕಿಂ ಸರ್ವಾತ್ಮನಾ? ಅಂಶೇನ ವಾ?**

**ಅನುವಾದ:**

ಹೀಗೆ ಗಮ್ಯಮಾನಾರ್ಥದ ಸ್ಪರ್ಶವೇ ವಾಚ್ಯಾರ್ಥಕ್ಕೆ ಅಲಂಕಾರ ಎಂದಿಷ್ಟನ್ನು ಹೇಳಿದಂತಾಗುತ್ತದೆ ಅಷ್ಟೆ. ಅದೇ ಅನುಮಾನ ಎಂಬುದು ನಮ್ಮ ಮತ.

ಇವು ಸಂಗ್ರಹ ಶ್ಲೋಕಗಳು

ಅಲ್ಲದೆ, ಅವಿವಕ್ಷಿತ ವಾಚ್ಯ, ವಿವಕ್ಷಿತಾನ್ಯಪರವಾಚ್ಯ ಎಂದು ಧ್ವನಿಯ ಎರಡು ಪ್ರಕಾರಗಳನ್ನು ಹೇಳಿದ್ದೀರಿ. ಅವುಗಳಲ್ಲಿ ಅವಿವಕ್ಷಿತವಾಚ್ಯ ಎಂದರೆ ಏನು? ಎಂದು ತಾತ್ಪರ್ಯಸಹಿತವಾಗಿ ಇದರ ಅರ್ಥವನ್ನು ನೀವು ಹೇಳಬೇಕು. ಅವಿವಕ್ಷಿತತ್ವ ಎಂದರೆ ಅನುಪಾದೇಯತ್ವವೆ? ಅಥವಾ ಅನ್ಯಪರತ್ವವೆ? ಅನುಪಾದೇಯ ಎಂದಾಗಲೂ ಪೂರ್ಣವಾಗಿ ಅನುಪಾದೇಯತ್ವವೋ ಅಥವಾ ಅಂಶದಲ್ಲಿ ಮಾತ್ರವೋ?

**ಸರ್ವಾತ್ಮನಾ ಅನುಪಾದೇಯತ್ವೇ ವ್ಯಂಜಕತ್ವಮ್ ಅಪ್ಯಸ್ಯ ಅನುಪಾದೇಯಮ್, ತಸ್ಯ ತದಾಶ್ರಿತತ್ವಾತ್। ತತಶ್ಚ ಪ್ರಯೋಗ ಏವಾಸ್ಯ ದುಷ್ಟಃ ಸ್ಯಾತ್, ಯಥಾ ಅನ್ಯಸ್ಯ ಪುನರುಕ್ತಾದೇಃ। ಅಥಾಂಶೇನೇತ್ಯುಚ್ಯತೇ। ವಕ್ತವ್ಯಸ್ತರ್ಹಿ ಅಸಾವಂಶಃ। ಸ ಚ ನಿರೂಪ್ಯಮಾಣಃ ಸ್ವಾಪ್ರಾಧಾನ್ಯ ಏವ ಪರ್ಯವಸ್ಯತಿ। ತತಶ್ಚ ಅವಿವಕ್ಷಿತತ್ವಮ್, ಅನ್ಯಪರತ್ವಮ್, ಉಪಸರ್ಜನೀಕೃತಾತ್ಮತ್ವಂ ಚ ಇತ್ಯೇಕ ಏವಾರ್ಥ ಇತ್ಯನಯಾ ಭಂಗ್ಯಾ ಸ್ವರೂಪಮೇವ ಧ್ವನೇರುಕ್ತಂ ಭವತಿ, ನ ತು ತಸ್ಯ ಪ್ರಕಾರಭೇದಃ।**

**ಅನುವಾದ:**

ಸಂಪೂರ್ಣವಾಗಿ ಅದು ಅನುಪಾದೇಯವೇ ಆದರೆ ಅದರ ವ್ಯಂಜಕತ್ವವೂ ಅನುಪಾದೇಯ (=ತ್ಯಾಜ್ಯ)ವೇ ಆಗುತ್ತದೆ, ಏಕೆಂದರೆ ವ್ಯಂಜಕತ್ವವು ವಾಚ್ಯಾರ್ಥವನ್ನೇ ಆಶ್ರಯಿಸಿಕೊಂಡಿರುತ್ತದೆ. ಆದ್ದರಿಂದ ಅದರ ಪ್ರಯೋಗವೇ ದುಷ್ಟವಾಗುತ್ತದೆ, ಪುನರುಕ್ತಾದಿಗಳ ಪ್ರಯೋಗದಂತೆ.

ಅಂಶತಃ ಅದು ಅನುಪಾದೇಯ ಎಂದು ನೀವು ಹೇಳಿದರೆ, ಆ ಅಂಶ ಯಾವುದು ಎಂದು ಹೇಳಬೇಕು. ಹಾಗೆ ನಿರೂಪಿಸಿದರೆ ಅದು ತನ್ನ ಅಪ್ರಾಧಾನ್ಯ ಎಂಬ ಅಭಿಪ್ರಾಯದಲ್ಲೇ ಪರ್ಯವಸಾಯವನ್ನು ಹೊಂದುತ್ತದೆ. ಆದ್ದರಿಂದ ಅವಿವಕ್ಷಿತತ್ವ, ಅನ್ಯಪರತ್ವ, ಉಪಸರ್ಜನೀಕೃತಾತ್ಮತ್ವ –ಇವೆಲ್ಲ ಒಂದೇ. ಹೀಗೆ ಇನ್ನೊಂದು ರೀತಿಯಲ್ಲಿ ಧ್ವನಿಯ ಸ್ವರೂಪವನ್ನೇ ಹೇಳಿದಂತಾಯಿತು, ಅದರ ಪ್ರಕಾರಭೇದವನ್ನಲ್ಲ.

**ಯಸ್ಯ ಹಿ ಯಲ್ಲಕ್ಷಣಾನುಗಮೇ ಸತಿ ಅವಾಂತರ–ವಿಶೇಷಸಂಸ್ಪರ್ಶಃ ಸ ತಸ್ಯ ಪ್ರಕಾರ ಇತ್ಯುಚ್ಯತೇ। ಯಥಾ ಗೋತ್ವಸ್ಯ ಶಾಬಲೇಯತ್ವಾದಿ। ನ ತು ತಸ್ಯೈವ ಸ ಏವ ಪ್ರಕಾರೋ ಭವಿತುಮರ್ಹತಿ, ತದನವಸ್ಥಾಪ್ರಸಂಗಾತ್। ನ ಚಾತ್ರ ವಿಶೇಷಸಂಸ್ಪರ್ಶಃ ಕಶ್ಚಿದಿತಿ ಕಥಮಸ್ಯ ಧ್ವನಿಪ್ರಕಾರತ್ವೋಕ್ತಿರ್ಯುಕ್ತಿಮತೀ।**

**ಅನುವಾದ:**

ಯಾವುದರ ಲಕ್ಷಣವು ಅನುಸ್ಯೂತವಾಗಿದ್ದರೂ ಯಾವುದಕ್ಕೆ ಒಳಗಿನ ಯಾವುದಾದರೊಂದು ವಿಶೇಷದ ಸ್ಪರ್ಶವಿರುವುದೋ, ಅದು ಅದರ ಪ್ರಕಾರ ಎಂದು ಕರೆಯಲ್ಪಡುತ್ತದೆ. ಉದಾಹರಣೆಗೆ ಗೋತ್ವದ ಒಂದು ಪ್ರಕಾರ ಶಾಬಲೇಯತ್ವ. ಯಾವುದೂ ತಾನೇ ತನ್ನ ಪ್ರಕಾರವಾಗಲಾರದು, ಹಾಗೆ ಒಪ್ಪಿಕೊಂಡರೆ ಅನವಸ್ಥಾ ಎಂಬ ದೋಷದ ಅನಿಷ್ಟ ಪ್ರಸಂಗ. ಈ (ಅವಿವಕ್ಷಿತ ವಾಚ್ಯ ಎಂಬ ಪ್ರಭೇದ)ದಲ್ಲಿ ಯಾವ ವಿಶೇಷದ ಸ್ಪರ್ಶವೂ ಇಲ್ಲದಿರುವಾಗ ಇದನ್ನು ಧ್ವನಿಯ ಒಂದು ಪ್ರಕಾರ ಎಂದು ಹೇಳಿರುವುದು ಯುಕ್ತಿ–ಯುಕ್ತ ಎನ್ನುವುದು ಹೇಗೆ?

(ವಿವಕ್ಷಿತಾನ್ಯಪರವಾಚ್ಯ ಎಂದರೇನು?)

**ಕಿಂಚೇದಂ ವಿವಕ್ಷಿತಾನ್ಯಪರವಾಚ್ಯತ್ವಂ ನಾಮ ನ ಬುಧ್ಯಾಮಹೇ। ಯದಿ ವಿವಕ್ಷಿತತ್ವಂ ನಾಮ ಪ್ರಾಧಾನ್ಯಮುಚ್ಯತೇ, ತತ್ಕಥಂ ತಸ್ಯಾನ್ಯಪರತ್ವಂ ಘಟತೇ? ಅನ್ಯಪರತ್ವಂ ಹಿ ಅನ್ಯಸ್ಯಾಂಗಭಾವೋ ಭಣ್ಯತೇ। ಯಸ್ಯ ಚಾಂಗಭಾವಃ ಸ ಕಥಂ ತದೈವ ವಿವಕ್ಷಿತತ್ವಾತ್ ಪ್ರಾಧಾನ್ಯಮನುಭವತಿ? ಇತಿ ಯದ್ ವಾಚ್ಯಸ್ಯ ವಿವಕ್ಷಿತತ್ವಮನ್ಯಪರತ್ವಂ ಚೋಪಗತಂ, ತದ್ ವಿಪ್ರತಿಷಿದ್ಧಂ, ವಿವಕ್ಷಿತತ್ವಾನ್ಯಪರತ್ವಯೋರ್ವಿರೋಧಾತ್।**

**ಅನುವಾದ:**

ಅಲ್ಲದೆ ಈ ವಿವಕ್ಷಿತಾನ್ಯಪರವಾಚ್ಯತ್ವ ಎಂದರೆ ಏನು ಎಂಬುದೇ ನಮಗೆ ಅರ್ಥವಾಗುತ್ತಿಲ್ಲ. ವಿವಕ್ಷಿತತ್ವ ಎಂದರೆ ಪ್ರಾಧಾನ್ಯ ಎಂದು ಹೇಳಿದರೆ ಅದಕ್ಕೆ

ಅನ್ಯಪರತ್ವವು ಹೇಗೆ ಹೊಂದುತ್ತದೆ? ಅನ್ಯಪರತ್ವ ಎಂದರೆ ಬೇರೆಯದಕ್ಕೆ ಅಂಗವಾಗಿ ಇರುವುದು ಎಂದು ಹೇಳುತ್ತಾರೆ. ಯಾವುದಕ್ಕೆ ಯಾವಾಗ ಅಂಗಭಾವ ಇರುವುದೋ ಅದು ಆವಾಗಲೇ ವಿವಕ್ಷಿತವೂ ಆಗಿ ಪ್ರಾಧಾನ್ಯವನ್ನು ಅನುಭವಿಸುವುದು ಹೇಗೆ? ಆದ್ದರಿಂದ ವಾಚ್ಯಕ್ಕೆ ವಿವಕ್ಷಿತತ್ವವನ್ನೂ ಅನ್ಯಪರತ್ವವನ್ನೂ ನೀವು ಒಪ್ಪಿಕೊಂಡಿರುವುದು ವಿಪ್ರತಿಷಿದ್ಧ, ಏಕೆಂದರೆ ವಿವಕ್ಷಿತತ್ವ ಮತ್ತು ಅನ್ಯಪರತ್ವಗಳು ಪರಸ್ಪರ ವಿರುದ್ಧ.

> **ಏಕಾಶ್ರಯತ್ವೇನ ಹಿ ಪ್ರಾಧಾನ್ಯೇತರಯೋಗಿತ್ವಂ ವಿಶೇಷಣಾಭಿಮತಾರ್ಥವಿಷಯಮೇವ ಸಂಗಚ್ಛತೇ, ನಾನ್ಯವಿಷಯಮ್। ತದೇವ ಹಿ ವಿಶೇಷ್ಯಸ್ಯ ಉತ್ಕರ್ಷಾಧಾನನಿಬಂಧನಭಾವೇನ ವಿವಕ್ಷಿತತತ್ವಾತ್ ಪ್ರಾಧಾನ್ಯಮ್, ಉಪಾಧಿಭಾವಾಚ್ಚ ವಾಸ್ತವಾದ್ ಅಪ್ರಾಧಾನ್ಯಮ್ ಅನುಭವಿತುಮ್ ಅಲಮ್। ಯಥಾ "ರಾಮಸ್ಯ ಪಾಣಿರಸಿ ನಿರ್ಭರಗರ್ಭಖಿನ್ನಸೀತಾ-ವಿವಾಸನಪಟೋಃ ಕರುಣಾ ಕುತಸ್ತೇ" ಇತ್ಯುಕ್ತಮ್।**

**ಅನುವಾದ:**

ಪ್ರಾಧಾನ್ಯ ಮತ್ತು ಅಪ್ರಾಧಾನ್ಯಗಳು ಒಂದೇ ಆಶ್ರಯದಲ್ಲಿರುವುದನ್ನು ವಿಶೇಷಣ ಎಂದು ಒಪ್ಪಿಕೊಳ್ಳಲಾದ ವಸ್ತುವಿಗೆ ಮಾತ್ರ ಸಂಬಂಧಿಸಿದಂತೆ ಹೊಂದಿಕೊಳ್ಳುತ್ತದೆ, ಬೇರೆ ಯಾವುದಕ್ಕೂ ಹೊಂದಿಕೊಳ್ಳುವುದಿಲ್ಲ. ವಿಶೇಷಣವು ಮಾತ್ರ ವಿಶೇಷ್ಯಕ್ಕೆ ಉತ್ಕರ್ಷವನ್ನು ತಂದುಕೊಡುವ ರೂಪದಲ್ಲಿ ವಿವಕ್ಷಿತವಾಗಿ ಪ್ರಾಧಾನ್ಯವನ್ನೂ ವಾಸ್ತವವಾದ ಉಪಾಧಿಭಾವದಿಂದ ಅಪ್ರಾಧಾನ್ಯವನ್ನೂ ಅನುಭವಿಸಬಲ್ಲುದು. ಉದಾಹರಣೆ– "ರಾಮನ ಕೈ ನೀನು, ಪೂರ್ಣ ಗರ್ಭಿಣಿ ಸೀತೆಯನ್ನು ಕಾಡಿಗೆ ಅಟ್ಟುವುದರಲ್ಲಿ ಚತುರವಾದ ನಿನಗೆ ಕರುಣೆ ಎಲ್ಲಿಂದ ಬಂದೀತು?"

> **ಕಿಂಚಾಸ್ಯ ವಿವಕ್ಷಿತಾನ್ಯಪರವಾಚ್ಯಸ್ಯ ಧ್ವನಿಪ್ರಭೇದತ್ವೇಽಭ್ಯುಪಗಮ್ಯಮಾನೇ ವಾಚ್ಯಸ್ಯಾನ್ಯಪರತ್ವಮನುಪಾದೇಯಮೇವ, ತಸ್ಯ ತತ್‌ಪ್ರಭೇದತ್ವಾದೇವ ಸಿದ್ಧೇಃ। ಅನ್ಯಪರತ್ವಂ ಹಿ ಉಪಸರ್ಜನೀಕೃತಾತ್ಮತ್ವಮ್। ತಚ್ಚ ಧ್ವನೇಃ ಸಾಮಾನ್ಯಂ ರೂಪಮುಕ್ತಮೇವ। ಯಥಾತ್ರ ತದುಪಾದೀಯತೇ ಪೂರ್ವತ್ರಾಪಿ ತದುಪಾದೀಯತಾಮ್, ಉಭಯತ್ರಾಪಿ ವಾ ಮೋಪಾದಾಯಿ, ಉಭಯೋರಪಿ ತತ್ಪ್ರಕಾರತ್ವಾವಿಶೇಷಾತ್।**

**ಅನುವಾದ:**

ಅಲ್ಲದೆ, ವಿವಕ್ಷಿತಾನ್ಯಪರವಾಚ್ಯವು ಧ್ವನಿಯ ಪ್ರಭೇದವೆಂದು ಒಪ್ಪಿಕೊಂಡರೆ, ವಾಚ್ಯಕ್ಕೆ ಅನ್ಯಪರತ್ವವನ್ನು ಹೇಳಬೇಕಾಗಿಲ್ಲ, ಏಕೆಂದರೆ ಧ್ವನಿಯ ಪ್ರಭೇದವೆಂದು ಹೇಳಿದಾಗಲೇ ಅದು ಸಿದ್ಧವಾಗುತ್ತದೆ. ಅನ್ಯಪರತ್ವ ಎಂದರೆ ಉಪಸರ್ಜನೀಕೃತಾತ್ಮತ್ವ, ಅದು ಧ್ವನಿಯ ಸಾಮಾನ್ಯಲಕ್ಷಣವೆಂದು ಹೇಳಿ ಆಗಿದೆ.

ಅನ್ಯಪರತ್ವ ಎಂಬ ವಿಶೇಷಣವನ್ನು ಇಲ್ಲಿ (ವಿವಕ್ಷಿತಾನ್ಯಪರವಾಚ್ಯದಲ್ಲಿ) ಹೇಗೆ ಹೇಳಿದ್ದೀರೋ ಹಾಗೆ ಹಿಂದಿನದರಲ್ಲೂ (ಅವಿವಕ್ಷಿತವಾಚ್ಯದಲ್ಲೂ) ಹೇಳಿರಿ. ಅಥವಾ

ಎರಡು ಸ್ಥಳದಲ್ಲೂ ಹೇಳಬೇಡಿರಿ. ಎರಡೂ ಧ್ವನಿಯ ಪ್ರಕಾರವಾಗಿರುವುದು ಸಮಾನ ತಾನೆ?

> **ಕಿಂಚಾರ್ಥಾಂತರಸಂಕ್ರಮಿತವಾಚ್ಯಸ್ಯ ಯದುದಾಹರಣಂ ತದಗ್ನಿರ್ಮಾಣವಕ ಇತಿವದ್ ಗುಣವೃತ್ತೇರೇವ ಸಂಗಚ್ಛತೇ ತಸ್ಯ ಗುಣವೃತ್ತಿಪ್ರಕಾರತ್ವಸಮರ್ಥನಾತ್। ತಥಾ ಹಿ। ಪ್ರಸಿದ್ಧಾನ್ಯೂನಾನತಿರಿಕ್ತಭಾವಸ್ಯ ಅನ್ಯಸ್ಯ ಸಾಧರ್ಮ್ಯಪ್ರತಿಪತ್ತ್ಯರ್ಥಮನ್ಯತ್ರಾರೋಪ ಉಪಚಾರಃ। ಸ ಚಾಯಮಾರೋಪ್ಯಾರೋಪಕಭಾವಾತ್ಮಕತಯಾ ಉಭಯಾರ್ಥವಿಷಯೋ ವೇದಿತವ್ಯಃ।**

**ಅನುವಾದ:**

ಅಲ್ಲದೆ, ಅರ್ಥಾಂತರಸಂಕ್ರಮಿತವಾಚ್ಯದ ಉದಾಹರಣೆಯು ಅಗ್ನಿರ್ಮಾಣವಕ. (ಈ ಹುಡುಗ ಬೆಂಕಿ) ಎಂಬುದರಂತೆ ಗುಣವೃತ್ತಿಯ ಉದಾಹರಣೆಯಾಗಿಯೇ ಸಂಗತವಾಗುತ್ತದೆ. ಏಕೆಂದರೆ ಅದೂ ಒಂದು ಗುಣವೃತ್ತಿಯ ಪ್ರಕಾರ ಎಂದು ಸಮರ್ಥಿಸಲಾಗಿದೆ. ಹೇಗೆಂದರೆ– ಪ್ರಸಿದ್ಧವಾದ ಅನ್ಯೂನಾನತಿರಿಕ್ತವಾದ ಒಂದು ವಸ್ತುವನ್ನು ಸಾಧರ್ಮ್ಯದ ಜ್ಞಾನಕ್ಕಾಗಿ ಇನ್ನೊಂದು ವಸ್ತುವಿನಲ್ಲಿ ಆರೋಪಿಸುವುದೇ ಉಪಚಾರ. ಉಪಚಾರವು ಅರೋಪ್ಯಾರೋಪಕ ಭಾವವನ್ನು ಹೊಂದಿರುವುದರಿಂದ ಅದು ಎರಡು ಅರ್ಥಗಳಿಗೂ ಅನ್ವಯಿಸುತ್ತದೆ ಎಂದು ತಿಳಿಯಬೇಕು.

**ವಿವರಣೆ:**

ಅವಿವಕ್ಷಿತವಾಚ್ಯಧ್ವನಿಯ ಎರಡು ಪ್ರಭೇದಗಳು ಅರ್ಥಾಂತರ ಸಂಕ್ರಮಿತವಾಚ್ಯ ಮತ್ತು ಅತ್ಯಂತತಿರಸ್ಕೃತವಾಚ್ಯ. ಅರ್ಥಾಂತರಸಂಕ್ರಮಿತವಾಚ್ಯದ ಉದಾಹರಣೆ– ರಾಮೋಸ್ಮಿ ಸರ್ವಂ ಸಹೇ. ಇಲ್ಲಿ ರಾಮಶಬ್ದವು ತನ್ನ ಮೂಲಾರ್ಥವನ್ನು ಬಿಟ್ಟುಕೊಡದೆ ಇನ್ನೊಂದು ಅರ್ಥದಲ್ಲಿ (ರಾಜ್ಯನಿರ್ವಸನಾದಿಗಳನ್ನು) ಸಹಿಸಿದವನು ಎಂಬ ಅರ್ಥದಲ್ಲಿ ಸಂಕ್ರಮಿತವಾಗುತ್ತದೆ. ಇದು ವ್ಯಂಜನಾವಾದಿಗಳ ಅಭಿಪ್ರಾಯದಲ್ಲಿ ಉಪಾದಾನಲಕ್ಷಣಾಮೂಲಕವಾದ ಧ್ವನಿ. ಇದರಲ್ಲಿ ಸಾದೃಶ್ಯದ ಸೋಂಕು ಇಲ್ಲವಾದುದರಿಂದ ಇದು ಗೌಣೀವೃತ್ತಿಯಲ್ಲ. ಇದು ಶುದ್ಧಾ ಲಕ್ಷಣಾ ಎಂದು ವ್ಯಂಜನಾವಾದಿಗಳು ಹೇಳುತ್ತಾರೆ. ಮಹಿಮಭಟ್ಟನು ಇದೂ ಗುಣವೃತ್ತಿಯೇ ಎಂದು ಹೇಳಿ ಅಗ್ನಿರ್ಮಾಣವಕಃ ಎಂಬ ಉದಾಹರಣೆಯೊಡನೆ ಸಮೀಕರಿಸಿದ್ದಾನೆ.

ಎಲ್ಲಿ ಆರೋಪದ ಅಧಿಷ್ಠಾನವೂ ಆರೋಪ್ಯಮಾಣವೂ ಶಬ್ದತಃ ಹೇಳಲ್ಪಟ್ಟಿರುವುವೋ ಅಲ್ಲಿ ಆರೋಪ, ಆರೋಪ್ಯಮಾಣವನ್ನು ಮಾತ್ರ ಹೇಳಿದ ಸ್ಥಳಗಳಲ್ಲಿ ಅಧ್ಯವಸಾನ. ಅಗ್ನಿರ್ಮಾಣವಕಃ ಎಂಬ ಉದಾಹರಣೆಯಲ್ಲಿ ಅಗ್ನಿಯು ಆರೋಪ್ಯಮಾಣ. ಮಾಣವಕ ಆರೋಪದ ಅಧಿಷ್ಠಾನ ಅಥವಾ ವಿಷಯ. ಇದು ಸಾರೋಪಾ ಲಕ್ಷಣಾ. ಮಾಣವಕನು ಬಂದಾಗ "ಅಗ್ನಿರಾಗತಃ" ಎಂದು ಹೇಳಿದರೆ ಆಗ ಸಾಧ್ಯವಸಾನಲಕ್ಷಣಾ. ಈ ಉದಾಹರಣೆಗಳಲ್ಲಿ ಸಾಧರ್ಮ್ಯಪ್ರತೀತಿ ಇರುವುದರಿಂದ ಇಲ್ಲಿ ಗುಣವೃತ್ತಿ ಎಂಬುದರಲ್ಲಿ ಸಂಶಯವಿಲ್ಲ.

ಅರ್ಥಾಂತರಸಂಕ್ರಮಿತವಾಚ್ಯದ ಉದಾಹರಣೆಗಳಲ್ಲೂ ಗುಣವೃತ್ತಿ ಇದೆ, ಆದ್ದರಿಂದ ಅದು ಉಪಚಾರದ ಪರಿಕಲ್ಪನೆಯಲ್ಲೇ ಅಂತರ್ಗತವಾಗುತ್ತದೆ ಎಂದು ಮಹಿಮಭಟ್ಟನ ಆಗ್ರಹ.

**ತತಶ್ಚ ಯದಾ ಏಕ ಏವಾರ್ಥ ಏಕಶಬ್ದಾಭಿಧೇಯಃ ಸಾಮಾನ್ಯವಿಶೇಷಾಂಶಪರಿಕಲ್ಪನೇನ ಉಭಯರೂಪೋऽಸ್ಯ ವಿಷಯಭಾವಂ ಭಜತೇ, ತದಾರ್ಥಪ್ರಕರಣಾದ್ಯಧ್ಯವಸಿತೋತ್ಕರ್ಷಾಪಕರ್ಷೋ ವಿಶೇಷಾಂಶ ಏವ ಸಮಾರೋಪಿತಃ ತತ್ರ ಸಾಧರ್ಮ್ಯಾವಗತಿಹೇತುರ್ಭವತಿ, ಯಥಾ– "ತದಮೃತಮಮೃತಂ ಸ ಇಂದುರಿಂದು". ಇತಿ। ನ ತು ಸಾಮಾನ್ಯಾಂಶಃ, ವಿಶೇಷಸ್ಯ ಸಾಮಾನ್ಯಾವ್ಯಭಿಚಾರಾತ್।**

**ಅನುವಾದ:**

ಆದ್ದರಿಂದ ಯಾವಾಗ ಒಂದೇ ಶಬ್ದದಿಂದ ಹೇಳಲ್ಪಡುವ ಒಂದೇ ಅರ್ಥವು ಸಾಮಾನ್ಯ–ವಿಶೇಷ ಎಂಬ ಅಂಶಗಳ ಪರಿಕಲ್ಪನೆಯಿಂದ ಉಭಯರೂಪವಾಗಿ ಈ (ಉಪಚಾರದ) ವಿಷಯವಾಗುವುದೋ, ಆಗ ಪ್ರಯೋಜನ, ಪ್ರಕರಣ ಇತ್ಯಾದಿಗಳಿಂದ ಉತ್ಕರ್ಷವನ್ನೋ ಅಪಕರ್ಷವನ್ನೋ ಪಡೆದುಕೊಳ್ಳುವ ವಿಶೇಷಾಂಶವೇ ಆರೋಪಿತವಾಗಿ ಅಲ್ಲಿ ಸಾಧರ್ಮ್ಯದ ಅರಿವಿಗೆ ಕಾರಣವಾಗುತ್ತದೆ. ಉದಾಹರಣೆ "ಆ ಅಮೃತ ಅಮೃತ, ಆ ಚಂದ್ರ ಚಂದ್ರ" ಇತ್ಯಾದಿ. ಸಾಮಾನ್ಯಾಂಶವು ಆರೋಪಿತವಾಗದು, ಏಕೆಂದರೆ ವಿಶೇಷವು ಸಾಮಾನ್ಯವನ್ನು ಬಿಟ್ಟು ಇರಲಾರದು.

**ಅರ್ಥಾಂತರಸಂಕ್ರಮಿತವಾಚ್ಯೋऽಪ್ಯನುಮಾನ ಏವಾಂತ ರ್ಭವತಿ। ರಾಮಾದಿಶಬ್ದಾ ಹಿ ಪ್ರಕರಣಾದ್ಯವಸಿತೋತ್ಕರ್ಷಾಪಕರ್ಷಲಕ್ಷಣಧರ್ಮವಿಶಿಷ್ಟಂ ಸಂಜ್ಞಿನಂ ಪ್ರತ್ಯಾಯಯಂತಿ। ನ ಸಂಜ್ಞಿಮಾತ್ರಮ್। ಅರ್ಥಾಂತರಂ ಯದನುಮಿತಂ ಧರ್ಮರೂಪಂ ತತ್ರ ಸಂಕ್ರಮಿತಮಾಶ್ರಯಭಾವೇನ ಪರಿಣತಂ ವಾಚ್ಯಮಸ್ಯೇತಿ ಕೃತ್ವಾ। ದ್ವಿವಿಧೋ ಹ್ಯನುಮೇಯೋऽರ್ಥೋ ಧರ್ಮರೂಪೋ ಧರ್ಮಿರೂಪಶ್ಚೇತಿ। ತತ್ರಾದ್ಯೋऽಸ್ಯ ವಿಷಯಃ ತಸ್ಯೈವ ವಾಚ್ಯಾರ್ಥನಿಷ್ಠತಯಾ ಪ್ರತೀತೇಃ। ಅನ್ಯಸ್ತ್ವನ್ಯಸ್ಯ। ಯಥಾ ಅಗ್ನಿರತ್ರ ಧೂಮಾದಿತಿ। ತತೋ ಧರ್ಮವಿಶೇಷಪ್ರತಿಪತ್ತೌ ಪ್ರಕರಣಾದಿರೇವ ಹೇತುತಯಾವಗಂತವ್ಯಃ ನ ರಾಮಾದಿಶಬ್ದಾ ಇತಿ।**

**ಅನುವಾದ:**

ಅರ್ಥಾಂತರಸಂಕ್ರಮಿತವಾಚ್ಯವೂ ಅನುಮಾನದಲ್ಲೇ ಅಂತರ್ಭಾವವನ್ನು ಹೊಂದುತ್ತದೆ. ಏಕೆಂದರೆ ರಾಮ ಇತ್ಯಾದಿ ಶಬ್ದಗಳು ಪ್ರಕರಣಾದಿಗಳಿಂದ ನಿರ್ಧಾರಿತವಾದ ಉತ್ಕರ್ಷ ಅಥವಾ ಅಪಕರ್ಷರೂಪವಾದ ಧರ್ಮಗಳಿಂದ ಕೂಡಿದ ಸಂಜ್ಞಿಯನ್ನು ತಿಳಿಸುತ್ತವೆ, ಕೇವಲ ಸಂಜ್ಞಿಯನ್ನಲ್ಲ. ಧರ್ಮರೂಪವಾಗಿ ಅನುಮಿತವಾದ ಅರ್ಥವು ಯಾವುದುಂಟೋ ಅದರಲ್ಲಿ ವಾಚ್ಯವು ಸಂಕ್ರಮಿತವಾಗಿದೆ, ಎಂದರೆ ಆಶ್ರಯರೂಪದಿಂದ ಪರಿಣತವಾಗಿದೆ ಎಂದು (ಅರ್ಥಾಂತರಸಂಕ್ರಮಿತ ವಾಚ್ಯ ಎಂಬ ಹೆಸರಿನ) ಅಭಿಪ್ರಾಯ. ಅನುಮೇಯಾರ್ಥವು ಧರ್ಮರೂಪ, ಧರ್ಮಿರೂಪ ಎಂದು ಎರಡು ವಿಧ. ಅವುಗಳಲ್ಲಿ ಮೊದಲನೆಯ (ಧರ್ಮರೂಪ)ವಾದುದು ಅರ್ಥಾಂತರಸಂಕ್ರಮಿತವಾಚ್ಯಕ್ಕೆ ವಿಷಯ. ಏಕೆಂದರೆ

ಧರ್ಮವೇ ಅಲ್ಲಿ ವಾಚ್ಯನಿಷ್ಠವಾಗಿ ಪ್ರತೀತವಾಗುತ್ತದೆ. ಎರಡನೆಯದು (ಧರ್ಮಿರೂಪವಾದ ಅನುಮೇಯಾರ್ಥವು) ಬೇರೆ ಅನುಮಾನದ ವಿಷಯ. ಉದಾಹರಣೆ "ಇಲ್ಲಿ ಹೊಗೆ ಇರುವುದರಿಂದ ಬೆಂಕಿ ಇದೆ". ಆದ್ದರಿಂದ ಧರ್ಮವಿಶೇಷದ ಜ್ಞಾನದಲ್ಲಿ ಪ್ರಕರಣಾದಿಗಳೇ ಕಾರಣ, ರಾಮಾದಿ ಶಬ್ದಗಳಲ್ಲ ಎಂದು ಅರಿತುಕೊಳ್ಳಬೇಕು.

**ಅತ್ಯಂತತಿರಸ್ಕೃತವಾಚ್ಯಸ್ತು ಪದಾರ್ಥೋಪಚಾರ ಏವ, ಯಥಾ ಗೌರ್ವಾಹೀಕ ಇತಿ। ತಸ್ಯಾಪ್ಯನುಮಾನಾಂತರ್ಭಾವಃ ಸಮರ್ಥಿತ ಏವ। ಶಬ್ದಶಕ್ತಿಮೂಲಾನುರಣನರೂಪವ್ಯಂಗ್ಯಸ್ತು ನ ಸಂಭವತ್ಯೇವ। ಶಬ್ದಸ್ಯ ಅಭಿಧಾಶಕ್ತಿವ್ಯತಿರೇಕೇಣ ಶಕ್ತ್ಯಂತರಾನಭ್ಯುಪಗಮಾತ್ ಇತ್ಯೇತದುಕ್ತಂ, ವಕ್ಷ್ಯತೇ ಚ।**

**ನಾವಿವಕ್ಷಿತವಾಚ್ಯಸ್ಯ ಧ್ವನೇರ್ಯುಕ್ತಾ ಪ್ರಕಾರತಾ।**
**ನ ಹಿ ಪ್ರಕಾರಸ್ತಸ್ಯೈವ ಸ ಏವೇತ್ಯುಪಪದ್ಯತೇ॥**

**ಅನುವಾದ:**

ಅತ್ಯಂತತಿರಸ್ಕೃತವಾಚ್ಯಧ್ವನಿಯು ಕೇವಲ ಪದಾರ್ಥೋಪಚಾರ. ಗೌರ್ವಾಹೀಕಃ (ವಾಹೀಕನು ಹಸು) ಎಂಬ ಉದಾಹರಣೆಯಲ್ಲಿದ್ದಂತೆ. ಅದೂ ಅನುಮಾನದಲ್ಲೇ ಸೇರಿಹೋಗುತ್ತದೆ ಎಂದು ಮೊದಲೇ ಸಮರ್ಥಿಸಲಾಗಿದೆ. ಶಬ್ದಶಕ್ತಿಮೂಲಾನುರಣನವ್ಯಂಗ್ಯ ಎಂಬ ಧ್ವನಿಯಂತೂ ಸಂಭವಿಸುವುದೇ ಇಲ್ಲ. ಏಕೆಂದರೆ ಶಬ್ದಕ್ಕೆ ಅಭಿಧಾ ಎಂಬ ಶಕ್ತಿಯನ್ನು ಬಿಟ್ಟು ಬೇರೆ ಶಕ್ತಿಯನ್ನು ಒಪ್ಪಿಕೊಳ್ಳಲಾಗದು –ಇದನ್ನು ಮೊದಲೇ ಹೇಳಿದ್ದೇವೆ, ಮುಂದೆಯೂ ಹೇಳುವೆವು.

ಅವಿವಕ್ಷಿತವಾಚ್ಯವು ಧ್ವನಿಯ ಒಂದು ಪ್ರಕಾರ ಎನ್ನುವುದು ಯುಕ್ತವಲ್ಲ. ತಾನೇ ತನ್ನ ಪ್ರಕಾರವೂ ಆಗುತ್ತದೆ ಎನ್ನುವುದು ಉಚಿತವಲ್ಲ.

**ಭಕ್ತಿಃ ಪದಾರ್ಥವಾಕ್ಯಾರ್ಥರೂಪತ್ವಾದ್ ದ್ವಿವಿಧಾ ಮತಾ।**
**ತದ್‌ಬುದ್ಧಿಶ್ಚಾನುಮಾನಾಂತರ್ಭೂತಾ ಯದುಪಪಾದಿತಾ॥**
**ತತ್‌ತಿರಸ್ಕೃತವಾಚ್ಯಸ್ಯ ಧ್ವನೇರ್ಭಕ್ತೇಶ್ಚ ಕಾ ಭಿದಾ?।**
**ದ್ವಿತೀಯೋಽಪಿ ಪ್ರಕಾರೋ ಯಃಸೋಽಪಿ ಸಂಗಚ್ಛತೇ ಕಥಮ್॥**
**ಪರಸ್ಪರವಿರುದ್ಧತ್ವಾದ್ ವಿವಕ್ಷಾತತ್ಪರತ್ವಯೋಃ॥**
**ಯಃ ಶಬ್ದಶಕ್ತಿಮೂಲೋಽನ್ಯಃ ಪ್ರಭೇದೋ ವರ್ಣಿತೋ ಧ್ವನೇಃ॥**
**ಸೋಽಯುಕ್ತೋಽನ್ಯತ ಏವಾಸೌ ತತ್ರೇಷ್ಟಾರ್ಥಾಂತರೇ ಮತಿಃ।**
**ಶಬ್ದೇ ಶಕ್ತ್ಯಂತರಾಭಾವಸ್ಯಾಸಕೃತ್ ಪ್ರತಿಪಾದನಾತ್॥**
**ಇತಿ ಸಂಗ್ರಹಶ್ಲೋಕಾಃ।**

**ಇತಿ ಶ್ರೀರಾಜಾನಕಮಹಿಮಭಟ್ಟವಿರಚಿತೇ**
**ವ್ಯಕ್ತಿ ವಿವೇಕಾಖ್ಯೇ ಕಾವ್ಯಾಲಂಕಾರೇ ಧ್ವನಿಲಕ್ಷಣಾಕ್ಷೇಪೋ**
**ನಾಮ ಪ್ರಥಮೋ ವಿಮರ್ಶಃ।**

**ಅನುವಾದ:**

ಪದಾರ್ಥರೂಪಾ ವಾಕ್ಯಾರ್ಥರೂಪಾ ಎಂದು ಲಕ್ಷಣಾವೃತ್ತಿಯು ಎರಡು ವಿಧ. ಅದರ ಜ್ಞಾನವು ಅನುಮಾನದಲ್ಲೇ ಸೇರಿಹೋಗುತ್ತದೆ ಎಂದು ಉಪಪಾದಿಸಲಾಗಿದೆ.

ಹೀಗಿರುವಾಗ ಅತ್ಯಂತ ತಿರಸ್ಕೃತವಾಚ್ಯಧ್ವನಿಗೂ ಲಕ್ಷಣಾವೃತ್ತಿ (ಭಕ್ತಿ)ಗೂ ಯಾವ ಭೇದವುಮಟು? ವಿವಕ್ಷಿತಾನ್ಯಪರವಾಚ್ಯ ಎಂಬ ಎರಡನೆಯ ಧ್ವನಿಪ್ರಕಾರವು ಸಂಗತವಾಗುವುದಾದರೂ ಹೇಗೆ? ವಿವಕ್ಷೆ ಮತ್ತು ಅನ್ಯಪರತ್ವಗಳಿಗೆ ಪರಸ್ಪರ ವಿರೋಧವಿದೆಯಲ್ಲವೆ?

ಶಬ್ದಶಕ್ತಿಮೂಲಧ್ವನಿ ಎಂದು ಇನ್ನೊಂದು ಪ್ರಕಾರವನ್ನು ಹೇಳಿದ್ದೀರಿ. ಅದು ಅಯುಕ್ತ. ಅಲ್ಲಿ ಬೇರೆ ಮಾರ್ಗದಿಂದ ಅರ್ಥಾಂತರದ ಪ್ರತೀತಿ. ಮತ್ತೆ ಮತ್ತೆ ನಾವು ಶಬ್ದದಲ್ಲಿ (ಅಭಿಧೆಗಿಂತಲೂ) ಬೇರೆ ಶಕ್ತಿ ಇಲ್ಲವೆಂದು ತೋರಿಸಿದ್ದೇವೆ. ಇವು ಸಂಗ್ರಹ ಶ್ಲೋಕಗಳು.

**ಇಲ್ಲಿಗೆ ಶ್ರೀರಾಜಾನಕ ಮಹಿಮಭಟ್ಟನು ರಚಿಸಿದ ವ್ಯಕ್ತಿವಿವೇಕ ಎಂಬ ಕಾವ್ಯಾಲಂಕಾರದಲ್ಲಿ ಧ್ವನಿಲಕ್ಷಣಾಕ್ಷೇಪ ಎಂಬ ಒಂದನೆಯ ವಿಮರ್ಶವು ಮುಗಿಯಿತು.**

# ಅಥ ದ್ವಿತೀಯೋ ವಿಮರ್ಶಃ

(ಅನೌಚಿತ್ಯಸ್ವರೂಪಮ್)

**ಇಹ ಖಲು ದ್ವಿವಿಧಮನೌಚಿತ್ಯಮುಕ್ತಮ್ ಅರ್ಥವಿಷಯಂ ಶಬ್ದವಿಷಯಂ ಚೇತಿ। ತತ್ರ ವಿಭಾವಾನುಭಾವವ್ಯಭಿಚಾರಿಣಾವ್ ಅಯಥಾಯಥಂ ರಸೇಷು ಯೋ ವಿನಿಯೋಗಸ್ತನ್ಮಾತ್ರಲಕ್ಷಣಮೇಕಮ್ ಅಂತರಂಗಮ್ ಆದ್ಯೈರೇವೋಕ್ತಮಿತಿ ನೇಹ ಪ್ರತನ್ಯತೇ। ದ್ವಿತೀಯಂ ಪುನರ್ಬಹಿರಂಗಂ ಬಹುಪ್ರಕಾರಂ ಸಂಭವತಿ। ತದ್ಯಥಾ– ವಿಧೇಯಾವಿಮರ್ಶಃ, ಪ್ರಕ್ರಮಭೇದಃ, ಕ್ರಮಭೇದಃ, ಪೌನರುಕ್ತ್ಯಂ, ವಾಚ್ಯಾವಚನಂ ಚೇತಿ।**

**ಅನುವಾದ:**

ಈ ಶಾಸ್ತ್ರದಲ್ಲಿ ಅರ್ಥವಿಷಯಾನೌಚಿತ್ಯ, ಶಬ್ದವಿಷಯಾನೌಚಿತ್ಯ ಎಂದು ಎರಡು ವಿಧವಾದ ಅನೌಚಿತ್ಯವನ್ನು ಹೇಳಿದ್ದಾರೆ. ಅವುಗಳಲ್ಲಿ ಮೊದಲನೆಯ ಅನೌಚಿತ್ಯವು ರಸಗಳಲ್ಲಿ ವಿಭಾವ–ಅನುಭಾವ–ವ್ಯಭಿಚಾರಿಭಾವಗಳ ಅಸಮರ್ಪಕ ವಿನಿಯೋಗವನ್ನೇ ಲಕ್ಷಣವನ್ನಾಗಿ ಪಡೆದುಕೊಂಡಿರುವುದು. ಅದು ಅಂತರಂಗವಾದುದು ಮತ್ತು ಪ್ರಾಚೀನರಿಂದ (ಆನಂದವರ್ಧನಾದಿಗಳಿಂದಲೇ) ಹೇಳಲ್ಪಟ್ಟಿರುವುದು. ಆದ್ದರಿಂದ ಅದನ್ನು ನಾವಿಲ್ಲಿ ವಿಸ್ತರಿಸುವುದಿಲ್ಲ.

ಎರಡನೆಯ ಅನೌಚಿತ್ಯವು ಬಹಿರಂಗ. ಅದು ಬಹುವಿಧವಾಗಿ ಉಂಟಾಗುವುದು. ಆ ಪ್ರಕಾರಗಳು ಯಾವುವೆಂದರೆ –ವಿಧೇಯಾವಿಮರ್ಶ, ಪ್ರಕ್ರಮಭೇದ, ಕ್ರಮಭೇದ, ಪೌನರುಕ್ತ್ಯ, ವಾಚ್ಯಾವಚನ.

**ದುಃಶ್ರವತ್ವಮಪಿ ವೃತ್ತಸ್ಯ ಶಬ್ದಾನೌಚಿತ್ಯಮೇವ, ತಸ್ಯಾಪ್ಯನುಪ್ರಾಸಾದೇರಿವ ರಸಾನುಗುಣ್ಯೇನ ಪ್ರವೃತ್ತೇರಿಷ್ಟತ್ವಾತ್। ಕೇವಲಂ ವಾಚಕತ್ವಾಶ್ರಯುಮೇತನ್ನ ಭವತಿ ಇತಿ ನ ತತ್ತುಲ್ಯಕಕ್ಷತಯೋಪಾತ್ತಮ್। ಏತಸ್ಯ ಚ ವಿವಕ್ಷಿತರಸಾದಿಪ್ರತೀತಿವಿಘ್ನವಿಧಾಯಿತ್ವಂ ನಾಮ ಸಾಮಾನ್ಯಲಕ್ಷಣಮ್। ಅಂತರಂಗಬಹಿರಂಗಭಾವಶ್ಚ ಅನಯೋಃ ಸಾಕ್ಷಾತ್ ಪಾರಂಪರ್ಯೇಣ ಚ ರಸಭಂಗಹೇತುತ್ವಾದಿಷ್ಟಃ।**

**ಅನುವಾದ:**

ವೃತ್ತದ (ಛಂದಸ್ಸಿನ) ದುಃಶ್ರವತ್ವ ಎಂಬ ದೋಷವೂ ಶಬ್ದಾನೌಚಿತ್ಯವೇ, ಏಕೆಂದರೆ ವೃತ್ತವೂ ಅನುಪ್ರಾಸಾದಿ ಶಬ್ದಾಲಂಕಾರಗಳಂತೆ ರಸಕ್ಕೆ ಅನುಗುಣವಾಗಿ ಪ್ರವೃತ್ತವಾಗಬೇಕು ಎಂಬುದು (ಆಲಂಕಾರಿಕರಿಗೆ) ಇಷ್ಟವಾದ ಮತ. ಆದರೂ ಈ ದುಃಶ್ರವತ್ವವೆಂಬ ದೋಷವು ವಾಚಕವಾದ ಶಬ್ದವನ್ನು ಮಾತ್ರ ಆಶ್ರಯಿಸಿಕೊಂಡಿರುವುದಿಲ್ಲ ಎಂಬ ಕಾರಣದಿಂದ (ವಿಧೇಯಾವಿಮರ್ಶ ಇತ್ಯಾದಿ) ದೋಷಗಳೊಡನೆ ಅದನ್ನು ಪರಿಗಣಿಸಿಲ್ಲ.

ವಿವಕ್ಷಿತವಾದ ರಸಾದಿಗಳ ಪ್ರತೀತಿಗೆ ವಿಘ್ನವನ್ನು ಉಂಟುಮಾಡುವಿಕೆ ಎಂಬುದು ದೋಷಸಾಮಾನ್ಯಲಕ್ಷಣ. ರಸಭಂಗಕ್ಕೆ ಸಾಕ್ಷಾತ್ ಕಾರಣವಾದರೆ ಅಂತರಂಗದೋಷ, ಪರಂಪರೆಯಿಂದ ಕಾರಣವಾದರೆ ಬಹಿರಂಗದೋಷ ಎಂದು ಅಂತರಂಗ ಮತ್ತು ಬಹಿರಂಗ ಭಾವವು ಉಂಟಾಗುತ್ತದೆ ಎಂದು ನಮಗೆ ಅಭಿಮತ.

**ತ ಏತೇ ವಿಧೇಯಾವಿಮರ್ಶತ್ವಾದಯೋ ದೋಷಾ ಇತ್ಯುಚ್ಯಂತೇ। ತಾನ್ ಇದಾನೀಮ್ ಅಖಿಲಾನ್ ಖಲಾ ಇವ ವ್ಯಾಖ್ಯಾಸ್ಯಾಮಃ।**

**ಮುಗ್ಧಃಕಿಂ ಕಿಮಸಭ್ಯ ಏಷ ಭಜತೇ ಮಾತ್ಸರ್ಯಮೌನಂ ನು ಕಿಂ**
**ಪೃಷ್ಟೋ ನ ಪ್ರತಿವಕ್ತಿ ಯಃ ಕಿಲ ಜನಸ್ತತ್ರೇತಿ ಸಂಭಾವಯೇತ್।**
**ಛಾತ್ರಾಭ್ಯರ್ಥನಯಾ ತತೋಽದ್ಯ ಸಹಸೈವೋತ್ಸೃಜ್ಯ ಮಾರ್ಗಂ ಸತಾಂ**
**ಪೌರೋಭಾಗ್ಯಮಭಾಗ್ಯಭಾಜನಜನಾಸೇವ್ಯಂ ಮಯಾಂಗೀಕೃತಮ್॥**
**ಸ್ವಕೃತಿಷ್ವಯಂತ್ರಿತಃ ಕಥಮ್ ಅನುಶಿಷ್ಯಾದನ್ಯಮಯಮಿತಿ ನ ವಾಚ್ಯಮ್।**
**ವಾರಯತಿ ಭಿಷಗಪಥ್ಯಾದಿತರಾನ್ ಸ್ವಯಮಾಚರನ್ನಪಿ ತತ್॥ ಇತಿ।**

**ಅನುವಾದ:**

ಈ ವಿಧೇಯಾವಿಮರ್ಶತ್ವ ಮುಂತಾದವು ದೋಷಗಳು ಎಂದು ಕರೆಯಲ್ಪಟ್ಟಿವೆ. ಖಳರಂತೆ ಈಗ ಅವೆಲ್ಲವನ್ನೂ ವ್ಯಾಖ್ಯಾನಿಸುತ್ತೇವೆ.

ಇವನೇನು ಮುಗ್ಧನೋ, ಅಸಭ್ಯನೋ, ಅಥವಾ ಮಾತ್ಸರ್ಯಮೌನವನ್ನು ಆಶ್ರಯಿಸಿರುವನೋ? ಕೇಳಿದರೂ ಇವನು ಉತ್ತರವನ್ನು ಕೊಡುತ್ತಿಲ್ಲವಲ್ಲ –ಎಂದು ಜನರು ಅಂದುಕೊಳ್ಳಬಹುದು. ಆದರೂ ಈಗ ಸತ್ಪುರುಷರ ದಾರಿಯನ್ನು ಬಿಟ್ಟು ನಾನು ನನ್ನ ಶಿಷ್ಯರ ಬೇಡಿಕೆಯನ್ನು ಮನ್ನಿಸಿ ದೌರ್ಭಾಗ್ಯಕ್ಕೆ ಪಾತ್ರರಾದ ಜನರು ಮಾತ್ರ ಆಶ್ರಯಿಸಬೇಕಾದ ಪೌರೋಭಾಗ್ಯವನ್ನು ಅಂಗೀಕರಿಸಿದ್ದೇನೆ.

ತನ್ನ ಕೃತಿಗಳಲ್ಲಿ ನಿಯಂತ್ರಣವೇ ಇಲ್ಲದ ಈ ಮಹಿಮಭಟ್ಟನು ಬೇರೆಯವರಿಗೆ ಉಪದೇಶವನ್ನು ಹೇಗೆ ಮಾಡುತ್ತಾನೆ? ಎಂದು ಕೇಳಬಾರದು. ಸ್ವಯಂ ಅಪಥ್ಯವನ್ನು ಮಾಡುತ್ತಿರುವ ವೈದ್ಯನು ಬೇರೆಯವರನ್ನು (ಅಪಥ್ಯ ಮಾಡಬಾರದು ಎಂದು) ಅಪಥ್ಯದಿಂದ ದೂರವಿರಿಸುತ್ತಾನಷ್ಟೆ.

(ವಿಧೇಯಾವಿಮರ್ಶ)

**ತತ್ರ ವಿಧೇಯಾವಿಮರ್ಶೋ ಯಥಾ–**
**ಸಂರಂಭಃ ಕರಿಕೀಟಮೇಘಶಕಲೋದ್ದೇಶೇನ ಸಿಂಹಸ್ಯ ಯಃ**
**ಸರ್ವಸ್ಯೈವ ಸ ಜಾತಿಮಾತ್ರನಿಯತೋ ಹೇವಾಕಲೇಶಃಕಿಲ।**
**ಇತ್ಯಾಶಾದ್ವಿರದಕ್ಷಯಾಂಬುದಘಟಾಬಂಧೇಽಪ್ಯಸಂರಬ್ಧವಾನ್**
**ಯೋಽಸೌ ಕುತ್ರ ಚಮತ್ಕೃತೇರತಿಶಯಂ ಯಾತ್ವಂಬಿಕಾಕೇಸರೀ॥**

**ಅನುವಾದ:**

ಅವುಗಳಲ್ಲಿ ವಿಧೇಯಾವಿಮರ್ಶದ ಉದಾಹರಣೆ – "ಸಿಂಹವು ಕೀಟದಂಥ ಆನೆಗಳ ಬಗೆಗೆ ಮತ್ತು ಮೋಡದ ತುಂಡುಗಳ ಬಗೆಗೆ ತೋರಿಸುವ ಹುಮ್ಮಸ್ಸು ಎಲ್ಲ ಸಿಂಹಗಳಿಗೂ ಸಮಾನವಾದ ಜಾತಿಮಾತ್ರದಿಂದ ಸಿದ್ಧವಾದ ಚೇಷ್ಟೆ ಮಾತ್ರ. ಹೀಗೆ ಆಲೋಚಿಸುವ ಪಾರ್ವತೀವಾಹನವಾದ ಸಿಂಹವು ದಿಗ್ಗಜಗಳಲ್ಲಿಯೂ ಪ್ರಳಯಮೇಘಗಳ ಸಮೂಹದಲ್ಲಿಯೂ ಸಂರಂಭವನ್ನು ತೋರಿಸಲಿಲ್ಲ. ಅಂಥ ಪಾರ್ವತೀವಾಹನವಾದ ಸಿಂಹವು ತನ್ನ ಸಾಹಸಾತಿಶಯವನ್ನು ಎಲ್ಲಿ ತಾನೇ ತೋರಿಸಬಹುದು?"

(ಪರ್ಯುದಾಸ)

**ಅತ್ರ ಹಿ ಅಸಂರಬ್ಧವಾನಿತಿ ನಞ್‌ಸಮಾಸಸ್ತಾವದ್ ಅನುಪಪನ್ನಃ। ತಸ್ಯ ಹಿ ಪರ್ಯುದಾಸ ಏವ ವಿಷಯಃ। ತತ್ರೈವ ವಿಶೇಷಣತ್ವಾನ್ನಞಃ ಸುಬಂತೇನೋತ್ತರಪದೇನ ಸಂಬಂಧೋಪಪತ್ತೇಃ।**

**ತದುಕ್ತಮ್– ಪ್ರಧಾನತ್ವಂ ವಿಧೇರ್ಯತ್ರ ಪ್ರತಿಷೇಧೇಽಪ್ರಧಾನತಾ।**
**ಪರ್ಯುದಾಸಃ ಸ ವಿಜ್ಞೇಯೋ ಯತ್ರೋತ್ತರಪದೇನನಞ್॥ ಇತಿ। ಯಥಾ–**
**ಜುಗೋಪಾತ್ಮಾನಮತ್ರಸ್ತೋ ಭೇಜೇ ಧರ್ಮಮನಾತುರಃ।**
**ಅಗೃಧ್ನುರಾದದೇ ಸೋಽರ್ಥಮಸಕ್ತಃ ಸುಖಮನ್ವಭೂತ್॥**

**ಅನುವಾದ:**

ಈ ಪದ್ಯದಲ್ಲಿ 'ಅಸಂರಬ್ಧವಾನ್' ಎಂಬ ನಞ್‌ಸಮಾಸವು ಅನುಚಿತ. ಅದಕ್ಕೆ (ಎಂದರೆ ನಞ್ ಸಮಾಸಕ್ಕೆ) ಪರ್ಯುದಾಸ ಎಂಬುದೇ ವಿಷಯ. ಅದರಲ್ಲಿ ಮಾತ್ರ ನಞರ್ಥವು ವಿಶೇಷಣವಾಗುವುದರಿಂದ ಸುಬಂತವಾದ ಉತ್ತರಪದದೊಡನೆ ಸಂಬಂಧವು ಹೊಂದುತ್ತದೆ. ಪ್ರಾಚೀನರೂ ಹೇಳಿದ್ದಾರೆ– "ಎಲ್ಲಿ ವಿಧಿಗೆ ಪ್ರಾಧಾನ್ಯವಿದ್ದು ನಿಷೇಧಕ್ಕೆ ಅಪ್ರಾಧಾನ್ಯವೋ ಅಲ್ಲಿ ನಞ್ ಉತ್ತರಪದದೊಡನೆ ಸೇರಿಕೊಂಡಿರುತ್ತದೆ. ಅದನ್ನು ಪರ್ಯುದಾಸ ಎಂದು ತಿಳಿದುಕೊಳ್ಳಬೇಕು". ಉದಾಹರಣೆ– "ನಿರ್ಭಯವಾಗಿ (ದಿಲೀಪನು) ತನ್ನನ್ನು ಕಾಪಾಡಿಕೊಂಡನು. ತೊಂದರೆಗೆ ಸಿಲುಕದೆ ಧರ್ಮವನ್ನಾಶ್ರಯಿಸಿದನು. ದುರಾಶೆಪಡದವನಾಗಿ ಹಣವನ್ನು ಸಂಗ್ರಹಿಸಿದನು. ಅಂಟಿಕೊಳ್ಳದೆ ಸುಖವನ್ನನುಭವಿಸಿದನು."

(ಪ್ರಸಜ್ಯಪ್ರತಿಷೇಧ)

**ನ ಪ್ರಸಜ್ಯಪ್ರತಿಷೇಧಃ। ತಸ್ಯ ತದ್ವಿಪರೀತತ್ವಾತ್।**
**ತದುಕ್ತಮ್–**
**ಅಪ್ರಾಧಾನ್ಯಂ ವಿಧೇರ್ಯತ್ರ ಪ್ರತಿಷೇಧೇ ಪ್ರಧಾನತಾ।**
**ಪ್ರಸಜ್ಯಪ್ರತಿಷೇಧೋಽಸೌ ಕ್ರಿಯಯಾ ಸಹ ಯತ್ರ ನಞ್॥**

**ಇತಿ। ಯಥಾ–**
**ನವಜಲಧರಃ ಸನ್ನದ್ಧೋऽಯಂ ನ ದೃಪ್ತನಿಶಾಚರಃ**
**ಸುರಧನುರಿದಂ ದೂರಾಕೃಷ್ಟಂ ನ ತಸ್ಯ ಶರಾಸನಮ್।**
**ಅಯಮಪಿ ಪಟುರ್ಧಾರಾಸಾರೋ ನ ಬಾಣಪರಂಪರಾ**
**ಕನಕನಿಕಷಸ್ನಿಗ್ಧಾ ವಿದ್ಯುತ್ ಪ್ರಿಯಾ ನ ಮಮೋರ್ವಶೀ॥**

**ಅನುವಾದ:**

(ನಞ್‌ಸಮಾಸಕ್ಕೆ) ಪ್ರಸಜ್ಯಪ್ರತಿಷೇಧವು ವಿಷಯವಲ್ಲ. ಏಕೆಂದರೆ ಅದು (ಪರ್ಯುದಾಸಕ್ಕೆ) ವಿರುದ್ಧವಾದದ್ದು. (ಪ್ರಾಚೀನರೂ) ಹೇಳಿದ್ದಾರೆ–

ಎಲ್ಲಿ ವಿಧಿಗೆ ಅಪ್ರಾಧಾನ್ಯವೋ, ಪ್ರತಿಷೇಧಕ್ಕೆ ಪ್ರಾಧಾನ್ಯವೋ ಅದು ಪ್ರಸಜ್ಯ ಪ್ರತಿಷೇಧ. ಅದರಲ್ಲಿ ನಞ್ ಕ್ರಿಯೆಯೊಡನೆ (ಕ್ರಿಯಾಪದದ ಅರ್ಥದೊಡನೆ) ಸಂಬಂಧವನ್ನು ಹೊಂದಿರುತ್ತದೆ. ಅದರ ಉದಾಹರಣೆ (ನವಜಲಧರಃ ಇತ್ಯಾದಿ)–

ಇಲ್ಲಿರುವುದು ಹೊಸಮೋಡ, ಯದ್ಧಸನ್ನದ್ಧನಾದ ರಾಕ್ಷಸನಲ್ಲ, ಇಲ್ಲಿರುವುದು ಕಾಮನಬಿಲ್ಲು. ಆ ರಾಕ್ಷಸನ ಸೆಳೆಯಲ್ಪಟ್ಟ ಧನುಸ್ಸಲ್ಲ. ಇದು ಮಳೆಯ ಧಾರೆ, ಸತತವಾಗಿ ಬೀಳುತ್ತಿರುವ ಶರಪರಂಪರೆ ಅಲ್ಲ. ಚಿನ್ನದ ಒರೆಗಲ್ಲಿನಂತೆ ಹೊಳೆಯುತ್ತಿರುವುದು ಮಿಂಚು, ನನ್ನ ಪ್ರಿಯೆ ಊರ್ವಶಿಯಲ್ಲ.

**ವಿವರಣೆ:**

ಇಲ್ಲಿ ಸಂಸ್ಕೃತ ವ್ಯಾಕರಣಕ್ಕೆ ಸಂಬಂಧಿಸಿದ ಸೂಕ್ಷ್ಮ ವಿಚಾರವನ್ನು ಮಹಿಮಭಟ್ಟನು ಪ್ರಸ್ತಾವಿಸಿದ್ದಾನೆ. ಎಲ್ಲಿ ನಞ್‌ಸಮಾಸವನ್ನು ಮಾಡಬೇಕು, ಎಲ್ಲಿ ಮಾಡಬಾರದು ಎಂಬ ವಿವೇಚನೆ ಮುಖ್ಯ. ವಿಧಿಗೆ ಪ್ರಾಧಾನ್ಯವಿದ್ದಾಗ ನಞ್‌ಸಮಾಸವನ್ನು ಮಾಡಬೇಕು. ಅಲ್ಲಿ ನಞ್‌ರ್ಥವು ಉತ್ತರಪದಾರ್ಥದೊಡನೆ ಸೇರಿ ಹೋಗುತ್ತದೆ. 'ಅತ್ರಸ್ತಃ ಆತ್ಮಾನಂ ಜುಗೋಪ' ಎಂಬಲ್ಲಿ ಗೋಪನೆಯೆಂಬ ವಿಧಿಗೆ ಪ್ರಾಧಾನ್ಯ. ಆದ್ದರಿಂದ ಅತ್ರಸ್ತಃ ಎಂದು ನಞ್‌ಸಮಾಸವನ್ನು ಮಾಡಲಾಗಿದೆ. ಸಮಾಸವನ್ನು ಮಾಡದೆ ನಞ್ ಅನ್ನು ಸ್ವತಂತ್ರವಾಗಿ ಇಟ್ಟಾಗ ಅದು ವಾಕ್ಯದಲ್ಲಿ ಎಲ್ಲೇ ಇದ್ದರೂ ಕ್ರಿಯಾಪದದೊಡನೆಯೇ ಸಂಬಂಧವನ್ನು ಹೊಂದಿ ಪ್ರಧಾನ ಕ್ರಿಯೆಯ ನಿಷೇಧದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಅದು ಪ್ರಸಜ್ಯಪ್ರತಿಷೇಧ. ನವಜಲಧರಃ ಸನ್ನದ್ಧೋऽಯಂ ನ ದೃಪ್ತನಿಶಾಚರ. ಇತ್ಯಾದಿ ಪದ್ಯದಲ್ಲಿ ನಞ್ ಸಮಾಸವನ್ನು ಹೊಂದಿಲ್ಲ. ಸ್ವತಂತ್ರವಾಗಿದೆ. ಅದಕ್ಕೆ ಕ್ರಿಯೆಯೊಡನೆಯೇ ಅನ್ವಯವನ್ನು ಹೇಳಬೇಕು. 'ಭವತಿ' ಎಂಬ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಂಡು ಅದರೊಡನೆ ನಞರ್ಥವನ್ನು ಅನ್ವಯಿಸಬೇಕು. ನಞ್ ಸ್ವತಂತ್ರವಾಗಿದ್ದಾಗ ಮಾತ್ರ, ಎಂದರೆ ಅದು ಸಮಾಸಾಂತರ್ಗತವಾಗಿ ಇಲ್ಲದಾಗ, ಪ್ರಸಜ್ಯಪ್ರತಿಷೇಧ, ಅದರಲ್ಲಿ ನಿಷೇಧಕ್ಕೆ ಪ್ರಾಧಾನ್ಯ.

**ಇಹ ಚ ಪರ್ಯುದಾಸಾಶ್ರಯಣಮಸಂಗತಮ್। ಅರ್ಥಸ್ಯಾಯುಕ್ತತ್ವಪ್ರಸಂಗಾತ್। ಸಂರಬ್ಧವತ್ಪ್ರತಿಷೇಧೋ ಹ್ಯತ್ರಾಭಿಮತಃ, ನಾಸಂರಬ್ಧವದ್ವಿಧಿಃ। ತತ್ರೈವ ಕ್ರಿಯಾಂಶಪ್ರತಿಷೇಧಾವಗತೌ ನಞಃ ಕ್ರಿಯಾಭಿಸಂಬಂಧೋಪಪತ್ತೇಃ। ನ ಚಾಸೌ ಪ್ರತೀಯತೇ, ಗುಣೀಭೂತಸಂರಂಭನಿಷೇಧಸ್ಯ ಅರ್ಥಾಂತರಸ್ಯೈವ ಸಂರಬ್ಧವತ್ಸದೃಶಸ್ಯ ವಿಧೌ ಪ್ರತೀತೇಃ। ನ ಚ ತತ್ಪ್ರತೀತೌ ವಿವಕ್ಷಿತಾರ್ಥಸಿದ್ಧಿಃ**

**ಕಾಚಿತ್। ತತ್ಸಿದ್ಧಿಪಕ್ಷೇ ಚ ಸಮಾಸಾನುಪಪತ್ತಿಃ, ನಞರ್ಥಸ್ಯ ವಿಧೀಯಮಾನತಯಾ ಪ್ರಾಧಾನ್ಯಾದುತ್ತರಪದಾರ್ಥಸ್ಯ ಚಾನೂದ್ಯಮಾನತಯಾ ತದ್ವಿಪರ್ಯಯಾತ್। ಸಮಾಸೇ ಚ ಸತಿ ಅಸ್ಯ ವಿಧ್ಯನುವಾದಭಾವಸ್ಯ ಅಸ್ತಮಯಪ್ರಸಂಗಾತ್। ಯತ್ರ ತು ವಿಪರ್ಯಯಸ್ತತ್ರ ಸಮಾಸೋ ಭವತ್ಯೇವ। ಯಥಾ–**

**ಕಾವ್ಯಾರ್ಥತತ್ತ್ವಾವಗಮೋ ನ ವೃದ್ಧಾರಾಧನಂ ವಿನಾ।**
**ಅನಿಷ್ಟವಾನ್ ರಾಜಸೂಯಂ ಕಃಸ್ವರ್ಗಂ ಮುಖ್ಯಮಶ್ನುತೇ॥**
**ಕ್ರಿಯಾಕರ್ತ್ರಂಶಭಾಗರ್ಥೋ ವಾಕ್ಯೇಽಪೋಹ್ಯೋ ನಞಾ ಯದಿ।**
**ಕ್ರಿಯಾಂಶ ಏವಾಪೋಹ್ಯಃ ಸ್ಯಾನ್ನೇಷ್ಟವಾನಿತಿವತ್ತದಾ॥**
**ಅಕುಂಭಕಾರ ಇತಿವದ್ ವೃತ್ತೌ ತು ಸ್ಯಾದ್ವಿಪರ್ಯಯಃ।**
**ಇತ್ಯೇಷ ನಿಯಮೋಽರ್ಥಸ್ಯ ಶಬ್ದಶಕ್ತಿಸ್ವಭಾವತಃ॥ ಇತ್ಯಂತರಶ್ಲೋಕೌ।**

**ಅನುವಾದ:**

ಈ (ಸಂರಂಭಃ ಕರಿ.....) ಪದ್ಯದಲ್ಲಿ ಪರ್ಯುದಾಸವನ್ನು ಆಶ್ರಯಿಸಿರುವುದು ಅಸಂಗತ. ಏಕೆಂದರೆ (ಹಾಗೆ ಮಾಡಿರುವುದರಿಂದ) ಅರ್ಥವು ಅನುಚಿತವಾಗುವ ಪ್ರಸಂಗವು ಒದಗಿದೆ. ಇಲ್ಲಿ ಕವಿಗೆ ಇಷ್ಟವಾದುದು ಸಂರಬ್ಧವತ್ಪ್ರತಿಷೇಧ (ಸಿಂಹವು ಸಂಭ್ರಮಿಸಲಿಲ್ಲ ಎಂದು ಹೇಳುವುದು ಕವಿಗೆ ಅಭಿಮತ). ಅಸಂರಬ್ಧವದ್ವಿಧಿ ಇಲ್ಲಿ ಅಭಿಮತವಲ್ಲ (ಸಂರಂಭವಿಲ್ಲದ ಸಿಂಹವು ಇನ್ನೇನನ್ನೋ ಮಾಡಿತು ಎಂದು ಹೇಳಲು ಕವಿಯು ಹೊರಟಿಲ್ಲ). ಅಂಥ ಅರ್ಥದಲ್ಲಿ ಮಾತ್ರ ಕ್ರಿಯಾಂಶದ ನಿಷೇಧವು ಅರಿವಿಗೆ ಬಂದಾಗ ನಞ್‌ಗೆ ಕ್ರಿಯೆಯೊಡನೆ ಸಂಬಂಧವು ಉಪಪನ್ನವಾಗುತ್ತದೆ. (ಕವಿಯು ಹೇಳಿರುವ ಮಾತಿನಿಂದ) ಅಂಥ ಅರ್ಥವು ತೋರುವುದೇ ಇಲ್ಲ. ಏಕೆಂದರೆ ಗುಣೀಭೂತವಾದ ಸಂರಂಭನಿಷೇಧಕ್ಕೆ 'ಸಂರಬ್ಧವತ್ಸದೃಶ' ಎಂಬ ಇನ್ನೊಂದು ಅರ್ಥವೇ ವಿಧಿಯಲ್ಲಿ ತೋರುತ್ತದೆ. ಅದು ತೋರಿಬಂದರೆ ವಿವಕ್ಷಿತವಾದ ಯಾವ ಅರ್ಥವೂ ಸಿದ್ಧವಾಗುವುದಿಲ್ಲ. ಅದು ಸಿದ್ಧವಾಗುತ್ತದೆ ಎಂದು ನೀವು ಹೇಳುವ ಪಕ್ಷದಲ್ಲಿ, ಸಮಾಸವನ್ನು ಮಾಡಿದುದೇ ತಪ್ಪು. ನಞರ್ಥವು ವಿಧೀಯಮಾನವಾಗಿದ್ದಾಗ ಅದಕ್ಕೇ ಪ್ರಾಧಾನ್ಯ, ಉತ್ತರಪದಾರ್ಥವು ಅನೂದ್ಯಮಾನವಾಗಿದ್ದಾಗ ಅದಕ್ಕೆ ಅಪ್ರಾಧಾನ್ಯ. ಸಮಾಸವನ್ನು ಮಾಡಿದಾಗ ಈ ವಿಧ್ಯನುವಾದಭಾವವೇ ಅಸ್ತಂಗತವಾದೀತು.

ಯಾವ ಸಂದರ್ಭದಲ್ಲಿ ಈ (ಸನ್ನಿವೇಶದ) ವಿಪರ್ಯಯವು (ಹಿಂದುಮುಂದು) ಉಂಟೋ ಅಲ್ಲಿ ಸಮಾಸವು ಆಗಲೇಬೇಕು. ಉದಾಹರಣೆ– "ವೃದ್ಧರನ್ನು ಆರಾಧಿಸದೆ ಕಾವ್ಯಾರ್ಥದ ತತ್ತ್ವವು ತಿಳಿಯುವುದಿಲ್ಲ. ರಾಜಸೂಯಯಾಗವನ್ನು ಮಾಡಿಲ್ಲದ ಯಾವ ವ್ಯಕ್ತಿಯು ಮುಖ್ಯವಾದ ಸ್ವರ್ಗವನ್ನು ಕಾಣುತ್ತಾನೆ?"

ಕ್ರಿಯಾಕರ್ತ್ರರ್ಥವನ್ನು ಹೊಂದಿರುವ ಅರ್ಥವನ್ನು ನಞ್‌ಇಂದ ನಿಷೇಧಿಸಬೇಕಾಗಿದ್ದರೆ ಕ್ರಿಯಾಂಶವನ್ನೇ ನಿಷೇಧಿಸಬೇಕು. ಅದರ ಉದಾಹರಣೆ–

ನ ಇಷ್ಟವಾನ್

'ಅಕುಂಭಕಾರ' ಇತ್ಯಾದಿ ಸಮಾಸವನ್ನು ಮಾಡಿದಾಗ ಅದರ ವಿಪರ್ಯಯವು ಉಂಟಾಗುತ್ತದೆ. ಅರ್ಥದ ಪ್ರತೀತಿಗೆ ಈ ರೀತಿಯಾದ ನಿಯಮವು ಶಬ್ದಶಕ್ತಿಸ್ವಭಾವದಿಂದಲೇ ಸಿದ್ಧವಾಗಿದೆ. ಇವು ಸಂಗ್ರಹ ಶ್ಲೋಕಗಳು

**ವಿವರಣೆ:**

ನಞ್‌ಸಮಾಸವನ್ನು ಎಲ್ಲಿ ಮಾಡಬೇಕು, ಎಲ್ಲಿ ಮಾಡಬಾರದು ಎಂಬ ಸೂಕ್ಷ್ಮವಿಚಾರವನ್ನು ಇಲ್ಲಿ ಚರ್ಚಿಸಿದ್ದಾನೆ ಮಹಿಮಭಟ್ಟ. ರಾಜಾ ರಾಜಸೂಯಂ ನ ಇಷ್ಟವಾನ್ (ರಾಜನು ರಾಜಸೂಯ ಯಾಗವನ್ನು ಮಾಡಲಿಲ್ಲ) ಎಂಬಲ್ಲಿ ಕ್ರಿಯೆಯ ನಿಷೇಧ ಅಭಿಮತ. ಆದ್ದರಿಂದ ಸಮಾಸವನ್ನು ಮಾಡಬಾರದು.

ರಾಜಸೂಯಮ್ ಅನಿಷ್ಟವಾನ್ ಕಃ ಸ್ವರ್ಗಂ ಪ್ರಾಪ್ನೋತಿ (ರಾಜಸೂಯ ಯಾಗವನ್ನು ಮಾಡದೆ ಯಾವನು ತಾನೆ ಸ್ವರ್ಗವನ್ನು ಕಾಣುವನು?) ಎಂಬಲ್ಲಿ ಯಾಗನಿಷೇಧಕ್ಕೆ ಪ್ರಾಧಾನ್ಯವಿಲ್ಲ. ಆದ್ದರಿಂದ ಅಲ್ಲಿ ನಞ್‌ಸಮಾಸವು ಯೋಗ್ಯ. ಸಂರಂಭಃ ಕರಿ..... ಇತ್ಯಾದಿ ಪದ್ಯದಲ್ಲಿ ಅಂಬಿಕಾಕೇಸರಿಯು (ಗೌರಿಯ ವಾಹನವಾದ ಸಿಂಹವು) ಸಂಭ್ರಮಿಸಲಿಲ್ಲ ಎಂದು ಕ್ರಿಯಾನಿಷೇಧವೇ ಪ್ರಧಾನವಾಗಿ ವಿವಕ್ಷಿತವಾದುದರಿಂದ ಅಲ್ಲಿ 'ಅಸಂರಬ್ಧವಾನ್' ಎಂದು ಸಮಾಸವನ್ನು ಮಾಡಿರುವುದು ತಪ್ಪು ಎಂಬುದನ್ನು ಮಹಿಮಭಟ್ಟನು ತೋರಿಸಿದ್ದಾನೆ.

**ತತ್ರಾಪಿ ಕೇಚಿದ್ ವ್ಯಾಮೋಹಾನ್ನ ಸಮಾಸಮ್ ಆದ್ರಿಯಂತೇ। ಯಥಾ–**
**'ನನು ಸಾಧು ಕೃತಂ ಪ್ರಜಾಸೃಜಾ ಶಶಿಕಾಂತೇಷು ಮನೋ ನ ಕುರ್ವತಾ।**
**ನಹಿ ಚೇತನತಾಮವಾಪ್ಯ ತೇ ವಿರಮೇಯುರ್ಗಲಿತೇನ ಕೇವಲಮ್॥'**

**ಯಥಾ ವಾ– 'ಗೃಹೀತಂ ಯೇನಾಸೀಃ ಪರಿಭವಭಯಾನ್ನೋಚಿತಮಪಿ' ಇತಿ।**

**ಅನುವಾದ:**

(ಪ್ರಸಜ್ಯಪ್ರತಿಷೇಧವಲ್ಲದ) ಪರ್ಯುದಾಸಕ್ಕೇ ತಕ್ಕುದಾದ ಸ್ಥಳದಲ್ಲೂ ಕೆಲವರು ಅಜ್ಞಾನದಿಂದ ಸಮಾಸವನ್ನು ಮಾಡುವುದಿಲ್ಲ. ಉದಾಹರಣೆ–

"ಚಂದ್ರಕಾಂತ ಶಿಲೆಗಳಲ್ಲಿ ಮನಸ್ಸನ್ನು ಇಡದೆ ಬ್ರಹ್ಮನು ಒಳ್ಳೆಯದನ್ನೇ ಮಾಡಿದನು. ಚೇತನತ್ವವನ್ನು ಪಡೆದಿದ್ದರೆ ಅವು ಕರಗಿ ನಿಲ್ಲುತ್ತಿರಲಿಲ್ಲ." ಇನ್ನೊಂದು ಉದಾಹರಣೆ–

"ತಿರಸ್ಕಾರದ ಭಯದಿಂದ ಉಚಿತವಲ್ಲದ ನಿನ್ನನ್ನೂ (ಆ ನನ್ನ ತಂದೆ ದ್ರೋಣನು) ಕೈಗೆತ್ತಿಕೊಂಡಿದ್ದನು."

**ವಿವರಣೆ:**

'ನನು ಸಾಧು ಕೃತಂ' ಮುಂತಾದ ಶ್ಲೋಕದಲ್ಲಿ "ಮನೋಹ್ಯಕುರ್ವತಾ" ಎಂದು ನಞ್‌ಸಮಾಸವನ್ನು ಮಾಡಬೇಕು. ಆಗಲೇ ಅರ್ಥದ ಸಂಗತತೆ "ಪರಿಭವಭಯಾದ್ ಅನುಚಿತಮಪಿ"

ಎಂಬ ನಞ್‌ಸಮಾಸವನ್ನು ಮಾಡಿದ್ದಿದ್ದರೆ ವಿವಕ್ಷಿತಾರ್ಥಪ್ರತೀತಿ ಸಾಧ್ಯವಾಗುತ್ತಿತ್ತು. ಸಮಾಸವನ್ನು ಮಾಡದಿರುವುದು ದೋಷಕ್ಕೆ ಕಾರಣವಾಗಿದೆ.

**ನನು 'ಅಶ್ರಾದ್ಧಭೋಜೀ' ಇತ್ಯತ್ರ ಪ್ರಸಜ್ಯಪ್ರತಿಷೇಧೇऽಪಿ ಯಥಾ ಸಮಾಸ ಇಷ್ಯತೇ, ತದ್ವದಿಹಾಪಿ ಭವಿಷ್ಯತಿ। ಸಂರಬ್ಧವನ್ನಿಷೇಧಶ್ಚ ಪ್ರತಿಪತ್ಸ್ಯತೇ ನ ಅಸಂರಬ್ಧವದ್ವಿಧಿರಿತಿ ಪ್ರಸಜ್ಯಪ್ರತಿಷೇಧ ಏವ ಅಯಮಸ್ತು, ಕಿಂ ಪರ್ಯುದಾಸಾಶ್ರಯಣೇನ? ನೈವಂ ಶಕ್ಯಮ್। ಯತೋ ನ ತಾವದತ್ರ ನಞಃ ಶ್ರಾದ್ಧೇನ ಉತ್ತರಪದಾರ್ಥೇನ ಅಭಿಸಂಬಂಧಃ ಕಶ್ಚನ ಪ್ರತೀಯತೇ, ಅಪಿತು ವಿಶೇಷ್ಯತಯಾ ಪ್ರಾಧಾನ್ಯೇನ ತದ್ಭೋಜ್ಯರ್ಥೇನೈವ। ತತ್ರಾಪಿ ಕರ್ತ್ರಂಶ ಏವ ಪ್ರಧಾನಮ್, ನ ಕ್ರಿಯಾಂಶಃ। ಶ್ರಾದ್ಧಭೋಜನಶೀಲೋ ಹ್ಯತಃ ಕರ್ತಾ ಪ್ರತೀಯತೇ, ನ ತದ್ಭೋಜನಮಾತ್ರಮ್, ಕರ್ತರಿ ಣಿನೇರ್ವಿಧಾನಾತ್।**

**ಅನುವಾದ:**

ಅಶ್ರಾದ್ಧಭೋಜೀ ಎಂಬ ಪದದಲ್ಲಿ ಪ್ರಸಜ್ಯಪ್ರತಿಷೇಧವೇ ಇದ್ದರೂ ಹೇಗೆ ಸಮಾಸವನ್ನು ಒಪ್ಪಿಕೊಂಡಿದ್ದಾರೋ ಹಾಗೆ ಇಲ್ಲಿಯೂ (ಸಂರಂಭಃ ಕರಿ..... ಎಂಬ ಶ್ಲೋಕದಲ್ಲಿಯೂ) ಆಗಬಹುದಲ್ಲವೆ? ಅದರಿಂದ ಸಂರಂಭವುಳ್ಳವನ ನಿಷೇಧವು ಅರಿವಿಗೆ ಬರುತ್ತದೆ, ಸಂರಂಭವಿಲ್ಲದವನ ವಿಧಿಯಲ್ಲ. ಆದ್ದರಿಂದ ಈ ಪ್ರಯೋಗ (ಅಸಂರಬ್ಧವಾನ್ ಎಂಬುದು) ಪ್ರಸಜ್ಯಪ್ರತಿಷೇಧವೇ ಆಗಲಿ, ಪರ್ಯುದಾಸವನ್ನು ನಾವೇಕೆ ಇಲ್ಲಿ ಆಶ್ರಯಿಸೋಣ?

ಹೀಗೆನ್ನಲು ಸಾಧ್ಯವಾಗದು. ಏಕೆಂದರೆ ಅಶ್ರಾದ್ಧಭೋಜೀ ಎಂಬ ಪದದಲ್ಲಿ ನಞ್‌ಗೆ ಉತ್ತರಪದಾರ್ಥವಾದ ಶ್ರಾದ್ಧದೊಡನೆ ಸಂಬಂಧವೇ ಇಲ್ಲ. ವಿಶೇಷ್ಯವಾಗಿ ಪ್ರಾಧಾನ್ಯವನ್ನು ಹೊಂದಿರುವ ಶ್ರಾದ್ಧಭೋಜಿಯೊಡನೆ ನಞ್ ಸಂಬಂಧವನ್ನು ಪಡೆದಿದೆ. ಆ ಪದದ ಅರ್ಥದಲ್ಲೂ ಕರ್ತ್ರಂಶವೇ ಪ್ರಧಾನ, ಕ್ರಿಯಾಂಶವಲ್ಲ. ಏಕೆಂದರೆ ಇಲ್ಲಿ ಕೇವಲ ಭೋಜನ ತೋರುವುದಿಲ್ಲ, ಈ ಪದದಿಂದ ತೋರಿಬರುವುದು ಶ್ರಾದ್ಧಭೋಜನಶೀಲನಾದ ಕರ್ತಾ. ಏಕೆಂದರೆ 'ಣಿನಿ' ಪ್ರತ್ಯಯವನ್ನು ಕರ್ತಾ ಎಂಬ ಅರ್ಥದಲ್ಲೇ ವಿಧಿಸಲಾಗಿದೆ.

**ವಿವರಣೆ:**

'ಅಶ್ರಾದ್ಧಭೋಜಿನ್' ಎಂಬುದು ಪದ. ಇಲ್ಲಿ ಭುಜ್ ಧಾತುವಿಗೆ ಣಿನಿ ಪ್ರಯತ್ಯಯವು ಸೇರಿ ಭೋಜಿನ್ ಎಂಬ ಪ್ರಾತಿಪದಿಕವು ಉಂಟಾಗಿದೆ. ಸುಪ್ಯಜಾತೌ ಣಿನಿಸ್ತಾಚ್ಛೀಲ್ಯೇ (೩.೨.೭೮) ಎಂಬ ಸೂತ್ರದಿಂದ ವಿಹಿತವಾದ ಅದು ಶೀಲವನ್ನೂ ಕರ್ತೃವನ್ನೂ ಬೋಧಿಸುತ್ತದೆ. ನಞ್‌ನ ಸಂಬಂಧವು ಆ ಕರ್ತೃವಿನೊಡನೆ ಉಂಟಾಗುತ್ತದೆ.

**ತತಸ್ತದಭಿಸಂಬಂಧ ಏವ ಶಾಬ್ದೋ, ನ ಕ್ರಿಯಾಭಿಸಂಬಂಧಃ। ಸ ಹಿ ಸಾಮರ್ಥ್ಯಾದವಸೀಯತೇ, ತದುಪಾದಾನಮಂತರೇಣ ಕರ್ತೃತ್ವಾನುಪಪತ್ತೇಃ। ತಚ್ಛ್ರವಣಮಾತ್ರವಿಪ್ರಲಂಭಕೃತಶ್ಚಾಯಂ ಪ್ರಸಜ್ಯಪ್ರತಿಷೇಧಭ್ರಮಃ। ನ ಪುನರಾಂಜಸ್ಯೇನ ತತ್ರ ತದ್ರೂಪತಾ ನಾಮ ಕಾಚಿತ್ ಸಂಭವತಿ। ಸಾ ಹಿ ವಾಕ್ಯಾದೇವಾವಸೀಯತೇ, ನ ವೃತ್ತೇಃ। ತಯೋಃ ಸಿದ್ಧಸಾಧ್ಯಾರ್ಥನಿಷ್ಠತಯಾ ಭಿನ್ನಾರ್ಥತ್ವಾದಿತಿ ಭವಿತವ್ಯಮೇವ ತತ್ರ ಸಮಾಸೇನ।**

**ಅನುವಾದ:**

ಆದ್ದರಿಂದ ಕರ್ತ್ರಂಶದೊಡನೆ ಇರುವ ಅಭಿಸಂಬಂಧವೇ ಶಾಬ್ದ (ಶಬ್ದದಿಂದ ಜ್ಞೇಯ). ಕ್ರಿಯೆಯ ಅಭಿಸಂಬಂಧ ಶಾಬ್ದವಲ್ಲ. ಅದು ಸಾಮರ್ಥ್ಯದಿಂದ ಅರಿವಿಗೆ ಬರುತ್ತದೆ, ಏಕೆಂದರೆ ಕರ್ತೃತ್ವವು ಕ್ರಿಯಾಸಂಬಂಧವಿಲ್ಲದೆ ಅಸ್ತಿತ್ವದಲ್ಲಿರಲಾರದು. ಆ ಕ್ರಿಯಾಂಶವು ಕೇಳಿಸುತ್ತದೆ ಎಂಬುದರಿಂದ ಉಂಟಾಗುವ ವಿಪ್ರಲಂಭ (ಮೋಸ)ದಿಂದ ಇಲ್ಲಿ ಪ್ರಸಜ್ಯಪ್ರತಿಷೇಧ ಎಂಬ ಭ್ರಮೆಯೂ (ಹುಟ್ಟುತ್ತದೆ). ವಸ್ತುತಃ ಇಲ್ಲಿ ಪ್ರಸಜ್ಯಪ್ರತಿಷೇಧವು ಯಾವ ರೀತಿಯಲ್ಲೂ ಆಗಲಾರದು. ಅದರ ರೂಪವು ವಾಕ್ಯದಿಂದಲೇ ತಿಳಿದುಬರುತ್ತದೆ, ಸಮಾಸದಿಂದ ಅಲ್ಲ. ಏಕೆಂದರೆ ಕಾವ್ಯವು ಸಾಧ್ಯಾರ್ಥನಿಷ್ಠ, ವೃತ್ತಿಯು ಸಿದ್ಧಾರ್ಥನಿಷ್ಠ. ಅವೆರಡೂ ಭಿನ್ನಾರ್ಥಗಳು. ಆದ್ದರಿಂದ ಅಶ್ರಾದ್ಧಭೋಜೀ ಎಂಬಲ್ಲಿ ಸಮಾಸ ಆಗಲೇ ಬೇಕು (ಆಗಿರುವುದು ಸರಿ).

> **ಏವಮ್ 'ಅಸೂರ್ಯಂಪಶ್ಯಾದಿಷ್ವಪಿ' ದ್ರಷ್ಟವ್ಯಮ್। ಇಹ ತು ಪ್ರತಿಷೇಧಸ್ಯ ಪ್ರಾಧಾನ್ಯವಿವಕ್ಷಾ, ನ ವಿಧೇಃ। ತತ್ ಕೋಽವಕಾಶಃ ಸಮಾಸಸ್ಯ? ಯಥಾ–**
> **ಭುಂಕ್ತೇ ಸದಾ ಶ್ರಾದ್ಧಮಯಂ ಪರಾಂಶ್ಚೋಪತಾಪಯೇದಿತ್ಯಯಥಾರ್ಥಮೇವ।**
> **ಸಮ್ಯಕ್ ಸ್ವಭಾವೋಽವಗತೋಽಸ್ಯ ಯಾವನ್ನ ಶ್ರಾದ್ಧಭೋಜೀ ನ ಪರೋಪತಾಪೀ॥**
> **ಇತ್ಯತ್ರ। ಅತ್ರ ಹಿ ಪ್ರತೀಯಮಾನಸತ್ತಾದಿಕ್ರಿಯಾಸಮನ್ವಯೋ ನಞರ್ಥಸ್ಯ ಪ್ರಾಧಾನ್ಯೇನ ಪ್ರತೀಯತೇ। ನ ತು ತದ್ವಿಶಿಷ್ಟಸ್ಯ ಉತ್ತರಪದಾರ್ಥಸ್ಯ ವಿಧಿರಿತಿ ಏಷ ಏವ ಪ್ರಸಜ್ಯಪ್ರತಿಷೇಧವಿಷಯೋ ಯುಕ್ತೋ, ನಾನ್ಯಃ।**

**ಅನುವಾದ:**

ಇದೇ ರೀತಿಯಾಗಿ "ಅಸೂರ್ಯಂಪಶ್ಯಾ ರಾಜದಾರಾಃ" (ಸೂರ್ಯನನ್ನೇ ಕಾಣದ ರಾಣಿಯರು) ಇತ್ಯಾದಿಗಳಲ್ಲೂ ಅರಿತುಕೊಳ್ಳಬೇಕು. (ಸಂರಂಭಃ ಕರಿಕೀಟ..... ಎಂಬ ಪದ್ಯದಲ್ಲಿ) ಅಸಂರಬ್ಧವಾನ್ ಎಂಬ ಸ್ಥಳದಲ್ಲಿ ಪ್ರತಿಷೇಧದ ಪ್ರಾಧಾನ್ಯವೇ ವಿವಕ್ಷಿತ, ವಿಧಿಯ ಪ್ರಾಧಾನ್ಯವಲ್ಲ. ಹೀಗಿರುವಾಗ ಸಮಾಸಕ್ಕೆ ಅವಕಾಶ ಎಲ್ಲಿದೆ? ಒಂದು ಉದಾಹರಣೆ: "ಇವನು ಸದಾ ಶ್ರಾದ್ಧದ ಊಟ ಮಾಡುತ್ತಾನೆ, ಪರರಿಗೆ ತೊಂದರೆ ಕೊಡುತ್ತಾನೆ ಎಂಬುದು ಅಸತ್ಯ. ಅವನ ಸ್ವಭಾವವನ್ನು ಚೆನ್ನಾಗಿ ಅರಿತುಕೊಂಡಾಗ ಅವನು ಶ್ರಾದ್ಧಭೋಜಿಯೂ ಅಲ್ಲ, ಪರಾಪಕಾರಿಯೂ ಅಲ್ಲ (ಎಂದು ಅರಿವಾಗುತ್ತದೆ). ಇದರಲ್ಲಿ (ವಾಚ್ಯವಾಗಿ ಹೇಳಿಲ್ಲದಿದ್ದರೂ) ತೋರಿಬರುವ ಸತ್ತಾ ಎಂಬ ಕ್ರಿಯೆಯೊಡನೆ ನಞರ್ಥದ ಸಮನ್ವಯ ಪ್ರಧಾನವಾಗಿ ತೋರುತ್ತದೆ. ನಞರ್ಥವಿಶಿಷ್ಟವಾದ ಉತ್ತರಪದಾರ್ಥದ ವಿಧಿ ತೋರುವುದಿಲ್ಲ. ಇದು ಪ್ರಸಜ್ಯಪ್ರತಿಷೇಧಕ್ಕೇ ಯುಕ್ತವಾದ ವಿಷಯ, ಬೇರೆಯದಲ್ಲ".

> **ಅನ್ಯಥಾ ಅತ್ರಾಪಿ ಸಮಾಸವೈಶಸೋಪಗಮಪ್ರಸಂಗಃ ಪೂರ್ವವದ್ ದುರ್ನಿವಾರಃ ಸ್ಯಾದ್‌ವಿಶೇಷಾಭಾವಾತ್। ತಸ್ಮಾದಸ್ಯ ನಞೋ ವಿಧೇಯಾರ್ಥನಿಷ್ಠತಯಾ ಪ್ರಧಾನಸ್ಯ,**

**ಅನೂದ್ಯಮಾನಾರ್ಥಪರತಯಾ ತದ್ವಿಪರೀತವೃತ್ತಿನಾ ಸಂರಬ್ಧವತ್ಪದೇನ ಸದಾಚಾರನಿರತಸ್ಯೇವ ಪತಿತೇನ ವೃತ್ತಿರ್ವಿದ್ವದ್ಭಿಃ ನೇಷ್ಯತ ಏವೇತಿ ಸ್ಥಿತಮ್। ನಞರ್ಥಸ್ಯ ವಿಧೇಯತ್ವೇ ನಿಷೇಧ್ಯಸ್ಯ ವಿಪರ್ಯಯೇ। ಸಮಾಸೋ ನೇಷ್ಯತೇಽರ್ಥಸ್ಯ ವಿಪರ್ಯಾಸಪ್ರಸಂಗತಃ॥ ಇತಿ ಸಂಗ್ರಹಶ್ಲೋಕಃ॥**

**ಅನುವಾದ:**

ಹೀಗೆ ಒಪ್ಪಿಕೊಳ್ಳದಿದ್ದರೆ (ಭುಂಕ್ತೇ ಸದಾ..... ಇತ್ಯಾದಿ) ಈ ಪದ್ಯದಲ್ಲಿಯೂ ಸಮಾಸವನ್ನು ಮಾಡುವ ದ್ರೋಹದ ಪ್ರಸಂಗವು ಹಿಂದಿನ ಉದಾಹರಣೆಗಳಲ್ಲಿದ್ದಂತೆ ಅನಿವಾರ್ಯವೇ ಆದೀತು. ಆದ್ದರಿಂದ (ಸಂರಂಭಃ ಕರಿಕೀಟ..... ಇತ್ಯಾದಿ ಪದ್ಯದಲ್ಲಿ) ನಞ್ ವಿಧೇಯಾರ್ಥನಿಷ್ಠವಾಗಿ ಪ್ರಧಾನವಾಗಿರೋಣದರಿಂದ, ಅನುವಾದ್ಯವಾದ ಅರ್ಥಕ್ಕೆ ಸೇರಿಕೊಂಡಿರುವುದರಿಂದ ಅಪ್ರಧಾನವಾಗಿರುವ 'ಸಂರಬ್ಧವತ್' ಎಂಬ ಪದದೊಡನೆ ಅದರ ಸಮಾಸವು ಸದಾಚಾರನಿರತನಾಗಿರುವ ವ್ಯಕ್ತಿಗೆ ಪತಿತನಾಗಿರುವವನೊಡನೆ ಸಹವಾಸದಂತೆ ವಿದ್ವಾಂಸರಿಗೆ ಇಷ್ಟವಾಗುವುದೇ ಇಲ್ಲ ಎಂಬುದು ಸಿದ್ಧವಾಯಿತು.

"ನಞರ್ಥವು ಪ್ರಧಾನವಾಗಿದ್ದು ನಿಷೇಧ್ಯವಾದ ಅರ್ಥವು ಅಪ್ರಧಾನವಾಗಿದ್ದಾಗ ನಞ್‌ಸಮಾಸವನ್ನು ಮಾಡುವುದು ಸರಿಯಲ್ಲ. (ಹಾಗೆ ಮಾಡಿದರೆ) ಅರ್ಥವು ತಲೆಕೆಳಗಾಗಿ ತೋರುವ ಪ್ರಸಂಗ ಉಂಟಾಗುವುದು." ಇದು ಸಂಗ್ರಹ ಶ್ಲೋಕ.

(ಯತ್ತಚ್ಛಬ್ದಗಳ ನಿತ್ಯಸಂಬಂಧ)

**ಕಿಂ ಚ ಯೋಽಸಾವಿತ್ಯತ್ರ ಯದಃ ಕೇವಲಸ್ಯೈವ ಪ್ರಯೋಗೋಽನುಪಪನ್ನಃ। ಯತ್ರ ಯತ್ತದೋಃ ಏಕತರನಿರ್ದೇಶೇನೋಪಕ್ರಮಃ। ತತ್ರ ತತ್ಪ್ರತ್ಯವಮರ್ಶಿನಾ ತದಿತರೇಣೋಪಸಂಹಾರೋ ನ್ಯಾಯ್ಯಃ। ತಯೋರಪಿ ಅನುವಾದ್ಯವಿಧೇಯಾರ್ಥತ್ವೇನೇಷ್ಟತ್ವಾತ್। ತಯೋಶ್ಚ ಪರಸ್ಪರಾಪೇಕ್ಷಾಯಾ ನಿತ್ಯತ್ವಾತ್। ಅತ ಏವಾಹುಃ ಯತ್ತದೋರ್ನಿತ್ಯಮಭಿಸಂಬಂಧ ಇತಿ।**

**ಅನುವಾದ:**

ಅಲ್ಲದೆ ಈ (ಸಂರಂಭಃ ಕರಿಕೀಟ.....) ಪದ್ಯದಲ್ಲಿ ಯೋಽಸೌ ಎಂದು ಕೇವಲ ಯಚ್ಛಬ್ದದ ಪ್ರಯೋಗವನ್ನು ಮಾಡಿರುವುದೂ ತಪ್ಪು. ಎಲ್ಲಿ 'ಯದ್-ತದ್' ಎಂಬ ಶಬ್ದಗಳಲ್ಲೊಂದರಿಂದ ಆರಂಭವನ್ನು ಮಾಡಲಾಗುವುದೋ ಅಲ್ಲಿ ಅದಕ್ಕೆ ಸಂಬಂಧಿಯಾದ ಇನ್ನೊಂದರಿಂದ (ವಾಕ್ಯದ) ಉಪಸಂಹಾರವನ್ನು ಮಾಡುವುದು ನ್ಯಾಯಸಂಮತ. ಏಕೆಂದರೆ (ಯದ್-ತದ್ ಎಂಬವೂ) ಅನುವಾದ್ಯ-ವಿಧೇಯ ಭಾವವನ್ನು ಹೊಂದಿವೆ ಎಂಬುದು (ವಿದ್ವಾಂಸರಿಗೆ) ಸಂಮತವಾದ ವಿಷಯ. ಈ ಎರಡು (ಸರ್ವನಾಮಗಳಿಗೆ) ಪರಸ್ಪರಾಕಾಂಕ್ಷೆ ನಿತ್ಯವಾದುದು. ಆದುದರಿಂದಲೇ 'ಯದ್-ತದ್ ಎಂಬ ಪದಗಳಿಗೆ ಅಭಿಸಂಬಂಧ ನಿತ್ಯ' ಎಂದು (ಪ್ರಾಚೀನರು) ಹೇಳಿದ್ದಾರೆ.

**ವಿವರಣೆ:**

ಕುಂತಕನು ಉದಾಹರಿಸಿರುವ ಸಂರಂಭಃ..... ಇತ್ಯಾದಿ ಪದ್ಯದಲ್ಲಿ ಒಂದು ದೋಷ ಮಾತ್ರವಲ್ಲ. ಹಲವಾರು ದೋಷಗಳಿವೆ ಎಂದು ಮಹಿಮಭಟ್ಟನು ಈ ಅಂಶವನ್ನು ಬೆಳಕಿಗೆ ತರುತ್ತಿದ್ದಾನೆ.

**ಸ ಚಾಯಮನಯೋರುಪಕ್ರಮೋಪಸಂಹಾರೋ ದ್ವಿವಿಧಃ ಶಾಬ್ದಶ್ಚಾರ್ಥಶ್ಚೇತಿ।**
**ತತ್ರೋಭಯೋರುಪಾದಾನೇ ಸತಿ ಶಾಬ್ದಃ। ಯಥಾ–**
**'ಯದುವಾಚ ನ ತನ್ಮಿಥ್ಯಾ ಯದ್ದದೌ ನ ಜಹಾರ ತತ್'**
**ಯಥಾ ಚ– ಸ ದುರ್ಮತಿಃಶ್ರೇಯಸಿ ಯಸ್ಯ ನಾದರಃ**
**ಸ ಪೂಜ್ಯಕರ್ಮಾ ಸುಹೃದಾಂ ಶೃಣೋತಿ ಯಃ। ಇತಿ।**

**ಅನುವಾದ:**

ಯದ್–ತದ್ ಎಂಬ ಸರ್ವನಾಮಗಳ ಉಪಕ್ರಮೋಪಸಂಹಾರವು ಶಾಬ್ದ, ಆರ್ಥ ಎಂದು ಎರಡು ವಿಧ. (ಯದ್–ತದ್ ಎಂಬ) ಎರಡರ ಪ್ರಯೋಗವಿದ್ದಾಗ ಅದು ಶಾಬ್ದ. ಉದಾಹರಣೆ– "ಅವನೇನನ್ನು ಹೇಳಿದನೋ ಅದು ಎಂದೂ ಸುಳ್ಳಾಗಲಿಲ್ಲ. ಅವನು ಯಾವುದನ್ನು ಕೊಟ್ಟನೋ ಅದನ್ನು ಎಂದೂ ಹಿಂದಕ್ಕೆ ತೆಗೆದುಕೊಳ್ಳಲಿಲ್ಲ."

ಇನ್ನೊಂದು ಉದಾಹರಣೆ–

"ಯಾವನಿಗೆ ಶ್ರೇಯಸ್ಸಿನಲ್ಲಿ ಆದರವಿಲ್ಲವೋ ಅವನು ದುರ್ಮತಿ. ಯಾವನು ಮಿತ್ರರ ಮಾತುಗಳನ್ನು ಕೇಳುವನೋ ಅವನು ಮನ್ನಣೆಗೆ ಅರ್ಹವಾದ ಕೆಲಸವನ್ನು ಮಾಡುತ್ತಾನೆ."

**ವಿವರಣೆ:**

ಯದುವಾಚ..... ಎಂಬ ಉದಾಹರಣೆಯಲ್ಲಿ ಯದ್ ಎಂಬ ಸರ್ವನಾಮವು ಮೊದಲು ಬಂದಿದೆ, ಅದರ ಉಪಸಂಹಾರ ತಚ್ಛಬ್ದದಿಂದ ಆಗಿದೆ.

ಸ ದುರ್ಮತಿಃ ಇತ್ಯಾದಿ ಉದಾಹರಣೆಯಲ್ಲಿ ತದ್ ಎಂಬ ಸರ್ವನಾಮವು ಮೊದಲು ಬಂದಿದೆ. ಅದರ ಉಪಸಂಹಾರ ಯಚ್ಛಬ್ದದಿಂದ ಆಗಿದೆ.

**ಏಕತರಸ್ಯೋಪಾದನೇ ಸತಿ ಆರ್ಥಃ ತದಿತರಸ್ಯ ಅರ್ಥಸಾಮರ್ಥ್ಯೇನಾಕ್ಷೇಪಾತ್। ತತ್ರ ತದಃ ಕೇವಲಸ್ಯ ಉಪಾದಾನೇ ಸತಿ ಆರ್ಥಃ ತ್ರಿವಿಧಃ –ಪ್ರಸಿದ್ಧಾನುಭೂತಪ್ರಕ್ರಾಂತವಸ್ತುವಿಷಯತಯಾ ಉಪಕಲ್ಪಿತಸನ್ನಿಧಿನಾ ಯದಾ ತಸ್ಯಾಭಿಸಂಬಂಧಾತ್। ತತ್ರ ಪ್ರಸಿದ್ಧಾರ್ಥವಿಷಯೋ ಯಥಾ–**

**ದ್ವಯಂ ಗತಂ ಸಂಪ್ರತಿ ಶೋಚನೀಯತಾಂ ಸಮಾಗಮಪ್ರಾರ್ಥನಯಾ ಕಪಾಲಿನಃ।**
**ಕಲಾ ಚ ಸಾ ಕಾಂತಿಮತೀ ಕಲಾವತಃ ತ್ವಮಸ್ಯ ಲೋಕಸ್ಯ ಚ ನೇತ್ರಕೌಮುದೀ॥**

**ಅನುವಾದ:**

ಇವೆರಡರಲ್ಲಿ ಒಂದನ್ನು ಮಾತ್ರ ಪ್ರಯೋಗಿಸಿದಾಗ (ಉಪಕ್ರಮೋಪಸಂಹಾರವು) ಆರ್ಥ. (ಅಂಥ ಸಂದರ್ಭದಲ್ಲಿ ಶಬ್ದದಿಂದ ಹೇಳಿಲ್ಲದ)

ಇನ್ನೊಂದನ್ನು ಅರ್ಥಸಾಮರ್ಥ್ಯದಿಂದ ತಿಳಿಯಬೇಕು. ತಚ್ಛಬ್ದವನ್ನು ಮಾತ್ರ ಪ್ರಯೋಗಿಸಿರುವ ಈ ಅರ್ಥಪ್ರಕಾರವು ಪ್ರಸಿದ್ಧವಸ್ತುವಿಷಯ, ಅನುಭೂತವಸ್ತು ವಿಷಯ, ಪ್ರಕ್ರಾಂತವಸ್ತುವಿಷಯ ಎಂದು ಮೂರು ವಿಧ. ತನ್ಮೂಲಕವಾಗಿ ಉಪಸ್ಥಿತವಾಗುವ ಯಚ್ಛಬ್ದದೊಡನೆ ಅದರ ಸಂಬಂಧವನ್ನು ತಿಳಿದುಕೊಳ್ಳಬೇಕಾಗುತ್ತದೆ. ಆ ಮೂರು ಪ್ರಕಾರಗಳಲ್ಲಿ ಪ್ರಸಿದ್ಧಾರ್ಥವಿಷಯದ ಉದಾಹರಣೆ: "ಕಪಾಲಿಯೊಡನೆ ಸಮಾಗಮವನ್ನು ಬೇಡಿದ ಎರಡೂ ಈಗ ಶೋಚನೀಯಾವಸ್ಥೆಯನ್ನು ಪಡೆದುವು: ಚಂದ್ರನ ಕಾಂತಿಯುಕ್ತವಾದ ಆ ಕಲೆ ಮತ್ತು ಈ ಲೋಕದ ಕಣ್ಣಿಗೆ ಬೆಳದಿಂಗಳಾದ ನೀನು."

**ವಿವರಣೆ:**

ತಚ್ಛಬ್ದವನ್ನು ಪ್ರಯೋಗಿಸಿದಾಗ ಅರ್ಥಾತ್ 'ಯದ್' ಎಂಬುದರ ಸಂದರ್ಭಾನುಗುಣವಾದ ರೂಪವನ್ನು ಶ್ರೋತೃ ಅಥವಾ ವಾಚಕನು ತಾನೇ ಅಧ್ಯಾಹಾರ ಮಾಡಿಕೊಂಡು ಬೌದ್ಧಿಕವಾಗಿ ಉಪಸಂಹಾರವನ್ನು, ಎಂದರೆ ಆಕಾಂಕ್ಷಾಪೂರಣವನ್ನು ಮಾಡಿಕೊಳ್ಳುತ್ತಾನೆ. ಅದು ಪ್ರಸಿದ್ಧ, ಅನುಭೂತ ಮತ್ತು ಪ್ರಕ್ರಾಂತ ಎಂಬ ಮೂರು ಪ್ರಕಾರಗಳಲ್ಲಿ ಬರುತ್ತದೆ. ಮೊದಲನೆಯದಕ್ಕೆ ಉದಾಹರಣೆಯಾಗಿ ಕೊಟ್ಟಿರುವುದು ಕಾಳಿದಾಸನ ಕುಮಾರಸಂಭವದ ಐದನೆಯ ಸರ್ಗದ ಒಂದು ಪದ್ಯ. ತಪೋನಿರತಳಾಗಿದ್ದ ಪಾರ್ವತಿಗೆ ವಟುವೇಷದಲ್ಲಿ ಬಂದ ಶಿವನು ಈ ಮಾತನ್ನು ಹೇಳಿದ್ದಾನೆ.

ಶಿವನು ಕಪಾಲವನ್ನು, ಎಂದರೆ ತಲೆಬುರುಡೆಯನ್ನು ಕೈಯಲ್ಲಿ ಹಿಡಿದಿರುವವನು. ಅವನೊಡನೆ ಸಮಾಗಮವನ್ನು ಬಯಸಿದ ಚಂದ್ರನ ಆ ಕಲೆ ಮತ್ತು ಜಗತ್ತಿಗೇ ಬೆಳದಿಂಗಳಾಗಿರುವ ಪಾರ್ವತಿ ಎಂಬ ಎರಡೂ ಶೋಚನೀಯಾವಸ್ಥೆಗೆ ಇಳಿದಿವೆ ಎಂದು ಶ್ಲೋಕದ ತಾತ್ಪರ್ಯ.

ಇಲ್ಲಿ ತಚ್ಛಬ್ದದ 'ಸಾ' ಎಂಬ ರೂಪದ ಪ್ರಯೋಗವಿದೆ. 'ಆ ಕಲೆ' ಎಂದರೆ ಲೋಕಪ್ರಸಿದ್ಧವಾದ ಚಂದ್ರಕಲೆ ಎಂದು ಅರ್ಥ. ಈ ಶ್ಲೋಕದಲ್ಲಿ ಯಚ್ಛಬ್ದ ಇಲ್ಲದಿದ್ದರೂ ಅಧ್ಯಾಹಾರದಿಂದ ಅರ್ಥಪೂರಣ. "ಕಲಾವತಃ ಯಾ ಕಾಂತಿಮತೀ ಕಲಾ ಸಾ" ಎಂದು ವಾಚಕರು ಅರ್ಥ ಮಾಡಿಕೊಳ್ಳುತ್ತಾರೆ.

**ಅನುಭೂತ ವಿಷಯೋ ಯಥಾ–**
**"ತೇ ಲೋಚನೇ ಪ್ರತಿದಿಶಂ ವಿಧುರೇ ಕ್ಷಿಪಂತೀ" ಇತಿ।**
**ಯಥಾ ಚ–**
**ತದ್ವಕ್ತ್ರಂ ಯದಿ ಮುದ್ರಿತಾ ಶಶಿಕಥಾ ತಚ್ಚೇತ್ ಸ್ಮಿತಂ ಕಾ ಸುಧಾ**
**ಸಾ ದೃಷ್ಟಿರ್ಯದಿ ಹಾರಿತಂ ಕುವಲಯೈಸ್ತಾಶ್ಚೇದ್‌ಗಿರೋ ಧಿಙ್ ಮಧು।**
**ಸಾ ಚೇತ್ಕಾಂತಿರತಂತ್ರಮೇವ ಕನಕಂ ಕಿಂ ವಾ ಬಹು ಬ್ರೂಮಹೇ**
**ಯತ್ಸತ್ಯಂ ಪುನರುಕ್ತವಸ್ತುವಿಮುಖಃ ಸರ್ಗಕ್ರಮೋ ವೇಧಸಃ॥**
**ಪ್ರಕ್ರಾಂತವಿಷಯೋ ಯಥಾ–**
**ಕಾತರ್ಯಂ ಕೇವಲಾ ನೀತಿಃ ಶೌರ್ಯಂ ಶ್ವಾಪದಚೇಷ್ಟಿತಮ್।**
**ಅತಃ ಸಿದ್ಧಿಂ ಸಮೇತಾಭ್ಯಾಮುಭಾಭ್ಯಾಮನ್ವಿಯೇಷ ಸಃ॥**

**ಅನುವಾದ:**

ಅನುಭೂತವಿಷಯದ ಉದಾಹರಣೆ–

ಬೆದರಿದ ಆ ಕಣ್ಣುಗಳನ್ನು ಎಲ್ಲ ದಿಕ್ಕುಗಳಲ್ಲೂ ಹರಿಸುತ್ತಾ (ಇದ್ದ ನಿನ್ನನ್ನು ಆ ಬೆಂಕಿ ಸುಟ್ಟುಹಾಕಿತು).

ಇನ್ನೊಂದು ಉದಾಹರಣೆ–

"ಆ ಮುಖವು ಇದ್ದಾಗ ಚಂದ್ರನ ಕಥೆ ಮುಗಿದಂತೆಯೇ. ಆ ಮುಗುಳುನಗೆಯ ಮುಂದೆ ಅಮೃತ ಯಾವ ಲೆಕ್ಕಕ್ಕೆ? ಆ ಕಣ್ಣಿನ ಮುಂದೆ ನೈದಿಲೆಗಳು ಸೋತು ಹೋಗುತ್ತವೆ. ಆ ಮಾತುಗಳನ್ನು ಕೇಳಿದ ಮೇಲೆ ಜೇನುತುಪ್ಪಕ್ಕೆ ಧಿಕ್ಕಾರ. ಆ ಕಾಂತಿಯ ಮುಂದೆ ಚಿನ್ನವೂ ಕಪ್ಪು. ಹೆಚ್ಚು ಮಾತನ್ನೇನು ಹೇಳುವುದು? ಬ್ರಹ್ಮನ ಸೃಷ್ಟಿ ಪುನರುಕ್ತಿಗೆ ವಿರುದ್ಧ ಎಂಬ ಮಾತು ಸತ್ಯ."

ಪ್ರಕ್ರಾಂತ ವಿಷಯದ ಉದಾಹರಣೆ–

"ಕೇವಲ ನೀತಿಯ ಅವಲಂಬನೆ ಪುಕ್ಕಲುತನ. ಕೇವಲ ಶೌರ್ಯ ಹಿಂಸ್ರಪಶುಗಳ ಚೇಷ್ಟೆ ಅಷ್ಟೆ ಆದ್ದರಿಂದ ಆ (ಅತಿಥಿ ಎಂಬ) ರಾಜನು ನೀತಿ–ಶೌರ್ಯಗಳನ್ನು ಒಟ್ಟಾಗಿ ಆಶ್ರಯಿಸಿ ಸಿದ್ಧಿಯನ್ನು ಪಡೆದನು."

**ಕೇಚಿತ್ ಪುನಃ ಉಪಾತ್ತವಸ್ತುವಿಷಯತಯಾ ಉಪಕಲ್ಪಿತಯೋರ್ದ್ವಯೋರಪಿ ಆಕ್ಷೇಪಾದಸ್ಯ ಚತುರ್ಥಮಪಿ ಪ್ರಕಾರಮಿಚ್ಛಂತಿ। ಯಥಾ–**

**ಯೇ ನಾಮ ಕೇಚಿದಿಹ ನಃ ಪ್ರಥಯಂತ್ಯವಜ್ಞಾಂ**
**ಜಾನಂತಿ ತೇ ಕಿಮಪಿ ತಾನ್ ಪ್ರತಿ ನೈಷ ಯತ್ನಃ।**
**ಉತ್ಪತ್ಸ್ಯತೇ ತು ಮಮ ಕೋಽಪಿ ಸಮಾನಧರ್ಮಾ**
**ಕಾಲೋ ಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ॥**

**ಅತ್ರ ಸ ಕೋಽಪಿ ಉತ್ಪತ್ಸ್ಯತೇ ಯಂ ಪ್ರತಿ ಯತ್ನೋ ಮೇ ಸಫಲೀಭವಿಷ್ಯತಿ ಇತ್ಯುಭಯೋರಪಿ ತಯೋರರ್ಥಾದಾಕ್ಷೇಪಃ।**

**ಅನುವಾದ:**

ಉಕ್ತವಾದ ವಿಷಯವನ್ನೇ ಇಟ್ಟುಕೊಂಡು ಕಲ್ಪಿತವಾದ (ಯದ್ ತದ್ ಎಂಬ) ಎರಡನ್ನೂ ಅರ್ಥಮಾಡಿಕೊಳ್ಳಲಾಗುವ ನಾಲ್ಕನೆಯ ಪ್ರಕಾರವೂ ಇದೆ ಎನ್ನುತ್ತಾರೆ. ಉದಾಹರಣೆ–

"ಯಾರು ಕೆಲವರು ನಮ್ಮ ಬಗೆಗೆ ತಿರಸ್ಕಾರವನ್ನು ತೋರುವರೋ ಅವರಿಗೆ ಏನೋ ಗೊತ್ತಿರಬೇಕು. ಅವರಿಗಾಗಿ ಈ ಪ್ರಯತ್ನವನ್ನು ಮಾಡುತ್ತಿಲ್ಲ. ನನ್ನ ಸಮಾನ ಮನಸ್ಸಿನವನಾರೋ ಹುಟ್ಟುವನು. ಈ ಕಾಲಕ್ಕೆ ಕೊನೆಯಿಲ್ಲ, ಭೂಮಿಯೂ ವಿಶಾಲ."

ಇಲ್ಲಿ ಯಾರಿಗಾಗಿ ನನ್ನ ಈ ಪ್ರಯತ್ನವು. ಸಫಲವಾಗುವುದೋ ಅವನು ಮುಂದೆ ಹುಟ್ಟುತ್ತಾನೆ –ಎಂದು ಯತ್ತಚ್ಛಬ್ದಗಳೆರಡಕ್ಕೂ ಅರ್ಥತಃ ಆಕ್ಷೇಪವಿದೆ.

**ಯಚ್ಚೈಕವಾಕ್ಯೇ ಕರ್ತೃತ್ವೇನೋಕ್ತೋ ಯಚ್ಚೇದಮಾದಿಭಿಃ।**
**ತಚ್ಛಬ್ದೇನ ಪರಾಮರ್ಶೋ ನ ತಯೋರುಪಪದ್ಯತೇ॥**
**ಯತೋಽಧ್ಯಕ್ಷಾಯಮಾಣೋಽರ್ಥಃ ಸ ತೇಭ್ಯಃ ಪ್ರತಿಪದ್ಯತೇ।**
**ನ ಚಾಸೌ ತತ್ಪರಾಮರ್ಶಸಹಿಷ್ಣುರಸಮನ್ವಯಾತ್॥**
**ತದ್ಯಥಾ–**
**ಸ ವಃ ಶಶಿಕಲಾಮೌಲಿಸ್ತಾದಾತ್ಮ್ಯಾಯೋಪಕಲ್ಪತಾಮ್।**
**ದ್ವೈತಬುದ್ಧಿಮಪಾಸ್ಯೇಮಾಂ ಸಾ ಹಿ ಸರ್ವಾಪದಾಂ ಪದಮ್॥**

**ಅತ್ರೈವ ಇಮಾಮ್ ಇತ್ಯತ್ರ ಏತದದಸೋಃ ಪ್ರಯೋಗೇ ತಯೋರಪ್ಯೇತದೇವೋದಾಹರಣಂ ದ್ರಷ್ಟವ್ಯಮ್। ಅತ್ರ ಚೈಕಾತ್ಮ್ಯಾಯೇತಿ ಏಷಾ ಹಿ ವಿಪದಾಂ ಪದಮ್ ಇತಿ ಚ ಪಾಠೌ ಪಠಿತವ್ಯೌ।**

**ಅನುವಾದ:**

ಒಂದೇ ವಾಕ್ಯದಲ್ಲಿ ಯಾವುದು ಕರ್ತೃವಾಗಿ ಹೇಳಲ್ಪಡುವುದೋ ಮತ್ತೆ ಯಾವುದು ಇದಮ್ ಇತ್ಯಾದಿ ಪದಗಳಿಂದ ಹೇಳಲ್ಪಟ್ಟಿರುವುದೋ, ಅವುಗಳನ್ನು ತತ್ ಎಂಬ ಶಬ್ದದಿಂದ ಪರಾಮರ್ಶಿಸುವುದು ಸರಿಯಲ್ಲ.

ಏಕೆಂದರೆ ಇದಮ್ ಇತ್ಯಾದಿ ಪದಗಳಿಂದ ವಸ್ತು ಪ್ರತ್ಯಕ್ಷವಾಗಿರುವಂತೆ ಪ್ರತಿಪಾದಿಸಲ್ಪಡುತ್ತದೆ. ತತ್‌ಪದದಿಂದ ಅದು ಪರಾಮರ್ಶವನ್ನು ಸಹಿಸಲಾರದು. ಏಕೆಂದರೆ ಅದರ ಸಮನ್ವಯ ಅಲ್ಲಿ ಆಗಲಾರದು. ಉದಾಹರಣೆ: "ಚಂದ್ರಕಲೆಯನ್ನು ಕಿರೀಟದಲ್ಲಿ ಧರಿಸಿರುವ ಆ ಶಿವನು ದ್ವೈತಬುದ್ಧಿಯನ್ನು ನಿವಾರಿಸಿ ತಾದಾತ್ಮ್ಯವನ್ನು ನಿಮಗೆ ಉಂಟುಮಾಡಲಿ. ಆ ದ್ವೈತಬುದ್ಧಿಯೇ ಎಲ್ಲ ವಿಪತ್ತುಗಳಿಗೆ ಕಾರಣವು ತಾನೆ!"

ಈ ಪದ್ಯದಲ್ಲೇ ಇಮಾಮ್ ಎಂಬ ಪದದ ಜಾಗದಲ್ಲಿ ಏತತ್ (ಏತಾಮ್) ಅಥವಾ ಅದಸ್ (ಅಮೂಮ್) ಎಂಬವುಗಳನ್ನು ಬಳಸಿದರೆ ಅವುಗಳಿಗೂ ಇದೇ ಉದಾಹರಣೆಯಾಗುವುದೆಂದು ಅರಿತುಕೊಳ್ಳಬೇಕು. ಇಲ್ಲಿ "ಐಕಾತ್ಮ್ಯಾಯ" ಎಂದೂ, "ಏಷಾಹಿ ವಿಪದಾಂ ಪದಂ" ಎಂದೂ ಪಾಠಗಳನ್ನು (ಬದಲಾಯಿಸಿ) ಓದಿಕೊಳ್ಳಬೇಕು.

**ಯದಃ ಪುನರಾರ್ಥೋ ದ್ವಿಪ್ರಕಾರಃ ಸಂಭವತಿ, ಪ್ರಕ್ರಾಂತವಸ್ತುಕಲ್ಪಿತತತ್ಕರ್ಮಾದಿವಿಷಯೇಣ ತದಾ ತಸ್ಯಾಭಿಸಂಬಂಧಾತ್। ಯಥಾ "ಯಂ ಸರ್ವಶೈಲಾಃ" ಇತ್ಯಾದೌ "ಸ ಹಿಮಾಲಯೋಽಸ್ತಿ" ಇತಿ। ಯಥಾ ಚ "ಆತ್ಮಾ ಜಾನಾತಿ ಯತ್ಪಾಪಂ ಮಾತಾ ಜಾನಾತಿ ಯತ್ ಪಿತಾ" ಇತ್ಯಾದೌ ತದಾತ್ಮಾ ಜಾನಾತಿ ಇತ್ಯರ್ಥಾವಗತೇಃ।**

**ಅನುವಾದ:**

ಯದ್ ಎಂಬ ಶಬ್ದದ ಆರ್ಥದ ಉಪಕ್ರಮೋಪಸಂಹಾರವೂ ಎರಡು ಪ್ರಕಾರವಾಗಿ ಸಂಭವಿಸುತ್ತದೆ. ಏಕೆಂದರೆ ಅದರ (ಯದ್ ಎಂಬ ಸರ್ವನಾಮದ

ಅರ್ಥದ) ಅಭಿಸಂಬಂಧವು ಪ್ರಕ್ರಾಂತವಸ್ತು ಎಂಬ ಅರ್ಥದ ಅಥವಾ ಕಲ್ಪಿತತತ್ಕವರ್ಾದಿ ವಿಷಯಗಳನ್ನುಳ್ಳ ತಚ್ಛಬ್ದದೊಡನೆ (ಅಥವಾ ಅದರ ಅರ್ಥದೊಡನೆ) ಉಂಟಾಗಬಹುದು. ಉದಾಹರಣೆ ಯಂ ಸರ್ವ ಶೈಲಾಃ ಇತ್ಯಾದಿಗಳಲ್ಲಿ ಸ ಹಿಮಾಲಯೋಽಸ್ತಿ ಇತ್ಯಾದಿ. ಇನ್ನೊಂದು ಉದಾಹರಣೆ ಆತ್ಮಾ ಜಾನಾತಿ ಇತ್ಯಾದಿ. (ಪಾಪ ಯಾವುದೆಂಬುದನ್ನು ಆತ್ಮನು ತಿಳಿದಿರುತ್ತಾನೆ. ಮಗುವಿನ ತಂದೆ ಯಾರೆಂಬುದನ್ನು ತಾಯಿ ತಿಳಿದಿರುತ್ತಾಳೆ.) ಇವುಗಳಲ್ಲಿ "ತದಾತ್ಮಾ ಜಾನಾತಿ" ಎಂಬ ಅರ್ಥವು ಗೋಚರವಾಗುತ್ತದೆ.

**ವಿವರಣೆ:**

ಕಾಳಿದಾಸನ ಕುಮಾರಸಂಭವದಲ್ಲಿ ಅಸ್ತ್ಯುತ್ತರಸ್ಯಾಂದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ ಎಂದು ಪ್ರಾರಂಭ. ಮುಂದೆ ಯಂ ಸರ್ವಶೈಲಾಃ ಪರಿಕಲ್ಪ್ಯ ವತ್ಸಂ ಇತ್ಯಾದಿ ಪದ್ಯಗಳಿವೆ. ಅವುಗಳಲ್ಲಿ ಯಚ್ಛಬ್ದವುಂಟು, ತಚ್ಛಬ್ದವಿಲ್ಲ. ಪ್ರಕ್ರಾಂತವಾದ ಹಿಮಾಲಯಃ ಅಸ್ತಿ ಎಂಬುದಕ್ಕೆ ಸಃ ಎಂಬ ತಚ್ಛಬ್ದದ ರೂಪವನ್ನು ಸೇರಿಸಿಕೊಂಡು ಅರ್ಥ ಮಾಡಿಕೊಳ್ಳುತ್ತೇವೆ. ಆತ್ಮಾ ಜಾನಾತಿ ಯತ್ ಪಾಪಂ ಎಂಬ ಪ್ರಯೋಗದಲ್ಲಿ ಯತ್ ಪಾಪಂ ತದ್ ಆತ್ಮಾ ಜಾನಾತಿ ಎಂದು ಅರ್ಥಮಾಡಿಕೊಳ್ಳುತ್ತೇವೆ. ಕೇವಲ ಯಚ್ಛಬ್ದದ ಪ್ರಯೋಗವಿದ್ದಾಗ ತಚ್ಛಬ್ದದ ಅಧ್ಯಾಹಾರ ಈ ಎರಡು ಪ್ರಕಾರಗಳಲ್ಲಿ ಆಗುತ್ತದೆ.

**ಯತ್ತದೂರ್ಜಿತಮತ್ಯುಗ್ರಂ ಕ್ಷಾತ್ರಂ ತೇಜೋಽಸ್ಯ ಭೂಪತೇಃ।**
**ದೀವ್ಯತಾಕ್ಷೈಸ್ತದಾನೇನ ನೂನಂ ತದಪಿ ಹಾರಿತಮ್॥**

**ಇತ್ಯಾದೌ ಚ ಯದ್ಯಪಿ ತದೋ ದ್ವಿರುಪಾದಾನಂ, ಸಕೃಚ್ಚ ಯದಃ, ತಥಾಪಿ ತತ್ರ ತಥೋಕ್ತ ಸಂಬಂಧದ್ವೈವಿಧ್ಯಾನತಿವೃತ್ತಿಃ। ತಥಾ ಹಿ ಯದಃ ಪ್ರಕ್ರಂಸ್ಯಮಾನ-ವಿಷಯೇಣ ತದಪೀತ್ಯನೇನ ತದಾ ಅಭಿಸಂಬಂಧಾಚ್ಛಾಬ್ದಃ। ಯತ್ತದಿತ್ಯಸ್ಯ ತು ಪ್ರಸಿದ್ಧತೇಜೋನಿಷ್ಠತಯಾ ಉಪಕಲ್ಪಿತೇನ ಯದಾ ಅಭಿಸಂಬಂಧಾದಾರ್ಥಃ**

**ಅನುವಾದ:**

"ಬಲವತ್ತಾದ ಮತ್ತು ಉಗ್ರವಾದ ಕ್ಷಾತ್ರತೇಜಸ್ಸು ಯಾವುದು ಈ ರಾಜನದಾಗಿತ್ತೋ ಅದನ್ನು ಇವನು ಪಗಡೆಯನ್ನಾಡುವಾಗ ಕಳೆದುಕೊಂಡು ಬಿಟ್ಟಿದ್ದಾನೆ" ಇತ್ಯಾದಿ ಪದ್ಯದಲ್ಲಿ ತಚ್ಛಬ್ದವನ್ನು ಎರಡು ಬಾರಿ ಪ್ರಯೋಗಿಸಲಾಗಿದೆ, ಯಚ್ಛಬ್ದವನ್ನು ಒಮ್ಮೆ ಮಾತ್ರ ಪ್ರಯೋಗಿಸಲಾಗಿದೆ. ಆದರೂ ಅದರಲ್ಲಿ ಮೇಲೆ ನಾವು ಹೇಳಿದ ಎರಡು ವಿಧದ ಸಂಬಂಧವನ್ನು ಮೀರಿ ಹೋಗಿಲ್ಲ. ಹೇಗೆಂದರೆ: ಮುಂದೆ ಬಂದಿರುವ 'ತದಪಿ' ಎಂಬಲ್ಲಿರುವ ತಚ್ಛಬ್ದದೊಡನೆ ಯದ್ ಎಂಬುದಕ್ಕೆ ಇರುವ ಅಭಿಸಂಬಂಧ ಶಾಬ್ದ. ಯತ್ತದ್ ಎಂಬಲ್ಲಿರುವ ತಚ್ಛಬ್ದಕ್ಕೆ ಪ್ರಸಿದ್ಧವಾಗಿದ್ದ ತೇಜಸ್ಸಿನಲ್ಲಿ ಇರುವಂತೆ ಕಲ್ಪಿತವಾದ ಯದ್ ಎಂಬುದರೊಡನೆ ಅಭಿಸಂಬಂಧವು ಸಿದ್ಧವಾಗುವುದರಿಂದ ಅದು ಆರ್ಥ ಉಪಕ್ರಮೋಪಸಂಹಾರ.

**ವಿವರಣೆ:**

ಶಾಬ್ದ ಮತ್ತು ಆರ್ಥ ಎಂದು ಉಪಕ್ರಮೋಪಸಂಹಾರವನ್ನು ಎರಡು ವಿಧವಾಗಿ ಹಿಂದೆ ವರ್ಣಿಸಲಾಯಿತು. ಪ್ರಕೃತ ಪದ್ಯದಲ್ಲಿ ಎರಡು ವಿಧದ ಉಪಕ್ರಮೋಪಸಂಹಾರಗಳೂ ಸೇರಿಕೊಂಡಿವೆ. ಇದು ಮೂರನೆಯ ವಿಧವೆಂದು ಭಾವಿಸಬೇಕಾಗಿಲ್ಲ ಎಂಬುದು ಗ್ರಂಥಕಾರನ ಆಶಯ.

**ಏವಂ ಚ ಯೋಽಯಮಿಹ "ಯೋಽಸೌ" ಇತ್ಯತ್ರ ಯದಃ ಕೇವಲಸ್ಯೈವ ಪ್ರಯೋಗಃ, ಸ ಕೇನಾಭಿಸಂಬಧ್ಯತಾಮ್? ನ ಹ್ಯತ್ರ ಮುಕ್ತಕೇ ತದಭಿಸಂಬಂಧಸಹಃ ಪ್ರಕ್ರಾಂತಃ ಕಶ್ಚಿದರ್ಥಃ ಸಂಭವತಿ ಯದಭಿಸಂಬಂಧೋಽಯಂ ಪರಿಕಲ್ಪ್ಯೇತ। ನ ಚ ಪ್ರಕ್ರಂಸ್ಯಮಾನಾಂಬಿಕಾ–ಕೇಸರಿವಿಷಯೋಪಕಲ್ಪಿತೇನ ತದಾ ಅಸ್ಯಾಭಿಸಂಬಂಧಃ ಸಂಭವೀ, ತದುಪಾದಾನ ಏವ ತತ್ಸಂಬಂಧಪ್ರತೀತಿದರ್ಶನಾತ್।**

**ಅನುವಾದ:**

ಈ ರೀತಿಯಾಗಿ (ಸಂರಂಭಃ ಕರಿಕೀಟ..... ಎಂಬ) ಈ ಪದ್ಯದಲ್ಲಿ ಕೇವಲ ಯಚ್ಛಬ್ದದ ಪ್ರಯೋಗವನ್ನು ಮಾಡಿದ್ದಾರೆ, ಆ ಯಚ್ಛಬ್ದವು ಯಾವುದರೊಡನೆ ಸಂಬಂಧವನ್ನು ಹೊಂದಬೇಕು? ಇದು ಮುಕ್ತಕವಾದ್ದರಿಂದ ಅದರ ಅಭಿಸಂಬಂಧವನ್ನು ಸೂಚಿಸುವ ಯಾವ ಬೇರೆ ಅರ್ಥವೂ ಇಲ್ಲಿ ಪ್ರಕ್ರಾಂತವಾಗಿಲ್ಲ, ಹಾಗೆ ಪ್ರಕ್ರಾಂತವಾಗಿದ್ದಿದ್ದರೆ ಅದರೊಡನೆ ಅಭಿಸಂಬಂಧವನ್ನು ಕಲ್ಪಿಸಬಹುದಾಗಿತ್ತು. ಮುಂದೆ ಉಪಾದಾನ ಮಾಡಲ್ಪಡುವ ಅಂಬಿಕಾಕೇಸರಿಯ (ಗೌರೀವಾಹನ ಸಿಂಹದ) ವಿಷಯದಲ್ಲಿ ಕಲ್ಪಿಸಿಕೊಳ್ಳಬಹುದಾದ ತಚ್ಛಬ್ದದೊಡನೆ ಈ ಯಚ್ಛಬ್ದಕ್ಕೆ ಸಂಬಂಧವೂ ಸಂಭವಿಸುವುದಿಲ್ಲ, ಅದರೊಡನೆ ತಚ್ಛಬ್ದವನ್ನು ಹೇಳಿದ್ದರೆ ಮಾತ್ರ ಆ ಸಂಬಂಧದ ಪ್ರತೀತಿಯು ಸಾಧ್ಯವಾದೀತು.

**ಇತರಥಾ "ಯತ್ಕೋಪಾಗ್ನೌ ಶಲಭತಾಂ ಲೇಭೇ ಕಾಮಃ ಶಿವೋಽವತಾತ್" ಇತ್ಯತ್ರಾಪಿ ಶಿವವಿಷಯತಯಾ ಉಪಕಲ್ಪಿತೇನ ತದಾ ತತ್ಸಂಬಂಧ ಪ್ರತೀತೌ ಸಂಗತಾರ್ಥತೈವ ಸ್ಯಾದಿತಿ ಅಯುಕ್ತ ಏವಾಯಂ ಯದಃ ಪ್ರಯೋಗಃ॥**

**ಮೀಲಿತಂ ಯದಭಿರಾಮತಾಧಿಕೇ ಸಾಧು ಚಂದ್ರಮಸಿ ಪುಷ್ಕರೈಃ ಕೃತಮ್।**
**ಉದ್ಯತಾ ಜಯಿನಿ ಕಾಮಿನೀಮುಖೇ ತೇನ ಸಾಹಸಮನುಷ್ಠಿತಂ ಪುನಃ॥**

**ಇತ್ಯತ್ರ ತು ಪಾದಯೋಃ ಪ್ರಮಾದಜಃ ಪೌರ್ವಾಪರ್ಯ–ವಿಪರ್ಯಯಃ ಏವಾಯುಕ್ತೋ ದ್ರಷ್ಟವ್ಯಃ, ನ ಯದೋ ಯಥೋಕ್ತವಿಷಯಾತಿಕ್ರಮಃ॥**

ಹೀಗೆ ಒಪ್ಪಿಕೊಳ್ಳದಿದ್ದರೆ, ಯಾರ ಕೋಪಾಗ್ನಿಯಲ್ಲಿ ಕಾಮನು ಮಿಡತೆಯಾದನೋ ಶಿವನು ನಿಮ್ಮನ್ನು ಕಾಪಾಡಲಿ ಎಂಬಲ್ಲಿಯೂ ಶಿವವಿಷಯದಲ್ಲಿ ಉಪಕಲ್ಪಿತವಾಗುವ ತಚ್ಛಬ್ದದೊಡನೆ ಯಚ್ಛಬ್ದಕ್ಕೆ ಅಭಿಸಂಬಂಧವು ತೋರುವುದೆಂದು ಅರ್ಥಸಾಂಗತ್ಯವುಂಟು ಎನ್ನಬೇಕಾದೀತು. ಆದ್ದರಿಂದ (ಸಂರಂಭಃ ಕರಿಕೀಟ..... ಎಂಬಲ್ಲಿ ಮಾಡಿರುವ ಕೇವಲ) ಯಚ್ಛಬ್ದದ ಪ್ರಯೋಗವು ಅಸಾಧುವೇ ಆಗಿದೆ.

"ಸೌಂದರ್ಯದಲ್ಲಿ ಅಧಿಕನಾದ ಚಂದ್ರನು ಉದಯಿಸಿದಾಗ ತಾವರೆಗಳು ಮುಚ್ಚಿಕೊಂಡದ್ದು ಸರಿ. ಆದರೆ ತನ್ನನ್ನು ಜಯಿಸಬಲ್ಲ ಸುಂದರಿಯ ಮುಖ ಇದ್ದಾಗಲೂ ಮೇಲೆದ್ದ ಚಂದ್ರನು ಮಾಡಿದ್ದು ಮಾತ್ರ ಸಾಹಸ" ಎಂಬ ಪದ್ಯದಲ್ಲಿ ಕವಿಯ ಅನವಧಾನತೆಯಿಂದ ಪಾದಗಳು ಹಿಂದುಮುಂದಾಗಿವೆ ಎಂಬುದು ಮಾತ್ರ ತಪ್ಪು. ಯಚ್ಛಬ್ದದ ವಿಷಯದಲ್ಲಿ ಮಾಡಿದ ನಿಯಮದ ಭಂಗವೇನೂ ಈ ಪದ್ಯದಲ್ಲಿ ಉಂಟಾಗಿಲ್ಲ.

**ನನು ಕೇನೇದಮುಕ್ತಂ ಯದಃ ಕೇವಲಸ್ಯೈವಾತ್ರ ಪ್ರಯೋಗೋ ನ ತದ ಇತಿ? ಯಾವತಾ ತದಭಿನ್ನಾರ್ಥೋಽತ್ರಾದಶ್ಶಬ್ದಃ ಪ್ರಯುಕ್ತ ಏವಾಸಾವಿತಿ। ಅತಶ್ಚ ತದಪೇಕ್ಷಯಾ ವಾಕ್ಯಾರ್ಥವಿಶ್ರಾಂತೇರ್ನ ಕಶ್ಚಿದುಕ್ತದೋಷಾವಕಾಶಃ। ಸಾಧೋ, ದುರಾಶೈಷಾ। ತಸ್ಯ ತದಭಿನ್ನಾರ್ಥತ್ವಾಸಿದ್ಧೇಃ। ತತ್ಸಿದ್ಧೌ ಹಿ ಪ್ರತೀತೇರ್ನಿರಾಕಾಂಕ್ಷತೈವ ಸ್ಯಾತ್। ನ ತು ವಿವಾದಃ। ಯಥಾ "ನ ಕೇವಲಂ ಯೋ ಮಹತೋಽಪಭಾಷತೇ ಶೃಣೋತಿ ತಸ್ಮಾದಪಿ ಯಃ ಸ ಪಾಪಭಾಕ್" ಇತ್ಯತ್ರ।**

**ಅನುವಾದ:**

ಈ ಪದ್ಯದಲ್ಲಿ ಕೇವಲ ಯಚ್ಛಬ್ದದ ಪ್ರಯೋಗವಿದೆ, ತಚ್ಛಬ್ದವೇ ಇಲ್ಲ ಎಂದು ಹೇಳಿದವರು ಯಾರು? ಏಕೆಂದರೆ ತಚ್ಛಬ್ದದ ಅರ್ಥವನ್ನೇ ಹೊಂದಿರುವ ಅದಸ್ ಶಬ್ದವನ್ನು ಪ್ರಯೋಗಿಸಿದ್ದಾನಲ್ಲ, ಅಸೌ ಎಂದು! ಆದ್ದರಿಂದ ಅದಸ್ ಶಬ್ದದ ಅರ್ಥದಿಂದ ವಾಕ್ಯಾರ್ಥವು ಪೂರ್ಣವಾಗುವುದರಿಂದ ನೀವು ಹೇಳಿದ ದೋಷಕ್ಕೆ ಅವಕಾಶವೇ ಇಲ್ಲ.

ಅಯ್ಯಾ, ಸಾಧು! ನಿನ್ನದು ದುರಾಶೆ ಅಷ್ಟೆ. ಅದಸ್ ಶಬ್ದಕ್ಕೆ ತಚ್ಛಬ್ದದ ಸಮಾನಾರ್ಥತ್ವವು ಎಂದೂ ಸಿದ್ಧಿಸದು. ಅದು ಸಿದ್ಧಿಸಿದ್ದರೆ ಪ್ರತೀತಿಯು ನಿರಾಕಾಂಕ್ಷ (ಪೂರ್ಣ)ವೇ ಆಗುತ್ತಿತ್ತು. ಆಗ ವಿವಾದವೇ ಇರುತ್ತಿರಲಿಲ್ಲ.

"ದೊಡ್ಡವರ ಬಗೆಗೆ ಕೆಟ್ಟಮಾತುಗಳನ್ನು ಆಡುವವನು ಮಾತ್ರವಲ್ಲ, ಅವನ ಮಾತನ್ನು ಯಾವನು ಕೇಳುವನೋ ಅವನೂ ಪಾಪಭಾಜನನಾಗುತ್ತಾನೆ" ಎಂಬ ಉದಾಹರಣೆಯಲ್ಲಿ ಆಗುವಂತೆ.

(ತದ್ ಮತ್ತು ಅದಸ್ ಅಭಿನ್ನಾರ್ಥವೆ?)

**ಕಿಂಚ ತದಭಿನ್ನಾರ್ಥತ್ವೇ ಅಸ್ಯೋಪಗಮ್ಯಮಾನೇ–**
**ಅಸೌ ಮರುಚ್ಚುಂಬಿತಚಾರುಕೇಸರಃ ಪ್ರಸನ್ನತಾರಾಧಿಪಮಂಡಲಾಗ್ರಣೀಃ।**
**ವಿಯುಕ್ತರಾಮಾತುರದೃಷ್ಟಿವೀಕ್ಷಿತೋ ವಸಂತಕಾಲೋ ಹನುಮಾನಿವಾಗತಃ॥**
**ಇತ್ಯತ್ರ ಮುಕ್ತಕೇ ಯಚ್ಛಬ್ದಪರಾಮರ್ಶಾಪೇಕ್ಷಾ**
**ಪ್ರಸಜ್ಯೇತ, ತಸ್ಯ ಯಥೋಕ್ತವಸ್ತುವಿಷಯಾತ್ವಾಸಂಭವಾತ್।**

**ಅನುವಾದ:**

ತಚ್ಛಬ್ದಕ್ಕೂ ಅದಸ್ ಶಬ್ದಕ್ಕೂ ಅರ್ಥದಲ್ಲಿ ಭೇದವೇ ಇಲ್ಲ ಎಂದೊಪ್ಪಿಕೊಂಡರೆ–

ಈ ವಸಂತಕಾಲವು ಹನುಮಂತನಂತೆ ಬಂದಿದೆ.

| | | |
|---|---|---|
| ಮರುಚ್ಚುಂಬಿತಚಾರುಕೇಸರಃ | ೧) | ಗಾಳಿಯಿಂದ ಚುಂಬಿತವಾದ ಸುಂದರ ಕೇಸರ ವೃಕ್ಷಗಳನ್ನುಳ್ಳದ್ದು. |
| | ೨) | ವಾಯುದೇವನಿಂದ ಚುಂಬಿಸಲ್ಪಡುವ ಸುಂದರ ತಲೆಗೂದಲನ್ನು ಹೊಂದಿರುವವನು. |
| ಪ್ರಸನ್ನತಾರಾಧಿಪಮಂಡಲಾಗ್ರಣೀಃ | ೧) | ಪ್ರಸನ್ನವಾದ ಚಂದ್ರ ಮಂಡಲದಿಂದ ಶೋಭಿತವಾದುದು. |
| | ೨) | ಪ್ರಸನ್ನನಾಗಿದ್ದ ಸುಗ್ರೀವನ ಸೈನ್ಯದ ಮುಂಚೂಣಿಯಲ್ಲಿರುವವನು. |
| ವಿಯುಕ್ತರಾಮಾತುರದೃಷ್ಟಿವೀಕ್ಷಿತಃ | ೧) | ವಿಯೋಗಿನಿಯರಿಂದ ಸಾತಂಕವಾಗಿ ಕಣ್ಣುಗಳಿಂದ ನೋಡಲ್ಪಟ್ಟದ್ದು |
| | ೨) | ಸೀತಾವಿಯುಕ್ತನಾಗಿದ್ದ ರಾಮನಿಂದ ಆತುರ ದೃಷ್ಟಿಯಿಂದ ನೋಡಲ್ಪಟ್ಟವನು. |

ಎಂಬ ಮುಕ್ತಕರೂಪದ ಉದಾಹರಣೆಯಲ್ಲಿ ಯಚ್ಛಬ್ದದ ಉಪಸಂಹಾರದ ಅಪೇಕ್ಷೆಯ ಪ್ರಸಂಗ ಬಂದೀತು. (ಏಕೆಂದರೆ ಈ ಮತದಲ್ಲಿ) ಅದಸ್ ಶಬ್ದಕ್ಕೂ ತಚ್ಛಬ್ದಕ್ಕೂ ಭೇದವು ಸಂಭವಿಸದು.

**ವಿವರಣೆ:**

ತಚ್ಛಬ್ದಕ್ಕೂ ಅದಸ್ ಶಬ್ದಕ್ಕೂ ಅರ್ಥವು ಒಂದೇ ಎಂದರೆ ಆಗ ತಚ್ಛಬ್ದದಂತೆ ಅದಸ್ ಶಬ್ದಕ್ಕೂ ಯಚ್ಛಬ್ದಾಪೇಕ್ಷೆ ಬರುತ್ತದೆ. ಆಗ ಅಸೌಮರುಚ್ಚುಂಬಿತ..... ಇತ್ಯಾದಿ ಪದ್ಯದಲ್ಲೂ ಯಚ್ಛಬ್ದದ ಪ್ರಯೋಗ ಬೇಕಾಗುತ್ತದೆ.

**ಯಸ್ಯ ಪ್ರಕೋಪಶಿಖಿನಾ ಪರಿದೀಪಿತೋಽಭೂದ್**
**ಉತ್ಫುಲ್ಲಕಿಂಶುಕತರುಪ್ರತಿಮೋ ಮನೋಭೂಃ।**
**ಯೋಽಸೌ ಜಗತ್ತ್ರಯಲಯಸ್ಥಿತಿಸರ್ಗಹೇತುಃ**
**ಪಾಯಾತ್ ಸ ವಃ ಶಶಿಕಲಾಕಲಿತಾವತಂಸಃ॥**
**ಇತ್ಯತ್ರ ಚ ತಚ್ಛಬ್ದಪರಾಮರ್ಶಸ್ಯ ಪೌನರುಕ್ತ್ಯಂ ಸ್ಯಾತ್।**

**ಅನುವಾದ:**

"ಯಾವನ ಕ್ರೋಧಾಗ್ನಿಯಿಂದ ಉರಿದುಹೋದ ಮನ್ಮಥನು ಅರಳಿದ ಹೂವುಗಳಿಂದ ತುಂಬಿದ ಮುತ್ತುಗದ ಮರದಂತೆ ಆದನೋ, ಯಾವನು ಮೂರು ಲೋಕಗಳ ಪ್ರಳಯ, ಸ್ಥಿತಿ ಮತ್ತು ಸೃಷ್ಟಿಗಳಿಗೆ ಕಾರಣನೋ ಆ ಚಂದ್ರಕಲಾಭರಣನಾದ ಶಿವನು ನಿಮ್ಮನ್ನು ಕಾಪಾಡಲಿ"

ಎಂಬಲ್ಲಿ ತಚ್ಛಬ್ದದಿಂದ ಮತ್ತೆ ಪರಾಮರ್ಶನವನ್ನು ಮಾಡಿರುವುದರಿಂದ ಪೌನರುಕ್ತ್ಯ ಎಂದು ಹೇಳಬೇಕಾದೀತು.

**ವಿವರಣೆ:**

ತಚ್ಛಬ್ದಕ್ಕೂ ಅದಸ್ ಶಬ್ದಕ್ಕೂ ಸಮಾನಾರ್ಥತ್ವವನ್ನು ಒಪ್ಪಿಕೊಂಡರೆ ಈ ಪದ್ಯದಲ್ಲಿ ಯೋಽಸೌ ಎಂಬಲ್ಲಿ ಅದಸ್ ಶಬ್ದದ ಪ್ರಯೋಗವಿರುವುದರಿಂದ ಮತ್ತೆ ಸಃ ಎಂದು ತಚ್ಛಬ್ದವನ್ನೂ ಪ್ರಯೋಗಿಸಿರುವುದರಿಂದ ಪುನರುಕ್ತ ಎಂಬ ದೋಷವನ್ನು ಹೇಳಬೇಕಾಗುವುದು, ವಸ್ತುತಃ ಇದು ನಿರ್ದೋಷ.

> **ಕಥಂ ತರ್ಹಿ ಯತ್ತದೋರ್ವಿಷಯೇ ಕವಿಭಿಃ ಇದಮೇತದದಃ ಪ್ರಭೃತಯಃ ಶಬ್ದಾಃ ಪ್ರಯುಕ್ತಾಃ ಪ್ರಯುಜ್ಯಂತೇ ಚ? ನ ಹ್ಯಸತಿ ಪರ್ಯಾಯತ್ವೇ ತಸ್ಮಿನ್ನೇವಾರ್ಥೇ ಪದಾಂತರಪ್ರಯೋಗಮಾದ್ರಿಯಂತೇ ಸ್ವಸ್ಥಚೇತಸ ಇತಿ ಪ್ರಯೋಗಪ್ರವಾಹಪ್ರಾಮಾಣ್ಯಾದ್ ಏಷಾಂ ತದಭಿನ್ನಾರ್ಥತಾ ಪರಿಕಲ್ಪ್ಯತೇ। ನ ಹಿ ತಮ್ ಅಂತರೇಣ ಶಬ್ದಾನಾಂ ತದತದರ್ಥನಿಶ್ಚಯನಿಬಂಧನಮ್ ಅನ್ಯತ್ ಕಿಂಚಿದುತ್ಪಶ್ಯಾಮಃ।**

**ಅನುವಾದ:**

ಹಾಗಾದರೆ ಕವಿಗಳು ಯದ್–ತದ್ ಶಬ್ದಗಳ ವಿಷಯದಲ್ಲಿ ಇದಮ್, ಏತದ್, ಅದಸ್ ಮುಂತಾದವನ್ನು ಹೇಗೆ (ಅಥವಾ ಏಕೆ) ಪ್ರಯೋಗಿಸಿದರು ಮತ್ತು ಪ್ರಯೋಗಿಸುತ್ತಿದ್ದಾರೆ? ಪದಗಳು ಪರ್ಯಾಯಪದಗಳು ಆಗದಿದ್ದರೆ ಅದೇ ಅರ್ಥದಲ್ಲಿ ಇನ್ನೊಂದರ ಪ್ರಯೋಗವನ್ನು ವಿಶದಬುದ್ಧಿಯುಳ್ಳವರು ಒಪ್ಪಿಕೊಳ್ಳುವುದಿಲ್ಲ ಎಂಬ ಕಾರಣದಿಂದ ಪ್ರಯೋಗ ಪ್ರವಾಹವನ್ನು ಪ್ರಮಾಣವೆಂದು ಒಪ್ಪಿ ಈ ಪದಗಳಿಗೆ (ಎಂದರೆ ಇದಮ್, ಏತದ್, ಅದಸ್ ಎಂಬ ಸರ್ವನಾಮಗಳಿಗೆ) ತದ್ ಎಂಬುದರ ಸಮಾನಾರ್ಥತ್ವವಿದೆ ಎಂದು ಕಲ್ಪಿಸಬೇಕು. ಶಬ್ದಕ್ಕೆ ಈ ಅರ್ಥ, ಆ ಅರ್ಥವಲ್ಲ ಎಂದು ಹೇಳಲು, ಪ್ರಯೋಗವನ್ನು ಬಿಟ್ಟು ಬೇರೆ ಯಾವ ಪ್ರಮಾಣವನ್ನೂ ನಾವು ಕಾಣೆವು.

> **ಅತ್ರೋಚ್ಯತೇ। ಉಕ್ತನಯೇನ ತಾವತ್ ತೇಷಾಂ ತದಭಿನ್ನಾರ್ಥತಾನುಪಪತ್ತಿರುಪಪಾದಿತೈವ। ಯದಿ ತು ತಾಮ್ ಅಪಹ್ನುತ್ಯ ಗತಾನುಗತಿಕತಯಾ–**
>
> **"ಯೋಽವಿಕಲ್ಪಮಿದಮರ್ಥಮಂಡಲಂ ಪಶ್ಯತೀಶ ನಿಖಿಲಂ ಭವದ್ವಪುಃ।**
> **ಸ್ವಾತ್ಮಪಕ್ಷಪರಿಪೂರಿತೇ ಜಗತ್ಯಸ್ಯ ನಿತ್ಯಸುಖಿನಃ ಕುತೋ ಭಯಮ್॥"**

**ಇತಿ, "ಸ್ಮೃತಿಭೂಃಸ್ಮೃತಿಭೂರ್ವಿಹಿತೋ ಯೇನಾಸೌ ರಕ್ಷತಾತ್ ಕ್ಷತಾದ್ ಯುಷ್ಮಾನ್।" ಇತ್ಯಾದಿ ಪ್ರಯೋಗದರ್ಶನಮಾತ್ರಾನುರೋಧೇನ ತೇಷಾಂ ಸಾ ಪರಿಕಲ್ಪ್ಯತೇ, ತರ್ಹಿ ಯಥಾದರ್ಶನಂ ವ್ಯವಹಿತಾನಾಮೇವ, ಅವ್ಯವಹಿತತ್ವೇ ವಾ ಭಿನ್ನವಿಭಕ್ತಿಕಾನಾಮೇವ ಸಾ ಪರಿಕಲ್ಪ್ಯತಾಮ್। ಇತರಥಾ ತು ತೇಷಾಂ ತತ್ಪರಿಕಲ್ಪನಮನ್ಯಾಯ್ಯಮೇವ।**

**ತತ್ರ ಹಿ ಪ್ರತ್ಯುತ ಸಾ ತಯೋಸ್ತದಿತರ–ಪರಾಮರ್ಶವ್ಯಪೇಕ್ಷಾ ಸುತರಾಮುನ್ಮಜ್ಜತಿ। ಯಥಾ– "ಯದೇತಚ್ಚಂದ್ರಾಂತರ್ಜಲದಲವಲೀಲಾಂ ವಿತನುತೇ ತದಾಚಷ್ಟೇ ಲೋಕಃ ಇತಿ, ಸೋಽಯಂ ವಟಃ ಶ್ಯಾಮ ಇತಿ ಪ್ರಕಾಶಃ ತ್ವಯಾ ಪುರಸ್ತಾದುಪಯಾಚಿತೋ ಯಃ ಇತ್ಯಾದೌ ಚ।**

**ಅನುವಾದ:**

(ಈ ಪೂರ್ವಪಕ್ಷಕ್ಕೆ) ಉತ್ತರವನ್ನು ಹೇಳುತ್ತೇವೆ. ಮೇಲೆ ಹೇಳಿದ ರೀತಿಯಿಂದ ಇದಮಾದಿಗಳಿಗೆ ತಚ್ಛಬ್ದದ ಅಭಿನ್ನಾರ್ಥತ್ವದ ಅನುಪಪತ್ತಿಯನ್ನು ಮೊದಲೇ ತೋರಿಸಿಕೊಟ್ಟಿದ್ದೇವೆ. ಆದರೂ ಅದನ್ನು ಬದಿಗಿರಿಸಿ ಅಂಧಪರಂಪರಾನ್ಯಾಯದಿಂದ–

"ಹೇ ಈಶ್ವರ, ಯಾವನು ನಿರ್ವಿಕಲ್ಪವಾಗಿ ಈ ಜಗತ್ತನ್ನು ನಿನ್ನ ಶರೀರವೇ ಎಂದು ಕಂಡುಕೊಳ್ಳುವನೋ ಅಂಥ ನಿತ್ಯಸುಖಿಗೆ ತನ್ನ ಪಕ್ಷದಿಂದಲೇ ತುಂಬಿರುವ ಈ ಜಗತ್ತಿನಲ್ಲಿ ಯಾರಿಂದ ಭಯವುಂಟಾದೀತು?"

"ಯಾವನು ಕಾಮನನ್ನು ಕೇವಲ ನೆನಪಿನ ವಸ್ತುವನ್ನಾಗಿ ಮಾಡಿಬಿಟ್ಟನೋ ಅವನು ನಿಮ್ಮನ್ನು ಅಪಾಯದಿಂದ ರಕ್ಷಿಸಲಿ" ಇತ್ಯಾದಿ ಪ್ರಯೋಗದರ್ಶನಮಾತ್ರವನ್ನು ನೋಡಿ ಆ ಇದಮಾದಿಗಳಿಗೆ ತಚ್ಛಬ್ದಾಭಿನ್ನಾರ್ಥತ್ವವನ್ನು ನೀವು ಕಲ್ಪಿಸುವುದಾದರೆ, ದರ್ಶನಾನುಸಾರವಾಗಿ ವ್ಯವಹಿತವಾದವುಗಳಿಗೆ ಮಾತ್ರ, ಅವ್ಯವಹಿತವಾಗಿದ್ದಾಗ ಬೇರೆ ವಿಭಕ್ತಿಯಲ್ಲಿ ಪ್ರಯುಕ್ತವಾದವುಗಳಿಗೆ ಮಾತ್ರ ಅಭಿನ್ನಾರ್ಥತ್ವವನ್ನು ಕಲ್ಪಿಸಿರಿ. ಹಾಗಿಲ್ಲದ ಸಂದರ್ಭದಲ್ಲಿ ಇದಮಾದಿಗಳಿಗೆ ತಚ್ಛಬ್ದಾಭಿನ್ನಾರ್ಥತ್ವವನ್ನು ಕಲ್ಪಿಸುವುದು ನ್ಯಾಯ ಸಂಮತವಲ್ಲ. ಹಾಗಾದಾಗ ಅಪೇಕ್ಷಿತಕ್ಕೆ ವಿರುದ್ಧವಾಗಿ ಯತ್ತಚ್ಛಬ್ದಗಳಿಗೆ ಪರಸ್ಪರ ಇನ್ನೊಂದರ ಆಕಾಂಕ್ಷೆಯು ಎದ್ದು ನಿಲ್ಲುತ್ತದೆ. ಉದಾಹರಣೆ "ಯದೇತತ್..... ತದಾಚಷ್ಟೇ (ಚಂದ್ರನ ಮಧ್ಯದಲ್ಲಿ ಯಾವುದೊಂದು ಮೋಡದ ಹಾಗೆ ಆಟ ಆಡುತ್ತಿದೆ, ಅದನ್ನು ಲೋಕವು ಹೀಗೆನ್ನುತ್ತದೆ).

ಇನ್ನೊಂದು ಉದಾಹರಣೆ– ಸೋಽಯಂ ವಟಃ..... ಯಃ (ನೀನು ಯಾವ ಆಲದ ಮರವನ್ನು ಹಿಂದೆ ಯಾಚಿಸಿದ್ದೆಯೋ ಆ ಶ್ಯಾಮವೆಂಬ ಹೆಸರಿನ ವಟವೃಕ್ಷವು ಇದು)– ಇತ್ಯಾದಿಗಳಲ್ಲಿ (ಏತದ್ ಮತ್ತು ಇದಂ ಶಬ್ದಗಳ ಪ್ರಯೋಗವಿದ್ದರೂ ಆಕಾಂಕ್ಷಾಪೂರ್ತಿಗಾಗಿ ಮತ್ತೆ ತಚ್ಛಬ್ದದ ಪ್ರಯೋಗವಿದೆ.)

**ನ ಚಾಸಾವಿಹಾವಶ್ಯಂ ಪ್ರಯೋಕ್ತವ್ಯಃ ಸನ್ ಪ್ರಯುಕ್ತ ಇತಿ ತದವಸ್ಥ ಏವ ದೋಷಾವಕಾಶಃ। ತಸ್ಮಾದಪೇತಪ್ರಕ್ರಾಂತಸಂಬಂಧಸಹಾಯಸ್ಯಾಸ್ಯ ಯದೋಽನುಪಪನ್ನಪ್ರಕ್ರಂಸ್ಯಮಾನವಸ್ತು–**

**ಸಮನ್ವಯಸ್ಯ ಏಕಾಕಿನಃ ಸಾರ್ಥಭ್ರಷ್ಟಸ್ಯೇವ ತಪಸ್ವಿನಃಪಥಿಕಸ್ಯ ಸನ್ಮಾರ್ಗೋಪದೇಶಕಂ ತಚ್ಛಬ್ದಾಧ್ಯಾಹಾರಮೇವೈಕಂ ಶರಣಮಂತರೇಣ ನಾಪರೋऽಭಿಮತಾರ್ಥಸಂಗಮೋಪಾಯಃ ಸಂಭವತಿ।**

**ಅನುವಾದ:**

(ಸಂರಂಭಃ ಕರಿಕೀಟ.....) ಇತ್ಯಾದಿ ಪದ್ಯದಲ್ಲಿ ಅವಶ್ಯವಾಗಿ ಪ್ರಯೋಗಿಸಬೇಕಾಗಿದ್ದ ತಚ್ಛಬ್ದವನ್ನು ಪ್ರಯೋಗಿಸಿಲ್ಲ ಎಂಬ ಕಾರಣದಿಂದ ದೋಷಾವಕಾಶವು ಹಾಗೇ ಉಳಿದುಕೊಂಡಿದೆ. ಆದ್ದರಿಂದ ಈ ಪದ್ಯದಲ್ಲಿ ಇರುವ 'ಯದ್' ಶಬ್ದವು ಪ್ರಕ್ರಾಂತಸಂಬಂಧದ ಸಹಾಯವನ್ನೂ ಕಳೆದುಕೊಂಡಿದ್ದು ಅದಕ್ಕೆ ಮುಂದೆ ಹೇಳಲಾಗುವ ವಸ್ತುವಿನ ಸಮನ್ವಯವೆನ್ನುವುದೂ ಹೊಂದುವುದಿಲ್ಲ. ಆ 'ಯದ್' ಶಬ್ದವು ತನ್ನ ಗುಂಪಿನಿಂದ ತಪ್ಪಿಸಿಕೊಂಡು ಹೋಗಿ ಅಲೆಯುವ ಪರದೇಶಿ ಪಥಿಕನಂತಾಗಿಬಿಟ್ಟಿದೆ. ಸರಿಯಾದ ದಾರಿಯನ್ನು ತೋರಿಸುವ ಏಕಮಾತ್ರ ರಕ್ಷಕ ಎಂದರೆ ಇಲ್ಲಿ ತಚ್ಛಬ್ದದ ಅಧ್ಯಾಹಾರ. ಅದನ್ನು ಬಿಟ್ಟರೆ, ವಿವಕ್ಷಿತಾರ್ಥವನ್ನು ಹೊಂದಿಸುವುದಕ್ಕೆ ಬೇರೆ ಯಾವ ಉಪಾಯವೂ ಇಲ್ಲಿ ಸಿಕ್ಕದು.

**ಸ ಚೈವಂವಿಧೇಷು ಸೂಕ್ತಿರತ್ನೇಷು ಕಲಂಕಾಯಮಾನೋ**
**ಮನಾಗಪಿ ನ ಕಾವ್ಯಮಾಣಿಕ್ಯವೈಕಟಿಕಾನಾಂ ಸಚೇತಸಾಂ**
**ಮನಾಂಸ್ಯಾವರ್ಜಯಿತುಮಲಮ್– ಇತಿ।**
**ಅನುಕ್ತ್ವೈವ ಪರಾಮೃಶ್ಯಂ ಪ್ರಯೋಗೋ ಯತ್ರ ಯತ್ತದೋಃ।**
**ನಿರಂತರಃ ಪುನಸ್ತತ್ರ ತಯೋರುಕ್ತಿರ್ನ ದುಷ್ಯತಿ॥**
**ತಯೋರ್ನಿರಂತರೋಪಾತ್ತೇಷ್ವಿದಮೇತದದಸ್ಸು ಚ।**
**ತಯೋಸ್ತೇಷಾಂ ಚ ನಾಪೇಕ್ಷಾ ತೇಷ್ವಸತ್ಸ್ವಿವ ಶಾಮ್ಯತಿ॥**
**ಉದಾಹರಣಜಾತಂ ಯತ್ ತತ್ಸಾಂಕರ್ಯಸಮುದ್ಭವಮ್।**
**ತಸ್ಯ ದಿಙ್ಮಾತ್ರಮಸ್ಮಾಭಿರುಕ್ತಂ ವಿಸ್ತರಭೀರುಭಿಃ॥ ಇತಿಸಂಗ್ರಹಶ್ಲೋಕಾಃ।**

**ಅನುವಾದ:**

ಈ ಪ್ರಕಾರದ ಸೂಕ್ತಿರತ್ನಗಳಲ್ಲಿ ಆ ದೋಷವು ಕಲಂಕದಂತೆ ಕಾಣಿಸಿಕೊಂಡು ಕಾವ್ಯಮಾಣಿಕ್ಯರಹಸ್ಯವನ್ನರಿತ ಸಹೃದಯರ ಮನಸ್ಸನ್ನು ಸಂತೋಷಗೊಳಿಸಲಾರದು.

ಪರಾಮರ್ಶಕ್ಕೆ ಯೋಗ್ಯವಾದ ಅರ್ಥವನ್ನು (ಶಬ್ದದಿಂದ) ಹೇಳದೆ ಯತ್–ತತ್ ಶಬ್ದಗಳನ್ನು ಒಟ್ಟಿಗೆ ಪ್ರಯೋಗಿಸಿದ ಸಂದರ್ಭದಲ್ಲಿ ಅವುಗಳ ಪ್ರಯೋಗವು ದೋಷವಲ್ಲ. (ಉದಾಹರಣೆ– ಯತ್ತದೂರ್ಜಿತಮ್..... ಇತ್ಯಾದಿ). ಯತ್–ತತ್ ಶಬ್ದಗಳೊಡನೆ ಜೋಡಿಸಿಕೊಂಡಂತೆ ಇದಮ್, ಏತದ್, ಅದಸ್ ಎಂಬ ಶಬ್ದಗಳ ಪ್ರಯೋಗವು ಇದ್ದಾಗಲೂ ಯತ್–ತತ್ ಶಬ್ದಗಳ ಆಕಾಂಕ್ಷೆಯು ಶಾಂತವಾಗುವುದಿಲ್ಲ. (ಎಂದರೆ ಅಲ್ಲಿ ಮತ್ತೆ ಯತ್–ತತ್ ಪ್ರಯೋಗವು ಆವಶ್ಯಕ).

ಅಂಥ ಸಂದರ್ಭಗಳ ಸಾಂಕರ್ಯದಿಂದ ಉಂಟಾಗುವ ನಾನಾ ಉದಾಹರಣೆಗಳ ರಾಶಿಯ ದಿಕ್ಪ್ರದರ್ಶನವನ್ನು ಮಾತ್ರ ವಿಸ್ತರಭೀರುಗಳಾದ ನಾವು ಮಾಡಿದ್ದೇವೆ. ಇವು (ಮೂರು) ಸಂಗ್ರಹ ಶ್ಲೋಕಗಳು.

(ಸಾಮರ್ಥ್ಯವಿದ್ದರೇ ಸಮಾಸ)

**ಅಪಿ ಚ 'ಅಂಬಿಕಾಕೇಸರೀ' ಇತ್ಯತ್ರ ಷಷ್ಠೀಸಮಾಸೋ ನೋಪಪದ್ಯತೇ, ಯತಃ ಸರ್ವೇಷಾಮ್ ಏವ ಸಮಾಸಾನಾಂ ತಾವತ್ ಪ್ರಾಯೇಣ ವಿಶೇಷಣವಿಶೇಷ್ಯಾಭಿಧಾಯಿಪದೋಪರಚಿತ–ಶರೀರತ್ವಂ ನಾಮ ಸಾಮಾನ್ಯಂ ಲಕ್ಷಣಮ್ ಆಚಚಕ್ಷಿರೇ ವಿಚಕ್ಷಣಾಃ। ಇತರಥಾ ತೇಷಾಂ ಸಮರ್ಥತಾನುಪಪತ್ತೇಃ।**

**ಅನುವಾದ:**

ಮತ್ತು ಈ (ಸಂರಂಭಃ ಕರಿಕೀಟ..... ಇತ್ಯಾದಿ) ಪದ್ಯದಲ್ಲಿ ಅಂಬಿಕಾಕೇಸರೀ ಎಂದು ಷಷ್ಠೀಸಮಾಸವನ್ನು ಮಾಡಿರುವುದು ಸರಿಯಲ್ಲ. ಏಕೆಂದರೆ ಎಲ್ಲ ಸಮಾಸಗಳೂ ಪ್ರಾಯಿಕವಾಗಿ ವಿಶೇಷಣವಿಶೇಷ್ಯಗಳನ್ನು ಹೇಳುವ ಪದಗಳಿಂದ ಕೂಡಿದ ಶರೀರವನ್ನು ಹೊಂದಿರುತ್ತವೆ ಎಂದು (ಸಮಾಸದ) ಸಾಮಾನ್ಯಲಕ್ಷಣವನ್ನು ವಿಚಕ್ಷಣರು ಹೇಳಿರುತ್ತಾರೆ. ಹಾಗೆ ಒಪ್ಪಿಕೊಳ್ಳದಿದ್ದರೆ ಆ ಪದಗಳಿಗೆ ಸಾಮರ್ಥ್ಯವೇ ಹೊಂದುವುದಿಲ್ಲ.

**ವಿವರಣೆ:**

ಯಾವುದೇ ಸಮಾಸವನ್ನು ಮಾಡಬೇಕಾದರೆ, ಸಂಬಂಧಿಸಿದ ಪದಾರ್ಥಗಳಿಗೆ ಸಾಮರ್ಥ್ಯ (ಎಂದರೆ ಸಂಗತಾರ್ಥತೆ, ಅರ್ಥಸಾಂಗತ್ಯ) ಇರಬೇಕು. ಇದನ್ನೇ ಪಾಣಿನಿಯು ಸಮರ್ಥಃ ಪದವಿಧಿಃ ಎಂಬ ಸೂತ್ರದಿಂದ ವಿಧಿಸಿದ್ದಾನೆ. ಅರ್ಥಸಾಂಗತ್ಯವು ಪ್ರಾಯೇಣ (ಎಂದರೆ ಬಹುಮಟ್ಟಿಗೆ) ವಿಶೇಷಣ ವಿಶೇಷ್ಯಭಾವವನ್ನು ಅವಲಂಬಿಸುತ್ತದೆ. ಪ್ರಾಯೇಣ ಎಂದು ಗ್ರಂಥಕಾರನು ಹೇಳಿರುವುದೇಕೆಂದರೆ ದ್ವಂದ್ವಸಮಾಸದಲ್ಲಿ ಸಮಾಸಘಟಕ ಪದಗಳ ಅರ್ಥಗಳಿಗೆ ಪರಸ್ಪರ ವಿಶೇಷಣವಿಶೇಷ್ಯಭಾವವು ಇರುವುದಿಲ್ಲ.

**ಸ ಚ ವಿಶೇಷಣವಿಶೇಷ್ಯಭಾವೋ ದ್ವಿಧೈವ ಸಂಭವತಿ। ಸಮಾನಾಧಿಕರಣೋ ವ್ಯಧಿಕರಣಶ್ಚೇತಿ। ತತ್ರಾದ್ಯಃ ಕರ್ಮಧಾರಯಸ್ಯ ವಿಷಯಃ। ಯತ್ರ ತು ದ್ವೇ ಬಹೂನಿ ವಾ ಪದಾನಿ ಅನ್ಯಪದಸ್ಯಾರ್ಥೇ ವಿಶೇಷಣಭಾವಂ ಭಜಂತೇ ಸಾ ಬಹುವ್ರೀಹೇಃ ಸರಣಿಃ। ತತ್ರೈವ ಯದಾ ಸಂಖ್ಯಾಯಾಃ ಪ್ರತಿಷೇಧಸ್ಯ ಚ ವಿಶೇಷಣಭಾವೋ ಭವೇತ್ ತದಾ ಸ ದ್ವಿಗೋರ್ನಞ್‌ಸಮಾಸಸ್ಯ ಚ ವಿಷಯಃ।**

**ಅನುವಾದ:**

ಆ ವಿಶೇಷಣವಿಶೇಷ್ಯಭಾವವು ಸಮಾನಾಧಿಕರಣ, ವ್ಯಧಿಕರಣ ಎಂದು ಎರಡು ವಿಧವಾಗಿ ಸಂಭವಿಸುತ್ತದೆ. ಅವುಗಳಲ್ಲಿ ಮೊದಲನೆಯದು ಕರ್ಮಧಾರಯ ಸಮಾಸದ ಕ್ಷೇತ್ರ. ಎಲ್ಲಿ ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಪದಗಳು ಅನ್ಯಪದಾರ್ಥಕ್ಕೆ ವಿಶೇಷಣವಾಗುವುವೋ ಅದು ಬಹುವ್ರೀಹಿಯ ಮಾರ್ಗ. ಎಲ್ಲಿ

ಸಂಖ್ಯೆ ಅಥವಾ ಪ್ರತಿಷೇಧವು ವಿಶೇಷಣವಾಗುವುದೋ ಅಲ್ಲಿ (ಕ್ರಮಶಃ) ದ್ವಿಗುಸಮಾಸ ಮತ್ತು ನಞ್‌ಸಮಾಸದ ಕ್ಷೇತ್ರ.

**ವಿವರಣೆ:**

ತತ್ಪುರುಷಃ ಸಮಾನಾಧಿಕರಣಃ ಕರ್ಮಧಾರಯಃ ಎಂಬುದರಿಂದ ವಿಶೇಷಣ–ವಿಶೇಷ್ಯಗಳು ಒಂದೇ ವಿಭಕ್ತಿಯಲ್ಲಿ ಇದ್ದಾಗ ಕರ್ಮಧಾರಯ ಸಮಾಸ. ಅನೇಕಮನ್ಯಪದಾರ್ಥೇ ಎಂಬ ಸೂತ್ರದಿಂದ ಅನ್ಯಪದಾರ್ಥವು ವಿಶೇಷ್ಯವಾದಾಗ ಬಹುವ್ರೀಹಿ. ಸಂಖ್ಯಾಪೂರ್ವೋ ದ್ವಿಗುಃ ಎಂಬ ಸೂತ್ರದಿಂದ ಸಂಖ್ಯಾವಾಚಕ ಪೂರ್ವಪದವಿದ್ದಾಗ ದ್ವಿಗು.

**ದ್ವಿತೀಯಃ ಪ್ರಕಾರಃ ಕಾರಕಾಣಾಂ ಸಂಬಂಧಸ್ಯ ಚ ವಿಶೇಷಣತ್ವಾದ್‌ಬಹುವಿಧಃ। ಸ ತತ್ಪುರುಷಸ್ಯ ಪಂಥಾಃ। ತತ್ರಾಪಿ ಯದಾ ಅವ್ಯಯಾರ್ಥಸ್ಯ ವಿಶೇಷ್ಯತಾ ಸ್ಯಾತ್ ತದಾ ಅಸಾವವ್ಯಯೀಭಾವಸ್ಯ ಮಾರ್ಗಃ। ತದೇವಮ್ ಏಷಾಂ ಸಮಾಸಾನಾಂ ವಿಶೇಷಣವಿಶೇಷ್ಯೋಭಯಾಂಶಸಂಸ್ಪರ್ಶಿತ್ವೇಽಪಿ ಯದಾ ವಿಶೇಷಣಾಂಶಃ ಸ್ವಾಶ್ರಯೋತ್ಕರ್ಷಾಧಾನ– ಮುಖೇನ ವಾಕ್ಯಾರ್ಥಚಮತ್ಕಾರ–ಕಾರಣತಯಾ ಪ್ರಾಧಾನ್ಯೇನ ವಿವಕ್ಷಿತೋ ವಿಧೇಯಧುರಾಮ್ ಅಧಿರೋಹೇತ್, ಇತರಸ್ತು ಅನೂದ್ಯಮಾನಕಲ್ಪತಯಾ ನ್ಯಗ್ಭಾವಮೇವ ಭಜೇತ್, ತದಾಸೌ ನ ವೃತ್ತೇರ್ವಿಷಯೋ ಭವಿತುಮರ್ಹತಿ।**

**ಅನುವಾದ:**

ಕಾರಕಗಳು ಮತ್ತು ಸಂಬಂಧವು ವಿಶೇಷಣವಾಗುವುದರಿಂದ ಎರಡನೆಯ ಪ್ರಕಾರವು ಬಹುವಿಧವಾಗಿರುತ್ತದೆ. ಅದು ತತ್ಪುರುಷ ಸಮಾಸದ ದಾರಿ. ಯಾವಾಗ ಅವ್ಯಯಾರ್ಥವು ವಿಶೇಷ್ಯವಾಗುವುದೋ ಆಗ ಅದು ಅವ್ಯಯೀಭಾವಸಮಾಸದ ಮಾರ್ಗ. ಹೀಗಿರಲು ಸಮಾಸಗಳು ವಿಶೇಷಣ ಮತ್ತು ವಿಶೇಷ್ಯ ಎಂಬ ಎರಡು ಅಂಶಗಳನ್ನು ಮುಟ್ಟುವಂತಿದ್ದರೂ ಯಾವಾಗ ವಿಶೇಷಣಾಂಶವು ತನ್ನ ಆಶ್ರಯಕ್ಕೆ ಉತ್ಕರ್ಷವನ್ನು ತಂದು ವಾಕ್ಯಾರ್ಥದ ಚಮತ್ಕಾರಕ್ಕೆ ಕಾರಣವಾಗುವಂತೆ ಪ್ರಧಾನವಾಗಿ ವಿವಕ್ಷಿತವಾಗುವುದೋ ಮತ್ತು ವಿಧೇಯದ ಸ್ಥಾನವನ್ನು ಏರಿ ನಿಲ್ಲುವುದೋ, ಹಾಗೂ ಇನ್ನೊಂದು (ಎಂದರೆ ವಿಶೇಷ್ಯವು) ಅನೂದ್ಯಮಾನದಂತಾಗಿ ಅಪ್ರಾಧಾನ್ಯವನ್ನು ಪಡೆದುಕೊಳ್ಳುವುದೋ, ಆಗ ವಿಶೇಷಣವು ಸಮಾಸಕ್ಕೆ ವಿಷಯವಾಗಲು ಅರ್ಹವಲ್ಲ.

**ತಸ್ಯಾಂ ಹಿ ಸ ಪ್ರಧಾನೇತರಭಾವಸ್ತಯೋರಸ್ತಮಿಯಾದ್ ಇತ್ಯುಕ್ತಮ್। ತಚ್ಚೈತದ್ ವಿಶೇಷಣಮ್ ಏಕಮ್ ಅನೇಕಂ ವಾಸ್ತು, ನ ತಯೋರ್ವಿಶೇಷಃ ಕಶ್ಚಿತ್।**

**ಅನುವಾದ:**

ಸಮಾಸದಲ್ಲಿ ವಿಶೇಷಣ ವಿಶೇಷಗಳಿಗೆ (ವಿವಕ್ಷಿತ) ಪ್ರಾಧಾನ್ಯ–ಅಪ್ರಾಧಾನ್ಯಭಾವವೇ ಅಸ್ತಂಗತವಾದೀತು ಎಂದು ಹೀಗೆ ಹೇಳಿದ್ದೇವೆ. ವಿಶೇಷಣವು ಒಂದೇ ಇರಲಿ ಅಥವಾ ಅನೇಕ ವಿಶೇಷಣಗಳಿರಲಿ, ಅವುಗಳಲ್ಲಿ ಯಾವ ವಿಶೇಷವೂ ಇಲ್ಲ.

**ವಿವರಣೆ:**

ಇಲ್ಲಿ ಅತಿಸೂಕ್ಷ್ಮವಾದ ವಿಚಾರವನ್ನು ಮಹಿಮಭಟ್ಟನು ಮಂಡಿಸಿದ್ದಾನೆ. ವ್ಯಾಕರಣನಿಯಮಾನುಸಾರವಾಗಿ ಸಮಾಸವು ಯುಕ್ತವಾಗಿದ್ದರೂ, ಕಾವ್ಯದಲ್ಲಿ ಹಾಗೆ ಸಮಾಸವನ್ನು ಮಾಡಿದಾಗ ಕವಿವಿವಕ್ಷೆಗೆ ಭಂಗ ಬರುವಂತಿದ್ದರೆ ಅಂಥ ಸಮಾಸವನ್ನು ಮಾಡಬಾರದು. ವಿಶೇಷಣವು ಅರ್ಥಗರ್ಭಿತವಾಗಿದ್ದು ಅದರ ಅರ್ಥಕ್ಕೆ ಪ್ರಾಧಾನ್ಯವು ವಿವಕ್ಷಿತವಾಗಿದ್ದರೆ, ವ್ಯಾಕರಣಾನುಮತಿ ಇದ್ದಾಗ್ಯೂ ಅಲ್ಲಿ ಸಮಾಸವನ್ನು ಮಾಡಬಾರದು. ವೃತ್ತಿಯು ಸಂಸ್ಕೃತಭಾಷೆಯಲ್ಲಿ ಸಮಾಸ, ಏಕಶೇಷ, ಕೃತ್, ತದ್ಧಿತ, ಸನಾದ್ಯಂತಧಾತು ಎಂದು ಐದು ವಿಧ. ವೃತ್ತಿಯ ಒಂದು ಅಂಗವಾಗಿಬಿಟ್ಟ ಪದದ ಅರ್ಥವು ತನ್ನ ಪ್ರಾಧಾನ್ಯವನ್ನು ಕಳೆದುಕೊಳ್ಳುತ್ತದೆ. ಇದರಿಂದ ಕಾವ್ಯದಲ್ಲಿ ಸ್ವಾರಸ್ಯವು ಕಡಿಮೆಯಾಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬಾರದು ಎಂದು ಗ್ರಂಥಕಾರನ ಸಮೀಕ್ಷೆ.

> **ನನು ಚ ವಿಶೇಷಣತ್ವಮ್ ಅವಚ್ಛೇದಕತ್ವಾದ್ ಗುಣಭಾವಃ। ವಿಧೇಯತ್ವಂ ಚ ವಿವಕ್ಷಿತತ್ವಾತ್ ಪ್ರಾಧಾನ್ಯಮ್। ತತ್ಕಥಮ್ ಅನಯೋರ್ಭಾವಾಭಾವಯೋರಿವಾನ್ಯೋನ್ಯಂ ವಿರೋಧಾದೇಕತ್ರ ಸಮಾವೇಶ ಉಪಪದ್ಯತೇ? ಯೇನೈಕತ್ರ ನಿಯಮೇನ ಸಮಾಸೋ ನಿಷಿಧ್ಯೇತ, ಅನ್ಯತ್ರ ಚೋಪಕಲ್ಪ್ಯೇತ?**

**ಅನುವಾದ:**

ವಿಶೇಷಣವು ಅವಚ್ಛೇದಕವಾದುದರಿಂದ ಅದಕ್ಕೆ ಅಪ್ರಾಧಾನ್ಯ. ವಿಧೇಯವು ವಿವಕ್ಷಿತವಾದುದರಿಂದ ಅದಕ್ಕೆ ಪ್ರಾಧಾನ್ಯ. ಆದ್ದರಿಂದ ಭಾವ–ಅಭಾವಗಳಿಗೆ ಇರುವಂತೆ ವಿಶೇಷಣತ್ವ–ವಿಧೇಯತ್ವಗಳಿಗೆ ಪರಸ್ಪರ ವಿರೋಧವಿದೆ. ಅವೆರಡೂ ಒಂದೇ ವಸ್ತುವಿನಲ್ಲಿ ಸಮಾವೇಶಗೊಳ್ಳುವುದಾದರೂ ಹೇಗೆ ಸಾಧ್ಯ? ಹಾಗಿದ್ದಿದ್ದರೆ ಪ್ರಾಧಾನ್ಯವಿರುವ ಒಂದು ಕಡೆ ಸಮಾಸವನ್ನು ನಿಷೇಧಿಸಬಹುದಾಗಿತ್ತು ಮತ್ತು ಪ್ರಾಧಾನ್ಯವಿಲ್ಲದ ಇನ್ನೊಂದು ಸ್ಥಳದಲ್ಲಿ ಸಮಾಸವನ್ನು ಒಪ್ಪಿಕೊಳ್ಳಬಹುದಾಗಿತ್ತು.

**ವಿವರಣೆ:**

ವಿಶೇಷಣವು ಚಮತ್ಕಾರಕಾರಣವಾದ ಅಂಶವನ್ನು ಸೂಚಿಸುವಾಗ ಅದಕ್ಕೆ ಪ್ರಾಧಾನ್ಯ, ಅಂಥ ವಿಶೇಷಣವನ್ನು ಸಮಾಸದೊಳಗೆ ಸೇರಿಸಬಾರದು ಎಂದು ಮೇಲೆ ಹೇಳಲಾಗಿತ್ತು. ವಿಶೇಷಣಗಳೆಲ್ಲ ಅಪ್ರಧಾನ, ವಿಶೇಷ್ಯವೇ ವಿವಕ್ಷಿತವಾದುದರಿಂದ ಪ್ರಧಾನ ಎಂಬ ನಿಯಮಕ್ಕೆ ಅದು ವಿರುದ್ಧವಾಯಿತು ಎಂದು ಈ ಪ್ರಶ್ನೆಯ ತಾತ್ಪರ್ಯ.

> **ನೈಷ ದೋಷಃ। ವಿರೋಧಸ್ಯೋಭಯವಸ್ತುನಿಷ್ಠತ್ವಾತ್। ಶೀತೋಷ್ಣಾದಿವತ್। ನ ಚೇಹ ವಸ್ತುತ್ವಮುಭಯೋಃ ಸಂಭವತಿ, ಏಕಸ್ಯೈವ ವಾಸ್ತವತ್ವಾತ್, ಅನ್ಯಸ್ಯ ಚ ವೈಷಯಿಕತ್ವೇನ ವಿಪರ್ಯಯಾತ್। ನ ಚ ವಸ್ತ್ವವಸ್ತುನೋರ್ವಿರೋಧಃ। ನ ಹಿ ಸತ್ಯಹಸ್ತಿನಃ ಕಲ್ಪನಾಕೇಸರಿಣಶ್ಚ ಕಶ್ಚಿದನ್ಯೋನ್ಯಂ ವಿರೋಧಮವಗಚ್ಛತಿ। ಫಲಭೇದಸ್ತು ಅನಯೋರ್ನಿರ್ವಿವಾದ ಏವ। ಏಕಸ್ಯ ಹಿ ಸಕಲಜಗದ್ಗಮ್ಯಂ ಶಾಬ್ದಿಕೈಕವಿಷಯಃ ಪದಾರ್ಥಸಂಬಂಧಮಾತ್ರಮ್। ಅಪರಸ್ಯ ಪುನಃ ಕತಿಪಯಸಹೃದಯಸಂವೇದನೀಯಃ ಸನ್ ಕವೀನಾಮೇವ ಗೋಚರೋ ವಾಕ್ಯಾರ್ಥಚಮತ್ಕಾರಾತಿಶಯ ಇತಿ।**

**ಅನುವಾದ:**

(ನೀವು ಹೇಳುವ) ದೋಷ ಇಲ್ಲ. ಏಕೆಂದರೆ ವಿರೋಧವು ಎರಡು ವಸ್ತುಗಳಿಗೆ ಉಂಟಾಗುತ್ತದೆ. ಉದಾಹರಣೆ– ಬಿಸಿಯಾದ ಮತ್ತು ತಣ್ಣಗಿರುವ ವಸ್ತುಗಳಿಗೆ, ಪ್ರಕೃತದಲ್ಲಿ ಎರಡು ಅಂಶಗಳಿಗೂ ವಸ್ತುತ್ವ ಇಲ್ಲ. ಏಕೆಂದರೆ ಒಂದು ಮಾತ್ರ ವಾಸ್ತವ, ಇನ್ನೊಂದು ವಿಷಯಾಧೀನವಾದುದರಿಂದ ಅವಾಸ್ತವ. ವಸ್ತು–ಅವಸ್ತುಗಳಿಗೆ ವಿರೋಧವೇ ಇರಲಾರದು. ನಿಜವಾದ ಆನೆಗೂ ಕಾಲ್ಪನಿಕವಾದ ಸಿಂಹಕ್ಕೂ ವಿರೋಧವನ್ನು ಯಾವನೂ ಕಾಣನು. ಪ್ರಕೃತದಲ್ಲಿ ಫಲಭೇದವೂ ನಿರ್ವಿವಾದ. ಒಂದು ವೈಯಾಕರಣರಿಗೆ ವಿಷಯವಾದ ಸಕಲ ಜಗತ್ತಿಗೇ ಗೋಚರಿಸುವ ಪದಾರ್ಥಸಂಬಂಧ ಮಾತ್ರ. ಇನ್ನೊಂದು ಕೆಲವರು ಸಹೃದಯರು ಮಾತ್ರ ಅನುಭವಿಸಬಲ್ಲ ಮತ್ತು ಕವಿಗಳಿಗೆ ಮಾತ್ರ ಗೋಚರಿಸುವ ಅತಿಶಯಿತವಾದ ವಾಕ್ಯಾರ್ಥಚಮತ್ಕಾರ.

**ವಿವರಣೆ:**

ವಿಶೇಷಣವು ಅಪ್ರಧಾನ, ವಿಶೇಷ್ಯವು ಪ್ರಧಾನ ಎಂಬುದು ಸಾಮಾನ್ಯ ಜನರಿಗಾಗಿ, ವ್ಯಾಕರಣಾನುಗುಣವಾಗಿ ಮಾಡಿರುವ ನಿಯಮ. ಅದು ಸಾಧಾರಣ ಭಾಷಾಜ್ಞಾನಕ್ಕೆ ಸಂಬಂಧಿಸಿದುದು. ಚಮತ್ಕಾರ ಕಾರಣವಾಗಿ ವಿಶೇಷಣವೂ ಪ್ರಾಧಾನ್ಯವನ್ನು ಪಡೆದುಕೊಳ್ಳುತ್ತದೆ ಎಂಬ ಅಂಶ ಕವಿಮಾತ್ರಗೋಚರ, ಸಹೃದಯ ಮಾತ್ರವೇದ್ಯ.

**ಅತ್ರ ಕ್ರಮೇಣೋದಾಹರಣಾನಿ। ತತ್ರ ಕರ್ಮಧಾರಯೇ ಯಥಾ–**
**ಉತ್ತಿಷ್ಠಂತ್ಯಾ ರತಾಂತೇ ಭರಮುರಗಪತೌ ಪಾಣಿನೈಕೇನ ಕೃತ್ವಾ**
**ಧೃತ್ವಾ ಚಾನ್ಯೇನ ವಾಸೋ ವಿಗಲಿತಕಬರೀಭಾರಮಂಸೇ ವಹಂತ್ಯಾಃ।**
**ಭೂಯಸ್ತತ್ಕಾಲಕಾಂತಿದ್ವಿಗುಣಿತಸುರತಪ್ರೀತಿನಾ ಶೌರಿಣಾ ವಃ**
**ಶಯ್ಯಾಮಾಲಿಂಗ್ಯ ನೀತಂ ವಪುರಲಸಲಸದ್‌ಬಾಹು ಲಕ್ಷ್ಮ್ಯಾಃ ಪುನಾತು॥**

**ಅನುವಾದ:**

ಕ್ರಮಾನುಗುಣವಾಗಿ ಅವುಗಳಿಗೆ ಉದಾಹರಣೆಗಳು. ಮೊದಲು ಕರ್ಮಧಾರಯದ ಉದಾಹರಣೆ–

"ರತಿಕ್ರೀಡೆಯ ಕೊನೆಯಲ್ಲಿ ಲಕ್ಷ್ಮಿ ಹಾಸಿಗೆಯಾಗಿದ್ದ ಸರ್ಪದ ಮೇಲೆ ಒಂದು ಕೈಯಿಂದ ಭಾರವನ್ನು ಇಟ್ಟು, ಇನ್ನೊಂದು ಕೈಯಿಂದ ವಸ್ತ್ರವನ್ನು ಹಿಡಿದು ಮೇಲೆ ಏಳುತ್ತಿದ್ದಾಳೆ. ಬಿಚ್ಚಿಹೋಗಿದ್ದ ಅವಳ ಕೂದಲರಾಶಿ ಹೆಗಲುಗಳ ಮೇಲೆ ಹರಡಿದೆ. ಆ ಕಾಲದಲ್ಲಿ ಅವಳ ಸೊಬಗನ್ನು ಕಂಡ ವಿಷ್ಣುವಿಗೆ ಸುರತಾಸಕ್ತಿಯು ದ್ವಿಗುಣವಾಗಿದೆ. ಬಳಲಿಕೆಯಿಂದ ಶೋಭಿಸುತ್ತಿದ್ದ ಲಕ್ಷ್ಮಿಯ ದೇಹವನ್ನು ಅವನು ಮತ್ತೆ ಹಾಸಿಗೆಗೆ ಎಳೆದುಕೊಂಡಿದ್ದಾನೆ. ಅದು ನಿಮ್ಮನ್ನು ಪಾವನಗೊಳಿಸಲಿ."

ಇತ್ಯತ್ರ ವಿಗಲಿತಕಬರೀಭಾರತ್ವಮಲಸಲಸದ್‌ಬಾಹುತ್ವಂ ಚಾಂಸವಪುಷೋರ್ವಿಶೇಷಣೇ ರತೇರುದ್ದೀಪನವಿಭಾವತಾಪಾದನೇನ ವಾಕ್ಯಾರ್ಥಸ್ಯ ಕಾಮಪಿ ಕಮನೀಯತಾಮ್ ಆವಹತ ಇತಿ ಪ್ರಾಧಾನ್ಯೇನ ವಿವಕ್ಷಿತತ್ವಾನ್ನ ತಾಭ್ಯಾಂ ಸಹ ಸಮಾಸೇ ಕವಿನಾ ನ್ಯಗ್ಭಾವಂ ಗಮಿತೇ। ಯಥಾ ಚಾತ್ರೈವ ತತ್ಕಾಲಕಾಂತಿದ್ವಿಗುಣಿತಸುರತಪ್ರೀತಿತ್ವಂ ಹೇತುಭಾವಗರ್ಭಂ ವಿಶೇಷಣಂ ಶೌರೇರುಚಿತಾಚರಣಲಕ್ಷಣಮ್ ಅತಿಶಯಮ್ ಆದಧತ್ ವಿಧೇಯತಯಾ ಪ್ರಾಧಾನ್ಯೇನ ವಿವಕ್ಷಿತಮ್ ಇತಿ ನ ತೇನ ಸಹ ಸಮಾಸೇ ನಿಮೀಲಿತಮ್।

**ಅನುವಾದ:**

ಈ ಪದ್ಯದಲ್ಲಿ ವಿಗಲಿತಕಬರೀಭಾರ (ಬಿಚ್ಚಿ ಹರಡಿದ ಕೇಶಪಾಶವನ್ನುಳ್ಳದ್ದು) ಎಂಬುದು ಅಂಸಕ್ಕೆ ಮತ್ತು ಅಲಸಲಸದ್‌ಬಾಹು (ಬಳಲಿ ಶೋಭಿಸುತ್ತಿದ್ದ ತೋಳನ್ನುಳ್ಳದ್ದು) ಎಂಬುದು ದೇಹಕ್ಕೆ ವಿಶೇಷಣಗಳು. ಇವು ರತಿ ಎಂಬ ಸ್ಥಾಯಿಭಾವಕ್ಕೆ ಉದ್ದೀಪನವಿಭಾವಗಳಾಗಿ ವಾಕ್ಯದ ಅರ್ಥಕ್ಕೆ ಅನಿರ್ವಚನೀಯವಾದ ಸೌಂದರ್ಯವನ್ನು ತಂದುಕೊಡುತ್ತವೆ ಎಂಬ ಕಾರಣದಿಂದ ಪ್ರಧಾನರೂಪದಲ್ಲಿ ವಿವಕ್ಷಿತವಾಗಿವೆ. ಆದ್ದರಿಂದ ಕವಿಯು ಅವುಗಳನ್ನು ಅಂಸ-ದೇಹ ಎಂಬ ಪದಗಳೊಡನೆ ಸಮಾಸಮಾಡಿ ಅಪ್ರಧಾನತೆಗೆ ಈಡು ಮಾಡಿಲ್ಲ. ಮತ್ತೆ ಇದೇ ಪದ್ಯದಲ್ಲಿ ವಿಷ್ಣುವಿಗೆ "ತತ್ಕಾಲಕಾಂತಿ ದ್ವಿಗುಣಿತ ಸುರತಪ್ರೀತಿ" ಎಂಬ ಕಾರಣತಾಗರ್ಭವಾದ ವಿಶೇಷಣವು ಉಚಿತಾಚರಣರೂಪದ ಅತಿಶಯವನ್ನು ತಂದುಕೊಡುತ್ತಿದೆ. ಆದ್ದರಿಂದ ಅದು ವಿಧೆಯವಾಗಿದ್ದು ಪ್ರಾಧಾನ್ಯವನ್ನು ಪಡೆಯಲು ವಿವಕ್ಷಿತವಾಗಿದೆ. ಆದ್ದರಿಂದಲೇ ಅದನ್ನು ಸಮಾಸದಲ್ಲಿ ಸೇರಿಸಿ ಅದರ ಅರ್ಥವು ಮುಚ್ಚಿಹೋಗುವಂತೆ ಮಾಡಿಲ್ಲ.

ಪದಮೇಕಮನೇಕಂ ವಾ ಯದ್ವಿಧೇಯಾರ್ಥತಾಂಗತಮ್।
ನ ತತ್ಸಮಾಸಮನ್ಯೇನ ನ ಚಾಪ್ಯನ್ಯೋನ್ಯಮರ್ಹತಿ॥
ತತ್ರೈಕಮುದಾಹೃತಮೇವ। ಅನೇಕಂ ಯಥಾ-
ಅವಂತಿನಾಥೋಽಯಮುದಗ್ರಬಾಹು-
ರ್ವಿಶಾಲವಕ್ಷಾಸ್ತನುವೃತ್ತಮಧ್ಯಃ।
ಆರೋಪ್ಯ ಚಕ್ರಭ್ರಮಮುಷ್ಣತೇಜಾ-
ಸ್ತ್ವಷ್ಟ್ರೇವ ಯತ್ನೋಲ್ಲಿಖಿತೋ ವಿಭಾತಿ॥ ಇತಿ॥
ಯಥಾ ಚ-
ವಿದ್ವಾನ್ ದಾರಸಖಃಪರಂ ಪರಿಣತೋ ನೀವಾರಮುಷ್ಟಿಂಪಚಃ
ಸತ್ಯಜ್ಞಾನನಿಧಿರ್ದಧತ್ ಪ್ರಹರಣಂ ಹೋಮಾರ್ಜುನೀಹೇತುತಃ।
ರೇ ದುಃಕ್ಷತ್ರಿಯ ಕಿಂ ತ್ವಯಾ ಮಮ ಪಿತಾ ಶಾಂತಂ ಮಯಾ ಪುತ್ರವಾನ್
ನೀತಃ ಕೀರ್ತ್ಯವಶೇಷತಾಂ ತದಿಹ ತೇ ಧಿಗ್‌ಧಿಕ್ ಸಹಸ್ರಂ ಭುಜಾನ್॥

**ಅನುವಾದ:**

ವಿಧೇಯಾರ್ಥವನ್ನುಳ್ಳ ಪದವು ಒಂದಾಗಲಿ ಅಥವಾ ಅನೇಕವಾಗಲಿ, ಅದು ಇನ್ನೊಂದು ಪದದೊಡನೆ ಸಮಾಸವನ್ನು ಹೊಂದಲು ಅರ್ಹವಲ್ಲ. ಅಂಥ ಪದಗಳು ಅನ್ಯೋನ್ಯವಾಗಿಯೂ ಸಮಾಸವನ್ನು ಹೊಂದಬಾರದು. ಅದರಲ್ಲಿ ಮೊದಲನೆಯದಕ್ಕೆ ಉದಾಹರಣೆಯನ್ನು ಕೊಟ್ಟಾಯಿತು. ಅನೇಕ ಪದಗಳು ಹಾಗೆ ಸಮಾಸವನ್ನು ಹೊಂದದಿರುವುದಕ್ಕೆ ಉದಾಹರಣೆ– (ಅವಂತಿ ನಾಥೋ–) "ಇವನು ದೀರ್ಘವಾದ ತೋಳುಗಳನ್ನುಳ್ಳ, ವಿಶಾಲವಾದ ಎದೆಯನ್ನುಳ್ಳ, ತೆಳ್ಳಗಿನ ಗುಂಡಾದ ನಡುವಿನ ಅವಂತಿರಾಜ. ವಿಶ್ವಕರ್ಮನು ಚಕ್ರಭ್ರಮಯಂತ್ರಕ್ಕೆ ಏರಿಸಿ ಪ್ರಯತ್ನಪಟ್ಟು ಸಾಣೆ ಹಿಡಿದ ಸೂರ್ಯನಂತೆ ಹೊಳೆಯುತ್ತಿದ್ದಾನೆ."

ಇನ್ನೊಂದು ಉದಾಹರಣೆ–

"ವಿದ್ವಾಂಸ, ಹೆಂಡತಿಯೊಡನಿದ್ದವನು, ಪರಿಣತ, ಒಂದು ಹಿಡಿ ನವಣೆಯನ್ನು ಬೇಯಿಸಿ ತಿನ್ನುತ್ತಿದ್ದವನು. ಸತ್ಯ–ಜ್ಞಾನಗಳ ನಿಧಿ, ಹೋಮದ ಧೇನುವಿಗಾಗಿ ಮಾತ್ರ ಆಯುಧವನ್ನು ಹಿಡಿದವನೂ ಆಗಿದ್ದ ನನ್ನ ತಂದೆ, ಶಾಂತಿ ಶಾಂತಿ, ನನ್ನನ್ನು ಮಗನನ್ನಾಗಿ ಪಡೆದಿದ್ದವನು, ಏ ಕೆಟ್ಟ ಕ್ಷತ್ರಿಯನೆ! ನಿನ್ನಿಂದ ಕೀರ್ತಿಶೇಷನಾಗಿಬಿಟ್ಟನು. ನಿನ್ನ ಸಾವಿರ ಭುಜಗಳಿಗೆ ಧಿಕ್ಕಾರ."

**ಯಥಾ ವಾ–**
**ರಾಜ್ಞೋ ಮಾನಧನಸ್ಯ ಕಾರ್ಮುಕಭೃತೋ ದುರ್ಯೋಧನಸ್ಯಾಗ್ರತಃ**
**ಪ್ರತ್ಯಕ್ಷಂ ಕುರುಬಾಂಧವಸ್ಯ ಮಿಷತಃ ಕರ್ಣಸ್ಯ ಶಲ್ಯಸ್ಯ ಚ।**
**ಪೀತಂ ತಸ್ಯ ಮಯಾದ್ಯ ಪಾಂಡವವಧೂಕೇಶಾಂಬರಾಕರ್ಷಿಣಃ**
**ಕೋಷ್ಣಂ ಜೀವತ ಏವ ತೀಕ್ಷ್ಣಕರಜಕ್ಷುಣ್ಣಾದಸೃಗ್ ವಕ್ಷಸಃ॥**
**ಯಥಾ ಚ–**
**ಹೇ ಹಸ್ತ ದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ**
**ಜೀವಾತವೇ ವಿಸೃಜ ಶೂದ್ರಮುನೌ ಕೃಪಾಣಮ್।**
**ರಾಮಸ್ಯ ಪಾಣಿರಸಿ ನಿರ್ಭರಗರ್ಭಖಿನ್ನ–**
**ಸೀತಾವಿವಾಸನಪಟೋಃ ಕರುಣಾ ಕುತಸ್ತೇ॥**

**ಅನುವಾದ:**

ಇನ್ನೊಂದು ಉದಾಹರಣೆ– "ಆ ದುರ್ಯೋಧನನು ರಾಜ, ಮಾನಧನ, ಧನುರ್ಧರ. ಕುರುಬಾಂಧವ ಕರ್ಣನೂ ಶಲ್ಯನೂ ಅಲ್ಲೇ ಓಡಾಡುತ್ತಿದ್ದಾರೆ. ಅವರೆಲ್ಲರ ಎದುರಿಗೇ ದ್ರೌಪದಿಯ ಕೂದಲನ್ನು ಸೆಳೆದ ದುಃಶಾಸನನ ಎದೆಯನ್ನು ಚೂಪಾದ ಉಗುರುಗಳಿಂದ ಬಗಿದು ಅವನಿನ್ನೂ ಬದುಕಿರುವಾಗಲೇ ಅವನ ಬೆಚ್ಚಗಿದ್ದ ರಕ್ತವನ್ನು ನಾನು ಕುಡಿದೆ."

ಮತ್ತೊಂದು ಉದಾಹರಣೆ– (ರಾಮನ ಮಾತು)–

"ಎಲೈ ನನ್ನ ಬಲಗೈ, ಬ್ರಾಹ್ಮಣನ ಸತ್ತ ಮಗುವಿನ ಜೀವವನ್ನುಳಿಸುವುದಕ್ಕಾಗಿ ಶೂದ್ರಮುನಿಯ ಮೇಲೆ ಖಡ್ಗವನ್ನು ಪ್ರಯೋಗಿಸು. ನೀನು ರಾಮನ ಕೈ. ಪೂರ್ಣಗರ್ಭಿಣಿಯಾಗಿ ಬಳಲಿದ್ದ ಸೀತೆಯನ್ನು ಕಾಡಿಗಟ್ಟಿದ ನಿನಗೆ ಕರುಣೆ ಎಲ್ಲಿಯದು?"

**ಏವಮ್ "ಅಂಗರಾಜ, ಸೇನಾಪತೇ, ರಾಜವಲ್ಲಭ, ದ್ರೋಣಾಪಹಾಸಿನ್। ರಕ್ಷ ಭೀಮಾದ್ ದುಶ್ಶಾಸನಮ್॥ ಇತ್ಯಾದೌ ದ್ರಷ್ಟವ್ಯಮ್"। ವಿಧ್ಯನುವಾದಭಾವೋಽಪಿ ವಕ್ಷ್ಯಮಾಣನಯೇನ ವಿಶೇಷಣವಿಶೇಷ್ಯಭಾವತುಲ್ಯಫಲ ಇತಿ ತತ್ರಾಪಿ ತದ್ವದೇವ ಸಮಾಸಾಭಾವೋಽವಗಂತವ್ಯಃ। ಯಥಾ– ಚಾಪಾಚಾರ್ಯಸ್ತ್ರಿಪುರವಿಜಯೀ ಕಾರ್ತ್ತಿಕೇಯೋ ವಿಜೇಯಃ ಶಸ್ತ್ರವ್ಯಸ್ತಃ ಸದನಮುದಧಿರ್ಭೂರಿಯಂ ಹಂತಕಾರಃ। ಅಸ್ತ್ಯೇವೈತತ್ ಕಿಮು ಕೃತವತಾ ರೇಣುಕಾಕಂಠಬಾಧಾಂ ಬದ್ಧಸ್ಪರ್ಧಸ್ತವ ಪರಶುನಾ ಲಜ್ಜತೇ ಚಂದ್ರಹಾಸಃ॥**

**ಅನುವಾದ:**

ಇದೇ ರೀತಿಯಾಗಿ "ಅಂಗರಾಜ, ಸೇನಾಪತಿ, ರಾಜನಿಗೆ ಪ್ರೀತಿಪಾತ್ರನಾದವನೆ, ದ್ರೋಣಾಚಾರ್ಯರನ್ನೂ ಅಪಹಾಸ್ಯಕ್ಕೆ ಈಡುಮಾಡಿದವನೇ, ಈಗ ಭೀಮನಿಂದ ದುಃಶಾಸನನನ್ನು ಕಾಪಾಡಯ್ಯಾ" ಇತ್ಯಾದಿಗಳಲ್ಲೂ ಸಮಾಸಾಭಾವವಿರುವುದನ್ನು ನೋಡಬಹುದು.

ವಿಧ್ಯನುವಾದಭಾವವೂ ಮುಂದೆ ನಾವು ಹೇಳುವ ಪ್ರಕಾರದಲ್ಲಿ ವಿಶೇಷಣ ವಿಶೇಷ್ಯಭಾವಕ್ಕೆ ಸಮಾನವೇ. ಆದ್ದರಿಂದ ಅದರಲ್ಲೂ ಹಾಗೆಯೇ ಸಮಾಸವು ಆಗದಿರುವುದನ್ನು ತಿಳಿದುಕೊಳ್ಳಬೇಕು. ಉದಾಹರಣೆ (ಪರಶುರಾಮನಿಗೆ ರಾವಣನು ಹೇಳುವ ಮಾತು)–

"ಧನುರ್ವಿದ್ಯೆಯಲ್ಲಿ ನಿನಗೆ ಆಚಾರ್ಯ ತ್ರಿಪುರಗಳನ್ನು ಗೆದ್ದ ರುದ್ರ. ನೀನು ಸೋಲಿಸಿದ್ದು ಕಾರ್ತ್ತಿಕೇಯನನ್ನು. ಶಸ್ತ್ರದಿಂದ ಆಚೆಗೆ ತಳ್ಳಲ್ಪಟ್ಟ ಸಮುದ್ರವೇ ನಿನ್ನ ಮನೆ. ಸಮಸ್ತಭೂಮಂಡಲ ನೀನು ಅತಿಥಿಗಳಿಗೆ ನೀಡಿದ ಭಿಕ್ಷೆ. ಇದೆಲ್ಲ ಸತ್ಯ. ಆದರೇನು? ತಾಯಿ ರೇಣುಕೆಯ ಕತ್ತನ್ನೇ ಕೊಯ್ದ ನಿನ್ನ ಪರಶುವಿನೊಡನೆ ಸ್ಪರ್ಧಿಸಲು ನನ್ನ ಖಡ್ಗ ಚಂದ್ರಹಾಸವು ನಾಚುತ್ತದೆ."

**ಪ್ರತ್ಯುದಾಹರಣಂ ಯಥಾ–**

**ತಂ ಕೃಪಾಮೃದುರವೇಕ್ಷ್ಯ ಭಾರ್ಗವಂ ರಾಘವಃ ಸ್ಖಲಿತವೀರ್ಯಮಾತ್ಮನಿ।**
**ಸ್ವಂ ಚ ಸಂಹಿತಮಮೋಘಸಾಯಕಂ ವ್ಯಾಜಹಾರ ಹರಸೂನುಸನ್ನಿಭಃ॥ ಇತಿ।**

**ತತ್ರಾಪಿ "ಅಮೋಘಮಾಶುಗಮ್" ಇತಿ ಯುಕ್ತಃ ಪಾಠಃ।**

**ಯಥಾ ವಾ–**

**ಸ್ರಸ್ತಾಂ ನಿತಂಬಾದವಲಂಬಮಾನಾ ಪುನಃ ಪುನಃ ಕೇಸರಪುಷ್ಪಕಾಂಚೀಮ್।**
**ನ್ಯಾಸೀಕೃತಾಂ ಸ್ಥಾನವಿದಾ ಸ್ಮರೇಣ ದ್ವಿತೀಯಮೌರ್ವೀಮಿವ ಕಾರ್ಮುಕಸ್ಯ॥ ಇತಿ।**

**ಅನುವಾದ:**

ವಿರುದ್ಧೋದಾಹರಣೆ– (ತಂಕೃಪಾ..... ಇತ್ಯಾದಿ) "ಕರುಣೆಯಿಂದ ಮೃದುಮನಸ್ಸಿನವನಾಗಿ, ತನ್ನಲ್ಲಿ ಶಕ್ತಿಗುಂದಿದ ಆ ಪರಶುರಾಮನನ್ನೂ, ಸಂಧಾನಮಾಡಲ್ಪಟ್ಟ ತನ್ನ ಅಮೋಘಬಾಣವನ್ನೂ ನೋಡಿ ಕುಮಾರಸ್ವಾಮಿಗೆ ಸದೃಶನಾಗಿದ್ದ ಶ್ರೀರಾಮನು ಹೀಗೆಂದನು."

ಈ ಪದ್ಯದಲ್ಲಿ "ಅಮೋಘಮಾಶುಗಮ್" ಎಂಬ ಪಾಠವು ಉಚಿತವಾಗುತ್ತದೆ. ಇನ್ನೊಂದು ಉದಾಹರಣೆ (ಸ್ರಸ್ತಾಂ ನಿತಂಬಾತ್.....)

"ಪಾರ್ವತಿಯು ತನ್ನ ನಡುವಿನಿಂದ ಜಾರಿಬೀಳುತ್ತಿದ್ದ ಕೇಸರಪುಷ್ಪಗಳಿಂದ ನಿರ್ಮಿತವಾಗಿದ್ದ ಒಡ್ಯಾಣವನ್ನು ಮತ್ತೆ ಮತ್ತೆ ಹಿಡಿದುಕೊಳ್ಳುತ್ತಿದ್ದಳು. ಆ ಒಡ್ಯಾಣವು ಸ್ಥಾನಮಹಿಮೆಯನ್ನು ಅರಿತ ಮನ್ಮಥನು ನ್ಯಾಸವಾಗಿ ಇಟ್ಟಿದ್ದ, ಅವನ ಧನುಸ್ಸಿನ ಎರಡನೆಯ ಹುರಿಯಂತೆ ಇತ್ತು."

> **ಅತ್ರ ಮೌರ್ವೀಂ ದ್ವಿತೀಯಾಮಿತಿ ಯುಕ್ತಃ ಪಾಠಃ। ನ ಚೈವಂ ವೃತ್ತಭಂಗಶಂಕಾ ಕಾರ್ಯಾ। ತಸ್ಯ ಶ್ರವ್ಯತಾಮಾತ್ರಲಕ್ಷಣತ್ವಾತ್। ತದಪೇಕ್ಷಯೈವ ವಸಂತತಿಲಕಾದಾವಿವ ಗುರ್ವಂತತಾನಿಯಮಸ್ಯ ಸಕರ್ಣಕೈರತ್ರಾಪಿ ಅನಾದೃತತ್ವಾತ್। ಅತ ಏವ ಯಮಕಾನುಪ್ರಾಸಯೋರಿವ ವೃತ್ತಸ್ಯಾಪಿ ಶಬ್ದಾಲಂಕಾರತ್ವಮುಪಗತಮಸ್ಮಾಭಿಃ।**

**ಅನುವಾದ:**

ಈ ಪದ್ಯದಲ್ಲಿ ಮೌರ್ವೀಂ ದ್ವಿತೀಯಾಮ್ ಎಂಬ ಪಾಠವು ಉಚಿತ. ಹೀಗೆ (ಬದಲಾಯಿಸಿದರೆ) ವೃತ್ತಭಂಗ ಉಂಟಾದೀತು ಎಂಬ ಸಂಶಯವನ್ನು ಇಟ್ಟುಕೊಳ್ಳಬಾರದು. ಏಕೆಂದರೆ ವೃತ್ತವೆಂದರೆ ಶ್ರವ್ಯತೆಯನ್ನೇ ಲಕ್ಷಣವಾಗಿ ಹೊಂದಿದೆ. ಅದಕ್ಕೆ ಅನುಗುಣವಾಗಿ ವಸಂತತಿಲಕ ಇತ್ಯಾದಿ ವೃತ್ತಗಳಲ್ಲಿರುವಂತೆ "ಪಾದದ ಅಂತದಲ್ಲಿ ಗುರುವೇ ಇರಬೇಕು" ಎಂಬ ನಿಯಮವನ್ನು ಕಿವಿಯನ್ನುಳ್ಳವರು ತಿರಸ್ಕರಿಸಿದ್ದಾರೆ. ಆದ್ದರಿಂದಲೇ ಯಮಕ ಮತ್ತು ಅನುಪ್ರಾಸಗಳಂತೆ ವೃತ್ತವೂ ಒಂದು ಶಬ್ದಾಲಂಕಾರ ಎಂದು ನಾವು ಒಪ್ಪಿಕೊಂಡಿದ್ದೇವೆ.

**ವಿವರಣೆ:**

ಸ್ರಸ್ತಾಂ ನಿತಂಬಾದ್..... ಎಂಬ ಪದ್ಯವು ಉಪಜಾತಿವೃತ್ತದಲ್ಲಿದೆ. ಇದರಲ್ಲಿ ಪ್ರತಿಪಾದದ ಕೊನೆಯ ಅಕ್ಷರ ಗುರು ಆಗಿರಬೇಕು. ಮೂರನೆಯ ಪಾದದ ಕೊನೆಯ ಅಕ್ಷರ "ಣ". ಅದು 'ದ್ವಿ' ಎಂಬ ಸಂಯೋಗ ಮುಂದಿರುವುದರಿಂದ ಗುರುವಾಗಿದೆ. ಮೌರ್ವೀಂ ದ್ವಿತೀಯಾಂ ಎಂದು ಪಾಠವನ್ನು ಬದಲಾಯಿಸಿದರೆ ಸಂಯೋಗಪರತ್ವವಿಲ್ಲದೆ ಆ ಗುರುತ್ವ ನಷ್ಟವಾಗಿ ವೃತ್ತಭಂಗ ಆದೀತು ಎಂದು ಪೂರ್ವಪಕ್ಷ. ಪಾದದ ಕೊನೆಯ ಅಕ್ಷರ ಗುರುವೇ ಆಗಿರಬೇಕು ಎಂಬ ನಿಯಮವನ್ನೇ ಸಹೃದಯ ವಾಚಕರು ತಿರಸ್ಕರಿಸಿದ್ದಾರೆ. ಆದ್ದರಿಂದ ದೋಷವಿಲ್ಲ ಎಂದು ಮಹಿಮಭಟ್ಟನ ಹೇಳಿಕೆ. ಪಾದಾಂತದಲ್ಲಿ ಎಲ್ಲ ಅಕ್ಷರಗಳನ್ನು ಗುರುವೆಂದೇ ಐಚ್ಛಿಕವಾಗಿ ಭಾವಿಸಬಹುದು ಎಂದು ಛಂದಶ್ಶಾಸ್ತ್ರಜ್ಞರೂ ಒಪ್ಪಿಕೊಂಡಿದ್ದಾರೆ.

**ಯಥಾ ಚ–**
**ಕಾರಣಗುಣಾನುವೃತ್ತ್ಯಾ ದ್ವೌ ಜ್ಞಾನೇ ತಪಸಿ ಚಾತಿಶಯಮಾಪ್ತೌ।**
**ವ್ಯಾಸಃ ಪಾರಾಶರ್ಯಃ ಸ ಚ ರಾಮೋ ಚಾಮದಗ್ನ್ಯ ಇಹ॥ ಇತಿ।**

**ನನು ಯದಾ ವಿಶೇಷಣ ವಿಶೇಷ್ಯಯೋರ್ವಿಧ್ಯನುವಾದಭಾವೋ ನಾಭಿಮತಸ್ತದಾ ಸ್ವರೂಪಮಾತ್ರವಿವಕ್ಷಾಯಾಂ ನೀಲೋತ್ಪಲಾದಿವದ್ ಅತ್ರಾಪಿ ಸಮಾಸಃ ಪ್ರಸಜ್ಯೇತ। ನ ಚೇಷ್ಯತ ಇತ್ಯತ್ರ ಹೇತುರ್ವಾಚ್ಯಃ।**

**ಅನುವಾದ:**

ಇನ್ನೊಂದು ಉದಾಹರಣೆ (ಕಾರಣಗುಣಾ.....)– "ಕಾರಣದ ಗುಣಗಳನ್ನು ಅನುಸರಿಸುವುದರಿಂದ ಇಬ್ಬರು ಜ್ಞಾನದಲ್ಲೂ ತಪಸ್ಸಿನಲ್ಲೂ ಅತಿಶಯವನ್ನು ಪಡೆದುಕೊಂಡರು. (ಒಬ್ಬನು) ಪರಾಶರನ ಮಗ ವ್ಯಾಸ. (ಇನ್ನೊಬ್ಬನು) ಜಗದಗ್ನಿಯ ಮಗ ಪರಶುರಾಮ" .

ಎಲ್ಲಿ ವಿಶೇಷಣವಿಶೇಷ್ಯಗಳಿಗೆ ವಿಧ್ಯನುವಾದಭಾವವು ಅಭಿಮತವಲ್ಲದೆ, ಕೇವಲ ಸ್ವರೂಪವನ್ನು ಹೇಳುವುದರಲ್ಲೇ ವಿವಕ್ಷೆ ಇರುವುದೋ ಅಲ್ಲಿ 'ನೀಲೋತ್ಪಲಮ್' ಇತ್ಯಾದಿಗಳಲ್ಲಾಗುವಂತೆ ಸಮಾಸವು ಬರಬೇಕು. ಆದರೆ ಅದು ನಿಮಗೆ ಇಷ್ಟವಲ್ಲ. ಏಕೆ ಇಷ್ಟವಲ್ಲ ಎಂಬುದಕ್ಕೆ ಕಾರಣವನ್ನು ನೀವು ಹೇಳಬೇಕು.

**ಅತ್ರೋಚ್ಯತೇ। ಪಾರಾಶರ್ಯತ್ವಾದ್ಯಸಾಧಾರಣವಿಶೇಷಣಸಾಮರ್ಥ್ಯಾವಸಿತಾ ವ್ಯಾಸಾದಯ ಇತಿ ತೇಷಾಂ ಪರ್ಯಾಯರೂಪತ್ವಾತ್ ಪ್ರಯೋಗ ಏವ ತಾವದನುಪಪನ್ನಃ। ಕಿಂ ಪುನಃ ಸಮಾಸ ಇತಿ ಪರ್ಯಾಯತ್ವಮಾತ್ರಂ ತದಭಾವೇ ಹೇತುರ್ನಾನ್ಯಃ।**

**ತದ್ಯಥಾ–**
**ಶಶಾಂಕಶೇಖರಃ ಶಂಭುಃ ಪದ್ಮಜನ್ಮಾ ಪಿತಾಮಹಃ।**
**ಇತ್ಯತ್ರ ಏವಂ ತಕ್ಷಕಸರ್ಪ ಇತ್ಯಾದಾವವಗಂತವ್ಯಮ್।**

**ಅನುವಾದ:**

(ಕಾರಣವನ್ನು) ಇಲ್ಲಿ ಹೇಳುತ್ತೇವೆ. ಪಾರಾಶರ್ಯತ್ವ ಮುಂತಾದ ಅಸಾಧಾರಣ ವಿಶೇಷಣಗಳ ಸಾಮರ್ಥ್ಯದಿಂದಲೇ ವ್ಯಾಸಾದಿಗಳು ತಿಳಿಯಲ್ಪಡುತ್ತಾರೆ. (ಪಾರಾಶರ್ಯ ಮತ್ತು ವ್ಯಾಸ ಎಂಬ ಪದಗಳು) ಪರ್ಯಾಯಗಳಾಗಿರುವ ಕಾರಣದಿಂದ ಹೀಗೆ ಅವುಗಳ ಪ್ರಯೋಗವೇ ತಪ್ಪು. ಹೀಗಿರುವಾಗ ಸಮಾಸದ ವಿಷಯ ಬರುವುದಾದರೂ ಹೇಗೆ? ಅವುಗಳಿಗಿರುವ ಪರ್ಯಾಯತ್ವವೇ ಸಮಾಸವು ಇಲ್ಲ ಎಂಬುದಕ್ಕೆ ಕಾರಣ, ಬೇರೆ ಯಾವುದೂ ಅಲ್ಲ. ಅದಕ್ಕೆ ಉದಾಹರಣೆ– ಶಶಾಂಕಶೇಖರ ಶಂಭು, ಪದ್ಮಸಂಭವ ಬ್ರಹ್ಮ ಇತ್ಯಾದಿ. ಹೀಗೆಯೇ ತಕ್ಷಕಸರ್ಪ ಇತ್ಯಾದಿಗಳಲ್ಲೂ ಅರಿತುಕೊಳ್ಳಬೇಕು.

**ಲೋಹಿತಸ್ತಕ್ಷಕ ಇತಿ ಸಮಾಸೋಽತ್ರಾಪಿ ನೇಷ್ಯತೇ।**
**ಲೌಹಿತ್ಯಸ್ಯ ವಿಧಾವುಕ್ತನ್ಯಾಯಾತ್ತಸ್ಯಾಪ್ರವೃತ್ತಿತಃ॥**
**ಸ್ವರೂಪಮಾತ್ರಸ್ಯೋಕ್ತೌ ತು ಲೌಹಿತ್ಯಾವ್ಯಭಿಚಾರತಃ।**
**ಉಷ್ಣೋಽಗ್ನಿರಿತಿವತ್ ಪಕ್ಷೋ ನ ಚಾಸ್ತ್ಯನ್ಯಸ್ತದತ್ಯಯೇ॥**
**ಇತ್ಯಂತರ ಶ್ಲೋಕೌ।**

**ಅನುವಾದ:**

ಕೆಂಪು ತಕ್ಷಕ ಎಂಬಲ್ಲಿಯೂ ಸಮಾಸವು ಅಭಿಮತವಲ್ಲ. ಕೆಂಪುಬಣ್ಣ ಎಂಬುದನ್ನು ವಿಧಿಸುವುದಾದರೆ ಮೊದಲೇ ಹೇಳಿದ ನ್ಯಾಯಾನುಸಾರವಾಗಿ ಸಮಾಸವು ಪ್ರವರ್ತಿಸಲಾರದು.

ಸ್ವರೂಪಮಾತ್ರದ ಪ್ರತಿಪಾದನೆಯನ್ನು ಮಾಡುತ್ತಿದ್ದೇವೆ ಎನ್ನುವುದಾದರೆ ಕೆಂಪುಬಣ್ಣವು ಅಲ್ಲಿ ಅವ್ಯಭಿಚರಿತವಾಗಿ ಇರುವುದರಿಂದ 'ಬಿಸಿಯಾದ ಬೆಂಕಿ' ಎನ್ನುವಂತಾದೀತು. (ವಿಧಿ ಮತ್ತು ಸ್ವರೂಪೋಕ್ತಿ ಎಂಬವನ್ನು ಬಿಟ್ಟು) ಬೇರೆ ಪಕ್ಷವೇ ಇಲ್ಲ. ಇವು ಸಂಗ್ರಹ ಶ್ಲೋಕಗಳು.

**ವಿವರಣೆ:**

ಶ್ರೋತೃವಿಗೆ ತಿಳಿಯದ ವಿಷಯವನ್ನು ಹೇಳಿದರೆ ವಿಧಿ. ತಿಳಿಯದ ಆ ಅಂಶ ವಿಧೇಯ, ಅಂಥ ಸಂದರ್ಭದಲ್ಲಿ ವಿಧೇಯಾಂಶಕ್ಕೆ ಪ್ರಾಧಾನ್ಯವಿರುವುದರಿಂದ ಸಮಾಸವು ಅನುಚಿತ. ಸ್ವರೂಪಮಾತ್ರದ ಪ್ರತಿಪಾದನೆ, ಇದರಲ್ಲಿ ಯಾವ ವಿಧಿಯೂ ಇಲ್ಲ, ಶ್ರೋತೃವಿಗೆ ಗೊತ್ತಿರುವುದನ್ನೇ ಹೇಳುತ್ತಿದ್ದೇವೆ ಎನ್ನುವುದಾದರೆ ಲೋಹಿತಪದವೇ ವ್ಯರ್ಥ. ಏಕೆಂದರೆ ತಕ್ಷಕ ಎಂಬ ಪದಕ್ಕೆ ಕೆಂಪುಬಣ್ಣದ ಹಾವು ಎಂದೇ ಅರ್ಥ. ಬಿಸಿಯಾದ ಬೆಂಕಿ ಎಂದು ಹೇಳಿದರೆ ಹೇಗೋ ಹಾಗೆ ಕೆಂಪು ತಕ್ಷಕ ಎಂಬ ಮಾತು. ಆದ್ದರಿಂದ ಉಭಯಪಕ್ಷಗಳಲ್ಲೂ ಸಮಾಸದ ಔಚಿತ್ಯವಿಲ್ಲ ಎಂಬುದು ಇಲ್ಲಿ ತಾತ್ಪರ್ಯ.

**ಬಹುವ್ರೀಹೌ ಯಥಾ–**
**ಯೇನ ಸ್ಥಲೀಕೃತೋ ವಿಂಧ್ಯೋ ಯೇನಾಚಾಂತಃ ಪಯೋನಿಧಿಃ।**
**ವಾತಾಪಿಸ್ತಾಪಿತೋ ಯೇನ ಸಮುನಿಃಶ್ರೇಯಸೇಽಸ್ತು ವಃ॥**

**ಇತಿ। ಅತ್ರ ವಿಂಧ್ಯಾದಿವಿಷಯತ್ವೇನ ಸ್ಥಲೀಕರಣಾದಿ ಯದ್ವಿಶೇಷಣತಯೋಪಾತ್ತಂ ತತ್ ತತ್ಕರ್ಮಕರ್ತುರ್ಮುನೇಃ ಅತಿದುಷ್ಕರಕಾರಿತಯಾ ಕಮಪಿ ಪ್ರಭಾವಪ್ರಕರ್ಷಮ್ ಅವದ್ಯೋತಯತಿ, ವಿಂಧ್ಯಸ್ಯ ಪ್ರತಿದಿವಸಸಮುಚ್ಛ್ರಾಯಾಚ್ಛಾದಿತಾರ್ಕಪ್ರಕಾಶಸ್ಯ ಜಗದಾಂಧ್ಯವಿಧಾಯಿತ್ವಾತ್, ಪಯೋನಿಧೇರಗಾಧತ್ವಾದಪಾರತ್ವಾಚ್ಚ, ವಾತಾಪೇಃ ಸ್ವಮಾಯಾಪರಿಗ್ರಹಗ್ರಸ್ತಸಮಸ್ತಲೋಕತ್ವಾತ್। ತತಸ್ತತ್ ಪ್ರಾಧಾನ್ಯೇನ ವಿವಕ್ಷಿತಮಿತಿ ನ ತೈಃ ಸಹ ಸಮಾಸೇ ನಿರ್ಜೀವೀಕೃತಮ್।**

**ಅನುವಾದ:**

ಬಹುವ್ರೀಹಿಸಮಾಸದಲ್ಲಿ ಇದರ ಉದಾಹರಣೆ–

ಯಾವನಿಂದ ವಿಂಧ್ಯಪರ್ವತವು ನೆಲದಂತೆ ಮಾಡಲ್ಪಟ್ಟಿತೋ, ಯಾವನಿಂದ ಸಮುದ್ರವು ಕುಡಿಯಲ್ಪಟ್ಟಿತೋ, ಯಾವನಿಂದ ವಾತಾಪಿಯು ತಾಪಕ್ಕೊಳಗಾದನೋ

ಆ ಋಷಿಯು (ಅಗಸ್ತ್ಯನು) ನಿಮಗೆ ಶ್ರೇಯಸ್ಸನ್ನು ಉಂಟುಮಾಡಲಿ. ಈ ಪದ್ಯದಲ್ಲಿ ವಿಂಧ್ಯಪರ್ವತಾದಿಗಳಿಗೆ ಸ್ಥಲೀಕರಣ ಮುಂತಾದವು ವಿಶೇಷಣಗಳಾಗಿ ಬಳಸಲ್ಪಟ್ಟಿವೆ. ಆ ಕಾರ್ಯಗಳನ್ನು ಮಾಡಿದ ಅಗಸ್ತ್ಯನು ಅತಿದುಷ್ಕರವಾದುದನ್ನು ಸಾಧಿಸಿದನೆಂದು ಅವು ಅವನ ವಿಶೇಷಪ್ರಭಾವವನ್ನು ಸೂಚಿಸುತ್ತವೆ. ವಿಂಧ್ಯಪರ್ವತವು ಪ್ರತಿದಿನವೂ ಬೆಳೆದು ಸೂರ್ಯಬಿಂಬವನ್ನೇ ಮುಚ್ಚಿ ಜಗತ್ತಿಗೇ ಕುರುಡತನವನ್ನು ತಂದುಬಿಡುತ್ತಿತ್ತಲ್ಲವೆ? ಸಮುದ್ರವು ಅಗಾಧವೂ ಅಪಾರವೂ ಆಗಿದೆಯಲ್ಲವೆ? ವಾತಾಪಿಯು ತನ್ನ ಮಾಯೆಯಿಂದ ಸಮಸ್ತಲೋಕವನ್ನು ಹಿಡಿತಕ್ಕೆ ತೆಗೆದುಕೊಳ್ಳುತ್ತಿದ್ದನಲ್ಲವೆ? ಆದ್ದರಿಂದ ವಿಂಧ್ಯಾದಿಗಳು ಪ್ರಧಾನವಾಗಿ ಇಲ್ಲಿ ವಿವಕ್ಷಿತರಾಗಿದ್ದಾರೆ ಎಂಬ ಕಾರಣದಿಂದ ತದ್ವಾಚಕಗಳಾದ ಪದಗಳನ್ನು ಕವಿಯು ಸಮಾಸದೊಳಗೆ ತುರುಕಿ ನಿರ್ಜೀವಗೊಳಿಸಿಲ್ಲ.

**ಪ್ರತ್ಯುದಾಹರಣಂ ಯಥಾ– ಯಃ ಸ್ಥಲೀಕೃತವಿಂಧ್ಯಾದ್ರಿರಾಚಾಂತಾಪಾರವಾರಿಧಿಃ।**
**ಯಶ್ಚ ತಾಪಿತವಾತಾಪಿಃ ಸ ಮುನಿಃ ಶ್ರೇಯಸೇಽಸ್ತು ವಃ॥**

**ಕೇಚಿತ್ಪುನರನಯೋರುದಾಹರಣಪ್ರತ್ಯುದಾಹರಣಯೋರರ್ಥಸ್ಯೋತ್ಕರ್ಷಾಪಕರ್ಷಪ್ರತೀತಿ–ಭೇದೋ ನ ಕಶ್ಚಿದುಪಲಕ್ಷ್ಯತ ಇತಿ ಮನ್ಯಂತೇ। ತ ಇದಂ ಪ್ರಷ್ಟವ್ಯಾಃ। ಕಿಂ ಸರ್ವೇಷ್ವೇವ ಸಮಾಸೇಷ್ವಿಯಂ ತದಪ್ರತೀತಿಃ? ಉತ ಬಹುವ್ರೀಹಾವೇವಾಯಂ ಶಾಪಃ? ಇತಿ। ತತ್ರ ಯದಿ ಸರ್ವೇಷ್ವೇವೇತ್ಯಭ್ಯುಪಗಮಸ್ತರ್ಹಿ ಸಹೃದಯಾಃ ಪೃಚ್ಛ್ಯಂತಾಮ್, ವಯಂ ತಾವನ್ಮಹದಂತರಮೇತಯೋಃ ಪ್ರತೀತ್ಯೋಃ ಪಶ್ಯಾಮಃ।**

**ಅನುವಾದ:**

ಪ್ರತ್ಯುದಾಹರಣೆ– "ಸ್ಥಲೀಕೃತವಿಂಧ್ಯಪರ್ವತನೂ, ಪೀತಸಮುದ್ರನೂ, ತಾಪಿತವಾತಾಪಿಯೂ ಆದ ಮುನಿ (ಅಗಸ್ತ್ಯನು) ನಿಮಗೆ ಶ್ರೇಯಸ್ಸನ್ನು ನೀಡಲಿ." ಈ ಉದಾಹರಣೆಗೂ ಪ್ರತ್ಯುದಾಹರಣೆಗೂ ವ್ಯತ್ಯಾಸವಿಲ್ಲ, ಇವೆರಡರಲ್ಲಿ ಅರ್ಥದ ಪ್ರತೀತಿಯಲ್ಲಿ ಯಾವ ಉತ್ಕರ್ಷವಾಗಲಿ ಅಪಕರ್ಷವಾಗಲಿ ಕಾಣಿಸುವುದಿಲ್ಲ ಎಂದು ಕೆಲವರು ಭಾವಿಸುತ್ತಾರೆ. ಅವರಿಗೆ ಈ ಪ್ರಶ್ನೆಯನ್ನು ಹಾಕಬೇಕು– ಎಲ್ಲ ಸಮಾಸಗಳಲ್ಲೂ (ಉದಾಹರಣೆ– ಪ್ರತ್ಯುದಾಹರಣಗಳಲ್ಲಿ) ನಿಮಗೆ ಯಾವ ವಿಶೇಷವೂ ಕಾಣಿಸುವುದಿಲ್ಲವೋ ಅಥವಾ ಈ ಶಾಪ ಬಹುವ್ರೀಹಿ ಸಮಾಸಕ್ಕೆ ಮಾತ್ರ ಸೀಮಿತವೋ? ಎಲ್ಲ ಸಮಾಸಗಳಲ್ಲೂ ಅಷ್ಟೇ, (ನಮಗೆ ವ್ಯತ್ಯಾಸ ಕಾಣಿಸುವುದಿಲ್ಲ) ಎಂದು ಅವರು ಒಪ್ಪಿಕೊಂಡರೆ, ಆಗ ಸಹೃದಯರನ್ನು ಕೇಳಬೇಕು. ಈ ಎರಡು ಪ್ರತೀತಿಗಳಲ್ಲಿ ನಾವಂತೂ ಮಹತ್ತಾದ ಅಂತರವನ್ನು ಕಾಣುತ್ತೇವೆ.

**ಅಥ ಬಹುವ್ರೀಹಾವೇವೇತ್ಯುಚ್ಯತೇ, ತದಯುಕ್ತಮ್। ನ ಹಿ ಪ್ರತೀತಿಭೇದಹೇತೌ ಪ್ರತೀತಿಸಾಮರ್ಥ್ಯೇ ಸತಿ ಅಕಸ್ಮಾತ್ ತದಸಂಭವೋ ಭಣಿತುಂ ನ್ಯಾಯ್ಯಃ। ಏವಂ ಹಿ**

**ಕ್ಷಿತ್ಯಾದಿಸಾಮಗ್ರ್ಯಾಮ್ ಅವಿಕಲಾಯಾಮ್ ಅಂಕುರಾದಿಕಾರ್ಯೋತ್ಪಾದಾಭಾವಾ- ಭ್ಯುಪಗಮೋಽಪಿ ಪ್ರಸಜ್ಯೇತ– ಇತಿ ಸರ್ವತ್ರೈವಾಯಂ ಪ್ರತೀತಿಭೇದೋಽಭ್ಯುಪಗಂತವ್ಯಃ। ನೈವ ವಾ ಕುತ್ರಚಿತ್। ನ ಪುನರಿದಮರ್ಧಜರತೀಯಂ ಲಭ್ಯತೇ।**

**ಅನುವಾದ:**

ಬಹುವ್ರೀಹಿ ಸಮಾಸದಲ್ಲಿ ಮಾತ್ರ (ಉತ್ಕರ್ಷಾಪಕರ್ಷಗಳ ಪ್ರತೀತಿಯ ಅಭಾವ) ಎಂದು ಹೇಳುವುದಾದರೆ, ಅದು ತಪ್ಪು. ಪ್ರತೀತಿಭೇದಕ್ಕೆ ಕಾರಣವಾದ ಪ್ರತೀತಿಸಾಮರ್ಥ್ಯ ಸಮಾನವಾಗಿರುವಾಗ ನಿಷ್ಕಾರಣವಾಗಿ (ಬಹುವ್ರೀಹಿಯಲ್ಲಿ ಮಾತ್ರ) ಪ್ರತೀತಿಭೇದವಿಲ್ಲ ಎನ್ನುವುದು ಅನ್ಯಾಯ. ಹೀಗೆ ಹೇಳುವುದಾದರೆ ಭೂಮಿ (ನೀರು ಮುಂತಾದ) ಸಾಮಗ್ರಿಯು ಸಂಪೂರ್ಣವಾಗಿದ್ದಾಗಲೂ ಮೊಳಕೆ ಇತ್ಯಾದಿ ಕಾರ್ಯವು ಹುಟ್ಟುವುದಿಲ್ಲ ಎಂದೂ ಒಪ್ಪಿಕೊಳ್ಳಬೇಕಾಗಬಹುದು. ಆದ್ದರಿಂದ ಎಲ್ಲ ಸಮಾಸಗಳಲ್ಲೂ (ಸಮಾಸವನ್ನು ಮಾಡಿದಾಗ ಮತ್ತು ಮಾಡದಿದ್ದಾಗ) ಪ್ರತೀತಿಭೇದವು ಉಂಟು ಎಂದು ಒಪ್ಪಿಕೊಳ್ಳಬೇಕು. ಅಥವಾ, ಎಲ್ಲಿಯೂ (ಪ್ರತೀತಿಭೇದವು) ಇಲ್ಲ ಎಂದಾದರೂ (ಒಪ್ಪಿಕೊಳ್ಳಬೇಕು). ಅರ್ಧಜರತೀಯವು ಸರಿಯಲ್ಲ.

**ವಿವರಣೆ:**

ಒಬ್ಬ ಹೆಣ್ಣು ಮುದುಕಿ ಅಥವಾ ಮುದುಕಿಯಲ್ಲ ಎನ್ನಬೇಕು. ಸೊಂಟದ ಮೇಲೆ ಮುದುಕಿ, ಕೆಳಗೆ ಯುವತಿ ಎಂದು ಯಾರಾದರೂ ಹೇಳಿದರೆ ಅದು ಅರ್ಧಜರತೀಯ. ಅರ್ಧ ಒಪ್ಪಿ ಅರ್ಧ ಒಪ್ಪದಿರುವುದು ನ್ಯಾಯಸಮ್ಮತವಲ್ಲ.

**ಇಹ ವಾ ಪ್ರತೀತಿವೈಚಿತ್ರ್ಯಂ ಸ್ಪಷ್ಟತರಮ್ ಅವಧಾರಯತು ಮತಿಮಾನ್, ಯತ್ರ ವಿಧ್ಯನುವಾದನಿಬಂಧಃ, ತತ್ರಾಪಿ ಹಿ ಪ್ರಧಾನೇತರಭಾವವಿವಕ್ಷಾನಿಬಂಧನೌ ಸಮಾಸಸ್ಯ ಭಾವಾಭಾವಾವುಪಗತಾವೇವ। ಯಥಾ–**

**ಸೂರ್ಯಾಚಂದ್ರಮಸೌ ಯಸ್ಯ ಮಾತಾಮಹಪಿತಾಮಹೌ।**
**ಸ್ವಯಂವೃತಃ ಪತಿರ್ದ್ವಾಭ್ಯಾಮುರ್ವಶ್ಯಾ ಚ ಭುವಾಚ ಯಃ॥ ಇತಿ।**

**ಅನುವಾದ:**

ಎಲ್ಲಿ ವಿಧ್ಯನುವಾದಭಾವವನ್ನು ಹೇಳುವ ಇಚ್ಛೆಯಿಂದಲೇ ಪದಾರ್ಥಗಳನ್ನು (ಕವಿ) ಜೋಡಿಸಿರುವನೋ, ಅಲ್ಲಾದರೂ ಬುದ್ಧಿವಂತರಾದ ತಾವು ಪ್ರತೀತಿಭೇದವನ್ನು ತಿಳಿದುಕೊಳ್ಳಿರಿ. ಅಂಥ ಉದಾಹರಣೆಗಳಲ್ಲೂ ಸಮಾಸ ಬರುವುದೋ ಬರುವುದಿಲ್ಲವೋ ಎಂಬುದು ಪ್ರಾಧಾನ್ಯ, ಅಪ್ರಾಧಾನ್ಯಗಳ ವಿವಕ್ಷೆಯನ್ನು ಅವಲಂಬಿಸುತ್ತದೆ. ಉದಾಹರಣೆ–

"ಸೂರ್ಯನೂ ಚಂದ್ರನೂ ಯಾವನ ಮಾತಾಮಹಪಿತಾಮಹರೋ, ಉರ್ವಶಿಯಿಂದಲೂ ಭೂದೇವಿಯಿಂದಲೂ ಯಾವನು ಸ್ವಯಂ ಪ್ರೀತಿಯಿಂದ ವರಿಸಲ್ಪಟ್ಟಿರುವನೋ (ಆ ಪುರೂರವಸ್ ಇವನು)."

**ಅತ್ರ ಹಿ ತ್ರೈಲೋಕ್ಯೈಕಾಲಂಕಾರಭೂತೌ ಚರಾಚರಸ್ಯ ಜಗತೋ ಜೀವಿತಾಯಮಾನೌ ಭಗವಂತೌ ಸೂರ್ಯಾಚಂದ್ರಮಸೌ ಪ್ರಸಿದ್ಧಾವನೂದ್ಯ ಯನ್ಮಾತಾಮಹಪಿತಾಮಹಭಾವೋ ವಿಹಿತಸ್ತತೋಽಸ್ಯ ಪುರೂರವಸಸ್ತೌ ಲೋಕೋತ್ತರಾಭಿಜನಜನಿತಂ ಮಹಿಮಾನಂ ಕಾಮಪಿ ಕಾಷ್ಠಾಮಧಿರೋಪಯತಃ, ಯತೋ ವಿಶೇಷಣವಿಶೇಷ್ಯಭಾವಾಭಿಹಿತೇನೈವ ನ್ಯಾಯೇನ ಅತ್ರಾಪಿ ಅನೂದ್ಯಮಾನಗತೋಽತಿಶಯೋ ವಿಧೀಯಮಾನಾಕಾರಸಂಕ್ರಮಣಕ್ರಮೇಣ ತತ್ಸಂಬಂಧಿನಃ ಪರ್ಯವಸ್ಯತಿ। ತಯೋರ್ಹಿ ಸ್ವರೂಪಮಾತ್ರಂ ಭಿನ್ನಂ ಫಲಂ ಪುನಃ ಪಾರಂಪರ್ಯೇಣ ವಾಕ್ಯಾರ್ಥೋತ್ಕರ್ಷಲಕ್ಷಣಮ್ ಅವಿಲಕ್ಷಣಮಿತಿ ಪ್ರಾಧಾನ್ಯೇನ ವಿವಕ್ಷಿತತ್ವಾತ್ ನ ತೌ ತಾಭ್ಯಾಂ ಸಹ ಸಮಾಸೇ ಮ್ಲಾನಿಮಾನೀತೌ।**

**ಅನುವಾದ:**

ಈ ಪದ್ಯದಲ್ಲಿ ಮೂರು ಲೋಕಗಳಿಗೂ ಅಲಂಕಾರಭೂತರಾದ ಮತ್ತು ಚರಾಚರಪ್ರಪಂಚಕ್ಕೆ ಪ್ರಾಣದಂತಿರುವ ಪ್ರಸಿದ್ಧರಾದ ಸೂರ್ಯಚಂದ್ರರನ್ನು ಅನುವಾದ ಮಾಡಿಕೊಂಡು ಪುರೂರವಸನ ಮಾತಾಮಹತ್ವ ಮತ್ತು ಪಿತಾಮಹತ್ವಗಳನ್ನು ವಿಧಿಸಲಾಗಿದೆ. ಅದರಿಂದ ಆ ಸೂರ್ಯಚಂದ್ರರು ಪುರೂರವಸನ ಲೋಕೋತ್ತರವಂಶಜನಿತವಾದ ಮಹಿಮೆಯನ್ನು ಯಾವುದೋ ಅನಿರ್ವಚನೀಯ ಪರಾಕಾಷ್ಠೆಗೆ ಒಯ್ಯುತ್ತಾರೆ. ವಿಶೇಷಣವಿಶೇಷ್ಯಭಾವಕ್ಕೆ ಹೇಳಿದ ನ್ಯಾಯಕ್ಕೆ ಅನುಸಾರವಾಗಿ ಇಲ್ಲೂ ಅನುವಾದಿಸಲ್ಪಡುವ ವಸ್ತುವಿನಲ್ಲಿರುವ ಅತಿಶಯವು ವಿಧೇಯದ ಆಕಾರದಲ್ಲಿ ಸಂಕ್ರಮಣವನ್ನು ಹೊಂದಿ ಅದರ ಸಂಬಂಧಿಗೆ ಸೇರುವುದರಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ವಿಶೇಷಣವಿಶೇಷ್ಯಭಾವ–ಅನುವಾದ್ಯವಿಧೇಯಭಾವಗಳಿಗೆ ಸ್ವರೂಪ ಮಾತ್ರ ಬೇರೆ, ಫಲವಾದರೋ ಪರಂಪರೆಯಿಂದ ವಾಕ್ಯಾರ್ಥದ ಉತ್ಕರ್ಷವನ್ನು ಉಂಟುಮಾಡುವುದು ಸಮಾನವೇ ಆಗಿದೆ. ಆದ್ದರಿಂದ ಪ್ರಾಧಾನ್ಯದಿಂದ ವಿವಕ್ಷಿತವಾದ ಸೂರ್ಯಚಂದ್ರರು ಸಮಾಸದಲ್ಲಿ ಸೇರಿಸಲ್ಪಟ್ಟು ಕಾಂತಿಹೀನವಾಗಿ ಮಾಡಲ್ಪಟ್ಟಿಲ್ಲ.

**ಇಹ ಚ–**

**ಜನಕೋ ಜನಕೋ ಯಸ್ಯಾ ಯಾ ತಾತಸ್ಯೋಚಿತಾ ವಧೂಃ।**
**ಆರ್ಯಸ್ಯ ಗೃಹಿಣೀ ಯಾ ಚ ಸ್ತುತಿಸ್ತಸ್ಯಾಸ್ತ್ರಪಾಸ್ಪದಮ್॥**

**ದ್ವಿಗೌ ಯಥಾ–**

**ಉಪಪನ್ನಂ ನನು ಶಿವಂ ಸಪ್ತಸ್ವಂಗೇಷು ಯಸ್ಯ ಮೇ।**
**ದೈವೀನಾಂ ಮಾನುಷೀಣಾಂ ಚ ಪ್ರತಿಕರ್ತಾ ತ್ವಮಾಪದಾಮ್॥**

**ಅತ್ರ ಹಿ ಸಂಖ್ಯಾಯಾಃ ಸಂಖ್ಯೇಯೇಷ್ವಂಗೇಷು ನಿರವಶೇಷತಾ ಪ್ರತಿಪತ್ತಿಫಲಮ್ ಅತಿಶಯಮ್ ಆದಧಾನಾಯಾಃ ಪ್ರಾಧಾನ್ಯೇನ ವಿವಕ್ಷಾ। ತತ ಏವ ಹಿ ತೇಷು ದ್ವಿವಿಧಾಪತ್ಪ್ರತೀಕಾರೇಣ ರಾಜ್ಞಃ ಶಿವೋಪಪತ್ತಿಂ ಪರಿಪುಷ್ಯತೀತಿ ತಸ್ಯಾಸ್ತೈಃ ಸಹ ಸಮಾಸೋ ನ ವಿಹಿತಃ।**

**ಅನುವಾದ:**

ಮತ್ತು ಈ ಪದ್ಯದಲ್ಲೂ–

"ಯಾರ ತಂದೆ ಜನಕನೋ, ಯಾರು (ನನ್ನ) ತಂದೆಗೆ ಯೋಗ್ಯ ಸೊಸೆಯೋ, ಯಾರು ಅಣ್ಣ (ಶ್ರೀರಾಮನ) ಗೃಹಿಣಿಯೋ ಅವಳನ್ನು ಹೊಗಳುವುದು ನಾಚಿಕೆಗೇಡು."

ದ್ವಿಗುಸಮಾಸದ (ಅಭಾವಕ್ಕೆ) ಉದಾಹರಣೆ– "ಯಾವ ನನಗೆ ಬರಬಹುದಾದ ದೈವಕೃತ ಮತ್ತು ಮನುಷ್ಯಕೃತ ವಿಪತ್ತುಗಳಿಗೆ ನಿವಾರಕನಾಗಿ ನೀನಿರುವೆಯೋ, ಅಂಥ ನನಗೆ ಏಳು ರಾಜ್ಯಾಂಗಗಳಲ್ಲೂ ಶುಭವು ಸಿದ್ಧವಲ್ಲವೆ?" ಈ ಪದ್ಯದಲ್ಲಿ ಸಂಖ್ಯೇಯವಾದ ರಾಜ್ಯಾಂಗಗಳಲ್ಲಿ ಸಂಪೂರ್ಣತೆಯನ್ನು ತಿಳಿಸುವ ಫಲವನ್ನುಳ್ಳ ಅತಿಶಯವನ್ನುಂಟುಮಾಡುವ ಸಂಖ್ಯೆಗೆ ಪ್ರಾಧಾನ್ಯವು (ಕವಿಗೆ) ವಿವಕ್ಷಿತವಾಗಿದೆ. ಆ (ಸಂಖ್ಯೆಯು ತೋರಿಸುವ) ಅತಿಶಯದಿಂದಲೇ ಅಂಗಗಳಲ್ಲಿ ಎರಡು ವಿಧವಾದ ಆಪತ್ತುಗಳ ನಿವಾರಣೆಯಿಂದ ರಾಜನಿಗೆ ಶುಭಸಿದ್ಧಿಯಾಗುವುದೆಂಬುದನ್ನು ಆ ಸಂಖ್ಯೆಯು ಪೋಷಿಸುತ್ತದೆ ಎಂಬ ಕಾರಣದಿಂದ ಆ ಸಂಖ್ಯಾವಾಚಕಕ್ಕೆ ಅಂಗಶಬ್ದದೊಡನೆ ಸಮಾಸವನ್ನು (ಕವಿಯು) ಮಾಡಿಲ್ಲ.

**ವಿವರಣೆ:**

ರಾಜ, ಮಂತ್ರಿ, ನಗರ, ರಾಷ್ಟ್ರ, ಕೋಶ, ದಂಡ, ಮಿತ್ರ ಎಂಬವು ಸಪ್ತ ರಾಜ್ಯಾಂಗಗಳು.

**ಯಥಾ ಚ–**

**ನಿಗ್ರಹಾತ್ ಸ್ವಸುರಾಪ್ತಾನಾಂ ವಧಾಚ್ಚ ಧನದಾನುಜಃ।**
**ರಾಮೇಣ ನಿಹಿತಂ ಮೇನೇ ಪದಂ ದಶಸು ಮೂರ್ಧಸು॥**

**ಪ್ರತ್ಯುದಾಹರಣಮ್ ಏತದೇವೋದಾಹರಣಂ ಕೃತಸಮಾಸವೈಶಸಂ ದ್ರಷ್ಟವ್ಯಮ್।**

**ನಞ್‌ಸಮಾಸೋದಾಹರಣಂ ಯಥಾ–**

**"ನವಜಲಧರಃ ಸನ್ನದ್ಧೋಽಯಂ ನ ದೃಪ್ತನಿಶಾಚರಃ"**

**ಇತ್ಯೇವಮಾದಿ ಪೂರ್ವಮೇವೋಪದರ್ಶಿತಮ್, ಉಪಪಾದಿತಂ ಚ।**

**ಅನುವಾದ:**

ಇನ್ನೊಂದು ಉದಾಹರಣೆ–

"ತಂಗಿಗೆ ಆದ ಮುಖಭಂಗದಿಂದಲೂ, ಆಪ್ತರ ವಧೆಯಿಂದಲೂ ಕುಬೇರನ ತಮ್ಮ (ರಾವಣ)ನು ತನ್ನ ಹತ್ತು ತಲೆಗಳ ಮೇಲೂ ರಾಮನು ಪಾದವನ್ನಿಟ್ಟು ಮೆಟ್ಟಿದನು ಎಂದು ತಿಳಿದುಕೊಂಡನು."

ಇದೇ ಉದಾಹರಣೆಯಲ್ಲಿ ಸಮಾಸದ ಪೀಡೆಯನ್ನುಂಟುಮಾಡಿದರೆ ಅದೇ ಪ್ರತ್ಯುದಾಹರಣೆಯಾಗುತ್ತದೆ ಎಂದು ತಿಳಿದುಕೊಳ್ಳಬೇಕು.

ನಞ್‌ಸಮಾಸದ ಉದಾಹರಣೆ–

ಯುದ್ಧಸನ್ನದ್ಧವಾಗಿ ನಿಂತಿರುವುದು ಹೊಸ ಮೋಡ, ದರ್ಪದಿಂದ ಕೊಬ್ಬಿದ ರಾಕ್ಷಸನಲ್ಲ –ಇತ್ಯಾದಿ. ಇದನ್ನು ಈ ಮೊದಲೇ ಉದಾಹರಿಸಿ ವಿವರಿಸಲಾಗಿದೆ.

**ವಿವರಣೆ:**

"ನಿಗ್ರಹಾತ್ಸ್ವಸುಃ" ಇತ್ಯಾದಿ ಪದ್ಯದಲ್ಲಿ ದಶಸು ಮೂರ್ಧಸು ಎಂದು ಬಿಡಿಸಿ ಹೇಳಿದುದರಿಂದ ಒಂದೊಂದು ತಲೆಯನ್ನೂ ರಾಮನು ಕಾಲಿನಿಂದ ಮೆಟ್ಟಿದನೆಂಬ ಅರ್ಥ ತೋರುವುದರಿಂದ ಸ್ವಾರಸ್ಯ. ದಶಮೂರ್ಧಸು ಎಂದು ಸಮಾಸ ಮಾಡಿದರೆ ಅದು ನಷ್ಟವಾಗುತ್ತದೆ.

**ಪ್ರತ್ಯುದಾಹರಣಂ ಯಥಾ–**
**ವಾಚ್ಯವೈಚಿತ್ರ್ಯರಚನಾಚಾರು ವಾಚಸ್ಪತೇರಪಿ।**
**ದುರ್ವಚಂ ವಚನಂ ತೇನ ಬಹು ತತ್ರಾಪ್ಯನುಕ್ತವಾನ್॥**
**ಇತಿ। ತತ್ಪುರುಷೇ ಕರ್ತುರ್ಯಥಾ–**
**ದೇಶಃ ಸೋಽಯಮರಾತಿಶೋಣಿತಜಲೈರ್ಯಸ್ಮಿನ್ ಹ್ರದಾಃಪೂರಿತಾಃ**
**ಕ್ಷತ್ರಾದೇವ ತಥಾವಿಧಃ ಪರಿಭವಸ್ತಾತಸ್ಯ ಕೇಶಗ್ರಹಃ।**
**ತಾನ್ಯೇವಾಹಿತಶಸ್ತ್ರಘಸ್ಮರಗುರೂಣ್ಯಸ್ತ್ರಾಣಿ ಭಾಸ್ವಂತಿ ಮೇ**
**ಯದ್ರಾಮೇಣ ಕೃತಂ ತದೇವ ಕುರುತೇ ದ್ರೋಣಾತ್ಮಜಃ ಕ್ರೋಧನಃ॥**

**ಅನುವಾದ:**

ಪ್ರತ್ಯುದಾಹರಣೆ–

"ಅರ್ಥದ ವಿಚಿತ್ರತೆಯನ್ನುಳ್ಳ ರಚನೆಯಿಂದ ಸೊಬಗನ್ನು ಪಡೆದ ಮಾತನ್ನು ಹೇಳುವುದು ವಾಚಸ್ಪತಿಗೂ ಕಷ್ಟವೇ. ಆದ್ದರಿಂದ ಅವನು ಅಲ್ಲಿ ಹೆಚ್ಚು ಮಾತನಾಡದವನಾದನು."

ತತ್ಪುರುಷದಲ್ಲಿ ಕರ್ತೃಪದ (ಸಮಾಸದಲ್ಲಿ ಸೇರದೆ ಇರುವುದಕ್ಕೆ) ಉದಾಹರಣೆ–

"ಶತ್ರುಗಳ ನೆತ್ತರಿನಿಂದ ಕೊಳಗಳನ್ನು ತುಂಬಿಸಿದ ಅದೇ ದೇಶ ಇದು. ನನ್ನ ತಂದೆಯ ಕೂದಲನ್ನು ಹಿಡಿದೆಳೆದು ಅಂಥ ಅವಮಾನ ಇಂದು ನಡೆದದ್ದೂ ಕ್ಷತ್ರಿಯನಿಂದಲೇ. ಶತ್ರುಗಳ ಶಸ್ತ್ರಗಳನ್ನು ನುಂಗಿ ಭಾರವಾಗಿರುವ ಆ ಹೊಳೆಯುವ ಅಸ್ತ್ರಗಳೇ ನನ್ನಲ್ಲಿವೆ. ಅಂದು ಪರಶುರಾಮನು ಏನನ್ನು ಮಾಡಿದನೋ ಅದನ್ನೇ ಇಂದು ಕ್ರೋಧತಪ್ತನಾದ ದ್ರೋಣಾತ್ಮಜ(ಅಶ್ವತ್ಥಾಮ)ನೂ ಮಾಡುತ್ತಾನೆ."

**ಅತ್ರ ರಾಮೇಣೇತಿ ರಾಮಸ್ಯ ಕರ್ತೃಭಾವೇನ ಕರಣಂ ಪ್ರತಿ ಯದ್ವಿಶೇಷಣತ್ವಂ ತತ್ತಸ್ಯ ದಾರುಣತಾತಿರೇಕಾತ್ಮಕಮ್ ಉತ್ಕರ್ಷಂ ರೌದ್ರರಸಪರಿಪೋಷಪರ್ಯವಸಾಯಿನಂ ಸಮರ್ಪಯತಿ, ತಸ್ಯ ನಿರತಿಶಯಶೌರ್ಯಶಾಲಿತ್ವೇನ ಘೋರತರನೈರ್ಘೃಣ್ಯನಿಘ್ನತಯಾ ಚ ಪ್ರಸಿದ್ಧೇಃ। ತೇನ ತತ್ಪ್ರಾಧಾನ್ಯಾನ್ನ ವಿಶೇಷ್ಯೇಣ ಸಹ ಸಮಾಸೇ ಗುಣತಾಂ ನೀತಮ್।**

**ಅನುವಾದ:**

ಇಲ್ಲಿ ರಾಮೇಣ ಎಂಬ ಪದದಿಂದ ರಾಮನ ಕರ್ತೃಭಾವವು ಉಕ್ತವಾಗಿ ಕಾರ್ಯಕ್ಕೆ ವಿಶೇಷಣವಾಗಿದೆ ಎಂಬುದು ಆ ಕಾರ್ಯದ ಅತ್ಯಂತ ದಾರುಣತ್ವರೂಪದ ಉತ್ಕರ್ಷವನ್ನು ತೋರಿಸುತ್ತದೆ. ಅದು ರೌದ್ರರಸದ ಪರಿಪೋಷದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಏಕೆಂದರೆ ಪರಶುರಾಮನು ಯಾರೂ ಮೀರಿಸಲಾಗದ ಶೌರ್ಯವನ್ನು ಹೊಂದಿದ್ದನೆಂದೂ ಘೋರವಾದ ನಿರ್ದಯಸ್ವಭಾವವನ್ನು ಪಡೆದಿದ್ದನೆಂದೂ ಪ್ರಸಿದ್ಧಿ ಇದೆ. ಆದ್ದರಿಂದಲೇ ಅವನ ಕಾರ್ಯಕ್ಕೂ ಪ್ರಾಧಾನ್ಯದ ವಿವಕ್ಷೆ. ಆದ್ದರಿಂದ ಇಲ್ಲಿ ತದ್ವಾಚಕವನ್ನು ವಿಶೇಷ್ಯವಾಚಕದೊಡನೆ ಸೇರಿಸಿ ಸಮಾಸದಲ್ಲಿ ಅಪ್ರಧಾನವಾಗುವಂತೆ (ಕವಿಯು) ಮಾಡಿಲ್ಲ.

**ವಿವರಣೆ:**

ರಾಮೇಣ ಕೃತಂ ಎಂದು ವ್ಯಸ್ತವಾಗಿ ಕವಿ ಹೇಳಿದ್ದಾನೆ. ರಾಮಕೃತಂ ಎಂದು ಸಮಾಸವನ್ನು ಮಾಡಿದರೆ ಆಗ ರಾಮಪದದ ಅರ್ಥ ಪ್ರಧಾನವಾಗಿ ತೋರುವುದಿಲ್ಲ. ಇಲ್ಲಿ ಸಮಾಸವನ್ನು ಮಾಡದೆ ಇರುವುದು ಕವಿಯ ಪ್ರತಿಭೆಗೆ ದ್ಯೋತಕವಾಗಿದೆ.

> **ಕರ್ತ್ರಾದೀನಾಂ ಕಾರಕಾಣಾಮನೇಕೇಷಾಂ ಸಮಶೀರ್ಷಿಕಯಾ ವಿಶೇಷಣಭಾವೇನ ಯದುಪಾದಾನಂ ಸ ದ್ವಂದ್ವಸ್ಯ ವಿಷಯ ಇತಿ ತತ್ಸ್ವರೂಪನಿರೂಪಣಾವಸರ ಏವ ತೇಷಾಂ ಪ್ರಾಧಾನ್ಯಮಪ್ರಾಧಾನ್ಯಂ ಚಾಭಿಧಾಸ್ಯತ ಇತಿ ನ ತದುದಾಹರಣಮಿಹ ಪ್ರದರ್ಶಿತಮ್। ನಾಪಿ ವಿಧ್ಯನುವಾದಭಾವೋದಾಹರಣಂ, ತಸ್ಯ ವಿಶೇಷಣವಿಶೇಷ್ಯಭಾವತುಲ್ಯಫಲತಯಾ ತತ್ಸಮಾನವೃತ್ತಾಂತತ್ವೋಪಪಾದನಾತ್। ಪ್ರತ್ಯುದಾಹರಣಂ ಯಥಾ– "ಯಸ್ಯಾವಮತ್ಯ ಗುರುದತ್ತಮಿದಂ ಕುಠಾರಂ ಡಿಂಭೋಽಪಿ ರಾಮ ಇತಿ ನಾಮಪದಸ್ಯ ಹರ್ತಾ"**

**ಅನುವಾದ:**

ಕರ್ತೃ ಮುಂತಾದ ಅನೇಕ ಕಾರಕಗಳನ್ನು, ಸಮಾನವಾಗಿ ವಿಶೇಷಣಭಾವದಿಂದ ಹೇಳುವುದು ದ್ವಂದಸಮಾಸಕ್ಕೆ ವಿಷಯವಾಗುತ್ತದೆ. ಆದ್ದರಿಂದ ಅದರ ಸ್ವರೂಪದ ನಿರೂಪಣೆಯ ಸಂದರ್ಭದಲ್ಲೇ ಅವುಗಳ ಪ್ರಾಧಾನ್ಯ–ಅಪ್ರಾಧಾನ್ಯವನ್ನು ಹೇಳುವೆವು. ಆದ್ದರಿಂದ ಇಲ್ಲಿ ಅದರ ಉದಾಹರಣೆಯನ್ನು ಕೊಟ್ಟಿಲ್ಲ. ವಿಧ್ಯನುವಾದಭಾವದ ಉದಾಹರಣೆಯನ್ನೂ ಕೊಟ್ಟಿಲ್ಲ, ಏಕೆಂದರೆ ಅದರ ಮತ್ತು ವಿಶೇಷಣವಿಶೇಷ್ಯಭಾವದ ಫಲ ಒಂದೇ, ಆದ್ದರಿಂದ ಅವೆರಡೂ ಸಮಾನ ಎಂದು ಪರಿಗಣಿಸಲಾಗಿದೆ. ಪ್ರತ್ಯುದಾಹರಣೆ–

> ಗುರುದತ್ತವಾದ ಈ ಕುಠಾರವನ್ನು ತಿರಸ್ಕರಿಸಿ ಆ ಮಗುವೂ ರಾಮ ಎಂಬ ಹೆಸರನ್ನು ಕದ್ದಿದ್ದಾನೆ.

**ವಿವರಣೆ:**

ಇಲ್ಲಿ ಗುರು ಎಂಬ ಕರ್ತೃವಿಗೆ ಪ್ರಾಧಾನ್ಯವಿರುವುದರಿಂದ ಸಮಾಸವನ್ನು ಮಾಡಬಾರದಾಗಿತ್ತು. ಗುರುಣಾ ದತ್ತಂ ಎಂದು ಕವಿಯು ಹೇಳಿದ್ದರೆ ಚೆನ್ನಾಗಿತ್ತು.

**ಕರ್ಮಣೋ ಯಥಾ– ಕೃತಕಕುಪಿತೈರ್ಬಾಷ್ಪಾಂಭೋಭಿಃಸದೈನ್ಯವಿಲೋಕಿತೈ–**
**ರ್ವನಮಪಿ ಗತಾ ಯಸ್ಯ ಪ್ರೀತ್ಯಾ ಧೃತಾಪಿ ತಥಾಂಬಯಾ।**
**ನವಜಲಧರಶ್ಯಾಮಾಃ ಪಶ್ಯನ್ ದಿಶೋ ಭವತೀಂ ವಿನಾ**
**ಕಠಿನಹೃದಯೋ ಜೀವತ್ಯೇವ ಪ್ರಿಯೇ ಸ ತವ ಪ್ರಿಯಃ॥**

**ಅತ್ರ ವನಮಿತಿ ಯದ್ ಗಮನಕ್ರಿಯಾಯಾಃ ಸೀತಾವಿಶೇಷಣ ಭೂತಾಯಾಃ ಕರ್ಮಭಾವೇನ ವಿಶೇಷಣಂ ತತ್ತಸ್ಯಾ ರಾಮಪ್ರೀತಿಪ್ರಕರ್ಷಯುಕ್ತಾಯಾ ಅನ್ಯಕುಲಮಹಿಲಾ ದುರ್ಲಭಂ ದುಷ್ಕರಕಾರಿತ್ವಂ ನಾಮೋತ್ಕರ್ಷಮರ್ಪಯತಿ ವನವಾಸದುಃಖಸ್ಯಾತಿಕಷ್ಟತ್ವಾತ್। ಸ ಚೋತ್ಕರ್ಷೋ ರಾಮಸ್ಯ ರತೇರುದ್ದೀಪನತಾಂ ಪ್ರತಿಪದ್ಯತ ಇತಿ ಪ್ರಧಾನಂ, ನ ಗತೇತ್ಯನೇನ ಸಹ ಸಮಾಸೇ ತಿರಸ್ಕೃತಮ್।**

**ಅನುವಾದ:**

ಕರ್ಮಪದದ (ಪ್ರಾಧಾನ್ಯವಿದ್ದಾಗ ಅದನ್ನು ಸಮಾಸದಲ್ಲಿ ಸೇರಿಸದಿರುವುದರ) ಉದಾಹರಣೆ– "ಕೃತಕ ಕೋಪದಿಂದ, ಕಂಬನಿಯಿಂದ, ದೈನ್ಯತುಂಬಿದ ನೋಟದಿಂದ ನೀನು ನನ್ನಲ್ಲಿಟ್ಟ ಪ್ರೀತಿಯಿಂದ ತಾಯಿ ಅಷ್ಟೊಂದು ತಡೆಯುತ್ತಿದ್ದರೂ ಲೆಕ್ಕಿಸದೆ, ಕಾಡಿಗೂ ಹೊರಟೆ, ಪ್ರಿಯೆ, ಆ ನಿನ್ನ ಪ್ರಿಯನು ಕಠಿಣಮನಸ್ಸಿನವನಾಗಿ, ನೀನಿಲ್ಲದಿದ್ದರೂ ಹೊಸ ಮೋಡಗಳಿಂದ ಕಪ್ಪಾದ ದಿಕ್ಕುಗಳನ್ನು ನೋಡುತ್ತಾ ಬದುಕೇ ಇದ್ದಾನೆ".

ಸೀತೆಯ ವಿಶೇಷಣವಾದ ಗಮನಕ್ರಿಯೆಗೆ ಇಲ್ಲಿ ಕರ್ಮಕಾರಕದ ರೂಪದಲ್ಲಿ ಯಾವ ವಿಶೇಷಣವನ್ನು ಕೊಟ್ಟಿದ್ದಾರೋ ಅದು ರಾಮನಲ್ಲಿ ಅತಿಶಯ ಪ್ರೇಮವನ್ನು ಹೊಂದಿದ್ದ ಅವಳ ಉತ್ಕರ್ಷವನ್ನು ತೋರಿಸುತ್ತದೆ. ಆ ಉತ್ಕರ್ಷ ಬೇರೆ ಯಾವ ಕುಲಾಂಗನೆಗೂ ದುರ್ಲಭವಾದ ದುಷ್ಕರಕಾರ್ಯವನ್ನೂ ಮಾಡಿದಳೆಂದು ಸೂಚಿಸುತ್ತದೆ, ಏಕೆಂದರೆ ವನವಾಸದ ದುಃಖವು ಅತ್ಯಂತ ಕಷ್ಟವನ್ನು ಕೊಡುವುದಾಗಿದೆ. ಆ ಉತ್ಕರ್ಷ ರಾಮನ ಪ್ರೀತಿಗೆ ಉದ್ದೀಪನ ವಿಭಾವವಾಗುವುದರಿಂದ ಪ್ರಧಾನ. ಅದನ್ನು "ನ ಗತಾ" ಎಂಬುದರೊಡನೆ ಸಮಾಸದಲ್ಲಿ ಸೇರಿಸಿ (ಕವಿಯು) ತಿರಸ್ಕಾರಕ್ಕೆ ಈಡುಮಾಡಿಲ್ಲ.

**ಯಥಾ ಚ– "ಗುರ್ವರ್ಥಮರ್ಥೀ ಶ್ರುತಪಾರದೃಶ್ವಾ ರಘೋಃ ಸಕಾಶಾದನವಾಪ್ಯ ಕಾಮಮ್" ಇತಿ। ಅತ್ರ ಗುರ್ವರ್ಥಮ್ ಇತ್ಯರ್ಥಿನೋಽರ್ಥನಕ್ರಿಯಾಮುಖೇನ ಯದ್ವಿಶೇಷಣಂ ತತ್ ತಸ್ಯ ಶ್ಲಾಘ್ಯತಾತಿಶಯಾಧಾನದ್ವಾರೇಣ ರಘೋರುತ್ಸಾಹಪರಿಪೋಷೇ ಪರ್ಯವಸ್ಯತೀತಿ ಪ್ರಾಧಾನ್ಯೇನ ವಿವಕ್ಷಿತತ್ವಾನ್ನಾರ್ಥಿನಾ ಸಹ ಸಮಾಸೇ ಸತಾಮ್ ಅವಮತತಾಂ ಗಮಿತಮ್। ಯಥಾ ಚ– "ಸಂವರ್ಧಿತಾನಾಂ ಸುತನಿರ್ವಿಶೇಷಮ್" ಇತಿ।**

**ಅನುವಾದ:**

ಇನ್ನೊಂದು ಉದಾಹರಣೆ (ಗುರ್ವರ್ಥಮರ್ಥೀ)– "ವಿದ್ಯೆಯಲ್ಲಿ ಪಾರಂಗತನಾದ ಯಾಚಕ (ಕೌತ್ಸನು) ಗುರುವಿಗಾಗಿ ಯಾಚನೆ ಮಾಡಲು ಬಂದಾಗ ರಘುವಿನ ದೆಸೆಯಿಂದ ತನ್ನ ಅಪೇಕ್ಷೆಯನ್ನು ಈಡೇರಿಸಿಕೊಳ್ಳಲಾಗದೆ ಮತ್ತೊಬ್ಬ ದಾನಿಯ ಬಳಿಗೆ ಹೋದನೆಂಬ ಅಪಕೀರ್ತಿ ಉಂಟಾಗಬಾರದು".

ಇಲ್ಲಿ ಗುರ್ವರ್ಥಮ್ ಎಂಬುದು ಅರ್ಥನೆ ಎಂಬ ಕ್ರಿಯೆಯ ಮೂಲಕ ಅರ್ಥಿಗೆ (ಕೌತ್ಸನಿಗೆ) ವಿಶೇಷಣವಾಗಿದೆ, ಅದು ಆ ಕೌತ್ಸನ ಅತಿಶಯಿತವಾದ ಶ್ಲಾಘ್ಯತೆಯನ್ನು ತೋರಿಸಿ ರಘುವಿನ ದಾನೋತ್ಸಾಹವನ್ನು ಪರಿಪೋಷಿಸುವುದರಲ್ಲಿ ಪರ್ಯವಸಾನವನ್ನು ಹೊಂದುವುದೆಂದು ವಿವಕ್ಷಿತವಾಗಿದೆ. ಆದ್ದರಿಂದ ಅದನ್ನು (ಅದರ ವಾಚಕವಾದ ಪದವನ್ನು) ಅರ್ಥಿ (ಎಂಬ ಪದದ) ಒಡನೆ ಸಮಾಸದಲ್ಲಿ ಸೇರಿಸಿ ವಿದ್ವಾಂಸರು ನಿಂದಿಸುವ ಹಾಗೆ (ಕವಿಯು) ಮಾಡಿಲ್ಲ.

ಇನ್ನೊಂದು ಉದಾಹರಣೆ (ಸಂವರ್ಧಿತಾನಾಂ)– "ಸುತನಿರ್ವಿಶೇಷವಾಗಿ (ತನ್ನ ಮಕ್ಕಳಿಗೆ ಸಮಾನವಾಗಿ) ಬೆಳೆಸಲ್ಪಟ್ಟ ಗಿಡಗಳು".

**ಪ್ರತ್ಯುದಾಹರಣಂ ಯಥಾ– "ಪ್ರದಕ್ಷಿಣಕ್ರಿಯಾತೀತಸ್ತಸ್ಯಾಃ ಕೋಪಮಜೀಜನಃ" ಇತಿ, "ತಮಭ್ಯನಂದತ್ ಪ್ರಥಮಪ್ರಬೋಧಿತಃ ಪ್ರಜೇಶ್ವರಃ ಶಾಸನಹಾರಿಣಾ ಹರೇಃ" ಇತಿ, "ಯಥಾಕಾಮಾರ್ಚಿತಾರ್ಥಿನಾಮ್" ಇತಿ, "ಯಥಾಕಾಲಪ್ರಬೋಧಿನಾಮ್" ಇತಿ ಚ।**

**ಅನುವಾದ:**

ಪ್ರತ್ಯುದಾಹರಣೆ– (ಪ್ರದಕ್ಷಿಣ.....)

"ನೀನು ಪ್ರದಕ್ಷಿಣ ಕ್ರಿಯೆಯನ್ನು ಮಾಡದೆ ಅವಳಿಗೆ (ಕಾಮಧೇನುವಿಗೆ) ಕೋಪ ಬರುವಂತೆ ಮಾಡಿದೆ".

ಇನ್ನೊಂದು (ಪ್ರತ್ಯುದಾಹರಣೆ)–

"ಇಂದ್ರನ ದೂತನಿಂದ ಮೊದಲೇ ವಿಷಯವನ್ನು ತಿಳಿದುಕೊಂಡ ರಾಜನು ಅವನನ್ನು ಅಭಿನಂದಿಸಿದನು". ಮತ್ತೊಂದು (ಪ್ರತ್ಯುದಾಹರಣೆ –ಯಥಾಕಾಮ)–

"ಅವರವರ ಅಪೇಕ್ಷೆಗೆ ಅನುಗುಣವಾಗಿ ಅರ್ಥಿಗಳ ಆಶೆಯನ್ನು ಈಡೇರಿಸುತ್ತಿದ್ದ ರಘುವಂಶದ ರಾಜರ....." ಇನ್ನೂ ಒಂದು (ಪ್ರತ್ಯುದಾಹರಣೆ)–

"ಕಾಲಾನುಗುಣವಾಗಿ ಎಚ್ಚರಗೊಳ್ಳುತ್ತಿದ್ದ (ರಘುವಂಶದ ರಾಜರ ಚರಿತ್ರೆಯನ್ನು ಹೇಳುವೆನು)".

**ವಿವರಣೆ:**

ಇಲ್ಲಿ ಉದಾಹರಣೆಗಳೂ ಪ್ರತ್ಯುದಾಹರಣೆಗಳೂ ಕಾಳಿದಾಸನ ಕಾವ್ಯಗಳಿಂದಲೇ ಆರಿಸಲ್ಪಟ್ಟಿವೆ ಎಂಬುದನ್ನು ಗಮನಿಸಬೇಕು. ಪ್ರದಕ್ಷಿಣಕ್ರಿಯೆಗೆ ಪ್ರಾಧಾನ್ಯವಿರುವುದರಿಂದ ಪ್ರದಕ್ಷಿಣಕ್ರಿಯಾತೀತಃ ಎಂದು

ಅದನ್ನು ಸಮಾಸದಲ್ಲಿ ಸೇರಿಸಬಾರದಾಗಿತ್ತು. ಪ್ರಥಮಪ್ರಬೋಧಿತಃ ಎಂಬ ಸಮಾಸವೂ ಸರಿಯಲ್ಲ, ಪ್ರಥಮ ಎಂಬುದರ ಪ್ರಾಧಾನ್ಯ ಸಮಾಸದಲ್ಲಿ ನಷ್ಟವಾಗಿದೆ. ಪ್ರಥಮಂ ಪ್ರಬೋಧಿತಃ ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು.

**ಕರಣಸ್ಯ ಯಥಾ– ಆಲೋಕಮಾರ್ಗಂ ಸಹಸಾ ವ್ರಜಂತ್ಯಾ ಕಯಾಚಿದುದ್ವೇಷ್ಟನವಾಂತಮಾಲ್ಯಃ।**
**ಬದ್ಧುಂ ನ ಸಂಭಾವಿತ ಏವ ತಾವತ್ ಕರೇಣ ರುದ್ಧೋಽಪಿ ನ ಕೇಶಹಸ್ತಃ॥**
**ಅತ್ರ 'ಕರೇಣ' ಇತಿ ಯತ್ ಕೇಶಹಸ್ತಕರ್ಮಕಸ್ಯ ಸಂಭಾವಿತಸ್ಯ ರೋಧನಸ್ಯ ಕರಣಭಾವೇನ ವಿಶೇಷಣಂ ತತ್ ತಸ್ಯಾಃ ಕಸ್ಯಾಶ್ಚಿತ್ ರಭಸೌತ್ಸುಕ್ಯಪ್ರಹರ್ಷಪ್ರಕರ್ಷರೂಪಮ್ ಅತಿಶಯಂ ಪ್ರತಿಪಾದಯತ್ ವಧೂವರಯೋಃ ರೂಪಸಂಪದಮ್ ಅಸಾಧಾರಣೀಮ್ ಅಭಿವ್ಯನಕ್ತಿ, ಯದವಲೋಕನವ್ಯವಧಾನಾಧಾಯಿನೀಂ ತಾವತೀಮ್ ಅಪಿ ಕಾಲಕಲಾಂ ವಿಘ್ನಾಯಮಾನಾಂ ಮನ್ಯಮಾನಯಾನಯಾ ಸತತಂ ಸ್ವಾಧೀನೇನೈಕೇನ ಕರಕಮಲೇನ ರೋಧೋಽಪ್ಯಸ್ಯ ನ ಕೃತಃ। ತೇನ ತತ್ ಪ್ರಧಾನಮಿತಿ 'ನ ರುದ್ಧ' ಇತ್ಯನೇನ ಸಹ ಸಮಾಸೇಽಸ್ತಮುಪನೀತಮ್।**

**ಯಥಾ ಚ– ಕರ್ತುಮಕ್ಷಮಯಾ ಮಾನಂ ಪ್ರಾಣೇಶಃ ಪ್ರತ್ಯಭೇದಿ ಯತ್।**
**ಸೋಽಯಂ ಸಖಿ ಸ್ವಹಸ್ತೇನ ಸಮಾಕೃಷ್ಟಸ್ತ್ವಯಾನಲಃ॥**
**ಪ್ರತ್ಯುದಾಹರಣಂ ಯಥಾ– ಧಾತ್ರಾ ಸ್ವಹಸ್ತಲಿಖಿತಾನಿ ಲಲಾಟಪಟ್ಟೇ ಕೋ ವಾಕ್ಷರಾಣಿ ಪರಿಮಾರ್ಜಯಿತುಂ ಸಮರ್ಥಃ॥ ಇತಿ।**

**ಅನುವಾದ:**

ಕರಣದ ಉದಾಹರಣೆ–

"ಒಬ್ಬಳು (ಆ ವಧೂವರರನ್ನು) ನೋಡಲು ಅನುಕೂಲವಾದ ದಾರಿಗೆ ಹೋಗುತ್ತಾ ಇರುವಾಗ ಅವಳ ತುರುಬು ಬಿಚ್ಚಿಹೋಯಿತು. ಅದರಲ್ಲಿದ್ದ ಮಾಲೆ ಜಾರಿ ಹೋಯಿತು. ಅವಳು ಕೈಯಿಂದ ಆ ತುರುಬನ್ನು ಹಿಡಿದರೂ ಅದನ್ನು ಕಟ್ಟಿಕೊಳ್ಳುವ ಯೋಚನೆಯನ್ನೇ ಮಾಡದೆ (ಆಲೋಕ ಮಾರ್ಗದೆಡೆಗೆ ಓಡಿದಳು)."

ಇಲ್ಲಿ ಕರೇಣ (=ಕೈಯಿಂದ) ಎಂಬುದು ತುರುಬನ್ನು ಹಿಡಿದುಕೊಳ್ಳುವುದಕ್ಕೆ ಕರಣ (=ಸಾಧನ) ರೂಪದ ವಿಶೇಷಣವಾಗಿ ಉಪಾತ್ತವಾಗಿದೆ. ಅದು ಒಬ್ಬ ಹೆಂಗಸಿನ ನಡಿಗೆಯ ವೇಗ, ಉತ್ಸುಕತೆ, ನಲಿವುಗಳ ಪ್ರಕರ್ಷದ ಅತಿಶಯವನ್ನು ಪ್ರತಿಪಾದಿಸಿ (ಆಕೆಯು ನೋಡಲು ಹೊರಟ) ವಧೂವರರ ಅಸಾಧಾರಣವಾದ ಚೆಲುವಿನ ಸಂಪತ್ತನ್ನು ವ್ಯಂಜಿಸುತ್ತದೆ. ಅವರನ್ನು ನೋಡುವುದಕ್ಕೆ ಉಂಟಾಗುವ ಕಾಲವ್ಯವಧಾನ ಅಲ್ಪವಾಗಿದ್ದರೂ ಅದನ್ನೇ ವಿಘ್ನವೆಂದು ಭಾವಿಸಿದ ಆಕೆ ಯಾವಾಗಲೂ ತನ್ನ ಅಧೀನದಲ್ಲೇ ಇರುವ ತಾವರೆಯಂತಿದ್ದ ಕೈಯಿಂದಲೂ (ಬಿಚ್ಚಿಹೋಗುತ್ತಿದ್ದ ಕೇಶಪಾಶದ) ರೋಧನವನ್ನು ಮಾಡಲಿಲ್ಲ. ಆದ್ದರಿಂದ ಕರಕ್ಕೆ ಇಲ್ಲಿ ಪ್ರಾಧಾನ್ಯವಿದೆಯೆಂದು ಆ ಪದಕ್ಕೆ "ನ ರುದ್ಧಃ" ಎಂಬುದರೊಡನೆ ಸಮಾಸವನ್ನು ಮಾಡಿ ಅಸ್ತಂಗತವಾಗುವ ಹಾಗೆ ಕವಿಯು ಮಾಡಿಲ್ಲ. ಇನ್ನೊಂದು

ಉದಾಹರಣೆ (ಕರ್ತೃಮಕ್ಷಮಯಾ) "ಕೋಪವನ್ನು ತೋರಿಸಲು ಅಶಕ್ತಳಾದ ನೀನು ಪ್ರಾಣೇಶ್ವರನನ್ನು ವಿರೋಧಿಸಿದೆಯೆಂಬುದೇನಿದೆ, ಸಖಿ, ಅದು ನೀನೇ ನಿನ್ನ ಕೈಯಿಂದ ಬೆಂಕಿಯನ್ನು ನಿನ್ನ ಕಡೆಗೆ ಎಳೆದುಕೊಂಡಂತಾಯಿತು".

ಪ್ರತ್ಯುದಾಹರಣೆ– (ಧಾತ್ರಾ.....) "ಹಣೆಯಲ್ಲಿ ಬ್ರಹ್ಮನ ಸ್ವಹಸ್ತಲಿಖಿತವಾದ ಅಕ್ಷರಗಳನ್ನು ಯಾವನು ತಾನೆ ಅಳಿಸಿಹಾಕಲು ಶಕ್ತನಾಗುವನು?"

**ವಿವರಣೆ:**

ಪ್ರತ್ಯುದಾಹರಣೆಯಲ್ಲಿ ಕರಣವಾಚಕವಾದ 'ಸ್ವಹಸ್ತ' ಎಂಬ ಪದವನ್ನು ಸಮಾಸದಲ್ಲಿ ಸೇರಿಸಿಬಿಟ್ಟಿರುವುದರಿಂದ ಅದರ ಪ್ರಾಧಾನ್ಯ ಕಡಿಮೆಯಾಗಿರುವುದನ್ನು ಗಮನಿಸಬೇಕು.

**ಸಂಪ್ರದಾನಸ್ಯ ಯಥಾ–**

**ಪೌಲಸ್ತ್ಯಃ ಸ್ವಯಮೇವ ಯಾಚತ ಇತಿ ಶ್ರುತ್ವಾ ಮನೋ ಮೋದತೇ**
**ದೇಯೋ ನೃಪ ಹರಪ್ರಸಾದಪರಶುಸ್ತೇನಾಧಿಕಂ ತಾಮ್ಯತಿ।**
**ತದ್ವಾಚ್ಯಃ ಸ ದಶಾನನೋ ಮಮ ಗಿರಾ ದತ್ತಾ ದ್ವಿಜೇಭ್ಯೋ ಮಹೀ**
**ತುಭ್ಯಂ ಬ್ರೂಹಿ ರಸಾತಲತ್ರಿದಿವಯೋರ್ನಿರ್ಜಿತ್ಯ ಕಿಂ ದೀಯತಾಮ್॥**

**ದ್ವಿಜೇಭ್ಯ ಇತಿ ನಿರ್ಜಯಪೂರ್ವಕಸ್ಯ ಮಹೀದಾನಸ್ಯ ಸಂಪ್ರದಾನತ್ವೇನ ಯದ್ವಿಶೇಷಣಂ ತನ್ಮಹ್ಯಾಃ ಪಾತ್ರಸಾತ್ಕರಣೋತ್ಕರ್ಷಮಾದಧದ್ ಭಾರ್ಗವಶೌರ್ಯಾತಿರೇಕಸ್ಯ ವ್ಯಂಜನೇನ ದಶಾನನಸ್ಯ ಕೋಪೋದ್ದೀಪನಪರ್ಯವಸಾಯಿ ಭವತೀತಿ ಪ್ರಾಧಾನ್ಯೇನ ವಿವಕ್ಷಿತತ್ವಾನ್ನ ದತ್ತೇತ್ಯನೇನ ಸಹ ಸಮಾಸೇ ಕವಿನಾ ವಿಚ್ಛಾಯೀಕೃತಮ್। ಪ್ರತ್ಯುದಾಹರಣಮೇತದೇವ ಪೂರ್ವವದ್ ದ್ರಷ್ಟವ್ಯಮ್।**

**ಅನುವಾದ:**

ಸಂಪ್ರದಾನದ ಉದಾಹರಣೆ (ಪೌಲಸ್ತ್ಯ.....) "ರಾವಣನು ತಾನೇ ಯಾಚನೆ ಮಾಡುತ್ತಿದ್ದಾನೆ ಎಂಬುದನ್ನು ಕೇಳಿ ಮನಸ್ಸು ಸಂತೋಷಿಸುತ್ತಿದೆ. ಶಿವನ ಅನುಗ್ರಹದಿಂದ ಲಬ್ಧವಾದ ಈ ಪರಶುವನ್ನು ಕೊಡುವುದು ಸರಿಯಲ್ಲ ಎಂಬ ಕಾರಣದಿಂದ ಮನಸ್ಸು ನೊಂದುಕೊಳ್ಳುತ್ತಿದೆ. ಆದ್ದರಿಂದ ನನ್ನ ಮಾತೆಂದು ಆ ದಶಮುಖನಿಗೆ ಹೇಳು– ಭೂಮಿಯನ್ನು ಬ್ರಾಹ್ಮಣರಿಗೆ ಕೊಟ್ಟಿದ್ದಾಯಿತು. ಉಳಿದ ಸ್ವರ್ಗ–ಪಾತಾಳಗಳೆರಡರಲ್ಲಿ ಯಾವುದನ್ನು ಗೆದ್ದು ನಿನಗೆ ಕೊಡಬೇಕು?"

ಜಯಪೂರ್ವಕವಾಗಿ ಮಾಡಿದ ಭೂಮಿದಾನಕ್ಕೆ ದ್ವಿಜೇಭ್ಯಃ ಎಂದು ಸಂಪ್ರದಾನ ರೂಪವಾದ ವಿಶೇಷಣವನ್ನು ಕೊಟ್ಟಿರುವುದು ಭೂಮಿಯನ್ನು ಸತ್ಪಾತ್ರರಿಗೆ ಕೊಡುವುದರ ಉತ್ಕರ್ಷವನ್ನು ಸೂಚಿಸುವುದರಿಂದ ಪರಶುರಾಮನ ಶೌರ್ಯದ ಅಗ್ಗಳಿಕೆಯನ್ನು ತೋರಿಸುತ್ತದೆ, ಅದು ರಾವಣನ ಕೋಪವನ್ನು ಉಕ್ಕಿಸುವುದರಲ್ಲಿ ಪರ್ಯವಸಾನವನ್ನು ಹೊಂದುವ ಹಾಗೆ ಪ್ರಧಾನವಾಗಿ ವಿವಕ್ಷಿತವಾಗಿರುವುದರಿಂದ

'ದತ್ತಾ' ಎಂಬ ಪದದೊಡನೆ ಸಮಾಸಮಾಡಿ ಕಾಂತಿಹೀನವಾಗುವಂತೆ ಮಾಡಲ್ಪಟ್ಟಿಲ್ಲ. ಇದನ್ನೇ (ಸಮಾಸ ಮಾಡಿದರೆ) ಪ್ರತ್ಯುದಾಹರಣೆಯೆಂದು ಹಿಂದಿನಂತೆ ತಿಳಿದುಕೊಳ್ಳಬೇಕು.

**ವಿವರಣೆ:**

"ದತ್ತಾ ದ್ವಿಜೇಭ್ಯೋ ಮಹೀ" ಎಂಬುದರ ಬದಲು "ವಿಪ್ರಪ್ರದತ್ತಾ ಮಹೀ" ಎಂದು ಮಾಡಿದರೆ ಈ ಪದ್ಯವೇ ಪ್ರತ್ಯುದಾಹರಣೆಯಾಗುವುದು.

**ಅಪಾದಾನಸ್ಯ ಯಥಾ–**

**ತಾತಾಜ್ಜನ್ಮ ವಪುರ್ವಿಲಂಘಿತವಿಯತ್ ಕ್ರೌರ್ಯಂ ಕೃತಾಂತಾಧಿಕಂ**
**ಶಕ್ತಿಃ ಕೃತ್ಸ್ನಸುರಾಸುರೋಷ್ಮಶಮನೀ ನೀತಾ ತಥೋಚ್ಚೈಃಪದಮ್।**
**ಸರ್ವಂ ವತ್ಸ ತವಾತಿಶಾಯಿ ನಿಧನಂ ಕ್ಷುದ್ರಾತ್ತು ಯತ್ತಾಪಸಾತ್**
**ತೇನಾಹಂ ತ್ರಪಯಾ ಶುಚಾ ಚ ವಿವಶಃ ಕಷ್ಟಾಂ ದಶಾಮಾಗತಃ॥**

**ಅತ್ರ ತಾತಾದಿತಿ ಕ್ಷುದ್ರಾತ್ತು ಯತ್ತಾಪಸಾದಿತಿ ಚ ಯೇ ಜನ್ಮನಿಧನಯೋರಪಾದಾನಭಾವೇನ ವಿಶೇಷಣೇ ತೇ ತಾತಸ್ಯ ಪಿತಾಮಹಪಿತಾಮಹತಯಾ ಮಹಾಮುನೇಃ ಪುಲಸ್ತ್ಯಸ್ಯಾಪತ್ಯತಯಾ ಚ ಕ್ಷುದ್ರತಾಪಸಸ್ಯ ಚ ಗಣನಾನರ್ಹತಯಾ ತಯೋರುತ್ಕರ್ಷಾಪಕರ್ಷದ್ವಾರೇಣ ತದ್ವತಃ ಕುಂಭಕರ್ಣಸ್ಯ ಕಾಮಪಿ ಕುಲೀನತಾಂ ಶೌರ್ಯಾಪಕರ್ಷಂ ಚ ಆದಧಾನೇ ಭ್ರಾತುರ್ದಶಾನನಸ್ಯ ಶೋಕ– ತ್ರಪಾಪಾವಕೇಂಧನಭಾವೇನ ಪರಿಣಮತಃ ಇತಿ ಪ್ರಾಧಾನ್ಯೇನ ವಿವಕ್ಷಿತೇ, ನ ತಾಭ್ಯಾಂ ಸಹ ಸಮಾಸೇ ಗುಣತಾಂ ಗಮಿತೇ। ಪ್ರತ್ಯುದಾಹರಣಂ ಯಥಾ– ಅತ್ರೈವ "ಕ್ರೌರ್ಯಂ ಕೃತಾಂತಾಧಿಕಮ್" ಇತಿ। ಯಥಾ ಚ "ಆಸಮುದ್ರಕ್ಷಿತೀಶಾನಾಮ್" ಇತಿ।**

**ಅನುವಾದ:**

ಅಪಾದಾನದ ಉದಾಹರಣೆ–

"(ನನ್ನ) ತಂದೆಯಿಂದಲೇ ಜನನ, ಶರೀರವೋ ಮುಗಿಲನ್ನು ದಾಟಿ ನಿಂತದ್ದು, ಕ್ರೂರತೆಯೋ ಯಮನ ಕ್ರೌರ್ಯಕ್ಕಿಂತಲೂ ಹೆಚ್ಚಿನದು, ಶಕ್ತಿಯೋ ಎಲ್ಲ ಸುರಾಸುರರ ಗರ್ವವನ್ನೂ ಅಡಗಿಸಿದುದು, ಮತ್ತು ಅತ್ಯುನ್ನತ ಸ್ಥಾನಕ್ಕೆ ಏರಿದುದು. ತಮ್ಮ, ನಿನ್ನ ವಿಷಯದಲ್ಲಿ ಇವೆಲ್ಲವೂ ಅತಿಶಯವುಳ್ಳದ್ದೇ ಆಯಿತು. ಆದರೆ ನಿನ್ನ ಮರಣ ಒಬ್ಬ ಕ್ಷುಲ್ಲಕತಪಸ್ವಿಯಿಂದ ಉಂಟಾಯಿತು. ಅದರಿಂದ ನಾನು ನಾಚಿಕೆಯಿಂದಲೂ ಶೋಕದಿಂದಲೂ ವ್ಯಾಕುಲನಾಗಿ ಕಷ್ಟದ ಸ್ಥಿತಿಗೆ ಸಿಕ್ಕಿಕೊಂಡೆನಲ್ಲಾ!"

ಈ ಪದ್ಯದಲ್ಲಿ ತಾತಾತ್ ಎಂಬುದು ಮತ್ತು ಕ್ಷುದ್ರಾತ್ತು ಯತ್ ತಾಪಸಾತ್ ಎಂಬುದೂ (ಕ್ರಮಶಃ) ಜನ್ಮಕ್ಕೂ ನಿಧನಕ್ಕೂ ಅಪಾದಾನರೂಪದಲ್ಲಿ ವಿಶೇಷಣಗಳಾಗಿವೆ. ಅವು ತಾತನು (ಎಂದರೆ ರಾವಣನ ತಂದೆ ಪುಲಸ್ತ್ಯನು) ಪಿತಾಮಹ (ಬ್ರಹ್ಮ)ನನ್ನು ಪಿತಾಮಹ (ತಂದೆಯ ತಂದೆ)ನಾಗಿ ಪಡೆದಿರುವುದನ್ನೂ,

(ಕುಂಭಕರ್ಣನು) ಪುಲಸ್ತ್ಯನ ಮಗ ಎಂಬುದನ್ನೂ ಕ್ಷುದ್ರತಾಪಸನು ಗಣನೆಗೂ ಅನರ್ಹನಾಗಿರುವುದರಿಂದ ಅವರಿಬ್ಬರ (ತಂದೆ ಮತ್ತು ತಾಪಸರ) ಉತ್ಕರ್ಷ–ಅಪಕರ್ಷಗಳನ್ನು ಹೇಳುವ ಮೂಲಕ ಕುಂಭಕರ್ಣನ ವರ್ಣಿಸಲಸಾಧ್ಯವಾದ ಮಹಾಕುಲಪ್ರಸೂತತ್ವವನ್ನೂ ಶೌರ್ಯಪ್ರಕರ್ಷವನ್ನೂ ತಿಳಿಸುತ್ತವೆ. ಅವು ಹೀಗೆ (ಕುಂಭಕರ್ಣನ) ಅಣ್ಣ ರಾವಣನ ಶೋಕ ಮತ್ತು ನಾಚಿಕೆ ಎಂಬ ಬೆಂಕಿಗೆ ಇಂಧನವಾಗುತ್ತವೆ. ಆದ್ದರಿಂದ ಅವು ಪ್ರಧಾನರೂಪದಿಂದ ವಿವಕ್ಷಿತ. (ಈ ಕಾರಣದಿಂದ ಜನ್ಮ ಮತ್ತು ನಿಧನ ಎಂಬ) ಶಬ್ದಗಳೊಡನೆ (ಕ್ರಮವಾಗಿ ತಾತಾತ್ ಮತ್ತು ತಾಪಸಾತ್ ಎಂಬವು) ಸಮಾಸದೊಳಗೆ (ಹುದುಗಿಸಲ್ಪಟ್ಟು) ಅಪ್ರಧಾನತೆಗೆ ಈಡಾಗಿಲ್ಲ.

ಪ್ರತ್ಯುದಾಹರಣೆ ಇದೇ ಪದ್ಯದಲ್ಲಿರುವ "ಕ್ರೌರ್ಯಂ ಕೃತಾಂತಾಧಿಕಮ್" ಎಂಬುದು. ಇನ್ನೊಂದು ಉದಾಹರಣೆ– "ಆ ಸಮುದ್ರಕ್ಷಿತೀಶಾನಾಮ್".

**ವಿವರಣೆ:**

ಕ್ರೌರ್ಯಂ ಕೃತಾಂತಾದಧಿಕಂ ಆ ಸಮುದ್ರಾತ್ ಕ್ಷಿತೀಶಾನಾಮ್ ಎಂದು ಸಮಾಸರಹಿತವಾಗಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಆಗ ಯಮನಿಗೂ ಸಮುದ್ರಕ್ಕೂ ಪ್ರಾಧಾನ್ಯವಿರುತ್ತಿತ್ತೆಂದು ಮಹಿಮಭಟ್ಟನ ಅಭಿಪ್ರಾಯ. ಸಮಾಸಾಂತರ್ಗತವಾದ ಪದದ ಅರ್ಥ ಅಪ್ರಧಾನವಾಗಿ ಬಿಡುತ್ತದೆ.

**ಅಧಿಕರಣಸ್ಯ ಯಥಾ–**

**ತಪಸ್ವಿಭಿರ್ಯಾ ಸುಚಿರೇಣ ಲಭ್ಯತೇ ಪ್ರಯತ್ನತಃ ಸತ್ರಿಭಿರಿಷ್ಯತೇ ಚ ಯಾ।**
**ಪ್ರಯಾಂತಿ ತಾಮಾಶುಗತಿಂ ಯಶಸ್ವಿನೋ ರಣಾಶ್ವಮೇಧೇ ಪಶುತಾಮುಪಾಗತಾಃ॥**

**ಅತ್ರ ರಣಾಶ್ವಮೇಧೇ ಇತಿ ಯತ್ ಪಶುತಾಯಾ ಯಶಸ್ವಿಕರ್ತೃಕೋಪಾಗಮಕರ್ಮಾ–ಭೂತಾಯಾ ಅಧಿಕರಣಭಾವೇನ ವಿಶೇಷಣಂ, ತತ್ ತಸ್ಯಾ ಇತರಪಶುವೈಲಕ್ಷಣ್ಯಲಕ್ಷಣ–ಮತಿಶಯಮಾದಧಾನಂ ಶೂರಾಣಾಂ ಸಮರಮರಣೋತ್ಸಾಹಮ್ ಉದ್ದೀಪಯತೀತಿ ಪ್ರಾಧಾನ್ಯೇನ ವಿವಕ್ಷಿತತ್ವಾನ್ನ ತಯಾ ಸಹ ಸಮಾಸೇ ಸಮಶೀರ್ಷಿಕತಾಂ ನೀತಮ್।**

**ಅನುವಾದ:**

ಅಧಿಕರಣದ ಉದಾಹರಣೆ– "(ತಪಸ್ವಿಭಿಃ) ತಪಸ್ವಿಗಳು ಯಾವುದನ್ನು ಬಹುಕಾಲಾನಂತರ ಪಡೆಯುವರೋ, ಯಜ್ಞಮಾಡುವವರು ಪ್ರಯತ್ನಪಟ್ಟು ಯಾವುದನ್ನು ಪಡೆಯಲು ಇಷ್ಟಪಡುವರೋ, ಆ ಫಲವನ್ನು ಯುದ್ಧ ಎಂಬ ಅಶ್ವಮೇಧಯಾಗದಲ್ಲಿ ಪಶುಗಳಾದ ಯಶಸ್ವಿ ಪುರುಷರು ಬೇಗನೆ ಪಡೆದುಕೊಳ್ಳುತ್ತಾರೆ."

ಇಲ್ಲಿ ಯಶಸ್ವಿ ಪುರುಷರು ಹೋಗಿ ಸೇರುವುದಕ್ಕೆ ಕರ್ಮವಾದ ಪಶುತ್ವಕ್ಕೆ ರಣಾಶ್ವಮೇಧೇ (ಯುದ್ಧವೆಂಬ ಅಶ್ವಮೇಧಯಾಗದಲ್ಲಿ) ಎಂದು ಅಧಿಕರಣ ರೂಪದಿಂದ ವಿಶೇಷಣವನ್ನು ನೀಡಲಾಗಿದೆ. ಅದು ಆ ಪಶುತ್ವಕ್ಕೆ ಇತರ

ಪಶುವಿಲಕ್ಷಣತೆಯ ಅತಿಶಯವನ್ನು ತೋರಿಸಿ ಶೂರರಿಗೆ ಸಮರಮರಣದಲ್ಲಿ ಉತ್ಸಾಹವನ್ನು ಉಕ್ಕಿಸುತ್ತದೆ ಎಂದು ಪ್ರಧಾನವಾಗಿ ವಿವಕ್ಷಿತವಾಗಿದೆ. ಆದ್ದರಿಂದ ಪಶುತಾ ಎಂಬುದರೊಡನೆ ಸಮಾಸದಲ್ಲಿ ಸಮಾನವಾಗಿ ನಿರ್ದಿಷ್ಟವಾಗಿಲ್ಲ.

**ಯಥಾ ಚ–**
**ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್।**
**ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್॥**
**ಇತಿ। ಪ್ರತ್ಯುದಾಹರಣಂ ಯಥಾ–**
**ರೇಣುರಕ್ತವಿಲಿಪ್ತಾಂಗೋ ವಿಕೃತೋ ವ್ರಣಭೂಷಿತಃ।**
**ಕದಾ ದುಷ್ಪ್ರತ್ಯಭಿಜ್ಞಾನೋ ಭವೇಯಂ ರಣಭೂಷಿತಃ॥ ಇತಿ।**

**ಅನುವಾದ:**

ಇನ್ನೊಂದು ಉದಾಹರಣೆ–

"ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ, ತಾರುಣ್ಯದಲ್ಲಿ ವಿಷಯ ಸುಖಗಳನ್ನು ಅನುಭವಿಸುತ್ತಿದ್ದ, ಮುಪ್ಪಿನಲ್ಲಿ ಋಷಿಗಳ ರೀತಿಯನ್ನನುಸರಿಸುತ್ತಿದ್ದ ಮತ್ತು ಕೊನೆಗಾಲದಲ್ಲಿ ಯೋಗದಿಂದ ಶರೀರವನ್ನು ತ್ಯಜಿಸುತ್ತಿದ್ದ (ರಘುವಂಶದ ರಾಜರ ಕಥೆಯನ್ನು ಹೇಳುವೆನು)."

ಪ್ರತ್ಯುದಾಹರಣೆ– (ರೇಣುರಕ್ತ....)

"ಧೂಳಿನಿಂದಲೂ ನೆತ್ತರಿನಿಂದಲೂ ಲಿಪ್ತವಾದ ಶರೀರವನ್ನುಳ್ಳವನಾಗಿ, ಗಾಯಗಳಿಂದ ಅಲಂಕೃತನಾಗಿ, ವಿಕಾರವುಳ್ಳವನಾಗಿ ಯಾರಿಗೂ ಗುರುತು ಸಿಕ್ಕದವನಾಗಿ ಯಾವಾಗ ಯುದ್ಧಭೂಮಿಯಲ್ಲಿ ಮಲಗಿದವನಾಗುವೆನು?"

**ವಿವರಣೆ:**

ಕಾಳಿದಾಸನ ಪದ್ಯದಲ್ಲಿ "ಶೈಶವಾಭ್ಯಸ್ತವಿದ್ಯಾನಾಮ್" ಇತ್ಯಾದಿ ಸಮಾಸವನ್ನು ಕವಿ ಬೇಕೆಂದೇ ಮಾಡಿಲ್ಲ. ಹಾಗೆ ಮಾಡಿದ್ದಿದ್ದರೆ ಶೈಶವದ ಪ್ರಾಧಾನ್ಯ ಮರೆಯಾಗುತ್ತಿತ್ತು. ಪ್ರತ್ಯುದಾಹರಣೆಯಲ್ಲಿ "ರಣಭುವಿ ಉಷಿತಃ" ಎಂದು ಅಧಿಕರಣವನ್ನು ಪೃಥಕ್ಕಾಗಿ ನಿರ್ದೇಶಿಸಿದ್ದಿದ್ದರೆ ಅದರ ಪ್ರಾಧಾನ್ಯ ಹಾಳಾಗುತ್ತಿರಲಿಲ್ಲ ಎಂದು ಮಹಿಮಭಟ್ಟನ ಅನಿಸಿಕೆ. ಆದರೆ ಕವಿಗೆ ಶ್ಲೇಷ ಮತ್ತು ಯಮಕಾಲಂಕಾರಗಳನ್ನು ತೋರಿಸುವ ಅಭೀಪ್ಸವಿದ್ದುದರಿಂದ ಸಮಾಸವನ್ನು ಮಾಡಿದ್ದಾನೆ.

**ಸಂಬಂಧಸ್ಯ ಯಥಾ– ದ್ವಯಂ ಗತಂ ಸಂಪ್ರತಿ ಶೋಚನೀಯತಾಂ ಸಮಾಗಮಪ್ರಾರ್ಥನಯಾ ಕಪಾಲಿನಃ। ಅತ್ರ ಕಪಾಲಿನ ಇತಿ ಯತ್ ಸಮಾಗಮಪ್ರಾರ್ಥನಾಯಾಃ ಶೋಚನೀಯತಾಗತೌ ಹೇತುತ್ವೇನೋಪಾತ್ತಾಯಾಃ ಸಂಬಂಧಿದ್ವಾರೇಣ ವಿಶೇಷಣಂ ತತ್ ತಸ್ಯಾಸ್ತತ್ರ ಯತ್ ಸಾಮರ್ಥ್ಯಂ ತತ್ ಸುತರಾಮ್ ಉಪಬೃಂಹಯತಿ। ತಸ್ಯ ಸಕಲಾಮಂಗಲನಿಲಯತಯಾ ನಿಂದಿತಾಚಾರನಿರತತಯಾ ಚ ದರ್ಶನಸಂಭಾಷಣಾದೀನಾಮಪಿ ಪ್ರತಿಷಿದ್ಧತ್ವಾತ್। ಅತೋ ವಿಧೇಯಾರ್ಥತಯಾ ಪ್ರಾಧಾನ್ಯೇನ ವಿವಕ್ಷಿತಂ ವಿಶೇಷ್ಯೇಣ ಸಹ ಸಮಾಸೇ ನ ಪ್ರತ್ಯವರೀಕೃತಮ್।**

**ಅನುವಾದ:**

ಸಂಬಂಧದ ಉದಾಹರಣೆ–

“ಕಪಾಲಿಯ ಸಮಾಗಮದ ಕೋರಿಕೆಯಿಂದ ಈಗ ಎರಡು ಶೋಚನೀಯ ಸ್ಥಿತಿಯನ್ನು ಹೊಂದಿದುವು.” ಇಲ್ಲಿ ಶೋಚನೀಯತೆಯನ್ನು ಹೊಂದುವುದರಲ್ಲಿ ಕಾರಣವಾಗಿ ಉಪಾತ್ತವಾಗಿರುವುದು ಕಪಾಲಿಯ ಸಮಾಗಮದ ಕೋರಿಕೆ. ಅದಕ್ಕೆ ಕಪಾಲಿನಃ ಎಂದು ಸಂಬಂಧದ ಮೂಲಕವಾಗಿ ವಿಶೇಷಣವನ್ನು ಕೊಡಲಾಗಿದೆ. ಅದು ಪ್ರಾರ್ಥನೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಏಕೆಂದರೆ ಕಪಾಲವನ್ನು ಹಿಡಿದುಕೊಂಡಿರುವವನು ಎಲ್ಲ ಅಮಂಗಲಗಳಿಗೆ ಮನೆಯಾಗಿದ್ದು ನಿಂದಿತಾಚಾರದಲ್ಲಿ ತೊಡಗಿರುವವನೆಂದು ಅವನೊಡನೆ ನೋಟ, ಮಾತುಕಥೆ ಇತ್ಯಾದಿಗಳೂ ನಿಷಿದ್ಧವೇ ಆಗಿವೆ. ಆದ್ದರಿಂದ ವಿಧೇಯಾರ್ಥವನ್ನು ಹೊಂದಿ ಅದು ಪ್ರಧಾನವಾಗಿ ವಿವಕ್ಷಿತವಾಗಿರುವುದರಿಂದ ವಿಶೇಷ್ಯದೊಡನೆ ಸಮಾಸದಲ್ಲಿ ಅಮುಖ್ಯವಾಗಿ ಮಾಡಲ್ಪಟ್ಟಿಲ್ಲ.

**ಯಥಾ ಚ–**
**ಜನಕೋ ಜನಕೋ ಯಸ್ಯಾ ಯಾ ತಾತಸ್ಯೋಚಿತಾ ವಧೂಃ।**
**ಆರ್ಯಸ್ಯ ಗೃಹಿಣೀ ಯಾ ಚ ಸ್ತುತಿಸ್ತಸ್ಯಾಸ್ತ್ರಪಾಸ್ಪದಮ್॥**
**ಇತಿ। ಸ್ಕಂದಸ್ಯ ಮಾತುಃ ಪಯಸಾಂ ರಸಜ್ಞಃ ಇತಿ।**
**ಕಃ ಕ್ಷಮೇತ ತವಾನುಜಃ ಇತಿ।**
**ಪ್ರತ್ಯುದಾಹರಣಂ ಯಥಾ–**
**ಪೃಥ್ವಿ ಸ್ಥಿರಾ ಭವ ಭುಜಂಗಮ ಧಾರಯೈನಾಂ**
**ತ್ವಂ ಕೂರ್ಮರಾಜ ತದಿದಂ ದ್ವಿತಯಂ ದಧೀಥಾಃ।**
**ದಿಕ್ಕುಂಜರಾಃ ಕುರುತ ತತ್ತ್ರಿತಯೇ ದಿಧೀರ್ಷಾಂ**
**ದೇವಃ ಕರೋತಿ ಹರಕಾರ್ಮುಕಮಾತತಜ್ಯಮ್॥**

**ಅನುವಾದ:**

ಇನ್ನೊಂದು ಉದಾಹರಣೆ–

(ಜನಕೋ ಜನಕೋ.....)* ಇನ್ನೂ ಒಂದು ಉದಾಹರಣೆ– “ಸ್ಕಂದನ ತಾಯಿಯ ಹಾಲಿನ ರುಚಿಯನ್ನು ತಿಳಿದವನು”.

ಮತ್ತೊಂದು ಉದಾಹರಣೆ–

“ನಿನ್ನ ತಮ್ಮನಾದ ಯಾವನು ತಾನೆ ಸಹಿಸುವನು?”

ಪ್ರತ್ಯುದಾಹರಣೆ–

“ಪೃಥ್ವಿಯೆ, ಸ್ಥಿರವಾಗಿ ನಿಲ್ಲು. ಆದಿಶೇಷ, ಭೂಮಿಯನ್ನು ಎತ್ತಿಹಿಡಿದುಕೋ. ಕೂರ್ಮರಾಜ, ಅವರಿಬ್ಬರನ್ನೂ ನೀನು ಎತ್ತಿಹಿಡಿದಿರಬೇಕು. ದಿಗ್ಗಜಗಳೇ, ಆ

ಮೂವರಿಗೂ ದೃಢವಾಗಿ ನಿಲ್ಲಲು ಧೈರ್ಯವನ್ನು ತುಂಬಿರಿ. ಶ್ರೀರಾಮನು ಈಗ ಹರಧನುಸ್ಸಿಗೆ ಹೆದೆಯೇರಿಸುತ್ತಿದ್ದಾನೆ!"

**ಅತ್ರಹಿ ಹರಸಂಬಂಧನಿಬಂಧನಃ ಕಾರ್ಮುಕಸ್ಯ**
**ಗೌರವಾತಿರೇಕೋ ದುರಾರೋಪತಾ ಚೇತಿ ತಸ್ಯೈವ**
**ವಿಧೇಯತಯಾ ಪ್ರಾಧಾನ್ಯಂ, ನ ಕಾರ್ಮುಕಮಾತ್ರಸ್ಯ।**
**ತಚ್ಚ ತಸ್ಯ ವೃತ್ತಾವಂತರಿತಂ, ತೇನ "ದೇವೋಧನುಃ**
**ಪುರರಿಪೋರ್ವಿದಧಾತ್ಯಧಿಜ್ಯಮ್ ಇತ್ಯತ್ರ ಯುಕ್ತಃ**
**ಪಾಠಃ। ಅಸ್ಮಿಂಶ್ಚ ಪಾಠೇ ಕಲ್ಪಿತಾರ್ಥಸ್ಯ ಅಪ್ರಯುಕ್ತಸ್ಯ ವಾ**
**ಆತತಜ್ಯಸ್ಯ ಪ್ರಯೋಗಪರಿಹಾರಾತ್ ಗುಣಾಂತರಲಾಭ ಇತಿ।"**

* ಈ ಪದ್ಯದ ಅನುವಾದ ಮೊದಲೇ ಬಂದಿದೆ.

**ಅನುವಾದ:**

ಈ (ಪ್ರತ್ಯುದಾಹರಣೆಯ) ಪದ್ಯದಲ್ಲಿ ಹರನ ಸಂಬಂಧದ ಕಾರಣದಿಂದಲೇ ಧನುಸ್ಸಿಗೆ ಹೆಚ್ಚಿನ ಗೌರವ ಮತ್ತು ಅದರ ಹೆದೆಯೇರಿಸುವುದರಲ್ಲಿರುವ ಕಷ್ಟ ಎಂಬುದರಿಂದ ಹರಸಂಬಂಧವೇ ಇಲ್ಲಿ ವಿಧೇಯಾಂಶವಾಗಿ ಪ್ರಾಧಾನ್ಯವನ್ನು ಪಡೆದಿದೆ, ಕೇವಲ ಧನುಸ್ಸಲ್ಲ. ಹರಸಂಬಂಧದ ಪ್ರಾಧಾನ್ಯವು ವೃತ್ತಿಯಲ್ಲಿ (ಎಂದರೆ ಸಮಾಸದಲ್ಲಿ) ಒಳಗೆ ಸೇರಿಕೊಂಡಿರುವುದರಿಂದ ಕುಗ್ಗಿದೆ. ಆದ್ದರಿಂದ "ದೇವೋ ಧನುಃ ಪುರರಿಪೋರ್ವಿದಧಾತ್ಯಧಿಜ್ಯಮ್" (ಶ್ರೀರಾಮನು ತ್ರಿಪುರಶತ್ರುವಿನ ಧನುಸ್ಸನ್ನು ಈಗ ಹೆದೆಯೇರಿಸಲ್ಪಟ್ಟಿದ್ದನ್ನಾಗಿ ಮಾಡುತ್ತಾನೆ) ಎಂಬ ಪಾಠವು ಇಲ್ಲಿ ಉಚಿತ. ಈ ಪಾಠವನ್ನು ಅಂಗೀಕರಿಸಿದರೆ "ಆತತಜ್ಯ" ಎಂಬ ಪದದಲ್ಲಿರುವ ಕಲ್ಪಿತಾರ್ಥ ಅಥವಾ ಅಪ್ರಯುಕ್ತ ಎಂಬ ದೋಷದ ಪರಿಹಾರವೂ ಆಗುವುದರಿಂದ ಇನ್ನೊಂದು ಗುಣವೂ ದೊರಕಿದಂತಾಗುವುದು.

**ವಿವರಣೆ:**

ಆತತಜ್ಯ ಎಂಬ ಪದಕ್ಕೆ ಹೆದೆಯೇರಿಸಿದ ಎಂಬ ಅರ್ಥ ಸಹಜವಾಗಿ ಸಿಕ್ಕುವುದಿಲ್ಲ. ಆತತ ಎಂದರೆ ವಿಸ್ತರಿಸಿದ ಎಂಬ ಅರ್ಥವೇ ಪ್ರಸಿದ್ಧ. ಅದಕ್ಕೆ ಹೆದೆಯೇರಿಸಿದ ಎಂಬ ಅರ್ಥವನ್ನು ಕಲ್ಪಿಸಬೇಕು. ಪದದ ಮುಖ್ಯಾರ್ಥವನ್ನು ಬಿಟ್ಟು ಅರ್ಥಾಂತರದಲ್ಲಿ ಅದನ್ನು ಪ್ರಯೋಗಿಸಿದರೆ ಅಪ್ರಯುಕ್ತ ಎಂಬ ದೋಷ.

**ಯಥಾ ಚ–**
**ಕಿಂ ಲೋಭೇನ ವಿಲಂಘಿತಃ ಸ ಭರತೋ ಯೇನೈತದೇವಂಕೃತಂ**
**ಮಾತ್ರಾ, ಸ್ತ್ರೀಲಘುತಾಂ ಗತಾ ಕಿಮಥವಾ ಮಾತೈವ ಮೇ ಮಧ್ಯಮಾ।**
**ಮಿಥ್ಯೈತನ್ಮಮ ಚಿಂತಿತಂ ದ್ವಿತಯಮಪ್ಯಾರ್ಯಾನುಜೋऽಸೌ ಗುರುಃ**
**ಮಾತಾ ತಾತಕಲತ್ರಮಿತ್ಯನುಚಿತಂ ಮನ್ಯೇ ವಿಧಾತ್ರಾ ಕೃತಮ್॥**
**ಅತ್ರ ಹಿ ಆರ್ಯಸ್ಯಾನುಜ ಇತಿ, ತಾತಸ್ಯ ಕಲತ್ರಮಿತಿ ಉಚಿತಂ ವಕ್ತುಮ್।**

**ಯಥಾ ಚ–**
**ಜಯಾಶಾ ಯತ್ರ ಚಾಸ್ಮಾಕಂ ಪ್ರತಿಘಾತೋತ್ಥಿತಾರ್ಚಿಷಾ।**
**ಹರಿಚಕ್ರೇಣ ತೇನಾಸ್ಯ ಕಂಠೇ ನಿಷ್ಕ ಇವಾರ್ಪಿತಃ॥ ಇತಿ।**
**ಅತ್ರ ಹರೇಃ ಸಂಬಂಧೇನ ಚಕ್ರಸ್ಯ ಜಯಾಶಾಸ್ಪದತ್ವಮ್**
**ಇತಿ ಹರೇರೇವ ಪ್ರಾಧಾನ್ಯವಿವಕ್ಷಾ, ನ ಚಕ್ರಮಾತ್ರಸ್ಯ,**
**ತಚ್ಚ ತಸ್ಯ ಸಮಾಸೇಽಸ್ತಮುಪಗತಮ್।**

**ಅನುವಾದ:**

ಇನ್ನೊಂದು ಉದಾಹರಣೆ (ಕಿಂ ಲೋಭೇನ)–

"ಆ ಭರತನು ಲೋಭಕ್ಕೆ ವಶನಾಗಿ ಹೀಗೆ ತಾಯಿಯಿಂದ ಮಾಡಿಸಿದನೋ, ಅಥವಾ ನನ್ನ ಮಧ್ಯಮ ಮಾತೆ (ಕೈಕೇಯಿಯೇ) ಸ್ತ್ರೀಸಹಜವಾದ ಲಘುತ್ವವನ್ನಾಶ್ರಯಿಸಿದಳೋ? ನಾನು ಹೀಗೆ ಮಾಡಿದ ಎರಡು ಚಿಂತನೆಗಳೂ ತಪ್ಪು. ಏಕೆಂದರೆ ಈ ಅಣ್ಣ (ಭರತ) ಶ್ರೀರಾಮನ ಸಹೋದರ. ತಾಯಿ (ಕೈಕೇಯಿ) ನನ್ನ ತಂದೆಯ ಪತ್ನಿ. ಆದ್ದರಿಂದ (ಈ ಸಂದರ್ಭದಲ್ಲಿ) ವಿಧಿಯೇ ತಪ್ಪನ್ನು ಮಾಡಿದ್ದಾನೆ ಎಂದುಕೊಳ್ಳುತ್ತೇನೆ."

ಈ ಪದ್ಯದಲ್ಲಿ ಆರ್ಯಸ್ಯಾನುಜಃ, ತಾತಸ್ಯ ಕಲತ್ರಮ್ ಎಂದು ಹೇಳುವುದು ಲೇಸು. ಇನ್ನೊಂದು ಉದಾಹರಣೆ– "ಯಾವ ಸುದರ್ಶನಚಕ್ರದಲ್ಲಿ ನಮಗೆಲ್ಲ ಜಯದ ಆಶೆ ನೆಲೆಗೊಂಡಿತ್ತೋ, ಹೊಡೆದಾಗ ಜ್ವಾಲೆಗಳನೆಬ್ಬಿಸುತ್ತಿದ್ದ ಆ ವಿಷ್ಣುಚಕ್ರವೂ ಇವನ ಕಂಠದಲ್ಲಿ ಆಭರಣದಂತೆ ಶೋಭಿಸಿತು."

ಇಲ್ಲಿ ಹರಿಯ ಸಂಬಂಧದಿಂದ ಚಕ್ರವು (ದೇವತೆಗಳ) ಜಯದ ಆಸೆಗೆ ಆಸ್ಪದವಾಗುತ್ತದೆ. ಆದ್ದರಿಂದ (ಕವಿಯ) ವಿವಕ್ಷೆ ಇರುವುದು ಹರಿಯ ಪ್ರಾಧಾನ್ಯದಲ್ಲಿ, ಕೇವಲ ಚಕ್ರದಲ್ಲಲ್ಲ. ಆದರೆ ಹರಿಯ ಪ್ರಾಧಾನ್ಯವು ಸಮಾಸದಲ್ಲಿ ಅಸ್ತಂಗತವಾಗಿಬಿಟ್ಟಿದೆ.

**ವಿಭಕ್ತ್ಯನ್ವಯವ್ಯತಿರೇಕಾನುವಿಧಾಯನೀ ಹಿ ವಿಶೇಷಣಾನಾಂ ವಿಧೇಯತಾವಗತಿಃ। ತತ ಏವ ಚೈಷಾಂ ವಿಶೇಷ್ಯೇ ಪ್ರಮಾಣಾಂತರಸಿದ್ಧಸ್ವೋತ್ಕರ್ಷಾಧಾಯಿನಾಂ ಶಾಬ್ದೇ ಗುಣಭಾವೇಽಪಿ ಆರ್ಥಂ ಪ್ರಾಧಾನ್ಯಂ, ವಿಶೇಷ್ಯಾಣಾಂ ಚ ಶಾಬ್ದೇ ಪ್ರಾಧಾನ್ಯೇ ಆರ್ಥೋ ಗುಣಭಾವೋಽನೂ– ದ್ಯಮಾನತ್ವಾದಿತ್ಯುಕ್ತಮ್। ವಕ್ಷ್ಯತೇ ಚ।**

**ಅನುವಾದ:**

ವಿಭಕ್ತಿಯ ಅನ್ವಯ ಮತ್ತು ವ್ಯತಿರೇಕಗಳನ್ನು ಅನುಸರಿಸಿಕೊಂಡು ವಿಶೇಷಣಗಳ ವಿಧೇಯತೆಯನ್ನು ತಿಳಿದುಕೊಳ್ಳಬೇಕಾಗುವುದು. ಪ್ರಮಾಣಾಂತರಸಿದ್ಧವಾದ ತಮ್ಮ ಉತ್ಕರ್ಷವನ್ನು ವಿಶೇಷ್ಯಕ್ಕೆ ತಂದುಕೊಡುವ ಈ ವಿಶೇಷಣಗಳಿಗೆ ಶಾಬ್ದವಾದ ಗೌಣತ್ವ ಇದ್ದರೂ, ಆರ್ಥ ಪ್ರಾಧಾನ್ಯ ಇದ್ದೇ ಇರುತ್ತದೆ.

ವಿಶೇಷ್ಯಗಳಿಗೆ ಶಾಬ್ದ ಪ್ರಾಧಾನ್ಯ ಇದ್ದರೂ ಅರ್ಥದ ದೃಷ್ಟಿಯಿಂದ ಗೌಣತ್ವವು ಇರುತ್ತದೆ, ಏಕೆಂದರೆ ಅವು ಅನುವಾದಕ್ಕೆ ವಿಷಯವಾಗಿರುತ್ತವೆ –ಎಂಬುದನ್ನು (ಈಗಾಗಲೇ) ಹೇಳಲಾಗಿದೆ. ಮುಂದೆಯೂ ಇದನ್ನು ಹೇಳಲಾಗುವುದು.

**ವಿವರಣೆ:**

ಪ್ರಾಧಾನ್ಯವು ಶಾಬ್ದ, ಆರ್ಥ ಎಂದು ಎರಡು ವಿಧ. ವ್ಯಾಕರಣದ ದೃಷ್ಟಿಯಿಂದ ಬರುವುದು ಶಾಬ್ದ ಪ್ರಾಧಾನ್ಯ. ಕಾವ್ಯಸೌಂದರ್ಯದ ದೃಷ್ಟಿಯಿಂದ ಪರಿಗಣಿಸಲ್ಪಡುವುದು ಆರ್ಥ ಪ್ರಾಧಾನ್ಯ. ವಿಶೇಷ್ಯಕ್ಕೆ ಶಾಬ್ದಪ್ರಾಧಾನ್ಯವಿದೆ. ಆದರೆ ವಿಶೇಷಣಗಳಿಗೆ ಆರ್ಥಪ್ರಾಧಾನ್ಯವುಂಟು. ಅವುಗಳನ್ನು ಸಮಾಸದೊಳಗೆ ಹುದುಗಿಸಿಬಿಟ್ಟಾಗ ಅಂಥ ಆರ್ಥಪ್ರಾಧಾನ್ಯ ನಷ್ಟವಾಗುತ್ತದೆ.

> **ಏತದಾಚಾರ್ಯಸ್ಯಾಪ್ಯನುಮತಮೇವೇತಿ ಜ್ಞಾಯತೇ। ಯದಯಂ 'ವೃಷಲ್ಯಾಃ ಕಾಮುಕಃ', 'ದಾಸ್ಯಾಃ ಪುತ್ರಃ' ಇತ್ಯಾದೌ ಕಾಮುಕಾದೇರಾಕ್ರೋಶಾದಪಕರ್ಷಪ್ರತಿಪತ್ತಯೇ ಸಮಾಸೇಽಪಿ ವಿಭಕ್ತೇರಲುಕಮಾಹ। ಕುತಸ್ತರ್ಹಿ ದಾಸೀಪುತ್ರ ಇತ್ಯತಃ ಪುತ್ರಸ್ಯಾಕ್ರೋಶಾವಗತಿಃ, ನ ಹ್ಯತ್ರ ವಿಭಕ್ತಿರಸ್ತಿ ಕೋ ವಾ ಮನ್ಯತೇ?। ಸ್ವರೂಪಮೇವಾತ್ರ ಪುತ್ರಸ್ಯ ಪ್ರತೀಯತೇ, ನಾಕ್ರೋಶ ಇತಿ ಸೂತ್ರಾರಂಭಪ್ರಯೋಜನಮೇವ ಚಿಂತ್ಯಮ್।**

**ಅನುವಾದ:**

ಇದು ಆಚಾರ್ಯನಿಗೂ (ಎಂದರೆ ವ್ಯಾಕರಣದ ಸೂತ್ರಕಾರ ಪಾಣಿನಿಗೂ) ಅಭಿಮತವಾದುದೆಂದು ತಿಳಿದುಕೊಳ್ಳಬಹುದು. ಏಕೆಂದರೆ ಅವನು ವೃಷಲ್ಯಾಃ ಕಾಮುಕಃ, ದಾಸ್ಯಾಃ ಪುತ್ರಃ ಇತ್ಯಾದಿಗಳಲ್ಲಿ ಆಕ್ರೋಶದ ಕಾರಣದಿಂದ ಆ ಕಾಮುಕಾದಿಗಳಲ್ಲಿ ಅಪಕರ್ಷವು ತೋರಿಬರಲಿ ಎಂದು ಸಮಾಸದಲ್ಲೂ ವಿಭಕ್ತಿಯ ಲೋಪವು ಆಗದು ಎಂದು ಹೇಳಿದ್ದಾನೆ. ಹಾಗಿದ್ದರೆ 'ದಾಸೀಪುತ್ರ' ಎಂಬ ಶಬ್ದದಿಂದ ಪುತ್ರನಲ್ಲಿ ಆಕ್ರೋಶದ ಜ್ಞಾನವು ಹೇಗೆ ಉಂಟಾಗುತ್ತದೆ? ಇಲ್ಲಿ (ದಾಸೀ ಶಬ್ದದ ಮುಂದೆ ಷಷ್ಠೀ) ವಿಭಕ್ತಿಯು ಕಂಡುಬರುವುದಿಲ್ಲವಲ್ಲ? ಎಂದರೆ, (ಹಾಗಾಗುವುದೆಂದು) ಯಾರು ಭಾವಿಸುತ್ತಾರೆ? (ಯಾರೂ ಹಾಗೆ ಭಾವಿಸುವುದಿಲ್ಲ.) 'ದಾಸೀಪುತ್ರ' ಎಂಬ ಶಬ್ದದಲ್ಲಿ ಪುತ್ರನ ಸ್ವರೂಪಮಾತ್ರ ತೋರುತ್ತದೆ, ನಿಂದಾ ವಿಷಯತ್ವವಲ್ಲ. ಆದ್ದರಿಂದ ಇಲ್ಲಿ ಸೂತ್ರಾರಂಭದ ಪ್ರಯೋಜನವನ್ನೇ ವಿಚಾರವಿಷಯವನ್ನಾಗಿ ಮಾಡಿಕೊಳ್ಳಬೇಕು.

**ವಿವರಣೆ:**

ಸಂಸ್ಕೃತದಲ್ಲಿ ಸಮಾಸವು ಬಂದಾಗ ಪದಗಳ ಅಂತರ್ಗತ ವಿಭಕ್ತಿಯನ್ನು "ಸುಪೋ ಧಾತುಪ್ರಾತಿಪದಿಕಯೋಃ" ಎಂಬ ಸೂತ್ರದಿಂದ ಲೋಪಗೊಳಿಸಬೇಕು. ರಾಮಸ್ಯ ಪುತ್ರಃ ಎಂಬ ಪದಗಳಿಗೆ ಸಮಾಸ ಬಂದರೆ ಷಷ್ಠೀ ವಿಭಕ್ತಿ ಲುಪ್ತವಾಗಿ ರಾಮಪುತ್ರಃ ಎಂಬ ರೂಪವು ಸಿದ್ಧವಾಗುತ್ತದೆ. ಆದರೆ ಎಲ್ಲಿ ಆಕ್ರೋಶವು ವಿವಕ್ಷಿತವೋ ಅಲ್ಲಿ "ಷಷ್ಠ್ಯಾ ಆಕ್ರೋಶೇ" ಎಂಬ ಸೂತ್ರದಿಂದ ಸಮಾಸದಲ್ಲೂ ಷಷ್ಠೀವಿಭಕ್ತಿಗೆ ಲೋಪವಿಲ್ಲ ಎಂದು ಪಾಣಿನಿ ಸ್ಪಷ್ಟಪಡಿಸಿದ್ದಾನೆ. ಆದ್ದರಿಂದಲೇ "ವೃಷಲ್ಯಾಃ ಕಾಮುಕಃ", "ದಾಸ್ಯಾಃ ಪುತ್ರಃ" ಇತ್ಯಾದಿಗಳಲ್ಲಿ ಸಮಾಸ ಬಂದಿದ್ದರೂ ಷಷ್ಠೀವಿಭಕ್ತಿಯು ಹಾಗೇ ಉಳಿದುಕೊಂಡಿದೆ.

ಇಲ್ಲಿ ವೃಷಲಿಯ ಕಾಮುಕನ ಬಗೆಗೆ ಮತ್ತು ದಾಸಿಯ ಪುತ್ರನ ಬಗೆಗೆ ವಕ್ತೃವಿನ ಆಕ್ರೋಶ ವಿವಕ್ಷಿತ. ವೃಷಲೀಕಾಮುಕಃ, ದಾಸೀಪುತ್ರಃ ಎಂಬ ರೂಪದ ಪದಗಳಲ್ಲಿ ಅಂಥ ಆಕ್ರೋಶ ಹಾಗೂ ನಿಂದೆ ವ್ಯಕ್ತವಾಗುವುದಿಲ್ಲ. ದಾಸಿಯ ಮಗ ಎಂಬ ಸ್ವರೂಪ (ಎಂದರೆ ವಸ್ತುಸ್ಥಿತಿ) ಮಾತ್ರ ತೋರಿಬರುತ್ತದೆ.

ಇದು ತಾನಾಗಿ ಭಾಷೆಯಲ್ಲಿ ಉಂಟಾಗುವ ವಿಶೇಷವಾದುದರಿಂದ ಇದಕ್ಕಾಗಿ ಪಾಣಿನಿಯು ಈ ಸೂತ್ರವನ್ನು ಮಾಡಬೇಕಾಗಿರಲಿಲ್ಲ ಎಂದು ಕೆಲವರ ಅಭಿಪ್ರಾಯ. ಕೇವಲ ಷಷ್ಠೀ ವಿಭಕ್ತಿಗೆ ಇದನ್ನು ಸೀಮಿತಗೊಳಿಸಬೇಕಾಗಿಲ್ಲ, ಎಲ್ಲ ವಿಭಕ್ತಿಗಳಿಗೂ ಇದು ಅನ್ವಯಿಸುತ್ತದೆ ಎಂದು ಅವರು ಹೇಳುತ್ತಾರೆ. ಆದರೆ ವಿಶಿಷ್ಟವಾಗಿ ನುಡಿಗಟ್ಟಿನಂತೆ "ದಾಸ್ಯಾಃ ಪುತ್ರಃ" ಇತ್ಯಾದಿಗಳನ್ನು ಪರಿಗಣಿಸಬೇಕು ಎಂಬುದು ಪಾಣಿನಿಯ ಅಭಿಪ್ರಾಯ. ಆದ್ದರಿಂದ ಸೂತ್ರಕ್ಕೆ ಪ್ರಯೋಜನವಿದೆ ಎಂಬುದನ್ನು ತಿಳಿದುಕೊಳ್ಳಬೇಕು.

**ಸಮಾಸೇ ಚ ವಿಭಕ್ತಿಲೋಪಾತ್ ನೋತ್ಕರ್ಷಾಪಕರ್ಷಾವಗತಿರಿತಿ ನ ತನ್ನಿಬಂಧನಾ ರಸಾದಿಪ್ರತೀತಿರಿತಿ ತದಾತ್ಮನಃ ಕಾವ್ಯಸ್ಯಾಯಂ ವಿಧೇಯಾವಿಮರ್ಶೋ ದೋಷತಯೋಕ್ತ ಇತಿ।**

**ಅವ್ಯಯೀಭಾವೇ ಯಥಾ–**

**ಸಾ ದಯಿತಸ್ಯ ಸಮೀಪೇऽವಸ್ಥಾತುಂ ನಾಪಿ ಚಲಿತುಮುತ್ಸಹತೇ।**
**ಹ್ರೀಸಾಧ್ವಸರಸವಿವಶಾ ಸ್ಪೃಶತಿ ದಶಾಂ ಕಾಮಪಿ ನವೋಢಾ॥ ಇತಿ**

**ಅನುವಾದ:**

ಸಮಾಸದಲ್ಲಿ ವಿಭಕ್ತಿಯ ಲೋಪವಾಗುವುದರಿಂದ ಉತ್ಕರ್ಷಾಪಕರ್ಷಗಳ ಅರಿವು ಉಂಟಾಗುವುದಿಲ್ಲ. ಆ ಕಾರಣದಿಂದ ಅವುಗಳ ಅರಿವನ್ನೇ ಅವಲಂಬಿಸಿದ ರಸಾದಿಪ್ರತೀತಿಯೂ ಆಗಲಾರದು. ರಸವನ್ನೇ ತನ್ನ ಆತ್ಮವನ್ನಾಗಿ ಹೊಂದಿರುವ ಕಾವ್ಯಕ್ಕೆ (ಅಂಥ ಸಮಾಸವು) ವಿಧೇಯಾವಿಮರ್ಶ ದೋಷವೆಂದು ಇಲ್ಲಿ ಹೇಳಿದ್ದೇವೆ.

ಅವ್ಯಯೀಭಾವಸಮಾಸದ ಉದಾಹರಣೆ–

(ಅವ್ಯಯೀಭಾವಸಮಾಸವನ್ನು ಮಾಡದಿರುವುದರಿಂದ ಕಾವ್ಯದ ಸೌಂದರ್ಯ ಹೆಚ್ಚಿರುವುದರ ಉದಾಹರಣೆ):

ನಿಲ್ಲಲಾರಳು ಚಲಿಸಲಾರಳು
ಅವಳು ನಲ್ಲನ ಬಳಿಯಲಿ.
ಭಯವು ನಾಚಿಕೆ ಮೇರೆವರಿಯಲು
ನವವಿವಾಹಿತೆ ಯಾವುದೋ
ದಶೆಯೊಳಿದ್ದಳು (ಕೇಳಿರೈ)

**ಅತ್ರ ದಯಿತಸ್ಯೇತಿ ಸಂಬಂಧಿತಯಾ ಯತ್ಸಮೀಪಸ್ಯ ವಿಶೇಷಣಂ ತತ್ ತಸ್ಯ ಸುಕೃತಶತಲಭ್ಯತಾ ಲಕ್ಷಣಮ್ ಉತ್ಕರ್ಷಮಾದಧತ್ ರತೇರುದ್ದೀಪನೇ ಪರ್ಯವಸ್ಯತೀತಿ ಪ್ರಾಧಾನ್ಯೇನ ವಿವಕ್ಷಿತತ್ವಾತ್ ನ 'ಉಪದಯಿತಮ್' ಇತಿವತ್ ಸಮೀಪಾರ್ಥೇನ ಅವ್ಯಯೇನ ಸಹ ಸಮಾಸೇऽವಸಾದಂ ಗಮಿತಮ್। ಪ್ರತ್ಯುದಾಹರಣಂ ಯಥಾ– "ಮಧ್ಯೇವ್ಯೋಮ ತ್ರಿಶಂಕೋಃ ಶತಮಖವಿಮುಖಃ ಸ್ವರ್ಗಸರ್ಗಂ ಚಕಾರ" ಇತಿ।**

**ಅನುವಾದ:**

ಇಲ್ಲಿ 'ದಯಿತಸ್ಯ' ಎಂದು ಸಂಬಂಧಿರೂಪದಲ್ಲಿ ಸಮೀಪ ಎಂಬುದಕ್ಕೆ ವಿಶೇಷಣವನ್ನು ಕೊಟ್ಟಿದೆ. ಅದು ದಯಿತನ (ನಲ್ಲನ, ಪ್ರಿಯನ) ಅನೇಕ ಜನ್ಮಗಳ ಪುಣ್ಯಗಳಿಂದ ಸಿಕ್ಕುವಿಕೆ ಎಂಬ ಉತ್ಕರ್ಷವಿಶೇಷವನ್ನು ಸೂಚಿಸಿ ರತಿ (ಎಂಬ ಸ್ಥಾಯಿಭಾವದ) ಉದ್ದೀಪನದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಹಾಗೆ ಅದು ಪ್ರಧಾನವೆಂದು ವಿವಕ್ಷಿತವಾಗಿರುವುದರಿಂದ 'ಉಪದಯಿತಮ್' ಎಂಬಂತೆ ಸಮೀಪಾರ್ಥಕವಾದ ಅವ್ಯಯದೊಡನೆ ಸಮಾಸದಲ್ಲಿ ನೂಕಲ್ಪಟ್ಟು ಹಾಳುಮಾಡಲ್ಪಟ್ಟಿಲ್ಲ.

ಪ್ರತ್ಯುದಾಹರಣೆ (ಮಧ್ಯೇವ್ಯೋಮ.....) "ತ್ರಿಶಂಕುವಿಗಾಗಿ (ವಿಶ್ವಾಮಿತ್ರ ಮಹರ್ಷಿಯು) ಆಕಾಶ ಮಧ್ಯದಲ್ಲಿ ಇಂದ್ರನ ಅಭಿಪ್ರಾಯಕ್ಕೆ ವಿರುದ್ಧವಾಗಿ ಸ್ವರ್ಗದ ಸೃಷ್ಟಿಯನ್ನೇ ಮಾಡಿಬಿಟ್ಟನು".

**ಅತ್ರ ಹಿ ಭಗವತೋ ವಿಶ್ವಾಮಿತ್ರಸ್ಯ ತಪಸಃ ಪ್ರಭಾವಪ್ರಕರ್ಷಪ್ರತಿಪಾದನಂ ಪ್ರಸ್ತುತಮ್। ಸ ಚ ತಸ್ಯ ನಿರುಪಕರಣಸ್ಯ ಸತಃ ಶೂನ್ಯೇ ವ್ಯೋಮ್ನಿ ಸ್ವರ್ಗಸರ್ಗಸಾಮರ್ಥ್ಯೇನೈವ ಪ್ರತಿಪಾದಿತೋ ಭವತೀತಿ ವ್ಯೋಮ್ನೈವ ಪ್ರಾಧಾನ್ಯೇನ ವಿವಕ್ಷಿತಂ, ನ ತನ್ಮಧ್ಯಮ್। ತೇನಾವಿಷಯ ಏವಾಯಂ ಸಮಾಸಃ ಕವಿನಾ ಕೃತ ಇತಿ ಮಧ್ಯೇ ವ್ಯೋಮ್ನ ಇತಿ ಯುಕ್ತಃ ಪಾಠಃ।**

**ಅನುವಾದ:**

ಈ ಪದ್ಯದಲ್ಲಿ ಪ್ರಸ್ತುತವಾಗಿರುವುದು ಭಗವಾನ್ ವಿಶ್ವಾಮಿತ್ರನ ತಪಸ್ಸಿನ ಪ್ರಭಾವಾತಿಶಯದ ಪ್ರತಿಪಾದನೆ. ಯಾವ ಉಪಕರಣವೂ ಇಲ್ಲದಿದ್ದಾಗಲೂ ಶೂನ್ಯವಾದ ಆಕಾಶದಲ್ಲಿ ಸ್ವರ್ಗವನ್ನು ಸೃಷ್ಟಿಸಿದ ಅವನ ಸಾಮರ್ಥ್ಯವನ್ನು ಹೇಳುವುದರಿಂದಲೇ ಆ ಪ್ರಭಾವಾತಿಶಯವನ್ನು ಪ್ರತಿಪಾದಿಸಿದಂತಾಗುತ್ತದೆ. ಆದ್ದರಿಂದ ಇಲ್ಲಿ ಪ್ರಧಾನವಾಗಿ ವಿವಕ್ಷಿತವಾಗಿರುವುದು ಆಕಾಶ, ಅದರ ಮಧ್ಯಭಾಗವಲ್ಲ. ಆದ್ದರಿಂದ ಇಲ್ಲಿ ಅನಪೇಕ್ಷಿತವಾದ (ಅವ್ಯಯೀಭಾವ) ಸಮಾಸವನ್ನು ಕವಿಯು ಮಾಡಿದ್ದಾನೆ.

ಆದ್ದರಿಂದ ಇಲ್ಲಿ (ಸಮಾಸವನ್ನು ಮಾಡದೆ) ಮಧ್ಯೇ ವ್ಯೋಮ್ನಃ ಎಂದು ಇಟ್ಟುಕೊಂಡರೆ ಉಚಿತವಾದ ಪಾಠವಾಗುವುದು.

**ಅನೇನೈವ ನ್ಯಾಯೇನ ಕೃತ್ತದ್ಧಿತವೃತ್ತ್ಯೋರಪಿ ಪ್ರತಿಷೇಧೋಽವಗಂತವ್ಯಃ, ತತ್ರಾಪ್ಯುಕ್ತಕ್ರಮೇಣ ಪ್ರಾಧಾನ್ಯೇತರಭಾವವಿವಕ್ಷಾವಿಶೇಷಾತ್। ತಯೋರುದಾಹರಣಂ ಯಥಾ–**

**ಯಃ ಸರ್ವಂ ಕಷತಿ ಖಲೋ ಬಿಭರ್ತಿ ಯಃ ಕುಕ್ಷಿಮೇವ ಸತ್ಯತಿಥೌ।**
**ಯಶ್ಚ ವಿಧುಂ ತುದತಿ ಸದಾ ಶೀರ್ಷಚ್ಛೇದಂ ತ್ರಯೋಽಪಿ ತೇಽರ್ಹಂತಿ ॥ ಇತಿ।**

**ಅನುವಾದ:**

ಇದೇ ನ್ಯಾಯದಿಂದ ಕೃದ್‌ವೃತ್ತಿಯಲ್ಲೂ ತದ್ಧಿತವೃತ್ತಿಯಲ್ಲೂ ಪ್ರತಿಷೇಧವನ್ನು ಅರಿತುಕೊಳ್ಳಬೇಕು. ಅವುಗಳಲ್ಲೂ ಮೇಲೆ ಹೇಳಿದ ರೀತಿಯಿಂದ ಪ್ರಾಧಾನ್ಯ ಮತ್ತು

ಗೌಣತ್ವವನ್ನು ತಿಳಿಸಿ ಹೇಳುವ ಉದ್ದೇಶ (ಕವಿಗಳಿಗೆ) ಇರುತ್ತದೆಯಷ್ಟೆ. ಅವುಗಳ ಉದಾಹರಣೆ (ಯಃ ಸರ್ವಂ.....)

"ಯಾವ ದುರುಳನು ಎಲ್ಲರನ್ನೂ ತೇಯುವನೋ, ಯಾವನು ಅತಿಥಿ ಬಂದಿದ್ದಾಗ (ಅವನಿಗೆ ಆಹಾರವನ್ನು ಕೊಡದೆ) ತನ್ನ ಹೊಟ್ಟೆಯನ್ನೇ ತುಂಬಿಸಿಕೊಳ್ಳುವನೋ, ಯಾವ (ರಾಹು) ಸದಾ ಚಂದ್ರನನ್ನು ಪೀಡಿಸುವನೋ ಆ ಮೂವರೂ ಶೀರ್ಷಚ್ಛೇದನಕ್ಕೆ ಅರ್ಹರು.

**ವಿವರಣೆ:**

ಇಲ್ಲಿ ಕೃದ್‌ವೃತ್ತಿಯನ್ನು ಬಳಸಿದರೆ ಸರ್ವಂಕಷ, ಕುಕ್ಷಿಂಭರಿ, ವಿಧುಂತುದ ಎಂಬ ಶಬ್ದಗಳಾಗುತ್ತವೆ. ತದ್ಧಿತವೃತ್ತಿಯನ್ನು ಬಳಸಿದರೆ ಶೀರ್ಷಚ್ಛೇದ್ಯಃ ಎಂಬ ಶಬ್ದ ಸಿದ್ಧವಾಗುತ್ತದೆ. ಆದರೆ ಅವುಗಳನ್ನು ಕವಿಯು ಬಳಸಿಲ್ಲ. ಏಕೆಂದರೆ ಅವುಗಳಲ್ಲಿ ಸರ್ವ, ಕುಕ್ಷಿ, ವಿಧು ಮತ್ತು ಶೀರ್ಷ ಎಂಬ ಶಬ್ದಗಳ ಅರ್ಥಗಳು ಪ್ರಾಧಾನ್ಯವನ್ನು ಕಳೆದುಕೊಳ್ಳುತ್ತವೆ.

**ಅತ್ರ ಸರ್ವಾದೀನಾಂ ಕಷಣಾದಿಷು ಕರ್ಮಭಾವೇನ ವಿಶೇಷಣತಯಾ ಉಪಾತ್ತಾನಾಮ್ ಉತ್ಕರ್ಷಾಧಾಯಿತಯಾ ಪ್ರಾಧಾನ್ಯೇನ ವಿವಕ್ಷಿತತ್ವಾನ್ನ ತೈಃಸಹ ವೃತ್ತೌ ನ್ಯಗ್ಭಾವೋ ವಿಹಿತಃ। ಸರ್ವಾರ್ಥಸ್ಯ ಭುವನಾಭಯದಾನದೀಕ್ಷಾಬದ್ಧಕಕ್ಷ್ಯಾಣಾಂ ಬೋಧಿಸತ್ವಾನಾಮಪಿ ಚರಿತಸ್ಯ ತದಂತಃಪಾತಿತ್ವಾತ್। ಖಲಾಃ ಖಲು ದಂಭಾದಿದೋಷಾರೋಪೇಣ ತದಪಿ ತೇಷಾಂ ಕಷಂತ್ಯೇವ। ಕಾಯೋಪಲಕ್ಷಣಸ್ಯ ಕುಕ್ಷೇಃ ಕಾಯಸ್ಯ ಸರ್ವಾಶುಚಿನಿಧಾನತ್ವಾದ್ ವಿನಶ್ವರತ್ವಾಚ್ಚ। ವಿಧೋಶ್ಚ ಸಕಲಜಗದಾನಂದಹೇತುತ್ವಾತ್। ಕಷಣಾದಿಕರ್ತೃಷು ಅಕಾರ್ಯಕಾರಿತಯಾ ಅಪರಾಧಾತಿರೇಕ ಲಕ್ಷಣಮ್ ಉತ್ಕರ್ಷಮ್ ಆದಧತಾಂ ಪ್ರಾಧಾನ್ಯೇನ ವಿವಕ್ಷಾ। ಶೀರ್ಷಚ್ಛೇದಸ್ಯ ಚ ಶಾರೀರೇಷು ನಿಗ್ರಹೇಷು ತದತಿರಿಕ್ತಸ್ಯಾನ್ಯಸ್ಯ ನಿಗ್ರಹಸ್ಯಾಸಂಭವಾತ್।**

**ಅನುವಾದ:**

ಇಲ್ಲಿ ಸರ್ವ ಮುಂತಾದುವು ಕಷಣ ಮುಂತಾದ ಕ್ರಿಯೆಗಳ ಕರ್ಮಗಳಾಗಿದ್ದು ವಿಶೇಷಣರೂಪದಲ್ಲಿ ಉಪಾತ್ತವಾಗಿವೆ. ಅವು ಉತ್ಕರ್ಷವನ್ನು ತಂದುಕೊಡುವುದರಿಂದ ಪ್ರಧಾನಭಾವದಿಂದ ವಿವಕ್ಷಿತವಾಗಿವೆ. ಆದ್ದರಿಂದ ಅವುಗಳನ್ನು ವೃತ್ತಿಯೊಳಗೆ ತುರುಕಿ ಅಪ್ರಾಧಾನ್ಯವನ್ನು ಹೊಂದುವಂತೆ (ಕವಿಯು) ಮಾಡಿಲ್ಲ. ಸರ್ವ ಎಂಬ ಶಬ್ದದ ಅರ್ಥದೊಳಗೆ ಪ್ರಪಂಚಕ್ಕೆ ಅಭಯದಾನವನ್ನು ನೀಡಲು ದೀಕ್ಷೆಯನ್ನು ತೊಟ್ಟು ಸೊಂಟವನ್ನು ಕಟ್ಟಿ ನಿಂತಿರುವ ಬೋಧಿಸತ್ತ್ವರ ಚರಿತ್ರೆಯೂ ಸೇರಿಕೊಳ್ಳುತ್ತದೆ. ದುರುಳರು ಆ ಬೋಧಿಸತ್ತ್ವರಲ್ಲೂ ಡಂಭಾಚಾರ ಮುಂತಾದ ದೋಷಗಳನ್ನು ಆರೋಪಿಸಿ ಆ ಮಹಾತ್ಮರ ಚರಿತ್ರವನ್ನು ನಿಂದಿಸುತ್ತಾರೆ.

ಹೊಟ್ಟೆ ಎಂಬುದಿಲ್ಲಿ ಶರೀರಕ್ಕೆ ಉಪಲಕ್ಷಣ. ಶರೀರವು ಸಕಲ ಅಶುಚಿಗಳ ನಿಧಿ ಮತ್ತು ಅಶಾಶ್ವತ. ಚಂದ್ರನು ಸಮಸ್ತಜಗತ್ತಿನ ಆನಂದಕ್ಕೆ ಕಾರಣನಾಗಿರುವವನು.

ಇಂಥವರಿಗೂ ಪೀಡೆಯನ್ನು ಕೊಡುವವರ ಪಾಪಕಾರಿತ್ವವು ಅತ್ಯಂತ ಹೀನ ಅಪರಾಧವೆಂದು ಸರ್ವಾದಿಪದಗಳು ಎತ್ತಿ ತೋರಿಸುವುದರಿಂದ ಅವು ಪ್ರಧಾನವಾಗಿ ವಿವಕ್ಷಿತವಾಗಿವೆ. ಹೀಗೆಯೇ ಶಿರಶ್ಛೇದನವು ಪ್ರಧಾನವಾಗಿ ವಿವಕ್ಷಿತವಾಗಿದೆ, ಏಕೆಂದರೆ ಶರೀರಕ್ಕೆ ಕೊಡುವ ದಂಡಗಳಲ್ಲಿ ಅದಕ್ಕಿಂತಲೂ ಹೆಚ್ಚಿನ ನಿಗ್ರಹವೇ ಇಲ್ಲ.

**ವಿವರಣೆ:**

ಸರ್ವಕೂಲಾಭ್ರಕರೀಷೇಷು ಕಷಃ ಎಂಬ ಪಾಣಿನಿಸೂತ್ರದಿಂದ ಸರ್ವಂಕಷ ಎಂಬ ಶಬ್ದ ನಿಷ್ಪನ್ನವಾಗುತ್ತದೆ. ಕುಕ್ಷಿಂಭರಿಶ್ಚ ಎಂದು ಕುಕ್ಷಿಂಭರಿ ಶಬ್ದವು ನಿಪಾತಿತ. ವಿಧ್ವರುಷೋಸ್ತುದಃ ಎಂಬ ಸೂತ್ರದಿಂದ ವಿಧುಂತದ ಎಂಬ ಶಬ್ದದ ನಿಷ್ಪತ್ತಿ. ಈ ಶ್ಲೋಕದಲ್ಲಿ ಈ ಕೃದ್‌ವೃತ್ತಿಗಳನ್ನು ಬಳಸಬಹುದಾಗಿತ್ತು, ಆದರೆ ಕವಿಯು ಬಳಸಿಲ್ಲ. ಏಕೆಂದರೆ ವೃತ್ತಿಯಲ್ಲಿ ಪದದ ಅರ್ಥದ ಪ್ರಾಧಾನ್ಯವು ನಷ್ಟವಾಗುತ್ತದೆ. ಹೀಗೆಯೇ ಶೀರ್ಷಚ್ಛೇದಾದ್ ಯಚ್ಚ ಎಂಬ ಸೂತ್ರದಿಂದ ಶೀರ್ಷಚ್ಛೇದ್ಯಃ ಎಂದು ತದ್ಧಿತವೃತ್ತಿಯನ್ನು ಬಳಸಬಹುದಾಗಿತ್ತು. ಆದರೆ ಆಗ ಶೀರ್ಷ ಎಂಬ ಶಬ್ದದ ಅರ್ಥಕ್ಕೆ ಪ್ರಾಧಾನ್ಯವು ತೋರುತ್ತಿರಲಿಲ್ಲ. ಪದವು ಸ್ವತಂತ್ರವಾಗಿದ್ದಾಗ ಕೊಡುವ ಅರ್ಥಕ್ಕೂ ವೃತ್ತ್ಯಂತರ್ಗತವಾದಾಗ ಕೊಡುವ ಅರ್ಥಕ್ಕೂ ಅಂತರವಿದೆ.

**ಯಥಾ 'ರಾಮೋಽಸ್ಮಿ ಸರ್ವಂ ಸಹೇ' ಇತಿ, 'ಉಚಿತಕಾರಿತ್ವಂ ಪ್ರತಿ ಕಿಮುಚ್ಯತೇ ರಾಮಭದ್ರಸ್ಯ, ದಶರಥಸ್ಯ ಹಿ ಪ್ರಸೂತಿರಸೌ ಇತಿ ಚ। ಪ್ರತ್ಯಯೋತ್ಪತ್ತೌ ಪುನರ್ನ್ಯಗ್ಭೂತಸರ್ವಾದಿಕರ್ಮಭಾವಃ ಕಷಣಾದಿಷು ಕರ್ತ್ರಂಶಃ ಏವೋನ್ಮಗ್ನತಯಾ ಪ್ರಕಾಶತೇ, ನ ಕರ್ಮಾಂಶಃ ತತ್ರೈವ ಪ್ರತ್ಯಯೋತ್ಪತ್ತೇಃ। ವಾಕ್ಯೇ ತು ಯದ್ಯಪಿ ಶಬ್ದ ವೃತ್ತೌ ಕ್ರಿಯಾಯಾಃ ಪ್ರಧಾನಭಾವೇನ ಪ್ರತೀತಿಃ, ತಥಾಪಿ ತತ್ರಾನ್ಯೋ ವಿವಕ್ಷಾಕೃತಃ ಸಾಧನಾನಾಮ್ ಅಪಿ ಸ ಪ್ರತೀಯತ ಏವ।**

**ಅನುವಾದ:**

ಇನ್ನೊಂದು ಉದಾಹರಣೆ– "ನಾನು ರಾಮ, ಎಲ್ಲವನ್ನೂ ಸಹಿಸುತ್ತೇನೆ". ಮತ್ತೊಂದು ಉದಾಹರಣೆ– "ಶ್ರೀರಾಮನು ಉಚಿತವಾದುದನ್ನೇ ಮಾಡುತ್ತಾನೆಂದು ಮತ್ತೆ ಹೇಳಬೇಕೆ? ಅವನು ದಶರಥನ ಮಗನಲ್ಲವೆ?" ಇಲ್ಲಿ ಕೃತ್‌ಪ್ರತ್ಯಯವು ಹುಟ್ಟಿದರೆ ಸರ್ವ ಮುಂತಾದ ಪದಗಳ ಅರ್ಥಗಳ ಕರ್ಮತ್ವವು ಗೌಣವಾಗಿ ಕಷಣಾದಿ ಕ್ರಿಯೆಗಳಲ್ಲಿ ಕರ್ತ್ರಂಶವೇ ಎದ್ದು ಕಾಣಿಸುತ್ತದೆ, ಕರ್ಮಾಂಶವು ಹಾಗೆ ತೋರುವುದಿಲ್ಲ, ಏಕೆಂದರೆ ಕರ್ತ್ರರ್ಥದಲ್ಲಿಯೇ ಪ್ರತ್ಯಯವು ಹುಟ್ಟಿರುತ್ತದೆ. ವಾಕ್ಯದಲ್ಲಾದರೋ ಶಬ್ದವೃತ್ತಿಯಲ್ಲಿ ಕ್ರಿಯೆಯೇ ಪ್ರಧಾನವಾಗಿ ತೋರುತ್ತದೆ. ಆದರೂ ಅಲ್ಲಿ ವಿವಕ್ಷೆಗೆ ಅಧೀನವಾಗಿ ಇತರ ಕಾರಕಗಳ ಪ್ರಧಾನತ್ವವೂ ತೋರುತ್ತದೆ.

**ನ ಚ ಏಕಸ್ಮಿನ್ನೇವ ವಾಕ್ಯೇ ದ್ವಯೋಸ್ಸಾಧ್ಯಸಾಧನಯೋಃ ಯುಗಪತ್ ಪ್ರಧಾನಭಾವೋಽನುಪಪನ್ನ ಇತಿ ಶಕ್ಯಂ ವಕ್ತುಂ, ಶಬ್ದಾರ್ಥಸಾಮರ್ಥ್ಯವಿವಕ್ಷಾಕೃತಾನಾಂ ತ್ರಯಾಣಾಮಪಿ ಏಕಸ್ಯೈವ ವಿವಕ್ಷಾಕೃತಸ್ಯ ಪ್ರಾಧಾನ್ಯಸ್ಯ ಬಲೀಯಸ್ತಯಾ ತಯೋಃ ಸಮಶೀರ್ಷಿಕಾಭಾವಾತ್।**

**ಅನುವಾದ:**

ಒಂದೇ ವಾಕ್ಯದಲ್ಲಿ ಸಾಧ್ಯಸಾಧನೆಗಳೆರಡಕ್ಕೂ ಏಕಕಾಲದಲ್ಲಿ ಪ್ರಾಧಾನ್ಯವು ಅನುಚಿತ ಎಂದು ಹೇಳುವುದೂ ಸರಿಯಲ್ಲ. ಶಬ್ದಸಾಮರ್ಥ್ಯದಿಂದ, ಅರ್ಥಸಾಮರ್ಥ್ಯದಿಂದ ಮತ್ತು ವಿವಕ್ಷೆಯಿಂದ ಉಂಟಾಗುವ ಮೂರು ಸಾಮರ್ಥ್ಯಗಳಲ್ಲಿ, ವಿವಕ್ಷಾಕೃತವಾದ ಸಾಮರ್ಥ್ಯವೇ ಪ್ರಬಲವಾಗಿರುವುದರಿಂದ ಉಳಿದ ಎರಡು ಸಾಮರ್ಥ್ಯಗಳಿಗೆ (ವಿವಕ್ಷಾಕೃತ ಸಾಮರ್ಥ್ಯದೊಡನೆ) ಸಮಾನತ್ವವು ಇಲ್ಲವೇ ಇಲ್ಲ.

**ವಿವರಣೆ:**

ಭಾಷೆಯಲ್ಲಿ ನಾನಾ ವಿಧವಾದ ಸಾಮರ್ಥ್ಯವಿದೆ. ವ್ಯಾಕರಣಾನುಗುಣವಾಗಿ ಬರುವುದು ಶಾಬ್ದಸಾಮರ್ಥ್ಯ. ವಾಸ್ತವ ಪ್ರಪಂಚಕ್ಕೆ ಅನುಗುಣವಾಗಿ ಬರುವುದು ಅರ್ಥಸಾಮರ್ಥ್ಯ. ರಸಪ್ರತೀತಿಗಾಗಿ ಕವಿಯು ಏನನ್ನು ಹೇಳಲು ಬಯಸಿರುವನೋ ಅದಕ್ಕೆ ಅನುಗುಣವಾದದ್ದು ವಿವಕ್ಷಾಕೃತಸಾಮರ್ಥ್ಯ. ಕಾವ್ಯದಲ್ಲಿ ಕವಿವಿವಕ್ಷೆ ಅತ್ಯಂತ ಮುಖ್ಯವಾದುದರಿಂದ ಅದು ಪ್ರಬಲತಮ. ಉಳಿದ ಎರಡು ಸಾಮರ್ಥ್ಯಗಳು ಅದಕ್ಕೆ ಸಮವಲ್ಲ.

**ತದಿದಮತ್ರ ತಾತ್ಪರ್ಯಮ್। ಯತ್ ಕಥಂಚಿದಪಿ ಪ್ರಧಾನತಯಾ ವಿವಕ್ಷಿತಂ, ನ ತನ್ನಿಯಮೇನ ಇತರೇಣ ಸಹ ಸಮಾಸಮರ್ಹತೀತಿ। ಇತರತ್ತು ವಿಶೇಷ್ಯಮ್ ಅನ್ಯದ್ ವಾ ಅಸ್ತು, ನ ತತ್ರ ನಿಯಮಃ। ತೇನ ದ್ವಂದ್ವಪದಾನಾಂ ಸರೂಪಾಣಾಂ ಚ ಪದಾನಾಮ್ ಅರ್ಥಸ್ಯ ಅನ್ಯೋನ್ಯಂ ವಿಶೇಷಣವಿಶೇಷ್ಯಾಭಾವೇಽಪಿ ಯದಾ ಪ್ರತ್ಯೇಕಂ ಕ್ರಿಯಾಭಿಸಂಬಂಧೋಪಗಮಲಕ್ಷಣಂ ಪ್ರಾಧಾನ್ಯಂ ವಿವಕ್ಷ್ಯತೇ, ತದಾ ತೇಷಾಮಪಿ ಸಮಾಸ ಏಕಶೇಷಶ್ಚ ನೇಷ್ಯತ ಏವ।**

**ಅನುವಾದ:**

ಇಲ್ಲಿ ತಾತ್ಪರ್ಯವಿಷ್ಟು– ಯಾವುದು ಯಾವ ಪ್ರಕಾರದಲ್ಲಾಗಲಿ ಪ್ರಧಾನವಾಗಿ ವಿವಕ್ಷಿತವಾಗಿರುವುದೋ ಅದು ಇನ್ನೊಂದು ಪದದೊಡನೆ ಸಮಾಸವನ್ನು ಹೊಂದಲು ಅರ್ಹವಲ್ಲ. ಆ ಇನ್ನೊಂದು ವಿಶೇಷ್ಯವೋ ಮತ್ತೊಂದೋ ಆಗಿರಲಿ, ಅದರಲ್ಲಿ ವಿಶೇಷವೇನಿಲ್ಲ. ಆದ್ದರಿಂದ ದ್ವಂದ್ವಸಮಾಸದ ಪದಗಳ (ಏಕಶೇಷವನ್ನು ಹೊಂದುವ) ಸರೂಪ ಪದಗಳ ಅರ್ಥಗಳಿಗೆ ಪರಸ್ಪರ ವಿಶೇಷಣವಿಶೇಷ್ಯಭಾವವು ಇಲ್ಲದಿದ್ದರೂ ಯಾವಾಗ ಪ್ರತ್ಯೇಕವಾಗಿ ಕ್ರಿಯಾಭಿಸಂಬಂಧವನ್ನು ಪಡೆಯುವ ಸ್ವರೂಪದ ಪ್ರಾಧಾನ್ಯವು ವಿವಕ್ಷಿತವೋ ಆಗ ಅಂಥ ಪದಗಳಿಗೂ ಸಮಾಸ ಅಥವಾ ಏಕಶೇಷ ಬರುವುದು (ನಮಗೆ) ಇಷ್ಟವಾಗದು.

**ಯಥಾ– ಕಿಮಂಜನೇನಾಯತಲೋಚನಾಯಾ ಹಾರೇಣ ಕಿಂ ಪೀನಪಯೋಧರಾಯಾಃ।**
**ಪರ್ಯಾಪ್ತಮೇತನ್ನನು ಮಂಡನಂ ತೇ ರೂಪಂ ಚ ಕಾಂತಿಶ್ಚ ವಿದಗ್ಧತಾ ಚ॥**

**ಇತ್ಯತ್ರ ರೂಪಾದೀನಾಂ ಪ್ರತ್ಯೇಕಂ ಮಂಡನಕ್ರಿಯಾ ಭಿಸಂಬಂಧಕೃತಂ ಪ್ರಾಧಾನ್ಯಂ ರತ್ಯುದ್ದೀಪನ ಪರ್ಯವಸಾಯಿ ವಿವಕ್ಷಿತಮಿತಿ ನ ತತ್ ತೇಷಾಂ ಸಮಾಸೇಽವಸಾದಿತಮ್।**

**ಅನುವಾದ:**

ಉದಾಹರಣೆ–

ಆಯತಲೋಚನೆಗೆ ಅಂಜನದಿಂದೇನು?
ಪೀನಪಯೋಧರೆಗೆ ಹಾರದಿಂದೇನು?
ಈ ರೂಪ, ಈ ಕಾಂತಿ, ಈ ವಿದಗ್ಧತೆ
ಇವುಗಳೇ ನಿನಗೆ ಸಾಕಷ್ಟು ಒಡವೆಗಳಲ್ಲವೆ?

ಈ ಪದ್ಯದಲ್ಲಿ ರೂಪಾದಿಗಳು ಒಂದೊಂದೂ ಅಲಂಕರಣ ಕ್ರಿಯಾಸಂಬಂಧದಿಂದ ಪ್ರಾಧಾನ್ಯವನ್ನು ಹೊಂದಿವೆ. ಅದು ರತಿ ಎಂಬ ಸ್ಥಾಯಿಭಾವದ ಉದ್ದೀಪನದಲ್ಲಿ ಪರ್ಯವಸಾನವನ್ನು ಹೊಂದಬೇಕೆಂದು ವಿವಕ್ಷಿತವಾಗಿದೆ. ಆದ್ದರಿಂದ ಅವುಗಳ ಪ್ರಾಧಾನ್ಯ ಸಮಾಸದಲ್ಲಿ (ತುರುಕುವುದರಿಂದ) ಹಾಳುಗೆಡವಲಾಗಿಲ್ಲ.

**ವಿವರಣೆ:**

ರೂಪಕಾಂತಿವಿದಗ್ಧತಾಃ ಎಂದು ದ್ವಂದ್ವಸಮಾಸವನ್ನು ಮಾಡುವುದು ಸಾಧ್ಯ. ಆದರೆ ಆಗ ರೂಪಾದಿಗಳಿಗೆ ಪ್ರಾಧಾನ್ಯ ನಷ್ಟವಾಗುತ್ತದೆ. ಅವು ಪ್ರತ್ಯೇಕವಾಗಿ ಸ್ವತಂತ್ರವಾಗಿದ್ದಾಗಲೇ ರಸೋತ್ಕರ್ಷ.

**ಯಥಾ ಚ–**
**ಯಾಂತ್ಯಾ ಮುಹುರ್ವಲಿತಕಂಧರಮಾನನಂ ತದ್**
**ಆವೃತ್ತವೃಂತಶತಪತ್ರನಿಭಂ ವಹಂತ್ಯಾ।**
**ದಿಗ್ಧೋಽಮೃತೇನ ಚ ವಿಷೇಣ ಚ ಪಕ್ಷ್ಮಲಾಕ್ಷ್ಯಾ**
**ಗಾಢಂ ನಿಖಾತ ಇವ ಮೇ ಹೃದಯೇ ಕಟಾಕ್ಷಃ॥**
**ಇತಿ। ಏಕಶೇಷೇ ಯಥಾ–**
**ಪ್ರಾಪ್ತಾವೇಕರಥಾರೂಢೌ ಪೃಚ್ಛಂತೌತ್ವಾಮಿತಸ್ತತಃ।**
**ಕಶ್ಚ ಕಶ್ಚ?**
**ಅರ್ಜುನಶ್ಚ ಸ ಕರ್ಣಾರಿಃ ಸ ಚ ಕ್ರೂರೋ ವೃಕೋದರಃ॥**
**ಪ್ರತ್ಯುದಾಹರಣಮೇತದೇವ ಕೃತೈಕಶೇಷಮುವಗಂತವ್ಯಮ್॥**

**ಅನುವಾದ:**

ಇನ್ನೊಂದು ಉದಾಹರಣೆ– "ಕತ್ತನ್ನು ತಿರುಗಿಸಿದ ಮಾಲತಿಯ ಮುಖ ತೊಟ್ಟು ತಿರುಗಿದ ತಾವರೆಯಂತಿತ್ತು. ಅಮೃತದಿಂದಲೂ ವಿಷದಿಂದಲೂ ನೆನೆಸಿದ ಕಟಾಕ್ಷವನ್ನು ಆ ಪಕ್ಷ್ಮಲಾಕ್ಷಿ ನನ್ನ ಹೃದಯದಲ್ಲಿ ಆಳವಾಗಿ ನೆಟ್ಟಂತಾಯಿತು."

ಏಕಶೇಷದ ಉದಾಹರಣೆ–

"ಒಂದೇ ರಥದಲ್ಲಿ ಕುಳಿತ ಅವರಿಬ್ಬರೂ ನಿನ್ನನ್ನು ಕೇಳಿಕೊಂಡು ಇಲ್ಲಿಗೆ ಬಂದರು. ಯಾವನು? ಯಾವನು? ಕರ್ಣನನ್ನು ಕೊಂದ ಆ ಅರ್ಜುನನೂ, ಕ್ರೂರ

ಹೃದಯದ ಆ ವೃಕೋದರನೂ." ಏಕಶೇಷ ಮಾಡಿದರೆ ಇದೇ ಪ್ರತ್ಯುದಾಹರಣೆ ಆಗುವುದು ಎಂದು ತಿಳಿದುಕೊಳ್ಳಬೇಕು.

**ವಿವರಣೆ:**

ತೌ ಅರ್ಜುನವೃಕೋದರೌ ಎಂದು ಏಕಶೇಷವನ್ನು ಮಾಡಿದಾಗ ಅವರೊಬ್ಬೊಬ್ಬರಿಗೆ ಇರುವ ಪ್ರಾಧಾನ್ಯ ನಷ್ಟವಾಗುವುದರಿಂದ ಕ್ರೋಧವೆಂಬ ಸ್ಥಾಯಿಭಾವದ ಪುಷ್ಟಿ ಇರುವುದಿಲ್ಲವೆಂದು ತಾತ್ಪರ್ಯ.

**ಯತ್ರ ಪುನರೇಷ ಪ್ರಧಾನೇತರಭಾವೋ ನ ವಿವಕ್ಷಿತಃ, ಸ್ವರೂಪಮಾತ್ರ ಪ್ರತಿಪತ್ತಿಫಲಶ್ಚ ವಿಶೇಷಣವಿಶೇಷ್ಯಭಾವಃ, ತತ್ರ ಸಮಾಸಾಸಮಾಸಯೋಃ ಕಾಮಚಾರಃ। ಯಥಾ–**

**ಸ್ತನಯುಗಮಶ್ರುಸ್ನಾತಂ ಸಮೀಪತರವರ್ತಿ ಹೃದಯ ಶ್ಲೋಕಾಗ್ನೇಃ।**
**ಚರತಿ ವಿಮುಕ್ತಾಹಾರಂ ವ್ರತಮಿವ ಭವತೋ ರಿಪುಸ್ತ್ರೀಣಾಮ್॥**

**ಇತ್ಯತ್ರ ತು ಭವತ ಇತಿ ರಿಪುಸ್ತ್ರೀಣಾಮಿತಿ ಚ ರಿಪುಸ್ತ್ರೀಣಾಂ ಸ್ತನಯುಗಸ್ಯ ಚ ಸಂಬಂಧಿತ್ವೇನ ಯದ್ ವಿಶೇಷಣಂ ನ ತತಸ್ತೇಷಾಮುತ್ಕರ್ಷಯೋಗಃ ಕಶ್ಚಿದ್ ವಿವಕ್ಷಿತಃ, ಅಪಿ ತು ತತ್ಸಂಬಂಧ ಪ್ರತೀತಿ–ಮಾತ್ರಮ್, ತಚ್ಚ ವ್ರತಮಿವ ಭವದರಿವಧೂಸ್ತನ ದ್ವಿತಯಮಿತ್ಯತಃ ಸಮಾಸಾದಪಿ ತುಲ್ಯಮೇವ। ಯಥಾ ಚಾತ್ರೈವ ರಿಪುಸ್ತ್ರೀಣಾಮಿತಿ ರಿಪುಸಂಬಂಧಮಾತ್ರಪ್ರತೀತಿಃ ಸ್ತ್ರೀಣಾಮಿತಿ।**

**ಅನುವಾದ:**

ಮತ್ತೆ ಎಲ್ಲಿ ಪ್ರಧಾನ–ಅಪ್ರಧಾನ ಭಾವದ ವಿವಕ್ಷೆಯೇ ಇಲ್ಲವೋ, ವಿಶೇಷಣವಿಶೇಷ್ಯಭಾವದ ಫಲ ಕೇವಲ ಸ್ವರೂಪದ ಅರಿವೋ, ಅಲ್ಲಿ ಸಮಾಸವನ್ನು ಮಾಡುವುದು ಅಥವಾ ಮಾಡದಿರುವುದು ಎಂಬುದರಲ್ಲಿ ಕವಿಗೆ ಸ್ವಾತಂತ್ರ್ಯವುಂಟು. ಉದಾಹರಣೆ (ಸ್ತನಯುಗಮ್ ಇತ್ಯಾದಿ)

"ನಿನ್ನ ಶತ್ರುಗಳ ಹೆಂಗಸರ ಸ್ತನಯುಗವು ಕಂಬನಿಗಳಿಂದ ಸ್ನಾನ ಮಾಡಿದೆ, ಹೃದಯದ ಶೋಕವೆಂಬ ಬೆಂಕಿಯ ಬಳಿಯೇ ಕುಳಿತಿದೆ. ಆಹಾರವನ್ನು ಬಿಟ್ಟು ಅದು ವ್ರತವನ್ನು ಆಚರಿಸುತ್ತಿರುವಂತಿದೆ".

ಈ ಪದ್ಯದಲ್ಲಿ ಭವತಃ (=ನಿನ್ನ) ಎಂದು ಶತ್ರು ಸ್ತ್ರೀಯರಿಗೂ, ರಿಪುಸ್ತ್ರೀಣಾಂ (=ಶತ್ರುಸ್ತ್ರೀಯರ) ಎಂದು ಸ್ತನಯುಗಕ್ಕೂ ವಿಶೇಷಣವನ್ನು ಕವಿಯು ಏನು ಕೊಟ್ಟಿದ್ದಾನೆ, ಅದರಿಂದ ಆ ವಿಶೇಷ್ಯಗಳಿಗೆ ಯಾವ ಉತ್ಕರ್ಷವೂ ವಿವಕ್ಷಿತವಾಗಿಲ್ಲ. ಅಲ್ಲಿ ಹೇಳಿರುವುದು ಸಂಬಂಧ ಮಾತ್ರ. ಆ ಸಂಬಂಧಮಾತ್ರವು "ಭವದರಿವಧೂಸ್ತನದ್ವಿತಯಮ್" ಎಂದು ಸಮಾಸವನ್ನು ಮಾಡಿದರೂ ಹಾಗೇ ತೋರುತ್ತದೆ. ಇದೇ ರೀತಿಯಾಗಿ ಈ ಪದ್ಯದಲ್ಲೇ ರಿಪುಸ್ತ್ರೀಣಾಮ್ ಎಂಬ ಪದದಲ್ಲಿ ಸ್ತ್ರೀಯರಿಗೆ ರಿಪು (=ಶತ್ರು) ಸಂಬಂಧ ಮಾತ್ರ ವಿವಕ್ಷಿತವಾಗಿ ಗೋಚರವಾಗುತ್ತದೆ.

**ವಿವರಣೆ:**

ಹಿಂದೆ ಸಮಾಸವನ್ನು ಮಾಡದ ಉದಾಹರಣೆಗಳಲ್ಲಿ ಒಂದೊಂದು ಪದದ ಅರ್ಥವೂ ಸ್ಥಾಯಿಭಾವದ ಉದ್ದೀಪನ ಕಾರ್ಯಕ್ಕೆ ಸಹಕಾರಿ ಎಂದು ತೋರಿಸಲಾಯಿತು. ಆದರೆ ಅದರ

ಅಭಿಪ್ರಾಯ– ಎಲ್ಲಿಯೂ ಸಮಾಸವನ್ನೇ ಮಾಡಬಾರದು –ಎಂದಲ್ಲ. ಎಲ್ಲಿ ಸಂಬಂಧಮಾತ್ರ ವಿವಕ್ಷಿತವೋ ಅಲ್ಲಿ ಸಮಾಸವನ್ನು ಮಾಡಲು ಕವಿ ಸ್ವತಂತ್ರ. ಸಮಾಸ–ಅಸಮಾಸಗಳಿಗೆ ಅಲ್ಲಿ ವಿಶೇಷ ಇಲ್ಲ. ಸ್ತನಯುಗಮಶ್ರುಸ್ನಾತಮ್ ಎಂಬ (ಬಾಣನ ಕಾದಂಬರಿಯ) ಪದ್ಯದಲ್ಲಿ ಉತ್ಕರ್ಷಾಪಕರ್ಷಗಳ ವಿವಕ್ಷೆ ಇಲ್ಲದ ಕಾರಣ ಸಮಾಸವನ್ನು ಮಾಡಿದರೂ ತಪ್ಪಿಲ್ಲ. ಭವತೋ ರಿಪುಸ್ತ್ರೀಣಾಂ ಎಂದು ಬಿಡಿಸಿ ಹೇಳಿರುವುದರಿಂದ ಯಾವ ಉತ್ಕರ್ಷವೂ ಇಲ್ಲ. ರಿಪೂಣಾಂ ಸ್ತ್ರೀಣಾಮ್ ಎಂದು ಸಮಾಸವನ್ನು ಬಿಡಿಸಿ ಹೇಳಿದರೂ ಯಾವ ವ್ಯತ್ಯಾಸವೂ ಆಗದು.

**ವಿನೋತ್ಕರ್ಷಾಪಕರ್ಷಾಭ್ಯಾಂ ಸ್ವದಂತೇಽರ್ಥಾ ನ ಜಾತುಚಿತ್।**
**ತದರ್ಥಮೇವ ಕವಯೋಽಲಂಕಾರಾನ್ ಪರ್ಯುಪಾಸತೇ॥**
**ತೌ ವಿಧೇಯಾನುವಾದ್ಯತ್ವವಿವಕ್ಷೈಕನಿಬಂಧನೌ।**
**ಸಾ ಸಮಾಸೇಽಸ್ತಮಾಯಾತೀತ್ಯಸಕೃತ್ ಪ್ರತಿಪಾದಿತಮ್॥**
**ಅತ ಏವ ಚ ವೈದರ್ಭೀ ರೀತಿರೇಕೈವ ಶಸ್ಯತೇ।**
**ಯತಃ ಸಮಾಸಸಂಸ್ಪರ್ಶಸ್ತತ್ರ ನೈವೋಪಪದ್ಯತೇ॥**
**ಸಂಬಂಧಮಾತ್ರಮರ್ಥಾನಾಂ ಸಮಾಸೋ ಹ್ಯವಬೋಧಯೇತ್।**
**ನೋತ್ಕರ್ಷಮಪಕರ್ಷಂ ವಾ**

**ಅನುವಾದ:**

ಉತ್ಕರ್ಷ ಅಥವಾ ಅಪಕರ್ಷ (ಭಾನ) ಇಲ್ಲದಿದ್ದರೆ, ಅರ್ಥಗಳು ಎಂದೂ (ವಾಚಕರಿಗೆ) ರುಚಿಸುವುದಿಲ್ಲ. ಆ ಉತ್ಕರ್ಷಾಪಕರ್ಷಗಳಿಗಾಗಿಯೇ ಕವಿಗಳು ಅಲಂಕಾರಗಳನ್ನು ಆಶ್ರಯಿಸುತ್ತಾರೆ.

ಆ ಉತ್ಕರ್ಷಾಪಕರ್ಷಗಳು ವಿಧೇಯ–ಅನುವಾದ್ಯಭಾವದ ವಿವಕ್ಷೆಯನ್ನೇ ಅವಲಂಬಿಸಿರುತ್ತವೆ. ಆ ವಿವಕ್ಷೆಯು ಸಮಾಸದಲ್ಲಿ ಅಸ್ತಂಗತವಾಗಿ ಬಿಡುತ್ತದೆ ಎಂದು ಮತ್ತೆ ಮತ್ತೆ ಹೇಳಿದ್ದೇವೆ.

ಆದ್ದರಿಂದಲೇ ವೈದರ್ಭೀರೀತಿಯೊಂದನ್ನೇ ಎಲ್ಲರೂ ಹೊಗಳುತ್ತಾರೆ. ಏಕೆಂದರೆ ಅದರಲ್ಲಿ ಸಮಾಸದ ಸಂಪರ್ಕವೇ ಉಚಿತವಾಗುವುದಿಲ್ಲ. ಸಮಾಸವು ಅರ್ಥಗಳ ಸಂಬಂಧಮಾತ್ರವನ್ನು ಸೂಚಿಸುತ್ತದೆ, ಉತ್ಕರ್ಷವನ್ನಾಗಲಿ ಅಪಕರ್ಷವನ್ನಾಗಲಿ ಸಮಾಸವು ಸೂಚಿಸಲಾರದು.

**ಯಥಾ–**
**ಊರ್ಧ್ವಾಕ್ಷಿತಾಪಗಲಿತೇಂದುಸುಧಾಲವಾಕ್ತ–**
**ಜೀವತ್ಕಪಾಲಚಯಮುಕ್ತಮಹಾಟ್ಟಹಾಸ–**
**ಸಂತ್ರಸ್ತಮುಗ್ಧಗಿರಿಜಾವಲಿತಾಂಗಸಂಗ–**
**ಹೃಷ್ಟಂ ವಪುರ್ಜಯತಿ ಹಾರಿ ಪಿನಾಕಪಾಣೇಃ॥**
**ವಾಕ್ಯಾತ್ತೂಭಯಮಪ್ಯದಃ। ಯಥಾ**
**ನ್ಯಕ್ಕಾರೋ ಹ್ಯಯಮೇವ ಮೇ ಯದರಯಸ್ತತ್ರಾಪ್ಯಸೌ ತಾಪಸಃ**

**ಸೋऽಪ್ಯತ್ರೈವ ನಿಹಂತಿ ರಾಕ್ಷಸಕುಲಂ ಜೀವತ್ಯಹೋ ರಾವಣಃ।**
**ಧಿಕ್‌ಧಿಕ್ ಶಕ್ರಜಿತಂ ಪ್ರಬೋಧಿತವತಾ ಕಿಂ ಕುಂಭಕರ್ಣೇನ ವಾ**
**ಸ್ವರ್ಗಗ್ರಾಮಟಿಕಾವಿಲುಂಠನವೃಥೋಚ್ಛೂನೈಃಕಿಮೇಭಿರ್ಭುಜೈಃ ॥**

**ಅನುವಾದ:**

ಉದಾಹರಣೆ– (ಊರ್ಧ್ವಾಕ್ಷಿ.....) "ನೊಸಲಗಣ್ಣಿನ ತಾಪದಿಂದ ಚಂದ್ರ ಕರಗುತ್ತಿದ್ದಾನೆ. ಅವನಿಂದ ಸೋರಿದ ಅಮೃತದ ಹನಿಗಳಿಂದ ನೆನೆದು ಜೀವತಾಳಿದ ಕಪಾಲಗಳು ಅಟ್ಟಹಾಸವನ್ನು ಮಾಡುತ್ತಿವೆ. ಮುಗ್ಧೆ ಪಾರ್ವತಿ ಆ ಅಟ್ಟಹಾಸವನ್ನು ಕೇಳಿ ಹೆದರಿ ಶಿವನನ್ನು ಆಲಂಗಿಸಿಕೊಂಡಿದ್ದಾಳೆ. ಅದರಿಂದ ರೋಮಾಂಚಿತವಾದ ಪಿನಾಕಪಾಣಿಯ ಸುಂದರ ದೇಹವು ಜಯಿಸುತ್ತದೆ."

ವಾಕ್ಯದಿಂದ ಉತ್ಕರ್ಷಾಪಕರ್ಷಗಳೆರಡೂ ತೋರುತ್ತವೆ. ಉದಾಹರಣೆ (ನ್ಯಕ್ಕಾರೋ.....)– "ನನಗೆ ಶತ್ರುಗಳಿದ್ದಾರೆ ಎಂಬುದೇ ಅವಮಾನದ ವಿಷಯ. ಅದರಲ್ಲೂ ಈ ಶತ್ರು ಕೇವಲ ತಾಪಸ. ಅವನೂ ಇಲ್ಲೇ ರಾಕ್ಷಸಸೈನಿಕರನ್ನು ಸದೆಬಡಿಯುತ್ತಿದ್ದಾನೆ. ಅಯ್ಯೋ! ಈ ರಾವಣ ಇನ್ನೂ ಬದುಕಿದ್ದಾನೆ! ಇಂದ್ರಜಿತ್ತಿಗೆ ಧಿಕ್ಕಾರ. ಕುಂಭಕರ್ಣನನ್ನು ಎಚ್ಚರಗೊಳಿಸಿದರೂ ಏನು ಲಾಭ? ಸ್ವರ್ಗವೆಂಬ ಕೊಂಪೆಯನ್ನು ಲೂಟಿ ಮಾಡಿ ವೃಥಾ ಕೊಬ್ಬಿದ ಈ ಭುಜಗಳಿಂದ ಪ್ರಯೋಜನವೇನು?"

**ಕಿಂತು ಪ್ರವೃತ್ತಿರೇತಸ್ಯ ರಸಾಭಿವ್ಯಕ್ತ್ಯಪೇಕ್ಷಯಾ।**
**ಶಾಂತಶೃಂಗಾರಕರುಣಾನಂತರೇಣ ಪ್ರಶಸ್ಯತೇ॥**
**ಯತಃ ಸಮಾಸೋ ವೃತ್ತಂ ಚ ವೃತ್ತಯಃ ಕಾಕವಸ್ತಥಾ।**
**ವಾಚಕಾಭಿನಯಾತ್ಮತ್ವಾದ್ ರಸಾಭಿವ್ಯಕ್ತಿಹೇತವಃ॥**
**ಸ ಚಾರ್ಧಾಂತಾವಧಿಃ ಕಾರ್ಯೋ ನಾಧಿಕೋ ಗದ್ಯತಾಪ್ತಿತಃ।**
**ಗದ್ಯೇ ಹಿ ವೃತ್ತವೈಕಲ್ಯೇ ನ್ಯೂನಾ ತದ್ವ್ಯಕ್ತಿಹೇತುತಾ॥**
**ಯಥಾನಂತರೋಕ್ತೇ ಉದಾಹರಣೇ।**

**ಅನುವಾದ:**

ಆದರೆ ಈ (ದೀರ್ಘ) ಸಮಾಸವೂ ಶಾಂತ, ಶೃಂಗಾರ, ಕರುಣ ಎಂಬ ರಸಗಳನ್ನು ಬಿಟ್ಟು (ಉಳಿದ ವೀರ ಮುಂತಾದ) ರಸಗಳ ಅಭಿವ್ಯಕ್ತಿಗಾಗಿ ಪ್ರಯುಕ್ತವಾದಾಗ ಪ್ರಶಸ್ತವೇ ಆಗಿರುತ್ತದೆ.

ಏಕೆಂದರೆ ಸಮಾಸ, ವೃತ್ತ, ವೃತ್ತಿಗಳು ಕಾಕು (ಧ್ವನಿವಿಕಾರ)ಗಳು –ಇವೆಲ್ಲ ವಾಚಕಾಭಿನಯಸ್ವರೂಪವಾಗಿರುವುದರಿಂದ ರಸಾಭಿವ್ಯಕ್ತಿಗೆ ಕಾರಣಗಳಾಗಿರುತ್ತವೆ.

(ಪದ್ಯದಲ್ಲಿ) ದೀರ್ಘಸಮಾಸವು ಅರ್ಧದಲ್ಲಿ (ಎಂದರೆ ಎರಡನೆಯ ಪಾದದ ಕೊನೆಯಲ್ಲಿ) ಮುಗಿಯಲೇ ಬೇಕು. ಅದಕ್ಕೂ ಹೆಚ್ಚಾಗಬಾರದು, (ಏಕೆಂದರೆ ಹಾಗೆ

ಮಾಡಿದಾಗ (ಪದ್ಯ) ಗದ್ಯತ್ವವನ್ನೇ ಹೊಂದುತ್ತದೆ. ವೃತ್ತವಿಲ್ಲದ ಗದ್ಯದಲ್ಲಿ ರಸಾಭಿವ್ಯಕ್ತಿಯು ಕಡಿಮೆ. (ಹೇಗೆಂದರೆ) ಮೇಲೆ ಕೊಟ್ಟ ಊರ್ಧ್ವಾಕ್ಷಿ..... ಇತ್ಯಾದಿ ಪದ್ಯದಲ್ಲಿ ಆಗಿರುವಂತೆ.

**ತಸ್ಯಾಚ್ಛಿನ್ನಃ ಪದಾರ್ಥಾನಾಂ ಸಂಬಂಧಶ್ಚೇತ್ ಪರಸ್ಪರಮ್।**
**ನ ವಿಚ್ಛೇದೋಽಂತರಾ ಕಾರ್ಯೋ ರಸಭಂಗಕರೋ ಹಿ ಸಃ॥**
**ಯಥಾ– "ಮಾದ್ಯದ್ದಿಗ್ಗಜಗಂಡಭಿತ್ತಿಕಷಣೈರ್ಭಗ್ನಸ್ರವಚ್ಚಂದನಃ"**
**ಅತ್ರ ಹಿ ಕ್ಷುಣ್ಣದ್ರವಚ್ಚಂದನ ಇತಿ ಯುಕ್ತಃ ಪಾಠಃ।**
**ಕ್ವಾಪ್ಯಯಮಪಿ ಪಾಠೋ ದೃಶ್ಯತೇ। ವಿಧೇಯತ್ವಂ ಚೈತತ್ ಪ್ರಾಧಾನ್ಯೋಪಲಕ್ಷಣಮ್**
**ಅವ್ಯಭಿಚಾರಾತ್। ತತಶ್ಚ ಪ್ರಧಾನಾವಿಮರ್ಶೋಽಪಿ ದೋಷತಯಾವಗಂತವ್ಯಃ।**

**ಅನುವಾದ:**

ಆದ್ದರಿಂದ (ಪಾದದ ಮಧ್ಯದಲ್ಲಿ) ಪದಾರ್ಥಗಳ ಸಂಬಂಧವು ವಿಚ್ಛಿನ್ನವಾಗುವಂತೆ ಸಮಾಸದ ವಿಚ್ಛೇದವನ್ನು ಮಾಡಬಾರದು. ಏಕೆಂದರೆ ಅಂಥ ವಿಚ್ಛೇದವು ರಸಭಂಗವನ್ನು ಉಂಟುಮಾಡುತ್ತದೆ.

ಉದಾಹರಣೆ– (ಮಾದ್ಯದ್ವಿಗ್ಗಜ.....)

"ಮದಿಸಿದ ದಿಗ್ಗಜಗಳ ಕಪೋಲಭಾಗಗಳ ಉಜ್ಜುವಿಕೆಯಿಂದ ಮುರಿದು ಸೋರುತ್ತಿದ್ದ ಚಂದನ ವೃಕ್ಷ." ಈ ಪದ್ಯದಲ್ಲಿ ಕಷಣಕ್ಷುಣ್ಣದ್ರವಚ್ಚಂದನಃ ಎಂಬ ಪಾಠವು ಉಚಿತ. ಕೆಲವು ಮಾತೃಕೆಗಳಲ್ಲಿ ಈ ಪಾಠವೂ ಕಾಣಿಸುತ್ತದೆ.

ಈ ವಿಧೇಯತ್ವವು ಪ್ರಾಧಾನ್ಯದ ಉಪಲಕ್ಷಣ, ಏಕೆಂದರೆ (ಎಲ್ಲೆಲ್ಲಿ ವಿಧೇಯತ್ವವಿದೆಯೋ ಅಲ್ಲೆಲ್ಲ ಪ್ರಾಧಾನ್ಯವಿದೆ ಎಂಬ ವ್ಯಾಪ್ತಿಗೆ) ವ್ಯಭಿಚಾರವಿಲ್ಲ. ಆದ್ದರಿಂದ ಪ್ರಧಾನಾವಿಮರ್ಶ ಎಂಬುದೂ ದೋಷವೇ ಎಂದು ಅರಿತುಕೊಳ್ಳಬೇಕು.

**ಯಥಾ–**
**ಸ್ನೇಹಂ ಸಮಾಪಿಬತಿ ಕಜ್ಜಲಮಾದಧಾತಿ**
**ಸರ್ವಾನ್ ಗುಣಾನ್ ದಹತಿ ಪಾತ್ರಮಧಃ ಕರೋತಿ।**
**ಯೋಽಯಂ ಕೃಶಾನುಕಣಸಂಚಯಸಂಭೃತಾತ್ಮಾ**
**ದೀಪಃ ಪ್ರಕಾಶಯತಿ ತತ್ ತಮಸೋ ಮಹತ್ತ್ವಮ್॥**
**ಅತ್ರ ಹಿ ಪ್ರಕಾಶನಕ್ರಿಯಾಯಾ ಏವ ಪ್ರಾಧಾನ್ಯವಿವಕ್ಷಾ**
**ನಾನ್ಯಾಸಾಮಿತಿ ತಾಸಾಂ ತತ್ಸಮಶೀರ್ಷಿಕಯಾ**
**ನಿರ್ದೇಶೋ ದೋಷ ಏವ। ಸ ಹಿ ತತ್ರ ಶತ್ರಾದಿಭಿರೇವ**
**ವಕ್ತುಂ ನ್ಯಾಯ್ಯೋ, ನಾಖ್ಯಾತೇನ।**

**ಅನುವಾದ:**

"ದೀಪವು ಸ್ನೇಹವನ್ನು (ಎಣ್ಣೆಯನ್ನು ಹಾಗೂ ಮಿತ್ರತ್ವವನ್ನು) ಕುಡಿದುಬಿಡುತ್ತದೆ. ಕಜ್ಜಲವನ್ನು (ಕಾಡಿಗೆಯನ್ನು ಹಾಗೂ ಕೆಟ್ಟ ನೀರನ್ನು)

ಉಂಟುಮಾಡುತ್ತದೆ. ಎಲ್ಲ ಗುಣಗಳನ್ನು (ಬತ್ತಿಯ ದಾರಗಳನ್ನು ಮತ್ತು ಸದ್ಗುಣಗಳನ್ನೂ) ಸುಟ್ಟು ಹಾಕುತ್ತದೆ. ಪಾತ್ರವನ್ನು (ಪಾತ್ರೆಯನ್ನು ಹಾಗೂ ಸತ್ಪಾತ್ರನಾದ ವ್ಯಕ್ತಿಯನ್ನು) ಕೆಳಗೆ ಇರಿಸುತ್ತದೆ. ಇಂಥ ದೀಪವು ಬೆಂಕಿಯ ಕಣಗಳಿಂದ ತನ್ನ ಸ್ವರೂಪವನ್ನು ಗಳಿಸಿಕೊಂಡಿದ್ದರೂ, ಬೆಳಕನ್ನು ಕೊಡುತ್ತದೆ ಎಂಬುದು ಕತ್ತಲೆಯ ಮಹಿಮೆ ಅಷ್ಟೆ". ಇಲ್ಲಿ ಪ್ರಕಾಶನ ಎಂಬ ಕ್ರಿಯೆಯೇ ಪ್ರಧಾನ. ಬೇರೆ ಕ್ರಿಯೆಗಳಿಗೆ ಪ್ರಾಧಾನ್ಯವಿಲ್ಲ. ಆದರೂ ಅವುಗಳನ್ನು ಅದಕ್ಕೆ ಸಮಾನವಾಗಿ ನಿರ್ದೇಶಿಸಿರುವುದು ದೋಷವೇ. ಇತರ ಕ್ರಿಯೆಗಳನ್ನು ಶತೃಪ್ರತ್ಯಯ ಇತ್ಯಾದಿಗಳಿಂದ ಹೇಳುವುದು ಉಚಿತ, ಕ್ರಿಯಾಪದದಿಂದ ಹೇಳಿರುವುದು ಸರಿಯಲ್ಲ.

**ಯಥಾ–**
**ಬಿಭ್ರಾಣಃ ಶಕ್ತಿಮಾಶು ಪ್ರಶಮಿತಬಲವತ್ತಾರಕೌರ್ಜಿತ್ಯಗುರ್ವೀಂ**
**ಕುರ್ವಾಣೋ ಲೀಲಯಾಧಃ ಶಿಖಿನಮಪಿ ಲಸಚ್ಚಂದ್ರಕಾಂತಾವಭಾಸಮ್।**
**ಆಧೇಯಾದಂಧಕಾರೇ ರತಿಮತಿಶಯಿನೀಮಾವಹನ್ ವೀಕ್ಷಣಾನಾಂ**
**ಬಾಲೋ ಲಕ್ಷ್ಮೀಮಪಾರಾಮಪರ ಇವ ಗುಹೋಽಹರ್ಪತೇರಾತಪೋ ವಃ ॥ ಇತ್ಯಾದೌ।**
**ಸರ್ವಾಸಾಂ ಪುನಃ ಪ್ರಾಧಾನ್ಯವಿವಕ್ಷಾಯಾಂ ನಾಖ್ಯಾತವಾಚ್ಯತ್ವಂ ದೋಷಃ। ಯಥಾ–**
**ಸೌಧಾದುದ್ವಿಜತೇ ತ್ಯಜತ್ಯುಪವನಂ ದ್ವೇಷ್ಟಿ ಪ್ರಭಾಮೈಂದವೀಂ**
**ದ್ವಾರಾನ್ನಶ್ಯತಿ ಚಿತ್ರಕೇಲಿಸದಸೋ ವೇಷಂ ವಿಷಂ ಮನ್ಯತೇ।**
**ಆಸ್ತೇ ಕೇವಲಮಬ್ಜಿನೀಕಿಸಲಯಪ್ರಸ್ತಾರಶಯ್ಯಾತಲೇ**
**ಸಂಕಲ್ಪೋಪನತತ್ವದಾಕೃತಿರಸಾಯತ್ತೇನ ಚಿತ್ತೇನ ಸಾ॥**

**ಅನುವಾದ:**

ಉದಾಹರಣೆ– (ಬಿಭ್ರಾಣ.....)

[ಈ ಪದ್ಯದಲ್ಲಿ ಹಲವು ಪದಗಳಲ್ಲಿ ಶ್ಲೇಷವಿದೆ. ಶಕ್ತಿ=ಬಲ ಮತ್ತು ಶಕ್ತಿ ಎಂಬ ಆಯುಧ. ತಾರಕೌರ್ಜಿತ್ಯ=ನಕ್ಷತ್ರಗಳ ಪ್ರಾಬಲ್ಯ ಮತ್ತು ತಾರಕನೆಂಬ ರಾಕ್ಷಸನ ಸಾಮರ್ಥ್ಯ. ಶಿಖಿನ್=ಬೆಂಕಿ ಮತ್ತು ನವಿಲು. ಚಂದ್ರಕಾಂತಾವಭಾಸಮ್=ಚಿನ್ನದ ಸುಂದರ ಹೊಳಪು ಮತ್ತು ನವಿಲಿನ ಗರಿಯ ಸೊಬಗು. ಅಂಧಕಾರೇ ರತಿಮ್=ಕತ್ತಲಿನಲ್ಲಿ ಆಸಕ್ತಿ ಮತ್ತು ಶಿವನಲ್ಲಿ ಭಕ್ತಿ. ಶ್ಲೇಷವನ್ನುಪಯೋಗಿಸಿ ಕವಿಯು ಸೂರ್ಯನ ಬೆಳಕಿಗೂ ಗುಹ (ಕುಮಾರಸ್ವಾಮಿ) ಎಂಬ ದೇವತೆಗೂ ಇಲ್ಲಿ ಸಾದೃಶ್ಯವನ್ನು ಕಲ್ಪಿಸಿದ್ದಾನೆ.]

ಸೂರ್ಯನ ಎಳೆಯ ಬಿಸಿಲು ಬಲವತ್ತಾದ ತಾರಕೆಗಳ (ನಕ್ಷತ್ರಗಳ) ಶಕ್ತಿಯನ್ನು ತಗ್ಗಿಸುವ ಶಕ್ತಿಯನ್ನು ಪಡೆದುಕೊಂಡು, ಹೊಳೆಯುವ ಚಿನ್ನದ ಕಾಂತಿಯನ್ನು ತಳೆದಿರುವ ಬೆಂಕಿಯನ್ನು ಲೀಲೆಯಿಂದಲೇ ಕೆಳಗೆ ತಳ್ಳುತ್ತಾ,

ನೋಡುವವರಿಗೆ ಕತ್ತಲೆಯಲ್ಲಿ ಅತಿಶಯವಾದ ಆಸಕ್ತಿಯನ್ನು ಮೂಡಿಸುತ್ತಾ ಇನ್ನೊಬ್ಬ ಗುಹ (ಕಾರ್ತಿಕೇಯ)ನಂತೆ ಮೆರೆದು ನಿಮಗೆ ಅಪಾರವಾದ ಲಕ್ಷ್ಮಿಯನ್ನು ತಂದುಕೊಡಲಿ..

"ಗುಹನು ಬಲವಂತನಾಗಿದ್ದ ತಾರಕನ ಸಾಮರ್ಥ್ಯವನ್ನು ಕುಗ್ಗಿಸುವ ಶಕ್ತಿಯನ್ನು ಧರಿಸಿದವನಾಗಿ, ಹೊಳೆಯುವ ಗರಿಗಳಿಂದ ಶೋಭಿಸುವ ನವಿಲನ್ನು ಕೆಳಗೆ (ವಾಹನ ರೂಪದಲ್ಲಿ) ಇಟ್ಟುಕೊಂಡಿದ್ದಾನೆ. ಅಂಧಕಾರಿಯಲ್ಲಿ (ಅಂಧಕನೆಂಬ ರಾಕ್ಷಸನ ಶತ್ರುವಾದ ಶಿವನಲ್ಲಿ) ಭಕ್ತಿಯನ್ನು ತನ್ನನ್ನು ನೋಡುವ ಭಕ್ತರಲ್ಲಿ ಉಕ್ಕಿಸುತ್ತಾನೆ. ಅವನು ನಿಮಗೆ ಅಪಾರವಾದ ಸಂಪತ್ತನ್ನು ತಂದುಕೊಡಲಿ."

ಎಲ್ಲ ಕ್ರಿಯೆಗಳಿಗೂ ಪ್ರಾಧಾನ್ಯದ ವಿವಕ್ಷೆ ಇದ್ದರೆ ಅವುಗಳನ್ನು ಆಖ್ಯಾತರೂಪದಲ್ಲಿ (ತಿಙಂತರೂಪದಲ್ಲಿ) ಹೇಳುವುದು ದೋಷವಲ್ಲ. ಉದಾಹರಣೆ (ಸೌಧಾದುದ್ವಿಜತೇ.....)

"ಅವಳು ನಿನ್ನಲ್ಲೇ ಮನಸ್ಸನ್ನು ನೆಟ್ಟಿರುವುದರಿಂದ ಅರಮನೆಯನ್ನು ಕಂಡರೂ ಬೆಚ್ಚುತ್ತಾಳೆ, ಉದ್ಯಾನವನ್ನು ಬಿಟ್ಟು ನಿಲ್ಲುತ್ತಾಳೆ, ಚಂದ್ರನ ಬೆಳದಿಂಗಳನ್ನು ದ್ವೇಷಿಸುತ್ತಾಳೆ, ಚಿತ್ರಕಲೆಯ ಮನೆಯ ಬಾಗಿಲನ್ನೂ ನೋಡುವುದಿಲ್ಲ. ಉತ್ತಮ ವೇಷಧಾರಣೆಯನ್ನು ವಿಷವೆಂದು ತಿಳಿಯುತ್ತಾಳೆ, ಕೇವಲ ತಾವರೆಯ ಚಿಗುರೆಲೆಗಳ ಹಾಸಿಗೆಯ ಮೇಲೆ ಮಲಗಿರುತ್ತಾಳೆ. ಅವಳ ಮನಸ್ಸು ಸಂಕಲ್ಪದಿಂದಲೇ ನಿನ್ನ ರೂಪವನ್ನು ಎದುರಿಗೆ ತಂದುಕೊಂಡು ಅದಕ್ಕೆ ಅಧೀನವಾಗಿದೆ".

**ವಿವರಣೆ:**

ಬಿಭ್ರಾಣ..... ಎಂಬ ಪದ್ಯದಲ್ಲಿ ಅಮುಖ್ಯಕ್ರಿಯೆಗಳನ್ನು ಶತೃ ಮತ್ತು ಶಾನಚ್ ಪ್ರತ್ಯಯಾಂತರೂಪಗಳಿಂದ ಹೇಳಲಾಗಿದೆ. ಸೌಧಾದುದ್ವಿಜತೇ..... ಎಂಬ ಪದ್ಯದಲ್ಲಿ ಎಲ್ಲ ಕ್ರಿಯೆಗಳೂ ಮುಖ್ಯ. ಆದ್ದರಿಂದ ಎಲ್ಲವನ್ನೂ ತಿಙಂತರೂಪದಲ್ಲಿಯೇ ಹೇಳಲಾಗಿದೆ.

**ಯತ್ರೈಕಕರ್ತೃಕಾನೇಕಾ ಪ್ರಾಧಾನ್ಯೇತರಭಾಕ್ ಕ್ರಿಯಾ ।**
**ತತ್ರಾಖ್ಯಾತೇನ ವಾಚ್ಯಾದ್ಯಾ ಶತ್ರಾದ್ಯೈರಪರಾ ಪುನಃ ॥ ಇತ್ಯಂತರಶ್ಲೋಕಃ ।**

**ನನು ಚ ಆಚಾರ್ಯೇಣೈವಾನಿಷ್ಟ ನಿವೃತ್ತ್ಯರ್ಥಂ ಸಮಾಸವಿಧೌ ಬಹುಲಗ್ರಹಣಂ ಕೃತಮ್। ಅತಸ್ತೇನೈವ ಕ್ವಚಿದ್ ಏವಂವಿಧೇ ವಿಷಯೇ ವೃತ್ತಿರ್ನ ಭವಿಷ್ಯತಿ, ಅನ್ಯತ್ರ ಭವಿಷ್ಯತೀತಿ ಕಿಮನೇನ ಪ್ರಧಾನೇತರಭಾವಪರಿಕಲ್ಪನಪ್ರಯಾಸೇನ? ಸತ್ಯಮ್ । ಕಿಂತು ಸಮಾಸವಿಧೇಃ ಪ್ರಧಾನೇತರಭಾವವಿವಕ್ಷಾನಿಬಂಧನಸ್ಯ ಚ ತತ್ಪ್ರತಿಷೇಧಸ್ಯ ಉತ್ಸರ್ಗಾಪವಾದಭಾವೇನಾವಸ್ಥಾನಂ ದ್ರಷ್ಟವ್ಯಮಿತಿ ಅಪವಾದಸ್ಯೈವಾಯಂ ವಿಷಯೋ ಭವಿತುಮರ್ಹತಿ, ನ ಬಹುಲಗ್ರಹಣಸ್ಯ ।**

**ಅನುವಾದ:**

ಎಲ್ಲಿ ಏಕಕರ್ತೃಕವಾದ ಅನೇಕಕ್ರಿಯೆಗಳಲ್ಲಿ ಒಂದು ಪ್ರಾಧಾನ್ಯವನ್ನೂ ಉಳಿದವು ಅಪ್ರಾಧಾನ್ಯವನ್ನೂ ಹೊಂದಿರುವುವೋ ಅಲ್ಲಿ ಪ್ರಧಾನಕ್ರಿಯೆಯನ್ನು

ಆಖ್ಯಾತ(ತಿಙಂತ)ರೂಪದಲ್ಲೂ, ಇತರ ಕ್ರಿಯೆಗಳನ್ನು ಶತೃ ಮುಂತಾದ ಪ್ರತ್ಯಯಾಂತಪದಗಳಿಂದಲೂ ಪ್ರತಿಪಾದಿಸಬೇಕು. ಇದು ಸಂಗ್ರಹಶ್ಲೋಕ.

ಆಚಾರ್ಯ ಪಾಣಿನಿಯೇ ಇಷ್ಟವಲ್ಲದ ಪ್ರಯೋಗಗಳನ್ನು ತಪ್ಪಿಸಲು ಸಮಾಸಪ್ರಕರಣದಲ್ಲಿ ಬಹುಲಮ್ ಎಂದು ಹೇಳಿದ್ದಾನೆ. ಆ ನಿಯಮದಿಂದಲೇ ಇಂಥ ಕೆಲವು ಸ್ಥಳಗಳಲ್ಲಿ ಸಮಾಸ ಬರುವುದಿಲ್ಲ, ಬೇರೆ ಸ್ಥಳಗಳಲ್ಲಿ ಬರುತ್ತದೆ ಎಂಬುದು ತಾನೇ ಸಿದ್ಧವಾಗುತ್ತದೆ. ಹೀಗಿರುವಾಗ ನೀವು ಮಾಡಿರುವ ಪ್ರಧಾನ–ಅಪ್ರಧಾನ ಎಂಬ ವಿವಕ್ಷಾಧಾರವಾದ ಪರಿಕಲ್ಪನೆಯಿಂದ ಪ್ರಯೋಜನವೇನು?

ನೀವು ಹೇಳುವುದು ಸತ್ಯ. ಆದರೆ ಸಮಾಸವಿಧಿಗೂ, ಪ್ರಧಾನೇತರಭಾವವಿವಕ್ಷೆಯನ್ನು ಅವಲಂಬಿಸಿದ ಸಮಾಸಪ್ರತಿಷೇಧಕ್ಕೂ ಉತ್ಸರ್ಗ–ಅಪವಾದನ್ಯಾಯವನ್ನು ಕಾಣಬೇಕು. ಅಲ್ಲಿ ಅಪವಾದಕ್ಕೇ ಇದು ವಿಷಯ, ಬಹುಲ ಎಂದು ಹೇಳಿರುವುದಕ್ಕಲ್ಲ.

> **ಯತ್ರ ತು ಕ್ವಚಿದ್ ಉತ್ಸರ್ಗಾಪವಾದಯೋರ್ವಿಷಯವ್ಯವಸ್ಥಾನಿಯಮಃ ಕಥಂಚನಾಪಿ ಕರ್ತುಮಶಕ್ಯಃ, ಸ ತಸ್ಯ ವಿಷಯೋ ವೇದಿತವ್ಯಃ । ಅನ್ಯಥಾ ಗೋದಃ ಕಂಬಲದಃ ಇತ್ಯತ್ರ ಅಣಭಾವೋಽಪಿ ತದ್ವಿಷಯಃ ಸ್ಯಾತ್ । ಇಹ ತು ಉಕ್ತಕ್ರಮೇಣ ನಿಯಮಃ ಶಕ್ಯಕ್ರಿಯ ಏವೇತಿ ನಾಯಂ ಬಹುಲಗ್ರಹಣಸ್ಯ ವಿಷಯಃ ಕಲ್ಪನೀಯಃ ।**

**ಅನುವಾದ:**

ಯಾವ ಸ್ಥಳದಲ್ಲಿ ಇದು ಉತ್ಸರ್ಗ (ಸಾಮಾನ್ಯ ನಿಯಮ), ಇದು ಅಪವಾದ (ವಿಶೇಷ ನಿಯಮ) ಎಂಬ ವಿಷಯವ್ಯವಸ್ಥೆಯನ್ನು ಮಾಡುವುದು ಸರ್ವಥಾ ಸಾಧ್ಯವಲ್ಲವೋ, ಅಂಥ ಸ್ಥಳವನ್ನು "ಬಹುಲಮ್" ಎಂಬುದರ ಕ್ಷೇತ್ರವೆಂದು ತಿಳಿದುಕೊಳ್ಳಬೇಕು. ಹಾಗೆ ಒಪ್ಪಿಕೊಳ್ಳದಿದ್ದರೆ ಗೋದಃ ಕಂಬಲದಃ ಇತ್ಯಾದಿ ಪದಗಳಲ್ಲಿ ಅಣ್‌ಪ್ರತ್ಯಯ ಬಂದಿಲ್ಲದೆ ಇರುವುದೂ ಬಹುಲಮ್ ಎಂಬುದಕ್ಕೆ ವಿಷಯ ಆಗಿಬಿಡುತ್ತಿತ್ತು.

ನಾವು ವಿವರಿಸಿದ ಉದಾಹರಣೆಗಳಲ್ಲಾದರೋ, ನಾವು ಹೇಳಿದ ಕ್ರಮದಲ್ಲಿ ನಿಯಮವನ್ನು ಮಾಡುವುದು ಸಾಧ್ಯವೇ ಆಗಿದೆ. ಆದ್ದರಿಂದ ಇದು ಬಹುಲಮ್ ಎಂದು (ಪಾಣಿನಿಯು) ಹೇಳಿರುವುದಕ್ಕೆ ವಿಷಯವೆಂದು ಕಲ್ಪಿಸಬಾರದು.

**ವಿವರಣೆ:**

ಅಷ್ಟಾಧ್ಯಾಯಿಯಲ್ಲಿ ಪಾಣಿನಿಯು ಅನೇಕ ಸೂತ್ರಗಳಲ್ಲಿ ಬಹುಲಮ್ ಎಂದು ಹೇಳುತ್ತಾನೆ. ಈ ಕ್ರಿಯೆ ಪ್ರಾಯಿಕವಾಗಿ ಬರುತ್ತದೆ, ಇಂಥ ಸ್ಥಳದಲ್ಲೇ ಬರುತ್ತದೆ ಎಂದು ಖಚಿತವಾಗಿ ಹೇಳಲಾಗದು, ಪ್ರಯೋಗವನ್ನು ಗಮನಿಸಿ ತಿಳಿದುಕೊಳ್ಳಬೇಕು ಎಂದು ಅವನ ಅಭಿಪ್ರಾಯ.

ಉಪಸರ್ಗಸ್ಯ ಘಞ್ಯಮನುಷ್ಯೇ ಬಹುಲಮ್ (೬–೩–೧೨೨) ಎಂಬ ಸೂತ್ರವನ್ನು ನೋಡೋಣ. ಘಞಂತವಾದ ಪದ ಮುಂದೆ ಇದ್ದಾಗ ಉಪಸರ್ಗದ ಅಂತ್ಯಸ್ವರಕ್ಕೆ ದೀರ್ಘವು

ಬರುತ್ತದೆ, ಆದರೆ ಈ ನಿಯಮ "ಬಹುಲ". ಪರಿವಾದಃ ಪರೀವಾದಃ ಎಂಬ ಎರಡು ಪ್ರಯೋಗಗಳೂ ಉಂಟು. ಇಕಾರಕ್ಕೆ ಇಲ್ಲಿ ದೀರ್ಘವಿಕಲ್ಪ. ಆದರೆ ವಿವಾದಃ ಎಂಬಲ್ಲಿ, ದೀರ್ಘ ಬರುವುದೇ ಇಲ್ಲ. ಎಲ್ಲಿಯೂ "ವೀವಾದಃ" ಎಂಬ ಪ್ರಯೋಗ ಇಲ್ಲವೇ ಇಲ್ಲ. ಹೀಗೇಕಾಯಿತು ಎಂದು ವಿವರಿಸಲಾಗದು. ಇದು ಬಹುಲಮ್ ಎಂಬುದಕ್ಕೆ ವಿಷಯ. ಅಪಾಮಾರ್ಗಃ ಎಂಬಲ್ಲಿ ದೀರ್ಘ ನಿತ್ಯವಾಗಿ ಬರುತ್ತದೆ. ಪ್ರಸೇದಃ ಪ್ರಸಾರಃ ಇತ್ಯಾದಿಗಳಲ್ಲಿ ಬರುವುದೇ ಇಲ್ಲ.

ಗೋದಃ (=ಹಸುವನ್ನು ಕೊಡುವವನು), ಕಂಬಲದಃ (=ಕಂಬಳಿಯನ್ನು ಕೊಡುವವನು) ಎಂಬ ಪದಗಳಲ್ಲಿ "ಆತೋಽನುಪಸರ್ಗೇ ಕಃ" (೩–೨–೩) ಎಂದು ಕಪ್ರತ್ಯಯ ಬಂದಿದೆ. ಇದು ಕರ್ಮಣ್ಯನ್ (೩–೨–೧) ಎಂಬ ಸೂತ್ರಕ್ಕೆ ಅಪವಾದ. ಇದು ಬಹುಲಮ್ ಎಂಬುದಕ್ಕೆ ವಿಷಯವಲ್ಲ. ಏಕೆಂದರೆ ಆಕಾರಾಂತವಾದ ಉಪಸರ್ಗರಹಿತವಾದ ಧಾತು ಕರ್ಮಪದದ ಮುಂದೆ ಇದ್ದಾಗ ಕ ಪ್ರತ್ಯಯವೇ ಬರುತ್ತದೆ ಎಂದು ಖಚಿತವಾಗಿ ಹೇಳಬಹುದು.

ಹೀಗೆ ಎಲ್ಲಿ ಸಮಾಸವನ್ನು ಮಾಡಬೇಕು, ಎಲ್ಲಿ ಮಾಡಬಾರದು ಎಂಬುದನ್ನು ವ್ಯಕ್ತಿವಿವೇಕಕಾರ ಮಹಿಮಭಟ್ಟನು ಪ್ರಾಧಾನ್ಯ–ಅಪ್ರಾಧಾನ್ಯಗಳ ಆಧಾರದಿಂದ ನಿರ್ಣಯಿಸಿದ್ದಾನೆ. ಆದ್ದರಿಂದ ಇದು ಬಹುಲಮ್ ಎಂಬುದಕ್ಕೆ ವಿಷಯವಲ್ಲ.

> **ನ ಚಾಯಮರ್ಥಃ ಸ್ವಮನೀಷಿಕಯೈವಾಸ್ಮಾಭಿರುಪಕಲ್ಪಿತಃ । ಕಿಂ ತರ್ಹಿ? ಆಚಾರ್ಯಸ್ಯಾಪ್ಯಭಿಮತ ಏವ । ಯದಯಂ ಸಮಾಸವಿಧೌ ಸಮರ್ಥಗ್ರಹಣಂ ಕೃತವಾನ್ । ಕೇವಲಂ ತದಭಿಪ್ರಾಯಮನವಗಚ್ಛದ್ಭಿರ್ವ್ಯಾಖ್ಯಾತೃಭಿಃ ಸಾಪೇಕ್ಷತಾದಿದೋಷಾಂತರವ್ಯಾವೃತ್ತಿ–ಪರತಯೈವ ತದ್ ವ್ಯಾಖ್ಯಾತಮ್ । ನ ಪುನರೇತದ್ವ್ಯಾವೃತ್ತಿಪರತಯಾಪೀತಿ ತದಭಿಪ್ರಾಯಮೇವ ಅಸ್ಮಾಭಿಃ ಪ್ರಕಟಯದ್ಭಿಃ ತಸ್ಯೇಹಾರ್ಥತ್ವಮಪಿ ಪ್ರತಿಪಾದಿತಂ, ನ ತ್ವಪೂರ್ವಂ ಕಿಂಚಿತ್ ।**

**ಅನುವಾದ:**

ಈ ವಿಷಯವನ್ನು ನಾವು ನಮ್ಮ ಬುದ್ಧಿಗೆ ಅನುಸಾರವಾಗಿ ಕಲ್ಪಿಸಿ ಹೇಳಿಲ್ಲ. ಮತ್ತೇನು? ಆಚಾರ್ಯ ಪಾಣಿನಿಗೂ ಇದು ಅಭಿಮತವೇ ಆಗಿದೆ. ಏಕೆಂದರೆ ಪಾಣಿನಿಯು ಸಮಾಸವಿಧಾಯಕ ಶಾಸ್ತ್ರದಲ್ಲಿ "ಸಮರ್ಥ" ಎಂಬ ಶಬ್ದವನ್ನು ಬಳಸಿದ್ದಾನೆ (ಸಮರ್ಥಃ ಪದವಿಧಿಃ).

ಆದರೆ ವ್ಯಾಖ್ಯಾನಕಾರರು ಪಾಣಿನಿಯ ಅಭಿಪ್ರಾಯವನ್ನು ಪೂರ್ಣವಾಗಿ ತಿಳಿದುಕೊಳ್ಳದೆ ಸಾಪೇಕ್ಷತಾ ಮುಂತಾದ ಇತರ ದೋಷಗಳ ವ್ಯಾವೃತ್ತಿಗಾಗಿಯೇ ಸಮರ್ಥ ಎಂದು ಹೇಳಿದ್ದಾನೆ ಎಂದು ವ್ಯಾಖ್ಯಾನಿಸಿದ್ದಾರೆ. (ಪ್ರಧಾನ–ಅಪ್ರಧಾನ ದೃಷ್ಟಿಯಿಂದ ಪ್ರಾಧಾನ್ಯವನ್ನು ಸೂಚಿಸಬೇಕಾದಾಗ ಸಮಾಸವನ್ನು ಮಾಡಬಾರದು ಎಂಬ) ಈ ನಿಯಮದ ಅನುಸಾರವಾಗಿ ಸಮಾಸವನ್ನು ವ್ಯಾವೃತ್ತಿ ಮಾಡಲು ಸಮರ್ಥ ಎಂಬ ಪದವನ್ನು ಹೇಳಿದ್ದಾನೆ ಎಂದು ಅವರು ವ್ಯಾಖ್ಯಾನಿಸಿಲ್ಲ. ಸೂತ್ರಕಾರ ಪಾಣಿನಿಯ ಅಭಿಪ್ರಾಯವನ್ನೇ ಸ್ಪಷ್ಟಪಡಿಸಿರುವ ನಾವು ಸಮರ್ಥ ಎಂಬ ಪದಕ್ಕೆ ಈ ಅರ್ಥವೂ ಉಂಟು, ಈ ಪ್ರಯೋಜನವೂ ಉಂಟು ಎಂದು ಪ್ರತಿಪಾದಿಸಿದ್ದೇವೆ. ಹೊಸದಾಗಿ ಏನನ್ನೂ ನಾವು ಹೇಳಿಲ್ಲ.

ವಿಧೇಯೋದ್ದೇಶ್ಯಭಾವೋऽಯಂ ವಕ್ತುಂ ವೃತ್ತ್ಯಾ ನ ಪಾರ್ಯತೇ ।
ಯತ್ ತೇನಾನಭಿಧಾನಂ ವಾ ಸಮರ್ಥಗ್ರಹಣಂ ಚ ವಾ ॥
ಕಾರಣದ್ವಯಮೇವೇಷ್ಟಂ ಬಹುಲಗ್ರಹಣಂ ನ ತು ।
ಅಶಕ್ಯನಿಯಮೋ ಹ್ಯರ್ಥೋ ವಿಷಯಸ್ತಸ್ಯ ನೇತರಃ ॥
ಇತಿ ಸಂಗ್ರಹಶ್ಲೋಕೌ ।

ಯದ್ವಾ ಕವೀನಾಮೇವೈಷ ವಿಷಯೋ, ನ ಖಂಡಿಕೋಪಾಧ್ಯಾಯಾನಾಮ್ ಇತ್ಯನವಗತತದಭಿಪ್ರಾಯೈಸ್ತೈರುಪೇಕ್ಷಿತಮೇತತ್ ।

**ಅನುವಾದ:**

ಈ ವಿಧೇಯೋದ್ದೇಶ್ಯಭಾವವನ್ನು ತಿಳಿಸಲು ಸಮಾಸವು (ಅಥವಾ ಯಾವುದೇ ವೃತ್ತಿಯು) ಶಕ್ತವಲ್ಲ. ಅದನ್ನು ಪಾಣಿನಿಯು ಅನಭಿಧಾನದ ಕಾರಣದಿಂದ ಹೇಳಿಲ್ಲ, ಅಥವಾ "ಸಮರ್ಥ" ಎಂಬ ಪದದಿಂದ ಹೇಳಿದ್ದಾನೆ ಎಂಬ ಈ ಎರಡು ಸಮರ್ಥನ ಕಾರಣಗಳೇ ಸರಿ. ಬಹುಲಮ್ ಎಂದು ಪಾಣಿನಿ ಹೇಳಿರುವುದು ಇದಕ್ಕೆ ಸಂಬಂಧಿಸಿದುದಲ್ಲ. ಏಕೆಂದರೆ ಯಾವುದಕ್ಕೆ ಖಚಿತವಾದ ನಿಯಮವನ್ನು ಹೇಳಲಾಗದೋ ಅದು ಮಾತ್ರ 'ಬಹುಲಮ್' ಎಂಬುದಕ್ಕೆ ವಿಷಯವಾಗುವುದು, ಬೇರೆ ಯಾವುದೂ ಅಲ್ಲ. (ವಿಧೇಯೋದ್ದೇಶ್ಯ...., ಕಾರಣದ್ವಯ...... ಎಂಬ) ಎರಡು ಸಂಗ್ರಹಶ್ಲೋಕಗಳು.

ಅಥವಾ, ಇದು ಕವಿಗಳಿಗೆ ಮಾತ್ರ ಗೋಚರಿಸುವ ವಿಷಯ, ಖಂಡಿಕೋಪಾಧ್ಯಾಯರಿಗೆ (ಎಂದರೆ ರಸವನ್ನು ಗ್ರಹಿಸಲಾರದ ಕೇವಲ ವೈಯಾಕರಣರಿಗೆ) ಇದು ವಿಷಯವಲ್ಲ. ಹೀಗೆ ಪಾಣಿನಿಯ ಅಭಿಪ್ರಾಯವನ್ನು ತಿಳಿದುಕೊಳ್ಳಲಾರದ ಅವರು (ಖಂಡಿಕೋಪಾಧ್ಯಾಯರು ಮತ್ತು ವ್ಯಾಖ್ಯಾನಕಾರರು) ಈ ವಿಷಯವನ್ನು ಉಪೇಕ್ಷಿಸಿಬಿಟ್ಟರು.

ತೇ ಹಿ ಸ್ವಪ್ನೇऽಪಿ ಅನಾಸಾದಿತಸಾಹಿತ್ಯಸುಧಾರಸಾಸ್ವಾದಚಮತ್ಕಾರಾಃ ಶುಷ್ಕಶಬ್ದವ್ಯುತ್ಪತ್ತಿಮಾತ್ರೋಪಜನಿತಾಭಿಮಾನದುರ್ವಿದಗ್ಧಾಃ, ವಿವಿಧಾಭಿಧಾ ನಾಧಾನೋದ್ಧಾರಾಃ ಅಭಿಧೇಯಪ್ರತೀತಿವೈಚಿತ್ರ್ಯವಿವೇಕಕೌಶಲಶಾಲೀನಾಃ ಲಕ್ಷಣಮಸ್ತೀತ್ಯೇವ ರಸಾಭಿವ್ಯಕ್ತಿವಿಘ್ನಭೂತಮಪರಮಪಿ ಬಹುತರಮ್ ಅವಕರಪ್ರಾಯಂ ಪ್ರಯುಂಜತೇ ಇತಿ ರಸಾಸ್ವಾದಾನುಗುಣಪ್ರಯೋಗಾವಹಿತಚೇತಸಾಂ ಕವೀನಾಮೇವ ತಚ್ಚಿಂತೋಚಿತಾ, ನಾನ್ಯೇಷಾಮ್ । ಅಸ್ಮಾಭಿಸ್ತು ವಿಸ್ತರತಸ್ತತ್ ಪುರಸ್ತಾದಭಿಧಾಸ್ಯತೇ ।

**ಅನುವಾದ:**

ಆ ವೈಯಾಕರಣರಾದರೋ ಕನಸಿನಲ್ಲೂ ಸಾಹಿತ್ಯಾಮೃತರಸದ ಸವಿಯ ಚಮತ್ಕಾರವನ್ನು ಕಂಡಿರುವುದಿಲ್ಲ. ಶುಷ್ಕವಾದ ಶಬ್ದವ್ಯುತ್ಪತ್ತಿಮಾತ್ರದಿಂದಲೇ ಅಭಿಮಾನಪಟ್ಟುಕೊಳ್ಳುವ ಗರ್ವಿಗಳೂ ಆದ ಅವರು ವಿವಿಧ ಶಬ್ದಗಳ ಪ್ರಕಾರಗಳನ್ನು

ಮಾತ್ರ ಸೃಷ್ಟಿಸುತ್ತಾರೆ. ಅರ್ಥದ ಪ್ರತೀತಿವೈಚಿತ್ರ್ಯವೇನು ಎಂದು ವಿವೇಚಿಸುವ ಕೌಶಲ ಅವರಿಗೆ ದೂರ. ಸೂತ್ರವಿದೆ ಎಂದು ಮಾತ್ರ ಹೇಳಿ ರಸಾಭಿವ್ಯಕ್ತಿಗೆ ವಿಘ್ನವನ್ನುಂಟುಮಾಡುವ ಬೇರೆಯ ಕಸದಂತೆ ಇರುವ ಶಬ್ದಗಳನ್ನೂ ಅವರು ಪ್ರಯೋಗಿಸುತ್ತಾರೆ. ಆದ್ದರಿಂದ ನಾವು ಹೇಳುತ್ತಿರುವ ಸೂಕ್ಷ್ಮವಿಷಯದ ಚಿಂತೆಯು ರಸಾಸ್ವಾದನೆಗೆ ಅನುಗುಣವಾದ ಪ್ರಯೋಗಗಳನ್ನು ಗಮನಿಸುವ ಕವಿಗಳಿಗೆ ಮಾತ್ರ ಗೋಚರ, ಬೇರೆಯವರಿಗಲ್ಲ. ನಾವಾದರೋ ಇದನ್ನು ಮುಂದೆಯೂ ಸವಿಸ್ತರವಾಗಿ ಹೇಳುವೆವು.

**ಪ್ರಕರಣಕಾಕ್ವಾದಿಸಖೋ ಯಸ್ಯಾರ್ಥೋऽರ್ಥಾಂತರಂ ಪ್ರಕಾಶಯತಿ ।**
**ಇಷ್ಟಾರ್ಥಭಂಗಭೀತೇಃ ಶಬ್ದೋ ನ ಸಮಾಸಮರ್ಹತಿ ಸಃ ॥**
**ಇತಿ ಸಂಗ್ರಹಾರ್ಯಾ ।**

**ಅನುವಾದ:**

ಪ್ರಕರಣವನ್ನೂ ಕಾಕು(ಧ್ವನಿವಿಕಾರ)ವನ್ನೂ ಸಹಾಯಕವನ್ನಾಗಿ ಪಡೆದು ಯಾವ ಶಬ್ದದ ಅರ್ಥವು ಇನ್ನೊಂದು ಅರ್ಥವನ್ನು ಬೆಳಗಿಸುವುದೋ ಅಂಥ ಶಬ್ದವು ಸಮಾಸದೊಳಗೆ ಸೇರಿಸಲ್ಪಡಲು ಯೋಗ್ಯವಲ್ಲ, (ಏಕೆಂದರೆ ಹಾಗೆ ಮಾಡಿದಾಗ ಪ್ರತಿಪಾದಿಸಲು) ಅಪೇಕ್ಷಿತವಾದ ಅರ್ಥದ (ಪ್ರತೀತಿಗೆ) ಭಂಗವುಂಟಾಗುವುದು.

ಇದು ಸಂಗ್ರಹಾರ್ಯೆ.

**ವಿವರಣೆ:**

ಶಬ್ದದ ಅರ್ಥವು ವಾಚ್ಯಸ್ತರದಲ್ಲಿ ಒಂದೇ ಆದರೂ ವ್ಯಂಗ್ಯಸ್ತರದಲ್ಲಿ ನಾನಾರೂಪದಲ್ಲಿರುತ್ತದೆ. ಅರ್ಥದ ವೈಶಿಷ್ಟ್ಯವನ್ನು ಗ್ರಹಿಸಲು ಪ್ರಕರಣಸಂದರ್ಭಗಳನ್ನೂ ಆ ಶಬ್ದವನ್ನು ಉಚ್ಚರಿಸಿದ ರೀತಿಯನ್ನೂ ಗಮನಿಸಬೇಕಾಗುತ್ತದೆ. ಸಮಾಸದೊಳಗೆ ಸೇರಿಹೋದ ಶಬ್ದದ ಅರ್ಥ ಪ್ರಧಾನವಾಗಿ ತೋರುವುದಿಲ್ಲ. ಅದು ವ್ಯಾಕರಣನಿಯಮಕ್ಕೆ ಅನುಗುಣವಾಗಿದ್ದರೂ, ಕಾವ್ಯನಿಯಮಕ್ಕೆ ವಿರುದ್ಧ.

ಪ್ರಕರಣ.... ಇತ್ಯಾದಿ ಪದ್ಯವು ಆರ್ಯಾಛಂದಸ್ಸಿನಲ್ಲಿರುವುದರಿಂದ ಇದನ್ನು "ಸಂಗ್ರಹಾರ್ಯಾ" ಎಂದು ಗ್ರಂಥಕಾರನು ಕರೆದಿದ್ದಾನೆ.

(ಅಂಬಿಕಾಕೇಸರೀ ಎಂಬ ಸಮಾಸ ಸರಿಯೇ?)

**ಇತ್ಥಮವಸ್ಥಿತೇ ಸಮಾಸಾಸಮಾಸಯೋರ್ವಿಷಯವಿಭಾಗಪ್ರತಿನಿಯಮೇ ಸತಿ ಯದೇತದಿಹ ಅಂಬಿಕಾಯಾಃ ಕೇಸರಿಣೋ ವಿಶೇಷಣಭಾವೇನೋಪಾದಾನಂ, ತತ್ ಕಿಮಿತರಕೇಸರಿವ್ಯಾವೃತ್ತಿಮಾತ್ರಫಲಮ್, ಆಹೋಸ್ವಿತ್ ಅಸಮಾಸೇ ವಾ ಸಮಾಸಾದಿತಭಗವತೀಪಾದಾರ್ಪಣ ಪ್ರಸಾದೋಪನತವಿಶ್ವಾತಿಶಾಯಿಶೌರ್ಯಾತಿರೇಕ– ಪ್ರತಿಪಾದನಪ್ರಯೋಜನಮ್? ತತ್ರ ಪ್ರಥಮಪಕ್ಷೇ ತಸ್ಯ ಕೇಸರಿಣೋ ವಿವಕ್ಷಿತಜಾತಿಮಾತ್ರವಿಹಿತಹೇವಾಕಾತಿರಿಕ್ತಚಮತ್ಕಾರಾತಿಶಯಾ– ಭಾವೋऽನ್ಯಕೇಸರಿಣ ಇವ ನಿರ್ನಿಬಂಧನ ಏವ ಸ್ಯಾತ್ ।**

**ಅನುವಾದ:**

ಹೀಗೆ ಸಮಾಸ-ಅಸಮಾಸಗಳ ವಿಷಯವಿಭಾಗದ ನಿಯಮವು ವ್ಯವಸ್ಥಿತವಾಗಿರುವಾಗ ಸಂರಂಭಃಕರಿಕೀಟ...... ಇತ್ಯಾದಿ (ಪೂರ್ವೋದಾಹೃತ) ಪದ್ಯದಲ್ಲಿ ಕೇಸರಿ ಎಂಬುದಕ್ಕೆ ಅಂಬಿಕಾ ಎಂಬುದನ್ನು ವಿಶೇಷಣವನ್ನಾಗಿ (ಕವಿಯು) ಉಪಯೋಗಿಸಿದ್ದಾನೆ. ಅದಕ್ಕೆ ಫಲ ಬೇರೆ ಕೇಸರಿಗಳಿಂದ ಇದು ಭಿನ್ನ ಎಂದು ಇತರಕೇಸರಿವ್ಯಾವೃತ್ತಿ ಮಾತ್ರವೋ? ಅಥವಾ ಸಮಾಸವಿಲ್ಲದ ಸ್ಥಿತಿಯಲ್ಲಿ ತೋರುವ– ಭಗವತಿಯ ಪಾದಸ್ಪರ್ಶದಿಂದ ಉಂಟಾದ ಅನುಗ್ರಹದಿಂದ ಹುಟ್ಟಿದ ವಿಶ್ವಾತಿಶಾಯಿ ಶೌರ್ಯವಿಶೇಷದ ಪ್ರತಿಪಾದನೆಯು ಅದರ ಫಲವೋ?

ಮೊದಲನೆಯ ಪಕ್ಷದಲ್ಲಿ ಬೇರೆ ಯಾವುದೇ ಸಿಂಹದಂತೆ ಈ ಸಿಂಹಕ್ಕೂ ಸಿಂಹಜಾತಿಮಾತ್ರದಿಂದ ಉಂಟಾಗುವ ಚೇಷ್ಟೆಗಿಂತ ಬೇರೆಯಾದ ಯಾವ ಚಮತ್ಕಾರಾತಿಶಯವೂ ಪ್ರಕೃತ ಸಿಂಹದಲ್ಲೂ ಇಲ್ಲ ಎಂದಾಗುವುದರಿಂದ ಇದರ ವೈಶಿಷ್ಟ್ಯವು ನಿಷ್ಕಾರಣವೇ ಆಗಿಬಿಡುತ್ತದೆ.

> **ನ ಹಿ ಇತರೇಭ್ಯೋಽನ್ಯಸಂಬಂಧಿಭ್ಯಃಸ್ವತಂತ್ರೇಭ್ಯೋಽಪಿ ವಾ ವ್ಯಾವೃತ್ತಸ್ಯ ತಸ್ಯಾಂಬಿಕಾಸಂಬಂಧಮಾತ್ರಾತ್ ತಸ್ಯಾಃ ಕಾಮಪ್ಯುಪಕಾರಕಣಿಕಾಮ್ ಅನಾಸಾದಯತ ಏವಾಕಸ್ಮಾತ್ ತಥಾವಿಧಚಮತ್ಕಾರಾವಿರ್ಭಾವಃ ಸಂಭಾವ್ಯತೇ । ಅಥ ಜಾತ್ಯಂತರಾವಚ್ಛಿನ್ನೋ ವಿಶಿಷ್ಟ ಏವ ಕೇಸರೀ ಕೇಸರಿಶಬ್ದೇನಾತ್ರಾಭಿಮತಃ, ಯತ್ರ ಸ್ವಜಾತಿನಿಯತ ಏವ ಸ ತಾದೃಶೋಽತಿಶಯೋ ಯೇನಾಸಾವಿತರಕೇಸರಿಸಾಧಾರಣೇನ ಹೇವಾಕಲವೇನ ಲಜ್ಜಮಾನಃ ಕರಿಕೀಟಜಲದಶಕಲಾವಜ್ಞಯಾ ದಿಗ್‌ದ್ವಿರದಪ್ರಲಯಪಯೋದಘಟಾಬಂಧೇಽಪಿ ನ ಸಂರಭತೇ।**

**ಅನುವಾದ:**

ಬೇರೆ ದೇವತೆಗಳ ಸಂಬಂಧವನ್ನು ಹೊಂದಿರುವ ಅಥವಾ ಸ್ವತಂತ್ರವಾದ ಇತರ ಸಿಂಹಗಳಿಂದ ವ್ಯಾವೃತ್ತವಾದ ಈ ಸಿಂಹವು ಅಂಬಿಕಾಸಂಬಂಧಮಾತ್ರದಿಂದ, ಅವಳಿಂದ ಯಾವ ಚೂರು ಉಪಕಾರವನ್ನು ಪಡೆಯದಿದ್ದರೂ, ನಿಷ್ಕಾರಣವಾಗಿ ಅಂಥ ವಿಶೇಷ ಚಮತ್ಕಾರವನ್ನು ಪಡೆದುಕೊಳ್ಳುತ್ತದೆ ಎಂದು ಊಹಿಸಲಾಗದು.

ಮತ್ತೆ (ಯಾರಾದರೂ ಹೀಗೆನ್ನಬಹುದು): ಇಲ್ಲಿ ಕೇಸರಿ ಎಂಬ ಶಬ್ದದಿಂದ ವಿಶಿಷ್ಟ ಜಾತಿಯಿಂದ ಗುರುತಿಸಲ್ಪಡುವ ಸಿಂಹವನ್ನೇ 'ಕೇಸರಿ' ಎಂಬ ಶಬ್ದದಿಂದ ಪ್ರತಿಪಾದಿಸಿದೆ. ಅಂಥ ಅತಿಶಯವು ಈ ವಿಶಿಷ್ಟ ಸಿಂಹಜಾತಿಗೆ ನಿಯತವೇ ಆಗಿರುತ್ತದೆ. ಆದ್ದರಿಂದಲೇ ಈ ಕೇಸರಿಯು ಬೇರೆ ಸಿಂಹಗಳಿಗೆ ಸಮಾನವಾಗಿರುವ ಚೇಷ್ಟೆಯನ್ನು ಮಾಡಲು ನಾಚಿಕೆಪಟ್ಟುಕೊಂಡು ಕೀಟದಂತೆ ಕಾಣಿಸುವ ಆನೆಗಳಲ್ಲೂ ಚೂರುಪಾರು ಮೇಘಗಳಲ್ಲೂ ತಿರಸ್ಕಾರವನ್ನು ಸೂಚಿಸಿದ್ದೇ ಅಲ್ಲದೆ, ದಿಗ್ಗಜಗಳಲ್ಲೂ ಪ್ರಳಯಕಾಲದ ಮೇಘಗಳ ಒತ್ತಾದ ಮಾಲೆಯಲ್ಲೂ ಸಂಭ್ರಮವನ್ನು ತೋರಿಸುವುದಿಲ್ಲ.

**ಯಥಾ– "ಮೋಹಂ ತು ಹರೇರ್ವಿಹಂಗಮೋ ಹಂತು" ಇತ್ಯತ್ರ ವಿಹಂಗಮಶಬ್ದೇನ ವಿಹಂಗಮವಿಶೇಷೋ ಗರುಡಜಾತ್ಯವಚ್ಛಿನ್ನಃ ಕಶ್ಚಿದೇವ ಪ್ರತ್ಯಾಯ್ಯತೇ । ತತ್ರ ಚ ಯಥಾ ಭಗವತೋ ಹರೇರತಿಶಯಾಧಾನಾನಪೇಕ್ಷಯೈವ ಸಂಬಂಧಮಾತ್ರಾದ್ ವಿಶೇಷಣಭಾವಃ, ತದ್ವದಿಹಾಪಿ ಭವಿಷ್ಯತಿ ಇತ್ಯುಚ್ಯತೇ, ತದಪಿ ಅಯುಕ್ತಮ್ । ಭಗವತ್ಯನುಗ್ರಹಸಂಪತ್ಸಂಪರ್ಕ–ಶೂನ್ಯಸ್ಯ ಕಸ್ಯಚಿದೇವಂವಿಧಸ್ಯ ಕೇಸರಿವಿಶೇಷಸ್ಯ ಭಗವತೀವಾಹತ್ವೇನಾಪ್ರಸಿದ್ಧೇಃ ।**

**ಅನುವಾದ:**

ಒಂದು ಉದಾಹರಣೆ– "ಹರಿಯ ಆ ಪಕ್ಷಿಯು ನಮ್ಮ ಮೋಹವನ್ನು ತೊಲಗಿಸಲಿ." ಈ ಉದಾಹರಣೆಯಲ್ಲಿ ವಿಹಂಗಮ (ಪಕ್ಷಿ) ಶಬ್ದದಿಂದ ಗರುಡಜಾತಿಯ ವಿಶಿಷ್ಟಪಕ್ಷಿಯು ತಿಳಿಸಲ್ಪಡುತ್ತದೆ. ಇದರಲ್ಲಿ ಭಗವಾನ್ ಹರಿಯು ಯಾವ ಅತಿಶಯವನ್ನೂ ತಂದುಕೊಡದಿದ್ದರೂ ಸಂಬಂಧಮಾತ್ರದಿಂದ ವಿಶೇಷಣವಾಗಿದ್ದಾನೆ. ಅದೇ ರೀತಿಯಲ್ಲಿ (ಯಾತ್ವಂಬಿಕಾಕೇಸರೀ ಎಂಬ) ಈ ಉದಾಹರಣಪದ್ಯದಲ್ಲೂ ವಿಶೇಷಣಭಾವವೇ ಇರಲಿ ಎಂದು ಯಾರಾದರೂ ಹೇಳಿದರೆ ಅದೂ ತಪ್ಪು. ಭಗವತಿಯ ಅನುಗ್ರಹಸಂಪತ್ತಿನ ಸಂಪರ್ಕವನ್ನೇ ಹೊಂದದ ಯಾವುದೇ ವಿಶೇಷಸಿಂಹವು ಭಗವತೀ ಅಂಬಿಕೆಯ ವಾಹನವಾಗಿರುವುದು ಪ್ರಸಿದ್ಧವಲ್ಲ.

**ನ ಚಾಯಮರ್ಥಃ ಕವೇರಭಿಪ್ರೇತಃ । ತಥಾ ಹಿ । ಅಸಮಾಭಿಯೋಗಾಭಿಮುಖೀಭೂತ–ಭಗವತ್ಸರಸ್ವತೀಪ್ರಸಾದಾಸಾದಿತಾಸಾಮಾನ್ಯವೈದುಷ್ಯಾತಿಶಯಶಾಲಿನಮ್ ಆತ್ಮಾನಂ ಮನ್ಯಮಾನಸ್ಯ ಕಸ್ಯಚಿತ್ ಕವೇರಿತರಮನೀಷಿಮಾತ್ರಸಮುಚಿತೇನಾಚರಿತೇನ ಲಜ್ಜಮಾನಸ್ಯ ಮಹತೋಽಪಿ ತಜ್ಜಾತೀಯಾನ್ ಅಗಣಯತೋ ನಿಜಗುಣಗರಿಮೋದ್ದಾಮಕಂಡೂವಿನೋದ–ಸುಖಸಮಾಶ್ರಯಮ್ ಅನುರೂಪಮ್ ಅಪರಮ್ ಅಪಶ್ಯತಃ ಸಹೃದಯಚೂಡಾಮಣಿ–ಮಾನಿನೋ ವಿಮನಸಃ ಸಮಾನಧರ್ಮಾಣಮ್ ಅಪ್ರಕೃತಮೇವ ಅಂಬಿಕಾಕೇಸರಿಣಂ ಪುರಸ್ಕೃತ್ಯ ಸ್ವಾಭಿಪ್ರಾಯಾವಿಷ್ಕರಣಮೇತತ್ ।**

**ಅನುವಾದ:**

(ನೀವು ಹೇಳಿದ) ಈ ಅರ್ಥವು ಕವಿಯ ಅಭಿಪ್ರಾಯಕ್ಕೆ ವಿಷಯವಾಗಿಲ್ಲ. ಹೇಗೆಂದರೆ– ಅಪ್ರತಿಮವಾದ ಸೇವೆಯಿಂದ ಅಭಿಮುಖಳಾದ ದೇವಿ ಸರಸ್ವತಿಯ ಅನುಗ್ರಹದಿಂದ ಅಸಾಧಾರಣವಾದ ಪಾಂಡಿತ್ಯವನ್ನು ನಾನು ಗಳಿಸಿದ್ದೇನೆ ಎಂದುಕೊಂಡಿದ್ದ ಯಾವನೋ ಒಬ್ಬ ಕವಿಯ ಮಾತು ಇದು. ಬೇರೆ ಸಾಮಾನ್ಯ ಕವಿಗಳಿಗೆ ಉಚಿತವಾದ ಕೆಲಸವನ್ನು ಮಾಡಲು ಅವನಿಗೆ ಲಜ್ಜೆ. ಅದರಿಂದ ಅಂಥ ಮಹಾಕವಿಗಳನ್ನೂ ಅವನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ತನ್ನ ಗುಣಗೌರವದಿಂದ ಹುಟ್ಟಿದ ಗರ್ವದ ನವೆಯನ್ನು ತುರಿಸಿಕೊಳ್ಳಲು ಅನುರೂಪನಾದ ಪ್ರತಿಸ್ಪರ್ಧಿಯನ್ನು ಕಾಣಲಾರದ, ತಾನೇ ಸಹೃದಯಚೂಡಾಮಣಿ ಎಂದು ಭಾವಿಸುವ ಆ ಕವಿಯು

ತನ್ನ ಸಮಾನಧರ್ಮನಾದ ಅಂಬಿಕಾಕೇಸರಿಯನ್ನು ಮುಂದಿಟ್ಟುಕೊಂಡು ತನ್ನ ಅಭಿಪ್ರಾಯವನ್ನು ಅಭಿವ್ಯಂಜಿಸಿದ್ದಾನೆ. ಇದು ಆ ಅಭಿಪ್ರಾಯಾವಿಷ್ಕರಣ.

> **ನ ಚ ತತ್ರ ಸ್ವಾಭಾವಿಕ ಏವ ಕವೇರ್ವಿದ್ಯಾಚಮತ್ಕಾರಾತಿಶಯಲಾಭೋಽಭಿಮತಃ । ಅಪಿ ತು ಸರಸ್ವತೀಪಾದಪ್ರಸಾದಜನಿತ ಏವ । ತಸ್ಯಾಶ್ಚಾತ್ಮನಶ್ಚೋಭಯೋರಪಿ ಬಿಂಬಪ್ರತಿಬಿಂಬಭಾವೇನ ಅಂಬಿಕಾಕೇಸರಿಣೋರುಪಾದಾನಾತ್ । ದ್ವಿತೀಯಪಕ್ಷಪರಿಗ್ರಹೇ ಪುನರ್ನ ಭವಿತವ್ಯಮೇವ ಸಮಾಸೇನ । ಅಂಬಿಕಾಯಾ ವಿಶೇಷಣಭೂತಾಯಾ ಉತ್ಸಾಹಪರಿಪೋಷಪರ್ಯವಸಾಯಿಕೇಸರಿಚಮತ್ಕಾರಾತಿಶಯಾಧಾನನಿಬಂಧನಭಾವೇನ ವಿಧೇಯತಯಾ ಪ್ರಾಧಾನ್ಯೇನ ವಿವಕ್ಷಿತತ್ವಾತ್, ಸಮಾಸೇ ಚಾಸ್ಯ ವಿಧ್ಯನುವಾದಭಾವಸ್ಯ ನಿಮಜ್ಜನಾದ್ ಇತ್ಯುಕ್ತಮೇವ ।**

**ಅನುವಾದ:**

ತನಗೆ ಸ್ವಾಭಾವಿಕವಾಗಿಯೇ ವಿದ್ಯಾಚಮತ್ಕಾರವೈಭವ ಪ್ರಾಪ್ತವಾಗಿದೆ ಎನ್ನುವುದು ಕವಿಯ ಅಭಿಪ್ರಾಯವಲ್ಲ. ಸರಸ್ವತಿಯ ಪಾದಗಳ ಅನುಗ್ರಹದಿಂದ ತನ್ನ ಪ್ರತಿಭೆ ಹುಟ್ಟಿದೆ ಎನ್ನುವುದೇ ಅವನ ಅಭಿಪ್ರಾಯ. ಏಕೆಂದರೆ ಸರಸ್ವತೀಗೂ ತನಗೂ ಬಿಂಬಪ್ರತಿಬಿಂಬಭಾವದಿಂದ ಅವನು ಅಂಬಿಕೆಯನ್ನೂ ಸಿಂಹವನ್ನೂ ಪ್ರತಿಪಾದಿಸಿದ್ದಾನೆ.

ಎರಡನೆಯ ಪಕ್ಷವನ್ನು ಒಪ್ಪಿಕೊಂಡರೆ ಇಲ್ಲಿ ಸಮಾಸವನ್ನು ಮಾಡಲೇಕೂಡದು. ವಿಶೇಷಣವಾಗಿರುವ ಅಂಬಿಕೆಯ ಉಪಾದಾನವನ್ನಿಲ್ಲಿ ಮಾಡಿರುವುದು ಉತ್ಸಾಹದ ಉತ್ಕರ್ಷದಲ್ಲಿ ಪರ್ಯವಸಾನವನ್ನು ಹೊಂದುವ ಕೇಸರಿಯ ಪರಾಕ್ರಮಾತಿಶಯವನ್ನು ಉಂಟುಮಾಡುವ ಕಾರಣವೆಂದೇ ಅಂಬಿಕೆಯನ್ನು ಇಲ್ಲಿ ವಿಧೇಯವೆಂದು ಪ್ರಾಧಾನ್ಯದಿಂದ ವಿವಕ್ಷಿಸಲಾಗಿದೆ. ಸಮಾಸವನ್ನು ಮಾಡಿದಾಗ ಈ ವಿಧ್ಯನುವಾದಭಾವವು ಮುಳುಗಿಹೋಗುತ್ತದೆ ಎಂದು ಮೊದಲೇ ಹೇಳಿದ್ದೇವೆ.

> **ನನು ಚ ಯದಿ ವಿಶೇಷಣಸ್ಯ ವಿವಕ್ಷಿತತ್ವೇ ಸತಿ ವಿಶೇಷ್ಯಸ್ಯ ಕೋಽಪಿ ಚಮತ್ಕಾರಃ ಸಮುನ್ಮಿಷತಿ, ಸ ಚ ತಸ್ಯ ಸಮಾಸೇಽಸ್ತಮುಪಯಾತೀತ್ಯುಚ್ಯತೇ, ತರ್ಹಿ ಸಮಾಸಾದಸೌ ನ ಪ್ರಾಪ್ನೋತಿ । ಇಷ್ಯತೇ ಚ ಕೈಶ್ಚಿತ್ ತತೋಽಪೀತಿ ವೃತ್ತಿವಾಕ್ಯಯೋಸ್ತಸ್ಯ ಯದೇತದ್ ಉದಯಾಸ್ತಮಯಪರಿಕಲ್ಪನಂ ತದ್ ಅಯುಕ್ತಮೇವ । ಉಚ್ಯತೇ । ಉದಯಾಸ್ತಮಯಯೋಃಯತ್ ತಾವದ್ ಅರ್ಥಸ್ಯ ವೈಚಿತ್ರ್ಯಂ, ತದುಪದರ್ಶಿತಮೇವ ಪ್ರಾಕ್ ।**

**ಅನುವಾದ:**

(ಪೂರ್ವಪಕ್ಷ)– ವಿಶೇಷಣವು ವಿವಕ್ಷಿತವಾಗಿದ್ದಾಗ ವಿಶೇಷ್ಯದಲ್ಲಿ ಯಾವುದೋ ಅನಿರ್ವಚನೀಯವಾದ ಚಮತ್ಕಾರವು ಮೂಡಿಬರುತ್ತದೆ, ಸಮಾಸದಲ್ಲಿ ಅಂಥ ಚಮತ್ಕಾರವು ಅಸ್ತವಾಗಿಬಿಡುತ್ತದೆ ಎಂದು ನೀವು ಹೇಳುವುದಾದರೆ,

ಸಮಾಸವನ್ನು ಮಾಡಿದಾಗ ಚಮತ್ಕಾರ ಇಲ್ಲವೆಂದಾಯಿತು. ಆದರೆ ಕೆಲವರು (ವಿದ್ವಾಂಸರು) ಸಮಾಸ ಮಾಡಿದಾಗಲೂ ಆ ಚಮತ್ಕಾರ ಇರುವುದೆಂದು ಭಾವಿಸುತ್ತಾರೆ. ಹೀಗಿರುವಾಗ ಸಮಾಸ–ವಾಕ್ಯಗಳಲ್ಲಿ ಕ್ರಮವಾಗಿ ಚಮತ್ಕಾರದ ಅಸ್ತಮಾನ–ಉದಯಗಳು ಉಂಟಾಗುವುವೆಂದು ನೀವು ಕಲ್ಪಿಸಿರುವುದು ಅಯುಕ್ತ.

(ಹೀಗೆಂದರೆ ಗ್ರಂಥಕಾರನು ತನ್ನ ಉತ್ತರವನ್ನು ಕೊಡುತ್ತಾನೆ) ಇದಕ್ಕೆ ಉತ್ತರವನ್ನು ಹೇಳುತ್ತೇವೆ. (ವಿವಕ್ಷಿತಾರ್ಥದ) ಉದಯ ಮತ್ತು ಅಸ್ತಮಾನಗಳಿಂದ ಅರ್ಥದ ಯಾವ ವೈಚಿತ್ರ್ಯವು ಉಂಟಾಗುವುದೋ ಅದನ್ನು ಮೊದಲೇ ತೋರಿಸಲಾಗಿದೆ.

**ಯತ್ ಪುನಃ ಸಮಾಸಚಮತ್ಕಾರಾಭಾವಪ್ರಾಪ್ತಿಪ್ರಸಂಜನಂ, ನ ತಚ್ಚೋದ್ಯಮ್ । ಇಷ್ಟಂ ಹಿ ನಾಮಾಪ್ರಾಪ್ತ್ಯಾ ಚೋದ್ಯತೇ । ನ ಚ ಅಸ್ಮಾಭಿರಸೌ ಸಮಾಸಾದಪೀಷ್ಯತೇ । ವಾಕ್ಯಾದೇವ ತತ್ಸಿದ್ಧೇರಿಷ್ಟತ್ವಾತ್ । ಯೈಸ್ತು ತತೋಽಪೀಷ್ಯತೇ ತೇಷಾಂ ವೃತ್ತಿವಾಕ್ಯಯೋರ್ನೂನಮಿದಮ್ ಅರ್ಥವೈಚಿತ್ರ್ಯಂ ನ ಪ್ರತಿಭಾತಮೇವ । ಯಾ ಪುನರೇಷಾಂ ವೃತ್ತೇರಪಿ ಚಮತ್ಕಾರಾತಿಶಯಾ–ವಗತಿಃ, ಯಥಾ–**

**ಮಿಥ್ಯೈತನ್ಮಮಚಿಂತಿತಂ ದ್ವಿತಯಮಪ್ಯಾರ್ಯಾನುಜೋಽಸೌಗುರುಃ**
**ಮಾತಾ ತಾತಕಲತ್ರಮಿತ್ಯನುಚಿತಂ ಮನ್ಯೇ ವಿಧಾತ್ರಾ ಕೃತಮ್ ॥**

**ಅನುವಾದ:**

ಸಮಾಸದಲ್ಲಿ ಚಮತ್ಕಾರವಿರುವುದಿಲ್ಲವೆಂಬ ಸ್ಥಿತಿ ಬಂದುಬಿಡುವುದೆಂಬ ಆಪಾದನೆ ಪ್ರಶ್ನೆಯೇ ಅಲ್ಲ. ನಮಗೆ ಇಷ್ಟವಾದುದು ಉಂಟಾಗುವುದಿಲ್ಲವೆಂದಾಗ ಅಂಥ ಪ್ರಶ್ನೆಯನ್ನು ಕೇಳಬೇಕು. ಸಮಾಸದಲ್ಲಿ ಚಮತ್ಕಾರ ಉಂಟಾಗುವುದೆಂಬುದು ನಮ್ಮ ಅಭಿಮತ ಅಲ್ಲವೇ ಅಲ್ಲ. ವಾಕ್ಯದಿಂದಲೇ ಚಮತ್ಕಾರದ ಸಿದ್ಧಿಯೆಂದು ನಮಗೆ ಇಷ್ಟವಾದ ಅಭಿಪ್ರಾಯ. ಯಾರು ಸಮಾಸದಿಂದಲೂ ಚಮತ್ಕಾರ ಉಂಟಾಗುವುದು ಎಂದು ಹೇಳುತ್ತಾರೋ ಅವರಿಗೆ ವೃತ್ತಿ ಮತ್ತು ವಾಕ್ಯಗಳ ಮಧ್ಯದ ಅರ್ಥವೈಚಿತ್ರ್ಯವು ತೋರುವುದೇ ಇಲ್ಲ. ಅಂಥವರಿಗೆ ವೃತ್ತಿಯಲ್ಲೂ (ಎಂದರೆ ಸಮಾಸದಲ್ಲೂ) ಚಮತ್ಕಾರಾತಿಶಯದ ಅರಿವು ಉಂಟಾಗಬಹುದು. ಉದಾಹರಣೆ– "ನಾನು ಯೋಚಿಸಿದ ಎರಡೂ ತಪ್ಪು. ಈ ಅಣ್ಣನು ಆರ್ಯಾನುಜ. ತಾಯಿಯೋ ತಾತಕಲತ್ರ. ಆದ್ದರಿಂದ ಇದರಲ್ಲಿ ವಿಧಿಯೇ ಅನುಚಿತವಾದುದನ್ನು ಮಾಡಿದ್ದೇನೆಂದು ತಿಳಿಯುತ್ತೇನೆ."

**ಅತ್ರಾರ್ಯಾನುಜ ಇತ್ಯತಃ, ತಾತಕಲತ್ರಮಿತ್ಯತಶ್ಚ ಸಾ ಭ್ರಾಂತಿರೇವಾಭಿಮಾನಿಕೀ, ಶುಕ್ತಿರಜತಪ್ರತೀತಿವತ್ । ಪರಮಾರ್ಥತಸ್ತು ಸಾ ವ್ಯಾಖ್ಯಾವಾಕ್ಯಾದೇವ ತೇಷಾಂ, ನ ಸಮಾಸಾತ್, ಕೇವಲಂ ತತ್ರಾರೋಪಿತಾ ಇತಿ ಉದಯಾಸ್ತಮಯಪರಿಕಲ್ಪನಮುಪಪನ್ನಮೇವ**

**ಇತಿ ಸ್ಥಿತಮ್ । ತಸ್ಮಾದೇವಮತ್ರ ಪಾಠಃ ಕರ್ತವ್ಯಃ–**

**ಉದ್ಯೋಗಃ ಕರಿಕೀಟಮೇಘಶಕಲೋದ್ದೇಶೇನ ಸಿಂಹಸ್ಯ ಯಃ**
**ಸರ್ವಸ್ಯೈವ ಸ ಜಾತಿಮಾತ್ರನಿಯತೋ ಹೇವಾಕಲೇಶಃ ಕಿಲ ।**
**ಇತ್ಯಾಶಾದ್ವಿರದಕ್ಷಯಾಂಬುದಘಟಾಬಂಧೇಽಪಿ ನೋದ್ಯುಕ್ತವಾನ್**
**ಯೋಽಸೌ ಕುತ್ರ ಚಮತ್ಕೃತೇರತಿಶಯಂ ಗೌರ್ಯಾ ಹರಿರ್ಯಾತು ಸಃ ॥**

**ಅನುವಾದ:**

ಈ ಪದ್ಯದಲ್ಲಿ ಆರ್ಯಾನುಜ ಎಂಬ ಸಮಸ್ತಪದದಿಂದ ಮತ್ತು ತಾತಕಲತ್ರಮ್ ಎಂಬ ಪದದಿಂದ ಚಮತ್ಕಾರವು ತೋರುವುದೆಂಬುದು ಕೇವಲ ಅಭಿಮಾನಜನ್ಯವಾದ ಭ್ರಾಂತಿ. ಅದು ಕಪ್ಪೆಚಿಪ್ಪಿನಲ್ಲಿ ಉಂಟಾಗುವ ಬೆಳ್ಳಿಯ ಜ್ಞಾನದಂತೆ ಸುಳ್ಳು. ಪರಮಾರ್ಥವನ್ನು ಹೇಳಬೇಕಾದರೆ ಚಮತ್ಕಾರದ ಪ್ರತೀತಿಯು ಉಂಟಾಗುವುದು ವ್ಯಾಖ್ಯಾನರೂಪವಾದ ವಾಕ್ಯದಿಂದಲೇ, ಸಮಾಸದಿಂದ ಅಲ್ಲ. ಸಮಾಸದಲ್ಲಿ ಅದನ್ನು ಸುಮ್ಮನೆ ಆರೋಪಿಸಿದ್ದಾರೆ ಅಷ್ಟೆ. ಆದ್ದರಿಂದ (ವಾಕ್ಯದಿಂದ ಮತ್ತು ಸಮಾಸದಿಂದ ಕ್ರಮವಾಗಿ ಚಮತ್ಕಾರದ) ಉದಯ ಮತ್ತು ಅಸ್ತಮಾನ ಉಂಟಾಗುವುದೆಂದು ನಾವು ಮಾಡಿದ ಕಲ್ಪನೆಯು ಉಚಿತವಾದುದೇ ಆಗಿದೆ. ಆದ್ದರಿಂದ (ಸಂರಂಭಃ ಕರಿ..... ಇತ್ಯಾದಿ ಶ್ಲೋಕಕ್ಕೆ) ಈ ರೀತಿ ಪಾಠವನ್ನು ರಚಿಸಬೇಕು. ಉದ್ಯೋಗಃ .............. ಇತ್ಯಾದಿ.

(ಈ ಪದ್ಯದ ಅರ್ಥವನ್ನು ದ್ವಿತೀಯವಿಮರ್ಶದ ಆರಂಭದಲ್ಲಿ ಕೊಟ್ಟಿದೆ.)

**ಇತ್ಥಂ ಚ ಉಕ್ತದೋಷತ್ರಯಾವಕಾಶಃ ಪ್ರತಿವಿಹಿತೋ ಭವತಿ । ಯದ್ಯಪಿ ಚ ಯೋಽಸಾವಿತ್ಯತ್ರ ಪ್ರತಿಪಾದಿತಾಭಿಸಂಬಂಧಕ್ರಮಮೇಕಮೇವ ತದಮ್ ಉಪಾದಾಯ ಸೋಽಯಮಿತಿ ಪಾಠೇ ವಿಪರ್ಯಾಸಿತೇ ಸತಿ ಏಕವಾಕ್ಯತಾಯಾಂ ನ ಯಥೋಕ್ತ ಯತ್ತದಭಿಸಂಬಂಧದೋಷಾವಕಾಶಃ। ಯಥಾ–**

**ತಸ್ಯ ಪ್ರಯಾತಸ್ಯ ವರೂಥಿನೀನಾಂ**
**ಪೀಡಾಮಪರ್ಯಾಪ್ತವತೀವ ಸೋಢುಮ್ ।**
**ವಸುಂಧರಾ ವಿಷ್ಣುಪದಂ ದ್ವಿತೀಯಮ್**
**ಅಧ್ಯಾರುರೋಹೇವ ರಜಶ್ಛಲೇನ ॥ ಇತ್ಯತ್ರ ।**

**ಅನುವಾದ:**

ಹೀಗೆ ಮೇಲೆ ಹೇಳಿದ ಮೂರು ದೋಷಗಳಿಗೆ ಅವಕಾಶವನ್ನು ನಿರಾಕರಿಸಿದಂತಾಗುತ್ತದೆ. ಆದರೂ "ಯೋಽಸೌ" ಎಂಬಲ್ಲಿ ಅಭಿಸಂಬಂಧವನ್ನುಳ್ಳ ಒಂದೇ ತಚ್ಛಬ್ದವನ್ನು ತೆಗೆದುಕೊಂಡು ಸೋಽಯಮ್ ಎಂದು ಪಾಠವನ್ನು ಬದಲಾಯಿಸಿದರೆ ಏಕವಾಕ್ಯತೆ ಉಂಟಾಗುವುದರಿಂದ ಮೇಲೆ ಹೇಳಿದ ಯತ್ತದ್ ಎಂಬವುಗಳ ಅಭಿಸಂಬಂಧದ ದೋಷಕ್ಕೂ ಅವಕಾಶವಿರುವುದಿಲ್ಲ. ಅದಕ್ಕೆ

ಉದಾಹರಣೆ– (ತಸ್ಯ.......) "ಆ ಕುಶನು ದಂಡಯಾತ್ರೆಗೆ ಹೊರಟಾಗ ಅವನ ಸೈನ್ಯಗಳ ಭಾರವನ್ನು ಸಹಿಸಲು ಅಶಕ್ತಳಾದಂತೆ ಭೂಮಿಯು ಧೂಳಿನ ನೆವದಿಂದ ಇನ್ನೊಂದು ಆಕಾಶಕ್ಕೆ ಏರಿ ಹೋಗುತ್ತಿದ್ದಂತೆ ಇತ್ತು."

**ತಥಾಪಿ ತತ್ರಾರ್ಥಸ್ಯ ಚಮತ್ಕಾರಾತಿಶಯೋ ನ್ಯಗ್ಭವತ್ಯೇವ । ಸ ಹಿ ಭಿನ್ನವಾಕ್ಯತಾಯಾಮೇವ ಸಹೃದಯೈಕಸಂವೇದ್ಯಃ ಸಮುನ್ಮಿಷತೀತಿ ತದನುಗುಣಾರ್ಥೋಽಯಮೇವ ಪಾಠಃ ಶ್ರೇಯಾನ್ ಇತಿ ।**

**ಯತ್ರೋತ್ಕರ್ಷೋಽಪಕರ್ಷೋ ವಾ ವಿಶೇಷ್ಯಸ್ಯ ವಿಶೇಷಣಾತ್ ।**
**ತದೇವ ವಾ ವಿಧೇಯಂ ಸ್ಯಾತ್ ಸಮಾಸಸ್ತತ್ರ ನೇಷ್ಯತೇ ॥**
**ಅನ್ಯತ್ರ ತ್ವರ್ಥಸಂಬಂಧಭಾವೇ ವಕ್ತುಮಭೀಪ್ಸಿತೇ ।**
**ಕಾಮಚಾರಸ್ತದರ್ಥಂ ಹಿ ಸಮರ್ಥಗ್ರಹಣಂ ಕೃತಮ್ ॥**

**ಅನುವಾದ:**

ಹಾಗೆ ಮಾಡಿದರೂ ಅರ್ಥದ ವಿಶೇಷ ಚಮತ್ಕಾರವು ಕುಂಠಿತವಾಗಿಬಿಡುತ್ತದೆ. ಏಕೆಂದರೆ ಭಿನ್ನ ವಾಕ್ಯವಿದ್ದಾಗಲೇ ಸಹೃದಯರಿಗೆ ಮಾತ್ರ ಗೋಚರಿಸುವ ಆ ವಿಶೇಷ ಚಮತ್ಕಾರವು ಉಂಟಾಗುವುದು. ಅದಕ್ಕೆ ಅನುಗುಣವಾಗಿ (ನಾವು ಕೊಟ್ಟಿರುವ) ಪಾಠವೇ ಉತ್ತಮ. ಎಲ್ಲಿ ವಿಶೇಷಣದಿಂದ ವಿಶೇಷ್ಯದ ಉತ್ಕರ್ಷವೋ ಅಪಕರ್ಷವೋ ಉಂಟಾಗುವುದೋ, ಅಥವಾ ಎಲ್ಲಿ ವಿಶೇಷಣಾರ್ಥವು ವಿಧೇಯವೆಂದು ವಿವಕ್ಷಿತವೋ ಅಲ್ಲಿ (ಅವೆರಡಕ್ಕೆ) ಸಮಾಸವನ್ನು ಮಾಡಬಾರದು.

ಬೇರೆ ಸ್ಥಳಗಳಲ್ಲಿ ಕೇವಲ ಎರಡು ಪದಾರ್ಥಗಳ ಸಂಬಂಧಮಾತ್ರವನ್ನು ಹೇಳಲು ಕವಿಯು ಅಪೇಕ್ಷಿಸಿದರೆ ಅವನಿಗೆ ಸ್ವಾತಂತ್ರ್ಯ– (ಎಂದರೆ ಅವನು ಸಮಾಸವನ್ನು ಮಾಡಬಹುದು ಅಥವಾ ಮಾಡದಿರಬಹುದು.) ಇದನ್ನು ತಿಳಿಸುವುದಕ್ಕಾಗಿಯೇ (ಪಾಣಿನಿಯು ಸೂತ್ರದಲ್ಲಿ) ಸಮರ್ಥ ಎಂಬ ಪದವನ್ನು ಹೇಳಿದ್ದಾನೆ.

**ನ ತು ಸಾಪೇಕ್ಷತಾದ್ಯನ್ಯದೋಷಜಾತನಿವೃತ್ತಯೇ ।**
**ಪಿತ್ರೋಃ ಸ್ವತೇವ ವಂದ್ಯತ್ವೇ ಸಾ ಹಿ ನ್ಯಾಯೇನ ಸಿಧ್ಯತಿ ॥**
**ಕಾವ್ಯಕಾಂಚನಕಷಾಶ್ಮಮಾನಿನಾ ಕುಂತಕೇನ ನಿಜಕಾವ್ಯಲಕ್ಷ್ಮಣಿ ।**
**ಯಸ್ಯ ಸರ್ವನಿರವದ್ಯತೋದಿತಾ ಶ್ಲೋಕ ಏಷ ಸ ನಿದರ್ಶಿತೋ ಮಯಾ ॥**

**ಅನುವಾದ:**

(ಸೂತ್ರದಲ್ಲಿ ಸಮರ್ಥ ಎಂದು ಹೇಳಿರುವುದು) ಸಾಪೇಕ್ಷತಾ ಮುಂತಾದ ಇತರ ದೋಷಗಳ ನಿವೃತ್ತಿಗಾಗಿ ಅಲ್ಲ. ಅದು ತಂದೆತಾಯಿಗಳು ವಂದ್ಯರು ಎಂದು ಹೇಳಿದಾಗ ತನ್ನ ತಂದೆತಾಯಿಗಳು ಎಂದು ಸಿದ್ಧವಾಗುವಂತೆ ನ್ಯಾಯದಿಂದಲೇ ಸಿದ್ಧವಾಗುತ್ತದೆ.

ಕಾವ್ಯವೆಂಬ ಚಿನ್ನಕ್ಕೆ ತಾನೇ ಒರೆಗಲ್ಲು ಎಂದು ಭಾವಿಸಿಕೊಂಡಿದ್ದ ಕುಂತಕನು ತನ್ನ ಕಾವ್ಯಲಕ್ಷಣಗ್ರಂಥದಲ್ಲಿ ಯಾವ ಪದ್ಯವನ್ನು ಎಲ್ಲ ರೀತಿಯಿಂದಲೂ ನಿರ್ದೋಷ ಎಂದು ಹೇಳಿದನೋ ಆ ಪದ್ಯವನ್ನು ನಾನು (ಪರೀಕ್ಷಿಸಿ ಅದರಲ್ಲಿರುವ ದೋಷವನ್ನು) ತೋರಿಸಿಕೊಟ್ಟಿದ್ದೇನೆ.

## ಪ್ರಕ್ರಮಭೇದ

**ಪ್ರಕ್ರಮಭೇದೋಽಪಿ ಶಬ್ದಾನೌಚಿತ್ಯಮೇವ । ಸ ಹಿ ಯಥಾಪ್ರಕ್ರಮಮ್ ಏಕರಸಪ್ರವೃತ್ತಾಯಾಃ ಪ್ರತಿಪತ್ತೃಪ್ರತೀತೇರುತ್ಖಾತ ಇವ ಪರಿಸ್ಖಲನಖೇದದಾಯೀ ರಸಭಂಗಾಯ ಪರ್ಯವಸ್ಯತಿ । ಕಿಂ ಚ ಸರ್ವತ್ರೈವ ಶಬ್ದಾರ್ಥವ್ಯವಹಾರೇ ವಿದ್ವದ್ಭಿರಪಿ ಲೌಕಿಕಕ್ರಮೋಽನುಸರ್ತವ್ಯಃ । ಲೋಕಶ್ಚ ಮಾ ಭೂದ್ ರಸಾಸ್ವಾದಪ್ರತೀತೇಃ ಪರಿಮ್ಲಾನತೇತಿ ಯಥಾಪ್ರಕ್ರಮಮೇವ ಏನಮ್ ಆದ್ರಿಯತೇ, ನಾನ್ಯಥಾ ।**

**ಅನುವಾದ:**

ಪ್ರಕ್ರಮಭೇದ (ಎಂಬ ದೋಷ)ವೂ ಶಬ್ದಕ್ಕೆ ಸಂಬಂಧಿಸಿದ ಅನೌಚಿತ್ಯವೇ. ಅದು ಆರಂಭಣಕ್ಕೆ ಅನುಸಾರವಾಗಿ ಒಂದು ರಸದಲ್ಲಿ ತೊಡಗುವ ವಾಚಕನ (ಅಥವಾ ಪ್ರೇಕ್ಷಕನ) ಅರಿವಿಗೆ ಅಡ್ಡ ಬಂದ ಹಳ್ಳದಂತೆ ಅರಿವಿಗೆ ಎಡರಾಗಿ ತೊಂದರೆಯನ್ನು ಕೊಟ್ಟು ರಸಭಂಗದಲ್ಲಿ ಪರ್ಯಾವಸಾನವನ್ನುಂಟುಮಾಡುತ್ತದೆ. ಅಲ್ಲದೆ ವಿದ್ವಾಂಸರೂ ಎಲ್ಲ ಸಂದರ್ಭಗಳಲ್ಲಿ ಲೋಕಸಂಮತವಾದ ಕ್ರಮವನ್ನೇ ಅನುಸರಿಸಬೇಕು. ಲೋಕವು ರಸಾಸ್ವಾದಕ್ಕೆ ಬೇಕಾದ ಜ್ಞಾನವು ಕುಂದಿಹೋಗಬಾರದು ಎಂಬ ದೃಷ್ಟಿಯಿಂದ ಪ್ರಕ್ರಮಾನುಸಾರವಾಗಿ ಶಬ್ದಪ್ರಯೋಗ ಆಗಬೇಕು ಎಂದು ನಿರೀಕ್ಷಿಸುತ್ತದೆ. ಅದಕ್ಕೆ ವಿರುದ್ಧವಾಗಿ ಅಲ್ಲ.

(ಪ್ರಕೃತಿಪ್ರಕ್ರಮಭೇದ)

**ತತ್ರ ಪ್ರಕೃತಿಪ್ರಕ್ರಮಭೇದೋ ಯಥಾ–**

**ಸತತಮನಭಿಭಾಷಣಂ ಮಯಾ ತೇ ಪರಿಪಣಿತಂ ಭವತೀಮನಾಯಯಂತ್ಯಾ ।**
**ಗತಧೃತಿರವಲಂಬಿತುಂ ಬತಾಸೂನ್ ಅನಲಮನಾಲಪನಾದಹಂ ಭವತ್ಯಾಃ ॥**

**ಅತ್ರ ಹಿ ಭಾಷತಿಲಪತ್ಯೋರುಭಯೋರಪಿ ವಚನಾರ್ಥಾವಿಶೇಷೇಽಪಿ ಯುದಾ ಭಾಷತಿಪ್ರಯೋಗಕ್ರಮೇಣ ವಸ್ತು ವಕ್ತುಮುಪಕ್ರಾಂತಂ ತದಾ ತೇನೈವ ನಿರ್ವಾಹಃ ಕರ್ತುಮುಚಿತೋ, ನೇತರೇಣ । ಏವಂವಿಧಸ್ಯ ಪ್ರಕ್ರಮಾಭೇದಾಖ್ಯಸ್ಯ ಶಬ್ದೌಚಿತ್ಯಸ್ಯ ವಿಧ್ಯನುವಾದಭಾವಪ್ರಕಾರತ್ವೋಪಗಮಾತ್ ।**

**ಅನುವಾದ:**

ಅದರಲ್ಲಿ ಪ್ರಕೃತಿಪ್ರಕ್ರಮಭೇದದ ಉದಾಹರಣೆ– “ಆಕೆಯನ್ನು ಕರೆತರದ ಕಾರಣ ನಿನ್ನೊಡನೆ ಮಾತಿಲ್ಲ ಎಂದು ನಾನು ಪ್ರತಿಜ್ಞೆ ಮಾಡಿದ್ದೆನು. ಆದರೆ ಅಯ್ಯೋ,

ಅವಳ ವಿಷಯದಲ್ಲಿ ಮಾತನಾಡದೆ ಇದ್ದರೆ ಧೃತಿಯನ್ನು ಕಳೆದುಕೊಂಡಿರುವ ನಾನು ಪ್ರಾಣಗಳನ್ನೇ ಹಿಡಿದಿಟ್ಟುಕೊಳ್ಳಲಾರೆ."

ಈ ಪದ್ಯದಲ್ಲಿ ಭಾಷ್ ಮತ್ತು ಲಪ್ ಎಂಬ ಎರಡು ಧಾತುಗಳನ್ನು ಬಳಸಲಾಗಿದೆ. ಎರಡು ಧಾತುಗಳಿಗೂ ಮಾತು ಎಂಬುದು ಒಂದೇ ಅರ್ಥ. ಆದರೂ ಭಾಷ್ ಧಾತುವಿನಿಂದ ವಸ್ತುವನ್ನು ಆರಂಭಿಸಿದ ಮೇಲೆ ಅದರಿಂದಲೇ ಹೇಳಿಕೆಯನ್ನು ಕವಿಯು ಮುಗಿಸಬೇಕಾಗಿತ್ತು. ಬೇರೆ ಧಾತುವನ್ನು ಬಳಸಬಾರದಾಗಿತ್ತು. ಇಂಥ ಪ್ರಕ್ರಮಾಭೇದವು (ಆರಂಭಿಸಿದ ಪ್ರಕೃತಿಯನ್ನು ಬದಲಾಯಿಸದೆ ಇರುವುದು) ಶಬ್ದೌಚಿತ್ಯ. ಇದನ್ನು (ವಿದ್ವಾಂಸರು) ವಿಧ್ಯನುವಾದಭಾವ ಎಂದು ಒಪ್ಪಿಕೊಂಡಿದ್ದಾರೆ.

**ಯಥಾ–**

**ತಾಲಾ ಜಾಅಂತಿ ಗುಣಾ ಜಾಲಾ ದೇ ಸಹಿಅಏಹಿ ಘೇಪ್ಪಂತಿ ।**
**ರಇಕಿರಣಾಣುಗ್ಗಹಿಆಇ ಹೋಂತಿ ಕಮಲಾಇ ಕಮಲಾಇ ॥**

**ಯಥಾ ಚ–**

**ಏಮೇಅ ಜಣೋ ತಿಸ್ಸಾ ದೇಉ ಕವೋಲೋಪಮಾಇ ಶಶಿಬಿಂಬಮ್ ।**
**ಪರಮತ್ಥವಿಆರೇ ಉಣ ಚಂದೋ ಚಂದೋ ವಿಅವರಾಓ ॥**

**ಅತ್ರ ಹಿ ಉತ್ಕರ್ಷಮಾತ್ರವಿವಕ್ಷಯಾ ಪರಿಕಲ್ಪಿತಭೇದೇಽಪಿ ಏಕಸ್ಮಿನ್ನರ್ಥೇ ವಿಧೇಯಾನುವಾದ್ಯವಿಷಯೇಣ ಏಕೇನೈವ ಅಭಿಧಾನೇನ ವಿಧ್ಯನುವಾದಭಾವೋ ಭಣಿತ ಇತಿ ಪ್ರಕ್ರಮಾಭೇದಪ್ರಕಾರ ಏವಾಯಮಿತಿ ಮಂತವ್ಯಮ್ । ಕೇವಲಂ ಪರ್ಯಾಯಪ್ರಕ್ರಮ–ಭೇದನಿವೃತ್ತಯೇ ಶಶಿಬಿಂಬಮ್ ಇತ್ಯತ್ರ ಚಂದಮಿಣಮ್ ಇತಿ ಪಾಠಃ ಪರಿಣಮಯಿತವ್ಯಃ।**

**ಅನುವಾದ:**

ಉದಾಹರಣೆ– "ಯಾವಾಗ ಸಹೃದಯರು ಗುಣಗಳನ್ನು ಗುರುತಿಸುವರೋ ಆಗ ಅವು ಗುಣಗಳಾಗುತ್ತವೆ. ನೇಸರಿನ ಕಿರಣಗಳಿಂದ ಅನುಗ್ರಹವನ್ನು ಪಡೆದಾಗ ಕಮಲಗಳು ಕಮಲಗಳಾಗುತ್ತವೆ."

ಇನ್ನೊಂದು ಉದಾಹರಣೆ–

"ಏನೋ ಹೀಗೆ ಜನರು ನಿನ್ನ ಕೆನ್ನೆಗೆ ಚಂದ್ರನನ್ನು ಉಪಮಾನವನ್ನಾಗಿ ಕೊಡುತ್ತಾರೆ. ಪರಮಾರ್ಥವನ್ನು ವಿಚಾರಿಸಿದರೆ ಆ ಚಂದ್ರ ಚಂದ್ರನಂತೆ ಬಡಪಾಯಿ."

ಇಲ್ಲಿ ಉತ್ಕರ್ಷವನ್ನು ಹೇಳಬೇಕೆಂಬ ಇಚ್ಛೆಯಿಂದ ಒಂದು ವಸ್ತುವಿನಲ್ಲೇ ಭೇದವನ್ನು ಕಲ್ಪಿಸಿಕೊಂಡಿದ್ದರೂ ಒಂದೇ ಪದವನ್ನು ಮತ್ತೆ ಉಪಯೋಗಿಸಿ ವಿಧ್ಯನುವಾದಭಾವವನ್ನು ಹೇಳಿರುವುದರಿಂದ ಇದು ಪ್ರಕ್ರಮಾಭೇದದ ಒಂದು ಪ್ರಕಾರ –ಎಂದು ತಿಳಿದುಕೊಳ್ಳಬೇಕು. ಆದರೆ (ಏಮೇಅ ಎಂಬ ಪದ್ಯದಲ್ಲಿ)

ಪರ್ಯಾಯಪ್ರಕ್ರಮಭೇದ ಎಂಬ ದೋಷವನ್ನು ತೊಲಗಿಸಲು ಶಶಿಬಿಂಬಮ್ ಎಂಬ ಪದದ ಸ್ಥಳದಲ್ಲಿ ಚಂದಮಿಣಮ್ ಎಂದು ಪಾಠವನ್ನು ಬದಲಿಸಬೇಕು.

**ಯಥಾ–**

**ಏವಮುಕ್ತೋ ಮಂತ್ರಿಮುಖ್ಯೈ ರಾವಣಃ ಪ್ರತ್ಯಭಾಷತ ।**

**ಇತಿ । ತೇನ "ಪ್ರತ್ಯವೋಚತ" ಇತ್ಯತ್ರ ಪಾಠೋ ಯುಕ್ತಃ ।**

**ಯಥಾ ಚ–**
**ನಾಥೇ ನಿಶಾಯಾ ನಿಯತೇರ್ನಿಯೋಗಾದ್**
**ಅಸ್ತಂಗತೇ ಹಂತ ನಿಶಾಪಿ ಯಾತಾ ।**
**ಕುಲಾಂಗನಾನಾಂ ಹಿ ದಶಾನುರೂಪಂ**
**ನಾತಃ ಪರಂ ಭದ್ರತರಂ ಸಮಸ್ತಿ ॥**

**ಅತ್ರ ಹಿ "ಗತಾ ನಿಶಾಪಿ" ಇತಿ ಯುಕ್ತಃ ಪಾಠಃ ।**

**ಅನುವಾದ:**

ಒಂದು ಉದಾಹರಣೆ– "ಹೀಗೆ ಮುಖ್ಯರಾದ ಮಂತ್ರಿಗಳಿಂದ ಹೇಳಲ್ಪಟ್ಟ ರಾವಣನು ಉತ್ತರವನ್ನು ನುಡಿದನು." ಇಲ್ಲಿ (ಪ್ರತ್ಯಭಾಷತ ಎಂಬುದರ ಜಾಗದಲ್ಲಿ) ಪ್ರತ್ಯವೋಚತ ಎಂಬ ಪಾಠವು ಉಚಿತ.

ಇನ್ನೊಂದು ಉದಾಹರಣೆ– "ವಿಧಿಯ ಆದೇಶದಿಂದ ನಿಶಾನಾಥನು ಅಸ್ತಂಗತನಾಗಲು ನಿಶೆಯು ತಾನೂ ಹೋದಳು. ಕುಲನಾರಿಯರಿಗೆ ತಮ್ಮ ಸ್ಥಿತಿಗೆ ಅನುಗುಣವಾದ ಬೇರೆ ಯಾವ ಉತ್ತಮ ಮಾರ್ಗವು ಇಲ್ಲವಷ್ಟೆ." ಇಲ್ಲಿ "ಗತಾ ನಿಶಾಪಿ" ಎಂಬ ಪಾಠವು ಉಚಿತ.

**ವಿವರಣೆ:**

ಏವಮುಕ್ತ ಎಂಬಲ್ಲಿ ವಚ್ ಧಾತುವಿನ ರೂಪ ಉಕ್ತ ಎಂದು ಆರಂಭಿಸಲಾಗಿದೆ. ಅದನ್ನೇ ಮತ್ತೆ ಬಳಸಿ ಪ್ರತ್ಯವೋಚತ ಎಂದು ಹೇಳಬೇಕು. ನಾಥೇ ನಿಶಾಯಾ.... ಎಂಬಲ್ಲಿ ಗತೇ ಎಂದು ಗಮ್ ಧಾತುವಿನಿಂದ ಮೊದಲು ಗಮನಕ್ರಿಯೆಯನ್ನು ಹೇಳಿರುವುದರಿಂದ, ಆ ಧಾತುವನ್ನೇ ಮತ್ತೆ ಪ್ರಯೋಗಿಸಬೇಕು.

(ಪ್ರಕ್ರಮಾಭೇದ ಶಬ್ದಪುನರುಕ್ತಿಯಲ್ಲ)

**ನ ಚೈವಂ ಶಬ್ದಪುನರುಕ್ತಿದೋಷಪ್ರಸಂಗಃ । ಯಥಾ ಅನ್ಯೇ ಮನ್ಯಂತೇ "ನೈಕಂ ಪದಂ ದ್ವಿಃ ಪ್ರಯೋಜ್ಯಂ ಪ್ರಾಯೇಣ" ಇತಿ । ತಯೋರ್ಭಿನ್ನವಿಷಯತ್ವಾತ್ । ಯಥೋದ್ದೇಶಂ ಪ್ರತಿನಿರ್ದೇಶೋಽಸ್ಯ ವಿಷಯಃ । ಉದ್ದೇಶ್ಯಪ್ರತಿನಿರ್ದೇಶ್ಯ ಭಾವಾಭಾವವಿಷಯಸ್ತು ಶಬ್ದಪುನರುಕ್ತಿದೋಷ ಇತಿ ಕುತಸ್ತಸ್ಯ ಪ್ರಸಂಗಃ**

**ಅನುವಾದ:**

ಹೀಗೆ ಪಾಠಪರಿವರ್ತನೆಯನ್ನು ಮಾಡಿದಾಗ ಶಬ್ದಪುನರುಕ್ತಿ ಎಂಬ ದೋಷದ ಪ್ರಸಂಗವೇನಿಲ್ಲ. (ಆ ದೋಷದ ಬಗೆಗೆ) ಬೇರೆಯವರಿಂತೆಂದಿದ್ದಾರೆ– "ಒಂದೇ ಪದವನ್ನು ಎರಡು ಬಾರಿ (ಒಂದೇ ವಾಕ್ಯದಲ್ಲಿ ಅಥವಾ ಪದ್ಯದಲ್ಲಿ)

ಪ್ರಯೋಗಿಸಬಾರದು." ಏಕೆಂದರೆ ಇವೆರಡರ ವಿಷಯಗಳು ಬೇರೆ ಬೇರೆ. ಉದ್ದೇಶ್ಯ-ಪ್ರತಿನಿರ್ದೇಶ್ಯ ಎಂಬ ಸಂದರ್ಭದಲ್ಲಿ (ಒಂದೇ ಧಾತುವನ್ನು ಮತ್ತೆ ಉಪಯೋಗಿಸಬೇಕು ಎಂದು ನಾವು ಹೇಳುವ ಈ) ನಿಯಮದ ಕ್ಷೇತ್ರ. ಉದ್ದೇಶ್ಯ-ಪ್ರತಿನಿರ್ದೇಶ್ಯಭಾವವಿಲ್ಲದ ಸಂದರ್ಭದಲ್ಲಿ (ಒಂದೇ ಪದವನ್ನು ಮತ್ತೆ ಬಳಸಬಾರದು ಎಂಬ) ಶಬ್ದಪುನರುಕ್ತಿದೋಷದ ಕ್ಷೇತ್ರ. ಹೀಗಿರುವಾಗ ಪ್ರಸ್ತುತ ಉದಾಹರಣೆಯಲ್ಲಿ (ನಾಥೇ ನಿಶಾಯಾ.... ಎಂಬಲ್ಲಿ ಗತಾಪಿ ಎಂಬ ಪಾಠಪರಿವರ್ತನೆಯನ್ನು ಮಾಡಿದರೂ) ಶಬ್ದಪುನರುಕ್ತಿದೋಷದ ಪ್ರಸಂಗವೆಲ್ಲಿದೆ?

**ವಿವರಣೆ:**

"ನೈಕಂ ಪದಂ ದ್ವಿಃ ಪ್ರಯೋಜ್ಯಂ ಪ್ರಾಯೇಣ" ಎಂಬುದು ವಾಮನನ ಕಾವ್ಯಾಲಂಕಾರ ಸೂತ್ರ (೫.೧.೧). ಒಂದು ವಾಕ್ಯದಲ್ಲಿ ಒಂದು ಪದವನ್ನು ಮತ್ತೆ ಮತ್ತೆ ಬಳಸಿದರೆ ಕವಿಯ ಶಬ್ದದಾರಿದ್ರ್ಯ ತೋರಿಬರುತ್ತದೆ. ಆದ್ದರಿಂದ ಬೇರೆ ಶಬ್ದವನ್ನು ಬಳಸಬೇಕು ಎಂದು ಆ ಸೂತ್ರದ ಅಭಿಪ್ರಾಯ. ಆದರೆ ಉದ್ದೇಶ್ಯ-ಪ್ರತಿನಿರ್ದೇಶ್ಯಭಾವವಿದ್ದಾಗ ಒಂದೇ ಶಬ್ದವನ್ನು ಮತ್ತೆ ಬಳಸುವುದು ಸೂಕ್ತ ಎಂಬುದು ಮಹಿಮಭಟ್ಟನ ಅಭಿಪ್ರಾಯ.

**ವ್ರಜತಃ ಕ್ವ ತಾತ ವಜಸೀತಿ ಪರಿಚಯಗತಾರ್ಥಮಸ್ಫುಟಮ್ ।**
**ಧೈರ್ಯಮಭಿನದುದಿತಂ ಶಿಶುನಾ ಜನನೀನಿರ್ಭರ್ತ್ಸನವಿವೃದ್ಧಮನ್ಯುನಾ ॥**

**ಇತ್ಯತ್ರ ಶಿಶುನಾ ವ್ರಜತಿರೇವ ಪ್ರಯುಕ್ತೋ, ನ ವಜತಿಃ, ತತ್ರೈವ ಪರಿಚಯಗತಾರ್ಥತ್ವಾಸ್ಫುಟತ್ವ ಧೈರ್ಯಭೇದತ್ವಸಂಭವಾತ್ । ಕೇವಲಂ ಶಕ್ತಿವೈಕಲ್ಯಾದ್ ರೇಫೋಽನೇನ ನೋಚ್ಚರಿತ ಇತಿ ಪ್ರತ್ಯುದಾಹರಣಮೇತತ್ ।**

**ಅನುವಾದ:**

"ಅಪ್ಪ, ಎಲ್ಲಿಗೆ ಹೋಗುತ್ತಿರುವೆ? ಎಂದು ತಂದೆಯು ಹೊರಟಾಗ ಮಗು ತನಗೆ ತಿಳಿದುದನ್ನು ಅಸ್ಫುಟವಾಗಿ ಹೇಳಿತು. ತಾಯಿಯು ಬೈದುದಕ್ಕೆ ಮಗುವಿನ ಕೋಪ ಇನ್ನೂ ಹೆಚ್ಚಿತು. ಮಗುವಿನ ಮಾತು ತಂದೆಯ ಧೈರ್ಯವನ್ನು ಕುಂದಿಸಿತು."

ಈ ಪದ್ಯದಲ್ಲಿ ಮಗು ಉಪಯೋಗಿಸಿರುವುದು ವ್ರಜ್ ಎಂಬ ಧಾತುವೇ, ವಜ್ ಧಾತು ಅಲ್ಲ. ಏಕೆಂದರೆ ಅದರಲ್ಲೇ ಪರಿಚಯವುಳ್ಳ ಹೋಗುವುದು ಎಂಬ ಅರ್ಥವೂ ಅಸ್ಫುಟೋಚ್ಚಾರಣೆಯೂ, ಧೈರ್ಯಕೆಡಿಸುವಿಕೆಯೂ ಹೊಂದುತ್ತವೆ. ಕೇವಲ ಶಕ್ತಿಯ ಕೊರತೆಯಿಂದ ಮಗು ರೇಫವನ್ನು ಉಚ್ಚರಿಸಿಲ್ಲ. ಆದ್ದರಿಂದ ಇದು ಪ್ರತ್ಯುದಾಹರಣೆ.

**ವಿವರಣೆ:**

ಧಾತುಪಾಠದಲ್ಲಿ "ವಜ ವ್ರಜ ಗತೌ" ಎಂದು ಪಠಿಸಿರುವುದರಿಂದ ವಜತಿ ಎಂದರೂ ವ್ರಜತಿ ಎಂದರೂ ಒಂದೇ. ಮೊದಲು ವ್ರಜ್ ಧಾತುವನ್ನು ಶ್ಲೋಕದಲ್ಲಿ ಬಳಸಿ ಆಮೇಲೆ ವಜ್‌ಧಾತುವನ್ನು

ಹೇಳಿರುವುದರಿಂದ ಇದು ಪ್ರಕ್ರಮಭೇದ ಎಂದು ಆಕ್ಷೇಪಿಸಿದರೆ, ಗ್ರಂಥಕಾರನು ಇಲ್ಲಿ ಆ ದೋಷವಿಲ್ಲ ಎಂದು ಹೇಳಿದ್ದಾನೆ. ಮಗು ವ್ರಜಸಿ ಎಂಬುದನ್ನು ವಜಸಿ ಎಂದು ಉಚ್ಚರಿಸಿದೆ, ವಜ್ ಧಾತುವನ್ನು ಬಳಸಿಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು.

(ಸರ್ವನಾಮಪ್ರಕ್ರಮಭೇದ)

**ಸರ್ವನಾಮಪ್ರಕ್ರಮಭೇದೋ ಯಥಾ–**

**ತೇ ಹಿಮಾಲಯಮಾಮಂತ್ರ್ಯ ಪುನಃ ಪ್ರೇಕ್ಷ್ಯ ಚ ಶೂಲಿನಮ್ ।**
**ಸಿದ್ಧಂ ಚಾಸ್ಮೈ ನಿವೇದ್ಯಾರ್ಥಂ ತದ್ವಿಸೃಷ್ಟಾಃ ಖಮುದ್ಯಯುಃ ॥**

**ಅತ್ರ ಹಿ ಭಗವಂತಂ ಶೂಲಿನಂ ಪ್ರಕ್ರಾಂತಮ್ ಇದಮಾ ಪರಾಮೃಶ್ಯ ತೇನೈವೋಕ್ತರೀತ್ಯಾ ತತ್ಪರಾಮರ್ಶಃ ಕರ್ತುಂ ಯುಕ್ತಃ, ನ ತದಾ, ತಯೋರ್ದೇವದತ್ತಯಜ್ಞದತ್ತಶಬ್ದಯೋರಿವ ಭಿನ್ನಾರ್ಥತ್ವಾತ್ । ನ ಚಾಸೌ ಕೃತ ಇತಿ ಸರ್ವನಾಮಪ್ರಕ್ರಮಭೇದಃ ।**

**ಅನುವಾದ:**

ಸರ್ವನಾಮ ಪ್ರಕ್ರಮಭೇದಕ್ಕೆ ಉದಾಹರಣೆ–

"ಅವರು (ಸಪ್ತರ್ಷಿಗಳು) ಹಿಮಾಲಯನಿಂದ ಬೀಳ್ಕೊಡುಗೆಯನ್ನು ಪಡೆದು ಮತ್ತೆ ಶಿವನನ್ನು ಕಂಡು, ಇವನಿಗೂ ಕಾರ್ಯಸಿದ್ಧಿಯನ್ನು ತಿಳಿಸಿ ಅವನಿಂದ ಬೀಳ್ಕೊಡಲ್ಪಟ್ಟು ಆಕಾಶಕ್ಕೆ ತೆರಳಿದರು."

ಈ ಪದ್ಯದಲ್ಲಿ ಭಗವಾನ್ ಶಿವನನ್ನು ಮೊದಲು ಇದಮ್ ಶಬ್ದದಿಂದ (ಅಸ್ಮೈ ಎಂದು) ಪರಾಮರ್ಶಿಸಿರುವುದರಿಂದ ಮತ್ತೆ ಅದೇ ಶಬ್ದದಿಂದ ಪರಾಮರ್ಶಿಸುವುದು ಉಚಿತವಾಗಿತ್ತು. ತದ್ ಎಂಬ ಶಬ್ದದಿಂದ ಅಲ್ಲ. ಏಕೆಂದರೆ ಇದಮ್ ಮತ್ತು ತದ್ ಎಂಬ ಸರ್ವನಾಮಗಳಿಗೆ ದೇವದತ್ತ–ಯಜ್ಞದತ್ತ ಶಬ್ದಗಳಿಗಿರುವಂತೆ ಬೇರೆ ಬೇರೆ ಅರ್ಥಗಳಿವೆ. ಕವಿಯು ಹಾಗೆ ಮಾಡಿಲ್ಲ. ಆದ್ದರಿಂದ ಸರ್ವನಾಮಪ್ರಕ್ರಮಭೇದ ಎಂಬ ದೋಷ.

**ವಿವರಣೆ:**

ಇದಮ್, ಏತದ್, ಅದಸ್, ತದ್ ಎಂಬ ಸರ್ವನಾಮಗಳಿಗೆ ಅರ್ಥಭೇದವಿದೆ.

**ಇದಮಃ ಪ್ರತ್ಯಕ್ಷಗತಂ ಸಮೀಪತರವರ್ತಿ ಚೈತದೋ ರೂಪಮ್ ।**
**ಅದಸಸ್ತು ವಿಪ್ರಕೃಷ್ಟಂ ತದಿತಿ ಪರೋಕ್ಷೇ ವಿಜಾನೀಯಾತ್ ॥**

ಎಂದು ಈ ಭೇದವನ್ನು ವಿವರಿಸಲಾಗಿದೆ. ಎದುರಿಗಿರುವುದನ್ನು ಇದಮ್ ಶಬ್ದದಿಂದ, ಹೆಚ್ಚು ಹತ್ತಿರವಿರುವುದನ್ನು ಏತದ್ ಶಬ್ದದಿಂದ, ದೂರದಲ್ಲಿ ಕಾಣಿಸುವುದನ್ನು ಅದಸ್ ಶಬ್ದದಿಂದ, ಪರೋಕ್ಷವಾದುದನ್ನು ತದ್ ಶಬ್ದದಿಂದ ನಿರ್ದೇಶಿಸಬೇಕು.

**ನ ಚೈವಂ ಯುತ್ತದೋರಿದಮೇತದದಸಾಂ ಚ (ಅ)ಭಿನ್ನಾರ್ಥತ್ವೇಽಪಿ ಏತದ್ದೋಷವಿಷಯತ್ವ ಪ್ರಸಂಗಃ । ತೇಷಾಮ್ ಉಕ್ತಪ್ರಕಾರೇಣ ಸ್ವಭಾವತೋಽನ್ಯೋನ್ಯಾ–**

**ಪೇಕ್ಷಸಂಬಂಧೋಪಪಾದನಾತ್ । ತೇನೇದಮಾದಿಭಿಸ್ತ್ರಿಭಿಃ ತಸ್ಯ ಪರಾಮರ್ಶೋ, ನ ತದೇತಿ ಸ್ಥಿತಮ್ ।**

**ಅನುವಾದ:**

ಹೀಗೆ ಹೇಳಿದರೆ ಯದ್-ತದ್ ಎಂಬವು ಭಿನ್ನಾರ್ಥಗಳಾದರೂ, ಇದಮ್-ಏತದ್-ಅದಸ್ ಎಂಬವು ಅಭಿನ್ನಾರ್ಥ(?)ಗಳಾದರೂ ಅವುಗಳ ಪ್ರಯೋಗದಲ್ಲಿ ಈ ಪ್ರಕ್ರಮಭೇದವೆಂಬ ದೋಷದ ಪ್ರಸಕ್ತಿ ಬರುವುದಿಲ್ಲ. ಮೊದಲೇ ನಾವು ವಿವರಿಸಿರುವ ರೀತಿಯಲ್ಲಿ ಅವುಗಳಿಗೆ ಸ್ವಭಾವದಿಂದಲೇ ಪರಸ್ಪರಾಪೇಕ್ಷೆ ಇರುವ ಸಂಬಂಧವನ್ನು ಉಪಪಾದಿಸಲಾಗಿದೆ. ಆದ್ದರಿಂದ, (ಮೇಲೆ ಉದಾಹರಿಸಿದ ರುದತಾ..... ಎಂಬ ಪದ್ಯದಲ್ಲಿ) ಇದಮ್ ಇತ್ಯಾದಿ ಮೂರು ಸರ್ವನಾಮಗಳಲ್ಲಿ ಒಂದರಿಂದ ಪರಾಮರ್ಶವು ಯುಕ್ತ, ತದ್ ಎಂಬುದರಿಂದ ಪರಾಮರ್ಶವು ಸರಿಯಲ್ಲ ಎಂಬುದು ಸಿದ್ಧವಾಗುತ್ತದೆ.

**ವಿವರಣೆ:**

ಯದ್, ತದ್ ಎಂಬ ಎರಡು ಸರ್ವನಾಮಗಳ ಅರ್ಥ ಪರಸ್ಪರ ಭಿನ್ನ. ಆದರೂ ಯತ್ತದೋರ್ನಿತ್ಯಾಭಿಸಂಬಂಧಃ ಎಂಬ ನಿಯಮವಿರುವುದರಿಂದ ಅವು ಸಾಪೇಕ್ಷ. ಯದ್ ಎಂಬ ಶಬ್ದದಿಂದ ಪರಾಮೃಷ್ಟವಾದುದನ್ನು ತದ್ ಎಂಬುದರಿಂದ ಮತ್ತೆ ಪರಾಮರ್ಶಿಸಲೇಬೇಕು. ತದ್ ಎಂಬುದರ ಸ್ಥಾನದಲ್ಲಿ ಕದಾಚಿತ್ ಇದಮಾದಿಗಳ ಪ್ರಯೋಗವುಂಟು ಎಂದು ಹಿಂದೆ ಸೂಚಿಸಲಾಗಿದೆ. ಇದಮ್-ಏತದ್-ಅದಸ್ ಎಂಬವುಗಳ ಅರ್ಥದಲ್ಲಿ ಭೇದವಿದ್ದರೂ, ಸ್ಥೂಲದೃಷ್ಟಿಯಿಂದ ಅವುಗಳ ಅರ್ಥ ಸಮಾನ ಎಂದು ಗ್ರಂಥಕಾರನ ಅಭಿಪ್ರಾಯ.

(ಪ್ರತ್ಯಯಪ್ರಕ್ರಮಭೇದ)

**ಪ್ರತ್ಯಯಪ್ರಕ್ರಮಭೇದೋ ಯಥಾ**
**ರುದತಾ ಕುತ ಏವ ಸಾ ಪುನರ್ಭವತಾ ನಾನುಮೃತೇರವಾಪ್ಯತೇ ।**
**ಪರಲೋಕಜುಷಾಂ ಸ್ವಕರ್ಮಭಿರ್ಗತಯೋ ಭಿನ್ನಪಥಾಃ ಶರೀರಿಣಾಮ್ ॥**
**ಅತ್ರ ಹಿ "ಕುತ ಏವ ತು ಸಾನುರೋದನಾತ್" ಇತಿ ಯುಕ್ತಃ ಪಾಠಃ ।**
**ಯಥಾ ಚ-**
**ಯಶೋಽಧಿಗಂತುಂ ಸುಖಲಿಪ್ಸಯಾ ವಾ ಮನುಷ್ಯ ಸಂಖ್ಯಾಮತಿವರ್ತಿತುಂ ವಾ ।**
**ನಿರುತ್ಸುಕಾನಾಮಭಿಯೋಗಭಾಜಾಂ ಸಮುತ್ಸುಕೇವಾಂಕಮುಪೈತಿ ಸಿದ್ಧಿಃ ॥**

**ಅನುವಾದ:**

ಪ್ರತ್ಯಯಪ್ರಕ್ರಮಭೇದದ ಉದಾಹರಣೆ-

"ನೀನು ಅತ್ತರೆ ಅವಳು ಸಿಕ್ಕುವಳೆ? ನೀನು ಸತ್ತರೂ ಅವಳು ಮತ್ತೆ ನಿನಗೆ ಸಿಗುವುದಿಲ್ಲ. ಪರಲೋಕಕ್ಕೆ ಹೋದ ಆತ್ಮಗಳ ಗಮನವು ತಮ್ಮ ತಮ್ಮ ಕರ್ಮಕ್ಕೆ ಅನುಗುಣವಾಗಿ ಬೇರೆ ಬೇರೆ ದಾರಿಗಳಲ್ಲಿರುವುದು." ಇಲ್ಲಿ ಮೊದಲನೆಯ ಪಾದದಲ್ಲಿ "ಕುತ ಏವ ತು ಸಾನುರೋದನಾತ್" ಎಂಬ ಪಾಠವು ಉಚಿತ.

ಇನ್ನೊಂದು ಉದಾಹರಣೆ–

"ಯಶಸ್ಸನ್ನು ಪಡೆದುಕೊಳ್ಳಲು, ಅಥವಾ ಸುಖದ ಅಪೇಕ್ಷೆಯಿಂದ, ಅಥವಾ ಮನುಷ್ಯರ ಮಿತಿಯನ್ನು ದಾಟಿ ಹೋಗಲು ಕಾತರತೆ ಇಲ್ಲದೆ ಪ್ರಯತ್ನಶೀಲರಾದವರ ಮಡಿಲಿಗೆ ಲಕ್ಷ್ಮಿಯು ತಾನೇ ಉತ್ಸುಕಳಾದಂತೆ ಬಂದು ಸೇರುತ್ತಾಳೆ."

**ವಿವರಣೆ:**

ರುದತಾ.... ಎಂಬ ಪದ್ಯದಲ್ಲಿ ಮೊದಲು ಶತೃಪ್ರತ್ಯಯ, ಆಮೇಲೆ ಕ್ತಿನ್ ಪ್ರತ್ಯಯ (ಭಾವಾರ್ಥಕವಾಗಿ) ಪ್ರಯುಕ್ತವಾಗಿರುವುದರಿಂದ ದೋಷ. ಯಶೋಽಧಿಗಂತುಂ..... ಎಂಬ ಪದ್ಯದಲ್ಲಿ ಎರಡು ಬಾರಿ ತುಮುನ್ ಪ್ರತ್ಯಯ, ಮಧ್ಯದಲ್ಲಿ ಸನ್ನಂತ. ಹೀಗೆ ಪ್ರತ್ಯಯಪ್ರಕ್ರಮಭೇದ.

**ಇದಂ ಚಾಪರಮತ್ರ ಪ್ರಕ್ರಮಭೇದಾನುಷಂಗಿ ದೋಷಾಂತರಮಪ್ಯಾವಿರ್ಭವತಿ, ಯೋಽಯಂ ವಿಕಲ್ಪಾರ್ಥವೃತ್ತೇರ್ವಾಶಬ್ದಸ್ಯ ಸಮುಚ್ಚಯಾರ್ಥಸ್ಯೇವ ಚಶಬ್ದಸ್ಯ ಅವಿಷಯ ಏವ ಪ್ರಯೋಗ ಇತಿ ವಕ್ಷ್ಯತೇ । ತೇನ "ಯಶೋಽಧಿಗಂತುಂ ಸುಖಮೀಹಿತುಂ ವಾ" ಇತಿ ಯುಕ್ತಃ ಪಾಠಃ।**

**ಅನುವಾದ:**

ಈ ಪದ್ಯದಲ್ಲಿ ಪ್ರಕ್ರಮಭೇದಕ್ಕೆ ಸೇರಿಕೊಂಡಂತೆ ಇರುವ ಇನ್ನೊಂದು ದೋಷವೂ ಗೋಚರಿಸುತ್ತದೆ. ಅದೇನೆಂದರೆ ವಿಕಲ್ಪಾರ್ಥದಲ್ಲಿರುವ "ವಾ" ಎಂಬ ಶಬ್ದವನ್ನು ಸಮುಚ್ಚಯಾರ್ಥದಲ್ಲಿರುವ "ಚ" ಎಂಬ ಶಬ್ದದ ಅರ್ಥದಲ್ಲಿ ಪ್ರಯೋಗಿಸಿರುವುದು. ಇದು ಅಸ್ಥಾನದಲ್ಲಿ (ಅಯೋಗ್ಯವಾದ ಸಂದರ್ಭದಲ್ಲಿ) ಮಾಡಿರುವ ಪ್ರಯೋಗ ಎಂದು ಮುಂದೆ ಹೇಳಲಾಗುವುದು. ಆದ್ದರಿಂದ ಈ ಪದ್ಯದ ಮೊದಲನೆಯ ಪಾದ "ಯಶೋಽಧಿಗಂತುಂ ಸುಖಮೀಹಿತುಂ ವಾ" ಎಂದು ಇದ್ದರೆ ಯುಕ್ತವಾದ ಪಾಠವಾಗುತ್ತದೆ.

**ಪೃಥ್ವಿ ಸ್ಥಿರಾ ಭವ, ಭುಜಂಗಮ ಧಾರಯೈನಾಂ**
**ತ್ವಂ ಕೂರ್ಮರಾಜ ತದಿದಂ ದ್ವಿತಯಂ ದಧೀಥಾಃ ।**
**ದಿಕ್ಕುಂಜರಾಃ ಕುರುತ ತತ್ತ್ರಿತಯೇ ದಿಧೀರ್ಷಾಂ**
**ದೇವಃ ಕರೋತಿ ಹರಕಾರ್ಮುಕಮಾತತಜ್ಯಮ್ ॥**

**ಇತ್ಯತ್ರ ಪೃಥ್ವ್ಯಾವಿಷಯಃ ಪ್ರೈಷಲಕ್ಷಣೋಽರ್ಥಃ ಕವಿನಾ ವಕ್ತುಂ ಪ್ರಕ್ರಾಂತಃ । ತಸ್ಯ ಪ್ರತ್ಯಯಭೇದೇಽಪಿ ನಿರ್ವ್ಯೂಢತ್ವಾತ್ ಪ್ರೈಷಾರ್ಥಾನಾಂ ಪದಾನಾಮ್ ಉದ್ದೇಶ್ಯಪ್ರತಿ–ನಿರ್ದೇಶ್ಯಭಾವೇನೋಪಾದಾನಂ ನ ಕೃತಮಿತಿ ನೈತಾದೃಶಃ ಪ್ರತ್ಯಯಪ್ರಕ್ರಮಭೇದದೋಷಸ್ಯ ವಿಷಯೋಽವಗಂತವ್ಯಃ ।**

**ಅನುವಾದ:**

ಪೃಥ್ವಿ ಸ್ಥಿರಾ.... (ಈ ಪದ್ಯದಲ್ಲಿ ಅನುವಾದ ಹಿಂದೆ ಮಾಡಿದೆ) ಈ ಪದ್ಯದಲ್ಲಿ ಪೃಥ್ವೀ ಇತ್ಯಾದಿಗಳಿಗೆ ಪ್ರೇರಣೆಯನ್ನು ಕೊಡುವ ಅರ್ಥವನ್ನು ಪ್ರತಿಪಾದಿಸಲು

ಕವಿಯು ಆರಂಭಿಸಿದ್ದಾನೆ. ಪ್ರತ್ಯಯಗಳನ್ನು ಮತ್ತೆ ಮತ್ತೆ ಬದಲಾಯಿಸಿದ್ದರೂ ಪ್ರೇರಣಾರ್ಥವನ್ನು ಅವನು ನಿರ್ವಹಿಸಿದ್ದಾನೆ. ಪ್ರೇರಣಾರ್ಥದ ಪದಗಳನ್ನು ಉದ್ದೇಶ್ಯ-ಪ್ರತಿನಿರ್ದೇಶ್ಯಭಾವದಿಂದ ಇಲ್ಲಿ ಹೇಳಿಲ್ಲ. ಆದ್ದರಿಂದ ಈ ಪದ್ಯವು ಪ್ರತ್ಯಯಪ್ರಕ್ರಮಭೇದ ಎಂಬ ದೋಷಕ್ಕೆ ವಿಷಯವಲ್ಲ –ಎಂದು ಅರಿತುಕೊಳ್ಳಬೇಕು.

(ಇಂಥ ಪದ್ಯಗಳು ಯಾವುವೂ ದೋಷದ ಉದಾಹರಣೆಗಳಲ್ಲ ಎಂದು ತಿಳಿದುಕೊಳ್ಳಬೇಕು.)

(ಪರ್ಯಾಯಪ್ರಕ್ರಮಭೇದ)

**ಪರ್ಯಾಯಪ್ರಕ್ರಮಭೇದೋ ಯಥಾ–**

**ಮಹೀಭೃತಃ ಪುತ್ರವತೋಽಪಿ ದೃಷ್ಟಿಃ ತಸ್ಮಿನ್ನಪತ್ಯೇ ನ ಜಗಾಮ ತೃಪ್ತಿಮ್ ।**
**ಅನಂತಪುಷ್ಪಸ್ಯ ಮಧೋರ್ಹಿ ಚೂತೇ ದ್ವಿರೇಫಮಾಲಾ ಸವಿಶೇಷಸಂಗಾ ॥**

**ಇತ್ಯತ್ರ ಹಿ ಪುತ್ರಾಪತ್ಯಶಬ್ದಾವೇವ ಪರ್ಯಾಯತ್ವಾತ್ ಪ್ರಕ್ರಮಭೇದವಿಷಯೌ, ನ ಪುಷ್ಪಚೂತಶಬ್ದೌ, ತಯೋಃ ಸಾಮಾನ್ಯವಿಶೇಷವಚನತ್ವಾತ್ ಇತಿ ಅಪತ್ಯವತೋಽಪೀತಿ ಯುಕ್ತಃ ಪಾಠಃ ।**

**ಅನುವಾದ:**

ಪರ್ಯಾಯಪ್ರಕ್ರಮಭೇದದ ಉದಾಹರಣೆ–

"ಮಕ್ಕಳನ್ನು ಹೊಂದಿದ್ದರೂ ಪರ್ವತರಾಜ ಹಿಮವಂತನ ದೃಷ್ಟಿಯು ಆ ಮಗುವಿನಲ್ಲಿ ತೃಪ್ತಿಯನ್ನು ಪಡೆಯುತ್ತಿರಲಿಲ್ಲ. ಅನಂತಪುಷ್ಪಗಳನ್ನು ಹೊಂದಿರುವ ವಸಂತಕಾಲದಲ್ಲೂ ಭ್ರಮರಗಳ ಸಾಲು ಚೂತಪುಷ್ಪದಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತದೆಯಷ್ಟೆ. ಈ ಪದ್ಯದಲ್ಲಿ ಪುತ್ರ-ಅಪತ್ಯ ಎಂಬ ಶಬ್ದಗಳು ಪರ್ಯಾಯಪದಗಳಾದುದರಿಂದ ಪರ್ಯಾಯಪ್ರಕ್ರಮಭೇದ ಎಂಬುದಕ್ಕೆ ಉದಾಹರಣೆ. ಪುಷ್ಪ-ಚೂತ ಎಂಬ ಶಬ್ದಗಳು ಹಾಗಲ್ಲ, ಏಕೆಂದರೆ ಅವು ಸಾಮಾನ್ಯ ಮತ್ತು ವಿಶೇಷವಾಚಕಗಳು.

ಆದ್ದರಿಂದ "ಮಹೀಭೃತೋಽಪತ್ಯವತೋಽಪಿ ದೃಷ್ಟಿಃ" ಎಂಬ ಪಾಠವು ಉಚಿತ.

**ಯಥಾ ಚ–**
**ಉದನ್ವಚ್ಛಿನ್ನಾ ಭೂಃ ಸ ಚ ನಿಧಿರಪಾಂ ಯೋಜನಶತಮ್ ।**
**ಅತ್ರ ಹಿ "ಮಿತಾ ಭೂಃ ಪತ್ಯಾಪಾಂ ಸ ಚ ಪತಿರಪಾಂ**
**ಯೋಜನಶತಮ್" ಇತಿ ಯುಕ್ತಃ ಪಾಠಃ । ಏವಂ ಚ**
**ಛಿದಿಕ್ರಿಯಾಕರ್ತುರುದನ್ವತ ಉಕ್ತನಯೇನ ವಿಧೇಯ–**
**ತಯಾ ಪ್ರಾಧಾನ್ಯಾತ್ ಸಮಾಸಾನುಪಪತ್ತಿದೋಷೋಽಪಿ ಪರಿಹೃತೋ ಭವತಿ।**

**ಯಥಾ ವಾ–**
**ವರಂ ಕೃತಧ್ವಸ್ತಗುಣಾದತ್ಯಂತಮಗುಣಃ ಪುಮಾನ್ ।**
**ಪ್ರಕೃತ್ಯಾ ಹ್ಯಮಣಿಃ ಶ್ರೇಯಾನ್ ನಾಲಂಕಾರಶ್ಚ್ಯುತೋಪಲಃ ॥**

**ಅನುವಾದ:**

ಇನ್ನೊಂದು ಉದಾಹರಣೆ–

"ಕಡಲಿನಿಂದ ಭೂಮಿಯು ಸೀಮಿತವಾಗಿದೆ. ಆ ಜಲನಿಧಿಯು ನೂರು ಯೋಜನಗಳಷ್ಟು (ವಿಶಾಲವಾದುದು)."

ಇಲ್ಲಿ "ಮಿತಾ ಭೂಃ ಪತ್ಯಾಪಾಂ ಸ ಚ ಪತಿರಪಾಂ ಯೋಜನ ಶತಮ್" ಎಂಬ ಪಾಠವು ಯುಕ್ತವಾದೀತು. ಹೀಗೆ ಬದಲಾಯಿಸಿದಾಗ ಭೇದನಕ್ರಿಯೆಯ ಕರ್ತೃವಾದ ಕಡಲಿಗೆ ನಾವು ವಿವರಿಸಿದ ರೀತಿಯಿಂದ ಪ್ರಾಧಾನ್ಯವು ಬರುವುದರಿಂದ ಸಮಾಸವನ್ನು ಮಾಡಿದುದು ತಪ್ಪು ಎಂಬ ದೋಷವೂ ಇಲ್ಲವಾಗುವುದು.

ಮತ್ತೊಂದು ಉದಾಹರಣೆ–

"ಹುಟ್ಟಿ ಧ್ವಂಸವಾಗುವ ಗುಣವನ್ನುಳ್ಳವನಿಗಿಂತ ಎಂದೂ ಗುಣವನ್ನೇ ಹೊಂದಿಲ್ಲದ ಮನುಷ್ಯನೇ ಲೇಸು. ಹೇಗೆಂದರೆ, ವಜ್ರವೇ ಇಲ್ಲದ ಆಭರಣವು ಮೇಲು, ವಜ್ರ ಕಳಚಿಹೋದ ಆಭರಣವಲ್ಲ."

**ವಿವರಣೆ:**

ಅಮಣಿಃ ಎಂದು ಮೊದಲು ವಜ್ರವಾಚಕವಾದ ಮಣಿಶಬ್ದವನ್ನು ಪ್ರಯೋಗಿಸಿ, ಆಮೇಲೆ ಆ ಅರ್ಥದಲ್ಲಿ ಉಪಲ ಎಂಬ ಪದವನ್ನು ಬಳಸಿರುವುದರಿಂದ ದೋಷ.

**ಏವಂ**
**ಖಮಿವ ಜಲಂ ಜಲಮಿವ ಖಂ ಹಂಸ ಇವ ಶಶೀ ಶಶೀವ ಕಲಹಂಸಃ ।**
**ಕುಮುದಾಕಾರಾಸ್ತಾರಾಸ್ತಾರಾಕಾರಾಣಿ ಕುಮುದಾನಿ ॥**
**ಇತ್ಯಾದಾವಪಿ ದ್ರಷ್ಟವ್ಯಮ್ ।**

(ವಿಭಕ್ತಿಪ್ರಕ್ರಮಭೇದ)

**ವಿಭಕ್ತಿಪ್ರಕ್ರಮಭೇದೋ ಯಥಾ–**
**ಧೈರ್ಯೇಣ ವಿಶ್ವಾಸ್ಯತಯಾ ಮಹರ್ಷೇಃ ತೀವ್ರಾದರಾತಿಪ್ರಭವಾಚ್ಚ ಮನ್ಯೋಃ ।**
**ವೀರ್ಯಂ ಚ ವಿದ್ವತ್ಸು ಸುತೇ ಮಘೋನಃ ಸ ತೇಷು ನ ಸ್ಥಾನಮವಾಪ ಶೋಕಃ ॥**

**ಅನುವಾದ:**

ಹೀಗೆ–

ಬಾನಿನಂತೆ ನೀರು, ನೀರಿನಂತೆ ಬಾನು
ಅಂಚೆಯಂತೆ ಚಂದ್ರ, ಚಂದ್ರನಂತೆ ಅಂಚೆ

ನೈದಿಲೆಗಳಂತೆ ಚುಕ್ಕಿಗಳು, ಚುಕ್ಕಿಗಳಂತೆ ನೈದಿಲೆಗಳು

ಇತ್ಯಾದಿಗಳಲ್ಲೂ ತಿಳಿದುಕೊಳ್ಳಬೇಕು.

ವಿಭಕ್ತಿಪ್ರಕ್ರಮಭೇದದ ಉದಾಹರಣೆ– ಧೈರ್ಯದಿಂದ, ಮಹರ್ಷಿಯ ವಿಶ್ವಾಸಾರ್ಹತೆಯಿಂದ, ಶತ್ರುವಿನಿಂದ ಹುಟ್ಟಿದ ತೀವ್ರಕ್ರೋಧದ ದೆಸೆಯಿಂದ ಇಂದ್ರಪುತ್ರ ಅರ್ಜುನನ ಶಕ್ತಿಯನ್ನು ತಿಳಿದುಕೊಂಡಿದ್ದ ಪಾಂಡವರಲ್ಲಿ ಶೋಕವು ಮನೆಮಾಡಲಿಲ್ಲ.

**ವಿವರಣೆ:**

ಖಮಿವ ಜಲಂ.... ಎಂಬ ಶ್ಲೋಕದಲ್ಲಿ ಹಂಸ ಎಂದು ಮೊದಲು ಹೇಳಿ ಆಮೇಲೆ ಕಲಹಂಸ ಎಂಬ ಶಬ್ದವನ್ನು ಪ್ರಯೋಗಿಸಿರುವುದರಿಂದ ಪರ್ಯಾಯಪ್ರಕ್ರಮಭೇದ. ಧೈರ್ಯೇಣ..... ಎಂಬ ಪದ್ಯದಲ್ಲಿ ಮೊದಲು ತೃತೀಯಾವಿಭಕ್ತಿಯನ್ನೂ ಆಮೇಲೆ ಪಂಚಮೀ ವಿಭಕ್ತಿಯನ್ನೂ ಬಳಸಿರುವುದರಿಂದ ವಿಭಕ್ತಿಪ್ರಕ್ರಮಭೇದ.

**ನ ಚಾಯಂ ಸಮುಚ್ಚಯಸ್ಯ ವಿಷಯಃ । ಸ ಹಿ ತುಲ್ಯಕಕ್ಷ್ಯತ್ವಾದಭಿನ್ನವಿಭಕ್ತಿಕಾನೇಕಾರ್ಥವಿಷಯೋ ವೇದಿತವ್ಯಃ । ಯದುಕ್ತಮ್–**

**ತುಲ್ಯಕಕ್ಷ್ಯತಯಾ ಯತ್ರ ಪದಾರ್ಥಾಃ ಸ್ಯುರ್ವಿವಕ್ಷಿತಾಃ ।**
**ಸಮುಚ್ಚಯೋ ವಿಕಲ್ಪೋ ವಾ ತತ್ರೇಷ್ಟೌ ದುಷ್ಟತಾನ್ಯಥಾ ॥**

**ಇತಿ । ನ ಚಾತ್ರ ತಥಾವಿಧೋಽರ್ಥಸ್ಸಮಸ್ತೀತಿ ಸಮುಚ್ಚಯಾರ್ಥಯೋಶ್ಚಶಬ್ದಯೋರಪಿ ಪ್ರಯೋಗೋಽನುಪಪನ್ನಃ । ತೇನಾತ್ರ "ತೀವ್ರೇಣ ವಿದ್ವೇಷಿಭುವಾಗಸಾ ಚ" "ವಿದ್ವತ್ಸು ವೀರ್ಯಂ ತನಯೇ ಮಘೋನಃ" ಇತಿ ಪಾಠೌ ವಿಪರಿಣಮಯಿತವ್ಯೌ ।**

**ಅನುವಾದ:**

ಇದು ಸಮುಚ್ಚಯದ ವಿಷಯವಲ್ಲ. ಅನೇಕ ಪದಾರ್ಥಗಳನ್ನು ಎಲ್ಲಿ ಸಮಕಕ್ಷ್ಯವಾಗಿ ವಕ್ತೃ ವಿವಕ್ಷಿಸುವನೋ ಅಲ್ಲಿ ಸಮುಚ್ಚಯ– ಅಥವಾ ವಿಕಲ್ಪ ಸಂಭವಿಸುತ್ತದೆ. ಹಾಗಿಲ್ಲದ ಸಂದರ್ಭದಲ್ಲಿ ಚಶಬ್ದದ ಪ್ರಯೋಗ ದುಷ್ಟವಾಗುತ್ತದೆ. ಪ್ರಸ್ತುತ ಪದ್ಯದಲ್ಲಿ ಅಂಥ ಅರ್ಥ ಇಲ್ಲದುದರಿಂದ ಸಮುಚ್ಚಯಾರ್ಥಕವಾದ ಎರಡು ಚ ಶಬ್ದಗಳನ್ನು ಪ್ರಯೋಗಿಸಿರುವುದೂ ಸರಿಯಲ್ಲ. ಆದ್ದರಿಂದ ಇಲ್ಲಿ "ತೀವ್ರೇಣ ವಿದ್ವೇಷಿಭುವಾಗಸಾ ಚ" ಮತ್ತು "ವಿದ್ವತ್ಸು ವೀರ್ಯಂ ತನಯೇ ಮಘೋನಃ" ಎಂದು ಪಾಠವನ್ನು ಬದಲಾಯಿಸಬೇಕು.

**ಬಭೂವ ಭಸ್ಮೈವ ಸಿತಾಂಗರಾಗಃ ಕಪಾಲಮೇವಾಮಲಶೇಖರಶ್ರೀಃ ।**
**ಉಪಾಂತಭಾಗೇಷು ಚ ರೋಚನಾಂಕಃ ಸಿಂಹಾಜಿನಸ್ಯೈವ ದುಕೂಲಭಾವಃ ॥**

**ಅತ್ರಾಪಿ "ಮೃಗೇಂದ್ರಚರ್ಮೈವ ದುಕೂಲಮಸ್ಯ" ಇತಿ ಯುಕ್ತಃ ಪಾಠಃ । ಅಸ್ಮಿಂಶ್ಚ ಪಾಠೇ ರೋಚನಾಂಕತ್ವಸ್ಯ ದ್ರವ್ಯಧರ್ಮತ್ವಾತ್ ದುಕೂಲಭಾವವಿಶೇಷಣತ್ವಾನುಪಪತ್ತಿ ಪರಿಹಾರಾದ್ ಗುಣಾಂತರಲಾಭಃ ।**

(ಉಪಸರ್ಗಪ್ರಕ್ರಮಭೇದ)

**ಉಪಸರ್ಗಪ್ರಕ್ರಮಭೇದೋ ಯಥಾ–**
**ವಿಪದೋಽಭಿಭವಂತ್ಯವಿಕ್ರಮಂ ರಹಯತ್ಯಾಪದುಪೇತಮಾಯತಿಃ ।**
**ನಿಯತಾ ಲಘುತಾ ನಿರಾಯತೇರಗರೀಯಾನ್ನ ಪದಂ ನೃಪಶ್ರಿಯಃ ॥ ಇತಿ ।**
**ತೇನ "ತದುಪೇತಂ ವಿಜಹಾತಿ ಚಾಯತಿಃ" ಇತಿ ಯುಕ್ತಃ ಪಾಠಃ ।**

**ಅನುವಾದ:**

"(ಶಿವನಿಗೆ) ಭಸ್ಮವೇ ಬಿಳಿಯ ಅಂಗರಾಗವಾಯಿತು. ಕಪಾಲವೇ ವಿಮಲವಾದ ಶಿರೋಭೂಷಣವಾಯಿತು. ಸಿಂಹದ ಚರ್ಮವೇ ಅಲ್ಲಲ್ಲಿ ರೋಚನಾಂಕವನ್ನುಳ್ಳ ದುಕೂಲವೂ ಆಯಿತು."

ಈ ಪದ್ಯದಲ್ಲೂ (ಕೊನೆಯ ಪಾದದಲ್ಲಿ) "ಮೃಗೇಂದ್ರಚರ್ಮೈವ ದುಕೂಲಮಸ್ಯ" ಎಂಬ ಪಾಠವು ಲೇಸು. ಈ ಹೊಸಪಾಠದಲ್ಲಿ ರೋಚನಾಂಕವು ದ್ರವ್ಯಧರ್ಮವಾಗಿರುವುದರಿಂದ, ದುಕೂಲಭಾವಕ್ಕೆ ವಿಶೇಷಣವಾಗುವುದರಲ್ಲಿರುವ ಅನುಪಪತ್ತಿಯ ಪರಿಹಾರವೂ ಆಗುವುದರಿಂದ ಇನ್ನೊಂದು ಗುಣವೂ ಸಿಕ್ಕುತ್ತದೆ.

ಉಪಸರ್ಗದ ಪ್ರಕ್ರಮಭೇದಕ್ಕೆ ಉದಾಹರಣೆ–

"ಪರಾಕ್ರಮವಿಲ್ಲದವನನ್ನು ವಿಪತ್ತುಗಳು ಸೋಲಿಸುತ್ತವೆ. ಆಪತ್ತಿಗೆ ಈಡಾದವನನ್ನು ಭವಿಷ್ಯವೂ ತೊರೆಯುತ್ತದೆ. ಭವಿಷ್ಯವಿಲ್ಲದವನಿಗೆ ಲಘುತ್ವ ಕಟ್ಟಿಟ್ಟ ಬುತ್ತಿ. ಗುರುತ್ವವಿಲ್ಲದವನು ರಾಜಲಕ್ಷ್ಮಿಗೆ ತಕ್ಕವನಾಗಲಾರ."

ಈ ಪದ್ಯದಲ್ಲಿ ಎರಡನೆಯ ಪಾದದಲ್ಲಿ "ತದುಪೇತಂ ವಿಜಹಾತಿ ಚಾಯತಿಃ" ಎಂಬ ಪಾಠವು ಲೇಸು.

**ವಿವರಣೆ:**

ವಿಪತ್ ಮತ್ತು ಆಪತ್ ಎಂಬ ಎರಡು ಪದಗಳಿಗೂ ಒಂದೇ ಅರ್ಥ. ಆದರೂ ನಿಷ್ಕಾರಣವಾಗಿ ಉಪಸರ್ಗದ ಬದಲಾವಣೆ ಸಲ್ಲದು. ಆದ್ದರಿಂದ ದೋಷ.

(ವಚನಪ್ರಕ್ರಮಭೇದ)

**ವಚನಪ್ರಕ್ರಮಭೇದೋ ಯಥಾ–**
**ಕಾಚಿತ್‌ಕೀರ್ಣಾ ರಜೋಭಿರ್ದಿವಮನುವಿದಧೌ ಮಂದವಕ್ತ್ರೇಂದುಲಕ್ಷ್ಮೀ–**
**ರಶ್ರೀಕಾಃ ಕಾಶ್ಚಿದಂತರ್ದಿಶ ಇವ ದಧಿರೇ ದಾಹಮುದ್ಭ್ರಾಂತಸತ್ತ್ವಾಃ ।**
**ಭ್ರೇಮುರ್ವಾತ್ಯಾ ಇವಾನ್ಯಾಃ ಪ್ರತಿಪದಮಪರಾ ಭೂಮಿವತ್ಕಂಪಮಾನಾಃ**
**ಪ್ರಸ್ಥಾನೇ ಪಾರ್ಥಿವಾನಾಮಶಿವಮಿತಿ ಪುರೋ ಭಾವಿ ನಾರ್ಯಃ ಶಶಂಸುಃ ॥**
**ಅತ್ರ ಹಿ "ಕಾಶ್ಚಿತ್ ಕೀರ್ಣಾ ರಜೋಭಿರ್ದಿವಮನುವಿದಧುರ್ಮಂದ–**
**ವಕ್ತ್ರೇಂದುಶೋಭಾಃ" ಇತಿ ಯುಕ್ತಃ ಪಾಠಃ ।**

**ಯಥಾ ಚ– "ಅಭಿವಾಂಛಿತಂ ಪ್ರಸಿಧ್ಯತು ಭಗವತಿ ಯುಷ್ಮತ್– ಪ್ರಸಾದೇನ" ಇತಿ । ಅತ್ರ ಹಿ ಏಕವಚನೇನ ಭಗವತೀಮೇಕಾಂ ಸಂಬೋಧ್ಯ ಪ್ರಸಾದಸಂಬಂಧಿತಯಾ ಯಸ್ತಸ್ಯಾ ಬಹುತ್ವನಿರ್ದೇಶಃ, ಸ ವಚನಪ್ರಕ್ರಮಭೇದೋ ದೋಷಃ । ತೇನಾತ್ರ "ಭವತೀಪ್ರಸಾ–ದೇನ" ಇತಿ ಯುಕ್ತಃ ಪಾಠಃ ।**

**ಅನುವಾದ:**

ವಚನಪ್ರಕ್ರಮಭೇದದ ಉದಾಹರಣೆ–

"ಒಬ್ಬಳು ರಜಸ್ವಲೆಯಾಗಿ, ಕುಂದಿದ ಮುಖಕಾಂತಿಯನ್ನು ಹೊಂದಿ ಧೂಳಿನಿಂದ ಆವೃತವಾದ ಆಕಾಶವನ್ನು ಅನುಸರಿಸಿದಳು. ಮತ್ತೆ ಕೆಲವರು ಸ್ತ್ರೀಯರು ಬುದ್ಧಿಭ್ರಾಂತರಾಗಿ ನಿಷ್ಪ್ರಭರಾಗಿ ಅಂತರ್ದಿಕ್ಕುಗಳಂತೆ ದಾಹಕ್ಕೆ ಈಡಾದರು. ಇನ್ನೂ ಕೆಲವರು ಸ್ತ್ರೀಯರು ಒಂದೊಂದು ಹೆಜ್ಜೆಗೂ ಭೂಮಿಯಂತೆ ನಡುಗುತ್ತಾ, ಸುಂಟರಗಾಳಿಯಂತೆ ಎಲ್ಲೆಲ್ಲೋ ಚಲಿಸುತ್ತಿದ್ದರು. ಹೀಗೆ ದಂಡಯಾತ್ರೆಗೆ ಹೊರಟ ವೇಳೆಯಲ್ಲಿ ರಾಜರಿಗೆ ಮುಂದೆ ಉಂಟಾಗಲಿದ್ದ ಅಮಂಗಳವನ್ನು ನಾರಿಯರು ಸೂಚಿಸುತ್ತಿದ್ದರು."

ಈ ಪದ್ಯದಲ್ಲಿ (ಮೊದಲನೆಯ ಪಾದದ) ಪಾಠವನ್ನು "ಕಾಶ್ಚಿತ್ ಕೀರ್ಣಾ ರಜೋಭಿರ್ದಿವಮನುವಿದಧುರ್ಮಂದವಕ್ತ್ರೇಂದುಶೋಭಾಃ" ಎಂದು ಮಾಡಿದರೆ ಯುಕ್ತವಾಗುವುದು.

ಇನ್ನೊಂದು ಉದಾಹರಣೆ– "ಭಗವತಿ, ನಿಮ್ಮ ಅನುಗ್ರಹದಿಂದ ನನ್ನ ಅಭೀಷ್ಟವು ನೆರವೇರಲಿ." ಇಲ್ಲಿ ಭಗವತಿಯೊಬ್ಬಳನ್ನು ಏಕವಚನದಿಂದ ಸಂಬೋಧಿಸಿ, ಆಮೇಲೆ ಅನುಗ್ರಹಸಂಬಂಧವಾಗಿ ಅವಳಿಗೆ (ಯುಷ್ಮತ್ ಎಂಬ ಶಬ್ದದಿಂದ) ಬಹುತ್ವವನ್ನು ಹೇಳಲಾಗಿದೆ. ಅದು ವಚನಪ್ರಕ್ರಮಭೇದವೆಂಬ ದೋಷ. ಆದ್ದರಿಂದ "ಭವತೀಪ್ರಸಾದೇನ" ಎಂಬುದು ಯುಕ್ತವಾದ ಪಾಠ.

(ತಿಙಂತಪ್ರಕ್ರಮಭೇದ)

**ತಿಙಂತಪ್ರಕ್ರಮಭೇದೋ ಯಥಾ ಅತ್ರೈವ "ಅಪರಾ ಭೂಮಿವತ್ಕಂಪಮಾನಾಃ" ಇತಿ । ಅತ್ರ ಹಿ ಕಂಪಮಾಪುರಿತಿ ಉಚಿತಃ ಪಾಠಃ । ಏಕಸ್ಯಾಃ ಕ್ರಿಯಾಯಾಃ ಪ್ರಾಧಾನ್ಯಾಭಾವಾದಿತ್ಯುಕ್ತಮ್ ।**

(ಕಾಲವಿಶೇಷಪ್ರಕ್ರಮಭೇದ)

**ಕಾಲವಿಶೇಷಪ್ರಕ್ರಮಭೇದೋ ಯಥಾ–**

**ಸಸ್ನುಃ ಪಯಃ ಪಪುರನೇನಿಜುರಂಬರಾಣಿ ಜಕ್ಷುರ್ಬಿಸಾನ್ ಧೃತವಿಕಾಸಿಬಿಸಪ್ರಸೂನಾಃ ।**
**ಸೈನ್ಯಾಃ ಶ್ರಿಯಾಮನುಪಭೋಗನಿರರ್ಥಕತ್ವದೋಷಪ್ರವಾದಮಮೃಜನ್ ನಗನಿಮ್ನಗಾನಾಮ್ ॥**

**ಅತ್ರ ಹಿ ಸ್ನಾನಾದೌ ಯಃ ಕಾಲವಿಶೇಷಃ ಪ್ರಕ್ರಾಂತಃ, ಸ ನೇಜನಾದೌ ಭೇದಂ ನೀತ ಇತಿ ಪ್ರಕ್ರಮಭೇದೋ ದೋಷಃ ।**

**ಅನುವಾದ:**

ತಿಙಂತ (ಕ್ರಿಯಾಪದ)ದಲ್ಲಿ ಉಂಟಾಗುವ ಪ್ರಕ್ರಮಭೇದಕ್ಕೆ ಉದಾಹರಣೆ (ಕಾಚಿತ್‌ಕೀರ್ಣಾ..... ಎಂಬ) ಈ ಪದ್ಯದಲ್ಲೇ "ಅಪರಾ ಭೂಮಿವತ್‌ಕಂಪಮಾನಾಃ" ಎಂಬಲ್ಲಿದೆ. ಇಲ್ಲಿ "ಕಂಪಮಾಪುಃ" ಎಂಬ ಪಾಠವು ಯುಕ್ತ. ಏಕೆಂದರೆ ಪದ್ಯದಲ್ಲಿ ಕೇವಲ ಒಂದು ಕ್ರಿಯೆಗೆ ಪ್ರಾಧಾನ್ಯವನ್ನು ಕೊಟ್ಟಿಲ್ಲ.

ಕಾಲವಿಶೇಷದ ಪ್ರಕ್ರಮಭೇದಕ್ಕೆ ಉದಾಹರಣೆ–

ಸೈನಿಕರು ಅಲ್ಲಿ ಸ್ನಾನಮಾಡಿದರು, ನೀರನ್ನು ಕುಡಿದರು, ಬಟ್ಟೆಗಳನ್ನು ಒಗೆದುಕೊಂಡರು, ತಾವರೆ ದಂಟುಗಳನ್ನು ಜಗಿದರು, ಕಮಲದ ಹೂವುಗಳನ್ನು ಹಿಡಿದುಕೊಂಡರು. ಬೆಟ್ಟದ ನದಿಗಳು ಯಾರ ಉಪಯೋಗಕ್ಕೂ ಬಾರದೆ ವ್ಯರ್ಥವಾಗಿವೆ ಎಂಬ ಅಪವಾದವನ್ನೂ ಆ ಸೈನಿಕರು ಅಳಿಸಿಹಾಕಿದರು.

ಇಲ್ಲಿ ಸ್ನಾನಾದಿಕ್ರಿಯೆಗಳಲ್ಲಿ ಯಾವ ಕಾಲವಿಶೇಷವನ್ನು ಸೂಚಿಸಲು ಕವಿ ಆರಂಭಿಸಿದನೋ ಅದನ್ನು ಬಟ್ಟೆಗಳನ್ನು ಒಗೆಯುವುದರಲ್ಲಿ ಬದಲಾಯಿಸಲಾಗಿದೆ. ಆದ್ದರಿಂದ ಪ್ರಕ್ರಮಭೇದ ಎಂಬ ದೋಷ.

> ***ತೇನ– ಸಸ್ನುಃ ಪಯಾಂಸಿ ಪಪುರಂಬರಮಾನಿನೇಜು–***
> **ರ್ಜಕ್ಷುರ್ಬಿಸಾನ್ ಧೃತವಿಕಾಸಿಬಿಸಪ್ರಸೂನಾಃ ।**
> **ಸೈನ್ಯಾಃ ಶ್ರಿಯಾಮನುಪಭೋಗನಿರರ್ಥಕತ್ವ–**
> **ದೋಷಂ ವನೇಷು ಸರಿತಾಂ ಪ್ರಸಭಂ ಮಮಾರ್ಜುಃ ॥**
> **ಇತಿ ಯುಕ್ತಃ ಪಾಠಃ ।**
>
> **ಯದಿ ವಾ ದೋಷೋಽಯಮ್ ಅನುದ್ಭಾವನೀಯ ಏವ ।**
> **ಕಾಲವಿಶೇಷಸ್ಯ ವಿವಕ್ಷಾಮಾತ್ರಭಾವಿತಯಾ**
> **ಅನವಸ್ಥಿತತ್ವಾತ್ । ಯದಾಹುಃ**
> **"ಪರೋಕ್ಷೇ ಚ ಲೋಕವಿಜ್ಞಾತೇ ಪ್ರಯೋಕ್ತುರ್ದರ್ಶನಾ–**
> **ವಿಷಯೇ ದರ್ಶನಯೋಗ್ಯತ್ವಾತ್ ಪರೋಕ್ಷಸ್ಯ**
> **ಅವಿವಕ್ಷಾಯಾಂ ಲಙ್ ಭವತ್ಯೇವ । ಅಜಯಜ್ಜಯಂತೋ**
> **ಭೂತಾನಿ ಇತಿ । ಸತೋಽಪಿ ಚಾಸತೋ ವಾಪಿ ಚ**
> **ಅವಿವಕ್ಷಾ ಭವತಿ ಯಥಾ– 'ಅನುದರಾ ಕನ್ಯಾ' ಇತಿ ।"**

**ಅನುವಾದ:**

ಆದ್ದರಿಂದ ಈ ಪದ್ಯವನ್ನು "ಸಸ್ನುಃ......." ಇತ್ಯಾದಿ ಬದಲಾಯಿಸಿದರೆ ಪಾಠ ಯುಕ್ತವಾದೀತು. ಅಥವಾ ಕಾಲವಿಶೇಷಪ್ರಕ್ರಮಭೇದ ಎಂಬ ದೋಷವನ್ನು ಎತ್ತಿತೋರಿಸಬೇಕಾಗಿಲ್ಲ. ಏಕೆಂದರೆ ಕಾಲವಿಶೇಷ ಎಂಬುದು ವಿವಕ್ಷೆಯನ್ನೇ

ಅವಲಂಬಿಸಿರುವುದರಿಂದ ನಿಯತವಲ್ಲ. (ಭಾಷ್ಯಕಾರ ಪತಂಜಲಿಮಹರ್ಷಿಗಳೂ) ಹೇಳಿದ್ದಾರೆ–

"ಪ್ರಪಂಚಕ್ಕೇ ಪರೋಕ್ಷವೆಂದು ಗೊತ್ತಾಗಿರುವ, ವಾಕ್ಯವನ್ನು ಪ್ರಯೋಗಿಸುವ ವ್ಯಕ್ತಿಗೆ ಕಾಣದಿದ್ದರೂ ದರ್ಶನಯೋಗ್ಯವಾಗಿರುವುದರಿಂದ ಪರೋಕ್ಷವೆಂದು ವಿವಕ್ಷಿತವಾಗದಿರುವ ಕ್ರಿಯೆಯನ್ನು ಹೇಳುವಾಗ ಲಙ್ ಬರುತ್ತದೆ. ಉದಾಹರಣೆ– (ಅಜಯತ್.....) ಜಯಂತನು ಭೂತಗಳನ್ನು ಗೆದ್ದನು. ಇರುವುದನ್ನೂ ಇಲ್ಲದಿರುವುದನ್ನೂ ಕುರಿತು ಅವಿವಕ್ಷೆಯೂ ಇರಬಹುದು. ಉದಾಹರಣೆ– ಹೊಟ್ಟೆಯಿಲ್ಲದ ಹುಡುಗಿ.

**ಅರ್ಥಸ್ಯ ತದತದ್‌ಭಾವೋ ವಿವಕ್ಷಾಮಾತ್ರತೋ ಭವೇತ್ ।**
**ಯತ್ರ ಪ್ರಕ್ರಮಭೇದೋಽಯಂ ನ ತತ್ರೋದ್ಭಾವ್ಯತೇ ಬುಧೈಃ ॥**
**ಯಥಾ ವಿಶೇಷಕಾಲಸ್ಯ ಶೀಲಾದಿಪ್ರತ್ಯಯೇಷು ಚ ।**
**ಕರ್ತುಶ್ಚ ಫಲವತ್ತಾಯಾಂ ತೇನ ತೇ ನೋಪದರ್ಶಿತಾಃ ॥**
**ಇತಿ ಸಂಗ್ರಹಶ್ಲೋಕೌ ।**

(ಕಾರಕಪ್ರಕ್ರಮಭೇದ)

**ಕಾರಕಶಕ್ತಿಪ್ರಕ್ರಮಭೇದೋ ಯಥಾ–**
**ಗಾಹಂತಾಂ ಮಹಿಷಾ ನಿಪಾನಸಲಿಲಂ ಶೃಂಗೈರ್ಮುಹುಸ್ತಾಡಿತಂ**
**ಛಾಯಾಬದ್ಧಕದಂಬಕಂ ಮೃಗಕುಲಂ ರೋಮಂಥಮಭ್ಯಸ್ಯತು ।**
**ವಿಸ್ರಬ್ಧಂ ಕ್ರಿಯತಾಂ ವರಾಹತತಿಭಿರ್ಮುಸ್ತಾಕ್ಷತಿಃ ಪಲ್ವಲೇ**
**ವಿಶ್ರಾಂತಿಂ ಲಭತಾಮಿದಂ ಚ ಶಿಥಿಲಜ್ಯಾಬಂಧಮಸ್ಮದ್ಧನುಃ ॥ ಇತಿ ।**

**ಅನುವಾದ:**

ಅರ್ಥವು ಉಂಟು ಇಲ್ಲ ಎಂಬುದು ಎಲ್ಲಿ ವಿವಕ್ಷಾಮಾತ್ರದಿಂದಲೇ ನಿರ್ಣೀತವಾಗುವುದೋ, ಅಲ್ಲಿ ಪ್ರಕ್ರಮಭೇದ ಎಂಬ ದೋಷವನ್ನು ವಿದ್ವಾಂಸರು ಎತ್ತಿತೋರಿಸುವುದಿಲ್ಲ. ವಿಶೇಷಕಾಲ, ಶೀಲಾದ್ಯರ್ಥದಲ್ಲಿರುವ ಪ್ರತ್ಯಯ, ಫಲವು ಕರ್ತೃಗಾಮಿಯೇ ಅಲ್ಲವೇ ಇತ್ಯಾದಿಗಳು ಕೇವಲ ವಿವಕ್ಷಾಧೀನ. ಆದ್ದರಿಂದ ಅವುಗಳಲ್ಲಿ ಪ್ರಕ್ರಮಭೇದವನ್ನು ನಾವು ತೋರಿಸಿಲ್ಲ. ಇವೆರಡು ಸಂಗ್ರಹಶ್ಲೋಕಗಳು. ಕಾರಕಶಕ್ತಿಯ ಪ್ರಕ್ರಮಭೇದದ ಉದಾಹರಣೆ–

"ಕೊಂಬುಗಳಿಂದ ಮತ್ತೆಮತ್ತೆ ಹೊಡೆಯಲ್ಪಟ್ಟ ಕೊಳದ ನೀರಿನಲ್ಲಿ ಎಮ್ಮೆಕೋಣಗಳು ಪ್ರವೇಶಿಸಲಿ. ನೆರಳಿನಲ್ಲಿ ಮಂದೆಯಾಗಿ ನಿಂತಿರುವ ಜಿಂಕೆಗಳು ಮೆಲುಕುಹಾಕುತ್ತಿರಲಿ. ಕಾಡುಹಂದಿಗಳ ಹಿಂಡುಗಳಿಂದ ನಿರ್ಭಯವಾಗಿ ಹಳ್ಳಗಳಲ್ಲಿ ಜೊಂಡುಹುಲ್ಲು ಕಿತ್ತೆಸೆಯಲ್ಪಡಲಿ. ನಮ್ಮ ಈ ಧನುಸ್ಸು ಸಡಿಲವಾದ ಹುರಿಯನ್ನು ಹೊಂದಿ ವಿಶ್ರಾಂತಿಯನ್ನು ಪಡೆಯಲಿ."

**ವಿವರಣೆ:**

ಗಾಹಂತಾಂ..... ಎಂಬ ಪದ್ಯದಲ್ಲಿ ಮೂರನೆಯ ಪಾದದಲ್ಲಿ ಮಾತ್ರ ಕರ್ಮಣಿಪ್ರಯೋಗ. ಉಳಿದ ಮೂರು ಪಾದಗಳಲ್ಲಿ ಕರ್ತರಿಪ್ರಯೋಗ. ಆದ್ದರಿಂದ ಪ್ರಕ್ರಮಭಂಗ.

**ಅತ್ರ ಹಿ "ಕುರ್ವಂತ್ವಸ್ತಭಿಯೋ ವರಾಹತತಯೋ ಮುಸ್ತಾಕ್ಷತಿಂ ಪಲ್ವಲೇ" ಇತ್ಯುಪಪನ್ನಃ ಪಾಠಃ।**

**ಯಥಾ ಚ–**

**ಕೃತವಾನಸಿ ವಿಪ್ರಿಯಂ ನ ಮೇ ಪ್ರತಿಕೂಲಂ ಚ ನ ತೇ ಮಯಾ ಕೃತಮ್ ।**
**ಕಿಮಕಾರಣಮೇವ ದರ್ಶನಂ ವಿಲಪಂತ್ಯೈ ರತಯೇ ನ ದೀಯತೇ ॥**

**ಅತ್ರಾಪಿ 'ನ ಚ ತೇಽಹಂ ಕೃತವತ್ಯಸಮ್ಮತಮ್' ಇತಿ ।**

**ಯಥಾ ಚ–**

**ಸಜಲಜಲಧರಂ ನಭೋ ವಿರೇಜೇ ವಿಹೃತಿಮಿಯಾಯ ರುಚಿಸ್ತಡಿಲ್ಲತಾನಾಮ್ ।**
**ವ್ಯವಹಿತರತಿವಿಗ್ರಹೈರ್ವಿತೇನೇ ಜಲಗುರುಭಿಃ ಸ್ತನಿತೈರ್ದಿಗಂತರೇಷು ॥**

**ಅನುವಾದ:**

ಈ ಪದ್ಯದಲ್ಲಿ "ಕುರ್ವಂತ್ವಸ್ತಭಿಯೋ......." ಎಂಬ ಪಾಠ ಯುಕ್ತ. (ಆಗ "ನಿರ್ಭಯವಾಗಿ ವರಾಹಸಮೂಹಗಳು ಹಳ್ಳದಲ್ಲಿ ಮುಸ್ತಾ ಎಂಬ ಜೊಂಡನ್ನು ಕಿತ್ತೆಸೆಯಲಿ" ಎಂದು ಅರ್ಥ. ಅದೂ ಕರ್ತರಿಪ್ರಯೋಗ.)

ಇನ್ನೊಂದು ಉದಾಹರಣೆ–

"ನೀನು ನನಗೆ ಅಪ್ರಿಯವನ್ನು ಮಾಡಲಿಲ್ಲ. ನನ್ನಿಂದ ನಿನಗೆ ಪ್ರತಿಕೂಲವಾದುದು ಏನೂ ಮಾಡಲ್ಪಡಲಿಲ್ಲ. ಅಳುತ್ತಿರುವ ಈ ರತಿಗೆ ನೀನು ದರ್ಶನವನ್ನೇಕೆ ಕೊಡುತ್ತಿಲ್ಲ?"

ಈ ಪದ್ಯದಲ್ಲೂ (ದ್ವಿತೀಯ ಪಾದದಲ್ಲಿ) "ನ ಚ ತೇಽಹಂ ಕೃತವತ್ಯಸಮ್ಮತಮ್" (ನಾನೂ ನಿನಗೆ ಅಸಮ್ಮತವಾದುದನ್ನು ಮಾಡಿಲ್ಲ) ಎಂದು ಯುಕ್ತವಾದ ಪಾಠ.

ಇನ್ನೊಂದು ಉದಾಹರಣೆ–

ನೀರಿನಿಂದ ತುಂಬಿದ ಮೋಡಗಳಿದ್ದ ಬಾನು ಕಂಗೊಳಿಸಿತು. ಬಳ್ಳಿಮಿಂಚುಗಳ ಕಾಂತಿ ವಿಸ್ತಾರವನ್ನು ಹೊಂದಿತು. ದಿಗಂತಗಳಲ್ಲಿ ರತಿಕಲಹವನ್ನು ನಿಲ್ಲಿಸುವ ಗುಡುಗುಗಳಿಂದ ಮೊಳಗಲ್ಪಟ್ಟಿತು.

**ವಿವರಣೆ:**

ಸಜಲಜಲಧರಂ......... ಎಂಬ ಪದ್ಯದಲ್ಲಿ ಮೊದಲಿನ ಎರಡು ವಾಕ್ಯಗಳು ಕರ್ತರಿಪ್ರಯೋಗದಲ್ಲಿವೆ. ಮೂರನೆಯದು ಭಾವೇಪ್ರಯೋಗದಲ್ಲಿದೆ. ಆದ್ದರಿಂದ ಪ್ರಕ್ರಮಭಂಗ. ಗುಡುಗುಗಳು ಮೊಳಗಿದುವು ಎಂಬ ಬದಲಾವಣೆ ಮಾಡಿದರೆ ದೋಷ ಪರಿಹಾರ.

(ಶಾಬ್ದಪ್ರಕ್ರಮಭೇದ)

**ಶಾಬ್ದಃ ಪ್ರಕ್ರಮಭೇದೋ ಯಥಾ–**

**ಚಾರುತಾ ವಪುರಭೂಷಯದಾಸಾಂ**
**ತಾಮನೂನನವಯೌವನಯೋಗಃ ।**
**ತಂ ಪುನರ್ಮಕರಕೇತನಲಕ್ಷ್ಮೀ–**
**ಸ್ತಾಂ ಮದೋ ದಯಿತಸಂಗಮಭೂಷಃ ॥**

**ಅತ್ರ ಹಿ "ತಮಪಿ ವಲ್ಲಭಸಂಗಃ" ಇತಿ ಯುಕ್ತಃ ಪಾಠಃ ।**

**ಯಥಾ ಚ–     ಸಸ್ನುಃ ಪಯಃ ಪಪುರನೇನಿಜುರಂಬರಾಣಿ**
**ಜಕ್ಷುರ್ಬಿಸಾನ್ ಧೃತವಿಕಾಸಿಬಿಸಪ್ರಸೂನಾಃ ।**

**ಅತ್ರಾಪಿ "ಜಕ್ಷುರ್ಬಿಸಂ ವಿಕಚಮಸ್ಯ ದಧುಃಪ್ರಸೂನಮ್" ಇತಿ ಯುಕ್ತಃ ಪಾಠಃ । ಅಸ್ಮಿಂಶ್ಚ ಪಾಠೇ ಬಿಸಶಬ್ದಸ್ಯ ಪೌನರುಕ್ತ್ಯದೋಷಪರಿಹಾರಾದ್ ಗುಣಾಂತರಲಾಭಃ ।**

**ಅನುವಾದ:**

ಶಾಬ್ದ ಪ್ರಕ್ರಮಭೇದದ ಉದಾಹರಣೆ–

ಆ ಹೆಂಗಸರ ದೇಹಗಳನ್ನು ಸೌಂದರ್ಯವೂ
ಆ ಸೌಂದರ್ಯವನ್ನು ನವತಾರುಣ್ಯಸಂಗಮವೂ
ಆ ತಾರುಣ್ಯಸಂಗವನ್ನು ಮನ್ಮಥಲಕ್ಷ್ಮಿಯೂ
ಅದನ್ನು ಪ್ರಿಯಸಂಗಾಲಂಕೃತವಾದ ಮದವೂ ಅಲಂಕರಿಸಿತ್ತು.

ಇಲ್ಲಿಯೂ (ಕೊನೆಯ ಪಾದದಲ್ಲಿ "ತಾಂ ಮದಸ್ತಮಪಿ ವಲ್ಲಭಸಂಗಃ" ಎಂಬುದು ಉಚಿತವಾದ ಪಾಠವಾಗುತ್ತದೆ.

ಇನ್ನೊಂದು ಉದಾಹರಣೆ– ಸಸ್ನುಃ.......... (ಇದರ ಅನುವಾದ ಮೊದಲು ಬಂದಿದೆ)

ಇಲ್ಲಿಯೂ "ಜಕ್ಷುರ್ಬಿಸಂ ವಿಕಚಮಸ್ಯ ದಧುಃ ಪ್ರಸೂನಮ್" ಎಂಬ ಪಾಠವು ಉಚಿತವಾದೀತು. ಈ ಪಾಠವನ್ನು ಅಂಗೀಕರಿಸಿದರೆ ಬಿಸಶಬ್ದದ ಪುನರುಕ್ತಿಯ ಪರಿಹಾರವೂ ಒದಗಿ ಇನ್ನೊಂದು ಗುಣವೂ ಸಿಕ್ಕಿದಂತಾಗುತ್ತದೆ.

**ಯಥಾ ಚ–**

**ಸಮತಯಾ ವಸುವೃಷ್ಟಿವಿಸರ್ಜನೈರ್ನಿಯಮನಾದಸತಾಂ ಚ ನರಾಧಿಪಃ ।**
**ಅನುಯಯೌ ಯಮಪುಣ್ಯಜನೇಶ್ವರೌ ಸವರುಣಾವರುಣಾಗ್ರಸರಂ ರುಚಾ ॥**

**ಅತ್ರ ಹಿ ಅನುಯಾತಿಕ್ರಿಯಾಕರ್ಮಭಾವೋ ವರುಣಸ್ಯಾರ್ಥಃ ಪ್ರಕ್ರಾಂತ ಇತಿ ತತ್ರಾಸ್ಯ ತಾದೃಶ ಏವ ಹೇತುರುಪಾದಾತುಂ ಯುಕ್ತಃ । ಯಸ್ತ್ವಸನ್ನಿಯಮನಲಕ್ಷಣಃ ಶಾಬ್ದೋ ಹೇತು–**

**ರಸ್ಯಾನ್ಯೇಷಾಮಿವೋಪಾತ್ತಃ, ಸ ಪ್ರಕ್ರಮಭೇದೋ ದೋಷಃ ।**
**ತಸ್ಯಾಪ್ಯುಕ್ತಯುಕ್ತ್ಯಾ ರಸಭಂಗಪರ್ಯವಸಾಯಿತ್ವಾತ್ ।**
**ತೇನಾಯಮತ್ರ ಪಾಠಃ ಪಠಿತವ್ಯಃ "ನಿಯಮಯನ್ನಸತಃ**
**ಸ ನರಾಧಿಪಃ" ಇತಿ ।**

**ಅನುವಾದ:**

ಸಮತ್ವದಿಂದಲೂ ಐಶ್ವರ್ಯವೃಷ್ಟಿಯನ್ನು ಸುರಿಸುವುದರಿಂದಲೂ, ದುಷ್ಟರ ನಿಯಂತ್ರಣದಿಂದಲೂ ಆ ರಾಜನು ಯಮನನ್ನೂ ಕುಬೇರನನ್ನೂ ವರುಣನನ್ನೂ ಅನುಕರಿಸುತ್ತಿದ್ದನು. ಅರುಣಸಾರಥಿ (ಸೂರ್ಯ)ನನ್ನು ಕಾಂತಿಯಿಂದ ಅನುಸರಿಸುತ್ತಿದ್ದನು.

ಈ ಪದ್ಯದಲ್ಲಿ ಅನುಯಾತಿ ಎಂಬ ಕ್ರಿಯೆಗೆ ಕರ್ಮವಾಗಿ ವರುಣ ಎಂಬ ಅರ್ಥವು ಪ್ರಕ್ರಾಂತವಾಗಿದೆ. ಆದ್ದರಿಂದ ಅದಕ್ಕೆ ಅಂಥ ಹೇತುವನ್ನೇ ಹೇಳುವುದು ಯುಕ್ತ. ಅಸನ್ನಿಯಮನ (ದುಷ್ಟರ ನಿಯಂತ್ರಣ) ಎಂಬ ಶಾಬ್ದಹೇತುವನ್ನು ಬೇರೆಯವರಿಗೆ ಹೇಳಿರುವಂತೆ ಇವನಿಗೂ ಹೇಳಿರುವುದರಿಂದ ಇಲ್ಲಿ ಪ್ರಕ್ರಮಭೇದ ಎಂಬ ದೋಷ. ಏಕೆಂದರೆ ಅದೂ ಮೇಲೆ ಹೇಳಿದ ಯುಕ್ತಿಯಿಂದ ರಸಭಂಗದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಆದ್ದರಿಂದ ಇಲ್ಲಿ "ನಿಯಮಯನ್ನಸತಃ ಸ ನರಾಧಿಪಃ" ಎಂಬ ಪಾಠವನ್ನು ಮಾಡಿಕೊಳ್ಳಬೇಕು.

**ಏವಂ ಚ ವಿಭಕ್ತಿಪ್ರಕ್ರಮಭೇದಶ್ಚಶಬ್ದಶ್ಚ ಉಕ್ತನಯನಿರಸ್ತಸಮುಚ್ಚಯವಿಷಯಭಾವಃ ಕ್ರಮಭೇದದುಷ್ಟಶ್ಚ ಪರಿಹೃತೌ ಭವತಃ । ಏವಮ್ ಅನ್ಯೇಽಪ್ಯವಗಂತವ್ಯಾಃ ।**

**ಏಷಾಂ ಚಾನ್ಯೋನ್ಯಸಾಂಕರ್ಯಾಲ್ಲೋಷ್ಟಸಂಚಯಕ್ರಮೇಣ ಬಹವಃ ಪ್ರಕ್ರಮಭೇದಪ್ರಕಾರಾಃ ಸಮುದ್ಭವಂತಿ । ತೇ ಸ್ವಯಮೇವಾಭ್ಯೂಹ್ಯಾಃ । ತದ್ಯಥಾ "ನಿಯತಾ ಲಘುತಾ ನಿರಾಯತೇರಗರೀಯಾನ್ನ ಪದಂ ನೃಪ ಶ್ರಿಯಃ" ಅತ್ರ ಹಿ ದ್ವಯೋಃ ಪ್ರಕೃತಿಪ್ರತ್ಯಯಯೋಃ ಪ್ರಕ್ರಮಭೇದಃ । ತೇನ "ನ ಲಘುರ್ಜಾತು ಪದಂ ನೃಪಶ್ರಿಯಃ" ಇತಿ ಯುಕ್ತಃ ಪಾಠಃ ।**

**ಅನುವಾದ:**

ಹೀಗೆ ಮಾಡಿದಾಗ ವಿಭಕ್ತಿಪ್ರಕ್ರಮಭೇದವೂ, ಮೇಲೆ ಹೇಳಿದ ರೀತಿಯಲ್ಲಿ ಸಮುಚ್ಚಯವಿಷಯತ್ವವನ್ನು 'ಚ'ಶಬ್ದವು ಕಳೆದುಕೊಳ್ಳುವುದರಿಂದ ಕ್ರಮಭೇದ ಎಂಬ ದೋಷವೂ ಪರಿಹೃತವಾಗುತ್ತದೆ. ಹೀಗೆ ಬೇರೆ ಪ್ರಕ್ರಮಭೇದಗಳನ್ನೂ ಅರಿತುಕೊಳ್ಳಬೇಕು.

ಈ ದೋಷಗಳು ಪರಸ್ಪರ ಸಂಕರವನ್ನೂ ಹೊಂದಿ ಮಣ್ಣಿನ ಹೆಂಟೆಗಳು ಸೇರಿಕೊಳ್ಳುವ ರೀತಿಯಲ್ಲಿ ಒಟ್ಟುಗೂಡಿ ಅನೇಕ ಪ್ರಕ್ರಮಭೇದಪ್ರಕಾರಗಳು ಸಂಭವಿಸುತ್ತವೆ. ಅವುಗಳನ್ನು (ವಾಚಕರು) ತಾವೇ ಊಹಿಸಿಕೊಳ್ಳಬೇಕು. ಅದು ಹೇಗೆಂದರೆ–

"ಭವಿಷ್ಯವಿಲ್ಲದವನಿಗೆ ಲಘುತ್ವವು ಅನಿವಾರ್ಯ;
ತೂಕವಿಲ್ಲದವನು ರಾಜಲಕ್ಷ್ಮಿಗೆ ಎಂದೂ ಸ್ಥಾನನಾಗಲಾರನು"

ಇಲ್ಲಿ ಪ್ರಕೃತಿ–ಪ್ರತ್ಯಯ ಎಂಬ ಎರಡರ ಪ್ರಕ್ರಮಭೇದವೂ ಇದೆ. ಆದ್ದರಿಂದ "ನ ಲಘುರ್ಜಾತು ಪದಂ ನೃಪಶ್ರಿಯಃ" ಎಂಬ ಪಾಠವು ಉಚಿತ.

**ವಿವರಣೆ:**

ಲಘು ಎಂಬ ಪ್ರಕೃತಿಯನ್ನು ಆರಂಭಿಸಿ ಅದನ್ನು ಬಿಟ್ಟು ಅಗರೀಯಾನ್ ಎಂದು ಬೇರೆ ಪ್ರಕೃತಿಯನ್ನು ತೆಗೆದುಕೊಂಡಿರುವುದರಿಂದ ಪ್ರಕೃತಿಪ್ರಕ್ರಮಭೇದ. ಗುರು ಶಬ್ದಕ್ಕೆ ಈಯಸುನ್ ಪ್ರತ್ಯಯವನ್ನು ಜೋಡಿಸಿರುವುದರಿಂದ ಪ್ರತ್ಯಯಪ್ರಕ್ರಮಭೇದ.

(ಆರ್ಥಪ್ರಕ್ರಮಭೇದ)

**ಆರ್ಥಪ್ರಕ್ರಮಭೇದೋ ಯಥಾ ಅನಂತರೋದಾಹರಣಯೋರಾದ್ಯಮಾಹಿತವಿಪರ್ಯಯಮ್।**

**ತದ್ಯಥಾ– ಮತ್ತತಾ ದಯಿತಸಂಗಮಭೂಷಾ ಭೂಷಯತ್ಯಸಮಸಾಯಕಲಕ್ಷ್ಮೀಮ್ ।**
**ಸಾಪ್ಯನೂನನವಯೌವನಯೋಗಂ ತದ್ವಪುಸ್ತದಪಿ ಚಾರುತರತ್ವಮ್ ॥**
**ಅತ್ರಾಪಿ 'ಮತ್ತತಾಂ ದಯಿತಸಂಗತಿರೇಷಾ' ಇತ್ಯುಚಿತಃ ಪಾಠಃ ।**

(ಕ್ರಮಪ್ರಕ್ರಮಭೇದ)

**ಕ್ರಮಪ್ರಕ್ರಮಭೇದೋ ಯಥಾ–**

**ತವ ಕುಸುಮಶರತ್ವಂ ಶೀತರಶ್ಮಿತ್ವಮಿಂದೋ–**
**ರ್ದ್ವಯಮಿದಮಯಥಾರ್ಥಂ ದೃಶ್ಯತೇ ಮದ್ವಿಧೇಷು ।**
**ವಿಸೃಜತಿ ಹಿಮಗರ್ಭೈರಗ್ನಿಮಿಂದುರ್ಮಯೂಖೈ–**
**ಸ್ತ್ವಮಪಿ ಕುಸುಮಬಾಣಾನ್ ವಜ್ರಸಾರೀಕರೋಷಿ ॥ ಇತಿ ।**

**ಅನುವಾದ:**

ಆರ್ಥ ಪ್ರಕ್ರಮಭೇದವು ಹಿಂದೆ ನೀಡಿದ (ನಿಕಟಪೂರ್ವ) ಉದಾಹರಣೆಗಳಲ್ಲೊಂದು ಅರ್ಥಗಳ ವಿಪರ್ಯಯವನ್ನು ಮಾಡಿದಾಗ ಕಂಡುಬರುತ್ತದೆ. ಉದಾಹರಣೆ– ಮತ್ತತಾ......... "ಪ್ರಿಯಸಂಗಮವನ್ನೇ ಅಲಂಕಾರವನ್ನಾಗಿ ಮಾಡಿಕೊಂಡಿರುವ ಮತ್ತತೆಯು ಮನ್ಮಥಕಾಂತಿಯನ್ನು ಅಲಂಕರಿಸುತ್ತಿದೆ. ಅದು ಹೊಸ ತಾರುಣ್ಯವನ್ನೂ, ಮತ್ತೆ ಅದು ಚಾರುತ್ವವನ್ನೂ ಹೆಚ್ಚಿಸುತ್ತಿದೆ."

ಇಲ್ಲಿ "ಮತ್ತತಾಂ ದಯಿತಸಂಗತಿರೇಷಾ" ಎಂಬ ಪಾಠ ಉಚಿತ. ಕ್ರಮಪ್ರಕ್ರಮಭೇದದ ಉದಾಹರಣೆ– "ಮನ್ಮಥನೆ, ನಿನ್ನವು ಹೂಬಾಣಗಳು ಎಂಬುದೂ, ಚಂದ್ರನ ಕಿರಣಗಳು ತಂಪು ಎಂಬುದೂ ನನ್ನಂಥವರ ಬಗೆಗೆ ಸುಳ್ಳೇ ಆಗುತ್ತಿವೆ. ಚಂದ್ರನು ಮಂಜಿನಿಂದ ತುಂಬಿದ ಕಿರಣಗಳಿಂದ ಬೆಂಕಿಯನ್ನು ಸುರಿಸುತ್ತಿದ್ದಾನೆ. ನೀನೂ ಹೂಬಾಣಗಳನ್ನು ವಜ್ರಾಯುಧದಂತೆ ಶಕ್ತಿಯುತವನ್ನಾಗಿ ಮಾಡುತ್ತಿರುವೆ."

**ವಿವರಣೆ:**

ಪದ್ಯದ ಪೂರ್ವಾರ್ಧದಲ್ಲಿ ಮೊದಲು ಮನ್ಮಥನನ್ನೂ ಆಮೇಲೆ ಚಂದ್ರನನ್ನೂ ಕವಿ ಹೇಳಿದ್ದಾನೆ. ಉತ್ತರಾರ್ಧದಲ್ಲಿ ಈ ಕ್ರಮವನ್ನು ಕೈಬಿಟ್ಟು ಮೊದಲು ಚಂದ್ರನನ್ನೂ ಆಮೇಲೆ ಮನ್ಮಥನನ್ನೂ ಹೇಳಿರುವುದರಿಂದ ಕ್ರಮಪ್ರಕ್ರಮಭೇದ ಎಂಬ ದೋಷ.

**ನನು ಚ ಪ್ರಕೃತಿ ಪ್ರತ್ಯಯಪರ್ಯಾಯಾದೀನಾಂ ಪ್ರಕ್ರಾಂತಾನಾಂ ಭೇದೇಽಪಿ ಪ್ರಧಾನಭೂತಸ್ಯ ಅರ್ಥಸ್ಯಾಭೇದಾಚ್ಛಬ್ದಮಾತ್ರಸ್ಯ ಭೇದೇ ಸತಿ ನ ಕಿಂಚಿದೇಕರಸಾಯಾಃ ಪ್ರತೀತೇಃ ಪರಿಸ್ಖಲನಮ್ ಉಪಪದ್ಯತ ಇತಿ ಕಥಮಯಂ ಪ್ರಕೃತ್ಯಾದಿಪ್ರಕ್ರಮಭೇದೋ ನಾಮ ಶಬ್ದಾನೌಚಿತ್ಯಮಿತ್ಯುಕ್ತಮ್। ಉಚ್ಯತೇ । ಸರ್ವ ಏವಾಯಮೇವಂಜಾತೀಯಃ ಪ್ರಕ್ರಮಭೇದಃ ಪ್ರಾಯೇಣ ವಿಧ್ಯನುವಾದಭಾವಪ್ರಕಾರ ಇತ್ಯವಗಂತವ್ಯಮ್ । ನ ಚ ತತ್ರಾಪಿ ಅಸತ್ಯಪಿ ಅರ್ಥಭೇದೇ ಶಬ್ದಭೇದಮ್ ಆದ್ರಿಯಂತೇ ವಕ್ತಾರಃ ।**

**ಅನುವಾದ:**

ಆರಂಭಿಸಿದ ಪ್ರಕೃತಿ, ಪ್ರತ್ಯಯ, ಪರ್ಯಾಯ ಇತ್ಯಾದಿಗಳು ಆಮೇಲೆ ಬೇರೆಯಾದರೂ, ಮುಖ್ಯವಾದ ಅರ್ಥವು ಬೇರೆಯಾಗುವುದಿಲ್ಲ. ಶಬ್ದ ಮಾತ್ರ ಬೇರೆಯಾದರೂ ಏಕರಸವಾದ ಜ್ಞಾನಕ್ಕೆ ಯಾವ ಎಡರುತೊಡರೂ ಉಂಟಾಗುವುದಿಲ್ಲ. ಹೀಗಿರುವಾಗ ಪ್ರಕೃತಿ ಮುಂತಾದುವುಗಳ ಪ್ರಕ್ರಮಭೇದವು ಶಬ್ದಾನೌಚಿತ್ಯ ಎಂದೇಕೆ ಹೇಳುತ್ತೀರಿ?

(ಈ ಪ್ರಶ್ನೆಗೆ ಉತ್ತರವನ್ನು) ಹೇಳುತ್ತೇವೆ. ಈ ರೀತಿಯ ಎಲ್ಲ ಪ್ರಕ್ರಮಭೇದವೂ ಪ್ರಾಯೇಣ (ಬಹುಮಟ್ಟಿಗೆ) ವಿಧ್ಯನುವಾದಭಾವದ ಒಂದು ಪ್ರಕಾರ ಎಂದು ತಿಳಿದುಕೊಳ್ಳಬೇಕು. ವಿಧ್ಯನುಭಾವವು ಇದ್ದಾಗ ಅರ್ಥಭೇದ ಉಂಟಾಗದಿದ್ದರೂ ಬೇರೆ ಶಬ್ದದ ಪ್ರಯೋಗವನ್ನು ವಕ್ತೃಗಳು ಇಷ್ಟಪಡುವುದಿಲ್ಲ.

**ಯಥಾ–**

**ಯದಧರದಲಮಾಶ್ರಿತಂ ಪ್ರಿಯಾಯಾ**
**ವದನಸರೋರುಹಸಾಮ್ಯಮೇತಿ ಯಶ್ಚ ।**
**ತದಮೃತಮಮೃತಂ ಸ ಇಂದುರಿಂದುಃ**
**ವಿಷಮಿತರತ್ ತಮಸಾ ಸಮಸ್ತಥಾನ್ಯಃ ॥ ಇತಿ ।**

**ಅಸ್ತ್ವೇವಮ್ । ಯಸ್ತ್ವಯಮನ್ಯಃ ಶಾಬ್ದ ಆರ್ಥಶ್ಚೇತಿ ದ್ವಿವಿಧಃ ಪ್ರಕ್ರಮಭೇದ ಉಕ್ತಃ, ಸೋಽನುಪಪನ್ನಃ । ಯತಃ "ಚಾರುತಾ ವಪುರಭೂಷಯದಾಸಾಮ್ ಇತ್ಯಾದೌ ಭೂಷಣಭೂಷ್ಯಭಾವಾದಿರೂಪಂ ಕಿಮಪಿ ವಸ್ತು ಪ್ರತ್ಯಾಯ್ಯಂ ವರ್ತತೇ। ತಚ್ಚ ಶಬ್ದಾದರ್ಥಾದುಭಾಭ್ಯಾಮಪಿ ವಾ ಪ್ರತೀಯತಾಮ್ । ಕಸ್ತತ್ರ ಪ್ರಕ್ರಮಭೇದನಿಯಮಂ ಪ್ರತಿ ಅಭಿನಿವೇಶಃ ಯದ್‌ಭೇದಾಭೇದಾಭ್ಯಾಮ್ ಅನೌಚಿತ್ಯಂ ಸ್ಯಾತ್ ।**

**ಅನುವಾದ:**

ಉದಾಹರಣೆ– "ಪ್ರಿಯೆಯ ತುಟಿಯನ್ನು ಯಾವುದು ಆಶ್ರಯಿಸಿದೆಯೋ, ಅವಳ ಮುಖದ ಸಾಮ್ಯವನ್ನು ಯಾವನು ಹೊಂದಿರುವನೋ, ಆ ಅಮೃತವೇ ಅಮೃತ, ಆ ಚಂದ್ರನೇ ಚಂದ್ರ. ಬೇರೆಯದು ವಿಷ, ಬೇರೆಯವನು ಕತ್ತಲಿಗೆ ಸಮಾನ."

ಹಾಗೇ ಆಗಲಿ. ಮತ್ತೆ ನೀವು ಶಾಬ್ದ, ಆರ್ಥ ಎಂದು ಎರಡು ವಿಧವಾದ ಪ್ರಕ್ರಮಭೇದವನ್ನು ಹೇಳಿದ್ದೀರಿ, ಅದು ಸರಿಯಿಲ್ಲ. ಏಕೆಂದರೆ "ಚಾರುತಾವಪುರಭೂಷಯದಾಸಾಂ" ಇತ್ಯಾದಿಗಳಲ್ಲಿ ಭೂಷಣಭೂಷ್ಯಭಾವ ಮುಂತಾದ ಯಾವುದೋ ಒಂದು ವಿಷಯವನ್ನು ತಿಳಿಸಬೇಕಾಗಿರುತ್ತದೆ. ಅದು ಶಬ್ದದಿಂದ, ಅರ್ಥದಿಂದ ಅಥವಾ ಅವೆರಡರಿಂದಲೂ ತಿಳಿಸಲ್ಪಡಲಿ. ಅದರಲ್ಲಿ ಪ್ರಕ್ರಮಭೇದನಿಯಮದ ಬಗೆಗೆ ನಿಮಗೆ ಅಭಿನಿವೇಶವೇಕೆ? ಅದರಲ್ಲಿ ಭೇದ–ಅಭೇದಗಳಿಂದ ಅನೌಚಿತ್ಯವುಂಟಾಗುತ್ತದೆ ಎನ್ನಲು ಆಧಾರವೇನು?

> **ನ ಹಿ–**
>
> **ಶುಚಿ ಭೂಷಯತಿ ಶ್ರುತಂ ವಪುಃ ಪ್ರಶಮಸ್ತಸ್ಯ ಭವತ್ಯಲಂಕ್ರಿಯಾ ।**
> **ಪ್ರಶಮಾಭರಣಂ ಪರಾಕ್ರಮಃ ಸ ನಯಾಪಾದಿತಸಿದ್ಧಿಭೂಷಣಃ ॥**
>
> **ಇತ್ಯಾದಾವಸತ್ಯಪಿ ಪ್ರತೀತಿಪರಿಸ್ಖಲನೇಽನೌಚಿತ್ಯಸಂಸ್ಪರ್ಶಃ ಕಶ್ಚಿದುಪಲಭ್ಯತ ಇತಿ ತದೇತದವಿದಿತಶಬ್ದಾರ್ಥವ್ಯಾಪಾರವಿಭಾಗಸ್ಯೈವಾಭಿಧಾನಮ್ ।**
>
> **ಅನ್ಯೋ ಹಿ ಶಬ್ದವ್ಯಾಪಾರವಿಷಯೋಽರ್ಥೋ ಅನ್ಯಶ್ಚ ಅರ್ಥವ್ಯಾಪಾರವಿಷಯಃ । ತತ್ರ ಯಃ ಪ್ರಾಧಾನ್ಯೇನ ಪ್ರತಿಪಾದಯಿತುಮಿಷ್ಯತೇ ಸ ಶಬ್ದವ್ಯಾಪಾರವಿಷಯಃ, ತಸ್ಯ ಸಾಕ್ಷಾತ್ ತದಭಿಸಂಬಂಧಸಂಭವಾತ್ ।**

**ಅನುವಾದ:**

"ಶುದ್ಧವಾದ ವಿದ್ಯೆಯು ಶರೀರವನ್ನಲಂಕರಿಸುತ್ತದೆ, ಆ ವಿದ್ಯೆಗೆ ಶಾಂತಿಯು ಅಲಂಕಾರ. ಪರಾಕ್ರಮವು ಶಾಂತಿಗೆ ಆಭರಣ. ನೀತಿಯಿಂದ ಪಡೆದ ಸಿದ್ಧಿಯು ಪರಾಕ್ರಮದ ಭೂಷಣ" ಇತ್ಯಾದಿಗಳಲ್ಲಿ ಪ್ರತೀತಿಯು ಕುಂಟುವುದಿಲ್ಲ. ಆದರೂ ಇದರಲ್ಲಿ ಅನೌಚಿತ್ಯದ ಸ್ಪರ್ಶ ಇದೆ ಎಂದು ಹೇಳುವುದು ಶಬ್ದಾರ್ಥವ್ಯಾಪಾರದ ವಿಭಾಗವನ್ನೇ ತಿಳಿಯದವರ ಮಾತು.

ಶಬ್ದವ್ಯಾಪಾರದ ವಿಷಯುವಾದ ಅರ್ಥವೇ ಬೇರೆ, ಅರ್ಥವ್ಯಾಪಾರವಿಷಯವಾದುದೇ ಬೇರೆ. ಯಾವುದು ಪ್ರಧಾನವಾಗಿ ಪ್ರತಿಪಾದಿಸಲು ಇಷ್ಟವೋ ಅದು ಶಬ್ದವ್ಯಾಪಾರಕ್ಕೆ ವಿಷಯ. ಏಕೆಂದರೆ ಅದರೊಡನೆ ಶಬ್ದದ ಸಾಕ್ಷಾತ್ ಅಭಿಸಂಬಂಧವುಂಟು.

> **ಅನ್ಯಸ್ತು ಅರ್ಥವ್ಯಾಪಾರವಿಷಯೋ ವಿಪರ್ಯಯಾತ್ । ಏವಂ ಚ ಸತಿ ಯದಾಯಂ ಭೂಷಣಭೂಷ್ಯಭಾವಃ ಪ್ರಾಧಾನ್ಯೇನ ವಕ್ತುಂ ಪ್ರಕ್ರಮ್ಯತೇ ತದಾ ಶಬ್ದವ್ಯಾಪಾರಸ್ಯೈವಾಯಂ ವಿಷಯೋ ಭವಿತುಮರ್ಹತಿ, ನ ಅರ್ಥವ್ಯಾಪಾರಸ್ಯ– ಇತಿ ವಿಷಯವಿಭಾಗೇ ವ್ಯವಸ್ಥಿತೇ ಸತಿ, ತಯೋರ್ಯದನ್ಯಥಾಕರಣಂ ತದೇಕರಸಾಯಾಃ ಪ್ರತೀತೇಃ ಪರಿಸ್ಖಲನಹೇತುರ್ಭವತ್ಯನೌಚಿತ್ಯಮ್ ಇತ್ಯುಕ್ತಂ ಯಥಾ ಪೂರ್ವೋಕ್ತ ಉದಾಹರಣದ್ವಯೇ ।**

**ಅನುವಾದ:**

ಇನ್ನೊಂದು ವಿಭಿನ್ನವಾಗಿರುವುದರಿಂದ ಅರ್ಥವ್ಯಾಪಾರಕ್ಕೆ ವಿಷಯವಾಗಿರುತ್ತದೆ. ಹೀಗಿರುವಾಗ ಭೂಷಣಭೂಷ್ಯಭಾವವನ್ನು ಪ್ರಧಾನವಾಗಿ ಹೇಳಲು ಬಯಸಿದಾಗ ಅದು ಶಬ್ದವ್ಯಾಪಾರದ ವಿಷಯವೇ ಆಗಿರಲು ಅರ್ಹ, ಅರ್ಥವ್ಯಾಪಾರದ ವಿಷಯವಾಗಲು ಅರ್ಹವಲ್ಲ. ಹೀಗೆ ವಿಷಯವಿಭಾಗವು ವ್ಯವಸ್ಥಿತವಾಗಿರುವ ಸಂದರ್ಭದಲ್ಲಿ ಆ ವ್ಯಾಪಾರಗಳನ್ನು ವ್ಯತ್ಯಸ್ತವಾಗಿ ಮಾಡಿದರೆ ಅದು ತನ್ಮಯವಾದ ಏಕರಸಪ್ರತೀತಿಗೆ ವಿಘ್ನವಾಗುತ್ತದೆ ಎಂಬುದರಿಂದ ಅನೌಚಿತ್ಯ ಎಂದು ಪೂರ್ವೋಕ್ತವಾದ ಎರಡು ಉದಾಹರಣೆಗಳಲ್ಲಿ ತೋರಿಬರುವಂತೆ ಹೇಳಿದ್ದೇವೆ.

**ವಿವರಣೆ:**

ಪೂರ್ವೋಕ್ತವಾದ ಎರಡು ಉದಾಹರಣೆಗಳು–

೧. ಶುಚಿ ಭೂಷಯತಿ ಶ್ರುತಂ ವಪುಃ ೨. ತಾಂ ಮದಸ್ತಮಪಿ ವಲ್ಲಭಸಂಗಃ

**ಯತ್ ಪುನಃ 'ಶುಚಿ ಭೂಷಯತಿ' ಇತ್ಯಾದೌ ಸತ್ಯಪಿ ಪ್ರಕ್ರಮಭೇದದೋಷೇ ನಾನೌಚಿತ್ಯಸಂಸ್ಪರ್ಶಃ ಕಶ್ಚಿತ್ ಸಂವೇದ್ಯತ ಇತ್ಯುಕ್ತಂ, ತತ್ರ 'ವಪುಷಃ ಶುಚಿ ಭೂಷಣಂ ಶ್ರುತಮ್' ಇತಿ, 'ತಾಂ ಮದಸ್ತಮಪಿ ವಲ್ಲಭಸಂಗ' ಇತಿ ಚ ಉಭಯತ್ರಾಪಿ ಪಾಠವಿಪರ್ಯಾಸಾತ್ ಪ್ರಕ್ರಮಭೇದದೋಷದ್ವಯೇ ಪರಿಹೃತೇ ಸತಿ, ಅನಯೋಃ ಪ್ರತೀತ್ಯೋರ್ಯಾದೃಶಮೌಚಿತ್ಯಮ್ ಅನೌಚಿತ್ಯಂ ವಾ ಆವಿರ್ಭವತಿ, ತತ್ಪ್ರತೀತಿಪರಮಾರ್ಥವಿದಃ ಸಹೃದಯಾ ಏವ ವಿವೇಕ್ತುಮಲಮಿತಿ ತ ಏವ ಪ್ರಷ್ಟವ್ಯಾ, ನಾನ್ಯೇ । ತೇ ಹ್ಯುಭಯತ್ರ ಸಾದೃಶ್ಯಮೇವ ಅವಗಚ್ಛಂತಿ।**

**ಅನುವಾದ:**

ಶುಚಿ ಭೂಷಯತಿ.... ಇತ್ಯಾದಿ ಉದಾಹರಣೆಯಲ್ಲಿ ಪ್ರಕ್ರಮಭೇದ ದೋಷವಿದ್ದರೂ ಯಾವುದೇ ಅನೌಚಿತ್ಯದ ಸ್ಪರ್ಶವಿಲ್ಲ ಎಂದು ಕೆಲವರು ಹೇಳಿದರು. ಅಲ್ಲಿ "ವಪುಷಃ ಶುಚಿ ಭೂಷಣಂ ಶ್ರುತಮ್" ಎಂಬ ಪಾಠದ ಬದಲಾವಣೆಯಿಂದ, ತಾಂ ಮದೋ ದಯಿತಸಂಗಮಭೂಷಃ ಎಂಬಲ್ಲಿ "ತಾಂ ಮದಸ್ತಮಪಿ ವಲ್ಲಭಸಂಗಃ" ಎಂಬ ಪಾಠದ ಬದಲಾವಣೆಯಿಂದ ಪ್ರಕ್ರಮಭೇದದೋಷವನ್ನು ಪರಿಹರಿಸಿದಾಗ ಇವೆರಡರ ಪ್ರತೀತಿಗಳಲ್ಲಿ ಎಂಥ ಔಚಿತ್ಯ–ಅನೌಚಿತ್ಯಗಳು ಉಂಟಾಗುತ್ತವೆ ಎಂಬುದನ್ನು ಕಾವ್ಯಸಂವೇದನೆಯ ಪರಮಾರ್ಥವನ್ನು ತಿಳಿದ ಸಹೃದಯರೇ ವಿವೇಚಿಸಲು ಸಮರ್ಥರು. ಆದ್ದರಿಂದ ಅವರನ್ನೇ ಈ ಬಗೆಗೆ ಕೇಳಬೇಕು. ಅಸಹೃದಯರನ್ನಲ್ಲ. ಅವರು ಎರಡು ವಿಧದ ಪಾಠದಲ್ಲೂ ಸಾದೃಶ್ಯವನ್ನೇ ಕಾಣುತ್ತಾರೆ.

**ಯದಿ ವಾ ಶುಚಿ ಭೂಷಯತೀತ್ಯಾದೌ ಭೂಷಣಭೂಷ್ಯಭಾವಶೃಂಖಲಾಯಾಂ ಯಥಾಸಂಭವಂ ಭಂಗೀಭಣಿತಿವೈಚಿತ್ರ್ಯಮಾತ್ರಂ ಕವೇರ್ವಿವಕ್ಷಿತಂ, ತಚ್ಚ ನಿರ್ವ್ಯೂಢಮಿತಿ ತದಪಹೃತಚೇತಸಾಂ ಪ್ರತೀತಿಸ್ಖಲನಖೇದಾನವಧಾರಣಮ್ ।**

**ಅಥ ಯದಿ ಶಬ್ದವ್ಯಾಪಾರ ವಿಷಯಸ್ಯೈವಾರ್ಥಸ್ಯ ಪ್ರಾಧಾನ್ಯಂ, ನಾನ್ಯಸ್ಯೇತ್ಯುಚ್ಯತೇ, ತರ್ಹಿ "ಚಕ್ರಾಭಿಘಾತ ಪ್ರಸಭ" ಇತ್ಯಾದೌ, "ಲಾವಣ್ಯಕಾಂತಿಪರಿಪೂರಿತದಿಙ್ಮುಖೇऽಸ್ಮಿನ್" ಇತ್ಯಾದೌ, "ಕೃತಕಕುಪಿತೈರ್ಬಾಷ್ಪಾಂಭೋಭಿಃ" ಇತ್ಯಾದೌ ಚ ವಸ್ತುಮಾತ್ರಸ್ಯ ಅಲಂಕಾರಸ್ಯ ರಸಾದೇಶ್ಚ ಪ್ರತೀಯಮಾನಸ್ಯಾರ್ಥಸ್ಯ ಅವಾಚ್ಯಸ್ಯ ಅಪ್ರಾಧಾನ್ಯಂ ಸ್ಯಾತ್ । ತಚ್ಚ ಅನಿಷ್ಟಂ ಭವತಿ । ತಯೋರಗ್ನಿಧೂಮಯೋರಿವ ಗಮ್ಯಗಮಕಭಾವೇನ ಅವಸ್ಥಾನಾತ್ ಪ್ರಧಾನೇತರಭಾವಸ್ಯ ಅವಶ್ಯಾಭ್ಯುಪಗಮ್ಯತ್ವಾತ್ ।**

**ಅನುವಾದ:**

ಅಥವಾ "ಶುಚಿ ಭೂಷಯತಿ...." ಇತ್ಯಾದಿ ಪದ್ಯದಲ್ಲಿ ಭೂಷಣಭೂಷ್ಯಭಾವದ ಶೃಂಖಲೆಯಲ್ಲಿ ಸಂದರ್ಭಾನುಗುಣವಾಗಿ ಮಾತಿನ ಚಮತ್ಕಾರದ ವೈಚಿತ್ರ್ಯ ಮಾತ್ರ ಕವಿಗೆ ವಿವಕ್ಷಿತ, ಅದು ನೆರವೇರಿಸಲ್ಪಟ್ಟಿದೆ ಎಂದು ಸಹೃದಯರ ಮನಸ್ಸು ಅದರಿಂದಲೇ ಸೆಳೆಯಲ್ಪಡುತ್ತದೆ, ಆದ್ದರಿಂದ ಅವರಿಗೆ (ಪ್ರಕ್ರಮಭೇದ ದೋಷದಿಂದಾಗುವ) ಪ್ರತೀತಿಯ ವಿಘ್ನದ ತೊಂದರೆಯು ಅರಿವಿಗೆ ಬರುವುದಿಲ್ಲ.

ಮತ್ತೆ ಹೀಗೆ ಪ್ರಶ್ನೆ ಮಾಡಬಹುದು–

ಶಬ್ದವ್ಯಾಪಾರವಿಷಯವಾದ ಅರ್ಥಕ್ಕೇ ಪ್ರಾಧಾನ್ಯ, ಬೇರೆಯದಕ್ಕೆ ಪ್ರಾಧಾನ್ಯವಿಲ್ಲ ಎಂದು ಹೇಳಿದರೆ

**ಚಕ್ರಾಭಿಘಾತಪ್ರಸಭಾಜ್ಞಯೈವ ಚಕಾರ ಯೋ ರಾಹುವಧೂಗಣಸ್ಯ।**
**ಆಲಿಂಗನೋದ್ದಾಮ ವಿಲಾಸವಂಧ್ಯಂ ರತೋತ್ಸವಂ ಚುಂಬನಮಾತ್ರಶೇಷಮ್॥**

(ಚಕ್ರಕ್ಕೆ ಕೊಟ್ಟ ದೃಢವಾದ ಆಜ್ಞೆಯಿಂದಲೇ ಯಾವನು ರಾಹುವಿನ ಹೆಂಡಂದಿರ ರತೋತ್ಸವವನ್ನು ಆಲಿಂಗನಾದಿವಿಲಾಸವಿಲ್ಲದೆ ಕೇವಲ ಚುಂಬನದಲ್ಲಿ ಪರ್ಯವಸಾನವಾಗುವಂತೆ ಮಾಡಿದನೋ) ಇತ್ಯಾದಿಗಳಲ್ಲಿ;

**ಲಾವಣ್ಯಕಾಂತಿಪರಿಪೂರಿತದಿಙ್ಮುಖೇऽಸ್ಮಿನ್ ಸ್ಮೇರೇऽಧುನಾ ತವಮುಖೇ ತರಲಾಯತಾಕ್ಷಿ।**
**ಕ್ಷೋಭಂ ಯದೇತಿ ನ ಮನಾಗಪಿ ತೇನ ಮನ್ಯೇ**
**ಸುವ್ಯಕ್ತಮೇವ ಜಡರಾಶಿಯಂ ಪಯೋಧಿಃ॥**

(ಚಂಚಲವಿಶಾಲಾಕ್ಷಿ, ಲಾವಣ್ಯಕಾಂತಿಯಿಂದ ದಿಕ್ಕುಗಳನ್ನೆಲ್ಲ ತುಂಬಿಸುವ ನಿನ್ನ ಮುಖವನ್ನು ಕಂಡರೂ ಈ ಸಮುದ್ರ ಉಕ್ಕದಿರುವುದರಿಂದ ಇದು ಜಡರಾಶಿ ಎಂಬುದು ವ್ಯಕ್ತವಾಗಿದೆ) ಇತ್ಯಾದಿಗಳಲ್ಲಿ; ಮತ್ತು ಕೃತಕಕುಪಿತೈಃ........ (ಈ ಪದ್ಯದ ಅನುವಾದ ಈ ಮೊದಲೇ ಬಂದಿದೆ) ಇತ್ಯಾದಿಗಳಲ್ಲಿ ಕ್ರಮವಾಗಿ ವಸ್ತುಮಾತ್ರ, ಅಲಂಕಾರ ಮತ್ತು ರಸಾದಿರೂಪವಾದ ಅರ್ಥವು ಪ್ರತೀಯಮಾನವಾದುದರಿಂದ ವಾಚ್ಯೇತರವಾದ ಅದು ಅಪ್ರಧಾನವೆಂದು ಹೇಳಬೇಕಾಗುತ್ತದೆ. ಹಾಗೆ ಹೇಳುವುದು ಯಾರಿಗೂ ಇಷ್ಟವಲ್ಲ. ಪ್ರತೀಯಮಾನಾರ್ಥ–ವಾಚ್ಯಾರ್ಥಗಳು ಅಗ್ನಿಧೂಮಗಳಂತೆ

ಗಮ್ಯಗಮಕಭಾವದಲ್ಲಿ ವ್ಯವಸ್ಥಿತವಾಗಿವೆ. ಆದ್ದರಿಂದ ಅವುಗಳಲ್ಲಿ ಪ್ರಧಾನ–ಅಪ್ರಧಾನಭಾವವನ್ನು ಅವಶ್ಯವಾಗಿ ಒಪ್ಪಿಕೊಳ್ಳಲೇಬೇಕು.

**ವಿವರಣೆ:**

ಶಬ್ದದಿಂದ ಬರುವುದು ಶಾಬ್ದ. ಇದು ವಾಚ್ಯಾರ್ಥ. ಅರ್ಥದ ಆಧಾರದಿಂದ ಬರುವುದು ಆರ್ಥ. ಇದು ಪ್ರತೀಯಮಾನಾರ್ಥ. ವಾಚ್ಯಾರ್ಥವು ಗಮಕ, ಎಂದರೆ ಸಾಧನ. ಪ್ರತೀಯಮಾನಾರ್ಥವು ಗಮ್ಯ, ಎಂದರೆ ಸಾಧ್ಯ. ಸಾಧನವು ಸಾಧ್ಯಕ್ಕಾಗಿ ಸ್ವೀಕರಿಸಲ್ಪಡುವುದರಿಂದ ಅಪ್ರಧಾನ. ಸಾಧ್ಯವೇ ಉದ್ದೇಶ್ಯವಾದುದರಿಂದ ಪ್ರಧಾನ.

ಹೀಗೆ ಪ್ರತೀಯಮಾನವು ಪ್ರಧಾನ, ವಾಚ್ಯಾರ್ಥವು ಅಪ್ರಧಾನ. ಆದರೆ ಗ್ರಂಥಕಾರನು ಶಾಬ್ದವಾದುದು ಪ್ರಧಾನ ಎಂದು ಹೇಳಿದ್ದಾನೆ. ಅದು ಹೇಗೆ ಸರಿ? ಎಂಬುದು ಇಲ್ಲಿ ಪ್ರಶ್ನೆ. ಇದಕ್ಕೆ ಉತ್ತರವನ್ನು ಗ್ರಂಥಕಾರನು ನೀಡಿದ್ದಾನೆ.

**ಅತ್ರೋಚ್ಯತೇ । ಪ್ರತೀತ್ಯಪೇಕ್ಷಮನಯೋಃ ಪ್ರಾಧಾನ್ಯಮ್ ಅಪ್ರಾಧಾನ್ಯಂ ಚಾವಸ್ಥಾಪ್ಯತೇ । ವಾಚ್ಯಸ್ಯ ಪ್ರತೀತಿಃ ಶಬ್ದವ್ಯಾಪಾರವಿಷಯ ಇತಿ ತಸ್ಯ ಪ್ರಾಧಾನ್ಯಮವಸ್ಥಾಪ್ಯತೇ । ಪ್ರತೀಯಮಾನಸ್ಯ ಪುನರನ್ಯಥೇತಿ ತಸ್ಯಾಪ್ರಾಧಾನ್ಯಮೇವ ಇತ್ಯುಕ್ತಮ್ । ಯತ್ ಪುನರ್ವಸ್ತುಮಾತ್ರಾದೀನಾಂ ಪ್ರಾಧಾನ್ಯಮವಸ್ಥಾಪ್ಯತೇ, ತದ್ವಾಚ್ಯಪ್ರತೀಯಮಾನ–ಯೋರ್ಧೂಮಾಗ್ನ್ಯೋರಿವ ಗಮ್ಯಗಮಕಭಾವಾಪೇಕ್ಷಯೈವ, ನ ಪ್ರತೀತ್ಯಪೇಕ್ಷಯಾ । ತದಪೇಕ್ಷಯೈವ ಚ ಕ್ವಚಿದ್ವಾಚ್ಯಸ್ಯಾಪಿ ಅಪ್ರಾಧಾನ್ಯಮುಚ್ಯತೇ ।**

**ಅನುವಾದ:**

ಇಲ್ಲಿ ಆ ಪ್ರಶ್ನೆಗೆ ಸಮಾಧಾನವನ್ನು ಹೇಳುತ್ತೇವೆ. ಪ್ರತೀತಿಯನ್ನು ಅವಲಂಬಿಸಿ ವಾಚ್ಯಾರ್ಥ–ಪ್ರತೀಯಮಾನಾರ್ಥಗಳಿಗೆ ಪ್ರಾಧಾನ್ಯವನ್ನೂ ಅಪ್ರಾಧಾನ್ಯವನ್ನೂ ನಾವು ವ್ಯವಸ್ಥೆಗೊಳಿಸಿದ್ದೇವೆ. ವಾಚ್ಯದ ಪ್ರತೀತಿಯು ಶಬ್ದವ್ಯಾಪಾರವನ್ನು ಅವಲಂಬಿಸಿದೆ ಎಂದು ಅದಕ್ಕೆ ಪ್ರಾಧಾನ್ಯವನ್ನು ಹೇಳಿದ್ದೇವೆ. ಪ್ರತೀಯಮಾನವಾದರೋ (ಶಬ್ದವ್ಯಾಪಾರವಿಷಯವಲ್ಲ). ಬೇರೆ ರೀತಿಯಲ್ಲಿ ಅದು (ಅರ್ಥವ್ಯಾಪಾರಾಧೀನವಾಗಿ) ಗೋಚರವಾಗುತ್ತದೆ ಎಂಬ ಕಾರಣದಿಂದ ಅದಕ್ಕೆ ಅಪ್ರಾಧಾನ್ಯ ಎಂದು ನಾವು ಹೇಳುತ್ತೇವೆ.

ವಸ್ತುಮಾತ್ರ (ಅಲಂಕಾರ, ರಸಾದಿ ಇತ್ಯಾದಿ ಪ್ರತೀಯಮಾನಗಳಿಗೆ) ಪ್ರಾಧಾನ್ಯವನ್ನು ಸಿದ್ಧಾಂತ ಮಾಡಿರುವುದು ಧೂಮ–ಅಗ್ನಿಗಳಿಗಿರುವಂತೆ ಗಮ್ಯಗಮಕಭಾವವನ್ನು ಅವಲಂಬಿಸಿ ವಾಚ್ಯ–ಪ್ರತೀಯಮಾನಗಳಿಗೆ ಅನ್ವಯಿಸಿರುವುದರಿಂದ, ಪ್ರತೀತಿಯನ್ನು ಅವಲಂಬಿಸಿ ಅಲ್ಲ. ಆ ಗಮ್ಯಗಮಕಭಾವವನ್ನು ಆಶ್ರಯಿಸಿ ಕೆಲವು ಕಡೆ ವಾಚ್ಯಕ್ಕೆ ಅಪ್ರಾಧಾನ್ಯವನ್ನು ಹೇಳಲಾಗಿದೆ.

**ನನು ಯದಿ ಪ್ರತೀತೇರೇಕರಸಪ್ರಸೃತಾಯಾಃ ಪರಿಸ್ಖಲನ- ಹೇತುತ್ವಾದಯಂ ಪ್ರಕ್ರಮಭೇದದೋಷೋಽನೌಚಿತ್ಯಮಿತಿ ಉಚ್ಯತೇ, ತದಿದಾನೀಮ್ ಏಕಸ್ಮಿನ್ನೇವ ವಸ್ತುನಿ ನಿರ್ವರ್ಣ್ಯಮಾನೇ ಮಹಾಕವೀನಾಂ ಯಾ ವಿಚಿತ್ರಾ ಭಂಗೀಭಣಿತಯೋಽಲಂಕಾರಸಂಜ್ಞಾಃ, ತಾಸ್ವಪ್ಯಯಂ ಪ್ರಕ್ರಮಭೇದದೋಷೋ ದುರ್ನಿಷೇಧಃ ಸ್ಯಾದ್, ವಿಶೇಷಾಭಾವಾತ್। ಮೈವಂ ವೋಚಃ। ತತ್ರಾಪ್ಯಸ್ಮಾಭಿರಯಮಿಷ್ಯತ ಏವ। ಕಥಂ ತರ್ಹಿ ವೈರಸ್ಯಂ ನ ಪ್ರಕಾಶತೇ? ತಸ್ಯಾಂಗನಾವದನೇಂದುಬಿಂಬಗತಸ್ಯೇವ ಕಲಂಕಲೇಶಸ್ಯ ಸ್ವಾದಿಷ್ಠಾಭಿರಲಂಕಾರ-ಪರಂಪರಾಭಿರಭಿಭೂಯಮಾನತ್ವಾದ್ ವಾಕ್ಯಭೇದಾಚ್ಚೇತಿ।**

**ಅನುವಾದ:**

ಏಕರಸವಾಗಿ ಹೊಮ್ಮುವ ಪ್ರತೀತಿಯು ಎಡವುವುದಕ್ಕೆ ಕಾರಣವಾದುದರಿಂದ ಈ ಪ್ರಕ್ರಮಭೇದದೋಷವು ಒಂದು ಪ್ರಕಾರದ ಅನೌಚಿತ್ಯವೇ ಎಂದು ನೀವು ಹೇಳುವುದಾದರೆ, ಆಗ ಒಂದು ವಸ್ತುವನ್ನು ವರ್ಣಿಸುವಾಗ ಮಹಾಕವಿಗಳು ವಿಚಿತ್ರವಾದ ಅಲಂಕಾರಗಳೆಂಬ ಯಾವ ಭಂಗೀಭಣಿತಿಗಳನ್ನು ಬಳಸುವರೋ, ಅವುಗಳಲ್ಲೂ ಈ ಪ್ರಕ್ರಮಭೇದವೆಂಬ ದೋಷವನ್ನು ಅಲ್ಲಗಳೆಯಲಾಗದು, ಏಕೆಂದರೆ ಅವುಗಳಲ್ಲೂ ಬೇರೆ ವಿಶೇಷವೇನಿಲ್ಲ.

ಹಾಗೆ ಹೇಳಬೇಡ. ಆ ಅಲಂಕಾರಗಳಲ್ಲೂ ಈ ದೋಷ ಇದೆಯೆಂದು ನಾವು ಒಪ್ಪಿಕೊಂಡಿದ್ದೇವೆ.

ಹಾಗಾದರೆ (ಅಂಥ ಅಲಂಕಾರಗಳು ಬಂದಾಗ) ವಿರಸತೆ ಏಕೆ ಕಾಣಿಸುವುದಿಲ್ಲ?

ಸುಂದರಿಯ ವದನಚಂದ್ರಬಿಂಬದಲ್ಲಿರುವ ಸಣ್ಣ ಕಳಂಕದಂತೆ ಅತ್ಯಂತ ಸಿಹಿಯಾದ ಅಲಂಕಾರಪರಂಪರೆಗಳಿಂದ ಆ ದೋಷವು ಮುಚ್ಚಿಹೋಗುವುದರಿಂದ ಮತ್ತು ಅಲ್ಲಿ ವಾಕ್ಯಭೇದ (ಹಲವು ಬೇರೆ ಬೇರೆ ವಾಕ್ಯಗಳ ಸಮೂಹ) ಇರುವುದರಿಂದ ವಿರಸತೆ ಕಾಣಿಸುವುದಿಲ್ಲ.

**ಯದುಕ್ತಮ್- ಏಕೋ ಹಿ ದೋಷೋ ಗುಣಸಂನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ। ಇತಿ। ನ ತು ತಾವತಾಸೌ ನಾಸ್ತ್ಯೇವೇತಿ ಶಕ್ಯಂ ಕಲ್ಪಯಿತುಂ, ತತ್ಸದ್ಭಾವಸ್ಯ ನ್ಯಾಯಸಿದ್ಧತ್ವಾತ್। ನಹಿ ಭಂಗೀಭಣಿತಿವಿಷಮೇ ವರ್ತ್ಮನಿ ಪ್ರವರ್ತಮಾನಾ ಪ್ರತೀತಿರಪರಿಸ್ಖಲಿತಕ್ರಮೇಣೈವ ಪ್ರವರ್ತತ ಇತಿ ಉಪಪದ್ಯತೇ, ಕಾರಣಭೇದಸ್ಯಾಪಿ ಕಾರ್ಯಭೇದಹೇತುತ್ವೋಪಗಮಾತ್। ತದೇತದುಕ್ತಂ ಭವತಿ ಸರ್ವ ಏವ ಭಣಿತಿಪ್ರಕಾರಃ ಪ್ರಕ್ರಮಭೇದಸ್ಯ ವಿಷಯ ಇತಿ। ಸ ಚ ವಿವಿಚ್ಯಮಾನೋ ವಾಚ್ಯಪ್ರತೀಯಮಾನಾರ್ಥನಿಷ್ಠ ಏವ ಪರ್ಯವಸ್ಯತೀತಿ ಶಾಬ್ದಶ್ಚಾರ್ಥಶ್ಚೇತಿ ತಥೈವ ದ್ವೈವಿಧ್ಯೇನ ಪ್ರತಿಪಾದಿತಃ।**

**ಅನುವಾದ:**

ಈ ಬಗೆಗೆ (ಕಾಳಿದಾಸನು) ಹೇಳಿದ್ದಾನೆ- "ಅನೇಕ ಗುಣಗಳ ರಾಶಿಯಲ್ಲಿ ಇರುವ ದೋಷವು ಚಂದ್ರನ ಕಿರಣಗಳಲ್ಲಿ ಕಳಂಕದಂತೆ ಮುಚ್ಚಿ ಹೋಗುತ್ತದೆ".

ಅಷ್ಟು ಮಾತ್ರದಿಂದ ಈ ದೋಷವು ಇಲ್ಲವೇ ಇಲ್ಲ ಎಂದು ಕಲ್ಪಿಸಲು ಶಕ್ಯವಲ್ಲ. ಏಕೆಂದರೆ ಅದರ ಅಸ್ತಿತ್ವ ನ್ಯಾಯಸಿದ್ಧವಾಗಿದೆ. ಭಂಗೀಭಣಿತಿಯಿಂದ ಅಂಕುಡೊಂಕಾದ ಮಾರ್ಗದಲ್ಲಿ ಉಂಟಾಗುವ ಪ್ರತೀತಿಯು ಎಡವದೆ ಪ್ರವಹಿಸುತ್ತದೆ ಎಂದು ಹೇಳುವುದು ಸರಿಯಲ್ಲ. ಕಾರಣವು ಭಿನ್ನವಾದಾಗ ಕಾರ್ಯವೂ ಭಿನ್ನವಾಗುತ್ತದೆ. ಕಾರ್ಯವು ಭಿನ್ನವಾಗುವುದಕ್ಕೆ ಕಾರಣಭೇದವೂ ಕಾರಣ ಎಂದು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ಇಷ್ಟು ಹೇಳಿದಂತಾಗುತ್ತದೆ. "ಎಲ್ಲ ಭಣಿತಿ ಪ್ರಕಾರವೂ (ಅಲಂಕಾರವೂ) ಪ್ರಕ್ರಮಭೇದದೋಷದ ವಿಷಯವೇ. ಆ ಭಂಗೀಭಣಿತಿಯನ್ನು ವಿವೇಚಿಸಿದಾಗ ಅದು ವಾಚ್ಯಾರ್ಥ ಮತ್ತು ಪ್ರತೀಯಮಾನಾರ್ಥಗಳನ್ನು ಆಶ್ರಯಿಸಿದೆ ಎಂದೇ ಪರ್ಯವಸಾನವನ್ನು ಹೊಂದುತ್ತದೆ. ಆದ್ದರಿಂದ ಅದನ್ನು ಶಾಬ್ದ-ಆರ್ಥ ಎಂದು ಎರಡು ರೀತಿಯಲ್ಲಿ ಪ್ರತಿಪಾದಿಸಲಾಗಿದೆ."

(ವಸ್ತುಪ್ರಕ್ರಮಭೇದ)

**ವಸ್ತುಪ್ರಕ್ರಮಭೇದೋ ಯಥಾ-"ಇಯಂ ಗೇಹೇ" ಇತಿ। ಅತ್ರ ಪ್ರಥಮೇ ಪಾದೇ ಸಾಕ್ಷಾನ್ನಾಯಿಕಾಯಾಃ ಸ್ವರೂಪಂ ವರ್ಣಯಿತುಮ್ ಉಪಕ್ರಮ್ಯ ಉತ್ತರತ್ರ ಭೇದೇನ ತದೀಯಸ್ಪರ್ಶಾದಿವರ್ಣನಂ ನಿರ್ವಾಹಿತಮಿತಿ ವಸ್ತುಪ್ರಕ್ರಮಭೇದೋ ದೋಷಃ? ನನು ಉಭಯತ್ರಾಪಿ ಅರ್ಥತಸ್ತತ್ಸ್ವರೂಪಪ್ರಕರ್ಷಪ್ರತೀತಿಃ ಪರ್ಯವಸ್ಯತೀತಿ ಕಥಮಯಂ ದೋಷಃ? ಸತ್ಯಮ್। ಸ್ಯಾದೇವಂ ಯದಿ ಅಸಾವುಭಯತ್ರಾಪಿ ಅಸಂಜಾತಪರಿಸ್ಖಲನಖೇದವೈರಸ್ಯಾ ಸತೀ ಏಕರಸೈವ ಪರ್ಯವಸ್ಯೇತ್। ನ ಚ ಉಕ್ತನಯೇನ ಏತತ್ಸಂಭವತೀತಿ ದೋಷತಯೈವಾಯಮುಕ್ತಃ। ತೇನ- "ಮುಖಂ ಪೂರ್ಣಶ್ಚಂದ್ರೋ ವಪುರಮೃತವರ್ತಿರ್ನಯನಯೋಃ" ಇತ್ಯೇವಮಯಂ ಪಾಠಃ ಪರಿಣಮಯಿತವ್ಯಃ।**

**ಅನುವಾದ:**

ವಸ್ತುಪ್ರಕ್ರಮಭೇದದ ಉದಾಹರಣೆ-

ಇಯಂ ಗೇಹೇ ಲಕ್ಷ್ಮೀರಿಯಮಮೃತವರ್ತಿರ್ನಯನಯೋ-
ರಸಾವಸ್ಯಾಃ ಸ್ಪರ್ಶೋ ವಪುಷಿ ಬಹುಲಶ್ಚಂದನರಸಃ।
ಅಯಂ ಕಂಠೇ ಬಾಹುಃ ಶಿಶಿರಮಸೃಣೋ ಮೌಕ್ತಿಕಸರಃ
ಕಿಮಸ್ಯಾ ನ ಪ್ರೇಯೋ ಯದಿ ಪರಮಸಹ್ಯಸ್ತು ವಿರಹಃ॥

"ಇವಳು ಮನೆಯಲ್ಲಿ ಲಕ್ಷ್ಮಿ; ಇವಳು ನನ್ನ ಕಣ್ಣುಗಳಿಗೆ (ತಂಪನ್ನೆರೆಯುವ) ಅಮೃತವರ್ತಿ; ಇವಳ ಸ್ಪರ್ಶವು ನನ್ನ ದೇಹಕ್ಕೆ ಚಂದನದ ರಸ. ಕಂಠದಲ್ಲಿ ಅವಳು ಹಾಕಿದ ಬಾಹು ತಂಪಾದ ಮತ್ತು ಮೃದುವಾದ ಮುತ್ತಿನಹಾರ. ಇವಳದು ಏನುತಾನೆ ನನಗೆ ಪ್ರಿಯವಲ್ಲ? ಕೇವಲ ಇವಳ ವಿರಹ ಸಹಿಸಲು ಅಸಾಧ್ಯವಾದದ್ದು".

ಈ ಪದ್ಯದಲ್ಲಿ ಮೊದಲನೆಯ ಪಾದದಲ್ಲಿ ನಾಯಿಕೆಯ ಸ್ವರೂಪವನ್ನು ನೇರವಾಗಿ ವರ್ಣಿಸಲು ಆರಂಭಿಸಲಾಗಿದೆ. ಆಮೇಲೆ (ಎರಡನೆಯ ಪಾದ

ಇತ್ಯಾದಿಗಳಲ್ಲಿ) ಭೇದವನ್ನು ಆಶ್ರಯಿಸಿ ಅವಳ ಸ್ಪರ್ಶ ಇತ್ಯಾದಿಗಳನ್ನು ವರ್ಣಿಸಿ ನಿರ್ವಾಹವನ್ನು ಮಾಡಲಾಗಿದೆ. ಆದ್ದರಿಂದ ಇಲ್ಲಿ ವಸ್ತುಪ್ರಕ್ರಮಭೇದ ಎಂಬ ದೋಷ.

(ಪೂರ್ವಪಕ್ಷದ ಪ್ರಶ್ನೆ)– (ಹಾಗೆ ವರ್ಣಿಸಿದರೂ ಹೀಗೆ ವರ್ಣಿಸಿದರೂ) ಎರಡು ಪ್ರಕಾರಗಳಲ್ಲೂ ಅರ್ಥದಿಂದ ಆ ಸ್ತ್ರೀಯ ಸ್ವರೂಪದ ಪ್ರಕರ್ಷಪ್ರತೀತಿಯು ಉಂಟಾಗುವುದರಿಂದ ಇದು ಹೇಗೆ ದೋಷ?

ಸತ್ಯ. ಆದರೆ ಆ ಪ್ರತೀತಿಯು ಎರಡು ಪ್ರಕಾರಗಳಲ್ಲೂ ಎಡವದೆ ಖೇದವನ್ನೂ ವೈರಸ್ಯವನ್ನೂ ಉಂಟುಮಾಡದೆ ಏಕರಸವಾಗಿ ಪರ್ಯವಸಾನವನ್ನು ಹೊಂದುವಹಾಗಿದ್ದರೆ ನಿಮ್ಮ ಹೇಳಿಕೆ ಸರಿಯಾಗುತ್ತಿತ್ತು. ನಾವು ವರ್ಣಿಸಿದ ರೀತಿಯಲ್ಲಿ ಹಾಗೆ ಏಕರಸವಾಗಿ ಪ್ರತೀತಿಯ ಪರ್ಯವಸಾನ ಸಂಭವಿಸದು. ಆದ್ದರಿಂದಲೇ ಇದನ್ನು ದೋಷವೆಂದು ಹೇಳಿದ್ದೇವೆ. ಆದ್ದರಿಂದ ಈ ಪದ್ಯದಲ್ಲಿ (ಮೊದಲನೆಯ ಪಾದದ) ಪಾಠವನ್ನು "ಮುಖಂ ಪೂರ್ಣಶ್ಚಂದ್ರೋ ವಪುರಮೃತವರ್ತಿರ್ನಯನಯೋಃ" ಎಂದು ಬದಲಾಯಿಸಬೇಕು.

**ಯಥಾ ಚ– ತರಂಗಯ ದೃಶೋಽಂಗನೇ ಪತತು ಚಿತ್ರಮಿಂದೀವರಂ ಸ್ಫುಟೀಕುರು ರದಚ್ಛದಂ ವ್ರಜತು ವಿದ್ರುಮಃ ಶ್ವೇತತಾಮ್। ಕ್ಷಣಂ ವಪುರಪಾವೃಣು ಸ್ಪೃಶತು ಕಾಂಚನಂ ಕಾಲಿಕಾಮುದಂಚಯ ಮನಾಙ್ಮುಖಂ ಭವತು ಚ ದ್ವಿಚಂದ್ರಂ ನಭಃ॥**

**ಅತ್ರೋಪಮಾನಾನಾಮಿಂದೀವರಾದೀನಾಂ ನಿಂದಾದ್ವಾರೇಣ ನಯನಾದೀನಾಮುಪಮೇಯಾನಾಂ ಯತ್ತೇಭ್ಯೋಽತಿಶಯಲಕ್ಷಣಂ ವಸ್ತು ವಕ್ತುಂ ಪ್ರಕ್ರಾಂತಂ, ತಸ್ಯಾನಿರ್ವಾಹಾದ್ ಭೇದಃ ಮುಖಚಂದ್ರಯೋಃ ಸಾದೃಶ್ಯ ಪ್ರತಿಪಾದನಮಾತ್ರ– ಪರ್ಯವಸಾನಾತ್। ತದೇವಮತ್ರ ಪಾಠಃ ಪಠಿತವ್ಯಃ –"ಉದಂಚಯ ಮನಾಙ್ ಮುಖಂ ಭವತು ಲಕ್ಷ್ಯಲಕ್ಷ್ಮಾ ಶಶೀ"।**

**ಅನುವಾದ:**

"ಅಂಗನೆ, ನಿನ್ನ ಕಣ್ಣುಗಳನ್ನು ತೋರಿಸು, ಗರ್ವಿ ನೈದಿಲೆ ಕೆಳಗುರುಳಲಿ. ನಿನ್ನ ವಸಡನ್ನು ಸ್ಫುಟವಾಗಿ ಮಾಡು, ಹವಳ ಬಿಳಿಚಿಕೊಳ್ಳಲಿ. ಒಂದು ಕ್ಷಣ ಶರೀರವನ್ನು ಪ್ರಕಾಶಪಡಿಸು, ಬಂಗಾರ ಕಪ್ಪಾಗಲಿ. ಸ್ವಲ್ಪ ನಿನ್ನ ಮುಖವನ್ನು ಮೇಲೆತ್ತು. ಆಕಾಶವು ಇಬ್ಬರು ಚಂದ್ರರನ್ನು ಪಡೆದುಕೊಳ್ಳಲಿ".

ಇಲ್ಲಿ ಉಪಮಾನಗಳಾದ ನೈದಿಲೆ ಮುಂತಾದವುಗಳ ನಿಂದೆಯ ಮೂಲಕ ಉಪಮೇಯಗಳಾದ ಕಣ್ಣು ಮುಂತಾದುವುಗಳ ಅತಿಶಯರೂಪದ ವಿಷಯವನ್ನು ಹೇಳಲು ಆರಂಭಿಸಿ, ಅದನ್ನು ಕೊನೆಯವರೆಗೂ ನಡೆಸಿಕೊಳ್ಳಲು ಆಗದೆ ಪ್ರಕ್ರಮಭೇದ ಉಮಟಾಗಿದೆ, ಏಕೆಂದರೆ (ಕೊನೆಯ ಪಾದದಲ್ಲಿ ಮಾಡಿದ ವರ್ಣನೆ) ಮುಖ ಮತ್ತು ಚಂದ್ರನ ಸಾದೃಶ್ಯದಲ್ಲೇ ಪರ್ಯವಸಾನವನ್ನು ಹೊಂದುತ್ತದೆ.

ಆದ್ದರಿಂದ ಇಲ್ಲಿ "ಉದಂಚಯ..... (ಸ್ವಲ್ಪ ನಿನ್ನ ಮುಖವನ್ನು ಮೇಲೆತ್ತು, ಚಂದ್ರನ ಕಳಂಕವು ಕಾಣುವಂತಾಗಲಿ) ಎಂದು ಪಾಠವನ್ನು ಬದಲಾಯಿಸಬೇಕು."

**ಯಥಾ ಚ– ತದ್ವಕ್ತ್ರಂ ಯದಿ ಮುದ್ರಿತಾ ಶಶಿಕಥಾ ತಚ್ಚೇತ್ ಸ್ಮಿತಂ ಕಾ ಸುಧಾ**
**ಸಾ ಚೇತ್ ಕಾಂತಿರತಂತ್ರಮೇವ ಕನಕಂ ತಾಶ್ಚೇದ್ಗಿರೋ ಧಿಙ್ಮಧು।**
**ಸಾ ದೃಷ್ಟಿರ್ಯದಿ ಹಾರಿತಂ ಕುವಲಯೈಃ ಕಿಂ ವಾ ಬಹು ಬ್ರೂಮಹೇ**
**ಯತ್ಸತ್ಯಂ ಪುನರುಕ್ತವಸ್ತುವಿರಸಃ ಸರ್ಗಕ್ರಮೋ ವೇಧಸಃ॥**

**ಅತ್ರಾಪಿ ಉಪಮಾನಾದುಪಮೇಯಸ್ಯ ಅತಿರೇಕಲಕ್ಷಣಂ ಯದ್ವಸ್ತು ವಕ್ತುಮಿಷ್ಟಂ ತಸ್ಯಾರ್ಥಾಂತರನ್ಯಾಸಮುಖೇನ ಪ್ರಕ್ರಮಭೇದಃ, ವಸ್ತುಸರ್ಗಪೌನರುಕ್ತ್ಯಸ್ಯ ಸಾದೃಶ್ಯ–ಮಾತ್ರಪರ್ಯವಸಾನಾದಿತಿ। ತೇನ "ಪುನರುಕ್ತವಸ್ತುವಿಮುಖಃ" ಇತ್ಯತ್ರ ಯುಕ್ತಃ ಪಾಠಃ। ದೋಷೋಽಯಮ್ ಏವಂಜಾತೀಯಕಾನಾಮ್ ಅರ್ಥದೋಷಾಣಾಮ್ ಅನ್ಯೇಷಾಮ್ ಅಪ್ಯುಪಲಕ್ಷಣಮ್। ತೇನ ತಪೇನ ವರ್ಷಾ ಇತ್ಯಾದ್ಯಪಾಕೃತಂ ಭವತಿ।**

**ಅನುವಾದ:**

ಇನ್ನೊಂದು ಉದಾಹರಣೆ–

"ಆ ಮುಖವು ಇದ್ದರೆ ಚಂದ್ರನ ಕಥೆ ಮುಗಿದಂತೆ, ಆ ಮುಗುಳು ನಗೆಯು ಇದ್ದರೆ ಅಮೃತವು ಯಾವ ಪದಾರ್ಥ? ಅವಳ ಕಾಂತಿಯ ಎದುರಿಗೆ ಬಂಗಾರ ಲೆಕ್ಕಕ್ಕಿಲ್ಲದ್ದು. ಅವಳ ಮಾತುಗಳ ಮುಂದೆ ಜೇನಿಗೆ ಧಿಕ್ಕಾರ. ಅವಳ ಕಣ್ಣಿನ ಎದುರಿನಲ್ಲಿ ನೈದಿಲೆಗಳು ಸೋತುಹೋಗುತ್ತವೆ. ಹೆಚ್ಚು ಹೇಳುವುದೇನು? ಸತ್ಯವೇನೆಂದರೆ ಬ್ರಹ್ಮನ ಸೃಷ್ಟಿಯ ಕ್ರಮ ಪುನರುಕ್ತವಸ್ತುಗಳಿಂದ ನೀರಸವಾಗಿದೆ".

ಈ ಪದ್ಯದಲ್ಲೂ ಉಪಮಾನಗಳಿಗಿಂತಲೂ ಉಪಮೇಯಗಳ ಅತಿಶಯದ ವಿಷಯವನ್ನು ಹೇಳುವುದು ಕವಿಗೆ ಇಷ್ಟ. ಅದು (ಕೊನೆಯ ಪಾದದಲ್ಲಿರುವ) ಅರ್ಥಾಂತರನ್ಯಾಸದಿಂದ ಪ್ರಕ್ರಮಭೇದಕ್ಕೆ ಈಡಾಗಿದೆ. ಏಕೆಂದರೆ ಸೃಷ್ಟಿಯ ವಸ್ತುಗಳ ಪೌನರುಕ್ತ್ಯ ಸಾದೃಶ್ಯದಲ್ಲೇ ಪರ್ಯವಸಾನವನ್ನು ಹೊಂದುತ್ತದೆ. ಆದ್ದರಿಂದ ಪುನರುಕ್ತವಸ್ತುವಿಮುಖಃ ಎಂದು ಪಾಠ ಯುಕ್ತವಾಗುತ್ತದೆ. ಈ ದೋಷವು ಇದೇ ರೀತಿಯ ಬೇರೆ ಅರ್ಥದೋಷಗಳಿಗೆ ಉಪಲಕ್ಷಣ. ಆದ್ದರಿಂದ

ತಪೇನ ವರ್ಷಾಃ ಶರದಾ ಹಿಮಾಗಮೋ
ವಸಂತಲಕ್ಷ್ಮ್ಯಾ ಶಿಶಿರಃ ಸಮೇತ್ಯ ಚ।
ಪ್ರಸೂನಕೃತ್ಯಂ ದದತಃ ಸದರ್ತವಃ
ಪುರೇಽಸ್ಯ ವಾಸ್ತವ್ಯಕುಟುಂಬಿತಾಂ ಯಯುಃ॥

ಇತ್ಯಾದಿಗಳನ್ನು ತಪ್ಪಿಸಿದಂತಾಗುತ್ತದೆ.

**ನನು ಕರ್ತೃಪ್ರಕ್ರಮಭೇದೋಽಪೀಹ ಕಸ್ಮಾನ್ನ ಪ್ರದರ್ಶಿತಃ? ಅಸಂಭವಾದಿತಿ ಬ್ರೂಮಃ। ಯಸ್ತು ಕಶ್ಚಿತ್ ಕವಿಭಿಃ ಪ್ರಯುಜ್ಯಮಾನೋ ದೃಶ್ಯತೇ ಸ ಕರ್ತೃವ್ಯತ್ಯಾಸೋ ನಾಮ ಗುಣ ಏವ, ನ ದೋಷಃ। ತತ್ರೈವ ಚಾಯಂ ಪ್ರಕ್ರಮಭೇದಭ್ರಮೋ ಭವತಾಂ ತಯೋರ್ಭಿನ್ನಲಕ್ಷಣತ್ವಾತ್।**

**ಅನುವಾದ:**

[ಗ್ರೀಷ್ಮನೊಡನೆ ವರ್ಷಾಕಾಲ, ಶರತ್ತಿನೊಡನೆ ಹೇಮಂತ (ಹಿಮಋತು) ವಸಂತಲಕ್ಷ್ಮಿಯೊಡನೆ ಶಿಶಿರ ಇವು ಸೇರಿಕೊಂಡು ಎಲ್ಲ ಋತುಗಳೂ ಹೂವುಕೊಡುವ ಸೇವೆಯನ್ನು ಮಾಡುತ್ತಾ ಇವನ ನಗರದಲ್ಲಿ ನಿವಾಸಿಸುವ ಕುಟುಂಬಗಳಾಗಿ ಬಿಟ್ಟಿವೆ– ಎಂಬ ಪದ್ಯದಲ್ಲಿ ತಪೇನ ಎಂಬುದು ಪುಂಲಿಂಗದಲ್ಲಿದೆ, ವರ್ಷಾಃ ಎಂಬುದು ಸ್ತ್ರೀಲಿಂಗ ಶಬ್ದ. ಪುಂಲಿಂಗ ಶಬ್ದವನ್ನು ತೃತೀಯಾ ವಿಭಕ್ತಿಯಲ್ಲೂ ಸ್ತ್ರೀಲಿಂಗ ಶಬ್ದವನ್ನು ಪ್ರಥಮಾವಿಭಕ್ತಿಯಲ್ಲೂ ನಿರ್ದೇಶಿಸಿ ಪದ್ಯದ ಆರಂಭ. ಆಮೇಲೆ ಶರದಾ ಹಿಮಾಗಮಃ, ವಸಂತಲಕ್ಷ್ಮ್ಯಾ ಶಿಶಿರಃ ಎನ್ನುವಾಗ ಸ್ತ್ರೀಲಿಂಗಶಬ್ದಗಳು ತೃತೀಯಾವಿಭಕ್ತಿಯಲ್ಲಿ ಪುಂಲಿಂಗದ ಶಬ್ದಗಳು ಪ್ರಥಮಾವಿಭಕ್ತಿಯಲ್ಲಿ ಉಪಾತ್ತವಾಗಿವೆ, ಆದ್ದರಿಂದ ಪ್ರಕ್ರಮಭೇದ.]

ಕರ್ತೃಪ್ರಕ್ರಮಭೇದವನ್ನೇಕೆ ಇಲ್ಲಿ ತೋರಿಸಿಲ್ಲ? ಅಸಂಭವವಾದುದರಿಂದ ತೋರಿಸಿಲ್ಲ ಎಂದು ಹೇಳುತ್ತೇವೆ. ಕೆಲವರು ಕವಿಗಳು ಹಾಗೆ ಪ್ರಯೋಗಿಸಿರುವುದು ಕಂಡುಬಂದಿದೆ ಎಂದರೆ ಅದು ಕರ್ತೃವ್ಯತ್ಯಾಸ ಎಂಬ ಗುಣ, ದೋಷವಲ್ಲ. ಅದರಲ್ಲಿ ನಿಮಗೆ ಪ್ರಕ್ರಮಭೇದ ಎಂಬ ಭ್ರಾಂತಿ ಉಂಟಾಗಿದೆ. ವಸ್ತುತಃ (ಕರ್ತೃವ್ಯತ್ಯಾಸ ಮತ್ತು ಪ್ರಕ್ರಮಭೇದ) ಎಂಬ ಈ ಎರಡರ ಲಕ್ಷಣಗಳು ಬೇರೆಬೇರೆ.

**ಯದಾಹ–**
**ಪ್ರಕೃತಮಪಿ ಯತ್ರ ಹಿತ್ವಾ ಕರ್ತೃತ್ವಂ ಯುಷ್ಮದಸ್ಮದರ್ಥಸ್ಯ।**
**ಚಾರುತ್ವಾಯಾನ್ಯತ್ರಾರೋಪ್ಯೇತ ಗುಣಃ ಸ ತು ನ ದೋಷಃ॥**
**ಯಶ್ಚ ಯಥಾ ಪ್ರಕ್ರಾಂತೋಽಭಿಧಾತುಮರ್ಥಸ್ತಥೈವ ತಸ್ಯ ನ ಚೇತ್।**
**ನಿರ್ವಾಹಃ ಸ ಪ್ರಕ್ರಮಭೇದೋ, ನ ಪ್ರಕರಣಾವಸಿತಃ॥ ಇತಿ।**
**ಭಿನ್ನಲಕ್ಷಣತ್ವಾನ್ನ ಪ್ರಕ್ರಮಭೇದದೋಷಾಶಂಕಾವಕಾಶಃ।**

**ಅನುವಾದ:**

ಅದನ್ನು (ಪ್ರಾಚೀನ ಗ್ರಂಥಕಾರನು) ಹೇಳಿದ್ದಾನೆ– “ಯುಷ್ಮದ್ (ನೀವು), ಅಸ್ಮದ್ (ನಾವು) ಎಂಬ ಅರ್ಥದ ಕರ್ತೃತ್ವವನ್ನು ಆರಂಭದಲ್ಲಿ ತೋರಿಸಿ ಆಮೇಲೆ ನಿರೂಪಣೆಯ ಸೌಂದರ್ಯಕ್ಕಾಗಿ ಆ ಕರ್ತೃತ್ವವನ್ನು ಬೇರೆಯವರಲ್ಲಿ ಆರೋಪಿಸಿದರೆ ಅದು ಗುಣ, ದೋಷವಲ್ಲ”.

“ಯಾವ ರೀತಿಯಲ್ಲಿ ಅರ್ಥವನ್ನು ಹೇಳಲು ಪ್ರಕ್ರಮ (ಪ್ರಾರಂಭ)ವನ್ನು ಮಾಡಲಾಯಿತೋ ಅದರ ನಿರ್ವಾಹವನ್ನು (ಕೊನೆಯವರೆಗೂ) ಮಾಡಲಾಗದಿದ್ದರೆ,

ಅದು ಪ್ರಕ್ರಮಭೇದ. ಪ್ರಕರಣದಿಂದ ನಿಶ್ಚಿತವಾದುದಲ್ಲ". (ಕರ್ತೃವ್ಯತ್ಯಾಸದ ಮತ್ತು ಪ್ರಕ್ರಮಭೇದದ) ಲಕ್ಷಣಗಳು ಪರಸ್ಪರ ಭಿನ್ನವಾದುದರಿಂದ ಕರ್ತೃಪ್ರಕ್ರಮಭೇದ ಎಂಬ ದೋಷ ಎಂಬ ಸಂಶಯಕ್ಕೆ ಅವಕಾಶವಿಲ್ಲ.

**ತತ್ರ ಯುಷ್ಮದರ್ಥಸ್ಯ ಯಥಾ–**
**'ಯಥಾಹ ಸಪ್ತಮೋ ವೈಕುಂಠಾವತಾರಃ' ಇತಿ।**
**ಅತ್ರ ಹಿ ಯಥಾತ್ಥ ತ್ವಮ್ ಇತಿ ಯುಷ್ಮದರ್ಥಸ್ಯ**
**ಕರ್ತೃತ್ವಂ ಪ್ರಕೃತಮಪಹಾಯ ಚಾರುತ್ವಾಯ**
**ತತೋಽನ್ಯತ್ರಾರೋಪ್ಯೈವಮುಕ್ತಮ್। ದಾಶರಥಿಂ**
**ರಾಮಂ ಪ್ರತಿ ಹಿ ಕಸ್ಯಚಿತ್ ಸಮಕ್ಷಮಿಯಮುಕ್ತಿಃ।**
**ಅಸ್ಮದರ್ಥಸ್ಯ ಯಥಾ–**
**'ನಾಭಿವಾದನಪ್ರಸಾದ್ಯೋ ರೇಣುಕಾಪುತ್ರಃ,**
**ಗರೀಯಾನ್ ಹಿ ಗುರುಧನುರ್ಭಂಗಾಪರಾಧಃ' ಇತಿ।**
**ಅತ್ರಾಪಿ ಹಿ ನಾಭಿವಾದನಪ್ರಸಾದ್ಯೋಽಸ್ಮಿ ಇತಿ ವಕ್ತವ್ಯೇ**
**ಪೂರ್ವವಚ್ಚಾರುತ್ವಾಯೈವಮುಕ್ತಮ್। ಏಷಾ ಹಿ**
**ಭಾರ್ಗವಸ್ಯಾತ್ಮಾನಮುದ್ದಿಶ್ಯೋಕ್ತಿಃ।**

**ಅನುವಾದ:**

ಅದರಲ್ಲಿ ಯುಷ್ಮದರ್ಥದ ಉದಾಹರಣೆ–

"ವಿಷ್ಣುವಿನ ಏಳನೆಯ ಅವತಾರವು ಹೇಳಿದಂತೆ". ಇಲ್ಲಿ 'ನೀನು ಹೇಳಿದಂತೆ' ಎಂದು ಯುಷ್ಮದರ್ಥದ ಪ್ರಕೃತ ಕರ್ತೃತ್ವವನ್ನು ಬಿಟ್ಟು ಸೌಂದರ್ಯಕ್ಕಾಗಿ ಬೇರೆ ವಸ್ತುವಿನಲ್ಲಿ ಕರ್ತೃತ್ವವನ್ನು ಆರೋಪಿಸಿ ಹೀಗೆ ಮಾತನಾಡಿದ್ದಾರೆ. ದಶರಥಪುತ್ರ ರಾಮನನ್ನು ಕುರಿತು ಅವನ ಎದುರಿನಲ್ಲೇ ಯಾರೋ ಒಬ್ಬನು ಹೇಳಿದ ಮಾತು ಇದು. ಅಸ್ಮದರ್ಥದ ಉದಾಹರಣೆ–

'ರೇಣುಕಾಪುತ್ರನು ಕೇವಲ ಅಭಿವಾದನದಿಂದ ಪ್ರಸನ್ನನಾಗನು. ಗುರುವಿನ ಬಿಲ್ಲನ್ನು ಮುರಿದುದು ದೊಡ್ಡ ಅಪರಾಧ'.

ಇಲ್ಲಿಯೂ 'ಅಭಿವಾದನಮಾತ್ರದಿಂದ ನಾನು ಪ್ರಸನ್ನನಾಗುವುದಿಲ್ಲ' ಎಂದು ಹೇಳಬೇಕಿರುವಾಗ, ಹಿಂದಿನ ಉದಾಹರಣೆಯಲ್ಲಿ ಮಾಡಿದಂತೆ ಸೌಂದರ್ಯಕ್ಕಾಗಿ ಹೀಗೆ ಹೇಳಿದ್ದಾನೆ. ಇದು ತನ್ನನ್ನೇ ಕುರಿತು ಭಾರ್ಗವ ಪರಶುರಾಮನು ಹೇಳಿದ ಮಾತು.

**ದ್ವಿವಿಧೋ ಹ್ಯನ್ಯಶಬ್ದಾರ್ಥಶ್ಚೇತನಾಚೇತನಭೇದಾತ್। ತತ್ರ ಚೇತನೇಽನ್ಯತ್ರಾರೋಪೋ ಹಿ ದರ್ಶಿತ ಏವ। ಅಚೇತನೇ ತು ಯಥಾ–**

**ಚಾಪಾಚಾರ್ಯಃಪಶುಪತಿರಸೌ ಕಾರ್ತ್ತಿಕೇಯೋ ವಿಜೇಯೋ**
**ಬಾಣವ್ಯಸ್ತಃ ಸದನಮುದಧಿರ್ಭೂರಿಯಂ ಹಂತಕಾರಃ।**

**ಅಸ್ತ್ಯೇವೈತತ್ ಕಿಮು ಕೃತವತಾ ರೇಣುಕಾಕಂಠಬಾಧಾಂ**
**ಬದ್ಧಸ್ಪರ್ಧಸ್ತವ ಪರಶುನಾ ಲಜ್ಜತೇ ಚಂದ್ರಹಾಸಃ॥**

**ಅತ್ರ ಹಿ 'ತ್ವಂ ರೇಣುಕಾಕಂಠಬಾಧಾಂ ಕೃತವಾನಿತಿ ತ್ವಯಾ ಬದ್ಧಸ್ಪರ್ಧೋಽಹಂ ಲಜ್ಜೇ' ಇತಿ ವಕ್ತವ್ಯೇ ಚಾರುತ್ವಾಯ ಯುಷ್ಮದರ್ಥಯೋಃ ಕರ್ತೃತ್ವಮುಭಯೋಃ ಪರಶುಚಂದ್ರ-ಹಾಸಯೋರ್ಜಡಯೋರಾರೋಪ್ಯೈವಮುಕ್ತಮ್।**

**ಅನುವಾದ:**

(ಅನ್ಯತ್ರ ಆರೋಪ ಎಂಬಲ್ಲಿ) ಅನ್ಯ ಎಂಬ ಶಬ್ದದ ಅರ್ಥವು ಚೇತನ–ಅಚೇತನ ಎಂಬ ಭೇದದಿಂದ ಎರಡು ವಿಧವಾಗಿದೆ. ಚೇತನದಲ್ಲಿ ಆರೋಪವನ್ನು (ಹಿಂದಿನ ಉದಾಹರಣೆಗಳಲ್ಲಿ) ತೋರಿಸಿ ಆಗಿದೆ. ಅಚೇತನದಲ್ಲಿ ಆರೋಪಕ್ಕೆ ಉದಾರಣೆ–

"ನಿನಗೆ ಬಿಲ್ವಿದ್ಯೆಯನ್ನು ಕಲಿಸಿದ ಆಚಾರ್ಯ ಆ ಶಿವನು. ನೀನು ಗೆಲ್ಲಲು ಆರಿಸಿಕೊಂಡ ಪ್ರತಿಸ್ಪರ್ಧಿ ಕಾರ್ತಿಕೇಯನು. ನಿನ್ನ ಮನೆ ಬಾಣದಿಂದ ಆಚೆಗೆ ತಳ್ಳಲ್ಪಟ್ಟ ಕಡಲು. ನೀನು ದಾನ ಕೊಟ್ಟ ವಸ್ತು ಈ ಭೂಮಂಡಲ. ಇದೆಲ್ಲ ಇದ್ದದ್ದೇ. ಆದರೂ ರೇಣುಕೆಯ ಕತ್ತನ್ನು ಕತ್ತರಿಸಿದ ನಿನ್ನ ಪರಶುವಿನೊಡನೆ ಸ್ಪರ್ಧಿಸಲು ನನ್ನ ಖಡ್ಗ ಚಂದ್ರಹಾಸವು ನಾಚುತ್ತದೆ".

ಈ ಪದ್ಯದಲ್ಲಿ 'ನೀನು (ತಾಯಿ) ರೇಣುಕೆಯ ಕತ್ತನ್ನು ಕತ್ತರಿಸಿದೆ ಎಂದು ನಿನ್ನೊಡನೆ ಸ್ಪರ್ಧಿಸಲು ನಾನು ನಾಚುತ್ತೇನೆ' ಎಂದು ಹೇಳಬೇಕಾಗಿತ್ತು. ಆದರೆ ನಿರೂಪಣೆಯ ಸೊಬಗಿಗಾಗಿ ನೀನು–ನಾನು ಎಂಬ ಅರ್ಥಗಳ ಕರ್ತೃತ್ವವನ್ನು ಜಡವಸ್ತುಗಳಾದ ಪರಶು ಮತ್ತು ಚಂದ್ರಹಾಸಗಳಲ್ಲಿ ಆರೋಪಿಸಿ ಹೀಗೆ ಹೇಳಲಾಗಿದೆ.

**ಯಥಾ ಚ–**

**ಭೋ ಲಂಕೇಶ್ವರ ದೀಯತಾಂ ಜನಕಜಾ ರಾಮಃ ಸ್ವಯಂ ಯಾಚತೇ**
**ಕೋಽಯಂ ತೇ ಮತಿವಿಭ್ರಮಃ ಸ್ಮರ ನಯಂ ನಾದ್ಯಾಪಿ ಕಿಂಚಿದ್ಗತಮ್।**
**ನೈವಂ ಚೇತ್ ಖರದೂಷಣತ್ರಿಶಿರಸಾಂ ಕಂಠಾಸೃಜಾ ಪಂಕಿಲಃ**
**ಪತ್ರೀ ನೈಷ ಸಹಿಷ್ಯತೇ ಮಮ ಧನುರ್ಜ್ಯಾಬಂಧಬಂಧೂಕೃತಃ॥**

**ಇತಿ। ಅತ್ರಾಪಿ ಹಿ 'ಅಹಂ ನ ಸಹಿಷ್ಯೇ' ಇತಿ ವಕ್ತವ್ಯೇ ಪೂರ್ವವದಸ್ಮದರ್ಥಸ್ಯ ಕರ್ತೃತ್ವಮ್ ಅಚೇತನೇ ಪತ್ರಿಣಿ ಸಮಾರೋಪ್ಯೈಮುಕ್ತಮ್।**

**ಅನುವಾದ:**

ಇನ್ನೊಂದು ಉದಾಹರಣೆ– "ಎಲೈ ಲಂಕೇಶ್ವರ, ಸೀತೆಯನ್ನು ಕೊಟ್ಟುಬಿಡು, ಸ್ವಯಂ ರಾಮನೇ ಕೇಳುತ್ತಿದ್ದಾನೆ. ನಿನ್ನ ಈ ಬುದ್ಧಿಭ್ರಮಣೆ ಏಕೆ ಉಂಟಾಗಿದೆ?

ನೀತಿಶಾಸ್ತ್ರವನ್ನು ಸ್ಮರಿಸಿಕೋ, ಈಗಲೂ ಏನೂ ಕಳೆದುಹೋಗಿಲ್ಲ. ನೀನು ಹಾಗೆ ಮಾಡದಿದ್ದರೆ ಖರ–ದೂಷಣ–ತ್ರಿಶಿರಸ್ಸುಗಳ ಕುತ್ತಿಗೆಯ ನೆತ್ತರಿನಿಂದ ತೊಯ್ದು, ನನ್ನ ಧನುಸ್ಸಿನ ಮೌರ್ವಿಗೆ ಜೋಡಿಸಿರುವ ಈ ಬಾಣವು ಸಹಿಸದು".

ಈ ಪದ್ಯದಲ್ಲಿ "ನಾನು ಸಹಿಸೆನು" ಎಂದು ಹೇಳಬೇಕಾದ ಸಂದರ್ಭದಲ್ಲಿ ಹಿಂದಿನಂತೆ ಸೊಬಗಿಗಾಗಿ ಅಸ್ಮದರ್ಥದ ಕರ್ತೃತ್ವವನ್ನು ಅಚೇತನ (ಜಡ)ವಾದ ಬಾಣದಲ್ಲಿ ಆರೋಪಿಸಿ ಹೀಗೆ ಹೇಳಲಾಗಿದೆ.

## ಕ್ರಮಭೇದಃ

**ಕ್ರಮಭೇದೋ ಯಥಾ– ತೀರ್ಥೇ ತದೀಯೇ ಗಜಸೇತುಬಂಧಾತ್ ಪ್ರತೀಪಗಾಮ್ ಉತ್ತರತೋಽಸ್ಯ ಗಂಗಾಮ್॥ ಇತಿ। ಅತ್ರ ಹಿ ಪರಾಮರ್ಶನೀಯಮರ್ಥಮ್ ಅನುಕ್ತ್ವೈವ ಯಸ್ತಸ್ಯ ಸರ್ವನಾಮಪರಾಮರ್ಶಃ ಸ ಕ್ರಮಭೇದೋ ದೋಷಃ। ತಸ್ಯ ಹಿ ಪ್ರಕ್ರಾಂತೋಽರ್ಥೋ ವಿಷಯ ಇಷ್ಟೋ ನ ಪ್ರಕ್ರಂಸ್ಯಮಾನಃ। ತಸ್ಯ ಸ್ಮೃತಿಪರಾಮರ್ಶರೂಪತ್ವಾತ್। ಸ್ಮೃತೇಶ್ಚಾನುಭೂತ ಏವಾರ್ಥೋ ವಿಷಯೋ ನಾನುಭವಿಷ್ಯಮಾಣಃ। ಅತ್ರ ಚ ಪ್ರತೀತಿಮಾತ್ರಮನುಭವಃ ಅಭಿಮತೋ, ನೇಂದ್ರಿಯವಿಷಯಭಾವಃ। ನ ಸ ಗಂಗಾರ್ಥಃ ಪ್ರತೀತಪೂರ್ವೋ ಯಃ ಪರಾಮೃಶ್ಯೇತೇತಿ ಪರಾಮರ್ಶಕ್ರಮಭೇದೋ ದೋಷಃ।**

**ಅನುವಾದ:**

ಕ್ರಮಭೇದದೋಷದ ಉದಾಹರಣೆ–

ಅದರ ತೀರ್ಥದಲ್ಲಿ ಗಜಸೇತುವೆಯಿಂದ ಪಶ್ಚಿಮವಾಹಿನಿಯಾಗಿದ್ದ ಗಂಗೆಯನ್ನು ದಾಟಿದ (ಕುಶನಿಗೆ ಆಕಾಶದಲ್ಲಿ ಹಾರುತ್ತಿದ್ದ ಹಂಸಗಳು ನೈಸರ್ಗಿಕ ಚಾಮರೆಗಳಾದುವು.) ಇಲ್ಲಿ ತಚ್ಛಬ್ದದಿಂದ ಪರಾಮರ್ಶನೀಯವಾದ ಅರ್ಥವನ್ನು ಮೊದಲು ಹೇಳದೆ ತದ್ ಎಂಬ ಸರ್ವನಾಮದಿಂದ ಉಲ್ಲೇಖಿಸಿರುವುದರಿಂದ ಕ್ರಮಭೇದ ಎಂಬ ದೋಷ. ತದ್ ಎಂಬ ಸರ್ವನಾಮಕ್ಕೆ ಹಿಂದೆ ಪ್ರಕ್ರಾಂತವಾದ ಅರ್ಥವೇ ವಿಷಯ, ಮುಂದೆ ಹೇಳಲ್ಪಡುವುದಲ್ಲ. ಏಕೆಂದರೆ ತದ್ ಎಂಬುದರ ಅರ್ಥ ಸ್ಮೃತಿ (ನೆನಪು)ಯನ್ನು ಒಳಗೊಳ್ಳುತ್ತದೆ. ಸ್ಮೃತಿಗೆ ವಿಷಯವಾಗುವುದು ಹಿಂದೆ ಅನುಭವಿಸಲ್ಪಟ್ಟ ವಸ್ತುವೇ, ಮುಂದೆ ಯಾವಾಗಲೋ ಅನುಭವಿಸಲ್ಪಡುವುದಲ್ಲ.

ಈ ಶಾಸ್ತ್ರದಲ್ಲಿ ಅನುಭವ ಎಂದರೆ ಪ್ರತೀತಿಮಾತ್ರ. ಅದು ಇಂದ್ರಿಯಕ್ಕೆ ವಿಷಯವಾಗಬೇಕಾಗಿಲ್ಲ. (ಇಲ್ಲಿ ತದೀಯೇ ಎಂಬ ಶಬ್ದದಿಂದ ಗಂಗಾಸಂಬಂಧಿ ಎಂದು ವಿವಕ್ಷಿತ), ಆದರೆ ಪರಾಮರ್ಶಕ್ಕೆ ಗಂಗಾ ಎಂಬ ಅರ್ಥವು ಮೊದಲು ಪ್ರತೀತಿಗೆ ವಿಷಯವಾಗಿಲ್ಲ, ಆದ್ದರಿಂದ ಪರಾಮರ್ಶಕ್ರಮಭೇದ ಎಂಬ ದೋಷ.

**ನನು ಪದಾರ್ಥಬುದ್ಧೌ ಉಪಕ್ರಮ ಏವಾಯಮವಭಾಸತೇ ದೋಷಃ, ಯತ್ರ ಪದಾರ್ಥಪೌರ್ವಾಪರ್ಯಪ್ರಕಾಶಃ ಯತ್ಸಮಾಶ್ರಯೋಽಯಂ ದೋಷ ಉದ್ಘುಷ್ಯತೇ। ನ**

**ವಾಕ್ಯಾರ್ಥವಿಮರ್ಶದಶಾಯಾಮ್। ತತ್ರ ಹಿ ನ ಪೌರ್ವಾಪರ್ಯಪ್ರತಿನಿಯಮಾವಭಾಸಃ, ತಸ್ಯ ನಿರಂಶತ್ವಾತ್। ಬಹಿರಂಗಾ ಚ ಪದಾರ್ಥಬುದ್ಧಿಃ ಅಂತರಂಗಶ್ಚ ವಾಕ್ಯಾರ್ಥವಿಮರ್ಶ ಇತಿ ಕಥಮಯಂ ದೋಷಃ?**

**ಅನುವಾದ:**

(ಪೂರ್ವಪಕ್ಷದ ಪ್ರಶ್ನೆ) –ಈ ದೋಷವು ಪದಾರ್ಥಗಳ ಬುದ್ಧಿಯುಂಟಾಗುವಾಗ ಪ್ರಾರಂಭದಲ್ಲಿ ತೋರಿಬರುತ್ತದೆ. ಆ ಸ್ಥಿತಿಯಲ್ಲಿ ಪದಗಳ ಅರ್ಥಗಳ ಪೌರ್ವಾಪರ್ಯವು (ಇದು ಮೊದಲು, ಇದು ಆಮೇಲೆ ಎಂಬ ಕ್ರಮವು) ತೋರುತ್ತದೆ. ಅದನ್ನೇ ಆಶ್ರಯಿಸಿ ಈ ಕ್ರಮಭೇದವೆಂಬ ದೋಷವನ್ನು ಘೋಷಿಸಿ ಹೇಳಲಾಗುತ್ತಿದೆ. ವಾಕ್ಯಾರ್ಥಜ್ಞಾನದ ಅವಸ್ಥೆಯಲ್ಲಿ ಈ ದೋಷ ತೋರುವುದಿಲ್ಲ. ಏಕೆಂದರೆ ಅದರಲ್ಲಿ ವಿಭಾಗಗಳಿಲ್ಲ (ವಾಕ್ಯಾರ್ಥಜ್ಞಾನವು ಅಖಂಡ). ಪದಾರ್ಥಬುದ್ಧಿಯು ಬಹಿರಂಗ, ವಾಕ್ಯಾರ್ಥವಿಮರ್ಶವು ಅಂತರಂಗ. ಹೀಗಿರುವಾಗ ಈ ಕ್ರಮಭೇದವೆಂಬುದು ಹೇಗೆ ದೋಷವಾಗುವುದು?

**ವಿವರಣೆ:**

ಒಂದೊಂದು ಪದದ ಶ್ರವಣವಾದಾಗಲೂ ಅದರ ಅರ್ಥದ ಭಾಸವಾಗುತ್ತದೆ. ಹೀಗೆ ಪದಾರ್ಥಜ್ಞಾನ ಉಂಟಾಗುವಾಗ ಮೊದಲು ಕೇಳಿಸಿದ ಪದದ ಅರ್ಥವು ಮೊದಲು ಹೊಳೆಯಿತು, ಆಮೇಲೆ ಕೇಳಿಸಿದ ಪದದ ಅರ್ಥವು ಆಮೇಲೆ ಬುದ್ಧಿಗೆ ಗೋಚರವಾಯಿತು ಎಂಬ ಪೌರ್ವಾಪರ್ಯವುಂಟು. ಗಂಗಾಶಬ್ದವು ತದೀಯೇ ಎಂಬ ಪದವಾದ ಮೇಲೆ ಎಲ್ಲೋ ಇರುವುದರಿಂದ ಪದಾರ್ಥಜ್ಞಾನಾವಸ್ಥೆಯಲ್ಲಿ ಕ್ರಮಭೇದ ಎಂಬ ದೋಷವನ್ನು ಹೇಳಬಹುದು. ಆದರೆ ಪದಾರ್ಥಗಳೆಲ್ಲ ಅನ್ವಯವನ್ನು ಹೊಂದಿದ ಮೇಲೆ ಉಂಟಾಗುವ ವಾಕ್ಯಾರ್ಥಜ್ಞಾನವು ಅಖಂಡ. ಅದರಲ್ಲಿ ಇದು ಮೊದಲು, ಅದು ಆಮೇಲೆ ಎಂಬ ಅಂಶಗಳೇ ಇಲ್ಲ. ಅಂತರಂಗ ಎಂದು ಕರೆಸಿಕೊಳ್ಳುವ ವಾಕ್ಯಾರ್ಥವೇ ಮುಖ್ಯ. ಅದರಲ್ಲಿ ಕ್ರಮಭೇದಕ್ಕೆ ಅವಕಾಶವೇ ಇಲ್ಲ– ಎಂದು ಪೂರ್ವಪಕ್ಷಿಯ ಅಭಿಪ್ರಾಯ.

**ಸತ್ಯಮ್। ಅಸ್ತ್ಯೇತತ್। ಕಿಂತು ಸ ವಾಕ್ಯಾರ್ಥವಿಮರ್ಶಃ ಪ್ರವರ್ತಮಾನೋ ವಕ್ತ್ರಭಿಪ್ರಾಯ ಪ್ರತಿರೂಪ ಏವ ಪ್ರವರ್ತತೇ। ನಾನ್ಯಾದೃಶಃ, ತತ್ಸಂಚಾರಮಯತ್ವಾಚ್ಛಾಬ್ದವ್ಯವಹಾರಸ್ಯ। ಯದಾಹುಃ –ವಕ್ತುರಭಿಪ್ರಾಯಂ ಸೂಚಯೇಯುಃ ಇತಿ। ತತ್ರ ಚಾಸೌ ಸೂಕ್ಷ್ಮತಯಾ ಅನಭಿವ್ಯಕ್ತಪದಾರ್ಥ–ಸ್ವರೂಪಃ ಸ್ಥಿತ ಏವ ಪದಾರ್ಥಬುದ್ಧೌ ಸ್ಥೂಲತಯಾ ಕೇವಲಂ ವ್ಯಕ್ತೋಽವಭಾಸತೇ ಇತಿ ಪದಾರ್ಥಸಮಾಶ್ರಯೋಽಯಂ ದೋಷಸ್ತತ್ರಾಪಿ ದುರ್ನಿಷೇಧ ಏವ।**

**ಅನುವಾದ:**

ಸತ್ಯ। ನೀವು ಹೇಳುವುದೂ ಸರಿ. ಆದರೆ ಉಂಟಾಗುವ ವಾಕ್ಯಾರ್ಥ ವಿಮರ್ಶವು ವಕ್ತೃವಿನ ಅಭಿಪ್ರಾಯದ ಪ್ರತಿಬಿಂಬದಂತೆಯೇ ಉಂಟಾಗುತ್ತದೆ. ಬೇರೆಯ ರೂಪದಲ್ಲಲ್ಲ. ಏಕೆಂದರೆ ಶಾಬ್ದವ್ಯವಹಾರವು ವಕ್ತೃವಿನ ಅಭಿಪ್ರಾಯದ ಸಂವಹನಕ್ಕಾಗಿ ಇರುತ್ತದೆ. ಪ್ರಾಚೀನರೂ ಹೇಳಿದ್ದಾರೆ– (ಶಬ್ದಗಳು) ವಕ್ತೃವಿನ

ಅಭಿಪ್ರಾಯವನ್ನು ಸೂಚಿಸಬೇಕು. ಅನಭಿವ್ಯಕ್ತವಾದ (ಅಸ್ಪಷ್ಟವಾದ) ರೂಪದಲ್ಲಿ ಇರುವ ಸೂಕ್ಷ್ಮಕ್ರಮವು ಪದಾರ್ಥಬುದ್ಧಿಯಲ್ಲಿ ಸ್ಥೂಲವಾಗಿ, ವ್ಯಕ್ತವಾಗಿ ತೋರಿಬರುತ್ತದೆ. ಆದ್ದರಿಂದ ಪದಾರ್ಥಗಳನ್ನು ಆಶ್ರಯಿಸಿರುವ ಈ ಕ್ರಮಭೇದ ಎಂಬ ದೋಷವು ವಾಕ್ಯಾರ್ಥವಿಮರ್ಶದಲ್ಲೂ ನಿಷೇಧಿಸಲಾಗದುದು ಎಂದೇ ಹೇಳುತ್ತೇವೆ.

**ನ ಚಾತ್ರ ಪ್ರಮಾದಜಃ ಪಾದಯೋಃ ಪೌರ್ವಾಪರ್ಯವಿಪರ್ಯಯಃ ಇತಿ ಶಕ್ಯತೇ ವಕ್ತುಂ, ತತ್ರಾಪಿ ಗಂಗಾಪ್ರತೀಪಗಮನಹೇತೋಃ ಶಾಬ್ದಸ್ಯ ತದೀಯತೀರ್ಥಾಭಿಧಾನವ್ಯವಧಾನೇ ಸತಿ, ಅನ್ಯಸ್ಯ ಪ್ರಕ್ರಮಭೇದದೋಷಸ್ಯ ಆವಿರ್ಭಾವಾಪತ್ತೇಃ। ತೇನ ಪಾದಯೋರ್ವಿಪರ್ಯಯಃ ಶಾಬ್ದಸ್ಯ ಚ ಹೇತೋರ್ಗಂಗಾವಿಶೇಷಣಮುಖೇನ ಆರ್ಥತ್ವಮ್ ಇತ್ಯುಭಯವಿಪರ್ಯಯೋಽತ್ರ ಶ್ರೇಯಾನ್ ಇತಿ।**

**ಅನುವಾದ:**

ಇಲ್ಲಿ ಕವಿಯ ಅನವಧಾನದಿಂದ ಪಾದಗಳು ಹಿಂದುಮುಂದು ಆಗಿವೆ ಎಂದು ಹೇಳುವುದೂ ಸರಿಯಲ್ಲ. ಹಾಗೆ ಮಾಡಿದರೂ ಗಂಗೆಯು ಏಕೆ ಹಿಂದಕ್ಕೆ ಹರಿಯಿತು ಎಂಬುದಕ್ಕೆ ಕೊಟ್ಟಿರುವ ಶಾಬ್ದವಾದ ಕಾರಣಕ್ಕೆ ತದೀಯತೀರ್ಥ ಎಂಬ ಪದಗಳಿಂದ ವ್ಯವಧಾನವು ಉಂಟಾಗುವುದರಿಂದ ಮತ್ತೊಂದು ಪ್ರಕ್ರಮಭಂಗ ಎಂಬ ದೋಷವು ಹುಟ್ಟುವ ಆಪತ್ತಿ ಉಂಟಾಗುವುದು. ಆದ್ದರಿಂದ (ಪದ್ಯವನ್ನು ನಿರ್ದೋಷವನ್ನಾಗಿ ಮಾಡಬೇಕಾದರೆ) ಪಾದಗಳ ವಿಪರ್ಯಾಸವನ್ನು ಮಾಡಬೇಕು ಮತ್ತು ಶಾಬ್ದವಾಗಿರುವ ಕಾರಣವನ್ನು ಗಂಗಾ ವಿಶೇಷಣವನ್ನಾಗಿ ಮಾರ್ಪಡಿಸಿ ಆರ್ಥವನ್ನಾಗಿ ಮಾಡಬೇಕು. ಹೀಗೆ ಉಭಯ ವಿಧವಾದ ವಿಪರ್ಯಯವೇ ಇಲ್ಲಿ ಲೇಸು.

**ವಿವರಣೆ:**

ಈ ಪ್ರಕರಣದಲ್ಲಿ ಕೊಟ್ಟಿರುವ "ತೀರ್ಥೇತದೀಯೇ....." ಎಂಬ ಪದ್ಯವು ಕಾಳಿದಾಸನ ರಘುವಂಶದ ಹದಿನಾರನೆಯ ಸರ್ಗದಲ್ಲಿದೆ. ಪೂರ್ಣಪದ್ಯ ಇಂತಿದೆ–

ತೀರ್ಥೇ ತದೀಯೇ ಗಜಸೇತುಬಂಧಾತ್
ಪ್ರತೀಪಗಾಮುತ್ತರತೋಽಸ್ಯ ಗಂಗಾಮ್।
ಅಯತ್ನವಾಲವ್ಯಜನೀಬಭೂವು–
ರ್ಹಂಸಾ ನಭೋಲಂಘನಲೋಲಪಕ್ಷಾಃ॥

ಕುಶಮಹಾರಾಜನು ಗಂಗೆಯನ್ನು ದಾಟುತ್ತಿದ್ದನು. ಆನೆಗಳು ಮುಂದೆ ಸೇತುವೆಯಂತೆ ನಿಂತುದರಿಂದ ನದಿಯು ಹಿಂದಕ್ಕೆ ಹರಿಯುತ್ತಿತ್ತು. ಆಕಾಶದಲ್ಲಿ ಹಾರುತ್ತಿದ್ದ ಹಂಸಗಳು ರೆಕ್ಕೆಗಳನ್ನು ಬಡಿಯುತ್ತಿದ್ದುದರಿಂದ ಅವು ಅವನಿಗೆ ಬೀಸಣಿಗೆಗಳಾದುವು ಎಂಬುದು ಪದ್ಯದ ತಾತ್ಪರ್ಯ.

ಗಂಗಾನದಿಯ ತೀರ್ಥಸ್ಥಳದಲ್ಲಿ ಎಂಬುದನ್ನು ತೀರ್ಥೇ ತದೀಯೇ ಎಂದು ಕವಿ ಹೇಳಿದ್ದಾನೆ. ಗಂಗಾ ಎಂಬ ಪದ ಹಿಂದಿನ ಪದ್ಯದಲ್ಲಿ ಬಂದಿಲ್ಲ. ತೀರ್ಥೇ ತದೀಯೇ ಎಂದರೆ ಅರ್ಥವಾಗುವುದು

ಹೇಗೆ? ದ್ವಿತೀಯಪಾದದಲ್ಲಿರುವ ಗಂಗಾಂ ಎಂಬುದನ್ನು ಮನಸ್ಸಿಗೆ ತೆಗೆದುಕೊಂಡು ಅರ್ಥಮಾಡಿಕೊಳ್ಳಬೇಕು. ಮೊದಲು ನಾಮಪದವನ್ನು ಹೇಳಿ ಆಮೇಲೆ ಅದರ ಪರಾಮರ್ಶವನ್ನು ಮಾಡುವ ಸರ್ವನಾಮವನ್ನು ಬಳಸಬೇಕು. ಇಲ್ಲಿ ಹಾಗೆ ಕವಿಯು ಮಾಡಿಲ್ಲ. ಆದ್ದರಿಂದ ಕ್ರಮಭೇದ ಎಂಬ ದೋಷ.

ಎರಡನೆಯ ಪಾದವನ್ನು ಮೊದಲನೆಯ ಪಾದವನ್ನಾಗಿ ಮಾಡಿ ಆಮೇಲೆ ಮೊದಲನೆಯ ಪಾದವನ್ನು ಪಠಿಸಿದರೆ ಈ ದೋಷದ ಪರಿಹಾರ ಸಾಧ್ಯ.

ಪ್ರತೀಪಗಾಮುತ್ತರತೋಽಸ್ಯಗಂಗಾಂ ತೀರ್ಥೇತದೀಯೇ ಗಜಸೇತುಬಂಧಾತ್ ಎಂದು ಮಾಡೋಣ ಎಂದು ಕೆಲವರ ಹೇಳಿಕೆ. ಹಾಗೆ ಮಾಡಿದರೂ ಒಂದು ತೊಂದರೆ ಇದೆ. ಗಂಗೆಯು ಪ್ರತೀಪಗಾ (ಹಿಂದಕ್ಕೆ ಹರಿದವಳು) ಆದುದಕ್ಕೆ ಕಾರಣ ಗಜಸೇತುಬಂಧಾತ್ ಎಂದು ನಿರ್ದಿಷ್ಟವಾಗಿದೆ. ಈಗ ಕಾರ್ಯಕ್ಕೂ ಕಾರಣಕ್ಕೂ ಮಧ್ಯದಲ್ಲಿ ಹಲವು ಪದಗಳು ಬಂದುದರಿಂದ ದೂರಾನ್ವಯ ಎಂಬ ದೋಷ. ಗಜಸೇತುಬಂಧದಿಂದ ಅದರ ತೀರ್ಥ ಉಂಟಾಯಿತು ಎಂಬ ಭ್ರಾಂತಿ. ಇದೆಲ್ಲವನ್ನು ಪರಿಹರಿಸುವುದಕ್ಕೆ ಶಾಬ್ದವಾಗಿರುವ ಕಾರಣವನ್ನು ಆರ್ಥವನ್ನಾಗಿ ಬದಲಾಯಿಸಬೇಕು ಎಂದು ಮಹಿಮಭಟ್ಟನ ಸಲಹೆ. ಗಜಸೇತುಬಂಧಾತ್ ಎಂಬಲ್ಲಿ ಪಂಚಮೀ ವಿಭಕ್ತಿಯು ಇರುವುದರಿಂದ ಶಾಬ್ದ ಕಾರಣ. ಅದನ್ನು ಗಜಸೇತುಬಂಧಾಮ್ ಎಂದು ಗಂಗೆಯ ವಿಶೇಷಣವನ್ನಾಗಿ ಮಾರ್ಪಡಿಸಿದರೆ ಅದು ಆರ್ಥಕಾರಣವಾಗುತ್ತದೆ.

ಪದ್ಯಗಳಲ್ಲಿ ಪದಗಳನ್ನು ಛಂದೋನುಗುಣವಾಗಿ ಕವಿಗಳು ಜೋಡಿಸಿರುತ್ತಾರೆ. ಸಹೃದಯರು ಅನ್ವಯಾನುಸಾರವಾಗಿ ವಾಕ್ಯವನ್ನು ಆ ಪದಗಳಿಂದ ಮಾಡಿ ವಿವಕ್ಷಿತಾರ್ಥವನ್ನು ಗ್ರಹಿಸುತ್ತಾರೆ. ಆದರೂ ಸೂಕ್ಷ್ಮವಾಗಿ ಕವಿಯು ಪದಗಳನ್ನು ಹೇಳಿದ ಕ್ರಮದಲ್ಲಿ ಅರ್ಥವು ಮನಸ್ಸಿನಲ್ಲಿ ಉಳಿಯುವುದರಿಂದ ಕ್ರಮಭೇದ ಎಂಬ ದೋಷ ಇಲ್ಲಿದೆ ಎಂಬುದು ಮಹಿಮಭಟ್ಟನ ಚಿಂತನೆ.

**ಪರಾಮೃಶ್ಯಮನುಕ್ತ್ವೈವ ಪರಾಮರ್ಶೋऽಸ್ಯ ಯಸ್ತದಾ।**
**ಸ ದೋಷೋ ವಕ್ಷ್ಯಮಾಣಾರ್ಥಸಂವಿತ್ತಾವಕ್ಷಮೋ ಹಿ ಸಃ॥**
**ಇತಿ ಸಂಗ್ರಹ ಶ್ಲೋಕಃ।**

**ಯಥಾ ಚ– ನವಜಲಧರಃ ಸನ್ನದ್ಧೋಽಯಂ ನ ದೃಪ್ತನಿಶಾಚರಃ ಇತಿ। ಅತ್ರ ಹಿ ಆರೋಪನಿವೃತ್ತೌ ತದ್ವಿಷಯವಾಚಿನೋಃ ಸುರಧನುರ್ಧಾರಾಸಾರಶಬ್ದಯೋರಿವ ನವಜಲಧರಪದಸ್ಯಾಪಿ ಪೂರ್ವಂ ಪಶ್ಚಾದ್ವಾ ಇದಂಶಬ್ದಃ ಪ್ರಯೋಕ್ತವ್ಯಃ। ಶುಕ್ತಿಕೇಯಂ ನ ರಜತಮ್ ಇತಿವದ್ ಇತ್ಯೇಷ ಕ್ರಮೋ ನ್ಯಾಯ್ಯಃ। ಯಸ್ತು ದೃಪ್ತನಿಶಾಚರವಿಶೇಷಣವಾಚಿನಃ ಸನ್ನದ್ಧಪದಾನಂತರಂ ತಸ್ಯ ಪ್ರಯೋಗಃ, ಸ ಕ್ರಮಭೇದೋ ದೋಷಃ।**

### ಅನುವಾದ:

ಪರಾಮರ್ಶನೀಯವನ್ನು ಹೇಳದೆ ಅದನ್ನು ತಚ್ಛಬ್ದದಿಂದ ಪರಾಮರ್ಶಿಸುವುದು ದೋಷ. ಏಕೆಂದರೆ ಮುಂದೆ ಹೇಳಲಿರುವ ಅರ್ಥದ ಜ್ಞಾನವನ್ನುಂಟು ಮಾಡಲು ತಚ್ಛಬ್ದವು ಅಸಮರ್ಥ. ಇದು ಸಂಗ್ರಹಶ್ಲೋಕ. ಇನ್ನೊಂದು ಉದಾಹರಣೆ (ನವಜಲಧದಃ.....)

"ಇದು ಹೊಸ ಮೋಡ, ಯುದ್ಧ ಸನ್ನದ್ಧನಾದ, ದರ್ಪವುಳ್ಳ ರಾಕ್ಷಸನಲ್ಲ".

ಇಲ್ಲಿ ಅರೋಪವನ್ನು ನಿಷೇಧಿಸಲು, ಆರೋಪವಿಷಯವಾಚಕವಾದ ನವಜಲಧರಶಬ್ದದ ಹಿಂದೆ ಅಥವಾ ಮುಂದೆ ಇದಂಶಬ್ದವನ್ನು ಸುರಧನು ಮತ್ತು ಧಾರಾಸಾರಶಬ್ದಗಳೊಡನೆ ಹೇಳಿರುವಂತೆ, ಹೇಳಬೇಕಾಗಿತ್ತು. "ಇದು ಕಪ್ಪೆಚಿಪ್ಪು, ಬೆಳ್ಳಿಯಲ್ಲ" ಎಂಬ ವಾಕ್ಯದ ಹಾಗೆ ಕ್ರಮವನ್ನನುಸರಿಸುವುದು ನ್ಯಾಯಸಮ್ಮತ. ದೃಪ್ತನಿಶಾಚರಶಬ್ದದ ವಿಶೇಷಣವಾದ ಸನ್ನದ್ಧಶಬ್ದದ ಅನಂತರ ಇದಂಶಬ್ದದ ಪ್ರಯೋಗವನ್ನು ಮಾಡಲಾಗಿದೆ. ಅದು ಕ್ರಮಭೇದ ಎಂಬ ದೋಷ.

**ಏವ ಮೇವ–**

**ಕಲಾ ಚ ಸಾ ಕಾಂತಿಮತೀ ಕಲಾವತ–**

**ಸ್ತ್ವಮಸ್ಯ ಲೋಕಸ್ಯ ಚ ನೇತ್ರಕೌಮುದೀ। ಇತಿ।**

**ಅತ್ರ ಹಿ ದ್ವಿತೀಯಶ್ಚಶಬ್ದೋ ಭಿನ್ನಕ್ರಮಃ। ಸ ಹಿ ತ್ವಮಿತ್ಯಸ್ಯಾನಂತರಂ ಪ್ರಯೋಕ್ತವ್ಯಃ।**

**ಯಥಾ ಚ– ಮೀಲಿತಂ ಯದಭಿರಾಮತಾಧಿಕೇ ಸಾಧು ಚಂದ್ರಮಸಿ ಪುಷ್ಕರೈಃಕೃತಮ್।**

**ಉದ್ಯತಾ ಜಯಿನಿ ಕಾಮಿನೀಮುಖೇ ತೇನ ಸಾಹಸಮನುಷ್ಠಿತಂ ಪುನಃ॥**

**ಇತ್ಯತ್ರ ಪುನಃಶಬ್ದಃ। ಸ ಹಿ ತೇನೇತ್ಯತೋಽನಂತರಂ ವಕ್ತವ್ಯಃ।**

**ಅನುವಾದ:**

ಇದೇ ರೀತಿಯಾಗಿ–

ಚಂದ್ರನ ಕಾಂತಿಮತ್ತಾದ ಆ ಕಲೆ ಮತ್ತು ಈ ಲೋಕದ ಕಣ್ಣುಗಳಿಗೆ ಬೆಳದಿಂಗಳಾದ ನೀನು (ಇವೆರಡೂ ಇಂದು ಕಪಾಲಿಯ ಸಮಾಗಮದ ಪ್ರಾರ್ಥನೆಯಿಂದ ಶೋಚನೀಯವಾಗಿವೆ).

ಇಲ್ಲಿ ಎರಡನೆಯ ಚಶಬ್ದವು ಬೇರೆ ಸ್ಥಳದಲ್ಲಿರಬೇಕು. ತ್ವಂ ಎಂಬ ಶಬ್ದದ ಅನಂತರ ಚಶಬ್ದವನ್ನು ಪಠಿಸಬೇಕು.

ಇನ್ನೊಂದು ಉದಾಹರಣೆ– ಮೀಲಿತಂ..... (ಈ ಶ್ಲೋಕದ ಅನುವಾದ ಹಿಂದೆ ಬಂದಿದೆ)

ಈ ಪದ್ಯದಲ್ಲಿ ಪುನಃಶಬ್ದ (ಸರಿಯಾದ ಸ್ಥಳದಲ್ಲಿಲ್ಲ). ತೇನ ಎಂಬ ಶಬ್ದವಾದ ಮೇಲೆ ಪುನಃ ಎಂಬುದನ್ನು ಹೇಳಬೇಕಾಗಿತ್ತು.

**ಉಕ್ಖಅದುಮಂ ಚ ಸೇಲಂ ಹಿಮಹಅಕಮಲಾಅರಂ ವ ಲಚ್ಛಿವಿಮುಕ್ಕಮ್।**

**ಪೀಅಮಇರಂ ವ ಚಸಅಂ ಬಹುಲಪಓಸಂ ವ ಮುದ್ಧಅಂದವಿರಹಿಅಮ್॥**

**ಇತ್ಯತ್ರ ಹಿ ಉಪಮಾನವಾಚಿಭ್ಯಾಂ ಶಬ್ದಾಭ್ಯಾಮೇವ ಅನಂತರಮ್ ಇವಶಬ್ದಃ ಪ್ರಯೋಕ್ತವ್ಯಃ, ನ ಸಾಧಾರಣಧರ್ಮವಾಚಿಭ್ಯಾಂ, ಯಥಾತ್ರೈವ ಕಮಲಾಕರಬಹುಲಪ್ರದೋಷಶಬ್ದಾಭ್ಯಾಮಿತಿ। ಸಹಿ ಯದನಂತರಂ ಶ್ರೂಯತೇ ತತ್ರೈವ ಉಪಮಾನತಾಮ್ ಆಧಾತುಮ್ ಅಲಮಿತಿ। ಅನ್ಯಥಾ**

**ಅರ್ಥಸ್ಯ ಅಸಂಗತಿಪ್ರಸಂಗಾತ್। ನ ಹಿ ಭವತಿ ಗೌರಮಿವೇಂದುಬಿಂಬಂ ತವ ಮುಖಮಿತಿ। ನ ಚಾಸೌ ತಥಾ ಪ್ರಯುಕ್ತ ಇತಿ ಕ್ರಮಭೇದೋ ದೋಷಃ। ತೇನ ಸೇಲಂ ವ ಉಕ್ಖಅದುಮಮ್। ಇತಿ ಪಾಠಃ ಪಠಿತವ್ಯಃ।**

**ಅನುವಾದ:**

ಉಕ್‌ಖಅ..... ಇತ್ಯಾದಿ ಪ್ರಾಕೃತ ಪದ್ಯ. ಅದರ ಸಂಸ್ಕೃತರೂಪ ಇಂತಾಗುತ್ತದೆ–

ಉತ್ಖಾತದ್ರುಮಮಿವ ಶೈಲಂ
ಹಿಮಹತಕಮಲಾಕರಮಿವ ಲಕ್ಷ್ಮೀವಿಮುಕ್ತಮ್।
ಪೀತಮದಿರಮಿವ ಚಷಕಂ
ಬಹುಲಪ್ರದೋಷಮಿವ ಮುಗ್ಧಚಂದ್ರವಿರಹಿತಮ್॥
ಮರಗಳನ್ನು ಕಿತ್ತೆಸೆದ ಬೆಟ್ಟದಂತೆ
ಲಕ್ಷ್ಮಿಯಿಂದ ಪರಿತ್ಯಕ್ತವಾದ, ಹಿಮದಿಂದ ಹಾಳಾಗಿರುವ
ತಾವರೆಗೊಳದಂತೆ,
ಕುಡಿದ ಮದಿರೆಯ ಬಟ್ಟಲಿನಂತೆ
ಚಂದದ ಚಂದ್ರನಿಲ್ಲದ ಪ್ರದೋಷದಂತೆ॥

ಈ ಪದ್ಯದಲ್ಲಿ ಉಪಮಾನವಾಚಕಶಬ್ದಗಳ ಮುಂದೆ ಇವಶಬ್ದವನ್ನು ಪ್ರಯೋಗಿಸಬೇಕಾಗಿತ್ತು, ಸಾಧಾರಣಧರ್ಮವಾಚಕಗಳ ಮುಂದೆ ಅಲ್ಲ. ಈ ಪದ್ಯದಲ್ಲೇ ಕಮಲಾಕರ ಮತ್ತು ಬಹುಲಪ್ರದೋಷ ಶಬ್ದಗಳ ಮುಂದೆ ಇವಶಬ್ದವಿರುವಂತೆ ಉಪಮಾನದ ಮುಂದೆ ಇವಶಬ್ದವಿರಬೇಕು. ಇವಶಬ್ದವು ಯಾವುದರ ಮುಂದೆ ಇರುವುದೋ ಅದನ್ನೇ ಉಪಮಾನವನ್ನಾಗಿ ಮಾಡಲು ಅದು ಶಕ್ತ. ಹಾಗಿಲ್ಲದಿದ್ದರೆ ಅರ್ಥವು ಅಸಂಗತವಾಗುತ್ತದೆ. "ಗೌರಮಿವ....." ಎಂದು ಆಗದು ತಾನೆ? ಮೇಲಿನ ಪದ್ಯದಲ್ಲಿ ಇವಶಬ್ದವನ್ನು ಹಾಗೆ ಪ್ರಯೋಗಿಸಿಲ್ಲ. ಆದ್ದರಿಂದ ಕ್ರಮಭೇದ ಎಂಬ ದೋಷ. ಇಲ್ಲಿ "ಸೇಲಂ ವ ಉಕ್ಖಅದುಮಮ್" ಎಂದು ಪಾಠವನ್ನು ಓದಿಕೊಳ್ಳಬೇಕು.

**ಯಥಾ ವಾ– "ಉಪಾಲಬ್ಧೇವೋಚ್ಚೈರ್ಗಿರಿಪತಿರಿತಿ ಶ್ರೀಪತಿಮಸೌ" ಅತ್ರ ಹಿ ಇತೀವೋಪಾಲಬ್ಧಕ್ಷಿತಿಧರಪತಿಃ ಶ್ರೀಪತಿಮಸೌ ಇತಿ ಪಾಠಃ ಶ್ರೇಯಾನ್। ಯತೋ ನಾತ್ರ ಉಪಾಲಬ್ಧೇವೋಚ್ಚೈರ್ಗಿರಿಪತಿರಿತ್ಯೇತತ್ಪರ್ಯಂತೋಕ್ತಿರವಚ್ಛೇತ್ತುಮ್ ಅಭಿಮತಾ। ನ ಚ ಪದಸಂಬಂಧಸ್ಯ ಪುರುಷಾಧೀನತ್ವಾತ್ ಪ್ರಾಪಿಪಯಿಷುಪದೇನೈವಾಸ್ಯಾಭಿಸಂಬಂಧೋ ನ ಗಿರಿಪತಿಪದೇನೇತಿ ಶಕ್ಯತೇ ವಕ್ತುಮ್, ತಸ್ಯ ತದಧೀನತ್ವಾಸಿದ್ಧೇರುಪಪಾದಯಿಷ್ಯಮಾಣತ್ವಾತ್।**

**ಅನುವಾದ:**

ಇನ್ನೊಂದು ಉದಾಹರಣೆ– (ಉಪಾ.....)

(ಇದು ಶಿಶುಪಾಲವಧಕಾವ್ಯದ ಒಂದು ಪದ್ಯ.

ಧರಸ್ಯೋದ್ಧರ್ತಾಸಿ ತ್ವಮಿತಿ ನನು ಸರ್ವತ್ರ ಜಗತಿ
ಪ್ರತೀತಿಸ್ತೇ ಕಿಂ ಮಾಮತಿಭರಮಧಃ ಪ್ರಾಪಿಪಯಿಷುಃ।
ಉಪಾಲಬ್ಧೇವೋಚ್ಚೈರ್ಗಿರಿಪತಿರಿತಿ ಶ್ರೀಪತಿಮಸೌ
ಬಲಕ್ರಾಂತಃ ಕ್ರೀಡದ್ದ್ವಿರದಮಥಿತೋರ್ವೀರುಹರವೈಃ॥

"ಎಲೈ ಶ್ರೀಕೃಷ್ಣ, ನೀನು ಬೆಟ್ಟಗಳನ್ನು ಮೇಲೆತ್ತುವವನು ಎಂದು ಜಗತ್ತಿನಲ್ಲಿ ಪ್ರತೀತಿ ಇದೆ. ಹಾಗಿದ್ದರೂ ಅಧಿಕಭಾರವುಳ್ಳ ನನ್ನನ್ನು ಏಕೆ ಕೆಳಗೆ ತಗ್ಗಿಸಲು ಇಷ್ಟಪಡುವೆ? ಎಂದು ಆ ಬೆಟ್ಟವು ಕೃಷ್ಣನನ್ನು ಆಟವಾಡುತ್ತಿದ್ದ ಆನೆಗಳು ಮುರಿದು ಹಾಕಿದ ಮರಗಳ ಶಬ್ದಗಳಿಂದ ನಿಂದಿಸಿದ ಹಾಗೆ ತೋರುತ್ತಿತ್ತು" ಎಂದು ಪದ್ಯದ ಅರ್ಥ.

ಇಲ್ಲಿ ಇತೀವೋಪಾಲಬ್ಧ ಕ್ಷಿತಿಧರಪತಿಃ ಶ್ರೀಪತಿಮಸೌ ಎಂಬ ಪಾಠವು ಉಚಿತ. ಏಕೆಂದರೆ ಉಪಾಲಬ್ಧೇವೋಚ್ಚೈರ್ಗಿರಿಪತಿಃ ಎಂಬಲ್ಲಿಯವರೆಗೆ ಇರುವ ಮಾತು ಇತಿಶಬ್ದದಿಂದ ಅವಚ್ಛಿನ್ನವಾಗುವುದು ಕವಿಯ ಅಭಿಪ್ರಾಯವಲ್ಲ.

ಪದಗಳ ಸಂಬಂಧವು ವಾಚಕನ ಅಧೀನದಲ್ಲಿದೆ, ಆದ್ದರಿಂದ ಇತಿಶಬ್ದದ ಸಂಬಂಧ ಪ್ರಾಪಿಪಯಿಷುಃ ಎಂಬ ಶಬ್ದದೊಡನೆ ಆಗುತ್ತದೆ ಎಂದು ಹೇಳುವುದು ಶಕ್ಯವಾಗದು. ಏಕೆಂದರೆ ಪದಗಳ ಸಂಬಂಧ ಪುರುಷಾಧೀನವಲ್ಲ ಎಂಬುದನ್ನು (ಮುಂದಿನ ಗ್ರಂಥಭಾಗದಲ್ಲಿ) ತೋರಿಸಿಕೊಡಲಾಗುವುದು.

**ಯಥಾ ಚ–**
**ಪ್ರತೀಕ್ಷ್ಯಂ ಚ ಪ್ರತೀಕ್ಷ್ಯಾಯೈ ಪಿತೃಷ್ವಸ್ರೇ ಸುತಸ್ಯ ತೇ।**
**ಸಹಿಷ್ಯೇ ಶತಮಾಗಾಂಸಿ ಪ್ರತ್ಯಶ್ರೌಷೀಃ ಕಿಲೇತಿ ಯತ್॥**

**ಅತ್ರಾಪಿ ಹಿ "ಸಹಿಷ್ಯೇ ಶತಮಾಗಾಂಸೀತ್ಯಭ್ಯುಪೈರ್ಯತ್ ಕಿಲ ಸ್ವಯಮ್" ಇತಿ ಯುಕ್ತಃ ಪಾಠಃ। ಅನೇನೈವ ತಜ್ಜಾತೀಯಾರ್ಥಾನಾಮ್ ಅನ್ಯೇಷಾಮ್ ಅವ್ಯಯಾನಾಂ ಪ್ರಯೋಗನಿಯಮೋ ವ್ಯಾಖ್ಯಾತ ಇತಿ ತೇಷಾಮಪಿ ಕ್ರಮಭೇದೋ ದೋಷ ಏವ। ತದ್ಯಥಾ–**

**ಕಿಂ ಕ್ರಮಿಷ್ಯತಿ ಕಿಲೈಷವಾಮನೋ ಯಾವದಿತ್ಥಮಹಸನ್ನ ದಾನವಾಃ।**
**ತಾವದಸ್ಯ ನ ಮಮೌ ನಭಸ್ತಲೇ ಲಂಘಿತಾರ್ಕಶಶಿಮಂಡಲಃ ಕ್ರಮಃ॥**
**ಇತ್ಯತ್ರೇತ್ಥಂಶಬ್ದಸ್ಯ। ಸ ಹಿ ವಾಮನಶಬ್ದಾದನಂತರಂ ದ್ರಷ್ಟವ್ಯಃ।**

**ಅನುವಾದ:**

ಇನ್ನೊಂದು ಉದಾಹರಣೆ–

"ನಿನ್ನ ತಂದೆಯ ಸೋದರಿಗೆ ನಿನ್ನ ಮಗನ ನೂರು ತಪ್ಪುಗಳನ್ನು ಕ್ಷಮಿಸುವೆನು ಎಂದು ಮಾತುಕೊಟ್ಟಿದ್ದೆಯಲ್ಲ, ಅದನ್ನು ನೀನು ನಡೆಸಿಕೊಡಬೇಕು".

ಈ ಪದ್ಯದಲ್ಲೂ "ಸಹಿಷ್ಯೇ ಶತಮಾಗಾಂಸೀತ್ಯಭ್ಯುಪೈರ್ಯತ್ ಕಿಲಸ್ವಯಮ್" ಎಂಬ ಪಾಠವು ಉಚಿತವಾಗುತ್ತದೆ.

ಇದರಿಂದಲೇ ಇದೇ ರೀತಿಯ ಬೇರೆ ಅವ್ಯಯಗಳ ಪ್ರಯೋಗನಿಯಮವನ್ನು ವ್ಯಾಖ್ಯಾನಿಸಿದಂತಾಯಿತು. ಅವುಗಳ ಕ್ರಮಭೇದವೂ ದೋಷವೇ. ಅದರ ಉದಾಹರಣೆ (ಕಿಂ ಕ್ರಮಿಷ್ಯತಿ.....)

"ಈ ವಾಮನನು ಏನು ಹೆಜ್ಜೆಯನ್ನಿಡುತ್ತಾನೆ" ಎಂದು ಹೇಳುತ್ತಾ ದಾನವರು ನಕ್ಕರು. ಅಷ್ಟರಲ್ಲಿ ಅವನ ಹೆಜ್ಜೆ ಸೂರ್ಯಚಂದ್ರರ ಮಂಡಲಗಳನ್ನು ದಾಟಿಹೋಗಿ ಇಡೀ ಆಕಾಶದಲ್ಲೇ ಹಿಡಿಸದಷ್ಟು ಆಗಿಬಿಟ್ಟಿತು.

ಈ ಪದ್ಯದಲ್ಲಿ ಇತ್ಥಂಶಬ್ದದ (ಪ್ರಯೋಗದಲ್ಲಿ ಕ್ರಮಭೇದವು ದೋಷ). ಅದು ವಾಮನಶಬ್ದದ ಮುಂದೆ ಬರಬೇಕಾಗಿತ್ತು ಎಂದು ತಿಳಿದುಕೊಳ್ಳಬೇಕು.

**ಯಥಾ ಚ–**

**ಸ್ತಂಬೇರಮಃ ಪರಿಣೆನಿಂಸುರಸಾವುಪೈತಿ**

**ಷಿಡ್ಗೈರಗದ್ಯತ ಸಸಂಭ್ರಮಮೇವಮೇಕಾ।**

**ಇತ್ಯತ್ರೈವಂಶಬ್ದಸ್ಯ। ಸ ಹ್ಯುಪೈತೀತ್ಯನಂತರಂ ದ್ರಷ್ಟವ್ಯಃ।**

**ತೇನ– ಸ್ತಂಬೇರಮಃ ಪರಿಣೆನಿಂಸುರಸೌ ಸಮಭ್ಯೇ–**

**ತ್ಯೇವಂ ಸಸಂಭ್ರಮಮಭಣ್ಯತ ಕಾಪಿ ಷಿಡ್ಗೈಃ॥**

**ಇತಿ ಯುಕ್ತಃ ಪಾಠಃ। ಅತ್ರ ಚ ಯತ್ ಪ್ರತೀತಿವೈಚಿತ್ರ್ಯಂ**

**ಸ ಮತಿಮತಾಮೇವ ವಿಷಯಃ।**

**ಉಕ್ತಿಸ್ವರೂಪಾವಚ್ಛೇದಫಲೋ ಯತ್ರೇತಿರುಚ್ಯತೇ।**

**ನ ತತ್ರ ತಸ್ಮಾತ್ ಪ್ರಾಕ್ ಕಿಂಚಿದ್ ಉಕ್ತೇರನ್ಯತ್ ಪದಂ ವದೇತ್॥**

**ಅನುವಾದ:**

ಇನ್ನೊಂದು ಉದಾಹರಣೆ– (ಸ್ತಂಬೇರಮಃ.....) "ಸ್ನಾನಮಾಡಲು ಒಂದು ಆನೆ ಬರುತ್ತಿದೆ" ಎಂದು ಒಬ್ಬಳಿಗೆ ವಿಟರು ಸಂಭ್ರಮಪಡುತ್ತಾ ಹೇಳಿದರು. ಈ ಪದ್ಯದಲ್ಲಿ ಏವಂಶಬ್ದದ (ಪ್ರಯೋಗದಲ್ಲಿ ಕ್ರಮಭೇದ). ಏವಂ ಶಬ್ದವನ್ನು ಉಪೈತಿ ಎಂಬ ಶಬ್ದದ ಅನಂತರ ಹೇಳಬೇಕಾಗಿತ್ತು. ಆದ್ದರಿಂದ–

ಸ್ತಂಬೇರಮಃ ಪರಿಣೆನಿಂಸುರಸೌ ಸಮಭ್ಯೇ–

ತ್ಯೇವಂ ಸಸಂಭ್ರಮಮಭಣ್ಯತ ಕಾಪಿ ಷಿಡ್ಗೈಃ॥

ಎಂಬ ಪಾಠ ಉಚಿತ. ಈ ಪಾಠದಲ್ಲಿ ಯಾವ ಪ್ರತೀತಿವೈಚಿತ್ರ್ಯವಿದೆಯೋ ಅದು ಬುದ್ಧಿಮಂತರಿಗೆ ಮಾತ್ರ ಗೋಚರ.

"ಎಲ್ಲಿ ಉಕ್ತಿಸ್ವರೂಪದ ಅವಚ್ಛೇದಕ್ಕಾಗಿ ಇತಿಶಬ್ದವನ್ನು ಬಳಸಲಾಗುವುದೋ ಅಲ್ಲಿ ಅದಕ್ಕಿಂತ ಮುಂಚೆ ಉಕ್ತಿಗಿಂತ ಬೇರೆಯಾದ ಯಾವ ಪದವನ್ನೂ ಹೇಳಬಾರದು".

**ವಿವರಣೆ:**

ಡೈರೆಕ್ಟ್‌ಸ್ಪೀಚ್ (ನೇರವಾಗಿ ಮಾತನ್ನು ಉದ್ಧರಿಸುವುದು) ಕೊಟೇಶನ್ ಇತ್ಯಾದಿಗಳನ್ನು ಹೇಳಿದ ಮೇಲೆ ಇತಿಶಬ್ದವನ್ನು ಬಳಸಬೇಕು. ಅವುಗಳ ಮಧ್ಯದಲ್ಲಿ ಬೇರೆ ಯಾವ ಶಬ್ದವನ್ನೂ ಹೇಳಬಾರದು.

**ಉಪಾಧಿಭಾವಾತ್ ಸ್ವಾಂ ಶಕ್ತಿಂ ಸ ಪೂರ್ವತ್ರಾದಧಾತಿ ಹಿ।**
**ನ ಚ ಸ್ವರೂಪಾವಚ್ಛೇದಃ ಪದಸ್ಯಾನ್ಯಸ್ಯ ಸಮ್ಮತಃ॥**
**ಇತಿನೈವೇತರೇಷಾಮಪ್ಯವ್ಯಯಾನಾಂ ಗತಿಃ ಸಮಾ।**
**ಜ್ಞೇಯೇತ್ಥಮೇವಮಾದೀನಾಂ ತಜ್ಜಾತೀಯಾರ್ಥಯೋಗಿನಾಮ್॥**
**ಯತಸ್ತೇ ಚಾದಯ ಇವ ಶ್ರೂಯಂತೇ ಯದನಂತರಮ್।**
**ತದರ್ಥಮೇವಾವಚ್ಛಿಂದ್ಯುರಾಸಮಂಜಸ್ಯಮನ್ಯಥಾ॥**
**ಯಥಾನಂತರ್ಯನಿಯಮಸ್ತೇಷಾಮರ್ಥೌಚಿತೀವಶಾತ್।**
**ಅನ್ಯತಸ್ತರ್ಹಿ ತತ್ಕಾರ್ಯಸಿದ್ಧೇಸ್ತೇ ಸ್ಯುರಪಾರ್ಥಕಾಃ॥**
**ಕೈಶ್ಚಿದೇವ ಹಿ ಕೇಷಾಂಚಿದ್ ದೂರಸ್ಥೈರಪಿ ಸಂಗತಿಃ।**
**ನ ಜಾತು ಸರ್ವೈಸ್ಸರ್ವೇಷಾಮಿತ್ಯೇತದಭಿಧಾಸ್ಯತೇ॥**
**ಇತಿ ಸಂಗ್ರಹಶ್ಲೋಕಾಃ।**

**ಅನುವಾದ:**

ಇತಿಶಬ್ದವು ಉಪಾಧಿಭಾವದಿಂದ ತನ್ನ ಶಕ್ತಿಯನ್ನು ಹಿಂದಿನ ಪದದವರೆಗೆ ಪ್ರಸರಿಸುತ್ತದೆ. ಬೇರೆ ಪದದ ಸ್ವರೂಪದ ಅವಚ್ಛೇದವು ಅಲ್ಲಿ ಸಮ್ಮತವಲ್ಲ. ಇತ್ಥಂ, ಏವಂ ಮುಂತಾದ ಅವ್ಯಯಗಳೂ ಅದೇ ರೀತಿಯ ಅರ್ಥವನ್ನು ಹೇಳುವುದರಿಂದ ಅವುಗಳ ಸ್ಥಿತಿಗತಿಗಳೂ ಇತಿಶಬ್ದಕ್ಕೆ ಸಮಾನ ಎಂದು ತಿಳಿದುಕೊಳ್ಳಬೇಕು. ಏಕೆಂದರೆ ಅವೂ "ಚ" ಮುಂತಾದವುಗಳಂತೆ ಯಾವ ಶಬ್ದದ ಮುಂದೆ ಇರುವುವೋ ಅದರ ಅರ್ಥವನ್ನು ಮಾತ್ರ ನಿಯತಗೊಳಿಸುತ್ತವೆ. ಹೀಗೆ ಒಪ್ಪದಿದ್ದರೆ ಎಲ್ಲವೂ ಅಸಮಂಜಸವಾದೀತು. ಆ ಶಬ್ದಗಳಿಗೆ ಅರ್ಥೌಚಿತ್ಯದ ಕಾರಣದಿಂದ ಆನಂತರ್ಯ ನಿಯಮವುಂಟು. ಬೇರೆಯವುಗಳಿಂದ ಆ ಕಾರ್ಯವು ಸಿದ್ಧವಾಗುವುದಾದರೆ, ಅವು ಅರ್ಥಹೀನವಾದಾವು. ಕೆಲವು ಶಬ್ದಗಳಿಗೆ ಮಾತ್ರ ದೂರದಲ್ಲಿರುವ ಇತರ ಕೆಲವು ಶಬ್ದಗಳೊಡನೆ ಸಂಬಂಧವು ಹೊಂದುತ್ತದೆ. ಎಲ್ಲ ಶಬ್ದಗಳಿಗೆ ಎಲ್ಲ ಶಬ್ದಗಳೊಡನೆ ಹಾಗೆ ದೂರಸಂಬಂಧ ಶಕ್ಯವಲ್ಲ ಎಂಬುದನ್ನು ಮುಂದೆ ನಿರೂಪಿಸಲಾಗುವುದು.

**ಇವು ಸಂಗ್ರಹಶ್ಲೋಕಗಳು.**

# ಪೌನರುಕ್ತ್ಯಮ್

**ಪೌನರುಕ್ತ್ಯಮಾರ್ಥಮೇಕಮೇವಾಭ್ಯುಪಗಂತುಂ ಯುಕ್ತಂ, ನ ಶಾಬ್ದಂ, ತಸ್ಯಾರ್ಥಭೇದೇ ಸತಿ ಅದುಷ್ಟತ್ವಾತ್। ಯದುಕ್ತಂತಚ್ಚ ನ ಶಬ್ದಪುನರುಕ್ತಂ ಪೃಥಗ್‌ವಾಚ್ಯಮ್ ಅರ್ಥಪುನರುಕ್ತೇನೈವ ಗತಾರ್ಥತ್ವಾತ್। ನ ಹ್ಯರ್ಥಭೇದೇ ಶಬ್ದಸಾಮ್ಯೇಽಪಿ ಕಶ್ಚಿದ್‌ದೋಷಃ। ಯಥಾ–**

**ಹಸತಿ ಹಸತಿ ಸ್ವಾಮಿನ್ಯುಚ್ಚೈ ರುದತ್ಯಪಿ ರೋದಿತಿ**
**ದ್ರವಿಣಕಣಿಕಾಕ್ರೀತಂ ಯಂತ್ರಂ ಪ್ರನೃತ್ಯತಿ ನೃತ್ಯತಿ। ಇತಿ**
**ತದಭೇದೇ ತು ದುಷ್ಟತೈವ।**

**ಅನುವಾದ:**

ಆರ್ಥಪೌನರುಕ್ತ್ಯವನ್ನು ಮಾತ್ರ ಒಪ್ಪಿಕೊಳ್ಳುವುದು ಯುಕ್ತ, ಶಾಬ್ದವನ್ನಲ್ಲ. ಅರ್ಥವು ಭಿನ್ನವಾಗಿರುವಾಗ ಶಾಬ್ದಪೌನರುಕ್ತ್ಯ ದೋಷವಲ್ಲ. ಹಿಂದಿನವರೂ ಹೇಳಿದ್ದಾರೆ. "ಶಬ್ದಪುನರುಕ್ತವನ್ನು ಬೇರೆ ಹೇಳಬೇಕಾಗಿಲ್ಲ, ಅರ್ಥಪುನರುಕ್ತದಿಂದಲೇ ಅದು ಗತಾರ್ಥ". ಅರ್ಥಭೇದ ಇರುವಾಗ ಶಬ್ದಸಾಮ್ಯ ಇದ್ದರೂ ಯಾವ ದೋಷವೂ ಇಲ್ಲ. ಉದಾಹರಣೆ–

ಸ್ವಾಮಿಯು ನಕ್ಕರೆ ತಾನೂ ಜೋರಾಗಿ ನಗುತ್ತದೆ.
ಅವನು ಅತ್ತರೆ ತಾನೂ ಅಳುತ್ತದೆ.
ಹಣದ ಚೂರಿನಿಂದ ಕೊಳ್ಳಲ್ಪಟ್ಟ ಯಂತ್ರವು
ಒಡೆಯನು ಕುಣಿದರೆ ತಾನೂ ಹೆಚ್ಚಾಗಿ ಕುಣಿಯುತ್ತದೆ.

(ಈ ಪದ್ಯದಲ್ಲಿ ಹಸತಿ ಎಂಬುದು ಒಮ್ಮೆ ಶತ್ರಂತ, ಸಪ್ತಮೀ ಏಕವಚನ, ಇನ್ನೊಮ್ಮೆ ವರ್ತಮಾನಕಾಲ ಕ್ರಿಯಾಪದ. ಅರ್ಥಭೇದ ಇರುವುದರಿಂದ ಪದ್ಯ ನಿರ್ದೋಷ). ಅರ್ಥಭೇದವಿಲ್ಲದಿದ್ದರೆ ಶಬ್ದಪೌನರುಕ್ತ್ಯ ದೋಷವೇ ಆಗುವುದು.

**ಅನ್ಯತ್ರ ತಾತ್ಪರ್ಯಭೇದಾತ್ ತಚ್ಚ ಭೂಷಣಮೇವ, ನ ದೂಷಣಮ್। ತಸ್ಯ ಅನುಪ್ರಾಸವಿಶೇಷವಿಷಯತ್ವೇನೇಷ್ಟತ್ವಾತ್। ಯಥಾ–**

**ವಸ್ತ್ರಾಯಂತೇ ನದೀನಾಂ ಸಿತಕುಸುಮಧರಾಃ ಶಕ್ರಸಂಕಾಶ ಕಾಶಾಃ**
**ಕಾಶಾಭಾ ಭಾಂತಿ ತಾಸಾಂ ನವಪುಲಿನಗತಾಃ ಶ್ರೀನದೀಹಂಸ ಹಂಸಾಃ।**
**ಹಂಸಾಭೋಽಂಭೋದಮುಕ್ತಸ್ಫುರದಮಲವಪುರ್ಮೇದಿನೀಚಂದ್ರ ಚಂದ್ರ–**
**ಶ್ಚಂದ್ರಾಭಃ ಶಾರದಸ್ತೇ ಜಯಕೃದುಪಗತೋ ವಿದ್ವಿಷಾಂ ಕಾಲ ಕಾಲಃ॥**
**ಉಭಯಾಭಾವೇ ತು ಪೌನರುಕ್ತ್ಯಂ ದೂಷಣಮೇವ। ಯಥಾ**
**"ಜಕ್ಷುರ್ಬಿಸಾನ್ ಧೃತವಿಕಾಸಿಬಿಸಪ್ರಸೂನಾಃ" ಇತಿ।**

**ಅನುವಾದ:**

ತಾತ್ಪರ್ಯಭೇದದಿಂದ ಶಬ್ದಪೌನರುಕ್ತ್ಯವಾಗಿದ್ದರೆ ಅದು ಭೂಷಣವೇ, ದೂಷಣವಲ್ಲ. ಏಕೆಂದರೆ ಅಂಥ ಪೌನರುಕ್ತ್ಯವು ಅನುಪ್ರಾಸದ ಒಂದು ವಿಶಿಷ್ಟ ಪ್ರಕಾರ

ಎಂದು ಅಭಿಮತವಾಗಿದೆ. ಉದಾಹರಣೆ –ವಸ್ತ್ರಾಯಂತೇ..... "ಇಂದ್ರಸಮಾನನೆ, ನದಿಗಳಲ್ಲಿರುವ ಬಿಳಿಹೂಗಳಿಂದ ತುಂಬಿರುವ ಕಾಶವೆಂಬ ಗಿಡಗಳು ಆ ನದಿಗಳ ಬಟ್ಟೆಯಂತಿವೆ. ಸಂಪತ್ತಿನ ನದಿಯ ಹಂಸನೆ, ಹಂಸಗಳು ಹೊಸ ಮರಳಿನ ಮೇಲೆ ಸಂಚರಿಸುತ್ತಾ ಕಾಶಪುಷ್ಪಗಳಂತೆ ಇವೆ. ಭೂಮಿಯ ಮೇಲಿನ ಚಂದ್ರನೆ, ಹಂಸದಂತಿರುವ ಚಂದ್ರನು ಮೋಡಗಳಿಂದ ಮುಕ್ತನಾಗಿ ನಿರ್ಮಲ ಶರೀರದಿಂದ ಶೋಭಿಸುತ್ತಿದ್ದಾನೆ. ಶತ್ರುಗಳ ಯಮನೆ, ಚಂದ್ರನಂತೆ ನಿನಗೆ ಜಯವನ್ನು ತರುವ ಶರತ್ಕಾಲವು ಬಂದಿದೆ."

ಅರ್ಥಭೇದವೂ ತಾತ್ಪರ್ಯಭೇದವೂ ಇಲ್ಲದ ಶಬ್ದಪೌನರುಕ್ತ್ಯವು ದೋಷವೇ ಆಗುತ್ತದೆ. ಉದಾಹರಣೆ– ಬಿಸ (ತಾವರೆದಂಟು)ವನ್ನು ತಿಂದರು. ಅರಳುತ್ತಿದ್ದ ಬಿಸಪ್ರಸೂನವನ್ನು ಧರಿಸಿದರು.

**ಸರ್ವನಾಮಪರಾಮರ್ಶಸ್ಯ ಹ್ಯಯಂ ವಿಷಯೋ ಬಿಸಾರ್ಥೋ ನ ಸ್ವಶಬ್ದಸ್ಯ। ನ ಚ ಘಾಸಕ್ರಿಯಾಕರ್ಮಭಾವಾಭಿಧಾನಪರಃ ಪ್ರಥಮೋ ಬಿಸಶಬ್ದಃ ಪರಶ್ಚ ಪ್ರಸೂನಸಂಬಂಧಾಭಿಧಾನಪರಃ ಇತ್ಯತ್ರಾಪಿ ತಾತ್ಪರ್ಯಭೇದ ಇತ್ಯಾಶಂಕನೀಯಮ್। ಸ್ವಾರ್ಥಮ್ ಅಭಿದಧತ ಏವ ಹಿ ಶಬ್ದಸ್ಯ ಅರ್ಥಾಂತರಪ್ರತೀತಿಪ್ರಾವಣ್ಯಂ ತಾತ್ಪರ್ಯಮುಚ್ಯತೇ। ನ ಚಾತ್ರೈತತ್ ಸಂಭವತಿ। ಉಕ್ತಯೋರರ್ಥಂಯೋರಭಿಧೇಯತಯಾ ಅರ್ಥಾಂತರತ್ವಾಭಾವಾತ್।**

**ತದುಕ್ತಮ್– ಸರ್ವನಾಮಪರಾಮರ್ಶಯೋಗ್ಯಸ್ಯಾರ್ಥಸ್ಯ ಯತ್ಪುನಃ।**
**ಸ್ವಶಬ್ದೇನಾಭಿಧಾನಂ ಸಾ ಶಬ್ದಸ್ಯ ಪುನರುಕ್ತತಾ॥**

**ಅನುವಾದ:**

ಇಲ್ಲಿರುವ ಬಿಸ ಎಂಬ ಅರ್ಥವು ಸರ್ವನಾಮದಿಂದ ಹೇಳಲ್ಪಡಲು ಯೋಗ್ಯ, ಸ್ವಶಬ್ದದಿಂದ ಅಲ್ಲ. ಮೊದಲನೆಯ ಬಿಸ ಶಬ್ದವು ತಿನ್ನುವುದು ಎಂಬ ಕ್ರಿಯೆಯ ಕರ್ಮವನ್ನು ಹೇಳುತ್ತದೆ, ಎರಡನೆಯದು ಹೂವಿನ ಸಂಬಂಧಿಯಾದ ವಸ್ತುವನ್ನು ತಿಳಿಸುತ್ತದೆ, ಆದ್ದರಿಂದ ಇಲ್ಲೂ ತಾತ್ಪರ್ಯಭೇದವಿದೆ –ಎಂದು ಆಶಂಕೆಯನ್ನು ಮಾಡಬಾರದು. ತನ್ನ ಅರ್ಥವನ್ನು ಹೇಳುವ ಶಬ್ದವು ಇನ್ನೊಂದು ಅರ್ಥವನ್ನು ತಿಳಿಸುವುದರಲ್ಲಿ ತೊಡಗುವುದನ್ನು ಇಲ್ಲಿ ತಾತ್ಪರ್ಯವೆಂದು ಕರೆಯಲಾಗಿದೆ. (ಪ್ರಸ್ತುತೋದಾಹರಣೆಯಲ್ಲಿ) ಅಂಥ ಅರ್ಥವು ಸಂಭವಿಸದು. ನೀವು ಹೇಳಿದ ಅರ್ಥಗಳೆರಡೂ ಅಭಿಧೇಯವೇ ಆಗಿರುವುದರಿಂದ ಇನ್ನೊಂದು ಅರ್ಥ ಎಂಬುದೇ ಅಲ್ಲಿಲ್ಲ. ಹಿಂದಿನವರೂ ಹೇಳಿದ್ದಾರೆ–

ಸರ್ವನಾಮಪರಾಮರ್ಶಕ್ಕೆ ಯೋಗ್ಯವಾದ ಅರ್ಥವನ್ನು ಮತ್ತೆ ಸ್ವಶಬ್ದದಿಂದ ಹೇಳಿದರೆ ಅದು ಶಬ್ದಪುನರುಕ್ತ.

**ಪ್ರಾಧಾನ್ಯಮಥ ಸಂಬಂಧಿನಿಬಂಧೋ ಯೋಗ್ಯತಾದ್ವಯೀ।**
**ನಾತಃ ಸಮಾಸಗಸ್ಯಾಪಿ ಪರಾಮರ್ಶೋಽಸ್ಯ ದುಷ್ಯತಿ॥**
**ದ್ವಿವಿಧಾ ಹಿ ಯೋಗ್ಯತಾ ಶಾಬ್ದೀ ಚಾರ್ಥೀ ಚ। ತತ್ರ ಶಬ್ದಸ್ಯ ಪ್ರಾಧಾನ್ಯೇ ಸತಿ ಶಾಬ್ದೀ, ಸಾಕ್ಷಾತ್ ಪರಾಮೃಶ್ಯಾರ್ಥಪ್ರತೀತೇಃ। ಯಥಾ–**
**ಚಾರುತಾ ವಪುರಭೂಷಯದಾಸಾಂ**
**ತಾಮನೂನನವಯೌವನಯೋಗಃ।**
**ತಂ ಪುನರ್ಮಕರಕೇತನಲಕ್ಷ್ಮೀ–**
**ಸ್ತಾಂ ಮದಸ್ತಮಪಿ ವಲ್ಲಭಸಂಗಃ॥ ಇತಿ।**
**ವಿಪರ್ಯಯೇ ತ್ವಾರ್ಥೀ। ಸಂಬಂಧಿಪ್ರತೀತಿಮುಖೇನ ತತ್ಪ್ರತೀತೇಃ। ಯಥಾ–**
**"ಭಾತಿ ಸಿತಭೂತಿಲಿಪ್ತಃ ಶಶಾಂಕಮೌಲಿಸ್ತದಂಶುನಿಚಿತ ಇವ" ಇತಿ।**

**ಅನುವಾದ:**

(ತಚ್ಛಬ್ದದಿಂದ ಪರಾಮರ್ಶಿತವಾಗುವ) ಯೋಗ್ಯತೆಯು ಪ್ರಾಧಾನ್ಯ ಮತ್ತು ಸಂಬಂಧಿನಿಬಂಧನ ಎಂದು ಎರಡು ವಿಧ. ಆದ್ದರಿಂದ ಸಮಾಸದಲ್ಲಿ ಅಂತರ್ಗತವಾದ ಅರ್ಥದ ಪರಾಮರ್ಶವೂ ದೋಷವಲ್ಲ.

ಯೋಗ್ಯತೆಯು ಎರಡು ವಿಧ– ಶಾಬ್ದೀ ಮತ್ತು ಆರ್ಥೀ. ಶಬ್ದಕ್ಕೆ ಪ್ರಾಧಾನ್ಯವಿದ್ದರೆ ಶಾಬ್ದೀ, ಅದರಲ್ಲಿ ತಚ್ಛಬ್ದದಿಂದ ಪರಾಮೃಶ್ಯವಾದ ಅರ್ಥವು ಸಾಕ್ಷಾತ್ ತೋರುತ್ತದೆ.

ಉದಾಹರಣೆ –ಚಾರುತಾ.....

(ಈ ಪದ್ಯದ ಅನುವಾದ ಮೊದಲೇ ಬಂದಿದೆ.) ಇದಕ್ಕೆ ವಿರುದ್ಧವಾದುದು ಆರ್ಥೀ ಯೋಗ್ಯತಾ. ಇದರಲ್ಲಿ ಸಂಬಂಧಿಯ ಪ್ರತೀತಿಯ ಮೂಲಕ ಪರಾಮೃಶ್ಯಾರ್ಥದ ಪ್ರತೀತಿ ಉಂಟಾಗುವುದು. ಉದಾಹರಣೆ– ಭಾತಿ..... "ಬಿಳಿಯ ವಿಭೂತಿಯಿಂದ ಲಿಪ್ತನಾದ ಚಂದ್ರಮೌಲಿಯು ಅವನ ಕಿರಣಗಳಿಂದ ಮುಚ್ಚಲ್ಪಟ್ಟ ಹಾಗೆ ಹೊಳೆಯುತ್ತಿದ್ದಾನೆ".

**ಅತ್ರ ಹಿ ಶಶಾಂಕ ಸಂಬಂಧಿನಾಮ್ ಅಂಶೂನಾಂ ನಿಬಂಧಃ ತತ್ಪರಾಮರ್ಶ ಯೋಗ್ಯತಾ। ಸ ಹಿ ಸಮಾಸೇ ಗುಣೀಭೂತಃ। ಯಥಾ ವಾ–**
**ಜಯತಿ ನಿಶಾಪತಿಮೌಲಿರ್ದಧನ್ಮಹಾಕಾಲವಿಭ್ರಮಮಜಸ್ರಮ್।**
**ತತ್ತಮಸಾಮಿವ ಲಕ್ಷ್ಮ್ಯಾ ಕಂಠವಿಷಚ್ಛಾಯಯಾ ಚ್ಛುರಿತಃ॥**
**ಅತ್ರ ಹಿ ನಿಶಾಸಂಬಂಧಿನಾಂ ತಮಸಾಂ ನಿಬಂಧೋ ಯೋಗ್ಯತಾ। ಸಾ ಹಿ ಗುಣೀಭೂತಸ್ಯಾಪಿ ಗುಣೀಭೂತಾ। ಸಂಬಂಧಿನಿಬಂಧಾಭಾವೇ ತ್ವಸಮಾಸಗತಸ್ಯೈವ ತಸ್ಯ ಯೋಗ್ಯತಾ। ಯಥಾ–**
**ಜಯತಿ ಜಗತ್ತ್ರಯಜನಕೋ ನಗೇಂದ್ರಸುತಯಾ ನಿರುದ್ಧದೇಹಾರ್ಧಃ।**
**ಸಾ ಚ ಭುವನೈಕಜನನೀ ಯಯಾ ವಿನಾ ಸೋಽಪಿ ಹಿ ವಿಹಸ್ತಃ॥**
**ಸಮಾಸಗತಸ್ಯ ಯಥಾ ಅತ್ರೈವ ನಗೇಂದ್ರತನಯೇತಿ ಪಾಠೇ।**

**ಅನುವಾದ:**

ಈ ಪದ್ಯದಲ್ಲಿ ಚಂದ್ರನಿಗೆ ಸಂಬಂಧಿಸಿದ ಕಿರಣಗಳ ನಿಬಂಧನವು ಚಂದ್ರನಿಗೆ ತಚ್ಛಬ್ದಪರಾಮರ್ಶಯೋಗ್ಯತೆಯನ್ನು ಒದಗಿಸಿದೆ. ಏಕೆಂದರೆ ಅವನು ಸಮಾಸದಲ್ಲಿ ಸೇರಿಹೋಗಿ ಅಪ್ರಧಾನನಾಗಿದ್ದಾನೆ. ಇನ್ನೊಂದು ಉದಾಹರಣೆ–

"ಸತತವಾಗಿ ಮಹಾಕಾಲ (ಪ್ರಳಯ)ದ ವಿಲಾಸವನ್ನು ಧರಿಸಿದ ನಿಶಾಪತಿ ಮೌಲಿಯು ಜಯಿಸುತ್ತಾನೆ. ಅದರ ಕತ್ತಲೆಯ ಕಾಂತಿಯಿಂದಲೋ ಎಂಬಂತೆ ಕುತ್ತಿಗೆಯ ವಿಷದ ಶೋಭೆಯಿಂದ ಅವನು ಕೂಡಿದ್ದಾನೆ."

ಇಲ್ಲಿ ನಿಶೆಗೆ ಸಂಬಂಧಿಸಿದ ತಮಸ್ಸುಗಳ ನಿಬಂಧನವೇ ಯೋಗ್ಯತೆ. ನಿಶೆಯು ಇಲ್ಲಿ ಗುಣೀಭೂತವಾದುದರ ಗುಣೀಭೂತ.

ಸಂಬಂಧಿಯನ್ನು ಪ್ರತಿಪಾದಿಸದಿದ್ದರೆ ಸಮಾಸದಲ್ಲಿ ಸೇರಿಲ್ಲದ ಅರ್ಥದ್ದೇ ಯೋಗ್ಯತೆ. ಉದಾಹರಣೆ– "ಪರ್ವತರಾಜನ ಮಗಳಿಂದ ಯಾವನ ಅರ್ಧದೇಹವು ಅಪಹೃತವಾಯಿತೋ, ಆ ಮೂರು ಲೋಕಗಳ ತಂದೆ ಜಯಿಸಲಿ. ಯಾವಳಿಲ್ಲದೆ ಅವನೂ ಅಶಕ್ತನೋ ಆ ಜಗಜ್ಜನನಿಯೂ ಜಯಿಸಲಿ."

ಈ ಪದ್ಯದಲ್ಲೇ ನಗೇಂದ್ರತನಯಾನಿರುದ್ಧದೇಹಾರ್ಧಃ ಎಂಬ ಪಾಠವನ್ನಿಟ್ಟುಕೊಂಡರೆ ಸಮಾಸಗತವಾದುದರ ಪರಾಮರ್ಶಕ್ಕೆ ಇದೇ ಉದಾಹರಣೆಯಾಗುತ್ತದೆ.

> **ಅಯಂ ಚ ಯೋಗ್ಯಾಯೋಗ್ಯತ್ವವಿವೇಕೋ ನ ಸರ್ವಜನಸಂವೇದನೀಯ ಇತಿ ಪ್ರಾಧಾನ್ಯಮೇವ ತಾವತ್ ಪ್ರಥಮಂ ಯೋಗ್ಯತಾಲಕ್ಷಣಮ್, ತದಭಾವೇ ತತ್ಸಂಬಂಧಿನಿಬಂಧ ಇತ್ಯುಭಯಂ ಯೋಗ್ಯತಾಲಕ್ಷಣಮ್ ಉಕ್ತಮ್। ಇತರಥಾ ತತ್ಪ್ರತೀತೇರಸಂಭವಾತ್। ಅತ್ರ ತು ಸತ್ಯಪಿ ಸಂಬಂಧಿನಿಬಂಧನೇ ಯತ್ಪುನಃ ಸ್ವಶಬ್ದೇನಾಭಿಧಾನಂ ತಚ್ಛಬ್ದಪುನರುಕ್ತಮಿತಿ। ತೇನ 'ಜಕ್ಷುರ್ಬಿಸಂ ವಿಕಚಮಸ್ಯ ದಧುಃ ಪ್ರಸೂನಮ್' ಇತ್ಯತ್ರ ಯುಕ್ತಃ ಪಾಠಃ। ಏವಂ ಚಾರ್ಥಪ್ರಕ್ರಮಭೇದದೋಷೋಽಪಿ ಪರಿಹೃತೋ ಭವತಿ।**

**ಅನುವಾದ:**

ಈ ಯೋಗ್ಯತ್ವ–ಅಯೋಗ್ಯತ್ವ ವಿವೇಚನೆಯು ಎಲ್ಲ ಜನರಿಗೂ ಅರಿವಿಗೆ ಬರುವುದಿಲ್ಲ ಎಂಬ ಕಾರಣದಿಂದ ಮೊದಲನೆಯದಾಗಿ ಪ್ರಾಧಾನ್ಯವೇ ಯೋಗ್ಯತೆಯ ಲಕ್ಷಣ, ಅದಿಲ್ಲದಿದ್ದರೆ ಪರಾಮರ್ಶನೀಯ ಅರ್ಥದ ಸಂಬಂಧಿಯ ನಿಬಂಧನ – ಎಂದು ಎರಡೂ ಯೋಗ್ಯತೆಯ ಲಕ್ಷಣವೆಂದು ಹೇಳಿದ್ದೇವೆ. ಹಾಗಿಲ್ಲದಿದ್ದರೆ ಪರಾಮೃಶ್ಯದ ಪ್ರತೀತಿಯು ಉಂಟಾಗದು.

ಪ್ರಕೃತ (ಜಕ್ಷುರ್ಬಿಸಂ.....) ಪದ್ಯದಲ್ಲಿ (ಪ್ರಸೂನಂ ಎಂಬ) ತತ್ಸಂಬಂಧಿಯ ನಿಬಂಧನವಿದ್ದರೂ ಬಿಸವನ್ನು ಮತ್ತೆ ಸ್ವಶಬ್ದದಿಂದ ಹೇಳಿರುವುದು ಶಬ್ದ

ಪುನರುಕ್ತವೇ ಆಗಿದೆ. ಆದ್ದರಿಂದ ಇಲ್ಲಿ ಜಕ್ಷುರ್ಬಿಸಂ ವಿಕಚಮಸ್ಯ ದಧುಃ ಪ್ರಸೂನಮ್ ಎಂಬ ಪಾಠವನ್ನು ಇಟ್ಟುಕೊಳ್ಳುವುದು ಯುಕ್ತ. ಹೀಗೆ ಮಾಡಿದರೆ ಆರ್ಥಪ್ರಕ್ರಮಭೇದ ಎಂಬ ದೋಷವೂ ಪರಿಹೃತವಾಗುತ್ತದೆ.

**ತಚ್ಚಾನೇಕ ಪ್ರಕಾರಂ ಸಂಭವತಿ। ಪ್ರಕೃತಿ–ಪ್ರತ್ಯಯ–ಉಭಯ–ಪದ–ವಾಕ್ಯ ವಿಷಯತ್ವಾತ್।**

(ಪ್ರಕೃತಿವಿಷಯಪುನರುಕ್ತಿ)

**ತತ್ರ ಪ್ರಕೃತಿವಿಷಯಂ ಯಥಾ–**

**ಅಶ್ವೀಯಸಂಹತಿಭಿರುದ್ಧತಮುದ್ಧುರಾಭಿ–**

**ರ್ಭೂರೇಣುಜಾಲಮಖಿಲಂ ವಿಯದಾತತಾನ।**

**ಇತಿ। ಅತ್ರ ಹಿ ಸಮೂಹಾರ್ಥಾಯಾಃ ಪ್ರಕೃತೇಃ ಸಂಹತೇಶ್ಚ ಪೌನರುಕ್ತ್ಯಮ್।**

(ಪ್ರತ್ಯಯವಿಷಯಪುನರುಕ್ತಿ)

**ಪ್ರತ್ಯಯವಿಷಯಂ ಯಥಾ–**

**ಬಿಸಕಿಸಲಯಚ್ಛೇದಪಾಥೇಯವಂತಃ ಇತಿ।**

**ತ್ವಗುತ್ತರಾಸಂಗವತೀಮಧೀತಿನೀಮ್ ಇತಿ ಚ।**

**ಅನುವಾದ:**

ಆ ಪೌನರುಕ್ತ್ಯವು ಅನೇಕ ಪ್ರಕಾರವಾಗಿರುತ್ತದೆ. ಏಕೆಂದರೆ ಪ್ರಕೃತಿ, ಪ್ರತ್ಯಯ, ಉಭಯ, ಪದ, ವಾಕ್ಯಗಳು ಅದಕ್ಕೆ ವಿಷಯವಾಗಿರುತ್ತವೆ.

ಅವುಗಳಲ್ಲಿ ಪ್ರಕೃತಿವಿಷಯವಾದ ಪೌನರುಕ್ತ್ಯದ ಉದಾಹರಣೆ– ಅಶ್ವೀಯ.....

"ಮುನ್ನುಗ್ಗುತ್ತಿದ್ದ ಕುದುರೆಗಳ ಗುಂಪಿನಿಂದ ಎದ್ದ ಮಣ್ಣಿನ ಧೂಳು ಸಮಸ್ತ ಆಕಾಶವನ್ನೂ ವ್ಯಾಪಿಸಿತು." ಇಲ್ಲಿ ಸಮೂಹಾರ್ಥವಾದ ಪ್ರಕೃತಿ ಮತ್ತು ಸಂಹತಿ ಎಂಬುದರ ಪೌನರುಕ್ತ್ಯವಿದೆ.

ಪ್ರತ್ಯಯವಿಷಯವಾದ ಪೌನರುಕ್ತ್ಯದ ಉದಾಹರಣೆ–

ಬಿಸಕಿಸಲಯ.....

ತಾವರೆಯ ಚಿಗುರಿನ ಬುತ್ತಿಯನ್ನು ಒಯ್ಯುತ್ತಿದ್ದ.....

ತ್ವಗುತ್ತರಾಸಂಗವತೀಮ್.....

ಚರ್ಮವನ್ನೇ ಉತ್ತರೀಯವನ್ನಾಗಿ ಮಾಡಿಕೊಂಡಿದ್ದವಳು,

ಅಧ್ಯಯನವನ್ನು ಮಾಡುತ್ತಿದ್ದವಳು

**ವಿವರಣೆ:**

ಅಶ್ವೀಯ ಎಂದರೆ ಅಶ್ವಗಳ ಹಿಂಡು. ಸಂಹತಿ ಎಂದರೂ ಹಿಂಡು. ಪ್ರಕೃತಿಯು ಹೇಳಿದುದನ್ನೇ ಮತ್ತೆ ಹೇಳುವ ಪದವನ್ನು ಬಳಸಿರುವುದರಿಂದ ಪುನರುಕ್ತಿ.

**ಅತ್ರ ಹಿ ಮತ್ವರ್ಥೀಯಸ್ಯ ಪೌನರುಕ್ತ್ಯಮ್। ಬಹುವ್ರೀಹಿಸಮಾಶ್ರಯೇಣೈವ ತದರ್ಥಾವಗತಿಸಿದ್ಧೇಃ। ಯದಾಹುಃ "ಕರ್ಮಧಾರಯಮತ್ವರ್ಥೀಯಾಭ್ಯಾಂ ಬಹುವ್ರೀಹಿರ್ಲಘುತ್ವಾತ್ ಪ್ರಕ್ರಮಸ್ಯ" ಇತಿ।**

**ಮತೋರ್ಭೂಮಾದಯೋ ಯೇಽರ್ಥಾಸ್ತೇಽಪ್ಯಸ್ತ್ಯರ್ಥಾನುಯಾಯಿನಃ।**
**ಗಮ್ಯಾಃ ಪ್ರಕರಣಾದಿಭ್ಯಃ ಇತಿ ನೋದಾಹೃತಾಃ ಪೃಥಕ್ ॥ ಇತಿ।**

**ಅನುವಾದ:**

ಈ ಉದಾಹರಣೆಗಳಲ್ಲಿ ಮತ್ವರ್ಥೀಯ ಪ್ರತ್ಯಯದ ಪುನರುಕ್ತಿ. ಬಹುವ್ರೀಹಿ ಸಮಾಸವನ್ನು ಒಪ್ಪಿಕೊಳ್ಳುವುದರಿಂದಲೇ ಅದರ ಅರ್ಥದ ಅರಿವೂ ಸಿದ್ಧವಾಗುತ್ತದೆ. (ವೈಯಾಕರಣರೂ) ಹೇಳಿದ್ದಾರೆ– ಕರ್ಮಧಾರಯಸಮಾಸ ಮತ್ತು ಮತ್ವರ್ಥೀಯ ಪ್ರತ್ಯಯಗಳಿಗಿಂತಲೂ ಬಹುವ್ರೀಹಿಯನ್ನು ಒಪ್ಪಿಕೊಳ್ಳುವುದು ಲೇಸು, ಏಕೆಂದರೆ ಅದರಲ್ಲಿ ಪ್ರಕ್ರಿಯಾಲಾಘವವಿದೆ.

ಮತುಪ್‌ಪ್ರತ್ಯಯದ ಭೂಮಾ ಮುಂತಾದ ಯಾವ ಅರ್ಥಗಳಿವೆಯೋ ಅವೆಲ್ಲ ಅಸ್ತಿ ಎಂಬುದರ ಅರ್ಥದ ಅನುಯಾಯಿಗಳು. ಅವು ಪ್ರಕರಣಾದಿಗಳಿಂದ ತಿಳಿದುಬರುತ್ತವೆ ಎಂಬ ಕಾರಣದಿಂದ ಬೇರೆ ಬೇರೆಯಾಗಿ ಉದಾಹರಿಸಿಲ್ಲ.

**ವಿವರಣೆ:**

ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್ ಎಂಬ ಸೂತ್ರದಿಂದ ಅಸ್ತ್ಯರ್ಥದಲ್ಲಿ ಪಾಣಿನಿ ಮತುಪ್‌ಪ್ರತ್ಯಯವನ್ನು ವಿಧಿಸಿದ್ದಾನೆ. ಈ ಪ್ರತ್ಯಯದ ಇತರ ಅರ್ಥಗಳನ್ನು ಒಂದು ಶ್ಲೋಕವು ಸಂಗ್ರಹಿಸಿ ಹೇಳಿದ–

ಭೂಮನಿಂದಾಪ್ರಶಂಸಾಸು ನಿತ್ಯಯೋಗೇಽತಿಶಾಯನೇ।
ಸಂಸರ್ಗೇಽಸ್ತಿವಿವಕ್ಷಾಯಾಂ ಭವಂತಿ ಮತುಬಾದಯಃ॥

ಈ ಎಲ್ಲ ಅರ್ಥಗಳೂ ಅಸ್ತಿ ಎಂಬುದರ ಅರ್ಥದ ಅನುಯಾಯಿಗಳು ಎಂದು ಮಹಿಮಭಟ್ಟನ ಅಭಿಪ್ರಾಯ.

**ಯಥಾ ವಾ– "ವಾಸೋ ಜಾಂಬವಪಲ್ಲವಾನಿ ಜಘನೇ ಗುಂಜಾಸ್ರಜೋ ಭೂಷಣಮ್" ಇತಿ, "ತದೀಯ ಮಾತಂಗಘಟಾವಿಘಟ್ಟಿತೈಃ" ಇತಿ, 'ಯೇನಾಕುಂಭನಿಮಗ್ನವನ್ಯಕರಿಣಾಂ ಯೂಥೈಃ ಪಯಃ ಪೀಯತೇ' ಇತ್ಯಾದೌ ತದ್ಧಿತಪ್ರತ್ಯಯಸ್ಯ ಪೌನರುಕ್ತ್ಯಂ ಷಷ್ಠೀಸಮಾಸಾಶ್ರಯೇಣೈವ ತದರ್ಥಾವಗತಿಸಿದ್ಧೇಃ।**

**ಅನುವಾದ:**

ಬೇರೆ ಉದಾಹರಣೆಗಳು–

ವಾಸೋ ಜಾಂಬವ.....

ನೇರಳೆಯ ಚಿಗುರುಗಳೇ ಬಟ್ಟೆ ನಡುವಿನಲ್ಲಿ
ಗುಲಗಂಜಿಯ ಸರಗಳೇ ಒಡವೆ
ಅವನ ಆನೆಗಳ ಹಿಂಡುಗಳಿಂದ ಘಟ್ಟಿತವಾದ

ಕುಂಭಸ್ಥಳದವರೆಗೆ ಮುಳುಗಿದ ಆನೆಗಳ ಹಿಂಡುಗಳು
ನೀರು ಕುಡಿಯುತ್ತಿವೆ

ಇತ್ಯಾದಿಗಳಲ್ಲಿ ತದ್ಧಿತಪ್ರತ್ಯಯ ಪುನರುಕ್ತವಾಗಿದೆ, ಏಕೆಂದರೆ ಷಷ್ಠೀ ಸಮಾಸದ ಆಶ್ರಯದಿಂದಲೇ ಅದರ ಅರ್ಥವೂ ಸಿದ್ಧವಾಗುತ್ತದೆ.

**ವಿವರಣೆ:**

೧. ಜಂಬುಪಲ್ಲವಾನಿ ಎಂದರೆ ನೇರಳೆಚಿಗುರು ಎಂಬ ಅರ್ಥ ತೋರುತ್ತದೆ. ಜಾಂಬವ ಎಂದು ತದ್ಧಿತಪ್ರತ್ಯಯವನ್ನು ಮಾಡಿರುವುದು ವ್ಯರ್ಥ. ಪ್ರತ್ಯಯದ ಅರ್ಥ ಪುನರುಕ್ತ.

೨. ತನ್ಮಾತಂಗ ಎಂದರೆ ಅವನ ಆನೆಗಳು ಎಂಬ ಅರ್ಥ ಆಗುತ್ತದೆ. ತದೀಯಮಾತಂಗ ಎಂದು ತದ್ಧಿತಪ್ರತ್ಯಯವನ್ನು ಸೇರಿಸಿರುವುದು ವ್ಯರ್ಥ. ಅದರ ಅರ್ಥ ಪುನರುಕ್ತ.

೩. ವನಕರಿಣಾಂ ಎಂದರೆ ಕಾಡಿನ ಆನೆಗಳ ಎಂಬ ಅರ್ಥ ಸಿದ್ಧವಾಗುವುದರಿಂದ ವನ್ಯ ಎಂದು ತದ್ಧಿತ ಪ್ರತ್ಯಯ ಕೇವಲ ಪುನರುಕ್ತ. ಷಷ್ಠೀತತ್ಪುರುಷದ ಆಶ್ರಯಣ ಮಾಡಿದಾಗ ಒಂದೇ ವೃತ್ತಿ. ವನೇ ಭವಾ ವನ್ಯಾಃ, ವನ್ಯಾಶ್ಚ ತೇ ಕರಿಣಶ್ಚ ಎಂದು ಕರ್ಮಧಾರಯವನ್ನು ಆಶ್ರಯಿಸಿದರೆ ಎರಡು ವೃತ್ತಿಗಳು. ಇದು ವೃಥಾ ಭಾರ.

**ಯತ್ರ ತು ಅರ್ಥಾಂತರೇ ತದ್ಧಿತೋತ್ಪತ್ತಿಃ, ನ ತತ್ರ ಸಮಾಸಾತ್ ತತ್ಪ್ರತೀತಿರಿತಿ ನ ತಸ್ಯ ಪೌನರುಕ್ತ್ಯಮ್। ಯಥಾ– ಅಥ ಭೂತಾನಿ ವಾರ್ತಘ್ನಶರೇಭ್ಯಸ್ತತ್ರ ತತ್ರಸುಃ । ಅತ್ರ ಹಿ ಅಪತ್ಯಾರ್ಥೇ ತದ್ಧಿತೋತ್ಪತ್ತಿಃ, ನೇದಮರ್ಥ ಇತಿ ।**

**ಛಾಯಾಮಪಾಸ್ಯ ಮಹತೀಮಪಿ ವರ್ತಮಾನಾಮಾಗಾಮಿನೀಂ ಜಗೃಹಿರೇ ಜನತಾಸ್ತರೂಣಾಮ್।**
**ಅತ್ರ ಹಿ ಸಮೂಹಾರ್ಥಾಯಾಃ ಪ್ರಕೃತೇರ್ಬಹುವಚನಸ್ಯ ಚೋಭಯೋಃ ಪೌನರುಕ್ತ್ಯಮ್।**

**ಅನುವಾದ:**

ಎಲ್ಲಿ ಬೇರೆ ಅರ್ಥದಲ್ಲಿ ತದ್ಧಿತಪ್ರತ್ಯಯವನ್ನು ಬಳಸಲಾಗಿರುವುದೋ ಅಲ್ಲಿ ಸಮಾಸದಿಂದ ಆ ಅರ್ಥವು ತೋರುವುದಿಲ್ಲವಾದ ಕಾರಣ, ಅಲ್ಲಿ ಆ ಪ್ರತ್ಯಯದ ಪೌನರುಕ್ತ್ಯವಿಲ್ಲ. ಉದಾಹರಣೆ –ಅಥ.....

ಅನಂತರ ಎಲ್ಲ ಭೂತಗಳೂ ಅರ್ಜುನನ ಬಾಣಗಳಿಗೆ ಅಲ್ಲಿ ಹೆದರಿದುವು.

ಇಲ್ಲಿ (ವಾರ್ತಘ್ನ ಎಂಬ ಪದದಲ್ಲಿ) ತದ್ಧಿತಪ್ರತ್ಯಯವು ಅಪತ್ಯ (ಮಗ) ಎಂಬ ಅರ್ಥದಲ್ಲಿ ಬಂದಿದೆ. ಇದಮ್ ಎಂಬುದರ ಅರ್ಥದಲ್ಲಿಲ್ಲ.

ಉಭಯವಿಷಯಪೌನರುಕ್ತ್ಯದ ಉದಾಹರಣೆ–

"ಅಲ್ಲಿದ್ದ ವಿಶಾಲವಾದ ಮರಗಳ ತಾತ್ಕಾಲಿಕ ನೆರಳನ್ನು ಬಿಟ್ಟು ಜನರು ಮುಂದೆ ಬರಲಿದ್ದ ನೆರಳನ್ನು ಆಶ್ರಯಿಸಿದರು." ಇಲ್ಲಿ ಸಮೂಹಾರ್ಥವಾದ ಪ್ರಕೃತಿಯ ಮತ್ತು ಬಹುವಚನದ ಎಂದು ಎರಡರ ಪೌನರುಕ್ತ್ಯವೂ ಇದೆ.

**ವಿವರಣೆ:**

ಜನ ಎಂಬ ಶಬ್ದವು ಏಕವಚನದಲ್ಲಿದ್ದರೂ ಎಲ್ಲ ಜನರನ್ನು ಬೋಧಿಸುತ್ತದೆ. ಹೀಗಿರುವಾಗ ಜನತಾ ಎಂಬ ಸಮೂಹಾರ್ಥಕ ತಲ್ ಪ್ರತ್ಯಯ, ಅದರ ಮೇಲೆ ಬಹುವಚನ ಎರಡೂ ಬೇಕಾಗಿರಲಿಲ್ಲ. ಆದ್ದರಿಂದ ಪೌನರುಕ್ತ್ಯ.

(ಪದವಿಷಯಪೌನರುಕ್ತ್ಯ)

**ಪದವಿಷಯಂ ಯಥಾ–**

**ದಲತ್ಕಂದಲಭಾಗ್ ಭೂಮಿಃಸ್ಸಲಂಬಾಂಬುದಮಂಬರಮ್।**
**ವಾಪ್ಯಃ ಫುಲ್ಲಾಂಬುಜಯುಜೋ ಜಾತಾ ದೃಷ್ಟೇರ್ವಿಷಂ ಮಮ॥**

**ಅತ್ರ ಹಿ ಭಜಿಃ ಸಹಶಬ್ದೋ ಯುಜಿಶ್ಚ ಪುನರುಕ್ತಾರ್ಥಃ**
**ಪೂರ್ವವದ್ ಬಹುವ್ರೀಹಿಸಮಾಸಾಶ್ರಯಣೇನೈವ ತದರ್ಥಾವಗತೇಃ।**
**ಯತ್ರ ಚ ವಿಶೇಷಣಾದ್ ವಿಶೇಷ್ಯಮಾತ್ರ ಪ್ರತಿಪತ್ತಿರಿಷ್ಯತೇ ತತ್ರ ತದುಕ್ತೇಃ ಪೌನರುಕ್ತ್ಯಮ್। ಯಥಾ**
**"ಪಾಯಾತ್‌ಸ ಶೀತಕಿರಣಾಭರಣೋ ಭವೋ ವಃ"**
**ಇತ್ಯತ್ರ ಭವಶಬ್ದಸ್ಯ। ಯಥಾ ವಾ–**
**ಚಕಾಸತಂ ಚಾರು ಚಮೂರುಚರ್ಮಣಾ**
**ಕುಥೇನ ನಾಗೇಂದ್ರಮಿವೇಂದ್ರವಾಹನಮ್ ।**
**ಇತ್ಯತ್ರ ನಾಗೇಂದ್ರೇಂದ್ರವಾಹನಶಬ್ದಯೋರೇಕತರಸ್ಯ।**

**ಅನುವಾದ:**

ಪದವಿಷಯಪೌನರುಕ್ತ್ಯದ ಉದಾಹರಣೆ–

"ಬಿರಿಯುತ್ತಿದ್ದ ಮೊಳಕೆಗಳನ್ನು ಹೊಂದಿದ್ದ ನೆಲವೂ
ತೂಗುತ್ತಿದ್ದ ಮೋಡಗಳಿಂದ ತುಂಬಿದ್ದ ಬಾನೂ
ಅರಳಿದ್ದ ತಾವರೆಗಳಿಂದ ಕೂಡಿದ್ದ ಕೊಳಗಳೂ
ನನ್ನ ಕಣ್ಣಿಗೆ ವಿಷವಾದುವು."

ಇಲ್ಲಿ ಭಜ್‌ಧಾತು, ಸಹಶಬ್ದ ಮತ್ತು ಯುಜ್‌ಧಾತು ಪುನರುಕ್ತವಾದ ಅರ್ಥವನ್ನು ಹೊಂದಿವೆ. ಹಿಂದಿನಂತೆ (ಅವುಗಳಿಲ್ಲದಿದ್ದರೂ) ಬಹುವ್ರೀಹಿ ಸಮಾಸದಿಂದಲೇ ಅವುಗಳ ಅರ್ಥವು ಬರುತ್ತದೆ. ಎಲ್ಲಿ ವಿಶೇಷಣದಿಂದಲೇ ವಿಶೇಷ್ಯದ ಜ್ಞಾನವೂ ಉಂಟಾಗುವುದೋ ಅಲ್ಲಿ ವಿಶೇಷ್ಯದ ಉಪಾದಾನ ಪುನರುಕ್ತ. ಉದಾಹರಣೆ– (ಪಾಯಾತ್.....) ಚಂದ್ರಾಭರಣ ಶಿವನು ನಿಮ್ಮನ್ನು ಕಾಪಾಡಲಿ. ಇಲ್ಲಿ ಭವ (=ಶಿವ) ಶಬ್ದದ ಉಪಾದಾನ ಪುನರುಕ್ತ. ಇನ್ನೊಂದು ಉದಾಹರಣೆ –(ಚಕಾಸತಂ.....) "ಚಂದವಾಗಿದ್ದ ಚಮೂರುಮೃಗದ ಚರ್ಮದಿಂದ, ಇಂದ್ರವಾಹನ ಐರಾವತವು ಮೇಲ್ಹಾಸಿನಿಂದ ಶೋಭಿಸುವಂತೆ ಕಂಗೊಳಿಸುತ್ತಿದ್ದವನನ್ನು" ಈ ಪದ್ಯದಲ್ಲಿ ನಾಗೇಂದ್ರ–ಇಂದ್ರವಾಹನ ಎಂಬ ಶಬ್ದಗಳಲ್ಲಿ ಒಂದರ ಪೌನರುಕ್ತ್ಯ.

**ಯತ್ರ ತದ್ವಿಶೇಷಪ್ರತಿಪತ್ತಿಃ, ನ ತತ್ರ ಪೌನರುಕ್ತ್ಯಮ್। ಯಥಾ–**
**ತವ ಪ್ರಸಾದಾತ್ ಕುಸುಮಾಯುಧೋಽಪಿ ಸಹಾಯಮೇಕಂ ಮಧುಮೇವ ಲಬ್ಧ್ವಾ।**
**ಕುರ್ಯಾಂ ಹರಸ್ಯಾಪಿ ಪಿನಾಕಪಾಣೇರ್ವೀರ್ಯಚ್ಯುತಿಂ ಕೇ ಮಮ ಧ್ವನಿನೋಽನ್ಯೇ॥**
**ಇತಿ। ಅತ್ರ ಹರಶಬ್ದಸ್ಯೇತಿ ವಕ್ಷ್ಯತೇ।**
**ಅಥ ಯಥಾತ್ರೈವ 'ತವ ಪ್ರಸಾದಾತ್ ಕುಸುಮಾಯುಧೋಽಪಿ'**
**ಇತ್ಯತ್ರ ವಿಶೇಷ್ಯೋಪಾದಾನಮಂತರೇಣಾಪ್ಯುಭಯಾರ್ಥಪ್ರತಿಪತ್ತಿಸ್ತದ್ವದತ್ರಾಪಿ ಭವಿಷ್ಯತೀತಿ। ತದಯುಕ್ತಮ್। ಉತ್ತಮಪುರುಷೇಣೈವ ಅಸ್ಮದರ್ಥಸ್ಯ ವಿಶೇಷ್ಯಸ್ಯ ಪ್ರತಿಪಾದಿತತ್ವಾತ್ ತದನುಪಾದಾನಾಸಿದ್ಧೇಃ॥**

**ಅನುವಾದ:**

ಎಲ್ಲಿ (ವಿಶೇಷಣದಿಂದ ವಿಶೇಷ್ಯದ) ವಿಶೇಷಗುಣವು ತೋರುವುದೋ ಅಲ್ಲಿ ಪೌನರುಕ್ತ್ಯವಿಲ್ಲ. ಉದಾಹರಣೆ– "ನಿನ್ನ ಅನುಗ್ರಹದಿಂದ ವಸಂತನೆಂಬ ಒಬ್ಬ ಸಹಾಯಕನನ್ನು ಪಡೆದು ಕುಸುಮಾಯುಧನಾದರೂ ನಾನು ಪಿನಾಕಪಾಣಿ ಹರನಿಗೂ ಶಕ್ತಿಹ್ರಾಸವನ್ನು ಮಾಡಬಲ್ಲೆನು. ಬೇರೆ ಬಿಲ್ಲಾಳುಗಳು ನನಗೆ ಯಾವ ಲೆಕ್ಕ?"

ಇಲ್ಲಿ ಹರಶಬ್ದದ (ಉಪಾದಾನವು ಪುನರುಕ್ತವಲ್ಲ) ಎಂದು ಮುಂದೆ ಪ್ರತಿಪಾದಿಸುವೆವು.

ಈ ಪದ್ಯದಲ್ಲಿ 'ತವ ಪ್ರಸಾದಾತ್ ಕುಸುಮಾಯುಧೋಽಪಿ' ಎಂಬಲ್ಲಿ ವಿಶೇಷ್ಯವಾಚಕದ ಉಪಾದಾನವಿಲ್ಲದಿದ್ದರೂ ಎರಡು ಅರ್ಥಗಳ ಜ್ಞಾನವುಂಟಾಗುವಂತೆ, (ಹರಶಬ್ದವಿಲ್ಲದೆ ಕೇವಲ ಪಿನಾಕಪಾಣಿ ಎಂಬ ಶಬ್ದದಿಂದಲೇ ಉಭಯಾರ್ಥ ಪ್ರತಿಪತ್ತಿ) ಆಗಬಹುದಲ್ಲವೆ?

ಅದು ಸರಿಯಲ್ಲ. (ಮನ್ಮಥನ ವಿಷಯದಲ್ಲೂ) ಉತ್ತಮಪುರುಷ ಪ್ರತ್ಯಯದಿಂದಲೇ ವಿಶೇಷ್ಯವು ಪ್ರತಿಪಾದಿತವಾಗಿರುವುದರಿಂದ "ಅದರ ಉಪಾದಾನವಿಲ್ಲದೆ" ಎಂಬುದೇ ಅಸಿದ್ಧವಾಗುತ್ತದೆ.

**ಯಥಾ ಚ–**
**ನಿರ್ಯಾಯ ವಿದ್ಯಾಥ ದಿನಾದಿರಮ್ಯಾದ್**
**ಬಿಂಬಾದಿವಾರ್ಕಸ್ಯ ಮುಖಾನ್ಮಹರ್ಷೇಃ।**
**ಪಾರ್ಥಾನನಂ ವಹ್ನಿಕಣಾವದಾತಾ**
**ದೀಪ್ತಿಃ ಸ್ಫುರತ್ಪದ್ಮಮಿವಾಭಿಪೇದೇ॥ ಇತಿ।**
**ಅತ್ರ ಹಿ ಮಹರ್ಷಿಮುಖಾರ್ಕಬಿಂಬಯೋಃ, ವಿದ್ಯಾದೀಪ್ತ್ಯೋಃ**
**ಪಾರ್ಥಾನನಪದ್ಮಯೋಶ್ಚ ಉಪಮಾನೋಪಮೇಯ–**
**ಭಾವಾವಗತಿರೇಕಸ್ಯೈವೇವಶಬ್ದಸ್ಯ ವ್ಯಾಪಾರಃ।**
**ತಥಾಹಿ– ಮಹರ್ಷಿಮುಖಾದ್ ವಿದ್ಯಾ ನಿರ್ಯಾಯ ಪಾರ್ಥಾನನಮಭಿಪ್ರಪೇದೇ ಅರ್ಕಬಿಂಬಾದಿವ ದೀಪ್ತಿಃ ಪದ್ಮಮ್ ಇತಿ।**

**ಅನುವಾದ:**

ಇನ್ನೊಂದು ಉದಾಹರಣೆ–

"ಆಗ ಮಹರ್ಷಿಯ ಮುಖದಿಂದ ಹೊರಟ ವಿದ್ಯೆಯು, ದಿನದ ಆದಿಭಾಗದಲ್ಲಿ ರಮ್ಯವಾಗಿರುವ ಸೂರ್ಯನ ಬಿಂಬದಿಂದ ಸ್ವಚ್ಛವಾದ ದೀಪ್ತಿಯು ಅರಳುವ ಪದ್ಮವನ್ನು ಬಂದು ಸೇರುವಂತೆ, ಪಾರ್ಥನ ಬಾಯಿಯೊಳಗೆ ಬೆಂಕಿಯ ಕಿಡಿಯಂತೆ ಪ್ರವೇಶಿಸಿತು". ಇಲ್ಲಿ ಮಹರ್ಷಿಯ ಮುಖ ಮತ್ತು ಸೂರ್ಯಬಿಂಬಗಳಿಗೆ, ವಿದ್ಯೆ ಮತ್ತು ಪದ್ಮಗಳಿಗೆ ಉಪಮಾನೋಪಮೇಯ ಭಾವವನ್ನು ತಿಳಿಸುವುದು ಒಂದು 'ಇವ' ಶಬ್ದದ ಕಾರ್ಯ. ಅದು ಹೇಗೆಂದರೆ– ಮಹರ್ಷಿಯ ಮುಖದಿಂದ ವಿದ್ಯೆಯು ಹೊರಟು ಸೂರ್ಯಬಿಂಬದಿಂದ ಹೊರಟ ದೀಪ್ತಿಯು ಪದ್ಮವನ್ನು ಸೇರುವಂತೆ ಪಾರ್ಥನ ಮುಖವನ್ನು ಸೇರಿತು.

**ಏವಂ ಪದಾರ್ಥಸಮನ್ವಯೇ ಸತಿ ಸರ್ವೇಷಾಮ್ ಉಪಮಾನೋಪಮೇಯಭಾವೋऽಭಿಮತಃ ಸಿಧ್ಯತ್ಯೇವೇತಿ ಯತ್ ತತ್ರಾನ್ಯೇಷಾಂ ಸಾಮ್ಯಾಭಿಧಾಯಿನಾಮ್ ಉಪಾದಾನಂ ತತ್‌ಪುನರುಕ್ತಮೇವ। ಅನ್ಯಥಾ ವಿದ್ಯಾದೀಪ್ತಿರಿವೇತಿ ತೃತೀಯಸ್ಯಾಪಿ ಇವಶಬ್ದಸ್ಯ ಪ್ರಯೋಗಃ ಪ್ರಸಜ್ಯೇತೇತಿ "ಸ್ಫುರತ್ಪದ್ಮಮಭಿಪ್ರಪೇದೇ" ಇತ್ಯತ್ರ ಯುಕ್ತಃ ಪಾಠಃ॥ ಯಥಾ ವಾ–**

**ದಿನೇ ದಿನೇ ಸಾ ಪರಿವರ್ಧಮಾನಾ ಲಬ್ಧೋದಯಾ ಚಾಂದ್ರಮಸೀವ ರೇಖಾ।**
**ಪುಪೋಷ ಲಾವಣ್ಯಮಯಾನ್ ವಿಶೇಷಾನ್ ಜ್ಯೋತ್ಸ್ನಾಂತರಾಣೀವ ಕಲಾಂತರಾಣಿ"**

**ಅನುವಾದ:**

ಹೀಗೆ ಪದಾರ್ಥಸಮನ್ವಯವಾಗಿರುವಾಗ, ಎಲ್ಲ ವಸ್ತುಗಳ ಉಪಮಾನೋಪಮೇಯಭಾವವು (ಒಂದೇ ಇವಶಬ್ದದಿಂದ) ಸಿದ್ಧವಾಗುತ್ತದೆ. ಆದ್ದರಿಂದ ಇಲ್ಲಿ ಸಾಮ್ಯವಾಚಕವಾದ ಬೇರೆ ಶಬ್ದಗಳ ಪ್ರಯೋಗ ಪುನರುಕ್ತವೇ. ಹೀಗೆ ಒಪ್ಪಿಕೊಳ್ಳದಿದ್ದರೆ (ಈ ಪದ್ಯದಲ್ಲಿ) ವಿದ್ಯಾದೀಪ್ತಿರಿವ ಎಂದು ಮೂರನೆಯ ಇವಶಬ್ದವನ್ನು ಪ್ರಯೋಗಿಸುವ ಸಂದರ್ಭವು ಪ್ರಸಕ್ತವಾದೀತು. ಆದ್ದರಿಂದ (ಎರಡನೆಯ ಇವಶಬ್ದವನ್ನು ತ್ಯಜಿಸಿದರೆ) "ಸ್ಫುರತ್‌ಪದ್ಮಮಭಿಪ್ರಪೇದೇ" ಎಂಬ ಪಾಠವು ಉಚಿತ.

ಇನ್ನೊಂದು ಉದಾಹರಣೆ–

"ಪ್ರತಿದಿನವೂ ಬೆಳೆಯುತ್ತಿದ್ದ ಆ ಉಮೆಯು ಉದಯಿಸಿದ ಚಂದ್ರನ ಲೇಖೆಯು ಬೆಳದಿಂಗಳನ್ನು ಒಳಗೊಂಡ ಇತರ ಕಲೆಗಳನ್ನು ಬೆಳೆಸಿಕೊಳ್ಳುವಂತೆ ಲಾವಣ್ಯಮಯವಾದ ಅಂಗಗಳನ್ನು ಹೊಂದಿದಳು."

**ಯಥಾ ಚ–**
**ಯಂ ಸಮೇತ್ಯ ಚ ಲಲಾಟಲೇಖಯಾ ಯುಂಜತಃ ಸಪದಿ ಶಂಭುವಿಭ್ರಮಮ್।**
**ಚಂಡಮಾರುತಮಿವ ಪ್ರದೀಪವಚ್ಚೇದಿಪಸ್ಯ ನಿರವಾದ್ ವಿಲೋಚನಮ್॥**
**ಅತ್ರಾಪಿ "ದೈಪಮರ್ಚಿರಿವ ಚಂಡಮಾರುತಂ" ಇತಿ ಯುಕ್ತಃ ಪಾಠಃ।**
**ಯಥಾ ಚ–**
**ನವಚಂದ್ರಿಕಾಕುಸುಮಕೀರ್ಣತಮಃ ಕಬರೀಭೃತೋ ಮಲಯಜಾರ್ದ್ರಮಿವ।**
**ದದೃಶೇ ಲಲಾಟತಟಹಾರಿ ಹರೇರ್ಹರಿತೋ ಮುಖಸ್ಯ ಹಿಮರಶ್ಮಿದಲಮ್॥**

**ಅನುವಾದ:**

"(ಶಿಶುಪಾಲನು ಮಗುವಾಗಿದ್ದಾಗ) ನೊಸಲಿನಲ್ಲಿ (ಕಣ್ಣಿನಂಥ) ರೇಖೆಯನ್ನು ಹೊಂದಿ ಶಿವನ ರೂಪವನ್ನು ಪಡೆದಿದ್ದನು. ಯಾವನ (ಶ್ರೀಕೃಷ್ಣನ) ಸಂಪರ್ಕ ಬಂದಾಗ ಚಂಡಮಾರುತದ ಸಂಪರ್ಕದಿಂದ ದೀಪವು ಆರಿಹೋಗುವಂತೆ ಶಿಶುಪಾಲನ (ಮೂರನೆಯ) ಕಣ್ಣು ಅಳಿಸಿಹೋಯಿತು."

ಇಲ್ಲಿಯೂ ಮೂರನೆಯ ಪಾದದಲ್ಲಿ "ದೈವಮರ್ಚಿರಿವ ಚಂಡಮಾರುತಮ್" ಎಂಬ ಪಾಠ ಯುಕ್ತವಾಗುತ್ತದೆ.

ಇನ್ನೊಂದು ಉದಾಹರಣೆ–

"ಹೊಸ ಬೆಳದಿಂಗಳೆಂಬ ಹೂವುಗಳು ಹರಡಿದ್ದ ಕತ್ತಲೆಯೆಂಬ ತುರುಬನ್ನು ಧರಿಸಿದ್ದ ಇಂದ್ರದಿಕ್ಕಿನ (ಪೂರ್ವದಿಕ್ಕಿನ) ಮುಖದ ಹಣೆಯಂತೆ ಚೆಲುವಾಗಿದ್ದ ಚಂದ್ರಕಲೆಯು ಶ್ರೀಗಂಧದ ಲೇಪನದಿಂದ ಒದ್ದೆಯಾದಂತಿತ್ತು."

**ಇತ್ಯತ್ರಾಪಿ ಇವಶಬ್ದಪ್ರಯೋಗಃ ಪುನರುಕ್ತೋ ಹಾರೀತ್ಯನೇನೈವ ತದಭಿನ್ನಾರ್ಥೇನ ತದರ್ಥಸ್ಯ ಪ್ರತಿಪಾದಿತತ್ವಾತ್। ನಚ ಉಭಯೋರಭಿನ್ನಾರ್ಥತ್ವೇಽಪಿ ಹಾರೀತ್ಯಸ್ಯ ಪೌನರುಕ್ತ್ಯಂ ಯುಕ್ತಂ ವಕ್ತುಮ್। ತಸ್ಯ ಯಥಾಸ್ಥಾನಮವಸ್ಥಾನಾದಿವಶಬ್ದಸ್ಯ ಚ ವಿಪರ್ಯಯೇಣ ಕ್ರಮಭೇದದುಷ್ಟತ್ವಾತ್, ಇತಿ "ದದೃಶೇ ಲಲಾಟತಟಮಿಂದ್ರದಿಶೋ ವದನಸ್ಯ ಹಾರಿ ಹಿಮರಶ್ಮಿದಲಮ್" ಇತಿ ವರಮತ್ರ ಪಾಠೋ ಯುಕ್ತಃ।**

**ಅನುವಾದ:**

ಈ ಪದ್ಯದಲ್ಲಿಯೂ ಇವಶಬ್ದದ ಪ್ರಯೋಗ ಪುನರುಕ್ತವೇ. ಅದರ ಅರ್ಥವನ್ನೇ ಕೊಡುವ ಹಾರಿ ಎಂಬ ಪದವೇ ಅದರ ಅರ್ಥವನ್ನು ಪ್ರತಿಪಾದಿಸಿದೆಯಷ್ಟೆ. (ಇವ, ಹಾರಿ ಎಂಬ) ಎರಡೂ ಅಭಿನ್ನಾರ್ಥವೇ ಆದರೂ ಹಾರಿ ಎಂಬ ಪದವೇ ಪುನರುಕ್ತ ಎಂದು ಹೇಳುವುದು ಯುಕ್ತವಲ್ಲ. ಏಕೆಂದರೆ ಅದು ಸರಿಯಾದ ಸ್ಥಾನದಲ್ಲಿದೆ. ಇವಶಬ್ದವಾದರೋ ಇದಕ್ಕೆ ವಿರುದ್ಧವಾಗಿ ಕ್ರಮಭೇದ ಎಂಬ ದೋಷವನ್ನು ಹೊಂದಿದೆ. ಆದ್ದರಿಂದ "ದದೃಶೇಲಲಾಟ..... ದಲಮ್" ಎಂಬ ಪಾಠವು ಯುಕ್ತ ಎನ್ನುವುದು ಲೇಸು.

ಯಥಾ ಚ–
ವರ್ಣ್ಯೈಃ ಕತಿಪಯೈರೇವ ಗ್ರಥಿತಸ್ಯ ಸ್ವರೈರಿವ।
ಅನಂತಾ ವಾಙ್ಮಯಸ್ಯಾಹೋ ಗೇಯಸ್ಯೇವ ವಿಚಿತ್ರತಾ॥
ಇತ್ಯತ್ರ ದ್ವಿತೀಯ ಇವಶಬ್ದಃ ಪುನರುಕ್ತಃ। ಏವಂ ಹ್ಯತ್ರ ಪಾಠೋ ಯುಕ್ತಃ। "ಗೇಯಸ್ಯ ವಾಙ್ಮಯಸ್ಯಾಹೋ ಅಪರ್ಯಂತಾ ವಿಚಿತ್ರತಾ" ಇತಿ।
ಏವಮ್ ಉಪಮಾರೂಪಕೇಽಪಿ ಇವಶಬ್ದಪ್ರಯೋಗಃ ಪುನರುಕ್ತೋ ಅವಗಂತವ್ಯಃ। ಯಥಾ "ನಿರ್ಮೋಕಮುಕ್ತಿಮಿವ ಗಗನೋರಗಸ್ಯ, ಲೀಲಾಲಲಾಟಿಕಾಮಿವ ತ್ರಿವಿಷ್ಟಪವಿಟಸ್ಯ" ಇತಿ। ಯಥಾ ಚ "ಶಾತಃ ಶ್ಯಾಮಲತಾಯಾಃ ಪರಶುರಿವ ತಮೋಽರಣ್ಯವಹ್ನೇರಿವಾರ್ಚಿಃ" ಇತಿ।

**ಅನುವಾದ:**

"ಕೆಲವೇ ಸ್ವರಗಳಿಂದ ರಚಿತವಾದ ಹಾಡಿನ ಹಾಗೆ ಕೆಲವೇ ವರ್ಣಗಳಿಂದ ರಚಿತವಾದ ವಾಙ್ಮಯದ ವೈಚಿತ್ರ್ಯ ಅದ್ಭುತ!" ಈ ಪದ್ಯದಲ್ಲೂ ಎರಡನೆಯ ಇವಶಬ್ದ ಪುನರುಕ್ತ. ಆದ್ದರಿಂದ ಇಲ್ಲಿ ಪಾಠ ಹೀಗಿದ್ದರೆ ಯುಕ್ತ–

"ಗೇಯಸ್ಯ..... ವಿಚಿತ್ರತಾ".

ಹೀಗೆ ಉಪಮಾರೂಪಕ (ಎಂಬ ಅಲಂಕಾರ)ದಲ್ಲೂ ಇವಶಬ್ದದ ಪ್ರಯೋಗವನ್ನು ಪುನರುಕ್ತವೆಂದೇ ತಿಳಿದುಕೊಳ್ಳಬೇಕು. ಉದಾಹರಣೆ– "ಆಕಾಶವೆಂಬ ಹಾವಿನ ಪೊರೆಯು ಕಳಚಿದಂತೆ, ಸ್ವರ್ಗವಿಟನ ವಿಲಾಸತಿಲಕದಂತೆ".

ಇನ್ನೊಂದು ಉದಾಹರಣೆ– "ಶ್ಯಾಮಲವರ್ಣದ ಚೂಪಾದ ಕೊಡಲಿಯಂತೆ, ಕತ್ತಲೆಯೆಂಬ ಅರಣ್ಯದ ಬೆಂಕಿಯ ಜ್ವಾಲೆಯಂತೆ".

ಅತ್ರ ಹಿ ರೂಪಕಸ್ಯೋಪನಿಬಂಧಃ ಶ್ರೇಯಾನ್, ನೋಪಮಾಯಾಃ, ತಸ್ಯಾಸ್ತನ್ಮುಖೇನೈವ ಪ್ರತೀತಿಸಿದ್ಧೇಃ। ನ ಹ್ಯಸತಿ ಸಾದೃಶ್ಯೇ ಕ್ವಚಿತ್ ಸ್ವಸ್ಥಧೀರತಸ್ಮಿನ್ ತತ್ತ್ವಮಾರೋಪಯತಿ। ಯಥಾ–
ಆಲಾನಂ ಜಯಲಕ್ಷಣಸ್ಯ ಕರಿಣಃ, ಸೇತುರ್ವಿಪದ್ವಾರಿಧೇಃ
ಪೂರ್ವಾದ್ರಿಃ ಕರವಾಲಚಂಡಮಹಸೋ ಲೀಲೋಪಧಾನಂ ಶ್ರಿಯಃ।
ಸಂಗ್ರಾಮಾಮೃತಸಾಗರಪ್ರಮಥನಕ್ರೀಡಾವಿಧೌ ಮಂದರೋ
ರಾಜನ್ ರಾಜತಿ ವೀರವೈರಿವನಿತಾವೈಧವ್ಯದಸ್ತೇ ಕರಃ॥

**ಅನುವಾದ:**

ಇಲ್ಲಿ ರೂಪಕಾಲಂಕಾರದ ಉಪನಿಬಂಧನವೇ ಲೇಸು, ಉಪಮೆಯ ಪ್ರಯೋಗ ಸರಿಯಲ್ಲ. ಏಕೆಂದರೆ ರೂಪಕದ ಮೂಲಕ ಉಪಮೆಯ ಪ್ರತೀತಿ ತಾನಾಗಿ ಉಂಟಾಗುತ್ತದೆ. ಸಾದೃಶ್ಯವೇ ಇಲ್ಲದಿದ್ದಾಗ, ಬುದ್ಧಿ ಸರಿ ಇದ್ದವನು ಅದಲ್ಲದ ವಸ್ತುವಿನಲ್ಲಿ ಅದರ ರೂಪವನ್ನು ಆರೋಪಿಸುವುದಿಲ್ಲವಲ್ಲವೆ?

ಒಂದು ಉದಾಹರಣೆ–

"ರಾಜನೆ, ನಿನ್ನ ಕೈ ಜಯವೆಂಬ ಆನೆಗೆ ಆಲಾನಸ್ತಂಭ (ಕಟ್ಟಿಹಾಕುವ ಕಂಬ), ವಿಪತ್ತೆಂಬ ಕಡಲಿಗೆ ಸೇತುವೆ, ಖಡ್ಗವೆಂಬ ಸೂರ್ಯನ ಪೂರ್ವಪರ್ವತ, ಲಕ್ಷ್ಮಿಯ ವಿಲಾಸದ ದಿಂಬು, ಯುದ್ಧವೆಂಬ ಪಾಲ್ಗಡಲಿನ ಕಡೆಯುವ ಆಟದಲ್ಲಿ ಮಂದರವೆಂಬ ಬೆಟ್ಟ, ಇಂಥ ನಿನ್ನ ಕೈ ವೀರರಾದ ನಿನ್ನ ವೈರಿಗಳ ಹೆಂಗಸರಿಗೆ ವೈಧವ್ಯವನ್ನು ಕೊಡುತ್ತಾ ಶೋಭಿಸುತ್ತಿದೆ".

ಈ ಪದ್ಯದಲ್ಲಿ ಕೈಯನ್ನು ಸ್ತಂಭ, ಸೇತುವೆ, ಪೂರ್ವಪರ್ವತ, ದಿಂಬು, ಮಂದರಶೈಲ ಎಂದು ರೂಪಿಸಲಾಗಿದೆ. ರಾಜನ ಕೈ ಅವುಗಳಿಗೆ ದೃಢತೆ, ದೀರ್ಘತೆ, ಅಚಲತೆ, ಮೃದುತ್ವ, ಕಾರ್ಯಸಾಧಕತ್ವ ಇತ್ಯಾದಿ ಧರ್ಮಗಳಿಂದ ಸದೃಶ ಎಂದು ಭಾವಿಸಿ ಕವಿ ರೂಪಕಾಲಂಕಾರವನ್ನು ಬಳಸಿದ್ದಾನೆ. ಸಾದೃಶ್ಯವೇ ಇಲ್ಲದ ವಸ್ತುವಿನ ರೂಪಣವನ್ನು ಮಾಡಿದರೆ ಅದು ಹುಚ್ಚನ ಮಾತು.

**ಯಥಾ ಚ–**

**ಅಂಗುಲೀಭಿರಿವ ಕೇಶಸಂಚಯಂ ಸನ್ನಿಗೃಹ್ಯ ತಿಮಿರಂ ಮರೀಚಿಭಿಃ।**
**ಕುಡ್ಮಲೀಕೃತಸರೋಜಲೋಚನಂ ಚುಂಬತೀವ ರಜನೀಮುಖಂ ಶಶೀ॥**

**ಅತ್ರ ಹಿ ಚುಂಬತೀವೇತ್ಯತ್ರ ಇವಶಬ್ದಃ ಪುನರುಕ್ತಃ। ಚುಂಬತೇರ್ಮುಖ್ಯಾರ್ಥಬಾಧೇ ಸತಿ ತತ್ಸದೃಶಾರ್ಥಪ್ರತೀತೇಃ ಸಾಮರ್ಥ್ಯಸಿದ್ಧತ್ವೋಪಪಾದನಾತ್। ಏವಮ್–**

**ಸ್ಮರಹುತಾಶನಮುರ್ಮುರಚೂರ್ಣತಾಂ ದಧುರಿವಾಮ್ರವಣಸ್ಯ ರಜಃ ಕಣಾಃ।**
**ನಿಪತಿತಾಃ ಪರಿತಃ ಪಥಿಕವ್ರಜಾನ್ ಉಪರಿತೇ ಪರಿತೇಪುರತೋ ಭೃಶಮ್॥**

**ಇತ್ಯತ್ರಾಪಿ ವೇದಿತವ್ಯಮ್।**

**ಅನುವಾದ:**

ಇನ್ನೊಂದು ಉದಾಹರಣೆ–

"ಚಂದ್ರನು ತನ್ನ ಬೆರಳುಗಳಂತಿದ್ದ ಕಿರಣಗಳಿಂದ ರಾತ್ರಿಯ ಕತ್ತಲೆಯೆಂಬ ಕೇಶಪಾಶವನ್ನು ಹಿಡಿದು ಮೊಗ್ಗಿನಂತೆ ಮುಚ್ಚಿಕೊಂಡ ತಾವರೆಗಣ್ಣಿನ ಅವಳ ಮುಖವನ್ನು ಮುತ್ತಿಡುವಂತೆ ಕಾಣಿಸುತ್ತಾನೆ".

ಇಲ್ಲಿ ಚುಂಬತೀವ ಎಂಬಲ್ಲಿರುವ ಇವಶಬ್ದವು ಪುನರುಕ್ತ. ಚುಂಬ್ ಧಾತುವಿನ ಮುಖ್ಯಾರ್ಥಕ್ಕೆ ಬಾಧೆ ಬಂದಾಗ ಅದರ ಸದೃಶ ಎಂಬ ಅರ್ಥವು ತಾನಾಗಿ ತೋರುತ್ತದೆ. ಅದು ಸಾಮರ್ಥ್ಯಸಿದ್ಧ ಎಂಬುದನ್ನು ಉಪಪಾದಿಸುತ್ತೇವೆ.

ಹೀಗೆ–

"ಮಾವಿನ ತೋಪಿನ ಧೂಳಿನ ಕಣಗಳು ಸ್ಮರನೆಂಬ ಬೆಂಕಿಯ ಕೆಂಡಗಳ ಹಿಟ್ಟಿನ ಧರ್ಮವನ್ನು ಪಡೆದುಕೊಂಡಂತೆ ಇತ್ತು. ಪಾಂಥರ ಗುಂಪುಗಳ ಸುತ್ತಲೂ

ಉದುರಿದ ಅವು ಅವರ ಮೇಲೆ ಬಿದ್ದು ಇನ್ನೂ ಹೆಚ್ಚಾಗಿ ಅವರಿಗೆ ತಾಪವನ್ನುಂಟು ಮಾಡಿದುವು."

ಈ ಪದ್ಯದಲ್ಲೂ (ಇವಶಬ್ದದ ಪೌನರುಕ್ತ್ಯವನ್ನು) ಅರಿತುಕೊಳ್ಳಬೇಕು.

**ತೃಪ್ತಿಯೋಗಃಪರೇಣಾಪಿ ನ ಮಹಿಮ್ನಾ ಮಹೀಯಸಾಮ್।**
**ಪೂರ್ಣಶ್ಚಂದ್ರೋದಯಾಕಾಂಕ್ಷೀ ದೃಷ್ಟಾಂತೋऽತ್ರ ಮಹಾರ್ಣವಃ॥**

**ಅತ್ರ ಹಿ ಪ್ರತಿವಸ್ತ್ವಲಂಕಾರಾತ್ ಮಹಾರ್ಣವಮಹೀಯಸಾಮ್ ಉಪಮಾನೋಪಮೇಯಭಾವಮ್ ಅವಧೀರ್ಯ ಯದ್ ದೃಷ್ಟಾಂತಶಬ್ದೇನ ಪುನರ್ಮಹಾರ್ಣವಸ್ಯ ಉಪಮಾನತ್ವವಚನಂ ತತ್ ಪುನರುಕ್ತಮ್। ವಾಚ್ಯೋ ಹ್ಯರ್ಥೋ ನ ತಥಾ ಸ್ವದತೇ ಯಥಾ ಸ ಏವ ಪ್ರತೀಯಮಾನಃ।**

**ಅನುವಾದ:**

**ಇನ್ನೊಂದು ಉದಾಹರಣೆ–**

"ಅತ್ಯಂತ ಹೆಚ್ಚಾದ ಮಹಿಮೆಯಿಂದಲೂ ದೊಡ್ಡವರಿಗೆ ತೃಪ್ತಿ ಉಂಟಾಗುವುದಿಲ್ಲ. ತಾನು ತುಂಬಿದ್ದರೂ ಚಂದ್ರನ ಉದಯವನ್ನು ಅಪೇಕ್ಷಿಸುವ ಸಮುದ್ರವು ಈ ವಿಷಯದಲ್ಲಿ ದೃಷ್ಟಾಂತ."

ಇಲ್ಲಿ ಪ್ರತಿವಸ್ತೂಪಮಾಲಂಕಾರದಿಂದ ಸಮುದ್ರಕ್ಕೂ ದೊಡ್ಡವರಿಗೂ ಒದಗುವ ಉಪಮಾನೋಪಮೇಯಭಾವವನ್ನು ಕಡೆಗಣಿಸಿ ದೃಷ್ಟಾಂತಶಬ್ದದಿಂದ ಮತ್ತೆ ಸಮುದ್ರಕ್ಕೆ ಉಪಮಾನತ್ವವನ್ನು ಹೇಳಿರುವುದು ಪುನರುಕ್ತ. ಅರ್ಥವು ಪ್ರತೀಯಮಾನವಾಗಿದ್ದಾಗ (ಸಹೃದಯರಿಗೆ) ಹೇಗೆ ರುಚಿಸುವುದೋ ಹಾಗೆ ವಾಚ್ಯವಾಗಿದ್ದಾಗ ರುಚಿಸದು.

**ಅತ ಏವ**

**ಸಂಚಾರಪೂತಾನಿ ದಿಗಂತರಾಣಿ ಕೃತ್ವಾ ದಿನಾಂತೇ ನಿಲಯಾಯ ಗಂತುಮ್।**
**ಪ್ರಚಕ್ರಮೇ ಪಲ್ಲವರಾಗತಾಮ್ರಾ ಪ್ರಭಾ ಪತಂಗಸ್ಯ ಮುನೇಶ್ಚ ಧೇನುಃ॥**

**ಇತ್ಯತ್ರ ಪ್ರಭಾಧೇನ್ವೋಃ "ಪ್ರಭೇವ ಭಾನೋಃ ಸುರಭಿರ್ಮಹರ್ಷೇಃ" ಇತಿ ಶಬ್ದವಾಚ್ಯಾಮ್ ಉಪಮಾಮ್ ಅನಾದೃತ್ಯ ಕವಿನಾ ಪುರ್ವವದ್ ದೀಪಕಮುಖೇನ ಉಪಮೇಯಭಾವೋ ಭಣಿತಃ। ಏವಮಲಂಕಾರಾಂತರೇಷ್ವಪಿ ಯಥಾಯೋಗಮ್ ಅವಗಂತವ್ಯಮ್।**

**ಅನುವಾದ:**

ಈ ಕಾರಣದಿಂದಲೇ–

"ಎಲ್ಲ ದಿಕ್ಕುಗಳನ್ನೂ ತನ್ನ ಸಂಚಾರದಿಂದ ಪವಿತ್ರಗೊಳಿಸಿ ದಿನದ ಕೊನೆಯಲ್ಲಿ ತನ್ನ ಮನೆಗೆ ಹೋಗಲು ಚಿಗುರಿನಂತೆ ಕೆಂಪಾಗಿದ್ದ ಸೂರ್ಯನ ಕಾಂತಿಯೂ ಮುನಿಯ (ನಂದಿನೀ)ಧೇನುವೂ ನಡೆದುವು."

ಈ ಪದ್ಯದಲ್ಲಿ "ಪ್ರಭೇವ ಭಾನೋಃ ಸುರಭಿರ್ಮಹರ್ಷೇಃ" (ಸೂರ್ಯನ ಕಾಂತಿಯಂತೆ ಮಹರ್ಷಿಯ ಧೇನು) ಎಂದು ಪ್ರಭೆಗೂ–ಧೇನುವಿಗೂ ಶಬ್ದವಾಚ್ಯವಾದ ಉಪಮೆಯನ್ನು ತ್ಯಜಿಸಿ ಕವಿಯು ಹಿಂದಿನಂತೆ ದೀಪಕಾಲಂಕಾರದ ಮೂಲಕ ಉಪಮಾನೋಪಮೇಯಭಾವವನ್ನು ಹೇಳಿದ್ದಾನೆ. ಹೀಗೆ ಬೇರೆ ಅಲಂಕಾರಗಳಲ್ಲೂ ಸಂದರ್ಭಾನುಗುಣವಾಗಿ ತಿಳಿದುಕೊಳ್ಳಬೇಕು.

**ವಿವರಣೆ:**

ದೀಪಕಾಲಂಕಾರದಲ್ಲಿ ಪ್ರಸ್ತುತ–ಅಪ್ರಸ್ತುತಗಳಿಗೆ ಸಮಾನಧರ್ಮದ ಅನ್ವಯವಿರುತ್ತದೆ. ಅದರಿಂದ ಸಾದೃಶ್ಯವು ಗಮ್ಯ, ವಾಚ್ಯವಲ್ಲ. ಸಾದೃಶ್ಯವು ಗಮ್ಯ (ಪ್ರತೀಯಮಾನ)ವಾಗಿದ್ದಾಗ ಹೆಚ್ಚು ಸುಂದರ.

**ವಾಚ್ಯಾತ್ ಪ್ರತೀಯಮಾನೋಽರ್ಥಸ್ತದ್ವಿದಾಂ ಸ್ವದತೇಽಧಿಕಮ್।**
**ರೂಪಕಾದಿರತಃ ಶ್ರೇಯಾನ್ ಅಲಂಕಾರೇಷು ನೋಪಮಾ॥**
**ಇತಿ ಸಂಗ್ರಹಶ್ಲೋಕಃ। ಯಥಾ ಚ–**
**ಶಿಶಿರಕಾಲಮಪಾಸ್ಯ ಗುಣೋಽಸ್ಯ ನಃ ಕ ಇವ ಶೀತಹರಸ್ಯ ಕುಚೋಷ್ಮಣಃ।**
**ಇತಿ ಧಿಯಾಸ್ತರುಷಃ ಪರಿರೇಭಿರೇ ಘನಮತೋ ನಮತೋಽನುಮತಾನ್ ಪ್ರಿಯಾಃ॥**

**ಇತ್ಯತ್ರ ಧೀಶಬ್ದೋಽತ ಇತಿ ಚ ಹೇತ್ವರ್ಥಃ ಶಬ್ದಃ ಪುನರುಕ್ತೌ, ಹೇತ್ವರ್ಥೇನ ಇತಿನೈವ ತದರ್ಥಸ್ಯ ಉಕ್ತತ್ವಾತ್। ಯಥಾ "ಅಶ್ವೇತಿ ವಿದ್ರುತಮನುದ್ರವತಾನ್ಯಮಶ್ವಮ್" ಇತಿ। ತೇನ ವರಮ್ 'ಇತಿ ಯತೋಽಸ್ತರುಷಃ' ಇತಿ ಯುಕ್ತಃ ಪಾಠಃ।**

**ಅನುವಾದ:**

ಕಾವ್ಯಜ್ಞರಿಗೆ ವಾಚ್ಯಾರ್ಥಕ್ಕಿಂತಲೂ ಪ್ರತೀಯಮಾನಾರ್ಥವು ಹೆಚ್ಚು ರುಚಿಸುತ್ತದೆ. ಆದ್ದರಿಂದ ಅಲಂಕಾರಗಳಲ್ಲಿ ರೂಪಕ ಮೊದಲಾದುವೇ ಶ್ರೇಷ್ಠ, ಉಪಮೆಯಲ್ಲ. ಇದು ಸಂಗ್ರಹಶ್ಲೋಕ. ಇನ್ನೊಂದು ಉದಾಹರಣೆ– "ಚಳಿಯನ್ನು ಕಳೆಯುವ ನಮ್ಮ ಮೊಲೆಗಳ ಬಿಸುಪಿಗೆ ಶಿಶಿರಕಾಲವನ್ನು ಬಿಟ್ಟರೆ ಯಾವ ಪ್ರಯೋಜನವಿದೆ? ಎಂಬ ಯೋಚನೆಯಿಂದ ಕೋಪವನ್ನು ಪರಿತ್ಯಜಿಸಿ ಪ್ರಿಯೆಯರು ನಮಸ್ಕರಿಸುತ್ತಿದ್ದ ಪ್ರಿಯರನ್ನು ಬಿಗಿದು ಅಪ್ಪಿದರು".

ಈ ಪದ್ಯದಲ್ಲಿ ಧೀಶಬ್ದವೂ ಕಾರಣಾರ್ಥಕವಾದ ಅತಃ ಎಂಬ ಶಬ್ದವೂ ಪುನರುಕ್ತಗಳು. ಕಾರಣ ಎಂಬ ಅರ್ಥವನ್ನು ಒಳಗೊಂಡಿರುವ ಇತಿಶಬ್ದದಿಂದಲೇ ಅದು ಉಕ್ತವಾಗಿದೆಯಷ್ಟೆ. ಉದಾಹರಣೆ– "ಅಶ್ವೇತಿ....."

"ಇನ್ನೊಂದು ಕುದುರೆಯನ್ನು ಅಟ್ಟಿಸಿಕೊಂಡುಹೋಗುತ್ತಿದ್ದವನು 'ಕುದುರೆ' ಎಂದು ಓಡಿದನು." ಆದ್ದರಿಂದ ಮೇಲಿನ ಪದ್ಯದಲ್ಲಿ 'ಇತಿ ಯತೋಽಸ್ತರುಷಃ' ಎಂಬ ಪಾಠವು ಸ್ವಲ್ಪ ಉತ್ತಮ.

ಯಥಾ ವಾ–

ಆಃ ಕಿಮರ್ಥಮಿದಂ ಚೇತಃ ಸತಾಮಂಭೋಧಿದುರ್ಭರಮ್।
ಇತಿ ಮತ್ವೇವ ದುರ್ವೇಧಾಃ ಪರದುಃಖೈರಪೂರಯತ್॥ ಇತಿ।

ಅತ್ರ ಹಿ ಮನನಾರ್ಥಃ ಪುನರುಕ್ತಃ। ಇತಿನೈವ ಕ್ರೋಧಪರಾಮರ್ಶಿನಾ ತಸ್ಯಾವಗಮಿತತ್ವಾತ್। ತೇನ 'ಇತಿ ಕ್ರುಧೇವ ತದ್ವೇಧಾಃ' ಇತಿ ಯುಕ್ತಃ ಪಾಠಃ। ಏವಂ ಚ ವೇಧಸೋ ದುಷ್ಟತ್ವಸ್ಯ ಅನಿಬಂಧನಸ್ಯಾವಾಚ್ಯಸ್ಯ ಯದ್ವಚನಂ ತದಪಿ ಪರಿಹೃತಂ ಭವತಿ। ಅವ್ಯಭಿಚಾರಿಣಃ ಕಾರಕಸ್ಯಾವಿಶೇಷಣಃ ಪ್ರಯೋಗಃ ಪುನರುಕ್ತಃ। ತತ್ರ ಕರ್ತುರ್ಯಥಾ–

ಪತಿತೋತ್ಪತಿತೈಃ ಶತ್ರುಶಿರೋಭಿಃ ಸಮರಾಂಗಣೇ।
ಯಃ ಕಂದುಕೈರಿವೋಚ್ಚಂಡಃ ಕ್ರೀಡನ್ ಲೋಕೈರ್ವ್ಯಲೋಕ್ಯತ॥

ಇತ್ಯತ್ರ ಲೋಕಶಬ್ದಸ್ಯ, ವಿಲೋಕನಕ್ರಿಯಾಯಾಸ್ತತ್ಕರ್ತೃಕತ್ವಾವ್ಯಭಿಚಾರಾತ್।

**ಅನುವಾದ:**

ಇನ್ನೊಂದು ಉದಾಹರಣೆ–

"ಆಹ್, ಸತ್ಪುರುಷರ ಮನಸ್ಸು ಸಮುದ್ರದಂತೆ ತುಂಬಿಸಲು ಅಶಕ್ಯವಾಗಿರುವುದೇಕೆ? ಎಂದು ಯೋಚಿಸಿಯೋ ಎಂಬಂತೆ ದುಷ್ಟ ಬ್ರಹ್ಮನು ಅದನ್ನು ಪರರ ದುಃಖಗಳಿಂದ ತುಂಬಿಸಿದನು." ಇಲ್ಲಿ ಮನನಾರ್ಥವನ್ನು ಹೇಳುವ ಮತ್ವಾ ಎಂಬ ಪದವು ಪುನರುಕ್ತ. ಕ್ರೋಧವನ್ನು ಸೂಚಿಸುವ ಇತಿಶಬ್ದದಿಂದಲೇ ಆ ಮನನಾರ್ಥವು ಉಕ್ತವಾಗಿದೆ. ಆದ್ದರಿಂದ "ಇತಿ ಕ್ರುಧೇವ ತದ್ವೇಧಾಃ" ಎಂಬ ಪಾಠವು ಯುಕ್ತ. ಹೀಗೆ ಮಾಡಿದಾಗ, ಇಲ್ಲಿ ಹೇಳಬೇಕಾಗಿಲ್ಲದ ಬ್ರಹ್ಮನ ದುಷ್ಟತ್ವ ಎಂಬ ದೋಷದ ಪರಿಹಾರವೂ ಆಗುತ್ತದೆ. ಅವ್ಯಭಿಚಾರಿಯಾದ ಕಾರಕವನ್ನು ವಿಶೇಷಣವಿಲ್ಲದೆ ಪ್ರಯೋಗಿಸಿದರೆ ಅದು ಪುನರುಕ್ತ. ಅಂಥ ಕರ್ತೃವಿನ ಪುನರುಕ್ತದ ಉದಾಹರಣೆ–

"ರಣಾಂಗಣದಲ್ಲಿ ಬೀಳುತ್ತಿದ್ದ ಏಳುತ್ತಿದ್ದ ಶತ್ರುಗಳ ತಲೆಗಳಿಂದ ಚೆಂಡುಗಳಿಂದಲೋ ಎಂಬಂತೆ ಆಡುತ್ತಿದ್ದ ಆ ಪ್ರಚಂಡನನ್ನು ಜನರು ನೋಡುತ್ತಿದ್ದರು." ಈ ಪದ್ಯದಲ್ಲಿ ಲೋಕೈಃ ಎಂಬ ಪದ ಪುನರುಕ್ತ. ವಿಲೋಕನ ಎಂಬ ಕ್ರಿಯೆಗೆ ನೋಡುವವರು ಅವ್ಯಭಿಚಾರಿತವಾಗಿ ಕರ್ತೃಗಳಾಗಿರಬೇಕಷ್ಟೆ.

ಸವಿಶೇಷಣಸ್ಯ ನ ತಸ್ಯ ಪೌನರುಕ್ತ್ಯಮ್। ಯಥಾ
"ಜನೈರಜಾತಸ್ಖಲನೈರ್ನ ಜಾತು
ದ್ವಯೇಽಪ್ಯಮುಚ್ಯಂತ ವಿನೀತಮಾರ್ಗಾಃ" ಇತಿ।
ಕರ್ಮಣೋ ಯಥಾ–
"ಉವಾಚ ದೂತಸ್ತಮಚೋದಿತೋಽಪಿ ಗಾಂ
ನ ಹೀಂಗಿತಜ್ಞೋಽವಸರೇಽವಸೀದತಿ।" ಇತಿ।

**ಸವಿಶೇಷಣಸ್ಯ ಯಥಾ–**
**"ಶುಚಿಸ್ಮಿತಾಂ ವಾಚಮವೋಚದಚ್ಯುತಃ"**
**ಇತಿ। ಕರಣಸ್ಯ ಯಥಾ–**
**ಯದಾ ದೃಶಾ ಕೃಶಾಂಗ್ಯಾಸ್ಮಿ ದೃಷ್ಟೋ ಜಾತಂ ತದೈವ ಮೇ।**
**ಪ್ರಜಾಗರಗರಗ್ರಸ್ತಸಮಸ್ತಪ್ರಸರಂ ಮನಃ॥**
**ಅಸ್ಯೈವ ಸವಿಶೇಷಣಸ್ಯ ಯಥಾ–**
**ತಂ ವಿಲೋಕ್ಯ ಸುರಸುಂದರೀಜನೋ**
**ವಿಸ್ಮಿತಸ್ತಿಮಿತತಾರಯಾ ದೃಶಾ। ಇತಿ।**
**ಏವಂ ಕಾರಕಾಂತರೇಷ್ವಪಿ ಅವಗಂತವ್ಯಮ್।**

**ಅನುವಾದ:**

ಆ ಕರ್ತೃಪದವು ವಿಶೇಷಣದೊಡನೆ ಇದ್ದರೆ ಪೌನರುಕ್ತ್ಯವಿಲ್ಲ. ಉದಾಹರಣೆ– "ಎಡವದಿದ್ದ ಜನರು ಎಂದೂ ಎರಡು ವಿನೀತಮಾರ್ಗಗಳನ್ನು ಬಿಟ್ಟುಹೋಗಲಿಲ್ಲ."

ಕರ್ಮದ ಪೌನರುಕ್ತ್ಯಕ್ಕೆ ಉದಾಹರಣೆ–

"ಪ್ರಶ್ನಿಸಲ್ಪಡದಿದ್ದರೂ ದೂತನು ಮಾತನ್ನು ಹೇಳಿದನು. ಇಂಗಿತಜ್ಞನು ಅವಕಾಶ ಒದಗಿದಾಗ ಹಿಂಜರಿಯನು." ಸವಿಶೇಷಣವಾದ ಕರ್ಮವು ಪುನರುಕ್ತವಲ್ಲ ಎಂಬುದಕ್ಕೆ ಉದಾಹರಣೆ– "ಶುಚಿಯಾದ ಮುಗುಳುನಗೆಯನ್ನುಳ್ಳ ಮಾತನ್ನು ಅಚ್ಯುತನು ಆಡಿದನು."

ಕರಣದ ಪೌನರುಕ್ತ್ಯಕ್ಕೆ ಉದಾಹರಣೆ–

"ಯಾವಾಗ ಕೃಶಾಂಗಿಯು ಕಣ್ಣಿನಿಂದ ನನ್ನನ್ನು ನೋಡಿದಳೋ ಆಗಲೇ ನನ್ನ ಮನಸ್ಸು ನಿದ್ರಾರಾಹಿತ್ಯ ಎಂಬ ವಿಷದಿಂದ ಗ್ರಸ್ತವಾದ ಸಮಸ್ತ ಕ್ರಿಯೆಯುಳ್ಳದ್ದಾಯಿತು". ಸವಿಶೇಷಣವಾದ ಕರಣವನ್ನು ಹೇಳಿದರೆ ದೋಷವಿಲ್ಲ ಎಂಬುದರ ಉದಾಹರಣೆ– "ಸುರಸುಂದರಿಯರು ಅವನನ್ನು ಆಶ್ಚರ್ಯದಿಂದ ಸ್ತಿಮಿತವಾದ ಪಾಪೆಯುಳ್ಳ ಕಣ್ಣುಗಳಿಂದ ನೋಡಿದರು". ಹೀಗೆ (ಉದಾಹರಣೆಗಳನ್ನು) ಬೇರೆ ಕಾರಕಗಳಲ್ಲೂ ತಿಳಿದುಕೊಳ್ಳಬೇಕು.

**ಏಕೈವಾಲಂಕೃತಿರ್ಯತ್ರ ಶಾಬ್ದತ್ವಾರ್ಥತ್ವಭೇದತಃ।**
**ದ್ವಿರುಚ್ಯತೇ ತಾಂ ಮನ್ಯಂತೇ ಪುನರುಕ್ತಿಮತಿಸ್ಫುಟಾಮ್ ॥**
**ತದ್ ಯಥಾ– ಉಮಾವೃಷಾಂಕೌ ಶರಜನ್ಮನಾ ಯಥಾ**
**ಯಥಾ ಜಯಂತೇನ ಶಚೀಪುರಂದರೌ।**
**ತಥಾ ನೃಪಃ ಸಾ ಚ ಸುತೇನ ಮಾಗಧೀ**
**ನನಂದತುಸ್ತತ್ಸದೃಶೇನ ತತ್ಸಮೌ ॥ ಇತ್ಯತ್ರ।**

**ಯಸ್ಯ ಯದ್ರೂಪತಾವ್ಯಕ್ತಿಃ ಸಾಮರ್ಥ್ಯಾದೇವ ಜಾಯತೇ।**
**ತಸ್ಯೋಪಮಾ ರೂಪಕಂ ವಾ ತದರ್ಥಂ ಪೌನರುಕ್ತ್ಯಕೃತ್॥**
**ತತ್ರೋಪಮಾ ಯಥಾ–**
**ಸ್ಫುರದಧೀರತಡಿನ್ನಯನಾ ಮುಹುಃ ಪ್ರಿಯಮಿವಾಗಲಿತೋರುಪಯೋಧರಾ।**
**ಜಲಧರಾವಲಿರಪ್ರತಿಪಾಲಿತಸ್ವಸಮಯಾ ಸಮಯಾಜ್ಜಗತೀಧರಮ್॥**

**ಅನುವಾದ:**

ಒಂದೇ ಅಲಂಕಾರವು ಎಲ್ಲಿ ಶಾಬ್ದ ಮತ್ತು ಆರ್ಥ ಎಂಬ ಭೇದದಿಂದ ಎರಡು ಸಲ ಹೇಳಲ್ಪಟ್ಟಿರುವುದೋ ಅದನ್ನು ಅತಿಸ್ಪಷ್ಟವಾದ ಪುನರುಕ್ತಿ ಎಂದು (ವಿದ್ವಾಂಸರು) ತಿಳಿದುಕೊಳ್ಳುತ್ತಾರೆ. ಅದರ ಉದಾಹರಣೆ–

"ಪಾರ್ವತೀಪರಮೇಶ್ವರರು ಕುಮಾರಸ್ವಾಮಿಯಿಂದ ಹೇಗೋ ಶಚೀ–ಮಹೇಂದ್ರರು ಜಯಂತನಿಂದ ಹೇಗೋ ಹಾಗೆ ಅವರಿಗೆ ಸಮಾನರಾಗಿದ್ದ ರಾಜ (ದಿಲೀಪನೂ) (ಅವನ ಪತ್ನಿ) ಸುದಕ್ಷಿಣೆಯೂ ಅವರಿಗೆ ಸಮಾನನಾಗಿದ್ದ ಆ ಮಗನಿಂದ ಆನಂದವನ್ನು ಹೊಂದಿದರು."

ಯಾವುದರ ಯಾವ ರೂಪದ ಅಭಿವ್ಯಕ್ತಿಯು ಸಾಮರ್ಥ್ಯದಿಂದಲೇ ಉಂಟಾಗುವುದೋ, ಆ ಅಭಿವ್ಯಕ್ತಿಗಾಗಿ ಅದರ ಉಪಮೆಯನ್ನೋ ರೂಪಕವನ್ನೋ ಹೇಳುವುದು ಪೌನರುಕ್ತ್ಯವನ್ನುಂಟುಮಾಡುತ್ತದೆ.

ಅದರಲ್ಲಿ ಉಪಮೆಯ ಉದಾಹರಣೆ– "ಹೊಳೆಯುತ್ತಿದ್ದ ಚಂಚಲವಾದ ಮಿಂಚಿನ ಕಣ್ಣುಗಳನ್ನುಳ್ಳ, ದೊಡ್ಡ ಮೋಡಗಳನ್ನು ಹಿಡಿದಿಟ್ಟುಕೊಂಡಿದ್ದ ಜಲಧರಾವಲಿಯು ತನ್ನ ಸಮಯಕ್ಕಾಗಿ ಕಾಯದೆ ಪ್ರಿಯನಂತಿದ್ದ ಪರ್ವತನ ಬಳಿಗೆ ಬಂದಿತು."

(ಇಲ್ಲಿ ಪಯೋದರ=ಮೇಘ ಮತ್ತು ಸ್ತನ, ಸಮಯ=ಋತು ಮತ್ತು ಸಂಕೇತಕಾಲ ಎಂಬ ಶ್ಲೇಷವನ್ನು ಗಮನಿಸಬೇಕು. ಜಲಧರಾವಲಿ=ಮೇಘಮಾಲಾ, ಜಗತೀಧರ=ಪರ್ವತ)

**ಅತ್ರ ಜಗತೀಧರ–ಜಲಧರಾವಲ್ಯೋಃ ಪ್ರಿಯಪ್ರಣಯಿನೀ–**
**ತುಲ್ಯತ್ವೇ ಸಮಾಸೋಕ್ತ್ಯೈವಾವಸಿತೇ ಸತಿ ಯದೇತತ್**
**ಜಗತೀಧರಸ್ಯ ಪ್ರಿಯತುಲ್ಯತ್ವವಚನಂ ತತ್ ಪುನರುಕ್ತಮ್।**
**ಯಥಾತ್ರ ತಥೈವೋತ್ತರೇಷು ಚೋದಾಹರಣೇಷು। ಯಥಾ–**
**ನಿದ್ರಾವಶೇನ ಭವತಾ ಹ್ಯನವೇಕ್ಷ್ಯಮಾಣಾ**
**ಪರ್ಯುತ್ಸುಕತ್ವಮಬಲಾ ನಿಶಿ ಖಂಡಿತೇವ।**
**ಲಕ್ಷ್ಮೀರ್ವಿನೋದಯತಿ ಯೇನ ದಿಗಂತಲಂಬೀ**
**ಸೋಽಪಿ ತ್ವದಾನನರುಚಿಂ ವಿಜಹಾತಿ ಚಂದ್ರಃ॥**

**ಇತಿ। ಅತ್ರ ಹಿ ಲಕ್ಷ್ಮ್ಯಾ ಅಬಲಾ ಖಂಡಿತೇವ ಇತಿ ಯದ್ ಉಪಮಾನಮುಕ್ತಂ ತತ್ ಪುನರುಕ್ತಮ್। ತಸ್ಯಾಃ ತತ್ತುಲ್ಯವೃತ್ತಾಂತಾಭಿಧಾನಸಾಮರ್ಥ್ಯಾದೇವ ಅನಂತರೋಕ್ತನಯೇನ ತದರ್ಥಾವಗತೇಃ।**

**ಅನುವಾದ:**

ಈ ಪದ್ಯದಲ್ಲಿ ಜಗತೀಧರ–ಜಲಧರಾವಳಿಗಳಿಗೆ ಪ್ರಿಯ–ಪ್ರಣಯಿನೀ ಸಮಾನತ್ವವು ಸಮಾಸೋಕ್ತಿಯಿಂದಲೇ ತಿಳಿದುಬರುವುದರಿಂದ ಮತ್ತೆ ಜಗತೀಧರನಿಗೆ ಪ್ರಿಯತುಲ್ಯ ಎಂದು ಹೇಳಿರುವುದು ಪುನರುಕ್ತ. ಈ ಪದ್ಯದ ಹಾಗೆ ಮುಂದಿನ ಉದಾಹರಣೆಗಳಲ್ಲೂ ಪೌನರುಕ್ತ್ಯವಿದೆ.

ಉದಾಹರಣೆ– "ನಿದ್ರೆಯ ಕಾರಣದಿಂದ ನೀನವಳನ್ನು ನೋಡಲಿಲ್ಲವೆಂದು ಆತಂಕಗೊಂಡ ಲಕ್ಷ್ಮಿಯು ರಾತ್ರಿಯಲ್ಲಿ 'ಖಂಡಿತಾ' ನಾಯಿಕೆಯಂತೆ ಉತ್ಸುಕತ್ವವನ್ನು ಚಂದ್ರನನ್ನು ನೋಡಿ ಕಳೆದುಕೊಳ್ಳುತ್ತಿದ್ದಳು. ಆ ಚಂದ್ರನೂ ಈಗ ದಿಗಂತದಲ್ಲಿ ಮುಳುಗುತ್ತಾ ನಿನ್ನ ಮುಖದ ಕಾಂತಿಯನ್ನು ಕಳೆದುಕೊಳ್ಳುತ್ತಿದ್ದಾನೆ".

ಈ ಪದ್ಯದಲ್ಲಿ ಲಕ್ಷ್ಮಿಗೆ 'ಅಬಲಾ ಖಂಡಿತೇವ' (ಖಂಡಿತಾನಾಯಿಕೆಯಂತೆ) ಎಂದು ಉಪಮಾನವನ್ನು ಹೇಳಿರುವುದು ಪುನರುಕ್ತ. ಅವಳಿಗೆ ಸಮಾನವಾದ ವೃತ್ತಾಂತವನ್ನು ಹೇಳಿದುದರ ಸಾಮರ್ಥ್ಯದಿಂದಲೇ ಹಿಂದೆ ನಾವು ಹೇಳಿದ ರೀತಿಯಿಂದ ಆ ಅರ್ಥವು ತಿಳಿಯುತ್ತದೆ.

**ಯಥಾ ಚ– ಸುರಭಿಸಂಗಮಜಂ ವನಮಾಲಯಾ**
**ನವಪಲಾಶಮಧಾರ್ಯತ ಭಂಗುರಮ್।**
**ರಮಣದತ್ತಮಿವಾರ್ದ್ರನಖಕ್ಷತಂ**
**ಪ್ರಮದಯಾ ಮದಯಾಪಿತಲಜ್ಜಯಾ॥**

**ಇತ್ಯತ್ರ ಆರ್ದ್ರನಖಕ್ಷತವಿಶೇಷಣಂ, ಪ್ರಮದಾರ್ಥಃ, ತದ್ವಿಶೇಷಣಂ ಚೇತಿ ತ್ರಿತಯಮಪಿ ಪುನರುಕ್ತಮ್। ತದರ್ಥಸ್ಯೋಪಮಾನಾದೇವ ಪ್ರತೀತೇರ್ಗತಾರ್ಥತ್ವಾತ್। ತಥಾಹಿ। ಸುರಭಿಶಬ್ದಾತ್ ಪುಂಸ್ತ್ವವಿಶಿಷ್ಟಾದ್ ರಮಣಾರ್ಥೋಽವಗಮ್ಯತೇ। ವನಮಾಲಾಶಬ್ದಾಚ್ಚ ಸ್ತ್ರೀತ್ವವಿಶಿಷ್ಟಾತ್ ಕಾಮಿನ್ಯರ್ಥಃ। ತದ್ವಿಶೇಷಣೋಪಾದಾನಂ ತು ವ್ಯರ್ಥಮೇವ, ವ್ಯಾವರ್ತ್ಯಾಭಾವಾತ್।**

**ಅನುವಾದ:**

ಇನ್ನೊಂದು ಉದಾಹರಣೆ–

"ವಸಂತನ ಸಮಾಗಮದಿಂದ ಹುಟ್ಟಿದ ಭಂಗುರವಾದ ಹೊಸ ಮುತ್ತುಗದ ಹೂವನ್ನು, ವನಮಾಲೆಯು ಮದದಿಂದ ನಾಚಿಕೆಯನ್ನು ತ್ಯಜಿಸಿದ ಹೆಣ್ಣು ಪ್ರಿಯನಿತ್ತ ಒದ್ದೆಯಾದ ಉಗುರಿನ ಗುರುತನ್ನು ಧರಿಸಿದಂತೆ ಧರಿಸಿದ್ದಳು."

ಇಲ್ಲಿ ಆರ್ದ್ರನಖಕ್ಷತದ ವಿಶೇಷಣ, ಪ್ರಮದಾ (ಹೆಣ್ಣು) ಎಂಬ ಅರ್ಥ, ಅದಕ್ಕೆ ಕೊಟ್ಟಿರುವ ವಿಶೇಷಣ ಎಂಬ ಈ ಮೂರೂ ಪುನರುಕ್ತವೇ. ಏಕೆಂದರೆ ಈ ಅರ್ಥಗಳೆಲ್ಲ ಉಪಮಾನದಿಂದಲೇ ತಿಳಿದುಬರುವುದರಿಂದ (ಆ ಪದಗಳೆಲ್ಲ) ಗತಾರ್ಥ, ಹೇಗೆಂದರೆ, ಪುಂಲಿಂಗವಿಶಿಷ್ಟವಾದ ಸುರಭಿ ಎಂಬ (ವಸಂತ ಎಂಬ) ಶಬ್ದದಿಂದ ರಮಣ (=ಪ್ರಿಯ) ಎಂಬ ಅರ್ಥವು ತೋರುತ್ತದೆ. ಸ್ತ್ರೀಲಿಂಗದಲ್ಲಿರುವ ವನಮಾಲಾ ಎಂಬ ಶಬ್ದದಿಂದ ಕಾಮಿನೀ (=ಪ್ರಮದಾ) ಎಂಬ ಅರ್ಥವೂ ತೋರುತ್ತದೆ. ಅದಕ್ಕೆ ವಿಶೇಷಣವನ್ನು ಕೊಟ್ಟಿರುವುದಂತೂ ವ್ಯರ್ಥವೇ, ಏಕೆಂದರೆ ಅದರಿಂದ ವ್ಯಾವರ್ತ್ಯಮಾನವಾದುದು ಯಾವುದೂ ಇಲ್ಲ.

**ತೇನ ಯಥಾ ಕಾಮುಕಸಂಗಮಸಮುತ್ಥಮ್ ಅಂಗನಯಾ ಲೋಹಿತಂ ವಕ್ರಂ ಚ ನಖಕ್ಷತಂ ಧಾರ್ಯತೇ, ತದ್ವದ್ ವನಮಾಲಯಾ ವಸಂತಸಮಾಗಮಜನಿತಂ ನವಂ ಭಂಗುರಂ ಚ ಪಲಾಶಮಧಾರ್ಯತ ಇತಿ ಸಮುದಾಯಾದಯಮ್ ಅರ್ಥಃ ಸಚೇತಸಾಮುನ್ಮಿಷತ್ಯೇವ, ಯತೋಽಲಂಕಾರಾಂತರೋಪಕೃತಾಲ್ಲಿಂಗವಿಶೇಷನಿರ್ದೇಶಾದೇವ ಅರ್ಥಾನಾಂ ಸ್ತ್ರೀಪುಂಸತ್ವಾನುಮಿತಿರನುಮತೈವ ಮಹಾಕವೀನಾಮ್।**

**ಅನುವಾದ:**

ಆದ್ದರಿಂದ ಹೇಗೆ ಪ್ರಿಯುಸಮಾಗಮದಿಂದ ಉಂಟಾದ ಕೆಂಪೂ ವಕ್ರವಾಗಿರುವುದೂ ಆದ ಉಗುರಿನ ಗುರುತನ್ನು ಹೆಣ್ಣು (ಶರೀರದಲ್ಲಿ) ಧರಿಸಿರುವಳೋ ಹಾಗೆ ವನಮಾಲೆಯು (ಕಾಡಿನ ಮರಗಳ ಸಾಲು) ವಸಂತಕಾಲದ ಬರುವಿಕೆಯಿಂದ ಹುಟ್ಟಿದ ಹೊಸ ಭಂಗುರವಾದ ಮುತ್ತುಗದ ಹೂವನ್ನು ಧರಿಸಿತ್ತು ಎಂದು ವಚನಸಮುದಾಯದಿಂದಲೇ ಈ ಅರ್ಥವು ಸಹೃದಯರಿಗೆ ಹೊಳೆಯುತ್ತದೆ ಎಂಬುದು ನಿಶ್ಚಿತ, ಏಕೆಂದರೆ ಯಾವುದಾದರೊಂದು ಅಲಂಕಾರದ ನೆರವನ್ನು ಪಡೆದ ವಿಶಿಷ್ಟಲಿಂಗದ ನಿರ್ದೇಶದಿಂದಲೇ ಅರ್ಥಗಳ ಸ್ತ್ರೀತ್ವ ಮತ್ತು ಪುಂಸ್ತ್ವಗಳ ಅನುಮಿತಿಯನ್ನು ಮಹಾಕವಿಗಳು ಒಪ್ಪಿಕೊಂಡಿದ್ದಾರೆ.

**ವಿವರಣೆ:**

ಸಂಸ್ಕೃತದಲ್ಲಿ ಅಚೇತನಗಳಾದ (ವಸಂತ, ವನಮಾಲೆ ಇತ್ಯಾದಿ) ವಸ್ತುಗಳ ವಾಚಕಗಳೂ ಸ್ತ್ರೀಲಿಂಗದಲ್ಲಿ ಅಥವಾ ಪುಂಲಿಂಗದಲ್ಲಿ ಇರಬಹುದು. ಸಂದರ್ಭಾನುಸಾರವಾಗಿ ಅವು ಹೆಣ್ಣು ಅಥವಾ ಗಂಡು ಎಂಬ ಅರ್ಥವನ್ನೂ ಸೂಚಿಸುತ್ತವೆ.

**ಯಥಾ ಚ–**

**ಐಂದ್ರಂ ಧನುಃ ಪಾಂಡುಪಯೋಧರೇಣ**
**ಶರದ್ದಧಾನಾರ್ದ್ರನಖಕ್ಷತಾಭಮ್।**
**ಪ್ರಸಾದಯಂತೀ ಸಕಲಂಕಮಿಂದುಂ**
**ತಾಪಂ ರವೇರಭ್ಯಧಿಕಂ ಚಕಾರ॥ ಇತಿ।**

**ಅತ್ರ ಹಿ ಶರದೋ ನಾಯಿಕಾತ್ವಸ್ಯ ಇಂದೋ ರವೇಶ್ಚ ನಾಯಕತ್ವ– ಪ್ರತಿನಾಯಕತ್ವಯೋರಭಿವ್ಯಕ್ತಿಃ।**
**ಯಥಾ ವಾ–**

**ಅತ್ಯಂತಪರಿಣಾಹಿತ್ವಾದತ್ಯಂತಶ್ಲಕ್ಷ್ಣತಾವಶಾತ್।**
**ನ ಕಾಚಿದುಪಮಾರೋಢುಮೂರೂ ಶಕ್ನೋತಿ ಸುಭ್ರುವಃ॥**
**ಅತ್ರ ಅಂಗನೋರೂ ಮಣಿಸ್ತಂಭಾವಿತಿ।**

**ಅನುವಾದ:**

ಅದರ ಉದಾಹರಣೆ–

"ಶರತ್ ಬಿಳುಪಾದ ಮೋಡಗಳ ಮೇಲೆ ಆರ್ದ್ರವಾದ ನಖಕ್ಷತದಂತಿದ್ದ ಕಾಮನ ಬಿಲ್ಲನ್ನು ಹೊತ್ತು ಕಲಂಕಿತನಾದ ಚಂದ್ರನನ್ನು ಪ್ರಸನ್ನಗೊಳಿಸುತ್ತಾ ರವಿಯ ತಾಪವನ್ನು ಮತ್ತೂ ಹೆಚ್ಚಿಸಿದಳು."

ಇಲ್ಲಿ ಶರತ್ತಿನ ನಾಯಿಕಾತ್ವ ಹಾಗೂ ಚಂದ್ರ ಮತ್ತು ಸೂರ್ಯರ ನಾಯಕತ್ವ–ಪ್ರತಿನಾಯಕತ್ವಗಳ ಅಭಿವ್ಯಕ್ತಿ (ಪ್ರತ್ಯೇಕವಾಗಿ ಹೇಳದಿದ್ದರೂ) ಆಗುತ್ತದೆ.

ಇನ್ನೊಂದು ಉದಾಹರಣೆ–

"ಅತ್ಯಂತ ದಪ್ಪವಾಗಿ ಮತ್ತು ಅತ್ಯಂತ ನುಣುಪಾಗಿ ಇರುವುದರಿಂದ ಈ ಸುಂದರಿಯ ತೊಡೆಗಳನ್ನು ಏರಲು ಯಾವ ಉಪಮೆಯೂ ಶಕ್ತವಲ್ಲ."

ಇಲ್ಲಿ ಸುಂದರಿಯು ತೊಡೆಗಳು ಮಣಿಸ್ತಂಭಗಳು ಎಂಬುದು (ಹೇಳದಿದ್ದರೂ ಅರಿವಿಗೆ ಬರುತ್ತದೆ).

**ಯಥಾ ಚ–**
**ಆಭೋಗಿ ನೇತ್ರಪರಿವರ್ತನವಿಭ್ರಮೇಣ**
**ಮೂರ್ತ್ಯಾ ನಿತಂಬವಲನಾಕುಲತಾಂ ವಹಂತ್ಯಾ।**
**ಯಸ್ಯಾಶನೈರವಿರಲೋತ್ಕಲಿಕಾಕಲಾಪ–**
**ಪರ್ಯಾಕುಲಂ ಹೃದಯಮಂಬುನಿಧೇರ್ಮಮಂಥೇ॥**
**ಅತ್ರ ಹಿ ಆರೋಹಾರ್ಥೋ ಹೃದಯಾರ್ಥಶ್ಚ ಲಕ್ಷಣಯೋಪಾತ್ತೌ,**
**ನ ಮುಖ್ಯತಯಾ, ತಯೋರ್ಜೀವವ್ಯಾಪಾರತತ್ಕಾರ್ಯೈಕದೇಶ–**
**ವಿಶೇಷರೂಪತ್ವಾತ್। ಲಕ್ಷಣಾಯಾಶ್ಚ ಅಲಂಕಾರಾಂತರತ್ವಮ್**
**ಉಪಪಾದಿತಮೇವ।**

**ಅನುವಾದ:**

ಮತ್ತೊಂದು ಉದಾಹರಣೆ– "ಸಮುದ್ರದ ಮಧ್ಯಭಾಗವು ವಾಸುಕಿಯೆಂಬ ಹಗ್ಗದ ಪರಿವರ್ತನೆಯ ವಿಲಾಸದಿಂದ ವೇಗವಾಗಿ ಸತತವಾದ ತರಂಗಗಳ ಉಕ್ಕುವಿಕೆಯಿಂದ ಪರ್ಯಾಕುಲವಾಗಿ ಪರ್ವತದ ಪ್ರಸ್ಥಭಾಗದ ತಿರುಗುವಿಕೆಯಿಂದ

ಆಕುಲವಾದ ಶರೀರವುಳ್ಳದ್ದಾಗಿ ಕಡೆಯಲ್ಪಟ್ಟಿತು." (ಸಮುದ್ರನ ಹೃದಯವು ಆ ಮೂರ್ತಿಯ ವಿಶಾಲವಾದ ಕಣ್ಣುಗಳ ಕಟಾಕ್ಷವಿಲಾಸದಿಂದ ಸತತವಾದ ಭಾವನೆಗಳ ಆಧಿಕ್ಯದಿಂದ ಪರ್ಯಾಕುಲವಾಗಿ ಮಥನಕ್ಕೆ ಒಳಗಾಯಿತು.)

ಇಲ್ಲಿ ಆರೋಹಾರ್ಥವೂ ಹೃದಯಾರ್ಥವೂ ಲಕ್ಷಣಾವ್ಯಾಪಾರದಿಂದ (ಅರ್ಥವನ್ನು ತಿಳಿಸಲು) ಉಪಾತ್ತವಾಗಿವೆ, ಮುಖ್ಯಾರ್ಥದಲ್ಲಲ್ಲ. ಏಕೆಂದರೆ ಅವು ಚೇತನವ್ಯಾಪಾರ ಮತ್ತು ಅದರ ಕಾರ್ಯಗಳ ಭಾಗವಾಗಿ ಇರುತ್ತವೆ. ಲಕ್ಷಣೆಯೂ ಒಂದು ಅಲಂಕಾರವೇ ಎಂದು (ಹಿಂದಿನವರೇ) ಉಪಪಾದಿಸಿದ್ದಾರೆ.*

(* ಸಾದೃಶ್ಯಾಲ್ಲಕ್ಷಣಾ ವಕ್ರೋಕ್ತಿಃ ಎಂದು ವಾಮನನು ಹೇಳಿದ್ದಾನೆ.)

**ಕಿಂಚ–**

**ಯದರ್ಥೈಕಾಶ್ರಯೋ ಧರ್ಮೋ ಯತ್ರ ಸ್ಯಾದಧಿರೋಪಿತಃ।**
**ಉಪಮಾನೋಪಮೇಯತ್ವಂ ನ ತಯೋಃ ಶಾಬ್ದಮಿಷ್ಯತೇ॥**
**ಯಥಾ– ಅಪರಾಗಸಮೀರಣೇರಿತಃ**
**ಕ್ರಮಶೀರ್ಣಾಕುಲಮೂಲಸಂತತಿಃ।**
**ತರುವತ್ ಸುಕರಃ ಸಹಿಷ್ಣುನಾ**
**ರಿಪುರುನ್ಮೂಲಯಿತುಂ ಮಹಾನಪಿ॥**
**ಇತ್ಯತ್ರ ತರುರಿಪ್ವೋಃ। ತದ್ಧಿ ಸಾಮರ್ಥ್ಯಾದೇವ ತಯೋಃ**
**ಸಿದ್ಧ್ಯತಿ, ಉನ್ಮೂಲನಸ್ಯ ತರುಧರ್ಮಸ್ಯ ರಿಪಾವಾರೋಪಿತತ್ವಾತ್।**

**ಅನುವಾದ:**

ಅಲ್ಲದೆ–

ಒಂದು ಅರ್ಥದ ವಿಶೇಷಧರ್ಮವು ಇನ್ನೊಂದು ಅರ್ಥದಲ್ಲಿ ಆರೋಪಿತವಾದಾಗ ಅವೆರಡರ ಉಪಮಾನೋಪಮೇಯತ್ವವನ್ನು ಶಾಬ್ದವಾಗಿ ಹೇಳುವುದು ಸರಿಯಲ್ಲ. (ಹಾಗೆ ಹೇಳಿರುವುದಕ್ಕೆ) ಉದಾಹರಣೆ–

"ಪ್ರಜೆಗಳ ಅಸಮಾಧಾನವೆಂಬ ಬಿರುಗಾಳಿಯಿಂದ ತಳ್ಳಲ್ಪಡುತ್ತಿರುವ, ಕ್ರಮವಾಗಿ ಮುರಿಯುತ್ತಿರುವ ಅಮಾತ್ಯಾದಿಗಳ ಬಲದಿಂದ ಕುಸಿಯುತ್ತಿರುವ ಶತ್ರುವು ಎಷ್ಟೇ ದೊಡ್ಡವನಾದರೂ ಧೂಳಿಲ್ಲದ ಗಾಳಿಯಿಂದ ನೂಕಲ್ಪಡುವ, ಕ್ರಮವಾಗಿ ಕಿತ್ತು ಬರುವ ಬೇರುಗಳನ್ನುಳ್ಳ ಮರದಂತೆ ಸಹನಾಶೀಲನಾದವನಿಂದ ಕಿತ್ತೊಗೆಯಲ್ಪಡುವುದು ಸುಲಭ."

ಇಲ್ಲಿ ಮರ ಮತ್ತು ಶತ್ರುಗಳ (ಉಪಮಾನೋಪಮೇಯತ್ವವನ್ನು ಶಬ್ದದಿಂದ ಕವಿಯು ಹೇಳಿಬಿಟ್ಟಿದ್ದಾನೆ). ಆ ಉಪಮಾನೋಪಮೇಯತ್ವವು ಅವುಗಳಿಗೆ ಸಾಮರ್ಥ್ಯದಿಂದಲೇ ಸಿದ್ಧವಾಗುತ್ತದೆ. ಏಕೆಂದರೆ ಉನ್ಮೂಲನ (ಬುಡಸಮೇತವಾಗಿ ಕಿತ್ತೊಗೆಯಲ್ಪಡುವಿಕೆ) ಎಂಬ ಮರದ ಧರ್ಮವನ್ನು ಶತ್ರುವಿನಲ್ಲಿ ಆರೋಪಿಸಲಾಗಿದೆ.

**ರೂಪಕಂ ಯಥಾ–**

**ಅನುರಾಗವಂತಮಪಿ ಲೋಚನಯೋರ್ದಧತಂ ವಪುಃ ಸುಖಮತಾಪಕರಮ್।**
**ನಿರಕಾಸಯದ್ ರವಿಮಪೇತವಸುಂ ವಿಯದಾಲಯಾದಪರದಿಗ್ಗಣಿಕಾ॥**

**ಅತ್ರ ಹಿ ಲಿಂಗವಿಶೇಷನಿರ್ದೇಶಾತ್ ಸ್ತ್ರೀತ್ವಸ್ಯ, ಕಾರ್ಯತಶ್ಚ ತದ್ವಿಶೇಷಸ್ಯಾಭಿವ್ಯಕ್ತೌ ಸಾಮರ್ಥ್ಯಾದೇವಾಪರದಿಶೋ ಗಣಿಕಾರೂಪತ್ವೇ ವಿಯತಶ್ಚಾಲಯತ್ವೇಽವಗತೇ ಯತ್ ತಯೋಸ್ತಾದ್ರೂಪ್ಯವಚನಂ ತತ್ ಪುನರುಕ್ತಮ್। ಪುನಸ್ತದ್ವಚನೇ ವಾ ರವೇರಪಿ ಕಾಮುಕರೂಪತಾವಚನಪ್ರಸಂಗಃ, ವಿಶೇಷಾಭಾವಾತ್।**

**ಅನುವಾದ:**

ರೂಪಕ (ಪುನರುಕ್ತಿಯ) ಉದಾಹರಣೆ–

"ಸೂರ್ಯನು ಅನುರಾಗವಂತನಾಗಿದ್ದನು (ಕೆಂಪುಬಣ್ಣದಿಂದ ಕೂಡಿದ್ದನು) ತಾಪವನ್ನುಂಟುಮಾಡದ ಸುಖಮಯವಾದ ಶರೀರವನ್ನು ಹೊಂದಿದ್ದನು. ಆದರೂ ಅವನು ವಸು (ಧನ)ರಹಿತನಾದಾಗ ಪಶ್ಚಿಮದಿಕ್ಕೆಂಬ ವೇಶ್ಯೆಯು ಆಕಾಶವೆಂಬ ಮನೆಯಿಂದ ಅವನನ್ನು ಆಚೆಗೆ ದೂಡಿದಳು."

ಇಲ್ಲಿ (ದಿಕ್ ಎಂಬ ಶಬ್ದದಲ್ಲಿ) ಸ್ತ್ರೀಲಿಂಗನಿರ್ದೇಶನದಿಂದ ಸ್ತ್ರೀತ್ವವೂ, ಅವಳ ಕಾರ್ಯದಿಂದ ತದ್ವಿಶೇಷವಾದ ರೂಪವೂ ಅಭಿವ್ಯಕ್ತವಾಗುವುದರಿಂದ ಸಾಮರ್ಥ್ಯದಿಂದಲೇ ಪಶ್ಚಿಮದಿಕ್ಕಿನ ವೇಶ್ಯಾರೂಪವೂ ಆಕಾಶದ ಗೃಹತ್ವವೂ ತಿಳಿದುಬರುತ್ತವೆ. ಆದರೂ ಆ ರೂಪಗಳನ್ನು (ಶಬ್ದತಃ) ಹೇಳಿರುವುದು ಪುನರುಕ್ತವೇ.

ಅವುಗಳನ್ನು ಮತ್ತೆ ಹೇಳಬೇಕು ಎನ್ನುವುದಾದರೆ ಸೂರ್ಯನಿಗೂ ಕಾಮುಕತ್ವವನ್ನು ಶಬ್ದತಃ ಹೇಳಬೇಕಾದೀತು. ಏಕೆಂದರೆ (ಒಂದಕ್ಕೊಂದಕ್ಕೆ) ವಿಶೇಷವೇನೂ ಇಲ್ಲ.

**ಯದುಕ್ತಮ್–**

**ಉಭಯಾರ್ಥಪದನಿಬಂಧೋ ಲಿಂಗವಿಶೇಷಃ ಪದಂ ಚ ಗುಣವೃತ್ತಿ।**
**ಉಪಮಾನವಿಶೇಷಾಶ್ರಯಮರ್ಥಂ ಗಮಯತಿ, ಸ ನಹಿ ಪುನರ್ವಾಚ್ಯಃ॥ ಇತಿ। ಯಥಾ–**
**ರಾಹುಸ್ತ್ರೀಸ್ತನಯೋರಕಾರಿ ಸಹಸಾ ಯೇನಾಶ್ಲಥಾಲಿಂಗನ–**
**ವ್ಯಾಪಾರೈಕವಿನೋದದುರ್ಲಲಿತಯೋಃ ಕಾರ್ಕಶ್ಯಲಕ್ಷ್ಮೀರ್ವೃಥಾ।**
**ತೇನಾಕ್ರೋಶತ ಏವ ತಸ್ಯ ಸುರಜಿತ್ತತ್ಕಾಲಲೋಲಾನಲ–**
**ಜ್ವಾಲಾಪಲ್ಲವಿತೇನ ಮೂರ್ಧವಿಕಲಂ ಚಕ್ರೇಣ ಚಕ್ರೇ ವಪುಃ॥ ಇತಿ।**

**ಅನುವಾದ:**

ಎರಡು ಅರ್ಥಗಳನ್ನು ಹೇಳುವ ಪದದ ಪ್ರಯೋಗ, ಲಿಂಗವಿಶೇಷ, ಲಾಕ್ಷಣಿಕ ಪದ (ಇವುಗಳಲ್ಲೊಂದು) ಉಪಮಾನವಾಗಬಲ್ಲ ಅರ್ಥವನ್ನು

ತಿಳಿಸಿಕೊಡುತ್ತಿದ್ದರೆ (ಆ ಉಪಮಾನವನ್ನು) ಮತ್ತೆ ಹೇಳಬಾರದು –ಎಂದು (ಪ್ರಾಚೀನರೂ) ಹೇಳಿದ್ದಾರೆ. ಉದಾಹರಣೆ–

"ಯಾವುದರಿಂದ ದೃಢವಾದ ಆಲಿಂಗನವೆಂಬ ಕ್ರಿಯೆಯ ವಿನೋದವನ್ನು ಅಪೇಕ್ಷಿಸುವ ರಾಹುವಿನ ಇನಿಯಳ ಮೊಲೆಗಳ ಕಾಠಿನ್ಯಶೋಭೆಯು ಕ್ಷಣಮಾತ್ರದಲ್ಲಿ ವ್ಯರ್ಥಮಾಡಲ್ಪಟ್ಟಿತೋ, ಕೂಗಾಡುತ್ತಿದ್ದ ಶಿಶುಪಾಲನ ಶರೀರವು ಆ ಕಾಲದಲ್ಲೇ ಉಕ್ಕುತ್ತಿದ್ದ ಬೆಂಕಿಯು ಜ್ವಾಲೆಗಳಿಂದ ಅಲಂಕೃತವಾದ ಆ ಚಕ್ರದಿಂದ ಶಿರೋರಹಿತವಾಗಿ ಮಾಡಲ್ಪಟ್ಟಿತು."

**ಅತ್ರ ಹಿ ಅನುಪ್ರಾಸೈಕರಸಿಕೇನ ಕವಿನಾ ಪೌನರುಕ್ತ್ಯದೋಷಮಪಶ್ಯತಾ ಪರ್ಯಾಯೋಕ್ತ್ಯನುಮಿತೋಽಪಿ ಚಕ್ರಶಬ್ದಾರ್ಥಃ ಪ್ರಯುಕ್ತಃ। ತೇನ "ಮೂರ್ಧವಿಕಲಾಮಸ್ತ್ರೇಣ ತೇನೇ ತನುಮ್" ಇತಿ ಯುಕ್ತಃ ಪಾಠಃ। ಅನೇನಾನುಪ್ರಾಸವ್ಯಸನಿತಾ ಕಾವ್ಯಸ್ಯ ಪರಿಪುಷ್ಯತ್ಯೇವ।**

**ಯತಃ–**

**ಸಮಾಸೇ ಚಾಸಮಾಸೇ ಚಾನುಪ್ರಾಸೇಷ್ವಖಿಲೇಷ್ವಪಿ।**
**ಪದಾದಿವರ್ಣಾನುಪ್ರಾಸಃ ಕವೀನಾಮಧಿಕಂ ಪ್ರಿಯಃ॥ ಇತಿ।**

**ತತ್ರ ಸಮಾಸೇ ಯಥಾ–**

**ತ್ವತ್ ಕೀರ್ತಿಕೇತಕೀಕ್ಲೃಪ್ತಕಾಂತಕರ್ಣಾವತಂಸಕಃ।**
**ದಿಗಂಗನಾಗಣೋ ರಾಜನ್ ರಾಜತ್ಯಾಮೋದನಿರ್ಭರಃ ॥ ಇತಿ।**

## ಅನುವಾದ:

ಈ ಪದ್ಯದಲ್ಲಿ ಅನುಪ್ರಾಸ ಪ್ರಿಯನಾದ ಕವಿಯು ಪೌನರುಕ್ತ್ಯದೋಷವನ್ನು ಕಾಣದೆ ಪರ್ಯಾಯೋಕ್ತಿಯಿಂದಲೇ ಅನುಮಿತವಾದ ಚಕ್ರಶಬ್ದಾರ್ಥವನ್ನು ಮತ್ತೆ ಹೇಳಿದ್ದಾನೆ. ಆದ್ದರಿಂದ "ಮೂರ್ಧವಿಕಲಾಮಸ್ತ್ರೇಣ ತೇನೇ ತನುಮ್" ಎಂಬ ಪಾಠವು ಉಚಿತ. ಹಾಗೆ ಮಾಡಿದಾಗ ಅನುಪ್ರಾಸವ್ಯಸನವೂ ಕಾವ್ಯದಲ್ಲಿ ಪುಷ್ಟಿಯನ್ನು ಹೊಂದುತ್ತದೆ. ಏಕೆಂದರೆ– ಎಲ್ಲ ವಿಧವಾದ ಅನುಪ್ರಾಸಗಳಲ್ಲಿ ಪದದ ಆದಿವರ್ಣದ ಅನುಪ್ರಾಸವು, ಸಮಾಸದಲ್ಲಿ ಬರಲಿ ಅಥವಾ ಅಸಮಾಸದಲ್ಲಿ ಬರಲಿ, ಕವಿಗಳಿಗೆ ಅತ್ಯಂತ ಇಷ್ಟ. ಸಮಾಸದಲ್ಲಿ (ಪದಾದಿವರ್ಣದ ಅನುಪ್ರಾಸಕ್ಕೆ) ಉದಾಹರಣೆ "ತ್ವತ್ಕೀರ್ತಿ....." "ನಿನ್ನ ಕೀರ್ತಿಯೆಂಬ ಕೇದಗೆಯಿಂದ ಕಮನೀಯವಾದ ಕರ್ಣಾಭರಣವನ್ನು ಕಲ್ಪಿಸಿಕೊಂಡ ದಿಕ್ಕಾಮಿನಿಯರ ತಂಡವು ಪರಿಮಳದಿಂದ ತುಂಬಿ ಕಂಗೊಳಿಸುತ್ತಿದೆ."

**ಅಸಮಾಸೇ ಯಥಾ–**

**ಕುತಃ ಕುವಲಯಂ ಕರ್ಣೇ ಕರೋಷಿ ಕಲಭಾಷಿಣಿ।**
**ಕಿಮಪಾಂಗಮಪರ್ಯಾಪ್ತಮಸ್ಮಿನ್ ಕರ್ಮಣಿ ಮನ್ಯಸೇ ॥ ಇತಿ ಅಲಮನೇನ।**

**ಯಥಾ ಚ–**

**ತಂ ಜಿಗೀಷುರಿವ ಶಾತ್ರವಂ ತತೋ ಲೋಕಲೋಚನಪಥೋಪರೋಧಕಮ್।**

**ರಶ್ಮಿಭಿಃ ಕನಕಸಾಯಕೋಪಮೈರಂಧಕಾರಮರುಣೋಽಸ್ತಮಾನಯತ್ ॥ ಇತಿ।**

**ಅನುವಾದ:**

ಅಸಮಾಸದಲ್ಲಿ (ಎಂದರೆ ಪ್ರತ್ಯೇಕವಾಗಿರುವ ಪದಗಳಲ್ಲಿ ಆದಿವರ್ಣದ ಅನುಪ್ರಾಸಕ್ಕೆ) ಉದಾಹರಣೆ– ಕುತಃ ಇತ್ಯಾದಿ

"ಮಧುರವಾಗಿ ಮಾತನಾಡುವ ಮನದನ್ನೆ, ಕಿವಿಯಲ್ಲಿ ಕುವಲಯ ಕುಸುಮವನ್ನು ಏಕೆ ಧರಿಸುವೆ? ಆ ಕಾರ್ಯದಲ್ಲಿ ನಿನ್ನ ಕಡೆಗಣ್ಣನೋಟ ಸಮರ್ಥವಲ್ಲ ಎಂದು ಭಾವಿಸಿರುವೆಯೇನು?"

ಈ ಅನುಪ್ರಾಸದ ಚರ್ಚೆ ಸಾಕು. (ಅರ್ಥಾತ್ ಸಿದ್ಧವಾಗಿರುವ ಉಪಮಾನೋಪಮೇಯಗಳನ್ನು ಶಬ್ದತಃ ಹೇಳುವುದರಿಂದ ಉಂಟಾಗುವ ಪೌನರುಕ್ತ್ಯಕ್ಕೆ) ಉದಾಹರಣೆ–

"ಜನರ ಕಣ್ಣುಗಳ ದಾರಿಯನ್ನು ತಡೆಯುತ್ತಿದ್ದ ಕತ್ತಲನ್ನು ಅರುಣನು ಶತ್ರುಸಮೂಹವನ್ನು ಗೆಲ್ಲಲು ಬಯಸುವವನಂತೆ ಬಂಗಾರದ ಬಾಣಗಳಂತಿದ್ದ ಕಿರಣಗಳಿಂದ ಕೊನೆಗಾಣಿಸಿದನು."

**ಅತ್ರ ಲೋಚನಪಥೋಪರೋಧಾಪರಾಧಿನೋಽನ್ಧಕಾರಸ್ಯ ಕನಕಸಾಯಕೋಪಮೈಃ ರಶ್ಮಿಭಿರ್ಯದೇತದಸ್ತನಯನಂ ತಜ್ಜಿಗೀಷೋರೇವ ವ್ಯಾಪಾರ ಇತಿ ಅರುಣಸ್ಯಾಂಧಕಾರಸ್ಯ ಚ ಯತ್ ಕರ್ತೃಕರ್ಮಭಾವೇನ ಉಪಾದಾನಂ ತತ್ಸಾಮರ್ಥ್ಯಾತ್ ಜಿಗೀಷುಶಾತ್ರವ–ತುಲ್ಯವೃತ್ತಾಂತತಾಮವಗಮಯತೀತಿ ಯದೇತತ್ ತಯೋರ್ಜಿಗೀಷುರಿವ ಶಾತ್ರವಮಿತಿ ಉಪಮಾನೋಪಮೇಯಭಾವೇನ ಅಭಿಧಾನಂ ತತ್ ಪುನರುಕ್ತತಾಂ ನಾತಿವರ್ತತೇ।**

**ಅನುವಾದ:**

ಈ ಪದ್ಯದಲ್ಲಿ ಕಣ್ಣಿನ ದಾರಿಗೆ ತಡೆಯನ್ನೊಡ್ಡುವ ಅಪರಾಧವನ್ನು ಎಸಗಿರುವ ಕತ್ತಲನ್ನು ಬಂಗಾರದ ಬಾಣಗಳಂತಿರುವ ಕಿರಣಗಳಿಂದ ಕೊನೆಗಾಣಿಸುವುದು ಶತ್ರುವನ್ನು ಗೆಲ್ಲಲು ಬಯಸುವವನ ಕೆಲಸವೇ ಆಗಿದೆ. ಅರುಣ (ಸೂರ್ಯ)ನನ್ನೂ ಕತ್ತಲನ್ನೂ ಕರ್ತೃಕರ್ಮರೂಪದಲ್ಲಿ ನಿರೂಪಿಸಿರುವುದರಿಂದಲೇ ಅದು ಅರ್ಥಸಾಮರ್ಥ್ಯದಿಂದ ಜಿಗೀಷು–ಶತ್ರುಗಳ ಸದೃಶವೃತ್ತಾಂತವನ್ನು ತಿಳಿಸಿಕೊಡುತ್ತದೆ. ಹೀಗಿರಲು ಅವೆರಡಕ್ಕೂ "ಜಿಗೀಷುರಿವ ಶಾತ್ರವವಮ್" ಎಂದು ಉಪಮಾನೋಪಮೇಯಭಾವವನ್ನು ಮತ್ತೆ (ಕವಿಯು ಶಬ್ದತಃ) ಹೇಳಿರುವುದು ಪುನರುಕ್ತತ್ವವನ್ನು ದಾಟಿ ಹೋಗಲಾರದು.

ಯಥಾ ವಾ–
ಪರಿಹಾಸರತಿರ್ಯಶ್ಚ ಯಶಃಕರ್ಪೂರಪಾಂಸುಭಿಃ।
ದಿಕ್ಕಾಮಿನೀಮುಖಾನ್ಯಾರಾತ್ ಪಟವಾಸೈರಿವಾಕಿರತ್॥

ಇತಿ। ಅತ್ರ ಪರಿಹಾಸರತೇಃ ಕಾಮುಕಸ್ಯ ಕರ್ಪೂರಪಾಂಸುಭಿರ್ಮುಖಾವಕಿರಣವ್ಯಾಪಾರಃ ಪ್ರಾಯೇಣ ಕಾಮಿನೀವಿಷಯ ಏವ ಪ್ರಸಿದ್ಧ ಇತಿ ದಿಶಾಂ ಮುಖಸಂಬಂಧಾತ್ ಲಿಂಗವಿಶೇಷನಿರ್ದೇಶಾಚ್ಚ ವ್ಯಂಜಕಾತ್ ಕಾಮಿನೀರೂಪತಾವಗತಾವಪಿ ಯತ್ತಾಸಾಂ ಕಾಮಿನೀತ್ವೇನ ರೂಪಣಂ ತತ್ ಪುನರುಕ್ತಮ್। ಅತ ಏವ ಕರ್ಪೂರಪಾಂಸೂನಾಮಪಿ ಪಟವಾಸರೂಪತ್ವೇಽವಗತೇ ತೇಷಾಂ ತದ್ರೂಪಣಮೇವ ತಾವತ್ ಪುನರುಕ್ತಮ್, ಕಿಂ ಪುನಃ ಉಪಮಾನೋಪಮೇಯಭಾವೋಪನಿಬಂಧಃ, ಸಾಮರ್ಥ್ಯಾದೇವ ತತ್ಸಿದ್ಧೇಃ।

**ಅನುವಾದ:**

ಇನ್ನೊಂದು ಉದಾಹರಣೆ– "ಆ ರಾಜನು ಪರಿಹಾಸದಲ್ಲಿ ಇಷ್ಟವುಳ್ಳವನಾಗಿ ಕೀರ್ತಿಯೆಂಬ ಕರ್ಪೂರಧೂಳಿಯಿಂದ ದಿಕ್ಕುಗಳೆಂಬ ಕಾಮಿನಿಯರ ಮುಖಗಳನ್ನು ಅಂಗರಾಗಚೂರ್ಣಗಳಿಂದಲೋ ಎಂಬಂತೆ ಬಳಿದನು."

ಪರಿಹಾಸಾಪೇಕ್ಷಿಯಾದ ಕಾಮುಕನು ಕರ್ಪೂರದ ಹುಡಿಯನ್ನು ಮುಖದ ಮೇಲೆ ಎರಚುವುದು ಕಾಮಿನಿಯರ ವಿಷಯದಲ್ಲೇ ಪ್ರಸಿದ್ಧವಾಗಿದೆ. ಇಲ್ಲಿ ದಿಕ್ಕುಗಳಿಗೆ ಮುಖಸಂಬಂಧವನ್ನು ಹೇಳಿರುವುದರಿಂದ ಮತ್ತು (ದಿಶೆ ಎಂಬ ಶಬ್ದದ) ಸ್ತ್ರೀಲಿಂಗದಿಂದ ಕಾಮಿನೀತ್ವವು ತಿಳಿದುಬರುತ್ತದೆ. ಹಾಗಿದ್ದರೂ ಅವುಗಳಿಗೆ ಕಾಮನೀ ಎಂದು (ವಾಚ್ಯವಾಗಿ) ರೂಪಣವನ್ನು ಮಾಡಿರುವುದು ಪುನರುಕ್ತ. ಅದೇ ಕಾರಣದಿಂದ ಕರ್ಪೂರಧೂಳಿಗೆ ಪಟವಾಸತ್ವವೂ ತಿಳಿದುಬರುತ್ತದೆ. ಅವುಗಳನ್ನು ಹಾಗೆ ರೂಪಿಸುವುದೂ ಪುನರುಕ್ತ. ಅವುಗಳಿಗೆ ಉಪಮಾನೋಪಮೇಯಭಾವವನ್ನು ಕಲ್ಪಿಸಿರುವುದಕ್ಕೆ ಹೇಳುವುದೇನಿದೆ? ಅದು ಸಾಮರ್ಥ್ಯದಿಂದಲೇ ಸಿದ್ಧವಾಗುತ್ತಿದೆಯಲ್ಲವೆ?

ನ ಚ ಸಾಮರ್ಥ್ಯಸಿದ್ಧೇಽರ್ಥೇ ಶಬ್ದಪ್ರಯೋಗಮ್
ಆದ್ರಿಯಂತೇ ಸತ್ಕವಯಃ। ಯಥಾ–
ಮಹದಪಿ ಪರದುಃಖಂ ಶೀತಲಂ ಸಮ್ಯಗಾಹುಃ
ಪ್ರಣಯಮಗಣಯಿತ್ವಾ ಯನ್ಮಮಾಪದ್ಗತಸ್ಯ।
ಅಧರಮಿವ ಮದಾಂಧಾ ಪಾತುಮೇಷಾ ಪ್ರವೃತ್ತಾ
ಫಲಮಭಿನವಪಾಕಂ ರಾಜಜಂಬೂದ್ರುಮಸ್ಯ॥
ಇತ್ಯತ್ರೇತಿಶಬ್ದಸ್ಯ। ಯಥಾ ಚ–
ಚಂದನಾಸಕ್ತಭುಜಗನಿಃಶ್ವಾಸಾನಿಲಮೂರ್ಛಿತಃ।
ಮೂರ್ಛಯತ್ಯೇಷ ಪಥಿಕಾನ್ ಮಧೌ ಮಲಯಮಾರುತಃ॥
ಅತ್ರೋತ್ಪ್ರೇಕ್ಷಾಯಾಮಿವಶಬ್ದಸ್ಯ।

**ಅನುವಾದ:**

ಸಾಮರ್ಥ್ಯಸಿದ್ಧವಾದ ಅರ್ಥದಲ್ಲಿ ಸತ್ಕವಿಗಳು ಶಬ್ದಪ್ರಯೋಗವನ್ನು ಮಾಡಲು ಬಯಸುವುದಿಲ್ಲ. ಉದಾಹರಣೆ–

"ಪರರ ದುಃಖವು ಎಷ್ಟು ದೊಡ್ಡದಾದರೂ ತಣ್ಣಗಿರುತ್ತದೆ (ಎಂದು) ಹೇಳಿರುವುದು ಸರಿ. (ಏಕೆಂದರೆ) ಆಪತ್ತಿಗೆ ಸಿಕ್ಕಿರುವ ನನ್ನ ಪ್ರೀತಿಯನ್ನು ಮರೆತು ಮದದಿಂದ ಕುರುಡಾಗಿರುವ ಈ ಹೆಣ್ಣುಕೋಗಿಲೆ ನೇರಿಳೆಮರದ ತಾಜಾಹಣ್ಣನ್ನು ನನ್ನ ಅಧರದಂತೆ ಸವಿಯಲು ಹೊರಟಿದೆ."

ಈ ಪದ್ಯದಲ್ಲಿ ಇವಶಬ್ದದ ಪ್ರಯೋಗವನ್ನು (ಕಾಳಿದಾಸನು) ಮಾಡಿಲ್ಲ. ಇನ್ನೊಂದು ಉದಾಹರಣೆ– "ಚಂದನವೃಕ್ಷಗಳಿಗೆ ಅಂಟಿಕೊಂಡಿರುವ ಹಾವುಗಳ ನಿಃಶ್ವಾಸದ ಗಾಳಿಯಿಂದ ತುಂಬಿರುವ ಮಲಯಮಾರುತವು ವಸಂತಕಾಲದಲ್ಲಿ ದಾರಿಹೋಕರಿಗೆ ಮೂರ್ಛೆಯನ್ನು ತರುತ್ತಿದೆ."

ಇಲ್ಲಿ ಉತ್ಪ್ರೇಕ್ಷಾವಾಚಕಶಬ್ದದ ಪ್ರಯೋಗವನ್ನು ಕವಿ ಮಾಡಿಲ್ಲ.

**ಯಥಾ ಚ–**

**ಅಯಂ ಮಂದದ್ಯುತಿರ್ಭಾಸ್ವಾನ್ ಅಸ್ತಂ ಪ್ರತಿ ಯಿಯಾಸತಿ।**
**ಉದಯಃ ಪತನಾಯೇತಿ ಧೀಮತೋ ಬೋಧಯನ್ನರಾನ್॥**

**ಇತ್ಯತ್ರ ನಿದರ್ಶನೇ ಮಮೇವೇತಿ।**

**ಸ್ವಾಭಾವಿಕಂ ವಿನೀತತ್ವಂ ತೇಷಾಂ ವಿನಯಕರ್ಮಣಾಮ್।**
**ಮುಮೂರ್ಛ ಸಹಜಂ ತೇಜೋ ಹವಿಷೇವ ಹವಿರ್ಭುಜಾಮ್॥**

**ಇತ್ಯತ್ರ ವಿನೀತತ್ವಸ್ಯ ಯದ್ವಿಶೇಷಣಂ ತದ್ ಬಾಧಕಸದ್ಭಾವಾಭಾವೇ ಸತಿ ಸಮಾನವಿಭಕ್ತಿಕತ್ವಾ-ವಿಶೇಷಾತ್ ತೇಜಸಾಮಪ್ಯನುಷಜ್ಯತೇ ಏವೇತಿ ಯತ್ ಪುನಸ್ತೇಜಸಸ್ತದ್ವಚನಂ ತತ್ ಪೌನರುಕ್ತ್ಯಮಾವಹತಿ।**

**ಅನುವಾದ:**

ಇನ್ನೊಂದು ಉದಾಹರಣೆ–

"ಮಂಕಾಗುತ್ತಿರುವ ಬೆಳಕಿನ ಸೂರ್ಯನು 'ಮೇಲೇರುವುದು ಬೀಳುವುದಕ್ಕಾಗಿ' ಎಂದು ಬುದ್ಧಿಶಾಲಿಗಳಾದ ನರರಿಗೆ ಬೋಧಿಸುತ್ತಾ, ಅಸ್ತಶೈಲದ ಕೆಳಗೆ ಇಳಿಯುತ್ತಿದ್ದಾನೆ". ಈ ನಿದರ್ಶನಾಲಂಕಾರದ ಉದಾಹರಣೆಯಲ್ಲಿ 'ನನ್ನ ಹಾಗೆ' ಎಂಬುದನ್ನು (ಅದು ಅರ್ಥಾತ್ ಸಿದ್ಧವಾಗುವುದರಿಂದ ಕವಿಯು ಹೇಳಿಲ್ಲ.)

"ವಿನಯಾಚರಣೆಯನ್ನು ಮಾಡುತ್ತಿದ್ದ ಅವರ ಸ್ವಾಭಾವಿಕ ವಿನಯವು ಅಗ್ನಿಗಳ ಸಹಜವಾದ ತೇಜಸ್ಸು ಹವಿಸ್ಸಿನಿಂದ ಹೇಗೋ ಹಾಗೆ ಹೆಚ್ಚಿತು".

ಈ ಪದ್ಯದಲ್ಲಿ ವಿನೀತತ್ವ ಎಂಬುದಕ್ಕೆ (ಸ್ವಾಭಾವಿಕಂ) ಎಂಬ ವಿಶೇಷಣವಿದೆ. ಬಾಧಕವಿಲ್ಲದಿದ್ದಾಗ ಸಮಾನವಿಭಕ್ತಿಯನ್ನು ಹೊಂದಿರುವ ತೇಜಸಾಂ ಎಂಬುದಕ್ಕೂ ಅದು ಅನ್ವಯಿಸುತ್ತದೆ. ಹೀಗಿರುವಾಗ ಮತ್ತೆ ತೇಜಸಾಂ ಎಂಬುದಕ್ಕೆ (ಸಹಜಂ ಎಂಬ ಪದದಿಂದ) ಮತ್ತೆ ಅದನ್ನು ಹೇಳಿರುವುದರಿಂದ ಅದು ಪುನರುಕ್ತತ್ವಕ್ಕೆ ಕಾರಣವಾಗುತ್ತದೆ.

> **ಧರ್ಮಸ್ತುಲ್ಯವಿಭಕ್ತೀನಾಮೇಕಸ್ಯಾಪ್ಯುದಿತೋಽಖಿಲಾನ್।**
> **ತಾನನ್ವೇತೀತಿ ಪರ್ಯಾಯೈಸ್ತದುಕ್ತಿಃ ಪೌನರುಕ್ತ್ಯಕೃತ್॥**
> **ಇತಿ ಸಂಗ್ರಹಶ್ಲೋಕಃ।**
> **ಕೈರವೇಂದೀವರಚ್ಛಾಯೌ ನೌಮ್ಯುಮಾಧವಮಾಧವೌ।**
> **ಬ್ರಹ್ಮಾರ್ಚಿತಬ್ರಹ್ಮನುತೌ ನಿಹತಾಂಧಕಕಾಲಿಯೌ॥**
>
> **ಇತ್ಯತ್ರ ಪ್ರಥಮೋ ಧವಶಬ್ದೋ ದ್ವಿತೀಯಶ್ಚ ಬ್ರಹ್ಮಶಬ್ದಃ ಪುನರುಕ್ತೌ, ತಾವಂತರೇಣಾಪಿ ಸಮಾಸಾಂತರಾಶ್ರಯೇಣ ವಿವಕ್ಷಿತಾರ್ಥಪ್ರತೀತಿಸಿದ್ಧೇಃ ಪ್ರತ್ಯುದಾಹರಣಯೋಃ ಪ್ರಥಮಚತುರ್ಥಯೋರಿವ ಪಾದಯೋಃ। ಅನ್ಯಥಾ ತತ್ರಾಪಿ ಛಾಯಾನಿಹತಪದ-ಯೋರ್ದ್ವಿರುಪಾದಾನಪ್ರಸಂಗಃ ಸ್ಯಾದ್ವಿಶೇಷಾಭಾವಾತ್।**

**ಅನುವಾದ:**

ಸಮಾನವಿಭಕ್ತ್ಯಂತವಾಗಿ ಹೇಳಿದ ಹಲವು ಪದಗಳಿದ್ದಾಗ ಒಂದು ಪದಕ್ಕೆ ಹೇಳಿದ ವಿಶೇಷಣವು ಅವೆಲ್ಲವುಗಳಿಗೂ ಅನ್ವಯವನ್ನು ಪಡೆಯುತ್ತದೆ. ಆದ್ದರಿಂದ (ಆ ವಿಶೇಷಣವನ್ನು) ಪರ್ಯಾಯಪದಗಳಿಂದ ಹೇಳಿದರೆ ಅದು ಪೌನರುಕ್ತ್ಯವನ್ನುಂಟು ಮಾಡುತ್ತದೆ. ಇದು ಸಂಗ್ರಹಶ್ಲೋಕ. "ಬಿಳಿಯ ನೈದಿಲೆಯ ಮತ್ತು ಕನ್ನೈದಿಲೆಯ ಕಾಂತಿಯನ್ನು ಹೊಂದಿರುವ, ಬ್ರಹ್ಮಾರ್ಚಿತ ಹಾಗೂ ಬ್ರಹ್ಮನುತರಾದ ಅಂಧಕ-ಕಾಲಿಯರನ್ನು ಕೊಂದ ಉಮಾಧವ-ಮಾಧವರನ್ನು ನಮಸ್ಕರಿಸುತ್ತೇನೆ".

ಇಲ್ಲಿ ಮೊದಲನೆಯ ಧವಶಬ್ದವೂ, ಎರಡನೆಯ ಬ್ರಹ್ಮ ಶಬ್ದವೂ ಪುನರುಕ್ತ. ಅವೆರಡೂ ಇಲ್ಲದಿದ್ದರೂ ಬೇರೆ ಸಮಾಸವನ್ನು ಆಶ್ರಯಿಸುವುದರಿಂದ ವಿವಕ್ಷಿತಾರ್ಥವು (ಇಲ್ಲಿಯೇ) ಪ್ರತ್ಯುದಾಹರಣೆಗಳಾದ ಮೊದಲನೆಯ ಮತ್ತು ನಾಲ್ಕನೆಯ ಪಾದಗಳಲ್ಲಾಗುವಂತೆ ತೋರುತ್ತದೆಯಷ್ಟೆ. ಹೀಗೆ ಒಪ್ಪಿಕೊಳ್ಳದಿದ್ದರೆ ಅಲ್ಲೂ ಛಾಯಾ ಮತ್ತು ನಿಹತ ಎಂಬ ಪದಗಳನ್ನು ಎರಡುಬಾರಿ ಹೇಳುವ ಪ್ರಸಂಗ ಉಂಟಾದೀತು. ಏಕೆಂದರೆ ಎರಡರಲ್ಲಿ ಯಾವ ವೈಲಕ್ಷಣ್ಯವೂ ಇಲ್ಲ.

> **ಅಸ್ತು। ಕೋ ದೋಷಃ? ಉಭಯೋರಪಿ ಲಕ್ಷಣಾನುಗಮಸಂಭವಾದಿತಿ ಚೇತ್, ಸತ್ಯಮ್। ಕಿಂತು ಪ್ರತೀತಿರಿಹ ಪ್ರಧಾನಮಿತಿ ಸೈವಾನುಸರ್ತವ್ಯಾ, ನ ಲಕ್ಷಣಮಾತ್ರಮ್। ತಸ್ಯ ತದರ್ಥತ್ವಾದಿತ್ಯುಕ್ತಮ್। ಸಾ ಚ ಯಾವದ್ಭಿರುಪಜಾಯತೇ ತಾವತಾಮೇವ ಪ್ರಯೋಗೋ ಯುಕ್ತೋ, ನಾತಿರಿಕ್ತಾನಾಮ್।**

**ನ ಚ ಪ್ರತೀತಿಮನಾದೃತ್ಯೈವ ಲಕ್ಷಣಮಸ್ತೀತ್ಯೇವ ಅತಿರಿಕ್ತಪದಪ್ರಯೋಗೋ ಯುಕ್ತಃ। ತಸ್ಯಾರ್ಥಪ್ರಯುಕ್ತತ್ವಾತ್। ಅರ್ಥಸ್ಯ ಚಾಧಿಕ್ಯಾತ್। ತದುಕ್ತಂ "ತದರ್ಥಾವಗತ್ಯರ್ಥೋ ಹಿ ಶಬ್ದಪ್ರಯೋಗಃ। ಅರ್ಥಶ್ಚೇದವಗತಃ, ಕಿಂ ಶಬ್ದಪ್ರಯೋಗೇಣ" ಇತಿ।**

**ಅನುವಾದ:**

ಹಾಗೇ ಆಗಲಿ ಅದರಲ್ಲಿ ತಪ್ಪೇನು? ಎರಡು ವಿಧವಾದ ಪ್ರಯೋಗಗಳೂ ವ್ಯಾಕರಣನಿಯಮಗಳಿಗೆ ಹೊಂದಿಕೊಳ್ಳುತ್ತವೆಯಷ್ಟೆ? ಎಂದರೆ, ನೀವೆನ್ನುವುದು ಸತ್ಯ. ಆದರೆ ಇಲ್ಲಿ (ಎಂದರೆ ಕಾವ್ಯಪ್ರಪಂಚದಲ್ಲಿ) ಪ್ರತೀತಿಯೇ ಪ್ರಧಾನವಾದುದರಿಂದ ಅದನ್ನೇ ಅನುಸರಿಸಬೇಕು. ಕೇವಲ ವ್ಯಾಕರಣನಿಯಮಾನುಸರಣೆಯನ್ನಲ್ಲ. ಆ ಪ್ರತೀತಿಯು ಎಷ್ಟು ಪದಗಳಿಂದ ಉಂಟಾಗುವುದೋ ಅಷ್ಟು ಪದಗಳನ್ನು ಮಾತ್ರ ಪ್ರಯೋಗಿಸಬೇಕು, ಅದಕ್ಕೂ ಹೆಚ್ಚಾದವುಗಳನ್ನಲ್ಲ.

ಪ್ರತೀತಿಯನ್ನು ಪರಿಗಣಿಸದೆ ಲಕ್ಷಣ (ವ್ಯಾಕರಣ ನಿಯಮಾನುಸರಣೆ) ಇದೆಯೆಂದು (ಅಪೇಕ್ಷಿತವಾದುದಕ್ಕಿಂತ) ಹೆಚ್ಚು ಪದಗಳ ಪ್ರಯೋಗವು ಸರಿಯಲ್ಲ. ಏಕೆಂದರೆ ಅರ್ಥಪ್ರತೀತಿಗಾಗಿ ಶಬ್ದಪ್ರಯೋಗ. (ಹೆಚ್ಚು ಶಬ್ದಗಳನ್ನು ಪ್ರಯೋಗಿಸಿದರೆ) ಅರ್ಥವು ಅಧಿಕವಾದೀತು. (ಪ್ರಾಚೀನರೂ) ಇದನ್ನು ಹೇಳಿದ್ದಾರೆ "ಅರ್ಥದ ಜ್ಞಾನಕ್ಕಾಗಿ ಶಬ್ದದ ಬಳಕೆ. ಅರ್ಥವು ಜ್ಞಾತವಾದ ಮೇಲೆ (ಅಧಿಕ) ಶಬ್ದಗಳ ಪ್ರಯೋಗದಿಂದೇನು?"

**ತಸ್ಮಾದುಭಯೋರಪಿ ಲಕ್ಷಣಸ್ಯಾನುಗಮಸಂಭವೇ ಯೇನೈವ ಲಘುನೋಪಾಯೇನ ಪ್ರಧಾನಸಿದ್ಧಿಸ್ತದೇವ ಲಕ್ಷಣಮಾಶ್ರಯಣೀಯಂ ಭವತಿ, ನೇತರತ್। ತತ್ಪುರುಷಲಕ್ಷಣಾಶ್ರಯಣೇನ ಚೋಪಾಯಲಾಘವಮಿತಿ ತದೇವಾಶ್ರಯಿತುಂ ಯುಕ್ತಂ, ನ ದ್ವಂದ್ವ ಲಕ್ಷಣಮ್। ನ ಚೈವಂ ತಸ್ಯ ವಿಷಯಾಪಹಾರಃ ಸ್ಯಾದಿತ್ಯಾಶಂಕನೀಯಂ, ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ಇತ್ಯಾದಾವತಜ್ಜಾತೀಯೇ ವಿಷಯೇ ತಸ್ಯ ಚರಿತಾರ್ಥತ್ವಾದ್, ಇತ್ಯಲಮವಾಂತರಚಿಂತಯಾ।**

**ಅನುವಾದ:**

ಆದ್ದರಿಂದ ಎರಡು ಪ್ರಯೋಗಗಳಿಗೂ ವ್ಯಾಕರಣನಿಯಮದ ಅನುಮತಿಯು ಸಂಭವಿಸುವಾಗ ಯಾವ ಲಘೂಪಾಯದಿಂದ ಪ್ರಧಾನಾರ್ಥದ ಸಿದ್ಧಿಯು ಉಂಟಾಗುವುದೋ, ಆ ನಿಯಮವನ್ನೇ ಆಶ್ರಯಿಸಬೇಕು, ಬೇರೆಯದನ್ನಲ್ಲ. (ಪ್ರಕೃತೋದಾಹರಣೆಯಲ್ಲಿ) ತತ್ಪುರುಷಸಮಾಸವನ್ನು ಆಶ್ರಯಿಸಿದರೆ ಉಪಾಯಲಾಘವ, ಆದ್ದರಿಂದ ಅದನ್ನೇ ಆಶ್ರಯಿಸಬೇಕು. ದ್ವಂದ್ವಸಮಾಸವನ್ನಲ್ಲ. ಹೀಗೆ ಮಾಡಿದರೆ ದ್ವಂದ್ವಸಮಾಸದ ಕ್ಷೇತ್ರವನ್ನು ಅಪಹರಿಸಿದಂತಾಗುವುದು ಎಂದು ಆಶಂಕಿಸಬೇಕಾಗಿಲ್ಲ, ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ (ಜಗತ್ತಿನ

ತಾಯಿತಂದೆಯರಾದ ಪಾರ್ವತೀಪರಮೇಶ್ವರರನ್ನು ನಮಸ್ಕರಿಸುತ್ತೇನೆ) ಇತ್ಯಾದಿ ಬೇರೆ ರೀತಿಯ ಕ್ಷೇತ್ರದಲ್ಲಿ ದ್ವಂದ್ವಸಮಾಸಕ್ಕೆ ಅವಕಾಶವಿದೆ. ಈ ಅವಾಂತರಚಿಂತೆ ಸಾಕು.

**ವಿವರಣೆ:**

ಸೌಮ್ಯುಮಾಧವಮಾಧವೌ ಎಂಬುದರ ಸ್ಥಾನದಲ್ಲಿ ಸೌಮ್ಯುಮಾಮಾಧವೌ ಎಂಬ ಪದವನ್ನಿಡಬೇಕು ಎಂಬುದು ಮಹಿಮಭಟ್ಟನ ಮತ. ಮೂಲಪಾಠದಲ್ಲಿ ತತ್ಪುರುಷಪೂರ್ವಕ ದ್ವಂದ್ವಸಮಾಸ. ಉಮಾಯಾಃ ಧವಃ ಉಮಾಧವಃ, ಮಾಯಾಃ ಧವಃ ಮಾಧವಃ ಎಂದು ಷಷ್ಠೀತತ್ಪುರುಷಸಮಾಸ. ಅನಂತರದಲ್ಲಿ ಉಮಾಧವಶ್ಚ ಮಾಧವಶ್ಚ ಉಮಾಧವಮಾಧವೌ ಎಂದು ದ್ವಂದ್ವಸಮಾಸ.

ಮಹಿಮಭಟ್ಟನು ಸೂಚಿಸುವ ಪಾಠದಲ್ಲಿ ಮೊದಲು ದ್ವಂದ್ವಸಮಾಸ. ಉಮಾ ಚ ಮಾ ಚ ಉಮಾಮೇ, ಆಮೇಲೆ ತತ್ಪುರುಷ. ಉಮಾಮಯೋಃ ಧವೌ ಉಮಾಮಾಧವೌ. ಏನೇ ಆದರೂ ಎರಡು ಸಮಾಸಗಳನ್ನು ಆಶ್ರಯಿಸುವುದು ಅನಿವಾರ್ಯ.

ಮಹಿಮಭಟ್ಟನು ಸೂಚಿಸಿರುವ ಉಮಾಮಾಧವೌ ಎಂಬ ಸಮಸ್ತಪದವನ್ನು ಇಟ್ಟುಕೊಂಡರೆ ಉಮಾ ಚ ಮಾಧವಶ್ಚ ಉಮಾಮಾಧವೌ ಎಂದು ಮೊದಲು ಹೊಳೆಯುವುದರಿಂದ ವಿವಕ್ಷಿತಾರ್ಥಪ್ರತೀತಿ ಉಂಟಾಗದು. ಅಲ್ಲದೆ ಸೌಮ್ಯುಮಾಧವಮಾಧವೌ ಎಂಬಲ್ಲಿರುವ ಶಬ್ದಾಲಂಕಾರವೂ ಅದೃಶ್ಯವಾಗಿಬಿಡುವುದು.

ಬ್ರಹ್ಮಾರ್ಚಿತಬ್ರಹ್ಮನುತೌ ಎಂಬ ಮೂಲಪಾಠದಲ್ಲಿ ಬ್ರಹ್ಮನಿಂದ, ಎಂದರೆ ಚತುರ್ಮುಖನಿಂದ ಅರ್ಚಿತನಾದ ಉಮಾಧವ (ಪರಮೇಶ್ವರ) ಮತ್ತು ಬ್ರಹ್ಮದಿಂದ ಎಂದರೆ ವೇದದಿಂದ ನುತನಾದ ಮಾಧವ (ಹರಿ) ಎಂಬ ಅರ್ಥವು ಸ್ಪಷ್ಟವಾಗಿ ತೋರುವುದು.

ಮಹಿಮಭಟ್ಟನು ಸೂಚಿಸಿರುವಂತೆ ಎರಡನೆಯ ಬ್ರಹ್ಮಶಬ್ದವನ್ನು ತ್ಯಜಿಸಿ ಬ್ರಹ್ಮಾರ್ಚಿತನುತೌ ಎಂಬ ಪಾಠವನ್ನು ಅಂಗೀಕರಿಸಿದರೆ ಬ್ರಹ್ಮನಿಂದ ಪೂಜಿಸಲ್ಪಟ್ಟು ಸ್ತುತರಾದವರು ಎಂಬ ಅರ್ಥಮಾತ್ರ ತೋರುತ್ತದೆ. ಬ್ರಹ್ಮಶಬ್ದಕ್ಕೆ ಹಲವು ಅರ್ಥಗಳಿರುವುದಾದರೂ ಅವು ತತ್‌ಕ್ಷಣ ತೋರುವುದಿಲ್ಲ.

ಈ ಕಾರಣಗಳಿಂದ ಮೂಲಶ್ಲೋಕವು ಇದ್ದಂತೆಯೇ ಇರಲಿ ಎಂದು ನಮ್ಮ ಭಾವನೆ. ಅತಿಸೂಕ್ಷ್ಮಮತಿಗಳಿಗೆ ಮಹಿಮಭಟ್ಟನ ಮತವೇ ಸಮ್ಮತವಾಗಬಹುದು.

> **ದ್ವಿಷದ್ವಧೂಲೋಚನಚಂದ್ರಕಾಂತನಿಷ್ಯಂದನೇಂದೂದಯಸನ್ನಿಭೋಽಯಮ್। ಇತ್ಯತ್ರ ಇಂದೂದಯಸ್ಯ ಯಶ್ಚಂದ್ರಕಾಂತವಿಷಯೋ ನಿಷ್ಯಂದನವ್ಯಾಪಾರಃ ಸ ಪ್ರಸಿದ್ಧ ಇತಿ ನೋಪಾದೇಯತಾಮ್ ಅರ್ಹತಿ। ಯಥಾ– "ರಜನೀಪುರಂಧ್ರೀಲೋಧ್ರತಿಲಕಃ, ತಿಮಿರದ್ವಿಪಯೂಥಕೇಸರೀ" ಇತ್ಯತ್ರ ಪ್ರಸಾಧನನಿರ್ಮಥನವ್ಯಾಪಾರ ಉಪಾದೀಯಮಾನಃ ಪೌನರುಕ್ತ್ಯಮೇವ ಪುಷ್ಣಾತಿ। ಯಸ್ತು ಅಪ್ರಸಿದ್ಧಃ ಅಸಾವುಪಾದೀಯತ ಏವ, ಯಥಾ– "ಸಂಸಾರಸಂಭವನಿರಾಕರಣೈಕರೇಖಾ" ಇತ್ಯತ್ರ ನಿರಾಕರಣಮ್, ರೇಖಾ ಹಿ ಹೇಯೋಪಾದೇ–ಯಯೋರುಭಯೋರ್ವಿಭಾಗಹೇತುಃ ಪದಾರ್ಥಃ ಪ್ರಸಿದ್ಧ ಇತ್ಯನಭಿಮತಪಕ್ಷಪ್ರತಿಕ್ಷೇಪಾಯ ತದನುಗುಣಸ್ಯ ವ್ಯಾಪಾರಸ್ಯೋಪಾದಾನಮುಪಪನ್ನಮೇವ।**

**ಅನುವಾದ:**

ಶತ್ರುಗಳ ಸ್ತ್ರೀಯರ ಕಣ್ಣುಗಳೆಂಬ ಚಂದ್ರಕಾಂತಗಳನ್ನು ಕರಗಿಸಿ ಸುರಿಸುವುದರಲ್ಲಿ ಇವನು ಚಂದ್ರೋದಯಸಮಾನನು ಎಂಬ ಉದಾಹರಣೆಯಲ್ಲಿ

ಚಂದ್ರೋದಯವು ಚಂದ್ರಕಾಂತಶಿಲೆಗಳನ್ನು ಕರಗಿಸುವುದೆಂಬುದು ಸುಪ್ರಸಿದ್ಧವಾಗಿರುವುದರಿಂದ ಅದನ್ನು ಹೇಳುವುದು ಸರಿಯಲ್ಲ. (ಹಾಗೆ ಹೇಳಿಲ್ಲದಿರುವುದಕ್ಕೆ ಉದಾಹರಣೆ–)

"ರಾತ್ರಿಯೆಂಬ ನಾರಿಯ ಕೆಂಪುತಿಲಕ, ಕತ್ತಲೆಯೆಂಬ ಆನೆಹಿಂಡಿಗೆ ಸಿಂಹ" ಎಂಬಲ್ಲಿ ಅಲಂಕರಣ ಮತ್ತು ಸಂಹಾರ ಎಂಬ ವ್ಯಾಪಾರವನ್ನು (ಶಬ್ದತಃ) ಹೇಳಿದ್ದರೆ ಅದು ಪೌನರುಕ್ತ್ಯವೇ ಆಗಿಬಿಡುತ್ತಿತ್ತು.

ಯಾವ ವ್ಯಾಪಾರವು ಪ್ರಸಿದ್ಧವಲ್ಲವೋ ಅದನ್ನು (ಶಬ್ದತಃ) ಪ್ರತಿಪಾದಿಸಲೇಬೇಕು. ಉದಾಹರಣೆ–

"ಸಂಸಾರದಲ್ಲಿ ಹುಟ್ಟುವುದನ್ನು ನಿರಾಕರಿಸುವ ರೇಖೆ". ಇಲ್ಲಿ ನಿರಾಕರಣ ಎಂಬ ವ್ಯಾಪಾರವನ್ನು ಕವಿ ಹೇಳಿದ್ದಾನೆ. ರೇಖೆ ಎಂಬುದು ತ್ಯಾಜ್ಯ–ಗ್ರಾಹ್ಯ ಎಂಬವುಗಳ ವಿಭಾಗಕ್ಕೆ ಕಾರಣವಾದ ಪದಾರ್ಥ. ಆದ್ದರಿಂದ ಅಭಿಮತವಲ್ಲದ ಪಕ್ಷವನ್ನು ತೊಲಗಿಸಲು ಅನುಗುಣವಾದ ವ್ಯಾಪಾರವನ್ನು ನಮೂದಿಸಿರುವುದು ಸರಿಯಾಗಿದೆ.

**ಅಭಿಮತಪಕ್ಷಪರಿಗ್ರಹಾಯಾಪಿ ಯಥಾ–**
**ತ್ವಷ್ಟುಃ ಸದಾಭ್ಯಾಸಗೃಹೀತಶಿಲ್ಪ–**
**ವಿಜ್ಞಾನಸಂಪತ್ ಪ್ರಸರಸ್ಯ ಸೀಮಾ। ಇತ್ಯತ್ರ ಪ್ರಸರಸ್ಯ।**
**ಕಿಂಚಾತ್ರ ಯತ್ 'ಇಂದೂದಯಸ್ಯೇವ ಸನ್ನಿಭಾ ಯಸ್ಯ'**
**ಇತೀಂದೂದಯತುಲ್ಯತ್ವಂ ರಾಜ್ಞಃ ಶಾಬ್ದಮುಕ್ತಂ, ತತ್ತಸ್ಯ**
**ತತ್ತ್ವಾರೋಪಾದಾರ್ಥಮೇವ ಯುಕ್ತಮಿತಿ ಉಪಾತ್ತಪದಾತಿ–**
**ರಿಕ್ತಸ್ಯ ಸನ್ನಿಭಾಪದಸ್ಯ ಪೌನರುಕ್ತ್ಯಮಾವಹತಿ –ಇತ್ಯುಕ್ತಮ್।**
**ಅಯಥಾರ್ಥಕ್ರಿಯಾರಂಭೈಃ ಪತಿಭಿಃ ಕಿಂ ತವೇಕ್ಷಿತೈಃ।**
**ಅರುಧ್ಯೇತಾಮಿತೀವಾಸ್ಯ ನಯನೇ ಬಾಷ್ಪವಾರಿಣಾ॥**

**ಅತ್ರ ಹಿ ಬಾಷ್ಪಸ್ಯ ವಾರಿರೂಪತ್ವಾವ್ಯಭಿಚಾರೇಽಪಿ ಯದ್ವಾರಿತ್ವಮುಕ್ತಂ ತದಸತಿ ಪ್ರಯೋಜನೇ ಪೌನರುಕ್ತ್ಯಂ ಕರೋತಿ। ನ ಚಾತ್ರ ಕಿಂಚಿತ್ ಪ್ರಯೋಜನಮುತ್ಪಶ್ಯಾಮಃ।**

**ಅನುವಾದ:**

ಇಷ್ಟವಾದ ಪಕ್ಷವನ್ನು ಗ್ರಹಿಸುವುದಕ್ಕಾಗಿ ವ್ಯಾಪಾರ (ಕಾರ್ಯ)ವನ್ನು ಉಪಾದಾನ ಮಾಡಿರುವುದಕ್ಕೆ ಉದಾಹರಣೆ–

"ವಿಶ್ವಕರ್ಮನು ಸದಾ ಅಭ್ಯಾಸವನ್ನು ಮಾಡಿ ಪಡೆದುಕೊಂಡ ಶಿಲ್ಪವಿಜ್ಞಾನ ಸಂಪತ್ತಿನ ಪ್ರಸರಣದ ಎಲ್ಲೆ" ಇಲ್ಲಿ ಪ್ರಸರಣಕ್ರಿಯೆಯ ಉಪಾದಾನ (ಸರಿಯಾಗಿದೆ). ಅಲ್ಲದೆ (ದ್ವಿಷದ್ವಧೂ..... ಎಂಬ ಶ್ಲೋಕದಲ್ಲಿ) ಚಂದ್ರೋದಯದ ಕಾಂತಿಯನ್ನುಳ್ಳ

ಎಂದು ರಾಜನಿಗೆ ಚಂದ್ರೋದಯದ ಸಾದೃಶ್ಯವನ್ನು ಶಾಬ್ದವಾಗಿ ಹೇಳಿರುವುದು ಚಂದ್ರೋದಯತ್ವದ ಆರೋಪಕ್ಕಾಗಿಯೇ ಮಾಡಲ್ಪಟ್ಟಿರುವುದರಿಂದ, ಹೇಳಿದ ಪದಗಳಿಗೆ ಅತಿರಿಕ್ತವಾದ 'ಸನ್ನಿಭಾ' ಎಂಬ ಪದಕ್ಕೂ ಪುನರುಕ್ತತ್ವವನ್ನು ಉಂಟುಮಾಡುತ್ತದೆ ಎಂದೂ ಹೇಳಲಾಗಿದೆ.

"ಅಯಥಾರ್ಥವಾದ ಕಾರ್ಯವನ್ನು ಮಾಡಿದ ನಿನ್ನ ಗಂಡಂದಿರನ್ನು ನೋಡಿ ಏನು ಪ್ರಯೋಜನ? ಎಂದು ಚಿಂತಿಸಿಯೋ ಎಂಬಂತೆ ಬಾಷ್ಪಜಲದಿಂದ ಅವನ ಕಣ್ಣುಗಳು ಆವರಿಸಲ್ಪಟ್ಟವು". ಇಲ್ಲಿ ಬಾಷ್ಪವು ನೀರಿನ ರೂಪದಲ್ಲಿರುವುದು ಅವ್ಯಭಿಚರಿತ. ಆದರೂ ಬಾಷ್ಪವಾರಿ ಎಂದು ಹೇಳಿರುವುದು ವಿಶೇಷಪ್ರಯೋಜನ ಇಲ್ಲದಿದ್ದರೆ ಪುನರುಕ್ತವಾಗುತ್ತದೆ. ಇಲ್ಲಿ (ವಾರಿಪದಕ್ಕೆ) ಯಾವ ಪ್ರಯೋಜನವನ್ನೂ ಕಾಣೆವು.

**ತಸ್ಮಾದ್ ಬಾಷ್ಪಸಂಪದಾ ಇತ್ಯಯಮತ್ರೋಚಿತಃ ಪಾಠಃ।**
**ಅಸ್ಮಿನ್ ಹಿ ಸತಿ ಪೌನರುಕ್ತ್ಯಪರಿಹಾರಃ, ಸಂಪದಃ ಸ್ತ್ರೀತ್ವಾತ್**
**ಸಖೀತ್ವವ್ಯಕ್ತೌ ಲೇಶತೋಽರ್ಥಾಂತರಾವಗತಿಶ್ಚ ಇತ್ಯುಭಯಂ**
**ಸಿದ್ಧಂ ಭವತಿ। ಸತಿ ತು ಪ್ರಯೋಜನೇ ನ ದೋಷಃ।**
**ಯಥಾ– ಪೃಥ್ವೀಪಾಲ ಪ್ರತಾಪಸ್ತೇ ವೈದ್ಯುತೇನಾಗ್ನಿನಾ ಸಮಃ।**
**ಯೋ ವೈರಿವನಿತಾಬಾಷ್ಪವಾರಿಣಾ ವರ್ಧತೇಽಧಿಕಮ್॥**
**ಇತಿ। ವೈದ್ಯುತಾಗ್ನಿವೃದ್ಧೇರಾಧಿಕ್ಯಸ್ಯ ವಾರಿಕಾರ್ಯತ್ವೇನ ಪ್ರಸಿದ್ಧೇಃ।**
**ಯಥಾ ಚ– ಸಾಹಾಯಕಾರ್ಥಮಿವ ಘೂತ್ಕೃತಮಾರುತೇನ**
**ಸಂಧುಕ್ಷಿತಃ ಸಪದಿ ಯಸ್ಯ ಪೃಷತ್ಕವಹ್ನಿಃ।**
**ಇತ್ಯತ್ರ ಅಗ್ನಿಸಂಧುಕ್ಷಣಸ್ಯ ಮಾರುತಕಾರ್ಯತ್ವೇನ ಪ್ರಸಿದ್ಧೇಃ।**

**ಅನುವಾದ:**

ಆದ್ದರಿಂದ ಇಲ್ಲಿ ಬಾಷ್ಪಸಂಪದಾ ಎಂಬ ಪಾಠವು ಉಚಿತ. ಈ ಪಾಠದಲ್ಲಿ ಪುನರುಕ್ತಿಯ ಪರಿಹಾರವೂ ಆಗುತ್ತದೆ ಮತ್ತು ಸಂಪದ್ ಎಂಬ ಶಬ್ದವು ಸ್ತ್ರೀಲಿಂಗದಲ್ಲಿರುವುದರಿಂದ ಸಖೀತ್ವವು ಅಭಿವ್ಯಕ್ತವಾಗುವುದರಿಂದ ಸ್ವಲ್ಪ ಬೇರೆ ಅರ್ಥವೂ ತಿಳಿದುಬರುತ್ತದೆ ಎಂದು ಎರಡು ಪ್ರಯೋಜನಗಳೂ ಸಿದ್ಧವಾಗುತ್ತವೆ.

ಪ್ರಯೋಜನವಿದ್ದಾಗ ದೋಷವಿಲ್ಲ. ಉದಾಹರಣೆ– "ಎಲೈ ದೊರೆಯೆ, ನಿನ್ನ ಪ್ರತಾಪವು ವೈದ್ಯುತಾಗ್ನಿಗೆ ಸಮ. ಏಕೆಂದರೆ ಅದು ಶತ್ರುಸ್ತ್ರೀಯರ ಬಾಷ್ಪವಾರಿಯಿಂದ ಹೆಚ್ಚು ಹೆಚ್ಚು ಬೆಳೆಯುತ್ತದೆ." ಇಲ್ಲಿ ವೈದ್ಯುತಾಗ್ನಿಯು ಹೆಚ್ಚು ಬೆಳೆಯುವುದು ನೀರಿನಿಂದ ಎಂಬ ಪ್ರಸಿದ್ಧಿಯಿರುವುದರಿಂದ (ವಾರಿಶಬ್ದಪ್ರಯೋಗ ದೋಷವಲ್ಲ). ಇನ್ನೊಂದು ಉದಾಹರಣೆ– "ಆ ರಾಜನ ಬಾಣಗಳ ಬೆಂಕಿಯು ತನ್ನ ನೆರವಿಗಾಗಿ ಎಂಬಂತೆ ಘೂತ್ಕಾರದ ಗಾಳಿಯಿಂದ ಬೇಗ ಹೆಚ್ಚಿಸಲ್ಪಟ್ಟಿತು."

ಇಲ್ಲಿ ಬೆಂಕಿಯನ್ನು ಹೆಚ್ಚಿಸುವುದು ಗಾಳಿಯ ಕೆಲಸ ಎಂಬ ಪ್ರಸಿದ್ಧಿಯಿರುವುದರಿಂದ (ಘೂತ್ಕೃತಶಬ್ದದೊಡನೆ ಮಾರುತಶಬ್ದದ ಪ್ರಯೋಗ ಪುನರುಕ್ತಿ ಎನಿಸುವುದಿಲ್ಲ).

**ಯಥಾ ಚ–**
**"ಅವಹಿತಚೇತಸಃ ಪಥಿ ಜನಸ್ಯ ಕುತಃ ಸ್ಖಲಿತಮ್"**
**ಅವಹಿತತ್ವಂ ನಾಮ ಚೇತಸ ಏವ ಧರ್ಮೋ ನಾನ್ಯಸ್ಯ**
**ಇತಿ ಮುಖ್ಯವೃತ್ತ್ಯಾ ತತ್ರೈವಾಸ್ಯ ವೃತ್ತಿರುಪಪನ್ನಾ।**
**ಯಾ ತ್ವನ್ಯತ್ರ ಪುರುಷಾದಾವಸ್ಯ ದೃಶ್ಯತೇ ಸಾ ತತ್ಸಂಬಂಧಾತ್**
**ಇತಿ ತದ್ವಿಶಿಷ್ಟೇನ ಚೇತಸಾ ಜನಸ್ಯ ಯದ್ವಿಶೇಷಣಂ**
**ತತ್ರ ಚೇತಸ ಉಪಾದಾನಂ ಪುನರುಕ್ತಂ, ತದುಕ್ತ್ಯೈವ**
**ತದವಗತೇಃ। ಯಥಾ ಚ–**
**"ಅವಗಚ್ಛತಿ ಮೂಢಚೇತನಃ ಪ್ರಿಯನಾಶಂ ಹೃದಿ ಶಲ್ಯಮರ್ಪಿತಮ್"**
**ಇತಿ। "ವ್ರಜಂತಿ ತೇ ಮೂಢಧಿಯಃ ಪರಾಭವಂ**
**ಭವಂತಿ ಮಾಯಾವಿಷು ಯೇ ನ ಮಾಯಿನಃ" ಇತಿ।**

**ಅನುವಾದ:**

ಇನ್ನೊಂದು ಉದಾಹರಣೆ–

"ಜಾಗರೂಕವಾದ ಮನಸ್ಸನ್ನು ಹೊಂದಿರುವ ಜನರು ದಾರಿಯಲ್ಲೇಕೆ ಎಡವುತ್ತಾರೆ?"

ಜಾಗರೂಕತ್ವ ಎಂಬುದು ಮನಸ್ಸಿನದೇ ಧರ್ಮ, ಬೇರೆಯದರ ಧರ್ಮವಲ್ಲ, ಆದ್ದರಿಂದ ಮುಖ್ಯವೃತ್ತಿಯಿಂದ ಮನಸ್ಸಿನಲ್ಲೇ ಅದರ ಇರುವಿಕೆ ಉಚಿತ. ಪುರುಷಾದಿಗಳಲ್ಲಿ ಅದರ ಪ್ರಯೋಗವು ಕಂಡುಬಂದರೆ ಮನಸ್ಸಿನ ಸಂಬಂಧದ ಕಾರಣದಿಂದಲೇ. ಆದ್ದರಿಂದ ಅವಹಿತತ್ವ (ಜಾಗರೂಕತ್ವ)ವುಳ್ಳ ಮನಸ್ಸನ್ನು ಜನರಿಗೆ ವಿಶೇಷಣವಾಗಿ ಮಾಡಿದಾಗ ಮನಸ್ಸಿನ ವಾಚಕ (ವಾದ ಚೇತಸ್ ಶಬ್ದ)ವನ್ನು ಹೇಳಿರುವುದು ಪುನರುಕ್ತ. ಅವಹಿತಸ್ಯ ಎಂದಷ್ಟೇ ಹೇಳಿದರೂ ಮನಸ್ಸು ಎಂಬುದು ತಿಳಿವಿಗೆ ಬರುತ್ತದೆಯಷ್ಟೆ.

ಇನ್ನೊಂದು ಉದಾಹರಣೆ–

"ಪ್ರಿಯರ ನಾಶವನ್ನು ಮೂಢಚೇತನನು ಎದೆಗೆ ಚುಚ್ಚಿದ ಚೂರಿ ಎಂದು ತಿಳಿದುಕೊಳ್ಳುತ್ತಾನೆ".

ಹಾಗೆಯೇ–

"ಮಾಯಾವಿಗಳಲ್ಲಿ ಮಾಯೆಯನ್ನು ಪ್ರಯೋಗಿಸದ ಮೂಢಬುದ್ಧಿಯವರು ಸೋಲನ್ನು ಕಾಣುವರು".

**ಕೇವಲಾದೇವ ತತ್ಸಂಬಂಧಾತ್ ತದವಗತಿರ್ಭವತ್ಯೇವ।**
**ಯಥಾ– "ತಂ ಕೃಪಾಮೃದುರವೇಕ್ಷ್ಯ ಭಾರ್ಗವಂ**
**ರಾಘವಃ ಸ್ಖಲಿತವೀರ್ಯಮಾತ್ಮನಿ" ಇತಿ।**
**ಯಥಾ ಚ– "ಶರೀರಕಸ್ಯಾಪಿ ಕೃತೇ ಮೂಢಾಃಪಾಪಾನಿ ಕುರ್ವತೇ"॥**
**ಇತಿ। "ಮೂಢೋಽನಾತ್ಮಮಯಃ ಕ್ವಚಿತ್" ಇತಿ ಚ।**
**ಯಥಾ ಚ– ಉದಿತವಪುಷಿ ದಿನನಾಥೇ ಪ್ರವಿಕಸಿತಾತ್ಮಸು ಕುಲೇಷು ಕಮಲಾನಾಮ್।**
**ಜಗತಿ ಪ್ರಮುದಿತಮನಸಿ ಚ ಕೋಽನ್ಯೋ ವಿಮನಾಯತೇ ಘೂಕಾತ್॥**

**ಅತ್ರ ಹಿ ವಪುರಾತ್ಮಮನಃಶಬ್ದಾನಾಂ ತ್ರಯಾಣಾಮಪಿ ಪೌನರುಕ್ತ್ಯಮ್। ತತ್ರ ದ್ವಯೋಃ ಸ್ವರೂಪಮಾತ್ರವಚನಾತ್, ತಸ್ಯ ಚ ಪದಾರ್ಥೇಷ್ವವ್ಯಭಿಚಾರಾತ್। ತೃತೀಯಸ್ಯಾಪಿ ಪ್ರಮೋದಸ್ಯ ಮನಃ ಕರ್ತೃಕತ್ವಾವ್ಯಭಿಚಾರಾದ್ ಇತ್ಯನಂತರಮೇವೋಕ್ತಮ್।**

**ಅನುವಾದ:**

ಕೇವಲ ಮೂಢತ್ವದ ಸಂಬಂಧದಿಂದಲೇ ಬುದ್ಧಿಯ ಜ್ಞಾನವು ಉಂಟಾಗುತ್ತದೆ. ಅದಕ್ಕೆ ಉದಾಹರಣೆ– "ತನ್ನಲ್ಲಿ ಶಕ್ತಿಶೂನ್ಯನಾದ ಆ ಪರಶುರಾಮನನ್ನು ನೋಡಿ ಕರುಣೆಯಿಂದ ಮೃದುವಾದ ರಾಮನಿಂತೆಂದನು". ಇನ್ನೊಂದು ಉದಾಹರಣೆ– "ಕ್ಷುದ್ರವಾದ ಶರೀರಕ್ಕಾಗಿಯೂ ಮೂಢರು ಪಾಪಗಳನ್ನು ಮಾಡುತ್ತಾರೆ" ಮತ್ತು "ಮೂಢನು ಅನಾತ್ಮಮಯನಾಗಿರುವನೆ?" ಇತ್ಯಾದಿ.

ಪುನರುಕ್ತಿಯ ಮತ್ತೊಂದು ಉದಾಹರಣೆ–

"ಸೂರ್ಯನ ರೂಪವು ಉದಿಸಿದಾಗ, ತಾವರೆಗಳ ಸಮೂಹಗಳ ಸ್ವರೂಪಗಳು ಅರಳಿದಾಗ, ಜಗತ್ತಿನ ಮನಸ್ಸು ಉಲ್ಲಸಿತವಾದಾಗ ಗೂಬೆಯನ್ನು ಬಿಟ್ಟು ಬೇರೆ ಯಾರು ಬೇಸರಮಾಡಿಕೊಳ್ಳುತ್ತಾರೆ".

ಈ ಪದ್ಯದಲ್ಲಿ ವಪುಃ, ಆತ್ಮನ್, ಮನಸ್ ಎಂಬ ಮೂರು ಪದಗಳೂ ಪುನರುಕ್ತವೇ. ಅವುಗಳಲ್ಲಿ (ಮೊದಲಿನ) ಎರಡು ಸ್ವರೂಪವನ್ನು ಮಾತ್ರ ಹೇಳುತ್ತವೆ. ಅದು ಎಲ್ಲ ಪದಾರ್ಥಗಳಲ್ಲಿ (ಅವ್ಯಭಿಚರಿತವಾಗಿ) ಇದ್ದೇ ಇರುತ್ತದೆ. ಪ್ರಮೋದವು ಮನಸ್ಸಿನಲ್ಲೇ ಇರುವುದರಿಂದ (ಅದೂ ಪುನರುಕ್ತವೇ) ಎಂದು ಈಗ ತಾನೇ ಪ್ರತಿಪಾದಿಸಲಾಗಿದೆ.

**ಯಥಾ ವಾ– "ಕಿಂ ಪುನರೀದೃಶೇ ದುರ್ಜಾತೇ**
**ಜಾತಾಮರ್ಷನಿರ್ಭರೇ ಚ ಮನಸಿ ನಾಸ್ತ್ಯೇವಾವಕಾಶಃ**
**ಶೋಕಕ್ರಿಯಾಕರಣಸ್ಯ"। ಅತ್ರ ಕ್ರಿಯಾಕರಣಶಬ್ದಯೋಃ।**
**ಯಥಾ ಚ–**
**ಪಾತು ವಸ್ತಾರಕಾಕಾಂತಕಲಾಕಲಿತಶೇಖರಃ।**
**ಜಗತ್ತ್ರಯಪರಿತ್ರಾಣಕ್ರಿಯಾವಿಧಿವಿಚಕ್ಷಣಃ॥ ಇತಿ।**

**ಅತ್ರ ಕ್ರಿಯಾವಿಧಿಶಬ್ದಯೋಃ ಪೌನರುಕ್ತ್ಯಮ್। ತತ್ರಾದ್ಯಸ್ಯ ತಾವತ್ ಪರಿತ್ರಾಣಕ್ರಿಯಾವಿಶೇಷಪ್ರತೀತೇರೇವ ಕ್ರಿಯಾ–ಸಾಮಾನ್ಯಪ್ರತೀತಿಸಿದ್ಧೇಃ, ವಿಶೇಷಸ್ಯ ಚ ಸಾಮಾನ್ಯಾ–ವ್ಯಭಿಚಾರಾದ್ ದ್ವಿತೀಯಸ್ಯಾಪಿ ಕ್ರಿಯಾಪರ್ಯಾಯತ್ವೇನ ತತ್ತುಲ್ಯವೃತ್ತಾಂತತ್ವಾತ್। ಯಥಾ ಚ–**

**ಸಂಕಲ್ಪಕಲ್ಪಿತಾಂ ಕಾಂತಾಂ ಸರ್ವತ್ರೋತ್ಪಶ್ಯತೋಽನಿಶಮ್।**
**ವಿಶೇಷದುಃಖಾನುಭವಕ್ಲೇಶೋ ಬತ ತಥಾಪಿ ಮೇ॥**

**ಅನುವಾದ:**

ಇನ್ನೊಂದು ಉದಾಹರಣೆ– "ಇಂಥ ದುರ್ಗತಿಯು ಬಂದಾಗ, ಮನಸ್ಸು ಉಕ್ಕುತ್ತಿರುವ ಕೋಪದಿಂದ ತುಂಬಿರುವಾಗ, ಶೋಕಕ್ರಿಯೆಯನ್ನು ಮಾಡಲು ಅವಕಾಶವೇ ಇಲ್ಲ".

ಈ ಉದಾಹರಣೆಯಲ್ಲಿ ಕ್ರಿಯಾ, ಕರಣ ಎಂಬ ಎರಡು ಶಬ್ದಗಳೂ ಪುನರುಕ್ತ. ಇನ್ನೊಂದು ಉದಾಹರಣೆ–

"ಚಂದ್ರನ ಕಲೆಯಿಂದ ಶಿರೋಭೂಷಣವನ್ನು ಮಾಡಿಕೊಂಡಿರುವ, ಮೂಲೋಕಗಳ ರಕ್ಷಣಾಕ್ರಿಯೆಯ ವಿಧಾನದಲ್ಲಿ ನಿಪುಣನಾದ ಶಿವನು ನಿಮ್ಮನ್ನು ಕಾಪಾಡಲಿ".

ಈ ಪದ್ಯದಲ್ಲಿ ಕ್ರಿಯಾ ಮತ್ತು ವಿಧಿ ಎಂಬ ಎರಡು ಪದಗಳೂ ಪುನರುಕ್ತ. ಅವುಗಳಲ್ಲಿ ಮೊದಲನೆಯದರ ಪುನರುಕ್ತಿ ಏಕೆಂದರೆ ರಕ್ಷಣೆ ಎಂಬ ವಿಶೇಷಕ್ರಿಯೆಯ ಪ್ರತೀತಿಯಿಂದಲೇ ಸಾಮಾನ್ಯಕ್ರಿಯೆಯ ಪ್ರತೀತಿಯು ತಾನಾಗಿ ಸಿದ್ಧವಾಗುತ್ತದೆ, ಏಕೆಂದರೆ ಸಾಮಾನ್ಯವಲ್ಲದ ವಿಶೇಷವು ಇರುವುದೇ ಇಲ್ಲ. ಎರಡನೆಯದಾದ ವಿಧಿಶಬ್ದವು ಕ್ರಿಯಾ ಎಂಬುದರ ಪರ್ಯಾಯ. ಅದಕ್ಕೆ ಹೇಳಿದುದು ಇದಕ್ಕೂ ಅನ್ವಯಿಸುತ್ತದೆ. ಇನ್ನೊಂದು ಉದಾಹರಣೆ–

"ಸಂಕಲ್ಪದಿಂದಲೇ ಕಲ್ಪಿಸಿಕೊಂಡ ಕಾಂತೆಯನ್ನು ಎಲ್ಲೆಲ್ಲೂ ನಾನು ನೋಡುತ್ತಿದ್ದರೂ ನನಗೆ ವಿಶೇಷದುಃಖಾನುಭವದ ಕ್ಲೇಶ ಉಂಟಾಗುತ್ತಿದೆ, ಅಕಟ!"

**ಅತ್ರ ಹಿ ಸಂಕಲ್ಪಾನುಭವಕ್ಲೇಶಾಸ್ತ್ರಯೋಽಪಿ ಪುನರುಕ್ತಾಃ। ತತ್ರಾದ್ಯಸ್ಯ ತಾವತ್ ಯತ್ ಪೌನರುಕ್ತ್ಯಂ, ತದರ್ಥಸ್ಯ ಕಲ್ಪನಾಯಾಂ ಕರಣಭಾವಾವ್ಯಭಿಚಾರಾತ್। ದ್ವಿತೀಯಸ್ಯ ದುಃಖಸ್ಯ ಅನುಭವವಿಶೇಷಾತ್ಮತ್ವೋಪಗಮೇ ಸತಿ ವ್ಯತಿರೇಕಾಭಾವಾತ್ ತನ್ನಿಬಂಧನಃ ಷಷ್ಠೀಸಮಾಸಸ್ತೇನ ಸಹ ನ ಸಂಭವತೀತಿ। ನ ಚ ವಿಶೇಷಸ್ಯ ಸಾಮಾನ್ಯೇನ ಸಹ ಸಮಾಸ ಇಷ್ಯತೇ। ನ ಹಿ ಭವತಿ ಶಾಬಲೇಯಸ್ಯ ಗೌರಿತಿ। ನಾಪಿ ವಿಶೇಷಣಸಮಾಸಃ। ವಿಶೇಷಪ್ರತೀತೇರೇವ ಸಾಮಾನ್ಯಪ್ರತೀತಿಸಿದ್ಧೇಸ್ತಯೋರ್ವಿಶೇಷಣವಿಶೇಷ್ಯಭಾವಾಭಾವಾತ್। ನ ಹಿ ಭವತಿ ಶಾಬಲೇಯಗವೀತಿ। ತೃತೀಯಸ್ಯಾಪಿ ದುಃಖಪರ್ಯಾಯತ್ವಾತ್, ತದುಕ್ತ್ಯೈವ ಗತಾರ್ಥತ್ವಾತ್ ಪೌನರುಕ್ತ್ಯಮವಿವಾದಸಿದ್ಧಮೇವ।**

**ಅನುವಾದ:**

ಈ ಪದ್ಯದಲ್ಲಿ ಸಂಕಲ್ಪ, ಅನುಭವ, ಕ್ಲೇಶ ಎಂಬ ಮೂರೂ ಪುನರುಕ್ತ. ಅವುಗಳಲ್ಲಿ ಮೊದಲನೆಯದರ ಪೌನರುಕ್ತ್ಯ ಏಕೆಂದರೆ ಯಾವುದೇ ಅರ್ಥದ ಕಲ್ಪನೆಯಲ್ಲಿ ಸಂಕಲ್ಪವು ಕರಣ ಅಗಿರುವುದು ಅವ್ಯಭಿಚರಿತ. ಎರಡನೆಯದಾದ ದುಃಖವು ಅನುಭವವಿಶೇಷವೆಂದು ಒಪ್ಪಿಕೊಂಡಿರುವುದರಿಂದ ಅದರ ವ್ಯತಿರೇಕ ಅಸಂಭವವೆಂದು ತತ್ಕಾರಣವಾದ ಷಷ್ಠಿಸಮಾಸವೇ ಆ ಶಬ್ದದೊಡನೆ ಆಗುವುದಿಲ್ಲ. ವಿಶೇಷವಾಚಕಶಬ್ದದೊಡನೆ ಸಾಮಾನ್ಯವಾಚಕಶಬ್ದಕ್ಕೆ ಸಮಾಸವನ್ನು ಒಪ್ಪಲಾಗದು. ಶಾಬಲೇಯಸ್ಯ ಗೌಃ ಎಂಬ ಪ್ರಯೋಗ ಆಗುವುದಿಲ್ಲವಷ್ಟೆ. ಇಲ್ಲಿ ವಿಶೇಷಣ ಸಮಾಸವೂ ಆಗುವುದಿಲ್ಲ. ವಿಶೇಷದ ಪ್ರತೀತಿಯಿಂದಲೇ ಸಾಮಾನ್ಯಪ್ರತೀತಿಯು ಸಿದ್ಧವಾಗುವುದರಿಂದ ಅವುಗಳಿಗೆ ಪರಸ್ಪರ ವಿಶೇಷಣವಿಶೇಷ್ಯಭಾವವೇ ಸಿದ್ಧವಾಗುವುದಿಲ್ಲ. "ಶಾಬಲೇಯಗವೀ" ಎಂಬ ಪ್ರಯೋಗ ಆಗುವುದಿಲ್ಲವಷ್ಟೆ. ಮೂರನೆಯದಾದ (ಕ್ಲೇಶ ಎಂಬುದು) ದುಃಖದ ಪರ್ಯಾಯ ಪದವೇ ಆಗಿದೆ. ದುಃಖ ಎಂದು ಹೇಳಿದಾಗಲೇ ಕ್ಲೇಶ ಎಂಬುದರ ಅರ್ಥವೂ ಅದರಲ್ಲಿರುವುದರಿಂದ ಪೌನರುಕ್ತ್ಯವು ನಿರ್ವಿವಾದವಾಗಿ ಸಿದ್ಧವಾಯಿತು.

**ಏವಮೇವ–**
**ಅಗಾಧಾಪಾರಸಂಸಾರಸಾಗರೋತ್ತಾರಸೇತವೇ।**
**ದೇಹಾರ್ಧಧೃತಕಾಂತಾಯ ಕಂದರ್ಪದ್ವೇಷಿಣೇ ನಮಃ॥ ಇತಿ।**
**ಅತ್ರ ಸಾಗರೋತ್ತಾರಶಬ್ದೌ ಉಭಾವಪಿ ಪುನರುಕ್ತೌ, ಏಕಸ್ಯ**
**ಅಗಾಧತ್ವಾಪಾರತ್ವಲಕ್ಷಣಾಸಾಧಾರಣಸಾಗರಧರ್ಮಾಧ್ಯಾರೋಪ–**
**ಸಾಮರ್ಥ್ಯಾತ್ ಸೇತುಸಂಬಂಧಾಚ್ಚ ಸಂಸಾರಸ್ಯ ತದ್ರೂಪತಾವ–**
**ಗತೇಃ। ಆರ್ಥೀ ಏವ ಹಿ ಅತ್ರ ರೂಪಣಾ ಯುಕ್ತಾ, ಅನುಮೇಯ–**
**ತ್ವಾತ್। ನ ಶಾಬ್ದೀ। ಯಥಾ–**
**ಚುಂಬನೇ ವಿಪರಿವರ್ತಿತಾಧರಂ ಹಸ್ತರೋಧಿ ರಶನಾವಿಘಟ್ಟನೇ।**
**ವಿಘ್ನಿತೇಚ್ಛಮಪಿ ತಸ್ಯ ಸರ್ವತೋ ಮನ್ಮಥೇಂಧನಮಭೂದ್ವಧೂರತಮ್॥**
**ಇತ್ಯತ್ರ ಮನ್ಮಥಸ್ಯಾನಲತ್ವೇನ। ಇತರಸ್ಯ ಚ ಸೇತೋರ್ನಿಯಮೇನ**
**ಉತ್ತರಣಾರ್ಥತ್ವೇನ ಪ್ರಸಿದ್ಧೇಃ। ಅನೇನ ಚ "ಸಕಲಕಲಾಕನಕ–**
**ನಿಕಷಪಾಷಾಣ" ಇತ್ಯಾದೌ ಕನಕಾದಿಶಬ್ದಾನಾಮಪಿ ಪೌನರುಕ್ತ್ಯಂ**
**ವ್ಯಾಖ್ಯಾತಮ್।**

**ಅನುವಾದ:**

ಇದೇ ರೀತಿಯಾಗಿ– "ಅಗಾಧವೂ ಅಪಾರವೂ ಆದ ಸಂಸಾರಸಾಗರವನ್ನು ದಾಟಲು ಸೇತುವೆಯಾಗಿರುವ, ದೇಹಾರ್ಧದಲ್ಲಿ ಕಾಂತೆಯನ್ನು ಧರಿಸಿರುವ ಮನ್ಮಥಶತ್ರುವಿಗೆ ನಮಸ್ಕಾರ" ಎಂಬ ಪದ್ಯದಲ್ಲಿ ಸಾಗರ ಮತ್ತು ಉತ್ತಾರ ಎಂಬ

ಎರಡೂ ಪುನರುಕ್ತವೇ. ಅಗಾಧತ್ವ, ಅಪಾರತ್ವ ಎಂಬ ಸಾಗರದ ಅಸಾಧಾರಣ ಧರ್ಮಗಳ ಅಧ್ಯಾರೋಪದಿಂದ ಹಾಗೂ ಸೇತುವೆಯ ಸಂಬಂಧದಿಂದ ಸಂಸಾರವು ಸಾಗರವೆಂದು ಸಾಮರ್ಥ್ಯದಿಂದಲೇ ಗೊತ್ತಾಗುವುದರಿಂದ ಸಾಗರ ಶಬ್ದವು ಪುನರುಕ್ತ. ಏಕೆಂದರೆ ಆರ್ಥರೂಪಣವೇ ಇಲ್ಲಿ ಉಚಿತ, ಶಾಬ್ದರೂಪಣವಲ್ಲ. (ಆರ್ಥರೂಪಣದ) ಉದಾಹರಣೆ–

"ಮುತ್ತಿಟ್ಟಾಗ ತುಟಿಯನ್ನು ಪಕ್ಕಕ್ಕೆ ಸರಿಸುವ, ಒಡ್ಯಾಣವನ್ನು ಬಿಡಿಸುವಾಗ ಕೈಯನ್ನು ಅಡ್ಡತರುವ ವಧೂಸುರತವು ಅವನ ಇಚ್ಛೆಗೆ ವಿಘ್ನವನ್ನು ತಂದರೂ ಎಲ್ಲ ದೃಷ್ಟಿಯಿಂದ ಮನ್ಮಥೇಂಧನವೇ ಆಯಿತು." ಇಲ್ಲಿ ಮನ್ಮಥನೆಂಬ ಬೆಂಕಿಗೆ ಇಂಧನ ಎಂದು ಆರ್ಥರೂಪಣ.

ಉತ್ತಾರ ಎಂಬ ಶಬ್ದದ ಪೌನರುಕ್ತ್ಯ ಏಕೆಂದರೆ ಸೇತುವೆಯು ಯಾವಾಗಲೂ ಉತ್ತರಣಕ್ಕಾಗಿಯೇ (ದಾಟುವುದಕ್ಕಾಗಿಯೇ) ಇರುತ್ತದೆ ಎಂಬುದು ಪ್ರಸಿದ್ಧ. ಇದರಿಂದ "ಸಕಲಕಲಾಕನಕನಿಕಷಪಾಷಾಣ" (=ಎಲ್ಲ ಕಲೆಗಳೆಂಬ ಬಂಗಾರದ ಒರೆಗಲ್ಲು) ಇತ್ಯಾದಿಗಳಲ್ಲಿ ಕನಕ ಮುಂತಾದ ಶಬ್ದಗಳ ಪುನರುಕ್ತಿಯನ್ನು ವ್ಯಾಖ್ಯಾನಿಸಿದಂತಾಯಿತು.

**ಯಥಾ ಚ–**

**ಕರಕಲಿತನಿಶಾತೋತ್ಖಾತಖಡ್ಗಾಗ್ರಧಾರಾ–**
**ದೃಢತರವಿನಿಪಾತಚ್ಛಿನ್ನದುಷ್ಟಾರಿಕಂಠಃ॥ ಇತಿ।**

**ಅತ್ರ ನವಾನಾಂ ಪದಾನಾಮವಕರತ್ವಮ್। ತತ್ರ ಯತ್ ಖಡ್ಗಸ್ಯ ಕರಕಲಿತತ್ವಾದಿ–ವಿಶೇಷಣಚತುಷ್ಟಯಂ ತತ್ ಪುನರುಕ್ತಮ್। ತತ್ರ ತಸ್ಯ ವ್ಯಾಪಾರ್ಯಮಾಣಸ್ಯ ತತ್ತ್ವಾವ್ಯಭಿಚಾರಾತ್। ಯಚ್ಚ ಅಗ್ರತ್ವವಿಶಿಷ್ಟಾಯಾ ಧಾರಾಯಾ ವಚನಂ ತತ್ ಪುನರುಕ್ತಂ ಖಡ್ಗಸ್ಯೈವ ಕರಣತ್ವವಿವಕ್ಷಾಯಾಮ್ ಔಚಿತ್ಯಾದೇವ ತತ್ಪ್ರತೀತಿಸಿದ್ಧೇಃ। ಯಚ್ಚಾತ್ರ ದೃಢತರತ್ವವಿಶಿಷ್ಟೋ ವಿನಿಪಾತಃ ಕರಣಭಾವೇನೋಪಾತ್ತೋ, ಯದಪಿ ದುಷ್ಟತ್ವಮರೀಣಾಂ ವಿಶೇಷಣಂ ತದುಭಯಮಪಿ ಪುನರುಕ್ತಮೇವ, ಅರ್ಥಸಾಮರ್ಥ್ಯಸಿದ್ಧತ್ವಾತ್। ಅತಶ್ಚ ಖಡ್ಗಚ್ಛಿನ್ನಾರಿಕಂಠ ಇತಿ ಪದಚತುಷ್ಟಯಮೇವಾತ್ರ ಸಾರಮ್।**

**ಅನುವಾದ:**

ಇನ್ನೊಂದು ಉದಾಹರಣೆ– "ಕೈಯಲ್ಲಿ ಹಿಡಿದ ಚೂಪಾದ ಮೇಲೆತ್ತಿದ ಕತ್ತಿಯ ಅಗ್ರಧಾರೆಯ ದೃಢತರವಾದ ಆಘಾತದಿಂದ ದುಷ್ಟ ಶತ್ರುಗಳ ಕಂಠವನ್ನು ಕತ್ತರಿಸಿದವನು".

ಈ ಪದ್ಯದಲ್ಲಿ ಒಂಬತ್ತು ಪದ್ಯಗಳು ಕಸದಂತಿವೆ. ಖಡ್ಗಕ್ಕೆ ಕರಕಲಿತ ಇತ್ಯಾದಿ ನಾಲ್ಕು ವಿಶೇಷಣಪದಗಳೇನಿವೆ ಅವು ಪುನರುಕ್ತ. ಆ ಕಾರ್ಯದಲ್ಲಿ ತೊಡಗಿಸಲ್ಪಡುವ

ಖಡ್ಗಕ್ಕೆ ಹಾಗಿರುವುದು ಅವ್ಯಭಿಚರಿತವಲ್ಲವೆ? ಅಲ್ಲದೆ ಅಗ್ರತ್ವ ವಿಶಿಷ್ಟವಾದ ಧಾರೆಯನ್ನು ಹೇಳಿರುವುದೂ ಪುನರುಕ್ತ. ಖಡ್ಗಕ್ಕೇ ಕರಣತ್ವವು ವಿವಕ್ಷಿತವಾದರೆ ಔಚಿತ್ಯದಿಂದಲೇ ಧಾರೆಯ ಪ್ರತೀತಿಯು ಸಿದ್ಧವಾಗುತ್ತದೆ. ಮತ್ತೆ ಇಲ್ಲಿ ದೃಢತರ ಎಂಬ ಧರ್ಮದಿಂದ ಕೂಡಿದ ವಿನಿಪಾತವನ್ನು ಕರಣರೂಪದಿಂದ ಹೇಳಲಾಗಿದೆ, ಹಾಗೂ ಶತ್ರುಗಳಿಗೆ ದುಷ್ಟ ಎಂಬ ವಿಶೇಷಣವನ್ನು ಕೊಟ್ಟಿರುವುದು– ಈ ಎರಡೂ ಪುನರುಕ್ತವೇ, ಏಕೆಂದರೆ ಅದೆಲ್ಲ ಸಾಮರ್ಥ್ಯಸಿದ್ಧ. ಆದ್ದರಿಂದ ಖಡ್ಗಚ್ಛಿನ್ನಾರಿಕಂಠ ಎಂಬ ನಾಲ್ಕು ಪದಗಳು ಮಾತ್ರ ಇಲ್ಲಿ ಸಾರ.

**ಅನ್ಯತ್ತು ಅವಕರಪ್ರಾಯಂ ವೃತ್ತಪೂರಣಾಯೈವ ಪರ್ಯವಸ್ಯತಿ। ನಾರ್ಥವಿಶೇಷಸ್ಯ ಕಸ್ಯಚಿದಿತಿ। ಯಥಾ–**

**ಶೀಧುರಸವಿಷಯಪಾನಕ್ರಿಯಾವಶಾವಾಪ್ತಜನ್ಮಮದವಿವಶಾ।**
**ಗಲದಂಶುಕದೃಶ್ಯಮುಖೀ ಸುಖಾಯತೇ ಕಿಮಪಿ ಕಮಿತುರಚಿರೋಢಾ॥**
**ಇತ್ಯತ್ರ ರಸಾದೀನಾಂ ಸಪ್ತಾನಾಮವಕರತ್ವಮ್।**

**ಯಥಾ ವಾ– ಮದಿರಾದ್ರವಪಾನವಶಾವಾಪ್ತೋದಯಮದವಿಘೂರ್ಣಿತಾತ್ಮೈವ।**
**ತವ ತರುಣಿ ಮದನದೀಪನಮಿದಮಕ್ಷಿಯುಗಂ ಸಮಾಭಾತಿ॥ ಇತಿ।**
**ಅತ್ರ ದ್ರವಾದೀನಾಂ ಷೋಡಶಾನಾಮ್ ಅವಕರಪದಾನಾಂ ಪೌನರುಕ್ತ್ಯಂ ಪ್ರಯುಕ್ತಾಂತರ್ಗತಾಭ್ಯಾಂ ದ್ವಾಭ್ಯಾಮೇವ ಮದಿರಾಕ್ಷಿಪದಾಭ್ಯಾಂ ತದರ್ಥಪ್ರತೀತಿಸಿದ್ಧೇಃ।**

**ಅನುವಾದ:**

ಉಳಿದದ್ದು ಕಸಕ್ಕೆ ಸಮಾನವಾಗಿದ್ದು ವೃತ್ತಪೂರಣದಲ್ಲಿ ಪರ್ಯವಸಾನವನ್ನು ಹೊಂದಿದೆ. ಯಾವ ಅರ್ಥವಿಶೇಷವನ್ನೂ ಕೊಡುವುದಿಲ್ಲ. ಇನ್ನೊಂದು ಉದಾಹರಣೆ– "ಮದ್ಯರಸವಿಷಯದ ಪಾನಕ್ರಿಯೆಯ ವಶದಿಂದ ಜನ್ಮತಳೆದ ಮದದಿಂದ ವಿವಶಳಾದವಳು, ಜಾರಿದ ಬಟ್ಟೆಯಿಂದ ತೋರಿದ ಮೊಗದವಳು, ಹೊಸದಾಗಿ ಮದುವೆಯಾದವಳು ಪ್ರಿಯನಿಗೆ ಅನಿರ್ವಚನೀಯವಾದ ಸುಖವನ್ನು ನೀಡುವಳು".

ಈ ಪದ್ಯದಲ್ಲೂ ರಸ ಮುಂತಾದ ಏಳು ಪದಗಳು ಕಸ.

ಮತ್ತೊಂದು ಉದಾಹರಣೆ– "ಮದಿರೆಯ ದ್ರವದ ಪಾನದ ವಶದಿಂದ ಹುಟ್ಟಿದ ಮದದಿಂದ ಸ್ವರೂಪವೇ ಓಲಾಡುವ, ಮನ್ಮಥೋದ್ದೀಪಕವಾದ ಈ ನಿನ್ನ ಕಣ್ಣಿನ ಜೋಡಿಯು ಹೊಳೆಯುತ್ತಿದೆ, ಓ ತರುಣಿ".

ಇಲ್ಲಿ ದ್ರವ ಮೊದಲಾದ ಹದಿನಾರು ವ್ಯರ್ಥಪದಗಳು ಪುನರುಕ್ತಗಳು. ಪ್ರಯುಕ್ತವಾದ ಪದಗಳೊಳಗೇ ಇರುವ ಮದಿರಾಕ್ಷಿ ಎಂಬ ಎರಡು ಪದಗಳಿಂದಲೇ ಅವೆಲ್ಲವುಗಳ ಅರ್ಥದ ಪ್ರತೀತಿಯು ಸಿದ್ಧವಾಗುತ್ತದೆ.

**ಯಥಾಹ ಭರತಃ–**

**ಆಘೂರ್ಣಮಾನಮಧ್ಯಾ ಯಾ ಕ್ಷಾಮಾ ಚಾಂಚಿತತಾರಕಾ।**
**ದೃಷ್ಟಿರ್ವಿಕಸಿತಾಪಾಂಗಾ ಮದಿರಾ ತರುಣೇ ಮದೇ॥**

**ಇತಿ। ಏಷಾಂ ಚಾವಕರಪದಾನಾಂ ಪರ್ಯಾಯೇಣ ಯಥಾಯೋಗಮೇಕಾದಿಪ್ರಯೋಗೇ ಸತಿ ಲೋಷ್ಟಸಂಚಾರಕ್ರಮೇಣ ಅತಿಬಹವೋऽವಕರಪ್ರಕಾರಾಃ ಸಮುದ್ಭವಂತಿ, ಯೇಷು ಪ್ರಯುಕ್ತೇಷು ಅಪ್ರಯುಕ್ತೇಷ್ವಪಿ ತುಲ್ಯೈವಾರ್ಥಾವಗತಿರಿತಿ ತೇ ತತ್ರ ಶಲ್ಯಾಯಮಾನಾಃಶಾಬ್ದಿಕೈಃ ಕೇವಲಮಾದ್ರಿಯಂತೇ। ಕವಿಭಿಸ್ತು ಪ್ರಸ್ತುತರಸಾಭಿವ್ಯಕ್ತಿವ್ಯವಧಾನನಿಬಂಧನಧಿಯಾ ಅವಧೀರಣೀಯಾ ಏವ।**

**ಅನುವಾದ:**

ಭರತನೂ ಹೇಳಿದ್ದಾನೆ–

ಯಾವ ನೋಟದಲ್ಲಿ ಕಣ್ಣಿನ ಮಧ್ಯಭಾಗವು ಓಲಾಡುತ್ತಿರುವುದೋ ಕಣ್ಣಿನ ತುದಿಭಾಗಗಳು ಅರಳಿದ್ದು ಕಣ್ಣುಪಾಪೆಯೊಡನೆ ಸೇರಿಕೊಂಡಿರುವುದೋ ಅಂಥ ದೃಷ್ಟಿಯನ್ನು ಮದದ ತಾರುಣ್ಯಾವಸ್ಥೆಯಲ್ಲಿ ಮದಿರಾ ಎಂದು ಕರೆಯಬೇಕು.

ಈ ಅವಕರ ಪದಗಳನ್ನು (ವ್ಯರ್ಥವಾದ, ಪುನರುಕ್ತ ಶಬ್ದಗಳನ್ನು) ಪರ್ಯಾಯವಾಗಿ ಒಂದೊಂದನ್ನೇ ಪ್ರಯೋಗಿಸಿದರೆ ಮಣ್ಣಿನ ಹೆಂಟೆಗಳನ್ನು ಜೋಡಿಸಿದಂತೆ ಅನೇಕವಿಧವಾದ ಅವಕರ ಪ್ರಕಾರಗಳು ಹುಟ್ಟಿಕೊಳ್ಳುತ್ತವೆ. ಆ ಶಬ್ದಗಳನ್ನು ವಾಕ್ಯದಲ್ಲಿ ಬಳಸಿದರೂ ಬಳಸದಿದ್ದರೂ ಅರ್ಥ ಸಮಾನ. ಆದ್ದರಿಂದ (ಕಾವ್ಯದಲ್ಲಿ) ಅವು ಮುಳ್ಳಿನಂತೆ ಕಾಣಿಸುತ್ತವೆ. ಅವುಗಳನ್ನು ವೈಯಾಕರಣರು ಮಾತ್ರ ಆದರಿಸುತ್ತಾರೆ. ಆದರೆ ಪ್ರಸ್ತುತವಾದ ರಸಾಭಿವ್ಯಕ್ತಿಗೆ ಅಂಥ ಪುನರುಕ್ತಶಬ್ದಗಳು ವ್ಯವಧಾನವನ್ನು ಉಂಟುಮಾಡುವುವೆಂಬ ಕಾರಣದಿಂದ ಕವಿಗಳು ಅವುಗಳನ್ನು ತಿರಸ್ಕರಿಸಬೇಕು.

**ಯದ್ವಾ ಕಿಂ ಬಹುನೋಕ್ತೇನ ಕ್ರಿಯಾಕಾರಕಯೋರಪಿ।**
**ಯದೌಚಿತ್ಯಾದವಗತಿಸ್ತತ್ರಾನ್ಯೇಷಾಂ ಕಥೈವ ಕಾ॥**

**ತತ್ರ ಕ್ರಿಯಾಯಾ ಯಥಾ–**

**ಮಾ ಭವಂತಮನಲಃ ಪವನೋ ವಾ ವಾರಣೋ ಮದಕಲಃ ಪರಶುರ್ವಾ।**
**ವಜ್ರಮಿಂದ್ರಕರವಿಪ್ರಸೃತಂ ವಾ ಸ್ವಸ್ತಿ ತೇऽಸ್ತು ಲತಯಾ ಸಹ ವೃಕ್ಷ॥ ಇತಿ।**

**ಕಾರಕಸ್ಯ ಯಥಾ–**

**ಮಾ ಧಾಕ್ಷೀನ್ಮಾ ಭಾಂಕ್ಷೀನ್ಮಾಭೈತ್ಸೀಜ್ಜಾತುಚಿದ್ ಬತ ಭವಂತಮ್।**
**ಸುಕೃತೈರಧ್ವನ್ಯಾನಾಂ ಮಾರ್ಗತರೋ ಸ್ವಸ್ತಿ ತೇऽಸ್ತು ಸಹ ಲತಯಾ॥ ಇತಿ।**

**ಅನುವಾದ:**

ಅಥವಾ ಹೆಚ್ಚು ಹೇಳಿ ಏನು? ಎಲ್ಲಿ ಔಚಿತ್ಯದಿಂದಲೇ ಕ್ರಿಯೆಯ ಅಥವಾ ಕಾರಕದ ಅರಿವು ಉಂಟಾಗುವುದೋ (ಅಲ್ಲಿ ಅವುಗಳನ್ನೂ ಶಬ್ದತಃ ಹೇಳಬೇಕಾಗಿಲ್ಲ). ಹಾಗಿರಲು ಬೇರೆಯವುಗಳ ಕಥೆ ಏನು?

ಕ್ರಿಯೆಯ (ಅನುಪಾದಾನದ) ಉದಾಹರಣೆ–

ಎಲೈ ಮರವೆ, ನಿನ್ನನ್ನು ಬೆಂಕಿಯಾಗಲಿ ಗಾಳಿಯಾಗಲಿ ಮದಿಸಿದ ಅನೆಯಾಗಲಿ, ಕೊಡಲಿಯಾಗಲಿ, ಇಂದ್ರನ ಕೈಯಿಂದ ಎಸೆಯಲ್ಪಟ್ಟ ಸಿಡಿಲಾಗಲಿ (ಅಪಾಯಕ್ಕೆ ಒಡ್ಡುವುದು) ಬೇಡ. ಬಳ್ಳಿಯೊಡನೆ ನಿನಗೆ ಮಂಗಳವಾಗಲಿ.

ಕಾರಕದ (ಅನುಪಾದಾನದ) ಉದಾಹರಣೆ–

ದಾರಿಯಲ್ಲಿರುವ ಮರವೆ, ಲತೆಯೊಡನೆ ನಿನಗೆ ಸ್ವಸ್ತಿ. ನಿನ್ನನ್ನು ಸುಡದಿರಲಿ, ಉರುಳಿಸದಿರಲಿ, ಕಡಿಯದಿರಲಿ. ದಾರಿಹೋಕರ ಪುಣ್ಯದಿಂದ ನಿನಗೆ ಮಂಗಳವಾಗಲಿ.

(ವಾಕ್ಯಾರ್ಥಪೌನರುಕ್ತ್ಯ)

**ವಾಕ್ಯಾರ್ಥವಿಷಯಂ ಪೌನರುಕ್ತ್ಯಂ ಯಥಾ–**

**ಸದಸಾ ವಿದಧೀತ ನ ಕ್ರಿಯಾಮ್ ಅವಿವೇಕಃ ಪರಮಾಪದಾಂ ಪದಮ್।**
**ವೃಣತೇ ಹಿ ವಿಮೃಶ್ಯಕಾರಿಣಂ ಗುಣಲುಬ್ಧಾಃ ಸ್ವಯಮೇವ ಸಂಪದಃ॥ ಇತಿ।**

**ಅತ್ರ ಹಿ ಅವಿವೇಕಪ್ರಯುಕ್ತಮವಿಮೃಶ್ಯಕಾರಿತ್ವಲಕ್ಷಣಂ ಸಹಸಾಕಾರ್ಯಕಾರಿತ್ವಂ ನಾಮಾಪದಾಮವಿಕಲಂ ಕಾರಣಮಿತಿ ತೇಷಾಂ ಕಾರ್ಯಕಾರಣಭಾವಮನ್ವಯವಾಕ್ಯೇನ ಪ್ರತಿಪಾದ್ಯ ಪುನಃ ಕಾರಣಾಭಾವರೂಪಂ ವಿಮೃಶ್ಯಕಾರಿತ್ವಮನೂದ್ಯ ತತ್ಕಾರ್ಯಭೂತ–ವಿಪದಭಾವರೂಪಾಣಾಂ ಸಂಪದಾಂ ಸದ್ಭಾವೋ ಭಣಿತ ಇತಿ ವ್ಯತಿರೇಕವಾಕ್ಯೇನಾಪಿ ತೇಷಾಂ ಕಾರ್ಯಕಾರಣಭಾವ ಏವಾಭಿಹಿತ ಇತಿ ತಸ್ಯ ಪುನರುಕ್ತತಾ, ಅನ್ವಯವಾಕ್ಯಾದೇವ ತದವಗತೇಃ॥**

**ಅನುವಾದ:**

ವಾಕ್ಯಾರ್ಥ ವಿಷಯವಾದ ಪೌನರುಕ್ತ್ಯದ ಉದಾಹರಣೆ–

"ಹಿಂದುಮುಂದೆ ನೋಡದೆ ಕೆಲಸವನ್ನು ಮಾಡಬಾರದು. ಅವಿವೇಕವು ಆಪತ್ತುಗಳ ಮುಖ್ಯ ಕಾರಣ. ಆಲೋಚಿಸಿ ಕೆಲಸ ಮಾಡುವವನನ್ನು ಗುಣಾಭಿಲಾಷಿಗಳಾದ ಸಂಪತ್ತುಗಳು ತಾವೇ ಬಂದು ವರಿಸುತ್ತವೆ".

ಈ ಪದ್ಯದಲ್ಲಿ– ಅವಿವೇಕಪ್ರಯುಕ್ತವಾದ ಅವಿಮೃಶ್ಯಕಾರಿತ್ವರೂಪವಾದ ಸಹಸಾಕಾರ್ಯಕಾರಿತ್ವವು ಆಪತ್ತುಗಳ ಪೂರ್ಣಕಾರಣ ಎಂದು ಅವುಗಳ ಕಾರ್ಯಕಾರಣಭಾವವನ್ನು ಅನ್ವಯವಾಕ್ಯದಿಂದ ಮೊದಲು ಪ್ರತಿಪಾದಿಸಲಾಗಿದೆ. ಆಮೇಲೆ ಮತ್ತೆ ಕಾರಣಾಭಾವರೂಪವಾದ ವಿಮೃಶ್ಯಕಾರಿತ್ವವನ್ನು ಅನೂದ್ಯ ರೂಪವಾಗಿಟ್ಟುಕೊಂಡು ಅದರ ಕಾರ್ಯವಾದ ವಿಪದಭಾವರೂಪ ಸಂಪತ್ತುಗಳ ಇರುವಿಕೆಯು ಹೇಳಲ್ಪಟ್ಟಿದೆ. ಹೀಗೆ ವ್ಯತಿರೇಕವಾಕ್ಯದಿಂದಲೂ ಅವುಗಳ ಕಾರ್ಯಕಾರಣಭಾವವನ್ನೇ ಹೇಳಲಾಗಿದೆ. ಆದ್ದರಿಂದ ಅದು ಪುನರುಕ್ತ. ಅನ್ವಯವಾಕ್ಯದಿಂದಲೇ (ವ್ಯತಿರೇಕವಾಕ್ಯದ ಅರ್ಥವೂ) ತಿಳಿದುಬರುವುದಾದ್ದರಿಂದ (ಅದರ ಪೌನರುಕ್ತ್ಯ).

**ಯದುಕ್ತಮ್– "ಸಾಧರ್ಮ್ಯೇಣಾಪಿ ಪ್ರಯೋಗೇ ಅರ್ಥಾದ್ ವೈಧರ್ಮ್ಯೇಣಾನ್ವಯಗತಿಃ। ಅಸತಿ ತಸ್ಮಿನ್ ಸಾಮ್ಯಾಭಾವೇ ಹೇತ್ವಭಾವಸ್ಯಾಸಿದ್ಧೇರಿತಿ ನಾವಶ್ಯಂ ವಾಚ್ಯದ್ವಯಪ್ರಯೋಗಃ" ಇತಿ। ಕಿಂಚ ಅನ್ವಯವ್ಯತಿರೇಕವಾಚ್ಯಯೋರನ್ಯೋನ್ಯಸ್ಯ ನ ಹೇತುಹೇತುಮದ್ಭಾವಃ ಸಂಭವತಿ। ನ ಹಿ ಯಸ್ಮಿನ್ ಸತಿ ಯಸ್ಯಾವಗತಿಸ್ತಸ್ಯ ಪ್ರತ್ಯುತ ಸ ಏವ ಹೇತುರಿತಿ ಯುಜ್ಯತೇ ವಕ್ತುಂ, ತದಭಿವ್ಯಕ್ತ್ಯರ್ಥೋ ಹಿಶಬ್ದೋಽಪ್ಯಪಾರ್ಥಕ ಏವೇತಿ। ಕುತಸ್ತರ್ಹಿ ದ್ವಿತೀಯೇಽರ್ಧೇಽರ್ಥಸ್ಯ ಚಾರುತಾವಗತಿಃ? ಉಚ್ಯತೇ। ಲಿಂಗವಿಶೇಷಾದ್ ಧರ್ಮವಿಶೇಷಾಚ್ಚ ಸಂಪದಾಂ ನಾಯಿಕಾತ್ವೇಽವಸಿತೇ ಸತಿ ಸಮಾಸೋಕ್ತೇರಿತ್ಯೇತದ್‌ವಕ್ಷ್ಯತೇ।**

**ಅನುವಾದ:**

ಹಿಂದಿನವರೂ ಹೇಳಿದ್ದಾರೆ– "ಸಾಧರ್ಮ್ಯದಿಂದ ಪ್ರಯೋಗವನ್ನು ಮಾಡಿದಾಗ ಅರ್ಥಾತ್ ವೈಧರ್ಮ್ಯದ ಅನ್ವಯವೂ ಗೊತ್ತಾಗುವುದು. ಹಾಗಾಗದಿದ್ದರೆ ಸಾಮ್ಯದ ಅಭಾವದಿಂದ ಹೇತ್ವಭಾವವೂ ಸಿದ್ಧವಾಗುವುದಿಲ್ಲ. ಆದ್ದರಿಂದ ಅವಶ್ಯವಾಗಿ (ಸಾಧರ್ಮ್ಯ–ವೈಧರ್ಮ್ಯ ಎಂಬ) ಎರಡರ ಪ್ರಯೋಗವನ್ನು ಮಾಡಬೇಕಾಗಿಲ್ಲ".

ಅಲ್ಲದೆ ಅನ್ವಯ–ವ್ಯತಿರೇಕಗಳು ವಾಚ್ಯವಾಗಿದ್ದಾಗ ಅವುಗಳಿಗೆ ಪರಸ್ಪರ ಕಾರ್ಯಕಾರಣಭಾವವು ಸಂಭವಿಸದು. ಯಾವುದಿದ್ದಾಗ ಯಾವುದರ ಜ್ಞಾನವುಂಟಾಗುವುದೋ ಅದೇ ಅದಕ್ಕೆ ಕಾರಣವೆಂದು ಹೇಳಲಾಗುವುದಿಲ್ಲ, ಏಕೆಂದರೆ ಆಗ ಕಾರ್ಯಕಾರಣಭಾವವೇ ತಲೆಕೆಳಗಾಗುವ ಪ್ರಸಂಗ ಉಂಟಾಗುವುದು. ಆದ್ದರಿಂದ ವ್ಯತಿರೇಕವಾಕ್ಯದಲ್ಲಿ (ಕಾರ್ಯಕಾರಣಭಾವದ) ಅಭಿವ್ಯಕ್ತಿಗಾಗಿ ಬಳಸಿದೆ 'ಹಿ' ಎಂಬ ಶಬ್ದವೂ ಅರ್ಥಹೀನ. ಹಾಗಿದ್ದರೆ (ಈ ಪದ್ಯದ) ಉತ್ತರಾರ್ಧದಲ್ಲಿ ಅರ್ಥವು ಸುಂದರವಾಗಿ ತೋರುವುದು ಹೇಗೆ? ಹೇಳುತ್ತೇವೆ ಕೇಳಿರಿ. ಲಿಂಗವಿಶೇಷ ಮತ್ತು ಧರ್ಮವಿಶೇಷದಿಂದ ಸಂಪತ್ತುಗಳ ನಾಯಿಕಾತ್ವದ ನಿರ್ಧಾರವಾದಾಗ ತೋರುವ ಸಮಾಸೋಕ್ತಿಯಿಂದ ಎಂದು ಮುಂದೆ ಪ್ರತಿಪಾದಿಸಲಾಗುವುದು.

**ಯಥಾ ಚ–**

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥**
**ಅತ್ರ ಹಿ ಧರ್ಮಾಧರ್ಮಯೋಃ ಛಾಯಾತಪಯೋರಿವ ಅನ್ಯೋನ್ಯಪರಿಹಾರೇಣಾವಸ್ಥಿತಯೋರ್ಯದೈವೈಕಸ್ಯ ಗ್ಲಾನಿಃ, ತದೈವೇತರಸ್ಯಾಭ್ಯುತ್ಥಾನಮಿತಿ ತಯೋರೇಕಸ್ಮಿನ್ ವಾಚ್ಯೇ ಯದುಭಯೋರ್ವಚನಂ ತತ್ ಪುನರುಕ್ತಮಿತಿ।**
**ಸಾಮರ್ಥ್ಯಸಿದ್ಧಸ್ಯಾರ್ಥಸ್ಯ ಯಥಾರ್ಥೀ ಪುನರುಕ್ತತಾ।**
**ತಾತ್ಪರ್ಯಭೇದಾಚ್ಚಬ್ದಸ್ಯ ದ್ವಿರುಕ್ತಿಃ ಶಾಬ್ದ್ಯಪೀಷ್ಯತೇ॥**
**ಪೌನರುಕ್ತ್ಯಮಿತಿ ದ್ವೇಧಾ ಗೌಣಮುಖ್ಯತಯಾ ಸ್ಥಿತಮ್।**
**ತತ್ರ ದೂಷಣಮೇವಾದ್ಯಮಪರಂ ಭೂಷಣಂ ಸ್ಮೃತಮ್॥**

**ಅನುವಾದ:**

ಇನ್ನೊಂದು ಉದಾಹರಣೆ– "ಯಾವಾಗ ಯಾವಾಗ ಧರ್ಮದ ನಾಶವಾಗುವುದೋ ಮತ್ತು ಅಧರ್ಮದ ವೃದ್ಧಿಯಾಗುವುದೋ ಆಗ, ಭಾರತನೆ, ನನ್ನನ್ನು ನಾನು ಸೃಷ್ಟಿಸಿಕೊಳ್ಳುವೆನು".

ಇಲ್ಲಿ ನೆರಳು–ಬೆಳಕುಗಳು ಹೇಗೋ ಹಾಗೆ ಧರ್ಮಾಧರ್ಮಗಳು ಪರಸ್ಪರಗಳನ್ನು ಪರಿಹರಿಸಿಕೊಂಡೇ ಇರುವುದರಿಂದ ಒಂದರ ಗ್ಲಾನಿ ಯಾವಾಗ ಆಗುವುದೋ ಆಗ ಇನ್ನೊಂದರ ಅಭ್ಯುತ್ಥಾನ ಆಗುವುದು ಸಿದ್ಧವಾಗುವುದರಿಂದ, ಅವೆರಡರಲ್ಲಿ ಒಂದನ್ನು ಹೇಳಿದರೆ ಸಾಕು. ಎರಡನ್ನೂ ಇಲ್ಲಿ ಹೇಳಿರುವುದರಿಂದ ಪುನರುಕ್ತ.

ಸಾಮರ್ಥ್ಯಸಿದ್ಧವಾದ ಅರ್ಥವನ್ನು ಹೇಳಿದಾಗ ಆರ್ಥೀ ಪುನರುಕ್ತತಾ. ಶಬ್ದಕ್ಕಾದರೋ ತಾತ್ಪರ್ಯಭೇದದಿಂದ ಮಾಡುವ ದ್ವಿರುಕ್ತಿಯು ಶಾಬ್ದೀ ಪುನರುಕ್ತತಾ.

ಹೀಗೆ ಪೌನರುಕ್ತ್ಯವು ಗೌಣ, ಮುಖ್ಯ ಎಂದು ಎರಡು ವಿಧವಾಗಿರುವುದು. ಅದರಲ್ಲಿ ಮೊದಲನೆಯದು ದೋಷ, ಎರಡನೆಯದಾದರೋ ಭೂಷಣ (ಅಲಂಕಾರ).

(ಪೌನರುಕ್ತ್ಯದ ನಾನಾಪ್ರಕಾರಗಳು)

**ಶಬ್ದಾಲಂಕಾರನಿಪುಣೈರ್ಲಾಟಾನುಪ್ರಾಸಸಂಜ್ಞಯಾ।**
**ತಚ್ಚೋದಾಹೃತಮೇವ ಪ್ರಾಗ್ದೂಷಣಂ ತು ವಿತನ್ಯತೇ॥**
**ಪ್ರಕೃತಿಪ್ರತ್ಯಯಾರ್ಥೋऽಸ್ಯ ಪದವಾಕ್ಯಾರ್ಥ ಏವ ಚ।**
**ವಿಷಯೋ ಬಹುಧಾ ಜ್ಞೇಯಃ ಸ ಕ್ರಮೇಣೋಪದರ್ಶ್ಯತೇ॥**
**ಅಭಿನ್ನ ಏವ ಯತ್ರಾರ್ಥಃ ಪ್ರಕೃತೇಃ ಪ್ರತ್ಯಯಸ್ಯ ಚ।**
**ತತ್ ಪೌನರುಕ್ತ್ಯೋಪಹತಂ ಪದಮಾದೌ ವಿವರ್ಜಯೇತ್॥**
**ವಿಹಿತಸ್ಯ ಬಹುವ್ರೀಹೇಃ ಕರ್ಮಧಾರಯಶಂಕಯಾ।**
**ಶಬ್ದಸ್ಯ ಮತ್ವರ್ಥೀಯಾದೇರ್ವ್ಯಕ್ತ್ಯೈವ ಪುನರುಕ್ತತಾ॥**
**ಯಸ್ಮಿನ್ ಯತ್ತದ್ಧಿತೋತ್ಪತ್ತಿರರ್ಥಸ್ತೇನೈವ ಜಾತುಚಿತ್।**
**ನ ತದಂತಃ ಸಮಸ್ಯೇತ ತದ್ಧಿತವ್ಯರ್ಥತಾಭಯಾತ್॥**

**ಅನುವಾದ:**

(ತಾತ್ಪರ್ಯಭೇದದಿಂದ ಮಾಡುವ ಶಬ್ದದ್ವಿರುಕ್ತಿಯನ್ನು) ಶಬ್ದಾಲಂಕಾರನಿಪುಣರು ಲಾಟಾನುಪ್ರಾಸ ಎಂಬ ಹೆಸರಿನಿಂದ ಮೊದಲೇ ವಿವರಿಸಿದ್ದಾರೆ. ದೋಷರೂಪವಾದ ಅರ್ಥಪುನರುಕ್ತಿಯನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಪ್ರಕೃತ್ಯರ್ಥ, ಪ್ರತ್ಯಯಾರ್ಥ, ಪ್ರಕೃತಿಪ್ರತ್ಯಯಾರ್ಥ, ಪದಾರ್ಥ, ವಾಕ್ಯಾರ್ಥ ಎಂದು (ಅರ್ಥಪೌನರುಕ್ತ್ಯ) ಬಹುವಿಧ. ಅವುಗಳನ್ನು ಕ್ರಮಶಃ ತೋರಿಸಲಾಗುವುದು.

ಪ್ರಕೃತಿಯ ಮತ್ತು ಪ್ರತ್ಯಯದ ಅರ್ಥವು ಎಲ್ಲಿ ಒಂದೇ ಆಗಿರುವುದೋ, ಅಂಥ ಪೌನರುಕ್ತ್ಯದೋಷವಿಷಯವಾದ ಪದವನ್ನು (ಕವಿಯು) ಮೊದಲು ಬಿಡಬೇಕು.

ಬಹುವ್ರೀಹಿಸಮಾಸವನ್ನು ಮಾಡಿರುವಾಗ, ಅದು ಕರ್ಮಧಾರಯ ಎಂಬ ಶಂಕೆಯಿಂದ ಮತ್ವರ್ಥೀಯ ಪ್ರತ್ಯಯವನ್ನು ಸೇರಿಸಿದರೆ ಅಲ್ಲಿ ಪುನರುಕ್ತಿ ಸ್ಪಷ್ಟವಾಗಿಯೇ ಇದೆ.

ಯಾವ ಅರ್ಥದಲ್ಲಿ ತದ್ಧಿತಪ್ರತ್ಯಯವು ಉತ್ಪನ್ನವಾಗಿದೆಯೋ ಅಂಥ ತದ್ಧಿತಾಂತಶಬ್ದದೊಡನೆ ಆ ಅರ್ಥವನ್ನು ಹೇಳುವ ಶಬ್ದಕ್ಕೆ ಸಮಾಸವನ್ನು ಮಾಡಬಾರದು, ಏಕೆಂದರೆ ಆಗ ತದ್ಧಿತಪ್ರತ್ಯಯ ವ್ಯರ್ಥವಾಗುತ್ತದೆ.

**ವಿಶೇಷಣವಶಾದಿಚ್ಛೇದ್ ವಿಶಿಷ್ಟಂ ಯತ್ರ ಸಂಜ್ಞಿನಮ್।**
**ಯುಕ್ತಾ ತತ್ರ ವಿಶೇಷ್ಯೋಕ್ತಿರನ್ಯಥಾ ಪೌನರುಕ್ತ್ಯಕೃತ್॥**
**ಸಕೃದೇವ ಪ್ರಯುಕ್ತೇನ ಯತ್ರ ಸಾಮ್ಯಾಭಿಧಾಯಿನಾ।**
**ಅನ್ಯೇಷಾಮುಪಮಾನತ್ವಂ ಸಾಮರ್ಥ್ಯಾದವಗಮ್ಯತೇ॥**
**ತತ್ರಾಸಕೃತ್ ಪ್ರಯೋಗೋಽಸ್ಯ ಪೌನರುಕ್ತ್ಯಾಯ ಕಲ್ಪತೇ।**
**ಯದ್ವದವ್ಯಭಿಚಾರಸ್ಯ ಕಾರಕಸ್ಯಾವಿಶೇಷಣಾ॥**
**ಅರ್ಥಸ್ಯಾನುಮಿತಸ್ಯೋಕ್ತಿರ್ನಾತ್ಯೇತಿ ಪುನರುಕ್ತತಾಮ್॥**
**ಯದ್ವಶಾದ್ಯದಭಿವ್ಯಕ್ತಿಸ್ತದುಕ್ತೌ ನಾದದೀತ ತತ್॥**

**ಅನುವಾದ:**

ವಿಶೇಷಣವಶದಿಂದ ಎಲ್ಲಿ ವಿಶಿಷ್ಟವಾದ ಸಂಜ್ಞಿಯನ್ನು ತಿಳಿಸುವ ಉದ್ದೇಶವಿದೆಯೋ ಅಲ್ಲಿ ವಿಶೇಷ್ಯವನ್ನೂ (ಶಬ್ದತಃ) ಹೇಳುವುದು ಉಚಿತ. ಹಾಗಲ್ಲದಿದ್ದರೆ (ಮತ್ತೆ ವಿಶೇಷ್ಯವನ್ನು ಹೇಳಿದಾಗ) ಪುನರುಕ್ತಿ.

ಸಾಮ್ಯವಾಚಕವಾದ (ಇವ ಇತ್ಯಾದಿ) ಶಬ್ದವು ವಾಕ್ಯದಲ್ಲಿ ಒಮ್ಮೆ ಪ್ರಯುಕ್ತವಾದಾಗಲೇ ಬೇರೆ ವಸ್ತುಗಳ ಉಪಮಾನತ್ವವೂ ಎಲ್ಲಿ ಸಾಮರ್ಥ್ಯದಿಂದಲೇ ಅರಿವಿಗೆ ಬರುವುದೋ ಅಲ್ಲಿ ಸಾಮ್ಯವಾಚಕವನ್ನು ಮತ್ತೆ ಉಪಯೋಗಿಸಿದರೆ ಅದೂ ಪೌನರುಕ್ತ್ಯ.

ಅವ್ಯಭಿಚಾರಿಯಾದ ಕಾರಕದ, ವಿಶೇಷಣರಹಿತವಾದ ಉಕ್ತಿಯು ಹೇಗೆ ಪುನರುಕ್ತಿಯೋ ಹಾಗೆ ಅನುಮಿತವಾಗುವ ಅರ್ಥದ ಉಕ್ತಿಯೂ ಪುನರುಕ್ತಿಯೇ. ಯಾವುದರ ವಶದಿಂದಲೇ ಯಾವುದರ ಅಭಿವ್ಯಕ್ತಿ ಸಿದ್ಧವೋ, ಅದನ್ನು ಮತ್ತೆ ಶಬ್ದತಃ ಹೇಳಬೇಕಾಗಿಲ್ಲ.

ಯೋ ಯದ್ಧರ್ಮೋಪಚಾರೇಣ ಯತ್ಸಂಬಂಧಾನ್ವಿತೋಽಪಿ ವಾ ।
ತಸ್ಯ ತದ್ರೂಪಣಾರ್ಥೀಷ್ಟಾ ನ ಶಾಬ್ದೀ ಪೌನರುಕ್ತ್ಯತಃ ॥
ಪ್ರಯುಕ್ತಾಂತರ್ಗತೈರೇವ ಯತ್ರ ಸೋಽರ್ಥಃ ಪ್ರತೀಯತೇ ।
ಪ್ರಯೋಗಸ್ತತ್ರ ಶೇಷಾಣಾಂ ಪದಾನಾಂ ಪೌನರುಕ್ತ್ಯಕೃತ್ ॥
ಕರ್ತರ್ಯಂಗಿನಿ ರೂಢಾಯಾಂ ತತ್ಕ್ರಿಯಾಯಾಂ ಚ ನೇಷ್ಯತೇ ।
ವಾಕ್ ಸಾಧಕತಮಾಂಗಾನಾಮೌಚಿತ್ಯಾದೇವ ತದ್ಗತೇಃ ॥
ದೋಷದ್ವಯಮಿದಂ ಪ್ರಾಯಃ ಸಮಾಸವಿಷಯಂ ಮತಮ್ ।
ಯತೋಽವಕರಭೂಯಿಷ್ಠಾ ಲಕ್ಷಣೈಕಪರಾಯಣೈಃ ॥
ಕೃತಾಃ ಪ್ರತೀತಿವಿಮುಖೈರ್ದೃಶ್ಯಂತೇಽನೇಕಧಾ ಹಿ ತೇ ।
ಸಮಾಸಮತ ಏವಾಹುಃ ಕವೀನಾಂ ನಿಕಷಂ ಪರಮ್ ॥

**ಅನುವಾದ:**

ಯಾವುದಾದರೊಂದು (ಅಸಾಧಾರಣ) ಧರ್ಮದ ಉಪಚಾರ (ಆರೋಪ)ದಿಂದ ಯಾವುದು ಇನ್ನೊಂದು ಅರ್ಥದ ಸಂಬಂಧದ ಅನ್ವಯವನ್ನು ಪಡೆಯುವುದೋ, ಅದಕ್ಕೆ ಅದರೊಡನೆ ಆರ್ಥರೂಪಣವೇ ಯುಕ್ತ, ಶಾಬ್ದರೂಪಣವಲ್ಲ, ಏಕೆಂದರೆ ಅದರಿಂದ ಪೌನರುಕ್ತ್ಯವಾಗುತ್ತದೆ. ಪ್ರಯುಕ್ತವಾದ ಶಬ್ದಗಳೊಳಗಿರುವ ಕೆಲವು ಶಬ್ದಗಳಿಂದಲೇ ಎಲ್ಲಿ (ವಿವಕ್ಷಿತವಾದ) ಅರ್ಥವು ತೋರುವುದೋ ಅಲ್ಲಿ ಉಳಿದ ಪದಗಳ ಪ್ರಯೋಗವು ಪುನರುಕ್ತಿಗೆ ಕಾರಣ.

ಪ್ರಧಾನವಾದ ಕರ್ತೃ ಮತ್ತು ರೂಢವಾದ ಅದರ ಕ್ರಿಯೆಯಲ್ಲಿ ವಾಚಕಶಬ್ದದ ಪ್ರಯೋಗವು ಸಾಧಕತಮವಾದ ಅಂಗಗಳ ವಿಷಯದಲ್ಲಿ ಇಷ್ಟವಲ್ಲ. ಏಕೆಂದರೆ ಔಚಿತ್ಯದಿಂದಲೇ ಅವು ಗೊತ್ತಾಗುತ್ತವೆ.

ಈ ಎರಡು ದೋಷಗಳು ಪ್ರಾಯಶಃ ಸಮಾಸದಲ್ಲೇ ಕಂಡುಬರುತ್ತವೆ. ಏಕೆಂದರೆ ಲಕ್ಷಣದಲ್ಲಿ ಮಾತ್ರ ಆಸಕ್ತರಾದ, ಪ್ರತೀತಿವಿಮುಖರಾದ ಜನರು ಅಂಥ ಕಸದಿಂದ ತುಂಬಿದ ನಿಯಮಗಳನ್ನು ಮಾಡಿದ್ದಾರೆ. ಆದ್ದರಿಂದಲೇ ಸಮಾಸವು ಕವಿಗಳ ಅಂತಿಮ ಒರೆಗಲ್ಲು ಎಂದು (ತಿಳಿದವರು) ಹೇಳುತ್ತಾರೆ.

ವೃತ್ತಾವಿತರಥಾ ಚೋಕ್ತೇ ನಾನ್ಯಭಾಜಿ ವಿಶೇಷಣೇ ।
ವಿಶೇಷ್ಯೋಕಿರಯುಕ್ತೈವ ಸ್ಯಾತ್ ತದವ್ಯಭಿಚಾರತಃ ॥
ಯೋ ಯದಾತ್ಮಾ ತದುಕ್ತ್ಯೈವ ತಸ್ಯಾರ್ಥಸ್ಯ ಗತಿರ್ಯತಃ ।
ತೇನ ಪ್ರಯೋಜನಾಭಾವೇ ದ್ವಯೋಕ್ತಿಃ ಪುನರುಕ್ತಿಕೃತ್ ॥
ಯೋ ಯಸ್ಯ ನಿಯತೋ ಧರ್ಮಸ್ತಸ್ಯ ತೇನ ನ ಧರ್ಮಿಣಾ ।
ಸಮಾಸಃ ಶಸ್ಯತೇಽನ್ಯಾರ್ಥಸ್ತತ ಏವ ಹಿ ತದ್ಗತೇಃ ॥
ಕ್ರಿಯಾಪ್ರತೀತಿಃ ಕರಣಪ್ರತ್ಯಯಾವ್ಯಭಿಚಾರಿಣೀ ।
ತದಪ್ರತೀತೌ ತಾದಾತ್ಮ್ಯಾತ್ ಸೈವಾನವಸಿತಾ ಭವೇತ್ ॥

**ಯದೇತತ್ ತ್ಯಾಗಪಾಕಾದೌ ಕ್ರಿಯೇತ್ಯುಕ್ತೇರ್ನಿಬಂಧನಮ್ ।**
**ತದ್ವ್ಯಕ್ತಿರ್ಯದ್ವಶಾದ್ ಯಸ್ಯ ತದುಕ್ತೌ ನಾದದೀತ ತತ್ ॥**
**ಪ್ರಯುಕ್ತೇ ಚಾಪ್ರಯುಕ್ತೇ ಚ ಯಸ್ಮಿನ್ನರ್ಥಗತಿಃ ಸಮಾ ।**
**ನ ತತ್ಪದಮುಪಾದೇಯಂ ಕವಿನಾವಕರೋ ಹಿ ಸಃ ॥**

**ಅನುವಾದ:**

ಸಮಾಸದಲ್ಲಾಗಲಿ ವಾಕ್ಯದಲ್ಲಾಗಲಿ ಅಸಾಧಾರಣವಿಶೇಷಣವನ್ನು ಪ್ರಯೋಗಿಸಿದಾಗ ಮತ್ತೆ ವಿಶೇಷ್ಯವನ್ನು ಪ್ರಯೋಗಿಸುವುದು ಅಯುಕ್ತ, ಏಕೆಂದರೆ ಅದು ಅವ್ಯಭಿಚರಿತ. ಯಾವುದು ಇನ್ನು ಯಾವುದರ ಸ್ವರೂಪವೇ ಆಗಿದೆಯೋ ಅವುಗಳಲ್ಲಿ ಒಂದನ್ನು ಹೇಳುವುದರಿಂದಲೇ ಇನ್ನೊಂದರ ಅರ್ಥವೂ ತಿಳಿದುಬರುವುದರಿಂದ, ಎರಡೂ ಶಬ್ದಗಳ ಪ್ರಯೋಗವನ್ನು ಮಾಡಿದರೆ, ಒಂದರ ಪ್ರಯೋಜನವಿಲ್ಲದುದರಿಂದ ಅದು ಪುನರುಕ್ತ.

ಯಾವುದು ಯಾವುದರ ನಿಯತ ಧರ್ಮವೋ ಅದರೊಡನೆ ಇನ್ನೊಂದರ ವಾಚಕಕ್ಕೆ ಸಮಾಸವು ಸರಿಯಲ್ಲ. ಏಕೆಂದರೆ ಇನ್ನೊಂದರ ಅರ್ಥವೂ ಅದರಿಂದಲೇ ತಿಳಿದುಬರುತ್ತದೆ. ಕರಣದ ಜ್ಞಾನವುಂಟಾದಾಗ ಕ್ರಿಯೆಯ ಜ್ಞಾನವು ಅವ್ಯಭಿಚರಿತವಾಗಿ ಉಂಟಾಗುವುದು. ಕರಣದ ಸ್ವರೂಪ ತೋರದಿದ್ದರೆ ಕ್ರಿಯೆಯೂ ತಿಳಿಯದೆ ಹೋಗಬಹುದು. ತ್ಯಾಗ, ಪಾಕ ಇತ್ಯಾದಿ ಶಬ್ದಗಳಲ್ಲಿ ಕ್ರಿಯಾ ಎಂದು ಹೇಳುವುದಕ್ಕೆ ನಿಬಂಧನವಾದ ಕರಣ ಇತ್ಯಾದಿಗಳ ಅಭಿವ್ಯಕ್ತಿಯು ಯಾವುದರ ಆಧಾರದಿಂದ ಆಗುವುದೋ ಅದನ್ನು ಹೇಳಿದಾಗ ಕರಣವಾಚಕವನ್ನು ಹೇಳಬಾರದು.

ಯಾವ ಪದವನ್ನು ಬಳಸಿದರೂ ಬಳಸದಿದ್ದರೂ ಅರ್ಥಜ್ಞಾನವು ಸಮಾನವೋ ಅಂಥ ಪದವನ್ನು ಕವಿ ಉಪಯೋಗಿಸಬಾರದು. ಆ ಪದ ಕೇವಲ ಕಸ.

**ಅನ್ಯೋನ್ಯಾಕ್ಷೇಪಕತ್ವೇ ಸತ್ಯನ್ವಯವ್ಯತಿರೇಕಯೋಃ ।**
**ಉಭಯೋರುಕ್ತಿರೇಕಸ್ಯ ನಾತ್ಯೇತಿ ಪುನರುಕ್ತತಾಮ್ ॥**
**ಪುನರುಕ್ತಿಪ್ರಕಾರಾಣಾಮಿತಿ ದಿಙ್ಮಾತ್ರಮೀರಿತಮ್ ।**
**ವಿವೇಕ್ತುಂ ಕೋ ಹಿ ಕಾರ್ತ್ಸ್ನ್ಯೇನ ಶಕ್ನೋತ್ಯವಕರೋತ್ಕರಮ್ ॥ ಇತಿ ಸಂಗ್ರಹ ಶ್ಲೋಕಾಃ।**

**ಅನುವಾದ:**

ಅನ್ವಯ–ವ್ಯತಿರೇಕಗಳು ಪರಸ್ಪರಾಕ್ಷೇಪಕವಾಗಿದ್ದಾಗ ಎರಡನ್ನೂ ಹೇಳಿದರೆ, ಒಂದು ಪುನರುಕ್ತವಾಗುವುದು ತಪ್ಪದು. ಹೀಗೆ ಪುನರುಕ್ತಿಪ್ರಕಾರಗಳ ದಿಕ್ಪ್ರದರ್ಶನವನ್ನು ಮಾತ್ರ ಮಾಡಲಾಗಿದೆ. ಕಸದ ರಾಶಿಯನ್ನು ಪೂರ್ಣವಾಗಿ ವಿಶ್ಲೇಷಿಸಲು ಯಾವನು ಶಕ್ತನಾಗುವನು?

## ವಾಚ್ಯಾವಚನಮ್

**ವಾಚ್ಯಸ್ಯಾವಚನಂ ಯಥಾ–**
**"ಕನಕನಿಕಷಸ್ನಿಗ್ಧಾ ವಿದ್ಯುತ್ ಪ್ರಿಯಾ ನ ಮಮೋರ್ವಶೀ" ಇತಿ । ಅತ್ರ ಹಿ ಭ್ರಾಂತೌ ನಿವೃತ್ತಾಯಾಂ ತದ್ವಿಷಯಭೂತಯೋಃ ಸುರಧನುರ್ಧಾರಾಸಾರಯೋರಿವ ವಿದ್ಯುತೋಽಪಿ ಇದಮಾ ಪರಾಮರ್ಶೇ ವಾಚ್ಯೇ ಯತ್ತಸ್ಯಾವಚನಂ ಸ ವಾಚ್ಯಾವಚನಂ ದೋಷಃ ।**

## ವಾಚ್ಯಾವಚನ

ವಾಚ್ಯಾವಚನದ (ಹೇಳಬೇಕಾದನ್ನು ಹೇಳದಿರುವುದರ) ಉದಾಹರಣೆ–

"ಚಿನ್ನದ ಒರೆಗಲ್ಲಿನಂತೆ ನವುರಾದ ಮಿಂಚು, ನನ್ನ ಪ್ರಿಯೆ ಉರ್ವಶಿಯಲ್ಲ." ಇದರಲ್ಲಿ (ಪುರೂರವಸ್ಸಿನ) ಭ್ರಾಂತಿಯು ನಿವೃತ್ತವಾದ ಮೇಲೆ ಆ ಭ್ರಾಂತಿಗೆ ವಿಷಯವಾಗಿದ್ದ ಕಾಮನಬಿಲ್ಲು ಮತ್ತು ಧಾರಾಕಾರ ಮಳೆಗಳಿಗೆ ಇದಂಶಬ್ದದಿಂದ (ಸುರಧನುರಿದಂ, ಅಯಂ ಧಾರಾಸಾರೋ ಎಂಬಲ್ಲಿ) ಹೇಗೆ ಪರಾಮರ್ಶವನ್ನು ಮಾಡಲಾಗಿದೆಯೋ ಹಾಗೆ 'ವಿದ್ಯುತ್' ಶಬ್ದಕ್ಕೂ ಮಾಡಬೇಕಾಗಿತ್ತು. ಅದನ್ನು ಮಾಡದಿರುವುದರಿಂದ ಇಲ್ಲಿ ವಾಚ್ಯಾವಚನ ಎಂಬ ದೋಷ.

**ಯಥಾ ಚ– ಕಮಲಮನಂಭಸಿ ಕಮಲೇ ಕುವಲಯೇ ತಾನಿ ಕನಕಲತಿಕಾಯಾಮ್ ।**
**ಸಾ ಚ ಸುಕುಮಾರಸುಭಗೇತ್ಯುತ್ಪಾತಪರಂಪರಾ ಕೇಯಮ್ ॥**

**ಅತ್ರ ಹಿ ದ್ವಿತೀಯಃ ಕಮಲಾರ್ಥಃ ಸರ್ವನಾಮವಾಚ್ಯಃ । ತಸ್ಯ ಯತ್ ಸ್ವಶಬ್ದೇನ ವಚನಂ ಸ ವಾಚ್ಯಾವಚನಂ ದೋಷಃ । ತೇನಾತ್ರ 'ತಸ್ಮಿಂಶ್ಚ ಕುವಲಯೇ' ಇತಿ ಯುಕ್ತಃ ಪಾಠಃ ।**

**ಸರ್ವನಾಮಪರಾಮರ್ಶವಿಷಯೇ ಯೋಽರ್ಥವಸ್ತುನಿ ।**
**ಸ್ವಶಬ್ದವಾಚ್ಯತಾದೋಷಃ ಸ ವಾಚ್ಯಾವಚನಾಭಿಧಃ ॥ ಇತಿ ಸಂಗ್ರಹ ಶ್ಲೋಕಃ ।**

**ಅನುವಾದ:**

ಇನ್ನೊಂದು ಉದಾಹರಣೆ–

"ನೀರಿಲ್ಲದೆಡೆಯಲ್ಲಿ ತಾವರೆ, ತಾವರೆಯಲ್ಲೆರಡು ನೈದಿಲೆಗಳು, ಅವೆಲ್ಲವೂ ಚಿನ್ನದ ಬಳ್ಳಿಯಲ್ಲಿ, ಅದು ಕೋಮಲಸುಂದರ, ಇದಾವ ಪವಾಡಪರಂಪರೆಯೋ!"

ಇಲ್ಲಿ ಎರಡನೆಯ ಕಮಲ (ತಾವರೆ) ಎಂಬ ಅರ್ಥವು ಸರ್ವನಾಮದಿಂದ ಹೇಳಲ್ಪಡಲು ಯೋಗ್ಯ. (ಹಾಗೆ ಮಾಡದೆ) ಅದನ್ನು ಸ್ವಶಬ್ದದಿಂದ ಹೇಳಿರುವುದರಿಂದ ವಾಚ್ಯಾವಚನವೆಂಬ ದೋಷ. ಆದ್ದರಿಂದ ಈ ಪದ್ಯದಲ್ಲಿ "ತಸ್ಮಿಂಶ್ಚ ಕುವಲಯೇ" ಎಂಬ ಪಾಠವು ಉಚಿತ.

ಸರ್ವನಾಮ ಪರಾಮರ್ಶಕ್ಕೆ ಯೋಗ್ಯವಾದ ಅರ್ಥವನ್ನು ಸ್ವಶಬ್ದದಿಂದ ಹೇಳಿದರೆ (ಸರ್ವನಾಮದಿಂದ ಹೇಳದೆ ಇರುವುದರಿಂದ) ವಾಚ್ಯಾವಚನವೆಂಬ ದೋಷ ಎಂದು ಸಂಗ್ರಹಶ್ಲೋಕ.

**"ದ್ವಯಂ ಗತಂ ಸಂಪ್ರತಿ ಶೋಚನೀಯತಾಂ ಸಮಾಗಮಪ್ರಾರ್ಥನಯಾ ಕಪಾಲಿನಃ" ಇತಿ। ಅತ್ರ ಹಿ ಕಪಾಲಿಶಬ್ದೋ ಧರ್ಮಿಧರ್ಮೋಭಯಾರ್ಥವೃತ್ತಿಃ ಸಂಜ್ಞಿಮಾತ್ರಂ ವಾ, ಗರ್ಹಿತತ್ವಮ್,**

**ಉಭಯಮಪಿ ವಾ ಇತಿ ತ್ರಯಃ ಪಕ್ಷಾಃ । ತತ್ರ ಪ್ರಥಮೇ ಪಕ್ಷೇ ವಿಶೇಷ್ಯಪ್ರತಿಪತ್ತಯೇ ಕಪಾಲಿಗ್ರಹಣಮಪರಮಪಿ ಕರ್ತವ್ಯಂ ಯೇನಾಸ್ಯ ಗರ್ಹಿತತ್ವಂ ಪ್ರತೀಯೇತ । ದ್ವಿತೀಯೇ ಪಕ್ಷೇ ತಸ್ಯಾಶ್ರಯಪ್ರತಿಪತ್ತಯೇ ತೇನೈವ ತತ್ಪರ್ಯಾಯೇಣ ಸರ್ವನಾಮ್ನಾ ವಾ ವಿಶೇಷ್ಯಮವಶ್ಯಮುಪಾದೇಯಂ ಭವತಿ ಯೇನ ತಸ್ಯ ವಿವಕ್ಷಿತಾರ್ಥಸಿದ್ಧೌ ಆರ್ಥೋ ಹೇತುಭಾವೋಽವಕಲ್ಪ್ಯೇತ ।**

**ಅನುವಾದ:**

"ಕಪಾಲಿಯ ಸಮಾಗಮವು (ಬೇಕೆಂದು ಮಾಡಿದ) ಪ್ರಾರ್ಥನೆಯಿಂದ ಎರಡು ಶೋಚನೀಯತ್ವವನ್ನು ಪಡೆದುವು" ಎಂಬ ಪದ್ಯದಲ್ಲಿ ಕಪಾಲಿಶಬ್ದವು ಧರ್ಮ–ಧರ್ಮಿ ಎಂಬ ಎರಡು ಅರ್ಥವನ್ನೂ ತಿಳಿಸುವ ಸಾಮರ್ಥ್ಯವನ್ನು ಹೊಂದಿದ್ದು ಸಂಜ್ಞಿಯಾದ ಶಿವನನ್ನು ಮಾತ್ರ (ತಿಳಿಸುವುದೋ), ಕಪಾಲ ಸಂಬಂಧದಿಂದ ಉಂಟಾಗುವ ಗರ್ಹಿತತ್ವವನ್ನು (ತಿಳಿಸುವುದೋ) ಅಥವಾ ಉಭಯವನ್ನೂ ತಿಳಿಸುವುದೋ ಎಂದು ಮೂರು ಪಕ್ಷಗಳು. ಅವುಗಳಲ್ಲಿ ಮೊದಲನೆಯ ಪಕ್ಷದಲ್ಲಿ ವಿಶೇಷ್ಯವನ್ನು ತಿಳಿಸುವುದಕ್ಕಾಗಿ ಇನ್ನೊಂದು ಕಪಾಲಿ ಶಬ್ದವನ್ನು ಹೇಳಬೇಕು, ಅದರಿಂದ ಶಿವನ ಗರ್ಹಿತತ್ವವು ಗೊತ್ತಾಗುವುದು. ಎರಡನೆಯ ಪಕ್ಷದಲ್ಲಿ ಗರ್ಹಿತತ್ವದ ಆಶ್ರಯ ಏನೆಂದು ತಿಳಿಸುವುದಕ್ಕಾಗಿ ಅದೇ ಪದದಿಂದ, ಅಥವಾ ಅದರ ಪರ್ಯಾಯಶಬ್ದದಿಂದ ಅಥವಾ ಸರ್ವನಾಮದಿಂದ ವಿಶೇಷ್ಯವನ್ನು ಅವಶ್ಯವಾಗಿ ಹೇಳಬೇಕು. ಅದರಿಂದ ವಿವಕ್ಷಿತಾರ್ಥವು ಸಿದ್ಧವಾದಾಗ ಆರ್ಥವಾಗಿ ಕಾರಣತ್ವವನ್ನು ಕಲ್ಪಿಸಬಹುದು.

**ತತ್ರ ತೇನೈವೋಪಾದಾನೇ । ಯಥಾ–**

**"ಸತತಮನಂಗೋಽನಂಗೋ**
**ನ ವೇತ್ತಿ ಪರದೇಹದಾಹದುಃಖಮಹೋ ।**
**ಯದಯಮದಯಂ ದಹತಿ ಮಾಮ್**
**ಅನಲಶರೋ ಧ್ರುವಮಸೌ ನ ಕುಸುಮಶರಃ ॥"**

**ಪರ್ಯಾಯೇಣೋಪಾದಾನೇ ಯಥಾ–**

**"ಕುರ್ಯಾಂ ಹರಸ್ಯಾಪಿ ಪಿನಾಕಪಾಣೇ–**
**ರ್ಧೈರ್ಯಚ್ಯುತಿಂ ಕೇ ಮಮ ಧನ್ವಿನೋಽನ್ಯೇ ॥"**

**ಯಥಾ ಚ–**

**"ಏಕಃ ಶಂಕಾಮಹಿಕುಲರಿಪೋರತ್ಯಜದ್ ವೈನತೇಯಾತ್"**

**ಇತಿ । ಸರ್ವನಾಮ್ನಾ ಯಥಾ–**

**ದೃಶಾ ದಗ್ಧಂ ಮನಸಿಜಂ ಜೀವಯಂತಿ ದೃಶೈವ ಯಾಃ ।**
**ವಿರೂಪಾಕ್ಷಸ್ಯ ಜಯಿನೀಸ್ತಾಃ ಸ್ತುವೇ ವಾಮಲೋಚನಾಃ ॥**

**ಅನುವಾದ:**

ಅದೇ ಪದವನ್ನು ಪುನಃ ಬಳಸಿರುವುದಕ್ಕೆ ಉದಾಹರಣೆ–

"ಯಾವಾಗಲೂ ಅನಂಗನು ಅನಂಗನೇ. ಅವನು ಬೇರೆಯವರ ದೇಹದ ಸುಡುವಿಕೆಯ ದುಃಖವನ್ನು ತಿಳಿಯಲಾರನು. ಆದ್ದರಿಂದಲೇ ಅವನು ನಿರ್ದಯವಾಗಿ ನನ್ನನ್ನು ಸುಡುತ್ತಿದ್ದಾನೆ. ನಿಶ್ಚಿತವಾಗಿ ಇವನು ಬೆಂಕಿಗೋಲ, ಪೂಗೋಲನಲ್ಲ."

ಪರ್ಯಾಯವನ್ನು ಬಳಸಿರುವುದಕ್ಕೆ ಉದಾಹರಣೆ–

"ಪಿನಾಕಪಾಣಿಯಾದ ಹರನ ಧೈರ್ಯವನ್ನೂ ಕೆಡಿಸಬಲ್ಲೆ, ಬೇರೆ ಬಿಲ್ಗಾರರು ನನಗೆ ಯಾವ ಲೆಕ್ಕ?"

ಇನ್ನೊಂದು ಉದಾಹರಣೆ–

"ಅಹಿಕುಲರಿಪುವಾದ ವೈನತೇಯನಿಂದಲೂ ಹೆದರಿಕೆಯನ್ನು ಇವನೊಬ್ಬನು ಬಿಟ್ಟಿದ್ದಾನೆ."

ಸರ್ವನಾಮದಿಂದ ಮಾಡಿದ ಉಪಾದಾನಕ್ಕೆ ಉದಾಹರಣೆ–

"ಕಣ್ಣಿನ ದೃಷ್ಟಿಯಿಂದ ಸುಟ್ಟುಹೋದ ಮನ್ಮಥನನ್ನು ದೃಷ್ಟಿಯಿಂದಲೇ ಮತ್ತೆ ಯಾರು ಬದುಕಿಸುವರೋ, ಶಿವನನ್ನೂ ಗೆಲ್ಲುವ ಆ ಸುಂದರಿಯರನ್ನು ಹೊಗಳುತ್ತೇನೆ."

**ಅತ್ರಾಪಿ ಸರ್ವನಾಮ್ನೋಪಾತ್ತಸ್ಯಾರ್ಥಸ್ಯ ವಾಮಲೋಚನಾತ್ವಂ ಮನಸಿಜದಾಹಜೀವನಯೋ–ರನ್ಯೋನ್ಯವಿಭಿನ್ನಯೋರಪಿ ಅಭಿನ್ನಹೇತುಕತ್ವೋಪಪತ್ತೌ ಆರ್ಥೋ ಹೇತುಃ । ಇತರಥಾ ವಾಮಲೋಚನಾತ್ವಸ್ಯ ಪುನರುಪಾದಾನಪ್ರಸಂಗಃ । ಅತ ಏವ ತೃತೀಯಃ ಪಕ್ಷೋ ನ ಸಂಭವತ್ಯೇವ । ಏಕಸ್ಯೈವ ಶಬ್ದಸ್ಯ ಆವೃತ್ತಿಮಂತರೇಣ ಅನೇಕಾರ್ಥ–ಪ್ರತಿಪಾದನಸಾಮರ್ಥ್ಯಾ–ಭಾವಾತ್ । ನ ಚಾಸಾವನಿಬಂಧನಾ ಶಕ್ಯಾ ಕಲ್ಪಯಿತುಮಿತಿ ವಕ್ಷ್ಯತೇ । ನ ಚಾತ್ರ ಕಿಂಚಿನ್ನಿಬಂಧನಮುಕ್ತಮಿತಿ ತಸ್ಯ ವಾಚ್ಯಸ್ಯಾವಚನಂ ದೋಷಃ ।**

**ಅನುವಾದ:**

ಈ (ದೃಶಾ ದಗ್ಧಂ....) ಪದ್ಯದಲ್ಲಿ ಸರ್ವನಾಮದಿಂದ ಹೇಳಲ್ಪಟ್ಟ ಅರ್ಥಕ್ಕೆ "ವಾಮಲೋಚನಾತ್ವ" (ಸುಂದರ ಕಣ್ಣುಗಳನ್ನು ಹೊಂದಿರುವಿಕೆ) ಎಂಬುದು ಪರಸ್ಪರ ವಿರುದ್ಧವಾದ ಮನ್ಮಥನ ದಾಹ–ಜೀವನಗಳಿಗೆ ಒಂದೇ ಕಾರಣ ಎಂದು ತೋರಿಸುವುದಕ್ಕೆ ಆರ್ಥ ಕಾರಣವಾಗಿದೆ. ಹಾಗಲ್ಲದಿದ್ದರೆ ವಾಮಲೋಚನಾತ್ವ ಎಂಬ ಧರ್ಮವನ್ನು ಮತ್ತೊಮ್ಮೆ ಹೇಳಬೇಕಾದ ಪ್ರಸಂಗ ಉಂಟಾದೀತು.

ಈ ಕಾರಣದಿಂದಲೇ ಮೂರನೆಯ ಪಕ್ಷವೂ ಸಂಭವಿಸುವುದಿಲ್ಲ. ಆವೃತ್ತಿ ಇಲ್ಲದಿರುವಾಗ ಒಂದೇ ಶಬ್ದಕ್ಕೆ ಅನೇಕಾರ್ಥಗಳನ್ನು ಪ್ರತಿಪಾದಿಸುವ ಸಾಮರ್ಥ್ಯವೇ

ಇಲ್ಲ. ನಿಬಂಧನವಿಲ್ಲದಿದ್ದರೆ ಆವೃತ್ತಿಯನ್ನು ಕಲ್ಪಿಸುವುದೂ ಶಕ್ಯವಲ್ಲ –ಎಂದು ಮುಂದೆ ಹೇಳುವೆವು. ಈ ಪದ್ಯದಲ್ಲಿ (ಆವೃತ್ತಿಗೆ) ಯಾವ ನಿಬಂಧನವನ್ನೂ ಹೇಳಿಲ್ಲ. ಆದ್ದರಿಂದ ಹೇಳಬೇಕಾಗಿದ್ದ ಆ ನಿಬಂಧನವನ್ನು ಹೇಳಿಲ್ಲದಿರುವುದು ಇಲ್ಲಿ ವಾಚ್ಯಾವಚನ ಎಂಬ ದೋಷ.

**ತೇನ ವರಮಯಮತ್ರ ಪಾಠಃ ಶ್ರೇಯಾನ್ ಅಲ್ಪದೋಷತ್ವಾತ್–**
**ದ್ವಯಂ ಗತಂ ಸಂಪ್ರತಿ ತಸ್ಯ ಶೋಚ್ಯತಾಂ**
**ಸಮಾಗಮಪ್ರಾರ್ಥನಯಾ ಕಪಾಲಿನಃ । ಇತಿ ।**
**ಅರ್ಥಭೇದಾದ್ ವಿಭಿನ್ನೇಽಪಿ ಶಬ್ದೇ ಸಾದೃಶ್ಯಮಾತ್ರಜಃ ।**
**ಆವೃತ್ತಿವ್ಯವಹಾರೋಽಯಂ ಮೂಲಮಸ್ಯೈಕತಾ ಭ್ರಮಃ ॥**
**ಅತಶ್ಚ–**
**ತತ್ಪರ್ಯಾಯೇಣ ತೇನೈವ ಸರ್ವನಾಮ್ನಾ ವಿನಿರ್ದಿಶೇತ್ ।**
**ಆರ್ಥಹೇತುತ್ವನಿಷ್ಪತ್ತೌ ಧರ್ಮಿಧರ್ಮೋಭಯಾತ್ಮಕಮ್ ॥**
**ಇತ್ಯಂತರಶ್ಲೋಕೌ ।**

**ಅನುವಾದ:**

ಆದ್ದರಿಂದ ಈ ಪದ್ಯದಲ್ಲಿ–

ದ್ವಯಂಗತಂ ಸಂಪ್ರತಿ ತಸ್ಯ ಶೋಚ್ಯತಾಂ
ಸಮಾಗಮಪ್ರಾರ್ಥನಯಾ ಕಪಾಲಿನಃ

ಎಂಬ ಪಾಠವೇ ಸ್ವಲ್ಪ ಉತ್ತಮ, ಏಕೆಂದರೆ ಇದರಲ್ಲಿ ದೋಷವು ಅಲ್ಪ.

ಅರ್ಥಭೇದದಿಂದ ಶಬ್ದವೂ ಭಿನ್ನವಾಗುತ್ತದೆ. ಇದರಲ್ಲಿ ಆವೃತ್ತಿ ಎಂಬ ವ್ಯವಹಾರವು ಸಾದೃಶ್ಯಮಾತ್ರದಿಂದ ಹುಟ್ಟಿರುತ್ತದೆ. ಇದಕ್ಕೆ ಕಾರಣ ಏಕತ್ವದ ಭ್ರಾಂತಿ. ಆದ್ದರಿಂದ– ಧರ್ಮಿ–ಧರ್ಮ ಎಂಬ ಉಭಯರೂಪದ ವಿಷಯವಸ್ತುವನ್ನು ಪರ್ಯಾಯಶಬ್ದದಿಂದ, ಅಥವಾ ಅದೇ ಶಬ್ದದಿಂದ, ಅಥವಾ ಸರ್ವನಾಮದಿಂದ ಆರ್ಥವಾದ ಕಾರಣತ್ವದ ನಿಷ್ಪತ್ತಿಗಾಗಿ ನಿರ್ದೇಶಿಸಬೇಕು. ಇವು ಅಂತರಶ್ಲೋಕಗಳು.

(ಸಮಾಸೋಕ್ತಿಯ ಸ್ಥಾನದಲ್ಲಿ ಶ್ಲೇಷಾಲಂಕಾರದ ನಿಬಂಧನದೋಷ)

**ಯತ್ರಾನ್ಯಸ್ಯಾಲಂಕಾರಸ್ಯ ವಿಷಯೇಽಲಂಕಾರಾಂತರನಿಬಂಧಃ ಸೋಽಪಿ ವಾಚ್ಯಾವಚನಂ ದೋಷಃ । ತತ್ರ ಸಮಾಸೋಕ್ತಿವಿಷಯೇ ಶ್ಲೇಷಸ್ಯೋಪನಿಬಂಧೋ ಯಥಾ–**

**ಅಲಕಾಲಿಕುಲಾಕೀರ್ಣಮಾರಕ್ತಚ್ಛದಸುಂದರಮ್ ।**
**ಆಮೋದಿಕರ್ಣಿಕಾಕಾಂತಂ ಭಾತಿ ತೇಽಬ್ಜಮಿವಾನನಮ್ ॥**

**ಅತ್ರ ಹಿ ಅಬ್ಜಸಮುಚಿತವಿಶೇಷಣೋಪಾದಾನಸಾಮರ್ಥ್ಯಾಕ್ಷಿಪ್ತಸ್ಯಾಬ್ಜಸ್ಯೋಪಮಾನ–ಭಾವಾವಗಮಃ ಸಮಾಸೋಕ್ತೇರೇವ ವಿಷಯೋ ಯುಕ್ತೋ, ನ ಶ್ಲೇಷಸ್ಯ, ತತ್ರೈವ**

**ತಸ್ಯಾನುಮೀಯಮಾನತಯಾ ಸಚೇತನಚಮತ್ಕಾರಕಾರಿತ್ವೋಪಪತ್ತೇಃ । ಶ್ಲೇಷೇ ತು ತಸ್ಯ ವಾಚ್ಯತಯಾ ತದ್ವಿಪರೀತತ್ವಾದಿತ್ಯುಕ್ತಮ್ ।**

**ಅನುವಾದ:**

ಎಲ್ಲಿ ಒಂದು ಅಲಂಕಾರದ ವಿಷಯದಲ್ಲಿ ಮತ್ತೊಂದು ಅಲಂಕಾರದ ನಿಬಂಧನವನ್ನು ಮಾಡಲಾಗುವುದೋ, ಅಲ್ಲಿ ಅದೂ ವಾಚ್ಯಾವಚನ ಎಂಬ ದೋಷವಾಗುವುದು. ಸಮಾಸೋಕ್ತಿಯ ವಿಷಯದಲ್ಲಿ ಶ್ಲೇಷದ ಉಪನಿಬಂಧನದ ಒಂದು ಉದಾಹರಣೆ (ಅಲಕಾಲಿ....)

ಮುಂಗುರುಳುಗಳೆಂಬ ದುಂಬಿಗಳ ಸಮೂಹದಿಂದ ಸುತ್ತುವರಿಯಲ್ಪಟ್ಟಿರುವ, ಸ್ವಲ್ಪ ಕೆಂಪಾದ ದಳಗಳಿಂದ (ತುಟಿಗಳಿಂದ) ಅಂದವಾಗಿರುವ, ಪರಿಮಳಭರಿತವಾದ (ಆನಂದಪೂರ್ಣವಾದ) ಕರ್ಣಿಕೆಯಿಂದ (ಬೀಜಕೋಶದಿಂದ ಅಥವಾ ಕಿವಿಯ ಆಭರಣದಿಂದ) ಹೊಳೆಯುತ್ತಿರುವ ನಿನ್ನ ಮುಖವು ತಾವರೆಯಂತೆ ಕಂಗೊಳಿಸುತ್ತಿದೆ.

ಈ ಪದ್ಯದಲ್ಲಿ ತಾವರೆಗೆ ಸಲ್ಲುವ ವಿಶೇಷಣಗಳನ್ನು ಹೇಳಿದಾಗ ಅದರ ಸಾಮರ್ಥ್ಯದಿಂದಲೇ ಮುಖಕ್ಕೆ ತಾವರೆಯ ಉಪಮಾನತ್ವವು ತಿಳಿದುಬರುವಂತೆ ಸಮಾಸೋಕ್ತಿಯ ವಿಷಯವಾಗುವುದು ಉಚಿತ. (ಆ ಉಪಮಾನೋಪಮೇಯ–ಭಾವವನ್ನು) ಶ್ಲೇಷದ ವಿಷಯವನ್ನಾಗಿ ಮಾಡಿರುವುದು ಸರಿಯಲ್ಲ. ಸಮಾಸೋಕ್ತಿಯಲ್ಲಿ ಉಪಮಾನಭಾವ ಅನುಮೀಯಮಾನವಾಗುವುದರಿಂದ ಸಹೃದಯರಿಗೆ ಚಮತ್ಕಾರ ಉಂಟಾಗುತ್ತದೆ. ಶ್ಲೇಷದಲ್ಲಿ ಅದು ವಾಚ್ಯವೇ ಆಗಿಬಿಡುವುದರಿಂದ ಚಮತ್ಕಾರವಿರೋಧವಾಗುತ್ತದೆ ಎಂದು ಹೇಳಿದ್ದೇವೆ.

**ಯಥಾ–**

**ಬಂಹೀಯಾಂಸೋ ಗರೀಯಾಂಸಃ ಸ್ಥವೀಯಾಂಸೋ ಗುಣಾಸ್ತವ ।**
**ಗುಣಾ ಇವ ನಿಬಧ್ನಂತಿ ಕಸ್ಯ ನಾಮ ನ ಮಾನಸಮ್ ॥**

**ಅತ್ರ ಹಿ ಮುಖ್ಯವೃತ್ತ್ಯಾ ನಿಬಂಧೋಽಪ್ರಸ್ತುತರಜ್ಜ್ವಾದಿಗುಣೈಕಕಾರ್ಯಃ ಶೌರ್ಯಾದಿಷು ಗುಣೇಷ್ವಾರೋಪಿತಃ ತೇಷಾಂ ಸಾಮರ್ಥ್ಯಾದೇವ ತತ್ಸಾಮ್ಯಮವಗಮಯತಿ ಇತ್ಯಯಮಪಿ ಸಮಾಸೋಕ್ತೇರೇವ ವಿಷಯೋ ಯುಕ್ತೋ, ನ ಶ್ಲೇಷಸ್ಯ ।**

**ನ ಹಿ ವಿಶೇಷಣಸಾಮ್ಯಮೇವೈಕಮಪ್ರಸ್ತುತಾರ್ಥಾವಗತಿಹೇತುಃ । ಯಥಾಹುಃ–**

**ಪ್ರಕೃತಾರ್ಥೇನ ವಾಕ್ಯೇನ ತತ್ಸಮಾನೈರ್ವಿಶೇಷಣೈಃ ।**
**ಅಪ್ರಸ್ತುತಾರ್ಥಕಥನಂ ಸಮಾಸೋಕ್ತಿರುದಾಹೃತಾ ॥ ಇತಿ ।**

**ಕಿಂ ತರ್ಹಿ? ತತ್ಕಾರ್ಯಸಮಾರೋಪೋಽಪೀತಿ 'ಗುಣಾ ಇವ' ಇತ್ಯಪಾಸ್ಯಮೇವ ।**

**ಅನುವಾದ:**

ಇನ್ನೊಂದು ಉದಾಹರಣೆ–

"ನಿನ್ನ ಗುಣಗಳು ಹೆಚ್ಚು ದೊಡ್ಡವೂ, ಹೆಚ್ಚು ಭಾರವುಳ್ಳವೂ, ಹೆಚ್ಚು ದಪ್ಪವಾದುವೂ ಆಗಿದೆ. ಗುಣ(ಹಗ್ಗ)ಗಳಂತೆ ಅವು ಯಾರ ಮನಸ್ಸನ್ನು ಕಟ್ಟಿಹಾಕುವುದಿಲ್ಲ?"

ಇಲ್ಲಿ ಮುಖ್ಯವಾದ (ಅಭಿಧಾ)ವೃತ್ತಿಯಿಂದ ನಿಬಂಧ (ಕಟ್ಟಿಹಾಕುವುದು) ಅಪ್ರಸ್ತುತವಾದ ಹಗ್ಗ ಎಂಬ ಗುಣಗಳ ಕಾರ್ಯವಾಗಿದ್ದು ಶೌರ್ಯ ಮುಂತಾದ ಗುಣಗಳಲ್ಲಿ ಆರೋಪಿತವಾಗಿದೆ. ಹಾಗೆ ಆರೋಪಿತವಾದ ಕಾರ್ಯವು ಸಾಮರ್ಥ್ಯದಿಂದಲೇ (ಶೌರ್ಯಾದಿಗುಣಗಳಿಗೂ ಹಗ್ಗಗಳಿಗೂ) ಸಾದೃಶ್ಯವನ್ನು ತಿಳಿಸಿಕೊಡುತ್ತದೆ. ಆದ್ದರಿಂದ ಇದೂ ಸಮಾಸೋಕ್ತಿಗೆ ವಿಷಯವಾಗುವುದೇ ಯುಕ್ತ, ಶ್ಲೇಷಕ್ಕಲ್ಲ. ವಿಶೇಷಣಸಾಮ್ಯವೊಂದೇ ಅಪ್ರಸ್ತುತಾರ್ಥದ ಜ್ಞಾನಕ್ಕೆ ಕಾರಣವೆಂದು ತಿಳಿಯಬಾರದು. ಕೆಲವರು ಹೇಳಿದ್ದಾರೆ–

"ಪ್ರಕೃತಾರ್ಥಕ್ಕಾಗಿ ಹೇಳಿದ ವಾಕ್ಯದಿಂದಲೇ ಸಮಾನವಿಶೇಷಣಗಳಿಂದ ಅಪ್ರಕೃತವಾದ ಅರ್ಥವನ್ನೂ ಹೇಳುವುದಕ್ಕೆ ಸಮಾಸೋಕ್ತಿ ಎನ್ನುತ್ತಾರೆ." (ಇದು ಸರಿಯಲ್ಲ) ಮತ್ತೇನು?

ಪ್ರಸ್ತುತದಲ್ಲಿ ಅಪ್ರಸ್ತುತದ ಕಾರ್ಯಸಮಾರೋಪವೂ ಅದರ ಜ್ಞಾನಕ್ಕೆ ಕಾರಣವಾಗುತ್ತದೆ. ಆದ್ದರಿಂದ (ಬಂಹೀಯಾಂಸಃ......... ಎಂಬ ಪದ್ಯದಲ್ಲಿ) ಗುಣಾ ಇವ' ಎಂಬ ಭಾಗವನ್ನು ಕಿತ್ತುಹಾಕಬೇಕು.

(ಶ್ಲೇಷದ ಸ್ಥಾನದಲ್ಲಿ ಉಪಮೆಯ ನಿಬಂಧನದೋಷ)

**ಶ್ಲೇಷಸ್ಯ ವಿಷಯೇ ಉಪಮಾಯಾ ಯಥಾ–**

**"ಭೈರವಾಚಾರ್ಯಸ್ತು ದೂರಾದೇವ ದೃಷ್ಟ್ವಾ ರಾಜಾನಂ ಶಶಿನಮಿವ ಜಲನಿಧಿಶ್ಚಚಾಲ" ಇತಿ ।**

**ಅತ್ರ ಹಿ ರಾಜಶಬ್ದ ಏವ ಉಭಯಾರ್ಥತ್ವಾಚ್ಛಶಿನಮಾಹೇತಿ**

**ಶ್ಲೇಷಸ್ಯಾಯಂ ವಿಷಯೋ ಯುಕ್ತಃ । ಯದತ್ರ ಪೃಥಕ್ ತಮ್**

**ಉಪಾದಾಯ ರಾಜಶಶಿನೋರುಪಮಾನೋಪಮೇಯಭಾವೋ–**

**ಪನಿಬಂಧಃ ಸೋಽಪಿ ವಾಚ್ಯಾವಚನಂ ದೋಷಃ । ಸ ಹ್ಯಾರ್ಥ**

**ಏವ ತದ್ವಿದಾಮಧಿಕಂ ಸ್ವದತೇ, ನ ಶಾಬ್ದ ಇತ್ಯುಕ್ತಮ್ । ಏವಂ–**

**ತದನ್ವಯೇ ಶುದ್ಧಿಮತಿ ಪ್ರಸೂತಃ ಶುದ್ಧಿಮತ್ತರಃ ।**

**ದಿಲೀಪ ಇತಿ ರಾಜೇಂದುರಿಂದುಃ ಕ್ಷೀರನಿಧಾವಿವ ॥ ಇತ್ಯತ್ರಾಪಿ ದ್ರಷ್ಟವ್ಯಮ್ ।**

**ಅನುವಾದ:**

ಶ್ಲೇಷದ ವಿಷಯದಲ್ಲಿ ಉಪಮೆಯನ್ನು ಬಳಸಿರುವುದಕ್ಕೆ ಉದಾಹರಣೆ– "ಭೈರವಾಚಾರ್ಯನಾದರೋ ಚಂದ್ರನಂತಿದ್ದ ರಾಜನನ್ನು ದೂರದಿಂದಲೇ ನೋಡಿ ಸಮುದ್ರದಂತೆ ಚಲಿಸಿದನು."

ಇಲ್ಲಿ ರಾಜ ಎಂಬ ಶಬ್ದವೇ ಎರಡೂ ಅರ್ಥಗಳನ್ನು ಹೊಂದಿರುವುದರಿಂದ ಚಂದ್ರನನ್ನೂ ತಿಳಿಸುತ್ತದೆ. ಆದ್ದರಿಂದ ಇದು ಶ್ಲೇಷಾಲಂಕಾರದ ವಿಷಯವಾಗುವುದು ಉಚಿತ. ಹಾಗೆ ಅದನ್ನು ಆರಂಭಿಸಿ ಅನಂತರ ರಾಜ–ಚಂದ್ರರಿಗೆ ಉಪಮಾನೋಪಮೇಯಭಾವವನ್ನು ಹೇಳಿರುವುದು ವಾಚ್ಯಾವಚನವೆಂಬ ದೋಷ. ಉಪಮಾನೋಪಮೇಯಭಾವವು ಆರ್ಥವಾಗಿದ್ದಾಗ ಸಹೃದಯರಾದ ಕಾವ್ಯಜ್ಞರಿಗೆ ಹೆಚ್ಚು ರುಚಿಸುತ್ತದೆ, ಶಾಬ್ದವಾಗಿದ್ದಾಗ ಅಲ್ಲ ಎಂದು ಮೊದಲೇ ಹೇಳಿದ್ದೇವೆ. ಇದೇ ರೀತಿಯಾಗಿ– "ಶುದ್ಧವಾಗಿದ್ದ ಆ (ಮನುವಿನ) ವಂಶದಲ್ಲಿ ಶುದ್ಧತರನಾಗಿದ್ದ ದಿಲೀಪನೆಂಬ ರಾಜೇಂದು ಕ್ಷೀರಸಮುದ್ರದಲ್ಲಿ ಚಂದ್ರನಂತೆ ಹುಟ್ಟಿದನು" ಎಂಬ ಪದ್ಯದಲ್ಲೂ (ವಾಚ್ಯಾವಚನದೋಷವಿರುವುದನ್ನು) ಕಾಣಬೇಕು.

**ಅತ್ರ ಹಿ ಶ್ಲೇಷವಿಷಯೇ ರೂಪಕಮಾಸೂತ್ರಿತಮನಾದೃತ್ಯ ಉಪಮಾನುರಾಗಿಣಾ ಕವಿನಾ ಸೈವೋಪನಿಬದ್ಧಾ । ನ ಚಾಸೌ ತಾಭ್ಯಾಂ ಸ್ಪರ್ಧಿತುಮುತ್ಸಹತೇ । ತಯೋರ್ಯಥಾಪೂರ್ವಂ ಪ್ರತೀಯಮಾನಾರ್ಥಸಂಸ್ಪರ್ಶಾತಿರೇಕಾತ್ ತದನುವಿಧಾಯಿನಃ ಸಹೃದಯೈಕಸಂವೇದ್ಯಸ್ಯ ಚಮತ್ಕಾರಾತಿರೇಕಸ್ಯ ಸಂಭವಾದಿತಿ ತಸ್ಯ ವಾಚ್ಯಸ್ಯಾವಚನಂ ದೋಷಃ॥**

**ರೂಪಕಸ್ಯ ವಿಷಯೇ ಉಪಮಾಯಾ ಯಥಾ–**

**ತತೋ ದ್ರುತಂ ವೈರಮದಾಭಿತಪ್ತಃ ಸೋಽತೀವ ರಮ್ಯಾದ್ ಭವನಾದ್ರಿಕುಂಜಾತ್ ।**
**ವಿನಿರ್ಯಯೌ ದಾನವಗಂಧಹಸ್ತೀ ಮಹಾದ್ರಿಕುಂಜಾದಿವ ಗಂಧಹಸ್ತೀ॥**

**ಅನುವಾದ:**

ಈ ಪದ್ಯದಲ್ಲಿ ಉಪಮಾಪ್ರಿಯನಾದ ಕವಿಯು ಮೊದಲು ಆಶ್ರಯಿಸಿದ್ದ ರೂಪಕವನ್ನು ಬಿಟ್ಟು ಶ್ಲೇಷವಿಷಯದಲ್ಲಿ ಉಪಮೆಯನ್ನು ಬಳಸಿದ್ದಾನೆ. ಉಪಮೆಯು ಶ್ಲೇಷ–ರೂಪಕಗಳೊಡನೆ ಸ್ಪರ್ಧಿಸಲು ಶಕ್ತವಲ್ಲ. ಅವೆರಡರಲ್ಲೂ ಪ್ರತೀಯಮಾನಾರ್ಥದ ಸಂಸ್ಪರ್ಶವು ಯಥಾಪೂರ್ವವಾಗಿ ಅತಿಶಯವನ್ನು ಹೊಂದಿರುತ್ತದೆ. ಅದಕ್ಕೆ ಅನುಗುಣವಾಗಿ ಸಹೃದಯರಿಗೆ ಮಾತ್ರ ತಿಳಿಯುವ ಚಮತ್ಕಾರದ ಅತಿಶಯವೂ ಉಂಟಾಗುತ್ತದೆ. ಆದ್ದರಿಂದ ಇಲ್ಲಿ ವಾಚ್ಯಾವಚನವೆಂಬ ದೋಷ.

ರೂಪಕದ ವಿಷಯದಲ್ಲಿ ಉಪಮೆಯನ್ನು ಬಳಸಿರುವುದಕ್ಕೆ ಉದಾಹರಣೆ–

"ಅನಂತರದಲ್ಲಿ ವೈರದಿಂದಲೂ ಮದದಿಂದಲೂ ಪ್ರೇರಿತನಾದ ಆ ರಾಕ್ಷಸರೂಪೀ ಗಂಧಗಜನು ವೇಗದಿಂದ ಅತಿರಮ್ಯವಾಗಿದ್ದ ಭವನವೆಂಬ ಬೆಟ್ಟದ

ಉದ್ಯಾನದಿಂದ ದೊಡ್ಡಬೆಟ್ಟದ ಉದ್ಯಾನದಿಂದ ಹೊರಡುವ ಗಂಧಗಜನಂತೆ ಹೊರಗೆ ಬಂದನು."

**ನ ಚಾತ್ರಾದ್ಯಾವಿಂದುಗಂಧಹಸ್ತಿಶಬ್ದೌ ಪ್ರಶಂಸಾವಾಚಿನೌ, ಅಪರೌ ಪುನರುಪಮಾವಾಚಿನಾವಿತಿ ತಯೋರ್ಭಿನ್ನಾರ್ಥತ್ವಾನ್ನ ಯಥೋಕ್ತದೋಷಾವಕಾಶ ಇತಿ ಯುಕ್ತಂ ವಕ್ತುಮ್ । ಆದ್ಯಾಭ್ಯಾಮೇವ ತಾಭ್ಯಾಮುಭಯಾರ್ಥಾವಗತಿಸಿದ್ಧೇಃ । ನನ್ವೇವಮ್–**

**ಅನಿರಾಕೃತತಾಪಸಂಪದಂ ಫಲಹೀನಾಂ ಸುಮನೋಭಿರುಜ್ಝಿತಾಮ್ ।**
**ಖಲತಾಂ ಖಲತಾಮಿವಾಸತೀಂ ಪ್ರತಿಪದ್ಯೇತ ಕಥಂ ಬುಧೋ ಜನಃ ॥**

**ಇತ್ಯಾದಿ ಕಾವ್ಯಮುಕ್ತದೋಷಯೋಗಾದಸದೇವ ಸ್ಯಾತ್ ।**

**ಅನುವಾದ:**

ಈ ಪದ್ಯದಲ್ಲಿ ಮೊದಲು ಬಂದಿರುವ ಇಂದು ಮತ್ತು ಗಂಧಹಸ್ತಿ ಎಂಬ ಶಬ್ದಗಳು ಪ್ರಶಂಸಾವಾಚಕಗಳು, (ಅನಂತರ ಬಂದಿರುವ) ಅವೇ ಶಬ್ದಗಳು ಉಪಮಾವಾಚಕಗಳು, ಆದ್ದರಿಂದ ಮೇಲೆ ಹೇಳಿದ ದೋಷಕ್ಕೆ ಅವಕಾಶವಿಲ್ಲ ಎಂದು ಹೇಳುವುದೂ ಸರಿಯಲ್ಲ. ಮೊದಲು ಬಂದಿರುವ ಆ ಎರಡು ಶಬ್ದಗಳಿಂದಲೇ ಎರಡು ಅರ್ಥಗಳ ಜ್ಞಾನವೂ ಉಂಟಾಗುತ್ತದೆಯಷ್ಟೆ?

ಹೀಗೆ ಹೇಳಿದರೆ– "ತಾಪದ ಆಧಿಕ್ಯವನ್ನು ಶಮನಗೊಳಿಸದ, ನಿಷ್ಫಲವಾದ, ಹೂವುಗಳಿಂದ (ಅಥವಾ ಒಳ್ಳೆಯ ಮನಸ್ಸುಳ್ಳವರಿಂದ ಅಥವಾ ದೇವತೆಗಳಿಂದ) ರಹಿತವಾದ, ಖಲತೆಯಂತೆ (ಆಕಾಶಬಳ್ಳಿಯಂತೆ) ಅಸತ್ತಾದ (ಅಸ್ತಿತ್ವವಿಲ್ಲದ ಅಥವಾ ಕೆಟ್ಟದ್ದಾದ) ಖಲತೆಯನ್ನು (ಖೂಳರ ಗುಂಪನ್ನು) ಪಂಡಿತಜನರು ಆಶ್ರಯಿಸುವುದಾದರೂ ಹೇಗೆ?"

ಇತ್ಯಾದಿ ಕಾವ್ಯವು ನೀವು ಹೇಳಿದ ದೋಷಗ್ರಸ್ತವಾಗಿರುವುದರಿಂದ ಅಸತ್ಕಾವ್ಯ (ಅಧಮಕಾವ್ಯ, ಅಕಾವ್ಯ)ವೇ ಆಗುವುದಲ್ಲ?

**ಮೈವಂ ವೋಚಃ । ಯತ್ರ ಹಿ ಯದಲಂಕಾರಪ್ರತಿಭಾನುಗುಣಶಬ್ದೋಪರಚಿತಃ ಶ್ಲೇಷಸ್ತತ್ರ ತದಲಂಕಾರನಿಬಂಧಃ ತಮೇವ ಶ್ಲೇಷಮಭಿವ್ಯನಕ್ತಿ, ನ ತು ತಸ್ಯ ವಿಷಯಮ್ ಆಕ್ರಾಮತೀತಿ ನಿಬಂಧನಾಂತರಾಭಾವೇ ಸತಿ ಉಪಾತ್ತಸ್ಯಾಪಿ ಶಬ್ದಸ್ಯ ಯದೇತದುಪಮಾನಾಭಿಧಾಯಿತಯಾ ದ್ವಿರುಪಾದಾನಂ ಸಾ ಶ್ಲೇಷಸ್ಯೈವಾಭಿವ್ಯಕ್ತಿಃ, ನ ತು ತತ್ರಾಲಂಕಾರಾಂತರಸಂಸ್ಪರ್ಶ ಇತಿ ತದತದ್ವಿಷಯತಾಶಂಕೈವಾತ್ರ ನಾವತರತೀತಿ ಉಕ್ತದೋಷದ್ವಯಯೋಗಾಸಿದ್ಧೇಃ ಕಥಮಿವಾಸ್ಯ ಕಾವ್ಯಸ್ಯ ದುಷ್ಟತಾ ಸ್ಯಾತ್?**

**ಅನುವಾದ:**

ಹೀಗೆನ್ನಬೇಡ. ಎಲ್ಲಿ ಯಾವ ಅಲಂಕಾರದ ಪ್ರತಿಭಾನಕ್ಕೆ (ತೋರುವಿಕೆಗೆ) ಅನುಕೂಲವಾದ ನುಡಿಗಳಿಂದ ಶ್ಲೇಷವು ಸಾಧಿತವಾಗುವುದೋ ಅಲ್ಲಿ ಆ

ಅಲಂಕಾರದ ಬಳಕೆಯು ಆ ಶ್ಲೇಷವನ್ನು ಪ್ರಕಟಗೊಳಿಸುತ್ತದೆ, ಅದು ಶ್ಲೇಷದ ಕ್ಷೇತ್ರವನ್ನು ಆಕ್ರಮಿಸಿಕೊಳ್ಳುವುದಿಲ್ಲ. ಆದ್ದರಿಂದ ಇಲ್ಲಿ ಬೇರೆ ಯಾವ ನಿಬಂಧನವೂ ಇಲ್ಲದೆ ಇರುವಾಗ ಉಪಾತ್ತವಾದ ಶಬ್ದಕ್ಕೆ ಉಪಮಾನವಾಚಕತ್ವಕ್ಕಾಗಿ ಎರಡು ಬಾರಿ ಉಚ್ಚಾರಣೆ ಏನಿದೆ, ಅದು ಶ್ಲೇಷಕ್ಕೇ ಅಭಿವ್ಯಂಜಕ, ಅದು ಬೇರೆ ಅಲಂಕಾರದ ಸ್ಪರ್ಶವಲ್ಲ. ಆದ್ದರಿಂದ (ಈ ಪದ್ಯದಲ್ಲಿ) ಶ್ಲೇಷದ ವಿಷಯವೋ ಬೇರೆ ಅಲಂಕಾರದ ವಿಷಯವೋ ಎಂಬ ಶಂಕೆಯೇ ಹುಟ್ಟುವುದಿಲ್ಲ. ಆದ್ದರಿಂದ ಹೇಳಿದ ಎರಡು ದೋಷಗಳ ಸಂಬಂಧವೂ ಇಲ್ಲದ ಕಾರಣದಿಂದ ಈ ಕಾವ್ಯ (=ಅನಿರಾಕೃತತಾಪ....... ಎಂಬ ಪದ್ಯ)ಕ್ಕೆ ದುಷ್ಟತ್ವ ಹೇಗೆ ಉಂಟಾಗುವುದು?

**ವಿವರಣೆ:**

ಖಲತಾ ಎಂಬ ಶಬ್ದಕ್ಕೆ ಖಲಾನಾಂ ಭಾವಃ ಖಲತಾ ಎಂದು ಒಂದು ಅರ್ಥ. ಖ+ಲತಾ (ಆಕಾಶದಲ್ಲಿರುವ ಬಳ್ಳಿ) ಎಂದು ಇನ್ನೊಂದು ಅರ್ಥ. ಈ ಶ್ಲೇಷದ ಅಭಿವ್ಯಕ್ತಿಗಾಗಿ ಉಪಮೆ. ಅದು ಶ್ಲೇಷದ ವಿಷಯವನ್ನಾಕ್ರಮಿಸದು.

**ಯದಲಂಕಾರವ್ಯಕ್ತ್ಯೈ ಯೇ ಶಬ್ದಾಸ್ತದಿತರೋಽಪಿ ತೈರೇವ ।**
**ವ್ಯಜ್ಯೇತಾಲ್ಪತರೈರ್ಯದಿ ತದಸೌ ಗೃಹ್ಯೇತ ಲಾಘವಾನ್ನಾನ್ಯಃ ॥**
**ನ ಹ್ಯಸ್ತಿ ನಿಜೇ ಕರ್ಮಣ್ಯಲಂಕೃತೀನಾಂ ಸ ಕಶ್ಚನಾತಿಶಯಃ ।**
**ಯೇನ ವಿಧೀಯೇತೈಕಾ ಪರಾ ನಿಷಿಧ್ಯೇತ ವಾ ಕವಿಭಿಃ ॥**
**ಇತಿ ಸಂಗ್ರಹಾರ್ಯೇ ।**

**ಅನುವಾದ:**

ಯಾವ ಅಲಂಕಾರದ ಅಭಿವ್ಯಕ್ತಿಗಾಗಿ ಯಾವ ಶಬ್ದಗಳನ್ನು ಬಳಸಲಾಗಿದೆಯೋ ಆ ಸ್ವಲ್ಪ ಶಬ್ದಗಳಿಂದಲೇ ಇನ್ನೊಂದು ಅಲಂಕಾರವೂ ವ್ಯಕ್ತವಾದರೆ, ಲಾಘವದ ಆಧಾರದ ಮೇಲೆ ಆ ಇನ್ನೊಂದು ಅಲಂಕಾರವನ್ನೇ (ಕವಿಯು) ಗ್ರಹಿಸಬೇಕು, ಬೇರೆಯ ಅಲಂಕಾರವನ್ನಲ್ಲ.

(ಶೋಭಾತಿಶಯಜನನವೆಂಬ) ತಮ್ಮ ಕಾರ್ಯದಲ್ಲಿ ಅಲಂಕಾರಗಳಿಗೆ (ಪರಸ್ಪರ) ಯಾವ ಅತಿಶಯವೂ (ವ್ಯತ್ಯಾಸವೂ) ಇಲ್ಲ. ಹಾಗಿದ್ದಿದ್ದರೆ ಒಂದನ್ನು ಗ್ರಹಿಸಬೇಕು, ಇನ್ನೊಂದನ್ನು ಕವಿಗಳು ತ್ಯಜಿಸಬೇಕು ಎನ್ನಬಹುದಾಗಿತ್ತು. ಇವೆರಡು ಅರ್ಥಸಂಗ್ರಹಕ್ಕಾಗಿ ಮಾಡಿದ ಆರ್ಯೆಗಳು.

**ವಿವರಣೆ:**

ಹಿಂದೆ ಉದಾಹರಿಸಿದ ಅಲಕಾಲಿಕುಲಾಕೀರ್ಣ ಇತ್ಯಾದಿಗಳಲ್ಲಿ ಶ್ಲೇಷದ ಅಭಿವ್ಯಕ್ತಿಗಾಗಿ ಅಬ್ದಮಿವ ಎಂಬುದನ್ನು ಕವಿಯು ಜೋಡಿಸಿದ್ದಾನೆ. ಅದಿಲ್ಲದಿದ್ದರೂ ಸಮಾಸೋಕ್ತಿ ಎಂಬ ಅಲಂಕಾರವು ಅಲ್ಲಿ ತೋರಿಬಂದು ಚಮತ್ಕಾರವನ್ನುಂಟು ಮಾಡುತ್ತದೆ. ಇಂಥ ಸಂದರ್ಭದಲ್ಲಿ ಕವಿಯು ಸಮಾಸೋಕ್ತಿಯನ್ನೇ ಆಶ್ರಯಿಸಿದರೆ ಲೇಸು.

ವಾಚ್ಯಾರ್ಥದ ದೃಷ್ಟಿಯಿಂದ ಮಾತ್ರ ನೋಡಿದಾಗ ಒಂದು ಅಲಂಕಾರವನ್ನು ಗ್ರಹಿಸುವುದಕ್ಕೆ ಅಥವಾ ಇನ್ನೊಂದನ್ನು ತ್ಯಜಿಸುವುದಕ್ಕೆ ಕಾರಣವಿಲ್ಲ. ವ್ಯಂಗ್ಯಾರ್ಥದ ದೃಷ್ಟಿಯಲ್ಲಿ ಕಾರಣವುಂಟು ಎಂಬುದನ್ನು ಗ್ರಂಥಕಾರನು ಮುಂದೆ ತಿಳಿಸಿದ್ದಾನೆ.

**ಕಿಂಚ ಸೌಂದರ್ಯಾತಿರೇಕನಿಷ್ಪತ್ತಯೇಽರ್ಥಸ್ಯ ಕಾವ್ಯಕ್ರಿಯಾರಂಭಃ ಕವೇಃ, ನ ತ್ವಲಂಕಾರ–ನಿಷ್ಪತ್ತಯೇ, ತೇಷಾಂ ನಾಂತರೀಕತಯೈವ ನಿಷ್ಪತ್ತಿಸಿದ್ಧೇಃ । ಭಂಗಿಭಣಿತಿಭೇದಾನಾ–ಮೇವಾಲಂಕಾರತ್ವೋಗಮಾತ್ । ತೇನಾತ್ರ ಸಮಾಸೋಕ್ತಿಶ್ಲೇಷಭಂಗಿಭ್ಯಾಮೇವಾರ್ಥಸ್ಯ ಯಥೋಕ್ತಚಮತ್ಕಾರಿತ್ವಸಿದ್ಧಿಃ, ನೋಪಮಯಾ ಇತಿ ತಯೋರ್ವಾಚ್ಯಯೋರ್ಯದವಚನಂ ಸ ದೋಷ ಏವ ।**

**ನ ಚಾಲಂಕಾರನಿಷ್ಪತ್ತ್ಯೈ ರಸಬಂಧೋದ್ಯತಃ ಕವಿಃ ।**
**ಯತತೇ ತೇ ಹಿ ತತ್ಸಿದ್ಧಿನಾಂತರೀಯಕಸಿದ್ಧಯಃ ॥**

**ಅನುವಾದ:**

ಅರ್ಥದ ಸೊಬಗನ್ನು ಅತಿಶಯದಿಂದ ಉಂಟುಮಾಡುವುದಕ್ಕಾಗಿ ಕವಿಯು ಕಾವ್ಯವನ್ನು ರಚಿಸುತ್ತಾನೆ, ಅಲಂಕಾರಗಳನ್ನು ಹೊಸೆಯುವುದಕ್ಕಲ್ಲ. ಅವು ತಾವಾಗಿಯೇ ಉಂಟಾಗುತ್ತವೆ. ಏಕೆಂದರೆ ಮಾತಿನ ವಿಚಿತ್ರ ಪ್ರಕಾರಗಳೇ ಅಲಂಕಾರಗಳು ಎಂದು ನಾವು ಒಪ್ಪಿಕೊಂಡಿದ್ದೇವೆ. ಆದ್ದರಿಂದ ಈ (ಅಲಕಾಲಿ....) ಪದ್ಯದಲ್ಲಿ ಸಮಾಸೋಕ್ತಿಶ್ಲೇಷಗಳಿಂದಲೇ ಅರ್ಥಕ್ಕೆ ಚಮತ್ಕಾರಕಾರಣತ್ವವು ಸಿದ್ಧವಾಗುತ್ತದೆ, ಉಪಮಾಲಂಕಾರದಿಂದಲ್ಲ. ಹೀಗೆ ಇಲ್ಲಿ ಬಳಸಬೇಕಾದ ಅವುಗಳನ್ನು ಬಿಟ್ಟಿರುವುದರಿಂದ ವಾಚ್ಯಾವಚನ ಎಂಬ ದೋಷ.

ಅಲಂಕಾರಗಳನ್ನು ನಿಷ್ಪಾದಿಸಲು ರಸಬಂಧಕ್ಕಾಗಿ ತೊಡಗಿದ ಕವಿಯು ಎಂದೂ ಪ್ರಯತ್ನಿಸುವುದಿಲ್ಲ. ಆ ಅಲಂಕಾರಗಳು ಅವ್ಯಭಿಚರಿತವಾಗಿ ತಾವೇ ಸಿದ್ಧಿಸುತ್ತವೆ.

(ಅಲಂಕಾರಗಳ ಪ್ರಯೋಜನ)

**ಯತಃ–**

**ರಸಸ್ಯಾಂಗಂ ವಿಭಾವಾದ್ಯಾಃ ಸಾಕ್ಷಾನ್ನಿಷ್ಪಾದಕತ್ವತಃ ।**
**ತದ್ವೈಚಿತ್ರ್ಯೋಕ್ತಿವಪುಷೋಽಲಂಕಾರಾಸ್ತು ತದಾಶ್ರಯಾಃ ॥**
**ತೇನೈಷಾಮಪ್ರಧಾನತ್ವಾದಾಧಾನೋದ್ಧರಣಾದಯಃ ।**
**ಚಾರುತಾಪೇಕ್ಷಯಾರ್ಥಸ್ಯ ಕಲ್ಪ್ಯಂತೇ ಕವಿನಾ ಸ್ವಯಮ್ ॥**

**ಯದಾಹುಃ–**

**ಮುಖ್ಯಾ ಮಹಾಕವಿಗಿರಾಮಲಂಕೃತಿಭೃತಾಮಪಿ ।**
**ಪ್ರತೀಯಮಾನಚ್ಛಾಯೈವ ಭೂಷಾ ಲಜ್ಜೇವ ಯೋಷಿತಾಮ್ ॥ ಇತಿ।**
**ಅತ ಏವ ಬಹುಷ್ವನ್ಯೇಷ್ವಲಂಕಾರೇಷು ಸತ್ಸ್ವಪಿ ।**
**ಕಾಂಶ್ಚಿದೇವ ನಿಬಧ್ನಾತಿ ಶಕ್ತಿಮಾನಪಿ ಸತ್ಕವಿಃ ॥**

**ಯತಃ ಸರ್ವೇಷ್ವಲಂಕಾರೇಷೂಪಮಾ ಜೀವಿತಾಯತೇ ।**
**ಸಾ ಚ ಪ್ರತೀಯಮಾನೈವ ತದ್ವಿದಾಂ ಸ್ವದತೇತರಾಮ್ ।**

**ಅನುವಾದ:**

ಏಕೆಂದರೆ– ಸಾಕ್ಷಾತ್ ರಸದ ನಿಷ್ಪಾದಕಗಳಾಗಿರುವುದರಿಂದ ವಿಭಾವಾದಿಗಳು ರಸದ ಅಂಗಗಳು. ರಸವನ್ನು ಆಶ್ರಯಿಸುವ ಅಲಂಕಾರಗಳು ವಿಭಾವಾದಿಗಳ ವೈಚಿತ್ರ್ಯವನ್ನು ತಿಳಿಸುವುವು. ಆದ್ದರಿಂದ ಅಲಂಕಾರಗಳು ಅಪ್ರಧಾನ. ಅವುಗಳಲ್ಲಿ ಯಾವುವನ್ನು ಎಷ್ಟು ತೆಗೆದುಕೊಳ್ಳಬೇಕು, ಯಾವುವನ್ನು ಬಿಡಬೇಕು ಎಂದು ಅರ್ಥದ ಸೊಬಗಿನ ದೃಷ್ಟಿಯಿಂದ ಕವಿಯು ತಾನೇ ನಿರ್ಣಯಿಸಿಕೊಳ್ಳುತ್ತಾನೆ. (ಆನಂದವರ್ಧನನೂ) ಹೇಳಿದ್ದಾನೆ– "ಅಲಂಕಾರಗಳಿಂದ ಕೂಡಿರುವ ಮಹಾಕವಿವಾಕ್ಯಗಳಿಗೂ ಮುಖ್ಯವಾದ ಸೌಂದರ್ಯಕಾರಣವು ವ್ಯಂಗ್ಯಾರ್ಥದ ಸೊಬಗೇ, ಒಡವೆಗಳನ್ನು ಧರಿಸಿರುವ ಹೆಂಗಸರಿಗೂ ಲಜ್ಜೆಯೇ ಭೂಷಣವಾಗುವಂತೆ."

ಆದ್ದರಿಂದಲೇ ಅನೇಕ ಅಲಂಕಾರಗಳು ಸಂಭವಿಸುತ್ತಿದ್ದರೂ ಶಕ್ತಿಮಂತನಾದ ಸತ್ಕವಿಯು ಕೆಲವನ್ನು ಮಾತ್ರ ಬಳಸಿಕೊಳ್ಳುತ್ತಾನೆ.

ಎಲ್ಲ ಅಲಂಕಾರಗಳಲ್ಲಿ ಪ್ರಾಣದಂತೆ ಇರುವುದು ಉಪಮೆ. ಅದು ಪ್ರತೀಯಮಾನವಾಗಿದ್ದಾಗ ಕಾವ್ಯಜ್ಞರಿಗೆ ಹೆಚ್ಚು ರುಚಿಸುತ್ತದೆ.

**ರೂಪಕಾದಿರಲಂಕಾರವರ್ಗೋ ಯಮಕ ಏವ ಹಿ ।**
**ತತ್ಪ್ರಪಂಚತಯಾ ಪ್ರೋಕ್ತಃ ಕೈಶ್ಚಿತ್ತತ್ತ್ವಾರ್ಥದರ್ಶಿಭಿಃ ॥**
**ಇತಿ ಸಂಗ್ರಹಶ್ಲೋಕಾಃ ।**

(ಶಬ್ದಶ್ಲೇಷ ಮತ್ತು ಅರ್ಥಶ್ಲೇಷ)

**ಸ ಚಾಯಂ ದ್ವಿವಿಧಃ ಶ್ಲೇಷಃ ಶಬ್ದಾರ್ಥವಿಷಯತಯೋಚ್ಯತೇ ।**
**ತತ್ರ ಶಬ್ದವಿಷಯೋ ಯಥಾ–**
**ಯತ್ರಾನ್ಯೂನಾತಿರಿಕ್ತೇನ ಸಾದೃಶ್ಯಂ ವಸ್ತುನೋರ್ದ್ವಯೋಃ ।**
**ಶಬ್ದಮಾತ್ರೇಣ ಕಥ್ಯೇತ ಸ ಶಬ್ದಶ್ಲೇಷ ಇಷ್ಯತೇ ॥**
**ಸ ಶಬ್ದೈಃ ಕರ್ತೃಕರ್ಮಾದಿಪ್ರಧಾನಾರ್ಥಾವಿನಾಕೃತೈಃ ।**
**ನಿಬದ್ಧೋ ಧರ್ಮಿಧರ್ಮಾರ್ಥೈರ್ದ್ವಿವಿಧಃಪರಿಕೀರ್ತಿತಃ ॥**
**ಇತ್ಥಂ ಸಮಾಸತೋ ಜ್ಞೇಯಂ ಶಬ್ದಶ್ಲೇಷಸ್ಯ ಲಕ್ಷಣಮ್ ।**
**ಅಪರಸ್ತು ಪ್ರಸಿದ್ಧತ್ವಾದಿಹಾಸ್ಮಾಭಿರ್ನ ಲಕ್ಷಿತಃ ॥**

**ಅನುವಾದ:**

ತತ್ತ್ವಾರ್ಥದರ್ಶಿಗಳಾಗಿದ್ದ ಕೆಲವರು ರೂಪಕ ಮುಂತಾದ ಅಲಂಕಾರಗಳ ಸಮೂಹವನ್ನೂ ಯಮಕವನ್ನೂ ಉಪಮಾಪ್ರಪಂಚ ಎಂದು ಕರೆದಿದ್ದಾರೆ. ಇವು ಸಂಗ್ರಹಶ್ಲೋಕಗಳು.

ಶಬ್ದವಿಷಯ, ಅರ್ಥವಿಷಯ ಎಂದು ಶ್ಲೇಷವು ಎರಡು ವಿಧ ಎನ್ನಲಾಗಿದೆ. ಅವುಗಳಲ್ಲಿ ಶಬ್ದವಿಷಯಶ್ಲೇಷ–

ಎಲ್ಲಿ ಎರಡು ಪದಾರ್ಥಗಳ ಸಾದೃಶ್ಯವು ಹೆಚ್ಚೂ ಅಲ್ಲದ ಕಡಿಮೆಯೂ ಅಲ್ಲದ ಶಬ್ದದಿಂದಲೇ ಪ್ರತಿಪಾದಿತವಾಗುವುದೋ ಅಲ್ಲಿ ಶಬ್ದಶ್ಲೇಷ.

ಕರ್ತೃ, ಕರ್ಮ ಮುಂತಾದ ಪ್ರಧಾನಾರ್ಥದಿಂದ ಕೂಡಿದ ಧರ್ಮಿ–ಧರ್ಮರೂಪವಾದ ಅರ್ಥಗಳನ್ನು ಹೊಂದಿರುವ ಶಬ್ದಗಳಿಂದ ನಿಬದ್ಧವಾಗುವುದರಿಂದ ಎರಡು ವಿಧ ಎನ್ನಲಾಗಿದೆ.

ಹೀಗೆ ಶಬ್ದಶ್ಲೇಷದ ಲಕ್ಷಣವನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕು. ಇನ್ನೊಂದು (=ಅರ್ಥಶ್ಲೇಷವು) ಪ್ರಸಿದ್ಧವಾಗಿರುವುದರಿಂದ ಅದರ ಲಕ್ಷಣವನ್ನು ನಾವು ಹೇಳಿಲ್ಲ.

**ಉಭಯತ್ರಾಪ್ಯಭಿವ್ಯಕ್ತ್ಯೈವಾಚ್ಯಂ ಕಿಂಚಿನ್ನಿಬಂಧನಮ್ ।**
**ಅನ್ಯಥಾ ವ್ಯರ್ಥ ಏವ ಸ್ಯಾಚ್ಛ್ಲೇಷಬಂಧೋದ್ಯಮಃ ಕವೇಃ ॥**
**ತತ್ರ ಧರ್ಮ್ಯರ್ಥಸ್ಯ ಶ್ಲೇಷಾದಭಿನ್ನತ್ವಂ ಯಥಾ–**
**ಅತ್ರಾಂತರೇ ಫುಲ್ಲಮಲ್ಲಿಕಾಧವಲಾಟ್ಟಹಾಸಃ ಕುಸುಮಸಮಯ–**
**ಯುಗಮುಪಸಂಹರನ್ನಜೃಂಭತ ಗ್ರೀಷ್ಮಾಭಿಧಾನೋ ಮಹಾಕಾಲಃ ।**
**ಇತಿ । ಅತ್ರ ಹಿ ಸಮಾಸೋಕ್ತಿನಿಬಂಧನಾ ದೇವತಾವಿಶೇಷವಾಚಿನೋ**
**ಮಹಾಕಾಲಶಬ್ದಸ್ಯಾವೃತ್ತಿಃ, ನ ತು ತಸ್ಯೈವ ಉಭಯಾರ್ಥತ್ವನಿಬಂಧನೇತಿ ವಕ್ಷ್ಯತೇ ।**
**ನಿಬಂಧನಾಭಾವೇ ತು ತಸ್ಯ ದುಷ್ಟತೈವ । ಯಥಾ–**
**ಆಚ್ಛಾದಿತಾಯತದಿಗಂಬರಮುಚ್ಚಕೈರ್ಗಾಮ್**
**ಆಕ್ರಮ್ಯ ಚ ಸ್ಥಿತಮುದಗ್ರವಿಶಾಲಶೃಂಗಮ್ ।**
**ಮೂರ್ಧ್ನಿ ಸ್ಖಲತ್ತುಹಿನದೀಧಿತಿಕೋಟಿಮೇನಮ್**
**ಉದ್ವೀಕ್ಷ್ಯ ಕೋ ಭುವಿ ನ ವಿಸ್ಮಯತೇ ಗಿರೀಶಮ್ ॥ ಇತಿ ।**

**ಅನುವಾದ:**

ಶಬ್ದಶ್ಲೇಷದಲ್ಲೂ ಅರ್ಥಶ್ಲೇಷದಲ್ಲೂ ಶ್ಲೇಷದ ಅಭಿವ್ಯಕ್ತಿಗಾಗಿ ಯಾವುದನ್ನಾದರೂ ನಿಬಂಧನವನ್ನು ಹೇಳಬೇಕು. ಇಲ್ಲದಿದ್ದರೆ ಕವಿಯು ಶ್ಲೇಷವನ್ನು ತರುವುದಕ್ಕಾಗಿ ಮಾಡಿದ ಪ್ರಯತ್ನ ವ್ಯರ್ಥವಾದೀತು.

ಧರ್ಮಿರೂಪದ ಅರ್ಥವು ಶ್ಲೇಷದಿಂದ ಅಭಿನ್ನವಾಗುವುದಕ್ಕೆ ಉದಾಹರಣೆ– "ಈ ಮಧ್ಯದಲ್ಲಿ ಅರಳಿದ ಮಲ್ಲಿಗೆಯಂತೆ ಬಿಳುಪಾದ ನಗೆಯನ್ನು ಬೀರಿದ ಗ್ರೀಷ್ಮನೆಂಬ ಮಹಾಕಾಲನು ಕುಸುಮಸಮಯಯುಗವನ್ನು ಮುಗಿಸಿ ವಿಜೃಂಭಿಸಿದನು."

ಇಲ್ಲಿ ದೇವತಾವಿಶೇಷವಾಚಕವಾದ ಮಹಾಕಾಲ ಎಂಬ ಶಬ್ದದ ಆವೃತ್ತಿಗೆ ಸಮಾಸೋಕ್ತಿಯು ನಿಬಂಧನವಾಗಿದೆ. ಆ ಶಬ್ದವು ಎರಡು ಅರ್ಥಗಳನ್ನು ಹೊಂದಿರುವುದು ಅದಕ್ಕೆ ನಿಬಂಧನವಲ್ಲ ಎಂದು ಮುಂದೆ ಪ್ರತಿಪಾದಿಸಲಾಗುವುದು.

ನಿಬಂಧನವು ಇಲ್ಲದಿದ್ದರೆ ಅಂಥ ಶ್ಲೇಷರಚನೆಯು ದುಷ್ಟವೇ. ಉದಾಹರಣೆ– ಈ ಬೆಟ್ಟವು ದಿಕ್ಕುಗಳನ್ನೂ ಆಕಾಶವನ್ನೂ ಮುಚ್ಚಿದೆ. ಎತ್ತರವಾಗಿದ್ದು ಭೂಮಿಯನ್ನು ಆಕ್ರಮಿಸಿ ನಿಂತಿದೆ. ಉನ್ನತವಾದ, (ವಿಶಾಲವಾದ) ಶಿಖರವನ್ನು ಹೊಂದಿದೆ. ಅದರ ತುದಿಯಲ್ಲಿ ತೊಡರುವ ಚಂದ್ರನ ಕಿರಣಕೋಟಿಗಳಿವೆ. ಇದನ್ನು ನೋಡಿ ಯಾರು ತಾನೆ ಬೆರಗಾಗುವುದಿಲ್ಲ? ವಿಶಾಲವಾದ ದಿಗಂಬರವನ್ನುಟ್ಟಿದ್ದಾನೆ ಗಿರೀಶ (ಶಿವ). ಎತ್ತರವಾಗಿರುವ ನಂದಿಯನ್ನು ಏರಿ ಕುಳಿತಿದ್ದಾನೆ. ಆ ನಂದಿಯು ಉದ್ದವಾದ ಕೊಂಬುಗಳಿಂದ ಶೋಭಿಸಿದ್ದಾನೆ. ಶಿವನ ತಲೆಯಲ್ಲಿ ಚಂದ್ರನ ಕಲೆ ಕಂಗೊಳಿಸುತ್ತಿದೆ. ಅವನನ್ನು ನೋಡಿ ಯಾರಿಗೆ ತಾನೆ ವಿಸ್ಮಯವು ಉಂಟಾಗದು?)

(ಶ್ಲೇಷದಲ್ಲಿ ವಾಚ್ಯಾವಚನ)

**ಅತ್ರ ಹಿ ಆವೃತ್ತಿನಿಬಂಧನಂ ನ ಕಿಂಚಿದುಕ್ತಮಿತಿ ತಸ್ಯ ವಾಚ್ಯಸ್ಯಾವಚನಂ ದೋಷಃ । ನ ಚ ಸಕೃತ್ಪ್ರಯುಕ್ತೋಽಯಮ್ ಗಿರೀಶಶಬ್ದ ಏವ ಉಭಯಾರ್ಥತ್ವಾತ್ ಶ್ವೇತೋ ಧಾವತೀತಿವತ್ ಯಥಾಯೋಗಂ ಪ್ರದೀಪವತ್ ತಂತ್ರೇಣ ಪ್ರಸಂಗೇನ ವಾ ಅರ್ಥಾಂತರಪ್ರತೀತಿನಿಬಂಧನಮ್ ಇತಿ ಶಕ್ಯತೇ ವಕ್ತುಮ್ । ತಯೋಃ ಪ್ರತಿಪತ್ತೃಪರಾಮರ್ಶಾನಪೇಕ್ಷಂ ಪ್ರದೀಪಸ್ಯ ಅಪರಪದಾರ್ಥವಿಷಯತ್ವೇನ ಪ್ರವೃತ್ತಿದರ್ಶನಾತ್ । ನ ಶಬ್ದವಿಷಯತೈವಮ್ । ಶಬ್ದೋ ಹಿ ಪ್ರತಿಪತ್ತೃಪರಾಮರ್ಶಮ್ ಅಂತರೇಣ ನಾರ್ಥಾಂತರೇ ಪ್ರತೀತಿಮಾಧಾತುಮಲಮ್ । ಪರಾಮರ್ಶಶ್ಚ ನಿರ್ನಿಬಂಧನೋ ನ ಭವಿತುಮರ್ಹತಿ । ಅತಿ– ಪ್ರಸಂಗಾತ್ । ನಿಬಂಧನಂ ಚಾತ್ರ ನ ಕಿಂಚಿದುಪಕಲ್ಪ್ಯತೇ ಇತಿ ವ್ಯರ್ಥಃ ಶ್ಲಿಷ್ಟಾರ್ಥಶಬ್ದಾನ್ವೇಷಣಪ್ರಯಾಸಃ ಕವೇಃ ।**

**ಅನುವಾದ:**

ಈ ಪದ್ಯದಲ್ಲಿ ಆವೃತ್ತಿನಿಬಂಧನವನ್ನು ಯಾವುದನ್ನೂ ಹೇಳಿಲ್ಲ. ಹೇಳಬೇಕಾದ ಅದನ್ನು ಹೇಳದಿರುವುದರಿಂದ ವಾಚ್ಯಾವಚನ ದೋಷ. ಒಮ್ಮೆ ಪ್ರಯುಕ್ತವಾದ ಗಿರೀಶಶಬ್ದವೇ ಎರಡು ಅರ್ಥಗಳನ್ನು ಹೊಂದಿರುವುದರಿಂದ ಶ್ವೇತೋ ಧಾವತಿ (ಬಿಳಿಯವನು ಓಡುತ್ತಿದ್ದಾನೆ–ಅಥವಾ ನಾಯಿ ಇಲ್ಲಿಂದ ಓಡುತ್ತಿದೆ) ಎಂಬ ವಾಕ್ಯದಂತೆ, ದೀಪದಂತೆ ತಂತ್ರದಿಂದ ಅಥವಾ ಪ್ರಸಂಗದಿಂದ ಇನ್ನೊಂದು ಅರ್ಥದ ಪ್ರತೀತಿಗೆ ನಿಬಂಧನವಾಗುತ್ತದೆ ಎಂದೂ ಹೇಳಲಾಗದು.

ಏಕೆಂದರೆ ದೀಪವು ಒಂದಲ್ಲದೆ ಇನ್ನೊಂದು ವಸ್ತುವನ್ನು ತೋರಿಸುವುದಕ್ಕೆ ನೋಡುವವನು ಬುದ್ಧಿಯಿಂದ ಪರಾಮರ್ಶಿಸಬೇಕಾಗಿಲ್ಲ. ಆದರೆ ಶಬ್ದದ ವಿಷಯ ಹಾಗಲ್ಲ. ಪ್ರತಿಪತ್ತೃವಿನ ಪರಾಮರ್ಶವಿಲ್ಲದೆ ಶಬ್ದವು ಇನ್ನೊಂದು ಅರ್ಥದಲ್ಲಿ ಪ್ರತೀತಿಯನ್ನುಂಟುಮಾಡಲು ಸಮರ್ಥವಲ್ಲ. ನಿಬಂಧನವೇ ಇಲ್ಲದೆ ಪರಾಮರ್ಶವು ಉಂಟಾಗಲಾರದು, ಹಾಗೆ (ನಿರ್ನಿಬಂಧನ ಪರಾಮರ್ಶವನ್ನು ಒಪ್ಪಿಕೊಂಡರೆ) ಅತಿಪ್ರಸಂಗ ಎಂಬ ದೋಷ ಉಂಟಾದೀತು. ಈ ಪದ್ಯದಲ್ಲಿ ಯಾವ ನಿಬಂಧನವನ್ನೂ ಹೇಳಿಲ್ಲ. ಆದ್ದರಿಂದ ಅನೇಕಾರ್ಥಶಬ್ದಗಳನ್ನು ಹುಡುಕಲು ಕವಿಯು ಪಟ್ಟ ಪರಿಶ್ರಮವು ವ್ಯರ್ಥ.

**ಯಥಾ ಚ–**
**ವಿದಧತಃ ಪಥಿಕಕ್ಷಪಣಂ ಪ್ರತಿ**
**ಸ್ಮೃತಿಭುವೋ ನಿಜಶಕ್ತ್ಯುಪಬೃಂಹಣಮ್ ।**
**ದಧುರಹಾರ್ಯಭಟಾಃ ಸಹಕಾರಿತಾ–**
**ಮನವಮಾ ನವಮಾಧವಸಂಗಿನಃ ॥**
**ಅತ್ರ ಹಿ ಸಹಕಾರಿಶಬ್ದೇನ ಸಹಕರ್ತುಂ ಶೀಲತ್ವಂ ಸಹಕಾರ–**
**ಸಂಬಂಧಶ್ಚೇತ್ಯುಭಯೋಽರ್ಥ: ಶ್ಲೇಷೇಣ ವಿವಕ್ಷಿತಃ ।**
**ತತ್ರ ರಮ್ಯತಾತಿರೇಕಲಕ್ಷಣಃ ಏಕ ಏವ ತತಃ ಪ್ರತೀಯತೇ ।**
**ನಾಪರೋ ನಿಬಂಧನಾಭಾವಾದಿತಿ ತಸ್ಯ ವಾಚ್ಯಸ್ಯಾವಚನಂ ದೋಷಃ ।**
**ಏಕೋಽನೇಕಾರ್ಥಕೃದ್ ಯತ್ರ ಸ್ವಭಾವೇನೈವ ದೀಪವತ್ ।**
**ಸಮಯಸ್ಮೃತ್ಯನಾಕಾಂಕ್ಷಃ ತಂತ್ರಸ್ಯ ವಿಷಯೋ ಹಿ ಸಃ ॥**
**ಶಬ್ದೇ ಹ್ಯಸಿದ್ಧಮೇಕತ್ವಂ ಪ್ರತ್ಯರ್ಥಂ ತಸ್ಯ ಭೇದತಃ ।**
**ಸಾದೃಶ್ಯವಿಪ್ರಲಬ್ಧಸ್ತು ಲೋಕಸ್ತತ್ತ್ವಮವಸ್ಯತಿ ॥**

**ಅನುವಾದ:**

ಇನ್ನೊಂದು ಉದಾಹರಣೆ– "ಬೆಟ್ಟಗಳೆಂಬ ಅಧಮರಲ್ಲದ ಭಟರು ಹೊಸ ವಸಂತನೊಡನೆ ಸೇರಿದ್ದ ಮನ್ಮಥನಿಗೆ ಅವನು ದಾರಿಹೋಕರ ವಿನಾಶವನ್ನು ಮಾಡಲು ತೊಡಗಿದಾಗ ಅವನ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಸಹಕಾರಿತ್ವವನ್ನು ನೀಡಿದರು."

ಇಲ್ಲಿ ಸಹಕಾರಿ ಎಂಬ ಶಬ್ದದಿಂದ ಸಹಕಾರವನ್ನು ನೀಡುವ ಸ್ವಭಾವ ಮತ್ತು ಮಾವಿನ ಮರಗಳ ಸಂಬಂಧ ಎಂಬ ಎರಡು ಅರ್ಥಗಳು ಶ್ಲೇಷದಿಂದ ವಿವಕ್ಷಿತವಾಗಿವೆ. ಅವುಗಳಲ್ಲಿ ಸೊಬಗಿನ ಅತಿಶಯವನ್ನುಂಟುಮಾಡುವುದು ಎಂಬ ಒಂದೇ ಅರ್ಥವು ತೋರುತ್ತದೆ. ನಿಬಂಧನವಿಲ್ಲದೆ ಇರುವುದರಿಂದ ಇನ್ನೊಂದು ಅರ್ಥವು ತೋರುವುದಿಲ್ಲ. ಹೀಗೆ ಹೇಳಬೇಕಾದ ನಿಬಂಧನವನ್ನು ಹೇಳಿಲ್ಲದಿರುವುದರಿಂದ ವಾಚ್ಯಾವಚನವೆಂಬ ದೋಷ.

ಒಂದೇ ವಸ್ತುವು ಸಂಕೇತಸ್ಮೃತಿಯ ಅಪೇಕ್ಷೆಯಿಲ್ಲದೆ ಸ್ವಭಾವದಿಂದಲೇ ದೀಪದಂತೆ ಅನೇಕ ಕಾರ್ಯಗಳನ್ನು ಮಾಡಿದರೆ ಅದು ತಂತ್ರದ ವಿಷಯ.

ಒಂದೊಂದು ಅರ್ಥವನ್ನು ಹೇಳುವುದಕ್ಕೂ ಶಬ್ದವು ಭಿನ್ನವಾಗಿರುವುದರಿಂದ ಶಬ್ದದ ಏಕತ್ವವೇ ಅಸಿದ್ಧ. ಆದರೆ ಸಾದೃಶ್ಯದಿಂದ ಮೋಸಹೋದ ಜನರು ಶಬ್ದವು ಒಂದೇ ಎಂದುಕೊಳ್ಳುತ್ತಾರೆ.

**ನೈತಾವತಾವಗಂತವ್ಯಾ ತಸ್ಯಾನೇಕಾರ್ಥವೃತ್ತಿತಾ ।**
**ನಾತ ಏವ ಪ್ರಸಂಗಸ್ಯ ಪದಂ ಶಬ್ದೋಽವಕಲ್ಪತೇ ॥**
**ನ ಚಾನಿಬಂಧನಾ ಯುಕ್ತಾ ಶಬ್ದಸ್ಯಾರ್ಥಾಂತರೇ ಗತಿಃ ।**
**ತಚ್ಚಾನೇಕವಿಧಂ ಪ್ರೋಕ್ತಮವ್ಯಯಾನವ್ಯಯಾತ್ಮಕಮ್ ॥**
**ತಸ್ಮಾದರ್ಥಾಂತರವ್ಯಕ್ತಿಹೇತೌ ಕಸ್ಮಿಂಶ್ಚನಾಸತಿ ।**
**ಯಃ ಶ್ಲೇಷಬಂಧನಿರ್ಬಂಧಃ ಕ್ಲೇಶಾಯೈವ ಕವೇರಸೌ ॥**
**ಇತಿ ಸಂಗ್ರಹಶ್ಲೋಕಾಃ । ಧರ್ಮಾರ್ಥಸ್ಯ ಯಥಾ–**
**ಪ್ರಕಟಕುಲಿಶಕುಂತಚಕ್ರಭಾಸ್ವತ್–**
**ಪರಬಲಭೀಹಿತಮತ್ತವಾರಣಾಂಕಾ ।**
**ದಿಶಿದಿಶಿ ದದೃಶೇ ನಿಶಾಂತಪಂಕ್ತಿಃ**
**ಸಮರ ವಿಮರ್ದಭುವಂ ವಿಡಂಬಯಂತೀ ।**

**ಅನುವಾದ:**

ಇಷ್ಟುಮಾತ್ರದಿಂದ ಶಬ್ದವು ಅನೇಕಾರ್ಥವನ್ನು ಉಳ್ಳದ್ದು ಎಂದು ತಿಳಿಯಬಾರದು. ಆದ್ದರಿಂದಲೇ ಶಬ್ದವು ಪ್ರಸಂಗದ ವಿಷಯವೂ ಆಗಲಾರದು. ಶಬ್ದವು ಅರ್ಥಾಂತರದಲ್ಲಿ ಗತಿಯನ್ನು ನಿಬಂಧನವಿಲ್ಲದೆ ಹೊಂದುತ್ತದೆ ಎನ್ನುವುದು ಸರಿಯಲ್ಲ. ನಿಬಂಧನವು ಅವ್ಯಯರೂಪ, ಅನವ್ಯಯರೂಪ ಎಂದು ಅನೇಕ ವಿಧವಾಗಿರುತ್ತದೆ. ಆದ್ದರಿಂದ ಎರಡನೆಯ ಅರ್ಥದ ತೋರುವಿಕೆಗೆ ಕಾರಣವಾಗುವ ಯಾವ ನಿಬಂಧನವೂ ಇಲ್ಲದಿರುವಾಗ ಶ್ಲೇಷದ ರಚನೆಗಾಗಿ ಕವಿ ಪಡುವ ಪ್ರಯಾಸವು ಕೇವಲ ಕ್ಲೇಶಕ್ಕಾಗಿ. ಇವು ಸಂಗ್ರಹ ಶ್ಲೋಕಗಳು.

ಧರ್ಮವನ್ನು ಅರ್ಥವನ್ನಾಗಿ ಹೊಂದಿರುವ ಶಬ್ದವು ಶ್ಲೇಷದಿಂದ ಅಭಿನ್ನವಾಗಿರುವುದಕ್ಕೆ ಉದಾಹರಣೆ– (ಪ್ರಕಟ.....)– ದಿಕ್ಕುದಿಕ್ಕಿನಲ್ಲೂ ಕಂಡುಬರುತ್ತಿದ್ದ ಮನೆಗಳ ಸಾಲು ಯುದ್ಧದ ಹೋರಾಟದ ಭೂಮಿಯನ್ನು ವಿಡಂಬಿಸುತ್ತಿತ್ತು. ಹೇಗೆಂದರೆ ಯುದ್ಧವು ಕುಲಿಶ (ವಜ್ರಾಯುಧ), ಕುಂತ (ಕೊಂತ), ಚಕ್ರ ಇವುಗಳನ್ನು ಹೊಂದಿದ್ದು ಶತ್ರುಸೈನ್ಯದ ಭಯದಿಂದ ಕೂಡಿದ ಮತ್ತಗಜಗಳನ್ನು ಹೊಂದಿರುತ್ತದೆ. ಮನೆಯು ಪ್ರಕಟವಾಗಿ ಕಾಣಿಸುವ ಗುಬ್ಬಿ, ಪಕ್ಷಿ, ಚಕ್ರವಾಕಗಳಿಂದ ಹೊಳೆಯುವ ಒಳ್ಳೆಯ ವಲಭಿಗಳಲ್ಲಿ ಕಾಣುವ ಮತ್ತವಾರಣಗಳನ್ನು ಹೊಂದಿರುತ್ತದೆ.

**ಅತ್ರ ವ್ಯತಿರೇಕಾಲಂಕಾರನಿಬಂಧನಾ ಶ್ಲೇಷಾಭಿವ್ಯಕ್ತಿಃ ।**

**ಯಥಾ ಚ–**

**ಉಷಸಿ ವಿಗಲಿತಾಂಧಕಾರಪಂಕ–**

**ಪ್ಲವಶಬಲಂ ಘನವರ್ತ್ಮ ದೂರಮಾಸೀತ್ ।**

**ಮಧುರತರಣಿತಾಪಯೋಗತಾರಂ**

**ಕಮಲವನೇ ಮಧುಪಾಯಿನಾಂ ಚ ಪಂಕ್ತಿಃ ॥**

**ಅತ್ರ ಚಶಬ್ದಃ ಶ್ಲೇಷಾಭಿವ್ಯಕ್ತಿಹೇತುಃ ।**

**ಕೇಚಿತ್ ಪುನಃ ಧರ್ಮಿಧರ್ಮೋಭಯಾರ್ಥಸ್ಯಾಪಿ ಶಬ್ದಸ್ಯ ಶ್ಲೇಷಮಿಚ್ಛಂತಿ ।**

**ಅನುವಾದ:**

(ಪ್ರಕಟಕುಲಿಶ..... ಎಂಬ) ಈ ಪದ್ಯದಲ್ಲಿ ವ್ಯತಿರೇಕಾಲಂಕಾರವು ಶ್ಲೇಷದ ಅಭಿವ್ಯಕ್ತಿಗೆ ನಿಬಂಧನವಾಗಿದೆ. (ವಿಡಂಬಯಂತೀ ಎಂಬ ಪದದಿಂದ ಇಲ್ಲಿ ವ್ಯತಿರೇಕಾಲಂಕಾರವು ದ್ಯೋತಿತವಾಗಿದೆ.)

ಇನ್ನೊಂದು ಉದಾಹರಣೆ–

"ಬೆಳಗಿನ ಜಾವದಲ್ಲಿ ಆಕಾಶವು ಅಂಧಕಾರವೆಂಬ ಕೆಸರು ತೊಲಗುತ್ತಿದ್ದುದರಿಂದ ನಾನಾವರ್ಣವಾಗಿ ಹಿತವಾಗಿದ್ದ ಸೂರ್ಯನ ಬಿಸಿಲಿನ ಸಂಬಂಧದಿಂದ ರಮ್ಯವಾಗಿತ್ತು. ಭ್ರಮರಗಳ ಸಾಲಾದರೋ ಅಂಧಕಾರಪಂಕದ ಪ್ಲವವೆಂಬ ಶವದ ಲಂಘನದಿಂದ ಕಡಿಮೆಯಾದ ಕಾಂತಿಯುಳ್ಳದ್ದೂ, ಮಕರಂದದಲ್ಲಿ ಆಸಕ್ತಿಯಿಂದ ಮಾಡುವ ಗುಂಜನದ ತಾರತೆಯನ್ನುಳ್ಳದ್ದೂ ಆಗಿತ್ತು."

ಇಲ್ಲಿ ಚಶಬ್ದವು (ಚ ಎಂಬ ಅವ್ಯಯವು) ಶ್ಲೇಷಾಭಿವ್ಯಕ್ತಿಗೆ ಕಾರಣ. ಕೆಲವರು ವಿದ್ವಾಂಸರು ಧರ್ಮಿ–ಧರ್ಮ ಎಂಬ ಎರಡು ಅರ್ಥಗಳನ್ನೂ ಕೊಡುವ ಶಬ್ದದ ಶ್ಲೇಷವನ್ನು ಹೇಳುತ್ತಾರೆ.

**ವಿವರಣೆ:**

ಪ್ಲವ+ಶಬಲಂ+ಘನವರ್ತ್ಮ+ದೂರಮ್+ಆಸೀತ್ ।

ಪ್ಲವ+ಶವ+ಲಂಘನವರ್ತ್ಮ+ದೂರಮಾ+ಆಸೀತ್ ।

ಮಧುರ+ತರಣಿತಾಪ+ಯೋಗತಾರಂ,

ಮಧುರತ+ರಣಿತ+ಅಪಯೋಗತಾ+ಅರಮ್ । ಎಂದು ಪದಚ್ಛೇದ.

**ಯಥಾ– ಅನವರತನಯನಸಲಿಲಸಿಚ್ಯಮಾನಸ್ತರುರಿವ ವಿಪಲ್ಲವೋऽಪಿ ಸಹಸ್ರಧಾ ಪ್ರರೋಹತಿ । ಇತಿ । ಅತ್ರ ವಿಪಲ್ಲವಶಬ್ದಸ್ಯ । ತಚ್ಚಾಯುಕ್ತಮ್ । ತಥಾ ಹಿ ।**

**ವಿಪಲ್ಲವಶಬ್ದಸ್ಯ ಧರ್ಮಿಧರ್ಮೋಭಯಾರ್ಥತ್ವೇऽಪಿ**

**ನ ಧರ್ಮಾರ್ಥತ್ವಮ್, ಯತೋऽಯಮುಪಮಾನಸ್ಯ**

**ವಿಶೇಷಣಭಾವಮುಪಗಂತುಂ ನೋತ್ಸಹತೇ, ತಸ್ಯ**
**ಉಪಮೇಯಾಭಿಧಾನೇ ಚರಿತಾರ್ಥಸ್ಯ ಆವೃತ್ತೇರನುಪ–**
**ಪತ್ತೇಸ್ತತ್ಸ್ವರೂಪಾಪಹಾರಪ್ರಂಗಾತ್ ।**
**ಯಃ ಪುನರಪ್ರಧಾನಮೇವಾರ್ಥಮಭಿಧತ್ತೇ ನ ಪ್ರಧಾನಮ್,**
**ಅಸಾವುಪಯುಕ್ತಾರ್ಥೋಽಪಿ ನಿಬಂಧನಸದ್ಭಾವೇ ಸತಿ**
**ಆವರ್ತತೇ ಏವ ।**

**ಅನುವಾದ:**

ಉದಾಹರಣೆ– "ಸತತವಾಗಿ ಕಣ್ಣೀರಿನಿಂದ ನೆನೆಸಲ್ಪಡುವ ಸಣ್ಣ ವಿಪತ್ತೂ ಚಿಗುರಿಲ್ಲದ ಮರದಂತೆ ಆಮೇಲೆ ಸಾವಿರ ರೀತಿಯಲ್ಲಿ ಬೆಳೆಯುತ್ತದೆ."

ಇಲ್ಲಿ ವಿಪಲ್ಲವ (ವಿ+ಪಲ್ಲವ, ವಿಪತ್+ಲವ) ಎಂಬ ಶಬ್ದದಂತೆ (ಎಂದವರು ಹೇಳುತ್ತಾರೆ).

ಇದು ಯುಕ್ತವಲ್ಲ. ವಿಪಲ್ಲವ ಎಂಬ ಶಬ್ದವು ಧರ್ಮಿ–ಧರ್ಮ ಎಂಬ ಎರಡು ರೂಪದ ಅರ್ಥಗಳನ್ನು ಹೊಂದಿದ್ದರೂ ಇಲ್ಲಿ ಧರ್ಮಾರ್ಥತ್ವವು ಹೊಂದುವುದಿಲ್ಲ. ಏಕೆಂದರೆ ಇದು ಉಪಮಾನದ ವಿಶೇಷಣವಾಗಲು ಸಮರ್ಥವಾಗದು. ಉಪಮೇಯವನ್ನು ಹೇಳುವ ಕಾರ್ಯದಲ್ಲೇ ಚರಿತಾರ್ಥವಾಗಿರುವ ಅದಕ್ಕೆ ಆವೃತ್ತಿಯು ಉಚಿತವಾಗುವುದಿಲ್ಲ, ಹಾಗೆ ಮಾಡಿದರೆ ಅದರ ಸ್ವರೂಪವೇ ನಷ್ಟವಾದೀತು.

ಯಾವುದು ಅಪ್ರಧಾನವಾದ ಅರ್ಥವನ್ನು ಹೇಳುವುದೋ ಪ್ರಧಾನವನ್ನು ಹೇಳುವುದಿಲ್ಲವೋ, ಅಂಥ ಶಬ್ದವು ಉಪಯುಕ್ತಾರ್ಥವಾದರೂ, ನಿಬಂಧನವಿದ್ದರೆ ಆವೃತ್ತವಾಗಬಲ್ಲುದು.

**ಯಥಾ– ಸಾನುಸ್ಥಿತಿರ್ಜನಕರಾಜಸುತೇವ ಭಾಸ್ವ–**
**ದಂಕೋಲ್ಲಪಲ್ಲವತಯಾ ಶ್ರಿಯಮೇತಿ ಯಸ್ಯ । ಇತಿ ।**

**ಅತ್ರ ಭಾಸ್ವದಂಕೊಲ್ಲಪಲ್ಲವತಾಶಬ್ದಃ ।**
**ಇಹ ಪುನರ್ದ್ವಿರುಪಾದಾನಮೇವೈಕಮ್ ಉಪಮಾನ–**
**ಸಂಬಂಧಬುದ್ಧಿನಿಬಂಧನಮವಸೇಯಮ್ । ನ ಚ ಇವಾದ್ಯವ್ಯಯಮ್**
**ಅನವ್ಯಯಮಲಂಕಾರಾಂತರಂ ವಾ ಕಿಂಚಿತ್ ।**
**ಯತ್ರ ಚ ಪ್ರಧಾನಾರ್ಥಸಂಸ್ಪರ್ಶಮಾತ್ರಾದೇವ ಉಭಯಾರ್ಥಸ್ಯ ಶಬ್ದಸ್ಯ**
**ದ್ವಿರುಪಾದಾನಮವಶ್ಯಂ ಕಾರ್ಯಂ ತತ್ರ ತದೇಕಾರ್ಥಸ್ಯ ತತ್ ಸ್ಥಿತಮೇವ ।**

**ಅನುವಾದ:**

ಉದಾಹರಣೆ– ಆ ಪರ್ವತದ ತಪ್ಪಲು ಪ್ರದೇಶವು ಜನಕರಾಜನ ಮಗಳಾದ ಸೀತೆಯಂತೆ ಭಾಸ್ವದಂಕೋಲ್ಲಪಲ್ಲವತೆಯಿಂದ ಕಾಂತಿಯನ್ನು ಪಡೆಯುತ್ತದೆ.

ಇಲ್ಲಿ ಭಾಸ್ವದಂಕೋಲ್ಲಪಲವತಾ ಎಂಬ ಶಬ್ದವು (ಆವೃತ್ತಿಯನ್ನು ಹೊಂದುತ್ತದೆ. ಆದರೆ (ಅನವರತ.....) ಎಂಬ ಉದಾಹರಣೆಯಲ್ಲಿ ಉಪಮಾನ ಸಂಬಂಧದ ಅರಿವನ್ನುಂಟುಮಾಡಲು ವಿಪಲ್ಲವಶಬ್ದವನ್ನು ಎರಡು ಬಾರಿ ಹೇಳುವುದೊಂದೇ ನಿಬಂಧನವೆಂದು ತಿಳಿಯಬೇಕು. ಇವ ಮುಂತಾದ ಅವ್ಯಯವಾಗಲಿ ಅವ್ಯಯೇತರವಾದ ಬೇರೆ ಅಲಂಕಾರವಾಗಲಿ ಇಲ್ಲಿಲ್ಲ. ಎಲ್ಲಿ ಪ್ರಧಾನಾರ್ಥಸಂಸ್ಪರ್ಶಮಾತ್ರದಿಂದಲೇ ಎರಡು ಅರ್ಥಗಳನ್ನುಳ್ಳ ಶಬ್ದವನ್ನು ಎರಡು ಬಾರಿ ಅವಶ್ಯವಾಗಿ ಮಾಡಬೇಕೋ ಅಲ್ಲಿ (ಅದನ್ನೇ ಪ್ರಯೋಜನವನ್ನಾಗಿ ಉಳ್ಳ) ಒಂದೇ ಅರ್ಥದ ಶಬ್ದಕ್ಕೂ ದ್ವಿರುಪಾದಾನ ಬೇಕೇ ಬೇಕು.

**ವಿವರಣೆ:**

ಅಂಕೋಲ್ಲ ಎಂಬುದು ವೃಕ್ಷವಿಶೇಷ. ತಪ್ಪಲು ಪ್ರದೇಶದಲ್ಲಿ ಅಂಕೋಲ್ಲವೃಕ್ಷಗಳ ಪಲ್ಲವ ಕಂಗೊಳಿಸುತ್ತಿತ್ತು. ಸೀತಾಪಕ್ಷದಲ್ಲಿ ಭಾಸ್ವದ್+ಅಂಕ+ಉಲ್ಲಪತ್+ಲವತಯಾ ಎಂದು ಪದಚ್ಛೇದ. ಸೀತೆಯ ಮಡಿಲಿನಲ್ಲಿ ತೊದಲುನುಡಿಗಳನ್ನಾಡುತ್ತಿದ್ದ ಲವನಿದ್ದನು ಎಂದು ಅರ್ಥ.

**ಯಥಾ–**
**“ಬ್ರಧ್ನಸ್ಯೇದ್ಧಾ ರುಚಿರ್ವೋ ರುಚಿರಿವ ರುಚಿತಸ್ಯಾಪ್ತಯೇ ವಸ್ತುನೋಽಸ್ತು” ಇತಿ ।**
**ಯಥಾ ಚ–**
**“ಖಲತಾಂ ಖಲತಾಮಿವಾಸತೀಂ ಪ್ರತಿಪದ್ಯೇತ ಕಥಂ ಬುಧೋ ಜನಃ” ಇತಿ ।**
**ನ ಚ ಆವೃತ್ತಿನಿಬಂಧನಮಿವಶಬ್ದೋಽತ್ರ ಪ್ರಯುಕ್ತ ಏವೇತಿ ಕುತಃ ಪ್ರಧಾನಾರ್ಥಸಂಸ್ಪರ್ಶವಶಾದ್ ವಿಪಲ್ಲವಶಬ್ದಸ್ಯ ದ್ವಿರುಪಾದಾನಪ್ರಸಂಗ ಇತಿ ಶಕ್ಯತೇ ವಕ್ತುಮ್ । ತಸ್ಯ ತರುವಿಪಲ್ಲವಯೋರುಪಮಾನೋಪಮೇಯಭಾವಮಾತ್ರ–ಚರಿತಾರ್ಥಸ್ಯ ತಯೋರ್ವಿಶೇಷಣವಿಶೇಷ್ಯಭಾವಾಭಿಧಾನ–ಸಾಮರ್ಥ್ಯಾಭಾವಾತ್ ।**

**ಅನುವಾದ:**

ಉದಾಹರಣೆ– “ಸೂರ್ಯನ ಹೆಚ್ಚುತ್ತಿರುವ ತೇಜಸ್ಸು ನಿಮ್ಮ ಉತ್ಕಟವಾದ ರುಚಿಯಂತೆ ಅಪೇಕ್ಷಿತವಾದ ವಸ್ತುವಿನ ಪ್ರಾಪ್ತಿಗೆ ಕಾರಣವಾಗಲಿ.”

ಇನ್ನೊಂದು ಉದಾಹರಣೆ–

ಪಂಡಿತಜನರು ಖ–ಲತೆಯಂತೆ ಅಸತ್ತಾದ ಖಲತೆಯನ್ನು ಹೇಗೆ ತಾನೆ ಆಶ್ರಯಿಸುವರು?

(ಅನವರತನಯನ...... ಎಂಬ) ಉದಾಹರಣೆಯಲ್ಲಿ ಆವೃತ್ತಿಗೆ ನಿಬಂಧನವಾಗುವ ‘ಇವ’ ಎಂಬ ಶಬ್ದವು ಪ್ರಯುಕ್ತವಾಗಿದೆ. ಹೀಗಿರುವಾಗ ಪ್ರಧಾನಾರ್ಥಸಂಸ್ಪರ್ಶವಿದೆಯೆಂಬ ಕಾರಣದಿಂದ ವಿಪಲ್ಲವಶಬ್ದವನ್ನು ಎರಡು ಬಾರಿ

ಹೇಳುವ ಪ್ರಸಂಗ ಹೇಗೆ ಉಂಟಾಗುವುದು? ಎಂದೆನ್ನಲು ಸಾಧ್ಯವಿಲ್ಲ. ಆ ಇವ ಶಬ್ದವು ತರುವಿಗೂ ವಿಪಲ್ಲವಕ್ಕೂ ಇರುವ ಉಪಮಾನೋಪಮೇಯಭಾವ ಮಾತ್ರವನ್ನು ತಿಳಿಸುವುದರಲ್ಲಿ ಚರಿತಾರ್ಥವಾಗಿದೆ. ಮತ್ತೆ ಅದು ಅವೆರಡಕ್ಕೂ ವಿಶೇಷಣವಿಶೇಷ್ಯಭಾವವನ್ನು ತಿಳಿಸುವ ಸಾಮರ್ಥ್ಯವನ್ನು ಪಡೆದಿರುವುದಿಲ್ಲ.

**ಅಥ ವಿಪಲ್ಲವಶಬ್ದಸ್ಯ ತರುವಿಶೇಷಣಭಾವೋಪಗಮ–ಯೋಗ್ಯಾರ್ಥಾಂತರಸಂಭವೇ ತಸ್ಯ ತರುಣಾ ಸಾಮಾನಾಧಿಕರಣ್ಯೇ ಸತಿ ಆಕಾಂಕ್ಷಾಸನ್ನಿಧಿಯೋಗ್ಯತಾವಶಾತ್ ತಯೋರ್ವಿಶೇಷಣ–ವಿಶೇಷ್ಯಭಾವೋಽವಗಮ್ಯತ ಇತಿ ಚೇತ್ ತನ್ನ । ವಾಕ್ಯ–ಭೇದಪ್ರಸಂಗಾತ್ 'ವಿಪಲ್ಲವಸ್ತರುರಿವ, ಸ ಚ ತರುರ್ವಿಪಲ್ಲವಃ ಇತಿ । ಅಥ ಸಮಾಸೋಕ್ತಿವಶಾದುಕ್ತನಯೇನ ತಯೋಃ ಸಂಬಂಧಾ–ವಗತಿರಿತಿ । ತದಯುಕ್ತಮ್ । ತಸ್ಯಾ ಉಪಮಾನಭೂತಧರ್ಮಿಮಾತ್ರ–ಪ್ರತೀತಿಸಾಮರ್ಥ್ಯೋಪಗಮಾತ್ । ಇಹ ತು ತರುರಿವೇತಿ ತದುಪಾತ್ತ–ಮೇವೇತಿ ವ್ಯರ್ಥ ಏವಾಯಮನೇಕಾರ್ಥಪದೋಪಾದಾನಪ್ರಯಾಸಃ ಕವೇಃ ।**

**ಅನುವಾದ:**

ವಿಪಲ್ಲವ ಎಂಬ ಶಬ್ದಕ್ಕೆ ತರು ಎಂಬ ಶಬ್ದದ ವಿಶೇಷಣತ್ವಕ್ಕೆ ಯೋಗ್ಯವಾದ ಒಂದು ಅರ್ಥವು ಸಂಭವಿಸುವಾಗ, ತರುಶಬ್ದದೊಡನೆ ಸಾಮಾನಾಧಿಕರಣ್ಯ ಉಂಟಾದಾಗ ಆಕಾಂಕ್ಷೆ, ಯೋಗ್ಯತೆ, ಸನ್ನಿಧಿಗಳ ವಶದಿಂದ ಅವೆರಡಕ್ಕೂ ವಿಶೇಷಣವಿಶೇಷ್ಯಭಾವವು ತಿಳಿದುಬರುತ್ತದೆ ಎಂದು ಹೇಳಿದರೆ ಅದೂ ಸರಿಯಲ್ಲ. ಏಕೆಂದರೆ ಆಗ ವಾಕ್ಯಭೇದದ ಪ್ರಸಂಗ ಉಂಟಾಗುವುದು. "ವಿಪಲ್ಲವವು ತರುವಿನಂತೆ" (ಎಂದು ಒಂದು ವಾಕ್ಯ), "ಆ ತರು ವಿಪಲ್ಲವ" (ಎಂದು ಇನ್ನೊಂದು ವಾಕ್ಯ).

ಮತ್ತೆ ಸಮಾಸೋಕ್ತಿಯ ಕಾರಣದಿಂದ ಮೇಲೆ ಹೇಳಿದ ರೀತಿಯಲ್ಲಿ ವಿಪಲ್ಲವ–ತರುಗಳ ಸಂಬಂಧದ ಅರಿವು ಉಂಟಾಗುವುದೆಂದರೆ ಅದೂ ಅಯುಕ್ತವೇ. ಏಕೆಂದರೆ ಸಮಾಸೋಕ್ತಿಯು ಉಪಮಾನವಾಗುವ ಧರ್ಮಿಯನ್ನು ಮಾತ್ರ ತಿಳಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಒಪ್ಪಿಕೊಳ್ಳಲಾಗಿದೆ. ಇಲ್ಲಿ ತರುರಿವ ಎಂದು ಉಪಮಾನವನ್ನು ಶಬ್ದತಃ ಹೇಳಿದ್ದಾನೆ. ಆದ್ದರಿಂದ ಈ ವಾಕ್ಯದಲ್ಲಿ ಅನೇಕಾರ್ಥದ ಪದಗಳನ್ನು ತರಲು ಕವಿಯು ಪಟ್ಟಿರುವ ಪ್ರಯಾಸವು ವ್ಯರ್ಥವೇ ಸರಿ.

**ತಸ್ಮಾತ್ ಸಲಿಲಸಿಚ್ಯಮಾನತ್ವ–ಸಹಸ್ರಧಾಪ್ರರೋಹಾದಿ–ಸಮಾನಧರ್ಮಾಪೇಕ್ಷಯೈವ ಅತ್ರ ತರುವಿಪಲ್ಲವಯೋರುಪಮಾನೋಪಮೇಯಭಾವೋಽವಗಂತವ್ಯಃ । ನ ತು ಶ್ಲೇಷಃ । ಸ ಹಿ ಭ್ರಾಂತಿಮಾತ್ರಕೃತಃ । ಯಥಾ ಚ–"ಕ್ವಚಿತ್ ತರುತಲವರ್ತಿನೋ ಬಭ್ರವಃ, ಕ್ವಚಿತ್ ಸ್ವಚ್ಛಂದಚಾರಿಣೋ ಹರಿಣಾಃ, ಕ್ವಚಿಜ್ಜಟಾವಲ್ಕಲಾವಲಂಬಿನಃ ಕಪಿಲಾಃ" ಇತಿ ।**

**ಅನುವಾದ:**

ಆದ್ದರಿಂದ ನೀರಿನಿಂದ ನೆನೆಸಲ್ಪಡುವಿಕೆ, ಸಾವಿರಾರು ರೀತಿಯಲ್ಲಿ ಬೆಳೆಯುವಿಕೆ ಮುಂತಾದ ಸಮಾನಧರ್ಮದ ಆಧಾರದಿಂದಲೇ ಇಲ್ಲಿ ತರು–ವಿಪಲ್ಲವಗಳಿಗೆ ಉಪಮಾನೋಪಮೇಯಭಾವವನ್ನು ಅರಿತುಕೊಳ್ಳಬೇಕು. ಶ್ಲೇಷವನ್ನಲ್ಲ. ಅದು ಭ್ರಾಂತಿಕೃತ ಅಷ್ಟೆ.

ಇನ್ನೊಂದು ಉದಾಹರಣೆ– ಕೆಲವು ಕಡೆ (ಆ ದಾವಾಗ್ನಿಗಳು) ಮರದ ಕೆಳಗೆ ಹರಡುತ್ತಾ ಹಳದಿಬಣ್ಣದವುಗಳೂ (ಮುಂಗುಸಿಗಳೂ), ಮತ್ತೆ ಕೆಲವು ಕಡೆ ಇಷ್ಟ ಬಂದಂತೆ ಸಂಚರಿಸುತ್ತಾ ಹಸಿರುಬಣ್ಣದವುಗಳೂ (ಜಿಂಕೆಗಳೂ), ಇನ್ನೂ ಕೆಲವು ಕಡೆ ಮರಗಳ ಬೇರುಗಳನ್ನೂ ತೊಗಟೆಗಳನ್ನೂ ಅವಲಂಬಿಸಿ ಹೊಂಬಣ್ಣದವುಗಳೂ (ಜಟೆಗಳನ್ನೂ ವಲ್ಕಲಗಳನ್ನೂ ಧರಿಸಿದ ಕಪಿಲಮುನಿಗಳೂ) ಆಗಿದ್ದುವು.

**ವಿವರಣೆ:**

ಇಲ್ಲಿ ಬಭ್ರು, ಹರಿಣ ಮತ್ತು ಕಪಿಲ ಎಂಬ ಶಬ್ದಗಳು ವರ್ಣವಾಚಕಗಳಾದಾಗ ಧರ್ಮರೂಪ, ಪ್ರಾಣಿ ಅಥವಾ ಮುನಿಯ ವಾಚಕಗಳಾದಾಗ ಧರ್ಮಿರೂಪ. ಒಟ್ಟಿನಲ್ಲಿ ಉಭಯರೂಪ.

(ಅರ್ಥಶ್ಲೇಷದ ಉದಾಹರಣೆ)

**ಏವಮರ್ಥಶ್ಲೇಷೇಽಪ್ಯವಗಂತವ್ಯಮ್ । ಯಥಾ–**
**ಸಮಂತತಃ ಕೇಸರಿಣಂ ವಸಂತಂ**
**ಭೀಮಂ ಚ ಕಾಂತಂ ಚ ವಪುರ್ವಹಂತಮ್ ।**
**ವಿಲೋಕ್ಯ ದೂರಾತ್ ತರಸಾಭಿಮಾನೋ**
**ದುರ್ವಾರಣಃ ಕ್ವಾಪಿ ಗತಃ ಸ ಮತ್ತಃ ॥**
**ಅತ್ರ ಹಿ ಕೇಸರಿದುರ್ವಾರಣಯೋಃ ವಸಂತಾಭಿಮಾನಯೋಶ್ಚ ಧರ್ಮಿಧರ್ಮೋಭಯಾರ್ಥಯೋರನ್ಯೋನ್ಯಂ ವಿಶೇಷಣವಿಶೇಷ್ಯ–ಭಾವೋ ರೂಪ್ಯರೂಪಕಭಾವೋ ವಾ ನಿಬದ್ಧಃ । ಸ ಚಾಯುಕ್ತಃ । ನ ಹಿ ಸ್ವತಂತ್ರಪರತಂತ್ರತಾಲಕ್ಷಣವಿಶೇಷಣವಿಶೇಷ್ಯಭಾವಾದ್ಯಾತ್ಮಕ–ವಿರುದ್ಧೋಭಯಾರ್ಥಾಭಿಧಾನಂ ಸಕೃದುಪಾತ್ತೇನೈಕೇನೈವ ಶಬ್ದೇನ ಶಕ್ಯತೇ ಕರ್ತುಮ್ । ಅರ್ಥಯೋರನ್ಯೋನ್ಯವಿರೋಧಾತ್ । ದ್ವಿರುಪಾದಾನೇ ತು ತಯೋರ್ಭಿನ್ನಾರ್ಥತ್ವಾನ್ನ ಕಶ್ಚಿದ್ ದೋಷಃ ।**

**ಅನುವಾದ:**

ಹೀಗೆಯೇ ಅರ್ಥಶ್ಲೇಷದಲ್ಲೂ ಅರಿತುಕೊಳ್ಳಬೇಕು.

ಉದಾಹರಣೆ– (ಸಮಂತತಃ..........)

"ಸುತ್ತಲೂ ಕೇಸರವೃಕ್ಷಗಳಿಂದೊಡಗೂಡಿ (ವಿಯೋಗಿಗಳಿಗೆ) ಭಯಂಕರವೂ (ವೀಕ್ಷಕರಿಗೆ) ಮನೋಹರವೂ ಆಗಿದ್ದ ರೂಪವನ್ನು ಧರಿಸಿದ್ದ ವಸಂತನನ್ನು ನೋಡಿ

ಅನಿವಾರ್ಯವಾಗಿದ್ದ ಅಭಿಮಾನವು ನನ್ನ ದೆಸೆಯಿಂದ ಬೇಗನೆ ಎಲ್ಲಿಗೋ ಹೊರಟುಹೋಯಿತು. (ಭಯಂಕರವಾದ ರೂಪವನ್ನು ಧರಿಸಿ ನಿಂತಿದ್ದ ಕೇಸರಿಯನ್ನು, ಎಂದರೆ ಸಿಂಹವನ್ನು ನೋಡಿ ಆ ಮದಿಸಿದ ಕೆಟ್ಟ ಆನೆಯು ಎಲ್ಲೋ ಓಡಿಹೋಯಿತು.)"

ಇಲ್ಲಿ ಕೇಸರಿ ಮತ್ತು ದುರ್ವಾರಣ ಶಬ್ದಗಳೂ, ವಸಂತ, ಅಭಿಮಾನ ಶಬ್ದಗಳೂ ಧರ್ಮಿ-ಧರ್ಮ ಉಭಯಾರ್ಥಗಳಾಗಿವೆ. ಅವುಗಳಿಗೆ ವಿಶೇಷಣವಿಶೇಷ್ಯಭಾವವನ್ನು ಅಥವಾ ರೂಪ್ಯರೂಪಕಭಾವವನ್ನು ಕವಿ ಕಲ್ಪಿಸಿದ್ದಾನೆ. ಅದು ಅಯುಕ್ತ. ಸ್ವತಂತ್ರತೆಯ ಲಕ್ಷಣದ ವಿಶೇಷ್ಯತೆಗೂ ಪರತಂತ್ರತಾಲಕ್ಷಣವಾದ ವಿಶೇಷಣತೆಗೂ ವಿರೋಧವಿರುವುದರಿಂದ ಒಮ್ಮೆ ಉಪಾತ್ತವಾದ ಒಂದೇ ಶಬ್ದದಿಂದ ವಿರುದ್ಧವಾದ ಎರಡು ಅರ್ಥಗಳನ್ನು ಹೇಳಲಾಗದು. ಏಕೆಂದರೆ ಆ ಎರಡು ಅರ್ಥಗಳಿಗೆ ಪರಸ್ಪರ ವಿರೋಧವಿದೆ. ಶಬ್ದವನ್ನು ಎರಡು ಬಾರಿ ಹೇಳಿದರೆ ಅವುಗಳು ಭಿನ್ನ ಭಿನ್ನ ಅರ್ಥಗಳನ್ನು ಹೇಳುವುದರಿಂದ ಯಾವ ದೋಷವೂ ಇಲ್ಲ.

**ಯಥಾ–**
**ಅಲಿಭಿರಂಜನಬಿಂದುಮನೋಹರೈಃ**
**ಕುಸುಮಪಂಕ್ತಿನಿಪಾತಿಭಿರಂಕಿತಃ ।**
**ನ ಖಲು ಶೋಭಯತಿ ಸ್ಮ ವನಸ್ಥಲೀಂ**
**ನ ತಿಲಕಸ್ತಿಲಕಃ ಪ್ರಮದಾಮಿವ ॥**
**ಇತ್ಯುಕ್ತಪ್ರಾಯಮ್ । ನ ಚ ತದುಪಾತ್ತಮಿತಿ ತಸ್ಯ ವಾಚ್ಯಸ್ಯ ಅವಚನಂ ದೋಷಃ ।**
**ತದಭಿವ್ಯಕ್ತಿನಿಬಂಧನಸದ್ಭಾವೇ ತು ತಯೋಃ ಪ್ರಧಾನೇತರಾಭಿವ್ಯಕ್ತೌ**
**ವಿಶೇಷಣವಿಶೇಷ್ಯಪ್ರತಿನಿಯಮೋ ಯುಕ್ತ ಏವ । ಯಥಾ–**
**ಅತಿಗಂಭೀರೇ ಭೂಪೇ ಕೂಪ ಇವ ಜನಸ್ಯ ನಿರವತಾರಸ್ಯ ।**
**ದಧತಿ ಸಮೀಹಿತಸಿದ್ಧಿಂ ಗುಣವಂತಃ ಪಾರ್ಥಿವಾ ಘಟಕಾಃ ॥**

**ಅನುವಾದ:**

ಉದಾಹರಣೆ– "ಅಂಜನದ ಬಿಂದುಗಳಿಂದ ಚಂದವಾಗಿದ್ದ ಹೂಗಳ ಸಾಲಿನ ಮೇಲೆ ಎರಗುತ್ತಿದ್ದ ದುಂಬಿಗಳಿಂದ ಶೋಭಿತವಾಗಿದ್ದ ತಿಲಕ (ವೃಕ್ಷ)ವು ಹೆಂಗುಸನ್ನು ತಿಲಕವು ಅಲಂಕರಿಸುವಂತೆ ವನಭೂಮಿಯನ್ನು ಅಲಂಕರಿಸದಿರಲಿಲ್ಲ." (ಈ ಪದ್ಯದಲ್ಲಿ ತಿಲಕ ಶಬ್ದವನ್ನು ಎರಡು ಬಾರಿ ಹೇಳಿರುವುದರಿಂದ ಯಾವ ದೋಷವೂ ಇಲ್ಲ) ಎಂಬುದು ಸ್ಪಷ್ಟವಾಗಿದೆ. (ಆದರೆ ಸಮಂತತಃ ಕೇಸರಿಣಂ..... ಎಂಬ ಪದ್ಯದಲ್ಲಿ ಹಾಗೆ ಎರಡು ಬಾರಿ ಪದವನ್ನು) ಹೇಳಿಲ್ಲದಿರುವುದರಿಂದ ಅಲ್ಲಿ ವಾಚ್ಯಾವಚನವೆಂಬ ದೋಷ.

ಶ್ಲೇಷದ ಅಭಿವ್ಯಕ್ತಿಗೆ ನಿಬಂಧನವಿದ್ದರೆ ವಿಶೇಷಣ–ವಿಶೇಷ್ಯಗಳೆಂಬ ಪ್ರಧಾನ–ಅಪ್ರಧಾನಗಳ ಅಭಿವ್ಯಕ್ತಿಯು ಆಗುವುದರಿಂದ ಅಂಥ ಸಂದರ್ಭದಲ್ಲಿ ವಿಶೇಷಣ ವಿಶೇಷ್ಯಗಳ ನಿಯಮವು ಉಚಿತವೇ ಆಗುವುದು. ಉದಾಹರಣೆ–ಅತಿಗಂಭೀರವಾದ ದೊರೆಯಲ್ಲಿ, ಸಮೀಪಕ್ಕೆ ಹೋಗಲು ಅವಕಾಶವಿಲ್ಲದ ಜನರ ಅಪೇಕ್ಷಿತ ಸಿದ್ಧಿಯನ್ನು ಗುಣವಂತರಾದ ರಾಜಸಂಬಂಧಿಗಳು ಘಟಕರಾಗಿ ಇಳಿಯಲು ಸೋಪಾನವಿಲ್ಲದ ಆಳವಾದ ಬಾವಿಯಲ್ಲಿ ಇಳಿಯಲಾರದ ಜನರಿಗೆ ಹಗ್ಗವನ್ನುಳ್ಳ ಮಣ್ಣಿನ ಕೊಡಗಳು ಅಪೇಕ್ಷಿತವಾದ ನೀರನ್ನು ತಂದುಕೊಡುವಂತೆ ಮಾಡಿಸಿಕೊಡುತ್ತಾರೆ.

**ಅತ್ರ ಹಿ ಇವಶಬ್ದನಿಬಂಧನೋ ಗುಣವತ್ವಘಟಕತ್ವಯೋಃ**
**ವಿಶೇಷಣವಿಶೇಷ್ಯಭಾವಃ, ನ ಪಾರ್ಥಿವತ್ವಸ್ಯಾಪಿ, ತಸ್ಯ ಉಪಮೇಯತಯಾ**
**ಪ್ರಾಧಾನ್ಯಾತ್, ತಸ್ಯ ಸ್ವರೂಪಾಪಹಾರಾಪತ್ತೇರಿತ್ಯುಕ್ತಮ್ ।**
**ಕಿಂಚ ಮತ್ತ ಇತ್ಯಸ್ಯ ದ್ವಿರುಪಾದಾನೇಽಪಿ ನಾರ್ಥಶ್ಲೇಷೋ ಘಟತೇ,**
**ತಯೋರ್ಭಿನ್ನವಿಭಕ್ತಿಕತ್ವಾದಿತಿ ಭ್ರಾಂತಿಮಾತ್ರಕೃತಃ ತತ್ರಾರ್ಥಶ್ಲೇಷಾಭಿಮಾನಃ ।**
**ಕಿಂಚ ಲಕ್ಷಣವಾಕ್ಯೇ ಶಬ್ದಮಾತ್ರೇಣೇತಿ ಯನ್ಮಾತ್ರಗ್ರಹಣಂ**
**ತದುಪಮಾನಸಾಮಾನಾಧಿಕರಣ್ಯತದಿತರಯೋಗ್ಯಯೋರುಭಯೋರಪಿ**
**ಶಬ್ದಯೋಃ ಪರಿಗ್ರಹಾರ್ಥಮ್ । ತೇನ ಲಿಂಗವಚನವಿಭಕ್ತಿವಿಶೇಷ–**
**ಯೋಗೇ ಸತಿ ಯಸ್ಯ ಯದ್ಯೋಗ್ಯತ್ವಮುಪಜಾಯತೇ ತೇನಾಪಿ**
**ಸಾದೃಶ್ಯಂ ಕಥನೀಯಮಿತಿ ಅಭ್ಯನುಜ್ಞಾತಂ ಭವತಿ ।**

**ಅನುವಾದ:**

ಈ ಪದ್ಯದಲ್ಲಿ ಗುಣವತ್ತ್ವ ಮತ್ತು ಘಟಕತ್ವಗಳ ವಿಶೇಷಣ–ವಿಶೇಷ್ಯಭಾವದ ಅಭಿವ್ಯಕ್ತಿಗೆ ಇವ ಎಂಬ ಶಬ್ದವು ನಿಬಂಧನ. ಪಾರ್ಥಿವತ್ವದ ವಿಷಯದಲ್ಲಿ ಅದಾಗದು, ಏಕೆಂದರೆ ಪಾರ್ಥಿವನು ಉಪಮೇಯನಾದುದರಿಂದ ಪ್ರಧಾನ, ಅದರ ಶ್ಲೇಷವನ್ನು ಗ್ರಹಿಸಿದರೆ ಅದರ ಸ್ವರೂಪನಾಶವಾದೀತು –ಎಂದು ಹೇಳಿದ್ದೇವೆ.

ಅಲ್ಲದೆ ಮತ್ತಃ ಎಂಬುದನ್ನು ಎರಡು ಬಾರಿ ಹೇಳಿದರೂ ಅದಕ್ಕೆ ಅರ್ಥಶ್ಲೇಷವೆನ್ನುವುದು ಹೊಂದುವುದಿಲ್ಲ, ಏಕೆಂದರೆ ಆ ಪದಗಳು ಬೇರೆ ಬೇರೆ ವಿಭಕ್ತಿಗಳಲ್ಲಿರುತ್ತವೆ. ಆದ್ದರಿಂದ ಅದರಲ್ಲಿ ಅರ್ಥಶ್ಲೇಷ ಎಂಬ ಅಭಿಮಾನಕ್ಕೆ ಭ್ರಾಂತಿಯೇ ಮೂಲ.

ಅಲ್ಲದೆ ಶ್ಲೇಷದ ಲಕ್ಷಣವಾಕ್ಯದಲ್ಲಿ "ಶಬ್ದಮಾತ್ರೇಣ" ಎಂದು ಮಾತ್ರಶಬ್ದವನ್ನು ಸೇರಿಸಿರುವುದು ಉಪಮಾನದ ಸಾಮಾನಾಧಿಕರಣ್ಯ ಮತ್ತು ವೈಯಧಿಕರಣ್ಯಗಳಿಗೆ ಯೋಗ್ಯವಾದ ಎರಡೂ ವಿಧದ ಶಬ್ದಗಳನ್ನು ಪರಿಗ್ರಹಿಸುವುದಕ್ಕಾಗಿ. ಆದ್ದರಿಂದ ವಿಶಿಷ್ಟವಾದ ಲಿಂಗ, ವಚನ, ವಿಭಕ್ತಿಗಳ ಯೋಗವಿದ್ದಾಗ ಯಾವುದಕ್ಕೆ

ಯಾವುದರೊಡನೆ ಯೋಗ್ಯತ್ವವು ಸಿದ್ಧಿಸುವುದೋ ಅದರೊಡನೆಯೂ ಸಾದೃಶ್ಯವನ್ನು ಹೇಳಬೇಕು ಎಂಬುದನ್ನೂ ಒಪ್ಪಿಕೊಳ್ಳಲಾಗಿದೆ.

**ತತ್ರ ಲಿಂಗವಿಶೇಷಯೋಗೇ ಸತಿ ಯಥಾ–**

**ಉಷಸಿ ವಿಗಲಿತಾಂಧಕಾರಪಂಕಪ್ಲವಶಬಲಂ ಘನವರ್ತ್ಮ ದೂರಮಾಸೀತ್ ।**
**ಮಧುರತರಣಿತಾಪಯೋಗತಾರಂ ಕಮಲವನೇ ಮಧುಪಾಯಿನಾಂ ಚ ಪಂಕ್ತಿಃ ॥**

**ಅತ್ರ ಚಶಬ್ದನಿಬಂಧನಾ ಶ್ಲೇಷಾಭಿವ್ಯಕ್ತಿಃ ।**

**ವಚನವಿಶೇಷಯೋಗೇ ಯಥಾ–**

**ವಿಘಟಿತತಿಮಿರೌಘದಿಕ್ಪ್ರಬಂಧಪ್ರಕಟನಭಸ್ಯಭವನ್ನಿಶಾವಸಾನೇ ।**
**ಸ್ಫುಟದಲನಮನಾಶ್ಚ ಪದ್ಮಷಂಡಾಸ್ಸಪದಿ ಹಿಮೇತರದೀಧಿತಿಶ್ಚ ತೇಷಾಮ್ ॥**

**ಯಥಾ ಚ–**

**ತನುತ್ವರಮಣೀಯಸ್ಯ ಮಧ್ಯಸ್ಯ ಚ ಭುಜಸ್ಯ ಚ ।**
**ಅಭವನ್ನಿತರಾಂ ತಸ್ಯಾ ವಲಯಃ ಕಾಂತಿವೃದ್ಧಯೇ ॥**

**ಅನುವಾದ:**

ಲಿಂಗವಿಶೇಷದ ಯೋಗಕ್ಕೆ ಉದಾಹರಣೆ– ಉಷಸಿ..... (ಈ ಪದ್ಯದ ಅನುವಾದ ಹಿಂದೆ ಬಂದಿದೆ. ಇದರಲ್ಲಿ ಘನವರ್ತ್ಮ ಎಂಬ ಶಬ್ದ ನಪುಂಸಕಲಿಂಗ, ಪಂಕ್ತಿ ಶಬ್ದ ಸ್ತ್ರೀಲಿಂಗ ಎಂಬುದನ್ನು ಗಮನಿಸಬೇಕು.)

ಇದರಲ್ಲಿ ಚಶಬ್ದದಿಂದ ಶ್ಲೇಷಾಭಿವ್ಯಕ್ತಿ.

ವಚನವಿಶೇಷದ ಯೋಗಕ್ಕೆ ಉದಾಹರಣೆ– (ವಿಘಟಿತ........) "ರಾತ್ರಿ ಕಳೆದಾಗ ಕತ್ತಲೆಯ ರಾಶಿ ಸರಿದುಹೋಯಿತು. ದಿಕ್ಕುಗಳಲ್ಲಿ ಮುಗಿಲು ನಿಚ್ಚಳವಾಗಿ ಕಾಣಿಸತೊಡಗಿತು. ತಾವರೆಗಳ ಸಮೂಹಗಳು ಅರಳಲಾರಂಭಿಸಿದುವು. ಸೂರ್ಯನು ಅವುಗಳನ್ನು ಅರಳಿಸುವ ಮನಸ್ಸನ್ನು ಮಾಡಿದನು." (ಇಲ್ಲಿ ಪದ್ಮಷಂಡಾಃ ಬಹುವಚನದಲ್ಲೂ, ಹಿಮೇತರದೀಧಿತಿಃ ಏಕವಚನದಲ್ಲೂ ಇದೆ. ಸ್ಫುಟ+ದಲ+ನಮನಾಃ, ಸ್ಫುಟ+ದಲನ+ಮನಾಃ ಎಂದು ಸಭಂಗಶ್ಲೇಷ)

ಇನ್ನೊಂದು ಉದಾಹರಣೆ– (ತನುತ್ವ.......)

"ತೆಳ್ಳಗಿರುವಿಕೆಯಿಂದ ರಮ್ಯವಾಗಿದ್ದ ಅವಳ ಸೊಂಟಕ್ಕೆ ವಲಿಗಳೂ ತೋಳಿಗೆ ಬಳೆಯೂ ಕಾಂತಿಯ ಸಮೃದ್ಧಿಗೆ ಕಾರಣವಾದುವು." (ವಲಯಃ ಎಂಬುದು ಒಮ್ಮೆ ಬಹುವಚನ, ಇನ್ನೊಮ್ಮೆ ಏಕವಚನ)

**ವಿಭಕ್ತಿವಿಶೇಷಯೋಗೇ ಯಥಾ–**

**ಸರಸಮಂಥರತಾಮರಸೋದರಭ್ರಮರಸಜ್ಜಲಯಾ ನಲಿನೀ ಮಧೌ ।**
**ಜಲಧಿದೇವತಯಾ ಸದೃಶೀಂ ಶ್ರಿಯಂ ಸ್ಫುಟತರಾಗತರಾಗರುಚಿಂ ದಧೌ ॥ ಇತಿ ।**

**ಅತ್ರ ಸಾದೃಶ್ಯಮನವ್ಯಯಮಾವೃತ್ತಿನಿಬಂಧನಮ್ । ನ್ಯೂನಾತಿರಿಕ್ತಪ್ರತಿಷೇಧಶ್ಚಾಸ್ಯ ಪ್ರಧಾನವಿಶೇಷಣಸಾಮ್ಯಪ್ರತಿಪತ್ತ್ಯರ್ಥಃ । ತೇನ ಯತ್ರ ತನ್ನ ಸಂಭವತಿ ಸ ದುಷ್ಟ ಏವ ಶ್ಲೇಷ ಇತ್ಯವಸೇಯಮ್ । ತತ್ರ ನ್ಯೂನತ್ವಂ ಯಥಾ–**

**ಇಹ ಚಟುಲತಯಾ ವಿಲೋಚನೌಘೈಃ ಸ್ಫುಟಶಿತಿತಾರಕವಿಭ್ರಮೈಸ್ತರುಣ್ಯಃ ।**
**ದಧತಿ ಮಧುಕರೈಶ್ಚ ಕೋರಕಾಂತಸ್ಥಿತಿರಮಣೀಯತರೈಃ ಶ್ರಿಯಂ ನಲಿನ್ಯಃ ॥**

**ಅತ್ರ ಮಧುಕರಪಕ್ಷೇ ನ್ಯೂನತ್ವಮ್ ।**

**ಅನುವಾದ:**

ವಿಶೇಷವಿಭಕ್ತಿಯೋಗದ ಉದಾಹರಣೆ (ಸರಸ.......)

"ರಸಭರಿತವಾಗಿ ಮೃದುವಾಗಿ ಅಲುಗಾಡುತ್ತಿದ್ದ ತಾವರೆಗಳೊಳಗೆ ಆಡುತ್ತಿದ್ದ ಭ್ರಮರಗಳಿಂದ ನಾಟ್ಯಲಯವನ್ನು ಹೊಂದಿದ್ದ ತಾವರೆಗೊಳವು ವಸಂತಕಾಲದಲ್ಲಿ ಅತ್ಯಂತ ಸ್ಫುಟವಾಗಿ ಬಂದ ಕೆಂಪುಕಾಂತಿಯನ್ನೂ ಜಲಧಿದೇವತೆಗೆ ಸಮಾನವಾದ ಕಾಂತಿಯನ್ನೂ ಪಡೆದುಕೊಂಡಿತು."

ಇಲ್ಲಿ ಅವ್ಯಯವನ್ನು ಬಳಸದೆ ಉಕ್ತವಾದ ಸಾದೃಶ್ಯವು ಪದದ ಆವೃತ್ತಿಗೆ ನಿಬಂಧನ. ಪ್ರಧಾನವಿಶೇಷಣಸಾಮ್ಯದ ಜ್ಞಾನಕ್ಕಾಗಿ ನ್ಯೂನವೂ ಅತಿರಿಕ್ತವೂ ಆಗಿರುವುದನ್ನು (ಅನ್ಯೂನಾನತಿರಿಕ್ತ ಎಂಬ ಪದದಿಂದ) ನಿಷೇಧಿಸಲಾಗಿದೆ. ಆದ್ದರಿಂದ ಪ್ರಧಾನ ವಿಶೇಷಣಸಾಮ್ಯವು ಎಲ್ಲಿ ಸಂಭವಿಸುವುದಿಲ್ಲವೋ ಅಂಥ ಶ್ಲೇಷವು ದುಷ್ಟ ಎಂದು ತಿಳಿದುಕೊಳ್ಳಬೇಕು.

ನ್ಯೂನತ್ವದ ಉದಾಹರಣೆ– (ಇಹ........)

"ಇಲ್ಲಿ ತರುಣಿಯರು ಚಂಚಲತ್ವದಿಂದ ಸ್ಫುಟವಾಗಿ ಕಾಣಿಸುವ ಕಪ್ಪು ಪಾಪೆಯ ವಿಲಾಸಗಳನ್ನುಳ್ಳ ಕಣ್ಣುಗಳ ಸಮೂಹದಿಂದಲೂ ಮೊಗ್ಗುಗಳ ಮಧ್ಯದಲ್ಲಿರುವ ಅತಿರಮಣೀಯವಾದ ಭ್ರಮರಗಳಿಂದ ತಾವರೆಗೊಳಗಳೂ ಶೋಭೆಯನ್ನು ಹೊಂದಿವೆ."

ಈ ಪದ್ಯದಲ್ಲಿ ಮಧುಕರ(ಭ್ರಮರ)ಗಳ ಅಂಶದಲ್ಲಿ ನ್ಯೂನತ್ವವಿದೆ. (ಏಕೆಂದರೆ ಚಂಚಲತ್ವವು ಅವುಗಳಲ್ಲಿ ತೋರುವುದಿಲ್ಲ. ಉಪಮೇಯದಲ್ಲಿ ಅದನ್ನು ಚಟುಲತಯಾ ಎಂಬ ಪದದಿಂದ ನಿರ್ದೇಶಿಸಲಾಗಿದೆ. ಉಪಮಾನದಲ್ಲಿ ಆ ಅಂಶವನ್ನು ಬಿಟ್ಟಿರುವುದರಿಂದ ನ್ಯೂನತ್ವ.)

**ಅತಿರಿಕ್ತತ್ವಂ ಯಥಾ–**

**ದಿಶಿದಿಶಿ ವಿಹಗಾಸ್ತನೂಸ್ಸಮಂತಾದನಲಸಪಕ್ಷತಯೋಪಚೀಯಮಾನಾಃ ।**
**ಉಷಸಿ ಜಿಗಮಿಷಾಕುಲಾಸ್ತದಾನೀಂ ದಯಿತವಿಯೋಗದಶಾ ವಧೂಶ್ಚ ದೇಹುಃ ॥**

**ಅತ್ರ ದಯಿತವಿಯೋಗದಶಾಪಕ್ಷೇಽತಿರಿಕ್ತತ್ವಮ್ । ಅವ್ಯಯಮ್ ಆವೃತ್ತಿಹೇತುಃ । ಕಿಂಚಾತ್ರ**

ಶಬ್ದಶ್ಲೇಷೇ ನ ಕರ್ತೃಕರ್ಮಾದಿಪ್ರಧಾನಾರ್ಥಪದೋಪನಿಬಂಧೇನ ಶಬ್ದಸಾದೃಶ್ಯಮುಪಕಲ್ಪನೀಯಂ ಪ್ರಧಾನಸ್ವರೂಪಾಪಹಾರಪ್ರಸಂಗಾತ್ । ತತ್ರ ಕರ್ತುಃ ಸ್ವರೂಪಾಪಹಾರೋ ಯಥಾ–

ಇಹ ವಿಬುಧಗಜಸ್ಯ ಕರ್ಣತಾಲಃಸ್ಖಲನಸಮೀರವಿಧೂತಕುಂಭಧಾತೋಃ ।
ವಹತಿ ಮದನದೀಪರಾಗರಕ್ತಾ ರತಿಗೃಹಭಿತ್ತಿರಿವ ಶ್ರಿಯಂ ಪರಾರ್ಘ್ಯಾಮ್ ॥

ಯಥಾ ಚ– ಸಂಗ್ರಾಮನಾಟಕಕುತೂಹಲಿನಾಂ ತದಾನೀಮ್
ಉತ್ಥಾಪನೇನ ದಧತೋ ಮುದಮುತ್ತಮಾನಾಮ್ ।
ವಿಸ್ಪಷ್ಟಭಾಂಡರುಚಯೋಽತಿವಿಚಿತ್ರರೂಪಾಂ
ಲಕ್ಷ್ಮೀಂ ದಧುರ್ಜವನಿಕಾಮಹಿತಾಸ್ತುರಂಗಾಃ ॥ ಇತಿ ।

**ಅನುವಾದ:**

ಅತಿರಿಕ್ತತ್ವದ ಉದಾಹರಣೆ– "ಹಕ್ಕಿಗಳು ಅಲಸವಲ್ಲದ ರೆಕ್ಕೆಗಳನ್ನು ಹೊಂದಿದ್ದುದರಿಂದ ಬೆಳೆಯುತ್ತಿದ್ದ ಶರೀರಗಳನ್ನು ಎಲ್ಲ ದಿಕ್ಕುಗಳಲ್ಲೂ (ಹರಡಿದುವು?). ಬೆಳಗಾದಾಗ ಪ್ರಿಯವಿರಹಾವಸ್ಥೆಗಳು ಬೆಂಕಿಯ ಪಕ್ಷದಲ್ಲಿ ಸೇರಿಕೊಂಡು ಬೆಳೆಯುತ್ತಾ (ಪ್ರಿಯರ) ಗಮನಾಪೇಕ್ಷೆಯಿಂದ ವ್ಯಾಕುಲರಾಗಿದ್ದ ಸ್ತ್ರೀಯರನ್ನು ಸುಟ್ಟವು."

ಇಲ್ಲಿ ದಯಿತವಿಯೋಗದಶಾಪಕ್ಷದಲ್ಲಿ ಆಧಿಕ್ಯವಿದೆ. (ಚ ಎಂಬ) ಅವ್ಯಯವು ಆವೃತ್ತಿಗೆ ನಿಬಂಧನ. ಮತ್ತೊಂದು ವಿಷಯ ಏನೆಂದರೆ ಶಬ್ದಶ್ಲೇಷದಲ್ಲಿ ಕರ್ತೃಕರ್ಮ ಮುಂತಾದ ಪ್ರಧಾನಾರ್ಥಪದವನ್ನು ಬಳಸಿ ಶಬ್ದಸಾದೃಶ್ಯವನ್ನು ಕಲ್ಪಿಸಬಾರದು. ಏಕೆಂದರೆ ಆಗ ಪ್ರಧಾನಾರ್ಥದ ಸ್ವರೂಪವೇ ಹಾಳಾಗಬಹುದು. ಕರ್ತೃವಿನ ಸ್ವರೂಪಾಪಹಾರದ ಉದಾಹರಣೆ–

"ಇಲ್ಲಿ ಮದನದಿಯು ಪರಾಗಗಳಿಂದ ಕೆಂಪಾಗಿ ಮದನ–ದೀಪ–ರಾಗದಿಂದ ಕೆಂಪಾದ ರತಿಯ ಮನೆಯ ಗೋಡೆಯಂತೆ, ಬೀಸಣಿಗೆಯಂತಿರುವ ಕಿವಿಗಳ ಚಲನೆಯಿಂದ ಉಂಟಾದ ಗಾಳಿಯಿಂದ ಕುಂಭಸ್ಥಳದ ಮೇಲಿದ್ದ ಗೈರಿಕಾದಿಧಾತುಗಳನ್ನು ಕೊಡವಿಕೊಂಡ ಐರಾವತದ ಕಾಂತಿಯುನ್ನು ಪಡೆದುಕೊಂಡಿದೆ."

ಇನ್ನೊಂದು ಉದಾಹರಣೆ– (ಸಂಗ್ರಾಮ......) "ಯುದ್ಧವೆಂಬ ನಾಟಕದಲ್ಲಿ ಕುತೂಹಲಿಗಳಾಗಿದ್ದ ಶ್ರೇಷ್ಠಜನರ ಕುದುರೆಗಳು ಅತಿವಿಚಿತ್ರವಾದ ಕಾಂತಿಯನ್ನು ಹೊಂದಿ ಉತ್ಥಾಪನವೆಂಬ ಕ್ರಿಯೆಯಿಂದ ಆ ಜನರಿಗೆ ಸಂತೋಷವನ್ನು ಉಂಟುಮಾಡುತ್ತಾ, ತಮ್ಮ ಅಲಂಕಾರಗಳ ಹೊಳಪನ್ನು ಸ್ಪಷ್ಟಪಡಿಸುತ್ತಾ, ತಮ್ಮ ಮೇಲೆ ಹೊದಿಸಿದ್ದ ಮೇಲ್ವಾಸಿನಿಂದ ಶೋಭೆಯನ್ನು ಧರಿಸಿದುವು. ಆ ಕುದುರೆಗಳು ವೇಗದಲ್ಲಿ ಅತ್ಯಂತ ಹಿತವನ್ನುಂಟುಮಾಡುವುವೂ ಆಗಿದ್ದುವು."

**ವಿವರಣೆ:**

ಈ ಪದ್ಯಗಳಲ್ಲಿ ಶ್ಲಿಷ್ಟಪದಗಳಿವೆ. "ಇಹ ವಿಬುಧ....." ಎಂಬ ಪದ್ಯದಲ್ಲಿ ಮದನದೀ+ಪರಾಗ+ರಕ್ತಾ ಎಂದೂ ಮದನ+ದೀಪರಾಗ+ರಕ್ತಾ ಎಂದೂ ಎರಡು ವಿಧವಾದ ಪದಚ್ಛೇದದಿಂದ ಸಭಂಗಶ್ಲೇಷ. ಇಲ್ಲಿ ಕರ್ತೃವಾದ ಮದನದೀ ಎಂಬುದನ್ನೇ ಶ್ಲಿಷ್ಟಪದದೊಳಗೆ ಸೇರಿಸಿಬಿಟ್ಟಿರುವುದರಿಂದ ಅದು ಸ್ವತಂತ್ರವಾಗಿ ನಮಗೆ ಸಿಗದು. ಆದ್ದರಿಂದ ಕರ್ತೃವಿನ ಅಪಹಾರವಾಗಿದೆ.

"ಸಂಗ್ರಾಮನಾಟಕ........" ಎಂಬ ಪದ್ಯದಲ್ಲಿ ನಾಟಕಸಂಬಂಧವಾದ ಅರ್ಥವು ವಿವಕ್ಷಿತವಾದಾಗ ಜವನಿಕಾಃ (ಪರದೆಗಳು) ಎಂಬುದು ಕರ್ತೃ. ಜವನಿಕಾ+ಮಹಿತಾಃ+ತುರಂಗಾಃ ಎಂಬ ಪದಚ್ಛೇದವನ್ನು ಮಾಡಿಕೊಂಡರೆ ಆ ಅರ್ಥ ಸ್ಫುರಿಸುತ್ತದೆ. ಜವ+ನಿಕಾಮ+ಹಿತಾಃ+ತುರಂಗಾಃ ಎಂಬ ಶ್ಲೇಷವನ್ನು ಕವಿಯು ಇಟ್ಟಿರುವುದರಿಂದ ತುರಂಗಗಳಿಗೆ ಆ ವಿಶೇಷಣ ಜವನಿಕಾಮಹಿತಾಃ ಎಂಬುದು ಮೊದಲು ಭಾಸವಾಗುತ್ತದೆ. ಶ್ಲಿಷ್ಟಪದದಲ್ಲಿ ಪ್ರಧಾನವಾದ ಜವನಿಕಾ ಎಂಬ ಪದವು ಮುಚ್ಚಿಹೋಗುವುದರಿಂದ ಕರ್ತೃವಿನ ಅಪಹಾರ. ಜವನಿಕಾಮಹಿತಾಃ+ತು+ರಂಗಾಃ ಎಂದು ರಂಗವನ್ನು ಕರ್ತೃವನ್ನಾಗಿ ಮಾಡಿಕೊಂಡರೂ ಅದೂ ತುರಂಗಶಬ್ದದಲ್ಲಿ ಮುಚ್ಚಿಹೋಗಿದೆ.

**ಏವಮ್– ಅವಂಧ್ಯಕೋಪಸ್ಯ ವಿಹಂತುರಾಪದಾಂ**
**ಭವಂತಿ ವಶ್ಯಾಃ ಸ್ವಯಮೇವ ದೇಹಿನಃ ।**
**ಅಮರ್ಷಶೂನ್ಯೇನ ಜನಸ್ಯ ಜಂತುನಾ**
**ನ ಜಾತಹಾರ್ದೇನ ನ ವಿದ್ವಿಷಾದರಃ ॥**

**ಇತ್ಯಾದಾವಪಿ ದ್ರಷ್ಟವ್ಯಃ । ಅತ್ರ ಹಿ "ನ ವಿದ್ವಿಷಾ ಭೀಃ ಸುಹೃದಾ ಚ ನಾದರಃ" ಇತಿ ಯುಕ್ತಃ ಪಾಠಃ । ಕರ್ಮಣೋ ಯಥಾ–**

**ಕುಂತಾಲೀಭಿರ್ಯೂಥಮಿವ ಗಹನಾಮೇತಾಮ್ ಆಸಾದ್ಯೋಚ್ಚೈಃಶ್ರಿತಶರಶತಸಂಕೀರ್ಣಾಃ ।**
**ಅಸ್ಮಿನ್ ನಾನಾ ಫಲಕವಲನಸಂಸಕ್ತಾ ವಲ್ಗಂತ್ಯೇತೇ ದಿಶಿದಿಶಿ ಹರಿಸೈನ್ಯೌಘಾಃ ॥ ಇತಿ ।**

**ಅನುವಾದ:**

ಹೀಗೆ– "ಯಾವನ ಕೋಪವು ವ್ಯರ್ಥವಲ್ಲವೋ, ಯಾವನು ಆಪತ್ತುಗಳನ್ನು ತೊಲಗಿಸುವನೋ ಅಂಥವನಿಗೆ ಜನರು ತಾವಾಗಿ ವಶರಾಗುತ್ತಾರೆ. ಯಾವನಿಗೆ ಕೋಪವೇ ಇಲ್ಲವೋ ಅಂಥವನ ಸ್ನೇಹಕ್ಕೆ ಜನರು ಆದರವನ್ನು ತೋರಿಸುವುದಿಲ್ಲ, ಅವನು ದ್ವೇಷಿಸಿದರೂ ಅವರು ಭಯಪಡುವುದಿಲ್ಲ" ಇತ್ಯಾದಿಗಳಲ್ಲೂ ಕರ್ತ್ರಪಹಾರವನ್ನು ನೋಡಬಹುದು. ಈ ಪದ್ಯದಲ್ಲಿ ನ ವಿದ್ವಿಷಾ ಭೀಃ ಸುಹೃದಾ ಚ ನಾದರಃ ಎಂಬ ಪಾಠವು ಯುಕ್ತ.

ಕರ್ಮದ ಅಪಹಾರಕ್ಕೆ ಉದಾಹರಣೆ–

"ದಿಕ್ಕುದಿಕ್ಕಿನಲ್ಲೂ ಹರಿಸೈನ್ಯಸಮೂಹಗಳು ತಾಳವೃಕ್ಷಗಳ ಸಾಲುಗಳಿಂದ ಗಹನವಾದ ಈ ಭೂಮಿಯನ್ನು ಆಕ್ರಮಿಸಿ ನಾನಾ ಫಲಗಳ ಕವಲನ (ಭಕ್ಷಣ)ದಲ್ಲಿ ಆಸಕ್ತರಾಗಿ ಚೂಪಾದ ನೂರಾರು ಹುಲ್ಲುಬೆಂಡುಗಳಿಂದ ಮುಚ್ಚಿಹೋಗಿ ಜೋರಾಗಿ ಕೂಗುತ್ತಿವೆ."

"ಕುಂತಗಳೆಂಬ ಆಯುಧಗಳನ್ನು ಧರಿಸಿ, ನೂರಾರು ಚೂಪಾದ ಬಾಣಗಳಿಂದ ಚುಚ್ಚಿಸಲ್ಪಟ್ಟ ಆ ಹರಿಸೈನ್ಯಗಳು ಯುದ್ಧದಂತೆ ಇದ್ದ ಭೂಮಿಯನ್ನು ತಲುಪಿ ನಾನಾ ಗುರಾಣಿಗಳ ಚಲನದಲ್ಲಿ ಆಸಕ್ತರಾಗಿ ದಿಕ್ಕುದಿಕ್ಕಿನಲ್ಲಿ ಕೂಗುತ್ತಿದ್ದಾರೆ."

(ನಾನಾಫಲ+ಕವಲನ, ನಾನಾ+ಫಲಕ+ವಲನ, ಕುಂತ+ಆಲೀಭಿಃ, ಕುಂ+ತಾಲೀಭಿಃ ಎಂಬ ಸಭಂಗಶ್ಲೇಷ).

ಇಲ್ಲಿ ಕರ್ಮವಾದ ಭೂಮಿಯು ಕುಂತಾಲೀಭಿಃ ಎಂಬ ಪದದಲ್ಲಿ ಮುಚ್ಚಿಹೋಗಿದೆ.)

**ಕ್ರಿಯಾಯಾ ಯಥಾ–**
**ಕುಸುಮೈಃ ಕೃತವಾಸನಃ ಸಮಂತಾದ್ ಅಪನಿದ್ರತ್ವಮುಪೇಯಿವದ್ಭಿರಸ್ಮಿನ್ ।**
**ಶ್ರುತಿಮಂತ್ರಗಣಾಭಿರಾಮರೂಪೈರ್ನ ವವೌಷಟ್‌ಪದಶೋಭಿಭಿಃ ಸಮೀರಃ ॥**

**ಏಷ ಚಾರ್ಥೋ ನ್ಯಾಯಸಿದ್ಧೋಽಪಿ ಮೃದುಮತೀನ್ ಪ್ರತಿ ಸುಖಪ್ರತಿಪತ್ತಯೇ ವಚನೇನ ಪ್ರತಿಪಾದಿತಃ ।**
**ಸಾ ಚೇಯಮಖಿಲಸ್ಯೈವ ಪದಸ್ಯಾವೃತ್ತಿರಿಷ್ಯತೇ ।**
**ನಿಬಂಧನಬಲೋದ್‌ಭೂತಾ ನ ತದಂಶಸ್ಯ ಜಾತುಚಿತ್ ॥**

**ಅನುವಾದ:**

ಕ್ರಿಯೆಯ ಅಪಹಾರದ ಉದಾಹರಣೆ–

"ಆಗತಾನೆ ಅರಳುತ್ತಿದ್ದ, ದುಂಬಿಗಳಿಂದ ಶೋಭಿಸುತ್ತಿದ್ದ ವೌಷಟ್ ಪದದಿಂದ ಅಂದವಾದ ವೇದದ ಮಂತ್ರಗಳ ಸಮೂಹದಂತೆ ಸುಂದರ ರೂಪವನ್ನು ಹೊಂದಿದ್ದ ಹೂವುಗಳಿಂದ ಪರಿಮಳವನ್ನು ಪಡೆದಿದ್ದ ಗಾಳಿಯು ಅಲ್ಲಿ ಬೀಸಲಿಲ್ಲ."

ಈ ವಿಷಯವು ನ್ಯಾಯಸಿದ್ಧವೇ ಆಗಿದ್ದರೂ ಮೆದುವಾದ ಬುದ್ಧಿಯನ್ನು ಹೊಂದಿದವರಿಗೆ ಸುಖವಾಗಿ ಅರಿವಿಗೆ ಬರಲಿ ಎಂದು ಶಬ್ದತಃ ಪ್ರತಿಪಾದಿಸಲಾಗಿದೆ.

ನಿಬಂಧನಬಲದಿಂದ ಉಂಟಾಗುವ ಆವೃತ್ತಿಯು ಸಮಸ್ತಪದಕ್ಕೇ ಆಗಬೇಕು. ಎಂದೂ ಪದದ ಅಂಶಕ್ಕೆ ಆವೃತ್ತಿ ಇಲ್ಲ.

**ವಿವರಣೆ:**

ಕುಸುಮೈಃ ಕೃತವಾಸನಃ ...................... ಎಂಬ ಪದ್ಯದಲ್ಲಿ ನವ+ವೌಷಟ್+ಪದಶೋಭಿಭಿಃ ಎಂದು ಪದಚ್ಛೇದವಾಡಿ ವೇದಮಂತ್ರಗಳಿಗೆ ವಿಶೇಷಣ ವಾಡಬೇಕು. ಅನಂತರ ನ+ವವೌ+ಷಟ್ಪದಶೋಭಿಭಿಃ ಎಂಬ ಪದಚ್ಛೇದದಿಂದ ವವೌ ಎಂಬ ಕ್ರಿಯಾಪದವನ್ನು ಹುಡುಕಿಕೊಳ್ಳಬೇಕು. ಇಲ್ಲಿ ಕ್ರಿಯಾಪದ ಶ್ಲಿಷ್ಟಶಬ್ದದಲ್ಲಿ ಮುಚ್ಚಿಹೋಗಿದೆ. ಆದ್ದರಿಂದ ಕ್ರಿಯೆಯ ಅಪಹಾರ ಎಂದು ಮಹಿಮಭಟ್ಟನು ಹೇಳಿದ್ದಾನೆ.

**ಉಪಯುಕ್ತಾರ್ಥತಾ ಹ್ಯಸ್ಯ ಪದಸ್ಯೇವ ನ ವಿದ್ಯತೇ ।**
**ಅಧುನಾ ತೂಪಯೋಗೇಽಸ್ಯ ಪೂರ್ವಸ್ಯಾರ್ಥಸ್ತಿರೋಭವೇತ್ ॥**

**ಅರ್ಥಪ್ರಯೋಗೇ ಯುಗಪಲ್ಲಾಘವೇನೋಭಯೋರಪಿ ।**
**ಸ್ಯಾದಯಂ ಕಾಮಚಾರೋ ಯದ್ಯೇಕೇನೋಕ್ತಿರ್ದ್ವಯೋರ್ಭವೇತ್ ॥**
**ಇತ್ಯಂತರ ಶ್ಲೋಕಾಃ॥**

**"ಯತ್ರ ಚ ಮಾತಂಗಗಾಮಿನ್ಯಃ ಶೀಲವತ್ಯಶ್ಚ, ಗೌರ್ಯೋ ವಿಭವರತಾಶ್ಚ, ಶ್ಯಾಮಾಃ ಪದ್ಮರಾಗಿಣ್ಯಶ್ಚ, ಧವಲದ್ವಿಜಶುಚಿವದನಾಃ ಮದಿರಾಮೋದಿನಿಃಶ್ವಸಿತಾಶ್ಚ ಪ್ರಮದಾಃ" ಇತಿ ।**

**ಅನುವಾದ:**

ಪದಕ್ಕೆ ಇರುವಂತೆ ಅದರ ಅಂಶಕ್ಕೆ ಅರ್ಥದ ಉಪಯೋಗ ಇರುವುದಿಲ್ಲ. ಪದಾಂಶದ ಅರ್ಥವನ್ನು ಉಪಯೋಗಿಸಿಕೊಂಡರೆ ಪದದ ಅರ್ಥವು ಮುಚ್ಚಿಹೋದೀತು. ಒಂದೇ ಪದದಿಂದ ಎರಡು ಅರ್ಥಗಳ ಪ್ರತಿಪಾದನೆ ಸಾಧ್ಯವಾಗುವ ಹಾಗಿದ್ದರೆ ಲಾಘವದಿಂದ ಎರಡರ ಬದಲು ಒಂದು ಶಬ್ದವನ್ನು ಸ್ವಚ್ಛಂದವಾಗಿ ಪ್ರಯೋಗಿಸುವ ಅವಕಾಶವಾಗುತ್ತಿತ್ತು. ಇವು ಸಂಕ್ಷೇಪಾರ್ಥದ ಶ್ಲೋಕಗಳು. "(ಆ ನಗರದಲ್ಲಿ) ಸ್ತ್ರೀಯರು ಮಾತಂಗರನ್ನು ವರಿಸುವವರಾಗಿದ್ದರೂ ಶೀಲವತಿಯರು, ಗೌರಿಯರಾದರೂ ಶಿವೇತರರಲ್ಲಿ ಆಸಕ್ತರು, ಕಪ್ಪುಬಣ್ಣದವರಾದರೂ ಪದ್ಮರಾಗದಂತೆ ಕೆಂಪಾಗಿದ್ದವರು, ಬಿಳುಪಾದ ಬ್ರಾಹ್ಮಣರಂತೆ ಶುಚಿಯಾದ ಬಾಯನ್ನುಳ್ಳವರಾದರೂ ಹೆಂಡದ ವಾಸನೆಯುಳ್ಳ ನಿಶ್ವಾಸವನ್ನುಳ್ಳವರು."

**ವಿವರಣೆ:**

ಇಲ್ಲಿ ಹಲವು ಪದಗಳಲ್ಲಿ ಶ್ಲೇಷವಿದೆ. ಮಾತಂಗ ಎಂಬ ಪದಕ್ಕೆ ಚಂಡಾಲ ಎಂಬ ಅರ್ಥವೂ ಆನೆ ಎಂಬ ಅರ್ಥವೂ ಇದೆ. ಮಾತಂಗಗಾಮಿನ್ಯಃ ಎಂಬ ಪದಕ್ಕೆ ಚಂಡಾಲನ ಬಳಿ ಹೋಗುವವರು ಎಂಬ ಅರ್ಥವನ್ನು ಗ್ರಹಿಸಿದಾಗ ವಿರೋಧ. ಆನೆಯಂತೆ ಗಂಭೀರವಾಗಿ ನಡೆಯುವವರು ಎಂಬ ಅರ್ಥವನ್ನು ಗ್ರಹಿಸಿದರೆ ವಿರೋಧದ ಪರಿಹಾರ. ಗೌರ್ಯಃ ಎಂಬ ಪದಕ್ಕೆ ಗೌರಿಯರು ಎಂಬ ಅರ್ಥವನ್ನೂ ವಿಭವ ಎಂಬ ಪದಕ್ಕೆ ಭವನಲ್ಲದ (ಶಿವೇತರ) ಎಂಬ ಅರ್ಥವನ್ನೂ ಗ್ರಹಿಸಿದಾಗ ವಿರೋಧ. ಗೌರ್ಯಃ ಎಂಬುದಕ್ಕೆ ಬಿಳಿಬಣ್ಣದವರು ಎಂಬ ಅರ್ಥವನ್ನೂ ವಿಭವ ಎಂಬುದಕ್ಕೆ ಐಶ್ವರ್ಯ ಎಂಬ ಅರ್ಥವನ್ನೂ ಗ್ರಹಿಸಿದಾಗ ವಿರೋಧಪರಿಹಾರ. ಶ್ಯಾಮಾಃ ಎಂಬ ಪದಕ್ಕೆ ಕಪ್ಪುಬಣ್ಣದವರು ಎಂಬ ಅರ್ಥವನ್ನೂ ಪದ್ಮರಾಗಿಣ್ಯಃ ಎಂಬುದಕ್ಕೆ ತಾವರೆಯಂತೆ ಕೆಂಪಾದವರು ಎಂಬ ಅರ್ಥವನ್ನೂ ಗ್ರಹಿಸಿದಾಗ ವಿರೋಧ. ಶ್ಯಾಮಾಃ ಎಂದರೆ ಹದಿನಾರು ವರ್ಷದ ಯುವತಿಯರು. ಪದ್ಮರಾಗಿಣ್ಯಃ ಎಂದರೆ ಪದ್ಮರಾಗಮಣಿಗಳನ್ನು ಧರಿಸಿದವರು ಎಂಬ ಅರ್ಥವನ್ನು ಗ್ರಹಿಸಿದಾಗ ವಿರೋಧಪರಿಹಾರ. ದ್ವಿಜ ಎಂಬ ಶಬ್ದಕ್ಕೆ ಬ್ರಾಹ್ಮಣ ಎಂಬ ಅರ್ಥವನ್ನು ಗ್ರಹಿಸಿದಾಗ ವಿರೋಧ. ದ್ವಿಜ ಎಂದರೆ ಹಲ್ಲು ಎಂಬ ಅರ್ಥವು ಹೊಳೆದಾಗ ವಿರೋಧ ಪರಿಹಾರ. ಈ ವಾಕ್ಯವು ಬಾಣಭಟ್ಟನ ಹರ್ಷಚರಿತ ಎಂಬ ಗದ್ಯಕಾವ್ಯದಲ್ಲಿದೆ.

(ಚಶಬ್ದವು ವಿರೋಧಾರ್ಥಕ)

**ಅತ್ರ ಚಶಬ್ದಾವೇದಿತೋ ವಿರೋಧಃ । ತಸ್ಯಾಪಿ ಅಪಿಶಬ್ದಸ್ಯೇವ ತದರ್ಥಾಭಿಧಾನಸಾಮರ್ಥ್ಯೋಪಗಮಾತ್ । ಯಥಾ–**

ಘೃಣೀ ಕರ್ಣಃ ಪ್ರಮಾದೀ ಚ ತೇನ ಮೇಽರ್ಧರಥೋ ಮತಃ ।
ಇತ್ಯಸಿದ್ಧಂ ವಿರೋಧಸ್ಯ ಸಾಕ್ಷಾಚ್ಛಬ್ದೇನಾಪ್ರದರ್ಶಿತತ್ವಮ್ ।

ಖಂ ಯೇಽಭ್ಯುಜ್ಜ್ವಲಯಂತಿ ಲೂನತಮಸೋ ಯೇ ವಾ ನಖೋದ್ಭಾಸಿನೋ
ಯೇ ಪುಷ್ಣಂತಿ ಸರೋರುಹಶ್ರಿಯಮಧಿಕ್ಷಿಪ್ತಾಬ್ಜಭಾಸಶ್ಚ ಯೇ ।
ಯೇ ಮೂರ್ಧಸ್ವವಭಾಸಿನಃ ಕ್ಷಿತಿಭೃತಾಂ ಯೇ ಚಾಮರಾಣಾಂ ಶಿರಾಂ–
ಸ್ಯಾಕ್ರಾಮಂತ್ಯುಭಯೇಽಪಿ ತೇ ದಿನಪತೇಃ ಪಾದಾಃ ಶ್ರಿಯೈ ಸಂತು ವಃ ॥

**ಅನುವಾದ:**

ಈ ವಾಕ್ಯದಲ್ಲಿ ವಿರೋಧವನ್ನು ಚಶಬ್ದವು ತಿಳಿಸುತ್ತದೆ. ಅದಕ್ಕೂ ಅಪಿ ಶಬ್ದದಂತೆ ವಿರೋಧಾರ್ಥವನ್ನು ತಿಳಿಸುವ ಸಾಮರ್ಥ್ಯವಿದೆ ಎಂದು ಒಪ್ಪಿಕೊಳ್ಳಲಾಗಿದೆ. ಉದಾಹರಣೆ– "ಕರ್ಣನು ದ್ವೇಷಿಯೂ ಪ್ರಮಾದಿಯೂ ಆಗಿದ್ದರೂ ಅವನು ಅರ್ಧರಥ ಎಂದು ನನ್ನ ಅಭಿಪ್ರಾಯ." ಆದ್ದರಿಂದ (ಯತ್ರ ಚ...... ಎಂಬ ವಾಕ್ಯದಲ್ಲಿ) ವಿರೋಧವನ್ನು ಶಬ್ದದಿಂದ ಸಾಕ್ಷಾತ್ತಾಗಿ ಹೇಳಿಲ್ಲ ಎಂಬುದು ಅಸಿದ್ಧ.

"ದಿನಪತಿ ಸೂರ್ಯನ ಯಾವ ಪಾದ(ಕಿರಣ)ಗಳು ಮುಗಿಲನ್ನು ಬೆಳಗಿಸುವುವೋ ಮತ್ತು ಕತ್ತಲೆಯನ್ನು ಕಳೆಯುವುವೋ ಹಾಗೂ ಯಾವ ಪಾದ(ಕಾಲು)ಗಳು ನಖ(ಉಗುರು)ಗಳಿಂದ ಹೊಳೆಯುವುವೋ, ಯಾವ ಪಾದಗಳು ತಾವರೆಗಳ ಕಾಂತಿಯನ್ನು ಹೆಚ್ಚಿಸುವುವೋ ಮತ್ತೆ ಯಾವುವು ಆ ತಾವರೆಗಳ ಹೊಳಪನ್ನು ಕುಗ್ಗಿಸುವುವೋ, ಯಾವ ಪಾದಗಳು ಬೆಟ್ಟಗಳ ಶಿಖರಗಳ ಮೇಲೆ ಕಂಗೊಳಿಸುವುವೋ ಮತ್ತೆ ಯಾವುವು ದೇವತೆಗಳ ತಲೆಗಳನ್ನು ಮೆಟ್ಟುವುವೋ ಅವು ನಿಮಗೆ ಸಂಪತ್ತನ್ನು ತರಲಿ."

**ವಿವರಣೆ:**

ಪಾದ ಶಬ್ದಕ್ಕೆ ಕಿರಣ ಮತ್ತು ಹೆಜ್ಜೆ ಎಂಬ ಎರಡು ಅರ್ಥಗಳಿವೆ. ಸೂರ್ಯನ ಕಿರಣಗಳು ಮುಗಿಲನ್ನು ಬೆಳಗಿಸುತ್ತವೆ, ತಾವರೆಗಳ ಕಾಂತಿಯನ್ನು ಹೆಚ್ಚಿಸುತ್ತವೆ ಮತ್ತು ಬೆಟ್ಟಗಳ ಶಿಖರಗಳ ಮೇಲೆ ಕಂಗೊಳಿಸುತ್ತವೆ. ಹೆಜ್ಜೆಗಳಾದರೋ ನಖಗಳಿಂದ ಶೋಭಿಸುತ್ತಾ, ತಾವರೆಗಳ ಹೆಮ್ಮೆಯನ್ನು ಕುಗ್ಗಿಸಿ ದೇವತೆಗಳ ತಲೆಗಳನ್ನು ಮೆಟ್ಟುತ್ತವೆ.

ಇತ್ಯತ್ರ ಉಭಯೇಷಾಂ ಪಾದಾನಾಂ ವ್ಯತಿರೇಕೋಽನುಮೇಯಸ್ತತ್ರ ಚೈಷಾಂ ಭಿನ್ನವಿಶೇಷಣತ್ವಮೇವ ಹೇತುಃ । ಅಭಿನ್ನವಿಶೇಷಣತ್ವೇ ಹಿ ನಿಬಂಧನಸದ್ಭಾವೇ ಸತಿ ಸಾದೃಶ್ಯ–ಮಾತ್ರಂ ಪ್ರತೀಯತೇ, ನ ವ್ಯತಿರೇಕಃ, ಯಥಾ–

ಭಕ್ತಿಪ್ರಹ್ವವಿಲೋಕನಪ್ರಣಯಿನೀ ನೀಲೋತ್ಪಲಸ್ಪರ್ಧಿನೀ
ಧ್ಯಾನಾಲಂಬನತಾಂ ಸಮಾಧಿನಿರತೈರ್ನೀತೇ ಹಿತಪ್ರಾಪ್ತಯೇ ।
ಲಾವಣ್ಯಸ್ಯ ಮಹಾನಿಧೀ ರಸಿಕತಾಂ ಲಕ್ಷ್ಮೀದೃಶೋಸ್ತನ್ವತೀ
ಯುಷ್ಮಾಕಂ ಕುರುತಾಂ ಭವಾರ್ತಿಶಮನಂ ನೇತ್ರೇ ತನುರ್ವಾ ಹರೇಃ ಇತ್ಯಾದೌ ।

**ಅನುವಾದ:**

ಈ ಪದ್ಯದಲ್ಲಿ ಎರಡು ವಿಧವಾದ ಪಾದಗಳ ವ್ಯತಿರೇಕಾಲಂಕಾರವು ಅನುಮೇಯ. ಹಾಗೆ ಮಾಡುವುದಕ್ಕೆ ಅವುಗಳ ವಿಶೇಷಣಗಳು ಭಿನ್ನವಾಗಿರುವುದೇ ಕಾರಣ. ವಿಶೇಷಣಗಳು ಸಮಾನವಾಗಿದ್ದು ನಿಬಂಧನ(ಸೂಚಕ)ವೂ ಇದ್ದರೆ ಸಾದೃಶ್ಯವು ಮಾತ್ರ ತೋರುತ್ತದೆ, ವ್ಯತಿರೇಕವಲ್ಲ. ಅದಕ್ಕೆ ಉದಾಹರಣೆ–

ಭಕ್ತಿಯಿಂದ ಬಗ್ಗಿದವರನ್ನು ನೋಡುವುದರಲ್ಲಿ ಪ್ರೀತಿಯನ್ನು ಹೊಂದಿರುವ, ಕನ್ನೈದಿಲೆಗಳೊಡನೆ ಸ್ಪರ್ಧೆಯನ್ನು ಹೂಡುವ, ಸಮಾಧಿನಿರತರಿಂದ ಹಿತಪ್ರಾಪ್ತಿಗಾಗಿ (ಅಥವಾ ಅಭೀಷ್ಟ ಸಿಕ್ಕುವುದಕ್ಕಾಗಿ) ಧ್ಯಾನದ ಆಲಂಬನವಾಗುವ, ಲಾವಣ್ಯನಿಧಿಯಾದ (ಅಥವಾ ನಿಧಿಗಳಾದ), ಲಕ್ಷ್ಮಿಯ ಕಣ್ಗಳಿಗೆ ರಸಿಕತೆಯನ್ನು ತರುವ, ವಿಷ್ಣುವಿನ ಕಣ್ಣುಗಳು ಅಥವಾ ದೇಹವು ನಿಮ್ಮ ಸಂಸಾರದುಃಖದ ನಾಶವನ್ನು ಉಂಟುಮಾಡಲಿ.

**ವಿವರಣೆ:**

ಇಲ್ಲಿ ಕವಿಯು ವ್ಯಾಕರಣಪಾಂಡಿತ್ಯದಿಂದ ಮತ್ತು ಜಾಣ್ಮೆಯಿಂದ ನೇತ್ರೇ ಎಂಬ ದ್ವಿವಚನಶಬ್ದಕ್ಕೂ ತನುಃ ಎಂಬ ಏಕವಚನ ಶಬ್ದಕ್ಕೂ ಹೊಂದುವಂತೆ ವಿಶೇಷಣಗಳನ್ನೂ ಕ್ರಿಯಾಪದವನ್ನೂ ಬಳಸಿದ್ದಾನೆ. ವಿಶೇಷಣಗಳು ಅಭಿನ್ನವಾಗಿರುವುದರಿಂದ ಸಾದೃಶ್ಯವೇ ತೋರುತ್ತದೆ.

**ಭಿನ್ನವಿಶೇಷಣತ್ವೇ ತು ತೇಷಾಮನ್ಯೋನ್ಯವಿಶೇಷಪ್ರತಿಪತ್ತಿಃ । ವಿಶೇಷೋ ಹಿ ನ ಭೇದಮಂತರೇಣ ಭವತಿ । ಸ ಏವ ಚ ವ್ಯತಿರೇಕೋ ನಾಪರ ಇತಿ ಭಿನ್ನವಿಶೇಷಣತ್ವಾನುಮೇಯ ಏವಾಸೌ, ನ ಶಬ್ದಶಕ್ತಿಮೂಲಃ । ತದಭಿವ್ಯಕ್ತಿನಿಬಂಧನಂ ಕ್ವಚಿದನ್ಯದೀಯಂ ವಚನಮಪಿ ಭವತಿ। ಯಥಾ ವೇಣೀಸಂಹಾರೇ–**

**ರಕ್ತ ಪ್ರಸಾಧಿತಭುವಃ ಕ್ಷತವಿಗ್ರಹಾಶ್ಚ**
**ಸ್ವಸ್ಥಾ ಭವಂತು ಕುರುರಾಜಸುತಾಃ ಸಭೃತ್ಯಾಃ ।**
**ಇತಿ ಶೈಲೂಷವಚನಾಕರ್ಣನಕ್ರುದ್ಧಂ ಭೀಮಸೇನಂ ಸಾಂತ್ವಯಿತುಂ**
**ಸಹದೇವಸ್ಯ "ಆರ್ಯ, ಅನುಮತಮೇವ ನೋ ಭರತಪುತ್ರಸ್ಯ**
**ವಚನಮ್" ಇತಿ ವಚನಮ್ ।**

**ಅನುವಾದ:**

ವಿಶೇಷಣಗಳು ಭಿನ್ನವಾಗಿದ್ದರೆ ಅವುಗಳಿಗೆ ಪರಸ್ಪರ ವಿಶೇಷವು ತೋರುತ್ತದೆ. ಭೇದವೇ ಇಲ್ಲದೆ ವಿಶೇಷ ಇರದು. ಅಂಥ ವಿಶೇಷವೇ ವ್ಯತಿರೇಕ, ಬೇರೆಯದಲ್ಲ. ಆದ್ದರಿಂದ (ಖಂ ಯೇ...... ಎಂಬ ಪದ್ಯದಲ್ಲಿ) ಭಿನ್ನವಿಶೇಷಣಗಳಿಂದ ವ್ಯತಿರೇಕವು ಅನುಮೇಯ. ಅದು ಶಬ್ದಶಕ್ತಿಮೂಲ(ಧ್ವನಿ) ಅಲ್ಲ. ಕೆಲವೆಡೆಗಳಲ್ಲಿ ಶ್ಲೇಷದ ಅಭಿವ್ಯಕ್ತಿಗೆ ಬೇರೆ ವಕ್ತೃವಿನ ಮಾತೂ ನಿಮಿತ್ತವಾಗಬಹುದು. ಹೇಗೆಂದರೆ ವೇಣೀಸಂಹಾರ ನಾಟಕದಲ್ಲಿ–

"ಅನುರಾಗದಿಂದ ತುಂಬಿದ ಭೂಮಿಯನ್ನು ಹೊಂದಿ ಯದ್ಧಗಳಿಲ್ಲದೆ ಕುರುರಾಜನ ಮಕ್ಕಳು ಭೃತ್ಯರೊಡನೆ ಸುಖವಾಗಿರಲಿ" ಎಂಬ ನಟನ ಮಾತುಗಳನ್ನು ಕೇಳಿ ಸಿಟ್ಟುಮಾಡಿಕೊಂಡ ಭೀಮಸೇನನನ್ನು ಸಮಾಧಾನಗೊಳಿಸಲು ಸಹದೇವನು ಹೇಳುವ "ಆರ್ಯ, ಈ ನಟನ ಮಾತು ನಮಗೂ ಇಷ್ಟವಾದುದೇ" ಎಂಬ ವಚನ.

**ವಿವರಣೆ:**

ಶೈಲೂಷ ಎಂದರೂ ಭರತಪುತ್ರ ಎಂದರೂ ನಟ. ಸಹದೇವನು ಹೇಳಿದ ಮೇಲೆ ನಟನ ಮಾತಿಗೆ "ರಕ್ತದಿಂದ ಭೂಮಿಯನ್ನು ನೆನೆಸಿ, ಶರೀರಗಳನ್ನು ಕತ್ತರಿಸಿಕೊಂಡು ಕುರುರಾಜನ ಮಕ್ಕಳು ಭೃತ್ಯಸಹಿತರಾಗಿ ಸ್ವರ್ಗಸ್ಥರಾಗಲಿ" ಎಂಬ ಅರ್ಥವು ತೋರುತ್ತದೆ.

**ಕ್ವಚಿತ್ ಪುನಃ ಪ್ರತೀಯಮಾನಾರ್ಥಸ್ತದಭಿವ್ಯಕ್ತಿನಿಬಂಧನಂ ಭವತಿ । ಯಥಾ–**
**ಆಲಿಂಗನಾದರಚಿತಸ್ಥಿತಿರಾಬಭೌ ಯಾ ಪತ್ಯುರ್ವಿಕಾಸಿಪರಿಖಾಜಲನೀವಿಬಂಧಾ ।**
**ವಿಸ್ತಾರಿಸಾಲಜಘನಂ ಪರಿವರ್ತಮಾನನಕ್ಷತ್ರರತ್ನರಶನಾಗುಣಮುದ್ವಹಂತೀ ॥ ಇತಿ ।**

**ಅತ್ರ ತದುಚಿತವಿಶೇಷಣಸಾಮರ್ಥ್ಯೋಪಸ್ಥಾಪಿತೋ ನಾಯಿಕಾರ್ಥಃ ಪತ್ಯುರಾಲಿಂಗನಾದರಚಿತಸ್ಥಿತಸ್ಯ ಶ್ಲೇಷಸ್ಯ ।**

**ಅನುವಾದ:**

ಕೆಲವು ಸ್ಥಳಗಳಲ್ಲಿ ಪ್ರತೀಯಮಾನಾರ್ಥವು ಶ್ಲೇಷದ ಅಭಿವ್ಯಕ್ತಿಗೆ ನಿಮಿತ್ತವಾಗುತ್ತದೆ. ಉದಾಹರಣೆ– "ಆ ನಗರಿಯು ಒಡೆಯನ ಆಲಿಂಗನದ ಆದರದಿಂದ ಸ್ಥಿತಿಯನ್ನು ಪಡೆದುಕೊಂಡು ವಿಶಾಲವಾದ ಕಂದಕದ ಜಲವನ್ನೇ ನೀವಿಬಂಧವನ್ನಾಗಿ (ಸೀರೆಯ ಗಂಟನ್ನಾಗಿ) ಮಾಡಿಕೊಂಡು, ವಿಸ್ತಾರವಾಗಿದ್ದ ಪ್ರಾಕಾರವನ್ನೇ ಜಘನವನ್ನಾಗಿ ಹೊಂದಿ, ಸುತ್ತುತ್ತಿದ್ದ ನಕ್ಷತ್ರಗಳೆಂಬ ರತ್ನಗಳಿಂದ ಕೂಡಿದ ಡಾಬನ್ನು ಧರಿಸಿ ಕಂಗೊಳಿಸುತ್ತಿತ್ತು."

ಇಲ್ಲಿ ಉಚಿತವಾದ ವಿಶೇಷಣಗಳ ಸಾಮರ್ಥ್ಯದಿಂದ ತೋರುವ ನಾಯಿಕಾರೂಪವಾದ ಅರ್ಥವು ಪತಿಯ ಆಲಿಂಗನದಲ್ಲಿ ಅವಳಿಗಿದ್ದ ಆದರದಿಂದ ಪಡೆದ ಸ್ಥಿತಿ ಎಂಬ ಶ್ಲೇಷವನ್ನು ಅಭಿವ್ಯಕ್ತಗೊಳಿಸುತ್ತದೆ.

**ವಿವರಣೆ:**

ನಗರೀ, ಯಾ ಎಂಬ ಪದಗಳು ಸ್ತ್ರೀಲಿಂಗದಲ್ಲಿವೆ. ನಗರಿಗೆ ಪರಿಖಾಜಲವೇ ನೀವಿಬಂಧ. ನಾಯಿಕೆಗೆ ಪರಿಖಾಜಲದಂತೆ ಇರುವ ನೀವಿಬಂಧ. ನಗರಿಗೆ ವಿಸ್ತಾರವಾದ ಸಾಲ(ಪ್ರಾಕಾರವೇ) ಜಘನ. ನಾಯಿಕೆಗೆ ವಿಸ್ತಾರವಾದ ಪ್ರಾಕಾರದಂತೆ ಇದ್ದ ಜಘನ. ನಗರಿಗೆ ನಕ್ಷತ್ರಗಳ ಸಾಲೇ ರತ್ನರಶನಾಗುಣ. (ಎಂದರೆ ರತ್ನಖಚಿತವಾದ ಒಡ್ಯಾಣ). ನಾಯಿಕೆಗೆ ನಕ್ಷತ್ರಗಳ ಸಾಲಿನಂತೆ ಶೋಭಿಸುವ ರತ್ನರಶನಾಗುಣ. ಹೀಗೆ ಪ್ರತೀಯಮಾನ ನಾಯಿಕಾರ್ಥವು ಶ್ಲೇಷದ ಸ್ಫುರಣಕ್ಕೆ ನಿಬಂಧನ.

**ಯತ್ರ ತು ಆವೃತ್ತಿನಿಬಂಧನಗಂಧೋಽಪಿ ನ ಸಂಭವತಿ ನ ತತ್ರಾರ್ಥಾಂತರಾವಗತಿರಿತಿ ವೃಥೈವ ತತ್ರ ಕವೀನಾಮ್ ಉಭಯಾರ್ಥಪದೋಪನಿಬಂಧಪ್ರಯಾಸಃ, ವಾಚ್ಯಾವಚನ–ದೋಷದುಷ್ಟತ್ವಾತ್। ತತ್ರ ಶಬ್ದಶ್ಲೇಷೇ ಯಥಾ–**

**ಕ್ಷ್ಮಾಭರ್ತುರಸ್ಯ ವಿಕಟಃ ಕಟಕಃ ಸಪೀಲುಪಾಲೀಕುಲಸ್ಸಹರಿಸೈನ್ಯಶತಾವಮರ್ದಃ ।**
**ಲಕ್ಷ್ಮೀಂ ವಿಲಾಸಘಟನಾಂ ನಯತಿ ವ್ಯಪಾಸ್ತನಾನಾಧಿಕಾಮಚರಮಾಗಧರಾಜಿತಶ್ರೀಃ ॥ ಇತಿ ।**

**ಅನುವಾದ:**

ಎಲ್ಲಿ ಆವೃತ್ತಿನಿಮಿತ್ತದ ಸುಳಿವೂ ಸಂಭವಿಸುವುದಿಲ್ಲವೋ ಅಲ್ಲಿ ಎರಡನೆಯ ಅರ್ಥದ ಅರಿವೇ ಉಂಟಾಗುವುದಿಲ್ಲವಾದುದರಿಂದ ಎರಡು ಅರ್ಥಗಳನ್ನು ಹೊಂದಿರುವ ಪದಗಳನ್ನು ಜೋಡಿಸಲು ಕವಿಗಳು ಪಡುವ ಪ್ರಯಾಸವು ಅಂಥ ಸ್ಥಳದಲ್ಲಿ ವ್ಯರ್ಥ, ಅಂಥ ಪ್ರಯೋಗಗಳು ವಾಚ್ಯಾವಚನ ಎಂಬ ದೋಷಕ್ಕೆ ಜಾಗವಾಗುತ್ತದೆ. ಅಂಥ ಶಬ್ದಶ್ಲೇಷದ ಉದಾಹರಣೆ (ಕ್ಷ್ಮಾಭರ್ತು........)

"ಈ ಬೆಟ್ಟದ ವಿಶಾಲವಾದ ತಪ್ಪಲು ಪೀಲು ಎಂಬ ವೃಕ್ಷಗಳ ಸಮೂಹದಿಂದ ಕೂಡಿದೆ, ಇದರಲ್ಲಿ ಸಿಂಹಗಳು ನೂರಾರು ಸಂಖ್ಯೆಯಲ್ಲಿದ್ದು ಮರ್ದನವನ್ನು ಮಾಡುತ್ತಿವೆ. ಪೂರ್ವಪರ್ವತದ ಭೂಮಿಯಿಂದಲೂ ಇದರ ಕಾಂತಿಯನ್ನು ಗೆಲ್ಲಲಾಗಿಲ್ಲ. ಇದು ಲಕ್ಷ್ಮಿಯ ವಿಲಾಸವನ್ನು ಸಾಧಿಸುತ್ತಿದೆ."

ಅಥವಾ

"ಈ ರಾಜನ ವಿಶಾಲವಾದ ಸೈನ್ಯವು ಆನೆಗಳ ಹಿಂಡುಗಳಿಂದ ಕೂಡಿದೆ. ಅದರಲ್ಲಿ ಕುದುರೆಗಳು ಉಜ್ಜಾಡುತ್ತಿವೆ. ಅಧಿಕವಾದ ಇಷ್ಟಬಂದಂತೆ ಸಂಚರಿಸುತ್ತಿರುವ ಮಾಗಧರಿಂದ ಅದರ ಕಾಂತಿಯು ಹೆಚ್ಚುತ್ತಿದೆ. ಲಕ್ಷ್ಮಿಯ ವಿಲಾಸ ಘಟನೆಯನ್ನು ಅದು ಆಗುಮಾಡುತ್ತಿದೆ."

**ವಿವರಣೆ:**

ಈ ಪದ್ಯದಲ್ಲಿ ಹಲವು ಶ್ಲಿಷ್ಟ ಪದಗಳಿವೆ.
ಕ್ಷ್ಮಾಭರ್ತಾ = ಬೆಟ್ಟ, ದೊರೆ.
ಕಟಕಃ = ತಪ್ಪಲುಪ್ರದೇಶ, ಸೈನ್ಯ
ಪೀಲು = ವೃಕ್ಷವಿಶೇಷ, ಆನೆ
ಹರಿ = ಸಿಂಹ, ಕುದುರೆ
ಸಭಂಗಶ್ಲೇಷವೂ ಇಲ್ಲಿದೆ–

ನಾನಾಧಿ+ಕಾಮಚರ+ಮಾಗಧರಾಜಿತಶ್ರೀಃ, ನಾನಾಧಿಕಾಮ್+ಅಚರಮ+ ಅಗ+ಧರಾ+ಜಿತಶ್ರೀಃ ಈ ರೀತಿಯಾದ ಶ್ಲಿಷ್ಟಪದಗಳ ಯೋಜನೆಗಾಗಿ ಕವಿಯು ಪ್ರಯಾಸಪಟ್ಟಿರುವುದು ಸ್ಪಷ್ಟ. ಆದರೆ ಎರಡನೆಯ ಅರ್ಥವನ್ನು ಗ್ರಹಿಸಬೇಕೆಂದು ಸೂಚಿಸುವ ನಿಬಂಧನವೇ ಇಲ್ಲ. ಆದ್ದರಿಂದ ಕವಿಯ ಪ್ರಯಾಸ ವ್ಯರ್ಥ ಎಂದು ಅಭಿಪ್ರಾಯಪಟ್ಟಿದ್ದಾನೆ ಮಹಿಮಭಟ್ಟ.

**ಯಥಾ ಚ–**

**ಯೇನ ಧ್ವಸ್ತಮನೋಭವೇನ ಬಲಿಜಿತ್ಕಾಯಃ ಪುರಾ ಸ್ತ್ರೀಕೃತೋ**
**ಯಶ್ಚೋದ್ವೃತ್ತಭುಜಂಗಹಾರವಲಯೋ ಗಂಗಾಂ ಚ ಯೋಽಧಾರಯತ್ ।**

**ಯಸ್ಯಾಹುಃ ಶಶಿಮಚ್ಛಿರೋಹರ ಇತಿ ಸ್ತುತ್ಯಂ ಚ ನಾಮಾಮರಾಃ**
**ಪಾಯಾತ್ಸ ಸ್ವಯಮಂಧಕಕ್ಷಯಕರಸ್ತ್ವಾಂ ಸರ್ವದೋಮಾಧವಃ ॥**

**ಅನುವಾದ:**

(ಈ ಪದ್ಯದಲ್ಲಿ ಶಿವಪರವಾಗಿ ಮತ್ತು ವಿಷ್ಣುಪರವಾಗಿ ಎಂದು ಎರಡು ಅರ್ಥಗಳನ್ನು ಗ್ರಹಿಸಬೇಕು.) ಶಿವಪರವಾಗಿ ಅರ್ಥ ಮಾಡುವಾಗ ಪದವಿಭಾಗ–

ಯೇನ ಧ್ವಸ್ತಮನೋಭವೇನ ಬಲಿಜಿತ್ಕಾಯಃ ಪುರಾ
ಅಸ್ತ್ರೀಕೃತಃ, ಯಶ್ಚ ಉದ್ರಿಕ್ತಭುಜಂಗಹಾರವಲಯಃ,
ಗಂಗಾಂ ಚ ಯಃ ಅಧಾರಯತ್, ಯಸ್ಯ, ಆಹುಃ ಶಶಿಮಚ್ಛಿರಃ,
ಹರಃ ಇತಿ ಸ್ತುತ್ಯಂ ಚ ನಾಮ ಅಮರಾಃ, ಪಾಯಾತ್, ಸಃ
ಸ್ವಯಮ್, ಅಂಧಕಕ್ಷಯಕರಃ, ತ್ವಾಂ ಸರ್ವದಾ, ಉಮಾಧವಃ ।

ಅರ್ಥ– "ಮನ್ಮಥನನ್ನು ಧ್ವಂಸಗೊಳಿಸಿದ ಯಾವನಿಂದ ಬಲಿಯನ್ನು ಜಯಿಸಿದ ವಿಷ್ಣುವಿನ ದೇಹವು ಹಿಂದೆ ಅಸ್ತ್ರವಾಗಿ ಮಾಡಲ್ಪಟ್ಟಿತೋ, ಯಾವನು ಹೆಡೆಯೆತ್ತುವ ಹಾವುಗಳನ್ನು ಹಾರವನ್ನಾಗಿ ಮತ್ತು ಬಳೆಯನ್ನಾಗಿ ಮಾಡಿಕೊಂಡಿರುವನೋ, ಗಂಗೆಯನ್ನು ಧರಿಸಿರುವನೋ, ಯಾವನಿಗೆ ಚಂದ್ರನನ್ನು ಧರಿಸಿರುವ ತಲೆ ಇದೆಯೆಂದೂ ಹರ ಎಂಬ ಸ್ತುತ್ಯರ್ಹವಾದ ಹೆಸರಿದೆಯೆಂದೂ ದೇವತೆಗಳು ಹೇಳುವರೋ ಅಂಧಕಾಸುರಸಂಹಾರವನ್ನು ಮಾಡಿದ ಆ ಉಮಾಪತಿಯು ನಿನ್ನನ್ನು ಕಾಪಾಡಲಿ."

ವಿಷ್ಣುಪರವಾಗಿ ಪದವಿಭಾಗ–

ಯೇನ ಧ್ವಸ್ತಮ್ ಅನಃ ಅಭವೇನ ಬಲಿಜಿತ್ಕಾಯಃ ಪುರಾ ಸ್ತ್ರೀಕೃತಃ,
ಯಃ ಚ ಉದ್ರಿಕ್ತಭುಜಂಗಹಾ, ರವಲಯಃ ಅಗಂ ಗಾಂ ಚ ಯಃ
ಅಧಾರಯತ್, ಯಸ್ಯ ಆಹುಃ ಶಶಿಮಚ್ಛಿರೋಹರಃ ಇತಿ ಸ್ತುತ್ಯಂ ಚ ನಾಮ
ಅಮರಾಃ, ಪಾಯಾತ್ ಸಃ ಸ್ವಯಮ್ ಅಂಧಕಕ್ಷಯಕರಃ ತ್ವಾಂ
ಸರ್ವದಃ ಮಾಧವಃ ।

ಅರ್ಥ– "ಯಾರಿಂದ ಶಕಟವು ಧ್ವಂಸಗೊಳಿಸಲ್ಪಟ್ಟಿತೋ, ಜನ್ಮರಹಿತನಾದ ಯಾರಿಂದ ಬಲಿಯನ್ನು ಜಯಿಸಿದ ತನ್ನ ಶರೀರವು ಸ್ತ್ರೀಯಾಗಿ ಮಾಡಲ್ಪಟ್ಟಿತೋ, ಸಿಟ್ಟಿಗೆದ್ದ ಹಾವನ್ನು ಯಾವನು ನಿವಾರಿಸಿದನೋ, ಯಾವನಲ್ಲಿ ಶಬ್ದವು ಲಯ ಹೊಂದುವುದೋ, ಬೆಟ್ಟವನ್ನೂ ಭೂಮಿಯನ್ನೂ ಯಾವನು ಧರಿಸಿದನೋ, ಯಾವನಿಗೆ ರಾಹುವಿನ ತಲೆಯನ್ನು ತೆಗೆದವನೆಂಬ ಸ್ತುತ್ಯವಾದ ಹೆಸರನ್ನು ದೇವತೆಗಳು ಹೇಳುವರೋ, ಯಾವನು ಅಂಧಕರಿಗೆ ಮನೆಯನ್ನು ಮಾಡಿಕೊಟ್ಟನೋ ಆ ಮಾಧವನು ಸದಾ ನಿನ್ನನ್ನು ಕಾಪಾಡಲಿ."

(ಈ ಪದ್ಯದಲ್ಲಿ ನಿಬಂಧನವಿಲ್ಲದ ಕಾರಣದಿಂದ ಎರಡನೆಯ ಅರ್ಥವು ತೋರುವುದಿಲ್ಲ, ಶ್ಲಿಷ್ಟಪದಗಳ ಯೋಜನೆಗಾಗಿ ಕವಿಯು ಪಟ್ಟಿರುವ ಪ್ರಯಾಸ ವ್ಯರ್ಥ ಎಂದು ಮಹಿಮಭಟ್ಟನ ಅನಿಸಿಕೆ. ಆದರೆ ಇತರ ಆಲಂಕಾರಿಕರು ಇದನ್ನು ಶ್ಲೇಷೋದಾಹರಣೆಯೆಂದು ಒಪ್ಪಿಕೊಂಡಿದ್ದಾರೆ. ಶಿವ, ವಿಷ್ಣು ಇಬ್ಬರನ್ನೂ ಸ್ತುತಿಸಲು ಕವಿಯು ಪ್ರಯತ್ನಿಸಿರುವುದರಿಂದ ಇಬ್ಬರೂ ಪ್ರಸ್ತುತರೇ.)

**ಏವಮ್–**

**ಕಹ ಣಾಮ ಣ ಹೋಸಿ ತುಮ ಭಾಅಣಮಸಮಂಜಸಸ್ಸಣರಣಾಹ ।**
**ಣಿಚ್ಚಂ ಚೇಅ ಕುಣಂತೋ ಜಹಿಚ್ಛಮತ್ತಾಣ ವಿಣಿಓಅಮ್ ॥**
**(ಕಥಂ ನಾಮ ನ ಭವಸಿ ತ್ವಂ ಭಾಜನಮಸಮಂಜಸಸ್ಯ ನರನಾಥ ।**
**ನಿತ್ಯಂ ಚೈವ ಕುರ್ವನ್ ಯಥೇಚ್ಛಮರ್ಥಾನಾಂ ವಿನಿಯೋಗಮ್ ॥)**

**ಇತ್ಯಾದಾವಪಿ ದ್ರಷ್ಟವ್ಯಃ । ನ ಹ್ಯತ್ರ ಚಾಟೌ ನಿಂದಾಯಾಂ ವಾ ನಿಶ್ಚಯೋ, ನಿಬಂಧನಾಭಾವಾದಿತಿ ।**

**ಅನುವಾದ:**

ಹೀಗೆ– "ಎಲೈ ದೊರೆಯೆ, ನೀನು ಅಸಮಂಜಸವಾದ ಕೆಲಸಗಳಿಗೆ ಭಾಜನನಾಗದಿರುವುದು ಹೇಗೆ? ಸದಾ ಯಥೇಚ್ಛವಾಗಿ ಧನದ ವಿನಿಯೋಗವನ್ನು ಮಾಡುತ್ತಿರುವೆಯಲ್ಲ."

ಇತ್ಯಾದಿಗಳಲ್ಲೂ (ವಾಚ್ಯಾವಚನ ಎಂಬ ದೋಷವನ್ನು) ಕಾಣಬೇಕು. ಇದು ಸ್ತುತಿಯೋ ನಿಂದೆಯೋ ಎಂದು ನಿಶ್ಚಯಿಸಲಾಗದು. ಏಕೆಂದರೆ (ಒಂದನ್ನು ಸೂಚಿಸುವ) ನಿಬಂಧನ (ಪದ್ಯದಲ್ಲಿ) ಇಲ್ಲ.

**ಅರ್ಥಶ್ಲೇಷೇ ಯಥಾ–**

**ದತ್ತಾನಂದಾಃ ಪ್ರಜಾನಾಂ ಸಮುಚಿತಸಮಯಾಕೃಷ್ಟಸೃಷ್ಟೈಃ ಪಯೋಭಿಃ**
**ಪೂರ್ವಾಹ್ಣೇ ವಿಪ್ರಕೀರ್ಣಾ ದಿಶಿದಿಶಿ ವಿರಮತ್ಯಹ್ನಿ ಸಂಹಾರಭಾಜಃ ।**
**ದೀಪ್ತಾಂಶೋರ್ದೀರ್ಘದುಃಖಪ್ರಭವಭವಭಯೋದನ್ವದುತ್ತಾರನಾವೋ**
**ಗಾವೋ ವಃ ಪಾವನಾನಾಂ ಪರಮಪರಿಮಿತಾಂ ಪ್ರೀತಿಮುತ್ಪಾದಯಂತು ॥**

**ಇತಿ । ಅತ್ರ ಹಿ ಗಾವ ಇತ್ಯಸ್ಯ ವಿಶೇಷ್ಯವಾಚಿನ ಉಪಮಾನಾಭಿಮತಾರ್ಥಾಂತರವೃತ್ತಿತ್ವೇಽಪಿ ವಿಶೇಷಣಾನಾಂ ಚ ಉಭಯಾರ್ಥಾನುಗುಣ್ಯೇಽಪಿ ಉಪಮಾನಸ್ಯ ತತ್ಸಂಬಂಧಾಭಿಧಾಯಿನಶ್ಚ ಅವಶ್ಯವಾಚ್ಯಸ್ಯಾವಚನಂ ಯತ್ ಸ ದೋಷ ಇತ್ಯೇತದ್ವಿತನಿಷ್ಯತೇ ।**

**ಅನುವಾದ:**

ಅರ್ಥಶ್ಲೇಷದಲ್ಲಿ ವಾಚ್ಯಾವಚನದೋಷದ ಉದಾಹರಣೆ–

"ಸೂರ್ಯನ ಕಿರಣಗಳು ನಿಮಗೆ ಅಪರಿಮಿತವಾದ ಪ್ರೀತಿಯನ್ನು ಉಂಟುಮಾಡಲಿ. ಉಚಿತವಾದ ಕಾಲದಲ್ಲಿ ಅವು ನೀರನ್ನು ಸೆಳೆದು ಸುರಿಸಿ

ಪ್ರಜೆಗಳಿಗೆ ಆನಂದವನ್ನು ನೀಡುತ್ತವೆ. ದಿನದ ಪೂರ್ವಭಾಗದಲ್ಲಿ ಎಲ್ಲ ದಿಕ್ಕುಗಳಲ್ಲಿ ಹರಡಿಹೋಗಿ ದಿನವು ಮುಗಿಯುವಾಗ ಹಿಂದಿರುಗಿ ಬರುತ್ತವೆ. ದೀರ್ಘದುಃಖದಿಂದ ಹುಟ್ಟುವ ಸಂಸಾರಭಯವೆಂಬ ಸಮುದ್ರವನ್ನು ದಾಟಲು ಆ ಕಿರಣಗಳೇ ನೌಕೆಗಳಾಗುತ್ತವೆ."

ಇಲ್ಲಿ ಗಾವಃ ಎಂಬ ವಿಶೇಷ್ಯವಾಚಿ ಪದಕ್ಕೆ (ಕಿರಣ ಎಂಬ ಅರ್ಥದ ಜೊತೆಗೆ) ಉಪಮಾನವೆಂದು ಅಭೀಷ್ಟವಾಗಿರುವ (ಹಸುಗಳು ಎಂಬ) ಇನ್ನೊಂದು ಅರ್ಥವನ್ನು ಹೇಳುವ ಶಕ್ತಿಯಿದ್ದರೂ, ವಿಶೇಷಣಗಳು ಎರಡು ಅರ್ಥಗಳಿಗೂ ಅನುಗುಣವಾಗಿದ್ದರೂ ಉಪಮಾನವನ್ನೂ ಅದರ ಸಂಬಂಧವನ್ನೂ ಹೇಳುವ ನಿಬಂಧನಶಬ್ದವನ್ನೂ ಅವಶ್ಯವಾಗಿ ಹೇಳಬೇಕಾಗಿತ್ತು. ಅದನ್ನು ಹೇಳದಿರುವುದರಿಂದ ವಾಚ್ಯಾವಚನ ಎಂಬ ದೋಷ ಎಂಬುದನ್ನು ಮುಂದೆ ವಿಸ್ತರಿಸಿ ಹೇಳುವೆವು.

**ಉಭಯಶ್ಲೇಷೇ ಯಥಾ–**
**ಸರ್ವೈಕಶರಣಮಕ್ಷಯಮಧೀಶಮೀಶಂ ಧಿಯಾಂ ಹರಿಂ ಕೃಷ್ಣಮ್ ।**
**ಚತುರಾತ್ಮಾನಂ ನಿಷ್ಕ್ರಿಯಮರಿಮಥನಂ ನಮತ ಚಕ್ರಧರಮ್ ॥**
**ಇತಿ । ಇಹಾಪಿ ವಾಚ್ಯಾವಚನಮವಗಂತವ್ಯಮ್ ॥**

**ಅನುವಾದ:**

ಉಭಯಶ್ಲೇಷದಲ್ಲಿ ವಾಚ್ಯಾವಚನದೋಷದ ಉದಾಹರಣೆ–

"ಎಲ್ಲರಿಗೂ ಏಕಮಾತ್ರಶರಣನೂ, ಕ್ಷಯರಹಿತನೂ, ಜಗದ ಅಧಿಪತಿಯೂ, ಎಲ್ಲರ ಬುದ್ಧಿಗಳ ಒಡೆಯನೂ, ಹರಿಯೂ, ಕೃಷ್ಣನೂ, ನಾಲ್ಕು ರೂಪಗಳನ್ನು ಹೊಂದಿರುವವನೂ, ಕರ್ಮರಹಿತನೂ, ಶತ್ರುನಾಶಕನೂ ಆದ ಚಕ್ರಧರ (ನಾರಾಯಣ)ನನ್ನು ವಂದಿಸಿರಿ." ಇಲ್ಲಿಯೂ ವಾಚ್ಯಾವಚನವೆಂಬ ದೋಷವನ್ನು ಅರಿತುಕೊಳ್ಳಬೇಕು.

**ವಿವರಣೆ:**

ಈ ಪದ್ಯದಲ್ಲಿ ಶ್ಲೇಷದ ಆಧಾರದಿಂದ ವಿರೋಧಾಭಾಸ ಎಂಬ ಅಲಂಕಾರವನ್ನು ಕವಿಯು ತರಲು ಅಪೇಕ್ಷಿಸಿದ್ದಾನೆ.

ಸರ್ವೈಕಶರಣ = ಎಲ್ಲರಿಗೂ ಮನೆಯಾಗಿರುವವನು.
ಅಕ್ಷಯ = ಮನೆಯಿಲ್ಲದವನು.
ಅಧೀಶ = ಧೀಶನಲ್ಲದವನು, ಬುದ್ಧಿಗಳಿಗೆ ಒಡೆಯನಲ್ಲದವನು.
ಧಿಯಾಮೀಶ = ಬುದ್ಧಿಗಳಿಗೆ ಒಡೆಯನು.
ಹರಿ = ಕೆಂಪು ಬಣ್ಣದವನು, ಕೃಷ್ಣ = ಕಪ್ಪು ಬಣ್ಣದವನು.
ಚತುರಾತ್ಮಾ = ಚುರುಕು ಮನಸ್ಸಿನವನು.

ನಿಷ್ಕ್ರಿಯ = ಯಾವ ಕೆಲಸವನ್ನೂ ಮಾಡದ ಅಲಸ.

ಅರಿಮಥನ = ಚಕ್ರವನ್ನು ಮುರಿದುಹಾಕಿದವನು.

ಚಕ್ರಧರ = ಚಕ್ರವನ್ನು ಹಿಡಿದುಕೊಂಡಿರುವವನು.

ಈ ಅರ್ಥಗಳನ್ನು ಗ್ರಹಿಸಿದಾಗ ವಿರೋಧ. ಅನುವಾದದಲ್ಲಿ ತಿಳಿಸಿದ ಅರ್ಥಗಳನ್ನು ಗ್ರಹಿಸಿದರೆ ವಿರೋಧ ಪರಿಹಾರ. ಇಲ್ಲಿ ವಿರೋಧದ್ಯೋತಕವಾದ ಅಪಿ ಶಬ್ದವನ್ನು ಕವಿಯು ಹೇಳಬೇಕಾಗಿತ್ತು. ಹೇಳಿಲ್ಲವಾದುದರಿಂದ ವಾಚ್ಯಾವಚನ. ಚತುರಾತ್ಮಾ = ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ವ್ಯೂಹಗಳನ್ನು ಧರಿಸಿದವನು.

ಅರಿ = ಚಕ್ರ. ಅರಾಣಿ ಅಸ್ಯ ಸಂತೀತಿ ಅರಿ.

**ಯಥಾ–**

**ಪತಿತೇ ಪತಂಗಮೃಗರಾಜಿ ನಿಜ–**<br>
**ಪ್ರತಿಬಿಂಬರೋಷತ ಇವಾಂಬುನಿಧೌ ।**<br>
**ಅಥ ನಾಗಯೂಥಮಲಿನಾನಿ ಜಗತ್**<br>
**ಪರಿತಸ್ತಮಾಂಸಿ ಪರಿತಸ್ತರಿರೇ ॥**

**ಅತ್ರ ನಾಗಯೂಥೇನ ಧರ್ಮಿಣಾ ಸಾಮ್ಯಂ ತಮಸಾಂ ವಕ್ತುಮ್ ಅಭಿಮತಂ ಕವೇಃ, ನ ತದ್ಧರ್ಮೇಣ ಮಲಿನತ್ವಮಾತ್ರೇಣ । ಮೃಗಪತೌ ಪತಿತೇ ನಿಷ್ಪ್ರತಿಪಕ್ಷತಯಾ ತಸ್ಯೈವ ಸ್ವೇಚ್ಛಾವಿಹಾರಿತ್ವೋಪಪತ್ತೇಃ । ನ ತದ್ವನ್ಮಲಿನಾನಾಂ ತಮಸಾಮ್ । ಮೃಗರಾಜರೂಪಣವೈಯರ್ಥ್ಯಪ್ರಸಂಗಾತ್ । ನ ಚ ತತ್ ಮಲಿನಾದಿಶಬ್ದಾಃ ಶಕ್ನುವಂತಿ ವಕ್ತುಂ, ಹಾರಿಸುಂದರಸುಭಗಸದೃಶಸನ್ನಿಭಾದಿಶಬ್ದಾನಾಮೇವ ತದಭಿಧಾನಸಾಮರ್ಥ್ಯದರ್ಶನಾತ್ ।**

**ಅನುವಾದ:**

ಉದಾಹರಣೆ– "ತನ್ನ ಪ್ರತಿಬಿಂಬವನ್ನು ನೋಡಿದಾಗ ಹುಟ್ಟಿದ ರೋಷದಿಂದಲೋ ಎಂಬಂತೆ ಸೂರ್ಯನೆಂಬ ಸಿಂಹವು ಸಮುದ್ರದೊಳಕ್ಕೆ ಧುಮುಕಿತು. ಆಗ ಆನೆಗಳ ಹಿಂಡಿನಂತೆ ಕಪ್ಪಗಿದ್ದ ಕತ್ತಲುಗಳು ಎಲ್ಲ ಕಡೆಗಳಿಂದ ಜಗತ್ತನ್ನು ಆವರಿಸಿದುವು."

ಈ ಪದ್ಯದಲ್ಲಿ ಕವಿಯು ಹೇಳಲು ಬಯಸಿರುವುದು ಧರ್ಮಿಯಾದ ಆನೆಗಳ ಹಿಂಡಿನೊಡನೆ ಕತ್ತಲುಗಳ ಸಾಮ್ಯವನ್ನು. ಆನೆಯ ಹಿಂಡಿನ ಒಂದು ಧರ್ಮವಾದ ಕಪ್ಪುಬಣ್ಣದಲ್ಲಿ ಮಾತ್ರ ಸಾಮ್ಯವನ್ನು ಹೇಳಲು ಅವನು ಬಯಸಿಲ್ಲ. ಸಿಂಹವು ಬಿದ್ದುಹೋದ ಮೇಲೆ ಆನೆಹಿಂಡು ಸ್ವಚ್ಛಂದದಿಂದ ಆಟವಾಡುವುದು ಯುಕ್ತವಾದದ್ದೇ. ಆದರೆ ಆನೆಹಿಂಡಿನಂತೆ ಕೇವಲ ಕಪ್ಪಗಿದ್ದ ಕತ್ತಲುಗಳಿಗೆ ಅಂಥ ಆಟ ಸಕಾರಣವಲ್ಲ. ಹಾಗೆಂದರೆ (ಸೂರ್ಯನನ್ನು) ಮೃಗರಾಜ ಎಂದು ರೂಪಿಸಿದುದು ವ್ಯರ್ಥ ಎನ್ನುವ ಪ್ರಸಂಗ ಬಂದೀತು. ಅಂಥ ಸಾಮ್ಯವನ್ನು ಮಲಿನ ಮುಂತಾದ ಶಬ್ದಗಳು ಹೇಳಲಾರವು. ಹಾರಿ, ಸುಂದರ, ಸುಭಗ, ಸದೃಶ, ಸನ್ನಿಭ

ಮುಂತಾದ ಶಬ್ದಗಳಿಗೆ ಮಾತ್ರ (ಪೂರ್ಣಸಾಮ್ಯವನ್ನು ಹೇಳುವ) ಸಾಮರ್ಥ್ಯವಿದೆಯೆಂದು ಒಪ್ಪಿಕೊಳ್ಳಲಾಗಿದೆ.

**ಅನ್ಯಥಾ– 'ಸರೋಜಕರ್ಣಿಕಾಗೌರೀಂ ಗೌರೀಂ ಪ್ರತಿ ಮನೋ ದಧೌ' ಇತ್ಯಾದೌ ಗೌರಾದಿಶಬ್ದಾ ಅಪಿ ಧರ್ಮಿಸಾಮ್ಯಮೇವಾವಗಮಯೇಯುಃ ನ ಧರ್ಮಮಾತ್ರಸಾಮ್ಯಮ್। ತಚ್ಚಾನಿಷ್ಟಮ್ । ಗೌರತ್ವಮಾತ್ರ–ಸಾಧರ್ಮ್ಯಕೃತಸ್ಯ ಗೌರ್ಯಾಃ ಸರೋಜಕರ್ಣಿಕಾಸಾಮ್ಯಸ್ಯ ವೈವಕ್ಷಿಕತ್ವಾತ್ ।**

**ಅಥೋಚ್ಯತೇ ಗೌರಾದಿಶಬ್ದಾ ಅಪಿ ಸದೃಶಾದಿಶಬ್ದವತ್ ಸಾಕ್ಷಾದ್ ಧರ್ಮಿಸಾಮ್ಯಮೇವಾಭಿದಧ್ಯುಃ, ಸಾಮರ್ಥ್ಯಾತ್ತು ಧರ್ಮಮಾತ್ರಸಾಮ್ಯಾವಗತಿಃ ಕರ್ಣಿಕಾಯಾ ಗೌರತ್ವಾವ್ಯಭಿಚಾರಾದಿತಿ । ತದಯುಕ್ತಮ್ । ತನ್ನಿಬಂಧನಭೂತಾಯಾಃ ಶ್ರುತಹಾನೇರಶ್ರುತಕಲ್ಪನಾಯಾಶ್ಚ ಅನ್ಯಾಯ್ಯತ್ವಾತ್। ಯುಜ್ಯೇತ ಪುನರೇವಂ, ಯದಿ ಪ್ರತೀತಿಃ ಕ್ಷಮೇತ– ಇತಿ ।**

**ಅನುವಾದ:**

ಹಾಗಲ್ಲದಿದ್ದರೆ, "ಕಮಲದ ಬೀಜಕೋಶದಂತೆ ಬಿಳುಪಾಗಿದ್ದ ಗೌರಿಯ ಮೇಲೆ ಮನಸ್ಸನ್ನಿಟ್ಟನು" ಇತ್ಯಾದಿಗಳಲ್ಲಿ ಗೌರ ಮುಂತಾದ ಶಬ್ದಗಳೂ ಧರ್ಮಿಸಾಮ್ಯವನ್ನೇ ಹೇಳುವುವು, ಧರ್ಮಮಾತ್ರಸಾಮ್ಯವನ್ನಲ್ಲ ಎನ್ನಬೇಕಾಗುತ್ತದೆ. ಅದು ಯಾರಿಗೂ ಇಷ್ಟವಲ್ಲ. ಗೌರತ್ವ ಎಂಬ ಸಾಧರ್ಮ್ಯವನ್ನು ಮಾತ್ರ ಆಶ್ರಯಿಸಿ ಸರೋಜಕರ್ಣಿಕೆಯ ಸಾಮ್ಯವು ಇಲ್ಲಿ ಕವಿಗೆ ವಿವಕ್ಷಿತವಾಗಿದೆಯಷ್ಟೆ.

ಮತ್ತೆ (ಯಾರಾದರೂ) ಹೀಗೆ ಹೇಳಬಹುದು– 'ಗೌರ ಮುಂತಾದ ಶಬ್ದಗಳೂ ಸದೃಶ ಮುಂತಾದ ಶಬ್ದಗಳಂತೆ ನೇರವಾಗಿ ಧರ್ಮಿಸಾಮ್ಯವನ್ನೇ ಹೇಳುತ್ತವೆ, ಆದರೆ ಸಾಮರ್ಥ್ಯವಶದಿಂದ ಧರ್ಮಸಾಮ್ಯದ ಅರಿವು ಉಂಟಾಗುತ್ತದೆ, ಏಕೆಂದರೆ ತಾವರೆಯ ಬೀಜಕೋಶದಲ್ಲಿ ಗೌರತ್ವವು ಅವ್ಯಭಿಚರಿತ' ಎಂದು. ಅದೂ ಅಯುಕ್ತ. ಅದಕ್ಕೆ ನಿಮಿತ್ತವಾಗುವ ಶ್ರುತಹಾನಿ (ಹೇಳಿದುದನ್ನು ಬಿಡುವುದು) ಮತ್ತು ಅಶ್ರುತಕಲ್ಪನೆ (ಹೇಳಿಲ್ಲದುದನ್ನು ಕಲ್ಪಿಸಿಕೊಳ್ಳುವುದು) ನ್ಯಾಯಸಮ್ಮತವಲ್ಲ. ಪ್ರತೀತಿಯೇ ಹಾಗೆ ಇದ್ದಿದ್ದರೆ ಆ ರೀತಿಯ ಕಲ್ಪನೆಯೂ ಯುಕ್ತವಾಗುತ್ತಿತ್ತೇನೋ!

**ಯತ್ ಪುನಃ ಧರ್ಮಯೋರೇಕನಿರ್ದೇಶೇಽನ್ಯಧರ್ಮಪ್ರತಿಪತ್ತಿಃ ಸಾಹಚರ್ಯಾದಿತ್ಯನ್ಯೇ ಮನ್ಯಂತೇ, ಯಥಾ–**

**ನಿರ್ವೃಷ್ಟೇಽಪಿ ಬಹಿರ್ಘನೇ ನ ವಿರಮಂತ್ಯಂತರ್ಜರದ್ವೇಶ್ಮನಾಂ ಲೂತಾತಂತುತತಿಚ್ಛಿದೋ ಮಧುಪೃಷತ್ಪಿಂಗಾಃ ಪಯೋಬಿಂದವಃ ।**

**ಇತ್ಯತ್ರ ಪಯೋಬಿಂದೂನಾಂ ಮಧುಪೃಷತ್ಪಿಂಗತ್ವಾತ್ ಪಿಂಗತ್ವ–ಸಹಚರಿತವೃತ್ತತ್ವಸ್ಯ ಪ್ರತಿಪತ್ತಿರಿತಿ, ತದನುಪಪನ್ನಮ್ । ಮಾಧುರ್ಯಾದೇರಪಿ ಪ್ರತಿಪತ್ತಿಪ್ರಸಂಗಾತ್, ಸಾಹಚರ್ಯಾವಿಶೇಷಾತ್। ಯಾ ತು ರೂಪಾದೇಸ್ಸತೋ ಗತಿಃ ಸಾ ಹೇತುಧರ್ಮಾನುಮಾನೇನೇಷ್ಯತೇ । ಇಹ ತು ಹೇತುಹೇತುಮದ್ಭಾವಸ್ತಯೋರಸಿದ್ಧ ಇತಿ ಸಾಹಚರ್ಯಾಸಿದ್ಧೌ ಕುತೋಽನ್ಯಧರ್ಮಪ್ರತಿಪತ್ತಿಸಿದ್ಧಿಃ?**

**ಅನುವಾದ:**

ಸಹಚರಿತವಾದ ಎರಡು ಧರ್ಮಗಳಲ್ಲಿ ಒಂದನ್ನು ಹೇಳಿದರೆ ಸಾಹಚರ್ಯದ ಆಧಾರದಿಂದ ಇನ್ನೊಂದು ಧರ್ಮದ ಅರಿವು ಉಂಟಾಗುವುದು ಎಂದು ಮತ್ತೆ ಕೆಲವರು ತಿಳಿದಿದ್ದಾರೆ. ಅದರ ಉದಾಹರಣೆ–

"ಹೊರಗೆ ಮೋಡಗಳು ಪೂರ್ಣವಾಗಿ ನೀರನ್ನು ಸುರಿಸಿ ಬರಿದಾಗಿವೆಯಾದರೂ ಹಳೆಮನೆಗಳ ಒಳಗೆ ಜೇಡರ ಬಲೆಗಳನ್ನು ಕತ್ತರಿಸುವ, ಜೇನುತುಪ್ಪದ ಹನಿಗಳಂತೆ ಹೊಂಬಣ್ಣದ ನೀರಿನ ಹನಿಗಳು ಉದುರುವುದು ನಿಂತಿಲ್ಲ" ಇಲ್ಲಿ ನೀರಿನ ಹನಿಗಳು ಜೇನುತುಪ್ಪದ ಹನಿಗಳಂತೆ ಹೊಂಬಣ್ಣದವೆಂದು ಹೇಳಿರುವುದರಿಂದ ಅದರ ಸಹಚರಿತಧರ್ಮವಾದ ವೃತ್ತತ್ವ (ಗುಂಡು ಆಕಾರ) ಎಂಬ ಧರ್ಮದ ಜ್ಞಾನವುಂಟಾಗುತ್ತದೆ ಎಂದು ಅವರು ಹೇಳುತ್ತಾರೆ. ಅದು ತಪ್ಪು. ಜೊತೆಗೆ ಮಾಧುರ್ಯ ಮುಂತಾದ ಧರ್ಮಗಳೂ ತೋರಲಿ ಎಂಬ ಅನಿಷ್ಟಪ್ರಸಂಗ ಉಂಟಾದೀತು. (ಹನಿಗಳ) ರೂಪಾದಿಗಳ ಅರಿವು ಉಂಟಾಗುವುದು ಕಾರಣ ಧರ್ಮಾನುಮಾನದಿಂದ. ಇಲ್ಲಿ ಅವುಗಳ ಕಾರ್ಯಕಾರಣಭಾವವೇ ಅಸಿದ್ಧವಾದುದರಿಂದ ಸಾಹಚರ್ಯವೇ ಸಿದ್ಧವಾಗದು. ಹೀಗಿರುವಾಗ ಬೇರೆ ಧರ್ಮದ ಅರಿವು ಉಂಟಾಗುವುದು ಹೇಗೆ?

**ಸಿದ್ಧೇಽಪಿ ವಾ ತಸ್ಮಿಂಸ್ತಸ್ಯೈಕಸ್ಯ ಧರ್ಮಸ್ಯ ಸಾಧನಭಾವೇನಾನಿರ್ದೇಶೇ**
**ಕಥಮನ್ಯಧರ್ಮಪ್ರತಿಪತ್ತಿಸಿದ್ಧಿಃ? ಏವಂ ಹಿ–**
**ದುಃಖಾಭಿತಪ್ತಸ್ಯ ಜನಸ್ಯ ಜಾನೇ**
**ತುಷಾರಶೀತಃ ಪ್ರತಿಭಾತಿ ವಹ್ನಿಃ ।**

**ಇತ್ಯತ್ರ ವಹ್ನಾವಪಿ ಶೀತತ್ವಸಾಹಚರ್ಯಾತ್ ಪಾಂಡುತ್ವಪ್ರತಿಪತ್ತಿಪ್ರಸಂಗಃ । ಕಿಂಚ ಸತ್ಯಾಮನ್ಯಧರ್ಮಪ್ರತಿಪತ್ತಿಸಿದ್ಧೌ ತದ್ಧೇತುಃ ಸಾಹಚರ್ಯಮನ್ಯದ್ವಾ ಪರಿಕಲ್ಪ್ಯೇತ? ಅತ್ರ ತು ಸೈವ ನ ಸಿದ್ಧೇತಿ ವ್ಯರ್ಥಸ್ತತ್ಪರಿಕಲ್ಪನಪ್ರಯಾಸಃ । ಕಿಂ ಹಿ ತತ್ಪರಿಕಲ್ಪನಂ ವಿನಾತ್ರ ಪರಿಹೀಯೇತ? ಪಯೋಬಿಂದೂನಾಂ ಮೃಧುಪೃಷದ್ವೃತ್ತತ್ವಮಿತಿ ಚೇತ್, ಕಾಮಂ ಪರಿಹೀಯತಾಮ್ । ನ ಚ ಪ್ರಯೋಜನವಶಾತ್ ಪ್ರಮಾಣವ್ಯವಸ್ಥಾ ಭವಿತುಮರ್ಹತಿ ।**

**ಅನುವಾದ:**

ಸಾಹಚರ್ಯವು ಹೇಗೋ ಸಿದ್ಧವಾದರೂ ಅವುಗಳಲ್ಲಿ ಒಂದು ಧರ್ಮವನ್ನು ಸಾಧನರೂಪದಿಂದ ನಿರ್ದೇಶಿಸಿರದಿರುವಾಗ ಇನ್ನೊಂದು ಧರ್ಮದ ಜ್ಞಾನವು ಹೇಗೆ ಸಿದ್ಧವಾದೀತು?

ಹಾಗೆ ಒಪ್ಪಿಕೊಂಡರೆ, "ದುಃಖದಿಂದ ಬೆಂದ ಮಂದಿಗೆ ಬೆಂಕಿಯೂ ಹಿಮದಂತೆ ತಣ್ಣಗೆ ತೋರುತ್ತದೆ ಎಂದು ಅಂದುಕೊಳ್ಳುತ್ತೇನೆ" ಎಂಬ

ಉದಾಹರಣೆಯಲ್ಲಿ ಬೆಂಕಿಯಲ್ಲೂ ತಂಪುಗುಣದ ಸಾಹಚರ್ಯದಿಂದ ಬಿಳುಪಿನ ಜ್ಞಾನವು (ವಾಚಕರಿಗೆ) ಉಂಟಾಗುವ (ಅನಿಷ್ಟ) ಪ್ರಸಂಗ ಬರುತ್ತದೆ. ಇನ್ನೊಂದು ಧರ್ಮದ ಪ್ರತಿಪತ್ತಿ ಆಗುತ್ತದೆ ಎಂದಾದರೆ ಅದರ ಕಾರಣ ಸಾಹಚರ್ಯವೋ ಅಥವಾ ಬೇರೆ ಯಾವುದೋ ಎಂದು ಕಲ್ಪನೆ ಮಾಡಬಹುದು. ಆ ಪ್ರತಿಪತ್ತಿಯೇ ಇಲ್ಲ ಎಂದಾಗ ಅಂಥ ಕಲ್ಪನೆಯನ್ನು ಮಾಡುವ ಆಯಾಸ ವ್ಯರ್ಥ.

ಆ ಕಲ್ಪನೆಯನ್ನು ಮಾಡದಿದ್ದರೂ ಇಲ್ಲಿ ಆಗುವ ಹಾನಿ ಏನಿದೆ? ನೀರಿನ ಹನಿಗಳು ಜೇನುತುಪ್ಪದ ಹನಿಗಳಂತೆ ಗುಂಡಗಿರುವುದು ತಿಳಿಯದಿರುವುದೇ ಹಾನಿ ಎಂದರೆ ಅದು ತಿಳಿಯದೆ ಹೋಗಲಿ, ಬಿಡಿ. ಪ್ರಯೋಜನಕ್ಕಾಗಿ ಪ್ರಮಾಣವ್ಯವಸ್ಥೆಯನ್ನು ಮಾಡುವುದು ಸರಿಯಲ್ಲ.

**ತಸ್ಮಾದನೇಕಧರ್ಮತ್ವೇಽಪ್ಯರ್ಥಸ್ಯ ಯಸ್ಯೈವ ಧರ್ಮಸ್ಯ ನಿರ್ದೇಶಸ್ತಸ್ಯೈವ ಪ್ರತಿಪತ್ತಿರ್ನ್ಯಾಯ್ಯಾ, ನಾನ್ಯಸ್ಯೇತಿ ಅತ್ರ ತಮಸಾಂ ನಾಗಯೂಥಸಾದೃಶ್ಯೇ ವಾಚ್ಯೇ ಯತ್ ತೇಷಾಂ ಮಲಿನತ್ವಮುಕ್ತಂ, ಸ ವಾಚ್ಯಾವಚನಂ ದೋಷಃ । ಏವಂ ಚ ಪೃಷತ್ಪದಪ್ರಯೋಗೋಽ–ತ್ರಾತಿರಿಚ್ಯಮಾನೋಽನುಪ್ರಾಸವೃತ್ತಪರಿಪೂರಣಾಯೈವ ಪರ್ಯವಸ್ಯತಿ, ನ ಬಿಂದೂನಾಂ ವೃತ್ತತ್ವಪ್ರತಿಪತ್ತಯೇ ಇತಿ "ನಾಗಯೂಥಸದೃಶಾನಿ" ಇತ್ಯತ್ರ ಪಾಠೋ ಯುಕ್ತ ಇತಿ ।**

**ಅನುವಾದ:**

ಆದ್ದರಿಂದ ವಸ್ತು ಅನೇಕ ಧರ್ಮಗಳಿಂದ ಕೂಡಿದ್ದರೂ ಯಾವ ಧರ್ಮವನ್ನು (ವಕ್ತೃ) ನಿರ್ದೇಶಿಸುವನೋ ಅದರ ಜ್ಞಾನ ಉಂಟಾಗುವುದೆಂಬುದೇ ನ್ಯಾಯಾನುಗುಣ. ಬೇರೆ ಧರ್ಮದ್ದೂ ಜ್ಞಾನ ಉಂಟಾಗುವುದೆಂಬುದು ಸರಿಯಲ್ಲ. ಆದ್ದರಿಂದ (ಪತಿತೇ ಪತಂಗ... ಎಂಬ ಪದ್ಯದಲ್ಲಿ) ಕತ್ತಲುಗಳಿಗೆ ಆನೆಹಿಂಡಿನ ಸಾದೃಶ್ಯವನ್ನು ಹೇಳಬೇಕು. (ಅದನ್ನು ಬಿಟ್ಟು) ನಾಗಯೂಥದಂತೆ ಕಪ್ಪಾದ ಎಂದು ಹೇಳಿರುವುದರಿಂದ ವಾಚ್ಯಾವಚನ ಎಂಬ ದೋಷ. ಆದ್ದರಿಂದ (ನಿರ್ವೃಷ್ಟೇಽಪಿ..... ಎಂಬ ಪದ್ಯದಲ್ಲಿ) ಪೃಷತ್ ಎಂಬ ಪದವನ್ನು ಅಧಿಕವಾಗಿ ಪ್ರಯೋಗಿಸಲಾಗಿದೆ. ಅದು ಅನುಪ್ರಾಸಕ್ಕಾಗಿ ಮತ್ತು ವೃತ್ತಪೂರಣಕ್ಕಾಗಿ ಪರ್ಯವಸಾನ ಹೊಂದಿದೆ. ಬಿಂದು(ಹನಿ)ಗಳ ಗುಂಡುತನವನ್ನು ತಿಳಿಸುವುದಕ್ಕಾಗಿ ಅಲ್ಲ. ಆದ್ದರಿಂದ ಈ ಪದ್ಯದಲ್ಲಿ "ನಾಗಯೂಥಸದೃಶಾನಿ" ಎಂಬ ಪಾಠವು ಉಚಿತ.

**ಯತ್ತು–**

**ಕರಿಕಲಭ ವಿಮುಂಚ ಲೋಲತಾಂ ಚರ ವಿನಯವ್ರತಮಾನತಾನನಃ ।**
**ಮೃಗಪತಿನಖಕೋಟಿಭಂಗುರೋ ಗುರುರುಪರಿ ಕ್ರಮತೇ ನ ತೇಂಕುಶಃ ॥**

**ಇತ್ಯತ್ರಾಂಕುಶಸ್ಯ ಮೃಗಪತಿನಖಕೋಟಿಭಂಗುರತ್ವಂ ದುಃಸಹತ್ವಂ ಚೇತಿ ಧರ್ಮದ್ವಯಂ ವಕ್ತುಮಭಿಮತಮ್ । ನ ತದುಕ್ತನಯೇನ ಭಂಗುರಶಬ್ದ ಏವ ವಕ್ತುಂ ಕ್ಷಮತೇ । ತಸ್ಯ ಕೌಟಿಲ್ಯ–**

**ಮಾತ್ರಾಭಿಧಾಯಿತ್ವೇನೈವ ಪ್ರಸಿದ್ಧೇಃ । ಯತ್ತು ತಸ್ಯ ದುಃಸಹತ್ವಂ ತತ್ ಮೃಗಪತಿ–ಪದಸಂಬಂಧಸಾಮರ್ಥ್ಯಾದೇವ ಪ್ರತೀಯತೇ, ನ ಭಂಗುರತ್ವಸಾಹಚರ್ಯಾದಿತಿ ।**

**ಅನುವಾದ:**

ಆದರೆ– "ಎಲವೋ ಆನೆಮರಿ, ಚಾಂಚಲ್ಯವನ್ನು ಬಿಡು. ತಲೆಯನ್ನು ಬಗ್ಗಿಸಿ ವಿನಯವ್ರತವನ್ನು ಆಚರಿಸು. ಆಗ, ಸಿಂಹದ ಉಗುರಿನ ತುದಿಯಂತೆ ಬಗ್ಗಿರುವ ದೊಡ್ಡ ಅಂಕುಶವು ನಿನ್ನ ಮೇಲೆ ಎರಗುವುದಿಲ್ಲ."

ಎಂಬ ಪದ್ಯದಲ್ಲಿ ಅಂಕುಶದ 'ಸಿಂಹದ ಉಗುರಿನ ತುದಿಯಂತೆ ಬಗ್ಗಿರುವಿಕೆ ಮತ್ತು ಸಹಿಸಲು ಅಶಕ್ಯವಾಗಿರುವಿಕೆ' ಎಂಬ ಎರಡು ಧರ್ಮಗಳನ್ನು ಹೇಳಲು ಕವಿಗೆ ಇಷ್ಟ. ಮೇಲೆ ತಿಳಿಸಿದ ರೀತಿಯಿಂದ ಭಂಗುರಶಬ್ದವು ಅಷ್ಟನ್ನು ಹೇಳಲು ಶಕ್ತವಲ್ಲ. ಏಕೆಂದರೆ ಆ ಶಬ್ದವು ಕೌಟಿಲ್ಯವನ್ನು ಮಾತ್ರ ತಿಳಿಸುವುದೆಂದು ಪ್ರಸಿದ್ಧವಾಗಿದೆ. ಅಂಕುಶದ ದುಃಸಹತ್ವವು ಸಿಂಹಶಬ್ದದ ಸಂಬಂಧದ ಸಾಮರ್ಥ್ಯದಿಂದಲೇ ತೋರುತ್ತದೆ, ಭಂಗುರತ್ವದ ಸಾಹಚರ್ಯದಿಂದಲ್ಲ.

**ಏವಂ**

**ಪ್ರಭವತಿ ಚ ಸಮರಮೂರ್ಧನಿ ನವನೀರದನೀಲ ಏಷ ತವ ಖಡ್ಗಃ ।**
**ವಿಶತಿ ಚ ಮಾನಸಮಮಲಂ ಸತಾಂ ಯಶೋ ಹಂಸವಿಸರಸಿತಮ್ ॥**

**ಇತ್ಯಾದೌ ಖಡ್ಗಸ್ಯ ಯಶಸಶ್ಚ ಪೂರ್ವೋಕ್ತೇನ ನಯೇನ ನವನೀರದಹಂಸವಿಸರ–ರೂಪತ್ವಾಪ್ರತೀತೌ ತನ್ನಿಬಂಧನಾಯಾಃ ಅರ್ಥಾಂತರಪ್ರತೀತೇರನುಪಪತ್ತಿರಿತಿ ಭ್ರಾಂತಿಮಾತ್ರಕೃತೋऽಸಾವಿತಿ ಮಂತವ್ಯಮ್ । ತೇನ "ನವನೀರದಸುಂದರಃ ಕೃಪಾಣಃ" ಇತಿ, "ಹಂಸವಿಸರಸಮಮ್" ಇತಿ ಚಾತ್ರಾನುಗುಣೌ ಪಾಠೌ ।**

**ಧರ್ಮಿಸಾಮ್ಯವಿವಕ್ಷಾಯಾಂ ಧರ್ಮಮಾತ್ರಾಭಿಧಾಯಿನಾಮ್ ।**
**ನೇಷ್ಟಃ ಪ್ರಯೋಗಃ ಶಬ್ದಾನಾಂ ಸಮಾಸೋಪಮಿತೌ ಬುಧೈಃ ॥**
**ಇತಿ ಸಂಗ್ರಹಶ್ಲೋಕಃ ।**

**ಅನುವಾದ:**

"ಹೊಸ ಮೋಡದಂತೆ ಕಪ್ಪಾಗಿರುವ ನಿನ್ನ ಈ ಖಡ್ಗವು ಯುದ್ಧದ ತೀವ್ರಾವಸ್ಥೆಯಲ್ಲಿ ಸಮರ್ಥವಾಗುತ್ತದೆ. ಹಂಸಪಂಕ್ತಿಯಂತೆ ಬಿಳುಪಾದ ನಿನ್ನ ಕೀರ್ತಿಯು ಸಜ್ಜನರ ನಿರ್ಮಲವಾದ ಮನಸ್ಸನ್ನು ಪ್ರವೇಶಿಸುತ್ತದೆ." ಇತ್ಯಾದಿ ಪದ್ಯಗಳಲ್ಲಿ ಖಡ್ಗಕ್ಕೂ ಯಶಸ್ಸಿಗೂ ಹಿಂದೆ ತಿಳಿಸಿರುವ ರೀತಿಯಲ್ಲಿ ಹೊಸ ಮೋಡದ ಮತ್ತು ಹಂಸಪಂಕ್ತಿಯ ರೂಪವು ತೋರುವುದಿಲ್ಲ. ತನ್ನಿಬಂಧನವಾಗಿ ಉಂಟಾಗುವ ಅರ್ಥಾಂತರಜ್ಞಾನವೂ ಅನುಪಪನ್ನ. ಆದ್ದರಿಂದ ಇಲ್ಲಿ ಶ್ಲೇಷವು ಭ್ರಾಂತಿಮಾತ್ರಜನ್ಯ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಇಲ್ಲಿ ನವನೀರದಸುಂದರಃಕೃಪಾಣಃ ಎಂದೂ ಹಂಸವಿಸರಸಮಮ್ ಎಂದೂ ಉಚಿತವಾದ ಪಾಠಗಳು.

"ಧರ್ಮಿಯ ಸಾಮ್ಯವನ್ನು ಹೇಳಬೇಕಾದಾಗ ಕೇವಲ ಧರ್ಮವನ್ನು ಹೇಳುವ ಶಬ್ದಗಳ ಪ್ರಯೋಗವು ಉಪಮಿತಸಮಾಸದಲ್ಲಿ ವಿದ್ವಾಂಸರಿಗೆ ಇಷ್ಟವಾಗುವುದಿಲ್ಲ." ಇದು ಸಂಗ್ರಹ ಶ್ಲೋಕ.

**ಯಥಾ ಚ– ತೇನಾವರೋಧಪ್ರಮದಾಸಖೇನ ವಿಗಾಹಮಾನೇನ ಸರಿದ್ವರಾಂ ತಾಮ್ ।**
**ಆಕಾಶಗಂಗಾರತಿರಪ್ಸರೋಭಿರ್ವೃತೋ ಮರುತ್ವಾನನುಯಾತಲೀಲಃ ॥**
**ಅತ್ರಾನುಯಾತಿಕ್ರಿಯಾಪೇಕ್ಷೋ ರಾಜಮರುತ್ವತೋಃ ಕರ್ತೃಕರ್ಮಭಾವೋಽಭಿಧಾತುಮಭಿಮತಃ ಕವೇಃ । ನ ಚಾಸೌ ತತ್ಸಂಬಂಧಸ್ತಯೋಃ ಸಾಕ್ಷಾದುಕ್ತಃ । ಜಲಲೀಲಾಸಂಬಂಧಮುಖೇನ ರಾಜಸಂಬಂಧಸ್ಯೋಕ್ತತ್ವಾತ್ । ಅತೋಽತ್ರ ಸಾಕ್ಷಾತ್ ತತ್ಸಂಬಂಧೋ ವಾ ವಾಚ್ಯಃ, ತದರ್ಥಮನ್ಯತ್ ಕ್ರಿಯಾಂತರಂ ವಾ, ಯೇನ ಕರ್ತೃಕರ್ಮಭಾವಸ್ತಯೋರ್ಘಟನಮಿಯಾತ್।**

**ಅನುವಾದ:**

ಇನ್ನೊಂದು ಉದಾಹರಣೆ–

"ಅಂತಃಪುರದ ಸ್ತ್ರೀಯರೊಡನೆ ಆ ಶ್ರೇಷ್ಠನದಿಯೊಳಗೆ ಇಳಿದ ಆ ರಾಜನಿಂದ, ಅಪ್ಸರೆಯರ ಜೊತೆಯಲ್ಲಿ ಆಕಾಶಗಂಗೆಯಲ್ಲಿ ಆಸಕ್ತನಾದ ಇಂದ್ರನು ಲೀಲೆಯಲ್ಲಿ ಅನುಸರಿಸಲ್ಪಟ್ಟನು."

ಇಲ್ಲಿ ರಾಜನಿಗೂ ಇಂದ್ರನಿಗೂ ಅನುಯಾತಿ ಎಂಬ ಕ್ರಿಯೆಯಲ್ಲಿ ಕರ್ತೃಕರ್ಮಭಾವವನ್ನು ಹೇಳುವುದು ಕವಿಗೆ ಅಭಿಮತ. ಆದರೆ ಅವರಿಬ್ಬರಿಗೂ ಆ ಸಂಬಂಧವನ್ನು ನೇರವಾಗಿ ಹೇಳಿಲ್ಲ. ಜಲಲೀಲೆಗೆ ಸಂಬಂಧಿಸಿದಂತೆ ರಾಜ ಸಂಬಂಧವು ಹೇಳಲ್ಪಟ್ಟಿದೆ. ಆದ್ದರಿಂದ ಇಲ್ಲಿ ನೇರವಾಗಿ ಆ ಸಂಬಂಧವನ್ನಾದರೂ ಹೇಳಬೇಕು, ಅಥವಾ ಅದಕ್ಕಾಗಿ ಇನ್ನೊಂದು ಕ್ರಿಯೆಯನ್ನಾದರೂ ಹೇಳಬೇಕು. ಅದರ ಮೂಲಕ ರಾಜ–ಇಂದ್ರರಿಗೆ ಕರ್ತೃಕರ್ಮಭಾವವನ್ನು ಹೊಂದಿಸಬೇಕು.

**ನ ಚೋಭಯೋರೇಕಮಪ್ಯುಕ್ತಮಿತಿ ತಸ್ಯ ವಾಚ್ಯಸ್ಯಾವಚನಂ ದೋಷಃ । ತೇನ ವರಮತ್ರ ಪಾಠಃ ಶ್ರೇಯಾನ್–**
**"ಆಕಾಶಗಂಗಾರತಿರಪ್ಸರೋಭಿ–**
**ರ್ವೃತೋಽನುಯಾತೋ ಮಘವಾ ವಿಲಾಸೈಃ" ಇತಿ ।**
**ನ ಚೈವಂ ಕ್ರಿಯಾಂತರಾಕಾಂಕ್ಷಾಪ್ರಸಂಗಃ । ಯಥಾ ವಾ–**
**ಲಚ್ಛೀದುಹಿಆ ಜಾಮಾದುಓ ಹರೀ ತಹ ಘರಲ್ಲಿಆ ಗಂಗಾ ।**
**ಅಮಿಯಮಿಅಂಕಾ ಅ ಸುಆ ಅಹೋ ಕುಡುಂಬಂ ಮಹೋಅಹಿಣೋ । ಇತಿ ।**
**(ಲಕ್ಷ್ಮೀರ್ದುಹಿತಾ ಜಾಮಾತಾ ಹರಿಸ್ತಸ್ಯ ಗೃಹಿಣೀ ಗಂಗಾ ।**
**ಅಮೃತಮೃಗಾಂಕೌ ಚ ಸುತೌ ಅಹೋ ಕುಟುಂಬಂ ಮಹೋದಧೇಃ ॥)**

**ಅತ್ರ ಲಕ್ಷ್ಮ್ಯಾ ದುಹಿತೃತ್ವಮಮೃತಮೃಗಾಂಕಯೋಃ ಸುತತ್ವಂ ಚ ವಿಧೀಯಮಾನಂ ತೇಷಾಂ ತ್ರೈಲೋಕ್ಯೈಕಸ್ಪೃಹಣೀಯತಯಾ ತತ್ಕುಟುಂಬಸ್ಯ ಮಹೋದಧೇಃ ಶ್ಲಾಘಾಯಾ ಆಸ್ಪದತ್ವಮುಪಪದ್ಯತೇ ಇತಿ ದ್ವಯಮೇವೋಪಾದೇಯಂ ದ್ರಷ್ಟವ್ಯಂ, ನಾನ್ಯತ್ ।**

**ಅನುವಾದ:**

ಅವೆರಡರಲ್ಲಿ ಒಂದನ್ನೂ ಹೇಳಿಲ್ಲವಾದುದರಿಂದ ಅಲ್ಲಿ ವಾಚ್ಯಾವಚನ ಎಂಬ ದೋಷ. ಆದ್ದರಿಂದ ಹೀಗೆ ಪಾಠವನ್ನಿಟ್ಟುಕೊಂಡರೆ ಲೇಸು "ಆಕಾಶಗಂಗಾರತಿರಪ್ಸರೋಭಿರ್ವೃತೋಽನುಯಾತೋ ಮಘವಾ ವಿಲಾಸೈಃ" ಹೀಗೆ ಪಾಠವನ್ನಿಟ್ಟುಕೊಂಡರೆ ಇನ್ನೊಂದು ಕ್ರಿಯೆಯನ್ನು ಅಪೇಕ್ಷಿಸುವ ಪ್ರಸಂಗ ಬರುವುದಿಲ್ಲ.

ಇನ್ನೊಂದು ಉದಾಹರಣೆ– "ಲಕ್ಷ್ಮಿಯು ಮಗಳು, ಹರಿಯು ಅಳಿಯ, ಗಂಗೆ ಗೃಹಿಣಿ, ಅಮೃತಚಂದ್ರರು ಮಕ್ಕಳು, ಆಹಾ! ಸಮುದ್ರದ ಕುಟುಂಬ."

ಇಲ್ಲಿ ಲಕ್ಷ್ಮಿಯು ಮಗಳಾಗಿರುವುದು ಮತ್ತು ಅಮೃತ–ಚಂದ್ರರಿಬ್ಬರೂ ಸುತರಾಗಿರುವುದು –ಈ ಮೂವರೂ ಮೂರು ಲೋಕಗಳಿಗೂ ಸ್ಪೃಹಣೀಯರಾಗಿರುವುದರಿಂದ ಅವರನ್ನು ಕುಟುಂಬವಾಗಿ ಹೊಂದಿರುವ ಸಮುದ್ರನಿಗೆ ಶ್ಲಾಘಾಸ್ಪದತ್ವವನ್ನು ತಂದುಕೊಡುತ್ತದೆ. ಅವೆರಡು ಅಂಶಗಳನ್ನೇ ಇಲ್ಲಿ ಹೇಳಬೇಕು. ಬೇರೆಯದನ್ನಲ್ಲ.

**ತತ್ರ ಹಿ ಭಗವತೋ ಹರೇರ್ಗಂಗಾಯಾಶ್ಚ ಸಕಲತ್ರೈಲೋಕ್ಯಾಲಂಕಾರತ್ವೇಽಪಿ ನ ತಯೋರ್ಜಾಮಾತೃಗೃಹಿಣೀಭಾವೇನ ವಿಧಾನಮಿತಿ ನ ಮಹೋದಧೇಃ ಶ್ಲಾಘಾತಿಶಯಯೋಗಃ, ಯನ್ನಿಬಂಧನಮತ್ಯದ್ಭುತಾಸ್ಪದತ್ವಮಸ್ಯ ಸ್ಯಾದಿತಿ ತದ್ವಿಧಾನಸ್ಯ ವಾಚ್ಯಸ್ಯಾವಚನಂ ದೋಷಃ ।**

**ಅಥ, ಹರಿರ್ಜಾಮಾತಾ ಗಂಗಾ ಗೃಹಿಣೀತ್ಯೇವಂ ವಿಪರ್ಯಯೇಣಾತ್ರ ಸಂಬಂಧಃ ಕರಿಷ್ಯತೇ, ತಸ್ಯ ಪುರುಷಾಧೀನತ್ವಾತ್ । ತಥಾ ಚ ನ ಯಥೋಕ್ತದೋಷಾವಕಾಶಃ ಇತಿ । ಸತ್ಯಮ್। ಕಿಂತು ನ ಸರ್ವವಿಷಯೋಽಯಂ ಸಂಬಂಧಸ್ಯ ಪುರುಷಾಧಿನತ್ವೋಪಗಮಃ । ತಸ್ಯ ಹಿ ವಿಶೇಷಣವಿಶೇಷ್ಯಭಾವ ಏವ ವಿಷಯೋಽವಗಂತವ್ಯಃ ।**

**ಅನುವಾದ:**

ಇಲ್ಲಿ ಭಗವಾನ್ ಹರಿಯೂ ಗಂಗೆಯೂ ಸಮಸ್ತ ತ್ರೈಲೋಕ್ಯಕ್ಕೂ ಅಲಂಕಾರವಾಗಿದ್ದರೂ ಅವುಗಳನ್ನು ಅಳಿಯ, ಗೃಹಿಣೀ ಎಂದು ವಿಧಾನ ಮಾಡಲಾಗಿಲ್ಲ. ಆದ್ದರಿಂದ ಮಹೋದಧಿಗೆ ಶ್ಲಾಘಾತಿಶಯವು ಉಂಟಾಗುವುದಿಲ್ಲ, ಅದರ ನಿಮಿತ್ತವಾಗಿ ಸಮುದ್ರಕ್ಕೆ ಅತ್ಯದ್ಭುತಗಳ ಆಸ್ಪದತ್ವವು ಸಿದ್ಧಿಸಬಹುದಾಗಿತ್ತು. ಹಾಗೆ ಅವರ ವಿಧಾನವನ್ನು ಹೇಳಬೇಕಾಗಿದ್ದಾಗ ಹೇಳದಿರುವುದರಿಂದ ವಾಚ್ಯಾವಚನದೋಷ.

ಆದರೆ ಹರಿರ್ಜಾಮಾತಾ, ಗಂಗಾ ಗೃಹಿಣೀ ಎಂದು ಇಲ್ಲಿ ಅನ್ವಯವನ್ನು ಮಾಡಿಕೊಳ್ಳಲಾಗುತ್ತದೆ. ಅನ್ವಯ ಮಾಡಿಕೊಳ್ಳುವುದು ನಮ್ಮ ಅಧೀನದಲ್ಲಿರುವ

ಕಾರ್ಯ. ಆದ್ದರಿಂದ ನೀವು ಹೇಳಿದ ದೋಷಕ್ಕೆ ಇಲ್ಲಿ ಅವಕಾಶ ಇಲ್ಲ ಎಂದರೆ, ಸತ್ಯ. ಆದರೆ ಅನ್ವಯವು ಪುರುಷಾಧೀನ ಎಂಬುದನ್ನು ಎಲ್ಲ ಸಂದರ್ಭಗಳಲ್ಲಿ ಒಪ್ಪಿಕೊಳ್ಳಲಾಗದು. ವಿಶೇಷಣವಿಶೇಷ್ಯಭಾವದಲ್ಲಿ ಮಾತ್ರ ಅದಕ್ಕೆ ಅವಕಾಶ ಎಂದು ತಿಳಿದುಕೊಳ್ಳಬೇಕು.

**ಯತ್ರ ಸ್ವಸೌಂದರ್ಯಾದೇವ ತಯೋರನ್ಯೋನ್ಯಾಪೇಕ್ಷೋ ವಿಧ್ಯನುವಾದಭಾವಃ, ತತ್ರ ಹಿ ಯಥಾಶ್ರುತಪದಾರ್ಥಸಂಬಂಧನಿಬಂಧನೋಽರ್ಥಪ್ರತೀತಿಕ್ರಮ ಇತಿ ತತ್ರೈವ ಪದಾರ್ಥಪೌರ್ವಾಪರ್ಯನಿಯಮೋಽವಗಂತವ್ಯಃ । ಯಥಾ–**

**ತ್ವಕ್ ತಾರವೀ ನಿವಸನಂ ಮೃಗಚರ್ಮ ಶಯ್ಯಾ**
**ಗೇಹಂ ಗುಹಾ ವಿಪುಲಪತ್ರಪುಟಾ ಘಟಾಶ್ಚ ।**
**ಮೂಲಂ ದಲಂ ಚ ಕುಸುಮಂ ಚ ಫಲಂ ಚ ಭೋಜ್ಯಂ**
**ಪುತ್ರಸ್ಯ ಜಾತಮಟವೀಗೃಹಮೇಧಿನಸ್ತೇ ॥ ಇತಿ ।**

**ಪ್ರತ್ಯುದಾಹರಣಂ ಯಥಾ–**
**ಶಯ್ಯಾ ಶಾದ್ವಲಮಾಸನಂ ಶುಚಿಶಿಲಾ ಸದ್ಮ ದ್ರುಮಾಣಾಮಧಃ**
**ಶೀತಂ ನಿರ್ಝರವಾರಿ ಪಾನಮಶನಂ ಕಂದಾಃ ಸಹಾಯಾ ಮೃಗಾಃ ।**
**ಇತ್ಯಪ್ರಾರ್ಥಿತಲಭ್ಯಸರ್ವವಿಭವೇ ದೋಷೋಽಯಮೇಕೋ ವನೇ**
**ದುಷ್ಪ್ರಾಪಾರ್ಥಿನಿ ಯತ್ ಪರಾರ್ಥಘಟನಾವಂಧ್ಯೈರ್ವೃಥಾ ಸ್ಥೀಯತೇ ॥**

**ಅನುವಾದ:**

ಎಲ್ಲಿ ತಮ್ಮ ಸೌಂದರ್ಯದಿಂದಲೇ ಎರಡು ವಸ್ತುಗಳಿಗೆ ಪರಸ್ಪರ ವಿಧ್ಯನುವಾದಭಾವವಿರುವುದೋ ಅಲ್ಲಿ ಹೇಗೆ ಕೇಳಿಸುವುದೋ ಹಾಗೆ ಪದಾರ್ಥಸಂಬಂಧನಿಮಿತ್ತವಾದ ಅರ್ಥಜ್ಞಾನದ ಕ್ರಮ. ಅಂಥ ಸ್ಥಳದಲ್ಲಿ ಪದಾರ್ಥಗಳ ಪೌರ್ವಾಪರ್ಯದ ನಿಯಮವನ್ನು ತಿಳಿದುಕೊಳ್ಳಬೇಕು. ಉದಾಹರಣೆ–

"ಮರಗಳ ತೊಗಟೆಯೇ ಬಟ್ಟೆ, ಮೃಗಚರ್ಮವೇ ಹಾಸಿಗೆ, ಗುಹೆಯೇ ಮನೆ, ನಿರ್ಮಲವಾದ ಎಲೆಗಳ ದೊನ್ನೆಗಳೇ ಕೊಡಗಳು. ಬೇರು, ಸೊಪ್ಪು, ಹೂವು, ಹಣ್ಣು, ಇವೇ ಊಟ –ಅಡವಿಯಲ್ಲಿ ನಿವಾಸಿಯಾಗಿರುವ ನಿನ್ನ ಮಗನಿಗೆ ಆಗಿವೆ."

ಇದಕ್ಕೆ ವಿರುದ್ಧವಾದ ಪ್ರತ್ಯುದಾಹರಣೆ–

"ಹಾಸಿಗೆ ಹುಲ್ಲುಗಾವಲು, ಪೀಠ ಶುಭ್ರವಾದ ಶಿಲೆ, ಮನೆ ಮರಗಳ ಕೆಳಗಿನ ನೆಲ, ತಂಪಾದ ಹೊಳೆಯ ನೀರು ಪಾನ. ಆಹಾರ ಗೆಡ್ಡೆಗೆಣಸು, ಸಹಾಯಕರು ಮೃಗಗಳು. ಹೀಗೆ ಕಾಡಿನಲ್ಲಿ ಎಲ್ಲ ಸೌಕರ್ಯಗಳೂ ಕೇಳದೆಯೇ ದೊರೆಯುತ್ತವೆ. ಆದರೆ ಒಂದು ದೋಷ. ಇಲ್ಲಿ ಯಾರೂ ಯಾಚಕರಿಲ್ಲ. ಆದ್ದರಿಂದ ಪರೋಪಕಾರವನ್ನು ಮಾಡಲಾಗದೆ ವ್ಯರ್ಥವಾಗಿ ನಾವು ಜೀವಿಸಬೇಕು."

**ಅತ್ರೋದಾಹರಣಪ್ರತ್ಯುದಾಹರಣಪ್ರತೀತ್ಯೋರ್ಯದಂತರಂ**
**ತನ್ಮತಿಮತಾಮೇವಾವಭಾಸತೇ । ಅನ್ಯೇಷಾಂ ತು ಶಪಥಪ್ರತ್ಯೇಯಮೇವ ।**
**ಅನುವಾದ್ಯಮನುಕ್ತ್ವೈವ ನ ವಿಧೇಯಮುದೀರಯೇತ್ ।**
**ನ ಹ್ಯಲಬ್ಧಾಸ್ಪದಂ ಕಿಂಚಿತ್ ಕುತ್ರಚಿತ್ ಪ್ರತಿತಿಷ್ಠತಿ ॥**
**ವಿಧೇಯೋದ್ದೇಶ್ಯಭಾವೋಽಯಂ ರೂಪ್ಯರೂಪಕತಾತ್ಮಕಃ ।**
**ನ ಚ ತತ್ರ ವಿಧೇಯೋಕ್ತಿರುದ್ದೇಶ್ಯಾತ್ ಪೂರ್ವಮಿಷ್ಯತೇ ॥**

**ಇತ್ಯಂತರಶ್ಲೋಕೌ ॥ ಯಥಾ–**

**ಸ್ಪಷ್ಟೋಚ್ಚೈಸ್ಸತ್ಕಿರಣಕೇಸರಸೂರ್ಯಬಿಂಬವಿಸ್ತೀರ್ಣಕರ್ಣಿಕಮಥೋ ದಿವಸಾರವಿಂದಮ್ ।**
**ಶ್ಲಿಷ್ಟಾಷ್ಟದಿಗ್ದಲಕಲಾಪಮುಖಾವತಾರಬದ್ಧಾಂಧಕಾರಮಧುಪಾವಲಿ ಸಂಚುಕೋಚ ॥**
**ಇತ್ಯಾದೌ ಕೇಸರಾದೇಃ ।**

**ಅನುವಾದ:**

ಇಲ್ಲಿ ಉದಾಹರಣೆ ಮತ್ತು ಪ್ರತ್ಯುದಾಹರಣೆಗಳ ಪ್ರತೀತಿಗಳಲ್ಲಿರುವ ವ್ಯತ್ಯಾಸವು ಬುದ್ಧಿಶಾಲಿಗಳಿಗೆ ಮಾತ್ರ ಗೋಚರಿಸುತ್ತದೆ. ಬೇರೆಯವರಿಗೆ ಶಪಥ ಮಾಡಿ ಬೋಧಿಸಬೇಕಷ್ಟೆ.

"ಅನುವಾದ್ಯವನ್ನು ಹೇಳದೆ ವಿಧೇಯವನ್ನು ಹೇಳಬಾರದು. ಆಧಾರವೇ ಇಲ್ಲದಾಗ ಯಾವುದೂ ಎಲ್ಲೂ ನಿಲ್ಲಲಾರದು."

ಈ ವಿಧೇಯೋದ್ದೇಶ್ಯಭಾವವು ರೂಪ್ಯ–ರೂಪಕಗಳ ಸ್ವರೂಪದಲ್ಲಿರುವುದು. ಅದರಲ್ಲಿ ಉದ್ದೇಶ್ಯಕ್ಕಿಂತ ಮೊದಲು ವಿಧೇಯವನ್ನು ಹೇಳುವುದು ಸರಿಯಲ್ಲ. ಇವು ಅಂತರಶ್ಲೋಕಗಳು.

ಉದಾಹರಣೆ– "ಸ್ಪಷ್ಟವಾಗಿ ತೋರುವ ಕಿರಣಗಳೆಂಬ ಕೇಸರಗಳಿಂದ ಕೂಡಿದ ಸೂರ್ಯಬಿಂಬವೆಂಬ ಬೀಜಕೋಶವನ್ನುಳ್ಳ, ಒಂದಕ್ಕೊಂದು ಅಂಟಿಕೊಂಡ ಎಂಟು ದಿಕ್ಕುಗಳೆಂಬ ದಳಕಲಾಪದ ಮುಖದಲ್ಲಿ ಬಂದಿಳಿದ ಕತ್ತಲೆಯೆಂಬ ಭ್ರಮರಸಮೂಹಸಮೇತವಾದ ದಿವಸವೆಂಬ ತಾವರೆಯು ಮುದುಡಿತು."

ಇತ್ಯಾದಿಗಳಲ್ಲಿ ಕೇಸರ ಮುಂತಾದುವನ್ನು ಹೇಳಿರುವುದು ಉದ್ದೇಶ್ಯದ ಅನಂತರದಲ್ಲಿ.

(ಅನಿಷ್ಟಪ್ರತೀತಿಯ ರಚನೆ ಬೇಡ)

**ಪದಾನಾಮಭಿಸಂಬಂಧಸ್ಯಾನ್ಯಥಾಭಾವಮಾತ್ರತಃ ।**
**ಯತ್ರಾನಿಷ್ಟಪ್ರತೀತಿಃ ಸ್ಯಾದ್ ರಚನಾಂ ತಾಂ ಪರಿತ್ಯಜೇತ್ ॥**
**ಯಥಾ– ತವ ಕಂಠಾಸೃಜಾಸಿಕ್ತಾ ಕರವಾಲಲತಾ ದ್ವಿಷಾಮ್ ।**
**ಪ್ರಸೂತೇ ಸಮರಾರಣ್ಯೇ ಯಶಃಕುಸುಮಸಂಪದಮ್ ॥**

ಇತಿ । ಅತ್ರ ಹಿ ಚಾಟುಕೇ ಯುಷ್ಮದರ್ಥಸ್ಯ ಚ ಪೌರ್ವಾಪರ್ಯವಿಪರ್ಯಯೇ ಸಮಾಸೇ ವಾ ವಾಚ್ಯೇ ಯತ್ ತಯೋರವಚನಂ ತದೇವಾನಿಷ್ಟಾರ್ಥಪ್ರತಿಪತ್ತಿಮೂಲಮಿತಿ ದೋಷತಯಾ ಅವಗಂತವ್ಯಮ್ । ಯಥಾ ಚ–

ಮಧುಶ್ಚ ತೇ ಮನ್ಮಥ ಸಾಹಚರ್ಯಾದಸಾವನುಕ್ತೋಽಪಿ ಸಹಾಯ ಏವ ।
ಸಮೀರಣಃ ಪ್ರೇರಯಿತಾ ಭವೇತಿ ವ್ಯಾದಿಶ್ಯತೇ ಕೇನ ಹುತಾಶನಸ್ಯ ॥ ಇತಿ ।

**ಅನುವಾದ:**

ಪದಗಳ ಅನ್ವಯಸಂಬಂಧವನ್ನು ಬೇರೆ ರೀತಿಯಲ್ಲಿ ಮಾಡಿದಾಗ ಯಾವ ರಚನೆಯಲ್ಲಿ ಅನಿಷ್ಟಾರ್ಥದ ಪ್ರತೀತಿ ಉಂಟಾಗುವುದೋ ಅಂಥ ರಚನೆಯನ್ನು ಬಿಡಬೇಕು. ಉದಾಹರಣೆ– "ಶತ್ರುಗಳ ಕಂಠದ ರಕ್ತದಿಂದ ಸಿಕ್ತವಾದ ನಿನ್ನ ಖಡ್ಗಲತೆಯು ಯುದ್ಧವೆಂಬ ಅಡವಿಯಲ್ಲಿ ಕೀರ್ತಿಯೆಂಬ ಪುಷ್ಪರಾಶಿಯನ್ನು ಸೃಜಿಸುತ್ತಿದೆ". ಈ ಚಾಟುಪದ್ಯದಲ್ಲಿ ತವ ಎಂಬ ಶಬ್ದವನ್ನು ದ್ವಿಷಾಂ ಎಂಬ ಶಬ್ದವನ್ನೂ ಸ್ಥಳಾಂತರಿಸಬೇಕು, ಅಥವಾ ದ್ವಿಷತ್‌ಕಂಠಾಸೃಜಾ ಎಂಬ ಸಮಾಸವನ್ನು ಮಾಡಬೇಕು. ಹಾಗೆ ಮಾಡದಿರುವುದರಿಂದ (ಪದ್ಯವನ್ನು ಓದಿದಾಗ) ಅನಿಷ್ಟವಾದ ಅರ್ಥದ ಪ್ರತೀತಿಯುಂಟಾಗುವುದು. ಅದರ ಮೂಲಕಾರಣ ಪದಗಳ ಸಂನಿವೇಶ. ಅದು ದೋಷ ಎಂದು ಅರಿತುಕೊಳ್ಳಬೇಕು. ಇನ್ನೊಂದು ಉದಾಹರಣೆ–

"ಹೇ ಮನ್ಮಥನೆ, ಹೇಳದಿದ್ದರೂ ಸಾಹಚರ್ಯದಿಂದಲೇ ವಸಂತನು ನಿನಗೆ ಸಹಾಯಕನಾಗುತ್ತಾನೆ. ಬೆಂಕಿಗೆ ಪ್ರೇರಕನಾಗು ಎಂದು ಗಾಳಿಗೆ ಯಾರು ಆಜ್ಞೆ ಮಾಡುತ್ತಾರೆ?"

ಅತ ಏವ–

ಯೇನ ಯಸ್ಯಾಭಿಸಂಬಂಧೋ ದೂರಸ್ಥೇನಾಪಿ ತೇನ ಸಃ ।
ಪದಾನಾಮಸಮಾಸಾನಾಮಾನಂತರ್ಯಮಕಾರಣಮ್ ॥
ಇತಿ ಪ್ರತೀತ್ಯೋರ್ವೈಚಿತ್ರ್ಯಮನಾಲೋಚ್ಯೈವ ಚರ್ಚಿತಮ್ ।
ಗುಣದೋಷಮಪಶ್ಯದ್ಭಿರ್ದೂರಾದೂರೋತ್ಥಯೋಸ್ತಯೋಃ ॥
ಸ್ವರೂಪೇಽವಸ್ಥಿತಿರ್ಯೇಷಾಂ ಶಬ್ದಾನಾಮಿತಿನೇಷ್ಯತೇ ।
ನ ತಾನ್ ಅನ್ಯವ್ಯವಹಿತಾನ್ ಪ್ರಯುಂಜೀತ ವಿಚಕ್ಷಣಃ ॥
ಇತಿ ಸಂಗ್ರಹಶ್ಲೋಕಾಃ ।

ತೇನ–

"ದ್ವಿಷತ್ಕಂಠಾಸೃಜಾಸಿಕ್ತಾ ತ್ವತ್ಕೃಪಾಣಲತಾ ವರಾ" ಇತ್ಯೇಕತ್ರ ಯುಕ್ತಃ ಪಾಠಃ ।
ಅಪರತ್ರ "ವ್ಯಾದಿಶ್ಯತೇ ಕೇನ ಸಮೀರಣೋ ವಾ
ಹವಿರ್ಭುಜಶ್ಚೋದಯಿತಾ ಭವೇತಿ" ಇತಿ ।

**ಅನುವಾದ:**

ಆದ್ದರಿಂದಲೇ– "ಯಾವುದರೊಡನೆ ಯಾವುದರ ಅಭಿಸಂಬಂಧವು ಅಪೇಕ್ಷಿತವೋ ಅದು ದೂರದಲ್ಲಿರುವ ಪದದೊಡನೆಯೂ ಆಗುವುದು. ಅಸಮಸ್ತವಾದ ಪದಗಳ ಅನ್ವಯಕ್ಕೆ ಆನಂತರ್ಯವು ಕಾರಣವಲ್ಲ" ಎಂದು (ಪ್ರಾಚೀನರು) ಪ್ರತೀತಿಗಳ ವೈಚಿತ್ರ್ಯವನ್ನು ಆಲೋಚಿಸದೆ ಹೇಳಿದ್ದಾರೆ. ದೂರದಲ್ಲಿರುವ ಮತ್ತು ಸಮೀಪದಲ್ಲಿರುವ ಪದಗಳ ಅನ್ವಯದಲ್ಲಿ ಉಂಟಾಗುವ ದೋಷ ಮತ್ತು ಗುಣವನ್ನು ಅವರು ಕಾಣಲಿಲ್ಲ. ಯಾವ ಶಬ್ದಗಳ ಅವಸ್ಥಿತಿಯು ಸ್ವರೂಪದಲ್ಲಿ ಇರಬೇಕೆಂದು ಇತಿಶಬ್ದದಿಂದ ನಿರ್ದಿಷ್ಟವಾಗುವುದೋ ಅಂಥ ಶಬ್ದಗಳನ್ನು ಬೇರೆ ಶಬ್ದಗಳಿಂದ ವ್ಯವಹಿತವಾಗದಂತೆ ಪ್ರಯೋಗಿಸಬೇಕು. ಇವು ಸಂಗ್ರಹಶ್ಲೋಕಗಳು. ಆದ್ದರಿಂದ ಒಂದು ಪದ್ಯದಲ್ಲಿ "ದ್ವಿಷತ್ಕಂಠಾಸೃಜಾಸಿಕ್ತಾ ತ್ವತ್ಕೃಪಾಣಲತಾ ವರಾ" ಎಂಬುದು ಉಚಿತವಾದ ಪಾಠ. ಇನ್ನೊಂದು ಪದ್ಯದಲ್ಲಿ "ವ್ಯಾದಿಶ್ಯತೇ ಕೇನ ಸಮೀರಣೋ ವಾ ಹವಿರ್ಭುಜಶ್ಬೋದಯಿತಾ ಭವೇತಿ" ಎಂಬುದು (ಉಚಿತವಾದ ಪಾಠ).

**ಅನನ್ವಯೋಽಪಿ ಅಭ್ಯೂಹ್ಯಾರ್ಥತ್ವಾದ್ ರಸಭಂಗಹೇತುರಿತಿ ಸೋಽಪಿ ವಾಚ್ಯಾವಚನಂ ದೋಷಃ।**

**ಯಥಾ– ನಿರ್ಘಾತೋಗ್ರೈಃ ಕುಂಜಲೀನಾನ್ ಜಿಘಾಂಸು–**
**ರ್ಜ್ಯಾನಿರ್ಘೋಷೈಃ ಕ್ಷೋಭಯಾಮಾಸ ಸಿಂಹಾನ್ ।**
**ನೂನಂ ತೇಷಾಮಭ್ಯಸೂಯಾಪರೋಽಸೌ**
**ವೀರ್ಯೋದಗ್ರೇ ರಾಜಶಬ್ದೇ ಮೃಗಾಣಾಮ್ ॥**

**ಇತಿ । ಅತ್ರ ಸಿಂಹಾನಾಂ ತಾವನ್ನ ರಾಜಶಬ್ದಸಂಬಂಧಃ ಸಂಭವತಿ, ತೇಷಾಂ ತದ್ವಾಚ್ಯತ್ವಾಭಾವಾತ್ ತತ್ಸಂಬಂಧಾಭಾವಾಚ್ಚ । ತತ್ಪರ್ಯಾಯಸ್ಯ ಮೃಗರಾಜಶಬ್ದಸ್ಯ ಸನ್ನಪ್ಯಸೌ ಅನುಪಯುಕ್ತ ಏವ, ತಸ್ಯ ಪ್ರಕ್ರಾಂತತ್ವಾಭಾವಾತ್ । ಮೃಗಾಣಾಮಿತ್ಯತ್ರ ಮೃಗರಾಜಾನಾಮಿತ್ಯೇವಮನುಕ್ತೇಶ್ಚ ।**

**ಅನುವಾದ:**

ಅನ್ವಯವನ್ನು ಹೊಂದದೆ ಇರುವಿಕೆಯೂ ವಾಚ್ಯಾವಚನ ಎಂಬ ದೋಷವೇ ಏಕೆಂದರೆ ಅದರಲ್ಲಿ ವಿವಕ್ಷಿತಾರ್ಥವನ್ನು ಊಹಿಸಿ ತಿಳಿದುಕೊಳ್ಳಬೇಕಾಗುತ್ತದೆ. ಅದು ರಸಭಂಗಕ್ಕೆ ಕಾರಣವಾಗುತ್ತದೆ. ಉದಾಹರಣೆ–

"ಹೊಡೆಯುವುದರಲ್ಲಿ ಉಗ್ರವಾದ ಮೌರ್ವಿಯ ಶಬ್ದಗಳಿಂದ ಆ ದಶರಥನು ಪೊದೆಗಳಲ್ಲಿ ಅವಿತುಕೊಂಡಿದ್ದ ಸಿಂಹಗಳನ್ನು ತಲ್ಲಣಗೊಳಿಸಿದನು. ನಿಶ್ಚಿತವಾಗಿ ಅವನು ಮೃಗಗಳ ವೀರ್ಯಪ್ರಸಿದ್ಧವಾದ ರಾಜಶಬ್ದದಲ್ಲಿ ಅಸೂಯೆಯನ್ನು ಹೊಂದಿರಬೇಕು."

ಇಲ್ಲಿ ಸಿಂಹಗಳಿಗೆ ರಾಜಶಬ್ದದೊಡನೆ ಸಂಬಂಧವಿಲ್ಲ. ಏಕೆಂದರೆ ಅವು ರಾಜಶಬ್ದವಾಚ್ಯಗಳಲ್ಲ. ಆ ಶಬ್ದದ ಅರ್ಥಕ್ಕೂ ಅವುಗಳಿಗೂ ಸಂಬಂಧವಿಲ್ಲ. ಸಿಂಹ

ಶಬ್ದದ ಪರ್ಯಾಯವಾದ ಮೃಗರಾಜ ಶಬ್ದಕ್ಕೆ ಅಂಥ ಸಂಬಂಧವು ಇದ್ದರೂ ಅದು ಅಪ್ರಯೋಜಕ, ಏಕೆಂದರೆ ಮೃಗರಾಜ ಎಂಬ ಶಬ್ದವನ್ನು ಪದ್ಯದಲ್ಲಿ ಹೇಳಿಲ್ಲ. ಮೃಗಾಣಾಮ್ ಎಂಬಲ್ಲಿ ಮೃಗರಾಜಾನಾಮ್ ಎಂದೂ ಕವಿಯು ಪ್ರಯೋಗಿಸಿಲ್ಲ.

**ಕಿಂಚ ಮೃಗೇಷು ರಾಜತ್ವಂ ಭವತಿ ಸಿಂಹಾನಾಂ, ನ ತು ಶಬ್ದೇ ಇತಿ ವೀರ್ಯೋದಗ್ರತ್ವಂ ತದ್ವಿಶೇಷಣಮನುಪಪನ್ನಮೇವ, ತಸ್ಯಾರ್ಥನಿಷ್ಠತ್ವೇನೋಪಪತ್ತೇಃ । ತೇನ ನ ಸಿಂಹಾನಾಂ ನ ಮೃಗಾಣಾಂ ನ ವೀರ್ಯೋದಗ್ರತ್ವಸ್ಯ ಚ ರಾಜಶಬ್ದಶಬ್ದೇನಾನ್ವಯಃ ಸಂಗಚ್ಛತ ಇತಿ ಅವಾಚ್ಯ ಏವಾಸೌ । ತೇನ ರಾಜಭಾವ ಇತಿ ಮೃಗೇಷು ಇತಿ ವಾ ವಾಚ್ಯೇ ತದವಚನಂ ದೋಷಃ । ಯಥಾ–**

**ತಪೇನ ವರ್ಷಾಃ ಶರದಾ ಹಿಮಾಗಮೋ ವಸಂತಲಕ್ಷ್ಮ್ಯಾ ಶಿಶಿರಃ ಸಮೇತ್ಯ ಚ ।**
**ಪ್ರಸೂನಕ್ಲೃಪ್ತಿಂ ದಧತಃ ಸದರ್ತವಃ ಪುರೇಽಸ್ಯ ವಾಸ್ತವ್ಯಕುಟುಂಬಿತಾಂ ದಧುಃ ॥ ಇತಿ ।**

**ಅನುವಾದ:**

ಅಲ್ಲದೆ ಸಿಂಹಗಳು ರಾಜತ್ವವನ್ನು ಪಡೆದಿರುವುದು ಮೃಗಗಳಲ್ಲಿ, ಶಬ್ದದಲ್ಲಲ್ಲ. ಆದ್ದರಿಂದ ವೀರ್ಯೋದಗ್ರೇ ಎಂಬ ವಿಶೇಷಣವನ್ನು ರಾಜಶಬ್ದಕ್ಕೆ ಕೊಟ್ಟಿರುವುದು ಅನುಚಿತ. ಏಕೆಂದರೆ ವೀರ್ಯೋದಗ್ರತ್ವವು ಅರ್ಥನಿಷ್ಠ ಎಂಬುದೇ ಸರಿ. ರಾಜಶಬ್ದೇ ಎಂಬ ಶಬ್ದದೊಡನೆ ಸಿಂಹಗಳಿಗಾಗಲಿ ಮೃಗಗಳಿಗಾಗಲಿ ವೀರ್ಯೋದಗ್ರತ್ವಕ್ಕಾಗಲಿ ಅನ್ವಯವು ಸಂಗತವಾಗದಿರುವುದರಿಂದ ಅದು ಅವಾಚ್ಯ. ರಾಜಭಾವೇ ಎಂದೂ ಮೃಗೇಷು ಎಂದೂ ಕವಿಯು ಹೇಳಬೇಕಾಗಿತ್ತು. ಹಾಗೆ ಹೇಳಿಲ್ಲವಾದುದರಿಂದ ವಾಚ್ಯಾವಚನ ಎಂಬ ದೋಷ. ಇನ್ನೊಂದು ಉದಾಹರಣೆ–

"ಬೇಸಿಗೆಯೊಡನೆ ಮಳೆಗಾಲ, ಶರದೃತುವಿನೊಡನೆ ಹೇಮಂತ, ವಸಂತಲಕ್ಷ್ಮಿಯೊಡನೆ ಶಿಶಿರ ಋತುವೂ ಕೂಡಿಕೊಂಡು ಎಲ್ಲ ಋತುಗಳೂ ಒಟ್ಟಿಗೆ ಹೂವುಗಳನ್ನು ಸೃಷ್ಟಿಸುತ್ತಾ ಅವನ ನಗರದಲ್ಲಿ ನಿವಾಸಿಗಳಾದ ಕುಟುಂಬಿಗಳಾದುವು."

**ಅತ್ರ ಹಿ ತಪರ್ತೋರ್ಲಿಂಗವಿಶೇಷಾನುಮಿತಪುರುಷಭಾವಸ್ಯ ಕರ್ತೃತ್ವಾತ್ ಪ್ರಾಧಾನ್ಯಂ ವಕ್ತುಮುಚಿತಂ, ವರ್ಷಾಣಾಂ ಚ ಸ್ತ್ರೀತ್ವಸ್ಯ ಸಹಭಾವೇನ ನಿರ್ದೇಶಾದಪ್ರಾಧಾನ್ಯಂ ಯಥಾ ಅನ್ಯೇಷಾಂ ಹಿಮಾಗಮಾದೀನಾಮ್, ಅನ್ಯಥಾ ತೇಷಾಂ ಕುಟುಂಬಿರೂಪತಾನುಪಪತ್ತೇಃ । ನ ಚ ತಥಾ ಉಕ್ತಮಿತಿ ತಸ್ಯ ವಾಚ್ಯಸ್ಯಾವಚನಂ ದೋಷಃ ।**

**ಕಿಮವೇಕ್ಷ್ಯ ಫಲಂ ಪಯೋಧರಾನ್ ಧ್ವನತಃ ಪ್ರಾರ್ಥಯತೇ ಮೃಗಾಧಿಪಃ ।**
**ಪ್ರಕೃತಿಃ ಕಿಲ ಸಾ ಮಹೀಯಸಃ ಸಹತೇ ನಾನ್ಯಸಮುನ್ನತಿಂ ಯಯಾ ॥**
**ಇತ್ಯತ್ರ ಮಹೀಯಸಾಮಿತಿ ಬಹುವಚನಂ ವಾ ವೀಪ್ಸಾಸಮಾನಫಲಂ ಪ್ರಯೋಕ್ತವ್ಯಮ್।**

**ಅನುವಾದ:**

ಇಲ್ಲಿ ಗ್ರೀಷ್ಮಋತುವಿನಲ್ಲಿ ಪುಂಲಿಂಗದಿಂದ ಪುರುಷತ್ವವು ಅನುಮಿತವಾಗಿರುವುದರಿಂದ ಕರ್ತೃವಾದ ಅದಕ್ಕೆ ಪ್ರಾಧಾನ್ಯವನ್ನು ಕೊಡುವುದು

ಉಚಿತ. ವರ್ಷಾಃ (ಮಳೆಗಾಲ) ಎಂಬ ಶಬ್ದವು ಸ್ತ್ರೀಲಿಂಗದಲ್ಲಿರುವುದರಿಂದ ಅದನ್ನು ಜೊತೆಯಲ್ಲಿ ನಿರ್ದೇಶಿಸಿ ಅಪ್ರಾಧಾನ್ಯವನ್ನು ಕೊಡಬೇಕಾಗಿತ್ತು –ಇತರ ಹಿಮಾಗಮಾದಿಗಳ ನಿರ್ದೇಶದಲ್ಲಿರುವ ಹಾಗೆ. ಇಲ್ಲದಿದ್ದರೆ ಅವಕ್ಕೆ ಕುಟುಂಬಿತ್ವವೇ ಕೂಡಿಬರುವುದಿಲ್ಲ. ಕವಿಯು ಹಾಗೆ ಹೇಳಿಲ್ಲದ ಕಾರಣ ವಾಚ್ಯಾವಚನ ಎಂಬ ದೋಷ.

"ಫಲವನ್ನು ನಿರೀಕ್ಷಿಸಿ ಸಿಂಹವು ಗುಡುಗುತ್ತಿರುವ ಮೋಡಗಳನ್ನು ಪ್ರಾರ್ಥಿಸುವುದೆ? ಅದು ದೊಡ್ಡವನ ಸ್ವಭಾವ. ಅದರಿಂದ ಇನ್ನೊಬ್ಬನ ಉನ್ನತಿಯನ್ನು ಅವನು ಸಹಿಸುವುದಿಲ್ಲ ಅಷ್ಟೆ." ಈ ಪದ್ಯದಲ್ಲಿ ವೀಪ್ಸಾಸಮಾನಫಲವಾದ ಬಹುವಚನವನ್ನು ಬಳಸಿ ಮಹೀಯಸಾಮ್ ಎಂದು ಪ್ರಯೋಗಿಸಬೇಕಾಗಿತ್ತು.

(ವೀಪ್ಸಾ=ದ್ವಿರುಕ್ತಿ. ಅದನ್ನು ಬಳಸಿದಾಗ ಎಲ್ಲ ಎಂಬ ಅರ್ಥ ಬರುತ್ತದೆ. ಗೃಹೇಗೃಹೇ ಪರ್ವ = ಮನೆಮನೆಯಲ್ಲೂ ಹಬ್ಬ. ಎಂದರೆ ಎಲ್ಲ ಮನೆಗಳಲ್ಲೂ ಹಬ್ಬ ಎಂದು ಅರ್ಥ.)

**ಯಥಾ–**

**ಯಾವದರ್ಥಪದಾಂ ವಾಚಮೇವಮಾದಾಯ ಮಾಧವಃ ।**
**ವಿರರಾಮ ಮಹೀಯಾಂಸಃ ಪ್ರಕೃತ್ಯಾ ಮಿತಭಾಷಿಣಃ ॥**

**ಇತ್ಯತ್ರಾರ್ಥಾಂತರನ್ಯಾಸೇ । ಸರ್ವಾದಿಶಬ್ದೋ ವಾ ಯಥಾ–**

**ಛಾಯಾಮಪಾಸ್ಯ ಮಹತೀಮಪಿ ವರ್ತಮಾನಾ–**
**ಮಾಗಾಮಿನೀಂ ಜಗೃಹಿರೇ ಜನತಾಸ್ತರೂಣಾಮ್ ।**
**ಸರ್ವೋ ಹಿ ನೋಪನತಮಪ್ಯಪಚೀಯಮಾನಂ**
**ವರ್ಧಿಷ್ಣುಮಾಶ್ರಯಮನಾಗಸಮಭ್ಯುಪೈತಿ ॥**

**ಇತ್ಯತ್ರ । ಅನ್ಯಥಾ ಸಮರ್ಥಕಸ್ಯ ಪ್ರಕೃತಿಮಹೀಯಸ್ತ್ವಸ್ಯ ಹೇತೋರನ್ಯಸಮುನ್ನತ್ಯಸಹಿಷ್ಣುತ್ವ–ಲಕ್ಷಣೇನ ಸಾಧ್ಯೇನ ಸರ್ವೋಪಸಂಹಾರವ್ಯಾಪ್ತಿರ್ನ ಪ್ರತೀಯತೇ । ತಸ್ಮಾದೇವಮತ್ರ ಪಾಠಃ ಪರಿಣಮಯಿತವ್ಯಃ–"ಪ್ರಕೃತಿಃ ಖಲು ಸಾ ಮಹೀಯಸಾಂ ನ ಸಹಂತೇಽನ್ಯಸಮುನ್ನತಿಂ ಯಯಾ" ಇತಿ ।**

**ಅನುವಾದ:**

ಉದಾಹರಣೆ– "ಹೀಗೆ ಶ್ರೀಕೃಷ್ಣನು ಅರ್ಥಕ್ಕೆ ಬೇಕಾಗುವಷ್ಟೇ ಪದಗಳಿದ್ದ ಮಾತನ್ನು ಹೇಳಿ ವಿರಮಿಸಿದನು. ಮಹಾತ್ಮರು ಸ್ವಭಾವದಿಂದಲೇ ಮಿತಭಾಷಿಗಳು" –ಎಂಬ ಅರ್ಥಾಂತರನ್ಯಾಸದಲ್ಲಿ ಇರುವಂತೆ (ಬಹುವಚನವನ್ನು ಪ್ರಯೋಗಿಸಬೇಕು). ಅಥವಾ ಸರ್ವ ಮುಂತಾದ ಶಬ್ದವನ್ನಾದರೂ ಬಳಸಬಹುದು. ಉದಾಹರಣೆ– ಛಾಯಾಮಪಾಸ್ಯ.......... (ಇದರ ಅನುವಾದ ಹಿಂದೆ ಬಂದಿದೆ).

ಹಾಗೆ ಮಾಡದೆ ಇದ್ದರೆ ಸಮರ್ಥಕ ಕಾರಣವಾದ ಪ್ರಕೃತಿಮಹೀಯಸ್ತ್ವಕ್ಕೂ ಸಾಧ್ಯವಾದ ಅನ್ಯಸಮುನ್ನತ್ಯಸಹಿಷ್ಣುತ್ವಕ್ಕೂ ಎಲ್ಲವನ್ನೂ ಒಳಗೊಳ್ಳುವ ವ್ಯಾಪ್ತಿಯು ತೋರುವುದಿಲ್ಲ. ಆದ್ದರಿಂದ (ಕಿಮವೇಕ್ಷ್ಯ...... ಎಂಬ ಪದ್ಯದಲ್ಲಿ) ಪ್ರಕೃತಿಃ ಖಲು ಸಾ ಮಹೀಯಸಾಂ ನ ಸಹಂತೇಽನ್ಯಸಮುನ್ನತಿಂ ಯಯಾ ಎಂದು ಪಾಠವನ್ನು ಬದಲಾಯಿಸಬೇಕು.

(ಸರ್ವನಾಮದ ಸ್ಥಾನದಲ್ಲಿ ಸ್ವಶಬ್ದಪ್ರಯೋಗ ದೋಷ)

**ಸರ್ವನಾಮಪರಾಮರ್ಶಯೋಗ್ಯಸ್ಯಾರ್ಥಸ್ಯ ಯಾ ಪುನಃ ।**
**ಸ್ವಶಬ್ದೇನಾಭಿಧಾ ದೋಷಃ ಸ ವಾಚ್ಯಾವಚನಾಭಿಧಃ ॥**

**ಯಥಾ– ನಿಶಿ ನಾಂತಿಕಸ್ಥಿತಾಮಪಿ ಚಕ್ರಾಹ್ವಃ ಸಹಚರೀಂ ವಿಲೋಕಯತಿ ।**
**ಚಕ್ರಾಹ್ವಾಪಿ ನ ಸಹಚರ ಮಹೋ ಸುದುರ್ಲಂಘತಾ ವಿಧೇಃ ॥ ಇತಿ ।**

**ಅತ್ರ ಹಿ ಚಕ್ರಾಹ್ವಾಸಹಚರೌ ನ ಸ್ವಶಬ್ದಪರಾಮರ್ಶವಿಷಯೌ ಭವಿತುಮರ್ಹತಃ, ತಯೋರುಕ್ತನಯೇನ ಸರ್ವನಾಮಪರಾಮರ್ಶವಿಷಯತ್ವೋಪಪಾದನಾತ್ । ಅನ್ಯಥಾ ತಯೋಃ ಪೌನರುಕ್ತ್ಯಂ ಸರ್ವನಾಮ್ನಾಂ ಚ ವಿಷಯಾಪಹಾರಃ ಸ್ಯಾತ್ । ನ ಚಾತ್ರ ತಥಾ ಪರಾಮರ್ಶೋ ವಿಹಿತ ಇತಿ ವಾಚ್ಯಾವಚನಂ ದೋಷಃ । ತೇನ "ವಿರಹವಿಧುರಾ ನ ಸಾಪಿ ತಮ್" ಇತ್ಯತ್ರ ಅನುಗುಣಃ ಪಾಠಃ ।**

**ಅನುವಾದ:**

ಸರ್ವನಾಮಶಬ್ದಗಳಿಂದ ಹೇಳಲು ಯೋಗ್ಯವಾದ ಅರ್ಥವನ್ನು ಮತ್ತೆ ಸ್ವವಾಚಕಶಬ್ದಗಳಿಂದ ಹೇಳಿದರೆ ಅದೂ ವಾಚ್ಯಾವಚನವೆಂಬ ದೋಷ. ಉದಾಹರಣೆ–

"ರಾತ್ರಿಯಲ್ಲಿ ಚಕ್ರವಾಕವು ಹತ್ತಿರದಲ್ಲೇ ಇರುವ ತನ್ನ ಸಹಚರಿಯನ್ನು ನೋಡಲಾರದು. ಚಕ್ರವಾಕಿಯೂ ತನ್ನ ಸಹಚರನನ್ನು ಕಾಣದು. ಅಹೋ, ವಿಧಿಯು ದುರ್ಲಂಘ್ಯ". ಇಲ್ಲಿ (ದ್ವಿತೀಯಾರ್ಧದಲ್ಲಿ) ಚಕ್ರವಾಕಿ ಮತ್ತು ಸಹಚರ ಎಂಬುವನ್ನು ಸ್ವಶಬ್ದದಿಂದ ಹೇಳಿರುವುದು ಸರಿಯಲ್ಲ. ಏಕೆಂದರೆ ಅವು ಸರ್ವನಾಮದಿಂದ ಪರಾಮರ್ಶಿಸಲ್ಪಡಬೇಕು ಎಂದು ನಾವು ಉಪಪಾದಿಸಿದ್ದೇವೆ. ಹಾಗೆ ಮಾಡದಿದ್ದರೆ ಆ ಶಬ್ದಗಳ ಪೌನರುಕ್ತ್ಯವೂ, ಸರ್ವನಾಮಗಳ ವಿಷಯಾಪಹಾರವೂ ಆದೀತು. ಪದ್ಯದಲ್ಲಿ ಹಾಗೆ (ಕವಿಯು ಸರ್ವನಾಮಗಳಿಂದ) ಪರಾಮರ್ಶವನ್ನು ಮಾಡಿಲ್ಲ. ಆದ್ದರಿಂದ ವಾಚ್ಯಾವಚನ ಎಂಬ ದೋಷ. ಇಲ್ಲಿ "ವಿರಹವಿಧುರಾ ನ ಸಾಪಿ ತಮ್" (ವಿಯೋಗವಿಕ್ಲವಳಾದ ಅವಳೂ ಅವನನ್ನು ಕಾಣಲಾರಳು) ಎಂಬುದು ಯುಕ್ತವಾದ ಪಾಠ.

**ಏವಮ್– "ಪರಿಪಾತಿ ಸ ಕೇವಲಂ ಶಿಶೂನ್ ಇತಿ ತನ್ನಾಮನಿ ಮಾ ಸ್ಮ ವಿಶ್ವಸೀಃ" ಇತ್ಯಾದಾವಪ್ಯಯಂ ದೋಷೋ ದ್ರಷ್ಟವ್ಯಃ । ತಸ್ಯ ಹಿ ಶಿಶುಪಾಲ ಇತಿ ನಾಮ ಪ್ರಸಿದ್ಧಂ, ನ**

**ತು ಶಿಶುಪರಿಪ ಇತಿ । ತೇನ "ಸ ಶಿಶೂನ್ ಕಿಲ ಪಾಲಯತ್ಯಭೀಃ" ಇತಿ ಯುಕ್ತಃ ಪಾಠ ಇತ್ಯಲಂ ಬಹುಭಾಷಿತೇನ ।**

**ಅನುವಾದ:**

ಹೀಗೆ– "ಅವನು ಕೇವಲ ಶಿಶುಗಳನ್ನು ಕಾಪಾಡುತ್ತಾನೆ ಎಂದು ಅವನ ಹೆಸರಿನಲ್ಲಿ ನಂಬಿಕೆಯನ್ನಿಡಬೇಡ" ಇತ್ಯಾದಿಗಳಲ್ಲೂ ಈ ದೋಷವಿದೆಯೆಂಬುದನ್ನು ನೋಡಬೇಕು. ಅವನಿಗೆ ಶಿಶುಪಾಲ ಎಂಬ ಹೆಸರು ಪ್ರಸಿದ್ಧ, ಶಿಶುಪರಿಪ ಎಂದಲ್ಲ. ಆದ್ದರಿಂದ "ಸ ಶಿಶೂನ್ ಕಿಲ ಪಾಲಯತ್ಯಭೀಃ" ಎಂಬುದು ಯುಕ್ತವಾದ ಪಾಠ. ಅತಿಯಾಗಿ ಮಾತನಾಡಿದುದು ಸಾಕು.

## ಅವಾಚ್ಯವಚನಮ್

**ಅನೇನ ಚ ವಾಚ್ಯಾವಚನೇನ ಸಾಮರ್ಥ್ಯಾದ್ ಅವಾಚ್ಯವಚನಮಪಿ ಸಂಗೃಹೀತಂ ವೇದಿತವ್ಯಮ್ । ತಸ್ಯಾಪೀಷ್ಟಾರ್ಥವಿಪರ್ಯಯಾತ್ಮಕತ್ವಾತ್ । ತದ್ಯಥಾ–**

**ಸರಿತ್ಸಮುದ್ರಾನ್ ಸರಸೀಶ್ಚ ಗತ್ವಾ ರಕ್ಷಃ ಕಪೀಂದ್ರೈರುಪಪಾದಿತಾನಿ ।**
**ತಸ್ಯಾಪತನ್ ಮೂರ್ಧ್ನಿ ಜಲಾನಿ ಜಿಷ್ಣೋರ್ವಿಂಧ್ಯಸ್ಯ ಮೇಘಪ್ರಭವಾ ಇವಾಪಃ ॥ ಇತಿ ।**

**ಅತ್ರ ಹಿ ಏಕಸ್ಯೈವಾರ್ಥಸ್ಯ ಯಃ ಪರ್ಯಾಯಮಾತ್ರಭೇದೇನ ಭೇದಮುಪಕಲ್ಪ್ಯ ಉಪಮಾನೋಪಮೇಯಭಾವೋ ನಿಬದ್ಧಃ ಸೋಽವಾಚ್ಯವಚನಂ ದೋಷಃ । ತಸ್ಯ ಭಿನ್ನಾರ್ಥನಿಷ್ಠತ್ವಾತ್ । ತದಯಮತ್ರ ಪಾಠೋ ಯುಕ್ತಃ "ವಿಂಧ್ಯಸ್ಯ ಮೇಘಪ್ರಭವಾನಿ ಯದ್ವತ್" ಇತಿ । ಅಸ್ಮಿಂಶ್ಚ ಪಾಠೇ ಭಿನ್ನಲಿಂಗತ್ವಮುಪಮಾದೋಷೋಽಪಿ ಪರಿಹೃತೋ ಭವತಿ ।**

## ಅವಾಚ್ಯವಚನ

**ಅನುವಾದ:**

ಈ ವಾಚ್ಯಾವಚನದಿಂದಲೇ ಸಾಮರ್ಥ್ಯದಿಂದ ಅವಾಚ್ಯವಚನವೆಂಬ ದೋಷವನ್ನೂ ಹೇಳಿದಂತಾಯಿತು ಎಂದುಕೊಳ್ಳಬೇಕು. ಏಕೆಂದರೆ ಅದೂ ಇಷ್ಟಾರ್ಥವಿರುದ್ಧವೇ ಆಗಿರುತ್ತದೆ. ಅದರ ಉದಾಹರಣೆ–

"ನದಿಗಳಿಗೂ ಸಮುದ್ರಗಳಿಗೂ ಕೊಳಗಳಿಗೂ ಹೋಗಿ ರಾಕ್ಷಸಶ್ರೇಷ್ಠರು ಮತ್ತು ಕಪಿನಾಯಕರು ತೆಗೆದುಕೊಂಡುಬಂದ ಜಲಗಳು ಜಯಶೀಲನಾದ ಆ ರಾಮನ ತಲೆಯ ಮೇಲೆ ಮೇಘಗಳ ನೀರುಗಳು ವಿಂಧ್ಯಪರ್ವತದ ಶಿಖರದ ಮೇಲೆ ಬಿದ್ದಂತೆ ಬಿದ್ದುವು."

ಇಲ್ಲಿ ಒಂದೇ ಆದ ನೀರನ್ನು ಪರ್ಯಾಯಭೇದದಿಂದ ಬೇರೆ ಎಂದು ಭಾವಿಸಿ ಉಪಮಾನೋಪಮೇಯಭಾವವನ್ನು ಹೇಳಲಾಗಿದೆ. ಅದು ಅವಾಚ್ಯವಚನವೆಂಬ ದೋಷ. ಏಕೆಂದರೆ ಉಪಮಾನೋಪಮೇಯಭಾವವು ಭಿನ್ನಾರ್ಥಗಳಿಗೆ ಮಾತ್ರ ಹೇಳಲ್ಪಡಬೇಕು. ಆದ್ದರಿಂದ ಈ ಪದ್ಯದಲ್ಲಿ "ವಿಂಧ್ಯಸ್ಯ

ಮೇಘಪ್ರಭವಾನಿ ಯದ್ವತ್" ಎಂಬ ಪಾಠವು ಉಚಿತ. ಭಿನ್ನಲಿಂಗತ್ವ ಎಂಬ ಉಪಮಾದೋಷವೂ ಈ ಪಾಠದಲ್ಲಿ ಪರಿಹೃತವಾಗುತ್ತದೆ. (ಜಲಾನಿ ಎಂಬ ಪದ ನಪುಂಸಕಲಿಂಗದಲ್ಲಿದೆ. ಆಪಃ ಎಂಬ ಪದ ಸ್ತ್ರೀಲಿಂಗದಲ್ಲಿದೆ. ಉಪಮೇಯ ಮತ್ತು ಉಪಮಾನಗಳ ವಾಚಕಗಳು ಬೇರೆ ಬೇರೆ ಲಿಂಗದಲ್ಲಿದ್ದರೆ ಭಿನ್ನಲಿಂಗತ್ವ ಎಂಬ ದೋಷ)

**ಪರ್ಯಾಯಮಾತ್ರಭಿನ್ನಸ್ಯ ಯದೇಕಸ್ಯೈವ ವಸ್ತುನಃ ।**
**ಉಪಮಾನೋಪಮೇಯತ್ವಮವಾಚ್ಯವಚನಂ ಚ ತತ್ ॥**
**ಇತಿ ಸಂಗ್ರಹಶ್ಲೋಕಃ । ಯಥಾ ಚ–**

**ಇಯಂ ಗೇಹೇ ಲಕ್ಷ್ಮೀರಿಯಮಮೃತವರ್ತಿರ್ನಯನಯೋ–**
**ರಸಾವಸ್ಯಾಃ ಸ್ಪರ್ಶೋ ವಪುಷಿ ಬಹುಲಶ್ಚಂದನರಸಃ ।**
**ಅಯಂ ಕಂಠೇ ಬಾಹುಃ ಶಿಶಿರಮಸೃಣೋ ಮೌಕ್ತಿಕ ಸರಃ**
**ಕಿಮಸ್ಯಾ ನ ಪ್ರೇಯೋ ಯದಿ ಪರಮಸಹ್ಯಸ್ತು ವಿರಹಃ ॥ ಇತಿ ।**

**ಅತ್ರ ಯತ್ ಸಾಕ್ಷಾನ್ನಾಯಿಕಾವರ್ಣನಂ ತದವಾಚ್ಯಮೇವ । ತತ್ಸಂಬಂಧಿನಾಮೇವ ಸ್ಪರ್ಶಾದೀನಾಮಿವ ರಮ್ಯಾಣಾಮರ್ಥಾನಾಂ ವಿರಹವ್ಯತಿರೇಕೇಣಾಂಗಭಾವೋಪಗಮಾತ್ । ನ ತಸ್ಯಾ ಏವ ವಿರಹಸ್ಯ ತತ್ಸಂಬಂಧಿತ್ವೇಽಪ್ಯಸಹ್ಯತ್ವಾಭಿಧಾನಾದಿತಿ ತಸ್ಯಾ ವಚನಂ ದೋಷಃ। ತೇನ "ಮುಖಂ ಪೂರ್ಣಶ್ಚಂದ್ರೋ ವಪುರಮೃತವರ್ತಿರ್ನಯನಯೋಃ" ಇತಿ ಅತ್ರ ಯುಕ್ತ ಪಾಠಃ।**

**ಅನುವಾದ:**

ಪರ್ಯಾಯಭೇದ ಮಾತ್ರದಿಂದ ಭಿನ್ನವಾಗುವ ಒಂದೇ ವಸ್ತುವಿಗೆ ಉಪಮಾನತ್ವ ಮತ್ತು ಉಪಮೇಯತ್ವವನ್ನು ಹೇಳಿದರೆ ಅದು ಅವಾಚ್ಯವಚನ ಎಂಬ ದೋಷ. ಇದು ಸಂಗ್ರಹ ಶ್ಲೋಕ. ಇನ್ನೊಂದು ಉದಾಹರಣೆ– (ಇಯಂ ಗೇಹೇ..... ಇದರ ಅನುವಾದ ಹಿಂದೆ ಬಂದಿದೆ.)

ಈ ಪದ್ಯದಲ್ಲಿ (ಮೊದಲನೆಯ ಪಾದದಲ್ಲಿ) ಸಾಕ್ಷಾತ್ ನಾಯಿಕೆಯ ವರ್ಣನೆಯನ್ನು ಮಾಡಿರುವುದು ಅವಾಚ್ಯ. ನಾಯಿಕಾಸಂಬಂಧಿಗಳಾದ ಸ್ಪರ್ಶ ಇತ್ಯಾದಿಗಳಿಗೆ, (ವಿರಹವನ್ನು ಮಾತ್ರ ಬಿಟ್ಟು) ಆನಂದಕಾರಣತ್ವವನ್ನು ಒಪ್ಪಿಕೊಳ್ಳಲಾಗಿದೆ. ಅವಳಿಗೆ ಅದನ್ನು ಒಪ್ಪಿಕೊಂಡಿಲ್ಲ. ಅವಳ ವಿರಹವು ತತ್ಸಂಬಂಧಿಯಾದರೂ ಸಹಿಸಲು ಅಸಾಧ್ಯವಾದುದು ಎಂದು ಹೇಳಿರುವುದರಿಂದ ನೇರವಾಗಿ ಅವಳ ವಿಷಯವನ್ನು ಮೊದಲು ಹೇಳಿರುವುದು ದೋಷ. ಆದ್ದರಿಂದ "ಮುಖಂ ಪೂರ್ಣಶ್ಚಂದ್ರೋ ವಪುರಮೃತವರ್ತಿರ್ನಯನಯೋಃ" (ಅವಳ ಮುಖ ಪೂರ್ಣಚಂದ್ರ, ಅವಳ ಮೈ ಕಣ್ಣುಗಳಿಗೆ ಅಮೃತದ ಬತ್ತಿ) ಎಂಬುದು ಯುಕ್ತ ಪಾಠ.

**ಯಥಾ ಚ–**

**"ಶೋಕಾನಲಧೂಮಸಂಭಾರಸಂಭೃತಾಂಭೋದಭರಿತಮಿವ ವರ್ಷತಿ**
**ನಯನವಾರಿಧಾರಾವಿಸರಂ ಶರೀರಮ್" ಇತಿ । ಅತ್ರ ಹಿ ಶೋಕಸ್ಯ ಕೇನಚಿತ್**
**ಸಾಧರ್ಮ್ಯೇಣ ಯದನಲತ್ವೇನ ರೂಪಣಂ ತತ್ ತಾವದ್ ರೂಪ್ಯಸ್ಯ ಸದ್ಭಾವಾದ್**

**ಯುಕ್ತಮೇವ । ಧೂಮಸ್ಯ ಪುನರ್ನ ಕಿಂಚಿದ್ ರೂಪ್ಯಮಸ್ತೀತಿ ಅವಾಚ್ಯ ಏವಾಸೌ ।**
**ಯಥಾ– "ಶೋಕಾನಲದಾಹಭೀತೇವ ನ ಹೃದಯಮವತರತಿ" ಇತ್ಯತ್ರ ।**
**ರೂಪ್ಯಾಂತರಸದ್ಭಾವೇ ತು ನ ಕಶ್ಚಿದ್ ದೋಷಃ ।**
**ಯಥಾ– ತಸ್ಯಾ ಧೌತಾಂಜನಶ್ಯಾಮಾ ಹೃದಯಂ ದಹತೋಽನಿಶಮ್ ।**
**ಶೋಕಾಗ್ನೇರ್ಧೂಮಲೇಖೇವ ಗಲತ್ಯಶ್ರುಕಣಾವಲಿಃ ॥ ಇತಿ ।**

**ಅನುವಾದ:**

ಇನ್ನೊಂದು ಉದಾಹರಣೆ–

"ಶೋಕವೆಂಬ ಅಗ್ನಿಯ ಧೂಮರಾಶಿಯಿಂದ ಹುಟ್ಟಿದ ಮೋಡಗಳಿಂದ ತುಂಬಿದೆಯೆಂಬಂತೆ ಶರೀರವು ಕಂಬನಿಯನ್ನು ಧಾರಾಕಾರವಾಗಿ ಸುರಿಸುತ್ತಿದೆ."

ಇಲ್ಲಿ ಶೋಕವನ್ನು ಯಾವುದೋ ಒಂದು ಸಾಧರ್ಮ್ಯದ ಆಧಾರದಿಂದ ಬೆಂಕಿಯೆಂದು ರೂಪಿಸಲಾಗಿದೆ. ಅಲ್ಲಿ ರೂಪ್ಯವೂ ಇರುವುದರಿಂದ ಅದು ಯುಕ್ತವೇ ಆಗಿದೆ. ಆದರೆ ಧೂಮಕ್ಕೆ ಯಾವ ರೂಪ್ಯವೂ ಇಲ್ಲದಿರುವುದರಿಂದ ಅದನ್ನು ಅಲ್ಲಿ ಹೇಳಬಾರದು. ಉದಾಹರಣೆಗೆ "ಶೋಕದ ಬೆಂಕಿಯು ಸುಡುವುದೆಂಬ ಭಯಗೊಂಡಿರುವುದೋ ಎಂಬಂತೆ ಹೃದಯದೊಳಕ್ಕೆ ಇಳಿಯುತ್ತಿಲ್ಲ" ಎಂಬಲ್ಲಿ.

ರೂಪ್ಯವೊಂದು (ಧೂಮಕ್ಕೂ) ಇದ್ದರೆ ಆಗ ಯಾವ ದೋಷವೂ ಇಲ್ಲ. ಅದರ ಉದಾಹರಣೆ–

"ಅವಳ ಹೃದಯವನ್ನು ಸತತವಾಗಿ ಸುಡುತ್ತಿದ್ದ ಶೋಕಾಗ್ನಿಯ ಧೂಮರೇಖೆಯೋ ಎಂಬಂತೆ ಕರಗಿದ ಅಂಜನದಿಂದ ಕಪ್ಪಾಗಿದ್ದ ಕಂಬನಿಗಳ ಧಾರೆಯು ಸುರಿಯುತ್ತಿದೆ."

**ಅನಲಕಾರ್ಯತ್ವಾತ್ ತಸ್ಯ ವಾಚ್ಯತ್ವಮದುಷ್ಟಮಿತಿ ಚೇತ್, ನ ।**
**ಅನವಸ್ಥಾಪತ್ತೇರತಿಪ್ರಸಂಗಾಚ್ಚೇತಿ ತಸ್ಯ ವಚನಂ ದೋಷ ಏವ । ಯಥಾ ಚ– ತಪ್ತೇ ಮಹಾವಿರಹವಹ್ನಿಶಿಖಾವಲೀಭಿರಾಪಾಂಡುರಂ ಸ್ತನತಟೇ ಹೃದಯೇ ಪ್ರಿಯಾಯಾಃ । ಇತ್ಯಾದಿ।**

**ಉಪಚಾರಸಹೈಕೈವ ರೂಪಕಸ್ಯೇಷ್ಯತೇ ಕ್ರಿಯಾ ।**
**ಯಥಾನಲಸ್ಯ ದಾಹಾದಿರ್ನ ಕಾರ್ಯಾದಿರಸಂಭವಾತ್ ॥**
**ಇತಿ ಸಂಗ್ರಹ ಶ್ಲೋಕಃ ।**

**ದೃಢತರನಿಬದ್ಧಮುಷ್ಟೇಃ ಕೋಶನಿಷಣ್ಣಸ್ಯ ಸಹಜಮಲಿನಸ್ಯ ।**
**ಕೃಪಣಸ್ಯ ಕೃಪಾಣಸ್ಯ ಚ ಕೇವಲಮಾಕಾರತೋ ಭೇದಃ ॥**

**ಅನುವಾದ:**

ಬೆಂಕಿಯ ಕಾರ್ಯವು ಧೂಮವಾದುದರಿಂದ ಅದನ್ನು (ಶೋಕಾನಲಧೂಮ... ಎಂಬ ಉದಾಹರಣೆಯಲ್ಲಿ) ಹೇಳಿರುವುದು ತಪ್ಪಲ್ಲ ಎಂದರೆ ಅದು ಸರಿಯಲ್ಲ.

(ಹಾಗೆ ಒಪ್ಪಿಕೊಂಡರೆ) ಅನವಸ್ಥಾ ಎಂಬ ದೋಷವು ಉಂಟಾಗುತ್ತದೆ ಮತ್ತು ಅತಿಪ್ರಸಂಗವೂ ಆಗಬಹುದು. ಆದ್ದರಿಂದ ಅದನ್ನು ಹೇಳಿರುವುದು ದೋಷವೇ.

ಇನ್ನೊಂದು ಉದಾಹರಣೆ– "ಮಹಾವಿರಹದ ಬೆಂಕಿಯ ಶಿಖಾವಲಿಗಳಿಂದ ಪ್ರಿಯೆಯ ಸ್ತನತಟದಲ್ಲಿ ಹೃದಯವು ತಪ್ತವಾದಾಗ" ಇತ್ಯಾದಿ. ಬೆಂಕಿಗೆ ದಾಹಾದಿ (ಸುಡುವಿಕೆ ಮುಂತಾದ) ಒಂದೇ ಕ್ರಿಯೆಯು ಉಪಚಾರ (ಲಕ್ಷಣಾವ್ಯಾಪಾರ) ಸಹ ಎಂದು ಒಪ್ಪಿಕೊಳ್ಳಲಾಗುತ್ತದೆ. ಕಾರ್ಯಾದಿಗಳನ್ನು ಒಪ್ಪಿಕೊಳ್ಳಲಾಗದು.

ಇದು ಸಂಗ್ರಹ ಶ್ಲೋಕ.

"ಕೃಪಣನಿಗೂ ಕೃಪಾಣಕ್ಕೂ ಕೇವಲ ಆಕಾರದಿಂದ ಭೇದ. ಇಬ್ಬರೂ ಮುಷ್ಟಿಯನ್ನು ಬಿಗಿಹಿಡಿದಿರುತ್ತಾರೆ, ಕೋಶದಲ್ಲಿ ಸೇರಿಕೊಂಡಿರುತ್ತಾರೆ, ಸ್ವಭಾವದಿಂದಲೇ ಮಲಿನವಾಗಿರುತ್ತಾರೆ."

**ಅತ್ರ ಕೃಪಣಕೃಪಾಣಯೋರಾಕಾರಮಾತ್ರತೋ ವ್ಯತಿರೇಕಃ ಉಕ್ತಃ । ಸ ಚಾಯುಕ್ತಃ । ದ್ವಿವಿಧೋ ಹ್ಯಾಕಾರಾರ್ಥಃ ಸನ್ನಿವೇಶಲಕ್ಷಣೋಽಕ್ಷರವಿಶೇಷಲಕ್ಷಣಶ್ಚ । ತತ್ರಾದ್ಯಸ್ತಾವದಿಹಾನುಪಾದೇಯ ಏವ । ಸಹಾನವಸ್ಥಾನವತೋರರ್ಥಯೋಸ್ತದ್ವ್ಯಭಿಚಾರಾಭಾವಾದಿತಿ ನಾಸೌ ಸಚೇತಸಾಂ ಚಮತ್ಕಾರಮಾವಹತಿ । ದ್ವಿತೀಯಸ್ತು ನ ಸಂಭವತ್ಯೇವ, ಅಕ್ಷರಕೃತವಿಶೇಷಸ್ಯ ಶಬ್ದೈಕವಿಷಯತ್ವಾತ್ । ಯದ್ಯಪಿ ಹಿ ಸ್ವರೂಪಮಪಿ ಶಬ್ದಸ್ಯಾರ್ಥ ಏವ । ಯದಾಹುಃ –**

**ವಿಷಯತ್ವಮನಾಪನ್ನೈಃ ಶಬ್ದೈರ್ನಾರ್ಥಃ ಪ್ರಕಾಶ್ಯತೇ ।**
**ನ ಸತ್ತಯೈವ ತೇಽರ್ಥಾನಾಮಗೃಹೀತಾಃ ಪ್ರಕಾಶಕಾಃ ॥ ಇತಿ ।**

**ಅನುವಾದ:**

ಇಲ್ಲಿ ಕೃಪಣ–ಕೃಪಾಣಗಳಿಗೆ ಆಕಾರಮಾತ್ರದಿಂದ ವಿಶೇಷವನ್ನು ಹೇಳಿದ್ದಾರೆ. ಅದು ಸರಿಯಲ್ಲ. ಆಕಾರದ ಅರ್ಥ ಎರಡು ವಿಧ. ಒಂದು ಆಕೃತಿ ವಿಶೇಷರೂಪವಾದದ್ದು, ಇನ್ನೊಂದು ಅಕ್ಷರವಿಶೇಷರೂಪವಾದದ್ದು. ಅವುಗಳಲ್ಲಿ ಮೊದಲನೆಯದನ್ನು ಇಲ್ಲಿ ಹೇಳಲೇಬಾರದು. ಒಟ್ಟಿಗೆ ಇರದ ಬೇರೆ ಬೇರೆ ವಸ್ತುಗಳಿಗೆ ಆಕಾರಭೇದವಿರುವುದು ಅವ್ಯಭಿಚರಿತ. ಆದ್ದರಿಂದ ಅದು ಸಹೃದಯರಿಗೆ ಚಮತ್ಕಾರವನ್ನುಂಟುಮಾಡದು.

ಎರಡನೆಯದಾದರೋ ಸಂಭವಿಸುವುದೇ ಇಲ್ಲ. ಅಕ್ಷರದಿಂದ ಉಂಟಾಗುವ ವಿಶೇಷವು ಕೇವಲ ಶಬ್ದಕ್ಕೆ ಸಂಬಂಧಿಸಿರುತ್ತದೆ. ತನ್ನ ಸ್ವರೂಪವೂ ಶಬ್ದದ ಅರ್ಥವೆಂದು ಹೇಳಬಹುದು. ಪ್ರಾಚೀನರೂ ಹೇಳುತ್ತಾರೆ–

ವಿಷಯತ್ವವನ್ನು ಪಡೆಯದ ಶಬ್ದಗಳು ಅರ್ಥವನ್ನು ಪ್ರಕಾಶಿಸಲಾರವು. ಗ್ರಹಣಕ್ಕೆ ಸಿಗದ ಶಬ್ದಗಳು ಕೇವಲ ತಮ್ಮ ಇರುವಿಕೆಯಿಂದ ಅರ್ಥಗಳನ್ನು ಪ್ರಕಾಶಪಡಿಸುವುವಲ್ಲ.

**ತಥಾಪಿ ತಸ್ಯ ತಾತ್ಪರ್ಯೇಣಾವಿವಕ್ಷಿತತ್ವಾತ್ ನ ತದಪೇಕ್ಷಮರ್ಥವಿಷಯತ್ವಮಸ್ಯ ಶಕ್ಯಂ ವಕ್ತುಮ್ । ವಾಚ್ಯದಶಾಪತ್ತಾವಪಿ ತಸ್ಯ ಶಬ್ದಸ್ವರೂಪತಾನಪಾಯಾತ್ । ಇತಿ ।**

**ಯಥಾ ಚ–**

**ಯೇನಾಲಂಕೃತಮುದ್ಯಾನಂ ವಿಹಾರೇಣಾಮುನಾ ತವ ।**
**ತೇನೈವ ನಿರ್ವಿಕಾರೇಣ ಕರಿಕುಂಭನಿಭೌ ಕುಚೌ ॥**

**ಇಹ ತು ಯುಕ್ತ ಏವಾಸೌ–**

**ಅಕ್ಷರಾಣಾಮಕಾರೋಽಹಮಿತಿ ಯಃ ಸ್ವಯಮಭ್ಯಧಾತ್ ।**
**ಸೋಽಪಿ ತ್ವಯಾಮುನಾ ಸ್ವಾಮಿನ್ನಾಕಾರೇಣ ಲಘೂಕೃತಃ ॥ ಇತಿ ।**

**ಅನುವಾದ:**

ಆದರೂ ಶಬ್ದಸ್ವರೂಪವು ತಾತ್ಪರ್ಯದಿಂದ ವಿವಕ್ಷಿತವಲ್ಲ. ಆದ್ದರಿಂದ ಅದರ ಬಗೆಗೆ ಇದರ ಅರ್ಥವಿಷಯತ್ವವನ್ನು ಹೇಳಲಾಗದು. ವಾಚ್ಯದಶೆಗೆ ಬಂದರೂ ಶಬ್ದರೂಪಕ್ಕೆ ಶಬ್ದಸ್ವರೂಪವು ಅಳಿಯದು.

ಇನ್ನೊಂದು ಉದಾಹರಣೆ–

"ಯಾವ ನಿನ್ನ ವಿಹಾರದಿಂದ ಈ ಉದ್ಯಾನವು ಅಲಂಕೃತವಾಗಿದೆಯೋ ವಿಕಾರರಹಿತವಾದ ಅದರಿಂದಲೇ ಆನೆಯ ಕುಂಭಸ್ಥಳಗಳಿಗೆ ಸಮಾನವಾದ ನಿನ್ನ ಸ್ತನಗಳೂ ಅಲಂಕೃತವಾಗಿವೆ."

(ವಿಹಾರ= ವಿ–ಹಾರ)

ಆದರೆ ಕೆಳಗೆ ಕೊಟ್ಟಿರುವ ಪದ್ಯದಲ್ಲಿ ಅದು ಸರಿಯಾಗಿದೆ. "ಸ್ವಾಮಿನ್, ನಾನು ಅಕ್ಷರಗಳಲ್ಲಿ ಅಕಾರ ಎಂದು ಯಾವನು ಹೇಳಿದನೋ ಅವನೂ ನಿನ್ನ ಈ ಆಕಾರದಿಂದ ಲಘುವಾಗಿ ಮಾಡಲ್ಪಟ್ಟಿದ್ದಾನೆ.

**ತೇನ ಅಕ್ಷರವಿಶೇಷಾತ್ಮಕಾಕಾರಭೇದಲಕ್ಷಣಸ್ಯ ಶಬ್ದಧರ್ಮಸ್ಯ ಅರ್ಥವಿಶೇಷಣಭಾವೇನಾವಾಚ್ಯಸ್ಯ ಯದ್ವಚನಂ ಸೋಽಪಿ ದೋಷ ಏವೇತಿ ದ್ರಷ್ಟವ್ಯಮ್ ।**

**ಯದ್ಯಪ್ಯರ್ಥಾವುಭೌ ಶಬ್ದಃ ಕ್ರಮೇಣಾಭಿದಧಾತ್ಯಯಮ್ ।**
**ಸ್ವರೂಪಂ ಚಾರ್ಥರೂಪಂ ಚ ತಥಾಪ್ಯಸ್ಯಾಭಿಧಾ ಕ್ರಿಯಾ ॥**
**ತತ್ಪರತ್ವಾದ್ ವಿವಕ್ಷಾಯಾ ವಿಶ್ರಾಮ್ಯತ್ಯರ್ಥ ಏವ ಹಿ ।**
**ಭಿನ್ನಧರ್ಮತಯಾ ತೇನ ಭಿನ್ನಕಕ್ಷ್ಯತಯಾಪಿ ಚ ॥**
**ನಾರ್ಹತೋ ಜಾತುಚಿದಸೌ ಶ್ಲಿಷ್ಟಮೇಕಂ ವಿಶೇಷಣಮ್ ।**
**ಮಾ ಭೂದೇಕಾತ್ಮತಾಪತ್ತಿದೋಷೋಽಸಾವೇತಯೋರಿತಿ ॥**
**ಇತಿ ಸಂಗ್ರಹಶ್ಲೋಕಾಃ ।**

**ಅನುವಾದ:**

ಆದ್ದರಿಂದ ಅಕ್ಷರವಿಶೇಷರೂಪವಾದ ಆಕಾರಭೇದವು ಶಬ್ದಧರ್ಮ, ಅದನ್ನು ಅರ್ಥಕ್ಕೆ ವಿಶೇಷಣವಾಗಿ ಹೇಳಬಾರದು. (ಆದರೂ ದೃಢತರನಿಬದ್ಧ........ ಎಂಬ ಪದ್ಯದಲ್ಲಿ) ಹಾಗೆ ಹೇಳಿರುವುದು ದೋಷವೇ ಎಂದು ತಿಳಿದುಕೊಳ್ಳಬೇಕು.

ತನ್ನ ಸ್ವರೂಪ ಮತ್ತು ಅರ್ಥ ಎಂಬ ಎರಡನ್ನೂ ಶಬ್ದವು ಕ್ರಮವಾಗಿ ತಿಳಿಸುತ್ತದೆ. ಆದರೂ ವಿವಕ್ಷೆಯು ಅರ್ಥಕ್ಕಾಗಿ ಇರುವುದರಿಂದ ಅಭಿಧಾವ್ಯಾಪಾರವು ಅರ್ಥದಲ್ಲೇ ವಿಶ್ರಾಂತಿಯನ್ನು ಪಡೆಯುತ್ತದೆ. ಸ್ವರೂಪದ ಮತ್ತು ಅರ್ಥದ ಧರ್ಮವೂ ಬೇರೆ, ಕಕ್ಷ್ಯೆಯೂ ಬೇರೆ. ಆದ್ದರಿಂದ ಶಬ್ದಕ್ಕೆ ಶ್ಲಿಷ್ಟವಾದ ವಿಶೇಷಣವು ಅವುಗಳಿಗೆ ಹೊಂದುವುದಿಲ್ಲ, ಏಕೆಂದರೆ ಅವುಗಳಿಗೆ ಏಕಾತ್ಮತೆ ಉಂಟಾಗುವ ಆಪತ್ತಿಯ ದೋಷವು ಬರಬಾರದು.

ಇವು ಸಂಗ್ರಹ ಶ್ಲೋಕಗಳು.

**ಯಮಿಂದ್ರಶಬ್ದಾರ್ಥನಿಷೂದನಂ ಹರೇರ್ಹಿರಣ್ಯಪೂರ್ವಂ ಕಶಿಪುಂ ಪ್ರಚಕ್ಷತೇ । ಇತಿ । ಅತ್ರ ಹಿರಣ್ಯಕಶಿಪುಮಿತಿ ವಕ್ತವ್ಯೇ ಹಿರಣ್ಯಪೂರ್ವಂ ಕಶಿಪುಮಿತ್ಯುಕ್ತಂ, ಸೋಽವಾಚ್ಯವಚನಂ ದೋಷಃ । ಯತೋಽತ್ರ ಹಿರಣ್ಯಶಬ್ದಃ ಕಶಿಪುಶಬ್ದಶ್ಚ ಅಭಿಧೇಯಪ್ರಧಾನೌ ವಾ ಸ್ಯಾತಾಂ, ಸ್ವರೂಪಮಾತ್ರಪ್ರಧಾನೌ ವಾ? ತತ್ರ ನ ತಾವದಭಿಧೇಯಪ್ರಧಾನೌ ಅನಭ್ಯುಪಗಮಾತ್ ಅರ್ಥಸ್ಯಾಸಮನ್ವಯಾತ್, ಕಶಿಪುಶಬ್ದಸ್ಯ ನಪುಸಂಕಲಿಂಗತಾಪತ್ತೇಶ್ಚ । ನಾಪಿ ಸ್ವರೂಪಪ್ರಧಾನೌ। ನ ಹ್ಯೇವವಮ್ ಅಸುರವಿಶೇಷಸ್ಯ ಹಿರಣ್ಯಕಶಿಪೋರಭಿಧೇಯಾನುಕಾರಃ ಪ್ರಖ್ಯಾನಕ್ರಿಯಾಕರ್ಮಭಾವೇನಾಭಿಹಿತೋ ಭವತಿ ।**

**ಅನುವಾದ:**

"ಶಚೀಪತಿಗೆ ಇಂದ್ರಶಬ್ದದ ಅರ್ಥವನ್ನು ನೀಗಿಸಿದ ಯಾವನನ್ನು ಹಿರಣ್ಯಪೂರ್ವವಾದ ಕಶಿಪು ಎಂದು ಕರೆಯುವರೋ"

ಇಲ್ಲಿ ಹಿರಣ್ಯಕಶಿಪುಂ ಎಂದು ಹೇಳಬೇಕು. ಹಿರಣ್ಯಪೂರ್ವಂ ಕಶಿಪುಂ ಎಂದು ಹೇಳಿದ್ದಾನೆ, ಆದ್ದರಿಂದ ಅವಾಚ್ಯವಚನ ಎಂಬ ದೋಷ. ಏಕೆಂದರೆ ಇಲ್ಲಿ ಹಿರಣ್ಯ–ಕಶಿಪು ಎಂಬ ಪದಗಳು ಅರ್ಥಪ್ರಧಾನವೋ ಅಥವಾ ಸ್ವರೂಪಮಾತ್ರ ಪ್ರಧಾನವೋ? ಅರ್ಥಪ್ರಧಾನವಂತೂ ಅಲ್ಲ. ಹಾಗೆ ಯಾರೂ ಒಪ್ಪಿಕೊಳ್ಳರು. ಹಾಗೆಂದರೆ ಅರ್ಥದ ಸಮನ್ವಯವೂ ಆಗದು. ಕಶಿಪು ಶಬ್ದವು ಅರ್ಥಪ್ರಧಾನವಾದರೆ ನಪುಂಸಕಲಿಂಗದಲ್ಲಿರಬೇಕು ಎಂಬ ಆಪತ್ತಿಯೂ ಉಂಟು. ಅವು ಸ್ವರೂಪಪ್ರಧಾನ ಎಂದೂ ಹೇಳಲಾಗದು. ಹಾಗೆ ಹೇಳಿದರೆ ಅಸುರನಾದ ಹಿರಣ್ಯಕಶಿಪು ಎಂಬ ಅರ್ಥದ ಅನುಕಾರವು ಪ್ರಖ್ಯಾನ (ಹೇಳುವಿಕೆ) ಎಂಬ ಕ್ರಿಯೆಗೆ ಕರ್ಮವಾಗಿ ಹೇಳಿದಂತಾಗುವುದಿಲ್ಲ.

**ದ್ವಿವಿಧೋ ಹಿ ಶಬ್ದಾನುಕಾರಃ ಶಾಬ್ದತ್ವಾರ್ಥತ್ವಭೇದಾತ್ । ತತ್ರೇತಿನಾ ವ್ಯವಚ್ಛೇದೇ ಶಾಬ್ದಃ ಪ್ರಸಿದ್ಧ ಏವ । ಅರ್ಥಾವಚ್ಛೇದಭಾವಾದಾರ್ಥಃ, ಯಥಾ "ಮಹದಪಿ ಪರದುಃಖಂ ಶೀತಲಂ ಸಮ್ಯಗಾಹುಃ" ಇತಿ । ಇಹಚಾಯಮಾರ್ಥೋಽನುಕಾರಃ ಇತಿನಾನವಚ್ಛೇದಾತ್ । ಕೇವಲಂ ಯತ್ತಸ್ಯಾಭಿಧಾನಮನುಕಾರ್ಯಂ ತನ್ನಾನುಕೃತಂ, ಯಚ್ಚಾನುಕೃತಂ ತತ್ತಸ್ಯಾಭಿಧಾನಮೇವ ನ**

**ಭವತಿ । ಲೋಕೇ ಹಿರಣ್ಯಕಶಿಪುರಿತಿ ತಸ್ಯಾಖ್ಯಾನಂ, ನ ಹಿರಣ್ಯಪೂರ್ವಃ ಕಶಿಪುರಿತಿ, ಅತಸ್ತಸ್ಯ ಅವಾಚ್ಯಸ್ಯ ವಚನಂ ದೋಷಃ ।**

**ಅನುವಾದ:**

ಶಾಬ್ದ, ಆರ್ಥ ಎಂದು ಶಬ್ದಾನುಕರಣವು ಎರಡು ವಿಧ. ಇತಿ ಎಂಬ ಅವ್ಯಯದಿಂದ ವ್ಯವಚ್ಛೇದ ಮಾಡಿದ ಸ್ಥಳದಲ್ಲಿ ಶಾಬ್ದಾನುಕರಣವು ಪ್ರಸಿದ್ಧವಾಗಿದೆ. ಅರ್ಥಾವಚ್ಛೇದವನ್ನು ಮಾಡಿದರೆ ಆರ್ಥ ಅನುಕರಣ. ಮಹದಪಿ ಪರದುಃಖಂ ಶೀತಲಂ ಸಮ್ಯಗಾಹುಃ (ಬೇರೆಯವರ ದುಃಖ ಎಷ್ಟು ದೊಡ್ಡದಾದರೂ ನೋಡುವವರಿಗೆ ತಂಪಾಗಿರುತ್ತದೆ) ಎಂಬುದು ಅದರ ಉದಾಹರಣೆ. ಪ್ರಕೃತದಲ್ಲಿ ಆರ್ಥಾನುಕರಣ, (ಶಾಬ್ದಾನುಕರಣವಲ್ಲ) ಏಕೆಂದರೆ 'ಇತಿ' ಎಂಬುದು ಇಲ್ಲಿ ಪ್ರಯುಕ್ತವಾಗಿಲ್ಲ. ಯಾವುದು (ಅಸುರನ) ಹೆಸರೋ ಅದರ ಅನುಕರಣೆಯನ್ನು ಮಾಡಿಲ್ಲ, ಯಾವುದರ ಅನುಕರಣೆಯನ್ನು ಮಾಡಿರುವನೋ ಅದು ಅವನ ಹೆಸರಲ್ಲ. ಪ್ರಪಂಚದಲ್ಲಿ ಅವನ ಹೆಸರು ಹಿರಣ್ಯಕಶಿಪು, ಹಿರಣ್ಯಪೂರ್ವಕಶಿಪು ಎಂಬುದಲ್ಲ. ಆದ್ದರಿಂದ ಅಲ್ಲಿ ಅವಾಚ್ಯವಚನ ಎಂಬ ದೋಷವಿದೆ.

**ಯಥಾ ವಾ–**
**ಕ್ಷುಣ್ಣಂ ಯದಂತಃ ಕರಣೇನ ವೃಕ್ಷಾಃ**
**ಫಲಂತಿ ಕಲ್ಪೋಪಪದಾಸ್ತದೇವ । ಇತ್ಯತ್ರ ।**
**ಅತ್ರ "ಕ್ಷುಣ್ಣಂ ಯದಂತಃಕರಣೇನ ನಾಮ**
**ತದೇವ ಕಲ್ಪದ್ರುಮಕಾಃ ಫಲಂತಿ" ಇತಿಯುಕ್ತಃ ಪಾಠಃ ।**
**ಅಸ್ಮಿಂಶ್ಚ ಪಾಠೇ ಕ್ಷುಣ್ಣಸ್ಯಾರ್ಥಸ್ಯ ಕಲ್ಪದ್ರುಮಾಣಾಂ**
**ಚಾವಜ್ಞಾವಗತೌ ಗುಣಾಂತರಲಾಭಃ । ಏವಮ್–**
**"ದಶಪೂರ್ವರಥಂ ಯಮಾಖ್ಯಯಾ**
**ದಶಕಂಠಾರಿಗುರುಂ ಪ್ರಚಕ್ಷತೇ" ಇತ್ಯಾದೌ ದ್ರಷ್ಟವ್ಯಮ್ ।**

**ಅನುವಾದ:**

ಇನ್ನೊಂದು ಉದಾಹರಣೆ–

"ಯಾವುದು ಅಂತಃಕರಣದಿಂದ ನೆನೆಸಲ್ಪಡುವುದೋ ಅದನ್ನೇ ಕಲ್ಪವೆಂಬ ಉಪಪದವನ್ನುಳ್ಳ ವೃಕ್ಷಗಳು ಕೊಡುತ್ತವೆ" ಎಂಬುದು.

ಇಲ್ಲಿ "ಯಾವುದು ಅಂತಃಕರಣದಿಂದ ನೆನೆಸಲ್ಪಡುವುದೋ ಅದನ್ನೇ ಕಲ್ಪದ್ರುಮಕಗಳು ಕೊಡುತ್ತವೆ" ಎಂಬ ಪಾಠವು ಶ್ರೇಷ್ಠ. ಈ ಪಾಠದಲ್ಲಿ ಕಲ್ಪದ್ರುಮಗಳ ಬಗೆಗೆ ತಿರಸ್ಕಾರವೂ ತೋರುವುದರಿಂದ ಹೊಸ ಗುಣವಿಶೇಷವೂ ದೊರಕಿದಂತಾಗುವುದು. ಇದೇ ರೀತಿಯಾಗಿ–

"ಯಾವನನ್ನು ದಶಪೂರ್ವರಥ ಎಂಬ ಹೆಸರುಳ್ಳವನೆಂದೂ, ದಶಕಂಠನ ಶತ್ರುವಿನ ತಂದೆಯೆಂದೂ ಕರೆಯುವರೋ" ಇತ್ಯಾದಿಗಳಲ್ಲೂ ಅವಾಚ್ಯವಚನವೆಂಬ ದೋಷವಿದೆಯೆಂದು ತಿಳಿಯಬೇಕು.

**ಯಾ ಘರ್ಮಭಾಸಸ್ತನಯಾಪಿ ಶೀತಲೈಃ ಸ್ವಸಾ ಯಮಸ್ಯಾಪಿ ಜನಸ್ಯ ಜೀವನೈಃ ।**
**ಕೃಷ್ಣಾಪಿ ಶುದ್ಧೇರಧಿಕಂ ವಿಧಾತೃಭಿಃ ವಿಹಂತುಮಂಹಾಂಸಿ ಜಲೈಃ ಪಟೀಯಸೀ ॥**

**ಅತ್ರ ಘರ್ಮಭಾಸಸ್ತನಯತ್ವಾದೀನಾಂ ಶೀತಲತ್ವಾದೀನಾಂ ಚ ಧರ್ಮಾಣಾಮೇಕಾಶ್ರಯತ್ವೇನ ವಿರೋಧೋ ವಕ್ತುಂ ಯುಕ್ತೋ, ನ ಭಿನ್ನಾಶ್ರಯತ್ವೇನ, ತಸ್ಯ ತಥಾನುಪಪತ್ತೇಃ । ನ ಚಾಸೌ ತಥೋಕ್ತಃ, ಏಕೇಷಾಂ ಯಮುನಾಶ್ರಯತ್ವೇನ ಅನ್ಯೇಷಾಂ ಜಲಾಶ್ರಯತ್ವೇನೋಪಾದಾನಾತ್। ಯದ್ಯಪಿ ಯಮುನಾಯಾಸ್ತಜ್ಜಲಾನಾಂ ಚ ತಾತ್ತ್ವಿಕಮೇವೈಕ್ಯಂ, ತಥಾಪಿ ತೇಷಾಂ ಶಬ್ದೇನ ಕರ್ತೃಕರಣತಯಾ ನಿರ್ದೇಶಾಚ್ಛಾಬ್ದಂ ಭಿನ್ನತ್ವಮಸ್ತ್ಯೇವ । ಶಾಬ್ದ ಏವ ವಿರೋಧೋ ವಕ್ತುಮಿಷ್ಟಃ ಕವೇರಿತಿ ತಸ್ಯಾವಾಚ್ಯಸ್ಯ ವಚನಂ ದೋಷಃ ।**

**ಅನುವಾದ:**

"ಆ ಯಮುನೆಯು ಉಷ್ಣಕಿರಣ (ಸೂರ್ಯ)ನ ಮಗಳಾದರೂ ತಂಪಾದ (ಜಲಗಳಿಂದಲೂ) ಯಮನ ಸೋದರಿಯಾದರೂ ಜನರಿಗೆ ಬದುಕನ್ನು ಕೊಡುವ (ಜಲಗಳಿಂದಲೂ), ಕಪ್ಪಾಗಿರುವವಳಾದರೂ ಅಧಿಕ ಶುದ್ಧಿಯನ್ನುಂಟುಮಾಡುವ ಜಲಗಳಿಂದಲೂ ಪಾಪಗಳನ್ನು ತೊಳೆಯುವುದರಲ್ಲಿ ಅತ್ಯಂತ ಚತುರೆ."

ಇಲ್ಲಿ ಸೂರ್ಯನ ಮಗಳು ಮತ್ತು ತಂಪಾಗಿರುವವಳು ಎಂಬ ಧರ್ಮಗಳಿಗೆ ಒಂದೇ ಆಶ್ರಯವನ್ನು ಹೇಳುವುದರ ಮೂಲಕ ವಿರೋಧವನ್ನು ನಿರೂಪಿಸುವುದು ಯುಕ್ತ. ಭಿನ್ನಾಶ್ರಯವಾಗಿ ನಿರೂಪಿಸುವುದು ಯುಕ್ತವಲ್ಲ. ಭಿನ್ನಾಶ್ರಯವಾಗಿದ್ದಾಗ ಅವುಗಳಿಗೆ ವಿರೋಧವೇ ಉಪಪನ್ನವಾಗದು. ಕವಿಯು ಸಮಾನಾಶ್ರಯವಾಗಿ ಆ ಧರ್ಮಗಳನ್ನು ಹೇಳಿಲ್ಲ. ಒಂದು ಭಾಗದ ಧರ್ಮಗಳನ್ನು ಯಮುನಾಶ್ರಯವನ್ನಾಗಿ, ಇನ್ನೊಂದು ಭಾಗದ ಧರ್ಮಗಳನ್ನು ಜಲಾಶ್ರಯವಾಗಿ ಅವನು ಹೇಳಿದ್ದಾನೆ. ಯದ್ಯಪಿ ಯಮುನೆಗೂ ಅವಳ ಜಲಗಳಿಗೂ ತಾತ್ತ್ವಿಕವಾದ ಐಕ್ಯವಿದೆ, ಆದರೂ ಶಬ್ದದಿಂದ ಅವುಗಳನ್ನು ಕರ್ತೃ-ಕರಣವೆಂದು ನಿರ್ದೇಶಿಸಿದ್ದಾನೆ. (ಯಮುನೆ ಕರ್ತ್ರೀ, ಜಲಗಳು ಕರಣ). ಆದ್ದರಿಂದ ಶಾಬ್ದವಾದ ಭಿನ್ನತ್ವವು ಇದ್ದೇ ಇದೆ. ಕವಿಗೆ ಇಲ್ಲಿ ಶಾಬ್ದವಿರೋಧವನ್ನು ಹೇಳುವುದೇ ಅಭಿಮತ. ಆದ್ದರಿಂದ ಇಲ್ಲಿ ಅವಾಚ್ಯವಚನ ಎಂಬ ದೋಷ.

**ತೇನಾಯಮತ್ರ ಪಾಠಃ ಶ್ರೇಯಾನ್–**
**ಯಾ ಘರ್ಮಭಾಸಸ್ತನಯಾಪಿ ಶೀತಲಾ**
**ಸ್ವಸಾ ಯಮಸ್ಯಾಪಿ ಜನಸ್ಯ ಜೀವನೀ ।**
**ಕೃಷ್ಣಾಪಿ ಶುದ್ಧೇರಧಿಕಂ ವಿಧಾಯಿನೀ**

ವಿಹಂತುಮಂಹಾಂಸಿ ಜಲೈಃ ಪಟೀಯಸೀ ॥ ಇತಿ ।
ಯಥಾ ಚ– ರುರುಚೇ ಹಿಮಾಚಲಗುಹಾಮುಖೋನ್ಮುಖಃ
ಪಯಸಾಂ ಪ್ರವಾಹ ಇವ ಸೌರಸೈಂಧವಃ ।

ಅತ್ರ ಹಿ ಪಯಸಾಮಿತಿ ಯತ್ಪ್ರವಾಹಸ್ಯ ಸಂಬಂಧಿತಯಾ ವಿಶೇಷಣಂ ತದವಾಚ್ಯಮೇವ। ತಸ್ಯ ಹಿ ತತ್ಸಂಬಂಧಿತಾವ್ಯಭಿಚಾರಾತ್ । ಯಚ್ಚಾತ್ರ ಸೌರಸೈಂಧವ ಇತಿ ವಿಶೇಷಣಂ ತತ್ರ ತದ್ಧಿತನಿರ್ದೇಶೋಽಪ್ಯವಾಚ್ಯ ಏವ । ಷಷ್ಠೀನಿರ್ದೇಶೇನೈವ ತದರ್ಥಾವಗತಿಸಿದ್ಧೇಃ । ತೇನ "ಸುಮಹಾನ್ ಪ್ರವಾಹ ಇವ ಜಹ್ನುಜನ್ಮನಃ" ಇತಿ ಅತ್ರ ಯುಕ್ತಃ ಪಾಠಃ ।

**ಅನುವಾದ:**

ಆದ್ದರಿಂದ ಇಲ್ಲಿ ಈ ಪಾಠವು ಉತ್ತಮ–

"ಯಾವ ಯಮುನೆಯು ಸೂರ್ಯನ ಮಗಳಾದರೂ ತಂಪಾಗಿರುವಳೋ, ಯಮನ ತಂಗಿಯಾದರೂ ಜನರಿಗೆ ಬದುಕನ್ನು ನೀಡುವಳೋ, ಕಪ್ಪಗಿರುವವಳಾದರೂ ಅಧಿಕ ಶುದ್ಧಿಯನ್ನು ತರುವಳೋ ಅವಳು ತನ್ನ ಜಲಗಳಿಂದ ಪಾಪಗಳನ್ನು ತೊಳೆಯುವುದರಲ್ಲಿ ಅತಿಸಮರ್ಥೆ."

ಇನ್ನೊಂದು ಉದಾಹರಣೆ–

"ಹಿಮಾಚಲದ ಗುಹೆಯ ಕಡೆಗೆ ನುಗ್ಗುವ ಸುರನದೀಸಂಬಂಧಿಯಾದ ನೀರುಗಳ ಪ್ರವಾಹದಂತೆ ಶೋಭಿಸಿದನು."

ಇಲ್ಲಿ ಪ್ರವಾಹಕ್ಕೆ ನೀರುಗಳ ಎಂಬ ವಿಶೇಷಣವು ಅನಪೇಕ್ಷಿತ. ಏಕೆಂದರೆ ಪ್ರವಾಹಕ್ಕೆ ನೀರು ಅವ್ಯಭಿಚರಿತ. (ನೀರಿಲ್ಲದೆ ಪ್ರವಾಹವಿಲ್ಲ). ಸೌರಸೈಂಧವ ಎಂಬ ವಿಶೇಷಣದಲ್ಲಿ ಉಪಯೋಗಿಸಿರುವ ತದ್ಧಿತಪ್ರತ್ಯಯವೂ ಅನಾವಶ್ಯಕ. ಷಷ್ಠೀವಿಭಕ್ತಿ ನಿರ್ದೇಶದಿಂದಲೇ ಅದರ ಅರ್ಥ ಸಿದ್ಧಿಸುತ್ತದೆ. ಆದ್ದರಿಂದ ಇಲ್ಲಿ "ಸುಮಹಾನ್ ಪ್ರವಾಹ ಇವ ಜಹ್ನುಜನ್ಮನಃ" ಎಂಬ ಪಾಠವು ಉಚಿತ.

ಯಥಾ ಚ–
ಲಕ್ಷ್ಯೀಕೃತಸ್ಯ ಹರಿಣಸ್ಯ ಹರಿಪ್ರಭಾವಃ
ಪ್ರೇಕ್ಷ್ಯ ಸ್ಥಿತಾಂ ಸಹಚರೀಂ ವ್ಯವಧಾಯ ದೇಹಮ್ ।
ಆಕರ್ಣಕೃಷ್ಟಮಪಿ ಕಾಮಿತಯಾ ಸ ಧನ್ವೀ
ಬಾಣಂ ಕೃಪಾಮೃದುಮನಾಃ ಪ್ರತಿಸಂಜಹಾರ ॥
ರಹಯಿಷ್ಯತಿ ತಂ ಲಕ್ಷ್ಮೀರ್ನಯವಿಮುಖೋ ನಾಪದಾಂ ಪದಂ ಕ ಇವ ॥
ಸ ಚ ತವ ರಿಪುರೇವಮತೋ ಭಾವೀ ತಸ್ಯಾಪಿ ತದ್ವಿರಹಃ ॥
ಇತಿ । ಅತ್ರ ಪ್ರತಿಜ್ಞಾನಿಗಮನಯೋಃ ಪೌನರುಕ್ತ್ಯಮ್ ।
ಪ್ರಸಿದ್ಧವ್ಯಾಪ್ತಿಕಸ್ಯ ಹೇತೋರ್ಧರ್ಮಿಣಿ ಉಪಸಂಹಾರವಚನೇನೈವ
ತದುಭಯಾರ್ಥಸಿದ್ಧೇರಿತಿ । ಯದುಕ್ತಂ "ಪ್ರತಿಜ್ಞಾಯಾ ಏವ ತಾವದ್

**ಗಮ್ಯಮಾನಾರ್ಥಾಯಾ ವಚನಂ ಪುನರ್ವಚನಂ, ಕಿಂಪುನಃ**
**ಅಸ್ಯಾಃ ಪುನರ್ವಚನಮಿತಿ ಅಪಾರ್ಥಕಂ ನಿಗಮನಮ್" ಇತಿ ।**

**ಅನುವಾದ:**

"ಸಿಂಹದಂತೆ ಶೌರ್ಯಶಾಲಿಯಾಗಿದ್ದ ಆ ದಶರಥನು ಜಿಂಕೆಗೆ ಗುರಿಯಿಟ್ಟಿದ್ದನು. ಆಗ ಆ ಜಿಂಕೆಗೆ ಅಡ್ಡವಾಗಿ ಹೆಣ್ಣು ಜಿಂಕೆಯು ತನ್ನ ದೇಹವನ್ನೊಡ್ಡಿ ನಿಂತಿತು. ಅದನ್ನು ನೋಡಿ ಕಿವಿಯವರೆಗೆ ಸೆಳೆದಿದ್ದ ಬಾಣವನ್ನೂ ಕರುಣೆಯಿಂದ ಮೃದುವಾದ ಮನಸ್ಸಿನ ಆ ದೊರೆಯು ಉಪಸಂಹರಿಸಿದನು."

"ಲಕ್ಷ್ಮಿಯು ನಿನ್ನ ಆ ಶತ್ರುವನ್ನು ದೂರ ಮಾಡುವಳು. ನೀತಿಗೆ ವಿರುದ್ಧವಾಗಿ ಹೋಗುವ ಯಾವನು ತಾನೆ ವಿಪತ್ತಿಗೆ ಈಡಾಗುವುದಿಲ್ಲ? ನಿನ್ನ ಆ ಶತ್ರುವೂ ಹಾಗೆ. ಆದ್ದರಿಂದ ಅವನಿಗೂ ಲಕ್ಷ್ಮೀವಿರಹವು ಉಂಟಾಗುವುದು."

ಇಲ್ಲಿ ಪ್ರತಿಜ್ಞೆ ಮತ್ತು ನಿಗಮನ (ಅಂತಿಮ ತೀರ್ಮಾನ)ಗಳ ಪೌನರುಕ್ತ್ಯ. ಯಾವ ಕಾರಣಕ್ಕೆ ವ್ಯಾಪ್ತಿಯು ಪ್ರಸಿದ್ಧವೋ ಅದನ್ನು ಧರ್ಮಿಯಲ್ಲಿ ನಿರ್ದೇಶಿಸುವುದರಿಂದಲೇ ಅವೆರಡರ ಫಲವೂ ಸಿದ್ಧಿಸುತ್ತದೆಯಷ್ಟೆ. ಪ್ರಾಚೀನರೂ ಹೇಳಿದ್ದಾರೆ– "ಗಮ್ಯಮಾನಾರ್ಥವಾದ ಪ್ರತಿಜ್ಞೆಯನ್ನು ಶಬ್ದತಃ ಹೇಳುವುದೇ ಪುನರುಕ್ತವೆನಿಸುತ್ತದೆ. ಆ ಪ್ರತಿಜ್ಞೆಯನ್ನು ಮತ್ತೊಮ್ಮೆ ಹೇಳುವುದರ ಬಗೆಗೆ ಏನು ಹೇಳುವುದು? ಆದ್ದರಿಂದ ನಿಗಮನವು ನಿಷ್ಪ್ರಯೋಜನ."

**ಇಹ ತು ನ ದೋಷಃ ।**
**"ಯೋ ಯತ್ಕಥಾಪ್ರಸಂಗೇ ಛಿನ್ನಚ್ಛಿನ್ನಾಯತೋಷ್ಣನಿಃಶ್ವಸಿತಃ ।**
**ಸ ಭವತಿ ತಂ ಪ್ರತಿ ರಕ್ತಸ್ತ್ವಂ ಚ ತಥಾ ದೃಶ್ಯಸೇ ಸುತನು ॥ ಇತಿ ।**

**ಯತ್ರಾಪ್ರಸ್ತುತಾದೇವ ಪ್ರಸ್ತುತಸ್ಯಾರ್ಥಸ್ಯ ಪ್ರತಿಬಿಂಬಾದಿವ ಬಿಂಬಸ್ಯ ಸಾಮ್ಯಾವಗತಿಃ,**
**ನ ತತ್ರಾಸೌ ವಕ್ತವ್ಯತಾಮವತರತಿ, ತದಭಿಧಾನಸಾಮರ್ಥ್ಯಾದೇವ ತದವಗಮಾತ್ ।**
**ಉಕ್ತಾವವಾಚ್ಯವಚನದೋಷಾನುಷಂಗಾತ್ । ಯಥಾ–**
**"ಆಹೂತೇಷು ವಿಹಂಗಮೇಷು ಮಶಕೋ ನಾಯಾನ್ ಪುರೋ ವಾರ್ಯತೇ**
**ಮಧ್ಯೇವಾರಿಧಿ ವಾ ವಸಂಸ್ತೃಣಮಣಿರ್ಧತ್ತೇ ಮಣೀನಾಂ ಪದಮ್ ।**
**ಖದ್ಯೋತೋಽಪಿ ನ ಕಂಪತೇ ಪ್ರಚಲಿತುಂ ಮಧ್ಯೇಽಪಿ ತೇಜಸ್ವಿನಾಂ**
**ಧಿಕ್ ಸಾಮಾನ್ಯಮಚೇತನಂ ಪ್ರಭುಮಿವಾನಾಮೃಷ್ಟತತ್ತ್ವಾಂತರಮ್ ॥**
**ಇತಿ । ಅತ್ರ ಪ್ರಭುಮಿವ ಇತ್ಯುಪಮಾನಭಾವಃ ಪ್ರಭೋಃ ।**

**ಅನುವಾದ:**

ಆದರೆ ಈ ಪದ್ಯದಲ್ಲಿ ದೋಷವಿಲ್ಲ–

"ಯಾರ ಕಥೆಯನ್ನು ಹೇಳುವಾಗ ಯಾವನು ಬಿಟ್ಟು ಬಿಟ್ಟು ದೀರ್ಘವೂ ಬಿಸಿಯಾದುದೂ ಆದ ನಿಟ್ಟುಸಿರನ್ನು ಸುಯ್ಯುವನೋ ಅವನು ಅವನ ಬಗೆಗೆ ಅನುರಾಗವನ್ನು ಹೊಂದಿರುತ್ತಾನೆ. ಸುತನು, ನೀನೂ ಹಾಗೆ ಕಾಣಿಸುವೆ."

ಪ್ರತಿಬಿಂಬದಿಂದ ಬಿಂಬವು ತಿಳಿದುಬರುವಂತೆ ಎಲ್ಲಿ ಅಪ್ರಸ್ತುತದಿಂದಲೇ ಪ್ರಸ್ತುತಾರ್ಥದ ಜ್ಞಾನವು ಉಂಟಾಗುವುದೋ ಅಲ್ಲಿ ಪ್ರಸ್ತುತವನ್ನು ಹೇಳಬೇಕಾಗುವುದಿಲ್ಲ. ಅಪ್ರಸ್ತುತದ ಅಭಿಧಾನದಿಂದಲೇ ಪ್ರಸ್ತುತವೂ ಗೋಚರಿಸುತ್ತದೆಯಷ್ಟೆ. ಆದರೂ ಅದನ್ನು ಹೇಳಿದರೆ ಅವಾಚ್ಯವಚನವೆಂಬ ದೋಷದ ಅಂಟು ಉಂಟಾಗುವುದು. ಉದಾಹರಣೆ–

"ವಿಹಂಗಮಗಳನ್ನು ಕರೆದಾಗ ಸೊಳ್ಳೆ ಮುಂದೆ ಬಂದು ನಿಂತರೆ ಅದನ್ನು ತಳ್ಳಲಾಗದು. ಸಮುದ್ರದ ಮಧ್ಯದಲ್ಲಿ ಇರುವ ತೃಣಮಣಿಯೂ ರತ್ನಗಳ ಹೆಸರನ್ನು ಪಡೆದುಕೊಳ್ಳುತ್ತದೆ. ತೇಜಸ್ವಿಗಳ ಮಧ್ಯದಲ್ಲಿ ನಿಂತುಕೊಳ್ಳಲು ಮಿಣುಕುಹುಳುವಿಗೆ ಅಳುಕಿಲ್ಲ. ತತ್ತ್ವಾಂತರವನ್ನು ವಿಮರ್ಶಿಸಲು ಚೈತನ್ಯವಿಲ್ಲದ ಪ್ರಭುವಿನಂತಿರುವ ಸಾಮಾನ್ಯಕ್ಕೆ ಧಿಕ್ಕಾರ!"

ಇಲ್ಲಿ ಪ್ರಭುಮಿವ ಎಂದು ಪ್ರಭುವಿಗೆ ಹೇಳಿರುವ ಉಪಮಾನತ್ವವು ಅವಾಚ್ಯವಚನ.

> **ಪ್ರಸ್ತುತಾತ್ತು ತದನ್ಯಸ್ಯ ಪ್ರತೀತಿರನಿಬಂಧನಾ ನ ಸಂಭವತ್ಯೇವೇತಿ ತತ್ರ ತಸ್ಯೋಕ್ತಿರುಪಪದ್ಯತ ಏವ ।**
>
> **ನಿಮ್ನಮುನ್ನತಮವಸ್ಥಿತಂ ಚಲಂ ವಕ್ರಮಾರ್ಜವಗುಣಾನ್ವಿತಂ ಚ ಯತ್ ।**
> **ಸರ್ವಮೇವ ತಮಸಾ ಸಮೀಕೃತಂ ಧಿಙ್ ಮಹತ್ತ್ವಮಸತಾಂ ಹತಾಂತರಮ್ ॥**
> **ಅತ್ರ ತಮಸಃ ಪ್ರಸ್ತುತತ್ವಾತ್ ತದುಕ್ತೇರಸತ್ಪುರುಷಮಹತ್ತ್ವ ಪ್ರತೀತಾವಸಾಮರ್ಥ್ಯಮಿತಿ ತದ್ವಕ್ತವ್ಯಮೇವ ಭವತೀತಿ ನ ತತ್ರಾವಾಚ್ಯವಚನದೋಷಾನುಷಂಗಃ ।**
> **ಅಪ್ರಸ್ತುತೋಕ್ತಿಸಾಮರ್ಥ್ಯಾತ್ ಪ್ರಸ್ತುತಂ ಯತ್ರ ಗಮ್ಯತೇ।**
> **ಪ್ರತಿಬಿಂಬಾದ್ ಯಥಾ ಬಿಂಬಂ ತಸ್ಯೋಕ್ತಿಸ್ತತ್ರ ನೇಷ್ಯತೇ ॥**
> **ಪ್ರಸ್ತುತಾತ್ತು ತದನ್ಯಸ್ಯ ಪ್ರತೀತಿರನಿಬಂಧನಾ ।**
> **ನ ಸಂಭವತ್ಯೇವ ತತಸ್ತದುಕ್ತಿಸ್ತತ್ರ ಶಸ್ಯತೇ ॥ ಇತಿ ಸಂಗ್ರಹಶ್ಲೋಕೌ।**

**ಅನುವಾದ:**

ಪ್ರಸ್ತುತದಿಂದ ಅಪ್ರಸ್ತುತದ ಪ್ರತೀತಿಯು ನಿಬಂಧನವಿಲ್ಲದೆ ಉಂಟಾಗುವುದೇ ಇಲ್ಲ. ಆದ್ದರಿಂದ ಅಲ್ಲಿ ಅಪ್ರಸ್ತುತದ ವಚನವು ಯುಕ್ತವೇ ಆಗುತ್ತದೆ. ಉದಾಹರಣೆ– "ತಗ್ಗಾಗಿರುವುದು, ಎತ್ತರವಾಗಿರುವುದು, ಸ್ಥಿರವಾಗಿರುವುದು, ಚರವಾಗಿರುವುದು, ಡೊಂಕಾಗಿರುವುದು, ನೇರವಾಗಿರುವುದು ಎಲ್ಲವೂ ಈಗ ಕತ್ತಲೆಯಿಂದ ಸಮವಾಗಿ ಹೋಗಿದೆ. ವ್ಯತ್ಯಾಸವನ್ನೆಲ್ಲ ಕಳೆದುಹಾಕುವ ಕೆಟ್ಟವರ ಮಹತ್ತ್ವಕ್ಕೆ ಧಿಕ್ಕಾರ."

ಇಲ್ಲಿ ತಮಸ್ಸು ಪ್ರಸ್ತುತವಾಗಿರುವುದರಿಂದ ಅದನ್ನು ಹೇಳಿರುವುದು ಅಸತ್ಪುರುಷರ ಮಹತ್ತ್ವವನ್ನು ತಿಳಿಸಿಕೊಡುವುದರಲ್ಲಿ ಅಸಮರ್ಥ. ಆದ್ದರಿಂದ

ಅಸತ್ಪುರುಷರ ಮಹತ್ತ್ವವನ್ನು ಹೇಳಲೇಬೇಕಾಗಿರುವುದರಿಂದ ಅದರಲ್ಲಿ ಅವಾಚ್ಯವಚನದ ಸೋಂಕು ಇರುವುದಿಲ್ಲ. ಪ್ರತಿಬಿಂಬದಿಂದ ಬಿಂಬದ ಅರಿವು ಉಂಟಾಗುವಂತೆ ಅಪ್ರಸ್ತುತೋಕ್ತಿಯ ಸಾಮರ್ಥ್ಯದಿಂದಲೇ ಎಲ್ಲಿ ಪ್ರಸ್ತುತದ ಅರಿವು ಉಂಟಾಗುವುದೋ ಅಲ್ಲಿ ಪ್ರಸ್ತುತೋಕ್ತಿಯು ಸರಿಯಲ್ಲ. ಅನಿಬಂಧನವಾಗಿ ಪ್ರಸ್ತುತದಿಂದ ಅಪ್ರಸ್ತುತದ ಪ್ರತೀತಿಯು ಉಂಟಾಗುವುದೇ ಇಲ್ಲ. ಆದ್ದರಿಂದ (ಪ್ರಸ್ತುತವನ್ನು ಹೇಳಿದಾಗ ಅನಂತರ) ಅಪ್ರಸ್ತುತವನ್ನು ಹೇಳುವುದು ಪ್ರಶಸ್ಯ.

ಇವೆರಡು ಸಂಗ್ರಹ ಶ್ಲೋಕಗಳು.

**ಕಿಂಚ ಯತ್ರಾಪ್ರಸ್ತುತಪ್ರಶಂಸಾಯಾಮಪ್ರಸ್ತುತಸ್ಯಾರ್ಥಸ್ಯ ಶ್ಲೇಷಮುಖೇನಾಸನ್ನೇವೋ–ತ್ಕರ್ಷೋಽಪಕರ್ಷೋ ವಾ ತದಿತರಸ್ಯ ತಥಾ ಪ್ರತಿಪತ್ತಯೇಽಭಿಧೀಯತೇ ನಾಸೌ ತಾತ್ತ್ವಿಕ ಇತಿ ನ ತತ್ರ ತಾವಾಧಾತುಮುತ್ಸಹತೇ, ತಯೋರ್ಬಿಂಬಪ್ರತಿಬಿಂಬಭಾವೇನ ಅವಸ್ಥಾನೋಪಗಮಾದಿತಿ ಅವಾಚ್ಯ ಏವಾಸೌ, ತಸ್ಯ ವಚನಂ ದೋಷಃ ।**

**ತತ್ರೋತ್ಕರ್ಷೇ ಯಥಾ–**
**ಸದ್ವೃತ್ತೇ ಮಹತಿ ಸ್ವಭಾವಸರಲೇ ಬದ್ಧೋಽಸಿ ಯಸ್ಮಿನ್ ಗುಣೈ–**
**ರ್ಯುಕ್ತೇ ಸಂಯಮಹೇತುತಾಮುಪಗತೇ ಯತ್ರಾಪಿ ವಿಶ್ರಾಮ್ಯಸಿ ।**
**ತಸ್ಯಾಕ್ಷೇಪಪರಂಪರಾಭಿರಭಿತೋ ದೋಲಾಯಮಾನಸ್ಥಿತೇ**
**ರಾಲಾನಸ್ಯ ಮತಂಗಜೈಷ ಕತಮೋ ನಿರ್ಮೂಲನೇ ದುರ್ಗ್ರಹಃ ॥ ಇತಿ ।**

**ಅನುವಾದ:**

ಅಪ್ರಸ್ತುತಪ್ರಶಂಸಾಲಂಕಾರದಲ್ಲಿ, ಅಪ್ರಸ್ತುತವಾದ ಅರ್ಥಕ್ಕೆ ವಸ್ತುತಃ ಇಲ್ಲದಿರುವ ಉತ್ಕರ್ಷವನ್ನೋ ಅಪಕರ್ಷವನ್ನೋ ಪ್ರಸ್ತುತದಲ್ಲಿ ತಂದು ತೋರಿಸುವುದಕ್ಕಾಗಿ ಶ್ಲೇಷಮೂಲಕವಾಗಿ ಹೇಳುವುದು ಸರಿಯಲ್ಲ. ಏಕೆಂದರೆ ಅಂಥ ಉತ್ಕರ್ಷ ಅಥವಾ ಅಪಕರ್ಷವು ವಾಸ್ತವವಲ್ಲ. ಅದು ಪ್ರಸ್ತುತದಲ್ಲಿ ಅಂಥ ಪ್ರತಿಪತ್ತಿಯನ್ನು ತರಲು ಅಸಮರ್ಥ. ಪ್ರಸ್ತುತಾಪ್ರಸ್ತುತಗಳು ಬಿಂಬಪ್ರತಿಬಿಂಬ ಭಾವದಿಂದ ಇರುವುವೆಂದು ಒಪ್ಪಿಕೊಳ್ಳಲಾಗಿರುವುದರಿಂದ (ಶ್ಲೇಷದಿಂದ ಉತ್ಕರ್ಷಾಪಕರ್ಷಗಳನ್ನು) ಹೇಳಬಾರದು, ಹಾಗೆ ಹೇಳಿದರೆ ಅದು ಅವಾಚ್ಯವಚನವೆಂಬ ದೋಷ. ಉತ್ಕರ್ಷದ ಉದಾಹರಣೆ–

"ಎಲೈ ಆನೆ, ಸ್ವಭಾವದಿಂದ ಸರಳವಾದ ಒಳ್ಳೆಯ ವೃತ್ತದಲ್ಲಿ ಹಗ್ಗಗಳಿಂದ ಕಟ್ಟಲ್ಪಟ್ಟಿರುವೆ. ಸಂಯಮಕ್ಕೆ ಕಾರಣವಾದ ಅದರಲ್ಲಿ ವಿಶ್ರಾಂತಿಯನ್ನು ಪಡೆಯುವೆ. ನೀನು ಎಳೆದಾಡುವುದರಿಂದ ಆಲಾನಸ್ತಂಭವು ಡೋಲಾಯಮಾನವಾಗುತ್ತಿದೆ. ಅದನ್ನು ಕಿತ್ತುಹಾಕಲು ಈ ಹಠ ಏಕೆ?"

(ಇಲ್ಲಿ ಶ್ಲಿಷ್ಟ ಶಬ್ದಗಳು: ವೃತ್ತ=ಗುಂಡಾದ ರೇಖೆ, ಚಾರಿತ್ರ. ಗುಣ=ಶೀಲ ಮುಂತಾದ ಗುಣಗಳು, ಹಗ್ಗ. ಸಂಯಮ=ಇಂದ್ರಿಯನಿಗ್ರಹ, ಬಂಧನ.)

**ಅತ್ರ ಸದ್ವೃತ್ತಾದಿಭಿರ್ವಿಶೇಷಣೈರರುಂತುದಸ್ಯಾಲಾನಸ್ಯ ಅಪ್ರಸ್ತುತಸ್ಯ ಶ್ಲೇಷಬಲೋಪಕಲ್ಪಿತೇನ ಸದಾಚಾರತ್ವಾದಿ- ಧರ್ಮಸಂಬಂಧೇನೋತ್ಕರ್ಷೋಽಭಿಹಿತಃ, ನ ಚಾಸೌ ವಾಸ್ತವ ಇತಿ ತದುನ್ಮೂಲನಗ್ರಹೋ ಗಜಸ್ಯೋಚಿತ ಏವ ನ ದುಷ್ಟ ಇತ್ಯುಪಾಲಂಭಯೋಗ್ಯತ್ವಂ ತತ್ರಾಸಿದ್ಧಮೇವ । ಯಚ್ಚ ಬಿಂಬಭೂತೇ ತಸ್ಮಿನ್ನಸಿದ್ಧಂ ತತ್ ಕಥಂ ಪ್ರಸ್ತುತೇಽರ್ಥೇ ದರ್ಪಣಪ್ರತಿಮೇ ಪ್ರತಿಬಿಂಬೀಭವೇದಿತಿ ಶ್ಲೇಷೋತ್ಕರ್ಷಸ್ಯಾವಾಚ್ಯಸ್ಯ ವಚನಂ ದೋಷಃ । ತಸ್ಮಾಚ್ಛ್ಲೇಷಮನಾದೃತ್ಯೈವ ನಿರಾಕಾಂಕ್ಷಕಾಕುಕ್ರಮೇಣ ಕಿಂಶಬ್ದಸ್ಯಾರ್ಥೋ ವ್ಯಾಖ್ಯೇಯಃ । ತೇನ "ಕತಮೋ ನಿರ್ಮೂಲನೇ ದುರ್ಗ್ರಹಃ" ಇತ್ಯತ್ರ "ನ ಖಲು ಕಶ್ಚಿದಿತ್ಯುಚಿತ ಏವಾಯಂ ನಿರ್ಮೂಲನೇಽಭಿನಿವೇಶಸ್ತವ" ಇತ್ಯಯಮರ್ಥೋಽವತಿಷ್ಠತೇ ಇತಿ । ಏವಮಪಕರ್ಷೇಽಪಿ ದ್ರಷ್ಟವ್ಯಮ್ ।**

**ಅನುವಾದ:**

ಈ ಪದ್ಯದಲ್ಲಿ ಸದ್ವೃತ್ತ ಮುಂತಾದ ವಿಶೇಷಣಗಳಿಂದ, ನೋವನ್ನು ಕೊಡುವ ಅಪ್ರಸ್ತುತವಾದ ಆಲಾನಸ್ತಂಭದ ಉತ್ಕರ್ಷವನ್ನು ಶ್ಲೇಷಬಲದಿಂದ ಕಲ್ಪಿತವಾದ ಸದಾಚಾರತ್ವ ಮುಂತಾದ ಧರ್ಮಸಂಬಂಧದಿಂದ ಹೇಳಿದ್ದಾರೆ. ಆದರೆ ಈ ಉತ್ಕರ್ಷವು ವಾಸ್ತವವಲ್ಲ. ಆದ್ದರಿಂದ ಆ ಆಲಾನಸ್ತಂಭವನ್ನು ಕಿತ್ತೊಗೆಯಲು ಆನೆಯ ಹಠವು ಉಚಿತವಾಗಿಯೇ ಇದೆ, ಅದು ದುಷ್ಟತ್ವ ಅಲ್ಲ. ಆದ್ದರಿಂದ ಆನೆಯು ತೆಗಳಲ್ಪಡಲು ಯೋಗ್ಯ ಎಂಬುದು ಅಸಿದ್ಧ. ಬಿಂಬವಾಗಿರುವ ಆನೆಯಲ್ಲಿ ಉಪಾಲಂಭಯೋಗ್ಯತ್ವವು ಅಸಿದ್ಧವಾಗಿರುವಾಗ ಅದು ಕನ್ನಡಿಯಂತಿರುವ ಪ್ರಸ್ತುತಾರ್ಥದಲ್ಲಿ ಹೇಗೆ ಪ್ರತಿಬಿಂಬಿತವಾಗುತ್ತದೆ? ಆದ್ದರಿಂದ ವಾಚ್ಯವಾಗಲು ಅನರ್ಹವಾದ ಶ್ಲೇಷೋತ್ಕರ್ಷವನ್ನು ಹೇಳಿರುವುದು ದೋಷ.

ಆದ್ದರಿಂದ ಇಲ್ಲಿ ಶ್ಲೇಷವನ್ನು ಮರೆತು ಆಕಾಂಕ್ಷಾರಹಿತವಾದ ಕಾಕುಕ್ರಮದಿಂದ (ಧ್ವನಿವಿಕಾರದಿಂದ) 'ಕಿಂ' ಎಂಬ ಶಬ್ದದ ಅರ್ಥವನ್ನು ವ್ಯಾಖ್ಯಾನಿಸಬೇಕು. ಆದ್ದರಿಂದ "ಕತಮೋ ನಿರ್ಮೂಲನೇ ದುರ್ಗ್ರಹಃ" (ಕಿತ್ತುಹಾಕಲು ಕೆಟ್ಟ ಹಠ ಏಕೆ) ಎಂಬುದಕ್ಕೆ ಯಾವ ಕೆಟ್ಟ ಹಠವೂ ಇಲ್ಲ, ಆಲಾನಸ್ತಂಭವನ್ನು ಕಿತ್ತೊಗೆಯಲು ನಿನ್ನ ಹಠವು ಉಚಿತವಾಗಿಯೇ ಇದೆ ಎಂಬ ಅರ್ಥವು ನೆಲೆಗೊಳ್ಳುತ್ತದೆ. ಹೀಗೆ ಅಪಕರ್ಷದಲ್ಲಿಯೂ ಅರಿತುಕೊಳ್ಳಬೇಕು.

**ಸರ್ವನಾಮ್ನಾ ಪರಾಮೃಷ್ಟಸ್ಯಾಪ್ಯರ್ಥಸ್ಯ ಯತ್ಪುನಃ ಸ್ವಶಬ್ದೇನ ವಚನಂ ಸೋಽವಾಚ್ಯವಚನಂ ದೋಷಃ । ಯಥಾ- "ಉದನ್ವಚ್ಛಿನ್ನಾ ಭೂಃ ಸ ಚ ನಿಧಿರಪಾಂ ಯೋಜನಶತಮ್" ಇತಿ। ಅತ್ರ ನಿಧಿರಪಾಮ್ ಇತಿ । ಯಸ್ಯಾರ್ಥಸ್ಯ ಸಮಾಸೋಕ್ತಿತ ಏವೋಪಮಾನಭಾವೋಽವಸಿತೋ ನ ತಸ್ಯಾಸೌ ಪುನರ್ವಾಚ್ಯೋ ಭವತಿ, ಅವಾಚ್ಯವಚನದೋಷಾನುಷಂಗಾತ್ । ಯಥಾ-**

**ಅಲಿಭಿರಂಜನಬಿಂದುಮನೋಹರೈಃ ಕುಸುಮಪಂಕ್ತಿನಿಪಾತಿಭಿರಂಕಿತಃ ।**
**ನ ಖಲು ಶೋಭಯತಿ ಸ್ಮ ವನಸ್ಥಲೀಂ ನ ತಿಲಕಸ್ತಿಲಕಃ ಪ್ರಮದಾಮಿವ ॥ ಇತಿ**
**ಅತ್ರ ತಿಲಕಪ್ರಮದಯೋರೇಕತರಸ್ಮಿನ್ ವಾಚ್ಯೇ ಯದುಭಯೋರ್ವಚನಂ**
**ತದವಾಚ್ಯವಚನಂ ದೋಷಃ ।**

**ಅನುವಾದ:**

ಸರ್ವನಾಮದಿಂದ ಪರಾಮರ್ಶಿಸಲ್ಪಟ್ಟ ಅರ್ಥವನ್ನು ಮತ್ತೆ ಸ್ವಶಬ್ದದಿಂದ ಹೇಳಿದರೆ ಅದೂ ಅವಾಚ್ಯವಚನದೋಷವೇ. ಉದಾಹರಣೆ– "ಭೂಮಿಯು ಸಮುದ್ರದಿಂದ ಸೀಮಿತವಾಗಿದೆ. ಆ ಸಮುದ್ರವು ನೂರುಯೋಜನದಷ್ಟಿದೆ."

ಇಲ್ಲಿ (ಸಃ ಎಂಬ ಸರ್ವನಾಮದಿಂದ ಸಮುದ್ರವನ್ನು ಪರಾಮರ್ಶಿಸಿ ಮತ್ತೆ) ನಿಧಿರಪಾಮ್ (ಎಂದು ಸ್ವಶಬ್ದದಿಂದ ಅದನ್ನೇ ಹೇಳಿರುವುದರಿಂದ ದೋಷ).

ಯಾವ ಅರ್ಥದ ಉಪಮಾನೋಪಮೇಯಭಾವವು ಸಮಾಸೋಕ್ತಿಯಿಂದಲೇ ತಿಳಿದುಬಂದಿರುವುದೋ, ಅದಕ್ಕೆ ಮತ್ತೆ ಉಪಮಾನೋಪಮೇಯಭಾವವನ್ನು ವಾಚ್ಯವಾಗಿ ಹೇಳಬಾರದು. ಏಕೆಂದರೆ ಆಗ ಅವಾಚ್ಯವಚನದೋಷದ ಸೋಂಕು ಉಂಟಾಗುತ್ತದೆ. ಉದಾಹರಣೆ– (ಅಲಿಭಿರಂಜನ..... ಈ ಪದ್ಯದ ಅನುವಾದ ಹಿಂದೆ ಬಂದಿದೆ).

ಇಲ್ಲಿ ತಿಲಕ ಮತ್ತು ಪ್ರಮದಾ ಎಂಬ ಎರಡರಲ್ಲಿ ಒಂದನ್ನು ಮಾತ್ರ ಹೇಳಬೇಕಾಗಿತ್ತು. ಎರಡನ್ನೂ ಶಬ್ದತಃ ಹೇಳಿರುವುದರಿಂದ ಅವಾಚ್ಯವಚನವೆಂಬ ದೋಷ.

**ಯೇ ತು ಗಂಡಸ್ಯೋಪರಿ ಪಿಟಕೋದ್ಭೇದಮಿವ ತತ್ರಾಪ್ಯಾರ್ಥಮೇವ**
**ತಸ್ಯೋಪಮಾನತ್ವಮುಪರಚಯಂತಿ, ನಮಸ್ತೇಭ್ಯಃ ಕವಿವರೇಭ್ಯಃ । ತದ್ಯಥಾ–**
**ಜಂಘಾಕಾಂಡೋರುನಾಲೋ ನಖಕಿರಣಲಸತ್ಕೇಸರಾಲೀಕರಾಲಃ**
**ಪ್ರತ್ಯಗ್ರಾಲಕ್ತಾಭಾಪ್ರಸರಕಿಸಲಯೋ ಮಂಜುಮಂಜೀರಭೃಂಗಃ ।**
**ಭರ್ತುರ್ನೃತ್ತಾನುಕಾರೇ ಜಯತಿ ನಿಜತನುಸ್ವಚ್ಛಲಾವಣ್ಯವಾಪೀ–**
**ಸಂಭೂತಾಂಭೋಜಶೋಭಾಂ ವಿದಧದಭಿನವೋ ದಂಡಪಾದೋ ಭವಾನ್ಯಾಃ ॥**
**ಇತಿ । ಅತ್ರ ಹಿ ಸಮಾಸೋಕ್ತ್ಯೈವ ದಂಡಪಾದಸ್ಯ ಅಂಭೋಜತುಲ್ಯತ್ವೇ**
**ಅವಗತೇ ಯತ್ತಸ್ಯಾಂಭೋಜಶೋಭಾಂ ವಿದಧದಿತಿ ಪುನರ್ವಚನಂ**
**ತದವಾಚ್ಯವಚನದೋಷತಾಂ ನಾತಿಪತತಿ ।**

**ಯತ್ ಪುನಸ್ತತ್ರಾಪ್ಯಂಭೋಜಸ್ಯ ಆರ್ಥಮುಪಮಾನತ್ವಮುಪಾತ್ತಂ ತದಪ್ಯಯುಕ್ತಮೇವ ।**
**ತಸ್ಯೋರುನಾಲತ್ವಾದಿಧರ್ಮಸಂಬಂಧೋಪಗಮಯೋಗ್ಯತಾನುಪಪತ್ತೇಃ ।**

**ಅನುವಾದ:**

ಹುಣ್ಣಿನ ಮೇಲೆ ಬರೆ ಎಳೆದಂತೆ ಯಾರು ಅಂಥ ಸ್ಥಳದಲ್ಲಿ ಆರ್ಥವಾದ ಉಪಮಾನತ್ವವನ್ನು ರಚಿಸುವರೋ ಅಂಥ ಕವಿವರೇಣ್ಯರಿಗೆ ನಮಸ್ಕಾರ.

ಅದಕ್ಕೊಂದು ಉದಾಹರಣೆ– "ತನ್ನ ಶರೀರವೆಂಬ ಸ್ವಚ್ಛಲಾವಣ್ಯದ ಬಾವಿಯಲ್ಲಿ ಹುಟ್ಟಿದ ತಾವರೆಯ ಕಾಂತಿಯನ್ನು ಧರಿಸಿದ ಭವಾನಿಯ ಅಭಿನವ ದಂಡಪಾದವು ಜಯಿಸುತ್ತಿದೆ! ಕಾಲೇ ಅದರ ಕಾಂಡ, ತೊಡೆಯೇ ನಾಳ, ಉಗುರುಗಳ ಕಿರಣಗಳೇ ಅದರ ಕೇಸರ, ಹೊಸದಾಗಿ ಹಚ್ಚಿದ ಆಲಕ್ತಕದ ಬೆಳಕಿನ ಪ್ರಸಾರವೇ ಅದರ ಚಿಗುರು, ಉಲಿಯುವ ಕಾಲಂದಿಗೆಯೇ ಅದರ ಭ್ರಮರ. ಪತಿಯ (ಪರಮೇಶ್ವರನ) ನೃತ್ಯವನ್ನು ಭವಾನಿ ಅನುಕರಿಸಿದಾಗ ದಂಡದಂತೆ ಮೇಲೆತ್ತಿದ ಪಾದವು ಹೀಗೆ ತಾವರೆಯ ಕಾಂತಿಯಿಂದ ಶೋಭಿಸುತ್ತಿದೆ!"

ಇಲ್ಲಿ ಸಮಾಸೋಕ್ತಿಯಿಂದಲೇ ಭವಾನಿಯ ದಂಡಪಾದಕ್ಕೆ ತಾವರೆಯ ಸಾದೃಶ್ಯವು ಸಿದ್ಧವಾಗುತ್ತದೆ. ಹೀಗಿರುವಾಗ ಮತ್ತೆ "ಅಂಭೋಜದ ಕಾಂತಿಯನ್ನು ಧರಿಸಿದ" ಎಂದು ಹೇಳಿರುವುದರಿಂದ ಅದು ಅವಾಚ್ಯವಚನದೋಷಕ್ಕೆ ದೂರವಾಗುವುದಿಲ್ಲ.

ಅಲ್ಲದೆ ಅಂಭೋಜದೊಡನೆ ಆರ್ಥವಾಗಿ ಉಪಮಾನತ್ವವನ್ನು ಹೇಳಿರುವುದೂ ಅಯುಕ್ತವೇ. ಅದಕ್ಕೆ ಊರುನಾಲತ್ವ (ತೊಡೆಯೇ ನಾಳ ಇತ್ಯಾದಿ ಧರ್ಮ)ವನ್ನು ಹೊಂದುವ ಅರ್ಹತೆಯೇ ಇರದು.

> **ಕೇವಲಮೇಕೇನೈವ ಸಮಾಸಾಂತರ್ಭಾವಾದ್ ವಾಪೀಸಂಭೂತತ್ವೇನ ಅಸ್ಯ ವಿಶೇಷಣವಿಶೇಷ್ಯಭಾವಃ ಸಂಗಚ್ಛತೇ । ಕಿಂತು ಸಮಾಸ ಏವಾತ್ರೋಕ್ತನಯೇನ ಅನುಪಪನ್ನ ಇವಾವಭಾಸತೇ ಸಚೇತಸಾಂ ಪ್ರಕ್ರಮಭೇದಪ್ರಸಂಗಾದಿತ್ಯುಕ್ತಮ್ ।**
>
> **ನ ಚ ದಂಡಪಾದಸ್ಯ ತತ್ಸಂಬಂಧೋ ಘಟಿಷ್ಯತೇ ಇತಿ ಶಕ್ಯತೇ ವಕ್ತುಂ, ತಸ್ಯ ತದ್ಧರ್ಮಸಂಬಂಧಾಸಂಭವಾತ್ । ತೇನಾತ್ರಾಂಭೋಜಸ್ಯ ಶಾಬ್ದಮುಪಮಾನತ್ವಂ ವಾ, ದಂಡಪಾದಸ್ಯ ವಾಂಭೋಜತ್ವೇನ ರೂಪಣಂ ಕರ್ತವ್ಯಮ್, ಯೇನಾಸ್ಯ ಪ್ರಾಧಾನ್ಯೇ ಸತಿ ವಿಶೇಷಣಸಂಬಂಧೋಪಗಮಯೋಗ್ಯತಾ ಸ್ಯಾತ್ । ಕಿಂಚ ಭರ್ತುರ್ನೃತ್ತಸ್ಯ ಉದ್ಧತಸ್ಯ ತಾಂಡವಾತ್ಮನೋ ಯೋಽನುಕಾರಸ್ತಸ್ಯ ದಂಡಪಾದವಿಷಯಭಾವೇನೋಪಾದಾನಾದ್ ಜಂಘಾಕಾಂಡನಾಲತ್ವವಿಶಿಷ್ಟತಯಾ ಸಂಸ್ಥಾನವಿಶೇಷವಶಾಚ್ಚ ಪಾದಸ್ಯ ದಂಡಾಕಾರತಾ ಅಭಿನವತ್ವಂ ಚೇತ್ಯುಭಯಮಪಿ ಅವಗತಮಿತಿ ನ ತತ್ಪುನರುಪಾದೇಯತಾಮರ್ಹತಿ ।**

**ಅನುವಾದ:**

ಕೇವಲ ವಾಪೀಸಂಭೂತತ್ವ (ಬಾವಿಯಲ್ಲಿ ಹುಟ್ಟಿರುವಿಕೆ) ಎಂಬುದು ಸಮಾಸದೊಳಗೆ ಸೇರಿಕೊಂಡಿರುವುದರಿಂದ ಅಂಭೋಜಕ್ಕೆ ವಿಶೇಷಣವಾಗುವುದು ಸರಿಹೊಂದುತ್ತದೆ. ಆದರೆ ಮೇಲೆ ವಿವರಿಸಿದ ರೀತಿಯಲ್ಲಿ ಸಹೃದಯರಿಗೆ ಈ ಸಮಾಸವೇ ಅನುಚಿತವೆಂದು ತೋರುತ್ತದೆ, ಏಕೆಂದರೆ ಅಲ್ಲಿ ಪ್ರಕ್ರಮಭೇದವೆಂಬ ದೋಷವಿದೆ.

ದಂಡಪಾದಕ್ಕೆ ವಿಶೇಷಣಗಳ ಸಂಬಂಧವು ಹೊಂದುತ್ತದೆ ಎಂದು ಹೇಳಲೂ ಆಗದು, ದಂಡಪಾದಕ್ಕೆ ಅವುಗಳ ಧರ್ಮದ ಸಂಭವವೇ ಇಲ್ಲ. ಆದ್ದರಿಂದ ಇಲ್ಲಿ ಅಂಭೋಜಕ್ಕೆ ಶಾಬ್ದವಾದ ಉಪಮಾನತ್ವವನ್ನಾದರೂ ಹೇಳಬೇಕು, ಅಥವಾ ದಂಡಪಾದವೇ ಅಂಭೋಜ ಎಂಬ ರೂಪಕವನ್ನಾದರೂ ಮಾಡಬೇಕು. ಹಾಗೆ ಮಾಡಿದರೆ ಅಂಭೋಜಕ್ಕೆ ಪ್ರಾಧಾನ್ಯ ಬರುವುದರಿಂದ ವಿಶೇಷಣಗಳ ಸಂಬಂಧವನ್ನು ಹೊಂದುವ ಯೋಗ್ಯತೆ ಉಂಟಾದೀತು.

ಅಲ್ಲದೆ ಪತಿಯ ಉದ್ಧತ ತಾಂಡವರೂಪದ ನೃತ್ತದ ಅನುಕರಣದಲ್ಲಿ ದಂಡಪಾದಕ್ಕೆ ವಿಷಯರೂಪದಿಂದ ಉಪಾದಾನವಿದೆ. ಜಂಘಾಕಾಂಡನಾಲತ್ವದಿಂದ ಕೂಡಿರುವಿಕೆ ಮತ್ತು ಸನ್ನಿವೇಶವಿಶೇಷದಿಂದ ಪಾದದ ದಂಡಾಕಾರತ್ವವೂ ಅಭಿನವತ್ವವೂ ತಾವಾಗಿ ಅರಿವಿಗೆ ಗೋಚರವಾಗುತ್ತದೆ. ಆದ್ದರಿಂದ ಅದನ್ನೂ ಮತ್ತೆ ಶಬ್ದದಿಂದ ಹೇಳಬೇಕಾಗಿಲ್ಲ.

**ಅತೋ ವರಮತ್ರ ಪಾಠಃ ಶ್ರೇಯಾನ್–**
**ಸ್ವಚ್ಛಲಾವಣ್ಯವಾಪೀಸಂಭೂತೋ ಭಕ್ತಿಭಾಜಾಂ**
**ಭವದವದಹನಃ ಪಾದಪದ್ಮೋ ಭವಾನ್ಯಾಃ ॥ ಇತಿ ।**
**ಏವಂ ಚ ಧಾರಣಮಾತ್ರವಿವಕ್ಷಾಯಾಂ ವಿಪೂರ್ವಸ್ಯ**
**ದಧಾತೇಃ ಪ್ರಯೋಗಃ ಪರಿಹೃತೋ ಭವತಿ । ಸ ಹಿ**
**ವಿಪೂರ್ವಃ ಕರೋತ್ಯರ್ಥೇ ವರ್ತತೇ, ನ ಧಾರಣೇ ಇತಿ ।**
**ಯತ್ರಾರ್ಥಸ್ಯೋಪಮಾನತ್ವಂ ಸಮಾಸೋಕ್ತ್ಯೈವ ಗಮ್ಯತೇ ।**
**ನ ತತ್ ತತ್ರ ಪುನರ್ವಾಚ್ಯಮುಕ್ತೌ ವಾ ಶಾಬ್ದಮಸ್ತು ತತ್ ॥**
**ಅನ್ಯಥಾ ತ್ವನ್ಯಧರ್ಮೈಃ ಕಃ ಸಂಬಂಧೋಽನ್ಯಸ್ಯ ವಸ್ತುನಃ ।**
**ತೇನ ವಾಚ್ಯತ್ವಮಾರ್ಥತ್ವಂ ಚೇತ್ಯಸ್ಯ ದ್ವಯಮಪ್ಯಸತ್ ॥**
**ಇತಿ ಸಂಗ್ರಹಶ್ಲೋಕೌ ।**

**ಅನುವಾದ:**

ಆದ್ದರಿಂದ (ಈ ಪದ್ಯದ ಉತ್ತರಾರ್ಧದಲ್ಲಿ) ಈ ಪಾಠವು ಗ್ರಾಹ್ಯ– "ಸ್ವಚ್ಛ...... ಭವಾನ್ಯಾಃ"

"ಸ್ವಚ್ಛವಾದ ಲಾವಣ್ಯದ ಬಾವಿಯಲ್ಲಿ ಹುಟ್ಟಿದ, ಮತ್ತು ಭಕ್ತರ ಸಂಸಾರಕ್ಕೆ ದಾವಾನಲವಾಗುವ ಭವಾನಿಯ ಪಾದಪದ್ಮವು ಜಯಿಸುತ್ತದೆ."

ಹೀಗೆ ಮಾಡಿದಾಗ, ಧಾರಣ ಎಂಬ ಅರ್ಥದಲ್ಲಿ (ಮೂಲ ಪದ್ಯದಲ್ಲಿ) ಮಾಡಿರುವ 'ವಿ' ಎಂಬ ಉಪಸರ್ಗಪೂರ್ವಕವಾದ 'ಧಾ' ಧಾತುವಿನ ಪ್ರಯೋಗದ ದೋಷವನ್ನೂ ಪರಿಹರಿಸಿದಂತಾಗುತ್ತದೆ. ವಿಪೂರ್ವಕವಾದ 'ಧಾ' ಧಾತುವು ಮಾಡುವುದು ಎಂಬ ಅರ್ಥದಲ್ಲಿದೆ, ಧರಿಸುವುದು ಎಂಬರ್ಥದಲ್ಲಿಲ್ಲ.

ಎಲ್ಲಿ ಒಂದು ವಸ್ತುವಿನ ಉಪಮಾನವು ಸಮಾಸೋಕ್ತಿಯಿಂದಲೇ ತಿಳಿಯುವುದೋ ಅಲ್ಲಿ ಅದನ್ನು ಮತ್ತೆ ಹೇಳಬಾರದು. ಒಂದು ವೇಳೆ ಹೇಳಿದರೂ ಅದು ಶಾಬ್ದವಾಗಿರಬೇಕು.

ಹಾಗಲ್ಲದೆ ಆರ್ಥವಾಗಿದ್ದರೆ, ಅನ್ಯವಸ್ತುವಿಗೆ (ವಿಶೇಷಣಗಳೊಡನೆ) ಯಾವ ಸಂಬಂಧವು ಸಾಧ್ಯ? ಆದ್ದರಿಂದ ಅದಕ್ಕೆ ವಾಚ್ಯತ್ವ, ಆರ್ಥತ್ವ ಎಂಬ ಎರಡೂ ಸರಿಯಲ್ಲ.

ಇವೆರಡು ಸಂಗ್ರಹ ಶ್ಲೋಕಗಳು.

**ಪತ್ತಾ ಣಿಅಂಬಫಂಸಂ ಹ್ಣಾನುತ್ತಿಣ್ಣಾಏ ಸಾಮಲಂಗೀಏ ।**
**ಚಿಹುರಾ ರುಅಂತಿ ಜಲಬಿಂದುಏಹಿ ಬಂಧಸ್ಸವ ಭಏಣ ॥**
**[ಪ್ರಾಪ್ತಾ ನಿತಂಬಸ್ಪರ್ಶಂ ಸ್ನಾನೋತ್ತೀರ್ಣಾಯಾಃ ಶ್ಯಾಮಲಾಂಗ್ಯಾಃ ।**
**ಚಿಕುರಾ ರುದಂತಿ ಜಲಬಿಂದುಭಿರ್ಬಂಧಸ್ಯೇವ ಭಯೇನ ॥]**

**ಇತ್ಯತ್ರ ರೋದನಂ ಬಂಧನಭಯಂ ಚೇತಿ ಯದ್ ದ್ವಯಮ್ ಉತ್ಪ್ರೇಕ್ಷಿತಂ ವರ್ತತೇ ತತ್ರ ಪ್ರಾಧಾನ್ಯಾದ್ ರೊದನಾಭಿಧಾಯಿನ ಏವ ಪದಾದನಂತರಮುತ್ಪ್ರೇಕ್ಷಾವಾದಿನಿ ಪದೇ ವಾಚ್ಯೇ ಯುತ್ ತಸ್ಯಾನ್ಯತೋವಚನಂ ಸೋಽವಾಚ್ಯವಚನಂ ದೋಷಃ, ತಸ್ಯ ತಾದರ್ಥ್ಯೇನಾಪ್ರಾಧಾನ್ಯಾತ್। ಪ್ರಧಾನೇ ಚೋತ್ಪ್ರೇಕ್ಷಿತೇ ತದಿತರದ್ ಅರ್ಥಾದುತ್ಪ್ರೇಕ್ಷಿತಮೇವ ಭವತಿ ।**

**ಅನುವಾದ:**

"ಶ್ಯಾಮಲಾಂಗಿಯು ಸ್ನಾನ ಮಾಡಿ ಎದ್ದಾಗ ಅವಳ ನಿತಂಬಗಳ ಸ್ಪರ್ಶವನ್ನು ಪಡೆದ ಕುರುಳುಗಳು ಬಂಧನದ ಹೆದರಿಕೆಯಿಂದ ನೀರಿನ ಹನಿಗಳಿಂದ ಅಳುತ್ತಿರುವಂತಿವೆ."

ಇಲ್ಲಿ ರೋದನ, ಬಂಧನಭಯ ಎಂಬ ಎರಡು ಉತ್ಪ್ರೇಕ್ಷಿತವಾಗಿವೆ. ಅವುಗಳಲ್ಲಿ ಪ್ರಧಾನವಾದ ರೋದನವನ್ನು ಹೇಳುವ ಪದದ ಮುಂದೆ ಉತ್ಪ್ರೇಕ್ಷಾವಾಚಕ (ಇವ ಶಬ್ದ)ವನ್ನು ಹೇಳಬೇಕು. ಹಾಗಿದ್ದರೂ ಅದನ್ನು ಬೇರೆ ಸ್ಥಳದಲ್ಲಿ ಹೇಳಿರುವುದರಿಂದ ಅವಾಚ್ಯವಚನವೆಂಬ ದೋಷ. ಬೇರೆ ಪದವು ಪ್ರಧಾನಾರ್ಥವಾಗಿ ಬಂದಿರುವುದರಿಂದ ಅಪ್ರಧಾನ. ಪ್ರಧಾನವನ್ನು ಉತ್ಪ್ರೇಕ್ಷಿಸಿದಾಗ ಉಳಿದುದೂ ಅರ್ಥಾತ್ ಉತ್ಪ್ರೇಕ್ಷಿತವೇ ಆಗುತ್ತದೆ.

**ಯಥಾ–**
**ಜ್ಯೋತೀರಸಾಶ್ಮಭವನಾಜಿರದುಗ್ಧಸಿಂಧು–**
**ರಭ್ಯುನ್ಮಿಷತ್ಪ್ರಚುರತುಂಗಮರೀಚಿವೀಚಿಃ ।**
**ವಾತಾಯನಸ್ಥಿತವಧೂವದನೇಂದುಬಿಂಬ–**
**ಸಂದರ್ಶನಾದನಿಶಮುಲ್ಲಸತೀವ ಯಸ್ಯಾಮ್ ॥**

ಇತ್ಯತ್ರೇಂದುಬಿಂಬಸಂದರ್ಶನಮ್ ।
ತೇನ "ಜಲಬಿಂದುಏಹಿ ರುಅಇ ವ ಚಿಹುರಚಯೋ
ಬಂಧಣಭಏಣ" ಇತಿ ಅತ್ರ ಯುಕ್ತಃ ಪಾಠಃ ।
ಏಕತ್ರೋತ್ಪ್ರೇಕ್ಷಿತತ್ವೇನ ಯತ್ರಾರ್ಥಾ ಬಹವೋ ಮತಾಃ ।
ತತ್ರೇವಾದಿಃ ಪ್ರಯೋಕ್ತವ್ಯಃ ಪ್ರಧಾನಾದೇವ ನಾನ್ಯತಃ ॥
ಇತಿ ಸಂಗ್ರಹಶ್ಲೋಕಃ ।

**ಅನುವಾದ:**

ಉದಾಹರಣೆ– "ಚಂದ್ರಕಾಂತಶಿಲೆಗಳಿಂದ ನಿರ್ಮಿತವಾದ ಭವನಗಳ ಅಂಗಳದಲ್ಲಿ ಹಾಲಿನ ಹೊಳೆ ಹರಿಯುತ್ತಿದೆ. ಅದರಲ್ಲಿ ಎತ್ತರವಾದ ಕಿರಣ ತರಂಗಗಳು ಉಕ್ಕುತ್ತಿವೆ. ಕಿಟಕಿಗಳಲ್ಲಿ ನಿಂತ ಸುಂದರಿಯರ ಮುಖಗಳೆಂಬ ಚಂದ್ರಬಿಂಬಗಳ ದರ್ಶನದಿಂದ ಆ ಹಾಲಿನ ಹೊಳೆ ಆ ನಗರಿಯಲ್ಲಿ ಯಾವಾಗಲೂ ಉಲ್ಲಾಸದಿಂದ ತುಂಬಿದೆಯೋ ಎಂಬಂತಿದೆ."

ಈ ಪದ್ಯದಲ್ಲಿ ಇಂದುಬಿಂಬಸಂದರ್ಶನದಿಂದ ಎಂಬುದು (ಉಲ್ಲಸತೀವ ಎಂಬ ಉತ್ಪ್ರೇಕ್ಷೆಯಿಂದಲೇ ಅರ್ಥಾತ್ ಉತ್ಪ್ರೇಕ್ಷಿತವೆಂದು ತಿಳಿಯಲಾಗುತ್ತದೆ). ಆದ್ದರಿಂದ (ಪತ್ತಾ...... ಎಂಬ ಗಾಥೆಯಲ್ಲಿ) ಜಲಬಿಂದು ಏಹಿ ರುಅಇವ..... ಎಂಬುದು ಉಚಿತವಾದ ಪಾಠ.

ಒಂದೇ ವಿಷಯದಲ್ಲಿ ಹಲವು ಅರ್ಥಗಳನ್ನು ಉತ್ಪ್ರೇಕ್ಷಿಸುವ ಸಂದರ್ಭದಲ್ಲಿ ಪ್ರಧಾನವಾಚಕದ ಮುಂದೆಯೇ ಇವ ಇತ್ಯಾದಿ (ಉತ್ಪ್ರೇಕ್ಷಾವಾಚಕ)ಗಳನ್ನು ಪ್ರಯೋಗಿಸಬೇಕು. ಬೇರೆ ಪದದ ಮುಂದೆ ಅಲ್ಲ.

ಇದು ಸಂಗ್ರಹ ಶ್ಲೋಕ.

ತವ ವದನಪದಾರ್ಥಶ್ಚಂದ್ರಶಬ್ದಾರ್ಥತುಲ್ಯೋ ಹೃದಯಕುಮುದವಸ್ತೂಜ್ಜೃಂಭಯತ್ಯೇವ ಯನ್ಮೇ। ಇತ್ಯತ್ರ ಸಮಾಸಾಂತರ್ಗತೇನ ವದನಶಬ್ದೇನೈಕೇನೈವ ವದನೇ ವಾಚ್ಯೇ ಯದ್ ಬಹುಭಿಃ ಶಬ್ದೈಸ್ತಸ್ಯ ವಚನಂ ಸೋಽವಾಚ್ಯವಚನಂ ತಸ್ಯ ದೋಷಃ । ತಥಾಹಿ । ವದನಂ ಚ ತತ್ ಪದಾರ್ಥಶ್ಚಾಸಾವಿತಿ ಕರ್ಮಧಾರಯೋ ವಾ ಕಲ್ಪ್ಯೇತ, ವದನಪದಸ್ಯಾರ್ಥ ಇತಿ ತತ್ಪುರುಷೋ ವಾ? ತತ್ರಾದ್ಯಸ್ತಾವದರ್ಥಯೋರನ್ಯೋನ್ಯ– ವ್ಯವಚ್ಛೇದ್ಯವ್ಯವಚ್ಛೇದಕಭಾವಾಭಾವಾದನುಪಪನ್ನಃ। ದ್ವಿತೀಯೋಽಪಿ ಪ್ರಯೋಜನಾಭಾವಾತ್ । ನ ಹಿ ಸಮಾಸೇ ಸತ್ಯಸತಿ ವಾ ಅರ್ಥಸ್ಯ ಕಶ್ಚಿದ್ವಿಶೇಷೋಽವಗಮ್ಯತೇ, ಅನ್ಯತ್ರ ಪ್ರತಿಪತ್ತಿಗೌರವಾದಿತಿ ಅವಾಚ್ಯವಚನಪ್ರಕಾರ ಏವಾಯಮಿತಿ।

**ಅನುವಾದ:**

"ನಿನ್ನ ಮುಖವೆಂಬ ಪದಾರ್ಥವು ಚಂದ್ರಶಬ್ದದ ಅರ್ಥಕ್ಕೆ ಸಮಾನವಾಗಿದೆ, ಏಕೆಂದರೆ ಅದು ನನ್ನ ಹೃದಯಕುಮುದ ಎಂಬ ವಸ್ತುವನ್ನು ಅರಳಿಸುತ್ತಿದೆ."

ಈ ಉದಾಹರಣೆಯಲ್ಲಿ ಸಮಾಸಾಂತರ್ಗತವಾದ ವದನ ಎಂಬ ಒಂದು ಶಬ್ದದಿಂದ ಹೇಳಬೇಕಾದುದನ್ನು ಅನೇಕ ಶಬ್ದಗಳಿಂದ ಹೇಳಿರುವ ಕಾರಣದಿಂದ ಅವಾಚ್ಯವಚನ ಎಂಬ ದೋಷ. ಹೇಗೆಂದರೆ: ವದನಂ ಚ ತತ್ ಪದಾರ್ಥಶ್ಚಾಸೌ ಎಂಬ ವಿಗ್ರಹದಿಂದ ಇದು ಕರ್ಮಧಾರಯ ಸಮಾಸವೋ ಅಥವಾ ವದನಪದಸ್ಯ ಅರ್ಥಃ ಎಂದು ತತ್ಪುರುಷ ಸಮಾಸವೋ? ಅರ್ಥಗಳಿಗೆ ವ್ಯವಚ್ಛೇದ್ಯ ವ್ಯವಚ್ಛೇದಕಭಾವ ಇಲ್ಲದಿರುವುದರಿಂದ ಮೊದಲನೆಯದು ಅನುಚಿತ. ಯಾವ ಪ್ರಯೋಜನವೂ ಇಲ್ಲದ ಕಾರಣ ಎರಡನೆಯ ಸಮಾಸವೂ ಸರಿಯಲ್ಲ. ಏಕೆಂದರೆ ಅಂಥ ಸಮಾಸವನ್ನು ಮಾಡಿದರೂ ಮಾಡದಿದ್ದರೂ ಅರ್ಥದಲ್ಲಿ ಯಾವ ವಿಶೇಷವೂ ಕಾಣಿಸದು. ಪ್ರತಿಪತ್ತಿಯಲ್ಲಿ ಭಾರ ಹೆಚ್ಚು ಎಂಬುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆದ್ದರಿಂದ ಇದೂ ಅವಾಚ್ಯವಚನ ಪ್ರಕಾರವೇ.

**ಯಥಾ ಚ "ಕುಶಂ ದ್ವಿಷಾಮಂಕುಶವಸ್ತು ವಿದ್ವಾನ್" ಇತಿ ।**
**ಯತ್ಸ್ವರೂಪಾನುವಾದೈಕಫಲಂ ಫಲ್ಗು ವಿಶೇಷಣಮ್ ।**
**ಅಪ್ರತ್ಯಕ್ಷಾಯಮಾಣಾರ್ಥಂ ಸ್ಮೃತಮಪ್ರತಿಭೋದ್ಭವಮ್ ॥**
**ತದವಾಚ್ಯಮಿತಿ ಜ್ಞೇಯಂ ವಚನಂ ತಸ್ಯ ದೂಷಣಮ್ ।**
**ತದ್ವೃತ್ತಪೂರಣಾಯೈವ ನ ಕವಿತ್ವಾಯ ಕಲ್ಪತೇ ॥ ಯಥಾ–**

**ಕಕುಭಾಂ ಮುಖಾನಿ ಸಹಸೋಜ್ಜ್ವಲಯನ್**
**ದದದಾಕುಲತ್ವಮಧಿಕಂ ರತಯೇ ।**
**ಅದಿದೀಪದಿಂದುರಪರೋ ದಹನಃ**
**ಕುಸುಮೇಷುಮತ್ರಿನಯನಪ್ರಭವಃ ॥**

**ಅತ್ರ ಹಿ ಯದತ್ರಿನಯನಪ್ರಭವತ್ವಮಿಂದೋರ್ವಿಶೇಷಣಂ ತತ್ ಸ್ವರೂಪಮಾತ್ರಾನುವಾದಫಲಮ್ ಇತ್ಯವಾಚ್ಯಮೇವ, ತಸ್ಯ ತದವ್ಯಭಿಚಾರಾತ್ ।**

**ಅನುವಾದ:**

ಇನ್ನೊಂದು ಉದಾಹರಣೆ– "ದರ್ಭೆಯನ್ನು ಶತ್ರುಗಳಿಗೆ ಅಂಕುಶವಸ್ತು ಎಂದು ತಿಳಿದುಕೊಂಡವನಾಗಿ." ಯಾವ ವಿಶೇಷಣವು ಸ್ವರೂಪಾನುವಾದವನ್ನು ಮಾತ್ರ ಮಾಡುವುದೂ, ಅರ್ಥವನ್ನು ಮುಚ್ಚಿಡುವುದೂ ಮತ್ತು ಪ್ರತಿಭೆಯಿಂದ ಹುಟ್ಟದುದೂ ಆಗಿರುವುದೋ ಅದು ಫಲ್ಗು (ವ್ಯರ್ಥ) ಎಂದು ಹೇಳಲ್ಪಟ್ಟಿದೆ. ಅದು ಅವಾಚ್ಯ (ಹೇಳಲು ಅನರ್ಹ). ಅದನ್ನು ಕವಿಯು ಬಳಸಿದರೆ ದೋಷ. ಅಂಥ ವಿಶೇಷಣವು ವೃತ್ತಪೂರಣವೇ ಹೊರತು ಕವಿತ್ವದ್ಯೋತಕವಲ್ಲ. ಉದಾಹರಣೆ– ದಿಙ್ಮುಖಗಳನ್ನು ಥಟ್ಟನೆ ಬೆಳಗಿಸುತ್ತಾ, ರತಿಗೆ ವ್ಯಾಕುಲತ್ವವನ್ನು ತರುತ್ತಾ ಅತ್ರಿಯ ಕಣ್ಣಿನಿಂದ ಹುಟ್ಟಿದ ಚಂದ್ರನೆಂಬ ಎರಡನೆಯ ಅಗ್ನಿಯು ಮನ್ಮಥನನ್ನು ಉರಿಸಿದನು.

ಇಲ್ಲಿ ಚಂದ್ರನಿಗೆ ಅತ್ರಿಯ ಕಣ್ಣಿನಿಂದ ಹುಟ್ಟಿದವನು ಎಂಬ ವಿಶೇಷಣವು ಸ್ವರೂಪಮಾತ್ರಾನುವಾದಫಲ. ಅದನ್ನು ಹೇಳಬೇಕಾಗಿಲ್ಲ, ಏಕೆಂದರೆ ಅದು ಅವ್ಯಭಿಚರಿತ. (ಚಂದ್ರನು ಅತ್ರಿನೇತ್ರೋದ್ಭವನೆಂದು ಪ್ರಸಿದ್ಧವೇ ಆಗಿರುವುದರಿಂದ ಅದನ್ನು ಹೇಳಿದರೂ ಯಾವ ವಿಶೇಷ ಪ್ರಯೋಜನವಿಲ್ಲ.)

**ನ ಚಾವ್ಯಭಿಚಾರಿಣೋಽಪಿ ತತಸ್ತಸ್ಯೋತ್ಕರ್ಷಃ ಕಶ್ಚಿದ್ ವಿವಕ್ಷಿತಃ ಕವೇಃ । ಯಥಾ–**
**ಅತ್ರೇರ್ಲೋಚನಶುಕ್ತಿಮೌಕ್ತಿಕಮಣೇರ್ದೇವಾತ್ಸುಧಾದೀಧಿತೇ–**
**ರ್ಗೋತ್ರಂ ಹೇಹಯಭೂಭುಜಾಂ ಯದುದಗಾತ್ತಸ್ಮಿನ್ನಭೂದರ್ಜುನಃ ।**

**ಇತ್ಯತ್ರ ಸುಧಾದೀಧಿತೇರಿತಿ ತಸ್ಯ ಅವಾಚ್ಯಸ್ಯ ವಚನಂ ದೋಷಃ । ಯಚ್ಚಾತ್ರ ದಹನಸ್ಯಾಪರ ಇತಿ ವ್ಯತಿರೇಕಪ್ರತೀತಿಫಲದಂ ವಿಶೇಷಣಂ ತದವಾಚ್ಯಮೇವ, ತಸ್ಯಾತ್ರಿನಯನಪ್ರಭವ ಇತಿ ನಞ್ಸಮಾಸೇನೈವ ಪ್ರತಿಪಾದಿತತ್ವಾತ್ । ತಸ್ಮಾದುದಿತ ಇತಿ ತತ್ರಾನುಗುಣಃ ಪಾಠಃ ।**

**ಯಥಾ ಚ "ನಾಡೀಜಂಘೋ ವಿಜಘ್ನೇ ಕೃತತದುಪಕೃತಿರ್ಯತ್ಕೃತೇ ಗೌತಮೇನ" ಇತಿ । ಅತ್ರ ಹಿ ತಚ್ಛಬ್ದಪರಾಮರ್ಶೋ ಗೌತಮಸ್ಯಾವಾಚ್ಯ ಏವ, ತಮಂತರೇಣಾಪಿ ಉಪಕಾರಸ್ಯ ತದ್ವಿಷಯಭಾವಾವಗತೇಃ । ತೇನ 'ಪರಮುಪಕೃತವಾನ್' ಇತಿ ವರಮತ್ರ ಯುಕ್ತಃ ಪಾಠಃ।**

**ಅನುವಾದ:**

ಅವ್ಯಭಿಚರಿತವಾದ ಆ ವಿಶೇಷಣದಿಂದ ಯಾವುದನ್ನಾದರೂ ಉತ್ಕರ್ಷವನ್ನು ತರಬೇಕೆಂಬ ಉದ್ದೇಶವೂ ಕವಿಗೆ ಇಲ್ಲ. ಇನ್ನೊಂದು ಉದಾಹರಣೆ–

"ಅತ್ರಿಯ ಕಣ್ಣೆಂಬ ಮುತ್ತಿನಚಿಪ್ಪಿನ ಮೌಕ್ತಿಕಮಣಿ, ಅಮೃತಕಿರಣ(ಚಂದ್ರ)ನಿಂದ ಹೇಹಯರಾಜರ ವಂಶವು ಹುಟ್ಟಿತು. ಅದರಲ್ಲಿ ಅರ್ಜುನನು ಹುಟ್ಟಿದನು."

ಇಲ್ಲಿ ಸುಧಾದೀಧಿತೇಃ ಎಂಬುದನ್ನು ಹೇಳಬೇಕಾಗಿರಲಿಲ್ಲ. ಅದನ್ನು ಹೇಳಿರುವುದು ದೋಷ. (ಕಕುಭಾಂ...... ಎಂಬ ಪದ್ಯದಲ್ಲಿ) ದಹನನಿಗೆ (ಅಗ್ನಿಗೆ) ಅಪರಃ ಎಂಬ ವ್ಯತಿರೇಕಪ್ರತೀತಿಯನ್ನುಂಟುಮಾಡುವ ವಿಶೇಷಣವೂ ಅವಾಚ್ಯವೇ. ಅ–ತ್ರಿನಯನಪ್ರಭವ (=ಈಶ್ವರನಿಂದ ಹುಟ್ಟದ) ಎಂಬ ನಞ್ ಸಮಾಸದಿಂದಲೇ ಅದರ ಅರ್ಥವು ಪ್ರತಿಪಾದಿತವಾಗಿದೆ. ಆದ್ದರಿಂದ ಅಲ್ಲಿ "ಉದಿತೋ ದಹನಃ" ಎಂಬ ಪಾಠವು ಉಚಿತ. ಇನ್ನೊಂದು ಉದಾಹರಣೆ–

"ಅವನಿಗೆ ಉಪಕಾರ ಮಾಡಿದ ನಾಡೀಜಂಘನೇ ಗೌತಮನಿಂದ ಯಾರಿಗಾಗಿ ಕೊಲ್ಲಲ್ಪಟ್ಟನೋ." ಇಲ್ಲಿ ಗೌತಮನನ್ನು ತಚ್ಛಬ್ದದಿಂದ ಪರಾಮರ್ಶಿಸಿರುವುದು ಅನಾವಶ್ಯಕ. ಆ ಶಬ್ದವಿಲ್ಲದಿದ್ದರೂ ಉಪಕಾರವನ್ನು ಅವನಿಗೆ ಮಾಡಲಾಯಿತೆಂಬುದು ತಿಳಿಯುತ್ತದೆ. ಆದ್ದರಿಂದ ಪರಮುಪಕೃತವಾನ್ ಎಂಬುದಿಲ್ಲಿ ಯುಕ್ತವಾದ ಪಾಠ.

**ಯಥಾ ಚ "ಕಟಸ್ಥಲಪ್ರೋಷಿತದಾನವಾರಿಭಿಃ" ಇತಿ ।**
**ಅತ್ರ ಹಿ ದಾನವಾರಿಪ್ರವಾಸಸ್ಯ ಯದೇತತ್ ಕಟಸ್ಥಲಮ್ ಅವಧಿಭಾವೇನ**

**ವಿಶೇಷಣಮುಪಾತ್ತಂ, ತನ್ನ ವಾಚ್ಯಮ್ ಅವ್ಯಭಿಚಾರಾತ್ । ಏವಮ್–**
**ಉತ್ಫುಲ್ಲಕಮಲಕೇಸರಪರಾಗಗೌರದ್ಯುತೇ ಮಮ ಹಿ ಗೌರಿ ।**
**ಅಭಿವಾಂಛಿತಂ ಪ್ರಸಿಧ್ಯತು ಭಗವತಿ ಯುಷ್ಮತ್‌ಪ್ರಸಾದೇನ ॥**
**ಇತ್ಯತ್ರಾಪಿ ದ್ರಷ್ಟವ್ಯಮ್ । ಉತ್ಫುಲ್ಲಕೇಸರಗೌರಶಬ್ದಾನಾಂ ಪೌನರುಕ್ತ್ಯಾತ್ ।**

(ಸ್ವಭಾವೋಕ್ತಿ ಅಲಂಕಾರವೆ?)

**ಕಥಂ ತರ್ಹಿ ಸ್ವಭಾವೋಕ್ತೇರಲಂಕಾರತ್ವಮಿಷ್ಯತೇ ।**
**ನ ಹಿ ಸ್ವಭಾವಮಾತ್ರೋಕ್ತೌ ವಿಶೇಷಃ ಕಶ್ಚನಾನಯೋಃ ॥**

**ಅನುವಾದ:**

ಇನ್ನೊಂದು ಉದಾಹರಣೆ– "ಯಾರ ಆನೆಗಳ ಕುಂಭಸ್ಥಳದಿಂದ ಮದಜಲವು ದೂರವಾಗಿದೆಯೋ."

ಇಲ್ಲಿ ಮದಜಲವು ಪ್ರವಾಸ ಹೋಗುವುದಕ್ಕೆ (ಇಲ್ಲವಾಗುವುದಕ್ಕೆ) ಅವಧಿಯೆಂದು ಕಟಸ್ಥಲವು ವಿಶೇಷವಾಗಿ ಹೇಳಲ್ಪಟ್ಟಿದೆ. ಅದನ್ನು ಹೇಳಬೇಕಾಗಿಲ್ಲ, ಏಕೆಂದರೆ ಅದು ಅವ್ಯಭಿಚರಿತ. (ಕಟಸ್ಥಲದಿಂದಲೇ ಮದಜಲವು ಒಸರುವುದರಿಂದ ಹೇಳದಿದ್ದರೂ ಅದು ಗೊತ್ತಾಗುತ್ತದೆ.) ಹೀಗೆ–

"ಅರಳಿದ ತಾವರೆಯ ಕೇಸರಗಳಲ್ಲಿರುವ ಪರಾಗದಂತೆ ಬಿಳುಪಾದ ಕಾಂತಿಯನ್ನುಳ್ಳ ಗೌರಿಯೆ, ನಿನ್ನ ಪ್ರಸಾದದಿಂದ ನನ್ನ ಆಶೆಯು ಈಡೇರಲಿ."

ಇಲ್ಲಿ ಉತ್ಫುಲ್ಲ, ಕೇಸರ, ಗೌರ ಎಂಬ ಶಬ್ದಗಳು ಪುನರುಕ್ತವಾದುದರಿಂದ ಇಲ್ಲೂ ಅವಾಚ್ಯವಚನವೆಂಬ ದೋಷವಿದೆಯೆಂದು ತಿಳಿದುಕೊಳ್ಳಬೇಕು.

ಹಾಗಾದರೆ ಸ್ವಭಾವೋಕ್ತಿಯು ಅಲಂಕಾರವೆಂದು ಹೇಗೆ ಹೇಳುವುದು? ಏಕೆಂದರೆ ಸ್ವಭಾವವನ್ನು ಮಾತ್ರ ಹೇಳಿದಾಗ ಯಾವ ವಿಶೇಷವೂ ಇರುವುದಿಲ್ಲ.

**ಉಚ್ಯತೇ ವಸ್ತುನಸ್ತಾವದ್ ದ್ವೈರೂಪ್ಯಮಿಹ ವಿದ್ಯತೇ ।**
**ತತ್ರೈಕಮತ್ರ ಸಾಮಾನ್ಯಂ ಯದ್ವಿಕಲ್ಪೈಕಗೋಚರಃ ॥**
**ಸ ಏವ ಸರ್ವಶಬ್ದಾನಾಂ ವಿಷಯಃ ಪರಿಕೀರ್ತಿತಃ ।**
**ಅತ ಏವಾಭಿಧೇಯಂ ತೇ ಸಾಮಾನ್ಯಂ ಬೋಧಯಂತ್ಯಲಮ್ ॥**
**ವಿಶಿಷ್ಟಮಸ್ಯ ಯದ್ರೂಪಂ ತತ್ ಪ್ರತ್ಯಕ್ಷಸ್ಯ ಗೋಚರಃ ।**
**ಸ ಏವ ಸತ್ಕವಿಗಿರಾಂ ಗೋಚರಃ ಪ್ರತಿಭಾಭುವಾಮ್ ॥**

(ಪ್ರತಿಭಾಸ್ವರೂಪ)

**ಯತಃ – ರಸಾನುಗುಣಶಬ್ದಾರ್ಥಚಿಂತಾಸ್ತಿಮಿತಚೇತಸಃ ।**
**ಕ್ಷಣಂ ಸ್ವರೂಪಸ್ಪರ್ಶೋತ್ಥಾ ಪ್ರಜ್ಞೈವ ಪ್ರತಿಭಾ ಕವೇಃ ॥**
**ಸಾ ಹಿ ಚಕ್ಷುರ್ಭಗವತಸ್ತೃತೀಯಮಿತಿ ಗೀಯತೇ ।**
**ಯೇನ ಸಾಕ್ಷಾತ್ಕರೋತ್ಯೇಷ ಭಾವಾಂಸ್ತ್ರೈಲೋಕ್ಯವರ್ತಿನಃ ॥**

**ಇತ್ಯಾದಿ ಪ್ರತಿಭಾತತ್ತ್ವಮಸ್ಮಾಭಿರುಪಪಾದಿತಮ್ ।**
**ಶಾಸ್ತ್ರೇ ತತ್ತ್ವೋಕ್ತಿಕೋಶಾಖ್ಯ ಇತಿ ನೇಹ ಪ್ರಪಂಚಿತಮ್ ॥**

**ಅನುವಾದ:**

ಹೇಳುತ್ತೇವೆ. ವಸ್ತುವಿಗೆ ದ್ವೈರೂಪ್ಯವಿದೆ. ಆ ಎರಡು ರೂಪಗಳಲ್ಲಿ ಒಂದು ಸಾಮಾನ್ಯ. ಅದು ಸಂದೇಹಾದಿ ವಿಕಲ್ಪಗಳಿಗೆ ಗೋಚರ. ಎಲ್ಲ ಶಬ್ದಗಳಿಗೂ ಅದೇ ವಿಷಯವೆಂದೂ ಹೇಳಿದ್ದಾರೆ. ಆದ್ದರಿಂದಲೇ ಶಬ್ದಗಳು ಸಾಮಾನ್ಯರೂಪದ ಅರ್ಥವನ್ನೇ ತಿಳಿಸುತ್ತವೆ. ವಸ್ತುವಿನ ವಿಶಿಷ್ಟರೂಪವು ಪ್ರತ್ಯಕ್ಷಕ್ಕೆ ಗೋಚರ. ಆ ವಿಶಿಷ್ಟರೂಪವೇ ಪ್ರತಿಭಾಶಾಲಿಗಳಾದ ಸುಕವಿಗಳ ಮಾತುಗಳಿಗೆ ಗೋಚರವಾಗುತ್ತದೆ. ಏಕೆಂದರೆ– ರಸಗಳಿಗೆ ಅನುಗುಣವಾದ ಶಬ್ದಗಳ ಮತ್ತು ಅರ್ಥಗಳ ಅನ್ವೇಷಣೆಗಾಗಿ ಚಿಂತಿಸುವ, ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿದ ಕವಿಗೆ ಕ್ಷಣಕಾಲ ಪ್ರಜ್ಞೆಯೇ ಆತ್ಮಸ್ವರೂಪದ ಸ್ಪರ್ಶವಾದಾಗ ಉಂಟಾಗುವ ಪ್ರತಿಭೆ. ಅದನ್ನು ಭಗವಂತನ ಮೂರನೆಯ ಕಣ್ಣು ಎಂದು ಕರೆಯುತ್ತಾರೆ. ಅದರಿಂದ ಕವಿಯು ಮೂರು ಲೋಕಗಳಲ್ಲಿರುವ ಎಲ್ಲ ಭಾವಗಳನ್ನೂ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಇತ್ಯಾದಿ ಪ್ರತಿಭಾತತ್ತ್ವವನ್ನು ತತ್ತ್ವೋಕ್ತಿಕೋಶ ಎಂಬ ಶಾಸ್ತ್ರಗ್ರಂಥದಲ್ಲಿ ನಾವು ಪ್ರತಿಪಾದಿಸಿರುವುದರಿಂದ ಇಲ್ಲಿ ವಿಸ್ತರಿಸಿಲ್ಲ.

**ಅರ್ಥಸ್ವಭಾವಸ್ಯೋಕ್ತಿರ್ಯಾ ಸಾಲಂಕಾರತಯಾ ಮತಾ ।**
**ಯತಃ ಸಾಕ್ಷಾದಿವಾಭಾಂತಿ ತತ್ರಾರ್ಥಾಃ ಪ್ರತಿಭಾರ್ಪಿತಾಃ ॥**

**ಯಥಾ– ಋಜುತಾಂ ನಯತಃ ಸ್ಮರಾಮಿ ತೇ**
**ಶರಮುತ್ಸಂಗನಿಷಣ್ಣಧನ್ವನಃ ।**
**ಮಧುನಾ ಸಹ ಸಸ್ಮಿತಾಃ ಕಥಾಃ**
**ನಯನೋಪಾಂತವಿಲೋಕಿತಂ ಚ ತತ್ ॥ ಇತಿ । ಯಥಾ ಚ –**

**ಕುರ್ವನ್ನಾಭುಗ್ನಪೃಷ್ಠೋ ಮುಖನಿಕಟಕಟಿಃ ಕಂಧರಾಮಾತಿರಶ್ಚೀಂ**
**ಲೋಲೇನಾಹನ್ಯಮಾನಸ್ತುಹಿನಕಣಮುಚಾ ಚಂಚತಾ ಕೇಸರೇಣ ।**
**ನಿದ್ರಾಕಂಡೂಕಷಾಯಂ ಕಷತಿ ನಿಬಿಡಿತಶ್ರೋತ್ರಶುಕ್ತಿಸ್ತುರಂಗ–**
**ಸ್ತ್ವಂಗತ್ಪಕ್ಷ್ಮಾಗ್ರಲಗ್ನಪ್ರತನುಬುಸಕಣಂ ಕೋಣಮಕ್ಷ್ಣಃ ಖುರೇಣ ॥ ಇತಿ ।**

**ಅನುವಾದ:**

ಅರ್ಥಸ್ವಭಾವದ ಉಕ್ತಿಯು ಅಲಂಕಾರ ಎಂದು ನಮ್ಮ ಮತ. ಏಕೆಂದರೆ ಅದರಲ್ಲಿ ಪ್ರತಿಭೆಯಿಂದ ಅರ್ಪಿತವಾದ ವಿಷಯಗಳು ಸಾಕ್ಷಾತ್ ಎದುರಿನಲ್ಲಿ ಇದ್ದಂತೆ ತೋರುತ್ತವೆ.

ಉದಾಹರಣೆ– "ಮನ್ಮಥನೆ, ನಿನ್ನ ತೊಡೆಯ ಮೇಲೆ ಇಟ್ಟುಕೊಂಡಿದ್ದ ಧನುಸ್ಸನ್ನು ನೀನು ನೇರಗೊಳಿಸುತ್ತಿದ್ದುದನ್ನೂ, ವಸಂತನ ಜೊತೆ ಮುಗುಳುನಗುತ್ತಾ

ನೀನು ಹೇಳುತ್ತಿದ್ದ ಕಥೆಗಳನ್ನೂ ನಿನ್ನ ಕಣ್ಣಂಚಿನ ನೋಟವನ್ನೂ ನಾನಿಂದು ನೆನಪಿಸಿಕೊಳ್ಳುತ್ತಿದ್ದೇನೆ."

ಇನ್ನೊಂದು ಉದಾಹರಣೆ– "ಕುದುರೆ ಬೆನ್ನನ್ನು ಸ್ವಲ್ಪ ಬಗ್ಗಿಸಿ ಕತ್ತನ್ನು ಅಡ್ಡವಾಗಿ ತಿರುಗಿಸುತ್ತಾ ಮುಖವನ್ನು ತನ್ನ ಸೊಂಟದ ಹತ್ತಿರಕ್ಕೆ ಒಯ್ದಿದೆ. ಹಿಮದ ಕಣಗಳನ್ನುದುರಿಸುತ್ತಿರುವ ಚಂಚಲವಾದ ಅದರ ತಲೆಕೂದಲು ಅದರ ಮೈಗೆ ಬಡಿಯುತ್ತಿದೆ. ಕಿವಿಗಳನ್ನು ನಿಮಿರಿಸಿದ ಕುದುರೆಯು ನಿದ್ದೆಯಲ್ಲಿ ನವೆಗಾಗಿ ಉಜ್ಜಿದುದರಿಂದ ಕಣ್ಣು ನಸುಗೆಂಪಾಗಿದೆ. ಅದುರುತ್ತಿರುವ ರೆಪ್ಪೆಗಳ ತುದಿಯಲ್ಲಿ ಅತಿಸಣ್ಣ ಹೊಟ್ಟಿನ ಕಣಗಳು ಅಂಟಿಕೊಂಡಿವೆ. ಅಂಥ ಕಣ್ಣಿನ ಅಂಚನ್ನು ಕುದುರೆ ಗೊರಸಿನಿಂದ ತಿಕ್ಕಿಕೊಳ್ಳುತ್ತಿದೆ."

**ಯಥಾ ವಾ–**

**ಗ್ರೀವಾಭಂಗಾಭಿರಾಮಂ ಮುಹುರನುಪತತಿ ಸ್ಯಂದನೇ ಬದ್ಧದೃಷ್ಟಿಃ**
**ಪಶ್ಚಾರ್ಧೇನ ಪ್ರವಿಷ್ಟಃ ಶರಪತನಭಯಾದ್ ಭೂಯಸಾ ಪೂರ್ವಕಾಯಮ್ ।**
**ದರ್ಭೈರರ್ಧಾವಲೀಢೈಃ ಶ್ರಮವಿವೃತಮುಖಭ್ರಂಶಿಭಿಃ ಕೀರ್ಣವರ್ತ್ಮಾ**
**ಪಶ್ಯೋದಗ್ರಪ್ಲುತತ್ವಾದ್ವಿಯತಿ ಬಹುತರಂ ಸ್ತೋಕಮುರ್ವ್ಯಾಂ ಪ್ರಯಾತಿ ॥**

**ಸಾಮಾನ್ಯಸ್ತು ಸ್ವಭಾವೋ ಯಃ ಸೋಽನ್ಯಾಲಂಕಾರಗೋಚರಃ ।**
**ಶ್ಲಿಷ್ಟಮರ್ಥಮಲಂಕರ್ತುಮನ್ಯಥಾ ಕೋ ಹಿ ಶಕ್ನುಯಾತ್ ॥**
**ವಸ್ತುಮಾತ್ರಾನುವಾದಸ್ತು ಪೂರಣೈಕಫಲೋ ಮತಃ ।**
**ಅನಂತರೋಕ್ತಯೋರೇವ ಯದ್ವಾಂತರ್ಭಾವಮರ್ಹತಿ ॥**

(ಐದೇ ದೋಷಗಳು)

**ಯಥಾಯೋಗಮಯಂ ದೋಷಸ್ತೇನ ಪಂಚೈವ ತೇ ಮತಾಃ ।**
**ಇತ್ಯಂತರಶ್ಲೋಕಾಃ**

**ಅನುವಾದ:**

ಇನ್ನೊಂದು ಉದಾಹರಣೆ–

"ಹಿಂದೆ ಅನುಸರಿಸಿ ಬರುತ್ತಿರುವ ರಥದಲ್ಲಿ ಜಿಂಕೆಯು ಕತ್ತನ್ನು ಬಗ್ಗಿಸಿ ದೃಷ್ಟಿಯನ್ನು ನೆಟ್ಟಿರುವುದು ಅಂದವಾಗಿದೆ. ಬಾಣವು ಎಲ್ಲಿ ಬೀಳುವುದೋ ಎಂಬ ಭಯದಿಂದ ಅದರ ಶರೀರದ ಹಿಂಭಾಗವು ಮುಂಭಾಗದೊಳಕ್ಕೆ ಸೇರಿಹೋಗುವಂತಿದೆ. ಅರ್ಧ ಜಗಿದ ದರ್ಭೆಗಳು ಬಳಲಿಕೆಯಿಂದ ತೆರೆದುಕೊಂಡ ಬಾಯಿಂದ ಉದುರಿ ದಾರಿಯುಲ್ಲೆಲ್ಲಾ ಚೆಲ್ಲಿಹೋಗಿವೆ. ಎಗರಿ ಎಗರಿ ಹೋಗುತ್ತಿರುವುದರಿಂದ ಜಿಂಕೆಯು ಆಕಾಶದಲ್ಲೇ ಹೆಚ್ಚು, ಭೂಮಿಯಲ್ಲಿ ತುಸುವೇ ಓಡುತ್ತಿದೆ–ನೋಡು."

ಸಾಮಾನ್ಯವಾದ ಸ್ವಭಾವವು ಬೇರೆ ಅಲಂಕಾರಗಳಿಗೆ ವಿಷಯ. ಹಾಗಿಲ್ಲದಿದ್ದರೆ, ಮುಚ್ಚಿಹೋದ ಅರ್ಥವನ್ನು ಅಲಂಕರಿಸಲು ಯಾವುದು ಶಕ್ತವಾದೀತು? ಕೇವಲ ವಸ್ತುವಿನ ಅನುವಾದವು ಶ್ಲೋಕಪೂರಣಕ್ಕೆ ಮಾತ್ರ ಉಪಯೋಗಿ. (ಅದಕ್ಕೆ ಬೇರೆ ಫಲವಿಲ್ಲ.)

ಈ ಅವಾಚ್ಯವಚನವೆಂಬ ದೋಷವು ಈಗಾಗಲೇ ಹೇಳಿರುವ (ಪುನರುಕ್ತ, ವಾಚ್ಯಾವಚನ ಎಂಬ ಎರಡು) ದೋಷಗಳಲ್ಲೇ ಅಂತರ್ಭೂತವಾಗಲು ಯೋಗ್ಯವಾಗಿದೆ. ಆದ್ದರಿಂದ ದೋಷಗಳು ಐದೇ ಎಂದು ನನ್ನ ಅಭಿಪ್ರಾಯ.

ಇವು ಅಂತರಶ್ಲೋಕಗಳು.

(ಮಹಾಕವಿಗಳ ಪದ್ಯಗಳಲ್ಲೂ ದೋಷಗಳಿವೆ)

**ತಾ ಏತಾ ದೋಷಜಾತಯೋ ಮಹಾಕವೀನಾಮಪಿ ದುರ್ಲಕ್ಷ್ಯಾ ಇತ್ಯವಸೀಯಂತೇ । ಯಥಾ–**

**ಉಮಾವೃಷಾಂಕೌ ಶರಜನ್ಮನಾ ಯಥಾ**
**ಯಥಾ ಜಯಂತೇನ ಶಚೀಪುರಂದರೌ ।**
**ತಥಾ ನೃಪಃ ಸಾ ಚ ಸುತೇನ ಮಾಗಧೀ**
**ನನಂದತುಸ್ತತ್ಸದೃಶೇನ ತತ್ಸಮೌ ॥**

**ಇತ್ಯತ್ರ ಯಥಾತಥಾಶಬ್ದಾಭ್ಯಾಮೇವ ಮಾಗಧೀನೃಪಯೋರುಮಾ–ವೃಷಾಂಕಸಾಮ್ಯಂ ಶಚೀಪುರಂದರಸಾಮ್ಯಂ ಚ, ಸುತಸ್ಯ ಚ ಶರಜನ್ಮಜಯಂತಸಾದೃಶ್ಯಮ್ ಅವಗಮಿತಮ್ ಇತಿ ಯತ್ ತಯೋಸ್ತಸ್ಯ ಚ ಪುನಸ್ಸಾದೃಶ್ಯವಚನಂ ತತ್ ಪುನರುಕ್ತಮ್ ।**

**ಅನುವಾದ:**

ಈ ದೋಷಜಾತಿಗಳು ಮಹಾಕವಿಗಳಿಗೂ ಕಾಣಿಸುವುದಿಲ್ಲ ಎಂದು ತೋರುತ್ತದೆ. ಉದಾಹರಣೆ– (ಈ ಪದ್ಯದ ಅನುವಾದ ಹಿಂದೆ ಬಂದಿದೆ)

ಇಲ್ಲಿ ಯಥಾತಥಾ ಶಬ್ದಗಳಿಂದಲೇ ಸುದಕ್ಷಿಣಾದಿಲೀಪರಿಗೆ ಪಾರ್ವತೀಪರಮೇಶ್ವರಸಾಮ್ಯವೂ, ಶಚೀಮಹೇಂದ್ರಸಾಮ್ಯವೂ, ಮತ್ತು ಮಗನಿಗೆ ಕುಮಾರಸ್ವಾಮಿ–ಜಯಂತರ ಸಾಮ್ಯವೂ ತಿಳಿದುಬರುತ್ತದೆ. ಹೀಗಿರುವಾಗ (ತತ್ಸದೃಶೇನ ತತ್ಸಮೌ ಎಂದು) ಪುನಃ ಸಾದೃಶ್ಯವನ್ನು ಹೇಳಿರುವುದು ಪುನರುಕ್ತ.

**ತತ್ರೋಪಮಾನಯೋರ್ಯೋ ನಿರ್ದೇಶಕ್ರಮಃ ಪ್ರಕ್ರಾಂತಃ ಸ ಉಪಮೇಯಯೋಃ ಕ್ರಮೇ ಭೇದಂ ನೀತ ಇತಿ ನಿರ್ದೇಶಪ್ರಕ್ರಮಭೇದೋ ದೋಷಃ । ತತ ಏವ ಚ ತತ್ಸಮಾವಿತ್ಯತ್ರ ಅವಾಚ್ಯವಚನದೋಷೋಽಪಿ ತಾವತ್ ಸ್ಫುಟ ಏವ ಉಪಮಾನಯೋಗ್ಯತ್ವಾನುಪಪತ್ತೇಃ । ಕಿಂಚ ತಥಾಶಬ್ದಸ್ಯ ಯದ್ವಚನಂ ಸೋಽವಾಚ್ಯವಚನಂ ದೋಷಃ । ತದ್ವ್ಯತಿರೇಕೇಣಾಪಿ ಅರ್ಥಯೋರ್ವಿಪರ್ಯಾಸಮಾತ್ರೇಣ ತದರ್ಥಾವಗತಿಸಿದ್ಧೇಃ । ತಸ್ಮಾದೇವಮತ್ರ ಪಾಠಃ ಶ್ರೇಯಾನ್ । 'ಸುಜನ್ಮನಾ ತೇನ ಸುತೇನ ತಾವುಭೌ ನನಂದತುಃ ಸಾ ಚ ವಿಶಾಂಪತಿಶ್ಚ ಸಃ' ಇತಿ।**

**ಅನುವಾದ:**

ಈ ಪದ್ಯದಲ್ಲಿ ಉಪಮಾನಗಳಿಗೆ ಯಾವ ನಿರ್ದೇಶಕ್ರಮವು ಆರಂಭಿಸಲ್ಪಟ್ಟಿದೆಯೋ ಅದು ಉಪಮೇಯಗಳನ್ನು ಹೇಳುವ ಕ್ರಮದಲ್ಲಿ ಬದಲಾಯಿಸಲ್ಪಟ್ಟಿದೆ. ಆದ್ದರಿಂದ ನಿರ್ದೇಶದಲ್ಲಿ ಪ್ರಕ್ರಮಭೇದ ಎಂಬ ದೋಷ. ಆ ಕಾರಣದಿಂದಲೇ ತತ್ಸಮೌ ಎಂಬಲ್ಲಿ ಅವಾಚ್ಯವಚನದೋಷವೂ ಇದೆ. ಏಕೆಂದರೆ ಉಪಮಾನಗಳಿಗೆ ಹೊಂದಿಕೊಳ್ಳುವ ಯೋಗ್ಯತೆ ಅಲ್ಲಿಲ್ಲ.

ಅಲ್ಲದೆ ತಥಾಶಬ್ದವನ್ನು ಬಳಸಿರುವುದೂ ಅವಾಚ್ಯವಚನ ಎಂಬ ದೋಷಕ್ಕೆ ಪಕ್ಕಾಗುತ್ತದೆ. ಆ (ತಥಾ ಎಂಬ) ಶಬ್ದವಿಲ್ಲದಿದ್ದರೂ ಪೂರ್ವಾರ್ಧ–ಉತ್ತರಾರ್ಧಗಳ ವ್ಯತ್ಯಾಸದಿಂದಲೇ ಅದರ ಅರ್ಥವು ಗೋಚರವಾಗುತ್ತದೆಯಷ್ಟೆ. ಆದ್ದರಿಂದ ಈ ಪದ್ಯದಲ್ಲಿ (ಉತ್ತರಾರ್ಧದ) ಪಾಠ ಹೀಗಿದ್ದರೆ ಚೆನ್ನ– (ಸುಜನ್ಮನಾ....................)

ಶುಭಜನ್ಮನಾದ ಆ ಮಗನಿಂದ ಆ ಮಾಗಧಿಯೂ ಆ ರಾಜನೂ ಇಬ್ಬರೂ ಆನಂದಿಸಿದರು.

**ಯತೋ ವಸ್ತುಮಾತ್ರೋಪನಿಬದ್ಧಪ್ರಾಯೇಽಪಿ ಪದಸಮುದಾಯೇ ದೃಶ್ಯಂತ ಏವ ತೇ । ಅನ್ಯೇಷಾಂ ಯಥಾ– ಕಾವ್ಯಸ್ಯಾತ್ಮಾ ಧ್ವನಿರಿತಿ ಬುಧೈರ್ಯಃ ಸಮಾಮ್ನಾತಪೂರ್ವಸ್ತಸ್ಯಾಭಾವಂ ಜಗದುರಪರೇ ಭಾಕ್ತಮಾಹುಸ್ತಮನ್ಯೇ । ಕೇಚಿದ್ವಾಚಾಂ ಸ್ಥಿತಮವಿಷಯೇ ತತ್ತ್ವಮೂಚುಸ್ತದೀಯಂ ತೇನ ಬ್ರೂಮಃ ಸಹೃದಯಮನಃ ಪ್ರೀತಯೇ ತತ್ಸ್ವರೂಪಮ್ ॥ ಅತ್ರ "ಕಾವ್ಯಸ್ಯಾತ್ಮಾ ಧ್ವನಿರಿತಿ" ಇತಿ ಇತಿಶಬ್ದಸ್ಯ ತಾವತ್ ಕ್ರಮಭೇದಃ । ಸ ಹಿ ಕಾವ್ಯಾತ್ಮಪದಾನಂತರಂ ಪ್ರಯೋಕ್ತವ್ಯಃ । ಕಾವ್ಯಸ್ಯಾತ್ಮೇತಿ – ಇತಿ । ಅನ್ಯಥಾ ಧ್ವನಿನೈವಾಸ್ಯ ಸಂಬಂಧೇ ವಿಜ್ಞಾಯಮಾನೇ ತಸ್ಯ ಸರ್ವನಾಮಪರಾಮರ್ಶಾಭಾವೇ ಅಭಾವೋ ಭಾಕ್ತತ್ವಂ ವಾಗವಿಷಯತ್ವಂ ಚ ನ ಪ್ರತೀಯೇತ।**

**ಅನುವಾದ:**

ಈ ದೋಷಗಳು ವಸ್ತುಮಾತ್ರವನ್ನು ಹೇಳುವ ಪದಸಮುದಾಯದಲ್ಲೂ ಕಾಣಿಸುತ್ತವೆ. ಬೇರೆಯವರ ಪದ್ಯದಲ್ಲಿ ಅದರ ಉದಾಹರಣೆ–

"ಯಾವ ಧ್ವನಿಯು ಕಾವ್ಯದ ಆತ್ಮವೆಂದು ಬುಧರಿಂದ ಹಿಂದೆ ಹೇಳಲ್ಪಟ್ಟಿತ್ತೋ ಅದರ ಅಭಾವವನ್ನು ಕೆಲವರು ಘೋಷಿಸಿದರು. ಬೇರೆ ಕೆಲವರು ಅದು ಭಾಕ್ತ (ಲಾಕ್ಷಣಿಕ) ಎಂದರು. ಮತ್ತೆ ಕೆಲವರು ಅದು ಮಾತುಗಳಿಗೆ ಗೋಚರವಲ್ಲದ ತತ್ತ್ವ ಎಂದರು. ಆದ್ದರಿಂದ ಸಹೃದಯರ ಮನಸ್ಸಿನ ಪ್ರೀತಿಗಾಗಿ ಆ ಧ್ವನಿಯ ಸ್ವರೂಪವನ್ನು ಹೇಳುವೆವು."

ಇಲ್ಲಿ 'ಕಾವ್ಯಸ್ಯಾತ್ಮಾ ಧ್ವನಿರಿತಿ' ಎಂಬಲ್ಲಿ ಇತಿ ಶಬ್ದದ ಕ್ರಮಭೇದ. ಆ ಇತಿ ಶಬ್ದವನ್ನು ಕಾವ್ಯಾತ್ಮಪದದ ಅನಂತರ ಪ್ರಯೋಗಿಸಬೇಕಾಗಿತ್ತು. "ಕಾವ್ಯಸ್ಯಾತ್ಮೇತಿ ಯೋ ಧ್ವನಿಃ ಸಮಾಮ್ನಾತಃ" ಎಂದಿರಬೇಕು. ಹಾಗಿಲ್ಲದೆ ಇತಿ ಶಬ್ದವು ಧ್ವನಿ

ಎಂಬುದರೊಡನೆ ಸಂಬಂಧವನ್ನು ಹೊಂದಿದರೆ, ಸರ್ವನಾಮದಿಂದ (ತಸ್ಯ ಎಂಬುದರಿಂದ) ಅದರ ಪರಾಮರ್ಶವಿರುವುದಿಲ್ಲ. ಆಗ ಅಭಾವ, ಭಾಕ್ತತ್ವ, ವಾಗವಿಷಯತ್ವ ಯಾವುದೂ ಧ್ವನಿಯಲ್ಲಿ ತೋರುವುದಿಲ್ಲ.

**ತಸ್ಯ ಅಭಿಧಾನಾತ್ಮನ ಇತಿನಾ ವ್ಯವಚ್ಛೇದಾತ್, ಅನ್ಯಸ್ಯ ಚ ಧ್ವನೇರನುಪಾದಾನಾತ್ । ಸ ಹ್ಯಭಾವಾದಿಧರ್ಮಾಧಿಕರಣಭಾವೇನ ಸರ್ವನಾಮಪರಾಮರ್ಶಯೋಗ್ಯೋಽವಶ್ಯಮ್ ಉಪಾದೇಯಃ, ನ ಚೋಪಾತ್ತಃ । ಯಶ್ಚೋಪಾತ್ತಃ ಸ ತದಭಿಧಾನಾನುಕಾರಸ್ವರೂಪಮಾತ್ರಪ್ರಧಾನೋ ನಾರ್ಥಾಭಿಮುಖ ಇತಿ ಕಾವ್ಯಾತ್ಮನ ಏವಾರ್ಥಸ್ಯ ತದಧಿಕರಣಭಾವೋ ವಿಜ್ಞಾಯತೇ, ನ ಧ್ವನೇಃ। ಸ ಹಿ ತತ್ರ ಸಂಜ್ಞಾಮಾತ್ರಮ್ । ಯತ್ ಸ ಏವಾಹ "ಕಾವ್ಯಸ್ಯಾತ್ಮಾ ಧ್ವನಿಸಂಜ್ಞಿತಃ" ಇತಿ । ತಚ್ಚಾನಿಷ್ಟಮೇವ । ನ ಹಿ ಕೇಚಿತ್ ಕಾವ್ಯಾತ್ಮನೋ ರಸಾದೇಃ ಅಭಾವಂ ಭಾಕ್ತತ್ವಂ ವಾಭ್ಯುಪಗಚ್ಛಂತಿ ।**

**ಅನುವಾದ:**

ಶಬ್ದವ್ಯಾಪಾರರೂಪವಾದ ಧ್ವನಿಯು ಇತಿಶಬ್ದದಿಂದ ವ್ಯವಚ್ಛಿನ್ನವಾಗುತ್ತದೆ, ಬೇರೆ ಧ್ವನಿಶಬ್ದವನ್ನು ಆ ಪದ್ಯದಲ್ಲಿ ಹೇಳಿಲ್ಲ. ಅಭಾವಾದಿಧರ್ಮಗಳಿಗೆ ಅಧಿಕರಣವಾಗಿ ಇರಲು ಸರ್ವನಾಮಪರಾಮರ್ಶಯೋಗ್ಯವಾದ ಧ್ವನಿಯನ್ನು ಅವಶ್ಯವಾಗಿ ಹೇಳಬೇಕು. ಆದರೆ ಹೇಳಿಲ್ಲ. ಯಾವ ಧ್ವನಿಶಬ್ದವು ಉಪಾತ್ತವಾಗಿದೆಯೋ ಅದು ಅಭಿದಾನದ (ಶಬ್ದದ) ಅನುಕರಣವಾಗಿ ಸ್ವರೂಪಮಾತ್ರ ಪ್ರಧಾನವಾಗಿದೆ, ಅರ್ಥಾಭಿಮುಖವಾಗಿಲ್ಲ. ಆದ್ದರಿಂದ ಕಾವ್ಯಾತ್ಮವಾದ ಅರ್ಥಕ್ಕೆ ಅಭಾವಾದಿಗಳ ಅಧಿಕರಣತ್ವವು ಗೊತ್ತಾಗುತ್ತದೆ, ಧ್ವನಿಗಲ್ಲ. ಏಕೆಂದರೆ ಅದು ಕೇವಲ ಸಂಜ್ಞೆ, ಆನಂದವರ್ಧನನೇ ಹೇಳಿದ್ದಾನೆ– "ಕಾವ್ಯದ ಆತ್ಮವು ಧ್ವನಿ ಎಂಬ ಸಂಜ್ಞೆಯನ್ನು ಹೊಂದಿದೆ" ಎಂದು. (ಕಾವ್ಯಾತ್ಮವು ಅಭಾವಾದಿಗಳ ಅಧಿಕರಣ ಎನ್ನುವುದು) ಅನಿಷ್ಟ. ಕಾವ್ಯಾತ್ಮವಾದ ರಸಾದಿಗಳ ಅಭಾವವನ್ನಾಗಲಿ ಭಾಕ್ತತ್ವವನ್ನಾಗಲಿ ಯಾರೂ ಒಪ್ಪಿಕೊಂಡಿಲ್ಲ.

**ಮುಖ್ಯವೃತ್ತ್ಯಾ ಚ ಕಾವ್ಯಾತ್ಮಶಬ್ದವಾಚ್ಯೋ ರಸಾದಿರೇವ ಯುಕ್ತೋ ನಾಪರಃ । ತದಭಾವೇ ಪ್ರತೀಯಮಾನಾರ್ಥಾಂತರಸಂಸ್ಪರ್ಶೇಽಪ್ಯರ್ಥಾಪತ್ತ್ಯಾದಿವಾಕ್ಯವತ್ ಕಾವ್ಯಸ್ಯ ನಿರ್ಜೀವತಾಪತ್ತೇಃ। ಏತಚ್ಚ ರಸಸ್ವರೂಪಮ್ ಉಪಕ್ರಮ್ಯ ಸ ಏವಾಹ–**

**ಕಾವ್ಯಸ್ಯಾತ್ಮಾ ಸ ಏವಾರ್ಥಸ್ತಥಾ ಚಾದಿಕವೇಃ ಪುರಾ ।**
**ಕ್ರೌಂಚದ್ವಂದ್ವವಿಯೋಗೋತ್ಥಃ ಶೋಕಃ ಶ್ಲೋಕತ್ವಮಾಗತಃ ॥ ಇತಿ ।**
**ಇತಿನಾರ್ಥೋ ವ್ಯವಚ್ಛಿನ್ನಃ ಶಬ್ದಮಾತ್ರೇಽವತಿಷ್ಠತೇ ।**
**ಸರ್ವನಾಮಪರಾಮರ್ಶಯೋಗ್ಯೋಽಸೌ ನ ಭವೇತ್ತತಃ ॥**
**ಯಥಾ ಘಟಃ ಕುಟ ಇತಿ ಜ್ಞೇಯೋ ಯಸ್ಸ ಪೃಥೂದರಃ ।**
**ಯಥಾ ನೃಪೋ ನೃಗ ಇತಿ ಖ್ಯಾತೋ ಯಃ ಸ ಮಹಾಮತಿಃ ॥**

**ಅನುವಾದ:**

ಮುಖ್ಯವೃತ್ತಿಯಿಂದ ಕಾವ್ಯಾತ್ಮ ಎಂಬ ಶಬ್ದದ ಅರ್ಥವು ರಸಾದಿಯೇ ಆಗಬೇಕು, ಬೇರೆಯದಲ್ಲ. ರಸಾದಿ ಇಲ್ಲದಿದ್ದರೆ ಪ್ರತೀಯಮಾನಾರ್ಥದ ಸ್ಪರ್ಶವಿದ್ದರೂ ಅರ್ಥಾಪತ್ತಿಯ ಉದಾಹರಣವಾಕ್ಯದಂತೆ ಕಾವ್ಯವು ನಿರ್ಜೀವವಾಗುವ ಆಪತ್ತಿ ಇರುತ್ತದೆ. ಇದನ್ನು ಆನಂದವರ್ಧನನೇ ರಸಸ್ವರೂಪವನ್ನು ಹೇಳಲು ಆರಂಭಿಸಿ ತಿಳಿಸಿದ್ದಾನೆ– "ಕಾವ್ಯದ ಆತ್ಮವು ರಸಾದಿರೂಪವಾದ ಆ ಅರ್ಥವೇ. ಹಿಂದೆ ಕ್ರೌಂಚಪಕ್ಷಿಗಳ ಜೋಡಿಯ ವಿರಹದಿಂದ ಆದಿಕವಿಯಲ್ಲಿ ಹುಟ್ಟಿದ ಶೋಕವು ಶ್ಲೋಕವಾಯಿತು."

ಇತಿಶಬ್ದದಿಂದ ವ್ಯವಚ್ಛಿನ್ನವಾದ ಅರ್ಥವು ಶಬ್ದದಲ್ಲಿ ನಿಂತುಬಿಡುತ್ತದೆ. ಆಮೇಲೆ ಅದು ಸರ್ವನಾಮದಿಂದ ಪರಾಮರ್ಶಿಸಲ್ಪಡಲು ಯೋಗ್ಯವಾಗದು.

ಕುಟ ಎಂದು ತಿಳಿಯಲ್ಪಡುವ ಘಟವು ಯಾವುದೋ ಅದರ ಹೊಟ್ಟೆ ದೊಡ್ಡದಾಗಿರುತ್ತದೆ – ಎಂಬುದು ಉದಾಹರಣೆ. ನೃಗ ಎಂದು ಪ್ರಸಿದ್ಧನಾಗಿದ್ದ ದೊರೆಯು ಮಹಾಮತಿ ಎಂಬುದು ಇನ್ನೊಂದು ಉದಾಹರಣೆ.

**ತತೋಽರ್ಥ ಏವ ಕಾವ್ಯಾತ್ಮಾ ತತ್ಪರಾಮರ್ಶನೋಚಿತಃ ।**
**ನ ಧ್ವನಿಸ್ತದಭಾವಾದಿಸಂಬಂಧೋಽಸ್ಯ ಕಥಂ ಮತಃ ॥**
**ಇತ್ಯಂತರಶ್ಲೋಕಾಃ । ಏವಂ ತರ್ಹಿ–**

**ಅಸ್ತ್ಯುನ್ನತೇ ಸುರಸರಿಜ್ಜಲಧಾವ್ಯಮಾನ–**
**ಭಾಗೇ ನವಾರ್ಕರುಚಿ ಮಂದರಶೈಲಶೃಂಗೇ ।**
**ಜ್ಯೋತ್ಸ್ನಾವತೀತಿ ನಗರೀ ಭುವನತ್ರಯೈಕ–**
**ಭೂಷಾ ವೃಷಾಂಕಶಿರಸೀವ ಶಶಾಂಕಲೇಖಾ ॥**

**ಇತ್ಯತ್ರ ಶಶಾಂಕಲೇಖಾಯಾ ಜ್ಯೋತ್ಸ್ನಾವತೀತ್ವೇನ ಯದ್ವಿಶೇಷಣಂ ತದನುಪಪನ್ನಮೇವ ಸ್ಯಾದಿತಿಶಬ್ದವ್ಯವಚ್ಛೇದಾದಿತಿ । ಬಾಢಮ್ । ಕೋ ವಾ ನಾನುಮನ್ಯತೇ । ಕೇವಲಮಿತಿ–ಶಬ್ದಾರ್ಥಾನವಧಾರಣಮೂಲೋ ಮೋಹ ಏವಾಸೌ ವ್ಯಾಖ್ಯಾತೄಣಾಮಿತಿ ।**

**ಅನುವಾದ:**

ಆದ್ದರಿಂದ ಕಾವ್ಯಾತ್ಮರೂಪವಾದ ಅರ್ಥವೇ ಸರ್ವನಾಮಪರಾಮರ್ಶಕ್ಕೆ ಯೋಗ್ಯ, ಧ್ವನಿಯಲ್ಲ. ಹೀಗಿರಲು ಅಭಾವಾದಿಗಳ ಸಂಬಂಧವು ಧ್ವನಿಗೆ ಹೇಗೆ ಹೊಂದುವುದು? ಇವು ಅಂತರ ಶ್ಲೋಕಗಳು. ಹೀಗೆ ಒಪ್ಪಿಕೊಂಡರೆ–

"ಗಂಗೆಯಿಂದ ತೊಳೆಯಲ್ಪಡುವ ಭಾಗಗಳನ್ನುಳ್ಳ ಉದಯಸೂರ್ಯನ ಕಾಂತಿಯನ್ನುಳ್ಳ ಉನ್ನತವಾದ ಮಂದರಪರ್ವತದ ಶಿಖರದ ಮೇಲೆ ಶಿವನ ಶಿರಸ್ಸಿನಲ್ಲಿ ಚಂದ್ರಲೇಖೆ ಇರುವಂತೆ ಜ್ಯೋತ್ಸ್ನಾವತಿ ಎಂಬ ಮೂರು ಲೋಕಗಳಿಗೆ ಆಭರಣವಾದ ನಗರವಿದೆ."

ಈ ಪದ್ಯದಲ್ಲಿ ಶಶಾಂಕಲೇಖೆಗೆ ಜ್ಯೋತ್ಸ್ನಾವತೀರೂಪದ ವಿಶೇಷಣವನ್ನು ಕಲ್ಪಿಸಿರುವುದು ತಪ್ಪೆಂದಾಗುತ್ತದೆ, ಏಕೆಂದರೆ ಜ್ಯೋತ್ಸ್ನಾವತೀ ಶಬ್ದದ ಮುಂದೆ ಇರುವ ಇತಿಶಬ್ದದಿಂದ ಅದರ ವ್ಯವಚ್ಛೇದವಾಗಿದೆ– ಎಂದರೆ, ಆಗಲಿ. ಯಾರು ಇಲ್ಲವೆನುತ್ತಾರೆ? ಇತಿಶಬ್ದದ ಅರ್ಥವೇನೆಂದು ಅರಿಯದ ವ್ಯಾಖ್ಯಾತೃಗಳ ಮೋಹವೇ ಇಂಥ ಪ್ರಯೋಗಗಳ ಮೂಲ.

**ಅಥ ಕಾವ್ಯಾತ್ಮಾನುವಾದೇನ ವಿಹಿತಸ್ಯ ಧ್ವನೇಃ ಸಮಾಮ್ನಾನಕ್ರಿಯಾಕರ್ಮಭಾವಾವಚ್ಛೇದೇನ ಸಮುದಾಯಾತ್ ಅಯಮಿತಿಶಬ್ದಃ ಪ್ರಯುಕ್ತಃ ಇತಿ ಅರ್ಥಪ್ರಧಾನ ಏವಾಯಂ ಧ್ವನಿಶಬ್ದೋ, ನ ಸ್ವರೂಪಪ್ರಧಾನ ಇತಿ ತಸ್ಯ ಸರ್ವನಾಮಪರಾಮರ್ಶಯೋಗ್ಯಸ್ಯಾಭಾವಾದಿಸಂಬಂಧೋ ಘಟತ ಏವ ಇತ್ಯುಚ್ಯತೇ, ತದಯುಕ್ತಮ್ । ಏವಂ ಹಿ ವಾಕ್ಯಾರ್ಥಾವಚ್ಛೇದಃ ಪ್ರತೀಯೇತ। ತತಶ್ಚ ತತ್ಪರಾಮರ್ಶಿನಃ ಸರ್ವನಾಮಪದಾದೇಃ ನಪುಂಸಕಲಿಂಗನಿರ್ದೇಶಪ್ರಸಂಗಃ । ಯಥಾ– "ತದವಿತಥಮೇವ ಮನ್ಯೇ ವಿಷಯಾ ಆಶೀವಿಷಾ ಇತಿ ಯದಾಹುಃ" ಇತಿ । ತಸ್ಮಾದಾತ್ಮಶಬ್ದಾನಂತರಮೇವ ಅಯಮಿತಿಶಬ್ದಃ ಪ್ರಯೋಕ್ತವ್ಯಃ । ಸ ಚ ಹೇತ್ವರ್ಥವೃತ್ತಿಃ ।**

**ಅನುವಾದ:**

(ಆಮೇಲೆ ಹೀಗೆ ಪೂರ್ವಪಕ್ಷವನ್ನು ಹೇಳಬಹುದು)– ಕಾವ್ಯಾತ್ಮವೆಂಬುದನ್ನು ಅನುವಾದಿಸಿ ಇಲ್ಲಿ ಧ್ವನಿಯನ್ನು ವಿಧಿಸಲಾಗಿದೆ. ಸಮಾಮ್ನಾನ ಎಂಬ ಕ್ರಿಯೆಗೆ ಕರ್ಮವಾಗಿ ಸಮುದಾಯವನ್ನು ಇಟ್ಟುಕೊಂಡು ಆ ಸಮುದಾಯದ ಮುಂದೆ ಇತಿಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ ಇಲ್ಲಿ ಧ್ವನಿಶಬ್ದವು ಅರ್ಥಪ್ರಧಾನ, ಸ್ವರೂಪಪ್ರಧಾನವಲ್ಲ. ಆದ್ದರಿಂದ ಸರ್ವನಾಮಪರಾಮರ್ಶಕ್ಕೆ ಯೋಗ್ಯವಾದ ಧ್ವನಿಗೆ ಅಭಾವ, ಭಾಕ್ತತ್ವ ಮುಂತಾದುವುಗಳ ಜೊತೆಗೆ ಸಂಬಂಧವು ಹೊಂದುತ್ತದೆ.

ಹೀಗೆಂದರೂ ಅದು ಅಯುಕ್ತ. ಸಮುದಾಯದ ಮುಂದೆ ಇವ ಶಬ್ದವಿದೆಯೆಂದಾಗ ವಾಕ್ಯಾರ್ಥಾವಚ್ಛೇದವೇ ತೋರುತ್ತದೆ. ಆಗ ಅದನ್ನು ಪರಾಮರ್ಶಿಸುವ ಸರ್ವನಾಮಪದಾದಿಗಳು ನಪುಂಸಕಲಿಂಗದಲ್ಲಿರಬೇಕಾದೀತು. ಅದಕ್ಕೆ ಉದಾಹರಣೆ– (ತದವಿತಥಮ್......) "ಇಂದ್ರಿಯಗಳ ವಿಷಯಗಳು ಹಾವುಗಳು ಎಂದೇನು ಹೇಳುವರೋ ಅದು ಸತ್ಯವೆಂದು ಅಂದುಕೊಳ್ಳುತ್ತೇನೆ."

ಆದ್ದರಿಂದ ಕಾವ್ಯಸ್ಯಾತ್ಮಾ ಎಂಬುದರ ಮುಂದೆಯೇ ಇತಿ ಶಬ್ದವನ್ನು ಪ್ರಯೋಗಿಸಬೇಕಾಗಿತ್ತು. ಅದೂ ಕಾರಣ ಎಂಬ ಅರ್ಥವನ್ನು ಹೇಳುತ್ತದೆ.

**ಯಥಾ– ರಮ್ಯಾ ಇತಿ ಪ್ರಾಪ್ತವತೀಃ ಪತಾಕಾ ರಾಗಂ ವಿವಿಕ್ತಾ ಇತಿ ವರ್ಧಯಂತೀಃ ಇತ್ಯತ್ರ । ತೇನಾಯಮರ್ಥಃ । ಯತಃ ಕಾವ್ಯಸ್ಯಾತ್ಮಾ ಜೀವಿತಭೂತಃ ತತೋ ಬುಧೈರ್ಯೋ ಧ್ವನಿರ್ನಾಮ ಸಮಾಮ್ನಾತಪೂರ್ವಃ ಇತಿ । ಏಷ ಏವಾರ್ಥೋಽಭಿಮತಃ ಕವೇರಿತಿ ವಿಜ್ಞಾಯತೇ ಯದಯಂ ತತ್ರ ತತ್ರ ಧ್ವನೇಃ ಕಾವ್ಯೈಕಜೀವಿತತ್ವಮಾಹ । ಕಿಂಚ**

**ಸಮಾಮ್ನಾತೇರ್ಧಾತೋಃ ಕರ್ಮಣಿ ಭೂತೇ ಚ ಕ್ತಪ್ರತ್ಯಯೋತ್ಪತ್ತೌ ಕರ್ಮಣ ಏವ ಪ್ರಾಧಾನ್ಯೇ ತಸ್ಯೈವ ನಿರ್ದೇಶೋ ನ್ಯಾಯ್ಯೋ, ನ ಕರ್ತುರ್ನಾಪಿ ಪೂರ್ವಶಬ್ದಸ್ಯ, ಅವ್ಯಭಿಚಾರಾತ್ ಪ್ರಯೋಜನಾಭಾವಾಚ್ಚೇತಿ ಯದೇತಯೋರುಪಾದಾನಂ ತತ್‌ಪುನರುಕ್ತಮೇವ ।**

**ಅನುವಾದ:**

ಅದರ ಉದಾಹರಣೆ– "ರಮ್ಯವಾಗಿವೆ ಎಂದು ಪತಾಕೆಗಳನ್ನು ಪಡೆದಿವೆ, ನಿರ್ಜನಪ್ರದೇಶದಲ್ಲಿರುವುವು ಎಂದು ಪ್ರೀತಿಯನ್ನು ಹೆಚ್ಚಿಸುತ್ತಿವೆ."

ಇಲ್ಲಿ ಇತಿಶಬ್ದವು ಕಾರಣಾರ್ಥದಲ್ಲಿದೆ.

ಯಾವ ಕಾರಣದಿಂದ ಕಾವ್ಯದ ಆತ್ಮವು ಜೀವಿತವಾಗಿದೆಯೋ ಆ ಕಾರಣದಿಂದ ಬುಧರು ಅದನ್ನು ಹಿಂದೆ ಧ್ವನಿ ಎಂದು ಕರೆದರು –ಎಂದು ವಾಕ್ಯದ ಅರ್ಥ. ಈ ಅರ್ಥವೇ (ಪದ್ಯವನ್ನು ಬರೆದ) ಕವಿಗೆ ಅಭಿಮತ ಎಂದು ತಿಳಿದಿದ್ದೇವೆ. ಏಕೆಂದರೆ ಅವನು ಅಲ್ಲಲ್ಲಿ "ಧ್ವನಿಯು ಕಾವ್ಯದ ಮುಖ್ಯಜೀವಿತ" ಎಂದು ಹೇಳಿದ್ದಾನೆ.

ಅಲ್ಲದೆ, (ಸಮ್ ಆಙ್ ಉಪಸರ್ಗಪೂರ್ವಕವಾದ) ಮ್ನಾ ಧಾತುವಿಗೆ ಕರ್ಮ+ಭೂತಕಾಲ ಎಂಬ ಅರ್ಥದಲ್ಲಿ ಕ್ತ ಪ್ರತ್ಯಯವು ಹುಟ್ಟಿದಾಗ ಕರ್ಮಕ್ಕೇ ಪ್ರಾಧಾನ್ಯ. ಅದನ್ನು ನಿರ್ದೇಶಿಸುವುದೇ ನ್ಯಾಯಾನುಗುಣ. ಕರ್ತೃವನ್ನಾಗಲಿ ಪೂರ್ವಶಬ್ದವನ್ನಾಗಲಿ ನಿರ್ದೇಶಿಸುವುದಲ್ಲ. ಏಕೆಂದರೆ ಅವು ಅವ್ಯಭಿಚರಿತ. ಅವುಗಳನ್ನು ಹೇಳಿದುದರಿಂದ ಯಾವ ಪ್ರಯೋಜನವೂ ಇಲ್ಲ. ಹೀಗಿದ್ದರೂ (ಬುಧೈಃ ಸಮಾಮ್ನಾತಪೂರ್ವಃ ಎಂದು) ಅವುಗಳನ್ನು ಹೇಳಿರುವುದು ಪುನರುಕ್ತವೇ.

**ಕಿಂಚ 'ಭಾಕ್ತಮಾಹುಸ್ತಮನ್ಯೇ' ಇತ್ಯತ್ರಾಪಿ ಪೂರ್ವವದಿತಿಶಬ್ದಃ ಪ್ರಯೋಕ್ತವ್ಯಃ ಉತ್ತರತ್ರ ಚ। ಅನ್ಯಥಾ ಅನ್ಯೇಷಾಂ ಕೇಷಾಂಚಿಚ್ಚೋಕ್ತಿರ್ನಾನುಕೃತಾ ಸ್ಯಾತ್ । ತತಶ್ಚ ಭಾಕ್ತೋ ಯೋ ಧ್ವನಿಸ್ತಮಾಹುರನ್ಯ ಇತಿ, ವಾಚಾಮವಿಷಯೇ ಸ್ಥಿತಂ ಯತ್ತದೀಯಂ ತತ್ತ್ವಂ ತತ್ ಕೇಚಿದ್ ಊಚುರಿತಿ ಪ್ರತೀತೌ ಧ್ವನೇರ್ಭಾಕ್ತತ್ವೋಕ್ತಿಃ ಅನ್ಯೇಷಾಂ, ಕೇಷಾಂಚಿಚ್ಚ ವಾಚಾಮವಿಷಯೇ ಸ್ಥಿತತ್ವಂ ಯತ್ ತದೀಯಸ್ಯ ತತ್ತ್ವಸ್ಯ, ತದುಕ್ತಿರ್ನಾನುಕೃತಾ ಸ್ಯಾದ್ ಇತಿನಾ ವ್ಯವಚ್ಛೇದಾಭಾವಾತ್ ಇತಿ ವಾಚ್ಯಾವಚನಂ ದೋಷಃ । ಸಾಮರ್ಥ್ಯಾದುಕ್ತೇರನುಕಾರಾನುಗಮೇ ವಾ ಪೂರ್ವತ್ರೇತಿಶಬ್ದಸ್ಯ ಪೌನರುಕ್ತ್ಯಪ್ರಸಂಗಃ ।**

**ಅನುವಾದ:**

ಅಲ್ಲದೆ 'ಭಾಕ್ತಮಾಹುಸ್ತಮನ್ಯೇ' ಎಂಬಲ್ಲಿಯೂ ಹಿಂದಿನಂತೆ ಇತಿಶಬ್ದವನ್ನು ಪ್ರಯೋಗಿಸಬೇಕು, ಮುಂದಿನ ಅಂಶದಲ್ಲೂ ಹಾಗೆ ಮಾಡಬೇಕು. ಇಲ್ಲದಿದ್ದರೆ 'ಬೇರೆಯವರ' ಮತ್ತು 'ಕೆಲವರ' ಉಕ್ತಿಯನ್ನು ಅನುಕರಿಸಿ ಹೇಳಿದಂತಾಗುವುದಿಲ್ಲ. ಆದ್ದರಿಂದ ಭಾಕ್ತವಾದ (ಲಾಕ್ಷಣಿಕವಾದ) ಯಾವ ಧ್ವನಿ ಇದೆಯೋ ಅದನ್ನು ಇತರರು ಹೇಳಿದ್ದಾರೆ ಎಂದೂ, ಮಾತುಗಳ ಗೋಚರದಲ್ಲಿ ಅದರ ಯಾವ

ತತ್ತ್ವವಿದೆಯೋ ಅದನ್ನು ಕೆಲವರು ಹೇಳಿದರು ಎಂದೂ ಪ್ರತೀತಿಯು ಉಂಟಾಗುವುದು. ಆಗ ಧ್ವನಿಯ ಭಾಕ್ತತ್ವದ ಮಾತು ಬೇರೆಯವರದು, ವಾಗಗೋಚರವಾದುದರಲ್ಲಿ ಅದರ ತತ್ತ್ವ ಇರುವುದು ಎಂದು ಅವರ ಮಾತನ್ನು ಅನುಕರಿಸಿದ ಹಾಗಾಗದು, ಏಕೆಂದರೆ ಅವುಗಳನ್ನು ಇತಿ ಶಬ್ದದಿಂದ ವ್ಯವಚ್ಛೇದಿಸಿಲ್ಲ. ಈ ಕಾರಣದಿಂದ ವಾಚ್ಯಾವಚನ ಎಂಬ ದೋಷ. ಸಾಮರ್ಥ್ಯದಿಂದಲೇ ಮಾತಿನ ಅನುಕರಣವು ಸಿದ್ಧವಾಗುತ್ತದೆ ಎಂದು ಒಪ್ಪಿಕೊಳ್ಳುವುದಾದರೆ ಮೊದಲು (ಕಾವ್ಯಸ್ಯಾತ್ಮಾ ಧ್ವನಿರಿತಿ.... ಎಂಬಲ್ಲಿ) ಇತಿ ಶಬ್ದವನ್ನು ಹೇಳಿರುವುದರಿಂದ ಪೌನರುಕ್ತ್ಯದ ಪ್ರಸಂಗ.

**ಕಿಂಚಾತ್ರ ವಚನಾರ್ಥೋ ಗದತಿಃ ಪ್ರಯುಕ್ತ ಏವೇತಿ ತಸ್ಯೈವ ಆದಿದೀಪಕನ್ಯಾಯೇನ ಅನುವೃತ್ತಿರ್ಯುಕ್ತಾ ನ ತು ತದಭಿನ್ನಾರ್ಥಸ್ಯ ಬ್ರವೀತೇರುಪಾದಾನಮ್ ಇತಿ ಉಭಯತ್ರಾಪಿ ಉಕ್ತದೋಷದ್ವಯಾನತಿವೃತ್ತಿಃ । ಕಾಲವಿಶೇಷಪ್ರಕ್ರಮಭೇದಶ್ಚ ಅತ್ರಾವಗಂತವ್ಯೋ ಜಗದುರಿತ್ಯೂಚುರಿತಿ ಚ ಕಾಲವಿಶೇಷಸ್ಯ ಪ್ರಕ್ರಾಂತಸ್ಯ ಅನಿರ್ವಾಹಾತ್ । ಕಿಂಚ, ಧ್ವನೇಸ್ತತ್ತ್ವಂ ಧ್ವನಿರೇವ ವಾ ಸ್ಯಾದನ್ಯದೇವ ವಾ? ತತ್ರ ಧ್ವನಿರೂಪತ್ವೇ ತತ್ತ್ವಮೂಚುಸ್ತದೀಯಮ್ ಇತಿ ತ್ರಿತಯಮಪಿ ಪುನರುಕ್ತಂ ಸ್ಯಾತ್ । ಕೇಚಿದ್ ವಾಚಾಂ ಸ್ಥಿತಮವಿಷಯೇ ಜಗದುರಿತ್ಯೇತಾವದ್ಭಿಃ ಪ್ರಯುಕ್ತಾಂತರ್ಗತೈರೇವ ಪದೈಸ್ತದರ್ಥಾವಗತಿಸಿದ್ಧೇಃ ।**

**ಅನುವಾದ:**

ಅಲ್ಲದೆ, ಹೇಳುವುದು ಎಂಬ ಅರ್ಥವನ್ನುಳ್ಳ ಗದ್ ಧಾತುವಿನ ರೂಪವನ್ನು ಜಗದುಃ ಎಂದು ಪ್ರಯೋಗಿಸಿ ಆಗಿದೆ. ಆದಿದೀಪಕಾಲಂಕಾರದಲ್ಲಿ ಮಾಡುವಂತೆ ಇಲ್ಲಿಯೂ ಆ ಕ್ರಿಯಾಪದದ ಅನುವೃತ್ತಿಯೇ ಲೇಸು. ಅದೇ ಅರ್ಥವನ್ನು ಕೊಡುವ ಬ್ರೂ ಧಾತುವಿನ ಪ್ರಯೋಗವು ಸರಿಯಲ್ಲ. ಆದ್ದರಿಂದ ಎರಡು ಸ್ಥಳದಲ್ಲೂ (ಪೌನರುಕ್ತ್ಯ, ವಾಚ್ಯಾವಚನ ಎಂಬ) ಎರಡು ದೋಷಗಳು ತಪ್ಪುವುದಿಲ್ಲ. ಜಗದುಃ, ಊಚುಃ ಎಂದು ಹೇಳಿ (ಮಧ್ಯದಲ್ಲಿ ಆಹುಃ ಎಂಬ ವರ್ತಮಾನಕಾಲದ ಕ್ರಿಯಾಪದವನ್ನು ಬಳಸಿರುವುದರಿಂದ) ಕಾಲವಿಶೇಷಪ್ರಕ್ರಮಭೇದ ಎಂಬ ದೋಷವನ್ನೂ ಇಲ್ಲಿ ಅರಿತುಕೊಳ್ಳಬೇಕು. ಆರಂಭಿಸಿದ ಕಾಲವನ್ನು ಗ್ರಂಥಕಾರನು ನಿರ್ವಹಿಸಿಲ್ಲ.

ಅಲ್ಲದೆ, ಧ್ವನಿಯ ತತ್ತ್ವವು ಧ್ವನಿಯೇ ಆಗಿರುವುದೋ ಅಥವಾ ಅದಕ್ಕಿಂತ ಬೇರೆಯೋ? ಧ್ವನಿಯ ತತ್ತ್ವಧ್ವನಿರೂಪವೇ ಎನ್ನುವುದಾದರೆ ತತ್ತ್ವಮೂಚುಸ್ತದೀಯಮ್ ಎಂಬ ಮೂರು ಪದಗಳೂ ಪುನರುಕ್ತ. ಕೇಚಿದ್‌ವಾಚಾಂ ಸ್ಥಿತಮ್ ಅವಿಷಯೇ ಜಗದುಃ ಎಂದು ಪ್ರಯೋಗಿಸಿರುವ ಪದಗಳ ಒಳಗಿನ ಕೆಲವುಗಳಿಂದಲೇ ಹೇಳಬೇಕಾದ ಅರ್ಥವನ್ನೆಲ್ಲ ಹೇಳಿದಂತಾಗುತ್ತದೆಯಷ್ಟೆ!

**ಯಥೋಕ್ತಂ ಪ್ರಾಕ್–**

**ಪ್ರಯುಕ್ತಾಂತರ್ಗತೈರೇವ ಯತ್ರ ಸೋಽರ್ಥಃ ಪ್ರತೀಯತೇ ।**
**ಪ್ರಯೋಗಸ್ತತ್ರ ಶೇಷಾಣಾಂ ಪದಾನಾಂ ಪೌನರುಕ್ತ್ಯಕೃತ್ ॥ ಇತಿ ।**

**ಅನ್ಯರೂಪತ್ವೇ ತು ಅನ್ಯಸ್ಯ ವಾಗ್‌ವಿಷಯತ್ವಾಭಾವೇ ಧ್ವನೇಃ ತದವಿಷಯತ್ವಂ ನೋಕ್ತಂ ಸ್ಯಾತ್, ತಯೋರ್ಭೇದಾತ್ । ಕಿಂಚ ಭಕ್ತೇರೇವ ಧ್ವನಿರೂಪತಾಮನ್ಯೇ ಮನ್ಯಂತೇ, ನ**

**ತತ್ಸಂಬಂಧಿನೋಽನ್ಯಸ್ಯ ವ್ಯಾಪಾರಾದೇರಿತಿ ವ್ಯರ್ಥಸ್ತದ್ಧಿತ-ನಿರ್ದೇಶಃ । ಯತ್ ಸ ಏವಾಹ ಭಕ್ತಿರ್ಧ್ವನಿರಿತಿ । 'ಭಕ್ತ್ಯಾ ಬಿಭರ್ತಿ ನೈಕತ್ವಂ ರೂಪಭೇದಾದಯಂ ಧ್ವನಿಃ' ಇತಿ । ಯುಕ್ತಂ ಚೈತತ್ । ತಥಾ ಹಿ-**

**ಕೃಶಾಂಗ್ಯಾಃ ಸಂತಾಪಂ ವದತಿ ಬಿಸಿನೀಪತ್ರಶಯನಮ್**

**ಇತ್ಯತ್ರ ವದತ್ಯರ್ಥಾದ್ ವಾಚ್ಯಾದನ್ಯಸ್ಯ ವ್ಯಕ್ತಿಲಕ್ಷಣಸ್ಯ ಅರ್ಥಸ್ಯ ತಾತ್ಪರ್ಯೇಣ ಪ್ರಕಾಶನಮಿತಿ ಧ್ವನಿಲಕ್ಷಣಾನುಗಮಾದ್ ಭಕ್ತೇರೇವ ತತ್ತ್ವಮುಪಪದ್ಯತೇ, ನಾನ್ಯಸ್ಯೇತಿ ವ್ಯರ್ಥಸ್ತದ್ಧಿತನಿರ್ದೇಶಃ ।**

**ಅನುವಾದ:**

ಈ ಮೊದಲೇ ಹೇಳಿದ್ದೇವೆ- (ಪ್ರಯುಕ್ತಾಂತ.... ಈ ಶ್ಲೋಕದ ಅನುವಾದ ಹಿಂದೆ ಬಂದಿದೆ.)

ಧ್ವನಿಯ ತತ್ತ್ವವು ಧ್ವನಿಗಿಂತಲೂ ಬೇರೆ ಎನ್ನುವುದಾದರೆ ಆ ಬೇರೆಯದು ವಾಗವಿಷಯವೆಂದಾಯಿತು, ಧ್ವನಿಗೆ ವಾಗವಿಷಯತ್ವವನ್ನು ಹೇಳಿದಂತಾಗಲಿಲ್ಲ, ಏಕೆಂದರೆ ಧ್ವನಿಯೂ ಅದರ ತತ್ತ್ವವೂ ಬೇರೆ ಬೇರೆ.

ಅಲ್ಲದೆ, ಭಕ್ತಿಯೇ ಧ್ವನಿಯೆಂದು ಅನ್ಯರು ಭಾವಿಸುತ್ತಾರೆ. ಭಕ್ತಿಸಂಬಂಧಿಯಾದ ಬೇರೆ ವ್ಯಾಪಾರಾದಿಗಳನ್ನಲ್ಲ. ಆದ್ದರಿಂದ (ಭಾಕ್ತಮ್ ಎಂಬ) ತದ್ಧಿತನಿರ್ದೇಶವು ವ್ಯರ್ಥ. ಅವನೇ (ಆನಂದವರ್ಧನನೇ) ಹೇಳಿದ್ದಾನೆ- ಭಕ್ತಿಯೇ ಧ್ವನಿ ಎಂದು. ಅದೇ ಸರಿ. ಹೇಗೆಂದರೆ-

"ಈ ತಾವರೆ ಎಲೆಗಳಿಂದಾದ ಹಾಸಿಗೆಯು ಕೃಶಾಂಗಿಯ ಸಂತಾಪವನ್ನು ಹೇಳುತ್ತಿದೆ" ಎಂಬ ಉದಾಹರಣೆಯಲ್ಲಿ ವದತಿ ಎಂಬ ಕ್ರಿಯಾಪದದ ಅರ್ಥಕ್ಕಿಂತಲೂ ಭಿನ್ನವಾದ ಅಭಿವ್ಯಕ್ತಿರೂಪವಾದ ಅರ್ಥವು ತಾತ್ಪರ್ಯದಿಂದ ಪ್ರಕಾಶಿತವಾಗುತ್ತದೆ. ಹೀಗೆ ಧ್ವನಿಲಕ್ಷಣವು ಅನ್ವಯಿಸುವುದರಿಂದ ಭಕ್ತಿಗೇ (ಲಕ್ಷಣಾವ್ಯಾಪಾರಕ್ಕೇ) ಧ್ವನಿತ್ವವು ಹೊಂದುತ್ತದೆ, ಬೇರೆಯದಕ್ಕೆ ಅಲ್ಲ. ಆದ್ದರಿಂದ ತದ್ಧಿತನಿರ್ದೇಶವು ವ್ಯರ್ಥ.

**ಸಹೃದಯಮನಃಪ್ರೀತಯೇ ಇತ್ಯತ್ರ ಚ ಮನಃಶಬ್ದಃ ಪುನರುಕ್ತಃ, ಪ್ರೀತೇರ್ಮನೋಧರ್ಮತಯಾ ತದಧಿಕರಣಭಾವಾವ್ಯಭಿಚಾರಾದಿತ್ಯೇತತ್ ಪ್ರಪಂಚಿತಮೇವ ಪ್ರಾಕ್ । ತೇನ (ವರಮ್) ಅಯಮತ್ರ ಪಾಠಃ ಶ್ರೇಯಾನ್, ಅಲ್ಪ ದೋಷತ್ವಾತ್ ।**

**ಕಾವ್ಯಸ್ಯಾತ್ಮೇತ್ಯಮಲಮತಿಭಿರ್ಯೋ ಧ್ವನಿರ್ನಾಮ ಗೀತ-**
**ಸ್ತಸ್ಯಾಭಾವಂ ಜಗದುರಪರೇ ಭಕ್ತಿರಿತ್ಯೇವಮನ್ಯೇ**
**ಕೇಚಿದ್ ವಾಚಾಮವಿಷಯ ಇತಿ ಪ್ರಸ್ಫುರತ್ ತತ್ತ್ವಮಂತ-**
**ಸ್ತೇನ ಬ್ರೂಮಃ ಸಹೃದಯಜನಪ್ರೀತಯೇ ತತ್ಸ್ವರೂಪಮ್ ॥ ಇತಿ ।**
**ಯದ್ವಾ- ಇದಮದ್ಯತನಾನಾಂ ಚ ಭಾವಿನಾಂ ಚಾನುಶಾಸನಮ್ ।**
**ಲೇಶತಃ ಕೃತಮಸ್ಮಾಭಿಃ ಕವಿವರ್ತ್ಮಾರುರುಕ್ಷತಾಮ್ ॥**
**ಇತ್ಯಲಮ್ ಅಪ್ರಸ್ತುತವಸ್ತುವಿಸ್ತರೇಣ ।**

**ಅನುವಾದ:**

ಸಹೃದಯಮನಃಪ್ರೀತಯೇ ಎಂಬಲ್ಲಿಯೂ ಮನಃ ಎಂಬುದು ಪುನರುಕ್ತ. ಪ್ರೀತಿಯು ಮನಸ್ಸಿನ ಧರ್ಮವೇ ಆಗಿರುವುದಿರಂದ ಪ್ರೀತಿಗೆ ಮನಸ್ಸು ಅಧಿಕರಣವಾಗಿರುವುದು ಅವ್ಯಭಿಚರಿತ. ಇದನ್ನು ಹಿಂದೆ ವಿಸ್ತರಿಸಿ ಹೇಳಿದ್ದೇವೆ. ಆದ್ದರಿಂದ ಈ ಪದ್ಯದ ಪಾಠವು ಕೆಳಗೆ ಕೊಟ್ಟಿರುವಂತಾದರೆ ಸ್ವಲ್ಪ ಉತ್ತಮ, ಏಕೆಂದರೆ ಆಗ ದೋಷಗಳು ಸ್ವಲ್ಪವೇ ಆಗುತ್ತವೆ (ಕಾವ್ಯ...............)

ಶುದ್ಧಬುದ್ಧಿಯವರು ಯಾವ ಧ್ವನಿಯನ್ನು ಕಾವ್ಯದ ಆತ್ಮವೆಂದು ಕರೆದರೋ ಅದು ಇಲ್ಲವೆಂದು ಬೇರೆಯವರೂ, ಅದು ಲಕ್ಷಣಾ ಎಂದು ಇತರರೂ, ಅದು ವಾಗಗೋಚರವಾದ, ಒಳಗೆ ಸ್ಫುರಿಸುವ ತತ್ತ್ವವೆಂದು ಕೆಲವರೂ ಹೇಳಿದ್ದಾರೆ. ಆದ್ದರಿಂದ ಸಹೃದಯ ಜನರ ಸಂತೋಷಕ್ಕಾಗಿ ಆ ಧ್ವನಿಯು ಸ್ವರೂಪವನ್ನು ಹೇಳುತ್ತೇವೆ.

ಅಥವಾ– ಕವಿಮಾರ್ಗವನ್ನೇರಲು ಇಷ್ಟಪಡುವ ಇಂದಿನವರ ಮತ್ತು ಮುಂದಿನವರ ಅನುಶಾಸನವನ್ನು ಇಲ್ಲಿ ನಾವು ಸಂಕ್ಷಿಪ್ತವಾಗಿ ಮಾಡಿದ್ದೇವೆ. ಅಪ್ರಸ್ತುತವಾದ ವಸ್ತುವಿನ ವಿಸ್ತರ ಸಾಕು.

**ತಸ್ಮಾತ್ ಸ್ಥಿತಮೇತದ್ ಯಥಾ ಶಬ್ದಸ್ಯಾರ್ಥಾಭಿಧಾನಮಂತರೇಣ**
**ನ ವ್ಯಾಪಾರಾಂತರಂ ಸಂಭವತೀತಿ ।**
**ಗಮಯಂತ್ಯರ್ಥಮುಖೇನ ಹಿ ಸುಪ್ತಿಙ್‌ವಚನಾದಯೋऽಪರಾನ್ ಅರ್ಥಾನ್ ।**
**ತೇನ ಧ್ವನಿಲಕ್ಷ್ಮವಿಧೌ ಶಬ್ದಗ್ರಹಣಂ ವಿಫಲಮೇವ ॥**
**ಇತಿ ಸಂಗ್ರಹಾರ್ಯಾ ।**

**ಅನುವಾದ:**

ಆದ್ದರಿಂದ ಶಬ್ದಕ್ಕೆ ಅರ್ಥವನ್ನು ಹೇಳುವುದೊಂದನ್ನು ಬಿಟ್ಟು ಬೇರೆ ಯಾವ ವ್ಯಾಪಾರವೂ ಸಂಭವಿಸುವುದಿಲ್ಲ ಎಂಬುದು ಸಿದ್ಧವಾಯಿತು.

ಅರ್ಥದ ಮೂಲಕ ಸುಪ್, ತಿಙ್, ವಚನ ಮುಂತಾದುವು ಬೇರೆ ಅರ್ಥಗಳನ್ನು ತಿಳಿಸುತ್ತವೆ. ಆದ್ದರಿಂದ ಧ್ವನಿಯ ಲಕ್ಷಣದಲ್ಲಿ ಶಬ್ದ(ಎಂಬ ಶಬ್ದ)ವನ್ನು ಹೇಳಿರುವುದು ನಿಷ್ಫಲ. ಇದು ಸಂಗ್ರಹಾರ್ಯಾ.

**ಇತಿ ಶ್ರೀರಾಜಾನಕಮಹಿಮಭಟ್ಟವಿರಚಿತೇ**
**ವ್ಯಕ್ತಿವಿವೇಕಾಖ್ಯೇ ಕಾವ್ಯಾಲಂಕಾರೇ ಶಬ್ದಾನೌಚಿತ್ಯವಿಚಾರೋ**
**ನಾಮ ದ್ವಿತೀಯೋ ವಿಮರ್ಶಃ ।**

ಇಲ್ಲಿಗೆ ಶ್ರೀ ರಾಜಾನಕಮಹಿಮಭಟ್ಟನು ರಚಿಸಿದ ವ್ಯಕ್ತಿವಿವೇಕವೆಂಬ ಕಾವ್ಯಾಲಂಕಾರಗ್ರಂಥದಲ್ಲಿ ಶಬ್ದಾನೌಚಿತ್ಯವಿಚಾರ ಎಂಬ ಎರಡನೆಯ ವಿಮರ್ಶವು ಸಮಾಪ್ತ.

## ಅಥ ತೃತೀಯೋ ವಿಮರ್ಶಃ

**ತದೇವಂ ಧ್ವನಿಲಕ್ಷಣಸ್ಯ ತದ್ಭೇದಾನಾಂ ಚ ಅನುಮಾನೇ ಅಂತರ್ಭಾವಮುಪಪಾದ್ಯ ಸಂಪ್ರತಿ ತದುದಾಹರಣಾನಾಂ ಯಥಾಯೋಗಂ ಕ್ರಮೇಣಾಸಾವುಪದರ್ಶ್ಯತೇ ।**

(ಅನುಮಿತಿಯಲ್ಲಿ ವಸ್ತುಧ್ವನಿಯ ಅಂತರ್ಭಾವ)

**ತತ್ರ ವಸ್ತುಮಾತ್ರಸ್ಯ ತಾವತ್–**

**ಭಮ ಧಮ್ಮಿಅ ವೀಸದ್ಧೋ**
**ಸೋ ಸುಣಓ ಅಜ್ಜ ಮಾರಿಓ ದೇಣ ।**
**ಗೋಲಾಣಈಕಚ್ಛಕುಡಂಗವಾಸಿಣಾ ದರಿಅ ಸೀಹೇಣ ॥**
**(ಭ್ರಮ ಧಾರ್ಮಿಕ ವಿಸ್ರಬ್ಧಃ ಸ ಶುನಕೋಽದ್ಯ ಮಾರಿತಸ್ತೇನ ।**
**ಗೋದಾನದೀಕಚ್ಛಕುಡಂಗವಾಸಿನಾ ದೃಪ್ತಸಿಂಹೇನ ॥)**

**ಅನುವಾದ:**

## ಮೂರನೆಯ ವಿಮರ್ಶ

ಹೀಗೆ ಧ್ವನಿಯ ಲಕ್ಷಣದ ಮತ್ತು ಅದರ ಭೇದಗಳ ಅಂತರ್ಭಾವವು ಅನುಮಾನದಲ್ಲಿ ಆಗುವುದೆಂದು ತೋರಿಸಿ ಈಗ ಅದರ ಉದಾಹರಣೆಗಳೂ ಅನುಮಾನದ ಉದಾಹರಣೆಗಳಲ್ಲೇ ಸೇರಿಹೋಗುತ್ತವೆ ಎಂದು ಕ್ರಮಶಃ ಸಂದರ್ಭಾನುಸಾರವಾಗಿ ತೋರಿಸಲಾಗುತ್ತದೆ.

ಅವುಗಳಲ್ಲಿ ವಸ್ತುಮಾತ್ರದ ಉದಾಹರಣೆ–

"ಧಾರ್ಮಿಕನೆ, ನಿಶ್ಚಿಂತನಾಗಿ ಓಡಾಡು. ಗೋದಾವರೀ ನದಿಯ ತೀರದ ಕಾಡಿನಲ್ಲಿ ವಾಸಿಸುವ ಸಿಂಹವು ಇಂದು ಆ ನಾಯಿಯನ್ನು ಕೊಂದುಹಾಕಿತು."

**ಅತ್ರ ಕೇನಚಿತ್ ಸುಕೃತಿನಾ ಯೂನಾ ಸಹ ವಿಸ್ರಂಭಸಂಭೋಗಸುಖಾಸ್ವಾದಲಾಲಸಯಾ ವಿಜನೇ ವನೇ ವಿವಿಧಕುಸುಮಾಮೋದಮುದಿತಮಧುಕೃತಿ ಕೃತಸಂಕೇತಯಾ ಕಯಾಚಿತ್ ಕುಸುಮಾಪಚಿಚೀಷಯಾ ಭ್ರಮತೋ ಧಾರ್ಮಿಕಸ್ಯ ಮನೋರಥಪರಿಪಂಥಿ ತದ್ದೇಶಾಸಾದನಂ ವಿಘ್ನಮಿವ ಮನ್ಯಮಾನಯಾ ಜಾನಾನಯಾಪಿ ಕೇಸರಿಕಿಶೋರಕಸ್ಯ ಕ್ರೌರ್ಯಾತಿರೇಕಂ ಕುಕ್ಕುರಮಾರಣಮಾತ್ರತ್ರಾಸೋಪನ್ಯಾಸೇನ ಅಸ್ಯ ಪ್ರಿಯಮಾವೇದಯಿತುಕಾಮಯಾ ವಿದಗ್ಧಯಾಪಿ ಮುಗ್ಧಯೇವ ವಿಧಿಮುಖೇನ ಭ್ರಮಣಸ್ಯ ಪ್ರತಿಷೇಧೋ ವಿಹಿತಃ ।**

**ಅನುವಾದ:**

ಇಲ್ಲಿ ಒಬ್ಬ ಜಾಣೆ ಹೆಂಗಸು ಯಾವನೋ ಒಬ್ಬ ಪುಣ್ಯಶಾಲಿ ತರುಣನೊಡನೆ ನಿಶ್ಶಂಕವಾದ ಸಂಭೋಗಸುಖವನ್ನು ಆಸ್ವಾದಿಸುವುದರಲ್ಲಿ ಅತ್ಯಂತ ತೀವ್ರಾಸಕ್ತಿಯನ್ನು ಹೊಂದಿ ನಾನಾ ಹೂವುಗಳ ಸುಗಂಧದಿಂದ ಆನಂದಪಡುತ್ತಿದ್ದ ದುಂಬಿಗಳಿಂದ ಝೇಂಕರಿಸುತ್ತಿದ್ದ ನಿರ್ಜನವನದಲ್ಲಿ ಸಂಕೇತಸ್ಥಾನವನ್ನು ತರುಣನಿಗೆ

ಸೂಚಿಸಿರುತ್ತಾಳೆ. ಅಲ್ಲೊಬ್ಬ ಧಾರ್ಮಿಕನು ಹೂವುಗಳನ್ನು ಬಿಡಿಸಿಕೊಳ್ಳಲು ಬಂದು ಓಡಾಡುತ್ತಿರುತ್ತಾನೆ. ಆ ಹೆಂಗಸು ತನ್ನ ಮನೋರಥಕ್ಕೆ ವಿರುದ್ಧವಾದುದರಿಂದ ಧಾರ್ಮಿಕನು ಅಲ್ಲಿಗೆ ಬರುವುದನ್ನು ವಿಘ್ನವೆಂದು ತಿಳಿದುಕೊಳ್ಳುತ್ತಾಳೆ. ಸಿಂಹದ ಅತಿಶಯವಾದ ಕ್ರೌರ್ಯ ಅವಳಿಗೆ ಗೊತ್ತು. ಆದರೂ ಅದು ಒಂದು ನಾಯಿಯನ್ನು ಮಾತ್ರ ಕೊಂದ ವಿಷಯವನ್ನು ಹೇಳಿ ಮುಗ್ಧೆಯಂತೆ ಮಾತನಾಡುತ್ತಾ ಅವನಿಗೆ ಪ್ರಿಯವನ್ನು ನಿವೇದಿಸಲು ಇಷ್ಟಪಡುವವಳ ಹಾಗೆ 'ಇಲ್ಲಿ ತಿರುಗಾಡು' ಎಂಬ ವಿಧಿಯನ್ನು ದ್ವಾರವನ್ನಾಗಿ ಮಾಡಿಕೊಂಡು ಅವಳು ತಿರುಗಾಟದ ಪ್ರತಿಷೇಧವನ್ನೇ ಮಾಡಿದ್ದಾಳೆ.

> **ಅತ್ರ ಹಿ ದ್ವಾವರ್ಥೌ ವಾಚ್ಯಪ್ರತೀಯಮಾನೌ ವಿಧಿನಿಷೇಧಾತ್ಮಕೌ ಕ್ರಮೇಣ ಪ್ರತೀತಿಪಥಮವತರತಃ। ತಯೋರ್ಧೂಮಾಗ್ನ್ಯೋರಿವ ಸಾಧ್ಯಸಾಧನಭಾವೇನ ಅವಸ್ಥಾನಾತ್। ತತ್ರಾದ್ಯಸ್ತಾವದವಿವೇಕಸಿದ್ಧಃ ಸ್ಪಷ್ಟ ಏವ । ಭ್ರಮಣವಿಧಿಲಕ್ಷಣಸ್ಯ ಸಾಧ್ಯಸ್ಯ ತತ್ಪರಿಪಂಥಿ-ಕ್ರೂರಕುಕ್ಕುರಮಾರಣಾತ್ಮನಃ ಸಾಧನಸ್ಯ ಚ ಉಭಯೋರುಪಾದಾನಾತ್ । ದ್ವಿತೀಯಸ್ತ್ವತ ಏವ ಹೇತೋಃ ಪರ್ಯಾಲೋಚಿತಣಿಜರ್ಥಸ್ಯ ವಿವೇಕಿನಃ ಪ್ರತಿಪತ್ತುಃ ಪ್ರಯೋಜಕ-ಸ್ವರೂಪನಿರೂಪಣೇನ ಸಾಮರ್ಥ್ಯಾತ್ ಪ್ರತೀತಿಮ್ ಅವತರತಿ । ತಚ್ಚ ಸಾಮರ್ಥ್ಯಂ ಮೃತೇಽಪಿ ಕೌಲೇಯಕೇ ಕ್ರೂರತರಸ್ಯ ಸತ್ತ್ವಾಂತರಸ್ಯ ತತ್ರ ಸದ್ಭಾವಾವೇದನಂ ನಾಮ, ನಾಪರಮ್ ।**

**ಅನುವಾದ:**

ಈ ಪದ್ಯದಲ್ಲಿ ವಾಚ್ಯ, ಪ್ರತೀಯಮಾನ ಎಂಬ ಎರಡು ಅರ್ಥಗಳು ಕ್ರಮವಾಗಿ ವಿಧಿ-ನಿಷೇಧಾತ್ಮಕವಾಗಿ ಪ್ರತೀತಿಗೆ ಗೋಚರವಾಗುತ್ತವೆ. ಧೂಮ-ಅಗ್ನಿಗಳಂತೆ ಅವು ಸಾಧನವೂ ಸಾಧ್ಯವೂ ಆಗಿ ನಿಂತಿವೆ. ಅವುಗಳಲ್ಲಿ ಮೊದಲನೆಯದು (ವಾಚ್ಯಾರ್ಥ) ಅವಿವೇಕದಿಂದ ಸಿದ್ಧವಾಗುವುದು ಸ್ಪಷ್ಟವೇ ಆಗಿದೆ, ಏಕೆಂದರೆ ಅದರಲ್ಲಿ ಸಾಧ್ಯವೆಂದು ಭ್ರಮಣವಿಧಿಯನ್ನು ಹೇಳಿ ಅದಕ್ಕೆ ವಿರುದ್ಧವಾದ ನಾಯಿಯನ್ನು ಕೊಂದ ಕ್ರೂರ ಪ್ರಾಣಿಯ ಇರುವಿಕೆ ಎಂಬ ಸಾಧನವನ್ನೂ ಹೇಳಲಾಗಿದೆ.

ಎರಡನೆಯದಾದ ಪ್ರತೀಯಮಾನಾರ್ಥವು ಣಿಚ್ ಪ್ರತ್ಯಯದ ಅರ್ಥವನ್ನು ಆಲೋಚಿಸುವ ವಿವೇಕಿಗೆ ಅಲ್ಲಿ ಪ್ರಯೋಜಕ ಕರ್ತೃ (ಸಿಂಹದ) ಸ್ವರೂಪದ ವಿಚಾರದಿಂದ ಅರ್ಥಸಾಮರ್ಥ್ಯದಿಂದಲೇ ಪ್ರತೀತಿಗೋಚರವಾಗುತ್ತದೆ. ಆ ಸಾಮರ್ಥ್ಯವಾದರೋ ನಾಯಿಯು ಸತ್ತುಹೋಗಿದ್ದರೂ ಅಲ್ಲಿ ಇನ್ನೂ ಕ್ರೂರವಾದ ಪ್ರಾಣಿಯು ಅಲ್ಲಿದೆ ಎಂಬುದನ್ನು (ಮಾತಿನಿಂದ) ತಿಳಿಸಿರುವುದೇ ಆಗಿದೆ. ಬೇರೆ ಏನೂ ಅಲ್ಲ.

> **ತದೇವ ಚ ಸಾಧನಮ್ । ತಯೋಶ್ಚ ಸಾಧ್ಯಸಾಧನಯೋರವಿನಾಭಾವನಿಯಮೋ ವಿರೋಧಮೂಲಃ । ಸ ಚಾನಯೋರ್ಲೋಕಪ್ರಮಾಣಸಿದ್ಧ ಇತ್ಯುಕ್ತಮ್ । ನನು ಯದ್ ಯತೋ ವಾಕ್ಯಾದರ್ಥದ್ವಯಾವಗಮಸ್ತತ್ ಕಥಮುತ್ತರಸ್ಮಿನ್ನೇವ ನಿಯಮೇನ ವಿಶ್ರಾಂತಿಃ? ನ ಪೂರ್ವಸ್ಮಿನ್, ಉಭಯತ್ರಾಪಿ ವಾ, ತಯೋಃ ಪ್ರಾಕರಣಿಕತ್ವೇನ ವಿಶೇಷಾಭಾವಾತ್ । ಉಚ್ಯತೇ।**

**ನ ತಾವದತ್ರ ವಾಚ್ಯಾನುಮೇಯಯೋರರ್ಥಯೋಃ ಸಮುಚ್ಚಯೇನಾವಗತಿರುಪಪದ್ಯತೇ । ಭ್ರಮ, ಮಾ ಚ ಭ್ರಮೀರಿತಿ ವಚನೋಚ್ಚಾರಣಾನರ್ಥಕ್ಯಪ್ರಸಂಗಾತ್ । ನಾಪ್ಯಂಗಾಂಗಿಭಾವೇನ, ವಿಧಿ–ನಿಷೇಧಯೋಸ್ತದಸಂಭವಾತ್ ।**

**ಅನುವಾದ:**

ಕ್ರೂರಪ್ರಾಣಿಯು ಸದ್ಭಾವವೇ ಸಾಧನ. ಇಲ್ಲಿ ಸಾಧ್ಯಸಾಧನಗಳ ಅವಿನಾಭಾವನಿಯಮವು (ವ್ಯಾಪ್ತಿಯು) ವಿರೋಧಮೂಲವಾದದ್ದು. ಆ ನಿಯಮವು ಲೋಕ ಎಂಬ ಪ್ರಮಾಣದಿಂದ ಸಿದ್ಧವಾಗಿದೆ –ಎಂದು ಹೇಳಿದ್ದೇವೆ.

ಒಂದು ವಾಕ್ಯದಿಂದ ಎರಡು ಅರ್ಥಗಳು ಎಲ್ಲಿ ತೋರುವುವೋ ಅಲ್ಲಿ ಎರಡನೆಯ ಅರ್ಥದಲ್ಲೇ ತಾತ್ಪರ್ಯದ ವಿಶ್ರಾಂತಿಯು ಹೇಗೆ? ಮೊದಲನೆಯದರಲ್ಲಿ ತಾತ್ಪರ್ಯ ಏಕೆ ನಿಲ್ಲಬಾರದು? ಅಥವಾ ಎರಡರಲ್ಲೂ ಏಕೆ ನಿಲ್ಲುವುದಿಲ್ಲ? ಪ್ರಾಕರಣಿಕತ್ವ ಎಂಬ ಧರ್ಮವು ಎರಡರಲ್ಲೂ ಸಮಾನವಾಗಿದೆ, ಎರಡನೆಯದರಲ್ಲಿ ಯಾವ ವಿಶೇಷವೂ ಇಲ್ಲವಲ್ಲ – ಎಂದರೆ, ಉತ್ತರವನ್ನು ಹೇಳುತ್ತೇವೆ. ಇಲ್ಲಿ ವಾಚ್ಯ–ಅನುಮೇಯ ಎಂಬ ಎರಡು ಅರ್ಥಗಳ ಅರಿವು ಒಟ್ಟಿಗೆ ಆಗಲಾರದು. ತಿರುಗಾಡು, ತಿರುಗಾಡಬೇಡ ಎಂಬ ವಚನವನ್ನು ಹೇಳುವುದು ನಿರರ್ಥಕ ಎಂಬ ಪ್ರಸಂಗ ಆಗ ಬರುತ್ತದೆ. ಅಂಗಾಂಗಿಭಾವದಿಂದ ಅವೆರಡರ ಅನ್ವಯ ಎಂದೂ ಹೇಳಲು ಆಗದು, ಏಕೆಂದರೆ (ಪರಸ್ಪರ ವಿರುದ್ಧವಾದ) ವಿಧಿನಿಷೇಧಗಳಿಗೆ ಅಂಗಾಂಗಿಭಾವವು ಅಸಂಭವ.

**ಕೇವಲಂ ಯೋಽಸೌ ಭ್ರಮಣವಿಧೌ ಹೇತುಭಾವೇನ ದೃಪ್ತಪಂಚಾನನವ್ಯಾಪಾರಸ್ತತ್ರೋಪಾತ್ತಃ ಸ ಏವ ವಿಮೃಶ್ಯಮಾನಃ ಪರಂಪರಯಾ ಧಾರ್ಮಿಕಸ್ಯ ತನ್ನಿಷೇಧೇ ಪರ್ಯವಸ್ಯತಿ, ತಯೋರ್ಬಾಧ್ಯಬಾಧಕಭಾವೇನಾವಸ್ಥಾನಾತ್ । ಕೋ ಹ್ಯನುನ್ಮತ್ತಃ ಕುಕ್ಕುರಮಾತ್ರ–ಸದ್ಭಾವಭಯಾತ್ ಪರಿಹೃತಭ್ರಮಣಸ್ತತ್ರೈವ ದೃಪ್ತಸಿಂಹಸದ್ಭಾವಾಶಂಕಾಯಾಮಪಿ ಸವಿಸ್ರಂಭಂ ಭ್ರಮೇದಿತಿ ಅನುಮೇಯಾರ್ಥವಿಶ್ರಾಂತಿನಿಯಮಹೇತುಃ ವಾಚ್ಯವಾಚಕಭಾವೋಽಸ್ತ್ಯೇವಾತ್ರ ವಿಶೇಷಃ । ಅವಶ್ಯಂ ಚೈತದಭ್ಯುಪಗಂತವ್ಯಮ್ । ಅನ್ಯಥಾ ಶುಕ್ತಿಕಾರಜತಪ್ರತೀತ್ಯೋರಪಿ ಕ್ರಮಭಾವಿನ್ಯೋರೇತತ್–ಪರ್ಯನುಯೋಗಪ್ರಸಂಗಃ ಕೇನ ವಾರ್ಯತೇ?**

**ಅನುವಾದ:**

ಇಷ್ಟುಮಾತ್ರ ಹೇಳಬಹುದು– ಭ್ರಮಣವಿಧಿಗೆ ಕಾರಣವೆಂದು ದರ್ಪಿಷ್ಠಸಿಂಹದ ಕೆಲಸವನ್ನು ಅಲ್ಲಿ ಹೇಳಲಾಗಿದೆ. ಅದನ್ನು ವಿಮರ್ಶಿಸಿದರೆ ಪರಂಪರೆಯಿಂದ ಅದೇ ಧಾರ್ಮಿಕನ ಭ್ರಮಣನಿಷೇಧದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಏಕೆಂದರೆ ಅವು ಬಾಧ್ಯಬಾಧಕರೂಪದಲ್ಲಿ ಇವೆ.

ನಾಯಿ ಇದೆ ಎಂಬ ಭಯದಿಂದಲೇ ಯಾವನು ವನದಲ್ಲಿ ಸಂಚಾರವನ್ನು ತ್ಯಜಿಸುತ್ತಾನೋ ಅವನು ಹುಚ್ಚನಾಗಿಲ್ಲದ ಪಕ್ಷದಲ್ಲಿ ಅಲ್ಲಿ ಕ್ರೂರಸಿಂಹದ ಇರುವಿಕೆಯ

ಸಂಶಯವಿದ್ದರೂ ನಿಶ್ಚಿಂತನಾಗಿ ಓಡಾಡುವನೇನು? ಈ ವಾಚ್ಯವಾಚಕಭಾವವೇ ಇಲ್ಲಿ (ಎರಡನೆಯದಾದ) ಅನುಮೇಯಾರ್ಥದಲ್ಲಿ ತಾತ್ಪರ್ಯವಿಶ್ರಾಂತಿಯ ನಿಯಮದ ಕಾರಣವಾಗುತ್ತದೆ. ಅದೇ ಇಲ್ಲಿರುವ ವಿಶೇಷ. ಹಾಗೆ ಒಪ್ಪಿಕೊಳ್ಳದಿದ್ದರೆ 'ಇದು ಬೆಳ್ಳಿ', 'ಇದು ಕಪ್ಪೆಚಿಪ್ಪು' ಎಂಬ ಪ್ರತೀತಿಗಳು ಕ್ರಮವಾಗಿ ಉಂಟಾದಾಗಲೂ ವಿಶೇಷವೇನೆಂದು ಪ್ರಶ್ನೆ ಮಾಡುವ (ಅನಿಷ್ಟ) ಪ್ರಸಂಗವನ್ನು ನಿವಾರಿಸುವವರು ಯಾರು?

**ತಸ್ಮಾದ್ ಬಾಧ್ಯಬಾಧಕಭಾವಾವಸಾಯಕೃತಃ ಏವಾತ್ರ ಉತ್ತರಾರ್ಥವಿಶ್ರಾಂತಿನಿಯಮ ಇತಿ ಸ್ಥಿತಮ್ । ತತ್ರ 'ಭಮ ಧಮ್ಮಿಅ ವೀಸದ್ಧೋ' ಇತಿ ವಾಕ್ಯಾರ್ಥರೂಪೋ ಭ್ರಮಣವಿಧಿರ್ವಾಚ್ಯಃ। ತಸ್ಯ 'ಸೋ ಸುಣಓ ಅಜ್ಜ ಮಾರಿಓ ದೇಣ' ಇತ್ಯಾದಿನಾ ಕ್ರೂರಕುಕ್ಕುರಮಾರಣಂ ದೃಪ್ತಸಿಂಹವಿಹಿತಂ ವಾಕ್ಯಾರ್ಥರೂಪಮೇವಾರ್ಥೋ ಹೇತುಃ । ತತ್ಪ್ರತಿಷೇಧಸ್ತು ಅನುಮೇಯ ಏವ ನ ವಾಚ್ಯಃ, ತಸ್ಯೋಕ್ತನಯೇನ ಆಕ್ಷೇಪಾತ್ । ತತ್ರ 'ಗೊಲಾಣಈಕಚ್ಛಕುಡಂಗವಾಸಿಣಾ' ಇತಿ ಗೋದಾವರೀಕಚ್ಛಕುಹರಸ್ಯ ಧರ್ಮಿತ್ವನಿರ್ದೇಶಃ । 'ದರಿಅಸೀಹೇಣ' ಇತಿ ಶ್ವಮಾರಣಕಾರಣಾಭಿಧಾನದ್ವಾರೇಣೋಪಾತ್ತಸ್ಯ ದೃಪ್ತಸಿಂಹಸದ್ಭಾವಸ್ಯ ಹೇತುಭಾವಃ ।**

**ಅನುವಾದ:**

ಆದ್ದರಿಂದ ಬಾಧ್ಯಬಾಧಕಭಾವನಿಶ್ಚಯದ ಮೂಲಕವಾಗಿಯೇ ಇಲ್ಲಿ ಎರಡನೆಯ ಅರ್ಥದಲ್ಲಿ ವಿಶ್ರಾಂತಿಯ ನಿಯಮ ಎಂದು ಸಿದ್ಧವಾಗುತ್ತದೆ.

ಅಲ್ಲಿ 'ಭಮ ಧಮ್ಮಿಅ ವೀಸದ್ಧೋ' ಎಂಬ ವಾಕ್ಯಾರ್ಥರೂಪವಾದ ಭ್ರಮಣವಿಧಿಯು ವಾಚ್ಯ– 'ಸೋ ಸುಣಓ ಅಜ್ಜ ಮಾರಿಓ ದೇಣ' ಇತ್ಯಾದಿಯಿಂದ ಹೇಳಲಾದ ದರ್ಪಿಷ್ಠ ಸಿಂಹದಿಂದ ಮಾಡಲಾದ ಕ್ರೂರನಾಯಿಯ ಹನನರೂಪವಾಗಿರುವುದೇ ಅರ್ಥವಾದ ಕಾರಣ. ಭ್ರಮಣದ ಪ್ರತಿಷೇಧವಾದರೋ ಅನುಮೇಯ, ವಾಚ್ಯವಲ್ಲ, ಏಕೆಂದರೆ ಆ ಪ್ರತಿಷೇಧವು ಮೊದಲೇ ತಿಳಿಸಿದಂತೆ ಆಕ್ಷೇಪದಿಂದ ಲಭ್ಯ. ಆ ಅನುಮಾನದಲ್ಲಿ 'ಗೋಲಾಣಈಕಚ್ಛಕುಡಂಗವಾಸಿಣಾ' (ಗೋದಾವರೀ ತೀರದ ಬಿಲದಲ್ಲಿ ವಾಸಿಸುವ) ಎಂದು ಗೋದಾವರೀತೀರದ ಕುಹರವು ಧರ್ಮಿಯೆಂದು ನಿರ್ದಿಷ್ಟವಾಗಿದೆ. 'ದರಿಅ ಸೀಹೇಣ' (ಗುಹೆಯಲ್ಲಿರುವ ಸಿಂಹದಿಂದ) ಎಂದು ನಾಯಿಯ ಮಾರಣಕ್ಕೆ ಕಾರಣವಾದುದನ್ನು ಹೇಳುವ ಮೂಲಕ ಉಪಾತ್ತವಾದ ದರ್ಪಿಷ್ಠಸಿಂಹದ ಉಪಸ್ಥಿತಿಗೆ ಹೇತುತ್ವ.

**ಕುಡಂಗವಾಸಿಣಾ ಇತಿ ತದ್ವಿಶೇಷಣೇನ ತಸ್ಯ ಧರ್ಮಿಣಿ ಸದ್ಭಾವೋಪಪಾದನಮ್ । ತಸ್ಯಾಸ್ಯ ಹೇತೋಃ ಸಾಧ್ಯಸ್ಯ ಚ ನಿರ್ಭಯಭ್ರಮಣವಿಧಿಲಕ್ಷಣಸ್ಯ ಸಹಾನವಸ್ಥಾನಲಕ್ಷಣಃ ವಿರೋಧಃ ಪ್ರಸಿದ್ಧಃ ಏವೇತಿ ಏಕಸ್ಯ ಸದ್ಭಾವಾವೇದನೇನ ಅಪರಸ್ಯ ಸ್ವಭಾವವಿರುದ್ಧೋಪಲಬ್ಧ್ಯಾ ಪ್ರತಿಷೇಧೇ ವಿಜ್ಞಾಯಮಾನೇ ಸತಿ ಸಮಶೀರ್ಷಿಕಯಾ ಉಭಯಾರ್ಥಪ್ರತೀತಿರೇವಾತ್ರ ನ ಸಮಸ್ತೀತಿ ತದ್ವಿಶ್ರಾಂತಿಪರ್ಯನುಯೋಗೋ ನಿರವಕಾಶ ಏವ । ತೇನಾನುಮೇಯ ಏವ ಭ್ರಮಣಸ್ಯ ನಿಷೇಧೋ ನ ವ್ಯಂಗ್ಯ ಇತ್ಯವಸೇಯಂ, ಯಥಾ ನಾತ್ರ ಶೀತಸ್ಪರ್ಶೋಽಗ್ನೇರಿತ್ಯತಃ ಶೀತಸ್ಪರ್ಶಸ್ಯ।**

**ಅನುವಾದ:**

ಕುಡಂಗವಾಸಿಣಾ (ಕುಹರದಲ್ಲಿ ವಾಸಿಸುವ) ಎಂಬ ಅದರ ವಿಶೇಷಣದಿಂದ ಆ ಹೇತುವು ಧರ್ಮಿಯಲ್ಲಿ (ಪಕ್ಷದಲ್ಲಿ) ಇದೆ ಎಂದು ತೋರಿಸಲಾಗಿದೆ. ಈ ಹೇತುವಿಗೂ ನಿರ್ಭಯವಾಗಿ ತಿರುಗಾಡುವುದು ಎಂಬ ವಿಧಿಗೂ ಸಹಾನವಸ್ಥಾನರೂಪವಾದ (ಅಂದರೆ ಅವೆರಡೂ ಒಂದೇ ಧರ್ಮಿಯಲ್ಲಿರಲಾರವು ಎಂಬ) ವಿರೋಧವು ಪ್ರಸಿದ್ಧವೇ ಆಗಿದೆ. ಆದ್ದರಿಂದ ಒಂದು ಇರುವುದನ್ನು ಹೇಳಿದಾಗ ಇನ್ನೊಂದು ಪ್ರತಿಷಿದ್ಧವಾಗುತ್ತದೆ. ಏಕೆಂದರೆ ಅದರ ಸ್ವರೂಪದ ವಿರುದ್ಧವಾದುದು ಅಲ್ಲಿ ಉಪಲಬ್ಧವಾಗಿದೆ. ಒಂದರ ಪ್ರತಿಷೇಧವು ತಿಳಿದುಬಂದಾಗ ಸಮಶೀರ್ಷಿಕವಾಗಿ ಎರಡರ ಪ್ರತೀತಿಯೇ ಇಲ್ಲವೆಂದಾಗ ಯಾವುದರಲ್ಲಿ ನಿರ್ಣಯದ ವಿಶ್ರಾಂತಿ ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಆದ್ದರಿಂದ ಭ್ರಮಣದ ನಿಷೇಧವು ಅನುಮೇಯವೇ ಹೊರತು ವ್ಯಂಗ್ಯವಲ್ಲ ಎಂದು ತಿಳಿದುಕೊಳ್ಳಬೇಕು. ಉದಾಹರಣೆ ಏನೆಂದರೆ– “ಇಲ್ಲಿ ತಣ್ಣನೆಯ ಸ್ಪರ್ಶವಿಲ್ಲ, ಏಕೆಂದರೆ ಬೆಂಕಿ ಉರಿಯುತ್ತಿದೆ” ಎನ್ನುವಲ್ಲಿ ಶೀತಸ್ಪರ್ಶದ ನಿಷೇಧವು ಅನುಮೇಯ, ವ್ಯಂಗ್ಯವಲ್ಲ.

> **ಯದಿ ವಾ ಪ್ರೇಕ್ಷಾವತಾಂ ಪ್ರವೃತ್ತಿರನರ್ಥಸಂಶಯಾಭಾವನಿಶ್ಚಯೇನ ವ್ಯಾಪ್ತಾ, ತದ್ವಿರುದ್ಧಶ್ಚಾತ್ರಾನರ್ಥಸಂಶಯೋಽಸ್ಮಾದ್ ವಿಧಿವಾಕ್ಯಾತ್ ಣಿಜರ್ಥಪರ್ಯಾಲೋಚನಯಾ–ವಸಾಯತೇ ಇತಿ ವ್ಯಾಪಕವಿರುದ್ಧೋಪಲಬ್ಧ್ಯಾ, ಯಥಾ ನಾತ್ರ ತುಷಾರಸ್ಪರ್ಶೋಽಗ್ನೇಃ ಇತ್ಯತಃ ತುಷಾರಸ್ಪರ್ಶಸ್ಯ । ಅಪಿ ಚಾಸ್ಮಿನ್ನುದಾಹರಣೇ ದಾರುಣತರಾನ್ ಇತರಾನ್ ಋಕ್ಷಪ್ರಭೃತೀನ್ ಪ್ರಸಿದ್ಧತದ್ವ್ಯಾಪಾರಾನ್ ಅಪಾಸ್ಯ ಯದೇತತ್ ಕರಿಕಲಭಕುಂಭನಿರ್ಭೇದಹೇವಾಕಿನಃ ಕೇಸರಿಣಃ ಕೌಲೇಯಕವಧಾಭಿಧಾನವಮ್ ಔಚಿತ್ಯೈಕನಿಕೇತನಸ್ಯ ಕವೇಸ್ತತ್ರ ಚಿರಂ ಚಿಂತಯಂತೋಽಪ್ಯಭಿಪ್ರಾಯಂ ನ ವಿದ್ಮಃ ।**

**ಅನುವಾದ:**

ಅಥವಾ ವಿವೇಕಿಗಳ ಪ್ರವೃತ್ತಿಯು ಅನರ್ಥಸಂಶಯದ ಅಭಾವನಿಶ್ಚಯದಿಂದ ವ್ಯಾಪ್ತವಾಗಿರುತ್ತದೆ. ಈ ಪದ್ಯದಲ್ಲಿರುವ ವಿಧಿವಾಕ್ಯದಿಂದ ಣಿಚ್‌ಪ್ರತ್ಯಯಾರ್ಥವನ್ನು ಆಲೋಚಿಸಿದಾಗ ಅನರ್ಥಸಂಶಯವೇ ನಿಶ್ಚಿತವಾಗಿ ತಿಳಿದುಬರುತ್ತದೆ. ಅದು ಪ್ರವೃತ್ತಿಗೆ ವಿರುದ್ಧ. ಇಲ್ಲಿ ತಂಪು ಸ್ಪರ್ಶವಿಲ್ಲ, ಅಗ್ನಿ ಇರುವುದರಿಂದ ಎಂಬಲ್ಲಿ ವ್ಯಾಪಕ ವಿರುದ್ಧೋಪಲಬ್ಧಿಯಿಂದ ತುಷಾರ (ತಣ್ಣನೆಯ, ಅಥವಾ ಹಿಮದ) ಸ್ಪರ್ಶದ ಅಭಾವ ಅವಗತವಾಗುತ್ತದೆಯೋ ಹಾಗೆ.

ಅಲ್ಲದೆ ಔಚಿತ್ಯವನ್ನೇ ಆಶ್ರಯಿಸುವ ಕವಿಯು ಅತ್ಯಂತ ಕ್ರೂರವಾದ ಕರಡಿ ಇತ್ಯಾದಿ ಪ್ರಾಣಿಗಳನ್ನು ಬಿಟ್ಟು, ಆನೆಯ ಕುಂಭಸ್ಥಳವನ್ನು ಸೀಳುವ ಹವ್ಯಾಸವನ್ನುಳ್ಳ ಸಿಂಹವು ಕೇವಲ ನಾಯಿಯೊಂದನ್ನು ಕೊಂದಿತು ಎಂದು ಏಕೆ ಹೇಳಿದನೋ? ದೀರ್ಘಕಾಲ ಚಿಂತಿಸಿದರೂ ಅವನ ಅಭಿಪ್ರಾಯವು ನಮಗೆ ತಿಳಿಯುತ್ತಿಲ್ಲ.

**ನ ಹಿ ದೃಪ್ತತಯಾ ಯತ್ಕಿಂಚನಕಾರಿಣೋಽನ್ಯಸ್ಯಾಪಿ ಸ್ವಜಾತಿಸಮುಚಿತಂ ಚರಿತಮಪಹಾಯ ಅಪ್ರಸಿದ್ಧಮೇವ ಕಿಮಪಿ ರಸಭಂಗಭೀರವಃ ಕವಯೋ ವರ್ಣಯಿತುಮ್ ಆದ್ರಿಯಂತೇ, ಕಿಮುತ ಜಗದ್ವಿದಿತವ್ಯಾಪಾರಸ್ಯ ಕೇಸರಿಣಃ? ಅನೌಚಿತ್ಯನಿಬಂಧೋ ಹಿ ಪರಂ ರಸಭಂಗಕಾರಣಂ ಕವಯೋ ವದಂತಿ । ಯತ್ ಸ ಏವಾಹ–**

**ಅನೌಚಿತ್ಯಾದ್ ಋತೇ ನಾನ್ಯದ್ರಸಭಂಗಸ್ಯ ಕಾರಣಮ್ ।**
**ಪ್ರಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ ಪರಾ ॥ ಇತಿ ।**
**ತಸ್ಮಾದ್ "ದರಿಅರಿಕ್ಕೇಣ" ಇತಿ ಅತ್ರ ಪಾಠಃ ಶ್ರೇಯಾನ್ ।**
**ಅತ್ತಾ ಏತ್ಥ ಣಿಮಜ್ಜಇ ಏತ್ಥ ಅಹಂ ದಿಅಸಏ ಪಲೋಏಹಿ ।**
**ಮಾಪಹಿಅ! ರತಿಅಂಧಅ ಸೇಜ್ಜಾಏ ಮಹ ಣಿಮಜ್ಜಹಿಸಿ ॥**
**(ಆರ್ಯಾ ಅತ್ರ ನಿಮಜ್ಜತಿ ಅತ್ರಾಹಂ ದಿವಸಕೇ ಪ್ರಲೋಕಯ ।**
**ಮಾ ಪಥಿಕ ರಾತ್ರ್ಯಂಧ ಶಯ್ಯಾಯಾಂ ಮಮ ನಿಮಾಂಕ್ಷೀಃ)**

**ಅನುವಾದ:**

ಮದ ಬಂದಿದ್ದಾಗ ಏನೇನನ್ನೋ ಮಾಡುವ ಬೇರೆ ಪ್ರಾಣಿಗೂ ಅದರ ಜಾತಿಗೆ ಯೋಗ್ಯವಾದ ಕಾರ್ಯವನ್ನು ಬಿಟ್ಟು ಅಪ್ರಸಿದ್ಧವಾದ ಕೆಲಸವನ್ನು ವರ್ಣಿಸಲು ರಸಭಂಗಕ್ಕೆ ಹೆದರುವ ಕವಿಗಳು ಎಂದೂ ಇಷ್ಟಪಡುವುದಿಲ್ಲ. ಹೀಗಿರುವಾಗ ಪ್ರಪಂಚಪ್ರಖ್ಯಾತಕ್ರಿಯೆಯನ್ನುಳ್ಳ ಸಿಂಹದ ಬಗೆಗೆ ಹೇಳುವುದೇನಿದೆ?

ಅತಿಮುಖ್ಯವಾದ ರಸಭಂಗ ಕಾರಣವು ಅನೌಚಿತ್ಯದ ನಿಬಂಧನವೇ ಎಂದು ಕವಿಗಳು ಹೇಳುತ್ತಾರೆ. ಆನಂದವರ್ಧನನೇ ಹೇಳಿದ್ದಾನೆ–

"ಅನೌಚಿತ್ಯವನ್ನು ಬಿಟ್ಟರೆ ರಸಭಂಗಕ್ಕೆ ಬೇರೆ ಕಾರಣವಿಲ್ಲ. ಪ್ರಸಿದ್ಧವಾದ ಔಚಿತ್ಯವನ್ನು ಅನುಸರಿಸಿ ಸಾಹಿತ್ಯರಚನೆಯನ್ನು ಮಾಡುವುದೇ ರಸದ ಪರಮ ರಹಸ್ಯ."

ಆದ್ದರಿಂದ ಮೇಲೆ ಉದಾಹರಿಸಿದ ಪದ್ಯದಲ್ಲಿ ದರಿಅರಿಕ್ಕೇಣ (ಗುಹೆಯ ಕರಡಿಯಿಂದ) ಎಂಬ ಪಾಠವು ಲೇಸು.

"ಇಲ್ಲಿ ಅತ್ತೆ ಮಲಗಿರುತ್ತಾಳೆ, ಇಲ್ಲಿ ನಾನು. ಇರುಳುಕುರುಡ ದಾರಿಹೋಕನೆ, ಹಗಲಿನಲ್ಲೇ ಸರಿಯಾಗಿ ನೋಡಿಕೋ. ರಾತ್ರಿ ನನ್ನ ಹಾಸಿಗೆಯಲ್ಲಿ ಬಂದು ಧುಮುಕಬೇಡ."

**ಅತ್ರ ಹಿ ಚಲಿತಚಾರಿತ್ರಮುದ್ರಾ ಪ್ರೋಷಿತಪಥಿಕಯುವತಿಃ ಕಂಚಿದ್ ಯುವಾನಂ ವಾಸರಾವಸಾನೇ ವಸತಿಂ ಪ್ರಾರ್ಥಯಮಾನಮ್ ಉದ್ದಿಶ್ಯ ಉತ್ಪನ್ನಮನ್ಮಥವ್ಯಥಾವೇಶಾ ಶ್ವಶ್ರೂಸನ್ನಿಧೌ ತಸ್ಮೈ ಶಯನಸ್ಥಾನಂ ವಿವಿಕ್ತಮುಪದಿಶ್ಯ ನಿಶಾಂಧತಾಧ್ಯಾರೋಪೇಣ ಸ್ವಶಯನಸಂಸ್ಪರ್ಶ– ಪ್ರತಿಷೇಧಮುಖೇನ ಶ್ವಶ್ರೂಶಯ್ಯಾಸನ್ನಿವೇಶದೇಶಂ ದರ್ಶಯಂತೀ ರಾತ್ರಾವತ್ರ ಮದೀಯ ಏವ ಶಯನೀಯೇ ತ್ವಯಾ ನಿಭೃತಮುಪಸ್ಥಾತವ್ಯಮಿತಿ ತೈಸ್ತೈರಾಕಾರೈಃ ಪ್ರತಿಷೇಧಮುಖೇನ ಸ್ವಾಭಿಪ್ರೇತಮ್ ಅರ್ಥಮ್ ಅಸ್ಮೈ ನಿವೇದಯತೇ । ತತ್ರ ಚ ಕೇಚಿದವಿದಿತಸ್ವರೂಪಸ್ಯೈವ**

**ಪಥಿಕಸ್ಯಾಕಸ್ಮಾನ್ನಿಶಾಂಧತೋಪಕ್ಷೇಪಃ ಸ್ವಶಯನೀಯೋದ್ದೇಶದರ್ಶನಂ ಚೇತಿ ಉಭಯಮವ್ಯಭಿಚಾರಿ ಸಾಧನಮಿತಿ ಮನ್ಯಂತೇ ।**

**ಅನುವಾದ:**

ಇಲ್ಲೊಬ್ಬಳು ಚಾರಿತ್ರವನ್ನು ಕಳೆದುಕೊಂಡಿರುವ ಹೆಣ್ಣು ಅವಳ ಗಂಡನು ಪ್ರವಾಸಕ್ಕಾಗಿ ದೂರದೇಶಕ್ಕೆ ಹೋಗಿದ್ದಾಗ, ಸಂಜೆಯ ವೇಳೆಯಲ್ಲಿ ವಾಸಸ್ಥಳವನ್ನು ಯಾಚಿಸುತ್ತಿದ್ದ ಯಾವನೋ ಯುವಕನನ್ನು ಉದ್ದೇಶಿಸಿ ಈ ಮಾತನ್ನು ಹೇಳುತ್ತಾಳೆ. ಅವನಲ್ಲಿ ಅವಳಿಗೆ ಕಾಮಾಸಕ್ತಿಯು ಕೆರಳಿದೆ. ಅತ್ತೆಯ ಉಪಸ್ಥಿತಿಯಲ್ಲಿ ಅವನಿಗೆ ಪ್ರತ್ಯೇಕವಾಗಿ ಅವಳ ಹಾಸಿಗೆಯನ್ನು ಹಾಸುವ ಜಾಗವನ್ನು ತನ್ನ ಹಾಸಿಗೆಯನ್ನು ಮುಟ್ಟುವುದನ್ನು ನಿಷೇಧಿಸುವುದರ ಮೂಲಕ ತೋರಿಸಿ 'ನನ್ನ ಹಾಸಿಗೆಯಲ್ಲೇ ನೀನು ಗುಟ್ಟಾಗಿ ಮಲಗಿಕೊಳ್ಳಬೇಕು' ಎಂಬ ತನಗೆ ಇಷ್ಟವಾದ ವಿಷಯವನ್ನು ಪ್ರತಿಷೇಧದ್ವಾರಾ ಅವನಿಗೆ ತಿಳಿಸುತ್ತಾಳೆ. ಅದರಲ್ಲಿ ಕೆಲವರು ಅವಳಿಗೆ ಪಥಿಕನ ವಾಸ್ತವ ಸ್ವರೂಪದ ಅರಿವು ಇಲ್ಲದೆ ಇದ್ದರೂ ಇದ್ದಕ್ಕಿದ್ದಂತೆ ಅವನ ಇರುಳುಕುರುಡುತನವನ್ನು ಹೇಳಿರುವುದು ಮತ್ತು ತನ್ನ ಹಾಸಿಗೆಯ ಜಾಗವನ್ನು ತೋರಿಸಿರುವುದು ಎಂಬ ಎರಡೂ ಅವ್ಯಭಿಚಾರಿ ಸಾಧನ ಎಂದು ಹೇಳುತ್ತಾರೆ.

**ತದ್ವಶಾದ್ಧಿ ತಸ್ಯ ನಾಯಿಕಾಶಯನೋದ್ದೇಶೋಪಸರ್ಪಣಮಪಿ ಕಲ್ಪನೀಯಂ ಸ್ಯಾತ್ । ಶ್ವಶ್ರ್ವಾಶ್ಚ ತಸ್ಯಾವಿನಯದೋಷಾಶಂಕಾನಿರಾಸ ಇತ್ಯುಭಯಮ್ ಅಭಿಮತಂ ಸಿಧ್ಯತಿ ।**

**ಯತ್ತ್ವತ್ರ ಶ್ವಶ್ರೂಶಯನದರ್ಶನಂ ತತ್ತದಾಶಂಕಾನಿರಾಸಾರ್ಥಮೇವ, ನ ಪಥಿಕ-ಪ್ರವರ್ತನಾಂಗತಾಂ ಗಚ್ಛತಿ । ಆತ್ಮನ ಏವ ಶಯನೋದ್ದೇಶದರ್ಶನೇ ಹಿ ತಸ್ಯಾಃ ಶಂಕಾ ಸ್ಯಾತ್ । ಯದ್ವಾ ಶಯನಯೋಃ ವಿಪ್ರಕರ್ಷಪ್ರಕಾಶನಪರಂ ತತ್, ಇತಿ ತತ್ಪ್ರವೃತ್ತ್ಯಂಗಮ್ ಏವ ತದಿತಿ ಚ । ತಚ್ಚಾಯುಕ್ತಮ್ । ಅತ್ರ ಹಿ ಶ್ವಶ್ರೂಃ ಪ್ರತ್ಯಾಯ್ಯಾ ವರ್ತತೇ, ನಾನ್ಯಃ । ನ ಚಾಯಂ ಚಿರಪರಿಶೀಲನಾವಸೇಯೋ ನಿಶಾಂಧತಾಖ್ಯೋ ಹೇತುಃ ತಾಂ ಪ್ರತಿ ಸಿದ್ಧಃ । ತಥಾವಿಧಶ್ಚೋಪಾದೀಯಮಾನಃ ಪ್ರತ್ಯುತ ತಸ್ಯಾಃ ಶಂಕಾಮ್ ಉಪಜನಯೇತ್ ।**

**ಅನುವಾದ:**

ಅದರ ಆಧಾರದಿಂದಲೇ ಆ ಪಥಿಕನು ನಾಯಿಕೆಯ ಶಯನದ ಜಾಗವನ್ನು ತಲುಪುವನು ಎಂದೂ ಕಲ್ಪಿಸಬೇಕು. ಅತ್ತೆಗೂ ಅವನ ಅವಿನಯ ದೋಷದ ಶಂಕೆಯ ಪರಿಹಾರವಾಗುತ್ತದೆ– ಹೀಗೆ (ನಾಯಿಕೆಗೆ) ಅಭಿಮತವಾದ ಎರಡೂ ಸಿದ್ಧವಾಗುತ್ತವೆ.

ಇಲ್ಲಿ ಅತ್ತೆಯ ಹಾಸಿಗೆಯ ಜಾಗವನ್ನು ತೋರಿಸಿರುವುದು ಅವಳಿಗೆ ಉಂಟಾಗಬಹುದಾದ ಆಶಂಕೆಯ ನಿವಾರಣೆಗೋಸ್ಕರವೇ. ಅದು ಪಥಿಕನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡುವುದರಲ್ಲಿ ಅಂಗವಾಗದು. ನಾಯಿಕೆಯು ತಾನು

ಮಲಗುವ ಜಾಗವನ್ನು ಮಾತ್ರ ಪಥಿಕನಿಗೆ ತೋರಿಸಿದ್ದರೆ ಅತ್ತೆಗೆ ಸಂಶಯ ಹುಟ್ಟುತ್ತಿತ್ತು.

ಅಥವಾ ಅತ್ತೆಯ ಹಾಸಿಗೆಯ ಜಾಗವನ್ನು ತೋರಿಸಿರುವುದರ ಉದ್ದೇಶವು ಆ ಎರಡು ಜಾಗಗಳಿಗಿರುವ ದೂರವನ್ನು ತೋರಿಸುವುದಕ್ಕಾಗಿ, ಆದ್ದರಿಂದ ಅದೂ ಪಥಿಕನ ಪ್ರವೃತ್ತಿಗೆ ಅಂಗವೇ.

ಇದು ಅಯುಕ್ತ. ಇಲ್ಲಿ ನಂಬಿಸಬೇಕಾಗಿರುವುದು ಅತ್ತೆಯನ್ನು ಮಾತ್ರ, ಬೇರೆ ಯಾರನ್ನೂ ಅಲ್ಲ. ಇರುಳುಕುರುಡು ಎನ್ನುವ ಕಾರಣವು ದೀರ್ಘಕಾಲದ ಪರಿಚಯದಿಂದ ತಿಳಿದುಬರುತ್ತದೆ. ಅದು ಅತ್ತೆಗೆ ಸಿದ್ಧವಾದ ಹೇತುವೇನಲ್ಲ. ಅಂಥ ಕಾರಣವನ್ನು (ಸೊಸೆ) ಹೇಳಿದರೆ ಅತ್ತೆಗೆ ಸಂಶಯವನ್ನೇ ಉಂಟುಮಾಡಬಹುದು.

**ಉಭಯಾರ್ಥಕಾರೀ ಹ್ಯತ್ರ ಹೇತುರುಪಾದೇಯೋ ಭವತಿ, ಯೋ ನ ಶ್ವಶ್ವಾಃ ಶಂಕಾಮಾಧತ್ತೇ ಪಥಿಕಂ ಚ ಪ್ರವರ್ತಯತಿ । ನ ಚಾಯಂ ನಿಶಾಂಧತಾಖ್ಯೋ ಹೇತುಸ್ತಥಾ ಇತಿ ವ್ಯರ್ಥಸ್ತದುಪನ್ಯಾಸಃ । ಕಿಂಚಾಯಂ ನಿಶಾಂಧತೋಪಕ್ಷೇಪಃ ಪಕ್ಷದ್ವಯೇಽಪ್ಯಪ್ರಯೋಜಕಃ ಏವ, ಶಯನಸನ್ನಿವೇಶದರ್ಶನಸಂಸ್ಕಾರಾದೇವ ತದುಭಯಸಿದ್ಧೇಃ ।**

**ಯೇ ತು ಶಯನೀಯಯೋರ್ವಿಪ್ರಕರ್ಷದರ್ಶನೇನ ಅನ್ಯೋನ್ಯದರ್ಶನಸ್ಯ ಅಸ್ಫುಟತ್ವಮನುಮೀಯಮಾನಂ ಹೇತುತಯಾ ಮನ್ಯಂತೇ, ಅತ ಏವ ಚ 'ಅತ್ತಾ ಏತ್ಥ ಣಿಮಜ್ಜಇ' ಇತಿ ಪಠಂತಿ, ತೇಽಪ್ಯಯುಕ್ತವಾದಿನಃ । ಅನೈಕಾಂತಿಕತ್ವಾತ್ । ದೃಶ್ಯಂತೇ ಹ್ಯಚಲಿತಚಾರಿತ್ರಾಣಾಮಪಿ ಯುವತೀನಾಮ್ ಏವಂವಿಧಾಃ ಸದ್ಭಾವಗರ್ಭಾಃ ಭಣಿತಯಃ ।**

**ಅನುವಾದ:**

ಇಲ್ಲಿ ಉಪಾತ್ತವಾಗುವ ಸಾಧನಕ್ಕೆ ಎರಡು ಪ್ರಯೋಜನಗಳಿರಬೇಕು. ಅದು ಅತ್ತೆಯ ಮನಸ್ಸಿನಲ್ಲಿ ಸಂಶಯವನ್ನುಂಟುಮಾಡಬಾರದು ಮತ್ತು ಪಥಿಕನನ್ನು ಕಾರ್ಯದಲ್ಲಿ ತೊಡಗಿಸಬೇಕು. ಈ ಇರುಳುಕುರುಡು ಎಂಬ ಸಾಧನವು ಹಾಗೆ ಮಾಡಲು ಅಸಮರ್ಥ. ಆದ್ದರಿಂದ ಅದನ್ನು ಹೇಳಿರುವುದು ವ್ಯರ್ಥ. ಎರಡು ಪಕ್ಷಗಳಲ್ಲೂ ಅದನ್ನು ಹೇಳಿರುವುದು ನಿಷ್ಪ್ರಯೋಜನ, ಏಕೆಂದರೆ ಹಾಸಿಗೆಗಳ ಜಾಗವನ್ನು ತೋರಿಸಿರುವುದರ ಸಂಸ್ಕಾರದಿಂದಲೇ ಎರಡು ಪ್ರಯೋಜನಗಳೂ ಸಿದ್ಧವಾಗುತ್ತವೆ.

ಎರಡು ಹಾಸಿಗೆಗಳಿಗೆ ಇರುವ ದೂರವನ್ನು ತೋರಿಸಿರುವುದರಿಂದ ಒಬ್ಬರು ಇನ್ನೊಬ್ಬರಿಗೆ ಕಾಣಿಸುವುದು ಅಸ್ಪಷ್ಟವಾಗಿ ಮಾತ್ರ ಎಂದು ಅನುಮಿತಿಯಿಂದ ಬರುವ ತಿಳಿವು ಕಾರಣವಾಗುತ್ತದೆ ಎಂದು ಕೆಲವರು ಭಾವಿಸುತ್ತಾರೆ. ಆದ್ದರಿಂದಲೇ ಅವರು 'ಅತ್ತಾ ಏತ್ಥ ಣಿ ಮಜ್ಜಇ' ಎಂಬ ಪಾಠವನ್ನಿಟ್ಟುಕೊಂಡಿದ್ದಾರೆ. ಅವರೂ ಯುಕ್ತವಾದಿಗಳಲ್ಲ. ಏಕೆಂದರೆ ಶುದ್ಧಚಾರಿತ್ರವನ್ನುಳ್ಳ ಯುವತಿಯರೂ ಒಳ್ಳೆಯ

ಭಾವನೆಯನ್ನು ಇಟ್ಟುಕೊಂಡು ಇಂಥ ಮಾತುಗಳನ್ನು ಆಡುವರಾದುದರಿಂದ ಈ ಹೇತುವು ಅನೈಕಾಂತಿಕವಾಗಿರುತ್ತದೆ. (ಹಾಗೆ ಮಾತನಾಡಿದವರು ಚಲಿತಚಾರಿತ್ರರು, ಅವರ ಮಾತಿಗೆ ಅನ್ಯೈತಿಕ ಅರ್ಥವಿದೆ ಎಂಬ ವ್ಯಾಪ್ತಿ ಇಲ್ಲ.)

**ಆಕಾರವಿಶೇಷಾಣಾಂ ಹೇತುತ್ವಪರಿಕಲ್ಪನಮುಪಹಾಸಾಯೈವ, ತೇಷಾಂ ವಾಚ್ಯತ್ವಾಭಾವಾತ್, ವಾಚ್ಯಸ್ಯೈವ ವ್ಯಂಜಕತ್ವೇನ ಪ್ರಕೃತತ್ವಾತ್ । ಕಿಂಚಾತ್ರ ನಿರೂಪ್ಯಮಾಣೋ ಹೇತುರೇವ ನ ಲಭ್ಯತೇ। ಸ ಹಿ ವಿಧೇಯಾನುಗುಣೋ ವಾ ಸ್ಯಾತ್, ಪ್ರತಿಷೇಧ್ಯಾನುಗುಣ ಉಭಯಾನುಗುಣೋ ವಾ? ತತ್ರಾದ್ಯಃ ಶ್ವಶ್ವಾಃ ಶಂಕಾಮೇವ ಜನಯೇತ್, ಅಸಿದ್ಧತ್ವಾಚ್ಚಾಕ್ಷುಷತ್ವಾದಿವತ್ । ದ್ವಿತೀಯೋ ನ ವಿವಕ್ಷಿತಾರ್ಥಸಿದ್ಧಿಹೇತುರ್ವಿರುದ್ಧತ್ವಾತ್, ಕೃತಕತ್ವಮಿವ ನಿತ್ಯತ್ವೇ । ತೃತೀಯಸ್ತು ಸಂದೇಹಮೇವ ಜನಯತಿ, ಅನೈಕಾಂತಿಕತ್ವಾತ್, ಪ್ರಮೇಯತ್ವಾದಿವದಿತಿ ।**

**ಅನುವಾದ:**

(ಯುವತಿ ಮುಂತಾದವರ) ಆಕಾರವಿಶೇಷಗಳು (ಅಂಥ ತೀರ್ಮಾನಕ್ಕೆ) ಕಾರಣವಾಗುತ್ತವೆ ಎಂಬ ಪರಿಕಲ್ಪನೆಯು ಉಪಹಾಸದ ಪ್ರಯೋಜನಕ್ಕಾಗಿ ಮಾತ್ರ. ಏಕೆಂದರೆ ಆಕಾರವಿಶೇಷಗಳು ವಾಚ್ಯವಲ್ಲ. ಪ್ರಕೃತದಲ್ಲಿ ವ್ಯಂಜಕತ್ವವನ್ನು ಹೇಳುತ್ತಿರುವುದು ವಾಚ್ಯಾರ್ಥಕ್ಕೆ ಮಾತ್ರ. ಮತ್ತು ಇಲ್ಲಿ ಎಷ್ಟು ಆಲೋಚಿಸಿದರೂ ಹೇತು ಎನಿಸಿಕೊಳ್ಳಲು ಅನುಕೂಲವಾದುದು ಸಿಕ್ಕುವುದೇ ಇಲ್ಲ. ಆ ಹೇತುವು ವಿಧೇಯಾನುಗುಣವೋ, ಪ್ರತಿಷೇಧ್ಯಕ್ಕೆ ಅನುಗುಣವೋ ಅಥವಾ (ವಿಧೇಯ+ಪ್ರತಿಷೇಧ್ಯ ಎಂಬ) ಎರಡಕ್ಕೂ ಅನುಗುಣವೋ?

ಮೊದಲನೆಯದು (ಪಥಿಕನು ತನ್ನ ಹಾಸಿಗೆಗೆ ಬರಲಿ ಎಂಬ ವಿಧೇಯಕ್ಕೆ ಅನುಗುಣವಾಗಿರುವುದು) ಅತ್ತೆಯ ಮನಸ್ಸಿನಲ್ಲಿ ಸಂಶಯವನ್ನೇ ಹುಟ್ಟಿಸುತ್ತದೆ. ಏಕೆಂದರೆ (ಶಬ್ದತ್ವದಿಂದ) ಚಾಕ್ಷುಷತ್ವವನ್ನು ಸಾಧಿಸುವ ಅನುಮಾನದಲ್ಲಿದ್ದಂತೆ ಹೇತು ಅಸಿದ್ಧ. ಎರಡನೆಯ ಪಕ್ಷದಲ್ಲಿ ಹೇತುವು ಅಪೇಕ್ಷಿತಾರ್ಥವನ್ನು ಸಾಧಿಸಲಾರದು, ಏಕೆಂದರೆ ನಿತ್ಯತ್ವವನ್ನು ಸಾಧಿಸುವಾಗ ಕೃತಕತ್ವ ಎಂಬ ಹೇತುವು ಹೇಗೆ ವಿರುದ್ಧವೋ ಹಾಗೆ ಪ್ರತಿಷೇಧಾನುಗುಣವಾದುದು ವಿಧಿಗೆ ವಿರುದ್ಧ. ಮೂರನೆಯದು ಪ್ರಮೇಯತ್ವಾದಿ ಹೇತುವಿನಂತೆ ಅನೈಕಾಂತಿಕವಾಗಿ ಸಂದೇಹವನ್ನೇ ಹುಟ್ಟಿಸುತ್ತದೆ.

**ಯದಾಹುಃ –**

**ನಾಸಿದ್ಧೋ ಭಾವಧರ್ಮೋಽಸ್ತಿ ವ್ಯಭಿಚಾರ್ಯುಭಯಾಶ್ರಯಃ ।**
**ಧರ್ಮೋ ವಿರುದ್ಧೋ ಭಾವಸ್ಯ ಸಾ ಸತ್ತಾ ಸಾಧ್ಯತೇ ಕಥಮ್ ॥**

**ಇತಿ । ಅಪಿ ಚ ತತ್ರ ಯಥಾ ಆದ್ಯ ಉದಾಹರಣೇ ಭ್ರಮಣವಿಧಿಹೇತುರೇವ ನಿರೂಪ್ಯಮಾಣಃ ಪ್ರತಿಷೇಧೇ ಪರ್ಯವಸ್ಯತಿ, ನ ತಥೇಹ ಪ್ರತಿಷೇಧಹೇತುರೇವ ವಿಧಾವಿತಿ ಕುತೋ ವಿಧಿರೂಪಾ–ರ್ಥಾಂತರಪ್ರತೀತಿಸಿದ್ಧಿಃ? ತಸ್ಮಾದ್ವಿಧೇಯಸ್ಯಾರ್ಥಾಂತರಸ್ಯ ನಿಬಂಧನಾಭಾವಾತ್ ಪ್ರತೀತಿರೇವ ನಾಸ್ತೀತಿ ಕುತಸ್ತಸ್ಯ ವ್ಯಂಗ್ಯತ್ವಮ್? ಇತಿ ಅಯುಕ್ತಮೇವೇದಮುದಾಹರಣಮ್ ।**

**ಅನುವಾದ:**

ಪ್ರಾಚೀನರೂ ಹೇಳಿದ್ದಾರೆ– ಅಸಿದ್ಧವಾದ ಪದಾರ್ಥವು ಸಾಧ್ಯದ ಹೇತುವಾಗಲಾರದು, ಉಭಯಾಶ್ರಯವಾದುದೂ ವ್ಯಭಿಚಾರಿಯೂ ಆದುದು ಸಾಧ್ಯವನ್ನು ಸಾಧಿಸಲಾರದು. ಸಾಧ್ಯಕ್ಕೆ ವಿರುದ್ಧವಾದ ಹೇತುವೂ ಹೇಗೆ ಸಾಧ್ಯವನ್ನು ಸಾಧಿಸುವುದು? ಹೀಗಿರಲು ಸಾಧ್ಯದ ಅಸ್ತಿತ್ವವು ಹೇಗೆ ಸಿದ್ಧವಾಗುವುದು?

ಮೊದನೆಯ (ಭಮ ಧಮ್ಮಿಅ) ಉದಾಹರಣೆಯಲ್ಲಿ ಭ್ರಮಣವಿಧಿಯ ಹೇತುವೇ ಆಲೋಚಿಸಲ್ಪಟ್ಟಾಗ ಭ್ರಮಣದ ಪ್ರತಿಷೇಧದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಹಾಗೆ ಈ (ಅತ್ತಾ ಏತ್ಥ.....) ಉದಾಹರಣೆಯಲ್ಲಿ ಪ್ರತಿಷೇಧದ ಹೇತುವು ವಿಧಿಯಲ್ಲಿ ಪರ್ಯವಸಾನವನ್ನು ಹೊಂದುವುದಿಲ್ಲ. ಆದ್ದರಿಂದ ವಿಧಿರೂಪವಾದ ಇನ್ನೊಂದು ಅರ್ಥದ ಪ್ರತೀತಿಯೇ ಸಿದ್ಧವಾಗುವುದಿಲ್ಲ. ಹೀಗಿರುವಾಗ ಆ ಪ್ರತೀತಿಗೆ ವ್ಯಂಗ್ಯತ್ವವು ಎಲ್ಲಿಂದ ಬರಬೇಕು? ಆದ್ದರಿಂದ ಈ ಉದಾಹರಣೆಯೇ ಅನುಚಿತ.

**ವಚ್ಚ ಮಹವ್ವಿವ ಏಕ್ಕಾಏ ಹೋಂತು ಣೀಸಾಸರೋಇಅವ್ವಾಇ ।**
**ಮಾ ತುಜ್ಝ ವಿ ತೀಏ ವಿಣ ದಕ್ಖಿಣ್ಣಹಅಸ್ಸ ಜಾಅಂತು ॥**
**(ವ್ರಜ ಮಮೈವೈಕಸ್ಯಾ ಭವಂತು ನಿಃಶ್ವಾಸರೋದಿತವ್ಯಾನಿ ।**
**ಮಾ ತವಾಪಿ ತಯಾ ವಿನಾ ದಾಕ್ಷಿಣ್ಯಹತಸ್ಯ ಜಾಯಂತಾಮ್ ॥)**

**ಅತ್ರ ಕಯಾಚಿತ್ ಖಂಡಿತಯಾ ಅಂತರ್ಜ್ವಲಿತೇರ್ಷ್ಯಾಪ್ರಕೋಪಯಾ ಸಾವಹಿತ್ಥಂ ಸೋಲ್ಲುಂಠನಂ ಸಪ್ರಣಯೌಚಿತ್ಯಂ ಚ ಯಃ ಪ್ರಿಯಂ ಪ್ರತಿ ಭೇದೋ ವಿಹಿತಸ್ತತ್ರ 'ತಸ್ಯಾಮೇವ ಭವಾನ್ ನಿರ್ವ್ಯಾಜಮನುರಕ್ತಹೃದಯೋ, ಮಯಿ ತು ಕಿತವ, ತವ ಕೃತಕೋಪಚಾರ–ವಚನರಚನಾಮಾತ್ರಮೇತದಿತಿ ನಾಯಕಸ್ಯ ಅನ್ಯತ್ರ ಅನುರಾಗಾತಿಶಯಃ ಸಾಧ್ಯಃ ।**

**ಅನುವಾದ:**

"ಹೋಗು, ನಿಟ್ಟುಸಿರು ಮತ್ತು ಅಳು ನನಗೊಬ್ಬಳಿಗೇ ಇರಲಿ. ದಾಕ್ಷಿಣ್ಯಕ್ಕೆ ಒಳಗಾದ ನಿನಗೆ ಅವಳಿಲ್ಲದೆ ಅವೆಲ್ಲ ಆಗುವುದು ಬೇಡ."

ಈ ಪದ್ಯದಲ್ಲಿ ಒಬ್ಬ 'ಖಂಡಿತಾ' ನಾಯಿಕೆಗೆ ಹೃದಯದಲ್ಲಿ ಈರ್ಷ್ಯೆ ಹೊತ್ತಿ ಉರಿಯುತ್ತಿದೆ, ಅವಳು ತನ್ನ ಪ್ರಿಯನಿಗೆ ತನ್ನ ಭಾವನೆಯನ್ನು ಮುಚ್ಚಿಟ್ಟಂತೆ ಮಾಡಿ ಮೂದಲಿಕೆಯೊಡನೆ ಮತ್ತು ಪ್ರಣಯದ ಔಚಿತ್ಯವನ್ನು ಮೀರದಂತೆ ಭೇದೋಪಾಯವನ್ನು ಪ್ರಯೋಗಿಸುತ್ತಿದ್ದಾಳೆ. ಅವಳ ಮಾತಿನಲ್ಲಿ 'ಆ ಇನ್ನೊಬ್ಬಳಲ್ಲೇ ನಿನ್ನ ಮನಸ್ಸು ಪೂರ್ಣವಾಗಿ ಅನುರಕ್ತವಾಗಿದೆ. ಧೂರ್ತ, ನನ್ನಲ್ಲಿ ನಿನ್ನದು ಕೇವಲ ಕೃತ್ರಿಮವಾದ ಉಪಚಾರದ ಮಾತು ಮಾತ್ರ' ಎಂದು ಇನ್ನೊಬ್ಬ ಹೆಂಗಸಿನಲ್ಲಿ ನಾಯಕನ ಅಧಿಕಪ್ರೀತಿಯು ಸಾಧ್ಯಾಂಶವಾಗಿದೆ.

**ತತ್ರ ಚ 'ಗಚ್ಛ, ತ್ವದ್ವಿರಹವಿಹಿತಾನಿ ನಿಃಶ್ವಾಸರೋದಿತವ್ಯಾನಿ ಮಮೈವ ಏಕಸ್ಯಾ ಭವಂತು, ಮಾ ತವಾಪಿ ದಾಕ್ಷಿಣ್ಯ ಮಾತ್ರವಿವಶಸ್ಯ ತಯಾ ವಿನಾ ತಾನಿ ಭೂವನ್ ಇತಿ ತತ್ರ ತಸ್ಯ ಪ್ರಸ್ಥಾನಾನುಮತಿರ್ಹೇತುಃ । ಪ್ರಸ್ಥಾನೇ ಹಿ ತಸ್ಯ ತದ್ವಿರಹವಿರತಿಃ । ತದ್ವಿರತೌ ಚ ತದ್ಧೇತುಕಾನಾಂ ನಿಃಶ್ವಾಸರೋದನಾದಿದುಃಖಾನಾಮಪಿ ವಿರತಿಃ । ಸ್ನೇಹೋತ್ಕರ್ಷಾನುವಿಧಾಯಿನೋ ಹಿ ಪ್ರಾಣಿನಾಂ ವಿರಹವ್ಯಥಾವೇಶಾ ಭವಂತಿ, ತೇಷಾಂ ತತ್ಕಾರ್ಯತ್ವಾತ್ । ಕಾರ್ಯಕಾರಣ-ಭಾವಶ್ಚೈಷಾಮ್ ಅಧ್ಯಾತ್ಮಪ್ರಮಾಣಸಿದ್ಧಃ । ಧರ್ಮಿಣಿ ಸದ್ಭಾವಸಿದ್ಧಿಶ್ಚಾಸ್ಯ ಹೇತೋಸ್ಸತೋಽಸತ ಏವ ವಾ ಪ್ರತಿಷೇಧಸಾಮರ್ಥ್ಯಾದವಸೀಯತೇ । ಪ್ರಾಪ್ತಿಪೂರ್ವಕಾ ಹಿ ಪ್ರತಿಷೇಧಾ ಭವಂತೀತಿ।**

**ಅನುವಾದ:**

"ಹೋಗು, ನಿನ್ನ ವಿರಹದಿಂದ ಉಂಟಾಗುವ ನಿಟ್ಟುಸಿರು ಮತ್ತು ಅಳು ನನ್ನೊಬ್ಬಳಿಗೇ ಇರಲಿ. ದಾಕ್ಷಿಣ್ಯಮಾತ್ರಕ್ಕೆ ಇಲ್ಲಿರುವ ನಿನಗೆ ಅವಳು ಇಲ್ಲದೆ ಅವು ಆಗದಿರಲಿ" ಎಂದು (ನಾಯಿಕೆಯು ನಾಯಕನಿಗೆ) ನೀಡಿದ ಗಮನಾನುಮತಿಯು ಹೇತು. ಏಕೆಂದರೆ ಅವನು ಅಲ್ಲಿಗೆ ಹೊರಟರೆ ಆ ಇನ್ನೊಬ್ಬಳ ವಿರಹವು ಮುಗಿಯುತ್ತದೆ. ವಿರಹವು ಅಂತ್ಯಗೊಂಡರೆ ಅದರಿಂದ ಉಂಟಾದ ನಿಟ್ಟುಸಿರು, ಅಳು ಮುಂತಾದ ದುಃಖಗಳೂ ಕೊನೆಗೊಳ್ಳುತ್ತವೆ. ಏಕೆಂದರೆ ಪ್ರಾಣಿಗಳ ವಿರಹವ್ಯಥೆ ಅವರ ಸ್ನೇಹಾತಿಶಯವನ್ನು ಅನುಸರಿಸಿ ಬರುತ್ತದೆ. ಏಕೆಂದರೆ ಅವು (ದುಃಖಗಳು) ಅವುಗಳ (ಸ್ನೇಹಾತಿಶಯಗಳ) ಕಾರ್ಯ. ಅವುಗಳ ಕಾರ್ಯಕಾರಣಭಾವವು ಅಧ್ಯಾತ್ಮ ಎಂಬ ಪ್ರಮಾಣದಿಂದ ಸಿದ್ಧವಾಗಿದೆ. ಧರ್ಮಿಯಲ್ಲಿ ಕಾರ್ಯದ ಅಸ್ತಿತ್ವವು ಇರುವ ಅಥವಾ ಇಲ್ಲದ ಹೇತುವಿನ ಪ್ರತಿಷೇಧದ ಸಾಮರ್ಥ್ಯದಿಂದ ನಿಶ್ಚಯಿಸಲ್ಪಡುತ್ತದೆ. ಏಕೆಂದರೆ ಪ್ರತಿಷೇಧವನ್ನು ಮಾಡಬೇಕಾದರೆ ಮೊದಲು ಪ್ರಾಪ್ತಿ ಇರಬೇಕು.

**ತಸ್ಯ ಚ ಸತ್ಯಾಸತ್ಯತ್ವವಿಚಾರೋ ನಿರುಪಯೋಗ ಏವ ।<br>ಪ್ರತೀತಿಮಾತ್ರಪರಮಾರ್ಥತ್ವಾತ್ ಕಾವ್ಯನಾಟ್ಯಾದೀನಾಮಿತಿ<br>ವಿರಹವ್ಯಥಾವಸಿತೋಽನುರಾಗಾತಿಶಯಃ ಕಾಂತಸ್ಯಾನುಮೇಯ<br>ಏವ ಭವತಿ, ನ ವ್ಯಂಗ್ಯ ಇತ್ಯವಸೇಯಮ್ ।<br>ದೇ ಆ ಪಸಿಅ ಣಿಅತ್ತಸು<br>ಮುಹಸಸಿ ಜೋಹ್ಣಾ ವಿಲುತ್ತತಮಣಿವಹೇ ।<br>ಅಹಿಸಾರಿಆಣಂ ವಿಗ್ಘಂ<br>ಕರೇಸಿ ಅಣ್ಣಾಣ ವಿ ಹಆಸೇ ॥<br>(ಪ್ರಾರ್ಥಯೇ ತಾವತ್ ಪ್ರಸೀದ<br>ನಿವರ್ತಸ್ವ ಮುಖಶಶಿಜ್ಯೋತ್ಸ್ನಾವಿಲುಪ್ತತಮೋನಿವಹೇ ।<br>ಅಭಿಸಾರಿಕಾಣಾಂ ವಿಘ್ನಂ<br>ಕರೋಷಿ ಅನ್ಯಾಸಾಮಪಿ ಹತಾಶೇ ॥)**

**ಅನುವಾದ:**

ಆ ಪ್ರತಿಷೇಧದ ಸತ್ಯಾಸತ್ಯತ್ವವಿಚಾರವು ನಿಷ್ಪ್ರಯೋಜನ. ಏಕೆಂದರೆ ಕಾವ್ಯ–ನಾಟ್ಯ ಇತ್ಯಾದಿಗಳ ಪರಮೋದ್ದೇಶವು ಪ್ರತೀತಿಯನ್ನುಂಟುಮಾಡುವುದು ಮಾತ್ರ. ಆದ್ದರಿಂದ ಪ್ರಿಯನ ವಿರಹವ್ಯಥೆಯಲ್ಲಿ ಪರ್ಯವಸಾನವನ್ನು ಹೊಂದುವ ಅನುರಾಗಾತಿಶಯವು ಇಲ್ಲಿ ಅನುಮೇಯವೇ ಆಗಿದೆ, ವ್ಯಂಗ್ಯವಲ್ಲ ಎಂದು ಅರಿತುಕೊಳ್ಳಬೇಕು.

"ಪ್ರಾರ್ಥಿಸುತ್ತೇನೆ, ಪ್ರಸನ್ನಳಾಗು, ಹಿಂದಿರುಗು. ಮುಖಚಂದ್ರನ ಬೆಳದಿಂಗಳಿನಿಂದ ಗಾಡಾಂಧಕಾರವನ್ನು ನೀನು ಲುಪ್ತಗೊಳಿಸುತ್ತಿರುವೆ. ಹತಾಶೆ, ಬೇರೆ ಅಭಿಸಾರಿಕೆಯರಿಗೂ ನೀನು ವಿಘ್ನವನ್ನು ಮಾಡುತ್ತಿರುವೆ."

**ಅತ್ರ ಕಾಚಿತ್ ಕಾಮಪಿ ನಿಶಾಂಧಕಾರಾಭಿಸರಣಸಮುದ್ಯತಾಂ ಸಹಜಸೌಂದರ್ಯಕಾಂತಿಕ–ಮನೀಯಮುಖೀಂ ಸಖೀಮಾಲೋಕ್ಯ ಮುದಿತಾಂತಃಕರಣಾ ಪ್ರಣಯೋಪಾಲಂಭನಿಭೇನ ತಸ್ಯಾಸ್ತಾಂ ರೂಪಸಂಪದಮಿತ್ಥಮುಪವರ್ಣಯತೀತಿ ಚಾಟುಕಾರ್ಥೋಽತ್ರ ಪ್ರತೀಯಮಾನೋಽನುಮೇಯಃ ।**

**ತತ್ರ ಚ ವಾಚ್ಯಸ್ಯ ಪ್ರತಿಷೇಧಾನುಪಪತ್ತಿರೇವ ಹೇತುಃ । ತದನುಪಪತ್ತಿಶ್ಚ ಸಂಬೋಧನ–ದ್ವಾರೇಣೋಪಾತ್ತಸ್ಯ ಮುಖಶಶಿಜ್ಯೋತ್ಸ್ನಾವಿಲುಪ್ತತಮೋನಿವಹತ್ವಸ್ಯ ಹೇತೋರಾರ್ಥಸ್ಯಾಸಿದ್ಧೇಃ, ಪರಮಾರ್ಥತೋ ಮಾನುಷೀಮಾತ್ರಸ್ಯ ತಥಾವಿಧಾಯಾ ವದನೇಂದುಕಾಂತೇರಸಂಭವಾತ್। ಅತಸ್ತಸ್ಯಾಸ್ತದನ್ಯಾಸಾಂ ಚಾಭಿಸಾರಿಕಾಣಾಮ್ ಅಭಿಸರಣವಿಘ್ನ ಏವ ನ ಸಂಭವತೀತಿ ತತ್ಪ್ರತಿಷೇಧಪ್ರಣಯಪ್ರಯಾಸಸ್ಸಖ್ಯಾಸ್ತಸ್ಯಾಮನರ್ಥಕ ಏವೇತಿ ಪ್ರತಿಷೇಧವಿಧೇರನುಪಪತ್ತಿಸಿದ್ಧಿಃ।**

**ಅನುವಾದ:**

ಇಲ್ಲೊಬ್ಬಳು ತನ್ನ ಸಖಿಯು ರಾತ್ರಿಯ ಕತ್ತಲಿನಲ್ಲಿ ಅಭಿಸರಣಕ್ಕೆ ಹೊರಟಿರುವುದನ್ನು ನೋಡುತ್ತಾಳೆ. ಆ ಅಭಿಸಾರಿಕೆ ಸಹಜಸೌಂದರ್ಯ–ಕಾಂತಿಯಿಂದ ತುಂಬಿದ ಮುಖವನ್ನುಳ್ಳವಳು. ಅದರಿಂದ ಇವಳು ಸಂತುಷ್ಟಳಾಗಿದ್ದಾಳೆ. ಪ್ರೀತಿಯಿಂದ ಸಖಿಯನ್ನು ನಿಂದಿಸುವ ನೆವದಿಂದ ಅವಳ ಆ ರೂಪಸಂಪತ್ತನ್ನು ಹೀಗೆ ಬಣ್ಣಿಸುತ್ತಾಳೆ ಎಂದು ಇಲ್ಲಿ ಚಾಟೂಕ್ತಿಯ ಅರ್ಥವು ತೋರುವುದು. ಅದು ಅನುಮೇಯವೇ ಆಗಿದೆ.

ಅದಕ್ಕೆ ಕಾರಣ ವಾಚ್ಯವಾಗಿರುವ ಪ್ರತಿಷೇಧದ ಅನುಪಪತ್ತಿಯೇ ಆಗಿದೆ. ಅದರ ಅನುಪಪತ್ತಿ ಹೇಗೆಂದರೆ: ಸಂಬೋಧನೆಯ ಮೂಲಕ ಇಲ್ಲಿ ಉಪಾತ್ತವಾಗಿರುವ ಅರ್ಥವಾದ ಕಾರಣ ಮುಖಚಂದ್ರನ ಬೆಳದಿಂಗಳಿನಿಂದ ಕತ್ತಲೆಯನ್ನೆಲ್ಲ ತೊಲಗಿಸಿರುವುದು. ಅದು ಅಸಿದ್ಧ. ಏಕೆಂದರೆ ಪರಮಾರ್ಥದಿಂದ ವೀಕ್ಷಿಸಿದಾಗ ಮನುಷ್ಯಮಾತ್ರಳಾದವಳಿಗೆ ಅಂಥ ಮುಖಚಂದ್ರಕಾಂತಿಯು ಅಸಂಭವ.

ಆದ್ದರಿಂದ ಅವಳಿಗಾಗಲಿ ಬೇರೆ ಇತರ ಅಭಿಸಾರಿಕೆಯರಿಗಾಗಲಿ ಅಭಿಸರಣವಿಘ್ನವೇ ಉಂಟಾಗದು. ಹೀಗಿರುವಾಗ ಸಖಿಯ ಅಭಿಸರಣವನ್ನು ಪ್ರತಿಷೇಧಿಸುವ ಇವಳ ಪ್ರೀತಿಪುರಸ್ಸರವಾದ ಪ್ರಯಾಸವು ನಿಷ್ಫಲ. ಹೀಗೆ ಪ್ರತಿಷೇಧದ ಅನುಪಪತ್ತಿಯು ಸಿದ್ಧವಾಗುತ್ತದೆ.

**ಅತೋ ವದನೇಂದುಕಾಂತೇರ್ಯದೇತದ್ ವಿಲುಪ್ತತಮೋನಿವಹತ್ವಮುಪಾತ್ತಂ ತದನ್ಯಥಾ ಅನುಪಪದ್ಯಮಾನಂ ವದನಸ್ಯ ಕಾಂತ್ಯತಿರೇಕಲಕ್ಷಣಮರ್ಥಾಂತರಮೇವ ಚಾಟುರೂಪಮನಯಾ ಭಂಗ್ಯಾನುಮಾಪಯತಿ । ಕಾಂತ್ಯತಿರೇಕಮಂತರೇಣ ನಿರ್ಮೂಲಸ್ಯ ತದತಿಶಯಾರೋಪಸ್ಯ ಲೋಕೈರನಾದೃತತ್ವಾದಿತಿ ತತ್ಪ್ರಮಾಣಸಿದ್ಧ ಏವಾನಯೋಃ ಸಂಬಂಧೋ ಬೋದ್ಧವ್ಯಃ ।**

**ಕಸ್ಸ ವ ಣ ಹೋಇ ರೋಸೋ**
**ದಟ್ಠೂಣ ಪಿಆಏ ಸವ್ವಣಂ ಅಹರಮ್ ।**
**ಸಬ್ಭಮರಪದುಮಾಘಾಇಣಿ**
**ವಾರಿಅವಾಮೇ ಸಹಸು ಏಹ್ಣಿಮ್ ।**
**(ಕಸ್ಯ ವಾ ನ ಭವತಿ ರೋಷೋ ದೃಷ್ಟ್ವಾ ಪ್ರಿಯಾಯಾಃ ಸವ್ರಣಮಧರಮ್ ।**
**ಸಭ್ರಮರಪದ್ಮಾಘ್ರಾಯಿಣಿ ವಾರಿತವಾಮೇ ಸಹಸ್ವೇದಾನೀಮ್ ॥)**

**ಅನುವಾದ:**

ಆದ್ದರಿಂದ ಇಲ್ಲಿ ಮುಖಚಂದ್ರಕಾಂತಿಗೆ ಕತ್ತಲಿನ ಸಮೂಹವನ್ನು ಇಲ್ಲವಾಗಿಸಿದೆ ಎಂಬ ವರ್ಣನೆಯನ್ನು ಮಾಡಿರುವುದು ಬೇರೆ ಯಾವ ರೀತಿಯಲ್ಲೂ ಉಪಪನ್ನವಾಗುವುದಿಲ್ಲ ಎಂಬುದು ಮುಖದ ಕಾಂತಿಯ ಅತಿಶಯ ಎಂಬ ಇನ್ನೊಂದು ಅರ್ಥವನ್ನು ಅನುಮಿತಿಯ ಮೂಲಕ ತಿಳಿಸುತ್ತದೆ.

ಕಾಂತಿಯ ಅತಿಶಯವಿಲ್ಲದಿದ್ದರೆ ಅಂಥ ಅತಿಶಯದ ಆರೋಪವು ನಿರಾಧಾರವಾಗಿ ಜನರಿಂದ ತಿರಸ್ಕರಿಸಲ್ಪಡುತ್ತದೆ. ಹೀಗೆ ಲೋಕವೆಂಬ ಪ್ರಮಾಣದಿಂದಲೇ ಇವೆರಡರ ಸಂಬಂಧವು ಸಿದ್ಧವಾಗುತ್ತದೆ ಎಂದು ತಿಳಿದುಕೊಳ್ಳಬೇಕು.

"ಪ್ರಿಯೆಯ ತುಟಿಗಳು ಗಾಯಗೊಂಡಿರುವುದನ್ನು ನೋಡಿದ ಯಾವನಿಗೆ ತಾನೆ ರೋಷ ಹುಟ್ಟುವುದಿಲ್ಲ? ದುಂಬಿಗಳಿಂದ ಕೂಡಿದ ತಾವರೆಗೆ ಮುತ್ತಿಟ್ಟವಳೇ, ತಡೆದರೂ (ಲೆಕ್ಕಿಸದೆ ಸ್ವಚ್ಛಂದವಾಗಿ ನಡೆದುಕೊಂಡ) ಹಠಮಾರಿ, ಈಗ ನೀನೇ ಪರಿಣಾಮವನ್ನು ಸಹಿಸಿಕೋ."

**ಅತ್ರ ಕಾಚಿದ್ ವಿದಗ್ಧಾ ಸಖೀ ಕಾಮಪಿ ಕಾಮುಕಾಂತಿಕೇ ಪರಪುರುಷಪರಿಕ್ಷತಾಧರಪಲ್ಲವಾಮ್ ಆಲೋಕ್ಯ ತದಸಹನಸ್ವಭಾವಂ ಚ ತಂ ಕಾಮುಕಮ್ ಆಕಲಯ್ಯ ತಸ್ಯಾಪರಪರಿಭೋಗ–ಶಂಕಾಕಲಂಕಮಪಾಕರ್ತುಮ್ ಅಧರಕ್ಷತಸ್ಯ ಅನ್ಯಥಾಸಿದ್ಧತ್ವಮ್ ಉಪಾಲಂಭನಿಭೇನ ತಾಮಾಹ ।**

**ತತ್ರ ಸವ್ರಣವಲ್ಲಭಾಧರದಲದರ್ಶನಂ ಸರ್ವಸ್ಯೈವ ಕಾಮುಕಲೋಕಸ್ಯ ಈರ್ಷ್ಯಾಪ್ರಕೋಪಕಾರಣಂ ಭವತೀತಿ ವ್ಯಾಪ್ತಿವಚನಮ್ । ತತ್ರ ಚ ವಾರಿತವಾಮಾಯಾಃ ಸಭ್ರಮರಾಂಭೋಜಾಘ್ರಾಣ–ಶೀಲಾಯಾಸ್ತನ್ನಿಬಂಧನಮಿದಮಧರಸ್ಯ ಸವ್ರಣತ್ವಮಿತಿ ಪಕ್ಷಧರ್ಮೋಪಸಂಹಾರಃ ।**

**ಅನುವಾದ:**

ಇಲ್ಲೊಬ್ಬ ವಿದಗ್ಧ ಮಹಿಳೆ ಸಖಿಯನ್ನು ಕಾಣುತ್ತಾಳೆ. ಆ ಸಖಿಯ ತುಟಿಗಳು ಪರಪುರುಷನ ಸಂಪರ್ಕದಿಂದ ಗಾಯಗೊಂಡಿವೆ. ಅವಳ ಪ್ರಿಯಪತಿಯೂ ಅದನ್ನು ನೋಡಿದ್ದಾನೆ. ಅವನು ಅಂತಹುದನ್ನು ಸಹಿಸುವ ಸ್ವಭಾವದವನಲ್ಲ. ಅದನ್ನು ಅರಿತ ವಿದಗ್ಧ ಮಹಿಳೆ ಅವನಲ್ಲಿ ಹುಟ್ಟಿರಬಹುದಾದ ಸಂಶಯದ ಕಳಂಕವನ್ನು ದೂರ ಮಾಡಲು ಸಖಿಯ ತುಟಿಗಳ ಗಾಯವು ಬೇರೆ ಕಾರಣದಿಂದ ಉಂಟಾಗಿದೆ ಎಂಬುದನ್ನು ಅವಳನ್ನು ಮೂದಲಿಸುವ ನೆವದಿಂದ ಸೂಚಿಸಲು ಅವಳಿಗೆ ಹೀಗೆ ಹೇಳಿದ್ದಾಳೆ.

ಪ್ರಿಯೆಯ ಗಾಯಗೊಂಡ ತುಟಿಗಳ ದರ್ಶನವು ಯಾವ ಪ್ರಿಯನಿಗೇ ಆಗಲಿ ಈರ್ಷ್ಯೆ ಕೆರಳುವುದಕ್ಕೆ ಕಾರಣವಾಗುತ್ತದೆ ಎಂದು ಇಲ್ಲಿ ವ್ಯಾಪ್ತಿಯನ್ನು (ಸಾಧ್ಯ–ಸಾಧನಗಳ ಅವಿನಾಭಾವ ನಿಯಮವನ್ನು) ಹೇಳಲಾಗಿದೆ. ತಡೆದರೂ ಹಠದಿಂದ ತನಗೆ ಇಷ್ಟ ಬಂದಂತೆ ನಡೆದುಕೊಳ್ಳುವ, ದುಂಬಿಗಳಿಂದ ತುಂಬಿದ್ದ ತಾವರೆಯನ್ನು ಆಘ್ರಾಣಿಸುವ ಸಖಿಗೆ ಆ ಕಾರಣದಿಂದಲೇ ತುಟಿಯಲ್ಲಿ ಗಾಯ ಉಂಟಾಯಿತು ಎಂದು ಪಕ್ಷಧರ್ಮದ ಉಪಸಂಹಾರವನ್ನು ಮಾಡಲಾಗಿದೆ. (ಸಾಧ್ಯಸಂದೇಹ ಎಲ್ಲಿದೆಯೋ ಅದು ಪಕ್ಷ. ಸಾಧ್ಯವನ್ನು ಸಾಧಿಸುವ ಹೇತು ಪಕ್ಷದಲ್ಲಿ ಇದೆಯೆಂದು ತೋರಿಸಿದರೆ ಅದು ಪಕ್ಷಧರ್ಮತಾ.)

**ಸಹ್ಯತಾಮಿದಾನೀಂ ತಸ್ಯ ನಿಜಸ್ಯಾವಿನಯಸ್ಯ ವಿಪಾಕಃ ಪ್ರಿಯತಮಪ್ರಕೋಪರೂಪಸ್ತ್ವಯಾ ಇತಿ ನಿಗಮನನಿರ್ದೇಶಃ । ಇತಿ ವಾಚ್ಯಾರ್ಥವಿಷಯಃ ಸಾಧ್ಯಸಾಧನಭಾವಸ್ತಾವತ್ ಸ್ಪಷ್ಟ ಏವ । ಅನುಮೇಯಾರ್ಥವಿಷಯೇ ತು ತಸ್ಮಿನ್ ಪರಪುರುಷಪರಿಭೋಗಶಂಕಾನಿರಾಸಃ ಸಾಧ್ಯಃ । ತಸ್ಯ ಸಭ್ರಮರಾಂಭೋಜಾಘ್ರಾಣಶೀಲತ್ವೇನ ಸಂಬೋಧನಸಮರ್ಪಿತೇನ ಅನುಮಿತಮ್ ಅಧರಪಲ್ಲವಪರಿಕ್ಷತೇರನ್ಯಥಾಸಿದ್ಧತ್ವಮ್ ಆರ್ಥೋ ಹೇತುಃ । ತಯೋಶ್ಚಾವಿನಾಭಾವ–ನಿಯಮೋಽನುರಾಗಿಣಾಮ್ ಅಧ್ಯಾತ್ಮಪ್ರಮಾಣಸಿದ್ಧ ಏವೇತಿ ಸಿದ್ಧಮ್ । ಅತ್ರ ವಾಚ್ಯಾನುಮೇಯಯೋರರ್ಥಯೋರಪಿ ಪ್ರತೀತಾವನುಮೇಯ ಏವ ವಿಶ್ರಾಂತಿರ್ನವಾಚ್ಯೇ, ತಸ್ಯ ತದಂಗತಯಾ ಪ್ರಾಧಾನ್ಯಾಭಾವಾದಿತ್ಯುಕ್ತಮೇವ ।**

**ಅನುವಾದ:**

ಹಾಗೆ ಮಾಡಿದ ಅವಿನಯದ ಪರಿಣಾಮವಾಗಿ ಉಂಟಾದ ಪ್ರಿಯನ ಕೋಪವನ್ನು ಈಗ ಸಹಿಸಿಕೋ ಎಂದು ನಿಗಮನ(ತೀರ್ಮಾನ)ದ ನಿರ್ದೇಶವೂ ಇದೆ. ಹೀಗೆ ವಾಚ್ಯಾರ್ಥಕ್ಕೆ ಸಂಬಂಧಿಸಿದ ಸಾಧ್ಯಸಾಧನಭಾವವು ಸ್ಪಷ್ಟವೇ ಆಗಿದೆ.

ಅನುಮೇಯಾರ್ಥಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಪ್ರಿಯನ ಮನಸ್ಸಿನಲ್ಲಿ ಹುಟ್ಟಿರಬಹುದಾದ ಪರಪುರುಷಭೋಗಸಂಶಯದ ನಿವಾರಣೆಯೇ ಸಾಧ್ಯ. ಅದಕ್ಕೆ ಹೇತುವಾಗಿ ಕೊಡಲ್ಪಟ್ಟಿರುವುದು ಅಧರಪಲ್ಲವದ ಗಾಯವು ಬೇರೆ ಕಾರಣದಿಂದ ಉಂಟಾಗಿದೆ ಎಂಬ ಸೂಚನೆ. ಅದನ್ನು ಇಲ್ಲಿ ಸಂಬೋಧನಪದದಿಂದ ಸೂಚಿಸಲಾಗಿದೆ. ಭ್ರಮರಸಹಿತವಾದ ಅಂಭೋಜವನ್ನು ಆಘ್ರಾಣಿಸುವ ಅಭ್ಯಾಸವನ್ನುಳ್ಳವಳೇ ಎಂದು ಆ ಸಂಬೋಧನೆ. ಅದು (ಶಾಬ್ದವಲ್ಲದ) ಅರ್ಥಾತ್ ಸಿದ್ಧವಾಗುವ ಹೇತುವಾಗಿದೆ. ಈ ಸಾಧ್ಯಹೇತುಗಳ ಅವಿನಾಭಾವನಿಯಮವು ಪ್ರೇಮಿಗಳಿಗೆ ಅಧ್ಯಾತ್ಮವೆಂಬ ಪ್ರಮಾಣದಿಂದ ಸಿದ್ಧವಾಗುತ್ತದೆ. ವಾಚ್ಯ ಮತ್ತು ಅನುಮೇಯ ಎಂಬ ಎರಡು ಅರ್ಥಗಳೂ ಇಲ್ಲಿ ತೋರಿದರೂ ಅನುಮೇಯದಲ್ಲೇ ವಿಶ್ರಾಂತಿ, ವಾಚ್ಯದಲ್ಲಲ್ಲ. ವಾಚ್ಯವು ಅನುಮೇಯದ ಅಂಗವಾದುದರಿಂದ ವಾಚ್ಯಕ್ಕೆ ಪ್ರಾಧಾನ್ಯವಿಲ್ಲ. ಇದನ್ನು ಮೊದಲೇ ಹೇಳಿದ್ದೇವೆ.

**ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ ।**
**ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್ ॥ ಇತಿ ।**

**ಅತ್ರ ಶೂರಾದೀನಾಂ ತ್ರಯಾಣಾಂ ಸರ್ವತ್ರೈವ ಸ್ವಾಧೀನಾಃ ಸಂಪದೋ ಭವಂತಿ ಇತಿ ಸಾಧ್ಯಮ್ । ತತ್ರ ಸುವರ್ಣಪುಷ್ಪಪೃಥಿವೀ ಚಯನೇ ಕರ್ತೃತ್ವಾಭಿಧಾನಂ ತೇಷಾಂ ಹೇತುಃ। ತದ್ಧಿ ಮುಖ್ಯಮ್ ಅನುಪಪದ್ಯಮಾನಂ ವಾಕ್ಯಾರ್ಥೋಪಚಾರವೃತ್ತ್ಯಾ ತತ್ಸದೃಶಮೇವ ಸರ್ವತ್ರ ಸುಲಭವಿಭವತ್ವಮನುಮಾಪಯತಿ ಯಥಾ ಪದಾರ್ಥೋಪಚಾರೇ ಗಂಗಾಯಾಂ ಘೋಷ ಇತ್ಯತ್ರ ಗಂಗಾಶಬ್ದೋ ಗಂಗಾಸಮೀಪವರ್ತಿನಂ ತಟಮ್ । ದ್ವಿವಿಧೋ ಹ್ಯುಪಚಾರ ಇಷ್ಟಃ। ಪದಾರ್ಥವಾಕ್ಯಾರ್ಥವಿಷಯತ್ವಾತ್ । ಉಪಚಾರೇ ಚ ವಾಚ್ಯಸ್ಯೋಪಾಯತ್ವಾತ್ ಅಪ್ರಾಧಾನ್ಯೇ ಸತಿ ಅವಿವಕ್ಷಿತತ್ವಮೇವ ಭವತಿ । ಉಪಚಾರವಿಷಯಸ್ಯೈವ ಉಪೇಯತಯಾ ಪ್ರಾಧಾನ್ಯಾತ್।**

**ಅನುವಾದ:**

(ಸುವರ್ಣಪುಷ್ಪಾಂ.... ಈ ಪದ್ಯದ ಅನುವಾದ ಹಿಂದೆ ಬಂದಿದೆ.) ಇಲ್ಲಿ ಶೂರ ಮುಂತಾದ ಮೂವರಿಗೆ ಎಲ್ಲೆಲ್ಲೂ ಸಂಪತ್ತುಗಳು ಸ್ವಾಧೀನ ಎಂಬುದು ಸಾಧ್ಯ. ಅದಕ್ಕೆ ಹೇತುವಾಗಿರುವುದು ಚಿನ್ನದ ಹೂವಿನ ಭೂಮಿಯನ್ನು ಆಯ್ದುಕೊಳ್ಳುವುದರಲ್ಲಿ ಅವರಿಗೆ ಹೇಳಿರುವ ಕರ್ತೃತ್ವ. ಏಕೆಂದರೆ ಮುಖ್ಯಾರ್ಥದಲ್ಲಿ ಅದು ಬಾಧಿತವಾಗಿ ವಾಕ್ಯಾರ್ಥಲಕ್ಷಣಾವೃತ್ತಿಯಿಂದ ಅದಕ್ಕೆ ಸದೃಶವಾದ 'ಎಲ್ಲೆಲ್ಲೂ ಐಶ್ವರ್ಯವು ಸುಲಭವಾಗಿರುತ್ತದೆ' ಎಂಬ ಅರ್ಥವನ್ನು ಅನುಮಿತಿಯಿಂದ ತಿಳಿಸುತ್ತದೆ. ಪದಾರ್ಥೋಪಚಾರದಲ್ಲಿ ಗಂಗಾಯಾಂ ಘೋಷಃ ಎಂಬ ಉದಾಹರಣೆಯಲ್ಲಿ ಗಂಗಾಶಬ್ದವು ಗಂಗೆಯ ಸಮೀಪದಲ್ಲಿರುವ ತಟವನ್ನು ತಿಳಿಸುವಂತೆ.

ಪದಾರ್ಥೋಪಚಾರ, ವಾಕ್ಯಾರ್ಥೋಪಚಾರ ಎಂದು ಉಪಚಾರವು (ಲಕ್ಷಣಾವೃತ್ತಿಯು) ಎರಡು ವಿಧ. ಉಪಚಾರದಲ್ಲಿ ವಾಚ್ಯಾರ್ಥವು ಉಪಾಯ, ಆದ್ದರಿಂದ ಅದು ಅಪ್ರಧಾನವಾಗಿ ಅದಕ್ಕೆ ಅವಿವಕ್ಷಿತತ್ವವೇ ಬರುತ್ತದೆ. ಉಪಚಾರದ ವಿಷಯವಾಗಿರುವುದು ಉಪೇಯವಾದುದರಿಂದ ಅದಕ್ಕೆ ಪ್ರಾಧಾನ್ಯ.

**ತಯೋಶ್ಚ ಪ್ರಸಿದ್ಧಿಕೃತ ಏವಾವಿನಾಭಾವನಿಯಮೋಽವಗಂತವ್ಯಃ, ಸಾಧ್ಯಶ್ಚ ಅನುಮೇಯ ಏವ, ನ ವಚನಗೋಚರತಾಂ ಗಚ್ಛತಿ ಇತ್ಯುಕ್ತಮ್ ।**

**ಶಿಖರಿಣಿ ಕ್ವನು ನಾಮ ಕಿಯಚ್ಚಿರಂ ಕಿಮಭಿಧಾನಮಸಾವಕರೋತ್ತಪಃ ।**
**ತರುಣಿ ಯೇನ ತವಾಧರಪಾಟಲಂ ದಶತಿ ಬಿಂಬಫಲಂ ಶುಕಶಾವಕಃ ॥**

**ಅತ್ರ ತ್ವದಧರಪಲ್ಲವಪರಿಚುಂಬನಾಮೃತಂ ನಾಲ್ಪಪುಣ್ಯಃ ಪುಮಾನ್ ಆಸಾದಯತೀತಿ ಚಾಟುಕರೂಪೋಽರ್ಥಃ ಸಾಧ್ಯಃ । ತತ್ಸಾದೃಶ್ಯಲವಾಲಂಬಿನೋ ಬಿಂಬಫಲಸ್ಯಾಪಿ ಪರಿಖಂಡನವಿಧೌ ಶುಕಶಾವಕಸ್ಯ ಲೋಕೋತ್ತರತಪಃಪರಿಣಾಮಶಾಲಿತ್ವಸಮಾರೋಪೋ ಹೇತುಃ । ಯತ್ರ ಖಲು ಯತ್ಸಾದೃಶ್ಯಸದ್ಭಾವಮಾತ್ರಭಾಜೋ ಭಾವಸ್ಯ ಪುಣ್ಯೋಪಚಯ–ಪರಿಶ್ರಮಪರಿಪ್ರಾಪಣೀಯತ್ವಮ್ ಆಶಂಕ್ಯತೇ ತತ್ರ ತಸ್ಯ ತತ್ಸಂಬಂಧಿನೋ ಮುಖ್ಯಸ್ಯೈವ ತತ್ ಕಥಂ ನಾವಗಮ್ಯತೇ? ತಸ್ಮಾದತ್ರಾಪಿ ಸಾಧ್ಯಸಾಧನಭಾವಗರ್ಭತೈವ ಉಪಪನ್ನಾ ಇತಿ ಸಿದ್ಧಮ್।**

**ಅನುವಾದ:**

ಅವೆರಡರ ಅವಿನಾಭಾವ ನಿಯಮವು ಪ್ರಸಿದ್ಧಿಯಿಂದ ತಿಳಿದುಬರುತ್ತದೆ ಎಂದು ತಿಳಿದುಕೊಳ್ಳಬೇಕು. ಸಾಧ್ಯವು ಕೇವಲ ಅನುಮೇಯ, ಅದು ಶಬ್ದದಿಂದ ಹೇಳಲ್ಪಡುವುದಲ್ಲ ಎಂದು ಈಗಾಗಲೇ ಹೇಳಿದ್ದೇವೆ.

"ತರುಣಿ, ಈ ಗಿಳಿ ನಿನ್ನ ತುಟಿಯಂತೆ ಕೆಂಪಾದ ತೊಂಡೆಹಣ್ಣನ್ನು ಕಚ್ಚುತ್ತಿದೆ. ಅದು ಯಾವ ಪರ್ವತದ ಮೇಲೆ ಯಾವ ಹೆಸರಿನ ತಪಸ್ಸನ್ನು ಎಷ್ಟು ಕಾಲದವರೆಗೆ ಆಚರಿಸಿತೋ?"

ಇಲ್ಲಿ ನಿನ್ನ ತುಟಿಗಳಿಗೆ ಮುತ್ತಿಡುವ ಅಮೃತವನ್ನು ಸ್ವಲ್ಪ ಪುಣ್ಯ ಮಾಡಿದವನು ಪಡೆಯಲಾರ ಎಂಬ ಚಾಟುರೂಪವಾದ ಅರ್ಥವು ಸಾಧ್ಯ. ಆ ತುಟಿಯ ಚೂರು ಸಾದೃಶ್ಯವನ್ನು ಹೊಂದಿರುವ ತೊಂಡೆಹಣ್ಣನ್ನು ಕಚ್ಚುವುದಕ್ಕೂ ಗಿಳಿಮರಿಯು ಲೋಕೋತ್ತರವಾದ ತಪಸ್ಸಿನ ಪರಿಪಾಕವನ್ನು ಪಡೆದಿದೆ ಎಂಬ ಆರೋಪವು ಸಾಧನ. ಯಾವುದರ ಸಾದೃಶ್ಯವನ್ನು ಮಾತ್ರ ಹೊಂದಿರುವ ವಸ್ತುವೂ ಪುಣ್ಯದ ರಾಶಿಯನ್ನು ಗಳಿಸುವ ಪರಿಶ್ರಮದಿಂದ ದೊರಕುವುದೋ ಎಂಬ ಆಶಂಕೆ ಇರುವಾಗ ಅದಕ್ಕೆ ಸಂಬಂಧಿಸಿದ ಮುಖ್ಯವಸ್ತು ಅಂಥ ಪುಣ್ಯಾತಿಶಯದಿಂದಲೇ ಸಿಗುವುದೆಂದು ತಿಳಿಯುವುದಲ್ಲವೆ? ಆದ್ದರಿಂದ ಈ ಉದಾಹರಣೆಯಲ್ಲೂ ಸಾಧ್ಯಸಾಧನಭಾವವು ಒಳಗೆ ಸೇರಿಕೊಂಡಿದೆ ಎಂದು ಸಿದ್ಧವಾಗುತ್ತದೆ.

(ಅನುಮಿತಿಯಲ್ಲಿ ಅರ್ಥಾಂತರಸಂಕ್ರಮಿತವಾಚ್ಯದ ಅಂತರ್ಭಾವ)

**ಸ್ನಿಗ್ಧಶ್ಯಾಮಲಕಾಂತಿಲಿಪ್ತವಿಯತೋ ವೇಲ್ಲದ್‌ಬಲಾಕಾ ಘನಾಃ**
**ವಾತಾಃ ಶೀಕರಿಣಃ ಪಯೋದಸುಹೃದಾಮಾನಂದಕೇಕಾಃ ಕಲಾಃ ।**
**ಕಾಮಂ ಸಂತು ದೃಢಂ ಕಠೋರಹೃದಯೋ ರಾಮೋಽಸ್ಮಿ ಸರ್ವಂ ಸಹೇ**
**ವೈದೇಹೀ ತು ಕಥಂ ಭವಿಷ್ಯತಿ ಹಹಾ ಹಾ ದೇವಿ ಧೀರಾ ಭವ ॥**

**ಅತ್ರ ಮದನದಹನೋದ್ದೀಪನಚಂದ್ರೋದಯೋದ್ಯಾನಾದಿದಾರುಣಪದಾರ್ಥ– ಸಾರ್ಥದರ್ಶನದುಃಖಸಹಿಷ್ಣುತ್ವಂ ನಾಮ ರಾಮಸ್ಯ ಸಾಧ್ಯಮ್ । ತತ್ರ ಚ ರಾಮತ್ವ ಮೇವಾರ್ಥೋ ಹೇತುಃ । ರಾಮಶಬ್ದೋ ಹ್ಯಯಂ ಸ್ವೇಚ್ಛಾಪರಿಕಲ್ಪಿತಪ್ರಕರಣಾದ್ಯವಸೇಯ ಸಕಲಕ್ಲೇಶಭಾಜನತ್ವಲಕ್ಷಣಧರ್ಮವಿಶಿಷ್ಟಂ ಸಂಜ್ಞಿನಂ ಪ್ರತ್ಯಾಯಯತಿ, ನ ಸಂಜ್ಞಿಮಾತ್ರಮ್। ತಯೋಶ್ಚ ವ್ಯಾಪ್ಯವ್ಯಾಪಕಭಾವಲಕ್ಷಣಃ ಸಂಬಂಧಃ ಪ್ರಸಿದ್ಧಿಕೃತೋಽಧ್ಯಾತ್ಮಪ್ರಸಿದ್ಧ ಏವಾವಗಂತವ್ಯಃ। ಯಥಾ ವೃಕ್ಷಶಿಂಶಪಯೋಃ ।**

**ಅನುವಾದ:**

"ಮುಗಿಲು ಮಸೃಣನೀಲಕಾಂತಿಯಿಂದ ತುಂಬಿದೆ. ಮೋಡಗಳಲ್ಲಿ ಬಲಾಕಾ ಪಕ್ಷಿಗಳು ಹಾರಾಡುತ್ತಿವೆ. ಗಾಳಿಯಲ್ಲಿ ನೀರಿನ ಹನಿಗಳಿವೆ. ನವಿಲುಗಳು ಆನಂದದಿಂದ ಇಂಪಾದ ಕೇಕೆಗಳನ್ನು ಹಾಕುತ್ತಿವೆ. ಇವೆಲ್ಲ ಬೇಕಾದಷ್ಟು ಇರಲಿ. ನಾನು ಕಠೋರಹೃದಯನಾದ ರಾಮ, ಎಲ್ಲವನ್ನೂ ಸಹಿಸಿಕೊಳ್ಳುತ್ತೇನೆ. ಆದರೆ ಆ ವೈದೇಹಿ ಹೇಗಿರುವಳೋ! ಹಾ ದೇವಿ, ಧೈರ್ಯವನ್ನು ತಾಳು."

ಈ ಪದ್ಯದಲ್ಲಿ ರಾಮನಲ್ಲಿ ಸಾಧ್ಯವಾಗಿ ತೋರುವ ಅಂಶ ಇದು– ಕಾಮಾಗ್ನಿಯನ್ನು ಹೆಚ್ಚಾಗಿ ಉರಿಯುವಂತೆ ಮಾಡುವ ಚಂದ್ರೋದಯ, ಉದ್ಯಾನ ಮುಂತಾದ ದಾರುಣಪದಾರ್ಥಸಾರ್ಥದ ನೋಟದಿಂದ ಉಂಟಾಗುವ ದುಃಖವನ್ನು ಅವನು ಸಹಿಸಬಲ್ಲನು– ಎಂಬುದು. ಅದಕ್ಕೆ ರಾಮತ್ವ ಎಂಬ ಧರ್ಮವೇ ಆರ್ಥ ಸಾಧನ.

ಏಕೆಂದರೆ ಇಲ್ಲಿ ರಾಮಶಬ್ದವು ಕೇವಲ ಆ ಹೆಸರಿನ ವ್ಯಕ್ತಿಯನ್ನು ತಿಳಿಸುವುದಿಲ್ಲ. ತನ್ನ ಇಚ್ಛೆಯಿಂದಲೇ ಕಲ್ಪಿಸಿಕೊಂಡ ಅನೇಕ ಪ್ರಕರಣಗಳಲ್ಲಿ ಅನೇಕ ಕ್ಲೇಶಗಳಿಗೆ ಭಾಜನನಾಗುವ ಧರ್ಮವಿಶಿಷ್ಟನಾದ ವ್ಯಕ್ತಿಯನ್ನು ಅದು ತಿಳಿಸುತ್ತದೆ. ಸಾಧ್ಯಸಾಧನಗಳಿಗೆ ಇರುವ ವ್ಯಾಪ್ಯವ್ಯಾಪಕಭಾವ ಎಂಬ ಸಂಬಂಧವು ಅಧ್ಯಾತ್ಮವೆಂಬ ಪ್ರಮಾಣದಿಂದ ಹುಟ್ಟುವ ಪ್ರಸಿದ್ಧಿಯಿಂದ ಸಿದ್ಧವಾಗುತ್ತದೆ ಎಂದು ತಿಳಿದುಕೊಳ್ಳಬೇಕು. ಅದು ವೃಕ್ಷ–ಶಿಂಶಪಾ ಇವುಗಳಿಗಿರುವ ಸಂಬಂಧದಂತೆ.

**ಯಚ್ಚ ತದನುಮಿತಂ ಧರ್ಮಾಂತರಂ ತತ್ ಸರ್ವಂಸಹತ್ವಸ್ಯ ಉಪಾತ್ತಸ್ಯ ಸಾಧನಂ, ನ ರಾಮತ್ವಮೇವೇತಿ ಅನುಮಿತಾನುಮೇಯಂ ತತ್ । ಏವಮ್ ಅಸ್ಮೀತ್ಯಸ್ಮದರ್ಥೇ ಧರ್ಮಿಣಿ ರಾಮತ್ವಮಾತ್ರನಿಬಂಧನಾಯಾಂ ಸಕಲಕ್ಲೇಶಭಾಜನತ್ವಲಕ್ಷಣಸಾಧ್ಯಧರ್ಮಸಿದ್ಧೌ ಸ್ಫುಟ**

ಏವಾಸ್ಯಾನುಮಾನಾಂತರ್ಭಾವಃ । ತತಶ್ಚ ರಾಮಸ್ಯ ಯತ್ ಕಠೋರಹೃದಯತ್ವಾಭಿಧಾನಂ ತತ್ ಪುನರುಕ್ತಮೇವ, ಅನುವಾದಪಕ್ಷಸ್ಯಾತಿತುಚ್ಛತ್ವಾತ್ ।

ತಾಲಾ ಜಾಅಂತಿ ಗುಣಾ ಜಾಲಾ ದೇ ಸಹಿಅಏಹಿ ಘೇಪ್ಪಂತಿ ।
ರಇಕಿರಣಾಣುಗ್ಗಹಿಆಇ ಹೋಂತಿ ಕಮಲಾಇ ಕಮಲಾಇ ॥

(ತದಾ ಜಾಯಂತೇ ಗುಣಾ ಯದಾ ತೇ ಸಹೃದಯೈರ್ಗೃಹ್ಯಂತೇ । ರವಿಕಿರಣಾನುಗೃಹೀತಾನಿ ಭವಂತಿ ಕಮಲಾನಿ ಕಮಲಾನಿ ॥)

**ಅನುವಾದ:**

ಅದರಿಂದ ಅನುಮಿತವಾಗುವ ಧರ್ಮವು ರಾಮನಲ್ಲಿ ಉಕ್ತವಾದ ಸರ್ವಂಸಹತ್ವಕ್ಕೆ ಸಾಧನ, ಕೇವಲ ರಾಮತ್ವವಲ್ಲ. ಹೀಗೆ ಅದು ಅನುಮಿತದಿಂದ ಅನುಮೇಯ. ಹೀಗೆ ನಾನು ಎಂಬ ಅರ್ಥದಲ್ಲಿ ಅಸ್ಮಿ ಎಂಬುವುದರಿಂದ ಉಕ್ತವಾಗುವ ಧರ್ಮಿಯಲ್ಲಿ ರಾಮತ್ವವನ್ನು ಮಾತ್ರ ಆಶ್ರಯಿಸಿ ಬರುವ ಎಲ್ಲ ಕ್ಲೇಶಗಳಿಗೆ ಭಾಜನನಾಗುವಿಕೆ ಎಂಬ ಸಾಧ್ಯಧರ್ಮದ ಸಿದ್ಧಿಯಾಗುವುದರಿಂದ ಇದು ಅನುಮಾನದಲ್ಲಿ ಅಂತರ್ಭಾವವನ್ನು ಹೊಂದುವುದು ಸ್ಪಷ್ಟವಾಗಿಯೇ ಇದೆ. ಆದ್ದರಿಂದ ಕವಿಯು ರಾಮನ ಕಠೋರಹೃದಯತ್ವವನ್ನು ವಾಚ್ಯವಾಗಿ ಹೇಳಿರುವುದು ಪುನರುಕ್ತವೇ ಸರಿ. ಅದು ಇಲ್ಲಿ ಅನುವಾದ್ಯವಾಗಿರುವುದಂತೂ ಅತಿ ತುಚ್ಛವೆನ್ನಬೇಕು.

(ತಾಲಾ............ ಈ ಪದ್ಯದ ಅನುವಾದ ಹಿಂದೆ ಬಂದಿದೆ.)

ಇತ್ಯತ್ರಾದ್ಯಸ್ತಾವತ್ ಕಮಲಶಬ್ದಃ ಸಾಮಾನ್ಯವೃತ್ತಿಃ ದ್ವಿತೀಯೋ ವಿಶೇಷವೃತ್ತಿಃ । ಸ ಚಾಸ್ಯ ವಿಶೇಷೋ ನಿರತಿಶಯಶೋಭಾಭಿರಾಮತಾಲಕ್ಷಣೋಽರ್ಥಃ ಪ್ರಕರಣಾದಿಗಮ್ಯೋ ರವಿಕಿರಣಾನುಗ್ರಹಕೃತಃ ಪ್ರಮಾಣಾಂತರಸಿದ್ಧಃ ಸಾಮಾನ್ಯನಿಷ್ಠೋಽನುಮೇಯಃ । ತತ್ರ ಚ ತಯೋಃ ಸಾಮಾನ್ಯವಿಶೇಷಾರ್ಥಯೋರ್ವಿಜಾತೀಯಯೋರಿವ ಸಜಾತೀಯಯೋರಪಿ ಆರೋಪ್ಯಾರೋಪಕಭಾವ ಏವ ಹೇತುರ್ಯಥಾ ಸಿಂಹೋ ಮಾಣವಕ ಇತಿ । ನ ಚ ಭಿನ್ನಜಾತೀಯತ್ವಮೇವ ಅರ್ಥಾನಾಮಾರೋಪನಿಬಂಧನಮಿತಿ ನಿಯಮಃ ಸಂಭವತಿ, ಯೇನಾತ್ರ ಸಜಾತೀಯತ್ವಾದಸೌ ನ ಸ್ಯಾತ್ । ತಸ್ಯ ಭಿನ್ನಾರ್ಥಮಾತ್ರಪ್ರಯುಕ್ತತ್ವಾತ್ । ತಚ್ಚಾನಯೋರುಕ್ತನಯೇನಾಸ್ತ್ಯೇವೇತಿ ನಾಸಿದ್ಧೋ ಹೇತುಃ ।

**ಅನುವಾದ:**

ಈ ಪದ್ಯದಲ್ಲಿ ಮೊದಲನೆಯ ಕಮಲಶಬ್ದವು ಸಾಮಾನ್ಯಾರ್ಥವನ್ನೂ ಎರಡನೆಯ ಕಮಲಶಬ್ದವು ವಿಶೇಷಾರ್ಥವನ್ನೂ ತಿಳಿಸುತ್ತವೆ. ಅಲ್ಲಿ ವಿಶೇಷ ಎಂದರೆ ನಿರತಿಶಯವಾದ ಕಾಂತಿಯ ಸೌಂದರ್ಯವನ್ನು ಹೊಂದಿರುವುದಾಗಿದೆ. ರವಿಕಿರಣಗಳ ಅನುಗ್ರಹದಿಂದ ಉಂಟಾಗುವ, ಪ್ರಕರಣಾದಿಗಳಿಂದ ವಿದಿತವಾಗುವ, ಬೇರೆ ಪ್ರಮಾಣಗಳಿಂದ ಸಿದ್ಧವಾಗುವ ವಿಶೇಷವು ಸಾಮಾನ್ಯದಲ್ಲಿ ಇರುವ ಹಾಗೆ ಅನುಮಿತವಾಗಬೇಕು. ಸಿಂಹೋ ಮಾಣವಕಃ ಎಂಬ ಉದಾಹರಣೆಯಲ್ಲಿರುವಂತೆ

ಆರೋಪ್ಯಾರೋಪಕಭಾವವು ವಿಜಾತೀಯವಾದ ಅರ್ಥಗಳಿಗೆ ಆಗುವಂತೆ ಸಜಾತೀಯವಾದವುಗಳಿಗೂ ಅವು ಸಾಮಾನ್ಯ–ವಿಶೇಷ ರೂಪದಲ್ಲಿದ್ದಾಗ ಸಂಭವಿಸುತ್ತದೆ. ಆರೋಪ್ಯ–ಆರೋಪಕಭಾವವು ಭಿನ್ನ ಜಾತಿಯ ಅರ್ಥಗಳಿಗೆ ಮಾತ್ರ ಸಾಧ್ಯ, ಆರೋಪಕ್ಕೆ ಭಿನ್ನಜಾತೀಯತ್ವವೇ ನಿಬಂಧನ ಎಂಬ ನಿಯಮವಿಲ್ಲ. ಹಾಗೆ ನಿಯಮ ಇದ್ದಿದ್ದರೆ ಇಲ್ಲಿ ಸಜಾತೀಯ ಎಂಬ ಕಾರಣದಿಂದ ಆರೋಪ ಸಾಧ್ಯವಾಗದೆ ಹೋಗುತ್ತಿತ್ತು. ಆರೋಪಕ್ಕೆ ನಿಬಂಧನ ಆರೋಪ್ಯ–ಆರೋಪಕಗಳ ಅರ್ಥಗಳು ಭಿನ್ನವಾಗಿರಬೇಕು ಅಷ್ಟೆ. ಪ್ರಕೃತ ಪದ್ಯದಲ್ಲಿ ಆರೋಪ್ಯ ಆರೋಪಕಗಳಿಗೆ ಭಿನ್ನಾರ್ಥತ್ವವು ನಾವು ವಿವರಿಸಿದ ರೀತಿಯಲ್ಲಿ ಇದ್ದೇ ಇದೆ. ಆದ್ದರಿಂದ ಹೇತು ಅಸಿದ್ಧವಲ್ಲ.

**ಸಾಮಾನ್ಯವಿಶೇಷವೃತ್ತಿತ್ವಂ ಚೇದಂ ಶಬ್ದಾನಾಂ ವಿವಕ್ಷಾಮಾತ್ರನಿರ್ಮಿತಮಿತಿ ನ ತಸ್ಯ ಪೂರ್ವಪಶ್ಚಾದ್‌ಭಾವನಿಯಮಃ ಕಶ್ಚಿತ್ । ತತಶ್ಚ–**

**ಏಮೇಅ ಜಣೋ ತಿಸ್ಸಾ ದೇಉ ಕವೋಲೋಪಮಾಇ ಸಸಿಬಿಂಬಮ್ ।**
**ಪರಮತ್ಥವಿಆರೇ ಉಣ ಚಂದೋ ಚಂದೋವಿಅ ವರಾಓ ॥**
**(ಏವಮೇವ ಜನಸ್ತಸ್ಯಾ ದದಾತಿ ಕಪೋಲೋಪಮಾಯಾಂ ಶಶಿಬಿಂಬಮ್ ।**
**ಪರಮಾರ್ಥವಿಚಾರೇ ಪುನಶ್ಚಂದ್ರಶ್ಚಂದ್ರ ಇವ ವರಾಕಃ ॥)**

**ಇತಿ ವಿಪರ್ಯಯೇಣಾಪಿ ತದುಪಪದ್ಯತ ಏವ । ಏವಂ ಚ ಅಸ್ಯಾಪಿ ಅನುಮಾನಾಂತರ್ಭಾವ ಏವಾವಗಂತವ್ಯಃ ।**

(ಅನುಮಿತಿಯಲ್ಲಿ ಅತ್ಯಂತತಿರಸ್ಕೃತವಾಚ್ಯದ ಅಂತರ್ಭಾವ)

**"ನಿಃಶ್ವಾಸಾಂಧ ಇವಾದರ್ಶಶ್ಚಂದ್ರಮಾ ನ ಪ್ರಕಾಶತೇ"**

**ಇತ್ಯತ್ರ ಆದರ್ಶಸ್ಯ ವಿಚ್ಛಾಯತ್ವಮನುಮಿತಮುಪಮಾನಮ್ । ತದನುಮಿತೌ ಚಾದರ್ಶಸ್ಯ ಆಂಧ್ಯಾಭಿಧಾನಂ ಸಾಧನಮ್ । ತದ್ಧಿ ತತ್ರ ಮುಖ್ಯಂ ನ ಸಂಭವತಿ, ಪ್ರಾಣಿಧರ್ಮತ್ವಾತ್ ।**

**ಅನುವಾದ:**

ಶಬ್ದಗಳು ಸಾಮಾನ್ಯಾರ್ಥದಲ್ಲಿ ಅಥವಾ ವಿಶೇಷಾರ್ಥದಲ್ಲಿ ಇರುವುದು ವಿವಕ್ಷಾಧೀನ. ಅದರಲ್ಲಿ ಇದೇ ಮೊದಲು ಅದೇ ಕೊನೆ ಎಂಬ ನಿಯಮವೇನಿಲ್ಲ. ಆದ್ದರಿಂದ– "ಏನೋ ಸುಮ್ಮನೆ ಜನರು ಚಂದ್ರಬಿಂಬವನ್ನು ಅವಳ ಕಪೋಲಗಳಿಗೆ ಉಪಮೆಯನ್ನಾಗಿ ಕೊಡುತ್ತಾರೆ. ಪರಮಾರ್ಥವಿಚಾರವನ್ನು ಮಾಡಿದರೆ ಚಂದ್ರನು ಚಂದ್ರನಂತೆ ಬಡಪಾಯಿ" ಇತ್ಯಾದಿಗಳಲ್ಲಿರುವಂತೆ ವಿಶೇಷವು ಮೊದಲು, ಸಾಮಾನ್ಯವು ಆಮೇಲೆ ಬಂದರೂ ಸರಿಯೇ. ಹೀಗೆ ವಿಪರ್ಯಯವೂ ಆಗಬಹುದು. ಆದ್ದರಿಂದ ತದಾ ಜಾಯಂತೇ ಇತ್ಯಾದಿಗಳಿಗೂ ಅನುಮಾನದಲ್ಲಿ ಅಂತರ್ಭಾವವನ್ನು ಅರಿತುಕೊಳ್ಳಬೇಕು.

"ನಿಃಶ್ವಾಸದಿಂದ ಕುರುಡಾದ ಕನ್ನಡಿಯಂತೆ ಚಂದ್ರನು ಈಗ ಹೊಳೆಯುತ್ತಿಲ್ಲ" ಎಂಬ ಉದಾಹರಣೆಯಲ್ಲಿ ಕನ್ನಡಿಯ ಕಾಂತಿರಾಹಿತ್ಯವು ಅನುಮಿತವಾಗುತ್ತದೆ. ಹಾಗೆ ಅನುಮಿತಿಯನ್ನು ಮಾಡುವುದಕ್ಕೆ ಅದಕ್ಕೆ ಕುರುಡುತನವನ್ನು ಹೇಳಿರುವುದು ಸಾಧನ. ಕನ್ನಡಿಯಲ್ಲಿ ಕುರುಡುತನ ಮುಖ್ಯಾರ್ಥದಲ್ಲಿ ಸಂಭವಿಸುವುದಿಲ್ಲ, ಏಕೆಂದರೆ ಅದು ಪ್ರಾಣಿಗಳ ವಿಶೇಷಧರ್ಮ.

**ಅತಸ್ತತ್ಸಾಮರ್ಥ್ಯಾತ್ ಪಟಲಪಿಹಿತಸ್ಯೇವ ನಯನಸ್ಯ ನಿಃಶ್ವಾಸಸಮರ್ಪಿತಂ ದರ್ಪಣಸ್ಯ ವಿಚ್ಛಾಯತ್ವಮೇವಾನುಮಾಪಯತೀತಿ ಅತ್ಯಂತತಿರಸ್ಕೃತವಾಚ್ಯೋಽಪಿ ಸಿಂಹೋ ಮಾಣವಕ ಇತ್ಯಾದಿವತ್ ಪದಾರ್ಥೋಪಚಾರ ಏವ । ತಸ್ಯ ಚಾನುಮಾನಾಂತರ್ಭಾವಃ ಸಮರ್ಥಿತ ಏವ ಪ್ರಾಕ್ । ಏವಮ್–**

**ಗಅಣಂ ಚ ಮತ್ತಮೇಹಂ ಧಾರಾಲುಲಿಅಜ್ಜುಣಾ ಅವಣಾಇ ।**
**ಣಿರಹಂಕಾರಮಿಯಂಕಾ ಹರಂತಿ ಣೀಲಾಓ ವಿ ಣಿಸಾಓ ॥**
**(ಗಗನಂ ಚ ಮತ್ತಮೇಘಂ ಧಾರಾಲುಲಿತಾರ್ಜುನಾನಿ ಚ ವನಾನಿ ।**
**ನಿರಹಂಕಾರಮೃಗಾಂಕಾ ಹರಂತಿ ನೀಲಾ ಅಪಿ ನಿಶಾಃ ॥)**
**ಇತ್ಯತ್ರ ಮತ್ತನಿರಹಂಕಾರಶಬ್ದಯೋರಪಿ ದ್ರಷ್ಟವ್ಯಮ್ ।**

(ರಸಾದಿಧ್ವನಿಯೂ ಅನುಮಿತಿಯಲ್ಲೇ ಅಂತರ್ಭೂತ)

**ಯಾಪಿ ವಿಭಾವಾದಿಭ್ಯೋ ರಸಾದೀನಾಂ ಪ್ರತೀತಿಃ ಸಾನುಮಾನ ಏವಾಂತರ್ಭಾವಮರ್ಹತಿ ।**

**ಅನುವಾದ:**

ಅದರ ಸಾಮರ್ಥ್ಯದಿಂದ ಪೊರೆಯಿಂದ ಮುಚ್ಚಿದ ಕಣ್ಣಿನ ಹಾಗೆ ನಿಃಶ್ವಾಸದಿಂದ ಉಂಟಾಗುವ ಕನ್ನಡಿಯ ಮಂಕುತನವನ್ನು (ಆರೋಪಿಸಲಾದ ಕುರುಡುತನವು) ಅನುಮಿತಿಯಿಂದ ತಿಳಿಸುತ್ತದೆ. ಆದ್ದರಿಂದ ಅತ್ಯಂತತಿರಸ್ಕೃತವಾಚ್ಯ ಎಂಬ ಧ್ವನಿಪ್ರಭೇದವೂ ಸಿಂಹೋ ಮಾಣವಕಃ ಎಂಬ ಉದಾಹರಣೆಯಂತೆ ಪದಾರ್ಥೋಪಚಾರವೇ ಆಗಿದೆ. ಅದರ ಅನುಮಾನಾಂತರ್ಭಾವವನ್ನು ಹಿಂದೆ ಸಮರ್ಥಿಸಲಾಗಿದೆ. ಹೀಗೆ– "ಗಗನದಲ್ಲಿ ಮೋಡಗಳು ಮದದಿಂದ ಕೂಡಿವೆ. ವನಗಳಲ್ಲಿ ಅರ್ಜುನವೃಕ್ಷಗಳು ಮಳೆಯ ಧಾರೆಗಳಿಂದ ತೊಯ್ದಿವೆ. ಕಪ್ಪಾದ ಇರುಳುಗಳಲ್ಲಿ ಚಂದ್ರನು ನಿರಹಂಕಾರನಾಗಿದ್ದಾನೆ. ಆ ಇರುಳುಗಳೂ ಮನಸ್ಸನ್ನು ಸೆಳೆಯುತ್ತವೆ." ಎಂಬ ಉದಾಹರಣೆಯಲ್ಲಿ ಮತ್ತ ಮತ್ತು ನಿರಹಂಕಾರ ಎಂಬ ಶಬ್ದಗಳಿಗೂ ಇದು (ಅನುಮಾನಾಂತರ್ಭಾವವು) ಅನ್ವಯಿಸುತ್ತದೆ ಎಂದು ಕಾಣಬೇಕು.

ವಿಭಾವಾದಿಗಳಿಂದ ರಸಾದಿಗಳ ಪ್ರತೀತಿಯೂ ಅನುಮಾನದಲ್ಲೇ ಅಂತರ್ಭಾವವನ್ನು ಹೊಂದುತ್ತದೆ.

**"ವಿಭಾವಾನುಭಾವವ್ಯಭಿಚಾರಿಪ್ರತೀತಿರ್ಹಿ ರಸಾದಿಪ್ರತೀತೇಃ ಸಾಧನಮಿಷ್ಯತೇ । ತೇ ಹಿ ರತ್ಯಾದೀನಾಂ ಭಾವಾನಾಂ ಕಾರಣಕಾರ್ಯಸಹಕಾರಿಭೂತಾಸ್ತಾನ್ ಅನುಮಾಪಯಂತ ಏವ ರಸಾದೀನ್ ನಿಷ್ಪಾದಯಂತಿ । ತ ಏವ ಹಿ ಪ್ರತೀಯಮಾನಾ ಆಸ್ವಾದಪದವೀಂ ಗತಾಃ ಸಂತೋ ರಸಾ ಇತ್ಯುಚ್ಯಂತೇ ಇತ್ಯವಶ್ಯಂಭಾವೀ ತತ್‌ಪ್ರತೀತಿಕ್ರಮಃ । ಕೇವಲಮಾಶುಭಾವಿತಯಾಸೌ ನ ಲಕ್ಷ್ಯತೇ । ಯತೋಽಯಮದ್ಯಾಪ್ಯಭಿವ್ಯಕ್ತಿಕ್ರಮಃ" ಇತ್ಯುಕ್ತಮ್ । ಅತ್ರೋದಾಹರಣಾನಿ ಯಥಾ ಕುಮಾರಸಂಭವೇ ಮಧುಪ್ರಸಂಗೇ ವಸಂತಪುಷ್ಪಾಭರಣಂ ವಹಂತ್ಯಾ ದೇವ್ಯಾ ಆಗಮನಾದಿವರ್ಣನಂ ಮನೋಭವಶರಸಂಧಾನಪರ್ಯಂತಂ ಶಂಭೋಶ್ಚ ಪರಿವೃತ್ತಧೈರ್ಯಸ್ಯ ಚೇಷ್ಟಾವಿಶೇಷ–ವರ್ಣನಾದೀನಿ ।**

**ಅನುವಾದ:**

ವಿಭಾವ, ಅನುಭಾವ, ವ್ಯಭಿಚಾರಿ –ಇವುಗಳ ಪ್ರತೀತಿಯು ರಸಾದಿಪ್ರತೀತಿಯ ಸಾಧನವೆಂದು ಒಪ್ಪಿಕೊಳ್ಳಲಾಗಿದೆ. ಆ ವಿಭಾವಾದಿಗಳು ರತ್ಯಾದಿಗಳ ಕಾರಣ, ಕಾರ್ಯ, ಸಹಕಾರಿಗಳಾಗಿವೆ. ಅವೇ ರತಿ ಮುಂತಾದ ಸ್ಥಾಯಿಭಾವಗಳನ್ನು ಅನುಮಿತಿಯಿಂದ ತಿಳಿಸಿಕೊಟ್ಟು ರತ್ಯಾದಿಗಳ ನಿಷ್ಪತ್ತಿಯನ್ನು ಉಂಟುಮಾಡುತ್ತವೆ. ಆ ರತ್ಯಾದಿಗಳೇ ಆಸ್ವಾದನೆಗೆ ವಿಷಯವಾಗಿ ರಸಗಳೆಂದು ಕರೆಸಿಕೊಳ್ಳುತ್ತವೆ. ಆದ್ದರಿಂದ ರಸಗಳ ಪ್ರತೀತಿಯಲ್ಲೂ ಕ್ರಮವು ಇರುತ್ತದೆ. ಆದರೆ ಅದು ಅತ್ಯಂತ ವೇಗದಿಂದ ಆಗುವುದರಿಂದ ಗೋಚರವಾಗುವುದಿಲ್ಲ. ಆದ್ದರಿಂದಲೇ ಅದನ್ನು ಈಗಲೂ ಅಭಿವ್ಯಕ್ತಕ್ರಮ ಎನ್ನಲಾಗಿದೆ. ಅದರ ಉದಾಹರಣೆಗಳು– ಕುಮಾರಸಂಭವದಲ್ಲಿ ವಸಂತಋತುವಿನ ಸಂದರ್ಭದಲ್ಲಿ ವಸಂತಪುಷ್ಪಗಳ ಆಭರಣವನ್ನು ಧರಿಸಿದ ಪಾರ್ವತಿಯ ಬರುವಿಕೆಯ ಬಣ್ಣನೆ ಮನ್ಮಥನ ಬಾಣಸಂಧಾನದ ಪರ್ಯಂತವಾಗಿ, ಮತ್ತು ಅಲುಗಾಡಿದ ಧೈರ್ಯದಿಂದ ಕೂಡಿದ ಶಿವನ ವಿಶಿಷ್ಟ ಪ್ರತಿಕ್ರಿಯೆಗಳ ವರ್ಣನೆ –ಇತ್ಯಾದಿಗಳು.

**"ಅತ್ರಾಂತರೇ ಕುಸುಮಸಮಯಯುಗಮುಪಸಂಹರನ್ನುದಜೃಂಭತ**
**ಗ್ರೀಷ್ಮಾಭಿಧಾನಃ ಫುಲ್ಲಮಲ್ಲಿಕಾಧವಲಾಟ್ಟಹಾಸೋ ಮಹಾಕಾಲಃ"**
**ಇತ್ಯತ್ರ ಅಪ್ರಾಕರಣಿಕಮಹಾಕಾಲಾಖ್ಯದೇವತಾವಿಶೇಷವಿಷಯಾ ಪ್ರತೀತಿಸ್ಸಾಧ್ಯಾ । ತಸ್ಯಾಶ್ಚ ಅಟ್ಟಹಾಸಸಂಬಂಧೋ ಯುಗಸಂಹಾರ–ವ್ಯಾಪಾರಶ್ಚ ಇತ್ಯುಭಯಂ ಸಾಧನಂ, ತಸ್ಯ ತತ್ಕಾರ್ಯತ್ವಾತ್ । ಕಾರ್ಯಕಾರಣಭಾವಾವಸಾಯಶ್ಚ ಅನಯೋರಾಗಮಪ್ರಮಾಣಮೂಲ ಇತಿ ತತ ಏವ ಸಮಾಸೋಕ್ತಿಕ್ರಮೇಣ ಅಪ್ರಾಕರಣಿಕಾರ್ಥಾಂತರ–ಪ್ರತೀತಿಸಿದ್ಧಿಃ, ನ ತೂಭಯಾರ್ಥವೃತ್ತೇರ್ಮಹಾಕಾಲಶಬ್ದಸ್ಯ ಸಾ ಶಕ್ತಿರಿತ್ಯೇತದುಕ್ತಂ ವಕ್ಷ್ಯತೇ ಚ ।**

**ಅನುವಾದ:**

(ಅತ್ರಾಂತರೇ.......... ಈ ವಾಕ್ಯದ ಅನುವಾದ ಹಿಂದೆ ಬಂದಿದೆ.) ಈ ಉದಾಹರಣೆಯಲ್ಲಿ ಅಪ್ರಾಕರಣಿಕ ಮಹಾಕಾಲ ಎಂಬ ದೇವತಾವಿಶೇಷ

ವಿಷಯವಾದ ಪ್ರತೀತಿಯು ಸಾಧ್ಯ. ಅಟ್ಟಹಾಸದ ಸಂಬಂಧ ಮತ್ತು ಯುಗಸಂಹಾರ ಎಂಬ ಕಾರ್ಯ –ಇವೆರಡೂ ಆ ಪ್ರತೀತಿಗೆ ಸಾಧನ. ಏಕೆಂದರೆ ಅವೆರಡೂ ಮಹಾಕಾಲನ ಕಾರ್ಯ. ಅವೆರಡರ ಕಾರ್ಯಕಾರಣಭಾವದ ನಿಶ್ಚಯವು ಆಗಮ ಎಂಬ ಪ್ರಮಾಣದಿಂದ ಸಿದ್ಧವಾಗುತ್ತದೆ. ಅದರಿಂದಲೇ ಸಮಾಸೋಕ್ತಿಕ್ರಮದಿಂದ ಅಪ್ರಾಕರಣಿಕವಾದ (ಮಹಾಕಾಲನೆಂಬ ದೇವತೆಯ) ಅರ್ಥಾಂತರದ ಪ್ರತೀತಿ ಹುಟ್ಟುತ್ತದೆ. ಎರಡು ಅರ್ಥಗಳನ್ನು ಹೇಳಬಲ್ಲ ಮಹಾಕಾಲಶಬ್ದಕ್ಕೆ ಇಲ್ಲಿ ಅರ್ಥಾಂತರವನ್ನು ತಿಳಿಸುವ ಶಕ್ತಿ ಇಲ್ಲ ಎಂಬುದನ್ನು ಮೊದಲೇ ಹೇಳಿದ್ದೇವೆ. ಮುಂದೆಯೂ (ಸಂದರ್ಭ ಬಂದಾಗ) ಹೇಳುವೆವು.

**ಉನ್ನತಃ ಪ್ರೋಲ್ಲಸದ್ಧಾರಃ ಕಾಲಾಗುರುಮಲೀಮಸಃ ।**
**ಪಯೋಧರಭರಸ್ತನ್ವ್ಯಾಃ ಕಂ ನ ಚಕ್ರೇಽಭಿಲಾಷಿಣಮ್ ॥**
**ಇತ್ಯತ್ರ ತ್ವನಂತರೋಕ್ತಃ ಪ್ರಕಾರೋ ನ ಸಂಭವತೀತಿ ಕುತೋಽರ್ಥಾಂತರಪ್ರತೀತಿಃ?**
**ದತ್ತಾನಂದಾಃ ಪ್ರಜಾನಾಂ ಸಮುಚಿತಸಮಯಾಕ್ಲಿಷ್ಟಸೃಷ್ಟೈಃ ಪಯೋಭಿಃ**
**ಪೂರ್ವಾಹ್ಣೇ ವಿಪ್ರಕೀರ್ಣಾ ದಿಶಿದಿಶಿ ವಿರಮತ್ಯಹ್ನಿ ಸಂಹಾರಭಾಜಃ ।**
**ದೀಪ್ತಾಂಶೋರ್ದೀರ್ಘದುಃಖಪ್ರಭವಭವಭಯೋದನ್ವದುತ್ತಾರನಾವೋ**
**ಗಾವೋ ವಃ ಪಾವನಾನಾಂ ಪರಮಪರಿಮಿತಾಂ ಪ್ರೀತಿಮುತ್ಪಾದಯಂತು ॥**
**ಇತ್ಯತ್ರ ತು ಗೋಶಬ್ದಸ್ಯಾನೇಕಾರ್ಥತ್ವೇಽಪ್ರಾಕರಣಿಕಾರ್ಥಾಂತರ–**
**ಪ್ರತಿಭೋತ್ಪತ್ತೌ ನ ಕಿಂಚಿನ್ನಿಬಂಧನಮವಧಾರಯಾಮಃ ।**

**ಅನುವಾದ:**

(ಉನ್ನತಃ..... ಈ ಪದ್ಯದ ಎರಡು ಅರ್ಥಗಳು ಹೀಗೆ ಇವೆ)

೧. "ಉಬ್ಬಿರುವ, ಹಾರದಿಂದ ಹೊಳೆಯುತ್ತಿರುವ, ಕಪ್ಪು ಅಗುರುವನ್ನು ಹಚ್ಚಿರುವುದರಿಂದ ಮಲಿನವಾದ ತರುಣಿಯ ಮೊಲೆಗಳು ಯಾವನನ್ನು ತಾನೆ ಅಭಿಲಾಷಿಯನ್ನಾಗಿ ಮಾಡಲಿಲ್ಲ?"

೨. "ಎತ್ತರದಲ್ಲಿರುವ, ಧಾರೆಗಳನ್ನು ಸುರಿಸುತ್ತಿರುವ, ಕಪ್ಪು ಅಗುರುವಿನಂತೆ ಕರಿಯಬಣ್ಣವನ್ನು ಹೊಂದಿರುವ ಮೋಡಗಳು ಯಾವನನ್ನು (ನೀರಿಗಾಗಿ) ಅಭಿಲಾಷಿಯನ್ನಾಗಿ ಮಾಡಲಿಲ್ಲ?"

ಈ ಪದ್ಯದಲ್ಲಿ ಹಿಂದೆ ನಾವು ಹೇಳಿದ ಪ್ರಕಾರವು (ಸಮಾಸೋಕ್ತಿವಿಧಾನವು) ಸಂಭವಿಸದು. ಹೀಗಿರಲು ಎರಡನೆಯ ಅರ್ಥದ ಪ್ರತೀತಿ ಹೇಗೆ ಉಂಟಾದೀತು?

(ದತ್ತಾನಂದಾಃ ............ ಈ ಪದ್ಯದ ಅನುವಾದ ಹಿಂದೆ ಬಂದಿದೆ.)

ಈ ಪದ್ಯದಲ್ಲಿ ಗೋಶಬ್ದವು ಅನೇಕಾರ್ಥಗಳನ್ನುಳ್ಳದ್ದು. ಇದರಲ್ಲಿ ಅಪ್ರಾಕರಣಿಕವಾದ ಇನ್ನೊಂದು ಅರ್ಥವೂ ತೋರುವುದಕ್ಕೆ ಯಾವ ನಿಬಂಧನವೂ ಇಲ್ಲವೆಂದು ನಾವು ನಿಶ್ಚಯಿಸಿದ್ದೇವೆ.

**ತಥಾಹಿ । ಗೋಶಬ್ದ ಏವ ಅನೇಕಾರ್ಥತ್ವಾನ್ನಿಬಂಧನಮುಪಕಲ್ಪ್ಯೇತ । ತದ್ವಿಶೇಷಣಜಾತಮ್, ಉಭಯಮಪಿ ವಾ? ಅನ್ಯಸ್ಯಾರ್ಥಪ್ರಕರಣಾದೇರಸಂಭವಾತ್ । ತತ್ರ ನ ತಾವದ್ ಗೋಶಬ್ದ ಏವೇತಿ ಶಕ್ಯತೇ ವಕ್ತುಮ್ । ಸುರಭಿವ್ಯತಿರಿಕ್ತೇ ವಜ್ರಾದಾವನಭಿಮತೇಽಪ್ಯರ್ಥಾಂತರೇ ಪ್ರತೀತ್ಯುಪಜನನಪ್ರಸಂಗಾತ್, ತಸ್ಯಾನೇಕಾರ್ಥತ್ವಾವಿಶೇಷೇ ನಿಯಮಹೇತೋರಭಾವಾತ್। ಅಥ ವಿಶೇಷಣಜಾತಮೇವ ನಿಯಮಹೇತುರ್ನಾಪರಃ। ತದ್ಧಿ ಯದರ್ಥಾನುಗುಣಮುಪಲಭ್ಯತೇ ತತ್ರೈವ ಪ್ರತೀತಿಮ್ ಉಪಜನಯತೀತ್ಯುಚ್ಯತೇ, ತರ್ಹಿ ತತೋಽಪಿ ಸಾ ತದನು–ಗುಣಾರ್ಥಾವಗತಿರ್ನಿರ್ನಿಬಂಧನಾ ತದ್ವದೇವಾಕಸ್ಮಿಕೀ ಕಥಮಿವ ಉತ್ಪದ್ಯೇತ? ವಿಶೇಷ್ಯ–ವಾಚಿನೋಽನೇಕಾರ್ಥಸ್ಯ ತು ತನ್ನಿಬಂಧನಭಾವೋಪಗಮೇ ಅನ್ಯೋನ್ಯಾಶ್ರಯದೋಷಃ ।**

**ಅನುವಾದ:**

ಅದು ಹೇಗೆಂದರೆ– ಇಲ್ಲಿ ಅನೇಕಾರ್ಥವನ್ನುಳ್ಳ ಗೋಶಬ್ದವನ್ನೇ ನಿಬಂಧನವನ್ನಾಗಿ ಇಟ್ಟುಕೊಳ್ಳುವುದೋ, ಅದರ ವಿಶೇಷಣಸಮೂಹವನ್ನು ಹಾಗೆ ಒಪ್ಪಿಕೊಳ್ಳುವುದೋ, ಅಥವಾ ಅವೆರಡೂ ಒಟ್ಟಿಗೆ ನಿಬಂಧನವೆಂದು ಹೇಳುವುದೋ? ಏಕೆಂದರೆ, ನಿಬಂಧನವಾಗಬಹುದಾದ ಪ್ರಕರಣ ಮುಂತಾದುದು ಇಲ್ಲಿ ಸಂಭವಿಸದು.

ಗೋಶಬ್ದವೇ ನಿಬಂಧನ ಎಂದು ಹೇಳುವುದಂತೂ ಸರಿಯಲ್ಲ. ಹಸು ಎಂಬುದನ್ನು ಬಿಟ್ಟು ವಜ್ರ ಮುಂತಾದ ಅನಭಿಮತವಾದ ಬೇರೆ ಅರ್ಥದಲ್ಲೂ ಅದು ಪ್ರತೀತಿಯನ್ನುಂಟುಮಾಡುವ ಅನಿಷ್ಟ ಪ್ರಸಂಗ ಆಗ ಎದುರಾಗುತ್ತದೆ. ಏಕೆಂದರೆ ಗೋಶಬ್ದಕ್ಕೆ ಹಲವು ಅರ್ಥಗಳಿರುವಾಗ ಒಂದು ಅಪ್ರಾಕರಣಿಕ ಅರ್ಥ ಮಾತ್ರ ತೋರುತ್ತದೆ ಎಂಬ ನಿಯಂತ್ರಣಕ್ಕೆ ಕಾರಣವಿಲ್ಲ. ಅಂಥ ನಿಯಂತ್ರಣಕ್ಕೆ ವಿಶೇಷಣಸಮೂಹವೇ ಕಾರಣ, ಬೇರೆಯ ಕಾರಣವಿಲ್ಲ. ಯಾವ ಅರ್ಥಕ್ಕೆ ಅನುಗುಣವಾದ ವಿಶೇಷಣಗಳಿವೆಯೋ ಅದಕ್ಕೆ ಅನುಗುಣವಾದ ಪ್ರತೀತಿಯನ್ನೇ ಶಬ್ದವು ಉಂಟುಮಾಡುತ್ತದೆ ಎಂದು ಹೇಳಿದರೆ ಆಗಲೂ ತದನುಗುಣವಾದ ಅರ್ಥದ ಅರಿವು ನಿಮಿತ್ತರಹಿತ, ಆಕಸ್ಮಿಕ. ಅದು ಹೇಗೆ ಹುಟ್ಟೀತು? ವಿಶೇಷ್ಯವಾಚಕವಾದ ಅನೇಕಾರ್ಥಶಬ್ದವೇ ವಿಶೇಷಣಸಮೂಹದ ದ್ವಿತೀಯಾರ್ಥಪ್ರತೀತಿಗೆ ನಿಬಂಧನ ಎಂದರೆ ಆಗ ಅನ್ಯೋನ್ಯಾಶ್ರಯ ಎಂಬ ದೋಷ.

**ನ ಚೋಭಯಮಪ್ಯನ್ಯೋನ್ಯಾನುಗ್ರಾಹಿತದುಪಜನನಸಾಮರ್ಥ್ಯಮ್ ಅವನಿಪವನಾದಿ–ಕಮಿವಾಂಕುರಮ್ ಅರ್ಥಾಂತರಪ್ರತಿಭಾಮ್ ಉಪಜನಯತಿ, ಯೋ ಜಡಪದಾರ್ಥ ಏವೋಪಪನ್ನಕ್ರಮಃ, ಯತ್ರ ಸ್ವಾಭಾವಿಕ ಏವಾಯಂ ಜನ್ಯಜನಕಭಾವಃ ನ ವಾಚ್ಯವಾಚಕಭಾವ ವಿಷಯಃ । ತತ್ರ ಹಿ ಪ್ರತಿಪತ್ತೃಪರಾಮರ್ಶಾಪೇಕ್ಷಾಪರತಂತ್ರೋಽರ್ಥಾಧ್ಯವಸಾಯೋಪಜನೋ, ನ ಸ್ವಾಭಾವಿಕಃ । ತತ್ರ ವಾಚ್ಯಾರ್ಥವಿಷಯಸ್ಯಾಸ್ಯ ವಾಚಕ ಏವ ತತ್ಸಂಸ್ಕಾರ–ಪ್ರಬೋಧನಿಬಂಧನಂ, ನಾನ್ಯಃ ।**

**ಅನುವಾದ:**

ಅವೆರಡೂ ಪರಸ್ಪರಾನುಗ್ರಾಹಕವಾಗಿ ಇನ್ನೊಂದು ಅರ್ಥದ ಪ್ರತೀತಿಯನ್ನು ಹುಟ್ಟಿಸುವ ಸಾಮರ್ಥ್ಯವನ್ನು ಉಂಟುಮಾಡುತ್ತವೆ, ಭೂಮಿ, ಗಾಳಿ, ನೀರು ಮುಂತಾದುವು ಪರಸ್ಪರಾನುಗ್ರಹದಿಂದ (ಬೀಜದಿಂದ) ಮೊಳಕೆಯನ್ನು ಹುಟ್ಟಿಸುವ ಹಾಗೆ ಎಂದೂ ಹೇಳಲಾಗದು. ಆ ಕ್ರಮವು ಜಡಪದಾರ್ಥಗಳಲ್ಲಿ ಮಾತ್ರ ಹೊಂದಿಕೊಳ್ಳುತ್ತದೆ. ಅವುಗಳಲ್ಲಿ ಇಂಥ ಜನ್ಯಜನಕಭಾವವು ನೈಸರ್ಗಿಕ. ಆ ಕ್ರಮವು ವಾಚ್ಯವಾಚಕಭಾವಕ್ಕೆ ಹೊಂದಿಕೊಳ್ಳದು. ಇದರಲ್ಲಿ ಎರಡನೆಯ ಅರ್ಥದ ಪ್ರತೀತಿಯುಂಟಾಗುವುದು ಪ್ರತಿಪತ್ತೃವಿನ (ವಾಚಕನ ಅಥವಾ ಕೇಳುಗನ) ಪರಾಮರ್ಶೆಯನ್ನು ಅವಲಂಬಿಸುತ್ತದೆ. ಅದು ಸ್ವಾಭಾವಿಕವಾಗಿ ಆಗುವುದಿಲ್ಲ. ಅದರಲ್ಲಿ ವಾಚ್ಯಾರ್ಥವಿಷಯುವಾದ ಪ್ರತೀತಿಗೆ ವಾಚಕಶಬ್ದವೇ ಆ ವಾಚ್ಯಾರ್ಥಸಂಸ್ಕಾರವು ಎಚ್ಚರಗೊಳ್ಳುವುದಕ್ಕೆ ನಿಮಿತ್ತ, ಬೇರೆ ಯಾವುದೂ ಅಲ್ಲ.

> **ಅರ್ಥಾಂತರವಿಷಯಸ್ಯ ತು ತಸ್ಯಾವಶ್ಯಮನ್ಯದೇವಾಪೇಕ್ಷಣೀಯಂ ಯುಕ್ತಂ, ನ ಪುನರೇಕ ಏವೋಭಯತ್ರಾಪಿ । ಏಕಹೇತುಕತ್ವೇಽರ್ಥಯೋಃ ಕ್ರಮನಿಯಮಾನುಪಪತ್ತೇಃ । ಪ್ರತ್ಯರ್ಥಂ ಶಬ್ದನಿವೇಶೋಪಗಮವಿರೋಧಾಚ್ಚೇತಿ ತಯೋರ್ಭಿನ್ನಹೇತುಕತ್ವಮವಗಂತವ್ಯಮ್ । ತಚ್ಚ ತದಾವೃತ್ತ್ಯಾ ವಾಸ್ತು ಅರ್ಥಪ್ರಕರಣಾದಿನಾ ವಾ, ನ ತತ್ರಾಸ್ಮಾಕಮ್ ಅಭಿನಿವೇಶಃ ಕಶ್ಚಿತ್ । ಕೇವಲಮನ್ಯತಸ್ತತ್ಪ್ರತಿಭೋದ್ಭೇದಾಭ್ಯುಪಗಮೇಽನುಮಾನಾಂತರ್ಭಾವಃ ಸ್ಫುಟ ಏವ, ತಸ್ಯೈವ ಲಿಂಗತಾಪತ್ತೇರಿತಿ ಶಬ್ದಸ್ಯಾನೇಕಾರ್ಥತಾವಗಮಮಾತ್ರಮೂಲೋಽಯಮದ್ಯಾಪಿ ಕವೀನಾಮ್ ಅರ್ಥಾಂತರಪ್ರತೀತಿಭ್ರಮ ಇತಿ ವ್ಯರ್ಥಃ ಶಬ್ದಶಕ್ತಿಪರಿಕಲ್ಪನಪ್ರಯಾಸಃ ।**

**ಅನುವಾದ:**

ಇನ್ನೊಂದು ಅರ್ಥದ ವಿಷಯದಲ್ಲಿ ಬೇರೆ ಒಂದು ನಿಬಂಧನವನ್ನು ಹುಡುಕಬೇಕು ಎನ್ನುವುದೇ ಯುಕ್ತ. ಒಂದೇ ಶಬ್ದವು ಎರಡು ಪ್ರತೀತಿಗಳಿಗೂ ನಿಬಂಧನವೆನ್ನುವುದು ಸರಿಯಲ್ಲ. ಎರಡು ಅರ್ಥಗಳಿಗೂ ಒಂದೇ ಶಬ್ದವು ಕಾರಣವಾಗುವುದಾದರೆ ಆ ಅರ್ಥಗಳಲ್ಲಿ (ಪೌರ್ವಾಪರ್ಯನಿಯಮವೆಂಬ) ಕ್ರಮವೇ ಅನುಪಪನ್ನವಾದೀತು. ಹಾಗೆನ್ನಲು ಪ್ರತಿಯೊಂದು ಅರ್ಥವನ್ನು ತಿಳಿಸಲು ಶಬ್ದವನ್ನು ಉಚ್ಚರಿಸಬೇಕು ಎಂಬ ಸಿದ್ಧಾಂತದ ವಿರೋಧವೂ ಇದೆ. ನಿಬಂಧನವು ಶಬ್ದದ ಆವೃತ್ತಿಯಿಂದ ಆಗಬಹುದು ಅಥವಾ ಅರ್ಥ(ಪ್ರಯೋಜನ), ಪ್ರಕರಣ ಇತ್ಯಾದಿಗಳಿಂದಲೂ ಆಗಬಹುದು. ನಮಗೆ ಆ ವಿಷಯದಲ್ಲಿ ಯಾವ ಆಗ್ರಹವೂ ಇಲ್ಲ. ಬೇರೆಯ ನಿಮಿತ್ತದಿಂದ ಎರಡನೆಯ ಅರ್ಥದ ಪ್ರತೀತಿಯುಂಟಾಗುವುದೆಂದು ನೀವು ಒಪ್ಪಿಕೊಂಡರೆ, ಅದೂ ಅನುಮಾನದಲ್ಲಿ ಅಂತರ್ಭಾವವನ್ನು ಪಡೆಯುತ್ತದೆಂಬುದು ಸ್ಪಷ್ಟ, ಏಕೆಂದರೆ ಆ ನಿಮಿತ್ತವೇ ಲಿಂಗವಾಗುತ್ತದೆ. ಹೀಗಿರುವಾಗ (ಒಂದೇ ಶಬ್ದದಿಂದ) ಅರ್ಥಾಂತರದ ಪ್ರತೀತಿಯೂ ಉಂಟಾಗುತ್ತದೆ

ಎಂದು ಕವಿಗಳಿಗಿರುವ ಭ್ರಾಂತಿಯು ಶಬ್ದಕ್ಕೆ ಅನೇಕಾರ್ಥಗಳಿವೆ ಎಂಬ ಚಿಂತನೆಯಿಂದ ಹುಟ್ಟಿದೆಯಷ್ಟೆ. ಹೀಗೆ ಶಬ್ದಶಕ್ತಿಮೂಲಧ್ವನಿ ಎಂಬ ಪರಿಕಲ್ಪನೆಯ ಪ್ರಯಾಸ ನಿಷ್ಪ್ರಯೋಜನವೇ ಆಗಿದೆ.

**ಏವಂ ಚಾಸ್ಯ ವಾಚ್ಯಾತಿರೇಕಿಣೋಽರ್ಥಾಂತರಸ್ಯ ಪ್ರತೀತಿರೇವ ನ ಸಮಸ್ತೀತಿ ಯತ್ರಾಪ್ರಸ್ತುತಾಭಿಧಾನಪ್ರಸಂಗಭಯಾತ್ ತಯೋರುಪಮಾನೋಪಮೇಯಭಾವಕಲ್ಪನಂ ತದಪಿ ನಿರ್ಮೂಲಮೇವೇತ್ಯವಗಂತವ್ಯಮ್ ।**

**ಕಿಂಚ ನ ಸ್ವಭಾವತ ಏವ ಶಬ್ದಾನಾಮರ್ಥಪ್ರತೀತಿಕ್ರಮ ಇತಿ ನಿಯಮಸಂಭವಃ । ಕಿಂ ತರ್ಹಿ? ಸಾಮಗ್ರೀವಶಾತ್ । ಸಾಹಿ ಯದರ್ಥಾನುಗುಣಾ ಉಪಲಭ್ಯತೇ ತಮೇವ ತಸ್ಯಾರ್ಥಂ ಕಲ್ಪಯತೀತಿ ಸರ್ವಃ ಶಬ್ದಃ ಸರ್ವಾರ್ಥವಿಷಯಃ, ಸರ್ವಶ್ಚಾರ್ಥಃ ಸರ್ವಶಬ್ದವಿಷಯೋ ಭವಿತುಮರ್ಹತಿ । ತತಶ್ಚ ಅತದರ್ಥೋಽಪ್ಯನ್ಯಃ ಶಬ್ದಃ ಸಾಮಗ್ರೀವಶಾತ್ ಸಮಾಸೋಕ್ತಿನ್ಯಾಯೇನ ತಮವಗಮಯಿತುಂ ಕ್ಷಮೇತೈವ, ನ ಪುನಸ್ತದರ್ಥೋಽಪಿ ಸಾಮಗ್ರೀವಿಕಲೋ ಗವಾದಿಶಬ್ದಃ ।**

**ಅನುವಾದ:**

ಆದ್ದರಿಂದ ವಾಚ್ಯಕ್ಕಿಂತ ಭಿನ್ನವಾದ ಇನ್ನೊಂದು ಅರ್ಥದ ಪ್ರತೀತಿಯೇ ಸಂಭವಿಸುವುದಿಲ್ಲ. ಹೀಗಿರುವಾಗ ಅಲ್ಲಿ ಅಪ್ರಸ್ತುತಾರ್ಥವನ್ನು ಹೇಳಿದ ಪ್ರಸಂಗ ಬರಬಾರದೆಂದು ಅವೆರಡರ (ವಾಚ್ಯಾರ್ಥ–ವ್ಯಂಗ್ಯಾರ್ಥಗಳ) ಉಪಮಾನೋಪಮೇಯಭಾವದ ಕಲ್ಪನೆಯನ್ನು ಮಾಡಿರುವುದಂತೂ ನಿರ್ಮೂಲವೇ ಎಂದು ಅರಿತುಕೊಳ್ಳಬೇಕು.

ಶಬ್ದಗಳು ಅರ್ಥವನ್ನು ತಿಳಿಸುವುದು ಸ್ವಾಭಾವಿಕ ಎಂದು ನಿಯಮವನ್ನು ಮಾಡಲು ಆಗದು. ಹಾಗಿದ್ದರೆ ಹೇಗೆ? ಸಾಮಗ್ರಿಯ ವಶದಿಂದ. ಯಾವ ಅರ್ಥಕ್ಕೆ ಅನುಗುಣವಾದ ಸಾಮಗ್ರಿ ದೊರಕುವುದೋ ಅದಕ್ಕೆ ಅದೇ ಅರ್ಥವಾಗುತ್ತದೆ. ಎಲ್ಲ ಶಬ್ದವೂ ಎಲ್ಲ ಅರ್ಥವನ್ನು ಹೇಳಬಹುದು, ಎಲ್ಲ ಅರ್ಥವೂ ಎಲ್ಲ ಶಬ್ದಗಳ ವಾಚ್ಯವಾಗಲು ಅರ್ಹ. ಆದ್ದರಿಂದ ದ್ವಿತೀಯಾರ್ಥವನ್ನು ಹೊಂದಿಲ್ಲದ ಶಬ್ದವೂ ಸಾಮಗ್ರೀವಶದಿಂದ ಸಮಾಸೋಕ್ತಿನ್ಯಾಯಾನುಸಾರವಾಗಿ ಎರಡನೆಯ ಅರ್ಥವನ್ನು ತಿಳಿಸಲು ಶಕ್ತವಾಗುತ್ತದೆ. ದ್ವಿತೀಯಾರ್ಥವನ್ನು ಹೊಂದಿರುವ ಶಬ್ದವಾದರೂ ಸಾಮಗ್ರೀರಹಿತವಾದರೆ ಶಕ್ತವಾಗದು. ಗೋಶಬ್ದವು ಪ್ರಕೃತದಲ್ಲಿ ಹಾಗೆ ಅಶಕ್ತ.

(ಅಸಾಧುಶಬ್ದವೂ ಪ್ರತಿಪಾದಕ)

**ಆಸ್ತಾಂ ವಾನ್ಯಃ ಶಬ್ದೋ ಯಃ ಸಾಧುತ್ವೇನ ಪ್ರಸಿದ್ಧಃ । ಅಸಾಧುರಪಿ ಯಾವತ್ ತದ್ವಶಾದನು–ಮಿತವಾಚಕಭಾವೋಽಭಿಮತಮರ್ಥಮಭಿದಧಾತ್ಯೇವೇತಿ ಸಾಮಗ್ರೀಸದ್ಭಾವಾನ್ವಯ–ವ್ಯತಿರೇಕಾನುವಿಧಾಯಿನೀ ಇಯಮರ್ಥಾಂತರಪ್ರತೀತಿರಿತಿ ಅವಸೀಯತೇ । ಯದಾಹುಃ –**

**ಅಸಾಧುರನುಮಾನೇನ ವಾಚಕಃ ಕೈಶ್ಚಿದಿಷ್ಯತೇ ।**
**ವಾಚಕತ್ವಾವಿಶೇಷೇಽಪಿ ನಿಯಮಃ ಪುಣ್ಯಪಾಪಯೋಃ ॥**
**ಇತಿ । ನ ಚೈತಾವತಾ ತಸ್ಯಾಪಶಬ್ದತ್ವಂ ಕಲ್ಪಯಿತುಂ ಯುಕ್ತಮ್ ।**
**ಯತಃ ಶಬ್ದಸ್ತಾವಚ್ಛಬ್ದ್ಯತೇ ವಿಮೃಶ್ಯತೇಽಭಿಧೀಯತೇ**
**ಅನೇನಾರ್ಥ ಇತಿ ಶಬ್ದನಕ್ರಿಯಾಕರಣಭಾವೋಪಪನ್ನಾರ್ಥಃ**
**ಕಥ್ಯತೇ । ಸ ಚ ತ್ರಿವಿಧಃ । ಸಾಧುರಸಾಧುರಪಶಬ್ದಶ್ಚೇತಿ ।**

**ಅನುವಾದ:**

ಸಾಧು (ವ್ಯಾಕರಣಾನುಮತ) ಎಂದು ಪ್ರಸಿದ್ಧವಾದ ಶಬ್ದ ಹಾಗಿರಲಿ. ಅಸಾಧುಶಬ್ದವೂ ಶಬ್ದದ ಕಾರಣದಿಂದ ಅಭಿಮತ ಅರ್ಥವನ್ನು ತಿಳಿಸೇ ತಿಳಿಸುತ್ತದೆ. ಅದರ ವಾಚಕತ್ವವು (ಸಾಧು ಶಬ್ದದ ಸ್ಮರಣೆಯಿಂದ) ಅನುಮಿತವಾಗಿರುತ್ತದೆ. ಆದ್ದರಿಂದ (ವಾಚ್ಯಾರ್ಥಕ್ಕಿಂತ ಬೇರೆಯಾದ) ಇನ್ನೊಂದು ಅರ್ಥದ ಪ್ರತೀತಿಯು ಸಾಮಗ್ರಿಯ ಉಪಸ್ಥಿತಿಯ ಅನ್ವಯವ್ಯತಿರೇಕಗಳನ್ನು ಅನುಸರಿಸುತ್ತದೆ ಎಂದು ನಿಶ್ಚಯಿಸಬೇಕು. ಹಿಂದಿನವರೂ ಹೇಳಿದ್ದಾರೆ– ಅನುಮಿತಿಯ ಆಶ್ರಯಿಂದ ಅಸಾಧುಶಬ್ದವೂ ವಾಚಕವಾಗುತ್ತದೆ ಎಂದು ಕೆಲವರ ಅಭಿಪ್ರಾಯ. ವಾಚಕತ್ವದಲ್ಲಿ (ಸಾಧು–ಅಸಾಧು ಶಬ್ದಗಳಿಗೆ ಯಾವ) ವಿಶೇಷವೂ ಇಲ್ಲ. ಆದರೆ ಪುಣ್ಯ–ಪಾಪಗಳ ನಿಯಮಕ್ಕೆ ಅವು ಕಾರಣ.

ಇಷ್ಟು ಮಾತ್ರದಿಂದ ಅಸಾಧುಶಬ್ದಕ್ಕೆ ಅಪಶಬ್ದತ್ವವನ್ನು ಕಲ್ಪಿಸುವುದು ಸರಿಯಲ್ಲ. ಏಕೆಂದರೆ ಅರ್ಥವನ್ನು ಯಾವುದು ತಿಳಿಸುವುದೋ ಅದು ಶಬ್ದ. ಶಬ್ದನ ಎಂಬ ಕ್ರಿಯೆಗೆ ಕರಣ ಎಂಬ ಕಾರಣದಿಂದ ಶಬ್ದಶಬ್ದದ ಅರ್ಥ ಉಪಪನ್ನವಾಗುತ್ತದೆ. ಅದು ಮೂರು ವಿಧ– ಸಾಧು, ಅಸಾಧು, ಅಪಶಬ್ದ –ಎಂದು.

(ಸಾಧುಶಬ್ದ–ಅಸಾಧುಶಬ್ದ)

**ಲಕ್ಷಣಾನುಗತಃ ಸಾಧುಃ । ಪ್ರಕೃತಿಪ್ರತ್ಯಯಾದಿವಿಭಾಗಪರಿಕಲ್ಪನಯಾ ಲಕ್ಷಣೇನಾನುಗಮ್ಯತ ಇತಿ । ಯತೋಽನ್ಯೋಽಸಾಧುರವ್ಯುತ್ಪನ್ನೋ ಡಿತ್ಥಾದಿವತ್ ।**

(ಅಪಶಬ್ದದ ಲಕ್ಷಣ)

**ಶಬ್ದಾದಪೇತೋಽಪಶಬ್ದಃ ಯೋಽರ್ಥಂ ನ ಪ್ರತಿಪಾದಯತಿ**
**ವಿಗುಣಸಾಮಗ್ರೀಕ ಇತ್ಯರ್ಥಃ ।**

**ಏವಂ ಚ ಸಾಧುಶಬ್ದಸ್ಯಾಪಿ ಸಾಮಗ್ರೀವೈಗುಣ್ಯೇನ ಅವಾಚಕತ್ವಾದ್ ಅಪಶಬ್ದತ್ವಮುಪಪನ್ನಂ ಭವತಿ । ತತಶ್ಚ ವಾಚಕತ್ವಾವಾಚಕತ್ವಮಾತ್ರನಿಬಂಧನೇ ಶಬ್ದಾಪಶಬ್ದತ್ವವ್ಯವಹಾರೇ ವ್ಯವಸ್ಥಿತೇ ಸತಿ ಯೇ ಕೇಚಿದ್ ಇತಿಹಾಸಪುರಾಣಾದಾವಾಗಮಶಾಸ್ತ್ರದೌ ಚ ಕ್ವಚಿತ್ ಕೇಷಾಂಚಿಚ್ಛಬ್ದಾನಾಮಸಾಧುತ್ವಾದಪಶಬ್ದತ್ವಮ್ ಉದ್ಭಾವಯಂತಿ ತೇ ಪ್ರತ್ಯುಕ್ತಾ ಭವಂತಿ ।**

**ಅನುವಾದ:**

ಲಕ್ಷಣಾನುಸಾರಿಯಾಗಿರುವುದು ಸಾಧುಶಬ್ದ. ಏಕೆಂದರೆ ಪ್ರಕೃತಿ–ಪ್ರತ್ಯಯಗಳ ವಿಭಾಗದ ಪರಿಕಲ್ಪನೆ ಅದರಲ್ಲಿ ಇರುವುದರಿಂದ ವ್ಯಾಕರಣೋಕ್ತವಾದ ಲಕ್ಷಣವು ಅದರಲ್ಲಿ ಇರುತ್ತದೆ. ಅದಕ್ಕಿಂತಲೂ ಬೇರೆಯಾದುದು ಅಸಾಧು ಶಬ್ದ. ಅದಕ್ಕೆ ವ್ಯುತ್ಪತ್ತಿ ಇರುವುದಿಲ್ಲ. ಡಿತ್ಥ ಮುಂತಾದ ಶಬ್ದಗಳು ಉದಾಹರಣೆ. ಶಬ್ದದಿಂದ ದೂರವಾದುದು ಅಪಶಬ್ದ. ಅದು ಅರ್ಥವನ್ನು ಪ್ರತಿಪಾದಿಸುವುದಿಲ್ಲ. (ಶಬ್ದಕ್ಕೆ ಅರ್ಥಪ್ರತಿಪಾದನೆಗೆ ಬೇಕಾದ) ಸಾಮಗ್ರಿ ಅದರಲ್ಲಿ ಇಲ್ಲ ಎಂದು ಅಭಿಪ್ರಾಯ.

ಹೀಗೆ ಸಾಧುಶಬ್ದಕ್ಕೂ ಸಾಮಗ್ರಿಯ ಕೊರತೆಯಿಂದ ಅವಾಚಕತ್ವವು ಒದಗಿದಾಗ ಅಪಶಬ್ದತ್ವವು ಹೊಂದುತ್ತದೆ. ಆದ್ದರಿಂದ ವಾಚಕತ್ವ–ಅವಾಚಕತ್ವ ಮಾತ್ರ ನಿಮಿತ್ತವಾಗಿ ಶಬ್ದ–ಅಪಶಬ್ದ ಎಂಬ ವ್ಯವಹಾರವು ವ್ಯವಸ್ಥಿತವಾದಾಗ ಇತಿಹಾಸಪುರಾಣಗಳಲ್ಲೂ ಆಗಮಶಾಸ್ತ್ರಾದಿಗಳಲ್ಲೂ ಅಲ್ಲಲ್ಲಿ ಪ್ರಯುಕ್ತವಾದ ಕೆಲವು ಶಬ್ದಗಳಿಗೆ ಅಸಾಧುತ್ವಕಾರಣದಿಂದ ಅಪಶಬ್ದತ್ವವನ್ನು ಕೆಲವರು ಹೇಳುತ್ತಾರೆ. ಅವರೂ ಈಗ ನಿರಾಕೃತರಾಗುತ್ತಾರೆ.

**ಅಸ್ಮಾನ್ ಪ್ರತಿ ಪುನರವಿಷಯೇ ಪ್ರಯುಜ್ಯಮಾನಃ ಶಬ್ದೋಽಪಶಬ್ದ ಇತಿ । ತದ್ಯಥಾ–**

**ಮಧುಕರೈರಪವಾದಕರೈರಿವ ಸ್ಮೃತಿಭುವಃ ಪಥಿಕಾ ಹರಿಣಾ ಇವ ।**
**ಕಲತಯಾ ವಚಸಃ ಪರಿವಾದಿನೀಸ್ವರಜಿತಾ ರಜಿತಾ ವಶಮಾಯಯುಃ ॥**

**ಅತ್ರ ಹರಿಣಾನಾಮ್ ಉಪಮಾನತ್ವಾದ್ ಅಪ್ರಾಧಾನ್ಯಮ್ ಅವಿಗಣಯ್ಯೈವ ಯಃ ಕವಿನಾ ರಂಜೇರ್ಲುಪ್ತಾನುನಾಸಿಕಃ ಪ್ರಯುಕ್ತಃ ಸೋಽಪಶಬ್ದ ಏವ । ತತ್ಪ್ರಯೋಗಸ್ಯ ಉಪಮೇಯಾರ್ಥಾನುಗುಣ್ಯೇನ ಉಪಪನ್ನತ್ವಾತ್ । ತಸ್ಯೈವ ಪ್ರಾಧಾನ್ಯಾತ್, ಪ್ರಧಾನೇ ಚ ಕಾರ್ಯಸಂಪ್ರತ್ಯಯೋಪಗಮಾತ್ ।**

**ಅನುವಾದ:**

ನಮ್ಮ ದೃಷ್ಟಿಯಿಂದ ಹೇಳುವುದಾದರೆ ಅವಿಷಯದಲ್ಲಿ ಪ್ರಯೋಗಿಸಲ್ಪಟ್ಟ ಶಬ್ದವೇ ಅಪಶಬ್ದ. ಅದರ ಉದಾಹರಣೆ– (ಮಧುಕರೈ......) "ವೀಣಾವಾದನದ ನಾದದಿಂದ ತಲ್ಲೀನವಾದ ಜಿಂಕೆಗಳಂತೆ ಪಾಂಥರು ಅಪವಾದವನ್ನು ಮಾಡುತ್ತಿವೆಯೋ ಎಂಬಂತೆ ಗುಂಯ್‌ಗುಡುತ್ತಿದ್ದ ದುಂಬಿಗಳಿಂದ, ಮಾತಿನ ಅವ್ಯಕ್ತ ಮಾಧುರ್ಯದಿಂದ ಮನ್ಮಥನ ಅಧೀನರಾದರು."

ಈ ಪದ್ಯದಲ್ಲಿ ಹರಿಣಗಳು (ಜಿಂಕೆಗಳು) ಉಪಮಾನ. ಆದ್ದರಿಂದ ಅವು ಅಪ್ರಧಾನ. ಆ ಅಪ್ರಾಧಾನ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಕವಿಯು ರಂಜ್‌ಧಾತುವನ್ನು ಅನುನಾಸಿಕ ಲೋಪವನ್ನು ಮಾಡಿ ಪ್ರಯೋಗಿಸಿದ್ದಾನೆ. ಆದ್ದರಿಂದ ಇಲ್ಲಿ 'ರಜಿತಾಃ' ಎಂಬ ಶಬ್ದವು ಅಪಶಬ್ದವೇ ಆಗಿದೆ.

ಉಪಮೇಯಕ್ಕೆ (ಪಥಿಕಾಃ ಎಂಬ ಶಬ್ದದ ಅರ್ಥಕ್ಕೆ) ಅನ್ವಯಿಸಿ ಹೇಳಿದರೆ ಮಾತ್ರ ರಜಿತಾಃ ಎಂಬ ಶಬ್ದವು ಸರಿಯಾಗಿರುತ್ತದೆ. ಏಕೆಂದರೆ ಉಪಮೇಯಕ್ಕೇ ವಾಕ್ಯದಲ್ಲಿ ಪ್ರಾಧಾನ್ಯವಿರುತ್ತದೆ. (ಪ್ರಧಾನವೂ ಅಪ್ರಧಾನವೂ ಇದ್ದಾಗ ವ್ಯಾಕರಣೋಕ್ತವಾದ) ಕಾರ್ಯಗಳು ಪ್ರಧಾನದಲ್ಲೇ ಉಂಟಾಗುತ್ತವೆ ಎಂದು ಒಪ್ಪಿಕೊಳ್ಳಲಾಗಿದೆ.

**ವಿವರಣೆ:**

ಈ ಪದ್ಯದಲ್ಲಿ ಪ್ರಯುಕ್ತವಾಗಿರುವ ರಜಿತಾ ಎಂಬ ಶಬ್ದ ಸಂಸ್ಕೃತ ವ್ಯಾಕರಣದ ವಿಶೇಷನಿಯಮದ ದೃಷ್ಟಿಯಿಂದ ತಪ್ಪಾಗಿದೆ ಎಂಬುದು ಮಹಿಮಭಟ್ಟನ ಅಭಿಪ್ರಾಯ. ರಂಜ್ ಧಾತುವಿಗೆ ಕ್ತಪ್ರತ್ಯಯವನ್ನು ಸೇರಿಸಿದಾಗ ರಂಜಿತ ಎಂಬ ರೂಪವಾಗಬೇಕು. ಈ ಸಾಮಾನ್ಯ ನಿಯಮಕ್ಕೆ ವಾರ್ತಿಕಕಾರನು ಅಪವಾದವನ್ನು ಹೇಳಿದ್ದಾನೆ.

"ರಂಜೇರ್ಣೌ ಮೃಗರಮಣೇ ನಲೋಪೋ ವಕ್ತವ್ಯಃ" ಎಂಬುದು ವಾರ್ತಿಕ. ಜಿಂಕೆಗಳು ಮಧುರವಾದ ವೀಣಾವಾದನದ ನಾದದಿಂದ ಆಕರ್ಷಿತವಾಗಿ ಮೈಮರೆಯುತ್ತವೆ, ಆಗ ಅವುಗಳನ್ನು ಬೇಟೆಗಾರರು ಹಿಡಿಯುತ್ತಾರೆ, ಅಥವಾ ಕೊಲ್ಲುತ್ತಾರೆ ಎಂಬ ನಂಬಿಕೆಯಿದೆ. ಹೀಗೆ ವೀಣೆಯ ನಾದದಿಂದ ಜಿಂಕೆಗಳನ್ನು ರಂಜಿಸಿದಾಗ ಕ್ತ ಪ್ರತ್ಯಯಾಂತ ರೂಪವು ರಜಿತ ಎಂದಾಗಬೇಕು. ಪ್ರಕೃತ ಪದ್ಯದಲ್ಲಿ ಹರಿಣಾ ಇವ ಪಥಿಕಾ ರಜಿತಾಃ ಎಂಬ ಅರ್ಥವು ವಿವಕ್ಷಿತ. ಹರಿಣಗಳು ಇಲ್ಲಿ ಕೇವಲ ಉಪಮಾನ. ರಂಜಿತರಾದುದು ಪಥಿಕರು. ಆದ್ದರಿಂದ ಅನುನಾಸಿಕಲೋಪ ಬರಬಾರದು. ವ್ಯಾಕರಣೋಕ್ತ ನಿಯಮಗಳು ಪ್ರಧಾನಾರ್ಥಕ್ಕೆ ಅನ್ವಯಿಸುತ್ತವೆ, ಗೌಣಾರ್ಥಕ್ಕಲ್ಲ. ಗೌಣಮುಖ್ಯಯೋಃ ಮುಖ್ಯೇ ಕಾರ್ಯಸಂಪ್ರತ್ಯಯಃ ಎಂಬ ಪರಿಭಾಷೆಯನ್ನು ಸಂಸ್ಕೃತವ್ಯಾಕರಣದಲ್ಲಿ ಒಪ್ಪಿಕೊಳ್ಳಲಾಗಿದೆ.

ರಜಿತ ಎಂಬ ಪದ ಒಂದು ಸನ್ನಿವೇಶದಲ್ಲಿ ಸಾಧುವೇ. ಆದರೆ ಪ್ರಕೃತದಲ್ಲಿ ತಪ್ಪಾಗಿದೆ. ಆದ್ದರಿಂದ ಅದು ಅಪಶಬ್ದ.

**ಕೇವಲಮಪ್ರಧಾನಾಪೇಕ್ಷಯಾ ಶಬ್ದಸಂಸ್ಕಾರವಿಪರಿಣಾಮೇನ**
**ವ್ಯಾಖ್ಯಾನಮತ್ರ ಶ್ರೇಯೋ, ನ ಪುನಸ್ತಸ್ಯ ಪ್ರಯೋಗಃ ।**
**ಯುಜ್ಯೇತ ಪುನರೇತದ್ ಯದಿ ಪಥಿಕಾನಾಂ ಹರಿಣ–**
**ತಯಾ ರೂಪಣಂ ಸ್ಯಾದಾರೋಪೋ ವಾ । ಯಥಾ–**
**"ಸ್ಮೃತಿಭುವೋ ಬತ ಪಾಂಥಮೃಗವ್ರಜಾಃ" ಇತಿ ।**
**ಯಥಾ ವಾ– "ಸ್ಮೃತಿಭುವಃ ಪಥಿಕಾ ಹರಿಣವ್ರಜಾಃ" ಇತಿ ।**
**ಅನ್ಯಥಾ ತ್ವಪಶಬ್ದ ಏವಾಯಮವಿಷಯೇ ಪ್ರಯುಕ್ತತ್ವಾತ್,**
**ಅಸ್ವಗೋಣ್ಯಾದಿಶಬ್ದವತ್ । ಯದುಕ್ತಮ್–**
**ಅಸ್ವಗೋಣ್ಯಾದಯಃ ಶಬ್ದಾಃ ಸಾಧವೋ ವಿಷಯಾಂತರೇ ।**
**ನಿಮಿತ್ತಭೇದಾತ್ ಸರ್ವತ್ರ ಸಾಧುತ್ವಂ ಚ ವ್ಯವಸ್ಥಿತಮ್ ॥ ಇತಿ ।**

**ಅನುವಾದ:**

ಅಪ್ರಧಾನವಾದ (ಹರಿಣಾ ಇವ ಎಂಬ ಶಬ್ದದ) ದೃಷ್ಟಿಯಿಂದ ಶಬ್ದಸಂಸ್ಕಾರದ ವಿಪರಿಣಾಮವನ್ನು ಮಾಡಿ ಇಲ್ಲಿ ವ್ಯಾಖ್ಯಾನವನ್ನು ಮಾಡುವುದು

ಉತ್ತಮ, ರಜಿತ ಎಂಬ ಶಬ್ದದ ಪ್ರಯೋಗ ಸರಿಯಲ್ಲ. ಪಥಿಕರೇ ಹರಿಣಗಳು ಎಂಬ ರೂಪಣವನ್ನಾಗಲಿ ಆರೋಪವನ್ನಾಗಲಿ ಮಾಡಿದ್ದರೆ ಅಂಥ ಪ್ರಯೋಗ ಸಾಧುವಾಗುತ್ತಿತ್ತು. ಅದು ಹೇಗೆಂದರೆ– ಪಾಂಥಮೃಗವ್ರಜಾಃ (ಪಾಂಥರೆಂಬ ಮೃಗಗಳ ಹಿಂಡುಗಳು) ಎಂದು ಮಾಡಬಹುದು ಅಥವಾ "ಸ್ಮೃತಿಭುವಃ ಪಥಿಕಾ ಹರಿಣವ್ರಜಾಃ" (ಪಥಿಕರು ಮನ್ಮಥನಿಗೆ ಜಿಂಕೆಹಿಂಡುಗಳು) ಎಂಬ ಆರೋಪ. ಹಾಗೆ ಮಾಡದಿದ್ದರೆ ಇಲ್ಲಿ ರಜಿತಾಃ ಎಂಬ ಶಬ್ದವು ಅಪಶಬ್ದವೇ. ಅಸ್ವ, ಗೋಣೀ ಇತ್ಯಾದಿ ಶಬ್ದಗಳಂತೆ ಅದು ಇಲ್ಲಿ ಅವಿಷಯದಲ್ಲಿ ಪ್ರಯುಕ್ತವಾಗಿದೆ. ಪ್ರಾಚೀನರೂ ಹೇಳಿದ್ದಾರೆ– "ಅಸ್ವ, ಗೋಣೀ ಇತ್ಯಾದಿ ಶಬ್ದಗಳು ಬೇರೆ ಅರ್ಥದಲ್ಲಿ ಸಾಧುಶಬ್ದಗಳು. ಎಲ್ಲ ಸ್ಥಳಗಳಲ್ಲಿ ನಿಮಿತ್ತಭೇದದಿಂದ ಸಾಧುತ್ವ ನಿಶ್ಚಿತವಾಗುತ್ತದೆ."

(ಕುದುರೆ ಎಂಬ ಅರ್ಥದಲ್ಲಿ ಅಸ್ವ ಎಂಬುದು ಅಪಶಬ್ದ. ಹಣವಿಲ್ಲದ ಮನುಷ್ಯ ಎಂಬ ಅರ್ಥದಲ್ಲಿ ಅದು ಸಾಧುಶಬ್ದ. ಹಸು ಎಂಬ ಅರ್ಥದಲ್ಲಿ 'ಗೋಣೀ' ಅಪಶಬ್ದ. ಚೀಲ ಎಂಬ ಅರ್ಥದಲ್ಲಿ ಅದು ಸಾಧುಶಬ್ದ.)

**ಶಬ್ದಪ್ರಯೋಗಃ ಕರ್ತವ್ಯಃ ಪ್ರಧಾನಾರ್ಥವ್ಯಪೇಕ್ಷಯಾ ।**
**ತದನ್ಯಾಪೇಕ್ಷಯಾ ತ್ವರ್ಥಾದೇನಂ ವಿಪರಿಣಾಮಯೇತ್ ॥**
**ವಿಪರೀತಮತೋ ಯತ್ ಸ್ಯಾದಪಶಬ್ದಃ ಸ ಮಾಂ ಪ್ರತಿ ।**
**ಹೇತುರ್ಧ್ವನೇಶ್ಚಾಯಮೇವ ಪ್ರಯೋಗಪರಿಣಾಮಯೋಃ ॥**
**ಪರಿಣಾಮೋ ಬಹುವಿಧೋ ವಾಚೋ ಲಿಂಗಾದಿಭೇದತಃ ।**
**ಸ ಚ ಪ್ರಸಿದ್ಧ ಏವೇತಿ ನಾಸ್ಮಾಭಿರಿಹ ದರ್ಶಿತಃ ॥ ಇತಿ ಸಂಗ್ರಹಶ್ಲೋಕಾಃ ।**

**ಯದ್ಯಪಿ ಚ ಕೇಚಿದಾಚಕ್ಷತೇ ಸಮಾನಾಯಾಮ್ ಅರ್ಥಗತೌ ಶಬ್ದೇನಾಪಶಬ್ದೇನ ಚ ಶಾಸ್ತ್ರೇಣ ಧರ್ಮ–ನಿಯಮಃ ಕ್ರಿಯತೇ– ಸಾಧುಭಿರೇವ ಭಾಷಿತವ್ಯಂ ನಾಸಾಧುಭಿರಿತಿ । ತತ್ರ ಕೂಪಖಾನಕವದ್ ವೃತ್ತಿರ್ಭವಿಷ್ಯತಿ ಇತ್ಯಾದಿನಾ ತೈರೇವ ಪ್ರತಿವಿಹಿತಮ್ ।**

**ಅನುವಾದ:**

ಪ್ರಧಾನಾರ್ಥದ ದೃಷ್ಟಿಯಿಂದ ಸರಿಯಾದ ಶಬ್ದದ ಪ್ರಯೋಗವನ್ನು ಮಾಡಬೇಕು. ಅಪ್ರಧಾನಾರ್ಥದ ದೃಷ್ಟಿಯಿಂದ ಪ್ರಯುಕ್ತವಾದ ಶಬ್ದದ ವಿಪರಿಣಾಮವನ್ನು ಮಾಡಿಕೊಳ್ಳಬೇಕು. ಇದಕ್ಕೆ ವಿರುದ್ಧವಾಗಿ ಮಾಡಿದ ಪ್ರಯೋಗ ನನ್ನ ಅಭಿಪ್ರಾಯದಲ್ಲಿ ಅಪಶಬ್ದ. ದತ್ತಾನಂದಾಃ ಇತ್ಯಾದಿ ಪದ್ಯದಲ್ಲಿ ಇದನ್ನೇ ಧ್ವನಿಯ ಕಾರಣ ಎಂದು ಒಪ್ಪಿಕೊಳ್ಳಲಾಗಿದೆ. ಶಬ್ದದ ಪ್ರಯೋಗ ಮತ್ತು ಪರಿಣಾಮಗಳಲ್ಲಿ ಪರಿಣಾಮವು ಬಹುವಿಧವಾಗಿರಬಹುದು. ಶಬ್ದದ ಲಿಂಗ ಮುಂತಾದುವುಗಳಿಂದ ಮಾಡಿಕೊಳ್ಳುವ ಅಂಥ ವಿಪರಿಣಾಮವು ಪ್ರಸಿದ್ಧವೇ ಆದುದರಿಂದ ನಾವು ಇಲ್ಲಿ ಅದನ್ನು ವಿವರಿಸಿಲ್ಲ. ಇವು ಸಂಗ್ರಹ ಶ್ಲೋಕಗಳು. ಕೆಲವರು ಹೇಳಿದ್ದಾರೆ–

"ಶಬ್ದದಿಂದಲೂ ಅಪಶಬ್ದದಿಂದಲೂ ಅರ್ಥಜ್ಞಾನವು ಸಮಾನ. ಹೀಗಿದ್ದರೂ ಸಾಧುಶಬ್ದಗಳಿಂದ ವ್ಯವಹಾರವನ್ನು ಮಾಡಬೇಕು, ಅಸಾಧುಶಬ್ದಗಳಿಂದಲ್ಲ ಎಂದು ಶಾಸ್ತ್ರವು ಧರ್ಮನಿಯಮವನ್ನು ಮಾಡುತ್ತದೆ." ಈ ಬಗೆಗೆ ಬಾವಿಯನ್ನು ತೋಡುವವನ ಹಾಗೆ ದೋಷಪರಿಹಾರವೂ ಆಗುತ್ತದೆ ಇತ್ಯಾದಿಯನ್ನು ಹೇಳಿ ಅವರೇ ಸಮಾಧಾನವನ್ನೂ ಸೂಚಿಸಿದ್ದಾರೆ.

(ಮೂರು ವಿಧವಾದ ಶಾಸ್ತ್ರ)

**ಸಾ ಚೇತಿಹಾಸಪುರಾಣಾಗಮಶಾಸ್ತ್ರೇಷ್ವಪಿ ಅಸ್ತ್ಯೇವೇತಿ ನಾಗಮವಿರೋಧಃ । ತ್ರಿವಿಧಂ ಹಿ ಶಾಸ್ತ್ರಮ್। ಶಬ್ದಪ್ರಧಾನಮರ್ಥಪ್ರಧಾನಮುಭಯಪ್ರಧಾನಂ ಚೇತಿ। ತತ್ರ ಶಬ್ದಪ್ರಧಾನಂ ವೇದಾದಿ ಅಧ್ಯಯನಾದೇವಾಭ್ಯುದಯಶ್ರವಣಾತ್, ಮನಾಗಪಿ ಪಾಠವಿಪರ್ಯಾಸೇ ಪ್ರತ್ಯವಾಯ-ಶ್ರವಣಾಚ್ಚ । ಅರ್ಥಪ್ರಧಾನಮಿತಿಹಾಸಪುರಾಣಾದಿ ತಸ್ಯ ಅರ್ಥವಾದಮಾತ್ರರೂಪತ್ವಾತ್ । ಉಭಯಪ್ರಧಾನಂ ಸರ್ಗಬಂಧಾದಿ ಕಾವ್ಯಂ ತಸ್ಯ ರಸಾತ್ಮಕತ್ವಾದ್ ರಸಸ್ಯ ಚೋಭಯೌಚಿತ್ಯೇನ ಪರಿಪೋಷದರ್ಶನಾತ್ । ಕಾವ್ಯಸ್ಯಾಪಿ ಶಾಸ್ತ್ರತ್ವಮುಪಪಾದಿತಮೇವ । ತದೇವಂ ಯದರ್ಥಪ್ರಧಾನಮಿಷ್ಯತೇ ತಚ್ಛ್ರವಣಧಾರಣಾರ್ಥಾವಬೋಧಾನುಷ್ಠಾನೋತ್ಥಿತೇನ ಧರ್ಮೇಣಾಸಾಧುಶಬ್ದೋದೀರಣೋದಿತೋಽಧರ್ಮಃ ಪ್ರತಿಹತೋ ಭವತೀತೀಯಮಸೌ ಕೂಪಖಾನಕವೃತ್ತಿಃ ।**

**ಅನುವಾದ:**

ಈ ಕೂಪಖಾನಕವೃತ್ತಿಯು ಇತಿಹಾಸ-ಪುರಾಣ-ಆಗಮಶಾಸ್ತ್ರಗಳಲ್ಲೂ ಇದೆಯಾದುದರಿಂದ ಆಗಮವಿರೋಧವಿಲ್ಲ.

ಶಬ್ದಪ್ರಧಾನ, ಅರ್ಥಪ್ರಧಾನ, ಉಭಯಪ್ರಧಾನವೆಂದು ಶಾಸ್ತ್ರವು ಮೂರು ವಿಧ. ಅವುಗಳಲ್ಲಿ ಶಬ್ದಪ್ರಧಾನವಾದುದು ವೇದ. ಏಕೆಂದರೆ ಅದರ ಅಧ್ಯಯನಮಾತ್ರದಿಂದಲೂ ಅಭ್ಯುದಯವಾಗುವುದೆಂದು ಹೇಳಿದ್ದಾರೆ. ಚೂರಿನಷ್ಟು ಪಾಠವ್ಯತ್ಯಾಸವಾದರೂ ಅದರಿಂದ ವಿರುದ್ಧ ಫಲವಾಗುವುದೆಂದೂ ಹೇಳಿದ್ದಾರೆ. ಅರ್ಥಪ್ರಧಾನವಾದುದು ಇತಿಹಾಸ, ಪುರಾಣ ಇತ್ಯಾದಿ. ಏಕೆಂದರೆ ಅವೆಲ್ಲ ಅರ್ಥವಾದರೂಪವಾಗಿವೆ. ಉಭಯಪ್ರಧಾನವಾಗಿರುವುದು ಸರ್ಗಬಂಧಾದಿ ಕಾವ್ಯ. ಅದು ರಸಾತ್ಮಕವಾಗಿರುತ್ತದೆ. ರಸವು ಶಬ್ದಾರ್ಥಗಳ ಔಚಿತ್ಯದಿಂದ ಪರಿಪೋಷವನ್ನು ಪಡೆಯುವುದೆಂದು ನೋಡಿದ್ದೇವೆ. ಕಾವ್ಯಕ್ಕೂ ಶಾಸ್ತ್ರತ್ವವು ನಿರೂಪಿತವಾಗಿದೆ. ಹೀಗೆ ಯಾವುದು ಅರ್ಥಪ್ರಧಾನ ಎಂದು ಒಪ್ಪಿಕೊಳ್ಳಲ್ಪಟ್ಟಿದೆಯೋ ಅದರ ಶ್ರವಣ, ಧಾರಣ, ಅರ್ಥಾವಬೋಧ ಮತ್ತು ಅನುಷ್ಠಾನಗಳಿಂದ ಧರ್ಮವು ಹುಟ್ಟುತ್ತದೆ. ಆ ಧರ್ಮವು ಅಸಾಧುಶಬ್ದಗಳನ್ನು ಉಚ್ಚರಿಸುವುದರಿಂದ ಉಂಟಾದ ಅಧರ್ಮವನ್ನು ತೊಲಗಿಸುತ್ತದೆ. ಇದೇ ಇಲ್ಲಿ ಕೂಪಖಾನಕ ವೃತ್ತಿ.

**ವಿವರಣೆ:**

(ಕೂಪ ಎಂದರೆ ಬಾವಿ. ಅದನ್ನು ತೋಡುವವನು ಕೂಪಖಾನಕ. ಬಾವಿಯನ್ನು ತೋಡುವಾಗ ಅವನಿಗೆ ಮಣ್ಣು, ಕೆಸರು ಮೆತ್ತಿಕೊಳ್ಳುತ್ತದೆ. ಬಾವಿಯನ್ನು ಅಗೆದ ಮೇಲೆ ಅದರ ನೀರಿನಿಂದ ಅವನು ಕೆಸರನ್ನು ತೊಳೆದುಕೊಂಡು ಶುದ್ಧನಾಗುತ್ತಾನೆ. ಇದು ಕೂಪಖಾನಕ ವೃತ್ತಿ.)

**ಧರ್ಮಸ್ಯ ತದುತ್ಥಿತತ್ವಮುಪಗತಮೇವ ।**
**ಯಸ್ತು ಪ್ರಯುಂಕ್ತೇ ಕುಶಲೋ ವಿಶೇಷೇ**
**ಶಬ್ದಾನ್ ಯಥಾವದ್ ವ್ಯವಹಾರಕಾಲೇ ।**
**ಸೋಽನಂತಮಾಪ್ನೋತಿ ಜಯಂ ಪರತ್ರ**
**ವಾಗ್ಯೋಗವಿದ್ ದುಷ್ಯತಿ ಚಾಪಶಬ್ದೈಃ ॥ ಇತಿ ।**
**ಅಸಾಧುರಪಶಬ್ದಶ್ಚ ದ್ವೇಧಾ ಶಬ್ದಃ ಪ್ರಕೀರ್ತಿತಃ ।**
**ತತ್ರಾಸಾಧುರ್ನ ಸಾಧ್ಯೋ ಯಃ ಪ್ರಕೃತಿಪ್ರತ್ಯಯಾದಿಭಿಃ ॥**
**ಶಬ್ದಾದಪೇತೋಽಪಶಬ್ದಃ ಶಬ್ದನಾಕರಣಾತ್ಮನಃ ।**
**ಏವಂ ಚಾಸಾಧುಶಬ್ದೋಽಪಿ ನಾಪಶಬ್ದತ್ವಮರ್ಹತಿ ।**
**ನ ಸೋಽಪ್ಯಭ್ಯೇತ್ಯಸಾಧುತ್ವಂ ತಯೋರ್ವಿಷಯಭೇದತಃ ॥**

**ಅನುವಾದ:**

ಸಾಧುಶಬ್ದಪ್ರಯೋಗದಿಂದ ಧರ್ಮವು ಹುಟ್ಟುವುದೆಂಬುದನ್ನು ಒಪ್ಪಿಕೊಳ್ಳಲಾಗಿದೆ. (ಮಹಾಭಾಷ್ಯದ ಮಾತು ಇಂತಿದೆ)– "ಯಾವ ಕುಶಲನು ವಿಶೇಷಾರ್ಥದಲ್ಲಿ ಯಥಾರ್ಹವಾಗಿ ವ್ಯವಹಾರಕಾಲದಲ್ಲಿ ಶಬ್ದಗಳನ್ನು ಪ್ರಯೋಗಿಸುವನೋ ಅವನು ಮುಂದೆ ಅನಂತವಾದ ಜಯವನ್ನು ಪಡೆಯುತ್ತಾನೆ. ವಾಗ್ಯೋಗವನ್ನು ತಿಳಿದವನು ಅಪಶಬ್ದಪ್ರಯೋಗದಿಂದ ದೋಷವನ್ನು ಗಳಿಸಿಕೊಳ್ಳುತ್ತಾನೆ."

ಶಬ್ದವು ಅಸಾಧು, ಅಪಶಬ್ದ ಎಂದು ಎರಡು ವಿಧ. ಯಾವುದನ್ನು ಪ್ರಕೃತಿಪ್ರತ್ಯಯಾದಿಗಳಿಂದ ಸಾಧಿಸಲಾಗದೋ ಅದು ಅಸಾಧು. ಶಬ್ದನಾಕರಣರೂಪವಾದ ಶಬ್ದದಿಂದ ದೂರವಾಗಿರುವುದು ಅಪಶಬ್ದ. ವಾಚ್ಯಾರ್ಥವಿಷಯಕವಾದ ಪರಾಮರ್ಶೆಯು ಶಬ್ದನಾ ಎಂದು ಹೇಳಲ್ಪಟ್ಟಿದೆ. ಹೀಗೆ ಅಸಾಧುಶಬ್ದಕ್ಕೆ ಅಪಶಬ್ದತ್ವವಿಲ್ಲ. ಅಪಶಬ್ದವೂ ಅಸಾಧು ಎಂದು ಆಗದು. ಅಸಾಧುತ್ವ ಮತ್ತು ಅಪಶಬ್ದತ್ವ ಎಂಬ ಧರ್ಮಗಳ ಕ್ಷೇತ್ರಗಳು ಬೇರೆ ಬೇರೆ.

**ತತಶ್ಚ– ಸಾಮರ್ಥ್ಯಾದೇವ ಶಬ್ದಸ್ಯ ವಿಷಯೇಽವಗತೇ ಸತಿ ।**
**ನ ಪ್ರಯೋಗೋಽಸ್ಯ ನ ಹ್ಯೇಷ ಸ್ವನಿಷ್ಪತ್ತ್ಯೈ ಪ್ರವರ್ತತೇ ॥**
**ಅತ ಏವ ಪ್ರಕೃತ್ಯರ್ಥಮಾತ್ರಂ ತತ್ರ ಪ್ರಯುಂಜತೇ ।**
**ಸಂಖ್ಯಾಸಾಧನಕಾಲಾದೇರಾನುಗುಣ್ಯಾನಪೇಕ್ಷಿಣಃ ॥**

ಇಯತಾ ಚಾಪಶಬ್ದತ್ವಂ ನ ತೇಷಾಮವಕಲ್ಪ್ಯತೇ ।
ಅರ್ಥೇಷು ಶಬ್ದನಾಕರ್ಮಕರಣತ್ವಾನಪಾಯತಃ ॥
ಅಸಾಧೂಚ್ಚಾರಣಾದ್ಯಸ್ತು ತತ್ರಾಧರ್ಮಃ ಪ್ರವರ್ತತೇ ।
ಕೂಪಖಾನಕವದ್ ವೃತ್ತೇಃ ಸೋಽರ್ಥಜ್ಞಾನಾನ್ನಿವರ್ತತೇ ॥
ಅಥವಾರ್ಥಪರಿಜ್ಞಾನಮಾಸ್ತಾಂ ತತ್ಪಠನಾದಪಿ ।
ಧಾರಣಾದಪಿ ವಾ ಪುಂಸಾಂ ಶ್ರೂಯತೇಽಭ್ಯುದಯಃ ಪರಃ ॥
ಇತಿ ಸಂಗ್ರಹ ಶ್ಲೋಕಾಃ ।

**ಅನುವಾದ:**

ಈ ಕಾರಣದಿಂದ– ಸಾಮರ್ಥ್ಯದಿಂದಲೇ ಶಬ್ದದ ಅರ್ಥವು ತಿಳಿದುಬಂದ ಸಂದರ್ಭದಲ್ಲಿ ಆ ಶಬ್ದವನ್ನು ಪ್ರಯೋಗಿಸಬಾರದು. ಶಬ್ದವು ಕೇವಲ ತನ್ನ ರೂಪದ ನಿಷ್ಪತ್ತಿಗಾಗಿ ಪ್ರವರ್ತಿಸುವುದಿಲ್ಲವಷ್ಟೆ. ಅಂಥ ಉದ್ದೇಶವಿದ್ದರೆ ಅಲ್ಲಿ ಕೇವಲ ಪ್ರಕೃತಿಯನ್ನು ಬಳಸುತ್ತಾರೆ. ಆ ಶಬ್ದಕ್ಕೆ ಆಗ ಸಂಖ್ಯಾ, ಕಾರಕ, ಕಾಲ ಇತ್ಯಾದಿಗಳ ಅಪೇಕ್ಷೆ ಇರುವುದಿಲ್ಲ. ಇಷ್ಟುಮಾತ್ರದಿಂದ ಅಂಥ ಶಬ್ದಗಳಿಗೆ ಅಪಶಬ್ದತ್ವವೂ ಬರುವುದಿಲ್ಲ. ಏಕೆಂದರೆ ಅರ್ಥಗಳಲ್ಲಿ ಶಬ್ದನಾ ಎಂಬ ಕ್ರಿಯೆಯ ಕರಣತ್ವವು ಅಂಥ ಶಬ್ದಗಳಿಗೆ ಹೋಗಿರುವುದಿಲ್ಲ. ಅಸಾಧುಶಬ್ದಗಳ ಉಚ್ಚಾರಣೆಯಿಂದ ಅಲ್ಲಿ ಉಂಟಾಗುವ ಅಧರ್ಮವನ್ನು ಕೂಪಖಾನಕನ್ಯಾಯದಿಂದ ಅರ್ಥಜ್ಞಾನವೇ ನಿವಾರಿಸುತ್ತದೆ. ಅಥವಾ, ಅರ್ಥಪರಿಜ್ಞಾನವು ಹಾಗಿರಲಿ. (ಸಾಧುಶಬ್ದದ) ಪಠನದಿಂದಲೂ ಧಾರಣೆಯಿಂದಲೂ ಜನರಿಗೆ ಶ್ರೇಷ್ಠವಾದ ಅಭ್ಯುದಯವು ಉಂಟಾಗುವುದೆಂದು ಹೇಳಲಾಗಿದೆ. ಇವು ಸಂಗ್ರಹಶ್ಲೋಕಗಳು.

(ಶಬ್ದಶಕ್ತಿಮೂಲಧ್ವನಿ ಇಲ್ಲ)

ತಸ್ಮಾದುಪಪತ್ತಿಶೂನ್ಯ ಏವಾಯಂ ಗತಾನುಗತಿಕತಯಾ ಅನೇಕಾರ್ಥಶಬ್ದಪ್ರಯೋಗ–ವಿಪ್ರಲಬ್ಧವ್ಯಾಖ್ಯಾತೃಪರಂಪರಾಸಮಯಮಾತ್ರಪ್ರವರ್ತಿತಃ ಶಬ್ದಶಕ್ತಿಮೂಲಾನು–ಸ್ವಾನರೂಪಾರ್ಥಾಂತರಪ್ರತೀತಿಪಕ್ಷಃ। ವ್ಯಾಖ್ಯಾತಾರೋಽಪಿ ಅಲೀಕವಿದ್ವನ್ಮಾನಿತಯಾ ಪ್ರಾಯೇಣಾಪವ್ಯಾಖ್ಯಾನೈರ್ನ ಕೇವಲಮಾತ್ಮಾನಂ, ಯಾವತ್ ತತ್ರಭವತೋ ಮಹಾಕವೀನಪಿ ಹ್ರೇಪಯಂತೋ ದೃಶ್ಯಂತೇ । ತದ್ಯಥಾ–

ತಾಂ ಜಾನೀಯಾಃ ಪರಿಮಿತಕಥಾಂ ಜೀವಿತಂ ಮೇ ದ್ವಿತೀಯಂ
ದೂರೀಭೂತೇ ಮಯಿ ಸಹಚರೇ ಚಕ್ರವಾಕೀಮಿವೈಕಾಮ್ ।
ಗಾಢೋತ್ಕಂಠಾಗುರುಷು ದಿವಸೇಷ್ವೇಷು ಗಚ್ಛತ್ಸು ಬಾಲಾ
ಜಾತಾ ಮನ್ಯೇ ಶಿಶಿರಮಥಿತಾ ಪದ್ಮಿನೀವಾನ್ಯರೂಪಾ ॥
ಇತ್ಯತ್ರ ಪಾಠಮಿಮಮಬುದ್ಧ್ವೈವ ಕಲಿತೈಕವಿಹೇವಾಕಾಃ
ಪರಾಕೃತ ಪ್ರತೀತಿಚಾರುತಾತಿಶಯಾಸ್ತೇ–
ಅವೈಮಿ ತದವಜ್ಞಾನಾದ್ ಯತ್ನಾಪೇಕ್ಷೋ ಮನೋರಥಃ ।

**ಇತ್ಯಾದೌ ದೃಷ್ಟಾಮಪಿ ವಾಕ್ಯಾರ್ಥಕರ್ಮತಾಂ ಮನ್ಯತೇರಪಶ್ಯಂತೋ ಬಾಲಾಯಾಃ ಕರ್ಮತಾಮಸ್ಯ ಮನ್ಯಮಾನಾಃ ಸ್ವರಸಂಧಿವಶಾದ್ ವಿಕೃತಮಿವಶಬ್ದಮೇವ ಭ್ರಮಾದ್ ವಾಶಬ್ದಂ ಪರಿಕಲ್ಪ್ಯ ಅಪವ್ಯಾಖ್ಯಾಮ್ ಆರಭಂತೇ । ನ ಚೈವಮರ್ಥಸ್ಯ ವೈಚಿತ್ರೀ ಕಾಚಿತ್ ಸಮುನ್ಮಿಷತಿ । ನಾಪಿ ಮಹಾಕವೇಃ ಕಾಲಿದಾಸಸ್ಯಾನ್ವಯಗತಿರಿಯಂ ಕ್ವಚನಾಪಿ ಪ್ರಬಂಧೇಽ–ವಧಾರಿತಪೂರ್ವಾ ಯದಯಂ ರಸನಿಧಾನೇ ಕಾವ್ಯೇ ವ್ಯಾಧಿಮಿವ ವಾಶಬ್ದಮಿವಾರ್ಥೇ ಪ್ರಯುಂಜೀತೇತಿ ।**

**ಕಥಂ ತರ್ಹಿ "ಚಂದ್ರಂ ಪ್ರವೃದ್ಧೋರ್ಮಿರಿವೋರ್ಮಿಮಾಲೀ" ಇತಿ ತಸ್ಯೈವ ಕವೇರಯಂ ಪ್ರಯೋಗಃ? ಉಚ್ಯತೇ । ಶ್ಲಿಷ್ಟತ್ವಾದವಿಭಾವಿತಾರ್ಥಪಾಠೇನ ಕೇನಚಿತ್ ಕಲ್ಪಿತೋಽಯಂ ಪಾಠಃ। ಸ ಹಿ "ಜಲಧಿರ್ನಿಶೀವ" ಇತಿ ದ್ರಷ್ಟವ್ಯಃ ।**

**ಅನುವಾದ:**

ಆದ್ದರಿಂದ ಈ ಶಬ್ದಶಕ್ತಿಮೂಲವಾದ ಅನುಸ್ವಾನರೂಪದ ಅರ್ಥಾಂತರವು ಪ್ರತೀತವಾಗುವುದೆಂಬ ಪಕ್ಷವು ಉಪಪತ್ತಿಶೂನ್ಯ. ಕೇವಲ ಗತಾನುಗತಿಕವಾಗಿ ಅನೇಕಾರ್ಥಶಬ್ದಗಳ ಪ್ರಯೋಗದಿಂದ ಮೋಸ ಹೋದ ವ್ಯಾಖ್ಯಾನಕಾರರ ಪರಂಪರೆಯಿಂದ ಅದು ಪ್ರವರ್ತಿತವಾಗಿದೆ ಅಷ್ಟೆ.

ವ್ಯಾಖ್ಯಾನಕಾರರೂ ಸುಳ್ಳು ಸುಳ್ಳಾಗಿ ತಾವು ವಿದ್ವಾಂಸರೆಂದು ಭಾವಿಸಿಕೊಂಡು ಅಪವ್ಯಾಖ್ಯಾನಗಳನ್ನು ಮಾಡಿ ತಮಗೆ ಮಾತ್ರವಲ್ಲ, ಮಹಾಕವಿಗಳಿಗೂ ನಾಚಿಕೆಯನ್ನುಂಟುಮಾಡುತ್ತಾರೆ. ಉದಾಹರಣೆ–

"ನನ್ನ ಎರಡನೆಯ ಪ್ರಾಣವೇ ಆದ ಅವಳು ಅತ್ಯಂತ ಮಿತವಾಗಿ ಮಾತನಾಡುವವಳೆಂದು ತಿಳಿದುಕೋ. ಸಹಚರನಾದ ನಾನು ದೂರದಲ್ಲಿರುವುದರಿಂದ ಒಬ್ಬಂಟಿಗಳಾದ ಚಕ್ರವಾಕಿಯಂತೆ ಅವಳು ಇರುತ್ತಾಳೆ. ಅತ್ಯಂತ ಗಾಢವಾದ ಉತ್ಕಂಠೆಯಿಂದ ಭಾರವಾದ ಈ ದಿನಗಳು ಕಳೆಯುತ್ತಿರುವಾಗ ಅವಳು ಶಿಶಿರ ಋತುವಿನಿಂದ ಸೊರಗಿದ ಪದ್ಮವನದಂತೆ ಬೇರೆ ರೂಪದಲ್ಲಿರುತ್ತಾಳೆ."

ಈ ಪದ್ಯದ ಈ ಪಾಠವನ್ನು ತಿಳಿದುಕೊಳ್ಳದೆ ಕವಿತಾಹವ್ಯಾಸವನ್ನು ತೋರಿಸುವ, ಪ್ರತೀತಿಸೌಂದರ್ಯವನ್ನು ಹಾಳುಗೆಡವುವ ಆ ವ್ಯಾಖ್ಯಾನಕಾರರು (ಅವೈಮಿ..............) ಅವಳನ್ನು ತಿರಸ್ಕರಿಸಿದುದರಿಂದ ಮನೋರಥವು ಪ್ರಯತ್ನವನ್ನು ಅಪೇಕ್ಷಿಸುತ್ತದೆ ಎಂದು ತಿಳಿದಿದ್ದೇನೆ ಇತ್ಯಾದಿಗಳಲ್ಲಿ ಮನ್ ಧಾತುವಿಗೆ ವಾಕ್ಯಾರ್ಥವೇ ಕರ್ಮವಾಗಿದೆ ಎಂಬುದನ್ನು ಕಾಣಲಾರದೆ ಅದಕ್ಕೆ ಬಾಲಾ ಎಂಬುದೇ ಕರ್ಮವೆಂದುಕೊಂಡು ಸ್ವರಸಂಧಿಯ ವಶದಿಂದ ವಿಕೃತವಾದ ಇವ ಶಬ್ದವನ್ನೇ ಭ್ರಾಂತಿಯಿಂದ ವಾ ಶಬ್ದವೆಂದು ಕಲ್ಪಿಸಿಕೊಂಡು ಅಪವ್ಯಾಖ್ಯಾನವನ್ನು ಆರಂಭಿಸುತ್ತಾರೆ. ಹಾಗೆ ಮಾಡಿದುದರಿಂದ ಅರ್ಥದಲ್ಲಿ ಯಾವ ವೈಚಿತ್ರ್ಯವೂ

ಕಂಡುಬರುವುದಿಲ್ಲ. ಮಹಾಕವಿ ಕಾಳಿದಾಸನ ಅನ್ವಯಕ್ರಮವೂ ಇದಲ್ಲ. ಅಂಥ ಶೈಲಿ ಅವನ ಯಾವ ಪ್ರಬಂಧದಲ್ಲೂ ಕಾಣದು. ಅವನು ರಸನಿಧಿಯಾದ (ಈ ಮೇಘದೂತ)ಕಾವ್ಯದಲ್ಲಿ ವ್ಯಾಧಿಯಂತೆ ಕಾಣಿಸುವ ವಾಶಬ್ದವನ್ನು ಇವಶಬ್ದದ ಅರ್ಥದಲ್ಲಿ ಬಳಸುವನೆ?

ಹಾಗಾದರೆ ಅದೇ ಮಹಾಕವಿಯು ಹೇಗೆ "ಚಂದ್ರಂ ಪ್ರವೃದ್ಧೋರ್ಮಿರಿವೋರ್ಮಿಮಾಲೀ" ಎಂಬ ಪ್ರಯೋಗವನ್ನು ಮಾಡಿದ್ದಾನೆ? ಹೇಳುತ್ತೇವೆ. ಶ್ಲಿಷ್ಟ(ಕ್ಲಿಷ್ಟ?)ವಾದುದರಿಂದ ಪಾಠದ ಅರ್ಥವನ್ನು ಕಾಣದ ಯಾವನೋ (ವ್ಯಾಖ್ಯಾನಕಾರನು ಅಥವಾ ಲಿಪಿಕಾರನು) ಕಲ್ಪಿಸಿರುವ ಪಾಠವಿದು. "ಚಂದ್ರಂ ಪ್ರವೃದ್ಧೋ ಜಲಧಿರ್ನಿಶೀವ" (ರಾತ್ರಿಯಲ್ಲಿ ಉಕ್ಕುವ ಕಡಲು ತಂಗದಿರನನ್ನು ಸ್ವಾಗತಿಸುವಂತೆ) ಎಂಬುದು ಸರಿಯಾದ ಪಾಠವೆಂದು ತಿಳಿದುಕೊಳ್ಳಬೇಕು.

**ಯಥಾ ಚ–**
**ಗ್ರಾಮೇಽಸ್ಮಿನ್ ಪಥಿಕಾಯ ಪಾಂಥ ವಸತಿರ್ನೈವಾಧುನಾ ದೀಯತೇ**
**ರಾತ್ರಾವತ್ರ ವಿಹಾರಮಂಡಪತಲೇ ಪಾಂಥಃ ಪ್ರಸುಪ್ತೋ ಯುವಾ ।**
**ತೇನೋದ್ಗಾಯ ಖಲೇನ ಗರ್ಜತಿ ಘನೇ ಸ್ಮೃತ್ವಾ ಪ್ರಿಯಾಂ ತತ್ಕೃತಂ**
**ಯೇನಾದ್ಯಾಪಿ ಕರಂಕದಂಡಪತನಾಶಂಕೀ ಜನಸ್ತಿಷ್ಠತಿ ॥**

**ಇತ್ಯತ್ರ ಹಿ ಕಾಚಿದ್ ವಸತಿಂ ಪ್ರಾರ್ಥಯಮಾನಂ ಪಥಿಕಯುವಾನಮುದ್ದಿಶ್ಯ ಉತ್ಪನ್ನಮನ್ಮಥ–ವ್ಯಥಾವೇಶಾ ತಸ್ಯಾನ್ಯಾನುರಾಗಿತಾಮಾಶಂಕಮಾನಾ ದಾರುಣತರಪರಿಣಾಮೋಽನ್ಯಾಸಕ್ತ–ಜನಾನುರಾಗ ಇತಿ, ನ ಚೇದಸಿ ಕಸ್ಯಾಂಚಿದನುರಕ್ತಸ್ತದಿದಮ್ ಅಖಿಲಮೇವ ಗೃಹಮ್ ಅಯಂ ಚ ಜನಸ್ತವಾಯತ್ತ ಏವ, ಅನ್ಯಥಾ ಗಮ್ಯತಾಮಿತಿ ಸ್ವಾಭಿಪ್ರೇತಮರ್ಥಮಸ್ಮೈ ನಿವೇದಯಿತುಕಾಮಾ ಪೂರ್ವವೃತ್ತಾಂತಂ ವಸತಿವಿಹಿತೋಪಕಾರಕಾಮಿನೀಮರಣಾವೇದನಫಲಂ ವಕ್ತುಮುಪಕ್ರಮತೇ ಇತಿ ತದಭಿಪ್ರಾಯಮವಿದ್ವಾಂಸಸ್ತೇ ಪುರುಷವಧಾವೇದನಂ ತದಿತಿ ಮನ್ಯಮಾನಾಸ್ತ–ಥೈವಾಪವ್ಯಾಚಕ್ಷತೇ ।**

**ಅನುವಾದ:**

ಇನ್ನೊಂದು ಉದಾಹರಣೆ– "ಪಾಂಥನೆ, ಈ ಹಳ್ಳಿಯಲ್ಲಿ ಈಗ ಯಾವ ಪಥಿಕನಿಗೂ ವಸತಿಸೌಕರ್ಯವನ್ನೂ ಕೊಡುವುದಿಲ್ಲ. ಇಲ್ಲಿ ವಿಹಾರಮಂಡಪದಲ್ಲಿ ಒಬ್ಬ ಯುವಕ ಪಥಿಕನು ಒಂದು ರಾತ್ರಿ ಮಲಗಿದ್ದನು. ಮೋಡಗಳು ಗುಡುಗುತ್ತಿದ್ದಾಗ ತನ್ನ ಪ್ರಿಯೆಯನ್ನು ನೆನೆಸಿಕೊಂಡ ಆ ಖಳನು ಕಿರುಚಿಕೊಂಡು ಆ ಕೃತ್ಯವನ್ನು ಮಾಡಿಬಿಟ್ಟನು. ಅದರಿಂದ ಈ ಊರಿನ ಜನರು ಈಗಲೂ ಹೆಣದ ದಂಡ ಮೇಲೆ ಬೀಳುವುದೇನೋ ಎಂದು ಹೆದರಿಕೊಂಡಿದ್ದಾರೆ."

ಈ ಪದ್ಯದಲ್ಲಿ ವಸತಿಯನ್ನು ಕೇಳಲು ಬಂದ ಪಥಿಕ ಯುವಕನನ್ನು ಕಂಡು ಯಾವಳೋ ಒಬ್ಬಳಿಗೆ ಕಾಮಾಸಕ್ತಿಯು ಹುಟ್ಟಿದೆ, ಆದರೆ ಅವನು ಬೇರೆ

ಯಾವಳಲ್ಲಾದರೂ ಅನುರಕ್ತನಾಗಿರುವನೋ ಎಂದು ಅವಳಿಗೆ ಸಂಶಯ. ಅನ್ಯಾಸಕ್ತ ಜನರಲ್ಲಿ ಇಡುವ ಪ್ರೇಮ ಭಯಂಕರ ಪರಿಣಾಮವನ್ನು ಉಂಟುಮಾಡಬಹುದು. ನೀನು ಬೇರೆ ಯಾರಲ್ಲೂ ಅನುರಕ್ತನಲ್ಲದಿದ್ದರೆ ಈ ಸಮಸ್ತವಾದ ಮನೆ ಮತ್ತು ನಾನು ನಿನಗೆ ಅಧೀನ, ಹಾಗಿಲ್ಲದ ಪಕ್ಷದಲ್ಲಿ ನೀನು ಹೋಗಬಹುದು ಎಂದು ತನ್ನ ಮನದ ಇಂಗಿತವನ್ನು ಅವನಿಗೆ ತಿಳಿಸಲು ಅವಳು ಬಯಸುತ್ತಾಳೆ. ಒಬ್ಬ ಕಾಮಿನಿಯು ವಸತಿಯನ್ನು ಪಾಂಥನಿಗೆ ನೀಡಿ ತಾನೇ ಸತ್ತುಹೋದಳು ಎಂದು ಅವನಿಗೆ ಹೇಳುತ್ತಿದ್ದಾಳೆ. ಅವಳ ಅಭಿಪ್ರಾಯವನ್ನು (ಅಥವಾ ಪದ್ಯದ ಈ ತಾತ್ಪರ್ಯವನ್ನು) ತಿಳಿದುಕೊಳ್ಳದ ವ್ಯಾಖ್ಯಾನಕಾರರು ಆ ಮನುಷ್ಯನ ವಧೆಯಾಯಿತೆಂದು ಅರ್ಥೈಸಿಕೊಂಡು ಹಾಗೆಯೇ ಅಪವ್ಯಾಖ್ಯಾನಗಳನ್ನು ಮಾಡುತ್ತಾರೆ.

> **ತಚ್ಚಾಯುಕ್ತಮೇವ ರಸಭಂಗಪ್ರಸಂಗಾತ್ । ಉಭಯೋರನುರಾಗಾತಿ–ಶಯಯೋಗೇऽಪಿ ಪುರುಷವಧವರ್ಣನಸ್ಯ ಅತ್ಯಂತಮ್ ಅನುಚಿತತ್ವಾತ್ ಖಲಾರ್ಥಕರಣಾರ್ಥಯೋರಸಂಗತಿಪ್ರಸಂಗಾತ್ ।**
> **ನ ಹಿ ಯೋಽಸ್ವವಶಃ ಸನ್ ಮ್ರಿಯತೇ ತಸ್ಯ ತನ್ಮರಣಂ ಯದ್ಯಪಿ ಕಸ್ಯಚಿದುಪಕಾರಾಯಾಪಕಾರಾಯ ವಾ ಸ್ಯಾತ್ । ತದಪೇಕ್ಷಮಸ್ಯ ಸೌಜನ್ಯಂ ಖಲತ್ವಂ ವಾ ನ ಶಕ್ಯಂ ವ್ಯಪದೇಷ್ಟುಮ್ । ತಾವಭಿಸಂಧಾಯ ಮರಣೇ ತಸ್ಯ ತದ್ವ್ಯಪದೇಶ್ಯತ್ವೋಪಪತ್ತೇಃ, ಅನ್ಯಥಾತಿಪ್ರಸಂಗಾದಿತಿ ತನ್ಮತಾನುವಿಧಾಯಿನೋಽಂಧಪರಂಪರಾಕ್ರಮಣೇ ವ್ಯಾಖ್ಯಾತಾರೋಽದ್ಯಾಪಿ ತೇನೈವೋಪಪತ್ತ್ಯತಿಪಾತಿನಾ ಪಥಾ ಸಂಚರಂತ ಇತಿ ಸ್ಥಿತಮ್ ।**
> **ನನು–**
>
> **ಯಾವದ್ಭಿರರ್ಥೈಃ ಸಂಬಂಧಃ ಪ್ರಾಕ್ಪದಸ್ಯಾವಧಾರಿತಃ ।**
> **ತಾವತ್ಸ್ವನ್ಯನಿರಾಶಂಸಃ ಶ್ರುತಃ ಸನ್ ಕುರುತೇ ಗತಿಮ್ ॥**
> **ತತೋ ಯದರ್ಥಾನುಗುಣಾ ಸಾಮಗ್ರ್ಯನ್ಯೋಪಲಭ್ಯತೇ ।**
> **ಸ ಏವಾರ್ಥೋ ವ್ಯವಸ್ಥಾಪ್ಯಃ ಸತ್ಸ್ವಪ್ಯನ್ಯೇಷ್ವಬಾಧಿತಃ ॥**

**ಅನುವಾದ:**

ಅದು ಅಯುಕ್ತ, ಹಾಗೆ ಅರ್ಥವನ್ನಿಟ್ಟುಕೊಂಡರೆ ರಸಭಂಗವಾಗುವ ಪ್ರಸಂಗ ಬರುತ್ತದೆ. ಇಬ್ಬರಿಗೂ ಅನುರಾಗಾತಿಶಯವಿದ್ದರೂ, ಪುರುಷನ ವಧೆಯನ್ನು ವರ್ಣಿಸುವುದು ಅತ್ಯಂತಾನುಚಿತ. ಖಲಶಬ್ದದ ಅರ್ಥ ಕರಣಶಬ್ದದ ಅರ್ಥ ಇವು ಹೊಂದಿಕೊಳ್ಳುವುದಿಲ್ಲ ಎನ್ನುವ ಪ್ರಸಂಗವೂ ಉಂಟಾದೀತು.

ಯಾವನು ಪರಾಧೀನನಾಗಿದ್ದು ಸಾಯುವನೋ ಅವನ ಸಾವು ಯಾರಿಗೋ ಉಪಕಾರಕ ಅಥವಾ ಅಪಕಾರಕ ಆಗಿರಬಹುದು. ಆದರೆ ಆ ಕಾರಣದಿಂದ ಅವನ ಸೌಜನ್ಯವನ್ನೋ ಖಳತ್ವವನ್ನೋ ಹೇಳಲು ಸಾಧ್ಯವಾಗದು.

ಆದರೆ ಉಪಕಾರಾಪಕಾರಗಳನ್ನು ಮಾಡುವ ಉದ್ದೇಶದಿಂದ ಅವನ ಸಾವು ಉಂಟಾದರೆ ಹಾಗೆ ಹೇಳುವುದು ಉಚಿತವಾಗಬಹುದು. ಹಾಗಲ್ಲದಿದ್ದರೆ ಅತಿಪ್ರಸಂಗ. ಆದ್ದರಿಂದ ಆ ಮತವನ್ನು ಅನುಸರಿಸಿದವನ ಅಂಧಪರಂಪರೆಯನ್ನೇ ಆಶ್ರಯಿಸುವ ವ್ಯಾಖ್ಯಾನಕಾರರು ಇಂದೂ ಉಪಪತ್ತಿಯನ್ನು ಮೀರುವ ಆ ಮಾರ್ಗದಲ್ಲೇ ಸಂಚರಿಸುತ್ತಿದ್ದಾರೆ ಎಂಬುದು ಸ್ಥಿರವಾಯಿತು.

ಇಲ್ಲೊಂದು ಪೂರ್ವಪಕ್ಷ–

ಒಂದು ಶಬ್ದದ ವಾಚಕತ್ವಸಂಬಂಧವು ಎಷ್ಟು ಅರ್ಥಗಳೊಡನೆ ಮೊದಲು ಗ್ರಹಿಸಲ್ಪಟ್ಟಿರುವುದೋ, ಅಷ್ಟೂ ಅರ್ಥಗಳ ಜ್ಞಾನವನ್ನು ಶ್ರುತವಾದ ಆ ಶಬ್ದವು ಉಂಟುಮಾಡುವುದು. ಆಮೇಲೆ ಅವುಗಳಲ್ಲಿ ಯಾವ ಅರ್ಥಕ್ಕೆ ಅನುಗುಣವಾದ ಸಾಮಗ್ರಿಯು ಒದಗಿಬರುವುದೋ, ಅದೇ ಅಲ್ಲಿ ಆ ಶಬ್ದದ ಅರ್ಥವೆಂದು ವ್ಯವಸ್ಥೆ ಮಾಡಬೇಕು. ಬೇರೆ ಅರ್ಥಗಳು ಇದ್ದರೂ ಅದೊಂದು ಮಾತ್ರ ಅಬಾಧಿತವಾಗಿ ಉಳಿಯುತ್ತದೆ.

**ತೇನೋಭಯಾರ್ಥಾನುಗುಣಃ ವ್ಯನಕ್ತ್ಯರ್ಥಾವುಭಾವಪಿ ।**
**ಯಯೋಃ ಸಾಮರ್ಥ್ಯತಃ ಸಿಧ್ಯೇದುಪಮಾನೋಪಮೇಯತಾ ॥**
**ಇತ್ಥಮರ್ಥಾಂತರೇ ಬುದ್ಧಿಂ ಧ್ವನಿರೇವಾದಧಾತ್ಯಯಮ್ ।**
**ತನ್ನಿಬಂಧನನಿರ್ಬಂಧೋ ನಿರ್ನಿಬಂಧನ ಏವ ಸಃ ॥**
**ಏವಂ ಚಾತ್ಮನ್ಯಧಿಕ್ಷೇಪ್ಯೇ ಕಿಮರ್ಥಂ ತತ್ತ್ವದರ್ಶಿನಃ ।**
**ವ್ಯಾಖ್ಯಾತಾರೋಽಪ್ಯಧಿಕ್ಷಿಪ್ತಾ ಮೋಹಾತ್ ಕೋ ವೇತ್ತಿ ವಾ ಹಿತಮ್ ॥**
**ಉಚ್ಯತೇ–**
**ಯದ್ಯಪ್ಯರ್ಥೇಷು ಸರ್ವೇಷು ಪ್ರಾಕ್‌ಛಬ್ದಃ ಕುರುತೇ ಮತಿಮ್ ।**
**ತಥಾಪಿ ತದ್‌ವ್ಯವಸ್ಥಾರ್ಥೇ ವಿಶೇಷಣಮಪೇಕ್ಷತೇ ॥**
**ತಚ್ಚೇತ್ ತದ್ವದನೇಕಾರ್ಥಂ ಮುಖ್ಯೋಽರ್ಥಃಕೋಽವತಿಷ್ಠತಾಮ್ ।**
**ಯಸ್ತತ್ರ ಪ್ರಾಕರಣಿಕಃ ಪೌರ್ವಾಪರ್ಯಗತಿಃ ಕುತಃ? ॥**

**ಅನುವಾದ:**

ಉಭಯಾರ್ಥಾನುಗುಣವಾದ ಶಬ್ದವು ಎರಡು ಅರ್ಥಗಳನ್ನೂ ವ್ಯಂಜಿಸುತ್ತದೆ. ಆಮೇಲೆ ಆ ಎರಡು ಅರ್ಥಗಳಿಗೆ ಉಪಮಾನ–ಉಪಮೇಯಭಾವವು ಸಾಮರ್ಥ್ಯದಿಂದಲೇ ಸಿದ್ಧವಾಗುತ್ತದೆ.

ಹೀಗೆ ಎರಡನೆಯ ಅರ್ಥದ ಜ್ಞಾನವನ್ನು ಧ್ವನಿಯೇ (ವ್ಯಂಜನಾವ್ಯಾಪಾರವೇ) ತಂದುಕೊಡುತ್ತದೆ. ಅದನ್ನು ಹೇಳಲು ನೀವು ಅಡ್ಡಿಯನ್ನು ಒಡ್ಡುವುದು ನಿಷ್ಕಾರಣವೇ ಸರಿ.

ಹೀಗಿರುವಾಗ ನೀವು ನಿಂದಿಸಿಕೊಳ್ಳಬೇಕಾಗಿರುವುದು ನಿಮ್ಮನ್ನೇ. ಏಕೆ ತತ್ತ್ವದರ್ಶಿಗಳಾದ ವ್ಯಾಖ್ಯಾನಕಾರರನ್ನು ನಿಂದಿಸಿದಿರಿ? ಮೋಹಕ್ಕೆ ಈಡಾದ ಯಾವನು ಹಿತವನ್ನು ತಿಳಿದಾನು?

ಈ ಪೂರ್ವಪಕ್ಷಕ್ಕೆ ಉತ್ತರವನ್ನು ಹೇಳುತ್ತೇವೆ–

ಯದ್ಯಪಿ ಶಬ್ದವು ಮೊದಲು ತನ್ನ ಎಲ್ಲ ಅರ್ಥಗಳ ಜ್ಞಾನವನ್ನು ಹುಟ್ಟಿಸುತ್ತದೆ. (ಆದರೂ ಯಾವ ಅರ್ಥವು ವಿವಕ್ಷಿತ ಎಂಬ) ವ್ಯವಸ್ಥೆಯು ವಿಶೇಷಣವನ್ನು ಅವಲಂಬಿಸಿದೆ.

ಆ ವಿಶೇಷಣವೂ ವಿಶೇಷ್ಯದಂತೆ ಅನೇಕಾರ್ಥವಾದರೆ ಮುಖ್ಯಾರ್ಥವೆಂದು ಯಾವುದು ನಿಲ್ಲಬೇಕು? ಯಾವುದು ಪ್ರಾಕರಣಿಕವೋ ಅದು. ಹೀಗಿರುವಾಗ ಇದು ಮೊದಲು ಇದು ಆಮೇಲೆ ಎಂಬ ನಿರ್ಣಯ ಯಾವುದರಿಂದ?

**ಸಾ ಚೇತ್ ಪ್ರಕರಣಾದ್ಯೋ ಹಿ ಪ್ರಕೃತಸ್ತಸ್ಯ ಸಾ ಪುರಃ ।**
**ಪಶ್ಚಾದನ್ಯಸ್ಯ ಸಾಮರ್ಥ್ಯಗಮ್ಯಾ ತಸ್ಯೋಪಮಾನತಾ ॥**
**ಯತೋ ನ ತಾವತೈವಾಯಂ ವ್ಯಾಪಾರೋ ವಿರತೋ ಧ್ವನೇಃ ।**
**ವ್ಯಾಪಾರವಿರತೌ ಹಿ ಸ್ಯಾನ್ನ ತತೋಽರ್ಥಾಂತರೇ ಮತಿಃ ॥**
**ಧ್ವನೇರನೇಕಾರ್ಥಸ್ಯಾಪಿ ಯಥಾ ಪ್ರಕರಣಾದಿಭಿಃ ।**
**ಅನಾದೃತ್ಯೈವ ತಚ್ಛಕ್ತಿಂ ಪ್ರಸ್ತುತಾರ್ಥವಿನಿಶ್ಚಯಃ ॥**
**ಕ್ರಿಯತೇ ತದ್ವದೇವಾಯಂ ನೇಷ್ಯತೇಽರ್ಥಾಂತರೇಽಪಿ ಕಿಮ್ ॥**
**ಕೋ ವಿಶೇಷೋಽಸ್ಯ ಯದಯಂ ಶಬ್ದಶಕ್ತಿನಿಬಂಧನಃ ॥**
**ವಿಶೇಷಣಾನುಗುಣ್ಯಂ ಚೇದರ್ಥಾಂತರಗತೇಃ ಪದಮ್ ।**
**ಯತಸ್ತದಪ್ಯನೇಕಾರ್ಥಮಿಷ್ಟಮೇವ ವಿಶೇಷ್ಯವತ್ ॥**
**ಅನೇಕಾರ್ಥತ್ವಮಪ್ಯಸ್ಯ ಕುತಸ್ತದವಸೀಯತೇ ।**
**ಏವಮೇವಾವಸಾಯಶ್ಚೇದ್ ವಿಶೇಷ್ಯೇಽವಗತಿರ್ನ ಕಿಮ್ ॥**

**ಅನುವಾದ:**

ಪೌರ್ವಾಪರ್ಯಜ್ಞಾನವು ಪ್ರಕರಣದಿಂದಾಗುತ್ತದೆ ಎಂದರೆ ಯಾವುದು ಪ್ರಕೃತವೋ ಅದಕ್ಕಿಂತಲೂ ಅದು ಮೊದಲು ಆಗಬೇಕು. ಆಮೇಲೆ ಇನ್ನೊಂದು ಅರ್ಥದ ಜ್ಞಾನ, ಆಮೇಲೆ ಅದರ ಸಾಮರ್ಥ್ಯಗಮ್ಯವಾದ ಉಪಮಾನತ್ವ. ಏಕೆಂದರೆ ಕೇವಲ ಪ್ರಾಕರಣಿಕ ಅರ್ಥವನ್ನು ವ್ಯಂಜಿಸುವಷ್ಟರಲ್ಲಿ ಧ್ವನಿಯ ವ್ಯಾಪಾರವು ನಿಲ್ಲುವುದಿಲ್ಲ. ಆ ವ್ಯಾಪಾರವು ನಿಂತುಹೋದರೆ ಎರಡನೆಯ ಅರ್ಥದಲ್ಲಿ ಬುದ್ಧಿ ಉಂಟಾಗದು. ಅನೇಕಾರ್ಥಶಬ್ದದ ಶಕ್ತಿಯನ್ನು ಧಿಕ್ಕರಿಸಿ ಪ್ರಕರಣಾದಿಗಳಿಂದ ಒಂದು ಅರ್ಥದ ತಾತ್ಪರ್ಯನಿರ್ಣಯವನ್ನು ಮಾಡಲಾಗುತ್ತದೆ. ಹಾಗೆ ಬೇರೆ ಅರ್ಥಗಳಲ್ಲೂ ಏಕೆ ಮಾಡಬಾರದು? ಪ್ರಾಕರಣಿಕಾರ್ಥವು ಶಬ್ದಶಕ್ತಿನಿಬಂಧನವೇ ಆಗಿರುವಾಗ

ಅದರಲ್ಲಿ ಬೇರೆಯ ಅರ್ಥಗಳಿಗಿಂತ ಇರುವ ವಿಶೇಷಣವೇನು? ವಿಶೇಷಣಾನುಗುಣ್ಯ ಅದರ ವಿಶೇಷ ಎನ್ನುವುದಾದರೆ, ವಿಶೇಷಣವೂ ವಿಶೇಷ್ಯದಂತೆ ಶ್ಲಿಷ್ಟವಾಗಿರುವುದರಿಂದ ಎರಡನೆಯ (ಅಥವಾ ಅಪ್ರಾಕರಣಿಕವಾದ) ಅರ್ಥಕ್ಕೂ ಅದನ್ನು ಹೇಳಬಹುದು. ವಿಶೇಷಣದ ಅನೇಕಾರ್ಥತ್ವವನ್ನು ಯಾವ ಆಧಾರದಿಂದ ನಿಶ್ಚಯಿಸಬೇಕು? ಹೀಗೇ ಸುಮ್ಮನೆ (ನಿರ್ನಿಮಿತ್ತವಾಗಿ) ನಿಶ್ಚಯಿಸುತ್ತೇವೆ ಎಂದರೆ, ವಿಶೇಷ್ಯದಲ್ಲೂ ಹಾಗೇ ನಿಶ್ಚಯಿಸಬಹುದಲ್ಲವೆ?

**ತತ ಏವ ವಿಶೇಷಾಚ್ಚೇದ್ ಭವೇದನ್ಯೋನ್ಯಸಂಶ್ರಯಃ ।**
**ಅಥೋಭಯಪರಾಮರ್ಶಾದಿಷ್ಯತೇಽರ್ಥಾಂತರೇ ಮತಿಃ ॥**
**ಸ್ಯಾದೇವಂ ಪ್ರಕೃತಾರ್ಥಶ್ಚೇತ್ ಸಿಧ್ಯೇನ್ನಾಯಂ ತಯಾ ವಿನಾ ।**
**ತತೋಽನಯಾ ವಿಮರ್ಶಃ ಸ್ಯಾದನ್ಯಥಾತಿಪ್ರಸಜ್ಯತೇ ॥**
**ತಸ್ಮಾದನೇಕಾರ್ಥತ್ವೇಽಪಿ ವಿಶೇಷಣವಿಶೇಷ್ಯಯೋಃ ।**
**ಅರ್ಥಾಂತರಪ್ರತೀತ್ಯರ್ಥಂ ವಾಚ್ಯಮೇವ ನಿಬಂಧನಮ್ ॥**
**ಇತಿ ಸಂಗ್ರಹಶ್ಲೋಕಾಃ ।**

**ಅನುವಾದ:**

ವಿಶೇಷ್ಯದ ನೆರವಿನಿಂದ ವಿಶೇಷಣದ, ವಿಶೇಷಣದ ನೆರವಿನಿಂದ ವಿಶೇಷ್ಯದ ಅನೇಕಾರ್ಥತ್ವವು ನಿಶ್ಚಿತವಾಗುತ್ತದೆ ಎಂದು ಹೇಳಿದರೆ ಅನ್ಯೋನ್ಯಾಶ್ರಯ ಎಂಬ ದೋಷವು (ಪ್ರಸಕ್ತವಾಗುತ್ತದೆ).

(ವಿಶೇಷಣ–ವಿಶೇಷ್ಯಗಳೆಂಬ) ಉಭಯದ ಪರಾಮರ್ಶೆಯಿಂದ ಅಪ್ರಾಕರಣಿಕಾರ್ಥದ ಜ್ಞಾನವುಂಟಾಗುತ್ತದೆ ಎಂದರೆ ಪ್ರಾಕರಣಿಕಾರ್ಥವು ಮೊದಲು ಸಿದ್ಧವಾಗಿದ್ದರೆ ಹಾಗಾಗಬಹುದು, ಆದರೆ ಅಪ್ರಾಕರಣಿಕದ ಜ್ಞಾನವಿಲ್ಲದೆ ಅದೂ ಸಿದ್ಧವಾಗದು. ಎರಡೂ ಸಿದ್ಧವಾಗಿದ್ದರೆ ತಾನೆ ಉಭಯಪರಾಮರ್ಶೆ? ಹಾಗಿಲ್ಲದೆ, ಯಾವ ಅರ್ಥವಾದರೂ ಸಿದ್ಧವಾಗಬಹುದು ಎಂದು ಹೇಳುವುದಾದರೆ ಅತಿಪ್ರಸಂಗ (ವಿವಕ್ಷಿತವಲ್ಲದ ಅರ್ಥಗಳೂ ತೋರುತ್ತವೆ ಎಂದು ಹೇಳಬೇಕಾದೀತು.) ಆದ್ದರಿಂದ ವಿಶೇಷಣ–ವಿಶೇಷ್ಯಗಳೆರಡೂ ಅನೇಕಾರ್ಥವಾಗಿದ್ದಾಗ (ಅಪ್ರಾಕರಣಿಕವಾದ) ಅರ್ಥಾಂತರಪ್ರತೀತಿಗೆ ವಾಚ್ಯಾರ್ಥವನ್ನೇ ನಿಮಿತ್ತವೆಂದು ಹೇಳಬೇಕಾಗುತ್ತದೆ.

ಇವು ಸಂಗ್ರಹ ಶ್ಲೋಕಗಳು.

**(ಅರ್ಥಶಕ್ತಿ ಮೂಲಧ್ವನಿಃ)**

**ಅರ್ಥಶಕ್ತಿಮೂಲಃ ಪುನರುಪಪದ್ಯತ ಏವ । ಧೂಮಾದಿವಾಗ್ನೇಃ ಸಂಬಂಧಾವಧಾರಣಪುರಸ್ಸರೀ–ಕಾರೇಣ ತತೋಽರ್ಥಾಂತರಪ್ರತೀತೇರುಪಪಾದಿತತ್ವಾತ್ । ಯಥಾ "ಏವಂವಾದಿನಿ ದೇವರ್ಷೌ" ಇತ್ಯಾದೌ ಲೀಲಾಪತ್ರಗಣನಂ ಗೌರ್ಯಾಃ ಶಬ್ದವ್ಯಾಪಾರಂ ವಿನೈವ ಅರ್ಥಾಂತರಂ**

ರತಿಭಾವವ್ಯಭಿಚಾರಿಲಕ್ಷಣಂ ಲಜ್ಜಾದಿಕಮ್ ಅನುಮಾಪಯತೀತ್ಯುಕ್ತಮ್ ।

ಸರ್ವೋಽರ್ಥಃ ಕವೇಃ ಕವಿನಿಬದ್ಧಸ್ಯ ವಾ ವಕ್ತುಃಪ್ರೌಢೋಕ್ತಿಮಾತ್ರನಿಷ್ಪನ್ನಶರೀರಃ ಸ್ವತಃ ಸಂಭವೀವಾಸ್ತು । ನೈತಾವತಾ ತಸ್ಯ ಗಮಕತಾಯಾಂ ಫಲಭೇದಃ ಕಶ್ಚಿತ್ ।

**ಅನುವಾದ:**

## ಅರ್ಥಶಕ್ತಿಮೂಲಧ್ವನಿ

ಅರ್ಥಶಕ್ತಿಮೂಲಧ್ವನಿಯಾದರೋ ಉಪಪನ್ನವಾಗುವುದು. ಹೊಗೆಯಿಂದ ಬೆಂಕಿಯನ್ನು ಅವೆರಡರ ವ್ಯಾಪ್ತಿನಿಶ್ಚಯಪುರಸ್ಸರವಾಗಿ ತಿಳಿದುಕೊಳ್ಳುವಂತೆ ವಾಚ್ಯಾರ್ಥದಿಂದ ಇನ್ನೊಂದು ಅರ್ಥದ ಪ್ರತೀತಿಯುಂಟಾಗುವುದು ಎಂದು ಮೊದಲೇ ಪ್ರತಿಪಾದಿಸಿದ್ದೇವೆ. ಉದಾಹರಣೆ– "ಏವಂ ವಾದಿನಿ ದೇವರ್ಷೌ" ಇತ್ಯಾದಿ ಪದ್ಯ. (ಇದರ ಅನುವಾದ ಹಿಂದೆ ಬಂದಿದೆ) ಇದರಲ್ಲಿ ಗೌರಿಯು ಮಾಡಿದ ಲೀಲಾಕಮಲಪತ್ರಗಳ ಎಣಿಕೆಯು ಶಬ್ದವ್ಯಾಪಾರವನ್ನು ಅಪೇಕ್ಷಿಸದೆ ರತಿ ಎಂಬುದಕ್ಕೆ ವ್ಯಭಿಚಾರಿಭಾವವಾದ ಲಜ್ಜೆ ಮುಂತಾದುದನ್ನು ಅನುಮಿತಿಯಿಂದ ತಿಳಿಸುತ್ತದೆ ಎಂದು ಈಗಾಗಲೇ ಹೇಳಿದ್ದೇವೆ.

ಅರ್ಥವು ಕವಿಪ್ರೌಢೋಕ್ತಿಸಿದ್ಧವೋ, ಕವಿನಿಬದ್ಧವಕ್ತೃಪ್ರೌಢೋಕ್ತಿಸಿದ್ಧವೋ, ಸ್ವತಃ ಸಂಭವಿಯೋ ಆಗಿರಬಹುದು. ಅದು ಅರ್ಥಾಂತರಕ್ಕೆ ಗಮಕವಾಗುವುದರಲ್ಲಿ ಯಾವ ವಿಶೇಷವೂ ಇಲ್ಲ, ಅದರಿಂದ ಯಾವ ಫಲಭೇದವೂ ಉಂಟಾಗದು.

(ಲೋಕಸಿದ್ಧವಾದ ವಸ್ತುವನ್ನು ಕಾವ್ಯದಲ್ಲಿ ಹೇಳಿದ್ದರೆ ಅದು ಸ್ವತಃ ಸಂಭವಿ. ಕವಿಪ್ರತಿಭಾನಿರ್ಮಿತವಾದ ಲೋಕೋತ್ತರ ವಸ್ತು ಕವಿಪ್ರೌಢೋಕ್ತಿನಿಷ್ಪನ್ನಶರೀರ. ಯಾವುದಾದರೂ ಪಾತ್ರವು ಹೇಳುವ ಅಂಥ ಮಾತಿನ ಅರ್ಥವು ಕವಿನಿಬದ್ಧವಕ್ತೃ– ಪ್ರೌಢೋಕ್ತಿನಿಷ್ಪನ್ನಶರೀರ.)

ಗಮ್ಯಸ್ಯ ಪುನರರ್ಥಸ್ಯ ಪ್ರಾಧಾನ್ಯನಿಬಂಧನೋ ವ್ಯಪದೇಶಃ ಇತಿ ತಸ್ಯ ಪ್ರಧಾನೇತರಭಾವೇನ ದ್ವೈವಿಧ್ಯೋಪಗಮಃ ಸಫಲ ಏವ । ತಥಾ ಹಿ–

ಪ್ರಾಪ್ತಶ್ರೀರೇವ ಕಸ್ಮಾತ್ ಪುನರಪಿ ಮಯಿ ತನ್ಮಂಥಖೇದಂ ವಿದಧ್ಯಾ–
ನ್ನಿದ್ರಾಮಪ್ಯಸ್ಯ ಪೂರ್ವಾಮನಲಸಮನಸೋ ನೈವ ಸಂಭಾವಯಾಮಿ ।
ಸೇತುಂ ಬಧ್ನಾತಿ ಭೂಯಃ ಕಿಮಿತಿ ಚ ಸಕಲದ್ವೀಪನಾಥಾನುಯಾತಃ
ತ್ವಯ್ಯಾಯಾತೇ ವಿತರ್ಕಾನಿತಿ ದಧತ ಇವಾಭಾತಿ ಕಂಪಃಪಯೋಧೇಃ ॥

ಇತಿ । ಯತ್ರ ಲಕ್ಷ್ಮೀಲಾಭಲಂಪಟತಯಾ ಪಯೋನಿಧೌ ಮಂಥನ–ವ್ಯಥಾವಿತರಣಂ ವಿಲಾಸಾಲಸತಯಾ ಯೋಗನಿದ್ರಾಸುಖಾಸ್ವಾದೋ ದ್ವೀಪಾಂತರಾಧೀಶದಶಕಂಧರನಿಧನಧಿಯಾ ಸೇತುಬಂಧಶ್ಚೇತಿ ಭಗವತೋ ವಾಸುದೇವಸ್ಯಾಮೀ ವ್ಯಾಪಾರಾಃ ಪ್ರಸಿದ್ಧಾಸ್ಸಂತೋ ಯದನ್ಯತ್ರ ರಾಜಾದಾವಾರೋಪ್ಯ ತಸ್ಯ ಸಮೀಹಿತಪ್ರಾಪ್ತ್ಯಾ

**ನಿಷಿಧ್ಯಂತೇ ತೇನ ತತ್ಕಾರ್ಯತ್ವಾತ್ ಕಾರಣಭೂತಭಗವದ್‌–ರೂಪತಾರೋಪಮೇವ ತತ್ರಾನುಮಾಪಯಂತೀತಿ ರೂಪಕಾನುಮಿತಿರಿತಿ ವ್ಯಪದೇಶಃ ಪ್ರವರ್ತತೇ ।**

**ಜ್ಯೋತ್ಸ್ನಾಪೂರಪ್ರಸರಧವಲೇ ಸೈಕತೇಽಸ್ಮಿನ್ ಸರಯ್ವಾ**
**ವಾದದ್ಯೂತಂ ಸುಚಿರಮಭವತ್ ಸಿದ್ಧಯೂನೋಃ ಕಯೋಶ್ಚಿತ್ ।**
**ಏಕಃ ಪ್ರಾಹ ಪ್ರಥಮನಿಹತಂ ಕೇಶಿನಂ ಕಂಸಮನ್ಯಃ**
**ಸ ತ್ವಂ ತತ್ತ್ವಂ ಕಥಯ ಭವತಾ ಕೋ ಹತಸ್ತತ್ರ ಪೂರ್ವಮ್ ॥**

**ಅತ್ರ ಕೇಶಿಕಂಸಾಸುರಯೋಃ ಕತರೋ ಭವತಾ ಪೂರ್ವಂ ಹತ ಇತಿ ಯೋಽಯಂ ವಧಪೌರ್ವಾಪರ್ಯವಿಪರ್ಯಯಾನುಯೋಗಃ, ತಸ್ಯ ಸಾಕ್ಷಾದ್ ಭಗವಾನೇವ ವಿಷಯಭಾವೇನ ವಕ್ತುಮುಚಿತೋ, ನಾಪರೋ ರಾಜಾದಿಃ, ತಯೋರೇವ ಧೂಮಾಗ್ನ್ಯೋರಿವ ಕಾರ್ಯಕಾರಣಭಾವಪ್ರಸಿದ್ಧೇಃ । ಸೋಽಯಮನ್ಯವಿಷಯತಯಾ ಉಚ್ಯಮಾನಸ್ತತ್ರ ಭಗವದ್‌–ರೂಪತಾರೋಪಣಮಂತರೇಣ ಅನುಪಪದ್ಯಮಾನಸ್ತದ್ರೂಪತಾಮ್ ಉಪಕಲ್ಪಯಂಸ್ತಯೋ ರೂಪ್ಯರೂಪಕಭಾವಮನುಮಾಪಯತೀತಿ ರೂಪಕಾನುಮಿತಿರ್ವ್ಯಪದಿಶ್ಯತೇ ।**

**ಅನುವಾದ:**

(ಅನುಮಿತಿಯಲ್ಲಿ ಅಲಂಕಾರಧ್ವನಿಯ ಅಂತರ್ಭಾವ)

ಗಮ್ಯವಾದ ಅರ್ಥಕ್ಕೆ ಪ್ರಾಧಾನ್ಯವನ್ನು ಅವಲಂಬಿಸಿ ವ್ಯವಹಾರ. ಆದ್ದರಿಂದ ಅದರ ಪ್ರಾಧಾನ್ಯ–ಅಪ್ರಾಧಾನ್ಯಗಳನ್ನು ಆಶ್ರಯಿಸಿ ದ್ವೈವಿಧ್ಯವನ್ನು ಒಪ್ಪಿಕೊಳ್ಳಲಾಗಿದೆ– ಅದು ಸರಿಯಾಗಿಯೇ ಇದೆ. ಹೇಗೆಂದರೆ–

"ಲಕ್ಷ್ಮಿಯನ್ನು ಈಗಾಗಲೇ ಪಡೆದಿರುವ ಇವನು ನನ್ನನ್ನು ಕಡೆದು ಏಕೆ ಶ್ರಮಪಡುತ್ತಾನೆ? ಚಟುವಟಿಕೆಯನ್ನುಳ್ಳ ಮನಸ್ಸಿನ ಇವನು ನಿದ್ರೆ ಮಾಡಲು ಇಷ್ಟಪಡುವುದನ್ನೂ ಊಹಿಸಲಾರೆ. ಸರ್ವದ್ವೀಪಗಳ ರಾಜರೂ ಇವನಿಗೆ ಅಧೀನರಾಗಿರುವುದರಿಂದ ಇವನೇಕೆ ಸೇತುವೆಯನ್ನು ಕಟ್ಟುತ್ತಾನೆ? ಹೀಗೆ ಸಮುದ್ರನು ನೀನು ಬಂದಾಗ ತರ್ಕಿಸುತ್ತಿರುವಂತೆ ಅವನ ತಳಮಳವು ಕಾಣಿಸುತ್ತಿದೆ."

ಲಕ್ಷ್ಮಿಯ ಲಾಭದ ಲಾಲಸೆಯಿಂದ ಸಮುದ್ರದಲ್ಲಿ ಮಂಥನದ ವ್ಯಥೆಯನ್ನು ಉಂಟುಮಾಡಿದುದು, ವಿಲಾಸಾಕಾಂಕ್ಷೆಯಿಂದ ಯೋಗನಿದ್ರೆಯ ಸುಖಾನುಭವ, ದ್ವೀಪದ ಒಡೆಯನಾಗಿದ್ದ ರಾವಣನನ್ನು ಕೊಲ್ಲುವುದಕ್ಕಾಗಿ ಸೇತುವೆಯನ್ನು ಕಟ್ಟಿದುದು ಇವೆಲ್ಲ ಭಗವಾನ್ ವಾಸುದೇವನ ಕೆಲಸಗಳೆಂದು ಪ್ರಸಿದ್ಧವಾಗಿವೆ. ರಾಜನೊಬ್ಬನಲ್ಲಿ ಅವುಗಳನ್ನು ಆರೋಪಿಸಿ ಅವನ ಇಷ್ಟಾರ್ಥಗಳೆಲ್ಲ ನೆರವೇರಿವೆ ಎಂಬ ಕಾರಣದಿಂದ ನಿಷೇಧಿಸಲಾಗಿದೆ. ಭಗವಂತನ ಕಾರ್ಯಗಳೇ ಅವು ಎಂದು ಭಗವದ್ರೂಪವನ್ನು ರಾಜನಲ್ಲಿ ಆರೋಪ ಮಾಡಲಾಗಿದೆ ಎಂದು ಇಲ್ಲಿ ಅನುಮಿತಿಯಿಂದ ತಿಳಿಸಲಾಗಿದೆ. ಇದಕ್ಕೆ ರೂಪಕಾನುಮಿತಿ ಎಂದು ಹೆಸರು ಸಲ್ಲುತ್ತದೆ.

"ಸರಯೂ ನದಿಯ ಮರಳು ಬೆಳದಿಂಗಳಿನ ಪ್ರವಾಹದಿಂದ ಬಿಳುಪಾಗಿದೆ. ಅಲ್ಲಿ ಇಬ್ಬರು ಸಿದ್ಧತರುಣರು ದೀರ್ಘಕಾಲ ವಾದದ್ಯೂತದಲ್ಲಿ ತೊಡಗಿದ್ದಾರೆ. ಕೇಶಿಯು ಮೊದಲು ಕೊಲ್ಲಲ್ಪಟ್ಟ ಎಂದು ಒಬ್ಬನು ಹೇಳಿದರೆ, ಹಾಗಲ್ಲ, ಮೊದಲು ಕಂಸನು ಹತನಾದ ಎನ್ನುತ್ತಿದ್ದಾನೆ ಇನ್ನೊಬ್ಬನು. ಅವರಿಬ್ಬರಲ್ಲಿ ಮೊದಲು ನಿನ್ನಿಂದ ಕೊಲ್ಲಲ್ಪಟ್ಟವನು ಯಾರೋ ಅದನ್ನು ನೀನೇ ಹೇಳು, ದೊರೆಯೆ."

ಇಲ್ಲಿ ಕೇಶಿ–ಕಂಸಾಸುರರಲ್ಲಿ ಯಾರು ನಿನ್ನಿಂದ ಮೊದಲು ಹತರಾದರು ಎಂದು ಪೌರ್ವಾಪರ್ಯದ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಭಗವಾನ್ ವಿಷ್ಣುವೇ ವಿಷಯವಾಗುವುದು ಉಚಿತ, ಬೇರೆ ಯಾವನೋ ರಾಜನಲ್ಲ. ಕೇಶಿ–ಕಂಸ ಹನನಕ್ಕೂ ವಿಷ್ಣುವಿಗೂ ಕಾರ್ಯಕಾರಣಭಾವವು ಪ್ರಸಿದ್ಧವೇ ಆಗಿದೆ. ಅಂಥ ಕಾರ್ಯವನ್ನು ಬೇರೆ ಒಬ್ಬ ರಾಜನನ್ನು ಉದ್ದೇಶಿಸಿ ಹೇಳಿದಾಗ ಅದು ರಾಜನಲ್ಲಿ ಭಗವದ್ರೂಪದ ಆರೋಪವಿಲ್ಲದೆ ಹೊಂದುವುದಿಲ್ಲ. ಆದ್ದರಿಂದ ಅದು ತದ್ರೂಪತೆಯನ್ನು ಕಲ್ಪಿಸುತ್ತದೆ. ಅವರಿಗೆ ರೂಪ್ಯರೂಪಕಭಾವವನ್ನೂ ಅನುಮಿತಿ ಪ್ರಮಾಣದಿಂದ ತಿಳಿಸುತ್ತದೆ. ಹೀಗೆ ಇದು ರೂಪಕಾನುಮಿತಿ ಎಂದು ಕರೆಸಿಕೊಳ್ಳುತ್ತದೆ.

**ಲಾವಣ್ಯಕಾಂತಿಪರಿಪೂರಿತದಿಙ್ಮುಖೇಽಸ್ಮಿನ್**
**ಸ್ಮೇರೇಽಧುನಾ ತವ ಮುಖೇ ತರಲಾಯತಾಕ್ಷಿ ।**
**ಕ್ಷೋಭಂ ಯದೇತಿ ನ ಮನಾಗಪಿ ತೇನ ಮನ್ಯೇ**
**ಸುವ್ಯಕ್ತಮೇವ ಜಡರಾಶಿರಯಂ ಪಯೋಧಿಃ ॥**

**ಅತ್ರಾಪಿ ಯದೇತತ್ ಕಸ್ಯಾಶ್ಚಿತ್ ಯಥೋದಿತಗುಣಗಣೋದಿತಸೌಂದರ್ಯಸಂಪದಿ ವದನೇ ಸತಿ ಸಮುದ್ರಸಂಕ್ಷೋಭಾವಿರ್ಭಾವಸ್ಯೋಚಿತಸ್ಯಾಪಿ ಕುತಶ್ಚಿತ್ ಕಾರಣಾದಭಾವಾಭಿಧಾನಂ ತತ್ತಸ್ಯ ಪೂರ್ಣೇಂದುತಾರೋಪಮಂತರೇಣಾನುಪಪದ್ಯಮಾನಂ ಮುಖಸ್ಯ ತಾದ್ರೂಪ್ಯಮುಪಕಲ್ಪಯತ್ ಪೂರ್ವವತ್ತಯೋ ರೂಪ್ಯರೂಪಕಭಾವಮನುಮಾಪಯತೀತಿ ರೂಪಕಾನುಮಿತಿವ್ಯಪದೇಶೋ ಭವತಿ ।**

**ಅನುವಾದ:**

"ಎಲೈ ಚಂಚಲವಿಶಾಲಲೋಚನೆ, ಲಾವಣ್ಯದ ಕಾಂತಿಯಿಂದ ಸಕಲ ದಿಕ್ಕುಗಳನ್ನೂ ನಿನ್ನ (ಮುಗುಳುನಗೆಯಿಂದೆ) ಅರಳುತ್ತಿರುವ ಮುಖವು ತುಂಬಿಸುತ್ತಿದೆ. ಅದು ಇದ್ದಾಗಲೂ ಈ ಸಮುದ್ರವು ಉಬ್ಬರದಿಂದ ಉಕ್ಕುತ್ತಿಲ್ಲ. ಆದುದರಿಂದ ಇದು ಜಲರಾಶಿ(ಜಡರಾಶಿ) ಎಂದು ಸ್ಪಷ್ಟವಾಗಿ ಅಂದುಕೊಳ್ಳುತ್ತೇನೆ."

ಇಲ್ಲೂ ಯಾವಳೋ ಒಬ್ಬ ಸುಂದರಿಯ ವರ್ಣಿತವಾದ ಗುಣಗಳಿಂದ ಹುಟ್ಟಿದ ಸೌಂದರ್ಯಸಂಪತ್ತನ್ನುಳ್ಳ ಮುಖವು ಮುಂದೆ ಇದ್ದಾಗಲೂ ನ್ಯಾಯವಾಗಿ ಉಂಟಾಗಬೇಕಾಗಿದ್ದ ಸಮುದ್ರದ ಸಂಕ್ಷೋಭವು ಯಾವುದೋ ಕಾರಣದಿಂದ

ಆಗಲಿಲ್ಲ ಎಂದು ಹೇಳಲಾಗಿದೆ. ಹಾಗೆ ಹೇಳುವುದು ಆ ಮುಖದಲ್ಲಿ ಪೂರ್ಣೇಂದುತ್ವದ ಆರೋಪವನ್ನು ಒಪ್ಪಿಕೊಳ್ಳದಿದ್ದರೆ ಉಪಪನ್ನವಾಗದು. ಆ ಆರೋಪವು ಮುಖಕ್ಕೆ ಚಂದ್ರತಾದ್ರೂಪ್ಯವನ್ನು ಕಲ್ಪಿಸಿ ಹಿಂದೆ ಹೇಳಿದಂತೆ ಅವೆರಡರ (ಚಂದ್ರ+ಮುಖಗಳ) ರೂಪ್ಯರೂಪಕಭಾವವನ್ನು ಅನುಮಿತವಾಗುವಂತೆ ಮಾಡುತ್ತದೆ. ಆದ್ದರಿಂದ ಇಲ್ಲಿ ರೂಪಕಾನುಮಿತಿ ಎಂಬ ವ್ಯವಹಾರ.

> **ಕೇವಲಮಿದಮತ್ರ ವಿಚಾರ್ಯತೇ । ಯದೇತದ್ ವದನೇಂದುಬಿಂಬಸದ್ಭಾವೇ ಸತ್ಯಪಿ ಪಯೋಧೇಸ್ಸಲಿಲೋಲ್ಲಾಸಲಕ್ಷಣಕ್ಷೋಭಾವಿರ್ಭಾವನಿಬಂಧನಧಿಯಾ ಸಲಿಲಸಮೂಹ-ಮಾತ್ರಪರಮಾರ್ಥಃ ಯುನ್ನಾಸ್ಯ ಕಾಚನ ಚೇತನಚಮತ್ಕಾರಕಣಿಕಾ ಸಮಸ್ತಿ ಇತ್ಯೇವಮರ್ಥತಾತ್ಪರ್ಯೇಣ ಜಲರಾಶಿತ್ವಮುಪಾತ್ತಂ ತತ್ ತಸ್ಯ ಸದೈವ ಸನ್ನಿಹಿತಮ್ ಇತ್ಯನಾರೋಪಿತರೂಪಂಯಾಮಿನೀರಮಣೋದಯುಸಮಯೇಽಪಿ ನಾಸ್ಯ ಸಂಕ್ಷೋಭಾವಿರ್ಭಾವೋ ಭವೇತ್ ತದಪಿ ಜಲರಾಶಿತ್ವಾವಿಶೇಷಾತ್ ।**

**ಅನುವಾದ:**

ಇಲ್ಲಿ ಇಷ್ಟನ್ನು ಮಾತ್ರ ವಿಮರ್ಶಿಸುತ್ತೇವೆ. ಮುಖಚಂದ್ರಬಿಂಬವು ಎದುರಿಗೆ ಇದ್ದಾಗಲೂ ಸಮುದ್ರದಲ್ಲಿ ನೀರು ಉಕ್ಕಿಬರುವ ಲಕ್ಷಣದ ಉಬ್ಬರವು ಉಂಟಾಗುವ ನಿಮಿತ್ತ ಎಂಬ ಭಾವನೆಯಿಂದ, ಇದು ಕೇವಲ ನೀರಿನ ಸಮೂಹ, ಇದಕ್ಕೆ ಚೇತನಗಳಿಗೆ ಉಂಟಾಗುವ ಚಮತ್ಕಾರ ಚೂರಿನಷ್ಟೂ ಆಗದು ಎಂಬ ಅರ್ಥದ ತಾತ್ಪರ್ಯದಿಂದ ಸಮುದ್ರಕ್ಕೆ ಜಲರಾಶಿತ್ವವನ್ನು ಹೇಳಲಾಗಿದೆ.

ಜಲರಾಶಿತ್ವವು ಯಾವಾಗಲೂ ಸಮುದ್ರಕ್ಕೆ ಇದ್ದೇ ಇದೆ. ಆದ್ದರಿಂದ ಚಂದ್ರತ್ವವನ್ನು ಆರೋಪಿಸದ ನಿಜವಾದ ಚಂದ್ರನ ಉದಯದ ಕಾಲದಲ್ಲೂ ಸಂಕ್ಷೋಭದ ಆವಿರ್ಭಾವು ಆಗದೆ ಇರಬೇಕಾಗಿತ್ತು, ಏಕೆಂದರೆ ಸ್ವಾಭಾವಿಕವಾಗಿ ಕಡಲು ನೀರಿನ ರಾಶಿಯಾಗಿರುವುದು ವಿಶೇಷವೇನಲ್ಲ.

> **ಅಥ ಮದನೋನ್ಮಾದಲಕ್ಷಣಕ್ಷೋಭಾವಿರ್ಭಾವನಿಬಂಧನಬುದ್ಧ್ಯಾ ಸದಸದ್ವಿವೇಕವಿಕಲೋಽಯಂ ಜಡ ಇತಿ ಜಾಡ್ಯಪ್ರತಿಪಾದನಪರತಯಾ ತದುಪಾದಾನಮಿತಿ । ಏವಮಪಿ ವದನಸ್ಯ ಸೌಂದರ್ಯಾತಿಶಯಶಾಲಿನಃ ಸೌಭಾಗ್ಯಾತಿರೇಕ ಏವಾನುಮಿತೋ ಭವತಿ, ಯಥಾತ್ರೈವ ಪಾಠವಿಪರ್ಯಾಸೇ ಸತಿ–ಯತ್ ಪ್ರಹ್ವಭಾವಮುಪಯಾತಿ ನ, ತೇನ ಮನ್ಯೇ ಸುವ್ಯಕ್ತಮೇವ ಜಲರಾಶಿರಯಂ ಪಯೋಧಿಃ ॥ ಇತಿ । ನ ಪುನಃ ಪೂರ್ಣೇಂದುರೂಪತ್ವಮ್ । ತದ್ಧಿ ತತ್ಕಾರ್ಯಸ್ಯ ಸಮುದ್ರಸಂಕ್ಷೋಭಸ್ಯ ಅವಿಕಲಕಾರಣತಯಾ ಸಂಭಾವ್ಯಮಾನೋತ್ಪಾದಸ್ಯ ಸತಃ ಪ್ರತಿಬಂಧಕಪ್ರತ್ಯಯಬಲಾದನುತ್ಪಾದೇ ಸತಿ ಅನುಮೀಯತೇ, ನಾನ್ಯಥಾ ।**

**ಅನುವಾದ:**

ಮತ್ತೆ ಇಲ್ಲಿ ಕಾಮೋನ್ಮಾದರೂಪವಾದ ತಳಮಳವು ಉಂಟಾಗಬೇಕಾಗಿತ್ತು ಎಂಬ ದೃಷ್ಟಿಯಿಂದ ಈ ಕಡಲು ಒಳ್ಳೆಯದು–ಕೆಟ್ಟದ್ದು ಎಂಬ ವಿವೇಕವನ್ನು

ಪಡೆದಿಲ್ಲ, ಆದ್ದರಿಂದ ಜಡ ಎಂದು ಜಡತ್ವವನ್ನು ಹೇಳುವುದಕ್ಕಾಗಿ ಜಲರಾಶಿತ್ವವನ್ನು ಹೇಳಲಾಗಿದೆ–ಎಂದರೆ ಆಗ ಅತಿಶಯದ ಸೌಂದರ್ಯವನ್ನು ಹೊಂದಿರುವ ಮುಖದ ಸೌಭಾಗ್ಯದ ಅಗ್ಗಳಿಕೆಯೇ ಇಲ್ಲಿ ಅನುಮಿತವಾಗುತ್ತದೆ. ಪದ್ಯದಲ್ಲಿ ಪಾಠವ್ಯತ್ಯಾಸವನ್ನು–

ಈ ಕಡಲು ವಿನಯವಂತಿಕೆಯನ್ನು ಹೊಂದುತ್ತಿಲ್ಲ, ಆದ್ದರಿಂದ ಅದು ಸ್ಪಷ್ಟವಾಗಿ ಜಲರಾಶಿ ಎಂದುಕೊಳ್ಳುತ್ತೇನೆ–

ಎಂದು ಮಾಡಿದರೆ ಆಗುವಂತೆ. ಅದರಿಂದ ಮುಖದ ಪೂರ್ಣೇಂದು ರೂಪತ್ವವಂತೂ ಸಿದ್ಧವಾಗುವುದಿಲ್ಲ. ಪೂರ್ಣೇಂದುವಿನ ಕಾರ್ಯ ಸಮುದ್ರಸಂಕ್ಷೋಭ. ಕಾರಣಸಾಮಗ್ರಿಯು ಇದ್ದಾಗ ಕಾರ್ಯದ ಉತ್ಪತ್ತಿಯು ಸಂಭಾವಿತ. ಪ್ರತಿಬಂಧಕಜ್ಞಾನದ ಬಲದಿಂದ ಕಾರ್ಯವು ಉಂಟಾಗಲಿಲ್ಲ ಎಂದಾದರೆ ಕಾರಣವು ಅನುಮಿತವಾಗುತ್ತದೆ. ಇಲ್ಲದಿದ್ದರೆ ಆಗದು.

**ಯಥಾ– ಹೋಇಣ ಗುಣಾಣುರಾಓ ಜಡಾಣ ಣವರಂ ಪಸಿದ್ಧಿಸರಣಾಣ ।**
**ಕಿರಂ ಪಣ್ಹವಇ ಸಸಿಮಣೀ ಚಂದೇ ಣ ಪಿಯಾಮುಹೇ ದಿಠ್ಠೇ ॥**

**(ಭವತಿ ನ ಗುಣಾನುರಾಗೋ ಜಡಾನಾಂ ಕೇವಲಂ ಪ್ರಸಿದ್ಧಿಶರಣಾನಾಮ್ ।**
**ಕಿಲ ಪ್ರಸ್ನೌತಿ ಶಶಿಮಣಿಶ್ಚಂದ್ರೇ, ನ ಪ್ರಿಯಾಮುಖೇ ದೃಷ್ಟೇ ॥)**

**ಇತ್ಯತ್ರ ಪ್ರಿಯಾಮುಖಸ್ಯ ಪೂರ್ಣೇಂದುರೂಪತ್ವಂ ತತ್ಕಾರ್ಯಸ್ಯ ಚಂದ್ರಕಾಂತಮಣಿಪ್ರಸ್ನುತಿಲಕ್ಷಣಸ್ಯ ಸಂಭಾವ್ಯಮಾನೋತ್ಪಾದಸ್ಯ ಸತೋ ಜಾಡ್ಯಜನಿತಪ್ರಸಿದ್ಧಿಶರಣತ್ವರೂಪಪ್ರತಿಬಂಧಕಪ್ರತ್ಯಯ–ಬಲಾದನುತ್ಪಾದೇ ಸತ್ಯನುಮೀಯತೇ ।**

**ನ ಚೇಹ ಚಂದ್ರಬಿಂಬಕಾರ್ಯಸ್ಯ ಕಿಮಪಿ ಪ್ರತಿಬಂಧಕಾರಣಮುಪಾತ್ತಮಿತಿ ಕಥಂ ತಸ್ಯ ಪೂರ್ಣೇಂದುರೂಪತಾನುಮಿತಿಸಿದ್ಧಿಃ?**

**ಅನುವಾದ:**

ಉದಾಹರಣೆ–

"ಕೇವಲ ಪ್ರಸಿದ್ಧಿಶರಣರಾದ ಜಡ(ದಡ್ಡ)ರಿಗೆ ಗುಣಗಳಲ್ಲಿ ಪ್ರೀತಿ ಇರುವುದಿಲ್ಲ. ಚಂದ್ರಕಾಂತಮಣಿಯು ಚಂದ್ರನು ಕಾಣಿಸಿದಾಗ ಕರಗುತ್ತದೆ, ಪ್ರಿಯೆಯ ಮುಖವನ್ನು ಕಂಡರೂ ಕರಗುವುದಿಲ್ಲ."

ಇಲ್ಲಿ ಪ್ರಿಯಾಮುಖದ ಪೂರ್ಣೇಂದುಬಿಂಬರೂಪತ್ವವು ಅನುಮಿತವಾಗುತ್ತದೆ. ಏಕೆಂದರೆ ಅದರ ಕಾರ್ಯ ಚಂದ್ರಕಾಂತಮಣಿಯನ್ನು ಕರಗಿಸುವುದು, ಅದು ಇಲ್ಲಿ ಆಗುವ ಸಂಭವವಿತ್ತು, ಆದರೆ ಜಡತ್ವದಿಂದ ಹುಟ್ಟುವ ಪ್ರಸಿದ್ಧಿಶರಣತ್ವವೆಂಬ ಪ್ರತಿಬಂಧಕವಿರುವುದರಿಂದ ಆ ಕಾರ್ಯ ಆಗುತ್ತಿಲ್ಲ ಎಂದು ಕವಿಯು ಹೇಳಿದ್ದಾನೆ.

ಇಲ್ಲಿ (ಲಾವಣ್ಯಕಾಂತಿ........... ಎಂಬ ಪದ್ಯದಲ್ಲಿ) ಚಂದ್ರಬಿಂಬದ ಕಾರ್ಯವಾದ ಕಡಲಿನ ತಳಮಳಕ್ಕೆ ಯಾವ ಪ್ರತಿಬಂಧಕವನ್ನೂ ಕವಿಯು ನಮೂದಿಸಿಲ್ಲ. ಹೀಗಿರಲು ಮುಖಕ್ಕೆ ಪೂರ್ಣೇಂದುರೂಪತ್ವವನ್ನು ಸಾಧಿಸುವ ಅನುಮಿತಿ ಹೇಗೆ ಸಿದ್ಧವಾಗುತ್ತದೆ?

**ಯತ್ರ ಹಿ ಯತ್ಕಾರ್ಯಸ್ಯ ಯತ್ ಪ್ರತಿಬಂಧನಿಬಂಧನಭಾವೇನೋಪಕಲ್ಪ್ಯತೇ ತತ್ರ ತಸ್ಯೈವ ತದುಪಾದಾನೇ ಸತ್ಯವಸಾಯೋ, ನಾನ್ಯಸ್ಯ, ಅತಿಪ್ರಸಂಗಾತ್ । ಮುಖೇ ಚ ಸೌಭಾಗ್ಯಾತಿರೇಕಕಾರ್ಯಸ್ಯ ಮದನೋನ್ಮಾದಲಕ್ಷಣಸ್ಯ ಕ್ಷೋಭಸ್ಯ ಅಚೇತನತ್ವಂ ಪರಮಾರ್ಥಜಲರಾಶಿತ್ವಂ ಪ್ರತಿಬಂಧನಿಬಂಧನಭಾವೇನೋಪಾತ್ತಮ್ । ಅತಸ್ತಸ್ಯೈವ ತತ್ರ ಪ್ರತೀತಿರುಪಪನ್ನಾ, ನ ಚಂದ್ರತ್ವಾದೇಃ । ಅನ್ಯಥಾ ಕಮಲತ್ವಾದೇರಪಿ ಸಾ ಸ್ಯಾದ್ ವಿಶೇಷಾಭಾವಾತ್ ॥ ತಸ್ಮಾದುಭಯಾರ್ಥಸಾಧಾರಣಕ್ಷೋಭಪದಪ್ರಯೋಗಮಾತ್ರವಿಪ್ರಲಂಭ–ಕೃತೋऽಯಂ ಮುಖೇಂದುಬಿಂಬಯೋಃ ರೂಪ್ಯರೂಪಕಭಾವಭ್ರಮ ಇತಿ ಸ್ಥಿತಮ್ ।**

**ಅನುವಾದ:**

ಎಲ್ಲಿ ಯಾವುದು ಯಾವ ಕಾರ್ಯಕ್ಕೆ ಪ್ರತಿಬಂಧಕವೆಂದು ನಮೂದಿಸಲ್ಪಟ್ಟಿರುವುದೋ ಅಲ್ಲಿ ಅದು ಮಾತ್ರ ಉಪಾದಾನವಿದ್ದಾಗ ನಿಶ್ಚಯಿಸಲ್ಪಡುತ್ತದೆ, ಬೇರೆಯದಲ್ಲ. (ಹಾಗೆ ಬೇರೆಯದನ್ನೂ ತಿಳಿದುಕೊಳ್ಳಬಹುದೆಂದಾದರೆ) ಅತಿಪ್ರಸಂಗವಾಗುತ್ತದೆ. ಮುಖದಲ್ಲಿ ಸೌಭಾಗ್ಯಾತಿಶಯವೆಂಬುದರ ಕಾರ್ಯವಾದ ಕಾಮೋನ್ಮಾದರೂಪವಾದ ಕ್ಷೋಭಕ್ಕೆ ಅಚೇತನತ್ವವೂ, ಪರಮಾರ್ಥದಲ್ಲಿ ಜಲರಾಶಿತ್ವವೂ ಪ್ರತಿಬಂಧಕವೆಂದು ಉಪಾತ್ತವಾಗಿದೆ. ಆದ್ದರಿಂದ ಆ ಸೌಭಾಗ್ಯಾತಿಶಯದ ಪ್ರತೀತಿಯೇ ಸಕಾರಣವಾದದ್ದು. ಚಂದ್ರತ್ವಾದಿಗಳ ಪ್ರತೀತಿಯಲ್ಲ. ಹೀಗೆ ಒಪ್ಪಿಕೊಳ್ಳದಿದ್ದರೆ ಕಮಲತ್ವಾದಿಗಳ ಪ್ರತೀತಿಯೂ ಉಂಟಾಗಲಿ, ಅವೆರಡರ ಮಧ್ಯೆ ವಿಶೇಷವೇನಿಲ್ಲ. ಆದ್ದರಿಂದ ನೀರಿನ ಉಬ್ಬರ ಮತ್ತು ಕಾಮೋನ್ಮಾದ ಎಂಬ ಎರಡು ಅರ್ಥಗಳಿಗೂ ಸಮಾನವಾದ ಕ್ಷೋಭಪದದ ಪ್ರಯೋಗದಿಂದಲೇ ಇಲ್ಲಿ ಮೋಸವಾಗಿ ಅದರಿಂದ ಮುಖ ಮತ್ತು ಇಂದುಬಿಂಬಗಳ ರೂಪ್ಯರೂಪಕಭಾವದ ಭ್ರಾಂತಿಯುಂಟಾಗುತ್ತದೆ ಎಂದು ತೀರ್ಮಾನ.

**ತಸ್ಮಾದೇವಮತ್ರ ಪಾಠಃ ಕರ್ತವ್ಯಃ –**
**ಕ್ಷೋಭಂ ಯದೇತಿ ನ ಮನಾಗಪಿ ತೇನ ಮನ್ಯೇ**
**ರೂಪಾಂತರಂ ಪತಿರಪಾಂ ಕಿಮಪಿ ಪ್ರಪನ್ನಃ । ಇತಿ ।**

**ಅತ್ರ ಹಿ ನ ಕೇವಲಂ ವದನಸ್ಯೇಂದುತ್ವಂ ಪ್ರತೀಯತೇ ಯಾವದಪಾಂ ಪತ್ಯುಃ ಶೃಂಗಾರಿತ್ವಮಪಿ। ತೇನ ತವ ವದನೇಂದೂದಯೇ ಸತಿ ಅನೇಕ ಸುಂದರೀರೂಪಲಾವಣ್ಯಸಂಪದಾಮ್ ಅಂತರಜ್ಞೋऽಪ್ಯಪಾಂ ಪತಿರ್ಯನ್ನ ಮನಾಗಪಿ ಕ್ಷೋಭಮುಪಯಾತಿ ತನ್ಮನ್ಯೇ ರೂಪಾಂತರಂ**

**ಕಿಮಪಿ ಪ್ರಪನ್ನ ಇತ್ಯಯಮರ್ಥೋಽವತಿಷ್ಠತೇ । ಏಷ ಚ ಅನಂತರೋಕ್ತಪಾಠಾರ್ಥಾದ್ ವಿಶಿಷ್ಯತೇ ನ ವೇತಿ ಸಹೃದಯಾ ಏವ ಪ್ರಮಾಣಮಿತಿ । ಯಥಾಸ್ಥಿತಪಾಠಪಕ್ಷೇ ತು ನೇದಂ ರೂಪಕಾನುಮಿತೇರುದಾಹರಣಮುಪಪದ್ಯತೇ ।**

**ಅನುವಾದ:**

ಆದ್ದರಿಂದ ಇಲ್ಲಿ ಹೀಗೆ ಪಾಠವನ್ನು ಮಾಡಬೇಕು. (ಕ್ಷೋಭಂ............) "ಸಮುದ್ರನು ಸ್ವಲ್ಪವೂ ತಳಮಳಗೊಳ್ಳುತ್ತಿಲ್ಲವಾದುದರಿಂದ ಅವನು ಯಾವುದೋ ಬೇರೆ ರೂಪವನ್ನು ಧರಿಸಿದ್ದಾನೆಂದುಕೊಳ್ಳುತ್ತೇನೆ."

ಇಲ್ಲಿ ಮುಖಕ್ಕೆ ಚಂದ್ರತ್ವವು ತೋರುವುದು ಮಾತ್ರವಲ್ಲ, ಸಮುದ್ರನ ಶೃಂಗಾರಾಸಕ್ತಿಯೂ ಅಭಿವ್ಯಕ್ತವಾಗುತ್ತದೆ. ನಿನ್ನ ಮುಖಚಂದ್ರನು ಉದಯಿಸಿದಾಗ ಅನೇಕ ಸುಂದರಿಯರ ಚೆಲುವು ಸೊಬಗುಗಳ ಅಂತರವನ್ನು ತಿಳಿದವನಾದರೂ ಈ ಸಮುದ್ರನು ಸ್ವಲ್ಪ ಕ್ಷೋಭವನ್ನೂ ಹೊಂದುತ್ತಿಲ್ಲ. ಆದ್ದರಿಂದ ಅವನು ಬೇರೆ ರೂಪವನ್ನು ಧರಿಸಿದ್ದಾನೆಂದುಕೊಳ್ಳುತ್ತೇನೆ ಎಂಬ ಅರ್ಥವು ನಿಲ್ಲುತ್ತದೆ. ಈ ಪಾಠವು ಮೊದಲು ಹೇಳಿದ ಪಾಠಕ್ಕಿಂತಲೂ ವಿಶಿಷ್ಟವಾಗಿದೆಯೋ ಇಲ್ಲವೋ ಎಂಬುದಕ್ಕೆ ಸಹೃದಯರೇ ಪ್ರಮಾಣ.

ಮೂಲದಲ್ಲಿ (ಧ್ವನ್ಯಾಲೋಕದಲ್ಲಿ) ಇರುವ ಪಾಠವನ್ನು ಇಟ್ಟುಕೊಳ್ಳುವ ಪಕ್ಷದಲ್ಲಿ ಇದು ರೂಪಕಾನುಮಿತಿಯು (ಆನಂದವರ್ಧನನ ಮತದಲ್ಲಿ ರೂಪಕಧ್ವನಿಯ) ಉದಾಹರಣೆಯಾಗಲಾರದು.

**ವೀರಾಣ ರಮಇ ಘುಸಿಣಾರುಣಮ್ಮಿ ಣ ತಹಾ ಪಿಆಥಣುಚ್ಛಂಗೇ ।**
**ದಿಟ್ಠೀ ರಿಉಗಅಕುಂಭತ್ಥಲಮ್ಮಿ ಜಹ ಬಹಲಸಿಂದೂರೇ ॥**
**(ವೀರಾಣಾಂ ರಮತೇ ಘುಸೃಣಾರುಣೇ ನ ತಥಾ ಪ್ರಿಯಾಸ್ತನೋತ್ಸಂಗೇ ।**
**ದೃಷ್ಟೀ ರಿಪುಗಜಕುಂಭಸ್ಥಲೇ ಯಥಾ ಬಹಲಸಿಂದೂರೇ ॥)**

**ಅತ್ರ ಕಾಂತಾಕುಚತಟಕರಿಕುಂಭಸ್ಥಲಯೋಃ ಪ್ರಾಕರಣಿಕೇತರಯೋಃ ಪ್ರಮಾಣಾಂತರಪ್ರತಿಪನ್ನ–ಸಂಸ್ಥಾನವಿಶೇಷಯೋಃ ಕುಂಕುಮಸಿಂದೂರಾಹಿತ–ಲೌಹಿತ್ಯಲಕ್ಷಣನಿಬಂಧನಸಾದೃಶ್ಯಾವಸಾಯಮೂಲೋಽಯಮ್ ಉಪಮಾನೋಪಮೇಯಭಾವಾವಗಮ ಇತಿ ತಸ್ಯೈವ ತತ್ರ ಹೇತುತ್ವಮ್, ಅಪ್ರತಿಪನ್ನಸಂಸ್ಥಾನಸ್ಯ ಅನಿರೂಪಿತ ಸಾಧಾರಣಧರ್ಮಸ್ವರೂಪಸ್ಯ ಚ ಸಾದೃಶ್ಯಾವಗಮಾಸಂಭವಾತ್ ಇತ್ಯುಪಮಾ(ನಾ)ನುಮಿತಿರಿತಿ ಇಯಮುಚ್ಯತೇ ।**

**ಅನುವಾದ:**

"ಸಿಂದೂರಲಿಪ್ತವಾದ ರಿಪುಗಜಕುಂಭಸ್ಥಳದಲ್ಲಿ ಆನಂದಿಸುವಂತೆ ವೀರರ ದೃಷ್ಟಿಯು ಕುಂಕುಮಲಿಪ್ತವಾದ ಪ್ರಿಯೆಯ ಸ್ತನಗಳಲ್ಲಿ ಆನಂದಿಸದು."

ಇಲ್ಲಿ ಪ್ರಾಕರಣಿಕವಾದ ಕಾಂತಾಕುಚತಟ ಮತ್ತು ಅಪ್ರಾಕರಣಿಕವಾದ ಆನೆಯ ಕುಂಭಸ್ಥಲ ಇವುಗಳ ಆಕಾರವು ಪ್ರಮಾಣಾಂತರದಿಂದ ತಿಳಿಯಲ್ಪಟ್ಟಿದೆ. ಕ್ರಮವಾಗಿ ಕುಂಕುಮದಿಂದ ಮತ್ತು ಸಿಂದೂರದಿಂದ ಅವು ಕೆಂಪುಬಣ್ಣವನ್ನು ಪಡೆದು ತನ್ನಿಮಿತ್ತವಾಗಿ ಸಾದೃಶ್ಯವನ್ನು ಪಡೆಯುತ್ತವೆ. ಆ ಸಾದೃಶ್ಯನಿರ್ಧಾರದ ಮೂಲಕವಾಗಿ ಉಪಮಾನೋಪಮೇಯಭಾವದ ಪ್ರತೀತಿ. ಅದೇ ಅದಕ್ಕೆ ಕಾರಣ. ಏಕೆಂದರೆ ಆಕಾರವೂ ಗೊತ್ತಾಗದೆ, ಸಾಧಾರಣ ಧರ್ಮಸ್ವರೂಪವೂ ಗೊತ್ತಾಗದೆ ಸಾದೃಶ್ಯದ ಜ್ಞಾನವು ಅಸಂಭವ.

ಹೀಗೆ (ಈ ಪದ್ಯದಲ್ಲಿ) ಉಪಮಾನುಮಿತಿ (ಉಪಮಾಲಂಕಾರಧ್ವನಿ) ಎಂದು ಹೇಳಲಾಗುತ್ತದೆ.

**ತಂತಾಣ ಸಿರಿಸಹೋಅರರಅಣಾಹರಣಮ್ಮಿ ಹಿಅಅಮೇಕರಸಮ್ ।**
**ಬಿಂಬಾಹರೇ ಪಿಆಣಂ ನಿವೇಸಿಅಂ ಕುಸುಮಬಾಣೇನ ॥**
**(ತತ್ತದಾ ಶ್ರೀಸಹೋದರರತ್ನಾಹರಣೇ ಹೃದಯಮೇಕರಸಮ್ ।**
**ಬಿಂಬಾಧರೇ ಪ್ರಿಯಾಣಾಂ ನಿವೇಶಿತಂ ಕುಸುಮಬಾಣೇನ)**
**ಇತ್ಯತ್ರಾಪಿ ವೇದಿತವ್ಯಮ್ । ಕೇವಲಮತ್ರ ಸಾಧಾರಣೋ**
**ಧರ್ಮೋ ಲೌಹಿತ್ಯಲಕ್ಷಣೋ ರತ್ನೇ ಉಪಮಾನೇ**
**ಅನುಮೇಯೋ ನ ಶಬ್ದೋಪಾರೂಢೋ, ಬಿಂಬರೂಪತಯಾ**
**ಅಧರಸ್ಯ ವಿವಕ್ಷಿತತ್ವಾತ್ ।**
**ಸ ವಕ್ತುಮಖಿಲಾನ್ ಶಕ್ತೋ ಹಯಗ್ರೀವಾಶ್ರಿತಾನ್ ಗುಣಾನ್ ।**
**ಯೋಽಂಬುಕುಂಭೈಃ ಪರಿಚ್ಛೇದಂ ಶಕ್ತೋ ಜ್ಞಾತುಂ ಮಹೋದಧೇಃ ॥ ಇತಿ ।**

**ಅನುವಾದ:**

"(ಅಸುರರ) ಹೃದಯುವು ಲಕ್ಷ್ಮಿಯ ಒಡಹುಟ್ಟಿದ ರತ್ನಗಳನ್ನು ಎತ್ತಿಕೊಳ್ಳುವುದರಲ್ಲಿ ಅತ್ಯಂತ ಆಸಕ್ತವಾಗಿತ್ತು. ಮನ್ಮಥನು ಅದನ್ನು ಪ್ರೇಯಸಿಯರ ತೊಂಡೆಹಣ್ಣಿನಂತೆ ಕೆಂಪಗಿದ್ದ ತುಟಿಗಳಲ್ಲಿ ನೆಲೆಸುವಂತೆ ಮಾಡಿದನು."

ಎಂಬಲ್ಲಿಯೂ ಅದನ್ನು ತಿಳಿದುಕೊಳ್ಳಬೇಕು. ಇಲ್ಲಿ ಉಪಮಾನವಾದ ರತ್ನದಲ್ಲಿ ಕೆಂಪುಬಣ್ಣ ಎಂಬ ಧರ್ಮವನ್ನು ಶಬ್ದದಿಂದ ಹೇಳಿಲ್ಲ. ಬಿಂಬರೂಪದಿಂದ ಅಧರವು (ತುಟಿಯು) ವಿವಕ್ಷಿತವಾಗಿದೆ. ಅದರಿಂದ ರತ್ನದಲ್ಲಿ ಕೆಂಪುಬಣ್ಣವು ಅನುಮಿತಿಯಿಂದ ತಿಳಿಯಲ್ಪಡಬೇಕು.

(ಅನುಮಿತಿಯಲ್ಲಿ ಆಕ್ಷೇಪಾಲಂಕಾರದ ಅಂತರ್ಭಾವ)

"ಯಾವನು ಸಾಗರದ ನೀರಿನ ಪರಿಮಾಣವನ್ನು ಇಷ್ಟು ಕೊಡಗಳಷ್ಟೆಂದು ತಿಳಿಯಬಲ್ಲನೋ ಅವನು ಮಾತ್ರ ಹಯಗ್ರೀವನಲ್ಲಿದ್ದ ಸಮಸ್ತ ಗುಣಗಳನ್ನು ಹೇಳಬಲ್ಲನು."

**ಅತ್ರ ಹಯಗ್ರೀವಗುಣಾನ್ ಸಾಕಲ್ಯೇನಾಭಿಧಾತುಂ ನ ಕಶ್ಚಿತ್ ಸಮರ್ಥ ಇತಿ ಸಾಧ್ಯಮ್ । ತತ್ರ ತದಭಿಧಾನಶಕ್ತತ್ವಸ್ಯ ಕುಂಭಕರಣಕಾಂಭೋಧಿಪರಿಚ್ಛೇದಜ್ಞಾನಶಕ್ತತ್ವಸ್ಯ ಚೋಭಯೋಃ ಪ್ರಾಕರಣಿಕೇತರಯೋರೇಕಕರ್ತೃನಿಷ್ಠಯೋಃ ಸಮಶೀರ್ಷಿಕಯೋಪಾತ್ತಯೋಸ್ತುಲ್ಯಯೋಗಿತಾ-ದಿವತ್ ಗರ್ಭೀಕೃತೋಪಮಾನೋಪಮೇಯಭಾವಯೋಃ ಪರಿಕಲ್ಪಿತೇನ ವ್ಯಾಪ್ಯವ್ಯಾಪಕ-ಭಾವೇನೋಪನಿಬಂಧೋ ಹೇತುಃ । ತಯೋರ್ಹಿ ವ್ಯಾಪಕಸ್ಯ ಧರ್ಮಸ್ಯ ವೃಕ್ಷತ್ವಾದೇರಿವ ಅಂಬುಧೇರಂಭಸಃ ಕುಂಭೈಃ ಪರಿಚ್ಛೇದಜ್ಞಾನಶಕ್ತತ್ವಸ್ಯ ಪ್ರಮಾಣಾಂತರಾವಸಿತಾಯಾಮ್ ಅಭಾವಪ್ರತೀತೌ ವ್ಯಾಪ್ಯಸ್ಯಾಪಿ ಶಿಂಶಪಾತ್ವಾದೇರಿವ ಹಯಗ್ರೀವಗುಣಗ್ರಾಮಾಭಿಧಾನ-ಸಾಮರ್ಥ್ಯಸ್ಯಾಭಾವಾವಗತಿರಿತಿ ತಸ್ಯಾನುಮೇಯತ್ವಮಿತಿ।**

**ಅನುವಾದ:**

ಹಯಗ್ರೀವನ ಗುಣಗಳನ್ನು ಸಂಪೂರ್ಣವಾಗಿ ಹೇಳಲು ಯಾರೂ ಶಕ್ತರಲ್ಲ ಎಂಬುದು ಇಲ್ಲಿ ಸಾಧ್ಯ. ಅವುಗಳನ್ನು ಹೇಳುವ ಶಕ್ತಿ ಮತ್ತು ಕೊಡವನ್ನು ಕರಣವನ್ನಾಗಿ ಮಾಡಿಕೊಂಡು ಸಮುದ್ರದ ನೀರಿನ ಪರಿಮಾಣವನ್ನು ತಿಳಿಯುವ ಶಕ್ತಿ –ಇವು ಇಲ್ಲಿ ಪ್ರಾಕರಣಿಕ ಮತ್ತು ಅಪ್ರಾಕರಣಿಕ. ಅವೆರಡನ್ನೂ ಏಕಕರ್ತೃನಿಷ್ಠವಾಗಿ ತೋರಿಸಿ ಸಮಶೀರ್ಷಿಕವಾಗಿ ಈ ಪದ್ಯದಲ್ಲಿ ಪ್ರಸ್ತುತಪಡಿಸಲಾಗಿದೆ. ತುಲ್ಯಯೋಗಿತಾಲಂಕಾರದಲ್ಲಿದ್ದಂತೆ ಅವುಗಳ ಉಪಮಾನೋಪಮೇಯಭಾವವು ಇಲ್ಲಿ ಒಳಗೆ ಹುದುಗಿಸಲ್ಪಟ್ಟಿದೆ. ಅವುಗಳಿಗೆ ವ್ಯಾಪ್ಯವ್ಯಾಪಕಭಾವವನ್ನು ಕಲ್ಪಿಸಿ (ಕವಿಯು) ಹೇಳಿರುವುದೇ ಇಲ್ಲಿ ಹೇತು. ವ್ಯಾಪಕವಾದ ವೃಕ್ಷತ್ವ ಮುಂತಾದ ಧರ್ಮದ ಅಭಾವವನ್ನು ಬೇರೆ ಪ್ರಮಾಣದಿಂದ ಖಚಿತಪಡಿಸಿಕೊಂಡಾಗ ವ್ಯಾಪ್ಯಧರ್ಮಗಳಾದ ಶಿಂಶಪಾತ್ವಾದಿಗಳೂ ಇಲ್ಲವೆಂದು ಅನುಮಿತಿಯಿಂದ ತಿಳಿದುಬರುವಂತೆ, ಸಮುದ್ರದ ನೀರನ್ನು ಕೊಡಗಳಿಂದ ಅಳೆದು ಇಷ್ಟೆಂದು ತೀರ್ಮಾನಿಸುವ ಶಕ್ತಿಯೆಂಬ ವ್ಯಾಪಕಧರ್ಮದ ಅಭಾವವು ಖಚಿತವಾದಾಗ ಹಯಗ್ರೀವನ ಗುಣರಾಶಿಯನ್ನು ಹೇಳುವ ಸಾಮರ್ಥ್ಯವೆಂಬ ವ್ಯಾಪ್ಯಧರ್ಮದ ಅಭಾವವೂ ತಿಳಿದುಬರುತ್ತದೆ. ಅದು ಅನುಮೇಯವೇ ಆಗಿದೆ.

**ಅತಿಶಯೋಕ್ತಿಗರ್ಭಶ್ಚಾಯಮುಪಮಾನೋಪಮೇಯಭಾವಾವಸಾಯೋ ಹಯಗ್ರೀವಗುಣಾನಾಂ ಸಾಕಲ್ಯೇನ ಅವರ್ಣನೀಯತಾತ್ಮಕಾಸಾಧಾರಣ-ವಿಶೇಷಪ್ರತಿಪಾದನಪರಮ್ ಆಕ್ಷೇಪಮ್ ಆಕ್ಷಿಪತೀತಿ ಆಕ್ಷೇಪಾನುಮಿತಿರಿತ್ಯುಚ್ಯತೇ ।**

**ದೇವ್ವಾಅತ್ತಮ್ಮಿ ಫಲೇ ಕಿಂಕೀರಿ ಏತ್ತಿಅಂ ಉಣಭಣಾಮಿ ।**
**ಕಂಕೇಲ್ಲಿಪಲ್ಲವಾ ಪಲ್ಲವಾಣ ಅಣ್ಣಾಣ ಣ ಸರಿಚ್ಛಾ ॥**
**ದೈವಾಯತ್ತೇಽಪಿ ಫಲೇ ಕಿಂ ಕ್ರಿಯತಾಮೇತತ್ ಪುನರ್ಭಣಾಮಿ ।**
**ಕಂಕೇಲ್ಲಿಪಲ್ಲವಾಃ ಪಲ್ಲವಾನಾಮನ್ಯೇಷಾಂ ನ ಸದೃಶಾಃ ॥**

**ಇತ್ಯತ್ರ ಅರ್ಥಾಂತರೋಪನ್ಯಾಸಸಾಮರ್ಥ್ಯಾದೇವ ವಸ್ತುನೋಃ ಸಮರ್ಥ್ಯಸಮರ್ಥಕಭಾವಾವಸಾಯೋ, ನ ಶಬ್ದಶಕ್ತಿ-ಮೂಲ ಇತಿ । ತದರ್ಥಸ್ಯ ಹಿಶಬ್ದಾದೇರಪ್ರಯೋಗೋ ಗತಾರ್ಥತ್ವಾತ್ ।**

**ಅನುವಾದ:**

ಅತಿಶಯೋಕ್ತಿಯನ್ನು ಒಳಗೊಂಡಿರುವ ಈ ಉಪಮಾನೋಪಮೇಯ–ಭಾವನಿರ್ಣಯವು ಹಯಗ್ರೀವನ ಗುಣಗಳ ಪೂರ್ಣವರ್ಣನೆ ಅಸಾಧ್ಯ ಎಂಬಅಸಾಮಾನ್ಯವಾದ ವಿಶೇಷವನ್ನು ತಿಳಿಸುವ ಆಕ್ಷೇಪಾಲಂಕಾರವನ್ನು ಆಕ್ಷೇಪಿಸುವುದರಿಂದ ಇದನ್ನು ಆಕ್ಷೇಪಾನುಮಿತಿ (ಆಕ್ಷೇಪಧ್ವನಿ) ಎಂದು ಕರೆಯಲಾಗುತ್ತದೆ.

(ಅನುಮಿತಿಯಲ್ಲಿ ಅರ್ಥಾಂತರನ್ಯಾಸಧ್ವನಿಯ ಅಂತರ್ಭಾವ)

"ದೈವಾಧೀನವಾದ ಫಲದ ಬಗೆಗೆ ಯಾರೇನು ಮಾಡಬಹುದು? ಇಷ್ಟು ಮಾತ್ರ ನಾನು ಹೇಳುತ್ತೇನೆ – ಕಂಕೇಲಿಗಿಡದ ಚಿಗುರು ಬೇರೆ ಗಿಡಗಳ ಚಿಗುರಿಗೆ ಸಮಾನವಲ್ಲ."

ಇಲ್ಲಿ ಅರ್ಥಾಂತರವನ್ನು ಹೇಳಿರುವುದರ ಸಾಮರ್ಥ್ಯದಿಂದಲೇ ಎರಡು ವಸ್ತುಗಳ ಸಮರ್ಥ್ಯಸಮರ್ಥಕಭಾವವು ಗೊತ್ತಾಗುತ್ತದೆ. (ಸಮರ್ಥ್ಯಸಮರ್ಥಕ–ಭಾವವನ್ನು) ಹೇಳುವ 'ಹಿ' ಎಂಬ ಶಬ್ದವನ್ನು ಇಲ್ಲಿ ಕವಿಯು ಗತಾರ್ಥ (ಅದಿಲ್ಲದೆಯು ಅರ್ಥವು ಗೊತ್ತಾಗುತ್ತದೆ) ಎಂಬ ಭಾವನೆಯಿಂದ ಬಳಸಿಲ್ಲ.

**ಹಿಅಅಟ್ಠಾ ವಿ ಅಮಣ್ಣುಂ ಅವರುಣ್ಣಮುಹಂ ಪಿ ಮಂ ಪಸಾಅಂತ ।**
**ಅವರದ್ಧಸ್ಸ ವಿ ಣ ಹು ದೇ ವಹುಜಾಣಅ ! ರೊಸಿಉಂ ಸಕ್ಕಮ್ ॥**
**(ಹೃದಯಸ್ಥಾಪಿತಮನ್ಯುಮಪರುದ್ಧಮುಖೀಮಪಿ ಮಾಂ ಪ್ರಸಾದಯನ್ ।**
**ಅಪರಾದ್ಧಸ್ಯಾಪಿ ನ ಖಲು ತೇ ಬಹುಜ್ಞ ರೋಷಿತುಂ ಶಕ್ಯಮ್ ॥)**
**ಅತ್ರಾನಾವಿಷ್ಕೃತಕೋಪಚಿಹ್ನಾಯಾಃ ಕಸ್ಯಾಶ್ಚಿದಂತರ್ಗತಮನ್ಯೋಃ**
**ಮಾನಿನ್ಯಾಃ ಕೇನಚಿತ್ ಕೃತಾಗಸಾ ಪ್ರಸಾದ್ಯಮಾನಾಯಾ ಯತ್**
**ತತ್ರ ರೋಷವಿಷಯೇಽಪಿ ನ ತವ ರೋಷಿತುಂ ಶಕ್ಯಮಿತ್ಯುಕ್ತಂ**
**ತದನುಪಪದ್ಯಮಾನತಯಾ ಸಮರ್ಥನೀಯಮೇವೇತಿ ಯತ್ತತ್ರ**
**ವಲ್ಲಭಸಂಬೋಧನದ್ವಾರೇಣ ಬಹುಜ್ಞತ್ವಮರ್ಥಾಂತರಭೂತಮ್**
**ಉಪಾತ್ತಂ ತದೇವ ತತ್ಸಮರ್ಥಕಹೇತುತಾಮ್ ಉಪಯಾತಿ ।**
**ತತ ಏವ ಹಿ ಪರಹೃದಯವೇದಿನಿ ಜನೇ ಕಃ ಖಲು ಕೋಪಂ**
**ಕರ್ತುಮರ್ಹತಿ – ಇತ್ಯಸ್ಯಾರ್ಥಸ್ಯ ಪ್ರತೀತಿಸಿದ್ಧೇಃ।**

**ಅನುವಾದ:**

"ನಾನು ಕೋಪವನ್ನು ಹೃದಯದಲ್ಲೇ ಅಡಗಿಸಿಟ್ಟುಕೊಂಡಿದ್ದೇನೆ, ಬಾಯಿಯನ್ನೂ ಮುಚ್ಚಿಕೊಂಡಿದ್ದೇನೆ. ಆದರೂ ನೀನು ನನ್ನನ್ನು ಪ್ರಸನ್ನಗೊಳಿಸುತ್ತಿರುವೆ. ಅಯ್ಯಾ ಬಹುಜ್ಞ, ನೀನು ಅಪರಾಧಿಯಾಗಿದ್ದರೂ ನಿನ್ನ ಮೇಲೆ ಕೋಪಿಸಿಕೊಳ್ಳಲು ಆಗದು."

ಇಲ್ಲಿ ಒಬ್ಬ ನಾಯಿಕೆ ಕೋಪದ ಯಾವ ಚಿಹ್ನೆಯನ್ನೂ ತೋರಿಸಿಲ್ಲ. ಅವಳ ಕೋಪವೇನಿದ್ದರೂ ಒಳಗಿದೆ. ಆದರೂ ಅಪರಾಧಿ ನಾಯಕನು ಅವಳನ್ನು ಪ್ರಸನ್ನಗೊಳಿಸಲು ಯತ್ನಿಸುತ್ತಿದ್ದಾನೆ. "ರೋಷಕ್ಕೆ ನೀನು ಪಾತ್ರನಾದರೂ ನಿನ್ನ ಮೇಲೆ ಕೋಪವನ್ನು ತೋರಿಸಲು ಆಗದು" ಎಂಬ ಮಾತು ಅನುಪಪನ್ನ. ಅದು ಸಮರ್ಥನೆಯನ್ನು ಅಪೇಕ್ಷಿಸುವುದೆಂದು ಪ್ರಿಯನನ್ನು ಸಂಬೋಧಿಸಿ ನಾಯಿಕೆಯು ಬಹುಜ್ಞ ಎಂಬ ಅರ್ಥಾಂತರವನ್ನು ಜೊತೆಗೆ ಸೇರಿಸಿದ್ದಾಳೆ. ಅದೇ ಇಲ್ಲಿ ಸಮರ್ಥಕಹೇತುವಾಗಿದೆ. ಅದರ ಬಲದಿಂದ "ಇನ್ನೊಬ್ಬರ ಮನಸ್ಸನ್ನು ತಿಳಿದುಕೊಳ್ಳಬಲ್ಲ ಜನರ ಮೇಲೆ ಯಾರು ಕೋಪವನ್ನು ಹೊಂದಿರಬಲ್ಲರು" ಎಂಬ ಅರ್ಥದ ಪ್ರತೀತಿಯು ಇಲ್ಲಿ ಸಿದ್ಧವಾಗುತ್ತದೆ.

**ದ್ವಿವಿಧೋ ಹಿ ಹೇತುರುಕ್ತಃ ಶಾಬ್ದಶ್ಚಾರ್ಥಶ್ಚೇತಿ ।**
**ತೇನೇಯಮಾರ್ಥಸ್ಯ ಹೇತೋರುಪಾದಾನಾದರ್ಥಾಂತರನ್ಯಾಸಾನುಮಿತಿರಿತ್ಯುಚ್ಯತೇ ।**
**ಜಾಏಜ್ಜ ವಣುದ್ದೇಸೇ ಖುಜ್ಜೋಚ್ಚಿಅ ಪಾಅವೋ ಘಡಿಅವತ್ತೋ ।**
**ಮಾ ಮಾಣುಸಮ್ಮಿ ಲೋಏ ತಾಏಕ್ಕರಸೋ ದಲಿದ್ದೋ ಅ ॥**
**(ಜಾಯೇಯ ವನೋದ್ದೇಶೇ ಕುಬ್ಜ ಏವ ಪಾದಪೋ ಘಟಿತಪತ್ರಃ ।**
**ಮಾ ಮಾನುಷೇ ಲೋಕೇ ತ್ಯಾಗೈಕರಸೋ ದರಿದ್ರಶ್ಚ ॥)**
**ಇತ್ಯತ್ರ ಯಥೋಕ್ತಸ್ವರೂಪಸ್ಯಾಪ್ರಸ್ತುತಸ್ಯೈವ ವನಪಾದಪಸ್ಯ ಪುಂಸಶ್ಚ ಕಸ್ಯಚಿದ್ದರಿದ್ರಸ್ಯ ಪ್ರಸ್ತುತಸ್ಯಾನುಪಯೋಗಿತಯಾ ನಿಷ್ಫಲಯೋರುಭಯೋರಪಿ ಅನಭಿನಂದ್ಯಜನ್ಮತಾಪ್ರತೀತೌ ತುಲ್ಯಾಯಾಂ ಯದೇತದೇಕಸ್ಯೈವ ಜನ್ಮಾನಭಿನಂದನಂ, ನೇತರಸ್ಯ, ತತ್ ತಸ್ಯ ಶೋಚ್ಯತಾತಿರೇಕಲಕ್ಷಣಂ ವ್ಯತಿರೇಕಮ್ ಅನುಮಾಪಯತಿ ಇತ್ಯಸ್ಯ ವ್ಯತಿರೇಕಾನುಮಿತಿವ್ಯಪದೇಶಸಿದ್ಧಿಃ ।**

**ಅನುವಾದ:**

ಎರಡು ವಿಧವಾದ ಹೇತುವನ್ನು ಹೇಳಲಾಗಿದೆ. ಶಾಬ್ದ, ಆರ್ಥ ಎಂದು. ಆದ್ದರಿಂದ ಈ ಪದ್ಯದಲ್ಲಿ ಆರ್ಥಹೇತುವಿನ ಉಪಾದಾನ ಇರುವುದರಿಂದ ಅರ್ಥಾಂತರನ್ಯಾಸಾನುಮಿತಿ ಎನ್ನುತ್ತೇವೆ.

(ಅನುಮಿತಿಯಲ್ಲಿ ವ್ಯತಿರೇಕಧ್ವನಿಯ ಅಂತರ್ಭಾವ)

"ಯಾವುದಾದರೂ ಕಾಡಿನಲ್ಲಿ ಎಲೆಗಳೆಲ್ಲ ಉದುರಿಹೋಗಿರುವ ಮೋಟು ಮರವಾದರೂ ಆದೇನು. ಆದರೆ ಮನುಷ್ಯಲೋಕದಲ್ಲಿ ದಾನವನ್ನು ಮಾಡಲು ಮನಸ್ಸಿರುವ ದರಿದ್ರನಾಗಿ ಹುಟ್ಟುವುದು ಬೇಡ."

ಇಲ್ಲಿ ವರ್ಣಿಸಲ್ಪಟ್ಟ ಸ್ವರೂಪದ ಕಾಡಿನ ಮರ ಅಪ್ರಸ್ತುತ. ದರಿದ್ರ ಮನುಷ್ಯನು ಪ್ರಸ್ತುತ. ಇಬ್ಬರೂ ಉಪಯೋಗವಿಲ್ಲದ ಕಾರಣ ನಿಷ್ಫಲರೇ. ಇಬ್ಬರ ಜನ್ಮದ

ವ್ಯರ್ಥತೆಯೂ ಇಲ್ಲಿ ತೋರುತ್ತದೆ. ಆದರೆ ಒಬ್ಬನಾದ ದರಿದ್ರನ ಜನ್ಮವನ್ನು ಮಾತ್ರ ನಿಂದಿಸಲಾಗಿದೆ. ಮರದ ಜನ್ಮವನ್ನು ನಿಂದಿಸಿಲ್ಲ. ಅದು ದರಿದ್ರನ ಅತಿಶಯಿತ ಶೋಚ್ಯತಾರೂಪವಾದ ವ್ಯತಿರೇಕವನ್ನೂ ಅನುಮಿತಿಯಿಂದ ತಿಳಿಸುತ್ತದೆ. ಆದ್ದರಿಂದ ಇದಕ್ಕೆ ವ್ಯತಿರೇಕಾನುಮಿತಿ ಎಂಬ ವ್ಯಪದೇಶ (ಹೆಸರು, ವ್ಯವಹಾರ) ಸಿದ್ಧವಾಗುತ್ತದೆ.

**ಚಂದನಾಸಕ್ತಭುಜಗನಿಃಶ್ವಾಸಾನಿಲಮೂರ್ಛಿತಃ ।**
**ಮೂರ್ಛಯತ್ಯೇಷ ಪಥಿಕಾನ್ ಮಧೌ ಮಲಯಮಾರುತಃ ॥**
**ಇತ್ಯತ್ರ ಚಂದನಾಸಕ್ತಭುಜಗನಿಃಶ್ವಾಸಾನಲಸಂಪರ್ಕಮಾತ್ರೇಣ ಮೂರ್ಛಾಹೇತುತ್ವಂ ಮಲಯಮಾರುತಸ್ಯ ಮುಖ್ಯಮನುಪಪದ್ಯಮಾನಂ ಮೂರ್ಛಾಕಾರಿತ್ವಲಕ್ಷಣಾತ್ ಸಾಧರ್ಮ್ಯಾತ್ ಸಿಂಹೋ ಮಾಣವಕ ಇತ್ಯತ್ರ ಸಿಂಹತ್ವಮಿವ ಉಪಚರಿತಮಾಶ್ರೀಯತೇ ಇತಿ ಇವಾರ್ಥಮ್ ಅನುಮಾಪಯತಿ । ಮುಖ್ಯತಾನುಪಪತ್ತೌ ಚ ನಿಮಿತ್ತಂ ಭುಜಗನಿಃಶ್ವಾಸಸಮೀರಸಂಪರ್ಕಮಾತ್ರೇಣ ಮಲಯಮಾರುತಸ್ಯ ನ್ಯಗ್ಭಾವಭಾಜೋ ಬಹಲೀಭಾವಾಸಂಭವಃ ।**
**ಯದ್ವಾ ಮುಖ್ಯಮರ್ಥಮನಾದೃತ್ಯ ಅರ್ಥಾಂತರೇ ಪ್ರಯುಜ್ಯಮಾನಃ ಶಬ್ದೋ ಯಥಾ ಕಥಂಚಿತ್ ಸಾದೃಶ್ಯಮೇವಾವಗಮಯತಿ ।**

**ಅನುವಾದ:**

(ಅನುಮಿತಿಯಲ್ಲಿ ವ್ಯಂಗ್ಯೋತ್ಪ್ರೇಕ್ಷೆಯ ಅಂತರ್ಭಾವ)

"ಚಂದನವೃಕ್ಷಗಳಿಗೆ ಅಂಟಿಕೊಂಡಿರುವ ಹಾವುಗಳ ಉಸಿರಿನಿಂದ ಕೂಡಿದ ಮಲಯಮಾರುತವು ವಸಂತಋತುವಿನಲ್ಲಿ ಪಾಂಥರನ್ನು ಮೂರ್ಛೆಬೀಳಿಸುತ್ತಿದೆ."

ಇಲ್ಲಿ ಚಂದನವೃಕ್ಷಗಳನ್ನು ಸುತ್ತಿಕೊಂಡಿರುವ ಹಾವುಗಳ ಉಸಿರಿನ ಸಂಪರ್ಕಮಾತ್ರದಿಂದ ಮಲಯಾನಿಲವು ಮೂರ್ಛೆಗೆ ಕಾರಣವಾಗುತ್ತದೆ ಎಂಬುದು ಮುಖ್ಯಾರ್ಥದಲ್ಲಿ ಅನುಪಪನ್ನ. ಮೂರ್ಛಾಕಾರಿತ್ವ ಎಂಬ ಸಾಧರ್ಮ್ಯದ ಆಧಾರದಿಂದ ಇಲ್ಲಿ ಸಿಂಹೋ ಮಾಣವಕಃ ಎಂಬ ಉದಾಹರಣೆಯಲ್ಲಿರುವಂತೆ ಇವಾರ್ಥವನ್ನು (ಸಾದೃಶ್ಯವನ್ನು) ಅನುಮಿತಿಯಿಂದ ತಿಳಿಸುತ್ತದೆ. ಮುಖ್ಯಾರ್ಥದ ಅನುಪಪತ್ತಿಗೆ ಕಾರಣವೇನೆಂದರೆ ಹಾವಿನ ಉಸಿರಿನ ಗಾಳಿಯ ಸಂಪರ್ಕಮಾತ್ರದಿಂದ ತಿರಸ್ಕೃತವಾದ ಮಲಯುವಾರುತ ಹೆಚ್ಚಾಗುವುದು (ಅಥವಾ ಶಕ್ತಿಯನ್ನು ಪಡೆಯುವುದು) ಎಂಬುದರ ಅಸಂಭವ. ಅಥವಾ, ಮುಖ್ಯಾರ್ಥವನ್ನು ಆದರಿಸದೆ ಬೇರೆ ಅರ್ಥದಲ್ಲಿ ಪ್ರಯುಕ್ತವಾದ ಶಬ್ದವು ಹೇಗೋ ಒಂದು ರೀತಿಯಲ್ಲಿ ಸಾದೃಶ್ಯವನ್ನೇ ತಿಳಿಸಿಕೊಡುತ್ತದೆ.

**ನ ಚೈವಂವಿಧೇ ವಿಷಯೇ ಇವಾದಿಪ್ರಯೋಗಮಂತರೇಣ ಅಸಂಬದ್ಧಾರ್ಥತೈವೇತ್ಯಾಶಂಕನೀಐಮ್ । ಪ್ರಕರಣಾದಿತೋಽಪಿ ಅರ್ಥಸ್ಯ ಸ್ವಸೌಂದರ್ಯಾದೇವ ವಾ ಅರ್ಥಾಂತರಾವಗತೇಃ । ಯಥಾ –**

ಈಸಾಕಲುಸಸ್ಸ ವಿ ತಹ ಮಹಸ್ಸ ಣಂ ಏಸ ಪುಣ್ಣಿಮಾಚಂದೋ ।
ಅಜ್ಜ ಸರಿಸತ್ತಣಂ ಪಾವಿಊಣ ಅಂಗೇ ವ್ವಿಅ ಣ ಮಾ ಇ ॥
(ಈರ್ಷ್ಯಾಕಲುಷಸ್ಯಾಪಿ ತವ ಮುಖಸ್ಯ ನನ್ವೇಷ ಪೂರ್ಣಿಮಾಚಂದ್ರಃ ।
ಅದ್ಯ ಸದೃಶತ್ವಂ ಪ್ರಾಪ್ಯಾಂಗ ಏವ ನ ಮಾತಿ ॥ )
ಇತ್ಯತ್ರೇವಶಬ್ದಸ್ಯ । ಯಥಾ ಚ –

ತ್ರಾಸಾಕುಲಃ ಪರಿಪತನ್ ಪರಿತೋ ನಿಕೇತಾನ್
ಪುಂಭಿರ್ನ ಕೈಶ್ಚಿದಪಿ ಧನ್ವಿಭಿರನ್ವಬಂಧಿ ।
ತಸ್ಥೌ ತಥಾಪಿ ನ ಮೃಗಃ ಕ್ವಚಿದಂಗನಾಭಿ–
ರಾಕರ್ಣಪೂರ್ಣನಯನೇಷುಹತೇಕ್ಷಣಶ್ರೀಃ ॥ ಇತ್ಯತ್ರ ॥

**ಅನುವಾದ:**

ಈ ಪ್ರಕಾರದ ಉದಾಹರಣೆಗಳಲ್ಲಿ 'ಇವ' ಮುಂತಾದ ಶಬ್ದಗಳ ಪ್ರಯೋಗವಿಲ್ಲದಿರುವುದರಿಂದ ಅರ್ಥವು ಅಸಂಬದ್ಧವಾಗುತ್ತದೆ– ಎಂದು ಆಶಂಕಿಸ ಬಾರದು. ಪ್ರಕರಣಾದಿಗಳಿಂದ ಅಥವಾ ಅರ್ಥದ ಸೌಂದರ್ಯದಿಂದ ಬೇರೊಂದು ಅರ್ಥವು ಅಲ್ಲಿ ತೋರುತ್ತದೆ. ಉದಾಹರಣೆ – "ಈ ಹುಣ್ಣಿಮೆಯ ಚಂದ್ರನು ಇಂದು ಈರ್ಷ್ಯೆಯಿಂದ ಕಲುಷಿತವಾದ ನಿನ್ನ ಮುಖದ ಸಾದೃಶ್ಯವನ್ನು ಪಡೆದು ಹಿಗ್ಗಿ ತನ್ನ ಶರೀರದೊಳಗೇ ಹಿಡಿಸುತ್ತಿಲ್ಲ."

ಈ ಪದ್ಯದಲ್ಲಿ ಇವಶಬ್ದದ ಪ್ರಯೋಗವಿಲ್ಲ. ಇನ್ನೊಂದು ಉದಾಹರಣೆ – "ಹೆದರಿಕೆಯಿಂದ ಕಂಗಾಲಾಗಿದ್ದ ಜಿಂಕೆಯು ಬಿಲ್ಲನ್ನು ಹಿಡಿದಿದ್ದ ಯಾವ ಗಂಡಸರಿಂದಲೂ ಅಟ್ಟಿಸಿಕೊಂಡು ಹೋಗಲ್ಪಡದೆ ಇದ್ದರೂ ಸುತ್ತಲೂ ಮನೆಗಳ ಮುಂದೆ ಓಡುತ್ತಾ ಇತ್ತು. ಹೆಂಗಸರ ಕಿವಿಯವರೆಗೆ ಇದ್ದ ದೀರ್ಘವಾದ ಕಣ್ಣಿನ ಬಾಣಗಳಿಂದ ತನ್ನ ಕಣ್ಣಿನ ಸೊಬಗು ಏಟನ್ನು ತಿಂದೀತೆಂದು ಎಲ್ಲೂ ನಿಲ್ಲದೆ ಅದು ಓಡುತ್ತಲೇ ಇತ್ತು."

ಈ ಉದಾಹರಣೆಯಲ್ಲೂ ಇವಶಬ್ದವಿಲ್ಲ.

ಶಬ್ದಾರ್ಥವ್ಯವಹಾರೇ ಚ ಪ್ರತೀತಿರೇವ ಪ್ರಮಾಣಮ್ ।
ಪ್ರತೀತಾರ್ಥಶ್ಚ ಶಬ್ದಃ ಪ್ರಯುಜ್ಯಮಾನಃ ಪೌನರುಕ್ತ್ಯಮೇವ
ಆವಹತೀತಿ ಅತ್ರೇವಾರ್ಥಸ್ಯಾವಗಮಾದ್ ಉತ್ಪ್ರೇಕ್ಷಾನುಮಿತಿ–
ರಿತ್ಯೇಷಾ ವ್ಯಪದಿಶ್ಯತೇ । ಏವಮ್ –
ಅತ್ಯುಚ್ಚಪದಾಧ್ಯಾಸಃ ಪತನಾಯೇತ್ಯರ್ಥಶಾಲಿನಾಂ ಶಂಸತ್ ।
ಆಪಾಂಡು ಪತತಿ ಪತ್ರಂ ತರೋರಿದಂ ಬಂಧನಗ್ರಂಥೇಃ ।
ಇತಿ ನಿದರ್ಶನಾನುಮಿತಾವಪ್ಯವಸೇಯಮ್ ।

ರಮ್ಯಾ ಇತಿ ಪ್ರಾಪ್ತವತೀಃ ಪತಾಕಾ
ರಾಗಂ ವಿವಿಕ್ತಾ ಇತಿ ವರ್ಧಯಂತೀಃ

ಯಸ್ಯಾಮಸೇವಂತ ನಮದ್ವಲೀಕಾಃ
ಸಮಂ ವಧೂಭಿರ್ವಲಭೀರ್ಯುವಾನಃ ॥

ಇತ್ಯತ್ರ ವಾಕ್ಯಾರ್ಥಪ್ರತೀತೇರನಂತರಮ್ ಉಪಮಾಪ್ರತಿಭೋದ್ಭೇದನಿಬಂಧನಭೂತಂ ನ ಕಿಂಚಿದವಧಾರಯಾಮಃ, ಯತ್ಸಾಮರ್ಥ್ಯಾತ್ ವಧ್ವ ಇವ ವಲಭ್ಯ ಇತ್ಯಮುಮರ್ಥಮವಗಚ್ಛೇಮ ।

**ಅನುವಾದ:**

ಶಬ್ದಾರ್ಥವ್ಯವಹಾರದಲ್ಲಿ ಪ್ರತೀತಿಯೇ ಪ್ರಮಾಣ. ಯಾವುದರ ಅರ್ಥವು ಮೊದಲೇ ಗೊತ್ತಾಗಿರುವುದೋ ಅಂಥ ಶಬ್ದದ ಪ್ರಯೋಗವು ಪುನರುಕ್ತಿ-ದೋಷವನ್ನುಂಟುಮಾಡುತ್ತದೆ. ಆದ್ದರಿಂದ ಪ್ರಕೃತ ಪದ್ಯದಲ್ಲಿ ಇವಶಬ್ದವಿಲ್ಲದಿದ್ದರೂ ಅದರ ಅರ್ಥವು ಗೋಚರವಾಗುವುದರಿಂದ (ತ್ರಾಸಾಕುಲಃ ಎಂಬ ಪದ್ಯದಲ್ಲಿ) ಉತ್ಪ್ರೇಕ್ಷಾನುಮಿತಿ ಎಂಬ ವ್ಯವಹಾರವಿದೆ. ಇದೇ ರೀತಿಯಾಗಿ – "ಅತ್ಯುನ್ನತ ಸ್ಥಾನವನ್ನು ಏರುವುದು ಬೀಳುವುದಕ್ಕೆ ಕಾರಣ ಎಂದು ಶ್ರೀಮಂತರಿಗೆ ಹೇಳುತ್ತಾ ಹಳದಿಬಣ್ಣಕ್ಕೆ ತಿರುಗಿದ ಎಲೆಯು ತೊಟ್ಟಿನಿಂದ ಕಳಚಿಕೊಂಡು ಮರದಿಂದ ಬೀಳುತ್ತದೆ" ಎಂಬಲ್ಲಿ ನಿದರ್ಶನಾನುಮಿತಿ ಎಂದು ಅರಿತುಕೊಳ್ಳಬೇಕು. (ರಮ್ಯಾ ಇತಿ.... ಈ ಶ್ಲೋಕದ ಅನುವಾದ ಹಿಂದೆ ಬಂದಿದೆ) ಇದರಲ್ಲಿ ವಾಕ್ಯಾರ್ಥಪ್ರತೀತಿಯ ಅನಂತರ ಉಪಮಾಪ್ರತಿಭೋತ್ಪತ್ತಿಗೆ ನಿಮಿತ್ತವಾಗುವುದೇನನ್ನೂ ನಾವು ಕಾಣೆವು. ( ಆ ಉಪಮೆ ಇದ್ದಿದ್ದರೆ) ಅದರ ಸಾಮರ್ಥ್ಯದಿಂದ ವಧುಗಳು ವಲಭಿಗಳಂತೆ ಎಂಬ ಅರ್ಥವನ್ನು ಗ್ರಹಿಸಬಹುದಾಗಿತ್ತು.

ನ ಚೋಭಯಾರ್ಥಸಾಧಾರಣಸ್ಯ ವಲಭೀವಿಶೇಷಣಕಲಾಪಸ್ಯೈವ ತತ್ರ ನಿಬಂಧನಭಾವೋಽವಗಂತುಂ ಯುಕ್ತಃ । ತಸ್ಯ ಭಿನ್ನವಿಭಕ್ತಿಕಸ್ಯ ವಧೂಭಿರಭಿಸಂಬಂಧಾನುಪಪತ್ತೇರಿತ್ಯುಕ್ತಮೇವ । ಅಥ ಸಮಮಿತ್ಯಸ್ಯ ತುಲ್ಯಾರ್ಥಸ್ಯ ವಧೂವಲಭೀಸಂಬಂಧಬಲಾತ್ ವಿಭಕ್ತಿವಿಪರಿಣಾಮೇನ ಕಲ್ಪಿತತದುಚಿತವಿಭಕ್ತ್ಯಂತಾನಾಂ ವಧೂನಾಂ ವಿಶೇಷಣಕಲಾಪಾಭಿಸಂಬಂಧಸಹತ್ವಾತ್ ವಲಭೀಭಿರುಪಮಾನೋಪಮೇಯಭಾವಾವಗತಿರ್ಭವತಿ, ಯಥಾ ಸಮಮಿಂದುನಾ ಸಕಲಕಲೋಽಬ್ಧಿರುತ್ಥಿತಃ ಇತಿ । ಏವಂ ತರ್ಹಿ ತುಲ್ಯತಾಸಂಬಂಧಾವಧಾರಣ-ನಿಬಂಧನೇಯಂ ವಧೂವಲಭೀನಾಮುಪಮಾನೋಪಮೇಯಭಾವಾವಗತಿರಿತಿ ನಾಸಾವನುಮೇಯತಾಮ್ ಅಭಿಪತತೀತಿ ಶ್ಲೇಷಾನುಮಿತಿರಿತ್ಯುಚ್ಯತೇ ।

**ಅನುವಾದ:**

ವಲಭೀ ಎಂಬುದರ ವಿಶೇಷಣಸಮೂಹವು ಉಭಯ ಸಾಧಾರಣವಾಗಿರುವುದರಿಂದ ಅದನ್ನೇ ನಿಮಿತ್ತವೆಂದು ಗ್ರಹಿಸಲಾಗದು. ಅದು ಬೇರೆ ವಿಭಕ್ತಿಯಲ್ಲಿರುವುದರಿಂದ ವಧೂಭಿಃ ಎಂಬುದರೊಡನೆ ಅಭಿಸಂಬಂಧವನ್ನು ಹೊಂದಲಾರದು ಎಂದು ಮೊದಲೇ ಹೇಳಿದ್ದೇವೆ.

ಸದೃಶ ಎಂಬ ಅರ್ಥವನ್ನು ಕೊಡುವ ಸಮಂ ಎಂಬುದಕ್ಕೆ ವಧೂಭಿಃ ಎಂಬುದರೊಡನೆ ಸಂಬಧವನ್ನು ಹೇಳಿದರೆ ಆಮೇಲೆ ವಿಭಕ್ತಿವಿಪರಿಣಾಮವನ್ನು ಮಾಡಿಕೊಂಡು ಉಚಿತವಿಭಕ್ತಿಯ ಅನ್ವಯವನ್ನು ವಧುಗಳಿಗೆ ಹೇಳುವುದು ಶಕ್ಯವಾಗುತ್ತದೆ. ಆಗ ವಧುಗಳಿಗೂ ವಲಭೀಗಳಿಗೂ ಉಪಮಾನೋಪಮೇಯಭಾವವು "ಸಮಮಿಂದುನಾ ಸಕಲಕಲೋಽಬ್ಧಿರುತ್ಥಿತಃ" (ಸಕಲ–ಕಲನಾದ ಚಂದ್ರನೊಡನೆ ಸ–ಕಲಕಲನಾದ ಸಮುದ್ರನು ಉಕ್ಕಿ ಮೇಲೆದ್ದನು) ಎಂಬ ಉದಾಹರಣೆಯಲ್ಲಿರುವಂತೆ ಗೋಚರವಾಗುತ್ತದೆ– ಎಂದು ಹೇಳಬಹುದಲ್ಲ?

ಹಾಗಾದರೆ ವಧೂ–ವಲಭೀಗಳ ಉಪಮಾನೋಪಮೇಯಭಾವವು ಸಾದೃಶ್ಯಸಂಬಂಧನಿಶ್ಚಯದ ಆಧಾರದಿಂದ ಇಲ್ಲಿ ಅವಗತವಾಗಿದೆ. ಆದ್ದರಿಂದ ಉಪಮಾಲಂಕಾರವು ಇಲ್ಲಿ ಅನುಮೇಯ (ವ್ಯಂಗ್ಯ)ವಲ್ಲ. ಆದ್ದರಿಂದ ಇಲ್ಲಿ ಶ್ಲೇಷಾನುಮಿತಿ ಎಂದು ಹೇಳುತ್ತೇವೆ.

(ಅನುಮಿತಿಯಲ್ಲಿ ಯಥಾಸಂಖ್ಯಧ್ವನಿಯ ಅಂತರ್ಭಾವ)

**ಅಂಕುರಿತಃ ಕೋರಕಿತಃ ಪಲ್ಲವಿತಃ ಕುಸುಮಿತಶ್ಚ ಸಹಕಾರಃ ।**
**ಅಂಕುರಿತಃ ಕೋರಕಿತಃ ಪಲ್ಲವಿತಃ ಕುಸುಮಿತಶ್ಚ ಹೃದಿ ಮದನಃ ॥**
**ಇತ್ಯತ್ರ ಮುಖ್ಯಾಮುಖ್ಯಾಂಕುರಿತತ್ವಾದಿಧರ್ಮವಿಶಿಷ್ಟಯೋಃ ಸಹಕಾರಮದನಯೋಃ ಪ್ರಮಾಣಾಂತರಾವಗತಕಾರ್ಯ–ಕಾರಣಭಾವಯೋರಪಿ ಅತಿಶಯೋಕ್ತಿಚ್ಛಾಯಾಯಾ ಯಸ್ತುಲ್ಯಕಾಲತಯೋಪನಿಬಂಧಸ್ತತ್ರ ಕಾರ್ಯಕಾರಣಧರ್ಮಾಣಾಂ ಯಥಾಶ್ರುತಕ್ರಮಂ ಸಂಖ್ಯಾಸಾಮ್ಯಮೇವ ಯಥಾಸಂಖ್ಯಮ್ ಅನುಮಾಪಯತಿ, ಯಥಾಶ್ರುತಕ್ರಮಾತಿಕ್ರಮೇ ಪ್ರಯೋಜನಾಭಾವಾನ್ನಿಬಂಧನಾಭಾವಾಚ್ಚ । ಕೋ ಹ್ಯವಿಪ್ಲುತಮತಿರಸತಿ ಬಾಧಕೇ ಶ್ರುತಮರ್ಥಮ್ ಅನಾದೃತ್ಯಾಶ್ರುತಂ ಪರಿಕಲ್ಪಯೇದಿತಿ ಯಥಾಸಂಖ್ಯಾನುಮಿತಿರಿತ್ಯುಚ್ಯತೇ ।**

**ಅನುವಾದ:**

''ಮೊಳಕೆಯಾಯಿತು, ಚಿಗುರೊಡೆಯಿತು, ಮೊಗ್ಗಾಯಿತು, ಹೂಬಿಟ್ಟಿತು ಮಾವಿನಮರ. ಮೊಳಕೆಯಾಯಿತು, ಚಿಗುರೊಡೆಯಿತು, ಮೊಗ್ಗಾಯಿತು, ಹೂಬಿಟ್ಟಿತು ಹೃದಯದಲಿ ಕಾಮ'.'

ಇದರಲ್ಲಿ ಮಾವಿನಮರವು ಮುಖ್ಯಾರ್ಥದಲ್ಲಿ, ಕಾಮವು ಅಮುಖ್ಯ (ಲಾಕ್ಷಣಿಕ) ಅರ್ಥದಲ್ಲಿ ಮೊಳಕೆಯಾಗುವುದು ಮುಂತಾದ ಧರ್ಮಗಳನ್ನು ಹೊಂದಿವೆ. ಬೇರೆ ಪ್ರಮಾಣಗಳಿಂದ ಅವುಗಳ ಕಾರ್ಯಕಾರಣಭಾವವು ಅರಿವಿಗೆ ಬರುತ್ತದೆ. ಆದರೂ ಅತಿಶಯೋಕ್ತಿಚ್ಛಾಯೆಯಿಂದ ಅವೆರಡೂ ಒಂದೇ ಕಾಲದಲ್ಲಿ

ಆದಂತೆ ವರ್ಣಿತವಾಗಿವೆ. ಕಾರ್ಯಕಾರಣಗಳು ಶ್ರುತಕ್ರಮದಲ್ಲಿ ಸಮಾನಸಂಖ್ಯೆಯಲ್ಲಿ ಇರುವುದರಿಂದ ಯಥಾಸಂಖ್ಯ ಎಂಬ ಅಲಂಕಾರವನ್ನು ಅನುಮಿತಿಯಿಂದ ತಿಳಿಸುತ್ತವೆ. ಯಥಾಶ್ರುತವಾದ ಕ್ರಮವನ್ನು ಉಲ್ಲಂಘಿಸುವುದರಿಂದ ಯಾವ ಪ್ರಯೋಜನವೂ ಇಲ್ಲ, ಹಾಗೆ ಮಾಡುವುದಕ್ಕೆ ನಿಮಿತ್ತವೂ ಇಲ್ಲ.

ಬುದ್ಧಿ ಕೆಟ್ಟಿಲ್ಲದ ಯಾವನು ತಾನೆ ಬಾಧಕವಿಲ್ಲದಿದ್ದಾಗ ಶ್ರುತವಾದ ಅರ್ಥವನ್ನು ತ್ಯಜಿಸಿ ಅಶ್ರುತವನ್ನು ಕಲ್ಪಿಸುತ್ತಾನೆ? ಆದ್ದರಿಂದ ಈ ಪದ್ಯದಲ್ಲಿ ಯಥಾಸಂಖ್ಯಾನುಮಿತಿ.

**ಯತ್ರ ಪ್ರಕರಣಾದಿಪ್ರತಿಪತ್ತ್ಯನುಮಿತವಿಶೇಷೋ**
**ವಾಚ್ಯೋಽರ್ಥಃ ಪ್ರತೀಯಮಾನಸ್ಯಾರ್ಥಸ್ಯ ಲಿಂಗಭಾವಮ್**
**ಉಪಯಾತಿ ಸೋಽಪ್ಯನುಮಾನಸ್ಯೈವ ಮಾರ್ಗಃ ।**
**ಯಥಾ – "ಉಚ್ಚಿಣು ಪಡಿಅಂ ಕುಸುಮಂ**
**ಮಾ ಧುಣ ಸೇಹಾಲಿಅಂ ಹಲಿಅ ಸೋಹ್ಣ ।**
**ಅಹ ದೇ ವಿಸಮವಿರಾಓ**
**ಸಸುರೇಣ ಸು ಓ ವಲಯ ಸದ್ದೋ ॥**
**(ಉಚ್ಚಿನು ಪತಿತಂ ಕುಸುಮಂ ಮಾ ಧುನು ಶೇಫಾಲಿಕಾಂ ಹಾಲಿಕಸ್ನುಷೇ ।**
**ಏಷ ತೇ ವಿಷಮವಿರಾವಃ ಶ್ವಶುರೇಣ ಶ್ರುತೋ ವಲಯಶಬ್ದಃ )॥**
**ಅತ್ರ ಹಿ ಅವಿನಯಪತಿನಾ ಸಹ ರಮಮಾಣಾ ಕಾಚಿತ್**
**ಬಹಿಃಶ್ರುತವಲಯಕಲಕಲಯಾ ಸಖ್ಯಾ ಪ್ರತಿಬೋಧ್ಯತೇ**
**ಇತ್ಯೇತದಪೇಕ್ಷಣೀಯಂ ವಾಚ್ಯಸ್ಯ ಪ್ರತಿಪತ್ತಯೇ।**
**ಪ್ರತಿಪನ್ನೇ ಚ ವಾಚ್ಯೇಽರ್ಥೇ ತಸ್ಯಾವಿನಯಪ್ರಚ್ಛಾದನ–**
**ತಾತ್ಪರ್ಯೇಣಾಭಿಧೀಯಮಾನತ್ವಾದನುಮೇಯಾಂಗತ್ವಮ್**
**ಏವ ಇತಿ ಅಸ್ಯಾನುಮಾನ ಏವಾಂತರ್ಭಾವಃ।**

**ಅನುವಾದ:**

ಎಲ್ಲಿ ಪ್ರಕರಣಾದಿಗಳ ಜ್ಞಾನದಿಂದ ಅನುಮಿತವಾದ ವಾಚ್ಯಾರ್ಥವು ಪ್ರತೀಯಮಾನವಾದ ಅರ್ಥದ ಅಂಗಭಾವವನ್ನು ಹೊಂದುವುದೋ ಅದೂ ಅನುಮಾನದ ಮಾರ್ಗವೇ. ಉದಾಹರಣೆ–

"ರೈತನ ಸೊಸೆ, ಉದುರಿದ ಹೂವುಗಳನ್ನು ಮಾತ್ರ ಆರಿಸಿಕೋ. ಶೇಫಾಲಿಕಾ ಗಿಡವನ್ನು ಅಲುಗಾಡಿಸಬೇಡ. ನಿನ್ನ ಬಳೆಗಳ ವಿಚಿತ್ರ ಧ್ವನಿಯ ಶಬ್ದವು ನಿನ್ನ ಮಾವನಿಗೆ ಕೇಳಿಸಿಬಿಟ್ಟಿದೆ".

ಇಲ್ಲಿ ಯಾವಳೋ ಒಬ್ಬಳು ಅವಿನೀತನಾದ ಗಂಡನೊಡನೆ ಕ್ರೀಡಿಸುತ್ತಿರುತ್ತಾಳೆ. ಅವಳ ಬಳೆಗಳ ಸದ್ದನ್ನು ಕೇಳಿದ ಸಖಿಯು ಅವಳಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದಾಳೆ

ಎಂಬ ಅಂಶವು ವಾಚ್ಯಾರ್ಥದ ಅರಿವನ್ನು ಪಡೆಯಲು ಅಪೇಕ್ಷಿತ. ವಾಚ್ಯಾರ್ಥವು ಗೊತ್ತಾದ ಮೇಲೆ ಪತಿಯ ಅವಿನಯವನ್ನು ಮುಚ್ಚಿಡಲು ಈ ಪದ್ಯವನ್ನು ಹೇಳಿರುವುದರಿಂದ ಅದು ಅನುಮೇಯಾರ್ಥದ ಅಂಗವೇ ಆಗುತ್ತದೆ. ಆದ್ದರಿಂದ ಇದೂ ಅನುಮಾನದಲ್ಲೇ ಅಂತರ್ಭಾವವನ್ನು ಹೊಂದುತ್ತದೆ.

**ಏವಮನ್ಯಾಸಾಮಪಿ ವಾಚ್ಯವ್ಯತಿರೇಕಿಣೀನಾಮ್ ಅಲಂಕೃತೀನಾಂ ಯಥಾಯೋಗಮ್ ಅನುಮಾನಾಂತರ್ಭಾವಃ ಸ್ವಯಮೇವಾನುಸರ್ತವ್ಯಃ। ಏವಂ ವಸ್ತುಮಾತ್ರಾದೀನಾಂ ಗಮ್ಯತ್ವಂ ಪ್ರತಿಪಾದ್ಯೇದಾನೀಂ ವರ್ಣಪದವಾಕ್ಯಸಂಘಟನಾದೀನಾಂ ಗಮಕತ್ವಂ ಪ್ರತಿಪಾದ್ಯತೇ। ತತ್ರ ವರ್ಣಸಂಘಟನಾನಾಂ ತಾವದ್ ಗಮುಕತ್ವಮ್ ಅರ್ಥದ್ವಾರಕಮೇವ। ತಥಾ ಹಿ। ವಿಶಿಷ್ಟವರ್ಣಸಂಘಟನೋಪಕೃತಶಬ್ದಪ್ರತಿಪಾದಿತೇನಾರ್ಥೇನ ರತ್ಯಾದಯಃ ಸ್ಥಾಯಿನೋಽನುಮೀಯಮಾನಾಃ ಸ್ಪಷ್ಟತರಮ್ ಅವ-ಭಾಸಂತ ಇತಿ ಶಬ್ದೋಪಾಧಿಭೂತಯೋರ್ವರ್ಣಸಂಘಟನಯೋರಪಿ ಗಮಕತ್ವಮುಪಪನ್ನಮೇವ ಪಾರಂಪರ್ಯೇಣ, ನ ಸಾಕ್ಷಾತ್।**

**ಅನುವಾದ:**

(ವರ್ಣಪದಾದಿಗಳ ವ್ಯಂಜಕತ್ವವೂ ಅನುಮಿತಿಯೇ)

ಹೀಗೆ ವಾಚ್ಯಭಿನ್ನವಾದ ಬೇರೆ ಅಲಂಕಾರಗಳ ಅನುಮಾನಾಂತರ್ಭಾವವನ್ನು (ವಾಚಕರು) ಸ್ವಯಮ್ ಊಹಿಸಿಕೊಳ್ಳಬೇಕು. ಈ ರೀತಿಯಾಗಿ ವಸ್ತುಮಾತ್ರ ಮತ್ತು ಅಲಂಕಾರಗಳ ಗಮ್ಯತ್ವ (ಅನುಮೇಯತ್ವ)ವನ್ನು ಪ್ರತಿಪಾದಿಸಿ ಈಗ ವರ್ಣ, ಪದ, ವಾಕ್ಯ, ಸಂಘಟನೆ ಇತ್ಯಾದಿಗಳ ಗಮಕತ್ವವನ್ನು ಪ್ರತಿಪಾದಿಸುತ್ತೇವೆ.

ಅವುಗಳಲ್ಲಿ ವರ್ಣಗಳ ಮತ್ತು ಸಂಘಟನೆಗಳ ಗಮಕತ್ವ ಅರ್ಥದ ಮೂಲಕ ಮಾತ್ರ. ಹೇಗೆಂದರೆ, ವಿಶಿಷ್ಟವಾದ ವರ್ಣಗಳಿಂದ ಮತ್ತು ಸಂಘಟನೆಗಳಿಂದ ಉಪಕೃತವಾದ ಶಬ್ದದಿಂದ ಅರ್ಥವು ಪ್ರತಿಪಾದಿತವಾಗುತ್ತದೆ. ಆ ಅರ್ಥದಿಂದ ಅನುಮಿತವಾಗುವ ರತ್ಯಾದಿ ಸ್ಥಾಯಿಭಾವಗಳು ಅತಿ ಸ್ಪಷ್ಟವಾಗಿ ತೋರುತ್ತವೆ. ಹೀಗೆ ಶಬ್ದಕ್ಕೆ ಉಪಾಧಿಗಳಾದ ವರ್ಣಗಳಿಗೂ ಸಂಘಟನೆಗೂ ಪರಂಪರಾಸಂಬಂಧದಿಂದ ಗಮಕತ್ವವು ಹೊಂದುತ್ತದೆ, ಸಾಕ್ಷಾತ್ತಾಗಿ ಅಲ್ಲ.

**ತಥಾವಿಧಶಬ್ದಸಂದರ್ಭಾಭಿಹಿತಸ್ಯಾರ್ಥಸ್ಯ ರತ್ಯಾದೇಶ್ಚ ಭಾವಸ್ಯ ತಾರ್ಣಪಾರ್ಣಯೋರಿವ ಧೂಮಾಗ್ನ್ಯೋಃ ಕಾರ್ಯಕಾರಣಭಾವೇನಾವಸ್ಥಾನಾತ್। ತಥಾ ಹಿ। ಯೇ ಯೇ ರತಿಶೋಕಾಕ್ರಾಂತಾಂತಃಕರಣಾಃ ಯೇ ಚ ಕ್ರೋಧೋತ್ಸಾಹಾದಿವಿವಶಾಸ್ತೇ ಮಧುರತರವರ್ಣ-ವಿರಚಿತಾಮ್ ಅಸಮಾಸಪ್ರಾಯಾಂ ರೇಫಕ್ಷಕಾರಟಕಾರಕರ್ಕಶಾಂ ದೀರ್ಘಸಮಾಸಭೂಯಿಷ್ಠಾಂ ಚ ಸಂಘಟನಾಮ್ ಆಶ್ರಿತ್ಯ ಭೂಮ್ನಾ ಭಾಷಮಾಣಾ ದೃಶ್ಯಂತ ಇತಿ ಸ್ವಭಾವ ಏವಾಯಮ್।**

**ಸಂಘಟನಾವರ್ಣಾಹಿತವಿಶೇಷವಾಚಕಸಮರ್ಪಿತಾದರ್ಥಾತ್।**

**ಕ್ರೋಧಾದಿವಿಶೇಷಗತಿರ್ಧೂಮವಿಶೇಷಾದಿವ ಕೃಶಾನೋಃ॥ ಇತಿ ಸಂಗ್ರಹಾರ್ಯಾ।**

**ಅನುವಾದ:**

ಆ ವಿಧವಾದ ಶಬ್ದಸಂಘಟನೆಯಿಂದ ಹೇಳಲ್ಪಟ್ಟ ಅರ್ಥಕ್ಕೂ 'ರತಿ' ಮುಂತಾದ ಭಾವಗಳಿಗೂ ಹುಲ್ಲಿನ ಬೆಂಕಿ, ಎಲೆಗಳ ಬೆಂಕಿ ಮತ್ತು ಹುಲ್ಲಿನ ಬೆಂಕಿಯ ಹೊಗೆ, ಎಲೆಗಳ ಬೆಂಕಿಯ ಹೊಗೆ ಇವುಗಳಿಗೆ ಇರುವಂತೆ ಕಾರ್ಯಕಾರಣಭಾವದಿಂದ ಅವಸ್ಥಾನವಿದೆ. ಹೇಗೆಂದರೆ– ರತಿ, ಶೋಕ ಇವುಗಳಿಂದ ಆಕ್ರಾಂತವಾದ ಮನಸ್ಸನ್ನುಳ್ಳವರು ಇಂಪಾದ ವರ್ಣಗಳಿಂದ ತುಂಬಿದ ಮತ್ತು ಹೆಚ್ಚು ಸಮಾಸಗಳಿಲ್ಲದ ಸಂಘಟನೆಯನ್ನು ಆಶ್ರಯಿಸಿ ಮಾತನಾಡುತ್ತಾರೆ. ಯಾರು ಕ್ರೋಧ, ಉತ್ಸಾಹ ಮುಂತಾದ ಭಾವಗಳಿಗೆ ವಶರಾಗಿರುವರೋ ಅವರು ರೇಫ, ಷಕಾರ, ಟವರ್ಗಗಳಿಂದ ಕರ್ಕಶವಾದ ಮತ್ತು ಉದ್ದ ಉದ್ದ ಸಮಾಸಗಳನ್ನು ಹೊಂದಿರುವ ಸಂಘಟನೆಯನ್ನು ಆಶ್ರಯಿಸಿ ಮಾತನಾಡುವುದು ಹೆಚ್ಚಾಗಿ ಕಂಡುಬರುತ್ತದೆ. ಇದು ಲೋಕದ ಸ್ವಭಾವವೇ ಆಗಿದೆ.

ವಿಶೇಷವಾದ ಹೊಗೆಯಿಂದ ವಿಶೇಷವಾದ ಬೆಂಕಿಯನ್ನು ತಿಳಿದುಕೊಳ್ಳುವಂತೆ ವಿಶೇಷವರ್ಣಗಳ ಸಂಘಟನೆಯಿಂದ ಕೂಡಿದ ವಾಚಕಗಳಿಂದ ಸಮರ್ಪಿತವಾಗುವ ಅರ್ಥವಿಶೇಷದಿಂದ ಕ್ರೋಧ ಮುಂತಾದ ವಿಶೇಷಭಾವಗಳ ಜ್ಞಾನವು ಉಂಟಾಗುವುದು. ಇದು ಸಂಗ್ರಹಾರ್ಯಾ.

**ಪದವಾಕ್ಯಯೋಃ ಪುನಃ ಸಾಕ್ಷಾದರ್ಥದ್ವಾರಕಂ ಗಮಕತ್ವಂ,**
**ನ ವರ್ಣಸಂಘಟನೆಯೋರಿವ ವಾಚಕೋಪಾಧಿಭಾವನಿಬಂಧನಮಿತಿ**
**ನ ತುಲ್ಯಕಕ್ಷ್ಯತಯಾ ನಿರ್ದೇಶಸ್ತಯೋರುಪಪನ್ನಃ।**
**ಪದವಾಕ್ಯಯೋರ್ಹಿ ದ್ವಯಮರ್ಥಾಂತರಪ್ರತೀತೌ ನಿಬಂಧನಮ್**
**ಇಷ್ಯತೇ, ಉಪಚಾರಃ ಪ್ರಕರಣಾದಿಸಾಮಗ್ರೀ ಚೇತಿ।**
**ಯತ್ರ ಹಿ ಯತ್ ಸಮಾರೋಪಿತಂ ತತ್ರ ಯಥಾಕಥಂಚಿತ್**
**ತತ್ಸಾದೃಶ್ಯಂ ತತ್ಸಂಬಂಧಾದವಗಮ್ಯತೇ, ನ ತತ್ತ್ವಮ್, ತದಭಾವೇ**
**ಸಾದೃಶ್ಯಾನುಪಪತ್ತೇರಿತಿ ತದೇತದತ್ರಾನುಮೇಯಮಿತ್ಯುಕ್ತಮ್।**
**ಏಕೋಽಪಿ ಹಿ ಶಬ್ದಃ ಸಾಮಗ್ರೀವೈಚಿತ್ರ್ಯಾತ್ ತದ್ಧರ್ಮವಿಶಿಷ್ಟಂ**
**ಸ್ವಾರ್ಥಮೇವಾವಗಮಯತೀತಿ ತದೇವ ತತ್ರ ಲಿಂಗಮವಗಂತವ್ಯಮ್,**
**ನ ಶಬ್ದಮಾತ್ರಮ್। ತದ್ಧಿ ಸಂಜ್ಞಿನಮೇವ ಪ್ರತ್ಯಾಯಯಿತುಮಲಂ**
**ನ ಸಂಜ್ಞಿವಿಶೇಷಮಿತ್ಯೇತದಪ್ಯುಕ್ತಮೇವ।**

**ಅನುವಾದ:**

ಪದಗಳಿಗೂ ವಾಕ್ಯಗಳಿಗೂ ಗಮಕತ್ವವು ನೇರವಾಗಿ ಅರ್ಥದ ಮೂಲಕ ಆಗುತ್ತದೆ. ವರ್ಣ–ಸಂಘಟನೆಗಳಿಗೆ ಆಗುವಂತೆ ವಾಚಕೋಪಾಧಿಭಾವವನ್ನು ಆಶ್ರಯಿಸಿ ಪದ–ವಾಕ್ಯಗಳಿಗೆ ಗಮಕತ್ವವಿಲ್ಲ. ಆದ್ದರಿಂದ ಅವೆಲ್ಲಕ್ಕೂ ಒಟ್ಟಿಗೆ

ಸಮಾನವಾಗಿ ಗಮಕತ್ವವನ್ನು ಹೇಳುವುದು ಸರಿಯಲ್ಲ. ಪದ ಮತ್ತು ವಾಕ್ಯಗಳಿಗೆ ಅರ್ಥಾಂತರಪ್ರತೀತಿಯನ್ನುಂಟು ಮಾಡುವುದರಲ್ಲಿ ಎರಡು ನಿಬಂಧನಗಳಿವೆ– ಉಪಚಾರ ಮತ್ತು ಪ್ರಕರಣಾದಿ ಸಾಮಗ್ರಿ. ಎಲ್ಲಿ ಯಾವುದು ಆರೋಪಿತವಾಗುವುದೋ ಅಲ್ಲಿ ಅದರ ಸಾದೃಶ್ಯವು ಯಾವುದಾದರೂ ರೀತಿಯಲ್ಲಿರುವುದು ಅದರ ಸಂಬಂಧದಿಂದಲೇ ತಿಳಿದುಬರುತ್ತದೆ. ಹಾಗಿಲ್ಲದಿದ್ದರೆ ಆರೋಪವೂ (ಸಾದೃಶ್ಯವೂ?) ಹೊಂದುವುದಿಲ್ಲ. ಆದ್ದರಿಂದ ಸಾದೃಶ್ಯವು ಅಂಥ ಸ್ಥಳದಲ್ಲಿ ಅನುಮೇಯ ಎಂದು ಹೇಳಿದ್ದೇವೆ.

ಶಬ್ದವು ಒಂದೇ ಆದರೂ ಸಾಮಗ್ರಿಯ ವೈಚಿತ್ರ್ಯವನ್ನು ಅವಲಂಬಿಸಿ ಆ ಧರ್ಮಗಳಿಂದ ಕೂಡಿದ ತನ್ನ ಅರ್ಥವನ್ನು ತಿಳಿಸುತ್ತದೆ. ಆ ಸಾಮಗ್ರೀವೈಚಿತ್ರ್ಯವೇ ಅಲ್ಲಿ ಲಿಂಗ ಎಂದು ಅರಿತುಕೊಳ್ಳಬೇಕು, ಕೇವಲ ಶಬ್ದವನ್ನಲ್ಲ. ಶಬ್ದವು ಸಂಕೇತಿತವಾದ ಸಾಮಾನ್ಯಾರ್ಥವನ್ನು ಮಾತ್ರ ತಿಳಿಸಲು ಸಮರ್ಥ, ವಿಶಿಷ್ಟ ಸಂಜ್ಞಿಯನ್ನಲ್ಲ ಎಂದು ಮೊದಲೇ ಹೇಳಿದ್ದೇವೆ.

**ತತ್ರ ಪದಸ್ಯೋಪಚಾರತೋ ಯಥಾ ಮಹರ್ಷೇರ್ವ್ಯಾಸಸ್ಯ**
**"ಸಪ್ತೈತಾಃ ಸಮಿಧಃ ಶ್ರಿಯಃ" ಇತಿ। ಯಥಾ ಚ ವಾಲ್ಮೀಕೇಃ**
**"ನಿಃಶ್ವಾಸಾಂಧಇವಾದರ್ಶಶ್ಚಂದ್ರಮಾ ನ ಪ್ರಕಾಶತೇ" ಇತಿ।**
**ಯಥಾ ಚ ಕಾಲಿದಾಸಸ್ಯ "ಕಃ ಸನ್ನದ್ಧೇ ವಿರಹ–**
**ವಿಧುರಾಂ ತ್ವಯ್ಯುಪೇಕ್ಷೇತ ಜಾಯಾಮ್" ಇತಿ।**
**ಯಥಾ ಚ– ಸರಸಿಜಮನುವಿದ್ಧಂ ಶೈವಲೇನಾಪಿ ರಮ್ಯಂ**
**ಮಲಿನಮಪಿ ಹಿಮಾಂಶೋರ್ಲಕ್ಷ್ಮ ಲಕ್ಷ್ಮೀಂ ತನೋತಿ।**
**ಇಯಮಧಿಕಮನೋಜ್ಞಾ ವಲ್ಕಲೇನಾಪಿ ತನ್ವೀ**
**ಕಿಮಿವ ಹಿ ಮಧುರಾಣಾಂ ಮಂಡನಂ ನಾಕೃತೀನಾಮ್॥**
**ಇತ್ಯತ್ರ ಸಮಿದಂಧಸನ್ನದ್ಧಮಧುರಪದಾನಿ ಗಮಕತ್ವಾಭಿಪ್ರಾ–**
**ಯೇಣೈವ ಪ್ರಯುಕ್ತಾನೀತಿ ಉಕ್ತಮೇವ।**

**ಅನುವಾದ:**

ಉಪಚಾರದಿಂದ ಪದದ ಗಮಕತ್ವ ಉಂಟಾಗುವುದಕ್ಕೆ ಉದಾಹರಣೆ ವ್ಯಾಸಮಹರ್ಷಿಯ "ಈ ಏಳು ಸಂಪತ್ತಿನ ಸಮಿತ್ತುಗಳು" ಮತ್ತು ವಾಲ್ಮೀಕಿಯ "ನೀಶ್ವಾಸದಿಂದ ಕುರುಡಾದ ಕನ್ನಡಿಯಂತೆ ಚಂದ್ರನು ಈಗ ಹೊಳೆಯುತ್ತಿಲ್ಲ". ಇನ್ನೊಂದು ಉದಾಹರಣೆ ಕಾಳಿದಾಸನ ಮಾತು–

"ನೀನು ಸನ್ನದ್ಧನಾಗಿರುವಾಗ ವಿಯೋಗವ್ಯಾಕುಲಳಾದ ಹೆಂಡತಿಯನ್ನು ಯಾರು ಉಪೇಕ್ಷಿಸುವರು" ಮತ್ತು "ತಾವರೆಯು ಹಾಚಿಯಿಂದ ಸುತ್ತುವರಿಯಲ್ಪಟ್ಟಿದ್ದರೂ ಚಂದ, ಚಂದ್ರನ ಕಳಂಕವು ಕಪ್ಪಾಗಿದ್ದರೂ ಅವನ

ಕಾಂತಿಯನ್ನು ಹೆಚ್ಚಿಸುತ್ತದೆ. ಈ ಚೆಲುವೆ ನಾರುಮಡಿಯನ್ನುಟ್ಟಿದ್ದರೂ ಹೆಚ್ಚು ಅಂದವಾಗಿದ್ದಾಳೆ. ಮಧುರವಾದ ಆಕಾರಕ್ಕೆ ಏನು ತಾನೆ ಅಲಂಕಾರವಲ್ಲ?"

ಈ ಉದಾಹರಣೆಗಳಲ್ಲಿ ಸಮಿತ್ತು, ಅಂಧ, ಸನ್ನದ್ಧ ಮತ್ತು ಮಧುರ ಎಂಬ ಪದಗಳು ಗಮಕತ್ವದ ಅಭಿಪ್ರಾಯದಿಂದಲೇ ಪ್ರಯುಕ್ತವಾಗಿವೆ ಎಂದು ಹೇಳಿದ್ದೇವೆ.

**ತಸ್ಯೈವ ಸಾಮಗ್ರೀವೈಚಿತ್ರ್ಯೇ ಯಥಾ– "ರಾಮೇಣ ಪ್ರಿಯಜೀವಿತೇನ ತು ಕೃತಂ ಪ್ರೇಮ್ಣಃ ಪ್ರಿಯೇ ನೋಚಿತಮ್" ಇತ್ಯತ್ರ ರಾಮೇಣ ಇತ್ಯೇತತ್ ಪದಂ ಪ್ರಕರಣಾದಿಸಾಮಗ್ರೀವಶಾತ್ ಸಾಹಸೈಕರಸಿಕತ್ವಾದಿಧರ್ಮವಿಶಿಷ್ಟಸ್ಯ ರಾಮಾರ್ಥಸ್ಯ ಗಮಕಮ್। ಅನ್ಯಥಾ ಹಿ ಮಯೇತ್ಯೇವ ವಕ್ತವ್ಯಂ ಸ್ಯಾತ್। ಯತ್ರಾಪಿ ಚೈಕಸ್ಯೈವಾರ್ಥಸ್ಯ ಏಕಾಭಿಧಾನಮುಖೇನ ಉತ್ಕರ್ಷಾಪಕರ್ಷತತ್ತ್ವಾಭಿಧಿತ್ಸಯಾ ಉಪಕಲ್ಪಿತಭೇದಸ್ಯ ವಿಧ್ಯನುವಾದಭಾವೇನೋಪನಿಬಂಧಃ, ತತ್ರ ಪ್ರಕರಣಾದಿಭ್ಯ ಏವಾಸ್ಯೋತ್ಕರ್ಷೋಽಪಕರ್ಷಃ ತತ್ತ್ವಂ ವಾನುಮೇಯಮ್, ನ ತು ತತ ಏವ। ನ ಹಿ ವಿಧೇಯಾಭಿಧಾಯಿನಃ ಶಬ್ದಸ್ಯೈವ ಸಾ ಶಕ್ತಿಃ, ತಯೋರ್ವಿರೋಧಾತ್।**

**ಅನುವಾದ:**

ಶಬ್ದದ ಗಮಕತ್ವವು ಸಾಮಗ್ರಿಯ ವೈಚಿತ್ರ್ಯದಿಂದ ಉಂಟಾಗುವುದಕ್ಕೆ ಉದಾಹರಣೆ– ರಾಮೇಣ..... ಇತ್ಯಾದಿ. "ಪ್ರಿಯೆ, ಪ್ರಾಣವನ್ನು ಪ್ರೀತಿಸುವ ರಾಮನಿಂದ ಪ್ರೇಮಕ್ಕೆ ಯೋಗ್ಯವಾದುದು ಮಾಡಲ್ಪಡಲಿಲ್ಲ" ಇಲ್ಲಿ ರಾಮೇಣ ಎಂಬ ಪದವು ಪ್ರಕರಣಾದಿ ಸಾಮಗ್ರಿಯ ಮಹಿಮೆಯಿಂದ ಸಾಹಸಪ್ರಿಯತ್ವ ಮುಂತಾದ ಗುಣಗಳಿಂದ ಕೂಡಿದ ರಾಮ ಎಂಬ ಅರ್ಥಕ್ಕೆ ಗಮಕವಾಗಿದೆ. ಆ ಅಭಿಪ್ರಾಯವಿಲ್ಲದಿದ್ದರೆ ಮಯಾ (ನನ್ನಿಂದ) ಎಂದೇ ಹೇಳಬೇಕಾಗಿತ್ತು.

ಒಂದೇ ಅರ್ಥದಲ್ಲಿ ಉತ್ಕರ್ಷ, ಅಪಕರ್ಷ, ತತ್ತ್ವಗಳನ್ನು ಹೇಳುವುದಕ್ಕಾಗಿ ಭೇದವನ್ನು ಕಲ್ಪಿಸಿ ಒಂದೇ ಶಬ್ದದಿಂದ ಉಪನಿಬಂಧವಾಗಿದ್ದರೆ, ಅಲ್ಲಿಯೂ ಉತ್ಕರ್ಷ, ಅಪಕರ್ಷ ಮತ್ತು ತತ್ತ್ವ ಎಂಬವು ಪ್ರಕರಣಾದಿಗಳಿಂದಲೇ ಅನುಮಿತವಾಗುತ್ತವೆ, ಕೇವಲ ಶಬ್ದದಿಂದ ಅಲ್ಲ. ವಿಧೇಯವನ್ನು ಹೇಳುವ ಶಬ್ದಕ್ಕೆ ಉತ್ಕರ್ಷಾಪಕರ್ಷಗಳನ್ನು ತಿಳಿಸುವ ಶಕ್ತಿ ಇಲ್ಲ. ಏಕೆಂದರೆ ಉದ್ದೇಶ್ಯ–ವಿಧೇಯಗಳು ಪರಸ್ಪರ ವಿರುದ್ಧ.

**ತತ್ರೋತ್ಕರ್ಷೋ ಯಥಾ–**
**ರಇಕಿರಣಾಣುಗ್ಗಹಿಆಇ ಹೋಂತಿ ಕಮಲಾಇ ಕಮಲಾಇ। ಇತಿ।**
**ಅತ್ರ ದ್ವಿತೀಯಃ ಕಮಲ ಶಬ್ದಃ। ಅಪಕರ್ಷೋ ಯಥಾ–**
**ಏಮೇಅ ಜಣೋ ತಿಸ್ಸಾ ದೇಉ ಕಪೋಲೋಪಮಾಇಸಸಿಬಿಂಬಮ್।**
**ಪರಮತ್ಥವಿಆರೇ ಉಣ ಚಂದೋ ಚಂದೋ ವಿಅ ವರಾಓ॥**
**ಅತ್ರ ದ್ವಿತೀಯಶ್ಚಂದ್ರಶಬ್ದಃ। ಅತ್ರ ಹಿ ವಿಧೇಯಾಭಿಧಾಯಿನೋ**
**ದ್ವಿತೀಯಾಚ್ಚಂದ್ರಶಬ್ದಾದ್ ಯಥಾಪಕರ್ಷೋಽವಗಮ್ಯತೇ**

ನ ತಥಾ ಪೂರ್ವಾತ್ ಕಮಲಶಬ್ದಾದಿತಿ ಅರ್ಥಪ್ರಕರಣಾ-
ದಿರೇವ ತತ್ರ ಹೇತುಭಾವೇನೋಪಗಂತುಂ ಯುಕ್ತೋ, ನ
ಶಬ್ದಶಕ್ತಿಃ। ತಸ್ಯಾ ಹ್ಯುತ್ಕರ್ಷಾಪಕರ್ಷಾವಗಮಃ ಪೂರ್ವಾಪರ-
ಪದಾರ್ಥನಿಯತ ಏವ ಸ್ಯಾತ್, ನಾನಿಯತಃ। ತತ್ತ್ವಂ ಯಥಾ-
ಕಾಚೋಮಣಿರ್ಮಣಿಃ ಕಾಚೋ ಯೇಷಾಂ ತೇಽನ್ಯೇ ಹಿ ದೇಹಿನಃ।
ಸಂತಿ ತೇ ಸುಧಿಯೋ ಯೇಷಾಂ ಕಾಚಃ ಕಾಚೋ ಮಣಿರ್ಮಣಿಃ॥
ಇತ್ಯತ್ರ ದ್ವಿತೀಯೌ ಕಾಚಮಣಿಶಬ್ದೌ।

**ಅನುವಾದ:**

ಉತ್ಕರ್ಷದ ಉದಾಹರಣೆ- ರಇ..... (ಇದರ ಅನುವಾದ ಹಿಂದೆ ಬಂದಿದೆ.) ಇಲ್ಲಿ ಎರಡನೆಯ ಕಮಲ ಶಬ್ದ (ಉತ್ಕರ್ಷಾರ್ಥಗಮಕ).

ಅಪಕರ್ಷದ ಉದಾಹರಣೆ- ಏಮೇಅ..... (ಇದರ ಅನುವಾದ ಹಿಂದೆ ಬಂದಿದೆ) ಇಲ್ಲಿ ಎರಡನೆಯ ಚಂದ್ರಶಬ್ದವು (ಅಪಕರ್ಷಾರ್ಥಗಮಕ). ಇಲ್ಲಿ ವಿಧೇಯವನ್ನು ಹೇಳುವ ಎರಡನೆಯ ಚಂದ್ರಶಬ್ದದಿಂದ ಹೇಗೆ ಅಪಕರ್ಷವು ತೋರಿಬರುವುದೋ ಹಾಗೆ ಹಿಂದಿನ ಪದ್ಯದ ಕಮಲಶಬ್ದದಿಂದ ತೋರುವುದಿಲ್ಲ. ಆದ್ದರಿಂದ ಪ್ರಯೋಜನ, ಪ್ರಕರಣ ಮುಂತಾದುವನ್ನೇ (ಪ್ರಕರ್ಷಾಪಕರ್ಷಜ್ಞಾನದ) ಕಾರಣವೆಂದು ತಿಳಿದುಕೊಳ್ಳಬೇಕು, ಶಬ್ದಶಕ್ತಿಯನ್ನಲ್ಲ. ಆ ಶಕ್ತಿಯಿಂದ ಉತ್ಕರ್ಷಾಪಕರ್ಷಗಳ ಜ್ಞಾನವಾದರೆ ಅದು ಹಿಂದಿನ ಅಥವಾ ಮುಂದಿನ ಪದಾರ್ಥಗಳಿಂದ ನಿಯತವಾಗಿ ಇರುತ್ತದೆ. ಅನಿಯತವಾಗಿರುವುದಿಲ್ಲ.

ತತ್ತ್ವದ (ವಸ್ತುವಿನ ಯಥಾವತ್ ಸ್ವರೂಪದ) ಉದಾಹರಣೆ- "ಯಾರಿಗೆ ಗಾಜು ರತ್ನವೋ ರತ್ನವು ಗಾಜೋ ಅಂಥವರು ಬೇರೆ. ಆದರೆ ಯಾರಿಗೆ ಗಾಜು ಗಾಜೋ ರತ್ನವು ರತ್ನವೋ ಅಂಥ ವಿದ್ವಾಂಸರು ಇಲ್ಲಿ ಇದ್ದಾರೆ".

ಈ ಉದಾಹರಣೆಯಲ್ಲಿ ಎರಡನೆಯವಾದ ಕಾಚ ಮತ್ತು ಮಣಿ ಎಂಬ ಶಬ್ದಗಳು (ತತ್ತ್ವಕ್ಕೆ ಗಮಕವಾಗಿವೆ).

ಶಬ್ದಶಕ್ತಿಮೂಲಾಯಾಃ ಅರ್ಥಾಂತರಪ್ರತೀತೇಃ ಅನಿಬಂಧನಾಯಾಃ ಪರಾಕೃತತ್ವಾನ್ನ ತನ್ಮೂಲಾ ಪದವಾಕ್ಯಪ್ರಕಾಶತಾ ಸಂಭವತಿ। ಯಥಾ-

ಪ್ರಾತುಂ ಧನೈರರ್ಥಿಜನಸ್ಯ ವಾಂಛಾಂ ದೇವೇನ ಸೃಷ್ಟೋ ಯದಿ ನಾಮ ನಾಸ್ಮಿ।
ಪಥಿ ಪ್ರಸನ್ನಾಂಬುಧರಸ್ತಡಾಗಃ ಕೂಪೋಽಥವಾ ಕಿಂ ನ ಕೃತೋ ಜಡೋಽಹಮ್॥

ಅತ್ರ ಹಿ ಜಡ ಇತ್ಯೇತತ್ ಪದಂ ನಿರ್ವಿಣ್ಣೇನ ಕೇನಚಿದ್ ವಕ್ತ್ರಾ ಕೂಪಸಮಾನಾಧಿಕರಣತಯೈವ ಪ್ರಯುಕ್ತಂ, ನಾತ್ಮಸಮಾನಾಧಿಕರಣತಯಾ 'ಕೂಪೋಽಥವಾ ಕಿಂ ನ ಕೃತೋ ಜಡೋಽಹಮ್' ಇತ್ಯಾತ್ಮನೋ ಜಡತ್ವಾಶಂ ಸಾಸ್ಪದತ್ವೇನೇಷ್ಟತ್ವಾತ್। ಇತ್ಥಮೇವ ವಾಚ್ಯಸ್ಯ ಚಾರುತ್ವೋಪಪತ್ತೇಃ। ಯತೋಽಯಮತ್ರಾರ್ಥೋ ವಿವಕ್ಷಿತಃ "ಕಿಂ ಮಮಾನೇನ ಪರದುಃಖಭಾಜಾ ಹತಚೈತನ್ಯೇನ ಕೃತ್ಯಂ ಜಡಸ್ತಟಾಕ ಏವಾಸ್ಮಿ ಕಸ್ಮಾನ್ನ ಕೃತ ಇತಿ।

**ಅನುವಾದ:**

ಶಬ್ದಶಕ್ತಿಮೂಲವಾಗಿ ನಿಬಂಧನರಹಿತವಾದ ಅರ್ಥಾಂತರಪ್ರತೀತಿಯನ್ನು ನಾವು ಮೊದಲೇ ಖಂಡಿಸಿರುವುದರಿಂದ ಶಬ್ದಶಕ್ತಿಮೂಲವಾದ ಪದವಾಕ್ಯಪ್ರಕಾಶತೆ ಸಂಭವಿಸುವುದಿಲ್ಲ. ಹೇಗೆಂದರೆ–

"ಯಾಚಕಜನರ ಆಸೆಗಳನ್ನು ಹಣದಿಂದ ಈಡೇರಿಸಲು ಭಗವಂತನಿಂದ ನಾನು ಸೃಷ್ಟಿಸಲ್ಪಡಲಿಲ್ಲ ಎಂದಾದರೆ ದಾರಿಯಲ್ಲಿ ಸ್ವಚ್ಛವಾದ ನೀರಿನಿಂದ ತುಂಬಿದ ಕೆರೆಯೋ ಅಥವಾ ಜಡರೂಪದ ಬಾವಿಯೋ ಆಗಿ ನಾನೇಕೆ ಅವನಿಂದ ಮಾಡಲ್ಪಡಲಿಲ್ಲ?"

ಈ ಪದ್ಯದಲ್ಲಿ ಜಡ ಎಂಬ ಪದವನ್ನು ನಿರ್ವಿಣ್ಣನಾಗಿದ್ದ ಯಾವನೋ ವಕ್ತಾರನು ಕೂಪಕ್ಕೆ (ಬಾವಿಗೆ) ಸಮಾನಾಧಿಕರಣವನ್ನಾಗಿ ಪ್ರಯೋಗಿಸಿದ್ದಾನೆ. ನಾನು ಜಡವಾದ ಕೂಪವೇ ಆಗಿ ಏಕೆ ಮಾಡಲ್ಪಡಲಿಲ್ಲ? ಎಂದು ತನ್ನನ್ನು ಜಡತ್ವದ ಹಾರೈಕೆಗೆ ಆಸ್ಪದವನ್ನಾಗಿ ಮಾಡಿಕೊಳ್ಳುವುದು ಅವನಿಗೆ ಇಷ್ಟ. ಹೀಗೆ ಹೇಳಿದರೆ ವಾಚ್ಯವು ಸುಂದರವಾಗಿರುತ್ತದೆ. ಆದ್ದರಿಂದ ಇಲ್ಲಿ ವಿವಕ್ಷಿತವಾದ ಅರ್ಥವು ಏನೆಂದರೆ– "ಬೇರೆಯವರ ದುಃಖವನ್ನು ನೋಡುವ ನನಗೆ ಇಂಥ ಚೈತನ್ಯದಿಂದ ಪ್ರಯೋಜನವೇನು, ಜಡವಾದ ಕೆರೆಯೋ ಬಾವಿಯೋ ಆಗಿ ನಾನೇಕೆ ದೇವರಿಂದ ಸೃಷ್ಟಿಸಲ್ಪಡಲಿಲ್ಲ?"

**ನ ಚ ಉಕ್ತನ್ಯಾಯೇನ ನಿಬಂಧನಾಂತರಮಂತರೇಣ ಸ್ವಶಕ್ತ್ಯೈವ**
**ಅನುರಣನರೂಪತಯಾ ಅರ್ಥಾಂತರಸಮಾನಾಧಿಕರಣತಾಂ**
**ಪ್ರತಿಪತ್ತುಮಲಮ್ ಇತಿ ಅನುದಾಹರಣಮೇತತ್।**
**"ಅಸಮಪ್ಪಿಅಂ ವಿ ಗಹಿಅಂ ಕುಸುಮಶರೇಣ ಮಹುಮಾಸಲಚ್ಛಿಮುಹಮ್" ಇತಿ।**
**(ಅಸಮರ್ಪಿತಮಪಿ ಗೃಹೀತಂ ಕುಸುಮಶರೇಣ ಮಧುಮಾಸಲಕ್ಷ್ಮೀಮುಖಮ್)**
**ಅತ್ರ ಹಿ ಅಸಮರ್ಪಿತಮಪಿ ಕುಸುಮಶರೇಣ ಮಧುಮಾಸ–**
**ಲಕ್ಷ್ಮ್ಯಾ ಮುಖಂ ಗೃಹೀತಮಿತಿ ಅಸಮರ್ಪಿತಮಪಿ ಇತ್ಯೇತದರ್ಥಾ–**
**ಭಿಧಾಯಿ ಪದಮ್ ಅರ್ಥಶಕ್ತ್ಯಾ ಕುಸುಮಶರಬಲಾತ್ಕಾರಮ್**
**ಅನುಮಾಪಯತಿ।**
**ವಾಣಿಅಅ ಹತ್ಥಿದಂತಾ ಕತ್ತೋ ಅಹ್ಮಾಣ ವಗ್ಘಕಿತ್ತೀ ಅ।**
**ಜಾವ ಲುಲಿಆಲಅಮುಹೀ ಘರಮ್ಮಿ ಪರಿಸಕ್ಕಏಸೋಣ್ಹಾ॥**
**ಇತ್ಯತ್ರ ದ್ವಿರದರದನವ್ಯಾಘ್ರಾಜಿನಾನಾಂ ಪ್ರತಿಷೇಧಾವಗತಿರುಕ್ತಕ್ರಮೇಣ**
**ವ್ಯಾಪಕವಿರುದ್ಧಕಾರ್ಯೋಪಲಬ್ಧಿನಿಬಂಧನಾ ಇತಿ ಅನುಮಾನ ಏವ ಅಂತರ್ಭವತಿ।**

**ಅನುವಾದ:**

ಹಿಂದೆ ಪ್ರತಿಪಾದಿಸಿರುವ ನ್ಯಾಯದಿಂದ ನಿಬಂಧನರಹಿತವಾಗಿ ಕೇವಲ ತನ್ನ ಶಕ್ತಿಯಿಂದ ಅನುರಣನರೂಪದಲ್ಲಿ ಇನ್ನೊಂದು ಅರ್ಥದೊಡನೆ

ಸಾಮಾನಾಧಿಕರಣ್ಯವನ್ನು ಪಡೆಯಲು ಶಕ್ತವಲ್ಲವಾದುದರಿಂದ ಪ್ರಕೃತಪದ್ಯವು ಸರಿಯಾದ ಉದಾಹರಣೆಯಲ್ಲ. "ಮಧುಮಾಸದ ಲಕ್ಷ್ಮಿಯ ಮುಖವು ಸಮರ್ಪಿಸಲ್ಪಡದಿದ್ದರೂ ಅದನ್ನು ಮನ್ಮಥನು ಹಿಡಿದುಕೊಂಡನು". ಇಲ್ಲಿ ಸಮರ್ಪಿಸಲ್ಪಡದೆ ಇದ್ದರೂ ಎಂಬ ಅರ್ಥವನ್ನು ಕೊಡುವ ಅಪಿಶಬ್ದವು ಅರ್ಥಶಕ್ತಿಯಿಂದ ಮನ್ಮಥನು ಮಾಡಿದ ಬಲಾತ್ಕಾರವನ್ನು ಅನುಮಿತಿಯಿಂದ ತಿಳಿಸಿಕೊಡುತ್ತದೆ.

ವಾಣಿಅಅ..... (ಈ ಪದ್ಯದ ಅನುವಾದ ಹಿಂದೆ ಬಂದಿದೆ) ಇಲ್ಲಿ ಆನೆಕೊಂಬು ಮತ್ತು ಹುಲಿಯ ಚರ್ಮಗಳ ಪ್ರತಿಷೇಧದ ಜ್ಞಾನವು ಹಿಂದೆ ವಿವರಿಸಿದ ಕ್ರಮದಿಂದ ವ್ಯಾಪಕವಿರುದ್ಧವಾದ ಕಾರ್ಯದ ಉಪಲಬ್ಧಿಯಿಂದ ಗೊತ್ತಾಗುತ್ತದೆ. ಆದ್ದರಿಂದ ಇದೂ ಅನುಮಾನದಲ್ಲೇ ಅಂತರ್ಭಾವವನ್ನು ಹೊಂದುತ್ತದೆ.

**ಕೇವಲಮಿದಮತ್ರ ನಿರೂಪ್ಯತೇ ಯದುತ ಕಸ್ಯೇಯಮುಕ್ತಿಃ ಕಿಂ ಶ್ವಶುರಯೋರುತ ತಟಸ್ಥಸ್ಯೈವ ಕಸ್ಯಚಿದಿತಿ। ತತ್ರ ಶ್ವಶುರಸ್ಯ ತಾವದ್ ದುಹಿತುರಿವ ಸ್ನುಷಾಯಾಃ ಸೌಭಾಗ್ಯಾತಿಶಯವರ್ಣನಮಿದಮನುಚಿತಮೇವ। ಶ್ವಶ್ರ್ವಾ ಅಪಿ ಪುತ್ರಸ್ನೇಹವಿಕ್ಲವಾಯಾಃ ಸ್ವಸದ್ಮಸಮೃದ್ಧಿಂ ಸಮೀಹಮಾನಾಯಾ ವಾ ತತ್ಸೌಭಾಗ್ಯಾತಿರೇಕಮಸೂಯಮಾನಾಯಾಃ ವಾಣಿಜಕಂ ಪ್ರತಿ ನಾಸ್ತಿ ಹಸ್ತಿದಂತಾದಿ ವಿಕ್ರೇಯಮಿಹ ಇತ್ಯೇತಾವತಿ ವಕ್ತವ್ಯೇ ತದ್ವರ್ಣನಂ ನಿಷ್ಫಲಮ್ ಅನುಚಿತಂ ಚೇತಿ ತಟಸ್ಥಸ್ಯೈವೇಯಮುಕ್ತಿರುಚಿತಾ, ತತ್ರೈವ ಲೇಶತೋ ರಸಾಸ್ವಾದಸಂಭವಾತ್।**

**ಅನುವಾದ:**

ಇಲ್ಲಿ ಇಷ್ಟನ್ನು ಮಾತ್ರ ಚರ್ಚಿಸುತ್ತೇವೆ. ಇದು ಯಾರ ಮಾತು? ಅತ್ತೆಮಾವಂದಿರ ಮಾತೋ ಅಥವಾ ಯಾವನೋ ತಟಸ್ಥನ ನುಡಿಯೋ? ಮಾವನ ಮಾತು ಎಂಬುದಂತೂ ಅನುಚಿತ. ಸೊಸೆ ಅವನ ಮಗಳ ಹಾಗೆ. ಅವಳ ರೂಪಾತಿಶಯವನ್ನು ಮಾವನು ವರ್ಣಿಸುವುದು ಅನುಚಿತವೇ ಆಗುತ್ತದೆ. ಅತ್ತೆಯಂತೂ ಮಗನ ಪ್ರೀತಿಯಿಂದ ವಿಕ್ಲವಳಾಗಿದ್ದಾಳೆ, ಮನೆಯಲ್ಲಿ ಸಮೃದ್ಧಿ ಇರಬೇಕೆಂದು ಬಯಸುತ್ತಾಳೆ. ಅಥವಾ ಸೊಸೆಯ ಸೌಭಾಗ್ಯಾತಿಶಯದಲ್ಲಿ ಅವಳಿಗೆ ಅಸೂಯೆ. ವ್ಯಾಪಾರಿಯನ್ನು ಕುರಿತು "ಇಲ್ಲಿ ಮಾರುವುದಕ್ಕೆ ಆನೆದಂತ ಇತ್ಯಾದಿಗಳಿಲ್ಲ" ಎಂದು ಮಾತ್ರ ಅವಳು ಹೇಳಬೇಕು. ಸೊಸೆಯ ವರ್ಣನೆಯನ್ನು ಅವಳು ಮಾಡುವುದು ನಿಷ್ಫಲ ಮತ್ತು ಅನುಚಿತ. ಆದ್ದರಿಂದ ಈ ಮಾತು ತಟಸ್ಥನದು ಎನ್ನುವುದೇ ಉಚಿತ. ಅದರಲ್ಲೇ ಸ್ವಲ್ಪ ರಸಾಸ್ವಾದದ ಸಂಭವವಿದೆ."

**ಅನ್ಯಥಾ–**

**ವಿವರೀಅಸುರಅಸಮಏ ಬ್ರಹ್ಮಂ ದಟ್ಠೂಣ ಣಾಹಿಕಮಲಮ್ಮಿ।**
**ಹರಿಣೋ ದಾಹಿಣಣಅಣಂ ಚುಂಬಇ ಹಿಲಿಆಉಲಾ ಲಚ್ಛೀ॥**

**ಇತಿ ಪ್ರಹೇಲಿಕಾದಾವಪಿ ಮುಖ್ಯವೃತ್ತ್ಯಾ ಕಾವ್ಯವ್ಯಪದೇಶಃಸ್ಯಾತ್।**
**ಕೇವಲಂ ತತ್ಪಕ್ಷೇ ಅಹ್ಮಾಣ ಇತ್ಯತ್ರ ಏಆಣ ಇತಿ ಪಾಠಃ ಪರಿಣಮಯಿತವ್ಯಃ।**
**ಉತ್ಕಂಪಿನೀ ಭಯಪರಿಸ್ಖಲಿತಾಂಶುಕಾಂತಾ**
**ತೇ ಲೋಚನೇ ಪ್ರತಿದಿಶಂ ವಿಧುರೇ ಕ್ಷಿಪಂತೀ।**
**ಕ್ರೂರೇಣ ದಾರುಣತಯಾ ಸಹಸೈವ ದಗ್ಧಾ**
**ಧೂಮಾಂಧಿತೇನ ದಹನೇನ ನ ವೀಕ್ಷಿತಾಸಿ॥ ಇತಿ**
**ಅತ್ರ ತೇ ಇತಿ ಯೋಽಯಮ್ ಅಸಮಸೌಂದರ್ಯನಿಧಾನ–**
**ಭೂತಯೋಃ ಪುರಃ ಪರಿಸ್ಫುರತೋರಿವ ಲೋಚನಯೋಃ**
**ಪರಾಮರ್ಶಃ, ಸ ಹಿ ಸಾಮಗ್ರೀಯೋಗಾನ್ನಾಯಕಸ್ಯ ಶೋಕ–**
**ದಹನೋದ್ದೀಪನವಿಭಾವತಾಮೇತಯೋರನುಮಾಪಯತಿ ಇತಿ**
**ಮುಖ್ಯವೃತ್ತ್ಯಾ ತದ್ವಾಚ್ಯಸ್ಯಾರ್ಥಸ್ಯೈವ ಲಿಂಗತಾ, ನ ಪದಸ್ಯ।**

**ಅನುವಾದ:**

ಹಾಗಲ್ಲದಿದ್ದರೆ ವಿವರೀಅ..... (ಇದರ ಅನುವಾದ ಹಿಂದೆ ಬಂದಿದೆ). ಇತ್ಯಾದಿ ಪ್ರಹೇಳಿಕೆ (ಒಗಟು)ಗಳಲ್ಲೂ ಮುಖ್ಯವೃತ್ತಿಯಿಂದ ಕಾವ್ಯ ಎಂಬ ವ್ಯವಹಾರ ಆಗಬೇಕಾದೀತು. ಆ ಪಕ್ಷದಲ್ಲಿ (ವಾಣಿಅಅ..... ಪದ್ಯದಲ್ಲಿ) ಅಹ್ಮಾಣ (ನಮ್ಮ) ಎಂಬ ಪದದ ಜಾಗದಲ್ಲಿ ಏಆಣ (ಇವರ) ಎಂದು ಪಾಠವನ್ನು ಬದಲಾಯಿಸಬೇಕು. "(ವಾಸವದತ್ತೆ) ನಡುಗುತ್ತಿದ್ದಾಳೆ, ಭಯದಿಂದ ಅವಳ ಬಟ್ಟೆ ಜಾರಿಬಿದ್ದಿದೆ, ಹೆದರಿಕೆ ತುಂಬಿದ ಆ ಕಣ್ಣುಗಳನ್ನು ದಿಕ್ಕು ದಿಕ್ಕಿನಲ್ಲೂ ತಿರುಗಿಸುತ್ತಿದ್ದಾಳೆ. ಅಂಥವಳನ್ನು ಕ್ರೂರ ಅಗ್ನಿಯು ದಾರುಣವಾಗಿ ಸುಟ್ಟುಹಾಕಿಬಿಟ್ಟ. ಹೊಗೆಯಿಂದ ಕುರುಡಾಗಿದ್ದ ಅವನು ನಿನ್ನನ್ನು ನೋಡಲಿಲ್ಲ." ಇಲ್ಲಿ ತೇ (ಅವು) ಎಂಬ ಪದವು ಅಸಮಾನ ಸೌಂದರ್ಯನಿಧಿಗಳಾಗಿದ್ದ ಎದುರಿಗೇ ಕಾಣಿಸುತ್ತಿರುವಂತಿರುವ ಕಣ್ಣುಗಳ ಪರಾಮರ್ಶವನ್ನು ಮಾಡುತ್ತವೆ. ಅದು ಸಾಮಗ್ರೀಸಂಬಂಧದಿಂದ ನಾಯಕ (ಉದಯನ)ನ ಶೋಕದ ಬೆಂಕಿಯ ಉದ್ದೀಪನಕ್ಕೆ ವಿಭಾವವಾಗುವುವು ಆ ಕಣ್ಣುಗಳು ಎಂದು ಅನುಮಿತಿಯನ್ನುಂಟುಮಾಡುತ್ತವೆ. ಆದ್ದರಿಂದ ಇಲ್ಲಿ ಮುಖ್ಯವೃತ್ತಿಯಿಂದ ವಾಚ್ಯಾರ್ಥಕ್ಕೇ ಲಿಂಗತ್ವ, (ತೇ ಎಂಬ) ಪದಕ್ಕೆ ಅಲ್ಲ.

**ಯಥಾ ಚ–**
**ಝಟಿತಿ ಕನಕಚಿತ್ರೇ ತತ್ರ ದೃಷ್ಟೇ ಕುರಂಗೇ**
**ರಭಸವಿಕಸಿತಾಸ್ತೇ ದೃಷ್ಟಿಪಾತಾಃ ಪ್ರಿಯಾಯಾಃ।**
**ಪವನವಿಲುಲಿತಾನಾಮುತ್ಪಲಾನಾಂ ಪಲಾಶ–**
**ಪ್ರಕರಮಿವ ಕಿರಂತಃ ಸ್ಮರ್ಯಮಾಣಾ ದಹಂತಿ॥ ಇತಿ**

**ಪದಾವಯುವೇಽಪಿ ವಿಶಿಷ್ಟಃ ಪದಾರ್ಥ ಏವ, ನ ಶಬ್ದಮಾತ್ರಂ ತಸ್ಯ**

**ವ್ಯಾಪಾರಾಂತರಪ್ರತಿಷೇಧಾತ್ । ವಿಶಿಷ್ಟತ್ವಂ ಚ "ಮಯ್ಯಾಸಕ್ತಶ್ಚಕಿತಹರಿಣೀಹಾರಿನೇತ್ರತ್ರಿಭಾಗಃ" ಇತ್ಯತ್ರ ಚಕಿತಹರಿಣೀಹಾರಿಣಾ ನೇತ್ರೇಣ ಸಂಬಂಧಿತಯಾ ತ್ರಿಭಾಗಸ್ಯ ವಿಶೇಷಿತತ್ವಾತ್ ತಥಾವಿಧಸ್ಯ ಚಾಸ್ಯ ಗಮಕತ್ವಾತ್।**

**ಅನುವಾದ:**

ಇನ್ನೊಂದು ಉದಾಹರಣೆ–

"ಅಲ್ಲಿ ಇದ್ದಕ್ಕಿದ್ದಂತೆ ಚಿನ್ನದ ಬಣ್ಣದ ಜಿಂಕೆ ಕಾಣಿಸಿದಾಗ ನನ್ನ ಪ್ರಿಯೆ ಸೀತೆಯ ಕಣ್ಣಿನ ಆ ನೋಟಗಳು ರಭಸದಿಂದ ಅರಳಿ ಗಾಳಿಯಿಂದ ಅಲುಗಾಡಿದ ನೈದಿಲೆಗಳ ದಳಗಳ ರಾಶಿಯನ್ನು ಚೆಲ್ಲುವಂತಿದ್ದುವು. ನೆನಪಿಗೆ ಬರುವ ಅವು ನನ್ನನ್ನು ಸುಡುತ್ತಿವೆ".

ಪದಾವಯವದಲ್ಲೂ ಅನುಮಿತಿಯನ್ನುಂಟು ಮಾಡುವುದು ವಿಶಿಷ್ಟವಾದ ಪದಾರ್ಥವೇ, ಶಬ್ದವಲ್ಲ. ಏಕೆಂದರೆ ಶಬ್ದಕ್ಕೆ (ಅಭಿಧೆಯನ್ನು ಹೊರತುಪಡಿಸಿ) ಬೇರೆ ಎಲ್ಲ ವ್ಯಾಪಾರವನ್ನೂ ಪ್ರತಿಷೇಧಿಸಲಾಗಿದೆ. ವಿಶಿಷ್ಟತ್ವದ ಉದಾಹರಣೆ– "ಹೆದರಿದ ಹೆಣ್ಣು ಜಿಂಕೆಯ ಕಣ್ಣಿನಂತೆ ಸುಂದರವಾದ ಕಣ್ಣಿನ ತುದಿಯ ನೋಟವು ನನ್ನ ಮೇಲೆ ಎಸೆಯಲ್ಪಟ್ಟಿತು" ಎಂಬಲ್ಲಿ ಹೆದರಿದ ಜಿಂಕೆಯ ಕಣ್ಣಿನಂತೆ ಸುಂದರವಾದ ಕಣ್ಣಿನ ಸಂಬಂಧದಿಂದ ತುದಿಗಣ್ಣು ವಿಶೇಷಿತವಾಗಿದೆ, ಅಂಥ ಅದು (ಅನುಮಿತಾರ್ಥಕ್ಕೆ) ಗಮಕವಾಗಿದೆ.

**ವಾಕ್ಯಸ್ಯ ಚೋಪಚಾರತೋಽರ್ಥಾಂತರಪ್ರಕಾಶನಂ ಯಥಾ–**

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮನೇಃ॥**

**ಅತ್ರ ಹಿ ವಾಕ್ಯೇನ ನ ನಿಶಾರ್ಥೋ ನಾಪಿ ಜಾಗರಣಾರ್ಥಃ ಕಶ್ಚಿದ್ ವಿವಕ್ಷಿತಃ। ಕಿಂ ತರ್ಹಿ? ತತ್ತ್ವಜ್ಞಾನಾವಹಿತತ್ವಮ್ ಅತತ್ತ್ವಪರಾಙ್ಮುಖತ್ವಂ ಚ ಮುನೇಃ ಪ್ರತಿಪಾದ್ಯತೇ ಇತಿ ತಿರಸ್ಕೃತವಾಚ್ಯಸ್ಯಾಸ್ಯ ಗಮಕತ್ವಮ್। ಯಥಾಚ–**

**ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ।**
**ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್॥**

**ಇತ್ಯುಕ್ತಮ್।**

**ಅನುವಾದ:**

ಉಪಚಾರ (ಲಕ್ಷಣಾವ್ಯಾಪಾರ)ದಿಂದ ವಾಕ್ಯವು ಅರ್ಥಾಂತರವನ್ನು ಸೂಚಿಸುವುದಕ್ಕೆ ಉದಾಹರಣೆ– "ಎಲ್ಲ ಪ್ರಾಣಿಗಳಿಗೆ ಯಾವುದು ಇರುಳೋ ಅದರಲ್ಲಿ ಸಂಯಮಶೀಲನಾದ ಮುನಿ ಎಚ್ಚರಗೊಂಡಿರುತ್ತಾನೆ. ಯಾವ ಕಾಲದಲ್ಲಿ ಉಳಿದೆಲ್ಲ ಪ್ರಾಣಿಗಳು ಎಚ್ಚರವಾಗಿರುತ್ತವೋ ಅದು (ಸತ್ಯವನ್ನು) ಕಾಣುವ ಮುನಿಗೆ

ಇರುಳು". ಈ ವಾಕ್ಯದಲ್ಲಿ ಇರುಳು ಎಂಬ ಅರ್ಥವಾಗಲಿ, ಎಚ್ಚರ ಎಂಬ ಅರ್ಥವಾಗಲಿ ವಿವಕ್ಷಿತವಲ್ಲ. ಮತ್ತೇನು? ತತ್ತ್ವಜ್ಞಾನದಲ್ಲಿ ಆಸಕ್ತಿ ಮತ್ತು ಅಸತ್ಯದಲ್ಲಿ ಅನಾಸಕ್ತಿ ಎಂಬವು ಮುನಿಯಲ್ಲಿ ಪ್ರತಿಪಾದಿಸಲ್ಪಟ್ಟಿವೆ ಎಂಬ ಕಾರಣದಿಂದ ಇಲ್ಲಿ ಅತ್ಯಂತ ತಿರಸ್ಕೃತವಾಚ್ಯವಾದ ವಾಕ್ಯದ ಗಮಕತ್ವ. ಇನ್ನೊಂದು ಉದಾಹರಣೆ– ಸುವರ್ಣ... (ಈ ಪದ್ಯದ ಅನುವಾದ ಹಿಂದೆ ಬಂದಿದೆ) ಎಂದು ಆಗಲೇ ಹೇಳಿದ್ದೇವೆ.

**ತಸ್ಯೈವ ಪ್ರಕರಣಾದಿತೋ ಯಥಾ–**
**ವಿಸಮಇಓ ವ್ವಿಅ ಕಾಣವಿಕಾಣವಿವೋಲಿಇ ಅಮಅಣಿಮ್ಮಾಓ।**
**ಕಾಣ ವಿ ವಿಸಾಮಅಮಓ ಕಾಣವಿ ಅವಿಸಾಮಓ ಕಾಲೋ॥**
**(ವಿಷಮಯ ಇವ ಕೇಷಾಮಪಿ ಕೇಷಾಮಪಿ ಪ್ರಯಾತ್ಯಮೃತನಿರ್ಮಾಣಃ।**
**ಕೇಷಾಮಪಿ ವಿಷಾಮೃತಮಯಃ ಕೇಷಾಮಪ್ಯವಿಷಾಮೃತಃ ಕಾಲಃ॥)**
**ಇತ್ಯತ್ರ ವಾಕ್ಯೇ ಪ್ರಕರಣಾದಿವಶಾದ್ ವಿಷಾಮೃತಶಬ್ದಾಭ್ಯಾಂ**
**ಸುಖದುಃಖಸ್ವರೂಪಸಂಕ್ರಮಿತವಾಚ್ಯಾಭ್ಯಾಂ ವ್ಯವಹಾರ**
**ಇತ್ಯರ್ಥಾಂತರಸಂಕ್ರಮಿತವಾಚ್ಯಸ್ಯಾಸ್ಯಗಮಕತ್ವಮ್।**

**ಅನುವಾದ:**

ಪ್ರಕರಣಾದಿಗಳಿಂದ ವಾಕ್ಯವು ಅರ್ಥಾಂತರವನ್ನು ಸೂಚಿಸುವುದಕ್ಕೆ ಉದಾಹರಣೆ–

"ಕೆಲವರಿಗೆ ಕಾಲ ವಿಷಮಯ, ಇನ್ನು ಕೆಲವರಿಗೆ ಅದು ಅಮೃತನಿರ್ಮಾಣ, ಮತ್ತೆ ಕೆಲವರಿಗೆ ಕಾಲ ವಿಷ–ಅಮೃತಗಳ ಮಿಶ್ರಣ. ಇತರರಿಗೆ ಅದರಲ್ಲಿ ವಿಷವೂ ಇಲ್ಲ, ಅಮೃತವೂ ಇಲ್ಲ".

ಈ ವಾಕ್ಯದಲ್ಲಿ ವಿಷ ಮತ್ತು ಅಮೃತ ಎಂಬ ಶಬ್ದಗಳು ಅರ್ಥಾಂತರ ಸಂಕ್ರಮಿತವಾಚ್ಯಗಳಾಗಿ ಸುಖ, ದುಃಖ ಎಂಬ ಅರ್ಥಗಳನ್ನು ಸೂಚಿಸುತ್ತವೆ. (ಅಮೃತ–ವಿಷ ಎಂಬ ಶಬ್ದಗಳು ಸುಖ, ದುಃಖ ಎಂಬ ಅರ್ಥಗಳಲ್ಲಿ ಸಂಕ್ರಮಿತವಾಗುತ್ತವೆ) ಈ ವ್ಯವಹಾರವನ್ನು ಇಲ್ಲಿ ಮಾಡಿರುವುದರಿಂದ ಇಲ್ಲಿ ಅರ್ಥಾಂತರ ಸಂಕ್ರಮಿತವಾಚ್ಯವು ಗಮಕತ್ವವನ್ನು ಹೊಂದಿದೆ.

**ಶಬ್ದಸ್ಯಾಭಿಧಾತಿರೇಕೇಣ ಶಕ್ತ್ಯಂತರಾನುಪಪತ್ತೇಃ।**
**ತನ್ಮೂಲಂ ಪದಸ್ಯೇವ ವಾಕ್ಯಸ್ಯಾಪ್ಯರ್ಥಾಂತರಪ್ರಕಾಶನಂ**
**ನ ಸಂಭವತ್ಯೇವ। ಯಥಾ ಹರ್ಷಚರಿತೇ ಸಿಂಹನಾದವಾಕ್ಯೇ–**
**"ಪ್ರವೃತ್ತೇಽಸ್ಮಿನ್ ಮಹಾಪ್ರಲಯೇ ಧರಣೀಧಾರಣಾಯಾಧುನಾ ತ್ವಂ ಶೇಷಃ" ಇತಿ।**
**ನ ಹ್ಯೇತದ್‌ವಾಕ್ಯಮನುರಣನರೂಪಮರ್ಥಾಂತರಂ ಶಬ್ದ–**
**ಶಕ್ತ್ಯೈವಾನಿಬಂಧನಂ ಪ್ರಕಾಶಯಿತುಂ ಕ್ಷಮಮಿತ್ಯುಕ್ತಮೇವ।**
**ಸಜ್ಜೇಇ ಸುರಹಿಮಾಸೋಣ ಆ ಪಣಾವೇಇ ಜುವಇಜಣಲಖ್ಖಸಹೇ।**

ಅಹಿಣವಸಹಆರಮುಹೇ ಣವಪಲ್ಲವಪತ್ತಲೇ ಅಣಂಗಸ್ಸ ಸರೇ॥
(ಸಜ್ಜಯತಿ ಸುರಭಿಮಾಸೋ ನ ತಾವದರ್ಪಯತಿ ಯುವತಿಜನಲಕ್ಷ್ಯಸಹಾನ್।
ಅಭಿನವಸಹಕಾರಮುಖಾನ್ ನವಪಲ್ಲವಪತ್ರಲಾನ್ ಅನಂಗಸ್ಯ ಶರಾನ್॥)

**ಅನುವಾದ:**

ಅಭಿಧೆಯನ್ನು ಬಿಟ್ಟು ಬೇರೆ ಯಾವ ಶಕ್ತಿಯೂ ಶಬ್ದಕ್ಕೆ ಹೊಂದದಿರುವುದರಿಂದ, ಪದಕ್ಕೆ ಹೇಗೋ ಹಾಗೆ ವಾಕ್ಯಕ್ಕೂ ಶಬ್ದಶಕ್ತಿಮೂಲವಾಗಿ ಅರ್ಥಾಂತರ ಪ್ರಕಾಶನವು ಸಂಭವಿಸುವುದೇ ಇಲ್ಲ. ಅದರ ಉದಾಹರಣೆ (ಧ್ವನ್ಯಾಲೋಕದಲ್ಲಿ ಕೊಟ್ಟಿರುವುದು) ಹರ್ಷಚರಿತದಲ್ಲಿ ಸಿಂಹನಾದನ ವಾಕ್ಯ–

"ಈ ಮಹಾಪ್ರಳಯವು ಜರುಗಿರುವುದರಿಂದ ಈಗ ಭೂಮಿಯನ್ನು ಧರಿಸುವುದಕ್ಕೆ ನೀನೇ ಶೇಷ". ಈ ವಾಕ್ಯವು ಅನುರಣನರೂಪವಾಗಿ ಇನ್ನೊಂದು ಅರ್ಥವನ್ನು ಶಬ್ದಶಕ್ತಿಯಿಂದ ನಿಮಿತ್ತವಿಲ್ಲದಿರುವಾಗ ತಿಳಿಸಿಕೊಡಲು ಸಮರ್ಥವಲ್ಲ ಎಂದು ಮೊದಲೇ ಹೇಳಿದ್ದೇವೆ.

"ವಸಂತಮಾಸವು ತಾಜಾ ಮಾವಿನ ಚಿಗುರಿನ ಪತ್ರಗಳಿಂದ ಶೋಭಿಸುವ, ಯುವತಿಯರನ್ನು ಲಕ್ಷ್ಯವಾಗಿ ಮಾಡಿಕೊಳ್ಳುವ, ಮನ್ಮಥನ ಬಾಣಗಳನ್ನು ಇನ್ನೂ ಸಜ್ಜುಗೊಳಿಸುತ್ತಿದೆ. ಅವುಗಳನ್ನು ಮನ್ಮಥನಿಗೆ ಅರ್ಪಿಸಿಲ್ಲ".

ಇತ್ಯತ್ರ ಕವಿಪ್ರೌಢೋಕ್ತಿಮಾತ್ರನಿಷ್ಪನ್ನಶರೀರೇ ಸುರಭಿಮಾಸಸಂಭವಾನಾಮ್ ಆವಿರ್ಭೂತಾಭಿನವಪಲ್ಲವಾನಾಮ್ ತರೂಣಾಮ್ ಅಚಿರಭಾವಿಯುವತಿಜನಮದನೋನ್ಮಾದ–ದಾಯಿತ್ವಮನುಮೇಯಮ್। ತತ್ರ ಚ ಸಹಕಾರ–ಸುರಭಿಮಾಸ–ಮದನಾನಾಂ ರೂಪಕೋಪನಿಬಂಧನೇ ಶರಶರಕಾರಧಾನುಷ್ಕತುಲ್ಯವೃತ್ತಾಂತತ್ವೇ ಸತಿ ಯದಸಂಪನ್ನ–ಸಂಪೂರ್ಣರೂಪತಯಾ ಸಂಪ್ರತಿ ಸಹಕಾರಾಣಾಂ ಶರಾಣಾಮಿವ ಅನಂಗಾಯಾಸಮರ್ಪಣಂ ಸ ಹೇತುಃ। ತದಸಮರ್ಪಣಮಾತ್ರಾಂತರಾಯೋ ಹಿ ತಸ್ಯ ತದ್ವ್ಯಾಪಾರಃ। ಕಂದರ್ಪೋದ್ದೀಪನಸಮರ್ಥಸ್ವಭಾವಸಂಪಾದನಮೇವ ಚ ತೇಷಾಂ ಸುರಭಿಮಾಸೇನ ಕಂದರ್ಪಾಯಾಸಮರ್ಪಣಂ ನಾನ್ಯದಿತಿ।

**ಅನುವಾದ:**

ಈ ಪದ್ಯದಲ್ಲಿ ಅರ್ಥವು ಕವಿಪ್ರೌಢೋಕ್ತಿನಿಷ್ಪನ್ನಶರೀರ. ಇದರಲ್ಲಿ ಅನುಮೇಯವೇನೆಂದರೆ ಸುರಭಿಮಾಸದಲ್ಲಿ ಮರಗಳು ಹೊಸ ಚಿಗುರುಗಳನ್ನು ಹೊಂದಿ ಬಹು ಬೇಗ ಯುವತಿಯರಿಗೆ ಕಾಮೋನ್ಮಾದವನ್ನುಂಟು ಮಾಡಲಿ ಎಂಬುದು. ಅದರಲ್ಲಿ ಮಾವಿನಮರ–ವಸಂತಋತು–ಮನ್ಮಥರಲ್ಲಿ ಕ್ರಮವಾಗಿ ಬಾಣ–ಬಾಣಗಳನ್ನು ನಿರ್ಮಾಣ ಮಾಡುವವನು–ಬಿಲ್ಲುಗಾರ ಎಂದು ರೂಪಕವನ್ನು ಮಾಡಲಾಗಿದೆ. ಶರಗಳಂತೆ ಇರುವ ಮಾವಿನ ಮರಗಳ(ಹೂವುಗಳ)ನ್ನು ಅವಿನ್ನೂ

ಸಂಪೂರ್ಣರೂಪವನ್ನು ಪಡೆದುಕೊಳ್ಳದಿರುವ ಕಾರಣದಿಂದ ಮನ್ಮಥನಿಗೆ ಸಮರ್ಪಿಸಿಲ್ಲ ಎಂಬುದು ಕಾರಣ. ಮನ್ಮಥನು ತನ್ನ ಕಾರ್ಯದಲ್ಲಿ ತೊಡಗಲು ಇರುವ ಒಂದೇ ಅಡ್ಡಿ ಎಂದರೆ ಅವನ ಬಾಣಗಳನ್ನು ವಸಂತಋತು ಇನ್ನೂ ಸಮರ್ಪಿಸದೆ ಇರುವುದು. ವಸಂತಮಾಸವು ಕಂದರ್ಪನಿಗೆ ಇನ್ನೂ ಏಕೆ ಆ ಬಾಣಗಳನ್ನು ಸಮರ್ಪಿಸಿಲ್ಲವೆಂದರೆ ಅವುಗಳನ್ನು ಕಾಮೋದ್ದೀಪನಸಮರ್ಥ ಸ್ವಭಾವವನ್ನಾಗಿ ಮಾಡಬೇಕಾಗಿದೆಯಷ್ಟೇ ಹೊರತು ಬೇರೆ ಯಾವ ಕಾರಣವಿಲ್ಲ.

**ಸಿಹಿಪಿಚ್ಛಕಣ್ಣಊರಾ ಜಾಯಾ ವಾಹಸ್ಸ ಗವ್ವಿರೀ ಭಮಇ।**
**ಮೋತ್ತಾಫಲರಇಅಪಸಾಹಣಾಣ ಮಜ್ಝೇ ಸವತ್ತೀಣ॥**
**ಇತ್ಯತ್ರ ನವೋಢಾಯಾ ವ್ಯಾಧವಧ್ವಾಃ ಸಪತ್ನೀಭ್ಯಃ ಸೌಭಾಗ್ಯಾತಿ–**
**ರೇಕೋಽನುಮೇಯಃ। ತತ್ರ ಚಾಸ್ಯಾಃ ಶಿಖಿಪಿಚ್ಛಕರ್ಣಪೂರಾಯಾ**
**ಅಪಿ ಸಗರ್ವಂ ಭ್ರಮಣಂ ಹೇತುಃ। ಯತೋಽಯಮಭಿಪ್ರಾಯಸ್ತಸ್ಯಾಃ–**
**ಮಯಿ ಸತ್ಯಾಮಯಂ ಸಂಭೋಗೈಕರಸಿಕೋ**
**ವ್ಯಾಧೋ ವಾರಿತಾನ್ಯಕರ್ತವ್ಯೋ ದಿವಾನಿಶಂ ಮತ್ಪರಾಯಣ ಏವ**
**ಕೇವಲಂ ಮದ್ವಿನೋದಾರ್ಥಂ ಯದೃಚ್ಛಯಾಂತಿಕಾಪತಿತಮಯೂರ–**
**ಮಾತ್ರಮಾರಣವ್ಯಾಪಾರೋ ವರ್ತತ ಇತಿ ಶಿಖಿಪಿಚ್ಛಮಾತ್ರಕರ್ಣ–**
**ಪೂರಾಹಂ ಜಾತಾ, ಭವತೀಷು ಸತೀಷು ದೂರದೇಶಕಾಲವ್ಯವಧಾನ–**
**ಸಾಧ್ಯಮಹಾರಂಭಮಾತಂಗಮಾರಣಾದಿವ್ಯಾಪಾರನಿರತೋಽಯಮಾಸೀದಿತಿ**
**ಮುಕ್ತಾಫಲರಚಿತಪ್ರಸಾಧನಾ ಭವತ್ಯ ಇತಿ।**

**ಅನುವಾದ:**

"ನವಿಲುಗರಿಯನ್ನು ಕರ್ಣಾಭರಣವನ್ನಾಗಿ ಧರಿಸಿದ್ದ ಬೇಡತಿಯು ಮುತ್ತುಗಳ ಒಡವೆಗಳನ್ನು ಹಾಕಿಕೊಂಡಿದ್ದ ಸವತಿಯರ ಮಧ್ಯದಲ್ಲಿ ಗರ್ವದಿಂದ ಓಡಾಡುತ್ತಿದ್ದಾಳೆ." ಈ ಪದ್ಯದಲ್ಲಿ ಹೊಸದಾಗಿ ಮದುವೆಯಾಗಿದ್ದ ಬೇಡತಿಯು ತನ್ನ ಸವತಿಯರಿಗಿಂತ ಹೆಚ್ಚು ಅಂದಚಂದಗಳನ್ನು ಹೊಂದಿದ್ದಳೆಂದು ಅನುಮೇಯ. ಅವಳು ಕೇವಲ ನವಿಲುಗರಿಯನ್ನು ಕರ್ಣಾಭರಣವನ್ನಾಗಿ ಮಾಡಿಕೊಂಡಿದ್ದರೂ ಗರ್ವದಿಂದ ತಿರುಗಾಡುತ್ತಿದ್ದುದು ಹೇತುವಾಗಿದೆ. ಏಕೆಂದರೆ ಬೇಡತಿಯ ಅಭಿಪ್ರಾಯ ಇದು– "ನಾನು ಬಂದಮೇಲೆ ವ್ಯಾಧನು ಕೇವಲ ಸಂಭೋಗಾಸಕ್ತನಾಗಿ ಬೇರೆ ಕೆಲಸಗಳನ್ನು ಬಿಟ್ಟು ಹಗಲೂ ಇರುಳೂ ನನ್ನಲ್ಲೇ ಆಸಕ್ತನಾಗಿರುತ್ತಾನೆ. ನನ್ನ ವಿನೋದಕ್ಕಾಗಿ ತಾನಾಗಿ ಹತ್ತಿರಕ್ಕೆ ಬಂದ ನವಿಲನ್ನು ಮಾತ್ರ ಕೊಲ್ಲಬಲ್ಲವನಾಗಿದ್ದಾನೆ. ಈ ಕಾರಣದಿಂದ ನಾನು ಕೇವಲ ನವಿಲುಗರಿಯನ್ನು ಕರ್ಣಾಭರಣವನ್ನಾಗಿ ಮಾಡಿಕೊಂಡಿದ್ದೇನೆ. ನೀವು ವ್ಯಾಧನ ಹೆಂಡತಿಯರಾಗಿದ್ದಾಗ ದೂರದೇಶದಲ್ಲಿ ಬಹುಕಾಲ ಕಷ್ಟಪಟ್ಟು ಹೆಚ್ಚು ಪ್ರಯತ್ನದಿಂದ ಸಾಧಿಸಬೇಕಾದ

ಆನೆಗಳ ಬೇಟೆಯಲ್ಲಿ ಅವನು ನಿರತನಾಗಿದ್ದನು, ಆದ್ದರಿಂದಲೇ ನೀವು (ಆನೆಗಳ ತಲೆಯಲ್ಲಿ ಸಿಕ್ಕುವ) ಮುತ್ತುಗಳಿಂದ ಅಲಂಕರಿಸಿಕೊಂಡಿದ್ದೀರಿ" ಎಂದು.

**ತೇನ ಯದೇತತ್ ಸಗರ್ವಂ ಭ್ರಮಣಂ ತದೇವ**
**ತಸ್ಯಾಃ ಸಪತ್ನೀಭ್ಯಃ ಸೌಭಾಗ್ಯಾತಿರೇಕಮನುಮಾಪಯತಿ ಇತ್ಯವಸೇಯಮ್।**
**ವಾಕ್ಯಾರ್ಥಸ್ಯ ವಿಭಾವಾದಿರೂಪಸ್ಯ ರಸಾದೀನಾಂ**
**ಚಾಲಕ್ಷ್ಯಕ್ರಮೋ ಗಮ್ಯಗಮಕಭಾವ ಇತಿ ಪ್ರಸಾಧಿತಮೇವ।**
**ಸ ಚ ವಾಕ್ಯಾರ್ಥಃ ಶುದ್ಧೋಽಲಂ–**
**ಕಾರಾಂತರ ಸಂಕೀರ್ಣಶ್ಚೇತಿ ದ್ವಿಧಾ ಸಂಭವತಿ।**
**ತತ್ರ ಶುದ್ಧೋಯಥಾ ರಾಮಾಭ್ಯುದಯೇ ಕೃತಕ–**
**ಕುಪಿತೈರಿತ್ಯಾದಿ ಶ್ಲೋಕಃ। ಏತದ್ಧಿ ವಾಕ್ಯಂ ಪರಸ್ಪರಾನುರಾಗಪರಿಪೋಷಪ್ರಾಪ್ತಂ**
**ಪ್ರಕಾಶಯನ್–ಸರ್ವತ ಏವ ಪರಂ ರಸತತ್ತ್ವಂ ಪ್ರಕಾಶಯತಿ।**

**ಅನುವಾದ:**

ಆದ್ದರಿಂದ ಗರ್ವಿಣಿಯಾಗಿ ಬೇಡತಿ ಏನು ಓಡಾಡಿದಳೋ ಅದೇ ಅವಳ ಸವತಿಯವರಿಗಿಂತ ಅವಳು ಸೌಭಾಗ್ಯಾತಿಶಯವನ್ನು ಪಡೆದಿದ್ದಾಳೆಂಬುದನ್ನು ಅನುಮಿತಿಯಿಂದ ತಿಳಿಸುತ್ತದೆ ಎಂದು ಅರಿತುಕೊಳ್ಳಬೇಕು.

ವಿಭಾವಾದಿಗಳನ್ನೊಳಗೊಂಡ (ಅಥವಾ ವಿಭಾವಾದಿ ಸ್ವರೂಪವಾದ) ವಾಕ್ಯಾರ್ಥಕ್ಕೂ ರಸಾದಿಗಳಿಗೂ ಗಮ್ಯಗಮಕಭಾವವು ಅಲಕ್ಷ್ಯಕ್ರಮವಾಗಿರುತ್ತದೆ. ಇದನ್ನಾಗಲೇ ಸಾಧಿಸಿ ತೋರಿಸಲಾಗಿದೆ. ಅಂಥ ವಾಕ್ಯಾರ್ಥವು ಶುದ್ಧ ಅಥವಾ ಅಲಂಕಾರಾಂತರಸಂಕೀರ್ಣ ಆಗಿರಬಹುದಾದ್ದರಿಂದ ಎರಡು ವಿಧ.

ಶುದ್ಧದ ಉದಾಹರಣೆ ರಾಮಾಭ್ಯುದಯವೆಂಬ ನಾಟಕದ ಕೃತಕಕುಪಿತೈಃ ಇತ್ಯಾದಿ ಪದ್ಯ. ಇದು ಸೀತಾರಾಮರ ಅನ್ಯೋನ್ಯಾನುರಾಗವು ಪೂರ್ಣ ಬೆಳವಣಿಗೆಯನ್ನು ಹೊಂದಿರುವುದನ್ನು ಬೆಳಕಿಗೆ ತಂದು ಎಲ್ಲದಕ್ಕಿಂತ ಮಿಗಿಲಾದ ರಸತತ್ತ್ವವನ್ನು ಬೆಳಗಿಸುತ್ತದೆ. (ಈ ಪದ್ಯದ ಅನುವಾದ ಹಿಂದೆ ಬಂದಿದೆ.)

**ಅಲಂಕಾರಾಂತರ ಸಂಕೀರ್ಣೋ ಯಥಾ–**
**ಸ್ಮರರಸನದೀಪೂರೇಣೋಢಾಃ ಪುನರ್ಗುರುಸೇತುಭಿ–**
**ರ್ಯದಪಿ ವಿಧೃತಾ ದುಃಖಂ ತಿಷ್ಠಂತ್ಯಪೂರ್ಣಮನೋರಥಾಃ।**
**ತದಪಿ ಲಿಖಿತಪ್ರಖ್ಯೈರಂಗೈಃ ಪರಸ್ಪರಮುನ್ಮುಖಾ**
**ನಯನನಲಿನೀನಾಲಾನೀತಂ ಪಿಬಂತಿ ರಸಂ ಪ್ರಿಯಾಃ॥ ಇತಿ।**
**ಅತ್ರ ಹಿ ರೂಪಕೇಣ ಯಥೋಕ್ತಲಕ್ಷಣಗಮಕಾನು–**
**ಗತೇನ ಅವಗಮಿತೋಽಯಂ ರಸಃ ಸುತರಾಂ ಪ್ರಕಾಶತೇ**
**ಇತಿ ಮುಖ್ಯವೃತ್ತ್ಯಾ ಅರ್ಥಸ್ಯೈವ ಗಮಕತ್ವಂ, ನ ಶಬ್ದಸ್ಯೇತಿ ಸ್ಥಿತಮ್।**

**ಅನುವಾದ:**

ಅಲಂಕಾರದೊಡನೆ ಸಂಕೀರ್ಣವಾದ ರಸದ ಉದಾಹರಣೆ– "ಮನ್ಮಥರಸದ ನದೀಪ್ರವಾಹದಲ್ಲಿ ಪ್ರೇಮಿಗಳು ಕೊಚ್ಚಿಹೋಗುತ್ತಿರುವಾಗ ಹಿರಿಯರೆಂಬ ಸೇತುವೆಗಳು (ಅಣೆಕಟ್ಟುಗಳು) ಅವರನ್ನು ತಡೆಹಿಡಿದಿಡುತ್ತಾರೆ. ಮನೋರಥಗಳು ಈಡೇರದಿರುವುದರಿಂದ ಪ್ರೇಮಿಗಳು ದುಃಖಪಡುತ್ತಾರೆ. ಚಿತ್ರದಲ್ಲಿ ಬರೆದಿಟ್ಟಂತೆ ನಿಶ್ಚಲವಾಗಿರುವ ಅಂಗಗಳನ್ನು ಹೊಂದಿ ಪರಸ್ಪರ ಎದುರಾಗಿರುವಾಗ ಕಣ್ಣುಗಳೆಂಬ ಕಮಲನಾಳಗಳಿಂದ ಹರಿದುಬರುವ ರಸವನ್ನಷ್ಟೇ ಅವರು ಕುಡಿಯುತ್ತಾರೆ".

ಇಲ್ಲಿ ಪೂರ್ವೋಕ್ತಲಕ್ಷಣದ ಗಮಕಗಳನ್ನು (=ರಸಾಭಿವ್ಯಂಜಕ ವಿಭಾವಾದಿಗಳನ್ನು) ಅನುಸರಿಸಿ ಬಂದಿರುವ ರೂಪಕಾಲಂಕಾರದಿಂದ ಅನುಮಿತವಾಗಿ ರಸವು ಪ್ರಕಾಶಿಸುತ್ತದೆ ಎಂದು ಮುಖ್ಯವೃತ್ತಿಯಿಂದ ಅರ್ಥಕ್ಕೆ ಗಮಕತ್ವ, ಶಬ್ದಕ್ಕೆ ಅಲ್ಲ ಎಂದು ನಿಶ್ಚಿತವಾಯಿತು.

**ವಾಕ್ಯಾರ್ಥಸ್ಯೇವ ಪ್ರಬಂಧಸ್ಯಾಪಿ ರಸಾದೀನಾಂ ಚ**
**ಯೋಽಯಮ್ ಅಲಕ್ಷ್ಯಕ್ರಮೋ ಗಮ್ಯಗಮಕಭಾವೋ**
**ಮಹಾಭಾರತ– ರಾಮಾಯಣಾದೌ ಪ್ರಸಿದ್ಧಃ ತಸ್ಯ ವಿಭಾವಾನು–**
**ಭಾವವ್ಯಭಿಚಾರ್ಯೌಚಿತ್ಯಚಾರುಣೋ ವೃತ್ತಸ್ಯೋತ್ಪ್ರೇಕ್ಷಿತಸ್ಯ**
**ವಾ ಕಥಾಶರೀರಸ್ಯ ರಸಾಭಿವ್ಯಕ್ತ್ಯಾನುಗುಣ್ಯೇನೋಪನಿಬಂಧ**
**ಏವ ನಿಬಂಧನಂ, ತಸ್ಯ ರಸಾದೀನಾಂ ಚ ಕಾರ್ಯಕಾರಣ–**
**ಭಾವಸ್ಯ ಪ್ರತಿಪಾದಿತತ್ವಾತ್। ಯದಾಹ ಧ್ವನಿಕಾರಃ –**
**ವಿಭಾವಭಾವಾನುಭಾವಸಂಚಾರ್ಯೌಚಿತ್ಯಚಾರುಣಃ।**
**ವಿಧಿಃ ಕಥಾಶರೀರಸ್ಯ ವೃತ್ತಸ್ಯೋತ್ಪ್ರೇಕ್ಷಿತಸ್ಯ ವಾ॥**
**ಇತಿವೃತ್ತವಶಾಯಾತಾಂ ತ್ಯಕ್ತ್ವಾನನುಗುಣಾಂ ಸ್ಥಿತಿಮ್।**
**ಉತ್ಪ್ರೇಕ್ಷ್ಯಾಪ್ಯಂತರಾಭೀಷ್ಟರಸೋಚಿತಕಥೋನ್ನಯಃ॥**

**ಅನುವಾದ:**

(ಪ್ರಬಂಧಧ್ವನಿಯೂ ಅನುಮಿತಿಯಲ್ಲಿ ಅಂತರ್ಗತ)

ವಾಕ್ಯಾರ್ಥಕ್ಕಿರುವಂತೆ ಪ್ರಬಂಧಕ್ಕೂ ರಸಾದಿಗಳೊಡನೆ ಅಲಕ್ಷ್ಯ ಕ್ರಮವಾದ ಗಮ್ಯಗಮಕ ಭಾವವಿರುತ್ತದೆ. ಅದು ಮಹಾಭಾರತ, ರಾಮಾಯಣ ಮುಂತಾದ ಪ್ರಬಂಧಗಳಲ್ಲಿ ಪ್ರಸಿದ್ಧವಾಗಿದೆ. ಹಾಗೆ ಗಮ್ಯಗಮಕಭಾವವು ಉಂಟಾಗುವುದಕ್ಕೆ ನಿಮಿತ್ತವೇನೆಂದರೆ –ರಸಾಭಿವ್ಯಕ್ತಿಗೆ ಅನುಗುಣವಾದ, ವಿಭಾವ, ಅನುಭಾವ, ಸಂಚಾರಿ ಭಾವಗಳಿಂದ ಸುಂದರವಾದ, ವಾಸ್ತವಿಕವಾಗಿ ನಡೆದ ಅಥವಾ ಪ್ರತಿಭಾರಚಿತವಾದ ಕಥಾಶರೀರದ ರಚನೆಯೇ ಆಗಿದೆ. ಅಂಥ ಕಥಾಶರೀರಕ್ಕೂ ರಸಾದಿಗಳಿಗೂ ಕಾರ್ಯಕಾರಣಭಾವವಿದೆ ಎಂದು ಪ್ರತಿಪಾದಿಸಲಾಗಿದೆ. ಧ್ವನಿಕಾರನೂ ನುಡಿದಿದ್ದಾನೆ–

ವಿಭಾವ, ಭಾವ, ಅನುಭಾವ, ಸಂಚಾರಿಭಾವ –ಇವುಗಳ ಔಚಿತ್ಯದಿಂದ ಸುಂದರವಾದ ಕಥಾಶರೀರವನ್ನು ರಚಿಸಬೇಕು. ಅದರ ವಸ್ತು ಸಿದ್ಧ (ಪ್ರಸಿದ್ಧ) ಅಥವಾ ಕವಿಯಿಂದಲೇ ನಿರ್ಮಿತವಾದುದಾಗಿರಬಹುದು. (ಪ್ರಸಿದ್ಧವಾದ) ಇತಿವೃತ್ತವನ್ನು ತೆಗೆದುಕೊಂಡಾಗ (ರಸಕ್ಕೆ) ಅನನುಗುಣವಾದ ಘಟನೆಗಳನ್ನು ಬಿಟ್ಟು ಅದರ ಜಾಗದಲ್ಲಿ ರಸೋಚಿತವಾದ ಕಥಾಭಾಗವನ್ನು ಪ್ರತಿಭೆಯಿಂದಲೇ ರಚಿಸಿ ಕಥೆಯನ್ನು ಮುಂದುವರಿಸಬೇಕು.

**ಸಂಧಿಸಂಧ್ಯಂಗಘಟನಂ ರಸಾಭಿವ್ಯಕ್ತ್ಯಪೇಕ್ಷಯಾ।**
**ನ ತು ಕೇವಲಯಾ ಶಾಸ್ತ್ರಸ್ಥಿತಿಸಂಪಾದನೇಚ್ಛಯಾ॥**
**ಉದ್ದೀಪನಪ್ರಶಮನೇ ಯಥಾವಸರಮಂತರಾ।**
**ಅಲಂಕೃತೀನಾಂ ಶಕ್ತಾವಪ್ಯಾನುರೂಪ್ಯೇಣ ಯೋಜನಮ್॥**
**ಪ್ರಬಂಧಸ್ಯ ರಸಾದೀನಾಂ ವ್ಯಂಜಕತ್ವೇ ನಿಬಂಧನಮ್॥ ಇತಿ।**
**ಸುಬಾದೀನಾಮ್ ಅಪೋದ್ಧಾರಪಕ್ಷೇ ಅನ್ವಯವ್ಯತಿರೇಕಾಭ್ಯಾಮ್**
**ಅರ್ಥವತ್ತಾವಸಾಯೇ ಸತಿ ಅರ್ಥಸ್ಯ ಚ ವಿಭಾವಾದಿರೂಪತ್ವಾತ್**
**ವಿಭಾವಾದೀನಾಂ ರಸಾನಾಂ ಚ ಕಾರ್ಯಕಾರಣಭಾವ–**
**ಸ್ಯೋಪಪಾದಿತತ್ವಾತ್ ತನ್ಮೂಲೋ ಲಕ್ಷ್ಯಕ್ರಮೋ ಗಮ್ಯಗಮಕ–**
**ಭಾವೋಽಭ್ಯುಪಗಂತವ್ಯ ಏವ।**

**ಅನುವಾದ:**

(ಮುಖ, ಪ್ರತಿಮುಖ, ಗರ್ಭ, ಅವಮರ್ಶ, ಉಪಸಂಹೃತಿ ಎಂಬ) ಸಂಧಿಗಳನ್ನು ಮತ್ತು ಸಂಧ್ಯಂಗಗಳನ್ನು ರಸಾಭಿವ್ಯಕ್ತಿಗೆ ಅನುಗುಣವಾಗಿ ಸಂಯೋಜಿಸಬೇಕೇ ಹೊರತು ಶಾಸ್ತ್ರದಲ್ಲಿ ಹೇಳಿದ್ದಾರೆ ಎಂಬುದಕ್ಕಾಗಿ ಎಲ್ಲೆಂದರಲ್ಲಿ ತುರುಕಬಾರದು. ರಸಾದಿಗಳ ಉದ್ದೀಪನವೂ ಪ್ರಶಮನವೂ ಅವಸರಾನುಗುಣವಾಗಿರಬೇಕು. ಕವಿಗೆ ಶಕ್ತಿ ಇದ್ದರೂ ಅಲಂಕಾರಗಳನ್ನು ಅನುರೂಪವಾಗಿ ಮಾತ್ರ ಸೇರಿಸಬೇಕು. ಈ ನಿಯಮಗಳ ಪಾಲನೆಯು ಪ್ರಬಂಧವು ರಸವ್ಯಂಜಕವಾಗಲು ಕಾರಣವಾಗುತ್ತದೆ.

ಪ್ರಕೃತಿ–ಪ್ರತ್ಯಯವಿವೇಕದ ಪಕ್ಷದಲ್ಲಿ ಅನ್ವಯವ್ಯತಿರೇಕಗಳಿಂದ ಸುಪ್ ಮುಂತಾದ ಪ್ರತ್ಯಯಗಳಿಗೂ ಅರ್ಥವುಂಟು ಎಂದು ನಿಶ್ಚಿತವಾಗುತ್ತದೆ. ಆ ಅರ್ಥವೂ ವಿಭಾವಾದಿಗಳಲ್ಲಿ ಒಂದಾಗಿರುತ್ತದೆ. ವಿಭಾವಾದಿಗಳಿಗೂ ರಸಗಳಿಗೂ ಕಾರ್ಯಕಾರಣಭಾವವನ್ನು ಆಗಲೇ ಉಪಪಾದಿಸಲಾಗಿದೆ. ತನ್ಮೂಲಕವಾಗಿ ಸುಬಾದಿಪ್ರತ್ಯಯಗಳಿಗೂ ಅಲಕ್ಷ್ಯಕ್ರಮಗಮ್ಯಗಮಕಭಾವವನ್ನು ಒಪ್ಪಿಕೊಳ್ಳಲೇಬೇಕು.

**ತೇಷಾಮುದಾಹರಣಾನಿ ಯಥಾ–**
**ನ್ಯಕ್ಕಾರೋ ಹ್ಯಯಮೇವ ಮೇ ಯದರಯಸ್ತತ್ರಾಪ್ಯಸೌ ತಾಪಸಃ**
**ಸೋಽಪ್ಯತ್ರೈವ ನಿಹಂತಿ ರಾಕ್ಷಸಕುಲಂ ಜೀವತ್ಯಹೋ ರಾವಣಃ।**

**ಧಿಗ್‌ಧಿಕ್‌ಶಕ್ರಜಿತಂ ಪ್ರಬೋಧಿತವತಾ ಕಿಂ ಕುಂಭಕರ್ಣೇನ ಮೇ**
**ಸ್ವರ್ಗಗ್ರಾಮಟಿಕಾವಿಲುಂಠನವೃಥೋಚ್ಛೂನೈಃಕಿಮೇಭಿರ್ಭುಜೈಃ॥**

**ಇತ್ಯತ್ರ ಭೂಮ್ನಾ ಸರ್ವೇಷಾಂ ಸ್ಫುಟಮೇವ ಗಮಕತ್ವಂ ದೃಶ್ಯತೇ। ತತ್ರ 'ಮೇ ಯದರಯಃ' ಇತಿ ಸುಪ್‌ಸಂಬಂಧವಚನಾನಾಮ್ ಉಕ್ತನಯೇನ ಗಮಕತ್ವಂ ಯಥಾಯೋಗಮುತ್ತರತ್ರ ಚ। ತತ್ರಾಪ್ಯಸೌ ತಾಪಸ ಇತಿ ತದ್ಧಿತನಿಪಾತಯೋಃ। 'ಸೋಽಪ್ಯತ್ರೈವ ನಿಹಂತಿ ರಾಕ್ಷಸಕುಲಂ ಜೀವತ್ಯಹೋ ರಾವಣಃ?' ಇತಿ ತಿಙ್‌ಕಾರಕಶಕ್ತೀನಾಮ್। 'ಧಿಗ್‌ಧಿಕ್ ಶಕ್ರಜಿತಮ್' ಇತ್ಯಾದೌ ಶ್ಲೋಕಾರ್ಧೇ ಕೃತ್ತದ್ಧಿತ-ಸಮಾಸೋಪಸರ್ಗಾಣಾಮ್ ಇತಿ।**

**ಅನುವಾದ:**

ಅವುಗಳಿಗೆ ಉದಾಹರಣೆ–

"ನನಗೆ ಶತ್ರುಗಳಿದ್ದಾರೆ ಎಂಬುದೇ ಅಪಮಾನ, ಅದರಲ್ಲೂ ಆ ಶತ್ರು ಒಬ್ಬ ತಪಸ್ವಿ, ಅವನು ಇಲ್ಲೇ ರಾಕ್ಷಸವಂಶವನ್ನೇ ಕೊಲ್ಲುತ್ತಿದ್ದಾನೆ, ಅಯ್ಯೋ, ರಾವಣನಿನ್ನೂ ಬದುಕಿದ್ದಾನೆ! ಇಂದ್ರಜಿತ್ತಿಗೆ ಧಿಕ್ಕಾರ, ಕುಂಭಕರ್ಣನನ್ನು ಎಚ್ಚರಗೊಳಿಸಿದರೂ ಏನು ಪ್ರಯೋಜನ? ಸ್ವರ್ಗವೆಂಬ ಹಳ್ಳಿಕೊಂಪೆಯನ್ನು ಕೊಳ್ಳೆಹೊಡೆದು ವ್ಯರ್ಥವಾಗಿ ಕೊಬ್ಬಿರುವ ನನ್ನ ಈ ಭುಜಗಳಿಂದ ಏನು ಪ್ರಯೋಜನ?"

ಇಲ್ಲಿ ಬಹುವಾಗಿ ಎಲ್ಲ ಪ್ರತ್ಯಯಾದಿಗಳಲ್ಲೂ ಸ್ಪಷ್ಟವಾಗಿ ಗಮಕತ್ವವು ತೋರುತ್ತದೆ. 'ಮೇ ಯದರಯಃ' ಎಂಬಲ್ಲಿ ಸುಪ್‌ಪ್ರತ್ಯಯ, ಸಂಬಂಧ, ವಚನಗಳಿಗೂ ಮೇಲೆ ವಿವರಿಸಿದ ರೀತಿಯಲ್ಲಿ ಮುಂದಿನ ಭಾಗದಲ್ಲೂ ಸಂದರ್ಭಾನುಸಾರವಾಗಿ ಗಮಕತ್ವವಿದೆ. ತತ್ರಾಪ್ಯಸೌ ತಾಪಸಃ ಎಂಬಲ್ಲಿ ತದ್ಧಿತಪ್ರತ್ಯಯಕ್ಕೂ ನಿಪಾತಕ್ಕೂ ಗಮಕತ್ವ. ಸೋಽಪ್ಯತ್ರೈವ ನಿಹಂತಿ ರಾಕ್ಷಸಕುಲಂ ಜೀವತ್ಯಹೋ ರಾವಣಃ ಎಂಬಲ್ಲಿ ತಿಙ್‌ಪ್ರತ್ಯಯಕ್ಕೂ ಕಾರಕಶಕ್ತಿಗಳಿಗೂ, ಧಿಗ್‌ಧಿಕ್ ಶಕ್ರಜಿತಮ್ ಇತ್ಯಾದಿ ಶ್ಲೋಕಾರ್ಧದಲ್ಲಿ ಕೃತ್‌ತದ್ಧಿತಪ್ರತ್ಯಯಗಳಿಗೂ ಸಮಾಸಕ್ಕೂ ಉಪಸರ್ಗಗಳಿಗೂ ಗಮಕತ್ವವಿದೆ.

**ಸುಪ್‌ತಿಙ್‌ಸಂಬಂಧಾದ್ಯಾಃ ಕ್ರೋಧೋತ್ಸಾಹಾದಿಕಾನ್ ಯಥಾ ಭಾವಾನ್।**
**ಗಮಯಂತಿ ತದ್ ವಿಧೇಯಾವಿಮರ್ಶ ಏವೋಕ್ತಮಸ್ಮಾಭಿಃ॥ ಇತ್ಯಂತರಾರ್ಯಾ।**
**ನಿಪಾತೋಪಸರ್ಗಾದೀನಾಮ್ ಅಸತ್ತ್ವಭೂತಾರ್ಥಾನಾಮ್**
**ಉಪಾಧಿರೂಪತ್ವಾದ್ ಉಪಾಧಿಮತ್ಸಮಾಶ್ರಯೇಣೈವ**
**ಅರ್ಥಾವಗತಿರಿತಿ ಪದವಾಕ್ಯಯೋರರ್ಥಾವಗಮಕತ್ವೋಕ್ತ್ಯೈವ**
**ತೇಷಾಮಪಿ ಗಮಕತಾ ಪ್ರತಿಪಾದಿತೈವ। ಕೇಚಿತ್‌ಪುನರ್ನಿಪಾತಾಃ**
**ಕ್ರೋಧಾದ್ಭುತಶೋಕಾದೀನ್ ಭಾವಾನ್ ಪ್ರದೀಪವದ್ ವಕ್ತೃ-**
**ಗತಾನೇವಾವದ್ಯೋತಯಂತಿ, ನ ವಾಚ್ಯಗತಾನ್।**
**ಯಥಾ– "ಆಸ್ತಿಷ್ಠರಕ್ಷಃ ಕ್ವ ಮೇ ಪ್ರಿಯತಮಾಮಾದಾಯ ಗಚ್ಛಸಿ" ಇತಿ ಕ್ರೋಧಃ।**

**ಅನುವಾದ:**

ಸುಪ್, ತಿಙ್, ಸಂಬಂಧ ಮುಂತಾದುವು ಕ್ರೋಧ, ಉತ್ಸಾಹ ಇತ್ಯಾದಿ ಭಾವಗಳನ್ನು ಹೇಗೆ ಅನುಮಿತಿಯಿಂದ ತಿಳಿಸುತ್ತವೆ ಎಂದು ವಿಧೇಯಾವಿಮರ್ಶ ದೋಷದ ವಿವರಣೆಯಲ್ಲೇ ತಿಳಿಸಿದ್ದೇವೆ. ಇದು ಅಂತರಾರ್ಯಾ.

ನಿಪಾತ, ಉಪಸರ್ಗ ಮುಂತಾದವುಗಳ ಅರ್ಥವು ಅಸತ್ತ್ವ ರೂಪದಲ್ಲಿರುತ್ತದೆ. ಅವುಗಳು ಉಪಾಧಿಗಳಾದುದರಿಂದ ಉಪಾಧಿಮತ್ತಾದ ವಸ್ತುವಿನ ಆಶ್ರಯದಿಂದಲೇ ಅವುಗಳ ಅರ್ಥವನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಪದ–ವಾಕ್ಯಗಳ ಗಮಕತ್ವವನ್ನು ಹೇಳಿದುದರಿಂದಲೇ ನಿಪಾತಾದಿಗಳ ಗಮಕತ್ವವನ್ನು ಪ್ರತಿಪಾದಿಸಿದಂತಾಯಿತು. ಆದರೆ ಕೆಲವು ನಿಪಾತಗಳು ವಕ್ತೃಗಳಲ್ಲಿರುವ ಕ್ರೋಧ, ವಿಸ್ಮಯ, ಶೋಕ ಮುಂತಾದ ಭಾವಗಳನ್ನೇ ವ್ಯಂಜಿಸುತ್ತವೆ, ವಾಚ್ಯಾರ್ಥಗತವಾದ ಭಾವಗಳನ್ನಲ್ಲ.

ಉದಾಹರಣೆ– "ಆಹ್, ನಿಲ್ಲೋ ರಾಕ್ಷಸ, ನನ್ನ ಪ್ರೇಯಸಿಯನ್ನು ಹೊತ್ತುಕೊಂಡು ಎಲ್ಲಿಗೆ ಹೋಗುತ್ತಿರುವೆ?" ಇದರಲ್ಲಿ 'ಆಹ್' ಎಂಬ ನಿಪಾತವು ಕ್ರೋಧವನ್ನು ಅಭಿವ್ಯಂಜಿಸುತ್ತದೆ.

> **"ಅಹೋ ಬತಾಸಿ ಸ್ಪೃಹಣೀಯವೀರ್ಯಃ" ಇತಿ ವಿಸ್ಮಯಃ।**
> **"ಹಾ ಧಿಕ್ ಕಷ್ಟಮಹೋ ಕ್ವ ಯಾಮಿ ಶರಣಮ್" ಇತಿ ಶೋಕಃ।**
> **ಅತ ಏವ ತೇಷಾಂ ದ್ವಿತ್ರಾಣಾಂ ತ್ರಿಚತುರಾಣಾಂ ವಾ**
> **ಪ್ರಯೋಗೇ ಪುನರುಕ್ತತಾ ನಾಶಂಕನೀಯಾ। ಸಮುದಿತಾನಾಂ**
> **ಪ್ರದೀಪಾದೀನಾಮಿವ ಸ್ವಕಾರ್ಯೇ ಪ್ರಕರ್ಷದರ್ಶನಾತ್। ತದುಕ್ತಮ್–**
> **ನಾಮವದುಪಸರ್ಗಾಸ್ತೇ ಕಿಂತ್ವನ್ಯೋಪಹಿತಮಾಹುರರ್ಥಂ ಸ್ವಮ್।**
> **ದೀಪಕವತ್ತು ನಿಪಾತಾಃ ಶೋಕಾದೀನ್ ದ್ಯೋತಯಂತಿ ವಕ್ತೃಗತಾನ್॥**
> **ಗಮಯಂತಿ ಕಾರ್ಯಭೂತಾನ್ ಗದ್ಗದಿಕಾದಿವದವಾಚಕಾ ಏವ।**
> **ಸಂಘಟನಾವರ್ಣಾದ್ಯಾಃ ಕ್ರೋಧೋತ್ಸಾಹಾದಿಕಾನ್ ಭಾವಾನ್॥ ಇತಿ।**

**ಅನುವಾದ:**

"ಅಹೋ ಬತ, ನಿನ್ನ ಸಾಮರ್ಥ್ಯ ಅಪೇಕ್ಷಣೀಯ" ಎಂಬಲ್ಲಿ ಅಹೋಬತ ಎಂಬ ನಿಪಾತವು ಆಶ್ಚರ್ಯವನ್ನು ವ್ಯಂಜಿಸುತ್ತದೆ.

"ಹಾ ಧಿಕ್, ಕಷ್ಟ, ಅಹೋ, ಎಲ್ಲಿ ಹೋಗಿ ಆಶ್ರಯವನ್ನು ಪಡೆಯಲಿ" ಎಂಬಲ್ಲಿ ನಿಪಾತಗಳು ಶೋಕದ ವ್ಯಂಜಕಗಳು. ಆದ್ದರಿಂದಲೇ ಮೂರು, ನಾಲ್ಕು, ಐದು ನಿಪಾತಗಳ ಪ್ರಯೋಗ ಒಂದೇ ವಾಕ್ಯದಲ್ಲಿದ್ದರೂ ಪುನರುಕ್ತಿಯ ಶಂಕೆಯನ್ನು ಮಾಡಬಾರದು. ಒಟ್ಟಿಗೆ ಸೇರಿದ ದೀಪ ಮುಂತಾದುವುಗಳ ಹಾಗೆ ಅವು ತಮ್ಮ ಕಾರ್ಯದಲ್ಲಿ ಪ್ರಕರ್ಷವನ್ನು ತೋರಿಸುತ್ತವೆ, ಅಷ್ಟೆ.

ಪ್ರಾಚೀನರೂ ಹೇಳಿದ್ದಾರೆ–

ಉಪಸರ್ಗಗಳು ನಾಮಪದಗಳಂತೆ, ಆದರೆ ಬೇರೆ ಧಾತು ಮುಂತಾದುವುಗಳ ಅರ್ಥದೊಡನೆಯೇ ತಮ್ಮ ಅರ್ಥವನ್ನು ಹೇಳುತ್ತವೆ. ನಿಪಾತಗಳು ದೀಪಗಳಂತೆ. ಅವು ವಕ್ತೃವಿನ ಶೋಕಾದಿ ಭಾವಗಳನ್ನು ವ್ಯಂಜಿಸುತ್ತವೆ. ಸಂಘಟನೆ, ವರ್ಣ ಮುಂತಾದವು ಬಿಕ್ಕಳಿಕೆ ಮುಂತಾದವುಗಳಂತೆ ಅವಾಚಕಗಳು. ಅವು ಕಾರ್ಯರೂಪದ ಕ್ರೋಧ, ಉತ್ಸಾಹ ಇತ್ಯಾದಿಭಾವಗಳನ್ನು ವ್ಯಂಜಿಸುತ್ತವೆ.

**ತದೇವಂ ಧ್ವನೇರನುಮಾನಾಂತರ್ಭಾವಾಭ್ಯುಪಗಮಃ ಶ್ರೇಯಾನ್ ಇತಿ।**
**ತದಿದಂ ವಿಸ್ತರಸ್ಯಾಸ್ಯ ತಾತ್ಪರ್ಯಮವಧಾರ್ಯತಾಮ್।**
**ಯಾರ್ಥಾಂತರಾಭಿವ್ಯಕ್ತೌ ವಸ್ಸಾಮಗ್ರೀಷ್ಟಾ ನಿಬಂಧನಮ್॥**
**ಸೈವಾನುಮಿತಿಪಕ್ಷೇ ನೋ ಗಮಕತ್ವೇನ ಸಮ್ಮತಾ।**
**ಅನ್ಯತೋಽನ್ಯಸ್ಯ ಹಿ ಜ್ಞಾನಮನುಮೈಕಸಮಾಶ್ರಯಮ್॥**
**ವಾಚ್ಯವಾಚಕಯೋಃ ಸ್ವಾರ್ಥಪ್ರಾಧಾನ್ಯಪ್ರತಿಷೇಧತಃ॥**
**ಧ್ವನೇಃ ಶಕ್ತ್ಯಂತರಾಭಾವಾದ್ ವ್ಯಕ್ತೇಶ್ಚಾನುಪಪತ್ತಿತಃ॥**
**ಪ್ರಾಣಭೂತಾ ಧ್ವನೇರ್ವ್ಯಕ್ತಿರಿತಿ ಸೈವ ವಿವೇಚಿತಾ।**
**ಯತ್ತ್ವನ್ಯತ್ ತತ್ರ ವಿಮತಿಃ ಪ್ರಾಯೋ ನಾಸ್ತೀತ್ಯುಪೇಕ್ಷಿತಮ್॥**
**ಪ್ರಾಯಃ ಪ್ರತೀತಿವೈಚಿತ್ರ್ಯರಸಾಸ್ವಾದವಿದಃ ಪ್ರತಿ।**
**ಸೂಪಕಾರಕ್ರಿಯೇಯಂ ಮೇ ಸಾಫಲ್ಯಮುಪಯಾಸ್ಯತಿ॥**
**ಇತಿ ಸಂಗ್ರಹಶ್ಲೋಕಾಃ॥**

**ಅನುವಾದ:**

ಹೀಗೆ ಅನುಮಾನದಲ್ಲಿ ಧ್ವನಿಯ ಅಂತರ್ಭಾವವನ್ನು ಒಪ್ಪಿಕೊಳ್ಳುವುದೇ ಲೇಸು.

ಇದುವರೆಗೆ ಸವಿಸ್ತರವಾಗಿ ಹೇಳಿದುದರ ತಾತ್ಪರ್ಯವನ್ನು ತಿಳಿದುಕೊಳ್ಳಿರಿ. ಅರ್ಥಾಂತರದ ಅಭಿವ್ಯಕ್ತಿಯಲ್ಲಿ ಯಾವುದು ನಿಮಿತ್ತವೆಂದು ನಿಮಗೆ ಇಷ್ಟವೋ ಅದೇ ಅನುಮಿತಿ ಪಕ್ಷದಲ್ಲಿ ನಮಗೆ ಗಮಕ (ಲಿಂಗ) ಎಂದು ಸಮ್ಮತವಾಗಿದೆ. ಬೇರೆ ಅರ್ಥದಿಂದ ಬೇರೆ ಅರ್ಥದ ಜ್ಞಾನವು ಅನುಮಿತಿಯನ್ನು ಆಶ್ರಯಿಸಿಯೇ ಹುಟ್ಟುತ್ತದೆ. ವಾಚ್ಯಾರ್ಥಕ್ಕೂ ವಾಚಕಶಬ್ದಕ್ಕೂ ಧ್ವನಿಯಲ್ಲಿ ಕ್ರಮವಾಗಿ ತನ್ನ ಮತ್ತು ತನ್ನ ಅರ್ಥದ ಪ್ರಾಧಾನ್ಯವನ್ನು ನಿಷೇಧಿಸಿರುವುದರಿಂದಲೂ, ಬೇರೆ ಯಾವ ಶಕ್ತಿಯೂ (ಶಬ್ದದಲ್ಲಿ) ಇಲ್ಲದುದರಿಂದಲೂ, ವ್ಯಂಜನಾ ಎಂಬುದು ಅನುಪಪನ್ನವಾದುದರಿಂದಲೂ ಅನುಮಿತಿಯನ್ನೇ ಆಶ್ರಯಿಸಬೇಕು.

ಧ್ವನಿಸಿದ್ಧಾಂತಕ್ಕೆ ಪ್ರಾಣದಂತಿರುವುದು ವ್ಯಕ್ತಿ (=ವ್ಯಂಜನಾ). ಆದ್ದರಿಂದ ಅದನ್ನೇ ಇಲ್ಲಿ ವಿವೇಚಿಸಲಾಗಿದೆ. ಬೇರೆ ವಿಚಾರಗಳ ಬಗೆಗೆ ಹೆಚ್ಚಾಗಿ ಅಭಿಪ್ರಾಯ

ಭೇದವಿಲ್ಲ ಎಂದು ಅದನ್ನೆಲ್ಲಾ ಉಪೇಕ್ಷಿಸಲಾಗಿದೆ. ಪ್ರತೀತಿವಿಚಿತ್ರತೆಯ ರಸವನ್ನು ಆಸ್ವಾದಿಸಲು ತಿಳಿದವರನ್ನು ಕುರಿತು ನಾನು ಮಾಡಿರುವ ಅಡುಗೆ ಸಾಫಲ್ಯವನ್ನು ಹೊಂದುವುದು. ಇವು ಸಂಗ್ರಹ ಶ್ಲೋಕಗಳು.

**ಆಧಾತುಂ ವ್ಯುತ್ಪತ್ತಿಂ ನಪ್ತೄಣಾಂ ಕ್ಷೇಮಯೋಗಭಾಜಾನಾಮ್।**
**ಸತ್ಸು ಪ್ರಥಿತನಯಾನಾಂ ಭೀಮಸ್ಯಾಮಿತಗುಣಸ್ಯ ತನಯಾನಾಮ್॥**
**ಶ್ರೀಧೈರ್ಯಸ್ಯಾಂಗಭುವಾ ಮಹಾಕವೇಃ ಶ್ಯಾಮಲಸ್ಯ ಶಿಷ್ಯೇಣ।**
**ವ್ಯಕ್ತಿವಿವೇಕೋ ವಿದಧೇ ರಾಜಾನಕಮಹಿಮಕೇನಾಯಮ್॥**
**ಪ್ರತಿಪಾದ್ಯಬುದ್ಧ್ಯಪೇಕ್ಷೌ ಪ್ರಾಯಃ ಸಂಕ್ಷೇಪವಿಸ್ತರೌ ಕರ್ತುಃ।**
**ತೇನ ನ ಬಹುಭಾಷಿತ್ವಂ ವಿದ್ವದ್ಭಿರಸೂಯಿತವ್ಯಂ ನಃ॥**

**ಅನುವಾದ:**

ಮಿತಿಯೇ ಇಲ್ಲದ ಸದ್ಗುಣಗಳನ್ನು ಹೊಂದಿದ್ದ ಭೀಮನ ಮಕ್ಕಳಾದ, ವಿದ್ವಾಂಸರಲ್ಲಿ ತಮ್ಮ ನೀತಿಜ್ಞಾನವನ್ನು ಪ್ರಚುರಪಡಿಸಿದ್ದ ಕ್ಷೇಮ, ಯೋಗ, ಭಾಜ, ಎಂಬ ಮೂವರು ಮೊಮ್ಮಕ್ಕಳಿಗೆ ವ್ಯುತ್ಪತ್ತಿಯನ್ನು ಉಂಟುಮಾಡಲು ಶ್ರೀಧೈರ್ಯನ ಮಗನೂ ಮಹಾಕವಿ ಶ್ಯಾಮಲನ ಶಿಷ್ಯನೂ ಆಗಿದ್ದ ರಾಜಾನಕ ಮಹಿಮಭಟ್ಟನು ಈ ವ್ಯಕ್ತಿವಿವೇಕವನ್ನು ರಚಿಸಿದನು.

ಗ್ರಂಥಕಾರನು ಸಂಕ್ಷೇಪವನ್ನೂ ವಿಸ್ತರವನ್ನೂ ಮಾಡುವುದು ಬಹುಮಟ್ಟಿಗೆ ಶಿಷ್ಯರ ಬುದ್ಧಿಗೆ ಅನುಗುಣವಾಗಿ. ಆದ್ದರಿಂದ ನಾವು ಇಲ್ಲಿ ತುಂಬ ಮಾತನ್ನಾಡಿದ್ದೇವೆಂದು ವಿದ್ವಾಂಸರು ಅಸೂಯೆಯನ್ನು ತೋರಿಸಬಾರದು.

**ಅನ್ಯೈರನುಲ್ಲಿಖಿತಪೂರ್ವಮಿದಂ ಬ್ರುವಾಣೋ**
**ನೂನಂ ಸ್ಮೃತೇರ್ವಿಷಯತಾಂ ವಿದುಷಾಮುಪೇಯಾಮ್।**
**ಹಾಸ್ಯೈಕಕಾರಣಗವೇಷಣಯಾ ನವಾರ್ಥ–**
**ತತ್ತ್ವಾವಮರ್ಶಪರಿತೋಷಸಮೀಹಯಾ ವಾ॥**

**ಇತಿ ಶ್ರೀರಾಜಾನಕಮಹಿಮಭಟ್ಟವಿರಚಿತೇ**
**ವ್ಯಕ್ತಿವಿವೇಕಾಖ್ಯೇ ಕಾವ್ಯಾಲಂಕಾರೇ ಧ್ವನೇರನುಮಾನೇ**
**ಅಂತರ್ಭಾವೋಪಪದರ್ಶನೋ ನಾಮ ತೃತೀಯೋ ವಿಮರ್ಶಃ**

**ಅನುವಾದ:**

ಬೇರೆಯವರು ಹಿಂದೆ ಮುಟ್ಟದಿದ್ದ ಈ ವಿಚಾರವನ್ನು ಹೇಳುತ್ತಿರುವ ನಾನು ವಿದ್ವಾಂಸರಿಗೆ ನಗುವಿಗೆ ಒಂದು ಕಾರಣವನ್ನು ಹುಡುಕಿದುದರಿಂದಾಗಲಿ ಅಥವಾ ಹೊಸ ತತ್ತ್ವವನ್ನು ವಿಮರ್ಶಿಸಿದಾಗ ದೊರಕುವ ಸಂತೋಷದ ಅಪೇಕ್ಷೆಯಿಂದಾಗಲಿ ನೆನಪಿನ ವಿಷಯವಾದೇನು.

**ಇಲ್ಲಿಗೆ ಶ್ರೀರಾಜಾನಕ ಮಹಿಮಭಟ್ಟನು ರಚಿಸಿದ 'ವ್ಯಕ್ತಿವಿವೇಕ' ಎಂಬ ಕಾವ್ಯಾಲಂಕಾರ ಗ್ರಂಥದಲ್ಲಿ ಅನುಮಿತಿಯಲ್ಲಿ ಧ್ವನಿಯ ಅಂತರ್ಭಾವದರ್ಶನ ಎಂಬ ಹೆಸರಿನ ಮೂರನೆಯ ವಿಮರ್ಶವು ಮುಗಿಯಿತು.**

* * *

ನಾಗರಾಜೇನ ವಿದುಷಾ ಯಥಾಶಕ್ತಿ ಯಥಾಮತಿ।
ಅನೂದಿತೋ ಗ್ರಂಥ ಏಷ ಶ್ರೀಮನ್ಮಹಿಮನಿರ್ಮಿತಃ॥
ಮಲ್ಲೇಪುರಂ ವೇಂಕಟೇಶ ಇತಿ ಲೋಕೇಽತ್ರ ವಿಶ್ರುತಃ।
ವಿಪಶ್ಚಿತ್ತಲ್ಲಜಃ ಪ್ರಾದಾತ್ ಪ್ರೇರಣಾಂ ಕರ್ಮಣೀದೃಶೇ॥
ತಸ್ಮೈ ಸಮರ್ಪ್ಯ ಸಾಷ್ಟಾಂಗಾನ್ ಪ್ರಣಾಮಾನ್ವಿರಮಾಮ್ಯಹಮ್।
ಶುಶ್ರೂಷಕೋ ನಾಗರಾಜೋ ದೇವವಾಙ್ಮಾತೃಭಾಷಯೋಃ॥

# ಉದಾಹರಣ ಶ್ಲೋಕಗಳ ಮತ್ತು ಕಾರಿಕೆಗಳ
# ಅಕಾರಾದಿ ಸೂಚಿ

# ವಿಶ್ವವಿದ್ಯಾಲಯದ ಪ್ರಕಟಣೆಗಳು

**ಪ್ರಾಚ್ಯಗ್ರಂಥ ಅನುವಾದ ಮಾಲೆ:**

**1.** **ಆಚಾರ್ಯ ಭರ್ತೃಹರಿಪ್ರಣೀತ ವಾಕ್ಯಪದೀಯಮ್**
ಅನುವಾದ: ವಿದ್ವಾನ್ ಎನ್. ರಂಗನಾಥಶರ್ಮಾ; ಬೆಲೆ: ರೂ. 250.00

**'ಕರ್ನಾಟಕ ಸಾರಸ್ವತೋಪಾಸಕರು' ಪುಸ್ತಕ ಮಾಲೆ:**

1. **ಜಗ್ಗು ಶಿಂಗರಾರ್ಯಃ**
ಲೇಖಕರು: ಡಾ. ಎಚ್.ಆರ್. ವಿಶ್ವಾಸ್; ಬೆಲೆ: ರೂ. 50.00
2. **ಪಡಮುನ್ನೂರು ನಾರಾಯಣಾಚಾರ್ಯಃ**
ಲೇಖಕರು: ಡಾ. ಬನ್ನಂಜೆ ಗೋವಿಂದಾಚಾರ್ಯ; ಬೆಲೆ: ರೂ. 50.00
3. **ಬಸವಪ್ಪಶಾಸ್ತ್ರೀ**
ಲೇಖಕರು: ವಿದ್ವಾನ್ ಎಚ್.ವಿ. ನಾಗರಾಜರಾವ್; ಬೆಲೆ: ರೂ. 50.00
4. **ಹಾನಗಲ್ಲು ವಿರೂಪಾಕ್ಷಶಾಸ್ತ್ರೀ**
ಲೇಖಕರು: ಡಾ. ಹಿತ್ಲಹಳ್ಳಿ ಸೂರ್ಯನಾರಾಯಣಭಟ್ಟ; ಬೆಲೆ: ರೂ. 50.00
5. **ಮಂಡಿಕಲ್ ರಾಮಶಾಸ್ತ್ರೀ**
ಲೇಖಕರು: ವಿದ್ವಾನ್ ಗಂಗಾಧರ ಭಟ್ಟ; ಬೆಲೆ: ರೂ. 50.00

**ಸಂಸ್ಥಾಪನಾ ವಿಶೇಷೋಪನ್ಯಾಸ ಮಾಲೆ**

1. **ಭಾರತೀಯ ಮನಶ್ಶಾಸ್ತ್ರಸ್ಯ ಮೂಲತತ್ತ್ವಾನಿ**
ಲೇಖಕರು: ವಿದ್ಯಾವಾಚಸ್ಪತಿ ಪದ್ಮಶ್ರೀ ಡಾ. ಬನ್ನಂಜೆ ಗೋವಿಂದಾಚಾರ್ಯ; ಬೆಲೆ: 10.00
2. **ನಾಟ್ಯಶಾಸ್ತ್ರ ಗೌರವಮ್**
ಲೇಖಕರು: ಪ್ರೊ. ರಾಧಾವಲ್ಲಭ ತ್ರಿಪಾಠಿ; ಬೆಲೆ: 10.00